Registered No. 493 M

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಶೇರಿ ರೂ. 2—1—0.

ಪುಸ್ತಕ IX | ಮಂಗಳೂರು ತಾ 2ನೇ ಜನವರಿ ಶನಿವಾರ 1915 | ಸಂಚಿಕೆ I

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿ.ಯು ಮೋಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ ಕ

ಅಚ್ಚಿನಲ್ಲಿರುವುದು! ಅಚ್ಚಿನಲ್ಲಿರುವುದು!

ವೆಂಕಟಗಿರಿ ಮಹಾತ್ಮೆ

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖುಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು.

ಕವಿ ಎಂಡ್ ಸನ್ಸ್,
ಮಂಗಳೂರು.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ.

ಕ್ರಮ ವ್ಯಾಜ್ಯದ ನಂಬ್ರ 187/1911

Regular I. A. ಅರ್ಜಿ ನಂಬ್ರ 1776/1911

ಶಂಕರಾಳ್ವ ಕೊಡಾ ... ವಾದಿಯು.

ಅಪ್ಪಿ ಯಾನೆ ಪದ್ಮಕ್ಕ ಕಡಂಬೇದಿ ಸಹಾ ... ಪ್ರತಿವಾದಿಯು.

ಕಾರ್ಕಳ ತಾಲೂಕು ಕೊನ್ನರ ಮಾಗಣೆ ಕೊಣಜೆ ಗ್ರಾಮದ ಹತ್ತು ಸಮಸ್ತರು ಭಜಿಸಿ ಬರುವ ಕುಕ್ಕಿಣಂತಾಯ ದೈವದ ಸ್ಥಾನದ ಮುಕ್ತೇಸರ ವ ಕ್ರಮಾಗತದ ಮೊಕ್ತೇಸರರಾಗಿ ಸದರಿ ವಾದಿಯು, ಸದರಿ 1ನೇ ವಾದಿ ವ 2ನೇ ವಾದಿ ಮಾವ ಹಾಲಿ ಮೃತರಾದ ಪದ್ಮಯ್ಯ ಕೆಲ್ಲ ಇವರಿಬ್ಬರ ಹೆಸರಲ್ಲಿ ಸದರಿ ಪ್ರತಿವಾದಿಯು ತಾರೀಖು 4-12-1911 ಲ್ಲು ರೂ 920—0—0ಕ್ಕೆ ಬರಿಸಿಕೊಟ್ಟ ಡಿಮಾಂಡ ಪ್ರೊಮಿಸರಿ ನೋಟಿನ ಅಸಲು ... ಬಾಕಿ ಬಡ್ಡಿ ಬದಲಾಯಿಸಿಕೊಳ್ಳುವರೆ, ಸದರಿ ವಾದೆಯನ್ನು ತಂದಿರುತ್ತಾರೆ. ವಾದಿಯು ಸದರಿ ದಾವಾ ಮಾಡುವರೆ ಅಧಿಕಾರ ತಮಗೆ ಕೊಡಬೇಕಾಗಿ ಕೇಳ್ಕೊಂಡ ಅರ್ಜಿ ಸಹಾ ದಾಖಲು ಮಾಡಿರುತ್ತಾರೆ. ಈ ಪ್ರಕಾರ ಸದರಿ ದಾವೆಯನ್ನು ಸದರಿ ವಾದಿಯು ಮುಂದರಿಸುವದಕ್ಕೆ ಆಕ್ಷೇಪ ಇರುವಂಥವರು ಈ ಕೋರ್ಟಿಗೆ ಜಾಹೀರು ಮಾಡಿಕೊಳ್ಳುವದಕ್ಕೋಸ್ಕರ 1915ನೇ ಇಸವಿ ಜನವರಿ ತಿಂಗಳ 30ನೇ ತಾರೀಕಿನ ದಿವಸ ಬೆಳಿಗ್ಗೆ 10 ಘಂಟೆಯ ಒಳಗೆ ಈ ಕೋರ್ಟಿನ ಮುಂದೆ ಸ್ವತಹಾ ಆಗಲೀ ವಕೀಲರ ದ್ವಾರಾ ಆಗಲೀ ಹಾಜರಾಗತಕ್ಕದ್ದು ಎಂಬದಾಗಿ ಈ ಮೂಲಕ ತಿಳಿಯಪಡಿಸೋಣಾಗುತ್ತದೆ

ಕಾರ್ಕಳ,
ತಾ 14—12—14.

K. Appaji Rao,
District Munsif.

ನೋಟೀಸು.

ಮಂಗಳೂರು ಶ್ಯಾಹಾರ ಹೂವಿನ ಮಾರ್ಕೆಟ್ ಬಳಿ ಗುರುಪುರ ಸಾಂತಯ್ಯ ಕಿಣಿಯವರ ಕುಟುಂಬದ ಕಡೆಯಿಂದ ವ್ಯಾಪಾರ ನಡಿಸುತ್ತಿದ್ದ ಗುರುಪುರ ಮಾಧವ ಕಿಣಿಯು ಇತ್ತಲಾಗೆ ಮೃತಪಟ್ಟಿರುವಲ್ಲಿ ಅವರ ಅಂಗಡಿ ಬಾಬ್ತು ಹೊರ ಕುಳವಾರುಗಳಿಂದ ಬಹಾ ಐವಜುಗಳನ್ನು ಗುರುಪುರ ಕೃಷ್ಣ ಕಿಣಿ ಮಗ ಸರ್ವೋತ್ತಮ ಕಿಣಿಯು ಮೋಸದಿಂದ ವಸೂಲು ಮಾಡುವ ಪ್ರಯತ್ನದಲ್ಲಿರುತ್ತಾನೆ. ಆದ್ದರಿಂದ ಸದರಿ ಅಂಗಡಿಗೆ ಬಹಾ ಐವಜುಗಳನ್ನು ಸದರಿ ಸರ್ವೋತ್ತಮ ಕಿಣಿ ವ ಇತರರೀಗೆ ವಸೂಲ ಕೊಟ್ಟ ಪಕ್ಷಕ್ಕೆ ಸದರಿ ಅಂಗಡಿಗೆ ಹಕ್ಕುದಾರ ವ ಸದರಿ ಮೃತನ ವಾರಿಸ್ದಾರರೀಗೆ ಬಾಧಿಸತಕ್ಕದ್ದಲ್ಲವಾಗಿ ಈ ಮೂಲಕ ತಿಳಿಸೋಣಾಗಿರುತ್ತದೆ.

ಮಂಗಳೂರು.
ತಾ. 28—12—1914.

||| ಈ ಮೂರು ಗೆರೆ ಸಾಂತಯ್ಯ ಕಿಣಿ ರ.
(ಮೃತ ಮಾಧವ ಕಿಣಿಯ ತಂದೆ.)

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಆಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯುವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0 0	ಅರಗಜ	ತೊಲೆ 1ಕ್ಕೆ	2 0-0
ಅಂಬರ್ ಬತ್ತಿ	,, ,,	6-0-0	B ಅರಗಜ	,, ,,	1-0 0
ಕಸ್ತೂರಿ ಬತ್ತಿ	,, ,,	3 0 0	ಕಸ್ತೂರಿ ಬಿಲ್ಲೆ	, ,,	2-0 0
ಜವಾಜಿ ಬತ್ತಿ	,, ,,	2-0 0	ಜವಾಜಿ ಬಿಲ್ಲೆ	,, ,,	1-0-0
ಸುಣಾಗಿನ ಬತ್ತಿ	,, ,	1 8-0	ಕೇಸರಿ ಬಿಲ್ಲೆ	,, ,,	0-8-0
ಚನ್ನೀರ್ ಬತ್ತಿ	,, ,,	0 12 0	ತಾಂಬೂಲ ರತ್ನ	ಸೀಸೆ 1ಕ್ಕೆ	0-4-0
ಮಸಾಲಾ ಬತ್ತಿ	,, ,,	0 6-0	ದಶಾಂಗ ಡಬ್ಬಿ 1ಕ್ಕೆ		0 4 0

ಮೇನೇಜರ್, "ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು ಕೆ. ಅಣ್ಣಪ್ಪ ನಾೖಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ

ಅತ್ಯುತ್ತಮವಾದ ಕಸ್ತೂರಿ ತೊಲೆ 1ಕ್ಕೆ ರೂ 30 ನಂ. 2 ತೊಲೆ 1ಕ್ಕೆ ರೂ 25 ಸನ್ ಬ್ರೆಂಡ್ ಕೇಸರಿ ತೊಲೆ 1ಕ್ಕೆ ರೂ 1—6—0 ಕಾಶ್ಮೀರ ಕೇಸರಿ ತೊಲೆ 1ಕ್ಕೆ ರೂ 1—4—0 ಅತ್ಯುತ್ತಮವಾದ ಸಿಂಗಾಪುರದ ಪಚ್ಚ ಕರ್ಪೂರ ತೊಲೆ 1ಕ್ಕೆ ರೂ 2 ಶಿಂಹರವರ ಸುಗಂಧ ಕಾಯಿಗಳು ಟಿನ್ ಒಂದಕ್ಕೆ ಆಣೆ 8



ಸಿ. ಎನ್ ಸಿಂಹಂ ಮತ್ತು ಕಂಪೆನಿ,
ಆದಿಯಪ್ಪನ್ನಾಕ ರಸ್ತೆ,
ಮದರಾಸು.

S. U. N. & CO.,
BENARES CITY, U P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ-ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ನಮ್ಮ ವಿಳಾಸ:— ಯಸ್ ಯು. ಯನ್ ಮತ್ತು ಕಂಪೆನಿ, ಕಾಶಿ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಯಗ್ಸಿಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮುಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 4 ರೂ ತೂಕದ ಸೇರು 1ಕ್ಕೆ ರೂ. 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಸೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0 **ಕಸ್ತೂರಿ ಮಾತ್ರೆ** ಸೀಸೆ 1ಕ್ಕೆ 0-4-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ
ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ —ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನು ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ — 220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.



೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನಾಗಿದೆ, ಕೈಬಿಟ್ಟಿತೆಂದು ತೋರಿದಾಗಲೂ ಆಶ್ಚರ್ಯಕಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟಿದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ ಮೈಸೂರು.

Box Locks. PADLOCKS





ಧಾರಣೆ ಸುಲಭ! **ಅಲಿಗರ ಬೀಗಗಳು.** ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ ಬ್ಯಾಂಕುಗಳಿಗೂ, ದರ್ಬಾರಿ ಆಫೀಸುಗಳಿಗೂ ಸಪ್ಲೈ ಮಾಡಿದೆ

ನಾಲ್ಕು ಚೈಗಳಿರುವ ಬೀಗಗಳು

ನಂಬ್ರ 1 2 3 4

0—12—0 0—15— 1—4—0 1—10—

ಆರು ಚೈಗಳಿರುವ ಬೀಗಗಳು

1—2—0 1—8— 2—4—0 3— — 3—8—0

ವ್ಸಿರ್ ಬೀಗಗಳು.

0—4—0 0—5— 0—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಡಿ ಬಗ್ಗಿಸಿರುವ ಬೀಗ ೧ಕ್ಕೆ 0—13—0

೩, ೪, ೫ನೇ ನಂಬರು ಬೀಗಗಳನ್ನ ಬಾಗಲ ಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ ದೊರೆಯುತ್ತೆ ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ೧ಕ್ಕೆ 1—8—0, 1—12—

ವಿಳಾಸ.— ಎಚ್ ಎಸ್ ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ಪುಸ್ತಕ, ಹೊಸತಹ, ಅಂದವಾದ ಅಚ್ಚು, ಐದು ಭಾಗ ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ಇದು ಒಂದನೇ ಪುಸ್ತಕ ಬೆಲೆ ರೂ 1 ದೇಶಬಾಂಧವರಿಗೆ ಬೆಲೆ ಕಮ್ಮಿ ಮಾಡಿದೆ ಇದನ್ನು ಗುರುವಿನಂತೆ ಭಾವಿಸಿ. ಅಂಚೆ ಖರ್ಚು 0—2—0.

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1—4—0.

ರಾವ್‌ಬಹದೂರ್ ವೀರೇಶಲಿಂಗಂ ಪಂತುಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಶನ್ ಬೆಲೆ [illegible]ಪಾಯಿ 1—0—0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ. ಆ		ರೂ. ಆ.		ರೂ ಆ.
ಜಮಾ ಖರ್ಚಿನ ಪದ್ಧತಿ	0--12	ಆರ್ಯಕೀರ್ತಿ	0 10	ಕುಣಿಗಲು ರಾಮಾಶಾಸ್ತ್ರಿ	
ಇಂಡ್ಯನ್ ಪೆನಲ್‌ಕೋಡ	2—0	ಶಾಕುಂತಲ ನಾಟಕ	0—8	ಗಳವರ ಚರಿತ್ರೆ	1—0
ಅರೇಬಿಯನ್ ನೈಟ್ಸ್	2—4	ಸ್ತ್ರೀ ಧರ್ಮನೀತಿ	0—8	ಸುಜಾತ ಮದನಕುಮಾರರ	
ಸುರಸ .	. 0—4	ಶೋಭನೆ.	0—8	ಚರಿತ್ರೆ I	0—8
ಶ್ಯಾಮು .	. 0—1	ಚಂದ್ರಕಳಾ .	0—4	" II	0—7
ಇಂದ್ರ ವಜ್ರ .	. 0—4	ಕಲಾನಾಥ .	0—6	ಶಿವಗೀತೆ .	0—6
ಬೆಳ್ಳಿಯ .	. 0—3	ಸ್ತ್ರೀ. ಲೇಖ್ಯಬೋಧಿನಿ	1—4	ಪಾಕಶಾಸ್ತ್ರ .	0—8
ಕನಕಾಲುಕ.	. 0—6	ವಿಷವೃಕ್ಷ .	1—4	ಸನಾತನಧರ್ಮ ದೀಪಿಕೆ	1—0
ಹನುಮದ್‌ವಿಲಾಸ .	0—8	ಮುದ್ರಾಮಂಜೂಷ	1—8	ಬಾಲರಾಮಾಯಣ .	0—4
ಶಿವಾನಂದಲಹರಿ .	0—6	ಶುಕಸಪ್ತತಿ .	2—0	ಕಥಾ ಮಂಜರಿ. .	0—6

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮುಹೂರ್ತ, ಮಾಯಾವಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರ ರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಆಣೆ.

ವಿಳಾಸ:— **ವಿದ್ಯಾಸಾಗರ ಬುಕ್ ಡಿಪೋ,**

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತಕ್ಕೆಗ್ಗೆದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಹಾನೇ ಅವಲಂಬಿಸಿರುತ್ತದೆ. ಆಕ್ಷ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ಕೆಗ್ಗೆದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇವರ ಉತ್ತರ ಫಲವು ಆಶ್ಚರ್ಯಕರವಾಗಿದ ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಮಾರ್ಟ್ ಮಂಗಳೂರು,

ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರಿತವಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨ ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ನಿಶ್ಶಕ್ತರಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ ಬಾಟ್ಲಿ 1ಕ್ಕೆ 1—0—0.

೩ ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0

೪ ವಸಂತ ಕುಸುಮಾಕರ —ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ ಬಾಟ್ಲಿ 1ಕ್ಕೆ 1—0—0

೫ ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸ್ಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0

೬ ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ಡ್ಯಾಬಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಧೈವಾಗಿ ಪ್ರಯೋಗಗಳಿಂದ ತಯಾರಿಸಿದ ಪೌಷ್ಠರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು ಹೆಚ್ಚು ಡಿಸ್‌ಕೌಂಟ್ ಕೊಡುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರೆಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸು

ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ. [illegible]

2. [illegible] ಬಜಾರ್, ಬೆಂಗಳೂರು [illegible]

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	...	300,000—0—0
Issued Capital	...	225,000—0—0
Subscribed Capital	...	217,400—0—0
Paid up Capital	...	192,400—0—0
Deposits	...	455,326—7—10
Reserve Fund	...	27,590—12—0

ನಿಯಮಿತ ಮೂಲ ಧನವು ರೂಪಾ	...	300,000—0—0
ಹುಟ್ಟಿಬಂದ ಮೂಲ ಧನವು ,,	...	225,000—0—0
ಪ್ರತಿಜ್ಞಾತ ಮೂಲ ಧನವು ,,	...	217,400—0—0
ಆಗತ ಮೂಲ ಧನವು ,,	...	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	...	455,326—7—10
ರಕ್ಷಿತ ಧನವು	...	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively at the discretion of the managing committee

Short-notice Deposits requiring one weeks notice of withdrawal after one month received @ 2¼%. per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4%.

Loans granted on proper securities and pledges

Sealed Parcels for safe custody received on a moderate charge.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಳೆದ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳ3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2¼ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಮ್ಮಿಯಾಗದ ಹಣವನ್ನು ಠೇವಣಾತಿ ಇಡೋಣಾವೀತು. ಈ ಠೇವಣಾತಿಗಳಿಗೆ ಸೇಕಡಾ 4ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಆಧಿ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. December 1914

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ, ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷ ಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶಶರ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ತಾಪವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪನಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ ಹೀಗೆ ಸಮಸ್ತರಿಗ ... ಈ ಗ್ರಂಥವು ಪಠಿಯಿಸಲಿಕ್ಕೆ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿಯೊಂದಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ತಮ್ಮ ವಿಳಾಸ:— ಎಂ. ಭೀಮಾಯಿ ಕಂಪನಿ.
ಕರ್ನಾಟಕ ಬುಕ್ ಡಿಪೋ, ಕಲ್ಯಾಣ

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 2ನೇ ಜನವರಿ 1915

ಮದ್ರಾಸಿನಲ್ಲಿ ಕೂಡಿದ ರಾಷ್ಟ್ರೀಯ ಸಭೆಯು

ಪ್ರಜಾಶಿಕ್ಷಣಕ್ಕೆ ಮತ್ತು ಭರತಖಂಡದ ಆಯಾ ಪ್ರಾಂತ್ಯಗಳ ಪ್ರಜಾ ಮುಂದಾಳುಗಳು ಕೂಡಿಕೊಂಡು ರಾಜ್ಯದಾಡಳಿತೆಯ ವಿಷಯಗಳನ್ನು ಮೊಕ್ತವಾಗಿ ಪರ್ಯಾಲೋಚಿಸಿ ಪ್ರಜಾಹಿತಕ್ಕೆ ಬೇಕಾದ ಕಾರ್ಯನಿರ್ವಾಹವನ್ನು ನಿಶ್ಚಯಿಸಲಿಕ್ಕೆ ರಾಷ್ಟ್ರೀಯ ಸಭೆಯು ಅಗತ್ಯವಾಗಿದೆ. ಈ ಉದ್ದೇಶದಿಂದ ರಾಷ್ಟ್ರೀಯ ಸಭೆಯು ಕಳೆದ ೩೦ ವರುಷಗಳಿಂದ ಭರತಖಂಡದ ಆಯಾ ಪ್ರಾಂತ್ಯಗಳಲ್ಲಿ ಪ್ರತಿ ವರುಷದಲ್ಲಿಯೂ ಕೂಡುತ್ತ ನೆರವೇರಿಸಿರುವ ಕಾರ್ಯಭಾರವನ್ನು ವಾಚಕರೆಲ್ಲರೂ ತಿಳಿದಿರುವರು. ಪ್ರಕೃತ ಮಾರ್ಪಟ್ಟಿರುವ ಸಮಯಕ್ಕನುಸಾರವಾಗಿ ಈ ಸಭೆಯ ವರ್ತನೆಯೂ ಇದರ ವ್ಯವಸ್ಥಾಕ್ರಮವೂ ಮಾರ್ಪಡಬೇಕೆಂಬ ವಿಷಯವು ಈ ವರುಷದ ಸಭೆಯಲ್ಲಿ ಪ್ರಜಾ ಮುಂದಾಳುಗಳ ಲಕ್ಷ್ಯಕ್ಕೆ ಸರಿಯಾಗಿ ಬಂದಿರುವುದೆಂಬುದನ್ನು ನೋಡಿ ಸಂತುಷ್ಟರಾಗಿರುವೆವು. ರಾಷ್ಟ್ರೀಯ ಸಭೆಯ ಚಳವಳವು ವರುಷದ ಎಲ್ಲಾ ಕಾಲಗಳಲ್ಲಿರುವಂತೆ ಪ್ರತಿ ಪಟ್ಟಣದಲ್ಲೂ ಪ್ರತಿ ಹಳ್ಳಿಯಲ್ಲೂ ಇದರ ಉಪಸಭೆಗಳನ್ನು ಸ್ಥಾಪಿಸಬೇಕೆಂಬ ವಿಷಯವನ್ನು ರಾಷ್ಟ್ರೀಯ ಸಭೆಯ ಆಮಂತ್ರಣ ಕಮಿಟಿಯ ಅಧ್ಯಕ್ಷರಾದ ಮಾನ್ಯವಂತ ಸರ್ ಎಸ್ ಸುಬ್ರಮಣ್ಯಯ್ಯರವರು ಸಮರ್ಪಕವಾದ ರೀತಿಯಲ್ಲಿ ಸೂಚಿಸಿರುವರು. ಭಾರತೀಯರ ಆಶೆಕೋರಿಕೆಗಳೇನು ಇವರ ಶ್ರದ್ಧಾವಿಶ್ವಾಸಗಳೇನು ಎಂದು ಈ ಯುದ್ಧಕಾಲದಲ್ಲಿ ಬ್ರಿಟಿಷರಿಗೆ ವ್ಯಕ್ತವಾಗಿರುವುದು. ಭಾರತೀಯರನ್ನೂ ಬ್ರಿಟಿಷರನ್ನೂ ಒಂದಾಗಿ ಮಾಡುವ ಮೈತ್ರಿಪಾಶಗಳು ಈಗಿನ ಯುದ್ಧರಂಗದಲ್ಲಿ ಹೆಣೆಯಲ್ಪಟ್ಟಿರುವುದರಿಂದ ಇದರ ಮೂಲಕ ನಮ್ಮ ಆಣ್ಮರಲ್ಲಿಯೂ ನಮ್ಮಲ್ಲಿಯೂ ಜನಿತವಾಗಿರುವ ಸದ್ಭಾವದಿಂದ ಒಂದು ಸ್ಥಾನಕ್ಕೆ ಇನ್ನು ಮುಂದಕ್ಕೆ ಶುಭವು ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲ. ಈ ಅಭಿಪ್ರಾಯವು ಚಕ್ರವರ್ತಿಗಳೂ, ಸ್ಟೇಟ್ ಸೆಕ್ರೆಟರಿಗಳೂ ಬ್ರಿಟಿಷರ ಮುಖ್ಯ ಮಂತ್ರಿಗಳೂ, ಆಂಗ್ಲಾಳದ ಎಲ್ಲಾ ವೃತ್ತಪತ್ರಿಕೆಗಳೂ ಇತ್ತಲಾಗೆ ಮಾಡಿದ ಭಾರತೀಯರ ಪ್ರಶಂಸೆಗಳಲ್ಲಿ ದೃಢೀಕರಿಸಲ್ಪಟ್ಟದೆ. ಆದ್ದರಿಂದ ಈ ಸಮಯಕ್ಕೆ ತಕ್ಕಂಥಾ ಅರ್ಹತೆ ನಮ್ಮಲ್ಲಿ ಉಂಟಾಗುವಂತೆ ಪ್ರಯತ್ನಪಡುವುದುಚಿತವಾಗಿದೆ. ಪ್ರತಿ ಹಳ್ಳಿಯಲ್ಲಿ ರಾಷ್ಟ್ರೀಯ ಸಭೆಯ ಶಾಖೆಗಳನ್ನು ಸ್ಥಾಪಿಸಿ ಅವನ್ನು ಸರಿಯಾಗಿ ನಡೆಸುವುದೆಂದರೆ ಈ ಒಗ್ಗೆ ವಿಶೇಷ ದ್ರವ್ಯಸಹಾಯವೂ ಜನಸಹಾಯವೂ ಬೇಕಾಗಿರುವುದು. ಪ್ರತಿ ಸಂಸ್ಥಾನದ ಮುಂದಾಳುಗಳು ವರುಷ ಒಂದಕ್ಕೆ ರೂ. ೫ರಂತೆ ಚಂದಾಹಣವನ್ನು ಕೊಟ್ಟು ಒಂದು ಫಂಡನ್ನು ಏರ್ಪಡಿಸಿದರೆ ಬೇಕಾದ ದ್ರವ್ಯಸಹಾಯವು ದೊರಕುವುದೆಂದು ಸುಬ್ರಮಣ್ಯಯ್ಯರವರು ಅಜ್ಞಾಪಿಸಿರುವರು. ಅದಲ್ಲದೆ ಇಷ್ಟರ ತನಕ ರಾಷ್ಟ್ರೀಯ ಸಭೆಯ ಚಳವಳವನ್ನು ಸೇರದ ವರ್ಗದಾರರೂ ಜಮೀನುದಾರರೂ ಈ ಸಭಾಕಾರ್ಯಗಳಲ್ಲಿ ಉದ್ಯುಕ್ತರಾದರೆ ಜನಸಹಾಯವೂ ಹಣಸಹಾಯವೂ ಅಯ್ಯರವರು ಸೂಚಿಸಿರುವಂತೆ ಧಾರಾಳವಾಗಿ ದೊರಕಲು ಅನುಕೂಲವಾಗುವುದು. ಹಳ್ಳಿಗಳು ಎಂಥಾ ಚಳವಳಕ್ಕಾದರೂ ಚೈತನ್ಯವನ್ನು ಕೊಡಲಾರದಷ್ಟು ನಿರ್ಜೀವಾವಸ್ಥೆಯಲ್ಲಿರುವವೆಂಬ ಅಯ್ಯರವರ ಅಭಿಪ್ರಾಯವು ಯಥಾರ್ಥವಾಗಿರುವುದು. ಈ ಸಂಸ್ಥಾನದಲ್ಲಿ ರೈತ್ವಾರಿ ಭೂಕಂದಾಯದ ಕ್ರಮದಿಂದ ಈ ಅವಸ್ಥೆಯು ಪ್ರಾಪ್ತವಾಗಲು ಕಾರಣವಾಯಿತೆಂದು ಅಯ್ಯರವರು ಹೇಳಿರುವರು. ಇಂಥಾ ಸ್ಥಿತಿಯು ಒಳ್ಳಿತಾಗುವಂತೆ ಪ್ರಜಾ ಮುಂದಾಳುಗಳು ನಿರಂತರ ಸಾಧಿಸಬೇಕೆಂಬ ಸೂಚನೆಯು ಅಯ್ಯರವರ ಭಾಷಣದಲ್ಲಿರುವುದು. ಪಂಚಾಯತರ ಸ್ಥಾಪನೆಯನ್ನು ಜಾರಿಗೆ ತರಬೇಕೆಂದು ಡಿಸೆಂಟ್ರಲೈಜೇಶನ್ ಕಮಿಶನಿನವರು ಸರಕಾರದವರಿಗೆ ಸೂಚಿಸಿ ಐದು ವರುಷಗಳು ಕಳೆದುಹೋದರೂ ಹಳ್ಳಿಗಳ ಸುವ್ಯವಸ್ಥೆಗೆ ಕ್ಷೇಮಕರವಾದ ಈ ಏರ್ಪಾಡು ಇನ್ನೂ ಜ್ಯಾರಿಗೆ ಬಂದಿರುವುದಿಲ್ಲ. ಪರಸ್ಪರ ಸಹಾಯಕ ಸಂಘಗಳ ಸ್ಥಾಪನೆ ಬಗ್ಗೆ ಹ್ಯಾಗೆ ಒಬ್ಬ ಡಿರೆಕ್ಟರರವರು ಪ್ರತ್ಯೇಕವಾಗಿ ನೇಮಿಸಲ್ಪಟ್ಟಿರುವರೋ. ಅದೇ ರೀತಿಯಲ್ಲಿ ಪಂಚಾಯಿತರ ಸ್ಥಾಪನೆ ಬಗ್ಗೆ ಒಬ್ಬ ಡಿರೆಕ್ಟರರನ್ನು ನೇಮಿಸಿ ಶೀಘ್ರದಲ್ಲಿ ಈ ಏರ್ಪಾಡಿನ ಜ್ಯಾರಿಯನ್ನು ನಡಿಸಬೇಕೆಂದು ಸರ್ ಸುಬ್ರಮಣಯ್ಯರವರು ಸೂಚಿಸಿರುತ್ತಾರೆ.

ರಾಜಕೀಯ ವಿಷಯಗಳಲ್ಲಿ ನಾವು ಹೇಗೆ ವರ್ತಿಸಬೇಕೆಂದು ಈ ವಯೋವೃದ್ಧರು ಹೇಳಿದ ಬುದ್ಧಿವಾದವು ಅನುಸರಣೀಯವಾಗಿರುವುದು. ದಕ್ಷಿಣ ಆಫ್ರಿಕದಲ್ಲಿ ಭಾರತೀಯರು ನಾನಾ ಸಂಕಷ್ಟಗಳಿಗೆ ಗುರಿಯಾದಾಗ ಸರ್ವರ ಪ್ರೀತಿಗೂ ಮನ್ನಣೆಗೂ ಯಾವ ವರ್ತನೆಯಿಂದ ಪಾತ್ರರಾದರೋ ಅಂಥಾ ವರ್ತನೆಯನ್ನೆ ನಾವು ಕೈಕೊಳ್ಳಬೇಕೆಂದು ಸರ್ ಸುಬ್ರಮಣ್ಯಯ್ಯರವರು ತನ್ನ ದೇಶ ಬಾಂಧವರನ್ನು ವಿಜ್ಞಾಪಿಸಿ ಕೊಂಡಿರತ್ತಾರೆ. ಎಲ್ಲಾ ಸಾಧನೆಯೂ ಎಲ್ಲಾ ರಾಜಕೀಯ ಚಳವಳವೂ ದ್ವೇಷರಹಿತವಾಗಿರಬೇಕೆಂಬುದೇ ಇವರ ಮುಖ್ಯ ಅಪ್ಪಣೆಯಾಗಿದೆ.

ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಹುಮಾನ ಪಟ್ಟ ಭೂಪೇಂದ್ರನಾಥ ಬಾಸುರವರ ಭಾಷಣವು ಇವರ ವಿದ್ವತ್ತಿಗೂ ಅನುಭವಕ್ಕೂ ತಕ್ಕಂತೆ ಹಲವು ಉಪಯುಕ್ತ ಸೂಚನೆಗಳಿಂದ ಕೂಡಿರುವುದು. ಇತ್ತಲಾಗೆ ಬಾಸುರವರು ಆಂಗ್ಲಾಳದಲ್ಲಿ ಮಾಡಿದ ಪ್ರವಾಸದ ಅನುಭವವನ್ನೂ ಇಂಡಿಯಾ ಕೌನ್ಸಿಲ್ ಬಿಲ್ಲಿನ ಮುಂದಿನ ಗತಿಯನ್ನೂ ಸಭಿಕರಿಗೆ ತಿಳಿಯ ಹೇಳಿ ಭಾರತೀಯರು ಇನ್ನು ಮುಂದಕ್ಕೆ ರಾಜಕೀಯ ವಿಷಯಗಳಲ್ಲಿ ನಡಿಸಬೇಕಾದ ಸಾಧನೆ ಏನೆಂಬುದನ್ನು ವಿವರವಾಗಿ ಬಾಸುರವರು ಹೇಳಿರುತ್ತಾರೆ. ಆದರೆ ಈ ಸಂಚಿಕೆಯಲ್ಲಿ ಸ್ಥಳದಡಚಣೆಯಿಂದ ಬಾಸುರವರ ಭಾಷಣದ ಪರಿಶೀಲನೆಯನ್ನು ವಿಸ್ತಾರವಾಗಿ ಮಾಡಲಾಗಲಿಲ್ಲ. ಮದ್ರಾಸಿನ ಗವರ್ನರ ದೊರೆಗಳವರು ರಾಷ್ಟ್ರೀಯ ಸಭೆಗೆ ಚಿತ್ತೈಸಿ ಕುಸಕಾಲ ಸಭೆಯಲ್ಲಿ ಕೂತುಕೊಂಡಾಗ ಭಾರತೀಯರೆಲ್ಲರ ರಾಜಭಕ್ತಿಯನ್ನು ಸೂಚಿಸುವ ನಿರ್ಣಯವು ನಾಮದಾರ್ ಸುರೇಂದ್ರನಾಥ ಬೆನರ್ಜಿಯವರಿಂದ ಸಭೆಯ ಮುಂದಿಡೋಣಾಗಿ ಅದು ಸರ್ವರಿಂದಲೂ ಮನ್ನಿಸಲ್ಪಟ್ಟಿತೆಂಬ ವಿಶೇಷ ಸಮಾಚಾರವನ್ನು ತಿಳಿಯ ಹೇಳಿ ರಾಷ್ಟ್ರೀಯ ಸಭೆಯ ವೃತ್ತಾಂತದ ಪರಿಶೀಲನೆಯನ್ನು ಈ ಸಾರಿಗೆ ಇಲ್ಲಿಗೆ ಮುಗಿಸಿರುವೆವು.

ಔದ್ಯೋಗಿಕ ಪರಿಷದವು

ಭಾರತೀಯ ಜನಾಂಗದ ಸಂಪದಭಿವೃದ್ಧಿಯನ್ನು ವ್ಯಾಪಾರ ಮತ್ತು ಕೈಗಾರಿಕೆಗಳ ಉದ್ಧರಣೆಯ ಮೂಲಕ ಸಾಧಿಸುವ ಉದ್ದೇಶವುಳ್ಳ ಭಾರತೀಯ ಔದ್ಯೋಗಿಕ ಪರಿಷದಿನ ಮಹಾ ಸಭೆಯು ಈ ವರುಷ ರಾಷ್ಟ್ರೀಯ ಸಭೆಯೊಂದಿಗೆ ಮದ್ರಾಸಿನಲ್ಲಿ ಕೂಡಿತು. ಉದ್ಯೋಗ ತೃಷ್ಣೆಯಿಂದ ನರಳುತ್ತಿರುವ ಜನಸಾಮಾನ್ಯರ ಪರವಾಗಿ ದೇಶದ ಮುಂದಾಳುಗಳೆಲ್ಲ ಸಭೆಕೂಡಿ ಏನೇನೆಲ್ಲ ಮಾಡಿದರು, ಯಾವ ಕಾರ್ಯಸಾಧನೆಯನ್ನು ಯೋಚಿಸಿರುವರು, ಸಾಮಾನ್ಯರ ದೀನದೆಶೆಗೆ ಯಾವ ನಿವೃತ್ತಿಯನ್ನು ಕಲ್ಪಿಸಿರುವರೆಂಬುದನ್ನು ಈ ಮಹಾ ಸಭೆಯ ವೃತ್ತಾಂತದಿಂದ ಪರಿಶೀಲಿಸಿ ತಿಳಿಯುವುದು ಅಗತ್ಯ. ಈ ಪರಿಷದವು ಕಳೆದ ಹತ್ತು ವರುಷಗಳಿಂದ ನಡೆಯುತ್ತದಾದರೂ ಇದರ ಕಾರ್ಯಸಾಧನೆಯು ಏನೆಂಬುದು ಸಾಮಾನ್ಯರಿಗೆ ಇನ್ನೂ ಕಾರ್ಯತಃ ವ್ಯಕ್ತವಾಗದೆ ಇರುವುದು. ಜನರ ಹಿತಾರ್ಥವಾದ ಏರ್ಪಾಡಿನ ಉದ್ದೇಶಗಳು ನೆರವೇರಿ ಅವು ಎಲ್ಲಾ ಕಡೆಗಳಲ್ಲಿಯೂ ಕಾರ್ಯರೂಪುಗೊಳ್ಳಬೇಕಾದರೆ ಇಂಥಾ ಏರ್ಪಾಡುಗಳಲ್ಲಿ ಸರಕಾರದವರ ಮನಃಪೂರ್ವಕವಾದ ಸಹಕಾರ ಮತ್ತು ಕಾರ್ಯಪಟುಗಳಾದ ಮುಂದಾಳುಗಳ ಉತ್ಸಾಹ ಇವೆರಡೂ ಅಗತ್ಯವಾಗಿ ಬೇಕಾಗಿವೆ. ಸರಕಾರದವರ ಸಹಕಾರವು ಇಲ್ಲದೆ ಹೋದರೆ ಮುಂದಾಳುಗಳ ಉತ್ಸಾಹವು ಕುಂದಿಹೋಗುವುದು. ಸರಕಾರದವರು ತಮ್ಮತ್ತ ಕಡೆ ಅವರ ದಯಾದೃಷ್ಟಿಯನ್ನು ತಿರಿಗಿಸುವಂತೆ ನಡೆಸಬೇಕಾದ ಒಂದು ಸಾಧನೆ, ನಿರಾಶರಾದ ಜನರಿಂದ ಆಶೆ ಕೋರಿಕೆಗಳು ಆರಿ ಹೋಗದಂತೆ ಮಾಡುವ ಇನ್ನೊಂದು ಸಾಧನೆ, ಈ ಎರಡು ಸಾಧನೆಗಳನ್ನು ಮಾಡುತ್ತ ಸಭೆಯು ಪೂರ್ಣವಾಗಿ ಅದೃಶ್ಯವಾಗಿ ಹೋಗದಷ್ಟು ಮಟ್ಟಿನ ಕಾರ್ಯ ಸಾಧನೆಯು ಮಾತ್ರ ಇಂಥಾ ಸಭೆಗಳಲ್ಲಿ ಪ್ರಕೃತ ವ್ಯಕ್ತವಾಗುತ್ತಿರುವುದು. ಈ ದೇಶದಲ್ಲಿ ಕೈಗಾರಿಕೆಗಳ ಸ್ಥಾಪನೆಯ ಪರವಾಗಿ ಸಂಸ್ಥಾನಿಕ ಸರಕಾರದವರು, ಶ್ರೇಷ್ಠ ಸರಕಾರದವರು ಪ್ರಜೆಗಳ ಕೊರತೆಗಳನ್ನು ಸರಿಯಾಗಿ ಅರಿತುಕೊಂಡು ಈಗ ಕೆಲವು ವರುಷಗಳಿಂದ ಹಲವು ಏರ್ಪಾಡುಗಳನ್ನು ಮಂಜೂರಾತಿ ಬಗ್ಗೆ ಸಾಮ್ರಾಜ್ಯ ಸರಕಾರದ ಭಾರತೀಯ ಮಂತ್ರಿವರ್ಯರ ಮುಂದಿಟ್ಟಿದ್ದರೂ, ಸಾಮ್ರಾಜ್ಯ ಸರಕಾರದವರ ಮಂಜೂರಾತಿಯು ದೊರಕದೆ ಹೋದದ್ದರಿಂದ ಈ ಪರವಾದ ಈ ವರೆಗಿನ ಪ್ರಯತ್ನಗಳು ನಿಷ್ಫಲವಾಗಿ ಹೋಗಿವೆ. ಆದ್ದರಿಂದ ಈ ದೇಶದ ಸರಕಾರದವರಿಂದ ಬೇಕಾದ ಸಹಕಾರವನ್ನು ಪಡಿಯಲು ತತ್ಕಾಲಕ್ಕೆ ಅಸಾಧ್ಯವಾಗಿ ಹೋಗಿರುವುದು. ಸಾಮ್ರಾಜ್ಯ ಸರಕಾರದವರ ಈ ವರ್ತನೆಯ ತಪ್ಪನ್ನು ತೋರಿಸಿಕೊಟ್ಟು ಇಲ್ಲಿಯ ವಿದ್ಯಮಾನಗಳೆಲ್ಲವುಗಳ ಸರಿಯಾದ ಮಾಹಿತಿಯು ಅವರಲ್ಲಿ ಉಂಟಾಗುವಂತೆ ಪ್ರಕೃತ ಪ್ರಯತ್ನವು ಬೇಕಾಗಿರುವುದು. ಇಂಥಾ ಪ್ರಯತ್ನಗಳಲ್ಲಿ ಮದ್ರಾಸು ಸರಕಾರದವರು ತಮ್ಮ ಸಹಕಾರವನ್ನು ಕೊಟ್ಟಿರುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ಮದ್ರಾಸು ಗವರ್ನರರ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ಬಹುಮಾನಪಟ್ಟ ಮಿ| ಕಾರ್ಡ್ಯೂರವರು ಈ ಸಭೆಯ ಆಮಂತ್ರಣ [illegible] ಮೆಂಬರರಾಗಿದ್ದರಲ್ಲದೆ ಗವರ್ನರ ದೊರೆಗಳವರು ಸ್ವತಹ ಒಂದು [illegible] ವನ್ನು ಸಂದರ್ಶಿಸಿ ಹೋಗಿರುತ್ತಾರೆ. ಅದಲ್ಲದೆ ಪ್ರಕೃತ [illegible] ಸರಕಾರದವರು [illegible]

ವನ್ನು ಕಾರ್ಖಾನೆಗಳನ್ನು ಸ್ಥಾಪಿಸುವುದರಲ್ಲಿ ವಿನಿಯೋಗಿಸಲು ನಿಶ್ಚಯಿಸಿರುವುದರಿಂದ ಇಂಥಾ ಸಂದರ್ಭದಲ್ಲಿ ಹಿಂದೂಸ್ಥಾನದ ಸರಕಾರದವರು ಹೀಗೆಯೇ ವರ್ತಿಸಲಿಕ್ಕೆ ಅನುಮತಿ ಕೇಳಿದರೆ ಅದು ನಿರಾಕರಿಸಲ್ಪಡುವ ಸಂಭವವು ತೀರಾ ಕಡಿಮೆಯಾಗಿರುವುದು.

ಈ ಸಂದರ್ಭವನ್ನರಿತು ಈ ಸರ್ತಿ ಮದ್ರಾಸಿನಲ್ಲಿ ಕೂಡಿದ ಔದ್ಯೋಗಿಕ ಪರಿಷತ್ತಿನ ಆಮಂತ್ರಣ ಸಭೆಯ ಅಧ್ಯಕ್ಷರಾದ ರಾ| ರಾವ್‌ಬಹದ್ದೂರ್ ತ್ಯಾಗರಾಜಶೆಟ್ಟಿಯವರು ತಮ್ಮ ಭಾಷಣದಲ್ಲಿ ಈ ಪ್ರಾಂತ್ಯಗಳ ಪ್ರಜಾಜನಗಳ ವಿಜ್ಞಾಪನೆಯು ಸಾಮ್ರಾಜ್ಯ ಸರಕಾರದವರಿಗೆ ಸರಿಯಾಗಿ ತಿಳಿಯುವ ರೀತಿಯಲ್ಲಿ ಮದ್ರಾಸಿನಲ್ಲಿ ಸರಕಾರದವರೂ ಪ್ರಜಾಜನರೂ ಕೂಡಿ ನಡಿಸಿದ ಕೈಗಾರಿಕೆಗಳ ಅಭಿವೃದ್ಧಿ ಸಾಧನೆಯ ಉಪಾಯಗಳನ್ನು ಆದ್ಯಂತ ವರ್ಣಿಸಿರುವರು. ಪ್ರಜಾಜನರು ತಮ್ಮ ಹಣವನ್ನು ಅಂಜದೆ ಕೈಗಾರಿಕೆಗಳ ಕಾರ್ಖಾನೆಗಳಲ್ಲಿ ವಿನಿಯೋಗಿಸುವಂತೆ ಸರಕಾರದವರು ಮಾದರಿ ಕಾರ್ಖಾನೆಗಳನ್ನು ಸ್ಥಾಪಿಸಬೇಕೆಂದಿದ್ದರು. ಈ ರೀತಿ ಕೈಗಾರಿಕೆಯ ಒಂದು ಶಾಖೆಯಲ್ಲಿ ಜನರಿಗೆ ಅಭಿರುಚಿಯುಂಟಾದ ನಂತರ ಮತ್ತೊಂದು ಶಾಖೆಯಲ್ಲಿ ಕೆಲಸವನ್ನುಪಕ್ರಮಿಸಬಹುದೆಂಬ ಯೋಚನೆಯು ಮದ್ರಾಸು ಸರಕಾರದವರಲ್ಲಿತ್ತು. ಆದರೆ ೧೯೦೮ರಲ್ಲಿ ಮತ್ತು ೧೯೧೦ರಲ್ಲಿ ಮದ್ರಾಸು ಸರಕಾರದವರು ತಮ್ಮ ಈ ಆಲೋಚನೆಗಳನ್ನು ಸ್ಟೇಟ್ ಸಕ್ರೆಟರಿಗಳ ಮುಂದಿಟ್ಟರೂ ಇವುಗಳಿಗೆ ಅವರ ಸಮ್ಮತಿಯು ದೊರಕಲಿಲ್ಲ. ಈಗ ಯುದ್ಧದಿಂದ ಸಾಮ್ರಾಜ್ಯ ಸರಕಾರದವರ ವರ್ತನೆಯು ಈ ಭಾಗದಲ್ಲಿ ಮಾರ್ಪಟ್ಟಿರುವುದರಿಂದ ಹಿಂದೂಸ್ಥಾನದಲ್ಲಿ ಸಹ ಕೈಗಾರಿಕೆಗಳನ್ನು ಸ್ಥಾಪಿಸುವುದರಲ್ಲಿ ಜನರಿಗೆ ಅಗತ್ಯವುಳ್ಳ ಸಹಾಯವನ್ನು ಸರಕಾರದವರು ಕೊಡುವಂತೆ ಬೇಕಾದ ಸಾಮ್ರಾಜ್ಯ ಸರಕಾರದವರ ಸಮ್ಮತಿಯನ್ನು ತಿರಿಗೊಮ್ಮೆ ಕೇಳಬೇಕೆಂದು ಇಂಡಿಯಾ ಸರಕಾರದವರನ್ನು ಈ ಪರಿಷದದವರು ವಿಜ್ಞಾಪಿಸಿಕೊಂಡಿರುತ್ತಾರೆ.

ಸರಕಾರದವರಿಂದ ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಪ್ರೋತ್ಸಾಹವನ್ನು ಈ ರೀತಿ ಸೂಚಿಸಿ ಪ್ರಜಾಜನರು ಸಹ ಮಾಡಬೇಕಾದ ಪ್ರಯತ್ನಗಳನ್ನು ತ್ಯಾಗರಾಜಶೆಟ್ಟಿಯವರು ವಿವರಿಸಿರುವರು. 'ವಕೀಲರಾಗಬೇಕು, ಅಥವಾ ಸರಕಾರದ ಉದ್ಯೋಗಸ್ಥರಾಗಬೇಕು' ಈ ಎರಡು ಕೋರಿಕೆಗಳಿಂದ ಶಾಲಾ ಕೊಲೇಜುಗಳನ್ನು ಭಾರತೀಯ ತರುಣರು ಸೇರುವರಲ್ಲದೆ ವ್ಯಾಪಾರ ಅಥವಾ ಕೈಗಾರಿಕೆಗಳಿಗೆ ಬೇಕಾದ ಶಿಕ್ಷಣವನ್ನು ಪಡಿಯುವುದೆಂದರೆ ಅವರಿಗೆ ಮನಸ್ಸು ಬಾರದು. ಇದಕ್ಕೆ ಕಾರಣವು ತ್ಯಾಗರಾಜಶೆಟ್ಟಿಯವರು ಹೇಳಿರುವಂತೆ ಈಗಿನ ಶಿಕ್ಷಣ ಕ್ರಮವೇ ಆಗಿರುತ್ತದೆ. ಶಿಕ್ಷಣ ಕ್ರಮವು ಮಾರ್ಪಟ್ಟು ವಿನಹ ಕೈಗಾರಿಕೆಗಳ ಶಿಕ್ಷಣಾಲಯಗಳೂ, ಪರಿಶೋಧನಾಲಯಗಳೂ ಹಿಂದೂಸ್ಥಾನದಲ್ಲಿ ಸ್ಥಾಪಿಸಿದ ವಿನಹ ಕೈಗಾರಿಕೆಗಳಲ್ಲಿ ಶಿಕ್ಷಿತರಾಗಿರುವ ಅಭಾವವು ಮಾಜಿಹೋಗದು. ಪ್ರಜಾಜನಗಳಲ್ಲಿ ಬುದ್ಧಿವಂತರು, ಶಿಕ್ಷಿತರು, ಪ್ರವೀಣರಾದವರು ಈ ದೇಶದಲ್ಲಿ ಸರಕಾರದವರ ಸೇವಾನಿರತರಾಗಿರುವರು. ಪಾಶ್ಚಾತ್ಯ ದೇಶಗಳಲ್ಲಿ ಇಂದವರು ಖಾಸಗಿ ವ್ಯಾಪಾರ ಮತ್ತು ಕೈಗಾರಿಕಾ ಭಂಡಸಾಲೆಗಳಲ್ಲಿ ಹೆಚ್ಚಾಗಿರುವರಲ್ಲದೆ ಸರಕಾರದವರ ನೌಕರಿಯನ್ನು ಇವರು ಅಪೇಕ್ಷಿಸುವುದು ಕಡಮೆ. ಯಾಕೆಂದರೆ ಸರಕಾರದವರಿಂದ ಕೊಡೋಣಾಗುವ ಸಂಬಳಕ್ಕಿಂತ ಇವರು ಖಾಸಗಿ ವೃತ್ತಿಯಿಂದ ಹೆಚ್ಚು ಗಳಿಯಲು ಸಮರ್ಥರಾಗಿರುತ್ತಾರೆ. ಹಿಂದೂಸ್ಥಾನದಲ್ಲಿ ಸರಕಾರದವರ ಆಫೀಸುಗಳಲ್ಲಿ ಒರೇ ರೂ. ೧೫ರ ಉದ್ಯೋಗವನ್ನು ಪಡಿಯಲು ಕೊಲೇಜುಗಳಲ್ಲಿ ತಮ್ಮ ಆಯುಷ್ಯ ಕಾಲದ ಅರ್ಧಭಾಗವನ್ನು ಕಳೆದ ಶಿಕ್ಷಿತರು ಹೋರಾಡುತ್ತಿರುವುದರಿಂದ ನಮ್ಮ ಹೀನ ಸ್ಥಿತಿಯು ಎಷ್ಟು ಅಗಾಧವಾಗಿದೆಂಬುದು ವ್ಯಕ್ತವಾಗುವುದು. ಆದ್ದರಿಂದ ಪ್ರಜಾಲಕ್ಷವು ಕೈಗಾರಿಕೆ ಶಿಕ್ಷಣದತ್ತಕಡೆ ಆಕರ್ಷಿಸಲ್ಪಡುವಂತೆ ಪ್ರಯತ್ನಿಸಬೇಕೆಂದು ಶಿಕ್ಷಿತ ಮಂದಾಳುಗಳನ್ನು ರಾ| ಶೆಟ್ಟಿಯವರು ವಿಜ್ಞಾಪಿಸಿಕೊಂಡಿರುತ್ತಾರೆ.

~~ಈ ಔದ್ಯೋಗಿಕ ಪರಿಷದದ ಅಧ್ಯಕ್ಷ~~ಸ್ಥಾನವನ್ನು ವಹಿಸಿಕೊಂಡಿದ್ದ ಬಹುಮಾನಪಟ್ಟ ಮನಮೋಹನದಾಸರಾಮಜಿಯವರಿಂದ ತಮ್ಮ ಭಾಷಣದಲ್ಲಿ ಈಗಿನ ವ್ಯಾಪಾರ ಮತ್ತು ಕೈಗಾರಿಕೆಯ ಸ್ಥಿತಿಯು ಸಂಪೂರ್ಣವಾಗಿ ಪರಿಶೀಲಿಸಲ್ಪಟ್ಟಿರುವುದು. ಸ್ವದೇಶಿ ಚಳವಳದ ಬೆಳವಣಿಗೆ, ವ್ಯಾಪಾರ ಮತ್ತು ಕೈಗಾರಿಕೆಗಳ ಸ್ಥಿತಿಯು ಈಗಿನ ಯುದ್ಧದಿಂದ ಹೇಗೆ ಮಾರ್ಪಟ್ಟಿದೆ ಮತ್ತು ಈ ದೇಶದಲ್ಲಿ ವ್ಯಾಪಾರ ಮತ್ತು ಕೈಗಾರಿಕೆಗಳ ಅಭಿವೃದ್ಧಿಯನ್ನು ಈಗಿನ ವಿದ್ಯಮಾನಗಳಲ್ಲಿ ಹೇಗೆ ಸಾಧಿಸಬಹುದು, ಈ ರೀತಿ ಮೂರು ವಿಧಾನಗಳಲ್ಲಿ ದೇಶದ ಸಾಂಪತ್ತಿಕ ಅಭಿವೃದ್ಧಿಯ ಸಾಧನೋಪಾಯಗಳನ್ನು ಅಧ್ಯಕ್ಷರವರು ಪರಿಶೀಲಿಸಿರುತ್ತಾರೆ. ಪ್ರಾಚೀನ ಕಾಲದಲ್ಲಿ ಹಿಂದೂಸ್ಥಾನದಲ್ಲಿ ತಯ್ಯಾರಾಗುತ್ತಿದ್ದ ಒಡವೆಗಳು ಭೂಲೋಕದ ಆಯಾ ಭಾಗಗಳಿಗೆ ವಯ್ಯಲ್ಪಟ್ಟು ಈ ದೇಶವು ಕೈಗಾರಿಕೆಗಳ ತವರುಮನೆಯಾಗಿತ್ತು. ನಂತರ ಈ ದೇಶದಲ್ಲಿ ಕೈಗಾರಿಕೆಗಳು ನಾಶವಾಗಿ ಹೋಗಿ ವ್ಯಾಪಾರವೂ ಸಹ ಹೇಗೆ ಕೆಟ್ಟುಹೋಯಿತೆಂಬುದನ್ನು ಚರಿತ್ರೆಯಿಂದ ತಿಳಿಸಿರುವರು. ಪುರಾತನ ಕಾಲದ ಈ ಉಚ್ಛ ಸ್ಥಿತಿಯನ್ನು ತಿಳಿದು ಹಿಂದೂಸ್ಥಾನವನ್ನು ಅದಕ್ಕಿಂತ ಒಳ್ಳೇದಾದ ಸ್ಥಿತಿಗೆ ತರ್ಬೇಕೆಂಬ ಲವಲವಿಕೆಯು ಸ್ವದೇಶಿ ಚಳವಳದ ಮುಖಾಂತರ ಇಲ್ಲಿ ಉಂಟಾಯಿತು. ಇದರಿಂದ ದೇಶದ ಕೆಲವು ಕಡೆಗಳಲ್ಲಿ ವ್ಯಾಪಾರ ಕಂಪೆನಿಗಳು ಕೈಗಾರಿಕೆಯ ಭಂಡಸಾಲೆಗಳು ತಲೆದೋರಿದವು. ಇವುಗಳ ಸಂಖ್ಯೆಯು ಕ್ರಮವಾಗಿ ಏರುತ್ತ ಬಂತು. ಖಾಸಗಿ ಬೇಂಕುಗಳು ಅಲ್ಲಲ್ಲಿ ಸ್ಥಾಪಿಸಲ್ಪಟ್ಟದ್ದರಿಂದ ಜನರು ತಮ್ಮ ಸಿಲುಕಿನ ಹಣವನ್ನು ಭದ್ರವಾಗಿ ಹುಗಿದಿಡುವುದಕ್ಕಿಂತ ಬೇಂಕುಗಳಲ್ಲಿ ರೇವಣಾತಿಯಾಗಿಡಲು ಧೈರ್ಯಗೊಂಡರು. ಹೀಗಿರುತ್ತಾ ಕಳೆದ ವರುಷ ಕೆಲವು ಬೇಂಕುಗಳು ದಿವಾಳಿಯಾಗಿ ಹೋದ್ದರಿಂದ ಕಂಪೆನಿಗಳಲ್ಲಿ ಭರವಸೆಯು ಜನರಿಗೆ ಕಡಮೆಯಾಗಿ ಇನ್ನು ಹಲವು ಸ್ವದೇಶಿ ಕಂಪೆನಿಗಳು ಮೊದಲಾದವುಗಳು ಬಿದ್ದುಹೋಗುವದಿತ್ತು. ಆದರೆ ಇದೇ ಕಾಲದಲ್ಲಿ ಸರಕಾರದವರು ಕಂಪೆನಿ ಆಕ್ಟನ್ನು ತಿದ್ದಿದ್ದರಿಂದ ಬೇಂಕುಗಳ ದಿವಾಳಿಯಿಂದ ಸ್ವದೇಶಿ ಚಳವಳಕ್ಕೆ ಉಂಟಾಗುವ ಹಾವಳಿಯು ಕಡಮೆಯಾಯಿತು. ಈ ವರುಷದಲ್ಲಿ ಲೋಕದ ವ್ಯಾಪಾರ ಕೈಗಾರಿಕೆಗಳನ್ನು ನೆಲಕ್ಕೆ ಅಪ್ಪಳಿಸಿಬಿಡುವಂಥಾ ಹಾನಿಯು ಯುರೋಪಿಯ ಯುದ್ಧ ಮೂಲಕ ಉಂಟಾಗಿದೆಂದು ಅಧ್ಯಕ್ಷರವರು ವಿಸ್ತಾರವಾಗಿ ವಿವರಿಸಿ ಇಂಥಾ ಸಂದರ್ಭದಲ್ಲಿ ಸರಕಾರದವರು ಹಿಂದೂಸ್ಥಾನದಲ್ಲಿ ವ್ಯಾಪಾರ ಕೈಗಾರಿಕೆಗಳಿಗೆ ಎಂಥಾ ಸಹಾಯವನ್ನು ಮಾಡಬೇಕೆಂದು ಮನಮೋಹನದಾಸ ರಾಮಜಿಯವರು ತಿಳಿಯಹೇಳಿರುವರು. ಪ್ರೆಸಿಡೆನ್ಸಿ ಬೇಂಕುಗಳಂಬ ಮದ್ರಾಸು ಬೇಂಕು ಮೊದಲಾದ ಬೇಂಕುಗಳಲ್ಲಿ ಜನರಿಗೆ ಯುದ್ಧದ ಮೊದಲು ಕೊಡೋಣಾಗುವ ರೀತಿಯಲ್ಲಿ ಹಣವು ದೊರಿಯದೆ ಇದ್ದದ್ದರಿಂದ ಹಣದ ಚಲಾವಣೆಯು ಸರಿಯಾಗಿ ಇಲ್ಲದೆ ಇಲ್ಲಿಂದ ಪರದೇಶಗಳಿಗೆ ರವಾನಾಗುವ ಸರಕುಗಳು ಅಲ್ಲಲ್ಲಿಯೇ ರಾಶಿಬಿದ್ದು ಈ ದೇಶಕ್ಕೆ ಉಂಟಾದ ನಷ್ಟದ ಸ್ವಭಾವವು ಬೇಂಕಿನವರ ಈ ವರ್ತನೆಯಿಂದ ಮತ್ತಷ್ಟು ಭೀಕರಗೊಂಡಿರುವುದು. ಆದ್ದರಿಂದ ಇಂಥಾ ಅಡಚಣೆಗಳನ್ನು ನಿವಾರಿಸುವುದು ಸರ್ವತ್ರಾಣಿಗಳಾಗಿರುವ ಸರಕಾರದವರಿಗೆ ಸಾಧ್ಯವಾಗಿರುವುದರಿಂದ ಸರಕಾರದವರು ಈ ಸಂದರ್ಭದಲ್ಲಿ ಪ್ರಜಾಜನರಿಗೆ ಮಾಡತಕ್ಕ ಸಹಾಯವೇನೆಂಬುದನ್ನು ಅಧ್ಯಕ್ಷರವರು ಸೂಚಿಸಿರುವರು.

ಗಾಜು, ಗಾಜಿನ ಒಳೆಗಳು, ಸಾಬೂನು, ಪಿಂಗಾಣಿಗಳು, ಬೆಂಕಿ ಕಡ್ಡಿ, ವಾರ್ನಿಶುಗಳು ಮೊದಲಾದ ಕೆಲವು ಸಾಮಾಗ್ರಿಗಳನ್ನು ತಯ್ಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸುವ ಅನುಕೂಲತೆಯು ಈ ದೇಶದಲ್ಲಿರುವುದು. ಆದರೆ ಈ ಕೈಗಾರಿಕೆಗಳ ಮಾಹಿತಿದಾರರನ್ನಿಟ್ಟು ಈ ಕಾರ್ಖಾನೆಗಳನ್ನು ನಡಿಸುವ ತ್ರಾಣವು ಜನರಲ್ಲಿಲ್ಲದ್ದರಿಂದ ಆಯಾ ಕೈಗಾರಿಕೆಗಳ ಮಾಹಿತಿಯನ್ನು ಕೊಡುವ ಮಾಹಿತಿದಾರರನ್ನು ತರಿಸಿ ಜನರು ಕೈಗಾರಿಕೆ ಕಾರ್ಖಾನೆಗಳನ್ನು ಸ್ಥಾಪಿಸುವಂತೆ ಸರಕಾರದವರು ಪ್ರಯತ್ನಿಸಬೇಕೆಂದು ಅಧ್ಯಕ್ಷರವರು ವಿಜ್ಞಾಪಿಸಿಕೊಂಡಿರುವರು. ಹಿಂದೂಸ್ಥಾನದ ವ್ಯಾಪಾರವು ಲೋಕದ ಎಲ್ಲಾ ಕಡೆಗಳಲ್ಲಿ ಸಮಗ್ರವಾಗಿ ನಡಿಯುವಂತೆ ಅಧ್ಯಕ್ಷರವರು ಮತ್ತೊಂದು ಸೂಚನೆಯಿತ್ತಿದ್ದಾರೆ. ಲೋಕದ ಆಯಾ ದೇಶಗಳಲ್ಲಿ ಪ್ರಕೃತ ರಾಯಭಾರಿಗಳು ತಮ್ಮ ತಮ್ಮ ದೇಶದ ವ್ಯಾಪಾರಕ್ಕೆ ಬೇಕಾದ ಅನುಭವವನ್ನು ಸಂಗ್ರಹಿಸಿಕೊಂಡು ಜನರಿಗೆ ಅದನ್ನು ತಿಳಿಯ ಹೇಳುತ್ತಿರುವರು. ಇದೇ ರೀತಿಯಲ್ಲಿ ಹಿಂದೂಸ್ಥಾನದವರಿಗೆ ಇಂಥಾ ಅನುಭವವು ದೊರಕುವಂತೆ ಪ್ರತಿ ದೇಶದಲ್ಲಿಯೂ ಬ್ರಿಟಿಷ ರಾಯಭಾರಿಯೊಂದಿಗೆ ಹಿಂದೂಸ್ಥಾನದ ಬಗ್ಗೆ ಒಬ್ಬ ಪ್ರತಿನಿಧಿಯನ್ನು ಸರಕಾರದವರು ನೇಮಿಸುವುದು ಅಗತ್ಯವೆಂಬ ಅಧ್ಯಕ್ಷರವರ ಸೂಚನೆಯು ಸಮಯೋಚಿತವಾಗಿದೆ.

ಕೃಷಿ ಮತ್ತು ನೀರಾವರಿಯ ವಿಸ್ತರಣೆಗಳಲ್ಲಿ ಸರಕಾರದವರ ಸಹಾಯವು ಜನರಿಗೆ ಯಾವ ರೀತಿ ಕೊಡೋಣಾಗಬೇಕೆಂಬುದನ್ನು ಪ್ರಸ್ತಾಪಿಸಿ ಔದ್ಯೋಗಿಕ ಪರಿಷದದ ಕಾರ್ಯಸಾಧನೆಯು ವರುಷದ ಎಲ್ಲಾ ಸಮಯಗಳಲ್ಲಿ ನಡಿಯುವಂತೆ ಎಲ್ಲಾ ಪಟ್ಟಣಗಳಲ್ಲಿ ಈ ಬಗ್ಗೆ ಕಮಿಟಿಗಳನ್ನೇರ್ಪಡಿಸಬೇಕೆಂತ ಮನಮೋಹನದಾಸ ರಾಮಜಿಯವರು ಪ್ರಜಾವರ್ಗವನ್ನೆಲ್ಲಾ ವಿಜ್ಞಾಪಿಸಿಕೊಂಡಿರುತ್ತಾರೆ.

ತ್ಯಾಗರಾಜಸೆಟ್ಟಿಯವರು ಮತ್ತು ಅಧ್ಯಕ್ಷರವರು ~~ತಿಳಿಯ ಹೇಳಿದ ಸೂಚನೆ~~ಗಳು ನೆರವೇರುವಂತೆ ಬೇಕಾದ ನಿರ್ಣಯಗಳನ್ನು ಸಭೆಯಲ್ಲಿ ಮಂಜೂರು ಮಾಡಿದ ನಂತರ ಕಳದ ವರುಷದ ಔದ್ಯೋಗಿಕ ಪರಿಷದವು ಮುಗಿಯಿತ.

ಪತ್ರವ್ಯವಹಾರ.

ಅಯ್ಯಾ ಪತ್ರಾಧಿಪರೇ,

ಕೊಡಿಯಾಲಬೈಲು ವಾರ್ಡಿನಲ್ಲಿ ಇತ್ತಲಾಗ್ಗೆ ವಾರ್ಡ್ ಕೌನ್ಸಿಲರನ್ನು ಆರಿಸುವಾಗ ನಡದ ಜಟಾಪಟಿಯನ್ನು ಹೊರಗಿನವರು ಕೇಳಿದರೆ ನಮ್ಮ ಪಟ್ಟಣ ಕಾತರವರು ಪುರಜನರ ಕ್ಷೇಮದ ಬಗ್ಗೆ ಹೆಚ್ಚು ಉತ್ಸಾಹ ತೋರಿಸುತ್ತಿದ್ದಾರೆಂತ ತಿಳಿಯಬಹುದು. ಆದರೆ ಒಳಗಿನ ಸ್ಥಿತಿಯನ್ನು ಶಿವನೇ ಬಲ್ಲ! ರಾ| ಭೋಜರಾಯರ ಮನೆಯಿಂದ ಮುಕ್ಕ

ಗುಡ್ಡಗೆ ಹೋಗುವ ಹೊಸ ಮಾರ್ಗದಲ್ಲಿ ಅಗತ್ಯವಿರುವ ಸಂಕವು ಇಲ್ಲದ್ದೆ ಜನರು ಪಡುವ ಅಡಚಣೆಯನ್ನು ಹೇಳಿ ತೀರದು. ಸಣ್ಣ ಸಣ್ಣ ಬಿದಿರಿನ ತುಂಡುಗಳನ್ನು ಹಾಕಿ ಮಾಡಿದ್ದ ಚಿಕ್ಕ ತತ್ಕಾಲದ ಮಟ್ಟಿನ ಸಂಕವು ಸಹಾ ಗಳಿತವಾದ ಸ್ಥಿತಿಯಲ್ಲಿರುವದರಿಂದ ಅದರ ಮೇಲೆ ನಡಿಯುವಾಗ ಕೆಳಗಿರುವ ಹಳ್ಳಕ್ಕೆ ಬಿದ್ದು ಹೋಗ್ವೇವೆಂಬ ಅಂಜಿಕೆಯಿಂದ ಗಡಗಡನೆ ನಡುಗಿ ಅತ್ತಿತ್ತ ಹೋಗ ಬೇಕಾಗಿದೆ. ಈ ಸಂಕದ ಸ್ಥಿತಿ ಹೀಗೆ. ಮತ್ತೊಂದು ಕಡೆಯಲ್ಲಿ ಅದೇ ವಾರ್ಡಿನಲ್ಲಿ ಡೊಂಗರಕೇರಿ ವೆಂಕಟ್ರಮಣ ದೇವಸ್ಥಾನದಿಂದ ಗುತ್ತ್ಯಮ್ಮಸ್ಥಾನ ಒಳಗೆ ಹೋಗುವ ದೀಪಸ್ತಂಭಗಳನ್ನು ಬದಲಾಯಿಸಿ ನಟ್ಟಿದ್ದರಿಂದ ಮತ್ತಷ್ಟು ತೊಂದರೆಯುಂಟಾಗಿರುತ್ತದೆ. ಓಣಿಯಲ್ಲಿ ಹತ್ತಿರ ಹತ್ತಿರವಾಗಿ ದೀಪಸ್ತಂಭಗಳು ಇರುವದು ಅಗತ್ಯ. ಯಾಕಂದರೆ ಇಲ್ಲಿ ಹಾವು, ಕಡಂಬಳ ಮುಂತಾದ ವಿಷಜಂತುಗಳ ಸಂಚಾರವು ಯಾವಾಗಲೂ ಇರುತ್ತದೆ. ಅದ್ದರಿಂದ ಈ ಮಾರ್ಗದಲ್ಲಿ ಮೊದಲಿದ್ದಂತೆಯೇ ದೀಪಸ್ತಂಭಗಳನ್ನು ಇಡಿಸಲು ಸಾಧ್ಯವಿಲ್ಲದಿದ್ದರೂ ಒಂದು ಹೊಸ ದೀಪವನ್ನಾದರೂ ಈ ಓಣಿಯ ಮಧ್ಯಭಾಗದಲ್ಲಿ ಹಾಕಿಸುವದು ಜನರ ಪ್ರಾಣರಕ್ಷಣೆಗೆ ಅಗತ್ಯವಾಗಿರುವದು. ಪಟ್ಟಣ ಮುಂದಾಳುಗಳು ಇಲೆಕ್ಷನ್ ಚಟಾಪಟೆಯಲ್ಲಿ ತೋರಿಸುವ ಪ್ರೋತ್ಸಾಹವನ್ನು ಇಂಥಾ ವಿಷಯಗಳಲ್ಲಿ ಸಹಾ ತೋರಿಸಿದರೆ ಬಹಳ ಉಪಕಾರವಾಗುವದಲ್ಲವೇ?

ಕಾಶೀಕ್ಷೇತ್ರಕ್ಕೆ ಹೋಗಿ ಒಂದು ಸಾವಿರ ಹೂಗಳನ್ನೂ ಅನೇಕ ದ್ರವ್ಯವನ್ನೂ ಕೊಟ್ಟಷ್ಟು ಪುಣ್ಯವು ದೊರಕುವ ಮತ್ತೊಂದು ಕಾರ್ಯ ಪ್ರಯತ್ನವು ನಮ್ಮ ಪಟ್ಟಣದ ಇನ್ನೊಂದು ಭಾಗದಲ್ಲಿರುವದು. ಈ ಪುಣ್ಯ ಸಾಧನೆಯ ಕಾರ್ಯವು ಯಾವ ವಾರ್ಡಿಗೆ ಸೇರಿದ್ದೆಂತ ನನಗೆ ಹೇಳಲಿಕ್ಕೆ ಸಾಧ್ಯವಿಲ್ಲ. ಆದರೆ ಸ್ಥಳವನ್ನು ಹೇಳುವೆನು. ತೇರುಬೀದಿಯಿಂದ ಡೊಂಗರಕೇರಿಗೆ ಹೋಗುವ ಪ್ರಸ್ತ ಪ್ರಚುರ ಓಣಿ. ಈ ಮಾರ್ಗದ ಸ್ಥಿತಿಯನ್ನು ಸರಿಗೊಳಿಸಿದರೆ ಒಂದು ವರುಷ ಕಾಲದಲ್ಲಿ ೫—೬ ನರಜೀವಗಳನ್ನು ರಕ್ಷಿಸಿದ ಪುಣ್ಯವು ಈ ಪಟ್ಟಣಕ್ಕೆ ಪ್ರಾಪ್ತವಾಗುವದರಲ್ಲಿ ಸಂಶಯವಿಲ್ಲ. ಮುನ್ಸಿಪಾಲಿಟಿಯ ಖಜಾನೆಯಲ್ಲಿ ಪ್ರಕೃತ ಮಾರ್ಗ ದುರುಸ್ತಿಗೆ ಹಣವಿಲ್ಲದಿದ್ದರೆ ಈ ಬಗ್ಗೆ ವಂತಿಗೆಯನ್ನಾದರೂ ಕೂಡಿಸಿಕೊಂಡು ಈ ಕೆಲಸವನ್ನು ಮುಂದರಿಯುವದು ಅಗತ್ಯ. ಇದೂ ಸಹಾ ಸಾಧ್ಯವಲ್ಲದಿದ್ದರೆ ಜನರ ಪಶುಗಳ ವ ಗಾಡಿಗಳೇ ಮೊದಲಾದ ವಾಹನಗಳ ಚಲಾವಣೆಯು ಈ ಮಾರ್ಗದಲ್ಲಿ ಆಗದಂತೆ ಅದನ್ನು ಮುಚ್ಚಿಬಿಡುವದಾದರೂ ಅಗತ್ಯ. ಈ ಮಾರ್ಗದ ಇಕ್ಕಡೆಗಳಲ್ಲಿಯೂ ಆಗಿಂದಾಗ್ಯೆ ಇಲಿಗಳು ಬಿದ್ದು ಪ್ಲೇಗು ಮರಣಗಳು ಉಂಟಾಗದೆ ಇದ್ದ ವರುಷಗಳಿಲ್ಲ. ಹೊಲಸಿನಿಂದ ತುಂಬಿರುವ ಈ ಮಾರ್ಗಕ್ಕೆ ಅನೇಕ ಸಮಯದಿಂದ ಹಾರೆ ಗುದ್ದಲಿಗಳ ಸಂದರ್ಶನೆಯು ಇಲ್ಲದೆ ಹೋದುದರಿಂದ ಇದರ ಸ್ಥಿತಿಯು ಮತ್ತಷ್ಟು ಭಯಂಕರವಾಗಿರುವದು. ಹಣವಿಲ್ಲವೆಂತ ಸತ್ತು ಬಿದ್ದ ಹೆಣದ ಸಂಸ್ಕಾರವನ್ನು ಮಾಡದೆ ಇದ್ದರೆ ಜನರಿಗೆ ಎಷ್ಟು ಅಪಾಯ ಉಂಟಾಗಿರುವದೋ ಅಷ್ಟು ಅಪಾಯವು ಈ ಮಾರ್ಗದಿಂದ ಪ್ರಾಪ್ತವಾಗುತ್ತಿರುವದು. ಆದುದರಿಂದ ವಂತಿಗೆಯನ್ನಾದರೂ ಮಾಡಿ ಈ ಮಾರ್ಗವನ್ನು ಆರೋಗ್ಯಕರವಾಗಿ ಮಾಡಬೇಕೆಂತ ಪಟ್ಟಣ ತಾತರನ್ನೂ ಪುರಜನರ ಮುಂದಾಳುಗಳನ್ನೂ ಪ್ರಾರ್ಥಿಸಿ ಕೊಳ್ಳುತ್ತೇನೆ.

ಮಂಗಳೂರ
28 – 12 – 14.

ಪಟ್ಟಣ ಸಂಚಾರಿ.

ಮಂಗಳೂರಿನ ಪೆಂಟ್‌ಲೆಂಡ್‌ಪೇಟೆ

ಮಧ್ಯಮ ತರಗತಿಯವರಿಗೂ ಕನಿಷ್ಠ ತರಗತಿಯವರಿಗೂ ಪೆಂಟ್‌ಲೆಂಡ್‌ಪೇಟೆಯಲ್ಲಿ ವಾಸ್ತವ್ಯಗಳನ್ನು ಪಡದು ಅಲ್ಲಿ ಮನೆಗಳನ್ನು ಕಟ್ಟಿಸಲಿಕ್ಕೆ ಸಾಕಷ್ಟು ಹಣವಿರದು. ಹಣವನ್ನು ಕೂಡಿಸಿಕೊಂಡು ಮನೆಗಳನ್ನು ಕಟ್ಟಿಸುವುದೆಂದರೆ ಕೆಲವು ವರುಷಗಳಾದರೂ ಬೇಕಾದಾವು. ಮನೆಗಳು ಇಲ್ಲಿ ಶೀಘ್ರದಲ್ಲಿ ಕಟ್ಟಿಸೋಣಾಗುವಂತೆ ಜನರ ಸಹಾಯಾರ್ಥವಾಗಿ ಕಟ್ಟಡಗಳನ್ನು ಕಟ್ಟಿಸುವ ಪರಸ್ಪರ ಸಹಾಯಕ ಸಂಘವೊಂದನ್ನು ಸ್ಥಾಪಿಸಿದರೆ ಪೆಂಟ್‌ಲೆಂಡ್ ಪೇಟೆಯ ಬೆಳವಣಿಕೆಗೆ ತುಂಬ ಸಹಾಯವಾಗುವುದು. ಸರಕಾರದವರೂ, ಮುನ್ಸಿಪಲ್ ಅಧಿಕಾರಿಗಳೂ, ಪ್ರಜೆಗಳ ಮುಂದಾಳುಗಳೂ ಇಂಥಾ ಸಂಘವನ್ನು ಸ್ಥಾಪಿಸಿ ನಡೆಸಲು ಪ್ರಯತ್ನಪಟ್ಟರೆ ಕಾರ್ಯವು ಬೇಗನೆ ನೆರವೇರುವುದು. ಈ ಸಂಸ್ಥಾನದ ಕೆಲವು ಪ್ರಾಂತ್ಯಗಳಲ್ಲಿ ನಿವಾಸಿಕರ ಬಗ್ಗೆ ಕಟ್ಟಡಗಳನ್ನು ಕಟ್ಟಿಸಿ ಕೊಡುವ ಇಂಥಾ ಸಂಘಗಳಿರುವವು. ಈ ಸಂಘದವರು ತಮ್ಮ ಬಂಡವಾಳದಿಂದ ಆಯಾ ನಿವಾಸಿಕರಿಗೆ ಬೇಕಾದ ರೀತಿಯಲ್ಲಿ, ಮನೆಗಳನ್ನು ಕಟ್ಟಿಸಿ ಕೊಡುವರು. ಹೀಗೆ ಸಂಘದವರಿಂದ ಕಟ್ಟಿಸೋಣಾದ ಮನೆಯಲ್ಲಿ ನಿವಾಸಿಸುವವನು ತಿಂಗಳಿಗೆ ಇಂತಿಷ್ಟು ಮೊಬಲಗಿನ ಪ್ರಕಾರ ಬಾಡಿಗೆ ರೂಪವಾಗಿ ಈ ಸಂಘದವರಿಗೆ ಮನೆ ಕಟ್ಟಿಸಲು ತಗಲಿದ ಮೊಬಲಗಿನ [illegible]ವನ್ನು ಕೊಡುತ್ತಾ ಬಂದರೆ ಕೆಲವು ವರುಷಗಳಲ್ಲಿ ಮನೆಯು ನಿವಾಸಿಕನ ಸ್ವಂತದ್ದಾಗಿ ಹೋಗುವುದು. ಆದ್ದರಿಂದ ಪ್ರಜಾಹಿತಚಿಂತಕರೂ ಮುನ್ಸಿಪಲ್ ಕೌನ್ಸಿಲಿನವರೇ ಮೊದಲಾದವರೂ ಪೆಂಟ್‌ಲೆಂಡ್‌ಪೇಟೆಯ ಬಗ್ಗೆ ಇಂಥಾದ್ದೊಂದು ಸಂಘವನ್ನು ಸ್ಥಾಪಿಸಿದರೆ ಜನರಿಗೆ ಮನೆಗಳನ್ನು ಕಟ್ಟಿಸಲುಳ್ಳ ಅಡಚಣೆಯು ನಿವಾರಣೆಯಾಗುವುದು.

ಜನರ ಜೀವನವೃತ್ತಿ ಸ್ಥಳವಾದ ಬಂದರು, ಗೋಳಿಕಟ್ಟೆ ಬಜಾರು, ರಥಬೀದಿ, ಮೊದಲಾದ ಕಡೆಗಳಿಂದ ಪೆಂಟಲೆಂಡ್ ಪೇಟೆಯು ದೂರದಲ್ಲಿರುವುದು. ವ್ಯಾಪಾರ ವೃತ್ತಿಯವರಿಗೂ, ದಿನ ಕೆಲಸಗೈದು ಉಣ್ಣುವವರಿಗೂ ಇದರಿಂದ ಪೆಂಟಲೆಂಡ್ ಪೇಟೆಯಲ್ಲಿ ಮನೆ ಮಾಡಿಕೊಂಡು ಉಳಕೊಳ್ಳಲು ಅನಾನುಕೂಲವಾಗುವುದು. ಈ ಬಗ್ಯೆ ಸಹ ತಕ್ಕ ನಿವಾರಣೆಯ ಸಾಧನೆಯನ್ನು ಮಾಡಲು ಉಪಾಯವಿರುವುದು. ಪೆಂಟಲೆಂಡ್ ಪೇಟೆಯ ಪಶ್ಚಿಮ ದಿಕ್ಕಿನಲ್ಲಿರುವ ಬೋಳೂರು ಒತ್ತೇರಿಯಿಂದ ಬಂದರಕ್ಕೆ ಲಾಂಚುಗಳಿಂದ ಉಗಿಯ ದೋಣಿಗಳ ಮೂಲಕ ನಿವಾಸಿಕರನ್ನು ಅತ್ತಿತ್ತ ಒಯ್ಯಬಹುದೆಂಬ ಸೂಚನೆಯು ಇತರ ಕಾಲಗಳಲ್ಲಿ ಒಳ್ಳೇದಾಗಿ ಕಂಡು ಬಂದರೂ ಮಳೆಗಾಲದಲ್ಲಿ ಇದು ಹ್ಯಾಗೆ ಸಾಧ್ಯವಾಗಬಹುದೆಂಬುವ ವಿಷಯ ಅನುಮಾನವಿದೆ. ಇದಕ್ಕಿಂತಲೂ ಪ್ರಯಾಣಿಕರನ್ನು ಅತ್ತಿತ್ತ ಒಯ್ಯುವ ಬಗ್ಯೆ ಇತ್ತಲಾಗೆ ಸ್ಥಾಪಿಸೋಣಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯವರು ತಮ್ಮ ಮೋಟರ್ ಬಸ್ಸಗಳಲ್ಲಿ ಒಂದನ್ನು ಪೆಂಟಲೆಂಡ್ ಪೇಟೆಯಿಂದ ರಥಬೀದಿ ಅತ್ತಕಡೆ ಜನರ ಚಲಾವಣೆ ಬಗ್ಯೆ ಅಲ್ಪ ದರದಲ್ಲಿಟ್ಟರೆ ಜನರಿಗೆ ಉಪಕಾರವೂ ಕಂಪೆನಿಯವರಿಗೆ ಲಾಭವೂ ದೊರೆಯಲು ಮಾರ್ಗವಾಗುವುದು.

ಜನರಿಗೆ ಪೆಂಟಲೆಂಡ್ ಪೇಟೆಯಲ್ಲಿ ಇನ್ನೂ ಕೆಲವು ಅನುಕೂಲತೆಗಳು ಸರಕಾರದವರಿಂದಲೂ ಮುನ್ಸಿಪಾಲ್ ಕೌನ್ಸಿಲಿನಿಂದಲೂ ಬೇಕಾಗಿರುವವು. ೧೫ ಸೆಂಟ್ಸುಗಳ ಹೊರತು ಒಂದಿಷ್ಟಾದರೂ ಸ್ಥಳವು ಒಬ್ಬ ನಿವಾಸಿಕನಿಗೆ ಹೆಚ್ಚಿಗೆ ದೊರಕದೆಂಬ ನಿಯಮವನ್ನು ತಾರತಮ್ಯಾನುಸಾರ ಜಾರಿಗೆ ತರಬೇಕಾಗಿರುವುದು. ಒರೇ ೧೫ ಸೆಂಟ್ಸುಗಳಿಂದ ತೃಪ್ತಿಪಡುವವರಿರಬಹುದು. ೩೦ ಸೆಂಟ್ಸುಗಳು ಬೇಕಾದವರು ಕೆಲವರಿರಬಹುದು. ಅಥವಾ ಕೆಲವು ನಿವಾಸಿಕರು ಕೂಡಿಕೊಂಡು ಕೆಲವು ಮನೆಗಳನ್ನು ಕಟ್ಟಿಸುವ ಆಲೋಚನೆಯಿಂದ ಸ್ವಲ್ಪ ಹೆಚ್ಚು ಸ್ಥಳವನ್ನು ಕೇಳಬಹುದು. ಇಂಥಾ ವಿದ್ಯಮಾನಗಳಲ್ಲಿ ಉದಾರಭಾವದಿಂದ ಜನರ ಅಪೇಕ್ಷೆಗಳ ಯಥಾರ್ಥ ಸ್ಥಿತಿಯನ್ನು ಆಲೋಚಿಸಿಕೊಂಡು ಸಾಧ್ಯವಾದ ಮಟ್ಟಿಗೆ ಅವರ ಅಪೇಕ್ಷೆಗಳನ್ನು ಪಾಲಿಸುತ್ತ ಬರುವದು ಅಗತ್ಯವಾಗಿದೆ.

ಪೆಂಟಲೆಂಡ ಪೇಟೆಯು ಸ್ಥಾಪಿಸೋಣಾಗುವ ಕೆಲವು ಪ್ರಾಂತ್ಯಗಳಲ್ಲಿ ಮೊದಲು ಪಟ್ಟಣದಿಂದ ಮಲ ಮೊದಲಾದ ಹೊಲಸನ್ನು ಕೊಂಡು ಹೋಗಿ ಬಿಟ್ಟು ಹಾಕುತ್ತಿದ್ದದ್ದರಿಂದ ಈ ಪ್ರಾಂತ್ಯಗಳು ನಿವಾಸಕ್ಕೆ ಆಕ್ಷೇಪಕರವೆಂತ ಪುರಜನರಲ್ಲಿ ಹಲವರು ತಿಳಿದಿರುವರು. ಇಂಥಾ ಪ್ರಾಂತ್ಯಗಳು ನಿವಾಸ ಸ್ಥಳಗಳ ಬಗ್ಯೆ ನಿಜವಾಗಿಯೂ ಆಕ್ಷೇಪಕರವೋ? ಆಕ್ಷೇಪಕರವಲ್ಲದಿದ್ದರೆ ಹ್ಯಾಗೆ ಎಂಬುದರ ವಿಷಯ ಒಳ್ಳೇ ಮಾಹಿತಿಗಾರರಿಂದ ಅನುಭವವನ್ನು ಮುನ್ಸಿಪಲ್ ಕೌನ್ಸಿಲಿನವರು ಪಡದು ಜನರ ತಿಳುವಳಿಕೆ ಬಗ್ಯೆ ಇಂಥಾ ಅನುಭವವನ್ನು ಪ್ರಕಟಗೊಳಿಸುವದು ಉಚಿತವಾಗಿರುವುದು.

ಜನರನ್ನು ಪೆಂಟ್‌ಲೆಂಡ್‌ಪೇಟೆಗೆ ಆಕರ್ಷಿಸುವ ಮತ್ತು ಕೆಲವು ವಿಧಾನಗಳಿರುವವು. ಪ್ರಕೃತ ಪೆಂಟಲೆಂಡ್‌ಪೇಟೆಗೆ ಇದಿರಾಗಿರುವ ಮೈದಾನಿನಲ್ಲಿರುವ ಪ್ಲೇಗು ರೋಗಿಗಳ ಗುಡಿಸಲುಗಳನ್ನು ಅಲ್ಲಿಂದ ತೆಗಿಸುವುದು ಅಗತ್ಯವೋ ಎಂಬುದನ್ನು ಸಹ ಈ ಸಂದರ್ಭದಲ್ಲಿ ಆಲೋಚಿಸಬಹುದು. ಪೆಂಟಲೆಂಡ್ ಪೇಟೆಯ ಬಗ್ಯೆ—ಒಂದು ಸಣ್ಣ ಆಸ್ಪತ್ರೆ, ಒಂದು ಟಪ್ಪಾಲು ಆಫೀಸು, ಸಣ್ಣದೊಂದು ಪೊಲೀಸು ಔಟು ಪೋಸ್ಟು ಸ್ಟೇಶನ್, ಕ್ರಮೇಣ ಸೆಕೆಂಡರಿ ಶಾಲೆಯನ್ನಾಗಿ ಮಾಡಲು ಅನುಕೂಲವಾಗುವಂತೆ ಒಂದು ಶಾಲೆ, ಇವೆಲ್ಲವನ್ನೂ ಒಂದೊಂದಾಗಿಯೇ ಪೆಂಟ್‌ಲೆಂಡ್‌ಪೇಟೆಯಲ್ಲಿ ಸ್ಥಾಪಿಸುವಂತೆ ಪ್ರತಿ ವರುಷದಲ್ಲಿಯೂ ಮುನ್ಸಿಪಲ್ ಕೌನ್ಸಿಲಿನವರು ಎಚ್ಚರವುಳ್ಳವರಾಗಿರುವುದು ಅಗತ್ಯ.

ನನ್ನ ಅಲ್ಪ ಮತಿಗೆ ಬಂದ ಕೆಲವು ಸೂಚನೆಗಳನ್ನು ಪುರಜನರ ಕ್ಷೇಮಾರ್ಥವಾಗಿ ತಮಗೆ ಬರಕೊಂಡೆನು. ಉದಾರಭಾವದಿಂದ ಇದೆಲವನ್ನು ಪ್ರಕಟಿಸಿದರೆ ಕೃತಜ್ಞನಾಗಿರುವೆನು.

[illegible]

ಕುಂದಾಪುರ ತಾಲೂಕು ಬೋರ್ಡು.

..ಕಾರದವರಿಂದ ನೇಮಕವಾಗುವಂಥಾ ಈ ಬೋರ್ಡು ಮೆಂಬರುತನವು ಖಾಲಿ ಬಿದ್ದಿರುವದರಿಂದ ಇದರ ನೇಮಕವನ್ನು ಕುರಿತು ಉಡುಪಿಯ ಬಾತ್ಮೀದಾರರೊಬ್ಬರು ಈ ರೀತಿ ಬರದಿರುತ್ತಾರೆ:—

ಕುಂದಾಪುರ ಡಿವಿಜನಿನ ಲೋಕಲ್ ಬೋರ್ಡು ಮೆಂಬರರಲ್ಲಿ ಯಾವ್ಯಾವ ಮತ್ತು ಎಂಥೆಂಥಾ ಜಾತಿ ವೃತ್ತಿಗಳ ಪ್ರತಿನಿಧಿಗಳು ಇರುವರೆಂಬುದನ್ನು ತಿಳಿದರೆ ಈ ಬೋರ್ಡಿನಲ್ಲಿ ಯಾವ ವರ್ಗದ ಪ್ರತಿನಿಧಿಯು ಇಲ್ಲವೆಂಬುದು ವ್ಯಕ್ತವಾಗುವದು. ಬೋರ್ಡು ಮೆಂಬರುತನವನ್ನು ಈ ಕಾಲದಲ್ಲಿ ವಹಿಸಿಕೊಂಡರೆ ಪ್ರಜಾ ಸೇವೆಯನ್ನು ಮಾಡಲು ಬೇಕಾದ ಶಿಕ್ಷಣವು ಉತ್ಸಾಹದಿಂದ ತಮ್ಮ ಕಾರ್ಯನಿರ್ವಾಹವನ್ನು ಮಾಡುವ ಮೆಂಬರರಿಗೆಲ್ಲಾ ಪ್ರಾಪ್ತವಾಗುತ್ತದೆ. ಆದುದರಿಂದ ಇಂಥಾ ಸೇವೆಯ ಮೂಲಕ ತಮ್ಮತಮ್ಮ ಅರ್ಹತೆಯನ್ನು ಸಿದ್ಧಪಡಿಸುವ ಸಂದರ್ಭಗಳು ಎಲ್ಲಾ ಜಾತಿಯವರಿಗೆ ಒಂದೇ ರೀತಿ ಕೊಡೋಣಾಗಬೇಕು. ಅಲ್ಲದೆ ಪ್ರಜಾ ವರ್ಗಗಳೆಲ್ಲವರ ಅಭಿಪ್ರಾಯ ಐಕ್ಯವು ಸಭೆಯಲ್ಲಿ ಸರಿಯಾಗಿ ಹೊರಡಬೇಕಾದರೆ ತಂತಮ್ಮ ಜಾತಿಗಳ ಹಾನಿ ವೃದ್ಧಿಯನ್ನು ಚೆನ್ನಾಗಿ ಅರಿತಿರುವ ಆಯಾ ಜಾತಿಗಳ ಪ್ರತಿನಿಧಿಗಳೂ ಸಭೆಯಲ್ಲಿ ಇರುವದು ಅಗತ್ಯ. ಆದ್ದರಿಂದ ಸರಕಾರದವರು ಈ ಖಾಲಿ ಬಿದ್ದ ಮೆಂಬರುತನಕ್ಕೆ ಮೆಂಬರನನ್ನಾಗಿ ಯಾರನ್ನು ನೇಮಿಸಬಹುದು ಎಂಬದರ ವಿಷಯ ನನ್ನ ಅಲ್ಪ ಮತಿಗೆ ತೋರಿದ ಕೆಲವು ಸೂಚನೆಗಳನ್ನು ಹೇಳಿಕೊಳ್ಳುವೆನು.

ಈ ಜಿಲ್ಲೆಯ ಇತರ ಎಲ್ಲಾ ತಾಲೂಕು ಬೋರ್ಡುಗಳಿಗಿಂತ ಕುಂದಾಪುರ ತಾಲೂಕು ಬೋರ್ಡಿನಲ್ಲಿ ವರ್ಗದಾರರ ಪ್ರತಿನಿಧಿಗಳ ಸಂಖ್ಯೆಯು ಬಹಳ ಹೆಚ್ಚಾಗಿರುವದೆಂದನ್ನಬೇಕು. ಆದ್ದರಿಂದ ವರ್ಗದಾರರಲ್ಲದವರಿಗೆ ಈ ಸಂದರ್ಭದಲ್ಲಿ ಖಾಲಿ ಬಿದ್ದ ಮೆಂಬರುತನವು ದೊರಕುವಂಥಾದ್ದು ಸಹಜವಾಗಿದೆ. ಕುಂದಾಪುರ ಡಿವಿಜನಿನಲ್ಲಿ ಇತ್ತಲಾಗೆ ಕೆಲವು ವರ್ಷಗಳಿಂದ ಎಲ್ಲಾ ಸಾರ್ವಜನಿಕ ವಿಷಯಗಳಲ್ಲಿಯೂ ವಿಶೇಷ ಉತ್ಸಾಹದಿಂದ ಶ್ರಮ ಪಡುವ ಮ॥ ರಾ॥ ವಕೀಲ ಎಮ್ ವಿಠಲಕಾಮತ್ ಬಿ ಎ ಬಿ ಎಲ್. ಇವರ ಪರಿಚಿತಿಯನ್ನು ನಾನು ಸ್ಥಳಿಕ ಅಧಿಕಾರಸ್ಥರ ಸ್ಮೃತಿಗೆ ತರಬೇಕೆಂತಿಲ್ಲ. ಉಡುಪಿ ತಾಲೂಕಿನಲ್ಲಿ ಪರಸ್ಪರ ಸಹಾಯಕ ಸಂಘಗಳು ನೆಲಗೊಳ್ಳುವಂತೆ ಪ್ರಯತ್ನ ಮಾಡಿದವರಲ್ಲಿ ಇವರು ಒಬ್ಬರಾಗಿರುತ್ತಾರೆ. ಇವರ ಸಾಹಸದಿಂದಲೇ ಇತ್ತಲಾಗೆ ಪಂಚಮರ ಬಗ್ಗೆ ಸಹಾ ಒಂದು ಪರಸ್ಪರ ಸಹಾಯಕ ಸಂಘವು ಸ್ಥಾಪಿಸಲ್ಪಟ್ಟಿರುತ್ತದೆ. ಮಂಗಳೂರು ಪಟ್ಟಣವನ್ನು ಪ್ರಕೃತ ನಿರಂತರವಾಗಿ ತಲ್ಲಣಗೊಳಿಸುತ್ತಿರುವ ಪ್ಲೇಗು ಜಾಡ್ಯವು ಮಲ್ಪೆ ಪ್ರಾಂತ್ಯದಲ್ಲಿ ತಲೆದೋರಿದಾಗ ಆ ಭಯಂಕರವಾದ ಬೇನೆಯನ್ನು ಮಲ್ಪೆಯಿಂದ ಇತರ ಯಾವ ನೆರೆಪ್ರಾಂತ್ಯಗಳಿಗಾದರೂ ಹೋಗಬಿಡದೆ ಅಲ್ಲಿಂದ ಸಹಾ ಪೂರ್ಣವಾಗಿ ಕಿತ್ತುಬಿಟ್ಟ ಶ್ರಮವು ಆಗ ತಹಸೀಲದಾರರಾಗಿದ್ದ ರಾ॥ ಕಾರ್ಕಳ ಶ್ರೀನಿವಾಸರಾಯರಿಂದಲೂ ಇವರಿಂದಲೂ ಕೈಕೊಳ್ಳೋಣಾಗಿ ನಮ್ಮಾ ಪ್ರಾಂತ್ಯಗಳಿಂದ ಆ ಬೇನೆಯು ಪೂರ್ಣ ಮಾಯವಾಗಿ ಹೋಯಿತು. ಉಡುಪಿಯಲ್ಲಿ ಇತ್ತಲಾಗ್ಗೆ ನೆರವೇರಿದ ಸಾರ್ವಜನಿಕ ಕಾರ್ಯಗಳಲ್ಲಿ ರಾ॥ ಕಾಮತರವರು ಕೈಹಾಕದೆ ಇರುವಂಥಾದ್ದು ಒಂದೂ ಇರುವದಿಲ್ಲ. ಉಡುಪಿ ತಾಲೂಕಿನಿಂದ ಯುದ್ಧ ಫಂಡಿಗೆ ಸುಮಾರು ರೂಪಾಯಿ ಹತ್ತು ಸಾವಿರವನ್ನು ಸಂಗ್ರಹಿಸಿ ಕಳುಹಿಸುವದರಲ್ಲಿ ರಾ ಕಾಮತರವರು ಮಾಡಿದ ಸಹಾಯವು ಇಲ್ಲಿಯ ಅಧಿಕಾರಸ್ಥರಿಗೆ ತಿಳದಿರಬೇಕು. ವಿದ್ಯೆಯಲ್ಲಿ ಹಿಂದುಳಿದು ಸಮಾಜ ಸ್ಥಿತಿಯಲ್ಲಿ ಸಹಾ ಪತಿತರಾಗಿರುವ ಪಂಚಮರೇ ಮೊದಲಾದ ನಿರಾಶ್ರಿತರ ಉದ್ಧರಣೆಯನ್ನು ಸಾಧಿಸುವ ಮುಂದಾಳುಗಳಲ್ಲಿ ಇವರು ಒಬ್ಬರಾಗಿರುತ್ತಾರೆ. ಇಂಥಾ ಉತ್ಸಾಹದಿಂದ ವರ್ತಿಸುವಂಥವರನ್ನು ಬೋರ್ಡು ಮೆಂಬರುತನಕ್ಕೆ ನೇಮಿಸಿದರೆ ಬೋರ್ಡಿನ ಕಾರ್ಯನಿರ್ವಾಹಕ್ಕೆ ಬೇಕಾದ ಸಹಾಯವು ದೊರಕುವದಲ್ಲದೆ ಪ್ರಜಾ ಹಿತಸಾಧನೆಗಳಲ್ಲಿ ಸಹಾ ಇನ್ನಷ್ಟು ಚೆನ್ನಾಗಿ ನಡೆಯಲು ಅವಕಾಶ ಇರುವದು. ಆದ್ದರಿಂದ ಅಧಿಕಾರಸ್ಥರು ಈ ಖಾಲಿಬಿದ್ದ ಮೆಂಬರುತನಕ್ಕೆ ಮ॥ ರಾ॥ ವಿಠಲ ಕಾಮತರವರನ್ನು ನೇಮಿಸಬೇಕಾಗಿ ಈ ಮೂಲಕ ಅಪೇಕ್ಷಿಸುತ್ತೇನೆ.

~~~~~~~~

ಅಯ್ಯಾ,

ಪ್ರಜಾ ಹಿತೈಷಿಗಳಾದ ಸಾರ್ವಭೌಮ ಸರಕಾರದವರು ಇತ್ತಲಾಗೆ ಕೆಲವು ವರ್ಷಗಳಿಂದ ನಮ್ಮ ಉಪ್ಪುಂದದಲ್ಲಿ ಇಡಿಸಿದ ಬ್ರೇಂಚ್ ಪೋಸ್ಟಾಫೀಸು ಯೋಗ್ಯವಾದ ಕಟ್ಟಡದಿಂದಲೂ ಜನಪ್ರೀತರಾದ ಪೋಸ್ಟುಮಾಸ್ತರರ ಆಶ್ರಯದಿಂದಲೂ ಉಪ್ಪುಂದ, ಬಿಜೂರು ಎಂಬ ಜನಭರಿತ ಗ್ರಾಮಗಳು ಪರಮ ಭಾಗ್ಯನಿಧಿಯಂತೆ ಪರಿಶೋಭಿಸುತ್ತಿದೆ. ಆದರೆ ಇದಕ್ಕೆ ಪ್ರತಿ ದಿವಸ ದಕ್ಷಿಣ ಕಡೆಗೆ ಹೋಗುವ ಟಪ್ಪಾಲು ಚೀಲ ಒಂದನ್ನು ಈ ವರೆಗೆ ಕೊಡಿಸದ್ದರಿಂದ ದಕ್ಷಿಣ ಕಡೆಯಿಂದ ಬಂದು, ಈ ಆಫೀಸು ಮೂಲಕ ಬಟ್ವಾಡೆ ಯಾಗುವ "ಸ್ವದೇಶಾಭಿಮಾನಿ" ಮುಂತಾದ ವರ್ತಮಾನ ಪತ್ರಿಕೆಗಳೂ, ಕಾಗದ ಪತ್ರಗಳೂ, ಸರಕಾರಿ ಹುಕುಂ ನಾಮೆಗಳೂ ಸಹಾ ಇದರ ಎಕ್ಕೌಂಟ್ ಆಫೀಸಾದ ಬೈಂದೂರಿಗೆ ಹೋಗಿ ಅಲ್ಲೊಂದು ದಿವಸ ವಾಸಮಾಡಿ ಮರುದಿವಸ ಬಂದು ವಿಲೆವಾರಿಯಾಗುತ್ತದಲ್ಲದೆ, ನಮ್ಮ ಹೆಚ್ಚಿನ ವೈವಾಟಿಗೆ ಅವಶ್ಯಕವಿರುವ ಕುಂದಾಪುರ, ಉಡುಪಿ, ಮಂಗಳೂರು ಕಡೆಗೆ ಕಳುಹಿಸಬೇಕಾದ ಜರೂರಾತಿಯ ಕಾಗದ ಪತ್ರಗಳಾದರೂ ಸೀದಾ ಹೋಗಲನುಕೂಲವಿಲ್ಲದೆ ಎಂಕ್ಕೌಂಟಾಫೀಸಿನಲ್ಲಿ ವ್ಯರ್ಥವಾಗಿ ಒಂದು ದಿವಸ ನಿಂತೇ ಹೋಗಬೇಕಾಗುತ್ತದೆ. ಹೀಗಾಗಿ ಸಮೀಪ ಪೋಸ್ಟಾಫೀಸೊಂದಿದ್ದರೂ ಜರೂರಾತಿಯಿಂದ ದಕ್ಷಿಣ ಕಡೆಗೆ ಕಳುಹಿಸಬೇಕಾದ ಕಾಗದ ಪತ್ರಗಳನ್ನು ೨-೩ ಮೈಲು ದೂರದ ಬೈಂದೂರಿಗೋ, ಕಂಭದಕೋಣೆಗೋ ಕೊಂಡುಹೋಗಬೇಕಾಗುತ್ತದೆ. ಹೀಗಾದುದು ಜನರಿಗೆ ನಿಷ್ಕಾರಣವಾದ ತೊಂದರೆಯೂ ಆಫೀಸು ಕಾಗದ ಪತ್ರಗಳ ಅಭಿವೃದ್ಧಿಗಿದೊಂದು ಪ್ರಧಾನವಾದ ಕೊರತೆಯೂ ಆಗಿದೆ. ನಮಗೆ ತಾಲೂಕಿನ ಮುಖ್ಯ ಆಫೀಸುಗಳೂ, ಇಷ್ಟಮಿತ್ರ ಬಂಧುಬಾಂಧವರೂ ಎಲ್ಲಾ ದಕ್ಷಿಣಕ್ಕೇ ವಿಶೇಷವಿರುವದರಿಂದ ಉತ್ತರ ದಿಕ್ಕಿಗೆ ಹೋಗುವ ಚೀಲವಂದಿಲ್ಲದಿದ್ದರೂ ಇಷ್ಟು ಕೊರತೆ ಕಾಣುತ್ತಿದ್ದಿಲ್ಲ. ದಕ್ಷಿಣ ದಿಕ್ಕಿಗೆ ಒಂದು ಚೀಲ ಅಗತ್ಯ ಬೇಕೇಬೇಕಾಗಿದೆ. ಇದಿಲ್ಲದ್ದಿರೆ ಟಪ್ಪಾಲಾಫೀಸೊಂದು ಕೊಟ್ಟೂ ಕೊಡದ ಗತಿಯೇ ಸರಿ.! ಹೀಗೆ ಈ ಆಫೀಸಿಗೆ ಉಭಯ ಕಡೆ ವಹಿವಾಟಿಗೆ ಅವಕಾಶ ಕೊಟ್ಟದ್ದರಿಂದ ಸರಕಾರಕ್ಕಾದರೂ ಲಾಭವಲ್ಲದೆ ನಷ್ಟವೇನೂ ಇರದು. ಪೋಸ್ಟುಮಾಸ್ತರಿಗೆ ಸ್ವಲ್ಪ ಕೆಲಸ ಹೆಚ್ಚಾದೀತಾದರೂ ಅದನ್ನು ನಮ್ಮ ಪೋಸ್ಟುಮಾಸ್ತರರು ತೊಂದರೆಯೆಂದು ಭಾವಿಸತಕ್ಕವರಲ್ಲಾದರಿಂದ ಈ ವಿಲೆವಾರಿ ಅಗತ್ಯವಾದಾಗಲೇ ಬೇಕೆಂದು ಇಲಾಖಾಧಿಕಾರಿಗಳಿಗೆ ನಾವು ಬರಕೊಂಡ ಅರ್ಜಿಯಿಂದ ಈವರೆಗೂ ಇಷ್ಟಾರ್ಥ ಕೈಗೂಡದ್ದರಿಂದ ಇನ್ನಾದರೂ ದಯಾಳು ಸರಕಾರದವರು ಅತ್ಯಂತ ಜರೂರು ಆಗಿ ಸದರಿ ವಿಲೆವಾರಿಯು ನೆರವೇರುವ ಉಪಕಾರ ಮಾಡಬೇಕೆಂದೂ ಮತ್ತು ಬಿಜೂರು, ಉಪ್ಪುಂದ ಈ ಎರಡೂ ಗ್ರಾಮಕ್ಕಿದೇ ಪೋಸ್ಟಾಫೀಸು ಅನುಕೂಲವಿದ್ದರೂ ಬಿಜೂರಿನ ದಕ್ಷಿಣ ಪಾರ್ಶ್ವವು ದೂರಾಗುತ್ತದೆಂಬದರಿಂದ ಹಳ್ಳಿ ಬಟ್ವಾಡೆಗೆ ಕಾಗದ ಪತ್ರಗಳು ಕಳುಹಿಸಲ್ಪಡುವದರಿಂದ ಬಿಜೂರಿನ ಬಹು ಜನರಿಗೆ ತೊಂದರೆಯಾಗುತ್ತದಾದ್ದರಿಂದ ಈ ಆಫೀಸಿಗೊಂದು ವಿಲೇಜ್ ಪೋಸ್ಟುಮ್ಯಾನ್ ಇಸಂ ಆದರೂ ನೇಮಿಸಿ ಈ ಎರಡೂ ಗ್ರಾಮದ ಟಪ್ಪಾಲು ಪೂರ್ಣ ವಹಿವಾಟು ಈ ಬ್ರೇಂಚ್ ಆಫೀಸು ಮೂಲಕವೇ ನೆರವೇರುವಂತೆ ಅನುಗ್ರಹಿಸಬೇಕೆಂದೂ ಅತ್ಯಂತ ವಿನಯದಿಂದ ಇಲಾಖಾಧಿಕಾರಿಗಳನ್ನು ಪ್ರಾರ್ಥಿಸುವೆವು.

ಹಿತೈಷಿ.

~~~~~~~~

ಅಯ್ಯಾ ಪತ್ರಿಕಾಕರ್ತರೆ,

ಕಾರ್ಕಳಕ್ಕೆ ಸೇರಿದ ಮಿಯ್ಯಾರಿಂದ ಹೊಸಮಾರಿಗೆ ಹೋಗುವ ರಸ್ತೆಯು ದುರುಸ್ತಿ ಒಗ್ಯೆ ೬೧೦೦ ರೂಪಾಯಿಗಳು ಸಂಕ್ಷನು ಆಗಿಯದೆ

ಸದರಿ ರಸ್ತೆಯು ಹಿಂದಿನ ಕಾಲ ಲಾಗಾಯಿತು ನಲ್ಲೂರಿಂದಾಗಿ ಹೊಸಮಾರಿಗೆ ಹೋಗುತ್ತಿತ್ತು. ಬಹಳ ಸಮೀಪ. ಈಗ ಅದನ್ನು ನಾಮುರುಸ್ತಿಯಿಂದ ಸರಕಾರಿ ರಸ್ತೆಯು ಮೂಡಾರು ರಸ್ತೆಗಾಗಿ ದುರುಸ್ತು ಮಾಡಿಸುತ್ತಾರೆ. ಆದರೂ ಈ ರಸ್ತೆಯು ಹೊಸತಾಗಿ ಮರ ಸಾಗಿಸುವ ಬಗ್ಯೆ ಮಾಡಿದ್ದಾಗಿಯೂ ಮೂರು ಮೈಲಿಗೆ ದೂರವಾಗಿಯೂ ಇರುತ್ತದೆ. ನಲ್ಲೂರಿನ ರಸ್ತೆಯು ಹಾಳು ಬಿದ್ದಿರುವುದರಿಂದ ಸದರಿ ಗ್ರಾಮದಲ್ಲಿ ಬೆಳಸುವ ಅಕ್ಕಿ ವಗೈರೆ ಗಾಡಿ ಮೂಲಕ ರಪ್ತಾಗುವರೆ ಅಡ್ಡಿ ಆಗುವದರಿಂದಲೂ, ಹೊಸಮಾರ್, ನಾರಾವಿ, ಕಾರ್ಕಳ ತಾಲೂಕಿಗೆ ಸೇರಿದ ಇನ್ನೂ ಕೆಲವು ಗ್ರಾಮಗಳಿಂದ ಹೆಚ್ಚಾಗಿ ಈ ರಸ್ತೆಯಿಂದಲೇ ಕಾರ್ಕಳಕ್ಕೆ ಹೋಗುತ್ತಾ ಬರುತ್ತಾ ಇದ್ದಾರೆ. ಮುಂಚೆ ಸದರಿ ರಸ್ತೆಯು ಗ್ರಾಮ ಉದ್ಯೋಗಸ್ಥರಾದ ಪಟೇಲರು ದುರುಸ್ತಿ ಮಾಡಿಸುತ್ತಿದ್ದರು. ಈ ವರುಷ ಅಂದರೆ ೧೯೧೪ನೇ ಇಸವಿಯಲ್ಲಿ ಸದರಿ ಪಟೇಲರು ಸಹಾ ದುರುಸ್ತಿ ಮಾಡಿಸಲಿಲ್ಲವಾದ್ದರಿಂದ ರಸ್ತೆಯಲ್ಲಿ ನೀರು ಹೋಗಿ ಖಣಿ ವಗೈರೆ ಹೊಂಡ ಸಹಾ ಬಿದ್ದು ನಡಿಯಲಿಕ್ಕೂ ಬಹಳ ಅಡಚಣೆಯು ಆಗಿರುತ್ತದೆ. ಈ ವಿಷಯದಲ್ಲಿ ಗವರ್ನಮೆಂಟಿನವರು ಏನಾದರೂ ವಿಲೆವಾರಿ ಮಾಡಿಸದಿದ್ದರೆ ಜನರಿಗೆ ಬಹಳ ತೊಂದರೆ ಪ್ರಾಪ್ತಿ ಆಗುವದಕ್ಕೆ ಸಂಶಯವಿಲ್ಲ.. ಈ ವಿಷಯ ನಿಜವೋ ಸುಳ್ಳೋ ಎಂಬದನ್ನು ಮೇಲ್ತನಿಕಿ ನಡಿಸಿದಲ್ಲಿ ಸಮಾಧಾನವಾದೀತು.

ಒಬ್ಬ ಕ್ಷೇತ್ರ.

ಯುದ್ಧವಾರ್ತೆ.

ತಾ. 23ನೇ ದಶಂಬರ.

ಬ್ರಿಟಿಷರು ಶತ್ರುಗಳ ಮೇಲ್ಬಾಯ್ದು ಕಳಕೊಂಡ ಕಂದಕಗಳನ್ನು ಪುನಃ ಸ್ವಾಧೀನ ಮಾಡಿಕೊಂಡಿರುವರು, ಮಿತ್ರಸೈನಿಕರು ಶತ್ರುಗಳಿಂದ ಪಡಕೊಂಡಿದ್ದ ಕಂದಕಗಳನ್ನು ಹಿಂದಕ್ಕೆ ಪಡೆಯಲು ಲಿಹೋನ್ಸಿನ ಬಳಿ ಶತ್ರುಗಳು [illegible]ಕ್ರವರ್ತಿ ಮಿತ್ರರ ಮೇಲ್ಬಾಯ್ದು ಹಿಂದಕ್ಕೆಬಿದ್ದರು. [illegible] ನೊಯನಿನ ದಕ್ಷಿಣಕಡೆಯಲ್ಲಿ ಶತ್ರುಗಳ ಕಂದಕಗಳ ಮೊದಲನೇ ಸಾಲಿಗೆ ತಲಪಿ ಸೈಂಟ್ ಹಾರ್ಟ್‌ಪೂಲಿಗೆ ಮುಂದರಿದಿರುವರು. ಸಮುದ್ರದಿಂದ ಲೈಸಿನ ವರೇಗೆ ತೋಪು ಕಾಳಗಗಳು ಮಾತ್ರ ನಡೆಯುತ್ತಲಿವೆ. ಲೈಸ್ ಮತ್ತು ಐನೆಯ ಮಧ್ಯೆ ಕರೆನ್ಸಿ ಎಂಬಲ್ಲಿಂದ ಮುಂದರಿಯಲು ಪ್ರಯತ್ನಿಸಿದ ಶತ್ರುಗಳನ್ನು ಮಿತ್ರಸೇನೆಗಳು ಹಿಂದಕ್ಕಟ್ಟಿರುವರು. ಮೊವರನ್ ಪ್ರಸ್ತಭೂಮಿಯಲ್ಲಿ ಮಿತ್ರರ ಸೇನೆಯ ತೋಪುಗಳಿಂದ ಶತ್ರುಗಳಲ್ಲಿ ವಿಶೇಷ ನಷ್ಟವಾಗಿರುವದು. ರೈಮ್ಸ್ ಮತ್ತು ಅರ್ಗೊನ್ನೆ ಪ್ರಾಂತ್ಯದಲ್ಲಿಯೂ ತೋಪು ಕಾಳಗದೊಡನೆ ಕಠಿಣ ಸನೀನುಕಾಳಗ ನಡೆದಿರುವದು. ಮಿತ್ರರು ಲಿಕಲ್ಬಾಯರ್ ರಿಡ್ಜಿನ ಗಡಿಯಲ್ಲಿರುವ ಎಲ್ಲಾ ಕಂದಕಗಳನ್ನು ಹಿಡಿದಿರುವರು ಎಂತ ಪಾರಿಸಿನಲ್ಲಿ ಪ್ರಕಟವಾದ ವಾರ್ತೆಯಿಂದ ತಿಳಿದುಬರುವದು.

ಮಿತ್ರರು ಮೊಂಬಾರ್ಡ್, ಜೈಡ್, ಸೈಂಟ್ ಜೋರ್ಜಸ್, ವೆಸ್ಟೆಂಡ್, ಬಿಕ್ಸ್‌ಚೂಟೆ, ಲಂಗೆಮಾರ್ಕ್, ಪಾಶ್ಚೆಶೀಲೆ ಮತ್ತು ಮಾರ್ಸ್ಲೆಡ್ ಎಂಬ ಪಟ್ಟಣಗಳನ್ನು ಸ್ವಾಧೀನ ಮಾಡಿಕೊಂಡಿರುವರೆಂತಲೂ ಜರ್ಮನರು ಇವುಗಳನ್ನು ಪುನಃ ಪಡೆಯಲು ಹೆಚ್ಚಿನ ಸೇನೆಯನ್ನು ಅಲ್ಲಿಗೆ ಕಳುಹಿಸಲಿಕ್ಕಿದ್ದಾರೆಂತಲೂ ಸ್ವಿಸ್ ಬಾತ್ಮಿದಾರರೊಬ್ಬರು ತಿಳಿಸುವರು.

ಫ್ರೆಂಚ ಸರಕಾರದವರು ಪಾರ್ಲಿಮೆಂಟ್ ಸಭೆಯನ್ನು ಪಾರಿಸ್ ನಗರದಲ್ಲಿ ತೆರೆದಿರುವರು.

ಫಾಕ್‌ಲೇಂಡ್ ದ್ವೀಪದ ಬಳಿ ಜರ್ಮನರಿಗೆ ಸರಬರಾಯಿಯನ್ನು ಕೊಂಡುಹೋಗುತ್ತಿದ್ದ "ಬೇಡೆನ್" ಮತ್ತು "ಸಾಂತ ಇಸಬೇಲ್" ಎಂಬ ಎರಡು ಹಡಗಗಳನ್ನು ಬ್ರಿಟಿಷರ ಯುದ್ಧ ಹಡಗಗಳು ಹಿಡಿದಿರುವವು. ಹಾರ್ಟ್‌ಪೂಲಿನಲ್ಲಿ ಜರ್ಮನರ ಯುದ್ಧ ಹಡಗಗಳಿಂದ ಉಂಟಾದ ನಷ್ಟ ೧೫೦,೦೦೦ ಪವನುಗಳಾಗಿರುವದು. ಡರ್ಡೆನೆಲ್ಸಿಗೆ ನುಗ್ಗಿ ತುರ್ಕರ ಯುದ್ಧ ಹಡಗವನ್ನು ಮುಣುಗಿಸಿದ ಸಮರ ನಾವೆಯ ಲೆಫ್ಟನೆಂಟ ನೋರ್ಮಾನ್ ಹೊಲ್ಬ್ರೂಕರಿಗೆ ವಿಕ್ಟೋರಿಯ ಕ್ರೊಸ್ ಎಂಬ ಬಹುಮಾನವು ಕೊಡಲ್ಪಟ್ಟಿರುವದು. ಪೂರ್ವರಣರಂಗದಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಮ್ಲಾವ, ಥೊರ್ನ್, ಕ್ರೆಕೌ ರಣರಂಗದಲ್ಲಿ ಜರ್ಮನರ ೨೩ ಸೇನಾಂಗವು ಇದ್ದರೂ ರುಶ್ಯರು ಇಷ್ಟು ದೊಡ್ಡ ಸೇನೆಯನ್ನು ಎದುರಿಸಲು ಶಕ್ತರಾಗಿರುವರೆಂತ ಫ್ಲಾನ್ಡ್ರಸ್ ಬಾತ್ಮಿದಾರರು ಹೇಳುವರು.

೪೦೦೦ ಅರಬಿಯರು ತುರ್ಕಿ ಮತ್ತು ಜರ್ಮನ್ ಸೇನಾಧಿಪತಿಗಳೊಂದಿಗೆ ತ್ರಿಪೋಲಿಗೆ ಹೋಗಿರುವರೆಂದೂ ಈ ವಿಷಯು ಇಟಲಿ ರಾಯಭಾರಿಯು ತುರ್ಕರ ಕೂಡೆ ಖುದಾ ಹರಹ ಕೇಳಿರುವರೆಂದೂ "ಮೊರ್ನ್ಸ್ ಗಜೆಟ್"ನಲ್ಲಿ ಪ್ರಕಟವಾಗಿದೆ.

24ನೇ ದಶಂಬರ.

ಪಶ್ಚಿಮ ರಣರಂಗದಲ್ಲಿ ಮಿತ್ರ ಸೇನೆಗಳು ಮುಂದರಿಯುತ್ತಿರುವವು. ಕೆಲವು ಕಡೆಗಳಲ್ಲಿ ಬ್ರಿಟಿಷರೂ, ಫ್ರೆಂಚರೂ ಒಟ್ಟುಕೂಡಿ ಹಲವು ಗ್ರಾಮಗಳನ್ನು ಸ್ವಾಧೀನ ಮಾಡಿಕೊಂಡರು.

ಆಫ್ರೀಕದಲ್ಲಿರುವ ಪೋರ್ಚುಗೀಸರ ಅಂಗೋಲ ಪ್ರದೇಶವನ್ನು ಜರ್ಮನರು ಒಳನುಗ್ಗಿರುವರು.

ಬ್ರಿಟಿಷ ವಿಮಾನ ಗಾಮಿಗಳು ಜರ್ಮನರ ಸ್ಯಾಸ್‌ಬುರ್ಗಿಗೆ ಬೊಂಬುಗಳನ್ನು ಹಾಕಿ ನಷ್ಟ ಪಡಿಸಿರುವರು.

ವಿಸ್ತುಲ ಮತ್ತು ಪಿಲೀಸಿಯದಲ್ಲಿ ಕಠಿಣ ಕಾಳಗ ನಡೆದು ಜರ್ಮನರು ಹಿಮ್ಮೆಟ್ಟಿರುವರು. ರುಶ್ಯನರು ೨೦೦೦ ಜರ್ಮನರನ್ನು ಶೆರೆಹಿಡಿದಿರುವರು.

ಈಜಿಪ್ಟಿನ ಹೊಸ ಸುಲ್ತಾನರಿಗೆ ಅಫಘಾನರವರು ಭೇಟಿ ಕೊಟ್ಟಿರುವರು. ದಕ್ಷಿಣ ಆಫ್ರೀಕದ ಭಾರತೀಯರು ರಣರಂಗಕ್ಕೆ ಹೋಗಲು ಸಿದ್ಧವಿದ್ದೇವೆಂಬದಾಗಿ ತಿಳಿಯ ಪಡಿಸಿರುವರು.

ತಾ. 25ನೇ ದಶಂಬರ.

ವೈಪ್ರೆಸ್ ಮತ್ತು ವೈಸರಿನಲ್ಲಿ ಮಿತ್ರರು ಮುಂದರಿಯುತ್ತಲಿರುವರು ಭಾರತೀಯ ಸೇನಿಕರು ತೋರಿಸುತ್ತಿರುವ ಶೂರಕೃತ್ಯಗಳು ಶತ್ರುಗಳಲ್ಲಿ ಭಯವನ್ನು ಹುಟ್ಟಿಸುತ್ತಲಿದೆ. ಜರ್ಮನರ ಬಲಪಾರ್ಶ್ವದ ಸೇನೆಗೆ ಬ್ರಿಟಿಷರು ಸಮುದ್ರದಿಂದ ಗುಂಡು ಹಾರಿಸುತ್ತಿರುವ ಕಾರ್ಯವು ವಿಶೇಷ ಫಲವನ್ನುಂಟುಮಾಡಿರುವದು. ಅರ್ರಾಸಿನಲ್ಲಿ ಹಿಮ ಬಿದ್ದಿರುವದರಿಂದ ಕದನ ಮಾಡುವದು ಕಷ್ಟಸಾಧ್ಯವಾಗಿದೆ. ಜರ್ಮನರು ಬೆಲ್ಜಿಯಮಿನ ಪ್ರಜಾಜನರಿಗೆ ವಿಶೇಷಉಪದ್ರ ಮಾಡುತ್ತಿದ್ದಾರೆಂಬ ವಾರ್ತೆ ಇದೆ.

ಜರ್ಮನರ ಒಂದು ವಾಯುನಾವೆಯು ತಾ. ೨೫ನೇ ಬೆಳಿಗ್ಗೆ ಡೋವರಿನ ಮೇಲೆ ಕಾಣಿಸಿಕೊಂಡು ಒಂದು ಬೊಂಬನ್ನು ಬಿಸಾಡಿತು. ಇದು ತೋಟದಲ್ಲಿ ಸಿಡಿಯಿತು. ಆದರೆ ಏನೂ ನಷ್ಟವಾಗಲಿಲ್ಲ. ಕೂಡಲೇ ಬ್ರಿಟಿಷ ವಾಯು ನಾವಿಕರು ಮೇಲೆ ಹಾರಿ ಜರ್ಮನರ ವಾಯು ನಾವೆಯನ್ನು ಹಿಂದಟ್ಟಿದರು. ಆದರೆ ಇಬ್ಬನಿ ಕವಿದಿದ್ದರಿಂದ ಅದು ತಪ್ಪಿಸಿಕೊಂಡಿತು.

ಆಸ್ಟ್ರಿಯದ ಒಂದು ಸಮರನಾವೆಯು ಒರೆಂಟೋದಲ್ಲಿ ಫ್ರೆಂಚರ ಯುದ್ಧ ನಾವೆಯನ್ನು ಕಳೆತು ಫ್ರೆಂಚರ ನಾವೆಗೆ ಗುಂಡು ಹಾರಿಸಿರುವದು ಫ್ರೆಂಚರ ನಾವೆಗೆ ಹೆಚ್ಚಿನ ಪೆಟ್ಟಾಗಲಿಲ್ಲ.

ಜರ್ಮನ ಪೂರ್ವ ಆಫ್ರೀಕದ ಮಾಟಿಯ ದ್ವೀಪದ ಹತ್ತಿರ ಜರ್ಮನರ ಯುದ್ಧ ನಾವೆಗಳು ಕಾಣಿಸಿಕೊಂಡಿರುವವು ಎಂತ ಪ್ರಕಟವಾಗಿದೆ. ಪೋರ್ಚುಗಲಿನವರು ಬ್ರಿಟಿಷರ ಕಡೆಗೆ ಸೇರಲು ಸನ್ನಾಹ ಮಾಡುತ್ತಿದ್ದಾರೆ. ರಣರಂಗದಲ್ಲಿರುವ ಪ್ರತಿ ಸೈನಿಕನಿಗೆ ಜೋರ್ಜ ಸಾರ್ವಭೌಮರವರೂ ಚಕ್ರವರ್ತಿನಿಯರೂ ಕ್ರಿಸ್ಮಸ್ ಅಭಿವಂದನೆಗಳನ್ನು ಕಳುಹಿಸಿಕೊಟ್ಟಿರುವರು.

ನಿಡ್ಡ ಮತ್ತು ಡನಾಜೆಡ್ಜ್ ನದಿಯ ಬಳಿ ಮತ್ತು ಕಾರ್‌ಪೆಥೇನಿಯದಲ್ಲಿ ರುಶ್ಯರು ಜಯಪ್ರದರಾಗುತ್ತಿರುವರು. ಜರ್ಮನರು ತಮ್ಮ ಎಲ್ಲಾ ಸೇನೆಯನ್ನು ಬೂರ ನದಿಯ ಬಳಿ ತಂದು ಅದನ್ನು ದಾಟಲು ಪ್ರಯತ್ನಿಸಿದರೂ ಬಹಳ ನಷ್ಟಹೊಂದಿ ಹಿಂದೆ ಬಿದ್ದರು.

ತಾ. 27ನೇ ದಶಂಬರ.

ಲೈಸ್, ಲಿಹೊನ್ಸ್ ಪ್ರಾಂತ್ಯದಲ್ಲಿ ಕಾಳಗವು ನಡೆಯುತ್ತಿದೆ. ಬೆವಿಯೆಂಬಲ್ಲಿ ಜರ್ಮನರು ಮಿತ್ರಸೇನೆಯ ಮೇಲೆ ಬಲವಾಗಿ ನುಗ್ಗಿ ಬಂದರೂ ಹಿಮ್ಮೆಟ್ಟಿದರು. ಅರ್ಗೊನ್ನೆ, ಮ್ಯೂಸ್ ಮೊಸೆಲ್ಲೆ ಪ್ರಾಂತ್ಯದಲ್ಲಿ ಬದಲಾವಣೆಯಾಗಲಿಲ್ಲ. ಅಲ್ಸೆಸಿನ ಉತ್ತರ ಪ್ರದೇಶದಲ್ಲಿ ಫ್ರೆಂಚರು ಕೆರ್ನೆಯು ಎಂಬಲ್ಲಿಗೆ ತಲಪಿರುವರು.

ರುಶ್ಯದ ಝಾರರವರು ರಣರಂಗಕ್ಕೆ ಹೋಗಿರುವರು. ಬೂರ ಪ್ರಾಂತ್ಯದಲ್ಲಿ ನಡೆಯುವ ಕದನಗಳಲ್ಲಿ ರುಶ್ಯನರಿಗೆ ಜಯವಾಗುತ್ತಲಿದೆ. ಜರ್ಮನರೂ ಬೂರ ಪ್ರಾಂತ್ಯದಲ್ಲಿ ತಾವು ಮೇಲ್ಬಾಯುವುದನ್ನು ನಿಲ್ಲಿಸಿರುವೆವೆಂತ ಹೇಳಿರುವರು.

ಆಸ್ಟ್ರಿಯನರು ಸರ್ವಿಯರೊಡನೆ ಪ್ರತ್ಯೇಕವಾಗಿ ರಾಜಿ ಪಂಚಾಯತಿಗೆ ಮಾಡಲು ಪ್ರಸ್ತಾಪಿಸುತ್ತಲಿರುವರೆಂತ ಅಥೆನ್ಸಿನಿಂದ ವಾರ್ತೆ ಬಂದಿರುವದು. ರುಶ್ಯದಲ್ಲಿ ಶತ್ರುಗಳ ೩೫೦,೦೦೦ ಮಂದಿ ಶೆರೆಯವರಿರುವರು.

ತಾ. 28ನೇ ದಶಂಬರ.

ಪಶ್ಚಿಮ ರಣರಂಗದಲ್ಲಿ ವಿಶೇಷ ಬದಲಾವಣೆಯಾಗಲಿಲ್ಲ. ಕಕ್ಸಾವೆನ್ ಎಂಬಲ್ಲಿಗೆ ಬ್ರಿಟಿಷ ವಾಯು ನಾವೆಗಳು ಹೋಗಿ ಜರ್ಮನರ ಯುದ್ಧನಾವೆಗಳಿಗೂ ಜೆಪಲಿನ್ ವಾಯುನಾವೆಗಳ ಕಟ್ಟೋಣಗಳಿಗೂ ಬೊಂಬುಗಳನ್ನು ಹಾಕಿ ಹಿಂದೆ ಬಂದು ಬಿಟ್ಟಿದ್ದೇ ಈ ದಿನ ವಾರ್ತೆಯಲ್ಲಿ ಮುಖ್ಯ ಪ್ರಸ್ತಾಪವಾಗಿರುವದು.

ದಕ್ಷಿಣ ಪೋಲೇಂಡಿನಲ್ಲಿ ಮತ್ತು ಗೆಲೀಸಿಯದಲ್ಲಿ ಆಸ್ಟ್ರಿಯನರು ಸೋಲಿಸಲ್ಪಟ್ಟಿರುವರು. ವಿಸ್ತುಲ ಮತ್ತು ಪಿಲಿಟ್ಜದಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಸೊಚಾಗ್ಜಿವ್ರೊ ಎಂಬಲ್ಲಿಗೆ ಜರ್ಮನರ ೫ ವಾಯುನಾವೆಗಳು ೪೦ ಸಿಡಿಮದ್ದುಗಳನ್ನು ಎಸೆದಿರುವದು. ಇದರಿಂದ ೮ ಮಂದಿ ಹತರಾದರು. ೨೬ ಮಂದಿ ಗಾಯ ಒಡೆದರು.

ತಾ. 29ನೇ ದಶಂಬರ.

ಫ್ಲೇಂಡರಿನಲ್ಲಿ ಬೆಲ್ಜಿಯನರಿಗೂ ಜರ್ಮನರಿಗೂ ನಡೆದ ಕದನದಲ್ಲಿ ಬೆಲ್ಜಿಯನರು ವಿಶೇಷ ಪರಾಕ್ರಮವನ್ನು ತೋರಿಸಿ ೨೦೦೦ ಜರ್ಮನರನ್ನು ಶೆರೆಹಿಡಿದಿರುವರು. ಇಲ್ಲಿದ್ದ ೩೦೦೦ ಬೆಲ್ಜಿಯನರಲ್ಲಿ ಕೆಲವು ಮಂದಿ ಮಾತ್ರ ಮೃತರಾಗಿರುವರು. ೨೫ ಮಂದಿ ಘಾಯ ಒಡೆದಿರುವರು. ಲೊಂಬರ್ಟ್ಜೈಡ್ ಎಂಬಲ್ಲಿ ಶತ್ರುಗಳು ಬಲಕಾಯಿಸಿಕೊಂಡ ಸ್ಥಳಗಳು ಮಿತ್ರರ ಕೈಸೇರಿರುವುದು. ಎಪ್ರೆಯ ದಕ್ಷಿಣದಲ್ಲಿ ಮಿತ್ರರು ತಮ್ಮ ಕಂದಕಗಳ ಒಂದು ಭಾಗವನ್ನು ಕಳಕೊಂಡಿರುವರು. ಐನೆ ಮತ್ತು ಜಂಪೇಗ್ನೆಯಲ್ಲಿ ತೋಪು ಕಾಳಗವು ನಡೆಯುತ್ತಿದೆ. ಮ್ಯೂಸಿನಲ್ಲಿ ಮಿತ್ರರು ಮುಂದರಿಯುತ್ತಲಿರುವರು.

ಕ್ರಿಸ್ಮಸ್‌ಡಿನಲ್ಲಿರುವ ಲಂಗೇಗೂ ದ್ವೀಪದ ಮೇಲೆ ಬ್ರಿಟಿಷ ವಾಯುನಾವಿಕರು ಸಿಡಿಮದ್ದುಗಳನ್ನು ಹಾಕಿರುವರೆಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಬ್ರಿಟಿಷ ವಾಯುನಾವೆಗಳು ಜರ್ಮನರ ಯುದ್ಧ ಹಡಗಗಳ ಮೇಲೆ ಸಿಡಿಮದ್ದುಗಳನ್ನು ಬಿಸಾಡಿ ನಷ್ಟಪಡಿಸಿರುವದೆಂತ ಜರ್ಮನರು ಪ್ರಕಟಿಸಿರುವರು. ಈ ವಾಯು ನಾವೆಗಳನ್ನು ಹಿಂದಟ್ಟಲು ಹಿಮ ಬಿದ್ದಿರುವದರಿಂದ ಅಸಾಧ್ಯವಾಯಿತೆಂತ ಜರ್ಮನರು ಹೇಳುವರು

ಬೂರದಲ್ಲಿ ನಡೆದ ಕದನದಲ್ಲಿ ರುಶ್ಯನರು ಜರ್ಮನರಲ್ಲಿ ಹೆಚ್ಚಿನ ನಷ್ಟ ಪಡಿಸಿದರೆಂತ ಎಲ್ಲಾ ಬಾತ್ಮೀದಾರರೂ ಹೇಳುವರು. ಶನಿವಾರ ಆದಿತ್ಯವಾರ ಬೊಲಿಮೊಪ್ ನದಿಯನ್ನು ದಾಟಲು ಯತ್ನಿಸಿದ ೭೦೦೦ ಜರ್ಮನರನ್ನು ರುಶ್ಯನರು ನಾಶ ಪಡಿಸಿದರು. ಪೋಲೆಂಡಿನಲ್ಲಿ ನಡೆಯುವ ಕದನವು ಬಹು ಕಠಿಣ ತರದ್ದಾಗಿರುವದು.

ಆಸ್ಟ್ರಿಯರು ಸರ್ವಿಯನರೊಡನೆ ಸಂಧಾನ ಮಾಡಲಿಕ್ಕಿದ್ದಾರೆಂಬ ವಾರ್ತೆಯು ಅಲ್ಲಗಳೆಯಲ್ಪಟ್ಟಿರುವದು.

ತಾ. ೩೦ನೇ ದಶಂಬರ.

ಬೆಲ್ಜಿಯಮಿನಲ್ಲಿ ಮಿತ್ರರ ಸೇನೆಯು ಸೈಂಟ್ ಜೋರ್ಜನ್ನು ಸ್ವಾಧೀನಮಾಡಿಕೊಂಡಿರುವದು. ಲೈಸಿನಿಂದ ಸೊಮ್ಮೆಯ ವರೆಗೆ ಶತ್ರುಗಳು ಮಿತ್ರರ ನೆಲೆಗಳಿಗೆ ಬಲವಾಗಿ ತೋಪು ಹಾರಿಸುತ್ತಿದ್ದಾರೆ. ಅಲ್ಸೆಸ್, ಅರ್ಗೊನ್ನೆಯಲ್ಲಿಯೂ ಮಿತ್ರರಿಗೆ ಜಯವಾಗುತ್ತಲಿದೆ.

ಪೂರ್ವ ರಣರಂಗದಲ್ಲಿ ಜರ್ಮನರು ಪ್ರತಿ ಒಂದ ಸ್ಥಳದಲ್ಲಿ ಹಿಮ್ಮೆಟ್ಟುತ್ತಿರುವರು. [illegible] ಎಂಬಲ್ಲಿ ಶತ್ರುಗಳು ದಿಕ್ಕಾಪಾಲಾಗಿ ಓಡಿಹೋಗುತ್ತಿರುವರು.

ವಿದೇಶ ವೃತ್ತಾಂತ.

ಫ್ರಾನ್ಸಿನ ಲೈಯೋನ್ಸ ಎಂಬಲ್ಲಿ ಹುಲ್ಲಿನಿಂದ ಮರವನ್ನು ಮಾಡುವ ವಿಧಾನವನ್ನು ಕಂಡುಕೊಂಡಿರುವರು. ಹುಲ್ಲನ್ನು ಯಂತ್ರದ ಮೂಲಕ ಗಟ್ಟಿಯಾಗ ಮಾಡುವರು. ಹುಲ್ಲನ್ನು ಸಣ್ಣ ಸಣ್ಣ ತುಂಡುಗಳಾಗಿ ಕತ್ತರಿಸಿ ಬೇಯಿಸಿ ಅಂಟಿನಂತೆ ಮಾಡುವರು. ಅನಂತರ ಅದಕ್ಕೆ ಒಂದು ವಿಧವಾದ ಸತ್ವವನ್ನು ಹಾಕಿ ಯಾವ ಆಕಾರ ಪರಿಮಾಣದ ಹಲಿಗೆ ಯಾ ಭಾಗಗಳು ಬೇಕಾಗುವವೋ ಅಂಥಾ ಯಂತ್ರಗಳಿಗೆ ಎರಕ ಹೊಯ್ದಂತೆ ಈ ದ್ರವ ಪದಾರ್ಥವನ್ನು ಹೊಯ್ಯುವರು. ಈ ವಿದವಾಗಿ ಮಾಡಿದ ಕೃತಕ ಮರವು ಇತರ ಮರದಂತೆಯೇ ಘಟ್ಟಿಯಾಗಿ ಬಾಳುವದೆಂದೂ ಗರಗಸ ಹಾಕಿ ಕೊಯ್ಯಲಿಕ್ಕಾಗುತ್ತದೆಂದೂ ತಿಳಿದುಬರುತ್ತದೆ. ಬೆಂಕಿಯಲ್ಲಿ ಹಾಕಿದರೆ ಒಂದು ವಿದವಾದ ಬಿಳಿ ಪ್ರಕಾಶ ಉಂಟಾಗುವದು. ಆದರೆ ಹೊಗೆ ಹೆಚ್ಚಿಗೆ ಉಂಟಾಗುವದಿಲ್ಲ. ಬೆಂಕಿಪೆಟ್ಟಿಗೆಯ ಕಡ್ಡಿಗಳನ್ನು ಮಾಡುವರೆ ಇದು ಉತ್ತಮವಾದ ಮರವಾಗಿದೆ.

~~~~~

ಬ್ರಿಟಿಷರ ಸೇನಾ ಬಲವು ಒಟ್ಟಿಗೆ ೧೨೨ ಲಕ್ಷ. ಇವುಗಳಲ್ಲಿ ಚೆನಲ್ ದ್ವೀಪಗಳು, ಮಾಲ್ಟಾ, ಜಾವಾ, ಜಿಬ್ರಾಲ್ಟರ್, ಬರ್ಮುಡ್ ಮತ್ತು ಬ್ರಿಟಿಷ ಸ್ಥಾನಗಳಲ್ಲಿ ಒಟ್ಟು ೨೪ ಲಕ್ಷದಷ್ಟು ಇರುತ್ತಿರುವದು. ಹಿಂದೂಸ್ಥಾನದಲ್ಲಿ ೩೪ ಲಕ್ಷ ಹಿಂದೂ ಸೈನ್ಯವೂ, ೭೭ ಸಾವಿರ ಬ್ರಿಟಿಷ ಸೈನಿಕರೂ ಇರುವರು. ಸ್ವತಂತ್ರ ರಾಜ್ಯಗಳಾದ ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲೇಂಡ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಒಟ್ಟು ೧೪ ಲಕ್ಷದಷ್ಟು ಸೈನ್ಯವಿರುತ್ತದೆ. ಇಂಗ್ಲಂಡಿನ ಸೈನ್ಯಕ್ಕೆ ಪೆನ್ಶನು ಅಲ್ಲದೆ ೩೭ ಕೋಟಿ ೩೭॥ ಲಕ್ಷ ರೂಪಾಯಿಗಳ ಖರ್ಚಾಗುತ್ತದೆ. ಇದರಲ್ಲಿ ಸಬಳಕ್ಕೆ ಮಾತ್ರವೇ ೧೨ ಕೋಟಿ ರೂಪಾಯಿ ಖರ್ಚಾಗುವದು.

~~~~~

ಇಂಗ್ಲಂಡಿನ ಕೇಂಬ್ರಿಜ ವಿದ್ಯಾಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ೩। ಸಾವಿರ ವಿದ್ಯಾರ್ಥಿಗಳಲ್ಲಿ ೨ ಸಾವಿರ ವಿದ್ಯಾರ್ಥಿಗಳು ದಂಡಿಗೆ ಹೋಗಿರುವರೆಂಬ ವಾರ್ತೆ ಇದೆ.

~~~~~

'ರೆಂಬ್ರಾಂಟ್' ಹಡಗದಲ್ಲಿ ಫ್ರಾನ್ಸಿಗೆ ಬರುತ್ತಿದ್ದ ೮೦೦ ಕುದುರೆಗಳು ಹಡಗಕ್ಕೆ ಬೆಂಕಿ ತಾಗಿ ಸುಟ್ಟು ಹೋದವು. ಜರ್ಮನ ಗೂಢಾಚಾರರು ಈ ಹಡಗಕ್ಕೆ ಬೆಂಕಿಕೊಟ್ಟಿರಬೇಕೆಂದು ಹಡಗದ ಕೆಪ್ಟನನು ಹೇಳುವನು. ಈ ಹಡಗವು ಬಾಲ್ಟಿಮೋರಿನ ಹೊರಡುವ ಮೊದಲೇ ಈ ಭಯಕ್ಕೆ ಕಾರಣವಿತ್ತು. ಹಡಗವು ಬಂದರಿಂದ ಹೊರಟ ೨೦೦ ಮೈಲ ಪ್ರಯಾಣ ಮಾಡಿದಾಗಲು ಅದಕ್ಕೆ ಬೆಂಕಿ ತಾಗಿತು. ಅನಂತರ ಹಡಗವು ದುರಸ್ತಿ ಮಾಡಿಸಿಕೊಳ್ಳುವ ಬಗ್ಗೆ ಹಿಂದಿರಗಬೇಕಾಯಿತು.

~~~~~

ಲಂಡನ್ ಯುನಿವರ್ಸಿಟಿ ಎಮ್ ಡಿ ಪರೀಕ್ಷೆಯಲ್ಲಿ ಮುಂಬಾಯಿಯ ಜೀವರಾಜಮೆಹ್ತಾ ಎಂಬವರ ಪ್ರಥಮ ಸ್ಥಾನವನ್ನು ಪಡೆದು ಚಿನ್ನದ ಪದಕ ಬಹುಮಾನಕ್ಕೆ ಅರ್ಹರಾಗಿರುವರು.

~~~~~

ಇಂಗ್ಲಂಡ್ ಕೋಶಾಧ್ಯಕ್ಷರಾದ ಲಾಯಿಡ್ ಜೋರ್ಜರವರು ಒಬ್ಬ ದೊಡ್ಡ ಮನುಷ್ಯರೊಡನೆ ಸಂಭಾಷಿಸುವಾಗ ಇಂಗ್ಲಿಷರ ಯುದ್ಧದ ದೃಢ ಸಂಕಲ್ಪವನ್ನು ಈ ರೀತಿ ತಿಳಿಸಿರುವರು. ಈ ಯುದ್ಧಕ್ಕಾಗಿ ಇಂಗ್ಲಿಷರಿಗೆ ತಿಂಗಳು ೧ಕ್ಕೆ ೮ ಕೋಟಿ ೫೦ ಲಕ್ಷ ಪವನು (೧೭೭೫ ಕೋಟಿ ರೂಪಾಯಿ) ವೆಚ್ಚವಾಗುತ್ತಿದೆ. ಈಗ ಯುದ್ಧಕ್ಕೆ ಸನ್ನಧರಾಗುತ್ತಿರುವ ಭೂಜಲ ಸೈನಿಕರೆಲ್ಲಾ ೨೦ ಲಕ್ಷ ಮಂದಿಗಳಾಗಿದ್ದಾರೆ. ಇನ್ನು ಸ್ವಲ್ಪ ಕಾಲದೊಳಗೆ ೨೫ ಲಕ್ಷ ಮಂದಿಗಳಾಗುತ್ತಾರೆ. ಇವರಲ್ಲಿ ಎಲ್ಲರೂ ಒಳ್ಳೇ ದೃಢಾಂಗರಾಗಿದ್ದಾರೆ. ಬರುವ ವಸಂತ ಋತುವಿಗೆ ಮುಂಚೆ ಫ್ರೆಂಚರಿಗೆ ಸಹಾಯವಾಗಿ ಒಳ್ಳೇ ಚೆನ್ನಾಗಿ ಶಿಕ್ಷಿತರಾದ ೫ ಲಕ್ಷ ಮಂದಿ ಸೈನಿಕರು ಹೋಗುವರು. ಇದೇ ರೀತಿಯಲ್ಲಿ ನಮಗೆ ಜಯಶೀಲರಾಗುವವರೆಗೂ ಆರಗುತ್ತಿರುವದು. ಲೇಶಮಾತ್ರವೂ ಧೈರ್ಯಗುಂದದೆ ಯುದ್ಧವನ್ನು ಕೊನೆಯ ವರೆಗೂ ಸಾಗಿಸಿಯೇ ತೀರಬೇಕೆಂದು ಇಂಗ್ಲಿಷರು ನಿಶ್ಚಯಿಸಿರುವರು.

~~~~~

ಒಬ್ಬ ಬೆಲ್ಜಿಯನನು ಒಂದು ದಿನ ತನ್ನ ಸ್ನೇಹಿತನೊಡನೆ ಮಾತಾಡುತ್ತಿರುವಾಗ ಮಾತುಗಳ ನಡುವೆ "ಹುಚ್ಚ ಚಕ್ರವರ್ತಿ" ಎಂತ ಹೇಳಿದನು. ಈ ಮಾತನ್ನು ಕೇಳಿದ ಜರ್ಮನ ಗುಪ್ತ ಪೋಲಿಸಿನವನು ಈ ಬೆಲ್ಜಿಯನನ್ನು ಹಿಡಿದು ಕೂಡಲೇ ಜರ್ಮನ್ ಆಫೀಸರನ ಬಳಿಗೆ ಒಯ್ದನು. ಜರ್ಮನ್ ಆಫೀಸರನು—"ನಮ್ಮ ಕೈಸರರನ್ನು ಹುಚ್ಚನೆಂದು ಕರೆಯಲು ನಿನಗೆ ಹ್ಯಾಗೆ ಧೈರ್ಯ ಬಂತು" ಎಂದನು. ಬೆಲ್ಜಿಯನನು—"ನಾನು ಕೈಸರನ ವಿಷಯ ಮಾತಾಡಲಿಲ್ಲ, ಝಾರರ ವಿಷಯ ಹೀಗೆ ಹೇಳಿದೆನು" ಎಂತ ಉತ್ತರ ಕೊಟ್ಟನು. ಜರ್ಮನ್ ಆಫೀಸರನು ರೇಗಿ ಬಿದ್ದು "ಇದು ಅಸಾಧ್ಯ, ಹುಚ್ಚ ಚಕ್ರವರ್ತಿ ಎಂದು ಹೇಳಿದರೆ ಅದು ಯಾವಾಗಲೂ ಜರ್ಮನ ಕೈಸರರಿಗೆ ಹೇಳಿದಂತಾಗುವದು" ಎಂದು ಹೇಳಿದನು.

~~~~~

ಜಪಾನಿನಲ್ಲಿರುವ ಮುಕ್ತಿ ಫೌಜಿಗೆ ಜಪಾನ್ ಚಕ್ರವರ್ತಿ ಮತ್ತು ಚಕ್ರವರ್ತಿನಿಯವರು ೩ ಸಾವಿರ ಪವನುಗಳ ವಂತಿಗೆ ಕೊಟ್ಟಿರುವರು. ಜಪಾನ್ ಚಕ್ರವರ್ತಿಯವರು ಮುಕ್ತಿ ಫೌಜಿನ ಕೆಲಸವನ್ನು ಮಾನ್ಯ ಮಾಡಿದ್ದು ಇದೇ ಪ್ರಥಮ ಸಾರಿ.

~~~~~

ಕ್ರಿಸ್ಮಸ್ ಹಬ್ಬದ ದಿನ ಇಂಗ್ಲಂಡಿನಲ್ಲಿ ಯಾವ ವರ್ತಮಾನ ಪತ್ರಿಕೆಯೂ ಪ್ರಕಟವಾಗಲಿಲ್ಲ.

~~~~~

ಉತ್ತರ ಹಿಂದೂಸ್ಥಾನ.

ಮೈಸೂರಿನ ಪ್ರಭುಗಳವರು ಪರಿವಾರ ಸಹಿತ ಡೇರ್‍ಹಡೂನಿಗೆ ಹೋಗಿರುವರು.

~~~~~

ಕಲ್ಕತ್ತೆಯ ಎಕ್ಬಾಲಪುರದ ಪೋರ್ಟು ಕಮಿಷನರ ಕೆಲಸದವರ ಲೈನಿನಲ್ಲಿ ಒಬ್ಬ ಕೂಲಿಯವನು ಕೆಲಸ ಮಾಡುತ್ತಿರುವಾಗ ನೆಲದ ಅಡಿಯಲ್ಲಿ ಅವನಿಗೆ ೮೦೦ ತೋಟೆಗಳು ಸಿಕ್ಕಿದವು. ಇದೇ ದಶಂಬರ ತಾ ೧೭ರಲ್ಲಿ ವಿಲಿಯಮ್ ಕೋಟೆಯಿಂದ ಮುಂಬಾಯಿಗೆ ಕಳುಹಿಸಿದ ೧೨೦ ತೋಟೆಗಳು ಇದ್ದ ೩೦ ಪೆಟ್ಟಿಗೆಗಳು ಕಳವಾಗಿ ಹೋಗಿತ್ತು. ಒಂದು ಪೆಟ್ಟಿಗೆಯು ಪೋರ್ಟು ಕಮಿಷನರ ಅಂಗಳದಿಂದ ಕಾಣೆಯಾಯಿತೆಂತ ಅನಂತರ ತಿಳಿದು ಬಂತು. ಈ ಕೂಲಿಯವನಿಗೆ ಅಲ್ಲಿಯೇ ತೋಟೆಗಳು ಸಿಕ್ಕಿದರಿಂದ ಅನುಮಾನದ ಮೇಲೆ ಪೋರ್ಟು ಕಮಿಷನರ ಆಫೀಸಿನ ಒಬ್ಬೊಬ್ಬ ಕೆಲಸದವರನ್ನು ಪೋಲಿಸಿನವರು ಕೈದುಮಾಡಿರುವರು.

~~~~~

ಕಲ್ಕತ್ತೆಯಲ್ಲಿ ಕಠಿಣ ವಿಧದ ಸಿಡುಬು ರೋಗವು ತಲೆ ಹಾಕಿರುವದು.

~~~~~

ಪಂಜಾಬಿನ ಜೈಸ ಎಂಬ ಗ್ರಾಮದಲ್ಲಿ ತಾ. ೧೮ರಲ್ಲು ಅಮೀರಚಂದ ಎಂಬವನ ಮನೆಗೆ ದಕಾಯಿತರು ನುಗ್ಗಿದರು. ಸ್ಥಳಿಕ ಮಹಮದೀಯರು ಅಮೀರಚಂದನ ಸಹಾಯಕ್ಕೆ ಹೋಗಿ ದಕಾಯಿತರೊಡನೆ ಕಾದಾಡಿ ಒಬ್ಬನನ್ನು ಕೊಂದರು. ಉಳಿದ ದಕಾಯಿತರು ಮೃತನ ಶವವನ್ನೂ ಅಮೀರಚಂದನಲ್ಲಿ ಸಿಕ್ಕಿದ ಕೊಳ್ಳೆಯನ್ನೂ ಹಿಡಕೊಂಡು ದಾರಿಯಲ್ಲಿ ಸಿಕ್ಕಿದ ಒಬ್ಬ ಚೌಕೀದಾರನನ್ನು ಕೊಂದು ತಲೆ ತಪ್ಪಿಸಿಕೊಂಡರು.

~~~~~

ಬಕರ್‌ಗಂಜ ಎಂಬಲ್ಲಿಯೂ ಆಯುಧ ಪಾಣಿಗಳಾದ ಸುಮಾರು ೧೨ ದಕಾಯಿತರು ಸಡಾತುಲ್ಲಿ ಎಂಬ ಐಶ್ವರ್ಯವಂತ ಮಹಮ್ಮದೀಯನ ಮನೆಗೆ ನುಗ್ಗಿ ಸುಮಾರು ೩೦೦೦ ರೂಪಾಯಿ ಬಾಳುವ ಒಡವೆಗಳ ಸಹಿತ ಪರಾರಿಯಾದರು.

~~~~~

ರಣರಂಗಕ್ಕೆ ಹೋದ ಭಾರತೀಯ ಸೇನೆಯ ಸೈನಿಕರ ಕುಟುಂಬದವರಿಗೆ ಮತ್ತು ಘಾಯ ಒಡೆದವರಿಗೆ ಪೆನ್ಶನು ಕೊಡುವ ಬಗ್ಗೆ ಹೊಸ ಕ್ರಮವು ಜಾರಿಗೆ ಬಂದಿರುವದೆಂದೂ ದರವು ಹೆಚ್ಚಿಸೋಣಾಗಿದೆಂದೂ ವಾರ್ತೆ ಬಂದಿರುವದು.

~~~~~

ಪಟಿಯಾಲ ಮಹರಾಜರು ಒಂದು ಆಸ್ಪತ್ರಿ ಹಡಗವನ್ನು ಒದಗಿಸಿ ಕೊಡುವ ಏರ್ಪಾಡು ಮಾಡುತ್ತಲಿದ್ದಾರೆ.

~~~~~

ಹೊಸ ಪಿಪಿಲ್ಸ್ ಬೇಂಕು ಕಳೆದ ವಾರ ರಿಜಿಸ್ಟ್ರಿ ಆಯಿತೆಂದೂ ಡೈರೆಕ್ಟರ್ ಮೊದಲಾದವರನ್ನು ನೇಮಿಸುವ ಕೆಲಸ ನಡೆಯುತ್ತಿದೆಂದೂ ಲಾಹೋರಿನ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿರುವದು.

~~~~~

"ಕೋಲ ಸೀಡರ್" ಎಂಬ ಹಡಗವು ದಶಂಬರ ತಾ. ೨೦ರಲ್ಲು ೧೧೫೦ ನಾಟ ಯಾತ್ರಿಕರನ್ನು ಜದ್ದಾದಿಂದ ಮುಂಬಾಯಿಗೆ ತಂದು ಬಿಟ್ಟಿರುವದು. ೩ ಯಾತ್ರಿಕರು ದಾರಿಯಲ್ಲಿ ಸಿಡುಬು ರೋಗದಿಂದ ಮೃತರಾಗಿರುವರು. ಸಿಡುಬು ತಗಲಿದ ೫ ಯಾತ್ರಿಕರು ಮುಂಬಾಯಿ ಆಸ್ಪತ್ರಿಯಲ್ಲಿ ಚಿಕಿತ್ಸೋಪಚಾರ ಹೊಂದುತ್ತಿದ್ದಾರೆ. ಈ ಪ್ರಯಾಣಿಕರಲ್ಲಿ ಹೆಚ್ಚಿನವರು ಬಂಗಾಳಿ, ಸಿಂಧು, ಬಿಹಾರ್, ಸಂಯುಕ್ತ ಸಂಸ್ಥಾನದವರು.

~~~~~

ಮುಂಬಾಯಿಯ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕರಾಚಿಯಲ್ಲಿ ಕಳುಹಿಸಲ್ಪಟ್ಟ ೪೫೪ ವಿದ್ಯಾರ್ಥಿಗಳಲ್ಲಿ ೬೬ ಮಂದಿ ಮಾತ್ರ ಪಾಸಾಗಿರುವರು. ಹೆಚ್ಚಿನವರು ಇಂಗ್ಲಿಷಿನಲ್ಲಿ ಸೋತು ಹೋದರೆಂತ ತಿಳಿದುಬರುತ್ತದೆ.

~~~~~

ಪೂನೆಯ ಒಂದು ಗ್ರಾಮದಲ್ಲಿ ಇಬ್ಬರು ಕೂಡಿ ಫೊರೆಸ್ಟ ಗಾರ್ಡನನ್ನು ಕೊಂದರೆಂಬದಾಗಿ ಆಪಾದಿಸಲ್ಪಟ್ಟಿದ್ದರು. ಈ ಗಾರ್ಡನು ಒಂದು ದಿನ ಒಬ್ಬ ಹೆಂಗಸು ಕಾಡಿನಲ್ಲಿ ಕಟ್ಟಿಗೆ ಕದ್ದುಕೊಳ್ಳುವದನ್ನು ಕಂಡನು. ಆ ಹೆಂಗಸು ಮರುದಿನ ಗಾರ್ಡನಿಗೆ ಒಂದು ರೂಪಾಯಿ ಕೊಡುತ್ತೇನೆಂದು ಹೇಳಿದಳು. ಮರುದಿನ ಅಡವಿಗೆ ಪುನಃ ಗಾರ್ಡನು ಹೋಗಿ ಹೆಂಗಸನ್ನು ಕಂಡು ಹಣ ಕೇಳಲು ಅವಳು ಹಣವಿಲ್ಲ ಎಂದು ಹೇಳಿದ್ದರಿಂದ ಗಾರ್ಡನು ಆ ಹೆಂಗಸಿಗೆ ಹೊಡೆದನು. ಅವಳು ಕೂಗಿಕೊಂಡದ್ದರಿಂದ ಕೂಸ ಎಂಬ ಅವಳ ದಯಾದಿಯು ಅಡವಿಗೆ ಬಂದು ಗಾರ್ಡನನ್ನು ಎಳೆದುಕೊಂಡು ಗ್ರಾಮಕ್ಕೆ ಒಯ್ದು ಇತರಇಬ್ಬರು ಸಂಬಂಧಿಕರ ಸಹಾಯದಿಂದ ಗಾರ್ಡನಿಗೆ ಹೊಡೆದು ಕೊಂದು ಹಾಕಿದರು. ಕೂಸನು ತಲೆ ತಪ್ಪಿಸಿಕೊಂಡನು. ಆದರೆ ಇತರರಿಬ್ಬರು ಸಿಕ್ಕಿಬಿದ್ದರು. ಜಡ್ಜರು ಇಬ್ಬರಿಗೂ ಜೀವಾಂತ ಬಂಕೋಲೆ ಶಿಕ್ಷೆಯನ್ನು ವಿಧಿಸಿದರು.

~~~~~

ಕುಲ್ನಾ ಎಂಬಲ್ಲಿಯ ಡೆಪ್ಯುಟಿ ಮೇಜಿಸ್ಟ್ರೇಟರಾದ ಉಮಾಚರಣ ರೋಯಿ ಚೌಧುರಿಯವರು ಲಂಚ ತಕ್ಕೊಂಡಿರುವರು ಎಂಬಿತ್ಯಾದಿ ಆಪಾದನೆಯ ಮೇಲೆ ವಿಚಾರಣೆಗೆ ಗುರಿಮಾಡಲ್ಪಟ್ಟಿರುವರು. ಇವರ ಮೇಲಿನ ಆಪಾದನೆಗಳನ್ನು ಪ್ರತ್ಯೇಕ ಕಮಿಷನರವರು ವಿಚಾರಿಸಲು ಪ್ರಾರಂಭಿಸಿದ್ದಾರೆ.

~~~~~

ಕಳೆದ ಬೇಸಿಗೆ ಕಾಲದಲ್ಲಿ ಲುಧಿಯಾನದಲ್ಲಿ ಕೈದು ಮಾಡಲ್ಪಟ್ಟ ಪ್ರಖ್ಯಾತ ದಕಾಯಿತರಾದ ಮಾಲ್‌ಸಿಂಘ್ ಮತ್ತು ರಂಜಿತ್ ಸಿಂಘನಿಗೆ ಲುಧಿಯಾನದ ಸೆಶ್ಯನ್ಸ್ ಜಡ್ಜರು ಮರಣಾಂತ ಶಿಕ್ಷೆಯನ್ನು ವಿಧಿಸಿದರು. ಇವರು ದಕಾಯಿತಿಯೊಡನೆ ಕೆಲವು ಕೊಲೆಗಳನ್ನು ಸಹಾ ಮಾಡಿದ್ದರಲ್ಲದೆ ಪೋಲೀಸಿನವರಿಗೆ ಕೂಡಾ ಗುಂಡು ಹಾರಿಸಿದ್ದರು. ದಕಾಯಿತಿ ಮಾಡಿ ದೊರೆತ ಕೊಳ್ಳೆಗಳನ್ನು ಮಾರಲು ಮುಂಬಾಯಿ ಮತ್ತು ಕರಾಚಿಗೆ ಆಗ್ಗಾಗ್ಗೆ ಹೋಗಿ ಬರುತ್ತಿದ್ದರು.

~~~~~

ಗೋವಾ ಸ್ತ್ರೀಯರಲ್ಲಿಯೂ ವಿದ್ಯಾಭ್ಯಾಸವು ಈಗಲೀಗ ಹಬ್ಬುತ್ತಲಿದೆ. "ವೈಸ್ ಅಕ್ಬಾರ್" ಎಂಬ ಪತ್ರಿಕೆಯ ಸಂಪಾದಕರ ಮಗಳು "ಮುನ್ಸಿಫ ಜಲ್ ಒನರ್ಸ್" ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವಳು. ಜಸ್ಟಿಸ್ ಶಾ ಡಿನ್ಸರ ಮಗಳು ಕಳೆದ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಇಂಗ್ಲಿಷಿನಲ್ಲಿ ಹೆಚ್ಚಿನ ಮಾರ್ಕನ್ನು ಪಡೆದಿರುವಳು.

~~~~~

ಕಳೆದ ವಾರ ಮೊಂಬಾಸದಿಂದ ನೂರು ಮಂದಿ ಶತ್ರುಗಳನ್ನು ಮುಂಬಾಯಿಗೆ ತಂದಿರುವರು. ಗಂಡಸರನ್ನು ಅಹಮ್ಮದನಗರಕ್ಕೂ ಹೆಂಗಸರನ್ನು ಮಥೆರಾನ್ ಎಂಬಲ್ಲಿಗೂ ಕಳುಹಿಸುವರು.

~~~~~

ರಣರಂಗದಲ್ಲಿ ಘಾಯ ಒಡೆದ ಮತ್ತು ವ್ಯಾಧಿತರಾದ ೨೦ ಭಾರತೀಯ ಸೈನಿಕರು ಸೌತ್ ಹೆಮ್ಟನಿನಿಂದ ಮುಂಬಾಯಿಗೆ ಬಂದು ತಲಪಿರುವರು.

~~~~~

ಲಂಡನ್ ಎಮ್ ಡಿ. ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಪಡೆದು ಚಿನ್ನದ ಪದಕಕ್ಕೆ ಅರ್ಹರಾದ ಡಾಕ್ಟರ್ ಜಿವರ್ಾಜ ಮೇಥಾರವರು ಕಾಥ್ಯಾವಾಡಿನ ಹಿಂದೂ ಕುಟುಂಬದವರಾಗಿದ್ದು ಠಾಕೂರವರ ಮತ್ತು ಸರ್ ಮಂಗಲದಾಸರವರ ವೇತನವನ್ನು ಪಡೆದು ಇಂಗ್ಲಂಡಿಗೆ ಹೋಗಿದ್ದರು. ಇವರು ಮುಂಬಾಯಲ್ಲಿ ಎಲ್. ಎಮ್. ಎಸ್. ಪರೀಕ್ಷೆಗೆ ಓದುತ್ತಿರುವಾಗಲೇ ಹಲವು ಪದಕಗಳನ್ನು ಪಡೆದಿದ್ದರು. ಲಂಡನ್ ಆಸ್ಪತ್ರಿಯಲ್ಲಿ ಕ್ಲಿನಿಕಲ್ ಅಸಿಸ್ಟೆಂಟರಾಗಿ ನೇಮಿಸಲ್ಪಟ್ಟ ಭಾರತೀಯರಲಿ ಇವರೇ ಮೊದಲನೇಯವರು.
~~~~~

...ಂಗ್ಲಾಂಡಿನಲ್ಲಿ ಇವರು ಸಾಮಾಜಿಕ ಚಳವಳದಲ್ಲಿ ಮುಖ್ಯ ಪಾಲು ತೆಗೆದುಕೊಂಡಿದ್ದರಲ್ಲದೆ ಯುದ್ಧ ಪ್ರಾರಂಭವಾದ ನಂತರ ಭಾರತೀಯ ಎಂಬುಲೆನ್ಸ್ ಕೋರನ್ನು ನಿರ್ಮಿಸುವರೆ ಮ॥ ಗಂಧಿಯವರೊಡನೆ ವಿಶೇಷ ಪ್ರಯತ್ನ ತೆಗೆದುಕೊಂಡಿದ್ದರು.

ಝುಲಿಂಗ ಎಂಬ ಹಡಗದಲ್ಲಿ ೯೬೭ ಯಾತ್ರಿಕರು ಜೆಡ್ಡದಿಂದ ಮುಂಬಾಯಿಗೆ ಬಂದಿಳಿದರು. ೧೩ ಯಾತ್ರಿಕರು ದಾರಿಯಲ್ಲಿ ಮೃತರಾದರು. ೪ ಶವಗಳು ಮುಂಬಾಯಿಗೆ ತರಲ್ಪಟ್ಟವು. ೨ ಮಂದಿಗೆ ಸಿಡುಬು ರೋಗ ಸೋಂಕಿರುವದು. ಟಿಕೇಟಿನ ದರ —೭೫ ರೂಪಾಯಿಗಳಾಗಿರುವವು. ಹಿಂದೆರಳಿದ ಯಾತ್ರಿಕರ ಒಟ್ಟು ಸಂಖ್ಯೆ ೧೯,೪೬೪ ಮದೀನಕ್ಕೆ ಹೋದ ಯಾತ್ರಿಕರು ಈ ವರೆಗೆ ಬರಲಿಲ್ಲ. ಮುಸಾಫರ್‌ಖಾನ ಎಂಬಲ್ಲಿ ಬಡ ಮತ್ತು ವ್ಯಾಧಿತ ಯಾತ್ರಿಕರ ಸಂಖ್ಯೆ ಹೆಚ್ಚುತ್ತಿರುವದು

ಫೆರೋಜ್‌ಪುರ ಡಿಸ್ಟ್ರಿಕ್ಟಿನ ವೆರೊಕ್ ಎಂಬ ಗ್ರಾಮದ ಸಾಹುಕಾರ ಸುಖರಾಜ ಎಂಬವರ ಮನೆಯಲ್ಲಿ ಆಯುಧ ಪಾಣಿಗಳಾದ ಡಕಾಯಿತರು ತಾ ೨೪ರಲ್ಲು ದರೋಡೆ ನಡಿಸಿರುವರು. ದಕಾಯಿತರು ಮೊದಲಾಗಿ ಸಾಹುಕಾರನ ಮಗನನ್ನು ಗುಂಡಿನಿಂದೆ ಹೊಡೆದು ಮನೆಯಲ್ಲಿದ್ದ ಗಂಡಸರನ್ನು ಗಾಯಪಡಿಸಿ ವಿಶೇಷ ದ್ರವ್ಯವನ್ನು ಸೂರೆಮಾಡಿ ಹೋದರು.

ದಕ್ಷಿಣ ಹಿಂದೂಸ್ಥಾನ.

ಕೋಟಗಿರಿಯ ಲಂಡನ್ ಜ್ಯೋನ್ ಎಂಬ ದೇಶಿಯ ಕ್ರೈಸ್ತನು ಮದ್ರಾಸಿನ ಕರೆನ್ಸಿ ಡಿಪಾರ್ಟಮೆಂಟಿನ ಅಸಿಸ್ಟಂಟ ಎಕೌಂಟೂಂಟ ಜನರಲರನ್ನು ರೂ ೧೦ ನೋಟಿನ ಸಂಬಂಧ ಠಕಾಯಿಸಿದನೆಂತ ಆಪಾದಿಸಲ್ಪಟ್ಟಿದ್ದನು. ಈ ಮೊಕದಮೆಯಲ್ಲಿ ೧ನೇ ಸಾಕ್ಷಿಯಾದ ಕರೆನ್ಸಿ ಆಫೀಸಿನ ಕ್ಲಾರ್ಕನು ಹೀಗೆ ಹೇಳಿರುವನು. ರೂ ೧೦ರ ಅರ್ಧ ಕರೆನ್ಸಿ ನೋಟನ್ನು ೧೯೧೦ನೇ ಇಸವಿ ಮಾರ್ಚ ೨೩ನೇ ತಾರೀಕಿನಲ್ಲಿ ಒಬ್ಬ ಸಾಹುಕಾರನು ವರಾಯಿಸಿದನು, ಅನಂತರ ೧೯೧೧ನೇ ಆಗೋಸ್ತು ತಾ ೪ರಲ್ಲು ಕರೆನ್ಸಿ ಆಫೀಸಿಗೆ ಲಂಡನ್ ಜ್ಯೋನನ ಕಾಗದವೂ ೧೦ ರೂಪಾಯಿ ನೋಟಿನ ಉಳಿದ ಅರ್ಧಾಂಶವೂ ತಲುಪಿತು, ಈ ಪತ್ರದಲ್ಲಿ ೧೦ ರೂಪಾಯಿಯ ಉಳಿದ ಅರ್ಧಾಂಶವೂ ಕಳೆದು ಹೋಗಿಯದೆಂದು ಬರೆದಿತ್ತು, ಆಪಾದಿತನು ತಾನು ೧೦೦ ರೂಪಾಯಿಯ ಒಂದು ಕರೆನ್ಸಿ ನೋಟನ್ನು ವರಾಯಿಸಿದೆನೆಂದೂ ಅದರೊಡನೆ ಈ ಅರ್ಧ ನೋಟು ತನಗೆ ತಿಳಿಯದಂತೆ ಬಂದಿರಬೇಕೆಂದೂ ಕೋರ್ಟಿನಲ್ಲಿ ಹೇಳಿದನು. ಮೆಜಿಸ್ಟ್ರೇಟರು ಆಪಾದಿತನಿಗೆ ೨೦೦ ರೂಪಾಯಿ ಜುಲುಮಾನೆ ತಪ್ಪಿದರೆ ೨ ತಿಂಗಳ ಸಜಾ ಎಂತ ತೀರ್ಮಾನಿಸಿದರ

ಪಟ್ಟಣಗಳ ಆರೋಗ್ಯ ಸಂಬಂಧವಾಗಿ ಭಾಷಣಗಳನ್ನು ಕೊಡುವರೆ ಮದ್ರಾಸ್ ಸರಕಾರದವರಿಂದ ಕರೆಯಿಸಲ್ಪಟ್ಟ ಪ್ರೊಫೆಸರ್ ಗೆಡ್ಡಿಸರವರು ತಾ ೨೫ರಲ್ಲು ತನ್ನ ಮಗನೊಡನೆ ಮದ್ರಾಸಿಗೆ ಬಂದು ತಲುಪಿರುವರು. ಇವರು ಪಟ್ಟಣ ರಚನೆ ಸಂಬಂಧವಾಗಿ ಮಾಡಿರುವ ಪ್ರದರ್ಶನಾ ವಸ್ತುಗಳು ಸರಕಾರ ಮಂದಿರದಲ್ಲಿ ಜನವರಿ ತಾ. ೧೮ರಿಂದ ಫೆಬ್ರವರಿ ತಾ ೬ನೇ ವರೇಗೆ ಪ್ರದರ್ಶಿಸಲ್ಪಡುವವು. ಬೆಳಿಗ್ಗೆ ೭. ೩೦ ಗಂಟೆಯಿಂದ ಮಧ್ಯಾಹ್ನ ೧೧ ಗಂಟೆ ಮತ್ತು ಸಾಯಂಕಾಲ ೪ ಗಂಟೆಯಿಂದ ೬ ಗಂಟೆಯ ವರೇಗೆ ಈ ಪ್ರದರ್ಶನಗಳು ಪ್ರದರ್ಶಿಸೋಣಾಗುವವು. ವಸ್ತು ಪ್ರದರ್ಶನದೊಂದಿಗೆ ಇಂಜನಿಯರಿಂಗ್ ಕಾಲೇಜಿಯಲ್ಲಿ ಪ್ರತಿ ಸಾಯಂಕಾಲ ೫ ಗಂಟೆಯಿಂದ ೭ ಗಂಟೆಯ ವರೇಗೆ ಭಾಷಣಗಳನ್ನು ಕೊಡುವರು.

ನಾಗಪುರದ ರಿಟಾಯರ್ಡ್ ಎಕ್ಸ್ಟ್ರಾ ಅಸಿಸ್ಟಾಂಟ ಕಮಿಶನರಾದ ಮ॥ ರಾಜಾರಾಮ ಗಂಗಾಧರ ದೇಶಪಾಂಡೆಯವರ ಮನೆಯಲ್ಲಿ ಒಂದು ವಿಧವಾ ವಿವಾಹವು ನಡೆಯಿತು. ಮಾಧವ ಮರಾಟಿ ದೇಶಸ್ಥ ಬ್ರಾಹ್ಮಣ ಕುಟುಂಬದ ಮ ರಾ. ಬಾಜಿ ಕೃಷ್ಣರಾವ್ ಬಿ. ಎ, ಬಿ ಎಲ್ ರವರು ಮದುಮಗನಾಗಿದ್ದರು. ನಾಗಪುರದ ವೈದಿಕ ಸ್ಮಾರ್ತ ತೆಲುಗು ಬ್ರಾಹ್ಮಣ ಕುಟುಂಬದ ಈಗಿನ ಹಾನೇ ವಿಧವೆಯಾದ ಶ್ರೀಮತಿ ಸೌಭಾಗ್ಯವತಿ ಕೇಸುಬಾಯಿ ಯಾನೆ [illegible] ಶಿಲ-ಬಾಯಿ ಎಂಬವಳೇ ಮದುಮಗಳು. ಇವಳಿಗೆ ೨೬ ವರುಷ ವಯಸ್ಸಾಗಿತ್ತು. ಇವಳ ದೊಡ್ಡಪ್ಪನು ನಾಗಪುರದ ಡಿವಿಜನಲ್ ಕಮಿಷನರ್ ಆಫೀಸಿನ ಅಫೀಸಿಯೇಟಿಂಗ ಸುಪರಿಂಟೆಂಡೆಂಟರಾಗಿರುವರು. ಮತ್ತೊಬ್ಬ ಅಣ್ಣ ಮ॥ ರಾ॥ ಕಾಜ ಪುರುಷೋತ್ತಮ ಎಮ್ ಎ, ಎಲ್.ಎಲ್ ರವರು ಹೈಕೋರ್ಟು ವಕೀಲರಾಗಿದ್ದು ವಿಜಾಕಪಟ್ಟಣದಲ್ಲಿ ವ್ಯವಹರಿಸುತ್ತಿರುವರು. ಶ್ರೀಮತಿ ಕೇಸುಬಾಯಿಯು ತನ್ನ ೧೪ನೇ ವಯಸ್ಸಿನಲ್ಲಿ ವಿಧವೆಯಾಗಿದ್ದಳು.

ಇದೇ ತಿಂಗಳ ತಾ. ೨೬ರಲ್ಲು ಮದ್ರಾಸಿನ ರಾಷ್ಟ್ರೀಯ ಸಭೆಯ ಹಂದರದಲ್ಲಿ ಇಂಡಸ್ಟ್ರಿಯಲ್ ಕನ್ಫರೆನ್ಸ್ ಎಂಬ ಕೈಗಾರಿಕೆಗಳ ಸಂಬಂಧವಾದ ಸಭೆಯು ಮುಂಬಾಯಿಯ ಪ್ರಖ್ಯಾತ ಸಾಹುಕಾರರಾದ ಬಹುಮಾನಪಟ್ಟ ಮನಮೋಹನದಾಸ ರಾಮ್ಜಿಯವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಅಧ್ಯಕ್ಷರು ನಿಯಮಿತ ಸಮಯಕ್ಕೆ ಹಂದರಕ್ಕೆ ತಲಪುತ್ತಲೇ ಸ್ವಾಗತ ಕಮಿಟಿಯ ಚೇಯರ್ಮೇನರಾಗಿರುವ ರಾವ್ ಬಹೂದ್ದೂರ್ ಪಿ ಟಿ. ಚೆಟ್ಟಿಯರ್‌ರವರೂ ಸೆಕ್ರಟರಿಗಳೂ ಅಧ್ಯಕ್ಷರನ್ನು ಎದುರ್ಗೊಂಡು ಆಸನದಲ್ಲಿ ಕೂಂಡ್ರಿಸಿದರು. ಈ ಸಭೆಗೆ ಸುಮಾರು ೨೦೦ ಮಂದಿ ಪ್ರತಿನಿಧಿಗಳು ಹಾಜರಿದ್ದರು. ಅಧ್ಯಕ್ಷರು ಆಸನಾರೂಢನಂತರ ಸ್ವಾಗತ ಕಮಿಟಿಯ ರಾವ್ ಬಹದ್ದೂರ್ ಪಿ ಟಿ ಚೆಟ್ಟಿಯವರು ಸ್ವಾಗತ ಭಾಷಣವನ್ನು ಕೊಟ್ಟರು. ಮದ್ರಾಸಿನ ಕೈಗಾರಿಕೆಗಳ ಸ್ಥಿತಿ, ಸರಕಾರ ಮತ್ತು ಕೈಗಾರಿಕೆಗಳಿಗಿರುವ ಸಂಬಂಧ, ಶತ್ರುಗಳ ವ್ಯಾಪಾರವನ್ನು ನಿಲ್ಲಿಸಿದುದು, ಜೀನಸುಗಳ ಕ್ರಯವೇರಲು ಕಾರಣಗಳನ್ನು ಕಂಡು ಹಿಡಿಯುವರೆ ನಿಯಮಿತವಾದ ಕಮಿಟಿ, ಮೊದಲಾದ ಪ್ರಸ್ತಾಪಗಳೇ ಇವರ ಭಾಷಣದ ಮುಖ್ಯಾಂಶವಾಗಿದ್ದವು. ಇವರ ಭಾಷಣದ ನಂತರ ಬಹುಮಾನಪಟ್ಟ ಮನಮೋಹನದಾಸರವರು ಅಧ್ಯಕ್ಷರಾಗಿ ಆರಿಸಲ್ಪಟ್ಟು ಅಧ್ಯಕ್ಷ ಪೀಠವನ್ನೇರಿ ಭಾಷಣವನ್ನು ಕೊಟ್ಟರು.

ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟ ಬಹುಮಾನಪಟ್ಟ ಬಾಬು ಭೂಪೇಂದ್ರನಾಥ ಬಾಸುರವರು ಇದೇ ತಾ ೨೬ನೇ ರಾತ್ರಿ ೧೨ ೨೦ ಗಂಟೆಗೆ ಮದ್ರಾಸಿನ ಸೆಂಟ್ರಲ್ ಸ್ಟೇಶನಿಗೆ ಬಂದಿಳಿದರು. ರಾಷ್ಟ್ರೀಯ ಮತ್ತು ಏಕೇಶ್ವರ ವಾದಿಗಳ ಸಭೆಯ ವಲಂಟಿಯರರು ಸ್ಟೇಶನಿನಲ್ಲಿ ಸಾಲಾಗಿ ನಿಂತು, ಅಧ್ಯಕ್ಷರು ಗಾಡಿಯಿಂದ ನಿಲ್ದಾಣಕ್ಕೆ ಇಳಿಯುತ್ತಲೇ ಅಭಿವಂದಿಸಿದರು. ಡಾಕ್ಟರ್ ಸರ್ ಸುಬ್ರಮಣ್ಯ ಅಯ್ಯರರವರು ಅವರನ್ನು ಸ್ವಾಗತ ಮಾಡಿಕೊಂಡರು. ಸ್ವಾಗತ ಕಮಿಟಿಯ ಮೆಂಬರರೂ ಸೆಕ್ರಟರಿಗಳೂ ಪುಷ್ಪಮಾಲೆಯನ್ನು ಹಾಕಿದರು. ಅನಂತರ ವಲಂಟಿಯರರೂ ಜನಸಂದಣಿಯೂ ಸಾಲಾಗಿ ಮೆರವಣಿಗೆ ಹೊರಟು ಇವರಿಗಾಗಿ ನೇಮಿಸಲ್ಪಟ್ಟ ಬಂಗ್ಲೆಗೆ ಹೋದರ. ರೈಲ್ವೇ ಸ್ಟೇಶನಿನಲ್ಲಿ ಹಲವು ದೊಡ್ಡ ಮನುಷ್ಯರು ನೆರೆದಿದ್ದರು.

ಇಂಡಿಯನ್ ನೇಶನಲ್ ಸೋಶ್ಯಲ್ ಕನ್ಫರೆನ್ಸ್ ಎಂಬ ಸಾಮಾಜಿಕ ಸುಧಾರಣಾ ಸಭೆಯು ಕಾಂಗ್ರೆಸ್ ಸಭಾ ಹಂದರದಲ್ಲಿ ತಾ ೨೭ನೇ ಮಧ್ಯಾಹ್ನ ಮೈಸೂರು ಯುವರಾಜರವರ ಅಧ್ಯಕ್ಷತೆಯಲ್ಲಿ ಕೂಡಿಬಂತು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಬಹುಮಾನಪಟ್ಟ ಸರ್ ಎಸ್ ಶಂಕರನ್‌ನಾಯರೂ ಕಮಿಟಿ ಮೆಂಬರರೂ ಯುವರಾಜರನ್ನು ಸ್ವಾಗತ ಮಾಡಿಕೊಂಡು ಆಸನದಲ್ಲಿ ಕೂಂಡ್ರಿಸಿದರು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮ॥ ರಾ॥ ಎಸ್ ಶ್ರೀನಿವಾಸ ಅಯ್ಯಂಗಾರರವರು ಸ್ವಾಗತ ಭಾಷಣವನ್ನು ಕೊಟ್ಟ ನಂತರ ಯುವರಾಜರವರು ಸಮಾಜಿಕ ಸುಧಾರಣೆಯೆಂದರೆ ಅರ್ಥವೇನು? ಇದರ ಮುಖ್ಯ ಉದ್ದೇಶವೇನು? ಇಂಥಾ ಸುಧಾರಣಾ ಚಳವಳದ ಆವಶ್ಯವೇನು, ನಮ್ಮ ಈಗಿನ ಸಮಾಜಿಕ ಸ್ಥಿತಿ, ಪಾಶ್ಚಾತ್ಯ ಸೊಸೈಟಿಗಳಿಗೂ ನಮ್ಮ ಸೊಸೈಟಿಗಳಿಗೂ ಇರುವ ತಾರತಮ್ಯ, ಸಮಾಜಿಕ ಸುಧಾರಣೆಯನ್ನು ಮಾಡುವ ಯತ್ನ, ಈ ಸಭೆಯ ಕೆಲಸ ಯಾವದು ಎಂಬಿತ್ಯಾದಿ ವಿಷಯವಾಗಿ ಕಾಲೋಚಿತ ಭಾಷಣವನ್ನು ಕೊಟ್ಟರು

೨೯ನೇ ರಾಷ್ಟ್ರೀಯ ಸಭೆಯು ಇದೇ ತಾ ೨೮ರಲ್ಲು ಮದ್ರಾಸಿನಲ್ಲಿ ಬಹುಮಾನಪಟ್ಟ ಬಾಬು ಭೂಪೇಂದ್ರನಾಥ ಬಾಸುರವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಈ ಸಭೆಯ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಡಾಕ್ಟರ್ ಸರ್ ಎಸ್. ಸುಬ್ರಮಣ್ಯನವರು ಸ್ವಾಗತ ಭಾಷಣವನ್ನು ಕೊಟ್ಟ ನಂತರ ಬಹುಮಾನಪಟ್ಟ ಬಾಬು ಭೂಪೇಂದ್ರನಾಥ ಬಾಸುರವರು ಈ ಮಹಾ ಯುದ್ಧದ ದೆಸೆಯಿಂದ ನಮ್ಮ ಈಗಿನ ಸ್ಥಿತಿ, ಈಗಿನ ನಮ್ಮ ಪ್ರಥಮ ಕರ್ತವ್ಯ, ಹಿಂದೂಸ್ಥಾನದವರು ಯುದ್ಧಕ್ಕೆ ಸೇರಿದ್ದರಿಂದ ಹಿಂದೂಸ್ಥಾನಕ್ಕೆ ಉಂಟಾಗಲಿಕ್ಕಿರುವ ಒಳ್ಳೆತನ, ನಮ್ಮ [illegible] ಸಹಾಯರೂ, ಸ್ಟೇಟ್ ಸೆಕ್ರೆಟರಿಯವರೂ ಹಿಂದೂಸ್ಥಾನದ ನಿಜವಾದ ಸೇವಕರಾಗಿರುವರು? ಇಂಡಿಯಾ ಕೌನ್ಸಿಲ್ ಬಿಲ್ಲು, ನಮ್ಮ ಮುಂದೆ ಇರುವ ಕೆಲಸ, ನಾವು ಈಗ ಎಲ್ಲಿ ನಿಂತಿರುವೆವು, ಕೌನ್ಸಿಲಿನ ಬದಲಾವಣೆ, ಹಿಂದೂಸ್ಥಾನದ ಈಗಲಿರುವ ಸ್ಥಿತಿಯು ಮತ್ತು ಇಂಗ್ಲಾಂಡ್ ಹಿಂದೆ ಇದ್ದ ಸ್ಥಿತಿಯ ತಾರತಮ್ಯ, ಇಟಲಿ ಮತ್ತು ಜಾಪಾನ್, ಇಂಡಿಯಾ ಸರಕಾರವು ಪ್ರಜಾ ಜನರ ಸರಕಾರವಾಗಿದೆಂಬದನ್ನು ಹಾರ್ಡಿಂಜ ಪ್ರಭುಗಳು ಹ್ಯಾಗೆ ತೋರಿಸಿ ಕೊಟ್ಟರು, ವಿದ್ಯಾಭ್ಯಾಸ, ಹಿಂದೂಸ್ಥಾನದ ಕೈಗಾರಿಕೆಗಳಿಗೆ ಸರಕಾರದವರ ಸಹಾಯ, ಹಿಂದೂಸ್ಥಾನದ ಮೇಲ್ಮೆಯ ಬಗ್ಗೆ ಇಂಗ್ಲಾಂಡಿನಲ್ಲಿ ನಡೆಯುವ ಕೆಲಸ, ಬ್ರಿಟಿಷ ಸಾಮ್ರಾಜ್ಯದಲ್ಲಿ ನಮ್ಮ ಸ್ಥಾನ ಮೊದಲಾದ ಪ್ರಸ್ತಾಪಗಳ ಕುರಿತು ಭಾಷಣವನ್ನು ಕೊಟ್ಟರು

ಕಳೆದ ವಾರ ಮೈಸೂರಿನಿಂದ ಬೆಂಗಳೂರಿಗೆ ಹೋಗುವ ಟ್ರೇನಿನ ಗಾರ್ಡ್ ಕೋಣೆಯಿಂದ ಒಂದು ಖಜಾನೆ ಪೆಟ್ಟಿಗೆಯು ಕಳವಾಯಿತು. ಈ ಖಜಾನೆ ಪೆಟ್ಟಿಗೆಯಲ್ಲಿ ೮೦೦೦ ರೂಪಾಯಿಗಳು ಇದ್ದವು. ಈ ಪೈಕಿ ೮೦೦ ರೂಪಾಯಿಯ ನೋಟುಗಳು ಇದ್ದವು. ಈ ಪೆಟ್ಟಿಗೆಯು ಕಳವಾದ ಸಂಗ್ತಿ ಗೊತ್ತಿಗೆ ಬಂದ ಸ್ಥಳದಿಂದ ಅರ್ಧ ಘಂಟೆ ಹಾದಿ ದೂರದಲ್ಲಿ ರೈಲ್ವೇ ಮಾರ್ಗದಲ್ಲಿ ಒಡೆದ ಪೆಟ್ಟಿಗೆಯು ಸಿಕ್ಕಿತು. ಈ ಪೆಟ್ಟಿಗೆಯನ್ನು ಒಡೆದ ರೀತಿಯನ್ನು ನೋಡಿದರೆ ಈ ಕಳವು ಚೆನ್ನಾಗಿ ಬಲ್ಲವರಿಂದ ಆಗಿದೆಂಬದಾಗಿ ತಿಳಿಯುವದು

ಆಲ್ ಇಂಡಿಯಾ ಥಿಯಾಸ್ಟಿಕ್ ಕನ್ಫರೆನ್ಸ್ ಎಂಬ ಏಕೇಶ್ವರ ವಾದಿಗಳ ಸಭೆಯು ತಾ ೨೮ನೇ ಸಾಯಂಕಾಲ ಮ. ರಾ ಹೇರಂಬ ಚಂದ್ರ ಮಿತ್ರರವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮ. ರಾ ಕುದ್ಮುಲ ರಂಗರಾಯರವರು ಸ್ವಾಗತ ಭಾಷಣವನ್ನು ಕೊಟ್ಟ ನಂತರ ಮ ರಾ. ಹೇರಂಬಚಂದ್ರ ಮಿತ್ರರವರು ಕಾಲೋಚಿತ ಭಾಷಣವನ್ನು ಕೊಟ್ಟರು

ದಕ್ಷಿಣ ಕನ್ನಡ

ಮಂಜೇಶ್ವರ:— ಇಲ್ಲಿಯ ಶ್ರೀ ಮದನಂತೇಶ್ವರ ದೇವಸ್ಥಾನದಲ್ಲಿ ಕಾಲಪ್ರತಿ ನಡೆಯುವ ಕಿರುಷಷ್ಠಿ ಮಹೋತ್ಸವವು ಬಹಳ ಸಂಭ್ರಮದಿಂದ ನಡೆಯಿತು. ಕಳೆದ ವರುಷಕ್ಕಿಂತಲೂ ಈ ವರುಷ ನಮ್ಮ ಸ್ವಜಾತಿಯರ ಸಮೂಹವು ಹೆಚ್ಚಿಗೆ ಬಂದಿರುತ್ತಾ ಅವರಿಗೆ ಉಳಕೊಳ್ಳಲು ನಮ್ಮ ಶ್ರೀ ಕಾಶೀಮಠ ಒಂದಲ್ಲದೆ ಬೇರೆ ಯೋಗ್ಯ ಕಟ್ಟೋಣಗಳು ಇಲ್ಲಿ ಇಲ್ಲದ್ದರಿಂದಲೂ ಸ್ವಂತ ಅಡಿಗೆ ವಗೈರೆ ಮಾಡಲು ಪಾತ್ರಗಳ ಅಡಚಣೆಯಾದ್ದರಿಂದಲೂ ಕೂಡಾ ಇಲ್ಲಿಯ ಮಾನ್ಯ ಗ್ರಹಸ್ಥರಾದ ಮ॥ ರಾ॥ ರಾ॥ ಸಾಹುಕಾರ ವೈಕುಂಠ ಭಕ್ತರು ತಮ್ಮ ಸ್ವಖರ್ಚಿನಿಂದ ಇಲ್ಲಿಗೆ ಬಂದ ನಮ್ಮ ಸ್ವಜಾತಿಯರಿಗೂ ಪರಜಾತಿಯರಿಗೂ ಕೂಡಾ ಒಂದು ಗಂಜಿ ವಿಲೆವಾರಿ ಮಾಡಿಸಿದ್ದರಿಂದ ಇಲ್ಲಿ ಬಂದ ಪರ ಊರಗೃಹಸ್ಥರಿಗೆ ಪಡುವ ತೊಂದರೆಗಳು ನಿವಾರಣೆಯಾದವು, ಇದೂ ಅಲ್ಲದೆ ಪರಊರಸ್ಥರ ಸಮೂಹವನ್ನು ಸುಲಭವಾಗಿ ರೈಲಿನಲ್ಲಿ ಆಮದು ರಫ್ತು ಮಾಡಿಸುವ ಬಗ್ಗೆ ಇಲ್ಲಿಯ ದಯಾಳು ರೈಲ್ವೆ ಸ್ಟೇಶನ್ ಮಾಸ್ತರರು ತಕ್ಕೊಂಡ ಪರಿಶ್ರಮ ಬಹಳ ಸ್ತುತ್ಯಕರವಾದದ್ದೇ ಸರಿ ಎಂತ ಸಹಾ ತಿಳಿಸುವರೆ ಸಂತೋಷ ಪಡುತ್ತೇವೆ.

ಶ್ಯೋಳಲಿ:—ಇಲ್ಲಿ ಮೊನ್ನೆ ಹೊಳೆ ಬದಿಯಲ್ಲಿ ಕೆಲವು ಕೋಣಗಳನ್ನು ಓಡಿಸುವಾಗ್ಯೆ ಸುಮಾರು ೧೪ ವರ್ಷದ ಒಬ್ಬ ಹುಡುಗನಿಗೆ ಒಂದು ಕೋಣವು ಹಾದು ವಿಶೇಷ ಜಕಂ ಆಗಿ ಪ್ರಾಣಾಂತಿಕ ಅಪಾಯವು ಸಂಭವಿಸಿಯದೆ. ಆದ್ದರಿಂದ ಕಂಬಳಗಳಲ್ಲಿ ಕೋಣಗಳ ಹತ್ತಿರ ಹೋಗುವವರು ಸ್ವಲ್ಪ ವಿಚಾರ ತಕ್ಕೊಳ್ಳುವರಾಗಿ ನಂಬುತ್ತೇವೆ

ಉಡುಪಿ.

ಉಡ್ಪಿ ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ ಒಂದು ಪರಸ್ಪರ ಸಹಾಯಕ ಸಂಘವನ್ನು ಏರ್ಪಡಿಸುವ ಸಂಬಂಧ ಉಡ್ಪಿ ರೇಂಜಿನ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾದ ಮ. ರಾ॥ ರಾ ಮಂಗೇಶರಾಯರು ಎಲಿಮೆಂಟರಿ ಶಾಲೆಯಲ್ಲಿ ಉಪಾಧ್ಯಾಯರ ಒಂದು ಸಭೆಯನ್ನು ಜರಗಿಸಿದರು. ಇಲಾಖಾ ಇನ್ಸ್‌ಪೆಕ್ಟರರಾದ ಮ. ರಾ. ರಾ. ಗಿರಿಯಪ್ಪನವರು ಸಂಘಗಳ ವಿಷಯ ಒಂದು ಭಾಷಣವನ್ನು ಮಾಡಿದ ತರುವಾಯ ಉಡ್ಪಿ ವಕೀಲರಾದ ಮ. ರಾ. ರಾ. ವಿಟ್ಠಲ್ ಕಾಮತರು ಸಂಘಗಳಿಂದ ಉಂಟಾಗುವ ಪ್ರಯೋಜನಗಳನ್ನು ವಿವರಿಸಿದರು. ಎಲಿಮೆಂಟರಿ ಶಾಲಾ ಉಪಾಧ್ಯಾಯರೆಲ್ಲರು ಒಂದು ಸಂಘಸ್ಥಾಪನೆ [illegible] ಕೊಟ್ಟರು.

ತಾ. ೨೭ನೇ ಆದಿತ್ಯವಾರ ದಿವಸ ಬೆಳಿಗ್ಗೆ ೧೦ ಘಂಟೆಗೆ ಮ॥ ರಾ॥ ರಾ॥ ರಾಮಚಂದ್ರರಾಯರು ಪಂಚಮರಿಗೆ ಒಂದು ಪರಸ್ಪರ ಸಹಾಯಕಾಸಂಘವನ್ನು ಸ್ಥಾಪಿಸುವ ಸಂಬಂಧ ಇಲಾಖಾ ಇನ್ಸ್‌ಪೆಕ್ಟರರನ್ನೂ ಮ॥ ರಾ॥ ರಾ॥ ವಿಟ್ಠಲಕಾಮತ್‌ರನ್ನೂ ಪಂಚಮ ಶಾಲೆಗೆ ಕರಕೊಂಡು ಹೋಗಿ ಸಂಘಗಳಿಂದ ಉಂಟಾಗುವ ಪ್ರಯೋಜನಗಳನ್ನು ಅವರಿಗೆ ವಿವರಿಸಿ ಹೇಳಿಸಿದರು. ಕೂಡಿದ ಪಂಚಮರೆಲ್ಲರು ಸಂಘಸ್ಥಾಪನೆ ಬಗ್ಗೆ ಒಂದು ಅರ್ಜಿಯನ್ನು ಇಲಾಖಾ ಇನ್ಸ್‌ಪೆಕ್ಟರರ ವಶ ಕೊಟ್ಟರು. ಅನಂತರ ಅವರಲ್ಲಿ ಕೆಲವು ಮಂದಿ ಕೂಡಿ ರೂಪಾಯಿಗಳನ್ನು ಠೇವಣಾತಿಯಾಗಿ ವಕೀಲರ ವಶ ಕೊಟ್ಟಿರುತ್ತಾರೆ.

ಮಂಗಳೂರು.

ರಿಜಿಸ್ಟ್ರಾರರಾದ ಮ॥ ರಾ॥ ರಾ॥ ಎಮ್. ನಾರಾಯಣರಾಯರು VI ಗ್ರೇಡಿನಿಂದ V ಗ್ರೇಡಿಗೆ ಬಡ್ತಿ ಹೊಂದಿರುವರು.

ಜಿಲ್ಲಾ ರಿಜಿಸ್ಟ್ರಾರರಾದ ಮ॥ ರಾ॥ ಪಿ. ರಾಮಕೃಷ್ಣಯ್ಯನವರು IV ಗ್ರೇಡಿನಿಂದ III ಗ್ರೇಡಿಗೆ ಬಡ್ತಿ ಹೊಂದಿರುವರು.

ಶಂಕರನಾರಾಯಣದ ಸಬ್ ರಿಜಿಸ್ಟ್ರಾರರಾಗಿದ್ದು ರಜೆಯ ಮೇಲಿರುವ ಮ॥ ರಾ॥ ಕೆ. ವೆಂಕಟರಾಯರು ದಕ್ಷಿಣ ಮಲಬಾರ ಜಿಲ್ಲೆಯ ವಂಡರ್ ಎಂಬಲ್ಲಿಗೆ ವರ್ಗಾಯಿಸಲ್ಪಟ್ಟಿರುವರು.

VIII ಗ್ರೇಡ್ ಸಬ್ ರಿಜಿಸ್ಟ್ರಾರರಾಗಿರುವ ಸಯ್ಯದ್ ಹುಶೇನ್ ಸಾಹೇಬರವರು ಶಂಕರನಾರಾಯಣಕ್ಕೆ ವರ್ಗಾಯಿಸಲ್ಪಟ್ಟಿದ್ದಾರೆ.

ಸೆಂಟ್ ಕ್ಸೆವಿಯರ್ಸ್ ಹಾಯರ್ ಎಲಿಮೆಂಟರಿ ಶಾಲೆಯ ಮೆನೇಜರರಾದ ಮಾರ್ಸೆಲ್ ಎ. ಎಮ್. ಡಿ ಸೋಜರು ಏರ್ಪಡಿಸಿದ ಸಿಲ್ವರ್ ಕಪ್ಪಿನ ಪಂದ್ಯಾಟವು ಇದೇ ದಸಂಬರ ತಾ. ೧೭ರಲ್ಲಿ ನಡೆಯಿತಷ್ಟೆ. ಈ ಪಂದ್ಯಾಟದಲ್ಲಿ ಜೆಪ್ಪು ಸೆಂಟ್‌ಜೋನ್ಸ್ ಹೈಯರ್ ಎಲಿಮೆಂಟರಿ ಶಾಲೆಯೂ ಮುನಿಸ್ ಎಲ್ ಇಸ್ಲಾಮ್ ಶಾಲೆಯೂ ಸಮಸಮ ಬಂದಿರುವದರಿಂದ "ಟ್ರೋಸ್" ಹಾಕಿದಲ್ಲಿ ಮೊದಲನೇ ಆರು ತಿಂಗಳು ಸದರಿ ಕಪ್ಪನ್ನು ಸೈಂಟ್‌ಜೋನ್ಸ್ ಶಾಲೆಯಲ್ಲಿ ಇಡಬೇಕಾಗಿ ನಿರ್ಣಯವಾಯಿತು.

ತಾಲೂಕು ಸಬ್ ಇನ್ಸ್‌ಪೆಕ್ಟರ್ ರಾ॥ ನೀಲಾವರ ನಾರಾಯಣರಾವ್‌ರವರು ಖಾಸಗಿ ಜಟ್ಕಾ ಬಂಡಿಯಲ್ಲಿ ಕುಳಿತು ಹೋಗುತ್ತಿರುವಾಗ ಬೆಂದೂರಲ್ಲಿಯು ಮ॥ ಫ್ರಾನ್ಸಿಸ್ ಡಿ ಸೋಜರ ಮೇಲೆ ಗಾಡಿ ಬಿದ್ದು ಮಿ॥ ಸೋಜರಿಗೆ ವಿಶೇಷ ಜಕಂ ಆಗಿರುವದೆಂತಲೂ ಜಟ್ಕಾ ಡ್ರೈವರನು ಮೈನರನೆಂತಲೂ ಕೇಳುತ್ತೇವೆ.

ಮಡಿಕೇರಿ ಗುಡ್ಡೆಯ ರಾ॥ ಎಮ್. ಶ್ರೀನಿವಾಸರಾಯರ ಮನೆಯಲ್ಲಿ ಇಟ್ಟಿದ್ದ ಅಂಗಿಯು ವಾಚು ಸಹಿತ ತಾ. ೨೩ನೇ ರಾತ್ರಿ ಕಳವಾಗಿರುವದು. ಅಂದೇ ಸದರಿ ಸ್ಥಳದಲ್ಲಿರುವ ಜೇಸುದಾಸ ಬಂಗೇರ ಎಂಬವರ ಮನೆಯಿಂದ ಅಂಗಿ, ಟೋಪಿ, ಮತ್ತು ಬೆಲ್ಟ್ ಇತ್ಯಾದಿಗಳು ಕಳವಾಗಿರುವವು. ಕಳವಾದ ಟೋಪ್ಪಿಯೂ ಶ್ರೀನಿವಾಸರಾಯರ ಅಂಗಿಯೂ ಕದ್ರಿ ಪೋಸ್ಟಾಫೀಸಿನ ಬಳಿ ಬಿದ್ದಿತ್ತಂತೆ. ಆದರೆ ವಾಚು ಮತ್ತು ಬೆಲ್ಟು ಇತ್ಯಾದಿಗಳು ಸಿಕ್ಕಲಿಲ್ಲ.

ದಕ್ಷಿಣ ಕನ್ನಡಾ ಜಿಲ್ಲೆಯ ಎಕ್ಸ್‌ಟ್ರ ಅಸಿಸ್ಟಾಂಟ ಫೋರೆಸ್ಟ್ ಕನ್‌ಸರ್‌ವೇಟರರಾಗಿರುವ ರಾ॥ ವಿ. ರಾಮನ್ ಮೆನೋನರವರು ಉತ್ತರ ಕೊಡಯಮುತ್ತೂರಿನ ಡಿಸ್ಟ್ರಿಕ್ಟ್ ಫೋರೆಸ್ಟ್ ಆಫೀಸರರಾಗಿ ನೇಮಿಸಲ್ಪಟ್ಟಿರುವರು.

ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ದಕ್ಷಿಣ ಕನ್ನಡಾ ಮತ್ತು ಮಲಬಾರು ಜಿಲ್ಲೆಗಳ ಪರವಾಗಿ ಮೆಂಬರರಾಗಿದ್ದ ಮ॥ ರಾ॥ ರಾ॥ ನಾಯನರರು ಮೃತಪಟ್ಟದ್ದರಿಂದ ಖಾಲಿ ಬಿದ್ದ ಈ ಮೆಂಬರು ತನಕ್ಕೆ ರಾವ್ ಬಹದ್ದೂರ್ ನಯಂಪಳ್ಳಿ ಸುಬ್ಬರಾಯರವರೂ ಪುನ್ನತ್ತೂರಿನ ಮ॥ ರಾ॥ ಜಿ. ಶಂಕರ ರಾಜರವರೂ ಉಮೇದ್ವಾರರಾಗಿ ನಿಂತಿರುವರು.

ಮ॥ ಬಿ. ಎನ್. ರೆಬೆಲ್ಲೋರವರು ಸುಳ್ಯದ ಪ್ರೊಬೇಶನರಿ ಸಬ್ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟಿರುವರು.

ಫರಂಗಿಪೇಟೆಯ ಎಲಿಮೆಂಟರಿ ಟೀಚರ್ಸ್ ಎಸೋಷಿಯೇಶನಿನವರಿಂದ ಕೂಡಿಸಿ ಮದ್ರಾಸ್ ಯುದ್ಧ ಫಂಡಿಗೆ ಕಳುಹಿಸಿದ ರೂ. ೪೯—೯—೦ನ್ನು ಜಿಲ್ಲಾ ಕಲೆಕ್ಟರ್ ದೊರೆಗಳವರು ಅತ್ಯಾದರದಿಂದ ಸ್ವೀಕರಿಸಿರುವರು.

ಪರಸ್ಪರ ಸಹಾಯ.

[ಈ ಪತ್ರಿಕೆಯ ಸಂಪಾದಕರ ದಯೆಯಿಂದ ಈ ಸಂಚಿಕೆಯಿಂದ ಮುಂದಣ ಪ್ರತಿ ಸಂಚಿಕೆಯಲ್ಲಿಯೂ ಬೇಂಕಿನ ವಿಷಯಗಳಿಗೋಸ್ಕರವಾಗಿ ಅರ್ಧ ಕಲಮಿನಷ್ಟು ಸ್ಥಳವನ್ನು ಇಡೋಣಾಗುವುದರಿಂದ ಬೇಂಕಿನಿಂದ ಸಂಘಗಳಿಗಾಗಲಿ ಹೊರಗಿನ ಜನರಿಗಾಗಲಿ ತಿಳಿಸತಕ್ಕ ವಿಷಯಗಳನ್ನು ಇನ್ನು ಮುಂದೆ ಈ ಪತ್ರಿಕೆಯಲ್ಲಿಯೇ ಪ್ರಕಟಿಸೋಣಾಗುವುದು. ಆದುದರಿಂದ ಎಲ್ಲಾ ಸಂಘಗಳೂ ತಮ್ಮ ತಮ್ಮ ಪಂಚಾಯತ ಸಭೆಗಳಲ್ಲಿ ನಿರ್ಣಯಗಳನ್ನು ಮಾಡಿ ಈ ಪತ್ರಿಕೆಯನ್ನು ತರಿಸುವುದು ಉತ್ತಮವೆಂತ ಈ ಮೂಲಕ ಸೂಚಿಸೋಣಾಗುತ್ತದೆ.]

ಸರ್ಕಲಾರು ನಂಬ್ರ ೧.

ಬೇಂಕಿನಿಂದ ಪಡದ ಸಾಲಗಳ ಮೇಲಣ ಬಡ್ಡಿಯನ್ನು ಆರು ತಿಂಗಳುಗಳಿಗೊಮ್ಮೆ ಸಂದಾಯ ಮಾಡಬೇಕೆಂಬ ಮುಂತಾದ ಕೆಲವು ಕ್ರಮಗಳು ಸಂಘಗಳಿಗೆಲ್ಲಾ ಈ ಮೊದಲೇ ತಿಳಿದಿರುವುದಾದರೂ ಇದುವರೆಗೆ ಆ ವಿಷಯದಲ್ಲಿ ಕೆಲವು ಸಂಘದವರು ಹೆಚ್ಚಿನ ಮನಸ್ಸು ಕೊಡುವುದಿಲ್ಲವೆಂದು ತೋರಿ ಬರುವುದರಿಂದ ಎಲ್ಲಾ ಸಂಘಗಳ ತಿಳುವಳಿಕೆಯ ಬಗ್ಗೆ ಸಾಲಗಳ ಕುರಿತು ವಿಧಿಸಿದ ಕೆಲವು ಕ್ರಮಗಳನ್ನು ಈ ಕೆಳಗೆ ನಮೂದಿಸೋಣಾಗಿಯದೆ —

1. ಸಾಲಗಳ ಮೇಲಣ ಬಡ್ಡಿಯು ಆರು ತಿಂಗಳುಗಳಿಗೊಮ್ಮೆ ಕೊಡಲ್ಪಡತಕ್ಕದ್ದು. ಹಾಗೆ ಕೊಡಲ್ಪಡದೆ ಹದಿನೈದು ದಿನಗಳ ಪರಿಯಂತರ ಬಾಕಿ ಆದರೆ ಸಾಲವನ್ನು ಸೇಂಕ್ಷನ್ ಮಾಡುವಾಗ ವಿಧಿಸಿದ ವಾಯಿದೆಯು ಉಜರು ಶಿವಾಯ ಸಾಲದ ಅಸಲು ಐವಜನ್ನು ಪೂರಾ ಕೇಳಿದಾಗ ಕೊಡುವರೆ ಸಂಘಗಳು ಬದ್ಧರಾಗಿರತಕ್ಕದ್ದು.

2. ಹಾಗ ಬಾಕಿ ಆದ ಬಡ್ಡಿಯ ಐವಜಿನ ಮೇಲೆ ಬಾಕಿ ತಾರೀಕಿನಿಂದ ವಸೂಲು ತಾರೀಕು ವರೆಗೆ ಶೇಕಡಾ ೧೨½ರ ದರದ ಬಡ್ಡಿಯನ್ನು ವಸೂಲು ಮಾಡಲಾದೀತು.

3. ಸಾಲವನ್ನು ಪ್ರಥಮತಾ ಕೊಡುವಾಗ ನಿರ್ಣಯಿಸ ಬಹುದಾದ ವಾಯಿದೆಯು ಸಾಧಾರಣವಾಗಿ ಒಂದು ವರ್ಷಕ್ಕೆ ಮೀರುವುದಿಲ್ಲ. ಹಾಗೆ ಒಂದು ವರ್ಷದ (ಯಾ ಅದಕ್ಕೆ ಕಡಮೆಯ) ವಾಯಿದೆಗೆ ಕೊಡಲ್ಪಟ್ಟ ಸಾಲಗಳು "ಚಿಕ್ಕ ವಾಯಿದೆಯ ಸಾಲ" ಗಳೆಂದೂ ಅದಕ್ಕಿಂತ ಹೆಚ್ಚಿನ ವಾಯಿದೆಗೆ ಕೊಡಲ್ಪಟ್ಟ ಸಾಲಗಳು "ದೀರ್ಘ ವಾಯಿದೆಯ ಸಾಲ"ಗಳೆಂದೂ ಕರೆಯಲ್ಪಡತಕ್ಕದ್ದು. ಸಾಲ ತೆಗೆದುಕೊಂಡವರು ಆಯಾ ವಾಯಿದೆಯ ಒಳಗೆ ವಾಯಿದೆವರಗೆ ಆಗುವ ಪೂರಾ ಬಡ್ಡಿಯನ್ನು ಮತ್ತು "ಚಿಕ್ಕ ವಾಯಿದೆಯ ಸಾಲ"ಗಳಾದರೆ ಅಸಲು ಐವಜಿನ ಶೇಕಡಾ ೧೦ಕ್ಕೆ ಕಡಮೆಯಾಗದ ಅಸಲು ಐವಜು ವ "ದೀರ್ಘವಾಯಿದೆಯ ಸಾಲ"ಗಳಾದರೆ ಶೇಕಡಾ ೨೦ಕ್ಕೆ ಕಡಮೆಯಾಗದಷ್ಟು ಅಸಲು ಐವಜನ್ನು ಸಹಾ ವಾಯಿದೆಗೆ ಮುಂದಾಗಿ ಸಲ್ಲಿಸಿ ಹೆಚ್ಚಿನ ವಾಯಿದೆ ಅಪೇಕ್ಷಿಸಿ ಆ ಬಗ್ಗೆ ಪಂಚಾಯಿತ ನಿರ್ಣಯದ ಸರಿ ನಕಲಿನ ಸಮೇತ ಅರ್ಜಿ ಬರಕೊಂಡಲ್ಲಿ ಆಡಳಿತೆ ಸಭೆಯವರು ತಮಗೆ ಇಷ್ಟವಿದ್ದರೆ ಆ ಸಾಲಕ್ಕೆ ಹೆಚ್ಚಿನ ವಾಯಿದೆಯನ್ನು ಕೊಡಬಹುದು.

(a) ಹಾಗೆ ಕೊಡುವ ಹೆಚ್ಚಿನ ವಾಯಿದೆಯು ಪ್ರಥಮತಾ ಕೊಟ್ಟ ವಾಯಿದೆಗೆ ಬರಲಾರದು, ಮತ್ತು,

(b) ಪ್ರಥಮತಾ ಕೊಟ್ಟ ವಾಯಿದೆಯು ವ ನಂತರ ಕೊಡುವ ವಾಯಿದೆಗಳು ಒಟ್ಟುಕೂಡಿ ೧೦ ವರುಷಗಳಿಗೆ ಮೀರಕೂಡದು.

ದಕ್ಷಿಣ ಕನ್ನಡಾ ಸೆಂಟ್ರಲ್ ಕೋ ಆಪರೇಟಿವ್ ಬೇಂಕ್ ಲಿಮಿಟೆಡ್. ಪುತ್ತೂರು ದಕ್ಷಿಣ ಕನ್ನಡಾ ತಾರೀಕು 21—12—1914	ಎಮ್. ಅನಂತರಾವ್ ಕಾರ್ಯದರ್ಶಿ.

ನಿಡ್ಡೋಡಿ ದಶಂಬರ ತಾ. ೨೭ನೇ ಆದಿತ್ಯವಾರ ದಿವಸ ನಿಡ್ಡೋಡಿ ಗ್ರಾಮದ ನಂದಬೆಟ್ಟು ಮನೆಯವರೂ ಊರಿನ ಸರ್ವರೂ ಗುಡ್ಡೆಗೆ ಮುಳಿಹುಲ್ಲು ತರಲಿಕ್ಕೆ ಹೋಗಿದ್ದರು. ಮನೆಯಲ್ಲಿ ಸುಮಾರು ಹತ್ತು ವರ್ಷ ಪ್ರಾಯದ ಒಂದು ಹೆಣ್ಣು ಮಾತ್ರ ಇತ್ತು. ಮನೆಯ ಹಟ್ಟಿಗೆ ತಾಗಿಸಿ ಇಳಿಜಾರುಮಾಡಿ ಕಟ್ಟಿದ ಒಂದು ಸಣ್ಣ ಬಚ್ಚಲುಕೊಟ್ಟಿಗೆಯಿತ್ತು. ಸುಮಾರು ನಾಲ್ಕುವರೆ ಘಂಟೆಗೆ ಸಾಯಂಕಾಲದಲ್ಲಿ ಆ ಹೆಣ್ಣು ಬಚ್ಚಲುಕೊಟ್ಟಿಗೆಗೆ ಹೋಗಿ ಬಿಸಿನೀರು ಕಾಯಿಸಲಿಕ್ಕೆ ಆರಂಭಿಸಿತು. ಮುಳಿಹುಲ್ಲನ್ನು ಒಲೆಗಿಟ್ಟು ಊದಿದ ಕೂಡಲೇ ಭಗ್ಗನೆ ಉರಿಯ ಅಗ್ನಿಯು ಹಟ್ಟಿಯ ಛಾವಣಿಗೆ ತಾಗಿತು. ಆ ಸಮಯದಲ್ಲಿ ಆಜುಬಾಜುಗಳಲ್ಲಿ ಯಾರೂ ಇಲ್ಲದ್ದರಿಂದ ಬೆಂಕಿಯು ಹಬ್ಬಿ ಹಟ್ಟಿಯನ್ನು ಪೂರಾ ದಹಿಸಿ ಅಗ್ನಿಯದ್ದ ಘುನೆಗೂ ಕಿಚ್ಚು ಬಿತ್ತು. ಹಟ್ಟಿಯಲ್ಲಿ ನಾಲ್ಕು ಕೋಣಗಳೂ, ಮೂರ ಎಮ್ಮೆಗಳೂ, ಎರಡು ಹೋರಿಗಳೂ, ಮೂರು ಹಸುಗಳೂ, ಎರಡ ದನಕರುಗಳೂ ಇದ್ದುವು. ಆ ಸಮಯದಲ್ಲಿ ಮನೆಯ ಯಜಮಾನಾದ ನಾರಾಯಣಶೆಟ್ಟಿ ಎಂಬವನು ಸ್ವಲ್ಪ ದೂರದಲ್ಲಿ ಸುಗ್ಗಿ ಗದ್ದೆ ಕೊಂತು ಹಾಕಿ ನೀರು ಸೇದುತ್ತಿರುವಾಗ ಹೆಂಗಸಿನ ಬೊಬ್ಬೆ ಕೇಳಿ ಓಡಿಬರುತ್ತಿರುವಾಗ ನೆರೆಮನೆಯ ಸೋಮಪ್ಪಸೆಟ್ಟಿ ಎಂಬವನು ಓಡಿಬಂದನು. ಸೋಮಪ್ಪಸೆಟ್ಟಿಯು ಹಟ್ಟಿಯಲ್ಲಿ ಕಟ್ಟಿದ್ದ ಒಂದೆರಡು ಕೋಣಗಳ ಹಗ್ಗವನ್ನು ಕತ್ತಿಯಿಂದ ಕಡಿದನು. ನಂತರ ಅಗ್ನಿ ಜ್ವಾಲೆಯಿಂದ ಹಟ್ಟಿಗೆ ಪ್ರವೇಶಿಸಲಿಕ್ಕೆ ಅನುಕೂಲವಾಗಲಿಲ್ಲ. ಕೂಡಲೆ ಎರಡು ಕೋಣಗಳು ಹೊರಗೆ ಓಡಿಬಂದುವು. ಅವುಗಳಲ್ಲಿ ಒಂದು ಕೋಣವು ಬೆಂಕಿಯಿಂದ ಸುಡಲ್ಪಟ್ಟದ್ದರಿಂದ [illegible] ಬಂದು ಗದ್ದೆಯಲ್ಲಿ ಬಿದ್ದು ಹೊರಳಿ ಪ್ರಾಣಬಿಟ್ಟಿತು. ಮತ್ತೊಂದು ಕೋಣವು ನೋದಂಡ ಸ್ಥಿತಿಯಲ್ಲಿ ಉಂಟು. ಮೇಲೆ ಹೇಳಿದ ಬಾಕಿ ಜಾನುವಾರುಗಳೆಲ್ಲಾ ಅಗ್ನೀಶ್ವರನಿಗೆ ತುತ್ತಾಯಿತು. ಅಗ್ನಿಯು ಮನೆಯ ಸುತ್ತಿನ ಅಂತರದಲ್ಲಿಯೂ ಮಾಳಿಗೆಯಲ್ಲಿಯು ಭತ್ತಕುಟ್ಟುವ ಕೊಟ್ಟಿಗೆಯಲ್ಲಿಯೂ ಬಿತ್ತುಮುಡಿ ಇಡುವ ಕುತ್ತಿಕ್ಕಿದಲ್ಲಿಯೂ ಭೋಜನಶಾಲೆಗೂ ಭತ್ತದ ಕಣಜಕ್ಕೂ ಮನೆಯ ಚಪ್ಪರಕ್ಕೂ ಬೈಹುಲ್ಲಿನ ರಾಶಿಗೂ ಮನೆಯ ಲಗ್ತಿಯಿರುವ ಮುಳಿಹುಲ್ಲಿನ ರಾಶಿಗೂ ಪ್ರವೇಶಿಸಿ ಸರ್ವವನ್ನೂ ನಾಶಮಾಡಿತು. ಈ ಮಧ್ಯ ನಾರಾಯಣಶೆಟ್ರು ಮಾಳಿಗೆಯ ಲಗ್ತಿಯಿದ್ದ ಕುತ್ತಟ್ಟದಿಂದ ಕೆಲವು ಬಿತ್ತುಮುಡಿಗಳನ್ನು ತೆಗದು ಹೊರಗೆ ಹಾಕಬೇಕೆಂಬ ಇಚ್ಛೆಯಿಂದ ಏಣಿ ಹತ್ತಿ ಮೇಲೆ ಹೋದ ಕೂಡಲೆ ಹೊಗೆಯಿಂದಲೂ ತಂಡತಂಡವಾಗಿ ಬೀಳುವ ಅಗ್ನಿಯ ಕೆಂಡಗಳಿಂದಲೂ ಹೊರಗೆ ಬರಲೆತ್ನಿಸುವ ಜ್ವಾಲೆಯು ಚತುರ್ದಿಕ್ಕಿನಲ್ಲಿಯೂ ಮುಸುಕಿಕೊಂಡಿತು. ಇಷ್ಟರಲ್ಲಿ ಆಜುಬಾಜಿನವರು ಕೆಲವರು ಕೂಡಿ ನಾರಾಯಣ ಸೆಟ್ರನ್ನು ಹೊರಗೆ ಎಳದರು. ಮೈಯೆಲ್ಲಾ ಬೆಂಕಿಯಿಂದ ದಹಿಸಲ್ಪಟ್ಟಿತು. ನಂತರ ಕೂಡಿದ ನೆರೆಹೊರೆಯವರಿಂದ ಅಂಗಳದಲ್ಲಿನ ಕಾರ್ತಿ ಬೆಳೆಯ ಕಣಜದಿಂದ ಕೆಲವು ಭತ್ತವನ್ನು ಮಾತ್ರ ಉಳಿಸುವರೆ ಸಾಧ್ಯವಾಯಿತಲ್ಲದೆ ಮತ್ತೇನೂ ಸಾಧ್ಯವಾಗಲಿಲ್ಲ. ಬೆಂಕಿಯಿಂದ ಸುಡಲ್ಪಟ್ಟ ನಾರಾಯಣಶೆಟ್ರು ಮರು ದಿವಸ ತಾ. ೨೮ನೆ ಸೋಮವಾರ ಹಗಲು ನಾಲ್ಕುವರೆ ಗಂಟೆಗೆ ಮೃತರಾದರು.

ಜೀನಸು ಧಾರಣೆ. (ರಖಂ)

ಹೊಸ ಮಸ್ಕತಿ ಅಕ್ಕಿ	5—2—0	5—12—0
ಹೊಸ ಗಾಡಿ ರಾಶಿ ,,		4—12—0
ಹೊಸ ಗುಡ್ಡು ,,	4—14—0	5—3—0
ಅವ್ವಲ್ ಬೆಳ್ತಿಗೆ ,,		5—8—0
ಗುಡ್ಡು ಬೆಳ್ತಿಗೆ ,,		5—2—0
ರಂಗೂನು ಬೆಳ್ತಿಗೆ ಗೋಣಿ ೧ರ		9—10—0
ಗೋದಿ ಗೋಣಿ ೧ರ ...	...	14—0—0
ಹುರುಳಿ ಗೋಣಿ ೧ರ ...	7—0—0	7—4—0
ಕಡಲೆ ಗೋಣಿ ೧ರ. ...	...	11—0—0
ತೊಗರಿ ಗೋಣಿ ೧ರ ...	...	12—0—0
ತೊಗರಿ ಬೇಳೆ ಗೋಣಿ ೧ರ.	12—0—0	14—0—0
ಉದ್ದು ಗೋಣಿ ೧ರ ...	..	10—8—0
ಊರು ಬೆಲ್ಲ ಖಂಡಿ ೧ರ ..	...	50—0—0
ಉಪ್ಪು ಗೋಣಿ ೧ರ		3—6—0
ಕೊಬ್ರಿ ಖಂಡಿ ೧ರ .	80—0—0	84—0—0
ಕೊಬ್ರಿ ಹಿಂಡಿ ಖಂಡಿ ೧ರ	21—0—0	23—0—0
ಎಳ್ಳಿಂಡಿ ಖಂಡಿ ೧ರ .	30—0—0	35—0—0
ಕೊಬ್ರಿ ಎಣ್ಣೆ ಮುಣ ೧ರ		6—2—0
ಎಳ್ಳೆಣ್ಣೆ ಮುಣ ೧ರ		4—0—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ		5—[illegible]—0
ಮೋರಿಸ್ ಸಕ್ಕರೆ ಮುಣ ೧ರ		4—[illegible]
ಕಾಳ್ಮೆ ಖಂಡಿ ೧ರ.	220—0—0.	225—0—0
ಬೆಳೆಗೋಟು ಖಂಡಿ ೧ರ .	110—0—0	115—0—[illegible]
ಹೊಸ ಬಿಳಿ ಗೋಟು ಖಂಡಿ ೧ರ	76—0—0	78—0—0
ಗೇರು ಬೀಜ ಮುಡಿ ೧ರ		1—4—0
ಕಟ್ಟಿಣ ಖಂಡಿ ೧ರ. .	36—0—0	38—0—0
ತಾಂಬ್ರ ತಗಡುಮುಣ ೧ರ .	16—8—0	16—10—0
ತಾಂಬ್ರ ಪಾತ್ರಗಳು ಮುಣ ೧ರ		22—0—0
ಚೀನಿ ಬೆಳ್ಳಿ ಶೇರು ೧ರ .		18—12—0

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಆಗಾಗಲೇ ಬರೆಯಲು ಅಗತ್ಯವುಳ್ಳ

1915ನೇ ವರುಷದ ಪೋಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸಲ್ಪಡುವ ಪ್ರೊಸೆಸ್ ಫೀಸು, ಭತ್ತೆ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋಣಾಗುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ತ್ರಿಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ವಿಲ್ಲಾಮೆ, ಭಾಡಿಗೆ ಚೀಟು, ರಿಜಿಸ್ತ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು ಶಕಗಳ ಮೊಕಾಬಿಲೆ ಪಟ್ಟಿ, ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು—ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ.

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ಗದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೋಕೇಟು ಬುಕು—ಪೆನ್ಸಿಲ್ ಸಹಿತ ಇದಕ್ಕೆ ಪ್ರತಿಯೊಂದಕ್ಕೆ ಆ 8

ಸಣ್ಣ ಸ್ಯಾಜಿನ ಡೈರಿ ಕ್ರಯ ಪ್ರತಿ ಒಂದಕ್ಕೆ ಆಣೆ 4 ಮಾತ್ರ.

ನಮ್ಮಲ್ಲಿ ತಯ್ಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ಬ್ಯಾಂಡು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ವ್ಯಾಪಾರಸ್ಥರಿಗೂ ರಖಂ ತಕ್ಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ

ಡೈರಿಗಳು ಸಿಕ್ಕುವ ವಿಳಾಸ.— **ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು

ನಮ್ಮ ಡೈರಿಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವವು.

ಮೆಸ್ಸರ್ಸ್ ಕೊಟ್ಟಿಕಾರ ಬ್ರದರ್ಸ್, ಉಡುಪಿ
ಪ್ರಭಾಕರ ಪ್ರೆಸ್, ,,
ಸದಾನಂದ ಪ್ರೆಸ್, ,,
ಬೆಳ್ಳಾರಿ ನರಸಿಂಹ ಮಲ್ಯರು, ಪುತ್ತೂರು
ಕೂಳೂರ ಅಣ್ಣಪ್ಪ ನ್ಯಾಕ್, ವಿಟ್ಲ
ಪಿ. ಪಾಂಡುರಂಗ ನ್ಯಾಕ, ಕುಂಬಳೆ
ಕೆ ಪಿ ರಾಮಕೃಷ್ಣ ಶ್ಯಾನಭಾಗರು, ಕಾಸರಗೋಡು
ಗುರ್ಪುರ ವಿಟ್ಲಪ್ರಭು ಬ್ರದರ್ಸ್, ಬಂಟ್ವಾಳ
ಕೆ ಅನ್ನಂತರಾವ್ ಜವಳಿ ಸಾವಕಾರ. ಕಾರ್ಕಳ.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಒಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road BOMBAY

ಏಜಂಟರು —ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಜಲೋ ಸ್ಪುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೋಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೮—೦ ಆಗಿರುತ್ತದೆ; ಚಂದಾದಾರರಾಗಿ ಸೇರಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರ ಪೇಟೆ. ಧಾರವಾಡ.

ಯುಕಲಿಪ್ಟಸ್ ತೈಲ.

ಮ ರಾ ಅಮುಣಂಜೆಗುತ್ತು ಸೀನಪ್ಪ ಹೆಗ್ಗಡೆಯವರು ಈ ರೀತಿ ಬರೆಯುವರು:—ತಮ್ಮಲ್ಲಿಯ ಅತ್ಯುತ್ತಮವಾದ "ಯುಕಲಿಪ್ಟಸ್ ತೈಲ"ವೆಂಬ ಸರ್ವರೋಗನಿವಾರಣಾ ಔಷಧವನ್ನು ತರಿಸಿಕೊಂಡು ಹೆಂಗಸರು ಮುಟ್ಟಾಗುವ ಕಾಲದಲ್ಲಿ ಆಗುವ ಕಠಿಣ ವಿಧದ ಹೊಟ್ಟೆನೋವಿಗೆ ಉಪಯೋಗಿಸಿದ್ದಲ್ಲಿ ಅದು ಅನೇಕ ಹೆಂಗಸರ ಹೊಟ್ಟೆನೋವನ್ನು ನಿಮಿಷಮಾತ್ರದಲ್ಲಿ ಗುಣಪಡಿಸಿರುತ್ತದೆ. ನನ್ನ ತಂಗಿಗೆ ಕೆಲವು ವರುಷಗಳಿಂದ ಇದ್ದ ಕಿವಿನೋವು ಇದರಿಂದ 5 ದಿವಸಗಳಲ್ಲಿ ಪೂರ್ಣ ಗುಣವಾಗಿರುತ್ತದೆ. ಹೀರಾ ಬಡವರು ಕೂಡಾ ಕೊಡತಕ್ಕ ಡುವ ಈ ಅಲ್ಪ ಬೆಲೆಯ ತೈಲವು ಸಾವಿರಾರು ರೂಪಾಯಿಯ ಬೆಲೆಬಾಳತಕ್ಕಂಥಾದ್ದಾಗಿದೆ. ಜ್ವರದಡ್ಡೆ, ಮಲೆಜ್ವರ, ಶೀತ, ವಾತ, ಸಣ್ಣ ಮಕ್ಕಳ ಜ್ವರ, ಕೆಮ್ಮು, ದೊಡ್ಡವರ ಕೆಮ್ಮು, ಮೇಹ ಮೊದಲಾದ ರೋಗಗಳಿಗೆ ಸಂಜೀವಿನಿಯೋಪಾದಿ ಇರುತ್ತದೆ. ಇದನ್ನು ಉಪಯೋಗಿಸಿದ ಮಕ್ಕಳಿಗೆ ಬಾಲಾರಿಷ್ಟ ರೋಗವು ನಿಜವಾಗಿ ತೊಲಗಿ ಹೋಗುತ್ತದೆಂಬ ಸಂಗತಿ ನನ್ನ ಅನುಭವ ಸಿದ್ಧವಾಗಿರುತ್ತದೆ ಇತ್ಯಾದಿ, ಸರ್ವ ರೋಗಗಳಿಗೆ ದಿವ್ಯೌಷಧವಾದ ಈ ತೈಲದ ಕ್ರಯ ಔನ್ಸ್ ಸೀಸೆಗೆ 5 ಆಣೆ ವಿ. ಪಿ ಬೇರೆ ಡಜನ್ ಸೀಸೆಗೆ ವಿ. ಪಿ. ಸಹಿತ ರೂ. 3 12ಆಣೆ. ಅನುಪಾನಪತ್ರಿಕೆ ಸೀಸೆಯೊಂದಿಗೆ

ಇಕ್ಲಿಪ್ಸ ಬಾಮ್

ವಾತ, ಸಂಧುವಾತ, ಪಕ್ಷವಾತ, ಶಿರೋಭಾರ, ಎದೆನೋವು, ತಲೆನೋವು, ಗಾಯ, ಕಲ್ಲು, ವಾಯಿಕಡಿತ, ಹುಳಮೇಯುವದು, ಆನೆಕಾಲು ಮೊದಲಾದ ರೋಗಗಳಿಗೆ ... ಉಪಯೋಗಿಸಬಹುದಾದ ಈ ಬಾಮ್ ... ಯ ಕರಡಿಗೆ 1ಕ್ಕೆ 8 ಆಣೆ ವಿ. ಪಿ. ಬೇರೆ. ಡಜನ್ ಕರಡಿಗೆ ರೂ. 4—12—0.

ವಿಳಾಸ:— ಏಜಂಟರು:—
ಇಕ್ಲಿಪ್ಸ್ ಏಜನ್ಸಿ, ಸುಗಂಧವಿಲಾಸ,
ಕಂಕನಾಡಿ, ದ. ಕ. ರಥಬೀದಿ, ಮಂಗಳೂರು.

NOTICE.

Stany Brothers,

Candle Garden, Mangalore,

ಉಳ್ಳಾಲ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಪ್ರಾರಂಭದಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರ ವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಹಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ

ಕಾಫಿ ಪುಡಿಯು ರಾತ್ತಲು ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

Piedade Pinto,

Manager.

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯಪುಸ್ತಕವು.

ಜೀವಿತಕಾಲದ ವರೆಗೂ ನಮ್ಮ ಶರೀರವನ್ನು ರೋಗಗಳು ಹತ್ತರ ಬಾರದೆ ಮಾಡಿ ಕೊಳ್ಳುವದೇ ನಮ್ಮ ಮೊಟ್ಟಮೊದಲು ಕರ್ತವ್ಯವು ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನು ಪುನಹ ಹೇಗೆ ಪಡೆಯ ಬಹುದು ಎಂಬ ವಿಷಯ ಗಳಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯ ಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ ಈ ಗ್ರಂಥವನ್ನು ಪ್ರಜೆಗಳ ಶ್ರೇಯಾರ್ಥವಾಗಿ ಕೋರಿದವರಿಗೆ ಕ್ರಯವೂ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳಹಿಸಲ್ಪಡುವದು ಈ ಪುಸ್ತಕವು ಒಂಭತ್ತು ಭಾಷೆಗಳಲ್ಲಿ ಛಾಪಿಸಲ್ಪಟ್ಟು ಇದುವರಿಗೆ ನಾಲ್ಕು ಲಕ್ಷ ಪ್ರತಿಗಳ ಕಳುಹಿಸಲ್ಪಟ್ಟಿರುವದೇ ಇದು ಎಷ್ಟು ಉಪಯೋಗಕರವಾದದ್ದು ಎಂಬುವದಕ್ಕೆ ಸಾಕ್ಷಿಯಾಗಿರುತ್ತದೆ.

ಕಲಿಯುಗದ ಕಾಮಧೇನು.

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥ ಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಿಮಾಡಿ ಹೆಚ್ಚುಮಾಡುತ್ತದೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ ಜೀರ್ಣಶಕ್ತಿಯನ್ನು ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗುವಂತೆ ಮಾಡುವದು. ಅಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1—0—0.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಶೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಶೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

		ಮೊದಲನೇ ವರ್ಷ.	2ನೇ ವರ್ಷ
ಹೊಸಕೇಸ್ (ಜೀವ)	ರೂ	13,329—0—0	22,549—0—0
,, (ವಿವಾಹ)	,,	25,670—0—0	38,933—0—0
ಜುಮ್ಲಾ ಕೇಸುಗಳು	,	38,999—0—0	61,482—0—0
ವಸೂಲಾದ ಪ್ರೀಮಿಯಮ್	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	,,	10,000—0—0	50,000—0—0
(ಜನರಲ್) ರಕ್ಷಿತ ಧನ	,,	37,220—0—0	23,778—3—2
ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ			ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಪ್ ಎಸ್ಶೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು 2 ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4 ರೂ 3,00,000ಗಿಂತಲೂ ಹೆಚ್ಚಿಗೆ ಬಾಧ್ಯತೆಗಳನ್ನು ಕೊಟ್ಟಿದೆ. 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ 9. ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10 ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೊನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ

"ಬಂಗಾಳೀ"—14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು ಸುಮಾರು 3 ಲಕ್ಷ ಬಾಧ್ಯತ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟುಗಳು ಬೇಕಾಗಿವೆ ಎಲ್ಲಾ ವಿಧದ ಏಜಂಸಿ ಶರ್ತಗಳಿಗೆ—

ವಿಳಾಸ — **ಲಕ್ಷ್ಮಣ ರಾವ್ ಬ್ರದರ್ಸ್,**

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು ಪ್ರೋವಿನ್ಸು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಕನ್ನಡ ಲಿಪಿಯ ಪುಸ್ತಕಗಳು.

ಉಡುಪಿ ಶ್ರೀಕೃಷ್ಣ ಚರಿತ್ರೆ

ದಂಡಾಕಾರ, ಮೂರು ಸಂದಿಗಳಿಂದ ಕೂಡಿರುವದು. ಪ್ರಥಮ ಸಂಧಿಯಲ್ಲಿ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠೆ ಮಾಡಿದ ವಿಷಯವೂ, ಎಂಟು ಜನ ಯತಿಗಳ ವಿಷಯವೂ, ಪ್ರತಿನಿತ್ಯ ನಡಿಯತಕ್ಕ ವಿಧಾನಗಳೂ, ಎರಡನೆಯ ಸಂಧಿಯಲ್ಲಿ ಮಕರಸಂಕ್ರಾಂತಿ ಉತ್ಸವ ವರ್ಣನೆಯೂ, ಮೂರನೇ ಸಂಧಿಯಲ್ಲಿ ವರುಷದ ಇತರ ದಿವಸಗಳಲ್ಲಿ ನಡಿಯತಕ್ಕ ಉತ್ಸವಾದಿಗಳೂ ವರ್ಣಿತವಾಗಿವೆ **ಬೆಲೆ 3 ಆಣೆ.**

ಋ ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಆಶ್ವಲಾಯನ ಸಂಧ್ಯಾವಂದನ (ಮರತ್ರಯದವರಿಗೆ) 3ಆಣೆ, ಯಜುರ್ವೇದ ಸಂಧ್ಯಾವಂದನ (ಮರತ್ರಯದವರಿಗ) 2 ಆಣೆ, ಋ ಬ್ರಹ್ಮಯಜ್ಞ ವೈಶ್ವದೇವ ಔಪಾಸನ 3 ಆಣೆ, ಪ್ರಾತರಾಹ್ನಿಕ ಪದ್ಧತಿ 3 ಆಣೆ, ದೇವಪೂಜಾ ಪದ್ಧತಿ 3 ಆಣೆ, ವಾಯುಸ್ತುತಿ 2 ಆಣೆ, ದ್ವಾದಶಸ್ತೋತ್ರ 2 ಆಣೆ, ವಿಷ್ಣುಸಹಸ್ರನಾಮ ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ, ವಿ ಸಹಸ್ರಕೃಷ್ಣಾಷ್ಟೋತ್ತರನಾಮಾವಳಿ 0-2-6, ಅಭಿಷೇಕ ಸೂಕ್ತಗಳು 0 2 0, ಶ್ರೀಸೂಕ್ತ ಪುರುಷಸೂಕ್ತ 0-1-0, ಸುಂದರ ಕಾಂಡ ಕಥಾಸಾರಸಂಗ್ರಹ ವಗೈರೆ 0 2 0, ಗಜೇಂದ್ರ ಮೋಕ್ಷ 0-1-6, ಗೋಪಿಕಾಗೀತೆ ವಗೈರೆ 0-1 0, ಪಾಂಡವಗೀತೆ ವಗೈರೆ 0-1-6, ಅಣುಭಾಷ್ಯ ವಗೈರೆ 0-0-9, ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0-2-0; ಪುರಂದರದಾಸರ ಕೀರ್ತನೆಗಳು 0-6-0, ಉದಯರಾಗ 0-4-0, ಹರಿಭಕ್ತಿಸಾರ 0-1-0, ಸ್ವಪ್ನಪದ ಮಧ್ವನಾಮ 0-1-6, ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ

ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,

ಉಡುಪಿ, ದ. ಕ.

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾದಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ. 1—12—0

ಲಾಯರ್ ಯಂ ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ.

ಅಚ್ಚಾಗುತ್ತಲಿದೆ! ಪುರಾತನ ಸಂಗ್ರಹ!! ನವೀನ ಗ್ರಂಥ!!!

ಭೂತಾಳಪಾಂಡ್ಯರಾಯನ

ಸಂಪೂರ್ಣ ಕಟ್ಟುಗಳು ಇರುವ

ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ.

ಈ ಪುಸ್ತಕದಲ್ಲಿ ಪರಶುರಾಮಾವತಾರದ ಕಥೆಯೂ, ಭರತಖಂಡದ ಕ್ಷತ್ರಿಯರಾಜರ ವಂಶಾವಳಿಯೂ, ಧರ್ಮರಾಯನ ನಂತರ ಆಳಿದ ಅರಸರ ಹೆಸರುಗಳೂ, ವರ್ಷಗಳೂ, ಪರಶುರಾಮ ಸೃಷ್ಟಿಯ ಭೂಮಿ ವಿವರಗಳೂ, ಅದಕ್ಕೆ ಸೇರಿದ ೬೬ ದ್ವೀಪಗಳೂ, ಕನ್ನಡಾ ಜಿಲ್ಲೆಯ ಪೂರ್ವ ರಾಜರ ಸಂತತಿಯೂ, ಆಳಿದ ವರ್ಷಗಳೂ, ಕನಕವರ್ಮ ವೀರವರ್ಮರ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಬಂಟರ ಯಾ ನಾಡವರ ಮತಸ್ಥಾಪನೆ ಕಥೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಷವಾದ ಕಾರಣಗಳೂ, ಭೂತಾಳ ಪಾಂಡ್ಯನ ಪೂರ್ವಜರ ಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ, ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ, ಅಳಿಯಕಟ್ಟು ಆದ ಕಾರಣವೂ, ಅದರ ೧೪ ಕಟ್ಟು ೧೬ ಕಟ್ಟಳೆಗಳ ಪೂರ್ಣಾಭಿಪ್ರಾಯವೂ, ಭೂತಾಳಪಾಂಡ್ಯನ ವಿವಾಹವೂ, ಆತನು ಮಕ್ಕಳಿಗೆ ಅನ್ಯತವಾಗಿ ಕೊಟ್ಟ ಸ್ಥಳಮಾನಗಳೂ, ಅವನ ಅಳಿಯ ರಿದ್ಯಮ್ಮ ಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿ ಕೊಟ್ಟ ಸ್ಥಳ ಮಾನಗಳೂ, ಚೌಂಗಡಿ ಅರಸರ ಮಾನಮರ್ಯಾದೆಗಳ ವಿಷಯ ಬರಸಿದ ಶಾಸನವೂ, ಅಳಿಯಕಟ್ಟಿಗೆ ಸೇರಿದ ೪೩ ಜಾತಿಗಳೂ, ಮತ್ತು ಅವರ ಗೋತ್ರಗಳು ತೆಗೆದು ಮಾಡಿದ ೬೦, ಬಳಿಗಳೂ, ೨ನೇ ಭೂತಪಾಂಡ್ಯನ ಚರಿತ್ರೆಯೂ, ಚೌಟ ಬಂಗರ ಮೊದಲಾದ ಸಂಸ್ಥಾನಾಧಿಪರ ಸೀಮೆ, ಮಾಗಣೆ, ಮಾನಮರ್ಯಾದೆಗಳೂ, ಜೈನ, ಬಂಟರ ೬೦ ಜನನ, (ಕೀರ್ತಿನಾಮಗಳೂ) ಕೇರಳದ ೪೩ ಜಾತಿಗಳೂ, ಸ್ಥಳನಾಮಾವಳಿಗಳೂ. ಏಳು ಮಂದಿ ರಾಜಂಪೈವಗಳ ಚರಿತ್ರೆಯೂ, ಇಕ್ಕೇರಿ, ಆನೆಗುಂದಿ ವಿಜಯನಗರದ ರಾಜರುಗಳ ಚರಿತ್ರೆಯೂ, ಆ ಕಾಲದ ಕಂದಾಯ ಕ್ರಮಗಳೂ, ಶಿಲಾ ಶಾಸನ, ತಾಮ್ರ ಶಾಸನಗಳ ಯಥಾ ನಕಲುಗಳೂ, ಅದರ ಅಭಿಪ್ರಾಯಗಳೂ, ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳೂ, ಅವುಗಳ ಉತ್ಸವಾದಿ ವಿವರಗಳೂ, ಮೊಗಲ್ ರಾಜರ ವಂಶಾವಳಿಯೂ, ಭರತಖಂಡಕ್ಕೆ ಅನ್ಯ ರಾಜರ ಪ್ರವೇಶ ಕಾಲಗಳೂ, ಶ್ರೀಮನ್ 5ನೇ ಜಾರ್ಜಸಾರ್ವಭೌಮರ ಚರಿತ್ರೆಯೂ ವಗೈರೆ ಅನೇಕ ವಿಧವಾದ ಪೂರ್ವ ಪುರಾಣಗಳ ಅನುಭವಗಳಿಂದ ಭರಿತವಾದ ಪುರಾತನ ಸಂಗ್ರಹಗಳು ಇದರಲ್ಲಿ ಅಡಗಿರುತ್ತವೆ. ಅಳಿಯ ಸಂತಾನದವರಿಗೂ, ಶಾಲಾ ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ಓದು ಬರಹ ಬಲ್ಲ ಸರ್ವರೂ ನೋಡತಕ್ಕ ಪುಸ್ತಕ

ಅಪೇಕ್ಷಕರು ಆದಷ್ಟು ಬೇಗನೆ ಪತ್ರ ಬರೆದು ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳಬಹುದು. ಅಂಥವರಿಗೆ ಪುಸ್ತಕ ಒಂದರಲ್ಲಿ ೨ ಆಣೆ ಕಡಿಮೆ ದರದಲ್ಲಿ ಕೊಡಲಾದೀತು. ಪುಸ್ತಕವು ತಯಾರಾಗುತ್ತಾ ಬರುತ್ತದೆ ಪುಸ್ತಕದ ಬೆಲೆ ಸಿದ್ಧವಾದ ಕೂಡಲೇ ತಿಳಿಸಲಾದೀತು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು

ವಿಳಾಸ:—

"ಕುಶಲಮಂದಿರ" ಶ್ರೀ ರಾಜರಾಜೇಶ್ವರಿ ದೇವಸ್ಥಾನ, ಪೊಳಲಿ } ಎನ್. ಎ. ಶೀನಪ್ಪ ಹೆಗಡೆ ಅಮುಣಂಜೆ ಗುತ್ತು, ಪೋಸ್ಟು, ಗುರ್ಪುರ, ದ. ಕನ್ನಡ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಧಾತುಪುಷ್ಟಿ ರಸಾಯನ:— ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಅನೇಕ ವಿಧವಾದ ಎಲ್ಲಾ ಶರೀರ ದುರ್ಬಲಗಳು ಹೋಗಿ ಹೊಟ್ಟೆಯಲ್ಲಿ ಅಗ್ನಿ ಉಂಟಾಗಿ ದೇಹವು ಪುಷ್ಟಿ ಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ತಕ್ಕ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ, ಹೋಗಿ ಪುಷ್ಟಿಯೂ ಬಲವೂ ಉಂಟಾಗುವುದು. ಪೆಟ್ಟಿಗೆ ೧ಕ್ಕೆ ರೂ. ೨. ವಿ ಪಿ. ಛಾಂಗಿ ಚಾರ್ಜು ೬ ಆಣೆ

ಅಜೀರ್ಣ ಮಾತ್ರೆಗಳು:— ಅಜೀರ್ಣ, ತೇಗುವುದು, ಹೊಟ್ಟೆಯಲ್ಲಿ ಉಷ್ಣ ಮತ್ತಾಗಿರುವಿಕೆ, ಹಸಿವಿಲ್ಲದಿರುವುದು, ಪಿತ್ತದಿಂದ ಬಾಯಿಯ ದುರ್ಗಂಧ, ಹೊಟ್ಟೆ ಶೂಲೆ, ನಿದ್ದೆಹತ್ತದಿರುವಿಕೆ, ತಲೆತಿರುಗುವದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿಗೆ ೧ಕ್ಕೆ ೮ ಆಣೆ ವಿ ಪಿ. ಛಾಂಗಿ ಚಾರ್ಜುಗಳು ೩ ಪೆಟ್ಟಿಗೆ ವರಿಗೂ ೫ ಆಣೆ.

ಪ್ರಮೇಹ ನಿವಾರಣೆ:— ಯಾವ ಕಾರಣದಿಂದಲಾದರೂ ಸಂಭವಿಸಿದ ಕಷ್ಟ ನಿದ್ರೆಯಲ್ಲಿ ಉರಿ ಮುಂತಾದವು ವಾಸಿಯಾಗುವುದು. ಸ್ತ್ರೀ ಪುರುಷರು ಉಪಯೋಗಿಸಬಹುದು. ಸೀಸೆ ೧ಕ್ಕೆ ರೂ. ೧. ೬ಸೀಸೆ ವರಿಗೂ ವಿ ಪಿ. ಚಾರ್ಜು ೫ ಆಣೆ.

ಲಕ್ಷ್ಮೀಕರ ಕಸ್ತೂರಿ ಮಾತ್ರೆಗಳು:— ಇದು ಭೋಜನಾನಂತರ ತಾಂಬೂಲದ ಸಂಗಡ ೧-೨ ಮಾತ್ರೆಗಳನ್ನು ಸೇವಿಸಿದರೆ ಇತರ ಸುವಾಸನಾ ದ್ರವ್ಯಗಳು ಅನಾವಶ್ಯಕವಾಗಿರುವದಲ್ಲದೆ ಅಲ್ಪ ಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು ಬೆಳಿಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಸೇವಿಸುತ್ತಿದ್ದರೆ ಅಜೀರ್ಣ, ಮಂದ, ಹಲ್ಲು ವೇದನೆ, ಹೊಟ್ಟೆಯ ಉರಿ ಇವುಗಳು ವಾಸಿಯಾಗುವವು. ಇದರಲ್ಲಿ ಆಕ್ಷೇಪಣೀಯವಾದ ೬ಹರಿ ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲ ಕಸ್ತೂರಿ ಸ್ವರ್ಣ ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ, ಎಳೆ ಮಕ್ಕಳಿಂದ ಮುದುಕರ ವರಿಗೆ ಎಲ್ಲರೂ ಧರಣೆಯಲ್ಲಿ ಹಾಕಿಕೊಂಡು ಉಪಯೋಗಿಸ ಬಹುದು ಕ್ರಮವಾಗಿ ಸೇವಿಸುವದರಿಂದ ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ತಕ್ಷಣ ಗುಣ ಕಾಣುವದು. ಸೀಸೆ ೧ಕ್ಕೆ ೪ ಆಣೆ ವಿ ಪಿ ೩ ಸೀಸೆ ವರಿಗೂ ೫ ಆಣೆ ಪ್ರತ್ಯೇಕವು

ವೇದನಾ ಪರಿಹಾರಕ ತೈಲವು:— ಇದನ್ನು ಮೇಲ್ಭಾಗದಲ್ಲಿ ಮಾತ್ರ ಹಚ್ಚುವದರಿಂದ ಕೈ ಕಾಲು ಹಿಡಿದುಕೊಳ್ಳುವುದು ವಾತರೋಗ ಪಾರ್ಶ್ವವಾಯು ನರಗಳ ಸೆಳತ ಮೊಣಕಾಲು ಸೊಂಟ ಮತ್ತು ಎದೆತೋಳು ಸಕಲ ಅಂಗಗಳ ಕೀಲಿನ ನೋವುಗಳು ತಲೆಶೂಲೆ ಹಲ್ಲುನೋವು ಕಿವಿನೋವು ಛಳಿ ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು. ಸೀಸೆ ೧ಕ್ಕೆ ರೂ ೧. ವಿ. ಪಿ. ೩ ಸೀಸೆ ವರಿಗೂ ೫ ಆಣೆ.

ಪರಿಮಳ ಕೇಶ ತೈಲವು:— ಸೋಲುತಲೆ ಚುಂಡು ಅಥವಾ ಹೊಟ್ಟು ಉದುರುವಿಕೆ ಇವು ಸಂಪೂರ್ಣವಾಗಿ ವಾಸಿಯಾಗುವವಲ್ಲದೆ ತಲೆಯನ್ನೂ ಮಿದುಳನ್ನೂ ತಣ್ಣಗಿರುವಂತೆ ಮಾಡಿ ತಲೆ ಮಾಸೆ ಹುಬ್ಬುಗಳ ಕೂದಲನ್ನು ಹೇರಳವಾಗಿ ಬೆಳೆಸುವದು, ಮತ್ತು ಕಣ್ಣು ಮಿದುಳು ಸಂಬಂಧವಾದ ರೋಗವನ್ನೆಲ್ಲಾ ವಾಸಿಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವದು. ಸೀಸೆ ೧ಕ್ಕೆ ೮ ಆಣೆ. ವಿ. ಪಿ. ಚಾರ್ಜು ೨ ಸೀಸೆ ವರಿಗೂ ೫ ಆಣೆ.

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBAROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು.

ತ್ವರೆಮಾಡಿರಿ!

1915ನೇ ಇಸವಿಯ ಸುಂದರವಾದ ಕೆಲೆಂಡರುಗಳು.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ ಪಿ ಚಾರ್ಜು ಸೇರಿ ೧ಕ್ಕೆ ಆಣೆ ೩; ೬ಕ್ಕೆ ಆಣೆ ೧೩, ೧೨ಕ್ಕೆ ರೂ. ೧--೧೦--೦. ಇವು ಜನವರಿ ಆಖೈರ ವರೆಗೆ ಮಾತ್ರ ಸಿಕ್ಕುವವು. ನಂತರ ಖರ್ಚಾಗುವವು. ಆದುದರಿಂದ ತ್ವರೆಮಾಡಿರಿ!

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂದಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಉಳುಕು, ಎದೆನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾದಿ, ಚೇಳು ಕಡಿತ, ಆನೆಗಾಲು, ಪೆಟ್ಟು ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತ್ತು ಆಣೆ ೮ ಡಜನ್ 1ಕ್ಕೆ ರೂ. 5-4-0 ವಿ. ಪಿ ಖರ್ಚು ಪ್ರತ್ಯೇಕ.

ಎಚ್ಚರಿಕೆ —ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಕೆಲವು ದಾನೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್‌ಮಾರ್ಕ 0—6—0 12 ಡಬ್ಬಿಗಳಿಗೆ ३—೪—0. ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ ಇದರಲ್ಲಿ ಹಲವು ನಮುನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0. ಡಜನ್ 1ಕ್ಕೆ 1—2—0 ವಿ ಪಿ ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ದಕ. 20 ಗುಳಿಗಗಳ ಡಬ್ಬಿ ಒಂದರ ದರ ರೂ 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫೊರ್ಮರ್: — ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷದ

ಡಬ್ಲ್ಯು ಮೆಕ್ಸವೆಲ್, ವೈನಾಡ: — ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ

ಆರ್. ಆರ್ ಗಂಗೋಲಿ: — ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ

ಡಾಕ್ಟರ್ ದಾಂಡೇಕರ್, ಎಲ್. ಎಮ್. ಎಂಡ್ ಎಸ್: — ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ — ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ, ಕೊಚ್ಚಿಕಾರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಒಸವನಗಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ. ದ್ವಾರಾ ರವಾನಿಸುವುದು

ಸೀಸೆಯೊಂದರ ಕ್ರಯ ರೂ. 1 0-0, ಅ ವೆ 0 4-0 ಬೇರೆ, 3 ಸೀಸೆಗಳ ಕ್ರಯ ರೂ 2-10 0, ಅ ವೆ. 0-7-0 ಬೇರೆ.

ಸೂಚನೆ — ಅನೇಕ ದುರ್ಲೋಭಿಗಳಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಮಾರಾಟದಿಂದ ತಮಗೆ ಅಲ್ಪಸ್ವಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುಹರುಬಾನ್ ಮಾಡಿದರೆ ನೀವು ಹಣಕಾರರ ಬಲೆಯಲ್ಲಿ ಸಿಲುಕಬೇಕಾದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ



ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತು ದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ, ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಆರೋಗ್ಯಕರವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಆವಶ್ಯಕವಾಗಿರುತ್ತವೆ.

ವಾಹಕಪನದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ಚಿತನ್ಯಗೊಳಿಸುತ್ತವೆ ರೋಗದಿಂದ ಮುರಿದು ಹೋದ ಅಥವಾ ಒಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ ಈ ಗುಳಿಗೆಗಳ ಉದ್ದೀಪಕಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ "ಕಾದಕ"ಯ ಕ್ರಮವನ್ನು ಅನುಸರಿಸುತ್ತದೆ, ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ, ಗತಿಯು ದೃಢವಾಗುತ್ತದೆ ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ, ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4 0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0 0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ. — "ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ, ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸೀತಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ — ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ಪಲ್ಲದ ಮುಹಮ್ಮದ ಖಾಯಾ ಇಬ್ರಾಹಿಮ್ ಪಾಟೀಲ್, ಪನವೇಲ್ — "ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ."

4 ಪಿ. ಆರ್ ಚಾಕ್ಕೊ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಯಮ್, ತ್ರಾವಣಕೋರ್ ರಾಜ್ಯ. — ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ. ಅವುಗಳನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾನಾಜೀ ಪರಸಿಂಗರಾವ್, ಸಂಸ್ಥಾನ ಪಲುಸ. — ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಬಹಳ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ವರ್ಕ್ಸ್. ಮಂಗಳೂರು ದ. ಕನಡಾ.**

ನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ ಎಂಡ್ ಸನ್ಸರ

ಬಿಸ್ಕುಟುಗಳನ್ನು

ಒಮ್ಮೆ ತರಿಸಿ ನೋಡಿರಿ!

ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕೆ ದೊರೆಯುತ್ತವೆ.

ವಿಳಾಸ:— ಸ್ಟೀವನ್ ಎಂಡ್ ಸನ್ಸ್, ಮಂಗಳೂರು

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 13 ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳಗಾಂ, ಸೇಲಂ, ನಾರಾಯಣ ವನಮ್, ನನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಸ್ಸಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗ್ಯರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂದಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಳ

ರಥಬೀದಿ ಮಂಗಳೂರು ದ ಕ.

ಉತ್ಕೃಷ್ಟವಾದ ಮೂರು ಔಷಧಗಳು.

ಗ್ರೆಂಟ್ ಮೆಡಿಕಲ್ ಕೊಲೆಜಿನಲ್ಲಿ ಸೂಲಗಿತ್ತಿತನ ಕಲಿತು ಸರ್ಟಿಫಿಕೇಟ್ ಪಡೆದ ಕಮಲಾ ಬಾಯಿ, ತುಲಸೀ ಬಾಯಿ ಎಂಬ ಸೂಲಗಿತ್ತಿಯರಿಂದ ತಯಾರಿಸಲ್ಪಟ್ಟವುಗಳು.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1.

(ಆರ್ತವ ಶೂಲೆ ಹೋಗಲಾಡಿಸುವ ಬಗ್ಗೆ.)

ಅಬಲಾಸಂಜೀವನಿ ಗುಳಿಗೆಗಳು ಎಲ್ಲಾ ಬಗೆಯ ಆರ್ತವ ಶೂಲೆಯನು ಹೋಗಲಾಡಿಸುವುದಕ್ಕೆ ಏಕರೀತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆಗೆ ಯೋಗ್ಯವಾದ ಮಾತ್ರೆಗಳಾಗಿರುವುವು ಅನೇಕ ಕಾಲದವರೆಗೆ ಪುಷ್ಪವತಿಯಾಗದೆ ಇದ್ದುದು ಕೂಡ ಇವುಗಳಿಂದ ಸರಿಯಾಗುವುದು. ಅಂತರೌಷಧಿಗಳಿಂದ ಗುಣವಾಗಬಹುದಾದ ಎಲ್ಲಾ ಗರ್ಭಕೋಶದ ಶೂಲೆಗಳು ಇವುಗಳಿಂದ ಗುಣವಾಗಿ, ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು. ಒಂದು ಶೀಸೆಯ ಕ್ರಯ ರೂ. 1. ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 2.

(ಬಿಳೀ ಸ್ರಾವದ ಬಗ್ಗೆ.)

ಈ ಬಾಧೆಯಿಂದ ವಿರಹಿತರಾದ ಸ್ತ್ರೀಯರು ಬಹಳ ವಿರಳ. ಈ ಸ್ರಾವದಿಂದ ಹೆಚ್ಚಿನ ನಿಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವುವು ಈ ಸ್ರಾವವು ರಕ್ತಸ್ರಾವದಂತೆ ಬಹೀನಕರ. ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರುವುದು, ಆಗಾಗ್ಗೆ ಕಟಿಭಾದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗುವುದು, ಮಲವಿಸರ್ಜನೆ ಸರಿಯಾಗದಿರುವುದು ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು.—ಒಂದೇ ಪೊಟ್ಟಣವನ್ನು ಪರೀಕ್ಷೆಗಾಗಿ ತರಿಸಿದರೆ ತ್ವರ್ಯಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು. ಒಂದು ಶೀಸೆಯ ಕ್ರಯ 1 ರೂಪಾಯಿ ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 3.

(ಕೆಂಪು ಸ್ರಾವದ ಬಗ್ಗೆ.)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು. ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದವುಗಳು ಉಂಟಾಗಿ, ಗರ್ಭಕೋಶದ ಶೂಲೆ, ನಿರ್ಬಲತೆ ತಲೆದೋರುವುವು. ಈ ಸ್ರಾವವು ಗರ್ಭಕೋಶದಿಂದ ಸ್ರವಿಸುವ ರಕ್ತನೇ ಸರಿ ಈ ಗುಳಿಗೆಗಳನ್ನು ಕೂಡಲೇ ಸೇವಿಸುವುದಕ್ಕೆ ಅಸಡ್ಡೆ ಮಾಡಿದರೆ, ಈ ಪೀಡೆಯು ಅತಿಶಯಿಸಿ, ಬೇಗನೇ ಗುಣ ಹೊಂದಲಿಕ್ಕಿಲ್ಲ. ಒಂದು ಶೀಸೆಯ ಕ್ರಯ 1 ರೂಪಾಯಿ. ಅಂಚೆ ಹಾಸಲು 4 ಆಣೆ. ಏಜೆಂಟರು —

ದಿ ಊಲನ್ ಮಾರ್ಟ್, ಹಂಪನ್‌ಕಟ್ಟಾ, ಮಂಗಳೂರು. ದಕ್ಷಿಣ ಕನ್ನಡ.

Dr. Nava Ratna & Sons, 253 Kalbadevi Road, BOMBAY 2

Estd. 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮುಲಾಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮುಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೧೦–೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇವರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುತ್ತೇವೆ.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಿಟ್ಟಿಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಬಿಗಿಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಬಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. [illegible] ಮಾತ್ರೆ. [illegible] ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ತುಳುಕಜ್ಜಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಹ್ಮೀ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists*,

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಸರ ಮಿಶ್ಯನ್ ಚೇಕುಗಳೂ, ಬೇರೆ ಅನೇಕ ತರದ ಸ್ವದೇಶೀ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಚಿಲ್ಲರೆ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಚಿಲ್ಲರೆ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪನಿ,

ಹಂಪನಕಟ್ಟೆ, ಮಂಗಳೂರು

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೋಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

K. K. Shanbhog, *Proprieter*

THE CANARA CYCLE MART.

Udipi, S. Canara.

ಲೋಕಪ್ರಸಿದ್ಧವಾದ ಪಂಜಾ ಸಾಲಾಮಿಸ್ರಿ ಮುರಬ್ಬಾ.

ಪರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾ ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವದು.

ಪಂಜಾ ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ತಿನುವದರಿಂದ ಗುಣವರಿಂದ ಪೂರ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಪ್ರಾಣಾಂತರದ ರೋಗವೂ ಗುಣಕೊಡುತ್ತೆ.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ ಆಣೆ 6.

ಏಜಂಟರು:— ಡಿ ಸಯ್ಯದ್ ಉಸ್ಮಾನ್ ಎಂಡ್ ಕೊ
ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹದಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸವುರ್ವರಂತೆ ಕಾಣುತ್ತಿರಿ.

ಈ ರಂಗು ಹಚ್ಚಿಕೊಂಡರೇ ಕೂದಲು ಅತ್ಯ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು, ಹಚ್ಚಿದಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ, ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲ ಒಂದಕ್ಕೆ ರೂ. 1; ಅಂಚೆ ಹಾಸಲು 4 ಆಣೆ.

ವಿಳಾಸ:— ಏ. ಎ. ಎಸ್. ಪಾಣಿ ಕಂಪೆನಿ.
ನಂಬ್ರ 3 ಅರುಳಪ್ಪನ್ ಬೀದಿ, ಮದರಾಸು.

ಸನ್ 1915 ಇಸವಿಯ

ಪಾಕೆಟ್ ಡೈರಿ

ಶ್ರೀ ಸೀತಾ ರಾಘವ

ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಕಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ, ಅನೇಕ ಹೊಸ ಸಂಗತಿಗಳಿವೆ.

ನಂಬ್ರ ೧. ಸಣ್ಣ ಸೈಜು ಸಾದಾ 0—4—0.
,, ೨. ಪೆನ್ಸಿಲ್ ಮುಚ್ಚಳವುಳ್ಳದ್ದು 0—6—0.
,, ೩. ದೊಡ್ಡ ಸೈಜು ಸಾದಾ 0—6—0.
,, ೪. ಪೆನ್ಸಿಲ್ ಮುಚ್ಚಳವುಳ್ಳದ್ದು 0—8—0.

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ.
ಹೆಚ್ಚಾಗಿ ತರಿಸುವವರಿಗೆ ರೂ. ೧ಕ್ಕೆ ೨ ಆಣೆ ಕಮಿಷನ್ ದೊರೆಯುವುದು.
ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.
ನಮ್ಮ ವಿಳಾಸ:—ಶ್ರೀ ಸೀತಾರಾಘವ ಪುಸ್ತಕಶಾಲಾ, ಮೈಸೂರು.

Printed & Published by V. S. Kamath at the Mangalore Trading Association's Sharada Press, Mangalore

Registered No. 328 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ.—ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ IX | ಮಂಗಳೂರು ತಾ. 8ನೇ ಜನವರಿ ಶುಕ್ರವಾರ 1915. | ಸಂಚಿಕೆ 2.

ನೋಟೀಸು.

ಮಂಗಳೂರು ಶ್ಯಾಪರ ತೇರಬೀದಿ ಹೂವಿನ ಮಾರ್ಕೆಟ ಬಳಿಯಲ್ಲಿ ವ್ಯಾಪಾರ ಮಾಡುವ ಗುಪ್ಪುರ ಸರ್ವೋತ್ತುಮ ಕಿಣಿಯು ತಿಳಿಯಪಡಿಸುವದೇನಂದರೆ—

ಮೃತಪಟ್ಟ ಮಾಧವ ಕಿಣಿಯ ತಂದೆ ಸಾಂತಯ್ಯ ಕಿಣಿಯವರ ಹೆಸರಲ್ಲಿ (ಕಳೆದ ಸಂಚಿಕೆಯಲ್ಲಿ) ಕೊಡೋಣಾದ ತಾ 28—12—14ನೇ ನೋಟೀಸು ಸಹಾ ನಿರಾಕರಿಸುತ್ತೇನೆ. ಪ್ರದವ ಶಾ ಸದರಿ ಮಾರ್ಕೆಟ ಬಳಿಯ ಅಂಗಡಿಯಲ್ಲಿ ವ್ಯಾಪಾರವಮಾಡುತ್ತಿದ್ದ ನಿತ್ಯೋದಿ ಅಚ್ಯುತ್ತನ್ಯಾಕ ವಾಮನ ಕಮ್ತಿ ಮತ್ತು ಮಾಧವಕಿಣಿ ಕಡಾ ಪಾಲಿನಲ್ಲಿ ವ್ಯಾಪಾರವಾಡಿದನಂತರ ಅವರಿಗೆ ನಷ್ಟವಾಗಿ ಆ ವ್ಯಾಪಾಟವನ್ನು ಮಾಧವಕಿಣಿಗೆ ವಹಿಸಿಕೊಟ್ಟರೂ ಆ ಮಾಧವನಿಗೆ ಆ ಅಂಗಡಿಯ ಬಾಬ್ತು ಹೊರಗೆ ಸಲತಕ್ಕ ಸಾಲಗಳು ತೀರ್ಮಾನವಮಾಡುವದೆ ವ ಹೊರಗಿನಿಂದ ವಸೂಲು ಪಡಕೊಳ್ಳುವದೆ ಅನಾನು ಕೂಲವಾದ ಸಂಬಂಧ ನನ್ನ ಅಣ್ಣ ಹನುಮಂತಕಿಣಿ ಕೂಡೆ ಹೇಳಿಕೊಂಡದಕ್ಕೆ ನನ್ನ ಅಣ್ಣ ಹನು ಮಂತಕಿಣಿರು ಆತನ ಒಟ್ಟಿಗೆ ನನ್ನನ್ನು ಸದರಿ ಅಂಗಡಿಯಲ್ಲಿ ಹಾಕಿ ಹೊರಗೆ ಸಲತಕ್ಕ ಹಣಗಳ ಕುರಿತು ನನ್ನಿಂದ ಜಾಮೀನು ಹೇಳಿಸಿದ್ದಲ್ಲದೆ ಸದರಿ ಅಂಗಡಿ ವ್ಯಾಪಾರಕ್ಕೆ ಅವಶ್ಯ ಇರುವ ಮಾಲ ಸಹಾ ನನ್ನ ಲೆಕ್ಕಕ್ಕೆ ಬರದು ಅವರ ಅಂಗಡಿಯಿಂದ ಕೊಟ್ಟು ನನಗೆ ಆ ಅಂಗಡಿಯಲ್ಲಿ ಕೂತ ಕೊಳ್ಳಿಸಿ ಸದರಿ ಮಾಧವಕಿಣಿಗೆ ಮುನಾಫೆಯಲ್ಲಿ ಸಂಬಳ ನಿಶ್ಚಯಿಸಿ ಕೊಡುವ ಕಾಹದ ಮೇಲೆ ಕೂತುಕೊಳ್ಳಿಸಿದ್ದಾಗಿರುತ್ತದೆ.

ನನ್ನ ತಿಳುವಳಿಕೆ ಶಿವಾಯ ಆ ಮಾಧವಕಿಣಿಯು ಸದರಿ ಅಂಗಡಿಯಿಂದ ಕಂಡಾಬಟ್ಟೆ ಹಣಗಳು ತೆಗದು ಖರ್ಚುಮಾಡಿದ್ದಲ್ಲದೆ ಸದರಿ ಅಂಗಡಿ ವ್ಯಾಪಾಟಕ್ಕೆ ತನ್ನ ಹೆಸರೇ ಹಾಕಿರುತ್ತಾನೆ ಹೊರತು, ಸದರಿ ವ್ಯಾಪಾರಕ್ಕೆ ಆತನು ಏನೊಂದು ಭಂಡಕ್ಕೆ ಹಾಕಿದ್ದಾಗಲಿ ಆತನ ತಂದೆ ಸಾಂತಯ್ಯ ಕಿಣಿರು ಆ ವ್ಯಾಪಾರಕ್ಕೆ ಏನೊಂದು ಕೊಟ್ಟದ್ದಾಗಲಿ ಇರುವದಿಲ್ಲ. ಮತ್ತು ಅದು ಅವನ ಕುಟುಂಬದ ವ್ಯಾಪಾರವೂ ಅಲ್ಲ. ಸಾಂತಯ್ಯಕಿಣಿರು ವೆಬ್‌ಸ್ಟರ್ ಮಾರ್ಕೆಟನಲ್ಲಿ ಪ್ರತ್ಯೇಕ ವ್ಯಾಪಾರ ಮಾಡಿಕೊಂಡಿರುತ್ತಿದ್ದರೆಂಬುದು ಜನಜನಿತವಾಗಿರುತ್ತದೆ. ಸದರಿ ಮಾಧವಕಿಣಿಯು ಮೃತಪಟ್ಟ ಕೂಡಲೆ ಅವನ ಸೊತ್ತುಗಳಿಗೆ ಹಕ್ಕುದಾರಳಾದ ಅವನ ಮ್ಯಾನರ ವಿಧವೆ ರಕ್ಷಣನ ಸದರಿ ಅಂಗಡಿಯ ಸೊತ್ತುಗಳ ಕುರಿತು ವಗೈರೆ ದಾವೆ ಮಾಡುವದೆ ಉದ್ಯುಕ್ತನಾಗಿ ಬಂದ ನಂತರ ಸಂಭಾವಿತ ಗೃಹಸ್ಥರಿದ್ದು ಸದರಿ ಅಂಗಡಿಯ ಲೆಕ್ಕಪತ್ರ ವಗೈರೆಯನ್ನು ತನಕಿ ನೋಡಿ ಆತನು ಪಾಲುಗಾರನಲ್ಲವೆಂತ ಸಮಾಧಾನಪಟ್ಟು ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟು ಕ್ರಮ ನಂಬ್ರ $\frac{486}{1914}$ನೆ ದಾವೆಯಲ್ಲಿ ಇತ್ಯರ್ಥಿನಿಯಮೋರ್ದು ತೀರ್ಪು ಆಗಿರುತ್ತದೆ.

ಆದದರಿಂದ ಸದರಿ ಅಂಗಡಿಗೆ ಬರತಕ್ಕ ಹಣಗಳನ್ನು ಸದರಿ ಅಂಗಡಿಯ ಸಾಲಗಾರರು ನನ್ನ ಸ್ವಾಧೀನ ಕೊಟ್ಟು ರಶೀದಿ ಪಡಿಯತಕ್ಕದ್ದು. ಇದಕ್ಕೆ ತಪ್ಪಿದರೆ ಅವರ ಮೇಲೆ ನಾನು ಮಾಡುವ ದಾವೆಯ ಖರ್ಚು ವ ನಷ್ಟಕ್ಕೆ ಅವರು ಜವಾಬ್ದಾರರಾಗಿರುವರು ಎಂಬದನ್ನು ಈ ಮೂಲಕ ತಿಳಿಸಿರುತ್ತೇನೆ.

ತಾ. 5—1—1915. ಗುಪ್ಪುರ ಸರ್ವೋತ್ತುಮ ಕಿಣಿ.

ಬೇಕಾಗಿರುತ್ತದೆ.

ಯವ್ವನ ಪ್ರಾಯದ ಕಾಫಿ ಯಸ್ಟೇಟಿನ ಚನ್ನಾಗಿ ಅನುಭೋಗ ಇರುವ ಮತ್ತು 50 ಯಾ 60 ಕೂಲಿ ಜನಗಳನ್ನು ಒದಗಿಸುವ ರೈಟರ್ ಈ ಕೆಳಗಿನ ವಿಳಾಸದವರಿಗೆ ಅವಶ್ಯವಿದೆ.

ಯಫ್. ಜೆ. ಪಾರ್ಟನ್,

ಶಿದ್ರುಬನ್ನು,

ಕೊಪ್ಪಾ ಪೋಸ್ಟ್, ಕಡೂರು ಡಿಸ್ಟ್ರಿಕ್ಟ್.

Notice.

In the Court of the District Munsiff of Coondapur

O. P No $\frac{104}{14}$

Manjamma alias Subbamma widow of Subbanna Madhyastha residing at Heraie Udipi Taluk } *Petitioner*

Take notice that the above petitioner has applied for a succession certificate to collect the debts of her deceased husband, and that the petition has been posted to 18—1—15 for trial. All persons having objections must appear either in person or by pleader and state their objections if any before the Court on or before the 18th Instant.

Coondapoor, 4—1—15.

K. Venkat Rau,
Pleader for petitioner.

Wanted

To lease from 15th January 1915. One bungalow and one small office. Combined rent about Rs. 75.

For Sale.

One pair good trotting bullocks Rs 250

Apply:— MESSRS VOLKART BROS' CURING WORKS.
Mangalore.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಸಂ. 1914ನೆ ಇಸವಿ ಕ್ರಮ ಅರ್ಜಿ ನಂಬ್ರ 146.

ಹಮ್ಮದೆ ಬ್ಯಾರಿ—ಬಾವಬ್ಯಾರಿ ಮಗ ಮಂಗಳೂರು ತಾಲೂಕು ಹರೇಕಳ ಮಾಗಣೆ ಅಡ್ಯಾರ ಗ್ರಾಮದಲ್ಲಿರುವವ ... ... } ಅರ್ಜಿದಾರ.

ಹತೀಜಮ್ಮ ... ... ರಸ್ಪೊಂಡೆಂಟಳು.

ಕಳದ 1914ನೇ ಇಸವಿ ಸಪ್ಟಂಬರ ತಾರೀಕು 24ರಲ್ಲು ಸದರಿ ಅಡ್ಯಾರ ಗ್ರಾಮದಲ್ಲಿರುವ ಅರ್ಜಿದಾರನ ಮಗ ಮೃತಪಟ್ಟ ಸ್ಯಾಬು ಬ್ಯಾರಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲು ಮಾಡುವ ಕುರಿತು ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕೆಂತ ಮೃತನ ತಂದೆಯಾದ ಅರ್ಜಿದಾರನು ಕೊಟ್ಟ ಮೇಲ್ಕಂಡ ಅರ್ಜಿಯನ್ನು ಇದೇ ಇಸವಿ ಜನವರಿ ತಿಂಗಳ ತಾ. 26ಕ್ಕೆ ತನಕಿಗೆ ಇಟ್ಟಿರುತ್ತದೆ. ಅದಕ್ಕೆ ಆಕ್ಷೇಪಣೆ ಇದ್ದವರು ತಮ್ಮ ಆಕ್ಷೇಪಣೆಗಳನ್ನು ಸದರಿ ತಾರೀಕಿನೊಳಗೆ [illegible] ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು. ತಾ. 7ನೇ ಜನವರಿ 1915.

ಯು. ವಾಮನನಾಯಕ್,
ಅರ್ಜಿದಾರನ ವಕೀಲ.

NOTICE.

Stany Brothers,

Candle Garden, Mangalore,

ಬಲ್ಮಠ ಕುದ್ರೆ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಆರಂಭದಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರ ವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ನ್ಯಾಯವಾದ ಕ್ರಯಕ್ಕೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ.

ಕಾಫಿ ಪುಡಿಯು ರಾತ್ಲು ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

Piedade Pinto,

Manager.

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯ ಪುಸ್ತಕವು

ಜೀವಿತಕಾಲದ ವರೆಗೂ ನಮ್ಮ ಶರೀರವನ್ನು ರೋಗಗಳು ಹತ್ತರ ಬಾರದೆ ಮಾಡಿಕೊಳ್ಳುವದೇ ನಮ್ಮ ಮೊಟ್ಟಮೊದಲ ಕರ್ತವ್ಯವು. ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನು ಪುನಃ ಹೇಗೆ ಪಡೆಯುವದು ಎಂಬ ವಿಷಯಗಳಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ. ಈ ಗ್ರಂಥವನ್ನು ಪ್ರಜೆಗಳ ಕ್ಷೇಮಾರ್ಥವಾಗಿ ಕೇಳಿದವರಿಗೆ ಕ್ರಯವೂ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವದು. ಈ ಪುಸ್ತಕವು ಒಂಭತ್ತು ಭಾಷೆಗಳಲ್ಲಿ ಛಾಪಿಸಲ್ಪಟ್ಟು ಇದುವರಿಗೆ ನಾಲ್ಕು ಲಕ್ಷ ಪ್ರತಿಗಳು ಕಳುಹಿಸಲ್ಪಟ್ಟಿರುವದೇ ಇದು ಎಷ್ಟು ಉಪಯೋಗಕರವಾದದ್ದು ಎಂಬುವದಕ್ಕೆ ಸಾಕ್ಷಿಯಾಗಿರುತ್ತದೆ.

ಕಲಿಯುಗದ ಕಾಮಧೇನು

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ. ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಿಮಾಡಿ ಹೆಚ್ಚು ಮಾಡುತ್ತದೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ. ಜೀರ್ಣಶಕ್ತಿಯನ್ನು ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗುವಂತೆ ಮಾಡುವದು. ಅಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1—0—0.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಯುನಿವರ್ಸಲ್ ಎಸ್ಸ್ಯುರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ಡ ಆಫೀಸು:—191, ಬೌ ಬಜಾರ್ ಕಲ್ಕತ್ತಾ.

ಸಹಾಯ! ಉತ್ಕ್ರಾಂತಿ!! ಸ್ವಹಿತಾರ್ಥ!!!

ಒಂದು ಇನ್ಶೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬುದನ್ನು ನೀವು ಅರಿತಿರುವಿರೋ?

ಇನ್ಶೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ. ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

		ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	ರೂ.	13,329—0—0	22,549—0—0
,, (ವಿವಾಹ)	,,	25,670—0—0	38,933—0—0
ಜುಮ್ಲಾ ಕೇಸುಗಳು	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	,,	10,000—0—0	50,000—0—0
(ಜನರಲ್) ರಕ್ಷಿತ ಧನ	,,	37,220—0—0	23,778—3—2

ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟದೆ. ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಪ್ ಎಶೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿ ತಿಯನ್ನಿಟ್ಟಿರುವುದು. 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4 ರೂ. 3,00,000ಗಿಂತಲೂ ಹೆಚ್ಚಿಗೆ ಭಾದ್ಯತೆಗಳನ್ನು ಕೊಟ್ಟದೆ. 5. ಫಂಡು 2,00,000 ರೂಪಾಯಿಗೆ ಹೆಚ್ಚದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8 ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10 ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ

"ಬೆಂಗಾಳೀ"—14ನೇ ಜನವರಿ 1914. ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬುದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು. ಸುಮಾರು 2 ಲಕ್ಷ ಭಾದ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟರುಗಳು ಬೇಕಾಗಿವೆ. ಎಲ್ಲಾ ವಿಧದ ಏಜಂನ್ಸಿ ಶರ್ತಗಳಿಗೆ—

ವಿಳಾಸ — **ಲಕ್ಷ್ಮಣ ರಾವ್ ಬ್ರದರ್ಸ್**

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಕನ್ನಡ ಲಿಪಿಯ ಪುಸ್ತಕಗಳು.

ಉಡುಪಿ ಶ್ರೀಕೃಷ್ಣ ಚರಿತ್ರೆ

ದಂಡಾಕಾರ, ಮೂರು ಸಂಧಿಗಳಿಂದ ಕೂಡಿರುವದು. ಪ್ರಥಮ ಸಂಧಿಯಲ್ಲಿ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠೆಮಾಡಿದ ವಿಷಯವೂ, ಎಂಟು ಜನ ಯತಿಗಳ ವಿಷಯವೂ, ಪ್ರತಿನಿತ್ಯ ನಡಿಯತಕ್ಕ ವಿಧಾನಗಳೂ, ಎರಡನೆಯ ಸಂಧಿಯಲ್ಲಿ ಮಕರಸಂಕ್ರಾಂತಿ ಉತ್ಸವ ವರ್ಣನೆಯೂ, ಮೂರನೇ ಸಂಧಿಯಲ್ಲಿ ವರುಷದ ಇತರ ದಿವಸಗಳಲ್ಲಿ ನಡಿಯತಕ್ಕ ಉತ್ಸವಾದಿಗಳೂ ವರ್ಣಿತವಾಗಿವೆ. ಬೆಲೆ 3 ಆಣೆ.

ಋ ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ. ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಆಶ್ವಲಾಯನ ಸಂಧ್ಯಾವಂದನ (ಮಂತ್ರಯದವರಿಗೆ) 3ಆಣೆ, ಯಜುರ್ವೇದ ಸಂಧ್ಯಾವಂದನ (ಮಂತ್ರಯದವರಿಗೆ) 2 ಆಣೆ; ಋ. ಬ್ರಹ್ಮಯಜ್ಞ ವೈಶ್ವದೇವ ಔಪಾಸನ 3 ಆಣೆ, ಪ್ರಾತರಾಹ್ನಿಕ ಪದ್ಧತಿ 3 ಆಣೆ, ದೇವಪೂಜಾ ಪದ್ಧತಿ 3 ಆಣೆ, ವಾಯುಸ್ತುತಿ 2 ಆಣೆ, ದ್ವಾದಶಸ್ತೋತ್ರ 2 ಆಣೆ, ವಿಷ್ಣುಸಹಸ್ರನಾಮ ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ, ವಿ ಸಹಸ್ರಕೃಷ್ಣಾಷ್ಟೋತ್ತರನಾಮಾವಳಿ 0-2-6, ಅಭಿಷೇಕ ಸೂಕ್ತಗಳು 0-2-0, ಶ್ರೀಸೂಕ್ತ ಪುರುಷಸೂಕ್ತ 0-1-0, ಸುಂದರ ಕಾಂಡ ಕಥಾಸಾರಸಂಗ್ರಹ ವಗೈರೆ 0-2-0; ಗಜೇಂದ್ರ ಮೋಕ್ಷ 0-1-6; ಗೋಪಿಕಾಗೀತೆ ವಗೈರೆ 0 1-0, ಪಾಂಡವಗೀತೆ ವಗೈರೆ 0-1-6, ಅಣುಭಾಷ್ಯ ವಗೈರೆ 0-0-9; ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0 2-0, ಪುರಂದರದಾಸರ ಕೀರ್ತನೆಗಳು 0-6-0, ಉದಯರಾಗ 0-4-0, ಹರಿಭಕ್ತಿಸಾರ 0-1-0; ಸ್ವಪ್ನಪದ ಮಧ್ವನಾಮ 0-1-6, ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ.

ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,

ಉಡುಪಿ,- ದ. ಕ.

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಆಗಾಗಲೇ ಬರೆಯಲು ಅಗತ್ಯವುಳ್ಳ

1915ನೇ ವರುಷದ ಪೊಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸೋಣಾಗುವ ಪ್ರೊಸೆಸ್ ಫೀಸು, ಭತ್ತೆ ದರಗಳು, ಕ್ರಿಮಿನಲ್ ಕೋರ್ಟು ಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋಣಾಗುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ಟ್ರಿಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ವಿಲ್ಲಾಮೆ, ಭಾಡಿಗೆ ಚೀಟು, ರಿಜಿಸ್ಟ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು ಶಕಗಳ ಮೊಕಾಬಿಲೆ ಪಟ್ಟಿ, ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು—ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ.

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ಗದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೇಟು ಬೂಕು—~~ವೆಲ್ವೆಟ್ ಸಹಿತ್ತಾ ಇದಕ್ಕೆ ಪ್ರತಿಯೊಂದಕ್ಕೆ ಆ 8~~

ಸಣ್ಣ ಸೈಜಿನ ಡೈರಿ ಕ್ರಯ ಪ್ರತಿ ಒಂದಕ್ಕೆ ಆಣೆ 4

ನಮ್ಮಲ್ಲಿ ತಯ್ಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ಬ್ಯಾಂಡು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ'

ವ್ಯಾಪಾರಸ್ಥರಿಗೂ ರಖಂ ತಕ್ಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ

ಡೈರಿಗಳು ಸಿಕ್ಕುವ ವಿಳಾಸ:— **ಶಾರದಾ ಛಾಪಖಾನೆ,** ರಥಬೀದಿ, ಮಂಗಳೂರು

ನಮ್ಮ ಡೈರಿಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವವು.

ಮೆಸ್ಸರ್ಸ್ ಕೊಟ್ಟಿಕಾರ ಬ್ರದರ್ಸ್, ಉಡುಪಿ	ಕೊಳ್ಳೂರ ಅಣ್ಣಪ್ಪಯ್ಯ, ಪುತ್ತೂರು
ಪ್ರಭಾಕರ ಪ್ರೆಸ್, ,,	ಎ. ವ. ರಾಮಕೃಷ್ಣಯ್ಯ, ಬಂಟ್ವಾಳ
ಸದಾನಂದ ಪ್ರೆಸ್, ,,	ಕ. ಪಿ. ರಾಮಕೃಷ್ಣ ರ್ಯಸಟ್ಟಾರು, ಕಾಸರಗೋಡು
ಬೆಳ್ಪುರೆ ನರಸಿಂಹ ಮಲ್ಯರು, ಪುತ್ತೂರು	ಗುಪ್ಪುರ ವಿಷ್ಣು ಪ್ರಭು, ಬಂಟ್ವಾಳ
	ಕೆ. ಅಪ್ಪಯ್ಯ ಮ. ಜನರಲ್ ಸ್ಟೋರ್, ಕಾರ್ಕಳ.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಒಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road BOMBAY

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಅಚ್ಚಿನಲ್ಲಿರುವುದು' ಅಚ್ಚಿನಲ್ಲಿರುವುದು'

ವೆಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಳ್ಯ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಪ್ರೀತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಠಗಳಿಂದ ಕೂಡಿರುವುದು.

ಕವಿ ಎಂಡ್ ಸನ್ಸ್,
ಮಂಗಳೂರು.

ಯುಕಲಿಪ್ಟಸ್ ತೈಲ.

ಮಹಾ ಅಮಣೆಂಟಗುತ್ತು ಸೀನಪ್ಪ ಶೇಡಿಯವರು ಈ ರೀತಿ ಬರೆಯುತ್ತಾರೆ:—ತಮ್ಮಲ್ಲಿಯ ಅತ್ಯುತ್ತಮವಾದ ಯುಕಲಿಪ್ಟಸ್ ತೈಲವೆಂಬ ಸರ್ವರೋಗನಿವಾರಣಾ ಔಷಧವನ್ನು ತರಿಸಿಕೊಂಡು ಹೆಂಗಸರು ಮಗುಹೆರ್ಯುವ ಕಾಲದಲ್ಲಿ ಆಗುವ ಕಠಿಣ ವಿಧದ ಹೊಟ್ಟೆನೋವಿಗೆ ಉಪಯೋಗಿಸಿದ್ದಲ್ಲಿ ಅದು ಅನೇಕ ಹೆಂಗಸರ ಹೊಟ್ಟೆನೋವನ್ನು ನಿಮಿಷಮಾತ್ರದಲ್ಲಿ ಗುಣಪಡಿಸಿರುತ್ತದೆ. ನನ್ನ ತಂಗಿಗೆ ಕೆಲವು ವರುಷಗಳಿಂದ ಇದ್ದ ಕಿವಿನೋವು ಇದರಿಂದ 5 ದಿವಸಗಳಲ್ಲಿ ಪೂರ್ಣ ಗುಣವಾಗಿರುತ್ತದೆ. ತೀರಾ ಬಡವರು ಕೂಡಾ ಕೊಡಕೂಡುವ ಈ ಅಲ್ಪ ಬೆಲೆಯ ತೈಲವು ಸಾವಿರಾರು ರೂಪಾಯಿಯ ಬೆಲೆಬಾಳತಕ್ಕಂಥಾದ್ದಾಗಿದೆ. ಜ್ವರಗಡ್ಡೆ, ಮಲೆಜ್ವರ, ಶೀತ, ವಾತ, ಸಣ್ಣ ಮಕ್ಕಳ ಜ್ವರ, ಕೆಮ್ಮು, ದೊಡ್ಡವರ ಬಿಳುಪು, ಮೋಹ ಮೊದಲಾದ ರೋಗಗಳಿಗೆ ಸಂಜೀವಿನಿಯೋಪಾದಿ ಇರುತ್ತದೆ. ಇದನ್ನು ಉಪಯೋಗಿಸಿದ ಮಕ್ಕಳಿಗೆ ಬಾಲಾರಿಷ್ಟ ರೋಗವು ನಿಜವಾಗಿ ಕೊಲಗಿ ಹೋಗುತ್ತದೆಂಬ ಸಂಗತಿ ನನ್ನ ಅನುಭವ ಸಿದ್ಧವಾಗಿರುತ್ತದೆ ಇತ್ಯಾದಿ, ಸರ್ವ ರೋಗಗಳಿಗೆ ದಿವ್ಯೌಷಧವಾದ ಈ ತೈಲದ ಕ್ರಯ ಟಿನ್ನ್ ಸೀಸೆಗೆ 6 ಆಣೆ ವಿ. ಪಿ ಬೇರೆ ಡಜನ್ ಸೀಸೆಗೆ ವಿ. ಪಿ. ಸಹಿತ ರೂ. 3 12ಆಣೆ, ಅನುಪಾನಪತ್ರಿಕೆ ಸೀಸೆಯೊಂದಿಗೆ.

ಇಕ್ಲಿಪ್ಸ ಬಾಮ್.

ವಾತ, ಸಂದುವಾತ, ಪಕ್ಷವಾತ, ಶಿರೋಭಾರ, ಎದೆನೋವು, ಹಲ್ಲುನೋವು, ಗಾಯ ಕಜ್ಜಿ, ನಾಯಿಕಡಿತ, ಹುಳಮೇಯುವದು, ಆನೆಕಾಲು, ಮೊದಲಾದ ರೋಗಗಳಿಗೆ ಚಿಕಿತ್ಸಕವಾಗಿ ಉಪಯೋಗಿಸಬಹುದಾದ ಈ ಬಾಮ್ ಸ್ವಲ್ಪ ಕಾಲದಲ್ಲಿಯೇ ಗುಣಪಡಿಸುವುದು. ಕ್ರಯ ಕರಡಿಗೆ 1ಕ್ಕೆ 8 ಆಣೆ ವಿ. ಪಿ. ಬೇರೆ. ಡಜನ್ ಕರಡಿಗೆಗೆ ರೂ 4—12—0

ವಿಳಾಸ:— ದಿ. ಇಕ್ಲಿಪ್ಸ್ ಏಜನ್ಸಿ, ಕಂಕನಾಡಿ. ದ

ಏಜಂಟರು:— ಸುಗಂಧವಿಲಾಸ

ESTABLISHED JULY 1906.

THE CANARA BANK, LIMITED, MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	217,400—0—0
Paid up Capital	192,400—0—0
Deposits	455,326—7—10
Reserve Fund	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/.

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge.

Canara Bank Ltd.,
Mangalore, 1st. December 1914.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,,	225,000—0—0
ಪ್ರತಿಜ್ಞಾತ ಮೂಲ ಧನವು ,,	217,400—0—0
ಜಗತ ಮೂಲ ಧನವು ,,	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	455,326—7—10
ರಕ್ಷಿತ ಧನವು	27,590—12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲೀಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

[illegible] ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೆಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯುಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ಪ್ರಿಯವ್ರತೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ತಮ್ಮ ವಿಳಾಸ:— [illegible]
[illegible]

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 8ನೇ ಜನವರಿ 1915

ಸಮಾಜ ಸುಧಾರಣೆಯು.

ಜಾತಿ ಕುಲ ಭೇದಗಳ ವಿಪರ್ಯದಿಂದ ಶೀರ್ಣವಾಗಿರುವ ಭಾರತೀಯ ಸಮಾಜವನ್ನು ಒಂದೇ ಜನಾಂಗವಾಗಿ ಒಟ್ಟು ಕೂಡಿಸಲು ಪ್ರಯತ್ನಿಸುತ್ತಿರುವ ಭಾರತೀಯರ ಸಾಮಾಜಿಕ ಪರಿಷದವು ಮದ್ರಾಸಿನಲ್ಲಿ ಕಳೆದ ತಿಂಗಳ ... ಕೂಡಿತು. ಇಷ್ಟು ವರುಷಗಳಲ್ಲಿ ರಾಷ್ಟ್ರೀಯ ಸಭೆಯು ಕೂಡಿದನಂತರ ಸಾಮಾಜಿಕ ಮತ್ತು ಔದ್ಯೋಗಿಕ ಪರಿಷದಗಳು ಕೂಡುವದಿತ್ತು. ಈ ವರುಷ ಈ ಪರಿಷದಗಳು ಮೊದಲು ಕೂಡಿ, ನಂತರ ರಾಷ್ಟ್ರೀಯ ಸಭೆಯು ... ದ್ದರಿಂದ ಈ ಮಹಾ ಸಭೆಗಳ ವಿಶೇಷತ್ವಕ್ಕೆ ತಕ್ಕಂತೆ ಈ ವರುಷದಲ್ಲಿ ಈ ಪರಿಷದಗಳು ... ಗಿದವೆಂದೆನ್ನಬೇಕು. ಇದರಿಂದ ರಾಷ್ಟ್ರೀಯ ಸಭೆಯ ಮುಖ್ಯ ಚಾಲಕರಾಗಿರುವ ಪ್ರಜಾ ಮುಂದಾಳುಗಳಿಗೆ ಈ ಪರಿಷದಗಳಿಗೆ ಒಂದು ಕಾರ್ಯಭಾಗ ... ತುಂಬಾ ಅವಕಾಶ ದೊರಕಿತು. ಮುಂದಿನ ವರುಷಗಳಲ್ಲಿ ಸಹ ಈ ಕ್ರಮದಲ್ಲಿಯೇ ಈ ವಾರ್ಷಿಕ ಮಹಾ ಸಭೆಗಳು ಕೂಡುವುದುಚಿತವೆಂತ ತೋರುತ್ತದೆ.

ಸಾಮಾಜಿಕ ಪರಿಷದವು ಮೈಸೂರಿನ ಯುವರಾಜರವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಸಮಾಜ ಸುಧಾರಣೆಯ ಪ್ರಯತ್ನಗಳಲ್ಲಿ ಶ್ರೇಷ್ಠಪದವಿಗಳಲ್ಲಿರುವ ಯುವರಾಜರವರಂಥಾ ಮಹನೀಯರು ಭಾಗಿಗಳಾಗುವುದರಿಂದ ಈ ಪ್ರಯತ್ನಗಳ ನೆರವೇರುವಿಕೆಯು ಶೀಘ್ರದಲ್ಲಿ ಸಾಧ್ಯವಾಗುವುದು. ನಮ್ಮ ದಕ್ಷಿಣ ದೇಶಗಳಲ್ಲಿ ಯುವರಾಜರವರು ತಮ್ಮ ಪದವಿಯ ಜವಾಬ್ದಾರಿಯನ್ನೂ, ಕರ್ತವ್ಯಗಳನ್ನೂ ಅರಿತು ವರ್ತಿಸಿದ ರೀತಿಯಲ್ಲಿಯೇ ಸಂಪನ್ನ ವರ್ಗದವರಾದ ಇತರ ಆಶ್ರಿತ ರಾಜರುಗಳೂ, ಜಮಿದಾರರೂ, ವರ್ಗದಾರರೂ ವರ್ತಿಸುವುದು ಅಗತ್ಯವಾಗಿದೆ. ಈ ಎಲ್ಲಾ ಪ್ರಯತ್ನಗಳಿಗೆ ಮುಖ್ಯ ಅಭ್ಯಂತರವಾಗಿರುವ ಸಂಪನ್ನ ವರ್ಗದವರ ಅಭಾವವು ... ದೇಶದ ಶುಭವು ಬೇಗನೆ ಕೈಗೂಡಲು ಅವಕಾಶ ದೊರಕುವುದು. ಪ್ರಕೃತ ಜನಾಂಗ ಐಕ್ಯದ ಸಾಧನೆಯು ಎಲ್ಲಾ ವರ್ಗದವರಲ್ಲಿಯೂ ಸಮಗ್ರವಾಗಿ ನಡೆಯುವದಿಲ್ಲವಾದ್ದರಿಂದ ವಾರ್ಷಿಕ ಮಹಾ ಸಭೆಗಳಲ್ಲಿ ಈ ಪರಿಷದಗಳಿಂದ ನೆರವೇರಿದ ಫಲಗಳನ್ನು ಪ್ರತ್ಯೇಕಿಸಿ ಸ್ಪಷ್ಟವಾಗಿ ಪ್ರತ್ಯಕ್ಷ ತೋರಿಸಿಕೊಡುವುದು ದುರ್ಲಭವಾಗಿದೆ. ಈ ರೀತಿ ಪ್ರತ್ಯಕ್ಷ ಫಲಪ್ರಾಪ್ತಿ ವಿಶೇಷವಾಗಿ ಇಲ್ಲದೆ ಹೋದರೂ ಸಮಾಜದ ಮನೋಭಾವವು ಏನನ್ನು ಸೂಚಿಸುತ್ತಿರುವುದೆಂಬುದನ್ನು ನಿರ್ಧರಿಸಿಕೊಳ್ಳಲು ಈ ಪರಿಷದಗಳು ಸಹಾಯಕವಾಗಿರುವವು.

ಸಾಮಾಜಿಕ ಪರಿಷದದ ಆಮಂತ್ರಣ ಉಪಸಭೆಯ ಅಧ್ಯಕ್ಷರಾದ ಮದ್ರಾಸು ಹೈಕೋರ್ಟ ವಕೀಲ ರಾ। ಶ್ರೀನಿವಾಸ ಅಯ್ಯಂಗಾರರವರ ಭಾಷಣದಲ್ಲಿಯೂ ಪರಿಷದದ ಅಧ್ಯಕ್ಷರಾದ ಯುವರಾಜರವರ ಭಾಷಣದಲ್ಲಿಯೂ ಲಕ್ಷ್ಯಕ್ಕೆ ತಂದುಕೊಳ್ಳಬೇಕಾದ ಹಲವು ವಿಷಯಗಳಿವೆ. ಜಾತಿಭೇದ, ಇದರಿಂದ ಸಮಾಜದಲ್ಲಿ ನಾಟಿರುವ ಅಂತಃಕಲಹಗಳಿಂದ ಜನಾಂಗದ ಐಕ್ಯವು ಎಂದೂ ಕೈಗೂಡದ್ದರಿಂದ ಜಾತಿಭೇದದ ... ಗಿದು ಹೋದ ಶೃಂಕಲೆಯಿಂದ ಉಂಟಾಗುತ್ತಿರುವ ಬೇನೆಯನ್ನು ಕುರಿತು ಅಯ್ಯಂಗಾರರವರು ವಿಶೇಷವಾಗಿ ತಮ್ಮ ಭಾಷಣದಲ್ಲಿ ಪ್ರಲಾಪಿಸಿರುವರು. ಇಂಥಾ ಪ್ರಲಾಪದ ... ರಿಶೀಲನೆಯು ನಮ್ಮ ಕಡೆಗಳಲ್ಲಿ ಉಚಿತವೋ? ಕಳೆದ ೫೦ ವರುಷಗಳಿಂದ ಜಾತಿ ... ತಿ ಎಂತ ಕೂಗುತ್ತ ಕೋರ್ಟುಗಳಲ್ಲಿ ಹೋರಾಡುತ್ತಿರುವ ಮುಂದಾಳುಗಳಿರುವ ... ಪ್ರಾಂತ್ಯಗಳಲ್ಲಿ ವಶಿಷ್ಟ, ಶಕ್ತಿ, ಪರಾಶರ, ವ್ಯಾಸಮುನಿಗಳ ಕುಲೋತ್ಪತ್ತಿಗಳನ್ನು ... ಓದಿಕೊಂಡು ಜಾತಿಭೇದವನ್ನು ತ್ಯಜಿಸಿ ಬಿಡಬೇಕೆಂಬ ರಾ। ಅಯ್ಯಂಗಾರರವರ ಮಾತುಗಳಿಂದ ಇಲ್ಲಿ ಉತ್ಪಾತಗಳು ಉಂಟಾಗಲಿಕ್ಕಿಲ್ಲವೇ? ಆದರೆ ಕಾಲಪ್ರವಾಹಕ್ಕೆ ... ವು ತುತ್ತಾಗಿ ಹೋಗದಂತೆ ಬುದ್ಧಿವಂತರ ಅನುಭವದ ಮಾತುಗಳನ್ನು ಲಕ್ಷ್ಯಕ್ಕೆ ತಂದುಕೊಂಡು ಕಾಲಪ್ರಗತಿಯನ್ನು ತಿಳಿದು ಯೋಚಿಸಿ ನಡಕೊಳ್ಳುವುದು ಉಚಿತವಾದ್ದರಿಂದ ಸಮಾಜ ಸುಧಾರಕರ ಮಾತುಗಳು ಏನೆಂತ ಆಗಿಂದಾಗ್ಯೆ ಅರಿತುಕೊಳ್ಳುವುದು ನಮ್ಮ ಕ್ಷೇಮಾಭ್ಯುದಯಗಳಿಗೆ ಅಗತ್ಯ. ಆಯಾ ಜಾತಿಯವರು ಸಹಪಂಕ್ತಿ ಭೋಜನಗಳನ್ನು ಮಾಡುವುದರ ಮೂಲಕ ಉಂಟಾಗುವ ಸುಧಾರಣಾ ಫಲದಿಂದ ಶ್ರೀನಿವಾಸ ಅಯ್ಯಂಗಾರರವರು ತೃಪ್ತಿ ಪಡುವದಿಲ್ಲ. ಜಾತಿಭೇದಗಳನ್ನು ಲೆಕ್ಕಿಸದೆ ವಧುವರರುಗಳ ಯೋಗ್ಯತೆಗಳನ್ನು ನೋಡಿಕೊಂಡು ವಿವಾಹಗಳು ಆಗಬೇಕೆಂದು ಅಯ್ಯಂಗಾರರವರು ಹಟವಿಡಿದಿರುವರು. ಈ ಬಗ್ಗೆ ಒಂದೆರಡು ವರುಷಗಳ ಹಿಂದೆ ಶ್ರೇಷ್ಟ ನ್ಯಾಯನಿರ್ಮಾಣ ಸಭೆಯಲ್ಲಿ ಬಿದ್ದು ಹೋದ ಬಹುಮಾನಪಟ್ಟ ಭೂಪೇಂದ್ರನಾಥ ಬಾಸುರವರು ತಯ್ಯಾರಿಸಿದ್ದ ವಿವಾಹಗಳ ಕಾನೂನು ಮಸೂದೆಯನ್ನು ಜ್ಯಾರಿಗೆ ತರುವುದು ಅಗತ್ಯವೆಂತ ಸೂಚಿಸಿರುತ್ತಾರೆ. ಸಾಮಾಜಿಕ ವಿಷಯಗಳಲ್ಲಿ ಸರಕಾರದವರು ಪ್ರಕೃತ ಹೇಗೆ ವರ್ತಿಸಬೇಕೆಂದು ಅಯ್ಯಂಗಾರರವರ ಸೂಚನೆ ಇರುವುದು. ಪ್ರಜೆಗಳಿಂದ ಆರಿಸಲ್ಪಟ್ಟ ಪ್ರಜಾಪ್ರತಿನಿಧಿಗಳು ಪ್ರಕೃತ ಸರಕಾರದ ನ್ಯಾಯ ನಿರ್ಮಾಣ ಸಭೆಗಳಲ್ಲಿರುವರು. ಯಾವ ಆಚಾರವನ್ನಾದರೂ ಒತ್ತಾಯದಿಂದ ಪ್ರಜೆಗಳು ಆಚರಿಸುವಂತೆ ಮಾಡುವ ಉದ್ದೇಶಗಳಿಲ್ಲದ ವಿಧಿಗಳನ್ನು ಈ ಪ್ರತಿನಿಧಿಗಳು ಬಹುಪಕ್ಷವಾಗಿ ಸರಕಾರದವರ ಮುಂದಿರಿಸಿದರೆ ಸರಕಾರದವರು ಇಂಥಾ ವಿಧಿಗಳನ್ನು ವಿರೋಧಿಸದೆ ಮಂಜೂರು ಮಾಡಬೇಕೆಂದು ಸಾಮಾಜಿಕ ಪರಿಷದದ ಆಮಂತ್ರಣ ಉಪ ಸಭೆಯ ಅಧ್ಯಕ್ಷರವರು ವಿಜ್ಞಾಪಿಸಿಕೊಂಡಿರುತ್ತಾರೆ. ಋತುಮತಿಗಳಾದ ಬಳಿಕ ಕನ್ನೆಯರಿಗೆ ವಿವಾಹವಾದರೆ ಅಂಥಾ ವಿವಾಹಗಳು ಕಾಯಿದೆಶೀರಾಗಿವೆಯೆಂತ ನಿರ್ಧರಿಸಲು ಅಗತ್ಯವುಳ್ಳ ಕಾನೂನು ಮಸೂದೆಯು ದಕ್ಷಿಣ ಪ್ರಾಂತ್ಯಗಳಲ್ಲಿ ಬೇಕಾಗಿರುವುದೆಂತಲೂ ರಕ್ಷಕರಿಲ್ಲದ ಬಾಲೆಯರನ್ನು ರಕ್ಷಿಸುವ ಬಗ್ಗೆ ಏರ್ಪಡಿಸಿರುವ ಹಾಗಿನ ಕ್ರಿಮಿನಲ್ ಕಾನೂನುಗಳ ತಿದ್ದುಪಡಿಯನ್ನು ಈ ಪರಿಷದದಲ್ಲಿ ಸರಿಯಾಗಿ ವಾದಿಸಬೇಕೆಂತಲೂ ರಾ। ಶ್ರೀನಿವಾಸ ಅಯ್ಯಂಗಾರರವರು ಸಭಿಕರನ್ನು ವಿಜ್ಞಾಪಿಸಿಕೊಂಡರು.

ಪರಿಷದದ ಅಧ್ಯಕ್ಷರಾದ ಮೈಸೂರಿನ ಯುವರಾಜ ಸಾಹೇಬರವರು ಸಮಾಜ ಸುಧಾರಣೆ ಎಂದರೆ ಏನೆಂಬುದಾಗಿ ವಿವರಿಸಿ ನಮ್ಮ ಈಗಿನ ಸಮಾಜಸ್ಥಿತಿ ಕುರಿತು ವಿಚಾರಭರಿತವಾದ ಭಾಷಣವನ್ನು ಮಾಡಿರುತ್ತಾರೆ. ಸಮಾಜ ಸ್ಥಿತಿಯನ್ನು ಒಳ್ಳಿತಾಗಿ ಮಾಡುವ ಉದ್ದೇಶವುಳ್ಳ ಕಾರ್ಯಸಾಧನೆಯೆಲ್ಲವು ಸಮಾಜ ಸುಧಾರಣೆಗೆ ಸೇರಿದೆಂದು ಯುವರಾಜರವರು ಅಪ್ಪಣೆಕೊಡಿಸಿರುವರು. ಅನಂತರ ನಮ್ಮ ಸಮಾಜ ಸ್ಥಿತಿಯನ್ನು ಪಾಶ್ಚಾತ್ಯರ ಸ್ಥಿತಿಯೊಂದಿಗೆ ಸರಿಹೋಲಿಸಿ ಭಾರತೀಯ ಸಮಾಜದ ದೀನ ಸ್ಥಿತಿಯನ್ನು ವಿವರಿಸಿ ಹೇಳಿರುವರು. ಸಮಾಜ ಉದ್ಧರಣೆ ಬಗ್ಗೆ ನಡಿಯುವ ಪ್ರಯತ್ನಗಳು ಪ್ರಕೃತ ಬಹಳ ಅಲ್ಪವಾಗಿರುವುದರಿಂದ ಇವುಗಳನ್ನು ವ್ಯವಸ್ಥೆಗೊಳಿಸಿ ಇನ್ನಷ್ಟು ಹೆಚ್ಚಾದ ಚೇತನದಿಂದ ಇವನ್ನು ನಡೆಸಬೇಕೆಂದು ಸೂಚಿಸಿ ಸಾಮಾನ್ಯ ಶಿಕ್ಷಣ, ಸ್ತ್ರೀ ಶಿಕ್ಷಣಗಳ ಅವಶ್ಯಕತೆಯನ್ನು ರುಜುಪಡಿಸಿರುವರು. ದೇಶದ ಸಂಪನ್ನತೆಗೆ ಬೇಕಾದ ಯಥಾರ್ಥವಾದ ಬಂಡವಾಳವು ಆಯಾ ದೇಶಗಳ ಮಾತೃವರ್ಗವಾಗಿದೆಂದು ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರೊಬ್ಬರ ಮಾತುಗಳನ್ನು ಸಭಿಕರ ನೆನಪಿಗೆ ತಂದು ಇಂಥಾ ಭಂಡವಾಳದ ಪ್ರಯೋಜನವು ನಮಗೆ ತಕ್ಕ ರೀತಿಯಲ್ಲಿ ಪ್ರಾಪ್ತವಾಗುವಂತೆ ನಮ್ಮ ಬಾಲಿಕೆಯರಿಗೆ ಉಪಯುಕ್ತ ಶಿಕ್ಷಣವನ್ನು ಕೊಡಿಸಬೇಕೆಂದು ಹೇಳಿರುವರು. ಸಮಾಜ ಸುಧಾರಣೆಯನ್ನು ಕಾರ್ಯತಃ ಹೇಗೆ ಸಾಧಿಸಬಹುದೆಂದು ಯುವರಾಜರವರು ಅಪ್ಪಣೆ ಕೊಡಿಸಿದ ಉಪಾಯಗಳಲ್ಲಿ ಕೆಲವು ಯಾವದಂದರೆ—ಪುರೋಹಿತವರ್ಗದವರಲ್ಲಿ ಜನಸಾಮಾನ್ಯರಿಗೆ ವಿಶೇಷ ಭರವಸೆಯು ಇರುವುದು. ಈಗ ಈ ವರ್ಗದವರು ಹೊಂದುವ ಶಿಕ್ಷಣವು ಅಪೂರ್ಣವಾಗಿರುವುದು. ದೇಶದ ಆಯಾ ಕಡೆಗಳಲ್ಲಿ ಪಂಡಿತರು ಶಿಕ್ಷಣವನ್ನು ಹೊಂದುವ ಸಂಸ್ಕೃತ ಕೊಲೇಜುಗಳಿವೆ. ಸಂಸ್ಕೃತ ವಿದ್ಯಾಭ್ಯಾಸದೊಡನೆ ದೇಶದ ಈಗಿನ ವಿದ್ಯಮಾನಗಳ ಮಾಹಿತಿಯು ಇವರಲ್ಲಿ ಉಂಟಾಗುವಂತೆ ಮೆಟ್ರಿಕ್ಯುಲೇಷನ್ ಕ್ಲಾಸಿನ ವರೆಗಿನ ಶಿಕ್ಷಣವನ್ನು ಈ ಸಂಸ್ಕೃತ ಕೊಲೇಜುಗಳ ವಿದ್ಯಾರ್ಥಿಗಳಿಗೆ ಕೊಡಿಸಬೇಕು. ಆಗ್ಯೆ ಈ ಪಂಡಿತರಿಂದಲೂ ಇವರಲ್ಲಿ ಪುರೋಹಿತರಾಗುವವರಿಂದಲೂ ಸುಧಾರಣೆಗೆ ಬೇಕಾದ ಸಹಕಾರವು ದೊರಿಯುವುದು.

ಪಂಡಿತರ ಪರಿಷದಗಳನ್ನು ಆಗಿಂದಾಗ್ಯೆ ಕೂಡಿಸಿ ಶಾಸ್ತ್ರಗಳ ಯಥಾರ್ಥವಾದ ವಿಚಾರಗಳನ್ನು ಇವರ ಮೂಲಕ ನಿಧಾನಿಸಿಕೊಳ್ಳುವುದು ಯುವರಾಜರವರು ಹೇಳಿದ ಮತ್ತೊಂದು ಸೂಚನೆಯಾಗಿರುವುದು. ಸಮಾಜದ ಎಲ್ಲಾ ವರ್ಗದವರಲ್ಲಿಯೂ ಸಂಸ್ಕೃತದ ಮಾಹಿತಿಯು ಹಬ್ಬುವಂತೆ ಪ್ರಯತ್ನ ಪಡಬೇಕು. ... ಇವರಲ್ಲಿ ಶಾಸ್ತ್ರ ... ರವು ಸರಿಯಾಗಿ ಉಂಟಾಗುವಂತೆ ನಮ್ಮ ಪುರಾತನ ಸಂಸ್ಕೃತ ಗ್ರಂಥಗಳನ್ನು ದೇಶಭಾಷೆಗಳಲ್ಲಿ ... ಬೇಕೆಂಬುದು ಯುವರಾಜರವರ ... ದು ಸೂಚನೆಯಾಗಿರು

ದು. ಸುಧಾರಣೆಗೆ ಬೇಕಾದ ಸಾಮಾನ್ಯ ಶಿಕ್ಷಣ ಪ್ರಯತ್ನಗಳನ್ನು ಹೀಗೆ ವರ್ಣಿಸಿ ಸಮಾಜ ಸಂಸ್ಕರಣೆಯನ್ನು ಮೂರು ವಿಧಾನಗಳಲ್ಲಿ ಪ್ರತ್ಯೇಕಿಸಿ ಸಾಧಿಸಬೇಕೆಂದು ಯುವರಾಜರವರು ಅಪ್ಪಣೆ ಕೊಡಿಸಿರುತ್ತಾರೆ ಮೇಲು ಜಾತಿಯವರು ತಮ್ಮೊಳಗೆ ಸಹಪಂಕ್ತಿ ಭೋಜನಗಳನ್ನು ಮಾಡುವುದು, ಬಾಲವಿವಾಹ ಪದ್ಧತಿಯನ್ನು ನಿಲ್ಲಿಸುವುದು. ವಿದೇಶಯಾತ್ರೆ, ಒಂದೇ ಜಾತಿಯ ಶಾಖೆಗಳೊಳಗೆ ವಿವಾಹಗಳು ನಡೆಯುವುದು ಮತ್ತು ವಿವಾಹಗಳ ಖರ್ಚನ್ನು ಕಡಮೆ ಮಾಡುವುದು ಈ ಕಾರ್ಯ ಪ್ರಯತ್ನಗಳು ಒಂದನೇ ವಿಧಾನವನ್ನು ಒಳಕೊಂಡಿವೆ ವಿಧವಾ ವಿವಾಹ, ಜಾತಿಗಳನ್ನು ಒಂದಾಗಿ ಮಾಡುವುದು, ಪತಿತರ ಉದ್ಧರಣೆ ಮೊದಲಾದವುಗಳು ಎರಡನೇ, ಮತ್ತು ಮೂರನೇ ವಿಧಾನಗಳೆಂತ ಪ್ರತ್ಯೇಕಿಸಲ್ಪಟ್ಟಿರುವವು. ಈ ವಿಧಾನಗಳ ಪ್ರಕಾರ ಕಾರ್ಯ ಕ್ರಮಗಳ ಪಟ್ಟಿಯನ್ನು ಈ ಪರಿಷದದ ಉಪಸಭೆಯೊಂದು ಪ್ರಕಟಿಸ ಬೇಕು ಆಗ್ಯೆ ಈ ವಿಧಾನಗಳಿಗೆ ಅನುಕೂಲವಿದ್ದಂತೆ ವರ್ತಿಸುವವರು ಯಾರ್ಯಾರೆಂದು ನಿರ್ಧರಿಸಿಕೊಂಡು ಸಂಸ್ಕರಣೆಯ ಪ್ರಯತ್ನಗಳನ್ನು ಕ್ರಮದಿಂದ ಮಾಡಲು ಅವಕಾಶ ದೊರಕ್ಕುವುದು. ವರುಷಾಂತ್ಯದಲ್ಲಿ ಪರಿಷದವು ಕೂಡುವಾಗ ಆಯಾ ಪ್ರಾಂತ್ಯಗಳ ವೃತ್ತಾಂತಗಳನ್ನು ಸ್ಪಷ್ಟವಾಗಿ ತಿಳಿಯಲು ಸಹ ಅನುಕೂಲವಾಗುವುದು

ಸಮಾಜ ಸುಧಾರಣೆಯ ಚಟುವಟಿಕೆಯು ಸಾಮಾಜಿಕ ಪರಿಷದದಲ್ಲಿ ಪೂರ್ಣಗೊಳ್ಳುವ ಮೊದಲು ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿಗಳವರು ಇತ್ತಲಾಗೆ ಮದ್ರಾಸು ನ್ಯಾಯನಿರ್ಮಾಣ ಸಭೆಯ ಮುಂದಿರಿಸಿದ ಪ್ರೌಢ ವಿವಾಹದ ಕಾನೂನು ಮಸೂದೆಯನ್ನು ಆದರಿಸಿ ಒಂದು ನಿರ್ಣಯವು ಸಭಿಕರಿಂದ ಮಂಜೂರುಮಾಡೋಣಾಗಿದೆ ಇನ್ನು ಕೆಲವು ಸಾಮಾನ್ಯ ನಿರ್ಣಯಗಳನ್ನು ಸಭೆಯಲ್ಲಿ ಮಂಜೂರು ಮಾಡಿ ಸಾಮಾಜಿಕ ಪರಿಷದವು ಮುಗಿಯಿತು

ಮದ್ರಾಸು ಗವರ್ನರ ದೊರೆಗಳವರೂ ನಿರಾಶ್ರಿತ ಜನಸಹಾಯಕ ಸಂಘವೂ.

೧೯೧೫ನೇ ವರುಷದ ಮೊದಲನೆಯ ದಿನವು ಈ ಸಂಸ್ಥಾನದ ನಿರಾಶ್ರಿತ ಜನರಿಗೆ ಶುಭವನ್ನು ಸೂಚಿಸುವ ವಿಶೇಷ ದಿನವಾಗಿತ್ತೆಂಬುವನ್ನು ತಿಳಿಸಲು ಸಂತೋಷಪಡುತ್ತೇವೆ. ಮುಂಬಯಿ ಸಂಸ್ಥಾನದಲ್ಲಿ ಆ ಸಂಸ್ಥಾನದ ಗವರ್ನರ್ ದೊರೆಗಳಾಗಿದ್ದ ಸಿಂಡ್ಹೆನ್‌ಹಾಮ್ ಪ್ರಭುಗಳ ಆದರಣೆಯನ್ನು ಹೊಂದಿ ಮುಂಬಯಿಯ ಸಂಸ್ಥಾನದ ನಿರಾಶ್ರಿತ ಜನ ಸಹಾಯಕ ಸಂಘಕ್ಕೆ ವಿಶೇಷ ಪ್ರೋತ್ಸಾಹವು ದೊರಕಿತು. ಇದರಿಂದ ಆ ಪ್ರಾಂತ್ಯಗಳಲ್ಲಿ ಈ ಪ್ರಾಂತ್ಯಗಳಿಗಿಂತ ಆ ಸಂಘದವರು ಪತಿತರ ಉದ್ಧರಣೆಯಲ್ಲಿ ಹೆಚ್ಚಿನ ಸಾಹಸವನ್ನು ನಡೆಸಲು ಸಮರ್ಥರಾದರು. ಸಿಂಡ್ಹೆನ್‌ಹಾಮ್ ಪ್ರಭುಗಳವರು ಈ ಸಂಘದ ಪರವಾಗಿ ದಯಾಭಾವವನ್ನು ತೋರಿದಂತೆಯೇ ನಮ್ಮ ಸಂಸ್ಥಾನಾಧಿಪರಾದ ಪೆಂಟಲೆಂಡ್ ಪ್ರಭುಗಳು ಮದ್ರಾಸು ಸಂಸ್ಥಾನದ ನಿರಾಶ್ರಿತಜನ ಸಹಾಯಕ ಸಂಘದ ಪರವಾಗಿ ತಮಗಿರುವ ಸಹಾನುಭೂತಿಯನ್ನು ಕಾರ್ಯತಃ ವ್ಯಕ್ತಗೊಳಿಸುತ್ತಿರುವರು ಈ ತಿಂಗಳ ಒಂದನೇ ತಾರೀಕಿನ ದಿನ ಮದ್ರಾಸಿನಲ್ಲಿ ನಿರಾಶ್ರಿತ ಜನಸಹಾಯಕ ಸಂಘದ ವರುಷಾವದಿ ಸಭೆಯು ಕೂಡಿತ್ತು. ಗತ ವರುಷದ ತಮ್ಮ ವೃತ್ತಾಂತವೆಲ್ಲವನ್ನು ಈ ಸಂಘದವರು ಸಭೆಯವರಿಗೆ ತಿಳಿಯಹೇಳಿದರು. ಇಂದಾ ಸಭೆಯ ಅಧ್ಯಕ್ಷಸ್ಥಾನವನ್ನು ಬಹುಮಾನಪಟ್ಟ ಗವರ್ನರ್ ದೊರೆಗಳಾದ ಪೆಂಟಲೆಂಡ್ ಪ್ರಭುಗಳು ದಯೆ ಮಾಡಿ ಬಂದು ವಹಿಸಿಕೊಂಡಿದ್ದರು ಗವರ್ನರ್ ದೊರೆಗಳವರು ಕಳೆದ ನವಂಬರ ತಿಂಗಳಲ್ಲಿ ಈ ಜಿಲ್ಲೆಗೆ ಚಿತ್ತೈಸಿದಾಗ ಇಲ್ಲಿಯ ನಿರಾಶ್ರಿತ ಜನರಾದ ಪಂಚಮರ ಬಿನ್ನವತ್ತಳಿಕೆಗೆ ಖಾವಂದರವರು ಕೊಟ್ಟ ಉತ್ತರಗಳಿಂದ ಪತಿತರ ಮೇಲೆ ದೊರೆಗಳಿಗಿರುವ ಕರುಣೆಯು ವ್ಯಕ್ತವಾಗಿತ್ತು. ಸಂಸ್ಥಾನದ ಒಂದು ಮೂಲೆಯಲ್ಲಿರುವ ಈ ಜಿಲ್ಲೆಯಲ್ಲಿ ವಿಕಸಿತವಾದ ದೊರೆಗಳವರ ಔದಾರ್ಯವು ಮದ್ರಾಸಿನಲ್ಲಿ ಮತ್ತಷ್ಟು ಸ್ಪಷ್ಟವಾಗಿ ತೋರಿಬಂದು ಸಂಸ್ಥಾನದ ಎಲ್ಲಾ ಪ್ರಾಂತ್ಯಗಳಿಗೂ ಈ ಸಂದರ್ಭದಲ್ಲಿ ಚನ್ನಾಗಿ ತಿಳಿಯುವ ಅವಕಾಶ ದೊರಕಿತು.

ಗವರ್ನರ ದೊರೆಗಳವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ಈ ಸಭೆಯಲ್ಲಿ ಪ್ರಖ್ಯಾತ ಪ್ರಜಾ ಮುಂದಾಳುಗಳು ಹಾಜರಿದ್ದರು. ಮುಂಬಯಿ ಪ್ರಾಂತ್ಯದಿಂದ ಬಂದ ಹಿಂದೂಸ್ಥಾನದ ನಿರಾಶ್ರಿತ ಜನಸಹಾಯಕ ಸಂಘದ ಅಧ್ಯಕ್ಷರಾದ ಸರ್ ನಾರಾಯಣ ಚಂದಾವರ್‌ಕಾರರವರು, ಮದ್ರಾಸು ಸಂಘದ ಅಧ್ಯಕ್ಷರಾದ ಬಹುಮಾನಪಟ್ಟ ಮದ್ರಾಸು ಹ್ಯಾಕೋರ್ಟು ಜಡ್ಜರಾದ ಸರ್ ಸಿ. ಶಂಕರನ್ನಾಯರ್, ಹ್ಯಾಕೋರ್ಟು ಜಡ್ಜರಾದ ಬಹುಮಾನಪಟ್ಟ ಟಿ. ವಿ ಶೇಷಗಿರಿ ಅಯ್ಯರ್, ಸದಾಶಿವ ಅಯ್ಯರ್, ಮಿಸೆಸ್ ಬಿಸೆಂಟರವರು, ರಾ॥ ಸಿ. ಪಿ. ರಾಮಸ್ವಾಮಿ ಅಯ್ಯರ್, ನ್ಯಾಯವಿಧಾಯಕ ಸಭೆಯ ಬಹುಮಾನಪಟ್ಟ ಪ್ರಜಾಪ್ರತಿನಿಧಿಗಳಲ್ಲಿ ಕೆಲವರು, ಇನ್ನೂ ಅನೇಕ ವಕೀಲರೂ ಸಾಹುಕಾರರೂ ಜಮೀನುದಾರರೂ ಸಭೆಯಲ್ಲಿ ಹಾಜರಿದ್ದರು. ಮದ್ರಾಸಿನ ನಿರಾಶ್ರಿತಜನ ಸಹಾಯಕ ಸಂಘದ ಕಾರ್ಯದರ್ಶಿಗಳು ಸಂಘದ ವಾರ್ಷಿಕ ವೃತ್ತಾಂತವನ್ನು ಅನುಮೋದಿಸುತ್ತಿದ್ದಾಗ ಮೈಸೂರಿನ ರಂಗಮ್ಮನವರು ಮೈಸೂರಿನಲ್ಲಿ ಮಹಾರಾಜರವರ ಸಹಾಯದಿಂದ ನಡಿಯುತ್ತಿರುವ ಪತಿತರ ಉದ್ಧರಣೆಯ ಶ್ಲಾಘನೀಯವಾದ ವೃತ್ತಾಂತವನ್ನು ಸಭಿಕರಿಗೆ ತಿಳಿಸಿದರು ನಂತರ ಮದ್ರಾಸಿನಲ್ಲಿ ನಿರಾಶ್ರಿತರ ಸಂಘದ ಪರವಾಗಿರುವ ಶೋಚನೀಯವಾದ ಅಭಾವವನ್ನು ಪ್ರಸ್ತಾಪಿಸಿ ರಾ॥ ಸಿ ಪಿ. ರಾಮಸ್ವಾಮಿ ಅಯ್ಯರರವರು ಮಾತಾಡಿದರು ಈ ಭಾಷಣಗಳು ಸಭೆಯಲ್ಲಿ ಮುಗಿದನಂತರ ಸರ್ ಜಿ ನಾರಾಯಣ ಚಂದಾವರ್‌ಕಾರ್‌ರವರು ಮುಂಬಯಿ ಪ್ರಾಂತ್ಯಗಳಲ್ಲಿ ಈ ಸಂಘದವರು ನಡಿಸುವ ಕಾರ್ಯ ವಿವರವನ್ನು ವಿಸ್ತಾರವಾಗಿ ಹೇಳಿದರು. ಸರ್ ಚಂದಾವರ್‌ಕಾರ್‌ರವರ ಭಾಷಣವು ಸಭಾಸದರಲ್ಲಿ ವಿಶೇಷ ಆಸಕ್ತಿಯನ್ನೂ ಉತ್ಸಾಹವನ್ನೂ ಉಂಟುಮಾಡುವಂಥಾದ್ದಾಗಿತ್ತು ಗವರ್ನರ ದೊರೆಗಳವರು ತಮ್ಮ ಭಾಷಣದಲ್ಲಿ ಪತಿತರ ದೀನದೆಸೆಯಿಂದ ಹಿಂದೂಸ್ಥಾನದ ಸಮಾಜಕ್ಕೆ ವಿಶೇಷ ನಷ್ಟವು ಉಂಟಾಗುತ್ತಿದೆಂತ ಅಪ್ಪಣೆಕೊಟ್ಟರು ೪೩ ಮಿಲಿಯ ಜನಸಂಖ್ಯೆಯುಳ್ಳ ಈ ಸಂಸ್ಥಾನದಲ್ಲಿ ಜನಸಂಖ್ಯೆಯ ಐದನೇ ಒಂದು ಅಂಶವು ಪತಿತರಾಗಿರುವರು. ಇಷ್ಟು ಜನರು ಅಜ್ಞಾನದಲ್ಲಿದ್ದು ಯಾವ ತರದ ಬೆಳವಣಿಕೆಯ ಸೋಂಕು ಸಹ ಇವರನ್ನು ತಟ್ಟದೆ ಇವರು ನಿರ್ಗತಿಕರಾಗಿ ದರಿದ್ರಾವಸ್ಥೆಯಲ್ಲಿ ಹೊರಳಾಡುತ್ತಿರುವರೆಂದರೆ ಸಮಾಜಕ್ಕೆ ಎಂಥಾ ದೊಡ್ಡ ಕಂದಕ? ಇದನ್ನು ಪರಿಹರಿಸುವ ಉಪಾಯಗಳು ಯಾವವು? ಈ ರೀತಿ ದೀನರ ಸ್ಥಿತಿಯನ್ನು ದೊರೆಗಳವರು ಯೋಚಿಸಿಕೊಂಡು ಇದಕ್ಕೆ ತಕ್ಕ ನಿವೃತ್ತಿಯನ್ನು ಸೂಚಿಸಿರುತ್ತಾರೆ. ಈ ದೀನರ ದುಃಖಕರ ಸ್ಥಿತಿ ಮಾರ್ಪಾಟಗಳನ್ನು ಕಲ್ಪಿಸಬೇಕಾದರೆ ಇಲ್ಲಿಯೂ ಮತ್ತು ಇತರ ಕಡೆಗಳಲ್ಲಿಯೂ ಸಹ ಅಗತ್ಯವುಳ್ಳ ವಿಧಿಗಳನ್ನು ಬದಲಾಯಿಸಬೇಕು, ಶಿಕ್ಷಣಪ್ರಸರಣವನ್ನು ವಿಸ್ತಾರವಾಗಿ ಮಾಡಬೇಕು, ಮತ್ತು ಇವೆಲ್ಲವುಗಳಿಗಿಂತ ಅಗತ್ಯವುಳ್ಳ ಮತ್ತೊಂದು ಸಾಧನೆಯೂ ಸಹ ನಡೆಯಬೇಕು—ಜನರಾಶಿಯ ಮನೋಭಾವವನ್ನು ಈ ವಿಷಯದಲ್ಲಿ ತಿದ್ದಿ ಸರಿಪಡಿಸಬೇಕು. ನಿರಾಶ್ರಿತಜನ ಸಹಾಯಕ ಸಂಘದವರ ಕಾರ್ಯಸಾಧನೆಯಲ್ಲಿ ಮುಖ್ಯವಾದದ್ದು ಈ ರೀತಿ ಜನರ ಮನೋಭಾವಗಳನ್ನು ಸರಿಪಡಿಸುವಂಥಾದ್ದಾಗಿದೆ. ಹೀಗೆ ಗವರ್ನರ್ ದೊರೆಗಳವರು ಅಪ್ಪಣೆಕೊಡಿಸಿರುವರು.

ಶ್ರೇಷ್ಠರನ್ನು ಜನರು ಸಾಮಾನ್ಯವಾಗಿ ಅನುಸರಿಸುವುದರಿಂದ ಗವರ್ನರ್ ದೊರೆಗಳವರು ಈ ಸಂದರ್ಭದಲ್ಲಿ ವ್ಯಕ್ತಗೊಳಿಸಿದ ದಯಾಮಯವಾದ ಮನೋಭಾವದಿಂದ ಪ್ರಜಾಜನರಲ್ಲಿಯೂ ಇಂಥಾ ಮನೋಭಾವವು ಉಂಟಾಗಲು ಅವಕಾಶ ದೊರಕಿತು ಪತಿತ ಉದ್ಧರಣೆಯಲ್ಲಿ ಶ್ರಮಪಡುತ್ತಿರುವ ದೇಶಾಭಿಮಾನಿಗಳೆಲ್ಲರಿಗೂ ವಿಶೇಷ ಪ್ರೋತ್ಸಾಹವು ಖಾವಂದರ ಮೂಲಕ ಈ ರೀತಿ ಪ್ರಾಪ್ತವಾಗಿರುವುದು

ಶಸ್ತ್ರಧಾರಣಗಳ ಕಾಯಿದೆ.

ಹಿಂದೀ ಜನರಿಗೆ ಶಸ್ತ್ರಗಳನ್ನು ಧಾರಣೆಮಾಡುವ ಕಾಯಿದೆಯಿಂದ ಬಹಳ ತೊಂದರೆಯೂ ಅನಾನುಕೂಲವೂ ಆಗುತ್ತದೆಂಬ ಸಂಗತಿಯು ಅನೇಕ ಸ್ಥಳಗಳಲ್ಲಿ ಕಂಡುಬಂದದೆ. ಕಾಂಗ್ರೆಸದ ಮುಖಂಡರೂ ವರ್ತಮಾನಪತ್ರಕಾರರೂ ಈ ವಿಷಯವನ್ನು ಕುರಿತು ಅನೇಕ ಸಾರಿ ಘಂಟೋಘೋಷ ಮಾಡಿದ್ದಾರೆ. ಈ ಕಾಯಿದೆಯಿಂದ ಪ್ರತಿಯೊಬ್ಬ ಶಸ್ತ್ರಧಾರಣಮಾಡತಕ್ಕ ಸುಶಿಕ್ಷಿತ ಹಾಗು ಶೂರ ಹಿಂದುವಿಗೆ ಪ್ರತಿಬಂಧವೆನಿಸಿ ತೊಂದರೆಯೂ ಕಷ್ಟವೂ ಆಗಿಂದಾಗ್ಗೆ ಆಗುತ್ತದೆ. ಆದರೆ ಮೊನ್ನೆ ಮದ್ರಾಸದ ಹೈಕೋರ್ಟು ಜಡ್ಜರಾದ ನ್ಯಾಯಮೂರ್ತಿ ಓಲ್ಡಫೀಲ್ಡ ಸಾಹೇಬರವರು ಒಂದು ಮಹತ್ವವಾದ ಠರಾವನ್ನು ಮಾಡಿರುತ್ತಾರೆ. ಅದರ ವೃತ್ತಾಂತವು ಕೆಳಗೆ ಬರೆದ ಪ್ರಕಾರ ಇರುವದು.

ಮದ್ರಾಸ ಇಲಾಖೆಯೊಳಗಿನ ಮದನಪಲ್ಲಿ ಎಂಬಲ್ಲಿಯ ಮ್ಯಾಜಿಸ್ಟ್ರೇಟರು ಒಬ್ಬ ಮುಸಲ್ಮಾನನನ್ನು ಶಸ್ತ್ರಧಾರಣದ ಕಾಯಿದೆಯ ನಿಯಮಗಳ ವಿರುದ್ಧ [illegible] ಕನ್ನು ಇಟ್ಟುಕೊಂಡಿದ್ದನೆಂದು ಅಪರಾಧ ಹೊರಿಸಿ ಅವನಿಗೆ ಕಾಯಿದೆ ಪ್ರಕಾರ [illegible] ಯನ್ನು ವಿಧಿಸಿದರು. ಮುಂದೆ ಅವನು ಈ ಪ್ರಕರಣದ ಮೇಲೆ [illegible]

ಸೆಶನ್ಸ್ ಕೋರ್ಟಿಗೆ ಅಪೀಲು ಮಾಡಿದನು. ಸೆಶನ್ಸಜಡ್ಜರು ಈ ಪ್ರಕರಣದಲ್ಲಿ ಕೆಲವು ವಿಷಯದಲ್ಲಿ ಸಂಶಯಗ್ರಸ್ತರಾಗಿ ಹೈಕೋರ್ಟಿಗೆ ಬರೆದು ಕೇಳಿದರು. ಆಗ್ಗೆ ನಾ. ಓಲ್ಡ್‌ಫೀಲ್ಡರವರು ಶಸ್ತ್ರಧಾರಣದ ಕಾಯಿದೆಯಲ್ಲಿ ಬಂದೂಕು, ರಿವಾಲ್ವರ ಮೊದಲಾದ ಅಗ್ನ್ಯಸ್ತ್ರಗಳ ಸಮಾವೇಶವಾಗುವದೆಂದೂ ಕತ್ತಿ ಮೊದಲಾದ ಶಸ್ತ್ರಗಳು ಈ ಕಾಯಿದೆಯ ಕಲಮಿನೊಳಗೆ ಸೇರುವದಿಲ್ಲವೆಂದೂ ನಿರ್ಣಯ ಮಾಡಿದರು. ಈ ನಿರ್ಣಯವು ಮದ್ರಾಸು ಇಲಾಖೆಯ ಮಟ್ಟಿಗೆ ಆದಂತಾಯಿತು. ಈ ಪ್ರಕರಣವು ಪ್ರಿವ್ಹೀಕೌನ್ಸಿಲದಲ್ಲಿ ನಿರ್ಣಯವಾಗುವವರೆಗೆ ಇದರಲ್ಲಿ ಹೆಚ್ಚು ಕಡಿಮೆಯಾಗುವಂತೆ ಇಲ್ಲ. ಈ ಸಮಾಧಾನಕಾರವಾದ ನಿರ್ಣಯದ ಬಗ್ಗೆ ನಾ ನ್ಯಾಯಮೂರ್ತಿ ಓಲ್ಡ್‌ಫೀಲ್ಡರವರ ಅಭಿನಂದನ ಮಾಡುತ್ತೇವೆ

ಜಪಾನೀಯರು ಸಾಮಾಗ್ರಿಗಳಿಗೆ ಗಿರಾಕಿಗಳನ್ನು ನಿರ್ಮಿಸುವ ವಿಧಾನವು.

ವ್ಯಾಪಾರದಲ್ಲಿಯೂ ಕೈಗಾರಿಕೆಗಳಲ್ಲಿಯೂ ಜಪಾನಿಯರು ಬಹಳ ವಿಚಕ್ಷಣರಾಗಿರುವರು. ನವೀನ ಔಷಧಿಗಳಿಗೆ ಸಹ ಇವರು ಗಿರಾಕಿಗಳನ್ನು ನಿರ್ಮಿಸುವ ವಿಧಾನವು ಚೋದ್ಯಕರವಾಗಿರುವುದು. ಜೀನಸುಗಳನ್ನು ಕೊಂಡು ಅವುಗಳನ್ನು ಮನೆಮನೆಗೆ ತಕ್ಕೊಂಡು ಹೋಗಿ ಮಾರುವವರ ಕೂಡೆ ನವೀನವಾಗಿ ತಯ್ಯಾರಿಸಿದ ಔಷಧಗಳು ಕೊಡೋಣಾಗುವವು. ಕೊಂಡು ಮಾರುವಂಥವರು ಈ ಔಷದಗಳನ್ನು ಪ್ರತಿ ಮನೆಗೆ ಒಯ್ಯುವರು. ಇವರು ಕೊಡುವ ಔಷಧಿಯನ್ನು ಕ್ರಯಕ್ಕೆ ಪಡಕೊಳ್ಳಲು ನಿರಾಕರಿಸಿದರೆ ಅದನ್ನು ಏನೂ ತಕ್ಕೊಳ್ಳದೆ ಮನೆಯಲ್ಲಿ ಬಿಟ್ಟುಬಿಟ್ಟು ತಾನು ಇನ್ನೊಮ್ಮೆ ಬರುವಾಗ ಇದನ್ನು ಕೊಂಡುಹೋಗಬಹುದೆಂದು ಹೇಳಿ ಹೋಗುವರು. ತಾನು ಪುನಹ ಬರುವಷ್ಟರಲ್ಲಿ ಔಷದಿಯನ್ನು ಬಿಟ್ಟುಹೋದ ಮನೆಯಲ್ಲಿ ಏನಾದರೂ ಅಸ್ವಸ್ಥವು ಸಂಭವಿಸಿದರೆ ತನ್ನ ಔಷದಿಯು ಮನೆಯವರಿಂದ ಉಪಯೋಗಿಸಲ್ಪಡುವುದೆಂಬುವುದರಲ್ಲಿ ಜಪಾನ ಚಿಟಿಗರಿಗೆ ಕೋರಿಕೆ ಇರುವುದು. ಪ್ರತಿಫಲವಾಗಿ ಏನೂ ಹಣ ಕೊಡಲಿಕ್ಕಿಲ್ಲದ್ದರಿಂದ ಹೀಗೆ ಔಷಧಿಯನ್ನು ಮನೆಯಲ್ಲಿಟ್ಟು ಹೋಗಲು ಜನರು ಬಹುಪಕ್ಷ ಸಮ್ಮತಿಸುವರು. ಔಷಧಿಯನ್ನಿಟ್ಟ ಹಲವು ಮನೆಗಳಲ್ಲಿ ಇದು ಉಪಯೋಗಿಸಲ್ಪಡುವುದರಿಂದ ಔಷಧಿಯನ್ನು ಕೊಂಡುಹೋಗಲು ಬಂದವನು ಇದರ ಹಣವನ್ನು ಕೆಲವರಿಂದಾದರೂ ಸಂಗ್ರಹಿಸಿ ಕೊಂಡುಹೋಗುವನು. ಈ ರೀತಿ ಔಷಧಿಗೆ ಗಿರಾಕಿಯು ನಿರ್ಮಿಸೋಣಾಗುವದು. ಜಪಾನ ದೇಶದ ಪ್ರತಿ ಜಿಲ್ಲೆಯಲ್ಲಿ ಜೀನಸುಗಳಿಗೆ ಗಿರಾಕಿಗಳನ್ನು ನಿರ್ಮಿಸುವಂಥ ಒಂದು ಸಾವಿರ ಜನರಿರುತ್ತಾರೆ. ಒಂದು ಜಿಲ್ಲೆಯ ಚಿಟಿಗನು ಮತ್ತೊಂದು ಜಿಲ್ಲೆಗೆ ಹೋಗನಾದ್ದರಿಂದ ತಮ್ಮ ತಮ್ಮ ಪ್ರಾಂತ್ಯಗಳಲ್ಲಿಯೇ ತಿರುಗಾಡಿಕೊಂಡಿರುತ್ತಾ ಜನರ ಅಭ್ಯಾಸಗಳನ್ನೂ ರೀತಿಗಳನ್ನೂ ಸ್ವಭಾವಗಳನ್ನೂ ಅರಿತು ಬಹಳ ಉಪಯುಕ್ತವೂ ಲಾಭಕರವೂ ಆದ ರೀತಿಯಲ್ಲಿ ವ್ಯಾಪಾರ ನಡಿಸಲು ಜಪಾನಿನಲ್ಲಿ ಸಾಧ್ಯವಾಗುತ್ತದೆ. ಇಂಥಾ ಸಾಧನೆಯು ಜಪಾನೀಯರಲ್ಲಿರುವುದರಿಂದ ಅವರು ಅರ್ಧ-ಶತಮಾನ ಕಾಲದಲ್ಲಿ ಸರ್ವರಿಂದಲೂ ಮನ್ನಿಸಲ್ಪಡುವ ಬಲಿಷ್ಠ ಜನಾಂಗವಾಗಲು ಶಕ್ತರಾದರು.

ಭಗಂದರ ರೋಗಕ್ಕೆ ಔಷಧ.

ಮಹಾ ಭಯಂಕರ ರೋಗಗಳಲ್ಲಿ ಭಗಂದರವು ಒಂದಾಗಿದೆ. ಆರಂಭದಲ್ಲಿ ಮಹತ್ತಾದ ಜ್ವರದಿಂದ ಕೂಡಿ ಆಮೆಯ ಬೆನ್ನಿನಾಕಾರದಲ್ಲಿ ಎಬ್ಬಿರುವ ಒಂದು ಬಾವು ಬೆನ್ನಿನಲ್ಲಿ ಕಾಣಿಸುವದು. ಈ ಘೋರವಾದ ಬಾವು ದಿನೇ ದಿನೇ ಬೆಳೆಯುತ್ತಾ ಹಲವು ದಿನಗಳ ಮೇಲೆ ಕೀತು ಸೋರತೊಡಗಿ ವಿಶಾಲವಾದ ವ್ರಣವಾಗುವದು. ಇದರ ವೇದನೆಯನ್ನೇ ತಾಳಲಾರದೆ ಮರಣವಾಗುವದುಂಟು. ಅಥವಾ ಆರಂಭವಾಗುವಾಗಲೇ ಇರುವ ನೋವು ಮತ್ತು ಉರಿಯಿಂದಲೂ ನಂತರ ಕೀತುಕೊಳ್ಳುವ ಕಾಲದಲ್ಲುಂಟಾಗುವ ಸಿಡಿತದಿಂದಲೂ ಹೇಳಲಸಾಧ್ಯವಾದ ನಿತ್ರಾಣವುಂಟಾಗಿ ಮರಣಕಾಲವು ಸದಾ ಸಮೀಪಿಸುತ್ತಾ ಇರುವಂತಿರುವದೆಂದು ಹೇಳಿದರೂ ಅತಿಶಯೋಕ್ತಿಯಾಗದು.

ಸಜೀವವಾದ ಗೋಂಕರ ಕಪ್ಪೆ (Bull frog)ಯನ್ನು ಸಿಗಿದು ಅದು ಜೀವಂತವಾಗಿರುವಾಗಲೇ ಆ ಬಾವಿನ ಮೇಲಿಟ್ಟು ಕಟ್ಟಿದರೆ ಒಂದೇ ರಾತ್ರಿ ಬೆಳಗಾಗುವದರೊಳಗಾಗಿ ಈ ರೋಗವು ವಾಸಿಯಾಗುವದಂತೆ. ಈ ಮುಷ್ಟಿಯೋಗಕ್ಕೆ ಮಂಗಳವಾರ ಆದಿತ್ಯವಾರದ ರಾತ್ರಿಗಳು ಪ್ರಶಸ್ತವಾದವುಗಳೆಂದು ನಂಬುತ್ತಾರೆ.

ಜಾಪಾಳ (Croton tiglium) ದ ಬೀಜವನ್ನು ಮದ್ದುಹುಳಿಯ ರಸದಲ್ಲರೆದು ಈ ಬಾವಿಗೆ ಆಗಾಗ ಲೇಪಿಸುತ್ತಾ ಬಂದರೆ ನಾಲ್ಕೈದು ದಿನಗಳೊಳಗಾಗಿ ಅದು ಪೊಟ್ಟಾಗುವದು. ನೋವಿಲ್ಲದ ಭಾಗಕ್ಕೆ ಲೇಪಿಸಿದರೆ ಈ ಲೇಪದಿಂದ ಗುಳ್ಳೆಗಳು ಬರುವವು. ಈ ಔಷಧಿಯಿಂದ ಅನೇಕರಿಗೆ ೮—೧೦ ದಿನಗಳೊಳಗೆ ಈ ರೋಗವು ವಾಸಿಯಾಗಿದೆ.

ಹಳೇ ರೋಗಿ

ಅಶ್ವಿನ್ಯಾದಿ ನಕ್ಷತ್ರಗಳ ಆಕಾರ ಗುರುತುಗಳನ್ನು ಬೋಧಿಸುವ ಪದ್ಯ.

ಅಯ್ಯಾ ಪತ್ರಕರ್ತರೇ,

ಈಗಿನ ಪ್ರಾಥಮಿಕ ಶಾಲೆಗಳಲ್ಲಿ ಅಶ್ವಿನ್ಯಾದಿ ನಕ್ಷತ್ರಗಳ ಆಕಾರಗಳನ್ನೂ ಅವುಗಳ ಗುರುತುಗಳನ್ನೂ ಬೋಧಿಸುವ ವಾಡಿಕೆಯು ಜಾರಿಗೆ ಬಂದಿದೆ. ಆ ಪ್ರಕಾರ ತಿಳಿದ ಮಕ್ಕಳಿಗೆ ಅದರ ಪ್ರಯೋಜನವನ್ನು ಸುಲಭದಿಂದ ಪಡಿಯುವಂತೆ ಯಾವ ನಕ್ಷತ್ರವು ಮಧ್ಯಾಹ್ನಕ್ಕೆ ಬರುವುದೋ ಆಗ ಇಂಥಾ ಲಗ್ನದಲ್ಲಿ ಇಂತಿಷ್ಟೇ ಘಳಿಗೆ ಸಂಧಿತೆಂಬುದನ್ನು ಸೂಚಿಸುವ ಒಂದು ಪದ್ಯವನ್ನು ಇದರೊಂದಿಗೆ ರವಾನಿಸಿದ್ದೇನೆ. ಇದು ಮಲೆಯಾಳ ಭಾಷೆಯಲ್ಲಿದ್ದ ಪದ್ಯದ ಭಾಷಾಂತರವಾಗಿದೆ. ಇದನ್ನು ತಮ್ಮ ಪತ್ರಿಕಾದ್ವಾರಾ ಪ್ರಕಟಿಸಿ ಎಲ್ಲಾ ಉಪಾಧ್ಯಾಯರೂ ತಿಳಿಯುವಂತೆ ಮಾಡಿಸಬೇಕಾಗಿ ನನ್ನ ಪ್ರಾರ್ಥನೆಯಾಗಿದೆ

ಇಂತಿ ತಮ್ಮ ವಿಧೇಯ ಮಿತ್ರ,

Suratkal,
1—1—1915.

H. Venkatramanayya,
Hd. Master S H School

ಜ್ಞಾನಿನಮಧ್ಯದೊಳಿಹ ತಾರೆಗಳ ।
ಕಾಣುವ ಸಂಗ ಗಳಿಗೆ ಸಂಖ್ಯೆಗಳ ।
ಕ್ಷೋಣಿಯೊಳರಿವಂದದಿ ತಿಳಿಸುವೆನು
ಜಾಣರು ತಿದ್ದಿರಿ ತಪ್ಪಿರಲಿದನು ॥ ೧ ॥

ಮೇಷದೊಳೊಂದೂವರೆ ಸಲುವಾಗ
ತಾಶ್ರವಣವು ನಡುವಹುದು ಸರಾಗ
ಬೇಸರಿಸದೆ ಮೂರೂವರೆಗಾಗಿ ।
ಅಸುಧನಿಷ್ಠೆಯು ನಿಲುವುದು ಸಾಗಿ ॥ ೨ ॥

ವೃಷಭದೊಳೊಂದೂವರೆ ಕನಗೆಂದು ।
ಕುಶಲದಿ ಶತಭಿಷವಿರುವುದು ಮುಂದು ।
ಕೊಸರದೆ ಪೂರ್ವಾಭಾದ್ರವು ಬರುತಾ ।
ಪೆಸರಡಗಿಸುವುದು ಕೇಳ್ಳೆ ನಿರತಾ ॥ ೩ ॥

ಮಿಥುನದೊಳೆರಡೂವರೆಕಾಲೆಂಬ ।
ಪಥದೊಳಗುತ್ತರಭಾದ್ರದ ಬಿಂಬ
ಸತಿ ರೇವತಿಯದನಡಗಿಸಿ ಮುಂದೆ ।
ಮಿತದಿಂದಿರುವಳು ಸರಿಸಮನೆಂದೆ ॥ ೪ ॥

ಕರ್ಕಾಟಕದಲ್ಲೆರಡೂಕಾಲು ।
ತರ್ಕವಿರದೆಯಶ್ವಿನಿಯಾ ಪಾಲು ।
ಕರ್ಕಶದಾಭರಣಿಯೊಳ್ಳೆದೆಂದು ।
ತೋರ್ಕೆಗೆ ತಿಳಿಯುವುದೊರವೆನು ಮುಂದು ॥ ೫ ॥

ಕೃತ್ತಿಕೆಗಾಸಿಂಹದೊಳೆಂದೆನುತಾ ।
ಛಿತ್ತರಿಸ್ಯೆರೋಹಿಣಿ ಮೂರೆನುತಾ ।
ಮತ್ತಾಮೃಗಶಿರ ಕನ್ಯೆಯ ಕಾಲಾ ।
ಒತ್ತಿ ಪಿಡಿವುದಾ ಮೇಲ್ ತಿಳಿ ಬಾಲಾ

ಕನ್ಯೆಯೊಳೊಂದೂವರೆ ಸಲುವುದನು ।
ಸನ್ನುತದಾರ್ದ್ರೆಯು ಸೂಚಿಪುದಿನ್ನು ।
ಚನ್ನ ಪುನರ್ವಸುವುಲದಾ ಕಾಲಾ ।
ಬೆನ್ನ ಬಿಡದೆ ತಾನೆನ್ನರು ಕೇಳಾ

ತುಲೆಯೊಳಗೆರಡೂವರೆ ಸಲುವುದನು ।
ಸೆಲೆಭೃಷ್ಯೆಯು ತಾನೊರೆಯುವುದನ್ನು ।
ಕಳೆಯಲು ತುಲೆಯಾಶ್ಲೇಷವು ಭರದಿ ।
ಹೊಳೆಯುತಿಹುದು ನಡುಮಧ್ಯಗಗನದಿ ॥ ೮ ॥

ವೃಶ್ಚಿಕದೊಂದೂವರೆ ಸಲುವಾಗ ।
ಜ್ಯೇಷ್ಠೆಯೊಳಾಮಘೆ ಬರುವುದು ಬೇಗ ।
ಉಚ್ಚಸ್ಥಾನಕೆ ಹುಬ್ಬೆಯು ಪೋಗೆ ।
ಸ್ವಚ್ಛದೊಳಾಹುದು ನಾಲುಕು ಗಳಿಗೆ ॥ ೯ ॥

ಉತ್ತರೆಗಾಧನುವಿನೊಳರ್ಧವನು ।
ಹಸ್ತಕೆ ಕಾಲುಕಡಿಮೆ ಮೂರನ್ನೂ ।
ಚಿತ್ರೆಗೆಮಿಗೆಯದರ್ಧದೂ ಕಾಲಾ ।
ನಿತ್ಯದಿ ಕಳೆವರು ಲಾಲಿಸು ಬಾಲಾ ॥ ೧೦ ॥

ಸ್ವಾತಿಗೆ ಮಕರದೊಳೊಂದೂವರೆಯ್ಯೆ ।
ಖ್ಯಾತ ವಿಶಾಖದೊಳೈದಹುದರಿಯ್ಯೆ ।
ನೂತನದನುರಾಧೆಗೆ ಕುಂಭದೊಳು ।
ಪ್ರೀತನೆ ಸಲ್ಲುವುದರ್ಧವು ಕೇಳು ॥ ೧೧ ॥

ಕುಂಭಕೆ ಜ್ಯೇಷ್ಠದೊಳೊಂದೂ ಕಾಲು ।
ತುಂಬಿದ ಮೂಲದಿನಾಲ್ಕೂ ಕಾಲು ।
ಬೆಂಬಿಡದಾ ಮೇಲ್ ಮೀನದಿ ಕೇಳ್ವೆ ।
ಗಂಭೀರದಿ ಬೋಧಿಸುವೆನು ತಾಳ್ವೆ ॥ ೧೨ ॥

ಒಂದೂ ಕಾಲಿಗೆ ಪೂರ್ವಾಷಾಢಾ ।
ಒಂದಪ್ಪುದೈಮಿಗೆಯುತ್ತರಾಷಾಢಾ ।
ಕುಂದದೆ ತಾಮೂರೂವರೆ ಘಳಿಗೆ ।
ಸಂದಪ್ಪುದೈ ತಿಳಿಯಿದನೀಗಳಿಗೆ ॥ ೧೩ ॥

ಪತ್ರವ್ಯವಹಾರ.

"ಎಣ್ಣೆ ಬರುವಾಗಲೇ ಗಾಣ ಮುರಿಯಿತು."

ಸ್ವಾಮಿಾ,

ಈ ಕೆಳಗಿನ ಒಂದೆರಡು ವಿಷಯಗಳ ಒಡಲೇಖನಕ್ಕೆ ತಮ್ಮ ಅಮೂಲ್ಯ ಪತ್ರಿಕೆಯ ಸಂಚಿಕೆಯೊಂದೆಡೆಯಲ್ಲಿ ಕೊಂಚ ಸ್ಥಳ ದಯಪಾಲಿಸುವಿರಾಗಿ ನಿಶ್ಚಲವಾದ ನಂಬಿಕೆ.

ನಮ್ಮ ಪ್ರಾಂತ್ಯದ ಮೊಗೇಯರರು ತಮ್ಮ ಕುಲದ ಏಳಿಗೆಗಾಗಿ ಎಂಥೆಂಥಾ ವಿಧದಲ್ಲಿ ಹವಣಿಸುತ್ತಿದ್ದಾರೆಂಬ ವಿವರವು ತಮ್ಮ ಪತ್ರಿಕೆಯ ಕೆಲವು ಸಂಚಿಕೆಗಳಲ್ಲಿ ಪ್ರಕಟಿಸಲ್ಪಟ್ಟದ್ದು ತಮ್ಮ ವಾಚಕಮಹಾಶಯರ ಜ್ಞಾಪಕದಲ್ಲಿರಬಹುದಷ್ಟೆ. ಆದರೆ ಇದೆಲ್ಲಾ ಕನಸಿನಲ್ಲಿ ದೊರೆಯುವ ಗಂಟಿನಂತೆ ಎಂದರೆ ಅತಿಶಯೋಕ್ತಿಯಾಗಲಾರದು. ಇವರ ಪೂರ್ವಿಕರಿಂದ ಸ್ಥಾಪಿಸೋಣಾದ ಹೋಬಳಿಯ ಹೊರತು ಕುಲಾಭಿವೃದ್ಧಿಯ ವ್ಯವಸ್ಥೆಗಾಗಿ ನೂತನವಾಗಿ ಸ್ಥಾಪಿಸಲ್ಪಟ್ಟ ಹಲವು ಸಂಸ್ಥೆಗಳಲ್ಲಿ ಇಲ್ಲಿ ಸ್ಥಾಪಿಸಲ್ಪಟ್ಟಿರುವ 'ಮೊಗೇಯರರ ವ್ಯವಸ್ಥಾಪಕ ಮಂಡಳಿ' ಮೊದಲನೆಯದಾಗಿರುತ್ತಾ—ಓದು ಬರಹದಲ್ಲಿ ಹಿಂದೆ ಬಿದ್ದಿರುವ ಕುಲಜಾತರಲ್ಲಿ ಅಕ್ಷರಾಭ್ಯಾಸದ ಏರ್ಪಾಡು ಗೈಯಬೇಕೆಂದು ಇದರ ಮೂಲಕ ಧರ್ಮಕ್ಕೆ ಬರಹ ಕಲಿಸುವ ಒಂದು ರಾತ್ರಿಶಾಲೆಯನ್ನು ಕಳೆದ ಸಂ ೧೯೧೩ನೇ ಫೆಬ್ರವರಿ ತಿಂಗಳಲ್ಲಿ ಸ್ಥಾಪಿಸಿರುತ್ತಾರೆಂಬದು ಸಹ ತಿಳಿದಿರುವ ವಿಷಯವೇ. "ಬರುತ್ತಾ ಬರುತ್ತಾ ರಾಯನ ಕುದುರೆ ಕತ್ತೆಯಾಯಿತು" ಎಂಬಂತೆ ತಮ್ಮ ವ್ಯವಸ್ಥೆಗಳು ಕ್ರಮೇಣ ಬದಲಾಗುತ್ತಾ ಬರುವಷ್ಟಕ್ಕೆ ತಂತಮ್ಮ ಸ್ವಾರ್ಥಪರತೆಯಿಂದ ಸಮುದಾಯ ಅಧಿಕಾರಿಗಳ ಪ್ರವೃತ್ತಿಯು ಬೇರೆ ರೀತಿಯಲ್ಲೇ ಮಾರ್ಪಟ್ಟು ಆಯಾಯ ಸಂಸ್ಥೆಗಳ ಉದ್ದೇಶವು ನೆರವೇರುವದಕ್ಕೆ ತಡೆಗಟ್ಟುತ್ತದೆ. "ಓದುವದು ಶಾಸ್ತ್ರ ಇಕ್ಕುವದು ಗಾಳ" ಎಂಬಂತೆ ಸಮಾಜ ಸುಧಾರಣೆಗೆ,—ಸಾರ್ವಜನೋಪಕಾರಕ್ಕೆ ಎಂದು ಮನಬಂದಂತೆ ಮಂಡಳಿ, ಸಮಾಜ, ಸಂಘ ಮುಂತಾದವುಗಳನ್ನು ಸ್ಥಾಪಿಸುವದು, ಅದು ಪ್ರಾರ್ಣಾವಸ್ಥೆಗೆ ಮುಟ್ಟಬೇಕೆಂದಿರುವಾಗಲೇ ಅದನ್ನು ಅಜೀರ್ಣಾವಸ್ಥೆಗೆ ತಂದೊಡ್ಡುವದು, ಇದಕ್ಕೆಲ್ಲಾ ನಾನು ತಾನೆಂಬುವ ಅಭಿಮಾನವೇ ಕಾರಣವೆನ್ನಬಹುದು. ಇದೆಲ್ಲಾ ಸ್ವಾಭಾವಿಕಯುಕ್ತ ಸಂಗತಿ. ಇದು ಹ್ಯಾಗೂ ಇರಲಿ— ಮಂಡಳಿಯವರು ಸ್ಥಾಪಿಸಿರುವ ರಾತ್ರಿಶಾಲೆಯ ಅಭಿವೃದ್ಧಿಗೆ ಆದಿಯಲ್ಲಿ ಹೆಚ್ಚಿನ ತೊಡಕುಂಟಾಗಿದ್ದರೂ ಸದ್ಯ ನೇಮಿಸಲ್ಪಟ್ಟಿರುವ ಶಿಕ್ಷಕರಿಂದ ಕಾಲಾಂತರದಲ್ಲಿ ಜ್ಞಾನಾಭಿವೃದ್ಧಿಯೊಡನೆ ಮಂಡಳಿಯ ಉದ್ದೇಶವು ನೆರವೇರುವುದೆಂದು ನಂಬಿಕೊಂಡಿರುವಾಗಲೇ ಈ ಶಾಲೆಯ ಕನ್ನಡವರ್ಗದ ಶಿಷ್ಯರ ಶಿಕ್ಷಣವು ಸರಿಯಾಗಿ ನಡಿಯದೆ ಅಜೀರ್ಣಾವಸ್ಥೆ ಹೊಂದುತ್ತಿರುವದರಿಂದ ಇದನ್ನು ತಿಳಿದ ಮಂಡಳಿಯ ಸರ್ವೇ ಮೆಂಬರರಲ್ಲಿ ವೈಮನಸ್ಸಿಗೆ ಆಶ್ರಯ ದೊರೆಯುತ್ತಿರುವುದು ಹೆಚ್ಚಿನ ಮಾತಲ್ಲ. ಶಾಲೆಯಲ್ಲಿ ಕಲಿಯುವ ಹುಡುಗರ ಸಂಖ್ಯೆಯು ಸಾಧಾರಣ ಇಪ್ಪತ್ತರಿಂದ ಎರಡಕ್ಕೆ ತಗ್ಗಿ ಶಾಲೆಯ ಸ್ಥಿತಿಯು ಇಂಥಾ ಅಜೀರ್ಣಾವಸ್ಥೆಯಲ್ಲಿರುವುದಾದರೂ ಮಂಡಳಿಯ ಕಾರ್ಯನಿರ್ವಾಹಕ ಸಭೆಯವರು ಇದರ ಕುರಿತು ಯಾವದೊಂದು ಸುಧಾರಣೆಯೂ ಮಾಡದೆ ಇರುವದು ದುಃಖಕರ ಸಂಗತಿ. ಹಾಲಿ ಗೈರ್ಹಾಜರಿರುವ ಕಾರ್ಯನಿರ್ವಾಹಕ ಮೆಂಬರುತನಕ್ಕೆ ಬೇರೆ ಜನರನ್ನು ನೇಮಿಸದೆಯೂ, ಮಂಡಳಿಯ ಕಾರ್ಯದ ಕಡೆಗೆ ಅಭಾವದಿಂದ ಇರುವದು ಮತ್ತಷ್ಟು ದುಃಖಕರ ಸಂಗತಿ. ಶಾಲೆ ಸ್ಥಾಪನಾನಂತರ ಕೆಲವು ತಿಂಗಳುಗಳ ತನಕ ಶಾಲೆಯಲ್ಲಿ ದೊರೆಯುವ ಶಿಕ್ಷಣ ವಗೈರೆಯ ಪರಿಶೀಲನೆಗಾಗಿ ಮಂಡಳಿಯ ಕಮಿಟಿಯವರು ಶಾಲೆಗೆ ಹೋಗಿಬರುವ ವಾಡಿಕೆಯಿತ್ತು. ತನ್ಮಧ್ಯೆ ಒಂದ ಶಾಲೆಯ ಕನ್ನಡ ವರ್ಗದ ಉಪಾಧ್ಯಾಯರ ಪದವಿಗೆ ಮಂಡಳಿಯ ಅಗ್ರಸ್ಥರೇ ನೇಮಿಸಲ್ಪಟ್ಟಿರುವದರಿಂದ ಅವರು ಶಾಲೆಯಲ್ಲಿ ಬರುತ್ತಾ ತಾವಾಗಿ ಹೋಗಿ ಬರುವ ಅಗತ್ಯವಿಲ್ಲವೆಂಬ ಭಾವನೆಯಿಂದಲೋ ಏನೋ ಅವರೂ ಸಹ ಶಾಲೆಯತ್ತಕಡೆ ಈಕ್ಷಿಸದೆ ಇರುತ್ತಾರೆ. ಅಲ್ಲದೆ ಇದೇ ಹೇತುವಿನಿಂದಲೋ ಏನೋ ರಾತ್ರಿಶಾಲೆಯನ್ನು ಸ್ಥಾಪಿಸುವ ಮತ್ತು ಕಾರ್ಯನಿರ್ವಾಹಕ ಕಮಿಟಿ ನೇಮಕದ ಮಸೂದೆಯನ್ನು ಸಭೆಯ ಮುಂದಿಟ್ಟು ಅದನ್ನು ಮಂಜೂರು ಗೊಳಿಸಿದ ಮ|| ರಾ|| ರಾ|| ಯಮಾರ್ಳ ಕೊರಗಪ್ಪನವರು ಸಹಾ ಈಗ ಮೌನವನ್ನವಲಂಬಿಸಿರುವದು ಆಲೋಚನಾಸ್ಪದ ಸಂಗತಿ. ಮಂಡಳಿಯ ಸ್ಥಿತಿ ಹೀಗಾಯಿತು. ಶ್ರೀ ಜ್ಞಾನೋದಯ ಸಮಾಜದ ಇಲ್ಲಿಯ ಉಪಶಾಖೆಯ ಮಿಾಟಿಂಗು ವಗೈರೆ ಕರೆಯಲ್ಪಡದೆ ಅದರ ಕುರಿತಾದ ಯಾವದೊಂದು ವ್ಯವಸ್ಥೆಯೂ ಕಾರ್ಯರೂಪುಗೊಳ್ಳದೆ ಒರುವದು ಬಹು ಆಶ್ಚರ್ಯ! ಇದೂ ಅಲ್ಲದೆ ನಮ್ಮ ಪ್ರಾಂತ್ಯದ ಬೊಕ್ಕಪಟ್ಟಣದಲ್ಲಿ ಕಟ್ಟಲಿಕ್ಕಿದ್ದ ಧರ್ಮಛತ್ರದ ಪರವಾಗಿ ಸ್ಥಾಪಿಸೋಣಾದ ಶ್ರೀ ಧರ್ಮೋದಯ ಸಂಘದ ಅಭಿವೃದ್ಧಿಗಾಗಿ ಧನಸಹಾಯಕೊಟ್ಟ ಹಲವರು ಪಶ್ಚಾತ್ತಾಪ ಪಡುತ್ತಲಿರುವದು ಮತ್ತಷ್ಟು ಶೋಚನೀಯ ಸಂಗತಿ! ಇದನ್ನೆಲ್ಲಾ ತಿಳಿಯುವ ಸಮಾಜ ಸುಧಾರಕರ ಮತ್ತು ಜನೋಪಕಾರಿಗಳ ಮನದಲ್ಲಿ ಉದ್ಭವಿಸುವ ಕ್ಲೇಶವು ಬಹು ದುಃಖಕರ ಸಂಗತಿಯಾಗಿರುತ್ತದೆಂಬುದಕ್ಕೆ ಬೇರೆ ಹೇಳಬೇಕೇ? ಆದುದರಿಂದ ಸ್ವಾಮಿಾ, "ಎಣ್ಣೆ ಬರುವಾಗಲೇ ಗಾಣ ಮುರಿಯಿತು."

ಮುಂಬಯಿ, 1 – 1 – 1915.

ಮೊಗೇರ ಹಿತಚಿಂತಕ.

ಅಯ್ಯಾ

ಉಡುಪಿ ಕುಂದಾಪುರ ತಾಲೂಕು ಹಾಲಾಡಿ ಗ್ರಾಮವು ಪೇಟೆ)ಸ್ಥಳವಾಗಿಯೂ ಹೆಚ್ಚು ಜನ ಸರ್ಕಾರಿ ನೌಕರರು ಬಂದು ನಿಲ್ಲುವ ಸ್ಥಳವಾಗಿ ಮತ್ತು ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮವಾಗಿಯೂ ಇರುತ್ತದೆ. ಇಂಥಾ ಗ್ರಾಮದಲ್ಲಿ ನಾಲ್ಕಾರು ವರುಷಗಳ ಹಿಂದೆ ಒಂದು ಪೋಸ್ಟಾಫೀಸು ಇದ್ದಿತ್ತು. ಇದರಿಂದ ಅನೇಕರಿಗೆ ಬಹಳ ಪ್ರಯೋಜನ ಬೀಳುತ್ತಿತ್ತು. ಇಂಥಾ ಪೋಸ್ಟಾಫೀಸನ್ನು "ಕುಂಬಾರಗೆ ವರುಷ ದೊಣ್ಣೆಗೆ ನಿಮಿಷ" ಎಂಬ ಗಾದೆಯಂತೆ ಪೋಸ್ಟುಮಾಸ್ಟರರವರ ಅಜಾಗ್ರತೆ ಎಂಬ ಸಬಬಿನಿಂದ ತೆಗೆದು ಹಾಕಿದರು. ಇದರಿಂದ ಇಂಥಾ ಜನಸಮುದಾಯವಿರುವ ಪೇಟೆಯವರಾದ ನಮ್ಮಗಳ ದುಃಖವು ಇಷ್ಟಿಷ್ಟೆಂದು ಹೇಳಲು ಅಸಾಧ್ಯ. ಬೇರೆ ಪೋಸ್ಟಾಫೀಸಿನಿಂದ ನಮಗೆ ಹದಿನೈದು ದಿವಸಕ್ಕೊಮ್ಮೆ ಪೋಸ್ಟ್ ಪಿಯೋನನಿಗೆ ಪುರಸತ್ತು ಇದ್ದರೆ ಕಾಗದಗಳು ಬಂದು ತಲಪುತ್ತವೆ. ಇಲ್ಲವಾದರೆ ಕಾಗದದ ಆಶೆಯೇ ಇಲ್ಲ. ಕೆಲವು ಸಾರಿ ನಮಗೆ ಬಂದ ಪೇಪರುಗಳನ್ನು ಇನ್ನೊಬ್ಬರು ಓದಿ ೨೦ ದಿವಸದ ನಂತರ ನಮಗೆ ಕೊಡುವದೂ ಉಂಟು ಯಾ ಕೊಡದೆ ಇರುವುದೂ ಉಂಟು. ಹೀಗೆಲ್ಲಾ ತೊಂದರೆಗಳಿಂದ ನಾವು ಬಹಳ ಕಷ್ಟನಷ್ಟಕ್ಕೆ ಗುರಿಯಾಗುತ್ತೇವೆ. ಎಂಥೆಂಥಾ ಹಳ್ಳಿಗಳಲ್ಲಿ ಪೋಸ್ಟಾಫೀಸುಗಳು ಆಗುತ್ತವೆ. ಜನಸ್ತೋಮ ವಿಪರೀತವುಳ್ಳ ಮತ್ತು ಇದರ ಆಜುಬಾಜು ಇರುವ ಗ್ರಾಮಗಳಿಗೆ ಬಹಳ ಉಪಕಾರ ಸಿಕ್ಕುವ ನಮ್ಮ ಪೇಟೆಯಲ್ಲಿ ಇದ್ದ ಪೋಸ್ಟಾಫೀಸು ಸಹ ತೆಗೆದದ್ದು ನೋಡಿದರೆ ಇಂಥಾ ಪೇಟೆಯಲ್ಲಿ ಪೋಸ್ಟಾಫೀಸು ಇಡುವ ನಿಬಂಧನೆಯೇ ಇಲ್ಲವೊ ಎಂತ ತಿಳಕೊಳ್ಳಬೇಕಾಗಿದೆ. ಆದುದರಿಂದ ದಯಾಳುಗಳಾದ ಸರಕಾರದವರು ನಮ್ಮ ಅರಿಕೆಗಳನ್ನು ವೇದ್ಯವರಿಸಿಕೊಂಡು ಈ ಹಾಳಾಡಿಯಲ್ಲಿ ಮಾಜಿ ಹೋದ ಪೋಸ್ಟಾಫೀಸು ಪುನಹ ತೆರಿಯುವ ಹಾಗೆ ಹುಕುಂ ದಯಪಾಲಿಸಿ ನಮ್ಮ ಸಂಕಷ್ಟವನ್ನು ಹೋಗಲಾಡಿಸಬೇಕಾಗಿ ಅಪೇಕ್ಷಿಸುತ್ತೇವೆ.

ಪೇಟೆಯವರಲೊಬ್ಬ.

ಯುದ್ಧವಾರ್ತೆ.

ತಾರೀಕು ೧ನೇ ಜನವರಿ ೧೯೧೫

ಪ್ರಾನ್ಸಿನ ರಣರಂಗವನ್ನು ಕಣ್ಣಾರೆ ಕಂಡ ಒಬ್ಬ ಪಾರಿಸ್ ನಗರದವನಿಂದ ಹೇಳೋಣಾದ ದಶಂಬರ ತಾ ೨೭ರಿಂದ ೩೧ರ ವರೆಗಿನ ರಣರಂಗದ ವಾರ್ತೆಯೇ ಈ ದಿನದ ವಾರ್ತೆಯಲ್ಲಿ ಮುಖ್ಯವಾಗಿರುವದು ಮಿತ್ರರು ದಿನೇ ದಿನೇ ಮುಂದೊತ್ತುತ್ತಿರುವರು ಜರ್ಮನರು ತಮ್ಮ ನೆಲೆಗಳನ್ನು ಬದ್ರ ಪಡಿಸುವ ಕೆಲಸದಲ್ಲಿ ನಿರತರಾಗಿರುವರು ಡಿಅಪ್ಪೂಯಿ ಎಂಬ ಮುಖ್ಯ ಸ್ಥಳವನ್ನು ಮಿತ್ರರು ಸ್ವಾಧೀನ ಮಾಡಿಕೊಂಡಿರುವರು.

ಬ್ಯಸ್ ಮತ್ತು ಆರ್ಗೋನ್ನೆ ಪ್ರಾಂತ್ಯದಲ್ಲಿ ಫ್ರೆಂಚರ ತೋಪು ಸೇನೆಯು. ಜರ್ಮನರ ಪಿರಂಗಿಗಳನ್ನು ನಾಶಪಡಿಸುವಚರಲ್ಲಿ ಪ್ರಾಶಸ್ತ್ಯವನ್ನು ಪಡೆದಿರುವವು

ನ್ಯೂಪೋರ್ಟ್ ಡಿಸ್ಟ್ರಿಕ್ಟಿನ ಲೊಂಬರ್ಡ್ಸೈಡಿನ ಉತ್ತರಕ್ಕಿರುವ ಪೋಲ್ಡರ್ಸ್ ಎಂಬಲ್ಲಿ ಮಿತ್ರರು ಸ್ವಲ್ಪ ಮುಂದರಿದಿರುವರು. ಮಿತ್ರರು ತಮ್ಮನ್ನು ಒಲಕಾಯಿಸಿಕೊಂಡಿರುವ ಸೈಂಟ್ ಜೋರ್ಜ ಎಂಬಲ್ಲಿಗೆ ಶತ್ರುಗಳು ಬಲವಾಗಿ ಗುಂಡು ಹಾರಿಸಿರುವರು ಡಿಅಪ್ಪೂಯಿ ಎಂಬಲ್ಲಿ ಮಿತ್ರರ ಸೈನಿಕರು ಜರ್ಮನರನ್ನು ಸೋಲಿಸಿರುವರು ಲೈಸ್ ಮತ್ತು ಬ್ಯಸೆಯ ವರೆಗೆ ವಿಶೇಷ ಕದನಗಳೇನೂ ನಡೆಯಲಿಲ್ಲ. ಐನೆ ಮತ್ತು ಚೆಂಪಾಗ್ನೆಯಲ್ಲಿ ಶತ್ರುಗಳು ಗುಂಡು ಹಾರಿಸುತ್ತಲಿರುವರು ಆರ್ಗೋನ್ನೆಯಲ್ಲಿ ಮಿತ್ರರು ತುಸ ಮುಂದರಿದಿರುವರು ಎಂತ ಪಾರಿಸ್ ನಗರದಲ್ಲಿ ಪ್ರಕಟವಾಗಿರುವದು

ಅರ್ರಾಸ್ ಮತ್ತು ಮ್ಯೂಸ್ ಶಿಬಿರಗಳಲ್ಲಿ ಗುಂಡು ಹಾರಿಸುವದಲ್ಲದೆ ಇತರ ವಿಶೇಷ ಕೃತ್ಯಗಳು ನಡೆಯಲಿಲ್ಲ, ಚೆಂಪೆಗ್ನೆಯಲ್ಲಿ ಮಿತ್ರರು ಮುಂದರಿಯುತ್ತಲಿದ್ದಾರೆ ಪೂರ್ವ ರಣರಂಗದಲ್ಲಿ ಕಾಲಸ್ಥಿತಿಯು ಕೆಟ್ಟಿರುವದರಿಂದ ಯುದ್ಧ ಮಾಡಲು ಕಷ್ಟಸಾಧ್ಯವಾಗಿದೆಂತ ಪಾರಿಸ್ ಸರಕಾರದವರು ಪ್ರಕಟಿಸಿರುವರು.

ಕೆನಡಾ ದೇಶದ ಪ್ರಿನ್ಸೆಸ್ ಪಾತ್ರಿಕ್‌ರವರ ಕಾಲಾಳು ಸೇನೆಯು ಈಗ ರಣರಂಗದಲ್ಲಿರುವುದು

ಲಂಡನಿನ ಬ್ರೈಟನಿನಲ್ಲಿರುವ ಗಾಯ ಒಡೆದ ಭಾರತೀಯ ಸೇನಿಕರು ಕ್ರಿಸ್ಟ್‌ಮಸ್ ದಿನ ವಿಶೇಷ ಸಂತೋಷಪಟ್ಟಿರುವರು ಅವರಿಗೆ ಅಂಗಿಗಳೂ ಪಾಯಿಗಳೂ ಸಿಗರೇಟ್‌ಗಳೂ ಆ ದಿನ ಮಳೆಯಂತೆ ಉಡಿಗರೆಯಾಗಿ ಬಂದು ಬಿದ್ದವು ಬೆಟ್ಟೆನ್‌ಬರ್ಗಿನ ಪ್ರಿನ್ಸೆಸ್ ಹೆನ್ರಿಯವರು ಅವರಿದ್ದಲ್ಲಿಗೆ ಹೋಗಿ ಹಿಂದೂಸ್ಥಾನಿಯಲ್ಲಿ ಸಂಭಾಷಣೆ ನಡಿಸಿಕೊಂಡು ಒಂದಿರುವರು

ಪೂರ್ವ ರಣರಂಗದಲ್ಲಿ ಕಠಿಣ ಕಾಳಗ ನಡೆಯುತ್ತಿದೆ ಜರ್ಮನರು ವಿಶೇಷ ನಷ್ಟಹೊಂದುತ್ತಲಿರುವರು ರುಶ್ಯನರು ಪಶ್ಚಿಮ ಗೆಲೀಸಿಯದಲ್ಲಿ ಜಯಪ್ರದರಾಗಿ ಕಾರ್ಪೆಥೇನಿಯಕ್ಕೆ ಮುಂದರಿಯುತ್ತಲಿರುವರು ಆಸ್ಟ್ರಿಯನರನ್ನು ಬಲವಾದ ಕೋಟೆಗಳಿಂದ ಹೊರ ಓಡಿಸುತ್ತಲಿರುವರು. ಲೈನ್ಸ್ಕೊ ಎಂಬಲ್ಲಿಯೂ ರುಶ್ಯನರಿಗೆ ವಿಶೇಷ ಜಯವಾಗಿರುವದು

ಶೆರಾಕಮಿಸ್ ಎಂಬಲ್ಲಿ ರುಶ್ಯನರಿಗೂ ತುರ್ಕರಿಗೂ ಕದನ ನಡೆಯುತ್ತಲಿದೆ.

ತಾ. ೨ನೇ ಜನವರಿ.

ಮಿತ್ರ ಸೇನೆಯು ಸ್ಟೈನ್‌ಬೆಕ್ ಎಂಬ ಗ್ರಾಮವನ್ನು ಪ್ರವೇಶಿಸಿ ಒಂದು ಮನೆಯನಂತರ ಮತ್ತೊಂದನ್ನು ಒಂದೊಂದಾಗಿಯೇ ಹಿಡಿದು ಅರ್ಧ ಗ್ರಾಮವನ್ನು ಸ್ವಾಧೀನ ಮಾಡಿಕೊಂಡಿರುವರು ಸಮುದ್ರದಿಂದ ಐನೆಯ ವರೆಗೆ ರಣರಂಗಗಳು ಶಾಂತವಾಗಿರುವವು ಮೊಂಟಿಮೆರಿ ಎಂಬಲ್ಲಿ ಮಿತ್ರರು ಜರ್ಮನರ ೧೫೦ ಮೀಟರ್ ವಿಸ್ತೀರ್ಣಕ್ಕೆ ಕಂದಕಗಳನ್ನು ತೆಗೆದುಕೊಂಡಿರುವರು ಎಂತ ಪಾರಿಸಿನಲ್ಲಿ ಪ್ರಕಟವಾಗಿದೆ.

ಮ್ಯೂಸ್ ಮತ್ತು ಮೊಸಲ್ಲೆಯ ಮಧ್ಯೆ ಫ್ರೆಂಚರು ತಮ್ಮ ಮೇಲೆ ಆರಾವರ್ತಿ ಮೇಲ್ಬಾಯ್ದ ಜರ್ಮನರನ್ನು ಓಡಿಸಿ ಬಿಟ್ಟರು ವಿಶೇಷ ಸಂಗತಿಗಳೇನೂ ನಡೆಯಲಿಲ್ಲ.

ರಣರಂಗದಲ್ಲಿ ಗಾಯ ಒಡೆದ ಭಾರತೀಯ ಸೈನಿಕರಲ್ಲಿ ೬೦ ಮಂದಿ ಲಾಹೋರಿಗೆ ತಲಪಿರುವರು ಭಾರತೀಯ ಸೈನಿಕರಲ್ಲಿ ೫ ಮಂದಿಗೆ ಮಿಲಿಟರಿ ಕ್ರೊಸ್ ಎಂಬ ಬಿರುದು ಕೊಡೋಣಾಗಿರುವದು

ಇಂಗ್ಲಿಷ್ ಕಾಲುವೆಯಲ್ಲಿ ಫೊರ್ಮಿಡಬಲ್ ಎಂಬ ಬ್ರಿಟಿಷರ ಯುದ್ಧನಾವೆಯು ಮುಣುಗಿಹೋಯಿತು ಈ ನಾವೆಯು ಸಮುದ್ರದಲ್ಲಿದ್ದ ಸಿಡಿಮದ್ದಿನ ಗಣೆಗೆ ತಾಗಿ ಮುಣುಗಿತೋ ಯಾ ಸಮರನಾವೆಯಿಂದ ಮುಣುಗಿಸಲ್ಪಟ್ಟಿತೋ ಎಂಬದು ಈ ವರೆಗೆ ನಿಶ್ಚಯವಾಗಲಿಲ್ಲ ನಾವಿಕರಲ್ಲಿ ೭೧ ಮಂದಿಯನ್ನು ಬ್ರಿಟಿಷ್ ಕ್ರೂಜರ್ ರಕ್ಷಿಸಿರುವದು ಇತರರನ್ನು ಇತರ ದೋಣಿಗಳು ರಕ್ಷಿಸುವ ಕೆಲಸದಲ್ಲಿರುವವು ಎಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುವರು ಈ ಮುಣುಗಿಹೋದ ಹಡಗವು ೧೫,೦೦೦ ಟನ್ ಭಾರಾವಣಿಯುಳ್ಳದ್ದಾಗಿತ್ತು

ವಿಸ್ತುಲ ಮತ್ತು ಪಿಲಿಟ್ಜದ ಮಧ್ಯೆ ತಾ. ೩೦ರಲ್ಲು ರುಶ್ಯನರು ಮೇಲ್ಬಾಯಿದ ಜರ್ಮನರನ್ನು ಹಿಂದಕ್ಕಟ್ಟಿರುವರು ರುಶ್ಯನರು ಪಿಲಿಟ್ಜದ ಬಳಿಯಲ್ಲಿ ಕಂದಕಗಳಲ್ಲಿದ್ದ ಶತ್ರುಗಳನ್ನು ಸುಮಾರು ೩೦೦ ಗಜ ಹತ್ತಿರಕ್ಕೆ ಬರಮಾಡಿ ನಂತರ ಅವರ ಮೇಲೆ ಬಿದ್ದು ವಿಶೇಷ ನಷ್ಟಪಡಿಸಿರುವರು ಪಶ್ಚಿಮ ಗೆಲೀಸಿಯದಲ್ಲಿ ಆಸ್ಟ್ರಿಯನರೊಡನೆ ನಡೆದ ಕದನಗಳಲ್ಲಿ ಆಸ್ಟ್ರಿಯನರು ಹೆಚ್ಚಿನ ನಷ್ಟಕ್ಕೊಳಗಾಗಿರುವರು ಬಾಲಿಗ್ರೊಡ್ ಡಿಸ್ಟ್ರಿಕ್ಟಿನಲ್ಲಿ ಶತ್ರುಗಳ ೩೦೦೦ ಸೈನಿಕರು ರುಶ್ಯನರ ಶೆರೆಬಿದ್ದಿರುವರು ಎಂತ ರುಶ್ಯ ಸರಕಾರದವರು ಪ್ರಕಟಿಸಿರುವರು

ಕೌಕಾಸಸಿನಲ್ಲಿ ರುಶ್ಯನರು ಸರ್ಕಾಮಿಯಿ ಎಂಬ ಗ್ರಾಮದ ಮೇಲೆ ಬಿದ್ದರು ತುರ್ಕರು ಕಠಿಣವಾಗಿ ಎದುರಾಯಿಸಿದರೂ ಸಫಲವಾಗದೆ ತುರ್ಕರ ಒಬ್ಬ ಜನರಲನೂ ೧೩೫೦ ಸೇನಿಕರೂ ರುಶ್ಯನರ ಶೆರೆ ಬಿದ್ದರು ಅರ್ದಾಗನಿನಲ್ಲಿ ಕಾಳಗವು ನಡೆಯುತ್ತಿದೆ

ಬಸ್ರಾವಲ್ಲಿ ಶೆರೆಹಿಡಿದು ಮುಂಬಾಯಿಗೆ ತಂದ ತುರ್ಕಿ ಶೆರೆಯಾಳುಗಳಲ್ಲಿ ಬಸ್ರಾದ ಗವರ್ನರರೂ ಇರುವರು

ಆಸ್ಟ್ರೇಲಿಯದವರು ಜರ್ಮನರಿಗೆ ಸೇರಿದ ಬೊಗೈನ್ವಿಲ್ಲೆ ಮತ್ತು ಸಲೊಮೊನ್ ದ್ವೀಪಗಳನ್ನು ಸ್ವಾಧೀನ ಮಾಡಿಕೊಂಡಿರುವರು

ತಾ ೪ನೇ ಜನವರಿ.

ನ್ಯೂಪೋರ್ಟು ಮತ್ತು ಜೊನ್ನೆಬೆಕ್ಕೆ ಎಂಬೀ ಸ್ಥಳಗಳ ಮಧ್ಯೆ ನಡೆದ ಕದನದಲ್ಲಿ ಮಿತ್ರರಿಗೆ ಜಯವಾಗಿರುವದು ಶತ್ರುಗಳು ಹಲವು ಸಾರಿ ಮೇಲ್ಬಾಯಿದರೂ ಹಿಂದೆ ಸರಿದಿರುವರು ಅರ್ರಾಸ್, ಆಲ್ಬರ್ಟ್, ರೋಯೆ ಪ್ರಾಂತ್ಯದಲ್ಲಿ ತೋಪು ಕಾಳಗ ನಡೆಯುತ್ತಿದೆ ವೆರ್ಮೆಲ್ಲಿಸಿನಲ್ಲಿಯೂ ಜರ್ಮನರು ಹಿಂದೆ ಓಡುತ್ತಿದ್ದಾರೆ

ಜರ್ಮನರು ಬೆಲ್ಜಿಯಮಿನಲ್ಲಿ ನಡಿಸಿದ ದುಷ್ಕೃತ್ಯಗಳನ್ನು ಕುರಿತು ವಿಚಾರಿಸುವರೆ ನೇಮಿಸಲ್ಪಟ್ಟ ಕಮಿಷನಿನವರು ಜರ್ಮನರ ದುಷ್ಕೃತ್ಯಗಳ ಕುರಿತು ಮುಖ್ಯವಾ ಅವರು ಶೆರೆಹಿಡಿದವರನ್ನು ಗಾಯಪಡಿಸಿದವರನ್ನು ... ನ ಸುತ್ತಿರುವ ಕಠಿಣ ವಿಧಾನವನ್ನು ಕುರಿತು ಪ್ರಕಟಿಸಿರುವರು. ಎರಿಸ್ಕೋಟಿನ ಬಳಿ ಒಂದು ದಿನ ೩ ಬೆಲ್ಜಿಯನ ಸೇನಿಕರು ಜರ್ಮನರ ಕೈಗೆ ಸಿಕ್ಕಿ ಬಿದ್ದರು. ಅವರು ಗುಟ್ಟು ಹೇಳದೆ ಹೋದುದರಿಂದ ಜರ್ಮನರು ಅವರ ಕೈಗಳನ್ನು ಕುದಿಯುವ ನೀರಿನಲ್ಲಿ ಮುಣುಗಿಸಿದರು. ಮತ್ತೊಂದು ಕಡೆಯಲ್ಲಿ ಜರ್ಮನರು ಒಬ್ಬ ಬೆಲ್ಜಿಯನ ಸೈನಿಕನು ಸಾಯುವವರೆಗೆ ತಲೆಯನ್ನು ಹಿಸುಕಿದರು ಎಂಬಿತ್ಯಾದಿ ಪ್ರಸ್ತಾಪಗಳು ಈ ಕಮಿಷನಿನ ವರದಿಯಲ್ಲಿರುವವು, ಜರ್ಮನರು ಘೆಂಟಿನ ಮೇಲೆ ೫೦೦೦ ಪವನುಗಳ ಜುಲುಮಾನೆ ವಿಧಿಸಿರುವರು. ಬೆಲ್ಜಿಯನರು ಕೆಲವು ಮೈಲು ಟೆಲಿಫೋನು ಸರಿಗೆಗಳನ್ನು ಕಡದು ಹಾಕಿದ್ದೇ ಇದಕ್ಕೆ ಕಾರಣವಾಗಿರುವದು.

ಮುಣುಗಿ ಹೋದ ಫೊರ್ಮಿಡೆಬಲ್ ಹಡಗದಿಂದ ೮೦ ಮಂದಿ ರಕ್ಷಿಸಲ್ಪಟ್ಟರು ಇನ್ನೊಂದು ಪಟ್ಟಿ ಪ್ರಕಾರ ೨೦೧ ಮಂದಿ ರಕ್ಷಿಸಲ್ಪಟ್ಟರು ಎಂತ ತಿಳಿದುಬರುತ್ತದೆ

ಶತ್ರುಗಳ ದೊಡ್ಡ ಫಿರಂಗಿಗಳನ್ನು ಲಕ್ಷಕ್ಕೆ ತಾರದೆ ರುಶ್ಯನರು ಜರ್ಮನರನ್ನು ಬುಜೂರ ಮತ್ತು ರೌಕ ಎಂಬಲ್ಲಿ ಹಿಂದಕ್ಕೆ ಓಡಿಸಿರುವರು

ಎಜೆಕ್ ಕಣಿವೆಯಲ್ಲಿ ರುಶ್ಯನರು ಆಸ್ಟ್ರಿಯನರ ಕೆಲವು ನೂರು ಮಂದಿಯನ್ನು ಶೆರೆಹಿಡಿದಿರುವರು ಬಹಳ ಉತ್ಕೃಷ್ಟತೆಯ ರುಶ್ಯ ಸೇನೆಯು ತಾವು ಹಿಂದೆ ಓಡುವ ಹಾಗೆ ಮಾಡಿತೆಂತ ಆಸ್ಟ್ರಿಯಾನರು ಪ್ರಕಟಿಸಿರುವರು. ಪೋಲೇಂಡಿನಲ್ಲಿ ಮೂರು ವಾರದೊಳಗೆ ಜರ್ಮನರು ೬೦೦,೦೦೦ ಮಂದಿಯನ್ನು ಕಳಕೊಂಡರು

ಶೆರಾಕಮಿಸ್ ಎಂಬಲ್ಲಿ ತುರ್ಕರಿಗೂ, ರುಶ್ಯನರಿಗೂ ಕಠಿಣ ಕಾಳಗ ನಡೆಯುತ್ತಿದೆ ಅರ್ದಹಾನಿನ ಸ್ಥಿತಿಯು ಇದ್ದಕ್ಕಿದ್ದ ಹಾಗೆ ಇದೆ ಒಲ್ಟಿ ಎಂಬಲ್ಲಿ ತುರ್ಕರು ಮುಂದರಿದು ಕದನಕ್ಕೆ ನಿಲ್ಲದ ಹಾಗೆ ರುಶ್ಯನರು ತಡೆಮಾಡಿರುವರು

ತಾ ೫ನೇ ಜನವರಿ.

ಮಿತ್ರರು ಸ್ಟೈನ್‌ಬಾಕ್ ಗ್ರಾಮವನ್ನು ತಕ್ಕೊಂಡಿರುವ ರೆಂಬ ವಿಷಯವನ್ನು ಜರ್ಮನರು ಒಪ್ಪಿರುವರು. ಫ್ರೆಂಚರು ಉತ್ತರ ಅಲ್ಸೆಸಿನಲ್ಲಿ ಪುನಃ ಮುಂದರಿದಿರುವರು. ಆರ್ಗೋನ್ನೆ ಮತ್ತು ಮ್ಯೂಸಿನಲ್ಲಿ ತೋಪು ಕಾಳಗವು ನಡೆಯುತ್ತಿದೆ ಸಮುದ್ರದಿಂದ ಬ್ಯಸಿನ ವರೆಗಿನ ಸ್ಥಿತಿಯು ಶಾಂತವಾಗಿರುವದು.

ವಿಸ್ತುಲದ ಎಡ ಪಾರ್ಶ್ವದಲ್ಲಿ ಕಠಿಣ ತೋಪು ಕಾಳಗ ನಡದಿರುವದು ಬಜೂರದಲ್ಲಿ ಜರ್ಮನರು ಮುಂದೊತ್ತಿ ಬರಲು ಮಾಡಿದ ಪ್ರಯತ್ನವು ವ್ಯರ್ಥವಾಗಿರುವದು. ಶನಿವಾರ ಬೆಳಗ್ಗೆ ಶತ್ರುಗಳು ಬುಜೂರವನ್ನು ದಾಟಲು ಯತ್ನಿಸುತ್ತಿದ್ದುದನ್ನು ರುಶ್ಯನರು ಕಂಡು ಸನೀನು ಕಾಳಗ ಮಾಡಿದರು. ಉಳಿದ ಕೆಲವರು ಶರಣಾಗತರಾದರು.

ರುಶ್ಯನರು ಶರಿಕಮಿಸಿನಲ್ಲಿ ತುರ್ಕರ ೫೦ನೇ ಕಾಲಾಳು ಸೇನೆಯನ್ನೆಲ್ಲಾ ಪಿರಂಗಿಗಳ ಸಹಿತ ಹಿಡಿದಿರುವರು. ೫೦೦೦ ತುರ್ಕ ಸೇನಿಕರೂ, ೪೦ ಆಫೀಸರರೂ ಕೆಲವು ಸರ್ಜನರೂ ರುಶ್ಯನರ ಶೆರೆ ಬಿದ್ದಿರುವರು. ತುರ್ಕರ ಸೇನೆಯನ್ನು ಇನ್ನೊಂದು ಕಡೆಯಲ್ಲಿಯೂ ರುಶ್ಯನರು ಸೋಲಿಸಿರುವರು.

ಸರ್ವಿಯದ ಬೆಲ್ಗ್ರೇಡ್ ಪಟ್ಟಣವು ಆಸ್ಟ್ರಿಯನರು ... ವಶಮಾಡಿಕೊಂಡಿತ್ತೆಂದು ಪ್ರಕಟಿಸಿದೆ. ಆಸ್ಟ್ರಿಯನರ ಫೀಲ್ಡ್ ಮಾರ್ಷಲ್ ಪ್ರೈಚ್‌ಬೋರ್ಸ್ಕಿ ಎಂಬ... ಜನರಲ ವನ್‌ಫ್ರಾಂಕ್ ಎಂಬವನನ್ನು ಆಸ್ಟ್ರಿಯ ... ಕೆಲಸದಿಂದ ತೆಗೆದು ಹಾಕಿರುವರು

ವಿದೇಶ ವೃತ್ತಾಂತ.

ಜರ್ಮನರು ತಮ್ಮ ಫಿರಂಗಿಗಳನ್ನು ಒಸ್ಟೆಂಡ್ ಮತ್ತು ಝುರಿಯಕರ್ಕೆ ಎಂಬಲ್ಲಿ ಯುದ್ಧ ನಾವೆಗಳಿಗಾದರೂ ವಾಯು ನಾವೆಗಳಿಗಾದರೂ ತೋರದ ರೀತಿಯಲ್ಲಿ ಇಟ್ಟಿರುವರು. ಕರಾವಳಿಯಲ್ಲಿ ಅನೇಕ ಮೆಶಿನ್‌ಗನ್ ಎಂಬ ಫಿರಂಗಿಗಳನ್ನು ಹುಗಿದಿಟ್ಟಿರುವರು ಎಂತ ಆಮ್‌ಸ್ಟರ್‌ಡಮಿನಲ್ಲಿ ಪ್ರಕಟವಾಗಿದೆ

ರುಶ್ಯದ ಹೊಟೇಲುಗಳಲ್ಲಿ ಮದ್ಯಪಾನಗಳನ್ನು ಮಾರಕೂಡದೆಂಬದಾಗಿ ರಾಜ್ಯ ಸರಕಾರದವರು ಕಟ್ಟಾಜ್ಞೆ ಮಾಡಿರುತ್ತಾರೆ ಮೊದಲನೇ ತರಗತಿಯ ಹೊಟೇಲುಗಳಲ್ಲಿ ಕ್ಲಬ್‌ಗಳಲ್ಲಿ ಕೂಡಾ ಮದ್ಯಪಾನಗಳನ್ನು ಮಾರಕೂಡದು ಎಂಬ ಆಜ್ಞೆಯಾಗಿರುವದು

ಇಟಲಿಯವರು ತಮ್ಮ ಸೇನೆಯನ್ನು ಅಲ್ಬಾನಿಯಕ್ಕೆ ಸೇರಿದ ವಲೋನ ಪಟ್ಟಣಕ್ಕೆ ಕಳುಹಿಸಿ ಅದನ್ನು ಸ್ವಾಧೀನ ಪಡಿಸಿಕೊಂಡಿರುವರು

ಪೆಟ್ಟಿಗೆಯಲ್ಲಿ ಅಡಗಿ ಕೂತು ಲಂಡನಿನಿಂದ ತಪ್ಪಿಸಿಕೊಳ್ಳಲು ನೋಡಿದ ಒಬ್ಬ ಜರ್ಮನ್ ಆಫೀಸರನ ವಾರ್ತೆಯು "ಡೈಲಿಮೈಲ್ ಬಾತ್ಮಿದಾರರಿಂದ ಕಳುಹಿಸೋಣಾಗಿರುವದು ಜರ್ಮನಿಯಲ್ಲಿರುವ ಇಂಗ್ಲಿಷ್ ಸೆರೆಯವರನ್ನೂ ಲಂಡನಿನಲ್ಲಿರುವ ಜರ್ಮನ್ ಸೆರೆಯವರನ್ನೂ ಅಂದರೆ ಯುದ್ಧಕ್ಕೆ ಸೇರಲಾರದವರನ್ನು ಬದಲಾಯಿಸಿಕೊಳ್ಳುವ ಏರ್ಪಾಡು ಈಚೆಗೆ ಉಂಟಾಗಿರುವದು ಹೀಗೆ ಇಂಥಾ ಜರ್ಮನರನ್ನು ಪಹರೆ ಸಹಿತ ಹಡಗ ಹತ್ತಿಸುವರೆ ಥೇಮ್ಸ್ ನದೀತೀರದಲ್ಲಿರುವ ಟಿಲ್‌ಬರಿ ಎಂಬಲ್ಲಿಗೆ ತಂದಿದ್ದರು ಇವರ ಸಾಮಾನುಗಳನ್ನೂ ತಕ್ಕೊಂಡು ಹೋಗಲು ಅಪ್ಪಣೆಯಾಗಿತ್ತು ಇಂಥಾ ಪೆಟ್ಟಿಗೆಯೊಂದರಲ್ಲಿ ಹಂಬರ್ಗಿಗೆ ಎಂಬ ಪಟ್ಟಿ ಹಚ್ಚಿತ್ತು ಈ ಪೆಟ್ಟಿಗೆಯನ್ನು ಹಡಗಕ್ಕೆ ಹಾಕಲು ಮೇಲೆ ಎತ್ತುವಾಗ ಪೆಟ್ಟಿಗೆಯು ಥಕ್ಕನೇ ಜಾರಿಬಿದ್ದು ಪೆಟ್ಟಿಗೆಗೆ ಕಟ್ಟಿದ್ದ ಹಗ್ಗವು ಬಿಚ್ಚಿ ಮುಚ್ಚಳವು ತೆರೆದು ಹೋಯಿತು ಕೂಡ್ಲೇ ಪೆಟ್ಟಿಗೆಯೊಳಗಿಂದ ಒಬ್ಬ ಮನುಷ್ಯನು ಹೊರ ಬಂದನು ಈ ಸಂಗತಿಯು ಅಲ್ಲಿದ್ದ ಜನರಿಗೆ ನಗಾಡಲು ಕಾರಣವಾಯಿತು ಈ ಜರ್ಮನ್ ಆಫೀಸರನು ತಪ್ಪಿಸಿಕೊಳ್ಳಲು ಮಾಡಿದ ಈ ಉಪಾಯವು ಹೀಗೆ ಸಫಲವಾಗದೆ ಹೋದುದರಿಂದ ಇವನ ಸಂಗತಿಯೆಲ್ಲವನ್ನೂ ಆರಿಕೆ ಮಾಡಿದನು ಇವನು ಇದ್ದ ಪೆಟ್ಟಿಗೆಯು ೫ ಅಡಿ ಉದ್ದವಾಗಿತ್ತು ಪೆಟ್ಟಿಗೆಯೊಳಗೆ ಇವನು ೩೬ ತಾಸುಗಳನ್ನು ಕಳೆದನು ಒಂದು ಕಂಬಳಿಯು ಅವನೊಡನೆ ಇತ್ತು ಆಹಾರಕ್ಕಾಗಿ ಸ್ವಲ್ಪ ಬಿಸ್ಕಿಟು ಸ್ವಲ್ಪ ಒಸ್ಲೆ ಮತ್ತು ಒಂದು ಕುಪ್ಪಿ ತಣ್ಣಗಿಂದ ಕೊಕೋ ಇದ್ದವು ಈ ಪೆಟ್ಟಿಗೆಯ ಗುಟ್ಟು ಹೊರ ಬೀಳಲು ಒಂದೆರಡು ನಿಮಿಷ ತಡವಾಗುತ್ತಿದ್ದರೆ ಇಂಟರ್‌ನೇಶನಲ್ ಕಾಯಿದೆಯ ಪ್ರಕಾರ ಇವನ ಬಿಡುಗಡೆಯಾಗುತ್ತಿದ್ದನು ಯಾಕಂದರೆ ಈ ಪೆಟ್ಟಿಗೆಯನ್ನು ಸಾಗಿಸಲಿಕ್ಕಿದ್ದ ಹಡಗವು ಡಚ್ಚರಿಗೆ ಸೇರಿದ್ದಾಗಿತ್ತು ಡಚ್ಚ ದೇಶವು ತಟಸ್ಥ ರಾಜ್ಯವಾದುದ್ದರಿಂದ ಪೆಟ್ಟಿಗೆಯು ಹಡಗದ ಒಳಗೆ ಸೇರಿದ್ದರೆ ನಂತರ ಇಂಗ್ಲಿಷರು ಈ ಆಫೀಸರನನ್ನು ಹಿಡಿಯ ಕೂಡದಿತ್ತು ಕೆಲವು ಕಡೆಗಳಲ್ಲಿ ಈ ಪೆಟ್ಟಿಗೆಯನ್ನು ಕೆಳಗೆ ಹಾಕಿದ್ದರಿಂದ ಹಲವು ಸಾರಿ ಇವನು ಮೂರ್ಛೆ ಹೊಂದಿದ್ದನೆಂದೂ ಮೈ ಮೇಲೆ ಗಾಯಗಳಿದ್ದವೆಂದೂ ಆ ಬಾತ್ಮಿದಾರರು ಬರೆಯುವರು

ಉತ್ತರ ಹಿಂದೂಸ್ಥಾನ

"ಮೆಟಿರ್" ಎಂಬ ರುಶ್ಯನರ ಹಡಗದ ೧೭ ಮಂದಿ ಕಲಾಸಿಗಳು ಹಡಗದಲ್ಲಿ ದಂಗೆ ಎದ್ದರು ಎಂಬ ಅಪವಾದನೆಯ ಮೇಲೆ ಮುಂಬಾಯಿಯಲ್ಲಿ ಕೈದಿನಲ್ಲಿರುವರು ಇವರು ಕಳೆದ ಶನಿವಾರ ಹಡಗದ ಕೆಪ್ಟನನ ಕೋಣೆಯನ್ನು ಒಡೆದು ಹಡಗದ ೪ನೇ ಆಫೀಸರನನ್ನು ಕೋಣೆಯೊಳಗೆ ಮುಚ್ಚಿಟ್ಟು ಅವರಿಗೆ ಹೊಡೆಯಲು ಪ್ರಯತ್ನಿಸಿದರು ಪೋಲೀಸರು ಅವರನ್ನು ಕೈದು ಮಾಡಿ ಹೆಚ್ಚಿನ ತನಖಿ ನಡಿಸುವ ಬಗ್ಗೆ ಅವರನ್ನು ೧೪ ದಿನ ರಿಮಾಂಡಿನಲ್ಲಿಟ್ಟಿರುವರು.

ಕ್ರಿಸ್ಮಮಸ್ ಹಬ್ಬದ ದಿನ ಡಾರ್ಜಲಿಂಗ್ ಮೈಲ್ ಟ್ರೇನಿನಲ್ಲಿ ಒಂದೆ ದರೋಡೆ ಕಳವು ನಡೆದಿರುವದು. ಡಮುಕೂಡ ಸ್ಟೇಶನಲ್ಲಿ ಒಬ್ಬ ಮಹಮ್ಮದೀ ಹೆಂಗಸು ಹೆಂಗಸರ ಅರೆಯಲ್ಲಿ ಕೂತಳು. ಅವಳ ಗಂಡನು ಗಂಡಸರ ಅರೆಯಲ್ಲಿದ್ದನು ಟ್ರೇನ್ ಓಡುತ್ತಿರುವಾಗ ಒಬ್ಬನು ಅವಳ ಅರೆಯೊಳಗೆ ನುಗ್ಗಿ ಅವಳನ್ನು ಮೂತ್ರಶಂಖೆ ಮಾಡುವ ಕೋಣೆಯಲ್ಲಿ ಹಾಕಿ, ಅವಳ ಪೆಟ್ಟಿಗೆಯನ್ನು ತೆರದು ಸುಮಾರು ೬೦೦ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳನ್ನು ತೆಗೆದು ಅಪಾಯಸೂಚಕವಾದ ಸರಿಗೆಯನ್ನು ಎಳದು, ಬಂಡಿಯು ನಿಂತಾಕ್ಷಣ ಕತ್ತಲೆಯಲ್ಲಿ ತಪ್ಪಿಸಿಕೊಂಡು ಓಡಿಹೋದನು

ಮೈಸರಾಯ ಪ್ರಭುಗಳವರು ಡೇರಡೂನಿನಿಂದ ತಾ ೩ಂನೇ ಮಧ್ಯಾಹ್ನ ಡಿಲ್ಲಿಗೆ ಹಿಂತೆರಳಿರುವರು

ಲಕ್ನೌ ನಗರದಲ್ಲಿ ಅಂಗ್ಲೋ ಇಂಡಿಯನ್ ರೆಜಿಮೆಂಟನ್ನು ಸ್ಥಾಪಿಸುವ ಏರ್ಪಾಡು ನಡೆಯುತ್ತಲಿದೆ

ಲಾಹೋರಿನ ದೇಶಭಾಷೆಯ "ಹಿಂದೂ" ಎಂಬ ಪತ್ರಿಕೆಯ ಆಫೀಸನ್ನು ಈಚೆಗೆ ಪೋಲಿಸರು ಜಪ್ತಿ ಮಾಡಿದ ಫಲಿತಾಂಶವಾಗಿ ಅವಿರಚಂದ, ಲಾಲಚಂದ ಮತ್ತು ಕೇಶವರಾವ ಎಂಬ ಮೂವರ ಮೇಲೆ ವಾರಂಟ ಹೋಗಿರುವದೆಂತ ವಾರ್ತೆ ಇದೆ

ಕಳದ ೧೯೧೪ನೇ ವರ್ಷ ಮುಂಬಾಯಿ ಮೆಟ್ರಿಕ್ಯೂಲೇಶನ್ ಪರೀಕ್ಷೆಗೆ ನಿಂತ ೫೦೦೦ ಮಂದಿ ವಿದ್ಯಾರ್ಥಿಗಳಲ್ಲಿ ೨೭೯೨ ಮಂದಿ ತೇರ್ಗಡೆಯಾಗಿದ್ದರು ಅ ವರೆ ೧೦೦ಕ್ಕೆ ಸರಾಸರಿ ೫೮ರಂತೆ ತೇರ್ಗಯಾಗಿದ್ದರು. ಆದರೆ ಕಳದ ವರ್ಷ ೫೩೯೩ ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ನಿಂತಿದ್ದು ೧೩೬೯ ಮಂದಿ ತೇರ್ಗಡೆಯಾದರು ಅಂದರೆ ೧೦೦ಕ್ಕೆ ಸರಾಸರಿ ೨೫ರಂತೆ ತೇರ್ಗಡೆಯಾದರು ಮುಂಬಾಯಿ ಸೆಂಟರಿನಲ್ಲಿ ೧೭೯೦ ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ನಿಂತಿರಲು ೬೬೭ ಮಂದಿ ಮಾತ್ರ ತೇರ್ಗಡೆಯಾದರು ಪೂನೆಯಲ್ಲಿ ೮೦೭ ವಿದ್ಯಾರ್ಥಿಗಳು ಕುಳಿತಿರಲು ೧೮೫ ಮಂದಿ ಮಾತ್ರ ತೇರ್ಗಡೆಯಾದರು ಇದರಂತೆ ಅಹಮ್ಮದಾಬಾದ, ಕರಾಚಿ ಮತ್ತು ಬೆಳಗಾವಿನಲ್ಲಿ ೧೭೫೫ ೯೫೫ ಮತ್ತು ೫೯೭ ಮಂದಿ ವಿದ್ಯಾರ್ಥಿಗಳು ಕುಳಿತಿರಲು ೩೬೨—೬೬ ಮತ್ತು ೪೯ ವಿದ್ಯಾರ್ಥಿಗಳು ಅನುಕ್ರಮವಾಗಿ ತೇರ್ಗಡೆಯಾದರು ಅಂದರೆ ಮುಂಬಾಯಿಯಲ್ಲಿ ೧೦೦ಕ್ಕೆ ೩೯ ಪೂನೆಯಲ್ಲಿ ೧೦೦ಕ್ಕೆ ೨೩ ಅಹಮದಾಬಾದಿನಲ್ಲಿ ೧೦೦ಕ್ಕೆ ೨೧ ಕರಾಚಿಯಲ್ಲಿ ೧೦೦ಕ್ಕೆ ೧೪ ಬೆಳಗಾವಿನಲ್ಲಿ ೧೦೦ಕ್ಕೆ ೮ ವಿದ್ಯಾರ್ಥಿಗಳ ಪ್ರಕಾರ ತೇರ್ಗಡೆಯಾದರು ಇದು ವಿದ್ಯಾರ್ಥಿಗಳ ಪರೀಕ್ಷೆಯೋ ಯಾ ಕೊಲೆಯೋ ಎಂಬದಾಗಿ ಹಲವು ಪತ್ರಿಕೆಗಳು ಪ್ರಶ್ನಿಸಿರುವವು

ಕಳದ ಎಪ್ರಿಲ್ ತಾ ೧ರಿಂದ ದಸಂಬರ ೩೧ನೇ ತಾರೀಖಿನ ವರೆಗೆ ಹಿಂದೂಸ್ಥಾನದಲ್ಲಿ ಆಮದು ರಫ್ತು ಕಡಮೆಯಾದ್ದರಿಂದ ಹಿಂದಿನ ವರುಷದ ರೈಲ್ವೇ ಹುಟ್ಟುವಳಿಗಿಂತ ಈ ಸಲದ ಉತ್ಪತ್ತಿಯು ೧,೯೫,೨೫,೬೮೩ ರೂಪಾಯಿಗೆ ಕಡಮೆಯಾಗಿರುವದು

ಪೂನಾ ಪಟ್ಟಣದಲ್ಲಿ ದತ್ತಾತ್ರಿ ಸದಾಶಿವ ಎಂಬ ಒಬ್ಬ ದೊಡ್ಡ ವಕೀಲನೂ ವಕೀಲ ಪರೀಕ್ಷೆಗೆ ಓದುತ್ತಿದ್ದ ದತ್ತಾತ್ರಿ ಮಹದಾದೆ ಓಕ ಎಂಬ ಒಬ್ಬ ವಿದ್ಯಾರ್ಥಿಯೂ ಕೆಲವು ಕಾಲದಿಂದ ಕಳವು ಮಾಲುಗಳನ್ನು ತೆಗೆದುಕೊಂಡು ಮಾರುತ್ತಿದ್ದರೆಂದು ಅವರ ಮೇಲೆ ಮೊಕದ್ದಮೆಯಾಗಿರುವದು

ಇಂದೋರು ಸಂಸ್ಥಾನದ ಪಶ್ಚಿಮಕ್ಕಿರುವ ಧಾರ್ ಎಂಬ ಸಂಸ್ಥಾನದಲ್ಲಿ ರಾಣಿ ಸಾಹೇಬರವರು ತಿಕ್ರಿ ಎಂಬ ಸಂಸ್ಥಾನದ ಕಾಡಿನಲ್ಲಿ ಕಳೆದ ತಾ ೧೪ನೇ ಸೋಮವಾರ ಒಂದು ಭಾರೀ ಹುಲಿಯನ್ನು ಶಿಕಾರಿ ಮಾಡಿದರು ಅದು ೮½ ಅಡಿ ಉದ್ದವಾಗಿತ್ತು ಅದನ್ನು ರಾಣಿಯವರು ಮಾಚ್ಚಣಿಗೆ ಮೇಲಿನಿಂದ ಮೂರಾವರ್ತಿ ಗುಂಡು ಹೊಡೆದು ಕೊಂದು ಹಾಕಿದ್ದಾರೆ.

ಪೂನಾಮಲಿ ಎಂಬಲ್ಲಿ ಈಚೆಗೆ ಹಿಂದೂ ಮುಸಲ್ಮಾನರೊಳಗೆ ಕಲಹವಾಯಿತು. ಸುಮಾರು ೨೦೦೦ ಮಹಮ್ಮದೀಯರು ಸೇರಿ ಪಟ್ಟು ಎಂಬ ಗ್ರಾಮಕ್ಕೆ ನುಗ್ಗಿ ಬೆಂಕಿ ಹಾಕಿ ಹಿಂದೂಗಳ ೪೦ ಮನೆಗಳನ್ನು ಸುಟ್ಟು ಹಾಳು ಮಾಡಿದರು ಸುಮಾರು ೪೦೦ ರೂಪಾಯಿ ಕ್ರಯ ಬಾಳುವ ಹುಲ್ಲು ಮೆದೆಗಳಿಗೆ ಬೆಂಕಿ ಕೊಟ್ಟರು. ಹಿಂದೂಗಳು ರೋಷಗೊಂಡು ದೊಣ್ಣೆ ಕಲ್ಲುಗಳ ಸಹಿತ ಮಹಮ್ಮದೀಯರನ್ನು ಹೊಡೆದು ಕಾದಾಡಿದರು, ಒಬ್ಬ ಹಿಂದೂವು ಗುಂಡು ಹೊಡೆದ್ದರಿಂದ ಒಬ್ಬ ಮಹಮ್ಮದೀಯನ ಕಾಲು ಗಾಯವಾಯಿತು ಒಬ್ಬ ಪೋಲಿಸಿನವನಿಗೆ ಕಲ್ಲೇಟು ಬಿದ್ದು ಗಾಯವಾಗಿದೆ. ಅಷ್ಟು ಹೊತ್ತಿಗೆ ಪೋಲಿಸಿನವರು ಹೋಗಿ ಕೋಪಿಗಳನ್ನು ಎತ್ತಿ ದೊಂಬಿಯನ್ನು ಚದರಿಸಿದರು ಈಗ ೫೦ ಮಂದಿ ರಿಜರ್ವ್ ಪೋಲಿಸಿನವರು ಹೋಗಿ ನೆಮ್ಮದಿಯನ್ನು ಕಾಪಾಡುತ್ತಿದ್ದಾರೆ.

ಕಳದ ತಾ ೧೯ಕ್ಕೆ ಅಂತ್ಯವಾದ ವಾರದಲ್ಲಿ ಹಿಂದೂಸ್ಥಾನದೊಳಗೆಲ್ಲಾ ೪,೯೦೭ ಮಂದಿಗೆ ಪ್ಲೇಗು ಬೇನೆ ತಗಲಿ ೩,೮೬೭ ಮಂದಿ ಕಾಲವಾದರು ಈ ಪೈಕಿ ಮುಂಬಾಯಿ ೩೩೨ ಮದ್ರಾಸು ೯೧ ಬಿಹಾರ್ ೪೪೬, ಸಂಯುಕ್ತ ಸಂಸ್ಥಾನ ೮೦೪, ಪಂಜಾಬು ೧೭೪೬, ಬರ್ಮ ೬೫, ಮಧ್ಯ ಪ್ರಾಂತ್ಯಗಳು ೯೮, ಕೊಡಗು ೨ ಮೈಸೂರು ೨೩೨, ಹೈದರಾಬಾದ್ ೪೩, ರಾಜಪುತಾನ ೧ ಕಾಶ್ಮೀರ ೫ ಮರಣಗಳಾದವು.

ಧಾತಿಯಾ ಸಂಸ್ಥಾನದ ಮಹಾರಾಜರು ತಾವೂ, ತಮ್ಮ ಸರದಾರರುಗಳೂ, ತಮ್ಮ ಸಂಬಳಗಾರರೂ ಸಂಸ್ಥಾನದ ಪ್ರಜೆಗಳೂ ಸೇರಿ ಯುದ್ಧದ ಖರ್ಚಿಗೆ ವರ್ಷ ಒಂದಕ್ಕೆ ರೂ. ೨೫,೦೦೦ ದಂತೆ ಕೊಡುತ್ತಾ ಬರುತ್ತೇವೆಂಬದಾಗಿ ವೈಸರಾಯ ಪ್ರಭುಗಳವರಿಗೆ ತಿಳಿಸಿರುವರು

ಪೂರ್ವ ಆಫ್ರೀಕದಲ್ಲಿ ನಡೆದ ಯುದ್ಧದಲ್ಲಿ ಗಾಯ ಒಡೆದವರ ಪರಾಂಬರಿಕೆ ಬಗೆ ಸಿಂಧ್ಯಾ ಮಹಾರಾಜರವರು ಒಂದು ವನೆಯನ್ನು ಕೊಟ್ಟಿರುವರ

ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿಗೆ ಮುಂಬಾಯಲ್ಲಿ ಈ ವರೆಗೆ ರೂ ೩,೧೫೦,೧೬೯—೮—೧೧ ಕೂಡಿರುವದು

ಬಂಗಾಳ ಸರಕಾರದವರು ಕರೆನ್ಸಿ ನೋಟು ಕತ್ತರಿಸುವ ಪದ್ಧತಿಯ ಬಗ್ಗೆ ಬಂಗಾಳ ನ್ಯಾಶನಲ್ ಚೇಂಬರ್ ಆಫ್ ಕಾಮರ್ಸದವರ ಅಭಿಪ್ರಾಯವನ್ನು ಕೇಳಿದ್ದರು ಅದಕ್ಕೆ ಈ ಚೇಂಬರ್ ಆಫ್ ಕಾಮರ್ಸ್‌ರವರು ಈ ರೀತಿ ಉತ್ತರ ಕೊಟ್ಟಿರುವರು —"ಕರೆನ್ಸಿ ನೋಟ ಕತ್ತರಿಸುವ ಪದ್ಧತಿಯಿಂದ ಆ ನೋಟು ತೆಗೆದುಕೊಳ್ಳುವವನು ಅದರ ಎರಡೂ ತುಕ್ಕಡಿಗಳು ಒಂದಕ್ಕೊಂದು ಸರಿ ಇರುವದನ್ನು ಹಾಗೂ ಒಂದು ನೋಟಿನ ತುಕ್ಕಡಿಯನ್ನು ಇನ್ನೊಂದಕ್ಕೆ ತಪ್ಪಿ ಹಚ್ಚಿ ಇರುವ ಸಂಗತಿಯನ್ನು ಚನ್ನಾಗಿ ಪರೀಕ್ಷಿಸಿ ತೆಗೆದುಕೊಳ್ಳಬೇಕಾಗುತ್ತದೆ ಇದರಿಂದ ಅದನ್ನು ತೆಗೆದುಕೊಳ್ಳುವವನಿಗೆ ಶ್ರಮವೂ ತೊಂದರೆಯೂ ಉಂಟಾಗುವವೆಂಬದು ನಿಜವು. ಆದರೆ ಈ ಶ್ರಮಕ್ಕಿಂತಲೂ ಕರೆನ್ಸಿ ನೋಟುಗಳನ್ನು ಕತ್ತರಿಸುವ ಪದ್ಧತಿಯಿಂದ ಉಂಟಾಗುವ ಲಾಭವು ಹೆಚ್ಚಾಗಿರುವದು ಕರೆನ್ಸಿ ನೋಟು ಕತ್ತರಿಸುವ ಪದ್ಧತಿಯಿಂದ ಅವುಗಳನ್ನು ಬೇರೆಬೇರೆಯಾಗಿ ಸುರಕ್ಷಿತ ಸ್ಥಳದಲ್ಲಿ ಇಡಲಿಕ್ಕೆ ಬರುವದು ಇದರಿಂದ ವ್ಯಾಪಾರಸ್ಥರಿಗೂ ದ್ರವ್ಯದ ವ್ಯವಹಾರಮಾಡುವವರಿಗೂ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹಣ ಕಳುಹಿಸಲಿಕ್ಕೆ ಹೆಚ್ಚು ಅನುಕೂಲವಾಗುವುದು ೨೦೦೦ ರೂಪಾಯಿಗಳ ತನಕ ನೋಟುಗಳನ್ನು ಇನ್ಸೂರೆನ್ಸ್ ಮಾಡುವ ಪದ್ಧತಿಯಿಂದ ಖರ್ಚು ಹೆಚ್ಚು ಬೀಳುತ್ತದೆ. ರೈಲ್ವೇ ಪ್ರಯಾಣಮಾಡುವವರು ಅರ್ಧ ನೋಟನ್ನು ಕತ್ತರಿಸಿ ತಮ್ಮ ಹತ್ತರ ಇಟ್ಟುಕೊಂಡು ಉಳಿದ ಅರ್ಧ ನೋಟನ್ನು ಎರಡನೆ ಕಡೆ ಇಟ್ಟರೆ ಕಳವಿನ ಅಂಜಿಕೆಯು ಇರುವದಿಲ್ಲ ಒಂದುವೇಳೆ ಕಳ್ಳರ ಕೈಯಲ್ಲಿ ಅರ್ಧ ನೋಟು ಹೋದಾಗ್ಯೂ ಅವರಿಗೆ ಏನೂ ಲಾಭವಾಗುವುದಿಲ್ಲ. ಆದ್ದರಿಂದ ಈ ಎಲ್ಲಾ ಕಾರಣಗಳಿಗೋಸ್ಕರ ಕರೆನ್ಸಿ ನೋಟು ಕತ್ತರಿಸುವ ಪದ್ಧತಿಯು ಒಳ್ಳೇದಿದ್ದು ಅದನ್ನು ಸರಕಾರದವರು ನಿಲ್ಲಿಸಬಾರದು

ಬಂಗಾಳದ ಪ್ರಸಿದ್ಧ ದೇಶಭಕ್ತರಾದ ಬಾಬುಸುರೇಂದ್ರನಾಥ ಬೆನರ್ಜಿಯವರು ೬೭ನೇ ವರ್ಷ ವಯಸ್ಸಿನವರಿದ್ದು ಕಲ್ಕತ್ತೆಯ ರಿಪನ್‌ಕಾಲೇಜಿಯ ಪ್ರೊಫೆಸರರೂ "ಬಂಗಾಲಿ" ಎಂಬ ಇಂಗ್ಲಿಷ್ ದೈನಿಕ ವರ್ತಮಾನ ಪತ್ರದ ಸಂಪಾದಕರಾಗಿಯೂ ಇರುತ್ತಾರೆ. ಇವರು ಇಂಪೀರಿಯಲ್ ನ್ಯಾಯವಿಧಾಯಕ ಸಭೆಯ ಮೆಂಬರರಾಗಿರುತ್ತಾರೆ. ಅದಲ್ಲದೆ ಕಾಂಗ್ರೆಸ್ ಇತ್ಯಾದಿ ಸಭೆಗಳಲ್ಲಿ ಮುಖ್ಯ ಚಾಲಕರಾಗಿ ಕೆಲಸ ಮಾಡುತ್ತಾರೆ. ಇಷ್ಟೇ ಅಲ್ಲ; ಬಂಗಾಳಿ ಭಾಷೆಯಲ್ಲಿ ಒಂದು ದೈನಿಕ ಪತ್ರಿಕೆಯನ್ನು ಬೇಗನೇ ಹೊರಡಿಸಲಿಕ್ಕೆ ಇದ್ದಾರೆಂಬ ವಾರ್ತೆಯು ಇದೆ. ಇವರು ಇಷ್ಟು ವಯಸ್ಸಿನ

ವರಾಗಿದ್ದರೂ ವಮುಪ್ಪಿನಲ್ಲಿ ಇಷ್ಟು ಕಾರ್ಯದಕ್ಷತೆಯಿಂದ ಕೆಲಸ ನಡಸುವುದನ್ನು ನೋಡಿ ಆಶ್ಚರ್ಯಪಡಬೇಕಾಗಿದೆ.

ಪಾಟಿಯಾಲ ಸಂಸ್ಥಾನದ ಯುವರಾಜರು ಲಿಸೋಲೀಲ್ ಎಂಬ ಒಂದು ಭಾರೀ ಜೂಜಿನ ಕುದುರೆಯನ್ನು ೧೫,೦೦೦ ರೂಪಾಯಿಗೆ ಕರಿಸಿಕೊಂಡಿದ್ದಾರೆ

ಹಿಂದೂಸ್ಥಾನದ ಆಯುರ್ವೇದ ಕನ್ಪರೆನ್ಸ್ ಇದೇ ತಾ ೯ ರಲ್ಲಿ ಕಲ್ಕತ್ತೆಯಲ್ಲಿ ಕೂಡಿಬರುವುದು. ಕಲ್ಕತ್ತೆಯ ಚೀಫ್ ಜಸ್ಟಿಸರು ವಸ್ತು ಪ್ರದರ್ಶನವನ್ನು ತೆರೆಯುವರು

ಅತ್ಯುತ್ತಮವಾದ ಕಸ್ತೂರಿ ತೊಲೆ ಗಕ್ಕೆ ರೂ. 30. ನಂಬ್ರ 2 ತೊಲೆಗಕ್ಕೆ ರೂ. 25. ಸನ್ ಬ್ರೆಂಡ್ ಕೇಸರಿ ತೊಲೆಗಕ್ಕೆ ರೂ. 1—6—0. ಕಾಶ್ಮೀರ ಕೇಸರಿ ತೊಲೆಗಕ್ಕೆ ರೂ. 1—4—0. ಅತ್ಯುತ್ತಮವಾದ ಸಿಂಗಾಪುರದ ಪಚ್ಚೆ ಕರ್ಪೂರ ತೊಲೆ ಗಕ್ಕೆ ರೂ. 2. ಸಿಂಹರವರ ಸುಗಂಧ ಕಾಯಿಗಳು ಟಿನ್ ಒಂದಕ್ಕೆ ಆಣೆ 8.



ಪಿ. ಎಸ್. ಸಿಂಹಂ ಮತ್ತು ಕಂಪೆನಿ,

ಆದಿಯಪ್ಪನ್ಯಾಕ ರಸ್ತೆ,

ಮಂದರಾಸು.

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಸೂಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಫುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾಗುವುದು.

ನಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿ. ಚಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹೊಟ್ಟೆ ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕ್ಷಯರೋಗಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲೇ ವಾಂತಿಯಿಲ್ಲದೆ, ಗುಣವು ತೋರುತ್ತದೆ. ಸಮಯದಲ್ಲಿ ಬೇಕಾದಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ವೈದ್ಯೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ

ಮೈಸೂರು.

BOX LOCKS.



PADLOCKS.



ಧಾರಣೆ ಸುಲಭ! **ಅಲಿಗರ್ ಬೀಗಗಳು.** ಧಾರಣೆ ಸುಲಭ!

ಭದ್ರವಾಗಿಯೂ, ಬಾರವಾಗಿಯೂ ಇರವುದು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ ನೋಡುವುದಕ್ಕೆ ಅಂದವಾಗಿಯೂ ಇರುವುದು ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳ

ನಂಬ್ರು	1	2	3	4	5
	0–12–0	0–15–0	1–4–0	1–10–0	

ಆರು ಚಕ್ರಗಳಿರುವ ಬೀಗಗಳ

1–2–0 1–8–0 2–4–0 3–0–0 3–8–0

ಪಿಲ್ಲರ್ ಬೀಗಗಳು

0–4–0 0–5–0 0–6–0 0–8–0 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ಒಕ್ಕೆ 0–1–0

೩, ೪, ೫ನೇ ನಂಬರು ಬೀಗಗಳನ್ನು ಬಾಗಿಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೬ ಚಕ್ರಗಳಿರುವ ಬೀಗಗಳು ಒಕ್ಕೆ 1–8–0, 1–12–0

ವಿಳಾಸ.— ಎಚ್ ಎಸ್ ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ಪುಸ್ತಕ, ಹೊಸತರಹ, ಅಂದವಾದ ಅಚ್ಚು, ಐದು ಭಾಗ ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ಇದು ಒಂದನೇ ಪುಸ್ತಕ. ಬೆಲೆ ರೂ 1 ದೇಶಬಾಂಧವರಿಗೆ ಬೆಲೆ ಕಮ್ಮಿ ಮಾಡಿದೆ ಇದನ್ನು ಗುರುವಿನಂತೆ ಭಾವಿಸಿ. ತಪಾಲು ಖರ್ಚು 0–2–0.

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ ರೂ. 3

ರೆವಿನ್ಯು ಸರ್ವೆ ಮೋಜಣಿ ಕ್ವಾಲಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1–4–0.

ರಾವ್‌ಬಹದೂರ್ ವೀರೇಶಲಿಂಗಂ ಪಂತುಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಶನ್ ಬೆಲೆ ರೂಪಾಯಿ 1–0–0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ. ಅ.		ರೂ. ಅ.		ರೂ. ಅ.
ಜಮಾ ಖರ್ಚಿನ ಪದ್ಧತಿ	0–12	ಆರ್ಯಕೀರ್ತಿ .	0 10	ಕುಣಿಗಲು ರಾಮಾಶಾಸ್ತ್ರಿ	
ಇಂಡ್ಯನ್ ಪೆನಲ್ ಕೋಡ	2–0	ಶಾಕುಂತಲ ನಾಟಕ	0–8	ಗಳವರ ಚರಿತ್ರೆ	1–0
ಅರೆಬಿಯನ್ ನೈಟ್ಸ್	2–4	ಸ್ತ್ರೀ ಧರ್ಮನೀತಿ	0–8	ಸುಮತಿ ಮದನಕುಮಾರರ	
ಸುರಸ .	0–4	ಶೋಧನೆ. .	0–8	ಚರಿತ್ರೆ I	0–8
ಕ್ಯಾಮು . .	0–1	ಚಂದ್ರಕಳಾ .	0–4	,, II	0–7
ಇಂದ್ರ ವಜ್ರ . .	0–4	ಕಲಾನಾಥ .	0–6	ಶಿವಗೀತೆ .	0–6
ಚೆಲ್ಕೋಜಿ . .	0–3	ಪ್ರ. ಲೇಖ್ಯಬೋಧಿನಿ	1–4	ಪಾಕಶಾಸ್ತ್ರ .	0–8
ಕನಕಾಲುಕ. .	0–6	ವಿಷವೃಕ್ಷ .	1–4	ಸನಾತನಧರ್ಮ ದೀಪಿಕೆ	1–0
ಹನುಮದ್ವಿಲಾಸ .	0–8	ಮುದ್ರಾಮಂಜೂಷ	1–8	ಬಾಲರಾಮಾಯಣ .	0–4
ಶಿವಾನಂದಲಹರಿ .	0–6	ಶುಕಸಪ್ತತಿ .	2–0	ಕಥಾ ಮಂಜರಿ .	0–6

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮುಹೂರ್ತ, ಮಾಯಾವಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರ ರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಆಣೆ.

ವಿಳಾಸ:— **ವಿದ್ಯಾಸಾಗರ ಬುಕ್ ಡಿಪೋ,**

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು "ಕೊಡ್" ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತಕ್ಕೆಗ್ಗೆದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯು ಎಷ್ಟರಮಟ್ಟಿಗೆ ಅಂತವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಹಾನೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಅದರಿಂದ ತಕ್ಕೆಗ್ಗಿದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಏರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಅದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ ಶ್ವಾಸಕಾಸ ಕ್ಷಯ ಮೊದಲಾದ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಏರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ ಈ ಮಿಶ್ರಣವು ಸುಗಂಧವಾಗಿರುತ್ತದೆ ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3–4–0. ಅರ್ಧ ಬಾಟ್ಲಿಗೆ 1–12–0

ದಿ. ಊಲನ್ ಮಾರ್ಟ್ ಮಂಗಳೂರು,

ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 10 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8–0–0

೨. ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ನಿತ್ರಾಣಿಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ ಬಾಟ್ಲಿ 1ಕ್ಕೆ 1–0–0

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0–12–0

೪. ವಸಂತ ಕುಸುಮಾಕರ —ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1–0–0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು ಕ್ರಯ 4–0–0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2–0–0

೭. ಆನಂದವನವಿಲಾಸ—ಇದು ಡಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5–0–0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಔಷಧ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

150 ಪುಟಗಳ ಪುಸ್ತಕವು.

ಉಚಿತವು

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 32, ಪ್ರಾಡ್ವೇ, ಮದ್ರಾಸ

ನಮ್ಮ ಏಜಂಟರು:— 1. ಮೆಸ್ಸರ್ಸ್ ರಫಯೆಲ್ ಎಂಡ್ ಕೊ., ಬ್ರಹ್ಮಾವರ

2. ಜುಬಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಆಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	ಅರಗಜ	ತೊಲೆ 1ಕ್ಕೆ		2-0-0
ಅಂಬರ್ ಬತ್ತಿ	,,	,, 6-0-0	B ಅರಗಜ	,,	,,	1-0-0
ಕಸ್ತೂರಿ ಬತ್ತಿ	,,	,, 3 0 0	ಕಸ್ತೂರಿ ಬಿಲ್ಲೆ	,,	,,	2-0-0
ಜವಾಜಿ ಬತ್ತಿ	,,	,, 2-0-0	ಜವಾಜಿ ಬಿಲ್ಲೆ	,,	,,	1-0 0
ಪುಣಗಿನ ಬತ್ತಿ	,,	, 1-8-0	ಕೇಸರಿ ಬಿಲ್ಲೆ	,,	,,	0-8-0
ಹನ್ನೀರ್ ಬತ್ತಿ	,,	,, 0-12 0	ತಾಂಬೂಲ ರತ್ನ ಸೀಸೆ 1ಕ್ಕೆ			0-4-0
ಮಸಾಲಾ ಬತ್ತಿ	,,	,, 0-6-0	ದಶಾಂಗ ಡಬ್ಬಿ 1ಕ್ಕೆ			0-4-0

ಮೇನೇಜರ್, «ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ಎಟ್ಲ. ದಕ್ಷಿಣ ಕನ್ನಡ

ಅತ್ಯುತ್ತಮವಾದ ಕಸ್ತೂರಿ ತೊಲೆ ಗಕ್ಕೆ ರೂ 30. ನಂಬ್ರ 2 ತೊಲೆ ಗಕ್ಕೆ ರೂ 25 ಸನ್ ಬ್ರೆಂಡ್ ಕೇಸರಿ ತೊಲೆ ಗಕ್ಕೆ ರೂ. 1—6—0. ಕಾಶ್ಮೀರ ಕೇಸರಿ ತೊಲೆ ಗಕ್ಕೆ ರೂ. 1—4—0. ಅತ್ಯುತ್ತಮವಾದ ಸಿಂಗಾಪುರದ ಪಚ್ಚೆ ಕರ್ಪೂರ ತೊಲೆ ಗಕ್ಕೆ ರೂ. 2 ಸಿಂಹರವರ ಸುಗಂಧ ಕಾಯಿಗಳು ಟಿನ್ ಒಂದಕ್ಕೆ ಆಣೆ 8.



ಸಿ ಎನ್ ಸಿಂಹಂ ಮತ್ತು ಕಂಪೆನಿ,
ಆದಿಯಪ್ಪನ್ನಾಕ ರಸ್ತೆ,
ಮದರಾಸು

S. U. N. & CO.,
BENARES CITY, U P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ನಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಬೀಶನ್ ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯಾವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 4 ರೂ ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0. 2—8—0, 1—4—0, 1—0—0. **ಅರಗಜ** ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0-0, 1—0—0, 0—12—0, 0—6—0. **ರಾಯಲ್ ಸುಗಂಧಿ** ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರ

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನಕ್ಕೇಸು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220. ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.



ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ಕೈಬಿಡಿಸಿಕೊಂಡು ಹೋಗಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಡುತ್ತದೆ. ಸಮಯದಲ್ಲಿ ಬೇಕಾದಲ್ಲಿ! ಒಂದೇ ಒಂದು ಡೋಸು ಕೊಡಲು ತಡವಿಲ್ಲವೇ, ಗುಣ ತೋರುತ್ತದೆ. ಸಮಯದಲ್ಲಿ ಬೇಡಾದಿರಿ!— ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲೆ

ಮೈಸೂರು.

BOX LOCKS.



PADLOCKS



ರಣೆ ಸುಲಭ! ಅಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಸ್ಥಿರವಾಗಿಯೂ ಇರುವುದು. ಒಂದರ ಬೀಗದಕೈ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನ ಇಂಜಿನಿಯರ್ ಇಲಾಖೆಗಳಿಗೂ ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ್ರು	1	2	3	4	5
	0–12–0	0–15–0	1–4–0	1–10–0	

ಆರು ಚಕ್ರಗಳಿರುವ ಬೀಗಗಳು

1–2–0 1–8–0 2–4–0 3–0–0 3–8–0

ವಿಲ್ಲರ್ ಬೀಗಗಳು

0–4–0 0–5–0 0–6–0 0–8–0 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ಒಕ್ಕೆ 0–1–0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮೀಷನ್ ದೊರೆಯುತ್ತೆ. ಕಾಗದ ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೬ ಚಕ್ರಗಳಿರುವ ಬೀಗಗಳು ಒಕ್ಕೆ 1–8–0, 1–12–0

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ಪುಸ್ತಕ, ಹೊಸತರಹ, ಅಂದವಾದ ಅಚ್ಚು, ಐದು ಭಾಗ ಒಟ್ಟಿಗೆ ಸೇರಿರುವ **ದೊಡ್ಡ** ಪುಸ್ತಕ ಇದು ಒಂದನೇ ಪುಸ್ತಕ ಬೆಲೆ ರೂ 1 ದೇಶಬಾಂಧವರಿಗೆ ಬೆಲೆ ಕಮ್ಮಿ ಮಾಡಿದೆ ಇದನ್ನು ಗುರುವಿನಂತೆ ಭಾವಿಸಿ. ತಪಾಲು ಖರ್ಚು 0–2–0.

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ. ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3.

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1–4–0.

ರಾವ್‌ಬಹದೂರ್ ವೀರೇಶಲಿಂಗಂ ಪನ್ತುಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಶನ್ ಬೆಲೆ ರೂಪಾಯಿ 1–0–0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ. ಅ.		ರೂ. ಅ.		ರೂ. ಅ.
ಆಮೂ ಖರ್ಜನ ಪದ್ಧತಿ	0–12	ಆರ್ಯಕೀರ್ತಿ .	0 10	ಕುಣಿಗಲು ರಾಮಾಶಾಸ್ತ್ರಿ	
ಇಂಡ್ಯನ್ ಪೆನಲ್‌ಕೋಡ	2–0	ಶಾಕುಂತಲ ನಾಟಕ	0–8	ಗಳವರ ಚರಿತ್ರೆ	1–0
ಅರೆಬಿಯನ್ ನೈಟ್ಸ್	2–4	ಸ್ತ್ರೀ ಧರ್ಮನೀತಿ	0–8	ಸುಮತಿ ಮದನಕುಮಾರರ	
ಸುರಸ .	0–4	ಶೋಧನೆ. .	0–8	ಚರಿತ್ರೆ I	0–8
ಶ್ಯಾಮು . .	0–1	ಚಂದ್ರಕಲಾ .	0–4	,, II	0–7
ಇಂದ್ರ ವಜ್ರ. .	0–4	ಕಲಾನಾಥ .	0–6	ಶಿವಗೀತೆ .	0–6
ಟೆಕ್ಸ್ಟೋಜ . .	0–3	ಪ್ರ. ಲೇಖ್ಯಬೋಧಿನಿ	1–4	ಪಾಕಶಾಸ್ತ್ರ .	0–8
ಕನಕಾಲುಕ. .	0–6	ವಿಷವೃಕ್ಷ .	1–4	ಸನಾತನಧರ್ಮ ದೀಪಿಕೆ	1–0
ಹನುಮದ್ವಿಲಾಸ .	0–8	ಮುದ್ರಾಮಂಜೂಷ	1–8	ಬಾಲರಾಮಾಯಣ .	0–4
ಶಿವಾನಂದಲಹರಿ .	0–6	ಶುಕಸಪ್ತತಿ .	2–0	ಕಥಾ ಮಂಜರಿ. .	0–6

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮುಹೂರ್ತ, ಮಾಯಾವಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರ ರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಆಣೆ.

ವಿಳಾಸ:— **ವಿದ್ಯಾಸಾಗರ ಬುಕ್ ಡಿಪೋ,**

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತೆಗೆಯಲ್ಪಟ್ಟುದು. ಇದರಿಂದ ದೊರೆಕತಕ್ಕ ಲಾಭವಾದರೋ ಇದರಲ್ಲಿಯ ಎಣ್ಣೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಹಾಗೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ತಯಾರಿಸಲ್ಪಟ್ಟ ಬೇರೆ ಔಷಧಗಳು ಹೊಲಸಾಗಿಯೂ ಅಸಹ್ಯವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಿರುವದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಅರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಅದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಅಗ್ಗೆ ಪೋಟರ್ ಅರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುಲಭವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3–4–0. ಅರ್ಧ ಬಾಟ್ಲಿಗೆ 1–12–0.

ದಿ. ಊಲನ್ ಮಾರ್ಟ್. ಮಂಗಳೂರು,

ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8–0–0

೨ ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ನಿತ್ರಾಣಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1–0–0.

೩ ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0–12–0

೪. ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1–0–0

೫ ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4–0–0

೬ ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಜಾತಿ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2–0–0

೭ ಆನಂದವನವಿಲಾಸ—ಇದು ಡ್ಯಾಬಿಟೀಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5–0–0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಧೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಷ್ಟಿಕ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯಪಟ್ಟಿಗಳನ್ನು ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಕೊಡಲ್ಪಡುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

150 ಪುಟಗಳ ಪುಸ್ತಕವು.

ಉಚಿತವು

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 32, ಬ್ರಾಡ್ವೇ, ಮದ್ರಾಸ

ನಮ್ಮ ಏಜಂಟರು:— 1. ಮೆಸ್ಸರ್ಸ್ ರಫಯೆಲ್ ಎಂಡ್ ಕೊ., ದ್ವಿತೀಯಲ್ಲಿಯೂ

2. ಜುಬಿಲಿ ಕೇಕ್ ಬಜಾರ್. ಬೆಂಗಳೂರು. ಮಂಗಳೂರು

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs. ...	300,000—0—0	ನಿಯಮಿತ ಮೂಲ ಧನವು ರೂಪಾಯಿ ...	300,000—0—0
Issued Capital ...	225,000—0—0	ಹುಟ್ಟಿಬಂದ ಮೂಲ ಧನವು ,, ...	225,000—0—0
Subscribed Capital ...	217,400—0—0	ಪ್ರತಿಜ್ಞಾತ ಮೂಲ ಧನವು ,, ...	217,400—0—0
Paid up Capital ...	192,400—0—0	[illegible] ಮೂಲ ಧನವು ,, ...	192,400—0—0
Deposits ...	455,326—7—10	[illegible] ಮೊಬಲಗುಗಳು ...	455,326—7—10
Reserve Fund ...	27,590—12—0	[illegible] ಧನವು ...	27,590—12—0

Besides the uncalled capital of Rs. 25,000/- [illegible] % of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-.

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one week's notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge.

Canara Bank Ltd.,
Mangalore, 1st. December 1914.

[illegible] 22,500ರ [illegible] ಪತ್ರಗಳಲ್ಲಿ [illegible]

[illegible] 6% [illegible] 1ರಿಂದ 2 [illegible] ಕೊಡಲ್ಪಟ್ಟಿರುತ್ತದೆ.

[illegible] ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½% [illegible] 50 ಯೂ 50ಕ್ಕೆ ಮೇಲ್ಪಟ್ಟ [illegible] ಮ್ಯಾನೇಜಿಂಗ್ [illegible] ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವುದು.

[illegible] ತಿಂಗಳು [illegible] ಮ್ಯಾನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವುದು.

"ಕರೆಂಟ್ ಎಕೌಂಟ್" ಎಂಬ ಖಾತೆಯ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ [illegible] ಇಡಲ್ಪಡುತ್ತವೆ.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ [illegible] ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡಲ್ಪಡುವುದು.

ಯೋಗ್ಯ [illegible] ಮೇಲೆ ಸಾಲಗಳು ಕೊಡಲ್ಪಡುವುವು.

[illegible] ಭದ್ರ [illegible] ಸಾಧಾರಣ ದರದಲ್ಲಿ ಪಡಕೊಳ್ಳಲಾಗುವುದು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿದ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮಂ [illegible] ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯ ಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ, ನಿಮಿರಾಯನ ಶರೀರತ್ಯಾಗ, ಜನಕವಂಶ [illegible] ಚರಿತ್ರೆ, [illegible] ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀಕೃಷ್ಣ ಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೆ ಶ್ರೀಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦. ಟಪ್ಪಾಲು ಹಾಸಲು ೦—೩—೦.

ಸಿಕ್ಕುವ ಸ್ಥಳ— ಎಂ. ದೇ. ರಾಯ ಕಂಪೆನಿ.

[illegible]

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಖು 15ನೇ ಜನವರಿ 1915

ಮದರಾಸು ಸಂಸ್ಥಾನಿಕ ತೃತೀಯ ಪರಸ್ಪರ ಸಹಾಯಕ ಪರಿಷದ.

ಕಳೆದ ಕ್ರಿಸ್ಟ್‌ಮಸ್ ರಜೆಯ ದಿವಸಗಳಲ್ಲಿ ನಮ್ಮ ಸಂಸ್ಥಾನದ ಮುಖ್ಯ ಪಟ್ಟಣದಲ್ಲಿ ಜರಗಿದ ಮಹಾ ಸಭೆಗಳಲ್ಲೆಲ್ಲಾ ಅತಿ ಮುಖ್ಯವಾದ ಮಹಾಸಭೆಯೊಂದು ನಮ್ಮವರ ಮನಸ್ಸಿಗೆ ಸಾಕಷ್ಟರ ಮಟ್ಟಿಗೆ ನಾಟಲಿಲ್ಲವೆಂದು ತೋರುತ್ತದೆ. ಕ್ರಿಸ್ಮಸ್ ರಜೆಯಲ್ಲಿ ಜನಸಮ್ಮೇಳನಕ್ಕೆ ಹೋಗಿ ಬಂದವರೊಡನೆ ಅಲ್ಲಿಯ ಪ್ರಸಂಗವನ್ನೆತ್ತಿದರೆ ಅವರ ಸಂಭಾಷಣೆಯಲ್ಲಿ ಪರಸ್ಪರ ಸಹಾಯಕ ಪರಿಷದದ ಪ್ರಸ್ತಾವವು ಬರುವುದೇ ಇಲ್ಲ. ಆದರೆ ಚೆನ್ನಾಗಿ ವಿಮರ್ಶಿಸಿ ನೋಡಿದರೆ, ನಮ್ಮ ದೇಶದಲ್ಲಿ ಪ್ರಕೃತಕ್ಕೆ ಸಾಧ್ಯವಿರುವ ಯಾವತ್ತೂ ಸಾಧನೆಗಳಲ್ಲಿಯೂ ಪರಸ್ಪರ ಸಹಾಯವೇ ಅತ್ಯುಪಯುಕ್ತವಾದ ಸಾಧನೆಯೆಂದು ತಿಳಿಯಬೇಕಾಗುತ್ತದೆ. ನಮ್ಮ ಪ್ರಿಯ ಸಾರ್ವಭೌಮರಾದ ಶ್ರೀ ೫ ೧೯೧೧ನೇ ವರ್ಷದಲ್ಲಿ ನಮ್ಮ ದೇಶಕ್ಕೆ ದಯಮಾಡಿಸಿದ್ದಾಗ, ಹಿಂದುಸ್ಥಾನದ ಈಗಿನ ರಾಜಧಾನಿಯಾದ ದೆಹಲೀ ನಗರದ ಮುನಿಸಿಪಾಲಿಟಿಯವರ ಮಾನಪತ್ರಕ್ಕೆ ದಯಪಾಲಿಸಿದ ಉತ್ತರದಲ್ಲಿ ಪರಸ್ಪರ ಸಹಾಯದ ಕುರಿತು ಹೀಗೆಂದು ಹೇಳಿದರು.

"ಪರಸ್ಪರ ಸಹಾಯ ಪದ್ಧತಿಯನ್ನು ಚೆನ್ನಾಗಿ ಬೆಳಸಿ ಬಳಕೆಗೆ ತಂದರೆ, ಈ ದೇಶದ ಉತ್ತರಾಭಿವೃದ್ಧಿಯು ಬಹಳ ಉಚ್ಚಸ್ಥಿತಿಯಲ್ಲಿ ಮುಂದೆ ಸಾಗುವುದೆಂದು ನನಗೆ ತೋರುತ್ತದೆ"

ಪರಸ್ಪರ ಸಹಾಯಕ ಸಂಸ್ಥೆಗಳು ಬೆಳೆಯುತ್ತಿದ್ದ ಹಾಗೆಲ್ಲಾ ಅವುಗಳ ಆಚಾರ ವಿಚಾರವನ್ನು ಪರ್ಯಾಲೋಚಿಸಿ ಹಿಂದಣ ಅನುಭವವನ್ನು ಮುಂದಣ ಅಭಿವೃದ್ಧಿಗೋಸ್ಕರ ವಿನಿಯೋಗಿಸುವುದಕ್ಕೂ ಕುಂದು ಕೊರತೆಗಳನ್ನು ಹೋಗಲಾಡಿಸಿ ನವೀನ ರೂಪಾಂತರಗಳನ್ನು ಕಲಿತುಕೊಳ್ಳುವುದಕ್ಕೂ ಪರಸ್ಪರ ಸಹಾಯ ಸಂಬಂಧವಾಗಿ ನಡೆಯಿಸಬಹುದಾದ ಕೃತ್ಯಗಳ ಫಲಾಫಲಗಳನ್ನು ತಿಳಿದುಕೊಳ್ಳುವುದಲ್ಲದೆ ಆ ಕುರಿತು ದೇಶೋದ್ಧಾರಕ್ಕೆ ಆಗತ್ಯವಿರಬಹುದಾದ ನೂತನ ಕಾರ್ಯಗಳನ್ನು ಕೈಕೊಳ್ಳುವುದಕ್ಕೂ ಸಹ ಪರಸ್ಪರ ಸಹಾಯಕ್ಕೆ ಗಮನ ಕೊಡುವ ದೇಶಹಿತೈಷಿಗಳೆಲ್ಲರೂ ಒಟ್ಟುಕೂಡಿ ಮಹಾಸಭೆ ಸೇರುವುದು ಅವಶ್ಯವಾಗಿ ಬಂದಿತು. ಆದುದರಿಂದ ೧೯೧೨ನೇ ಇಸವಿಯಲ್ಲಿ ಕೆಲವರು ಮುಂದಾಳುಗಳಾಗಿ ಒಂದು ಸಂಸ್ಥಾನಿಕ ಮಹಾಸಭೆಯನ್ನು ಜರಗಿಸಿದರು. ಅದೇ ಪ್ರಥಮ ಪರಿಷದವಾಯಿತು. ಈ ಮಹಾ ಸಭೆಯಲ್ಲಿ ಚರ್ಚಿತವಾದ ಕೆಲವು ಸೂಚನೆಗಳ ದೆಸೆಯಿಂದಲೂ ಪ್ರಮುಖರಾಗಿದ್ದ ಕೆಲವು ಮಂದಿ ಪರಸ್ಪರ ಸಹಾಯಾನುವರ್ತಿಗಳ ಸಾಧನೆಯಿಂದಲೂ ೧೯೧೩ನೇ ಇಸವಿಯ ಕೊನೆಗಾಲದಲ್ಲಿ ವರ್ಷಕ್ಕೊಮ್ಮೆ ಮಾತ್ರ ನೆರೆಯುವ ಸಭೆಗಿಂತ ಶಾಶ್ವತವಾಗಿ ಏರ್ಪಡಿಸಿದ ಒಂದು ಸಂಘದಿಂದಲೇ ಅತ್ಯುತ್ತಮವಾದ ಪ್ರಯೋಜನವನ್ನು ಹೊಂದಬಹುದೆಂಬ ಆಲೋಚನೆಯುಂಟಾಗಿ, ಕಟ್ಟಕಡೆಗೆ ದ್ವಿತೀಯ ಪರಿಷದದ ಸಭೆ ಮುಗಿದೊಡನೆ ಪರಸ್ಪರ ಸಹಾಯಕ ಇಲಾಖೆಯ ಸಂಸ್ಥಾನಿಕ ಮುಖ್ಯಾಧಿಕಾರಿಯಾದ ರಿಜಿಸ್ಟ್ರಾರವರ ಸಹಾನುಭೂತಿಯಿಂದ, "ಮದರಾಸು ಪ್ರೊವಿನ್ಸಿಯಲ್ (ಸಂಸ್ಥಾನಿಕ) ಕೋ-ಆಪರೇಟಿವ್ (ಪರಸ್ಪರ ಸಹಾಯಕ) ಯೂನಿಯನ್ (ಕೂಟ)" ಎಂಬ ಒಂದು ಸಂಘವು ಸ್ಥಾಪಿತವಾಯಿತು. ಈಗ ಕಳೆದ ೨ನೇ ತಾರೀಕಿಗೆ ಸೇರಿದ ತೃತೀಯ ಪರಿಷದವು ಸದರಿ ಸಂಸ್ಥಾನಿಕ ಕೂಟದವರಿಂದಲೇ ನಡೆಯಿಸಲ್ಪಟ್ಟಿತ್ತು.

ಪ್ರಜಾಪೂರಿತವಾಗಿ ಪ್ರಜಾಜನರಿಂದಲೇ ಸೃಷ್ಟಿಸಲ್ಪಟ್ಟು ಪ್ರಜೆಗಳಲ್ಲಿ ಮುಖಂಡರಾದವರಿಂದಲೇ ನಡೆಯಿಸಲ್ಪಡುವ ಯಾವ ಸಂಸ್ಥೆಗಳಲ್ಲಾದರೂ ಸರಕಾರಿ ನೌಕರರು ಹೆಚ್ಚಿನ ಗಮನವನ್ನು ಕೊಡುವ ವಾಡಿಕೆಯು ಈ ದೇಶದಲ್ಲಿ ವಿಶೇಷ ಪ್ರಚಾರದಲ್ಲಿರಲಿಲ್ಲವಷ್ಟೇ. ಆದರೆ ಪರಸ್ಪರ ಸಹಾಯ ಸಂಬಂಧವಾದ ಚಟುವಟಿಕೆಗಳಲ್ಲಿ ಸರಕಾರದವರೇ ಪ್ರಾಮುಖ್ಯವಾದ ಕಾರ್ಯ ವಿಶೇಷಗಳನ್ನು ನಡೆಯಿಸುತ್ತಿದ್ದಾರೆ. ಸಾಧಾರಣವಾದ ರಾಜಕೀಯ ವಿಷಯಗಳಲ್ಲಿ ರಾಜನ್ಯರಿಗೂ ಪ್ರಜಾಜನರಿಗೂ ಭಿನ್ನಾಭಿಪ್ರಾಯಗಳು ಎಷ್ಟಿದ್ದಾಗ್ಯೂ, ಈ ಪರಸ್ಪರ ಸಹಾಯವೆಂಬದೊಂದು ಪ್ರಸಂಗದಲ್ಲಿ ಮಾತ್ರ ಇತ್ತಂಡದವರೂ ಏಕಮನಸ್ಕರಾಗಿದ್ದಾರೆ. ಈ ಕಾರಣದಿಂದ ಜನಹಿತೇಚ್ಛುಗಳಿಗೆ ದೇಶೋನ್ನತಿಯನ್ನೈದುವುದಕ್ಕೆ ಈ ಮಾರ್ಗವೇ ರಾಜಮಾರ್ಗವಾಗಿರುವುದು. ಮತ್ತು ಜನರ ಐಹಿಕ ಸುಖಕ್ಕೆ ಪರಸ್ಪರ ಸಹಾಯವೆಂಬದು ಎಷ್ಟರ ಮಟ್ಟಿನ ಸಾಧನೆಯಾಗಿ ಪರಿಣಮಿಸುವುದೆಂದು ಚೆನ್ನಾಗಿ ಆಲೋಚಿಸಿ ನೋಡಿದರೆ, ಇದು ಅತ್ಯಂತ ಪ್ರಧಾನವಾದ ವಿಷಯವೆಂದು ಸರ್ವರೂ ಒಪ್ಪಲೇಬೇಕು.

ಕಳೆದ ತೃತೀಯ ಪರಿಷದದಲ್ಲಿ ನಮ್ಮ ಮದರಾಸು ಗವರ್ನರರವರ ಕಾರ್ಯನಿರ್ವಾಹಕ ಸಭೆಯ ಮೊದಲನೇ ಮೆಂಬರರಾದ ಸರ್ ಹೇರಾಲ್ಡ್ ಸ್ಟೂಅರ್ಟ್ ಸಾಹೇಬರವರು ಅಗ್ರಾಸನವನ್ನು ವಹಿಸಿಕೊಂಡಿದ್ದರು. ಮೇಲೆ ಹೇಳಿದ ಸಂಸ್ಥಾನಿಕ ಕೂಟದ ಅಧ್ಯಕ್ಷರಾದ ಮ. ರಾ। ರಾ। ಆದಿನಾರಾಯಣಯ್ಯನವರು ಪರಸ್ಪರ ಸಹಾಯ ಸಂಬಂಧವಾದ ಕೆಲವು ಕಷ್ಟ ಸಂಕಷ್ಟಗಳ ಕುರಿತು ಹೇಳಿಕೊಂಡು ಸಂಘಗಳ ಕಡೆಯಿಂದ ಬಂದ ಪ್ರತಿನಿಧಿಗಳಿಗೆಲ್ಲಾ ಸ್ವಾಗತವನ್ನುಚ್ಚರಿಸಿ ತಮ್ಮ ಉಪನ್ಯಾಸವನ್ನು ಮುಗಿಸಲು ಸಭಾಧ್ಯಕ್ಷರಾದ ಸ್ಟೂಅರ್ಟರವರು ಎದ್ದು ನಿಂತು ಪರಸ್ಪರ ಸಹಾಯ ಪದ್ಧತಿಯ ಉತ್ತರಾಭಿವೃದ್ಧಿಗೆ ಆಗತ್ಯವಿರುವ ಕೆಲವು ಸೂಚನೆಗಳನ್ನು ವಿವರಿಸಿ ಹೇಳಿ ಪರಸ್ಪರ ಸಹಾಯದ ವಿಷಯದಲ್ಲಿ ಸರಕಾರದವರು ತೋರಿಸುತ್ತಿರುವ ಉತ್ತೇಜನವನ್ನು ದೃಢೀಕರಿಸಿ ಸಭೆಯವರ ಕರತಾಡನದ ಸಮಾರಂಭದಿಂದ ಕುಳಿತರು. ಆನಂತರ ಅವರಿಬ್ಬರೂ ತಂತಮ್ಮ ಭಾಷಣಗಳಲ್ಲಿ ಸೂಚಿಸಿದ್ದ ಮತ್ತು ಇತರ ಕೆಲವು ಸಂಗತಿಗಳ ಕುರಿತು ಕೆಲವು ನಿರ್ಣಯಗಳನ್ನು ಸಭೆಯ ಮುಂದಿಟ್ಟು ಅನೇಕ ಪ್ರಮುಖ ಗೃಹಸ್ಥರು ಅನುಮೋದಿಸಿ ಸಭೆಯವರ ಮಂಜೂರಾತಿಯನ್ನು ಪಡೆದರು.

ಅವುಗಳಲ್ಲಿ ಮುಖ್ಯವಾದ ಕೆಲವು ನಿರ್ಣಯಗಳನ್ನು ಈ ಕೆಳಗೆ ಕೊಟ್ಟಿದೆ:—

೧ ಪರಸ್ಪರ ಸಹಾಯಕ ಸಂಘಗಳಿಂದ ಲೆಕ್ಕ ಪರಿಶೋಧನೆಯ ಹಾಸಲನ್ನು ವಸೂಲುಮಾಡುವುದರ ಕುರಿತು ಫೋರ್ಟ್ ಸೆಂಟ್ ಜೋರ್ಜ್ ಗಜೆಟಿನಲ್ಲಿ ಪ್ರಕಟಿಸೋಣಾದ ತಾ. ೧೬ನೇ ಜೂನ್ ೧೯೧೪ರ ಪ್ರಕಟಣೆಯ ವಿಷಯದಲ್ಲಿ ಲೆಕ್ಕ ಪರಿಶೋಧನೆಯ ಖರ್ಚನ್ನು ಪರಸ್ಪರ ಸಹಾಯ ಪದ್ಧತಿಯ ತಾತ್ಕಾಲಿಕ ಅವಸ್ಥೆಯಲ್ಲಿ ಸರಕಾರದವರೇ ಹೊರತಕ್ಕದ್ದೆಂದು ಈ ಪರಿಷದವು ಅಭಿಪ್ರಾಯ ಪಡುತ್ತದೆ.

೨ ವ್ಯವಸ್ಥಾನಿಧಿಗಳನ್ನು (ಟ್ರಸ್ಟ್ ಫಂಡ್ಸ್) ಪರಸ್ಪರ ಸಹಾಯಕ ಸಂಘಗಳಲ್ಲಿ ಠೇವಣಾತಿಗಳಾಗಿಡಲು ಅನುಕೂಲವಾಗುವಂತೆ ಇಂಡಿಯನ್ ಟ್ರಸ್ಟ್ಸ್ ಆಕ್ಟನ್ನು ತಿದ್ದುಪಡಿ ಮಾಡಬೇಕಾಗಿಯೂ, ತನ್ಮಧ್ಯೆ ಹಾಗೆ ಠೇವಣಾತಿಯಾಗಿಡಲು ಅಧಿಕಾರ ಕೊಡುವಂತೆ ಮದರಾಸು ಹ್ಯಾಕೋರ್ಟಿನವರು ಒಂದು ಕ್ರಮವನ್ನೇರ್ಪಡಿಸುವರೆ ಸ್ಥಳೀಯ ಸರಕಾರದವರಿಗೆ ಕೇಳಿಕೊಳ್ಳಬೇಕೆಂತಲೂ ಮತ್ತು ಡಿಸ್ಟ್ರಿಕ್ಟ್ ಬೋರ್ಡು ವ ಮುನಿಸಿಪಾಲಿಟಿಗಳಿಗೆ ತಮ್ಮ ಹಣಗಳನ್ನು ಅಂತಹ ಸಂಘಗಳಲ್ಲೇ ಇಡುವರೆ ಅಧಿಕಾರ ಕೊಡಬೇಕೆಂತಲೂ ಈ ಪರಿಷದವು ಅಭಿಪ್ರಾಯಪಡುತ್ತದೆ.

೩ ಈ ಸಂಸ್ಥಾನದಲ್ಲಿನ ೨೦ ಸಂಘಗಳನ್ನು ಚುನಾಯಿಸಿ ಸರಕಾರದವರು ಅವುಗಳಿಗೆ ಆರೋಗ್ಯರಕ್ಷಣೆಯ ಕೆಲವು ಕಾರ್ಯಗಳನ್ನು ನಿರ್ವಹಿಸುವ ಅಧಿಕಾರವನ್ನು ಕೊಟ್ಟದ್ದಕ್ಕೆ ಈ ಪರಿಷದವು ಕೃತಜ್ಞವಾಗಿರುತ್ತಾ, ಹಾಗೆಯೇ ಇನ್ನೂ ಕೆಲವು ಸಂಘಗಳಿಗೆ ಆ ಕೆಲಸಗಳನ್ನು ಕೊಡುವುದಲ್ಲದೆ ವಿದ್ಯಾಭಿವೃದ್ಧಿ, ಕಾಡುಗಳ ಮೇಲ್ವಿಚಾರ ಮೊದಲಾದ ಇತರ ಕಾರ್ಯಗಳನ್ನು ಸಹ ಅವುಗಳಿಗೆ ಕೊಡಬೇಕಾಗಿ ಅಭಿಪ್ರಾಯಪಡುತ್ತದೆ.

೪ (a) ಬೀಜ, ತಿಂಡಿ, ಗೊಬ್ಬರ, ಉಪಕರಣಗಳು ಮುಂತಾದವುಗಳನ್ನು ಕೊಂಡುಕೊಳ್ಳುವುದಕ್ಕೂ ವಿಕ್ರಯಿಸುವುದಕ್ಕೂ ಮತ್ತು ವ್ಯಾವಸಾಯಿಕ ಉತ್ಪತ್ತಿಗಳನ್ನು ಮಾರುವುದಕ್ಕೂ ವ್ಯಾವಸಾಯಿಕ ಸಂಘಗಳನ್ನು ಏರ್ಪಡಿಸಲು ಪ್ರಯತ್ನಗಳನ್ನು ನಡೆಯಿಸಬೇಕೆಂದು ಈ ಪರಿಷದವು ಅಭಿಪ್ರಾಯಪಡುತ್ತದೆ.

(b) ಕಟ್ಟೋಣಗಳನ್ನು ಕಟ್ಟಿಸುವಗೋಸ್ಕರ ಮತ್ತು ನೇಯಿಗೆ ಮೊದಲಾದ ದೇಶೀಯ ಕೈಗಾರಿಕೆಗಳನ್ನು ಜೀರ್ಣೋದ್ಧಾರ ಮಾಡುವುದಕ್ಕೋಸ್ಕರ ಸಂಘಗಳನ್ನು ಏರ್ಪಡಿಸುವುದಲ್ಲದೆ ಸರಕಾರದವರು ಧನಸಹಾಯವನ್ನು ಸಹ ಮಾಡಬೇಕೆಂತಲೂ ಈ ಬಗ್ಗೆ ಪ್ರತ್ಯೇಕ ನೌಕರರನ್ನು ಮೊಕ್ರುರುಮಾಡುವುದು ಉಚಿತವೆಂತಲೂ ಈ ಪರಿಷದವು ಅಭಿಪ್ರಾಯಪಡುತ್ತದೆ.

ಈ ನಿರ್ಣಯಗಳ ಪ್ರಾಮುಖ್ಯತೆಯ ಕುರಿತು ಇನ್ನೊಂದು ಸಂಚಿಕೆಯಲ್ಲಿ ವಿಚಾರಿಸಿ ಯೋಚಿಸಾಗುವದು.

ಋತುಮತಿಯರಾದ ಬಳಿಕ ಹಿಂದೂ ಸ್ತ್ರೀಯರಿಗೆ ಆಗುವ ವಿವಾಹಗಳು ಸಾಧುವಾದುವೆಂಬುದನ್ನು ವಿಧಿಸಿ ತಿಳಿಸುವ ಬಗ್ಗೆ ಏರ್ಪಟ್ಟ ಮುಸವಿದಾ ಆಕ್ಟು.

ಋತುಮತಿಯರಾದ ಬಳಿಕ ಹಿಂದೂ ಸ್ತ್ರೀಯರಿಗೆ ಆಗುವ ವಿವಾಹಗಳು ಸಾಧುವಾಗಿವೆಯೋ ಎಂಬುದರ ಕುರಿತು ಸಂದೇಹಗಳನ್ನು ಪರಿಹರಿಸುವದೂ ಅಂಥಾ ವಿವಾಹಗಳು ಸಾಧುವಾಗಿವೆ ಎಂಬುದನ್ನು ವಿಧಿಸಿ ತಿಳಿಸುವದೂ ಯುಕ್ತವಾಗಿರುವದರಿಂದ ಇದರ ಮೂಲವಾಗಿ ಈ ಕೆಳಗಿನಂತೆ ನಿರ್ಣಯಿಸಲ್ಪಡುತ್ತಿದೆ:—

1 ಈ ಆಕ್ಟನ್ನು 191 ನೇ ಇಸವಿಯ ಋತುಮತಿಯರಾದ ಹಿಂದೂ ಸ್ತ್ರೀಯರ ವಿವಾಹಗಳ ಕುರಿತ ಆಕ್ಟು ಎಂಬುದಾಗಿ ಕರೆಯಬಹುದು

2. ಅದು ಮದ್ರಾಸ ಪ್ರೆಸಿಡೆನ್ಸಿಯೊಳಗೆ ಮನೆಮಾರುಮಾಡಿಕೊಂಡು ಇದ್ದು ಹಿಂದೂ ಧರ್ಮಶಾಸ್ತ್ರವನ್ನನುಸರಿಸುವ ಯಾವತ್ತೂ ಜನರಿಗೆ ಲಗಾವಾಗತಕ್ಕದ್ದು

3. ಇದಕ್ಕೆ ವಿರೋಧವಾಗಿ ಹಿಂದೂ ಧರ್ಮಶಾಸ್ತ್ರದ ಯಾವ ಪದ್ಧತಿ, ಗ್ರಂಥಾಧಾರ-ಯಾ- ವಿಧಿ ಇದ್ದರೂ, ಹಿಂದೂ ಧರ್ಮಶಾಸ್ತ್ರವನ್ನನುಸರಿಸುವ ಒಬ್ಬ ಸ್ತ್ರೀಗೆ, ಈ ಆಕ್ಟಿನ ಅಮಲು ಪ್ರಾರಂಭವಾಗುವದಕ್ಕೆ ಮುಂಚೆ—ಯಾ— ತರುವಾಯ ಆಗಿರುವ ಯಾವ ವಿವಾಹವಾದರೂ ಆಕೆಯು ವಿವಾಹಕಾಲದಲ್ಲಿ ಋತುಮತಿಯಾದವಳಾಗಿದ್ದಳು ಎಂಬ ಸಬಬಿನ ಮೇಲೆ ಮಾತ್ರ ಅಸಾಧುವೆಂದು ಭಾವಿಸಲ್ಪಡತಕ್ಕದ್ದಲ್ಲ

ಉದ್ದೇಶ ವ ಕಾರಣಗಳ ವಿವರಣೆ

ದಕ್ಷಿಣ ಇಂಡಿಯದ ನಂಬೂದ್ರಿಯರ ವಿನಾ ಇತರ ಬ್ರಾಹ್ಮಣರೊಳಗೂ ಬ್ರಾಹ್ಮಣೇತರರಾದ ಇತರ ಕೆಲವು ಹಿಂದೂಗಳೊಳಗೂ ಹುಡುಗಿಯರಿಗೆ ಋತುಮತಿಯರಾಗುವದಕ್ಕೆ ಮೊದಲೇ ವಿವಾಹಮಾಡುವದು ಈಗಿನ ಪದ್ಧತಿಯಾಗಿದೆ ಋತುಮತಿಯಾದ ಬಳಿಕ ಹುಡುಗಿಯರಿಗೆ ವಿವಾಹಮಾಡುವದು ಶಾಸ್ತ್ರ ಸಮ್ಮತವಲ್ಲವೆಂಬುದೇ ಅವರಲ್ಲಿ ಸಾಮಾನ್ಯವಾದ ನಂಬಿಕೆಯಾಗಿರುವದು ಪರಾಶರ, ಯಮ ಮತ್ತು ಸಂವರ್ತರೇ ಮೊದಲಾದವರ ಕೆಲವು ಸ್ಮೃತಿಗಳು ಇಂತಹ ವಿವಾಹಗಳನ್ನು ಅಂಗೀಕರಿಸುವದಿಲ್ಲ ಮಾತ್ರವಲ್ಲದೆ, ವರನನ್ನೂ, ವಧುವನ್ನೂ, ವಧುವಿನ ಸಂರಕ್ಷಕರನ್ನೂ ಸಹಾ ನಿಂದಿಸುತ್ತವೆಂಬುದು ವಾಸ್ತವವೇ ಆದರೆ ಋತುಮತಿಯಾದವಳಾದ ಒಬ್ಬ ಹುಡುಗಿಯ ವಿವಾಹವು, ಶಾಸ್ತ್ರಸಿದ್ಧವಲ್ಲವೆಂದಾಗಲಿ, ಅಂಥ ವಿವಾಹದಿಂದ ಹುಟ್ಟಿದ ಮಕ್ಕಳು ಜಾರಜಾತರೆಂದಾಗಲಿ ಅವು ವಿಧಿಸುವಂತೆ ತೋರುವದಿಲ್ಲ ಇನ್ನೊಂದು ಪಕ್ಷದಲ್ಲಿ, ಮನು, ಗೌತಮ, ಯಾಜ್ಞವಲ್ಕ್ಯ, ಬೌಧಾಯನ ಮತ್ತು ವಸಿಷ್ಠ ಮೊದಲಾದವರ ಅಷ್ಟೇ ಮಾನ್ಯವಾದ ಅನೇಕ ಸ್ಮೃತಿಗಳು, ಹುಡುಗಿಯರನ್ನು ಋತುಮತಿಯರಾಗುವದಕ್ಕೆ ಮೊದಲೇ ವಿವಾಹಮಾಡಿಕೊಡುವ ಭಾರವನ್ನು ಹೆತ್ತವರ ಮೇಲೆಯೂ ಸಂರಕ್ಷಕರ ಮೇಲೆಯೂ ಹೊರಿಸುವವಾದರೂ, ಆ ರೀತಿ ವರ್ತಿಸುವ ಬಗ್ಗೆ ತದನಂತರ ಮೂರು ವರ್ಷಗಳ ಹೆಚ್ಚಿಗೆ ಅವಧಿಯನ್ನು ಕೊಡುತ್ತವೆ ಮತ್ತು ಸದರೀ ಮೂರು ವರ್ಷಗಳ ತರುವಾಯ ಹುಡುಗಿಯರು ತಾವೇ ತಮಗೆ ಯೋಗ್ಯರಾದವರನ್ನು ಆರಿಸಿಕೊಳ್ಳಬಹುದೆಂದು ನಿಬಂಧಿಸುತ್ತವೆ ಪ್ರಸಿದ್ಧವಾದ ನಾರದ ಸ್ಮೃತಿಯು ಮಾತ್ರ, ಹುಡುಗಿಯು ಋತುಮತಿಯಾದ ಬಳಿಕ ಹೆತ್ತವರು ಆಕೆಯನ್ನು ವಿವಾಹಮಾಡಿಕೊಡುವಲ್ಲಿ ಕಾಲಹರಣ ಮಾಡಕೂಡದಾಗಿ ನಿಬಂಧಿಸುತ್ತದೆ ಸ್ಮೃತಿಗಳಷ್ಟೇ ಮಾನ್ಯಗಳಾಗಿರುವವಾಗಿ ಪ್ರಾಚೀನ ಪದ್ಧತಿಗಳನ್ನು ತಿಳಿದುಕೊಳ್ಳುವದಕ್ಕೆ ಆಧಾರವಾಗಿ ಅವುಗಳಿಗಿಂತ ಅಧಿಕ ಬೆಲೆಯುಳ್ಳ ಗೃಹಸೂತ್ರಗಳ ಕರ್ತೃಗಳು ಋತುಮತಿಗಳಾದವರ ವಿವಾಹವನ್ನೇ ಉದ್ದೇಶಿಸಿರುವಂತೆ ಕಂಡುಬರುತ್ತದೆ; ಯಾಕೆಂದರೆ ಕೆಲಕೆಲವು ನಿಷೇಧಗಳಿಗೆ ಒಳಪಡಿಸಿ, ನಾಗೋಲಿಯ ರಾತ್ರಿಯಲ್ಲಿಯೇ ವಧೂವರರು ವಿವಾಹ ಸಂಸ್ಕಾರದ ಭಾಗವಾಗಿ ಸಂಭೋಗ ಅಥವಾ ಶರೀರ ಸಂಬಂಧವನ್ನು ಮಾಡಬೇಕೆಂದು ನಿರ್ದೇಶಿಸುತ್ತವೆ ಈ ಎಲ್ಲ ವ ಇತರ ಕಾರಣಗಳಿಂದಲೂ ಋತುಮತಿಯಾದ ಬಳಿಕ ಆಗುವ ವಿವಾಹಗಳು ಶಾಸ್ತ್ರಗಳಲ್ಲಿ ನಿಷೇಧಿಸಲ್ಪಡಲಿಲ್ಲ ಮಾತ್ರವೇ ಅಲ್ಲದೆ ಅವನ್ನು ಶಾಸ್ತ್ರಗಳು ಸ್ಪಷ್ಟವಾಗಿ ಅನುಮೋದಿಸುತ್ತಿವೆ ಎಂಬುದಾಗಿಯೂ, ವಾಸ್ತವಕ್ಕೂ ಒಂದಾನೊಂದು ಕಾಲದಲ್ಲಿ ಅದೇ ನಡೆದು ಬಂದ ರೂಢಿಯಾಗಿದ್ದಿತೆಂಬುದಾಗಿಯೂ ಅನೇಕಾನೇಕ ಹಿಂದೂ ಜನರು ನಂಬುತ್ತಾರೆ ಈ ಹಿಂದೂ ಜನರೊಳಗೆ ಕೆಲವರು, ತನ್ಮೂಲಕ ಹುಡುಗಿಯರಿಗೆ ಸ್ವಲ್ಪ ಅಧಿಕ ಕಾಲದವರೆಗೆ ವಿದ್ಯಾಭ್ಯಾಸವನ್ನು ಹೊಂದಲಿಕ್ಕೆ ಅನುಕೂಲವಾಗುವಂತೆಯೂ ಬಾಲ್ಯದಲ್ಲಿಯೆ ವೈಧವ್ಯ ಬರುವ ಸಂಭವವನ್ನು ಸಹಾ ವಿಶೇಷವಾಗಿ ಕಡಮೆ ಮಾಡಲಾಗುವಂತೆಯೂ ತಮ್ಮ ಹುಡುಗಿಯರಿಗೆ ಋತುಮತಿಯರಾದ ಬಳಿಕ ವಿವಾಹ ಮಾಡಲು ಇಚ್ಛಿಸುತ್ತಾರೆ. ಇಷ್ಟೇ ಅಲ್ಲದೆ, ಈ ಸಂಸ್ಕರಣವು ಚೆನ್ನಾಗಿ ರೂಢಿಯಲ್ಲಿ ಬಂದರೆ ಸಾಮಾನ್ಯವಾಗಿ ಹೆಂಗಸರ ಸ್ಥಿತಿಗತಿಯು ಉತ್ತಮವಾಗಲೂ ಕಾಲಕ್ರಮವಾಗಿ ಜನಾಂಗದ ಶರೀರ ಶಕ್ತಿಯು ಸಹಾ ಸುದೃಢವಾಗಲೂ ಒಹುದೆಂದು ಅವರು ನಿರೀಕ್ಷಿಸುತ್ತಾರೆ. ಆದರೆ ಈ ಸಂಸ್ಕರಣವು ಸಲುವಳಿಯಲ್ಲಿ ಬರುವುದಕ್ಕೆ ವಿವಾಹದ ಕುರಿತ ಕಾನೂನು ಆತಂಕವುಂಟುಮಾಡುತ್ತಿದೆ. ಋತುಮತೀ ವಿವಾಹವು ಕಾನೂನು ಮೇರೆಗೆ ಸಾಧುವಾದುದೆಂಬುದಾಗಿ ಕೆಲವು ಲಾಯರುಗಳು ಅಭಿಪ್ರಾಯಪಡುತ್ತಾರೆ ಇವರೊಳಗೆ ಒಬ್ಬರಾದ ಗತಿಸಿದ ಮೆ! ವಿ ಕೃಷ್ಣಸ್ವಾಮಿ ಅಯ್ಯರರು 1906ನೇ ಇಸವಿಯಲ್ಲಿ ಬರೆದಿರುವದೇನೆಂದರೆ —"ಅತ್ಯಚ್ಚವಾದ ಹಿಂದೂವರ್ಣದ ಹುಡುಗಿಗಾದರೂ ಋತುಮತಿಯಾದ ಬಳಿಕ ಆದ ವಿವಾಹವು ಸಾಧುವಾದುದಲ್ಲವೆಂದು ವಿಧಿಸಿ ಹೇಳಲು ಪ್ರಕೃತ ಯಾವ ಕೋರ್ಟಿನವರಾದರೂ ಶಕ್ತರಲ್ಲವೆಂಬುದು ಖಂಡಿತವಾಗಿದೆ." ಸರ್ ಟಿ. ಮುತ್ತುಸ್ವಾಮಿ ಅಯ್ಯರವರು ಇದಕ್ಕೆ ವಿರೋಧವಾದ ಅಭಿಪ್ರಾಯಪಟ್ಟವರಾಗಿದ್ದು, ಮದ್ರಾಸ್ ಲಾ ರಿಪೋರ್ಟಿನ XIVನೇ ಸಂಚಿಕೆಯಲ್ಲಿ ನಮೂದಾಗಿರುವ ವೆಂಕಟಚಾರ್ಯುಲು ಎದ್ರಿ ರಂಗಾಚಾರ್ಯುಲು ಎಂಬ ಮೊಕದ್ದಮೆಯಲ್ಲಿ ಹೇಳಿರುವದೇನಂದರೆ —"ಈ ಸಂಸ್ಕಾರದ ವಿಧಿಯು ಅಪ್ರಾಯಸ್ಥಳೆ ಯಾ ಮಗುವಿನ ಬಗ್ಗೆ ನಿರ್ದೇಶಿಸಲ್ಪಟ್ಟಿದೆ ಎಂಬುದನ್ನು ಮರೆಯಬಾರದು ಯಾಕೆಂದರೆ, ಹಿಂದೂ ಧರ್ಮಶಾಸ್ತ್ರದ ವ ಪದ್ಧತಿಯ ಮೇರೆಗೆ ಒಬ್ಬ ಬ್ರಾಹ್ಮಣ ಕನ್ನಿಕೆಯನ್ನು ಋತುಮತಿಯಾಗುವದಕ್ಕೆ ಮುಂಚೆಯೇ, ಎಂದರೆ ಯೋಗ್ಯನಾದ ವರನನ್ನು ತಾನೇ ಆರಿಸಿಕೊಳ್ಳಲು ಶಕ್ತಿಯುಂಟಾಗುವ ಮುಂಚೆಯೇ, ವಿವಾಹಮಾಡಿಕೊಡಬೇಕಾಗಿದೆ" ಈ ಮೇರೆಗೆ ಅಭಿಪ್ರಾಯಗಳಲ್ಲಿಯೂ ಶಾಸ್ತ್ರಾಧಾರಗಳಲ್ಲಿಯೂ ವ್ಯತ್ಯಾಸಗಳಿರುವದರಿಂದ ಋತುಮತಿಯಾದ ಹೆಂಗಸಿನ ವಿವಾಹದ ಕುರಿತು ಕೋರ್ಟುಗಳಲ್ಲಿ ಇದಿರಾಡಿದ ಪಕ್ಷದಲ್ಲಿ ಅದು ಅಸಾಧುವೆಂದು ವಿಧಿಸಲ್ಪಟ್ಟು ಆ ವಿವಾಹದಿಂದ ಹುಟ್ಟಿದ ಯಾವವಾದರೂ ಮಕ್ಕಳು ಜಾರಜಾತರೆಂದು ಏರ್ಪಡುವರಾಗಿ ಸಂದೇಹಪಡಲು ಕಾರಣವಿದೆ "ಹಿಂದೂ ಸಾಮಾಜಿಕ ಸಂಸ್ಕರಣ (ಸೋಸಿಯಲ್ ರಿಫಾರ್ಮ ಎಸ್ಸೋಸಿಯೆಷನ್) ಸಂಘಗಳ ಸ್ಥಿತಿಗತಿ"ಯ ಕುರಿತು ಇತ್ತಲಾಗೆ ಪ್ರಚುರವಾಗಿರುವ ಒಂದು ಚಿಕ್ಕ ಪುಸ್ತಕದಲ್ಲಿ ಸರ್ ಶಂಕರನ್ ನಾಯರವರು ಋತುಮತೀ ವಿವಾಹವೆಂಬ ಶಿರೋನಾಮೆಯ ಕೆಳಗೆ ಬರೆದಿರುವದೇನಂದರೆ —"ಆದುದರಿಂದ ನಾವು ದೇಶಾಚಾರಕ್ಕೆ ವಿರೋಧವಲ್ಲದೆ ಈ ಮಾರ್ಗದಿಂದಲೇ ಸಂಸ್ಕರಣವಾಗುವಂತೆ ಪ್ರಯತ್ನಿಸುತ್ತೇವೆ ಮತ್ತು ಋತುಮತಿಯಾದ ಮೇಲೆ ಆದ ವಿವಾಹವನ್ನು ಕೋರ್ಟಿನವರು ಸಾಧುವೆಂದು ಮನ್ನಿಸುವರೋ ಎಂಬ ಸಂಶಯವು ನಮಗಿರುವದರಿಂದ, ಇದುವರೆಗೆ ಇದಕ್ಕೆ ಪ್ರತಿಕೂಲವಾದ ಪದ್ಧತಿಯನ್ನು ಅನುಸರಿಸಿಕೊಂಡಿದ್ದ ಜಾತಿಗಳಿಗೆ ಸೇರಿದವರಲ್ಲಿ ಯಾರಾದರೂ ಋತುಮತಿಯರಾದ ಹುಡುಗಿಯರನ್ನು ವಿವಾಹಮಾಡಿಕೊಟ್ಟರೂ ಆ ವಿವಾಹಗಳು ಅಸಾಧುವಲ್ಲವೆಂದೂ, ನ್ಯಾಯಸ್ಥಾನಗಳಲ್ಲಿ ಅವು ನ್ಯಾಯಸಮ್ಮತ ವ ಸಾಧುವೆಂಬುದಾಗಿ ಅಂಗೀಕರಿಸಲ್ಪಡುವವೆಂದೂ ನಿಬಂಧಿಸುವ ಐಚ್ಛಿಕವಾದ ಒಂದು ಕಾನೂನು ನಮಗೆ ಅಗತ್ಯವಿದೆ" ಆದದರಿಂದ ವಧುವು ವಿವಾಹಕಾಲದಲ್ಲಿ ಋತುಮತಿಯಾದವಳಾಗಿದ್ದಳು ಎಂಬ ಕಾರಣದಿಂದ ಮಾತ್ರ ಹಿಂದೂಗಳೊಳಗೆ ನಡೆದ ಯಾವದೊಂದು ವಿವಾಹವು ಅಸಾಧುವಲ್ಲವೆಂದು ಕಾನೂನು ಮೂಲಕ ವಿಧಿಸುವದು ಯುಕ್ತವಾಗಿರುವದು ಇದೇ ಮೇಲೆ ಹೇಳಿದ ಮುಸವಿದೆಯ ಉದ್ದೇಶವಲ್ಲದೆ ಹೆಚ್ಚಿಗೆ ಏನೂ ಇರುವದಿಲ್ಲ ಇದು ಕೇವಲ ಇಷ್ಟಾನುಸಾರವಾಗಿ ಅನುವರ್ತಿಸತಕ್ಕದ್ದಾಗಿದೆ ಮತ್ತು ಈ ಅಲ್ಪ ಸ್ವಾತಂತ್ರ್ಯವನ್ನು ಕೊಡುವಲ್ಲಿ ಸಹಾ ಇದು ಹಿಂದೂ ವಿವಾಹಪದ್ಧತಿಯ ಮೂಲಾಧಾರವಾದ ಸಂಸ್ಕಾರಗಳನ್ನು ಅತಿಕ್ರಮಿಸುವದಿಲ್ಲ ಮತ್ತು ಅದು ಪ್ರಕೃತದ ನಡವಳಿಕೆಗೆ ಹಾನಿಯುಂಟುಮಾಡುವದೂ ಯಾ ಪೂರ್ವ ಪದ್ಧತಿಯನ್ನೇ ಅವಲಂಬಿಸಬೇಕೆಂಬ ಅಪೇಕ್ಷೆಯುಳ್ಳವರಿಗೆ ಅವರ ಸ್ವಾತಂತ್ರ್ಯವನ್ನು ಯಾವವಿಧದಿಂದಲಾದರೂ ನಿರ್ಬಂಧಪಡಿಸುವದೂ ಇಲ್ಲ.

ವಿ. ಎಸ್. ಶ್ರೀನಿವಾಸನ್.

ಕೆಲವು ಉಪಯುಕ್ತ ಔಷಧಗಳು.

ಉಚ್ಚಿಬಾಯಿ ಗಟ್ಟಿಯಾಗದ ಮಕ್ಕಳಿಗೆ ಈ ರೋಗವು ಆಕಸ್ಮಾತ್ತಾಗಿ ಆರಂಭಿಸುವದು. ದೊಡ್ಡ ಮಕ್ಕಳಿಗೆ ಆರಂಭಿಸುವದೂ ಉಂಟು. ಈ ರೋಗವು ಪ್ರಾಪ್ತಿಸಿದಲ್ಲಿ ಮಗುವು ಮೊಲೆಯುಂಬುವುದನ್ನು ತ್ಯಜಿಸಿ, ಉಸಿರಾಟವು ಬಹು ಕಷ್ಟದಿಂದ ನಡೆಯುತ್ತಿರುವದೆಂಬಂತೆ ಬಿಕ್ಕುತ್ತಲೂ, ನರಳುತ್ತಲೂ ತಲೆಯ ಭಾರವನ್ನು ಹೊರಲಾರದೆ ಕತ್ತನ್ನು ಓರೆಮಾಡಿ ಒತ್ತಟ್ಟಿಗೆ ತಲೆಯನ್ನು ಹಾಕಿಬಿಡುತ್ತಲೂ ಕಣ್ಣುಗಳನ್ನು ಸಹ ಸದಾ ಮುಚ್ಚಿಕೊಂಡು ಅಮಲೇರಿದವರಂತೆ ಕಾಣುತ್ತಲೂ ಇರುವದು. ಆಹಾರವನ್ನು ವರ್ಜಿಸುವದಲ್ಲದೆ ಮೊಲೆಯೂಡಿದಾಗ ಸ್ತನ್ಯವನ್ನು ಹೊರ ಬಿಡುತ್ತಲೂ, ಮೊಲೆ

-ಗೆ ಹಲ್ಲಿನಿಂದ ಕಚ್ಚಿಯುತ್ತಲೂ ಇರುವದುಂಟು ಕೆಲವು ಶಿಶುಗಳಲ್ಲಿ ವಾಂತಿಯೂ, ಮಕ್ಕಳುಗಳಲ್ಲಿ ಭೇದಿಯೂ ಇರುವದುಂಟು ಈ ಲಕ್ಷಣಗಳಿಂದ ಅಜೀರ್ಣವೇ ಈ ರೋಗಕ್ಕೆ ಮುಖ್ಯ ಕಾರಣವೆಂದು ಹೇಳಬಹುದು ಕೆಲವು ಶಿಶುಗಳಲ್ಲಿ ಮೂತ್ರವು ಹಾಲಿನಂತೆ ಬೆಳ್ಳಗಾಗಿದ್ದು ಹೊಟ್ಟೆಯುಬ್ಬರವೂ ಇರುವದುಂಟು ಮೂತ್ರ ವಿಸರ್ಜನೆಯು ಬಹಳ ಹೊತ್ತಿಗೊಮ್ಮೆ ಆಗುವದಲ್ಲದೆ ಸ್ವಲ್ಪಸ್ವಲ್ಪವಾಗಿ ಮಾತ್ರ ಆಗುವದು

ಪ್ರಾಯಸ್ಥರಲ್ಲಾಗುವ ಕಂಠನಾಳಿ (ಒನರ್ಾಳಿ, ಇನರ್ಾಳಿ, ತಳು ಅಥ ರೆ) ಎಂಬ ರೋಗವೇ ಇದೆಂದು ಕೆಲವರು ಅಭಿಪ್ರಾಯ ಪಡುತ್ತಾರೆ

ಸೌಖ್ಯವಾಗಿ ನಿದ್ರಿಸಿದ ಮಗುವು ಎಚ್ಚರವಾಗುವದರೊಳಗಾಗಿ ಈ ಎಲ್ಲಾ ಚಿನ್ಹೆಗಳು ಫಕ್ಕನೆ ಆರಂಭಿಸುವದರಿಂದ ಬಹಳ ಗಾಬರಿಗೆ ಕಾರಣವಾಗುತ್ತಿದೆ

ಈ ಭಯಂಕರವೂ ಅಪಾಯಕರವೂ ಆದ ರೋಗಕ್ಕೆ ಭಗವತ್ಕೃಪಾಕ್ಷದಿಂದ ಚಿಕಿತ್ಸೆಯು ಸುಲಭವಾಗಿಯೇ ಇದೆ ಎಲ್ಲೆಲ್ಲಿಯೂ ಬೇಲಿಯಲ್ಲಿರುವ ಕಳ್ಳಿಗಿಡ (ಗೊಟೆಕಳ್ಳಿ)ದ ಹಾಲನ್ನು ತಂದು ಅರ್ಧಗಂಟೆಗೊಂದು ಸರ್ತಿ ಮೇರೆಗೆ ಮಗುವಿನ ನೆತ್ತಿಗೆ (ಉಚ್ಚಿಬಾಯಿಗೆ) ಮೂರು ನಾಲ್ಕಾವರ್ತಿ ಲೇಪಿಸಬೇಕು ಈ ಹಾಲು ಮುಖಕ್ಕಿಳಿಯದಂತೆ ಎಚ್ಚರಿಕೆಯಿಂದಿರಬೇಕು ಕೂದಲಿಲ್ಲದ ಸ್ಥಳಕ್ಕೆ ಸೋಕಿದರೆ ಗುಳ್ಳೆಗಳು ಬರುವವು ಕೆಲವು ಮಕ್ಕಳಿಗೆ ಈ ಹಾಲನ್ನು ನೆತ್ತಿಗೆ ಹಾಕಿದರೆ ಕಣ್ಣಿನಲ್ಲಿ ಗೀಜು ಬರುವದು ಇಂದಾ ಸಂದರ್ಭಗಳಲ್ಲಿ ಮೋಹಾಲನ್ನು ನೆತ್ತಿಗಿಟ್ಟರೆ ನೆಟ್ಟಗಾಗುವದು

ಕತ್ತು ಬಲವಿಲ್ಲದಂತೆ ತೋರುವ ಸಂದರ್ಭದಲ್ಲಿ ತೆಂಗಿನಮರದ ಮೇಲ್ಭಾಗವನ್ನು ಕೆಡೆದು ಅದರೊಳಗಣ ಕೆತ್ತೆಯನ್ನು ಕತ್ತಿ ಆ ಕತ್ತೆಯನ್ನು ಗುದ್ದಿ ರಸ ಹಿಂಡಿಕೊಂಡು ಆ ರಸಕ್ಕೆ ಎರಡು ಏಲಕ್ಕಿಕಾಳು ಅರೆದು ಬೆರಸಿ ಸ್ವಲ್ಪ ಬೆಲ್ಲ ಸಹಾ ಹಾಕಿ ಕುದಿಸಿ ಸರ್ತಿಗೆ ೨ ೬ ಚಮಚ ಪ್ರಕಾರ ೩ ತಾಸಿಗೊಮ್ಮೆ ಕೊಡಬೇಕು

ನೆತ್ತಿಗೆ ಕಳ್ಳೀಹಾಲು ಇಟ್ಟ ಮೂರು ತಾಸಿನೊಳಗೆ ಮಗುವು ಕಣ್ಣುತೆರೆದು ಮೊಲೆಯುಣ್ಣಲಾರಂಬಿಸುವದು ಒಂದು ತಾಸಿನೊಳಗಾಗಿ ಉಬ್ಬಾಟವು ಸಡಿಲಾಗುವದು

* * * *

ಬದ್ರಮುಷ್ಟಿಯ ಗಡ್ಡೆಗಳೆರಡನ್ನು ಮೇಲಿನ ಕಪ್ಪಾದ ಬಾಗವು ಹೋಗುವಂತೆ ಕೆರೆದು ಹಸುವಿನ ತುಪ್ಪ ಕೂಡಿಸಿ ಕೆಂಪಾಗ ವನಕ ಹುರಿದು ಹಸುವಿನ ಮೊಸರಿನಲ್ಲಿ ಅರೆದು ರಾತ್ರಿ ಮಲಗುವಾಗ ಚಿಕ್ಕ ಮಕ್ಕಳಿಗೆ ಕುಡಿಸಿದರೆ ಅವು ರಾತ್ರಿ ಸುಖವಾಗಿ ನಿದ್ರಿಸುವವು ಜೀರ್ಣವೂ ಸರಿಯಾಗಿ ಆಗುವದು ದೇಹವೂ ಪುಷ್ಟಿಯಾಗುವದು

* * * *

ತಲೆನೆಗಡಿ ಆರಂಬಿಸುವಾಗಲೇ ಕರ್ಪೂರವನ್ನು ಮೂಸತೊಡಗಿದರೆ ನೆಗಡಿಯು ಅಷ್ಟರಲ್ಲೇ ವಾಸಿಯಾಗುವದು ಶೀತದಿಂದ ಮೂಗು ಕಟ್ಟಿ ಹೋಗಿ ವಾಸನೆ ಬಾರದಿರುವ ಅವಸ್ಥೆಯು ಎಂದೂ ಬರಲಾರದು

ಹಳೇರೋಗಿ

ಪತ್ರವ್ಯವಹಾರ.

ಸ್ವದೇಶಾಭಿಮಾನಿ ಪತ್ರಕರ್ತ ಮಹಾಶಯರೇ,

ಕಳದ 52ನೇ ಸಂಚಿಕೆಯಲ್ಲಿ ಶ್ರೀ ಜ್ಞಾನೋದಯ ಸಮಾಜದ ವಿಷಯವಾಗಿ ವಿಚಾರಿಯು ಬರದ ಎರಡನೇ ಲೇಖನದಲ್ಲಿ ತೋರುವ ಹೆಚ್ಚಿನ ವಿಷಯಗಳಿಗೆ "ಸಮಾಜ ಸದಸ್ಯರಲ್ಲೊಬ್ಬರು" 50ನೇ ಸಂಚಿಕೆಯಲ್ಲಿ ಕೊಟ್ಟ ಉತ್ತರವೇ ಸಾಕು ಪರಂತು, ವಿಚಾರಿಯು ತನ್ನ ಲೇಖನದಲ್ಲಿ ಬರೆದ ಸುಳ್ಳುಮಾತುಗಳ ಮತ್ತು ದೀರ್ಘಾಲೋಚನೆ ಮಾಡದ ಒಂದೆರಡು ವಿಷಯಗಳನ್ನು ವಿಮರ್ಷಿಸಲು ತಮ್ಮ ಅಮೂಲ್ಯ ಪತ್ರದಲ್ಲಿ ಒಂದಿಷ್ಟು ಎಡೆಕೊಡಬೇಕಾಗಿ ಬೇಡುತ್ತೇನೆ

ಬೊಕ್ಕಪಟ್ಟಣದಲ್ಲಿ ಮದ್ಯಪಾನ ನಿಷೇದಕ ಸಂಘವು ಶ್ರೀ ಜ್ಞಾನೋದಯ ಸಮಾಜವು ಸ್ಥಾಪನೆಯಾಗುವ ಮೊದಲೇ ನೆಲೆಗೊಂಡಿತ್ತೆಂದು ವಿಚಾರಿಯು ಪದೇ ಪದೇ ತನ್ನ ಅಭಿಮಾನಪರವಾದ ಮತ್ತು ನಿರ್ಹಾಧಾರವಾದ ಮಾತನ್ನು ಪ್ರಕಟಿಸಿ, ತನಗೆ ತಾನೇ ತೃಪ್ತಿಪಡುತ್ತಾನೆ ಬೊಕ್ಕಪಟ್ಟಣದ ಮದ್ಯಪಾನನಿಷೇಧ ಸಂಘವು ಮೊದಲಿನದೆಂದು ಹೇಳುವದಕ್ಕೆ ಜ್ಞಾನೋದಯ ಸಮಾಜಕ್ಕಿಂತ ಮೊದಲು, ಅದರ ಒಂದು ವರ್ಷೋತ್ಸಹವಾದದ್ದಾಗಲೀ ಒಂದು ವಾರ್ಷಿಕ ವರದಿಯು ಪ್ರಕಟಿಸಿದ್ದಾಗಲೀ, ಉಂಟೆಂದು ವಿಚಾರಿಯು ತನ್ನ ಸುಳ್ಳುಮಾತಿಗೆ ಆಧಾರವಾಗಿ ಕೊಡಲಾರನು! ಶ್ರೀ ಜ್ಞಾನೋದಯ ಸಮಾಜವು ಸ್ಥಾಪನೆಯಾಗಿ ಅವರು ಮಾಡಿದ ಮದ್ಯಪಾನ ನಿಷೇಧಕ ಪ್ರಯತ್ನವು ಸಫಲವಾಗುವದನ್ನು ಕಂಡು, ಬೊಕ್ಕಪಟ್ಟಣದಲ್ಲಿಯೂ ಕೆಲವು ಸಜ್ಜನರು ಒಟ್ಟುಕೂಡಿ ಮದ್ಯಪಾನವನ್ನು ವರ್ಜಿಸಿ ಒಂದು ಸಂಘವನ್ನು ಆರಂಭಿಸಿದ್ದು ಮಾತ್ರ ನಿಜ ಆದರೂ ಕಲಹಪ್ರಿಯನಾದ ಈ ವಿಚಾರಿಯೇ ಆ ಸಂಘದ ಮುಂದಾಳುಗಳೊಬ್ಬನಾಗಿದ್ದು ಸಂಘದ ಕೂಟದಲ್ಲಿ "ತನ್ನ ಕುದುರೆಗೆ ಮೂರೇ ಕಾಲು" ಎಂಬಂತೆ ಮಾಡಿದ ತುಂಟ ವಾದವೇ ಆ ಸಂಘವು ಸ್ವಲ್ಪ ಸಮಯದಲ್ಲಿಯೇ ಮುರಿದು ಹೋಗಲು ಕಾರಣವಾಯಿತು ವಿಚಾರಿಯು ಹೇಳುವ ಈ ಸಂಘವು ಪ್ರಾಯದಲ್ಲಿ ಹಿರಿದೋ ಕಿರಿದೋ ಎಂಬಂಶವನ್ನು ಇನ್ನೂ ಇಲ್ಲಿ ಚರ್ಚಿಸುವದರಿಂದ ಯಾವ ಪ್ರಯೋಜನವೂ ಕಾಣದು ಯಾಕಂದರೆ ಗರ್ಭದಲ್ಲೇ ಸತ್ತುಹೋದ ಮಗುವಿನ ಜಾತಕ ಪ್ರಶ್ನೆಯು ವ್ಯರ್ಥವೇ ಸರಿ ಯಾವದೊಂದು ಸಂಘ ಅಥವಾ ಸಮಾಜವು ಮಾಡಿದ ಸ್ವಾರ್ಥತ್ಯಾಗ, ನಿರಂತರ ಪರಿಶ್ರಮ, ಉದ್ದೇಶವನ್ನು ಕಾರ್ಯರೂಪುಗೊಳಿಸುವ ಸಾಹಸ, ಇತ್ಯಾದಿಗಳಿಂದ ಅದರ ಕೀರ್ತಿಯೂ ಘನತೆಯೂ ಬಹು ಜನಸ್ತೋಮದಲ್ಲಿ ವಿಸ್ತರಿಸಲ್ಪಡುತ್ತವೆ ಹೊರತು ಬರೇ ಪ್ರಾಯಬಾಹುಳ್ಯದಿಂದಲ್ಲವೆಂಬುದು ವಿಚಾರಿಯು ಇನ್ನಾದರೂ ತಿಳಕೊಳ್ಳಲಿ

"ಬೊಕ್ಕಪಟ್ಟಣದ ಮದ್ಯಪಾನ ನಿಷೇಧಕ ಸಂಘಕ್ಕೆ ಧನ್ಯವಾದವನ್ನೆತ್ತಿ ಬರೆಯುವದರ ಬದಲಾಗಿ, ಜ್ಞಾನೋದಯ ಸಮಾಜವು ಸ್ಥಾಪಿತವಾದ ಮೇಲೆ ಸದರೀ ಸಂಘವು ತಲೆದೋರಿತೆಂದು ಸಮಾಜದ ಪ್ರಥಮ ವಾರ್ಷಿಕ ವರದಿಯಲ್ಲಿ ಪ್ರಕಟಿಸಿದ್ದಾರೆ. ಮತ್ತು ಬೊಕ್ಕಪಟ್ಟಣದ ಸಂಘವನ್ನು ಸಮಾಜದ ಶಾಖೆ ಎಂತ ಪ್ರಕಟಿಸಿದ್ದಾರೆ" ಎಂದು ವಿಚಾರಿಯು ಕೇವಲ ಸುಳ್ಳು ಅಪವಾದವನ್ನು ಸಮಾಜದ ಮೇಲೆ ಹೊರಿಸುತ್ತಾನೆ. "ಮತ್ತು ಬೊಕ್ಕಪಟ್ಟಣದಲ್ಲಿಯು ಮದ್ಯಪಾನ ನಿಷೇಧಕರು ಒಟ್ಟುಕೂಡಿ ಅಲ್ಲಿ ಸಹಾ ಸಮಾಜವನ್ನು ಸ್ಥಾಪಿಸ ಪ್ರಯತ್ನಿಸುತ್ತಾರೆ" ಒಂದಿಷ್ಟು ಮಾತ್ರವೇ ಸಮಾಜದ ಪ್ರಥಮ ವಾರ್ಷಿಕ ವರದಿಯ 10ನೇ ಪುಟದಲ್ಲಿ ಉಂಟಲ್ಲದೆ ವಿಚಾರಿಯು ಹೇಳುವ ಮೇಲಿನ ಯಾವ ಮಾತೂ ಅದರಲ್ಲಿ ಇರುವುದಿಲ್ಲ ಪ್ರತ್ಯಕ್ಷ ಪ್ರಮಾಣ ಸಿದ್ಧವಾದ ಛಾಪಾ ಪುಸ್ತಕದ ಕುರಿತು ಈ ಪ್ರಕಾರ ಸುಳ್ಳು ಹೇಳುವ ವಿಚಾರಿಯ ವಿಚಾರವನ್ನು "ಸದಸ್ಯರೊಳ್ಬರು" ಅವಿಚಾರವೆಂದು ಕರೆದದ್ದು ತಪ್ಪೋ?

ವದು ಪಕ್ಷಕರು ಪೂರ್ವಕಾಲದಲ್ಲಿ ವರನಿಗೆ ಕೊಡುತ್ತಿದ್ದ ಉಚಿತವೇ ಪ್ರಕೃತ ಅನೇಕ ಸಮುದಾಯದವರಲ್ಲಿ ಬಲತ್ಕಾರದ ಬದಿಯಾಗಿ ಪರಿಣಮಿಸುತ್ತಾ ಬಂದದ್ದು ದೀರ್ಘಾಲೋಚನಾಶೂನ್ಯರಿಗೆ ತಿಳಿಯುವದು ಕಷ್ಟ ಈ ಕುರಿತು ನಾನು ಇಲ್ಲಿ ಹೆಚ್ಚು ಬರೆಯುವದಕ್ಕಿಂತಲೂ 51ನೇ ಸಂಚಿಕೆಯಲ್ಲಿ ನಿಷ್ಪಕ್ಷಪಾತಿಯು ವರದಕ್ಷಿಣೆಯ ಕುರಿತು ಬರದ ಲೇಖನವನ್ನು ವಿಚಾರಿಯು ಇನ್ನೊಮ್ಮೆ ಓದಲಿ.

"ಉಚಿತವೇ ಬದಿಯಾಗಿ ಪರಿಣಮಿಸಬಹುದೆಂಬ ಅಪನಂಬಿಕೆಯು ಶ್ರೀ ಜ್ಞಾನೋದಯ ಸಮಾಜಕ್ಕೆ ಉಂಟಾಗಿದ್ದರೆ ಬಹಿರಂಗವಾಗಿ ಅದರ ನಿಷೇಧವನ್ನು ಈ ಸಮಾಜವು ಯಾಕ ಮಾಡಲಿಲ್ಲ?" ಎಂದು ವಿಚಾರಿಯು ಕೇಳುತ್ತಾನೆ ವರದಕ್ಷಿಣೆ ಯಾನೆ ಬದಿಯ ಪದ್ಧತಿಯನ್ನು ಖಂಡಿಸಿ ಬಾಷಣಗಳ ಮೂಲಕವೂ ವಾರ್ಷಿಕ ವರದಿಯಲ್ಲಿ ಪ್ರಕಟಿಸಿಯೂ ಎಲ್ಲಾ ಜನರಿಗೆ ತಿಳಿಯುವಂತೆ ಸಮಾಜದವರು ಬಹಿರಂಗವಾಗಿಯೇ ಅದರ ನಿಷೇಧವನ್ನು ಮಾಡುತ್ತಾರೆ ಸಮಾಜದ ಮುಂದಾಳುಗಳೆಲ್ಲರೂ ವಿವಾಹಿತರಾದವರಾದ್ದರಿಂದ ಸ್ವತಹಾ ಅದನ್ನು ಕಾರ್ಯರೂಪದಿಂದ ಇತರರಿಗೆ ಮಾದರಿ ತೋರಿಸಲು ಸಂದರ್ಭವಿಲ್ಲ ಆದರೆ ಇವರ ಕುಟುಂಬಿಗಳ್ಯಾರಾದರೂ ಅಂಥಾ ಪದ್ಧತಿಯನ್ನು ಕೈಕೊಳ್ಳದಿದ್ದರೆ "ಓದುವುದು ಶಾಸ್ತ್ರ, ಇಕ್ಕುವುದು ಗಾಳ" ಎಂಬ ಗಾದೆಯನ್ನು ಸಮಾಜದ ಮುಂದಾಳುಗಳ ಮೇಲೆ ಹೊರಿಸುವುದು ವಿಚಾರಿಯ ಮೂರ್ಖತನವೇ ಸೈ

ಸಮಾಜದ ಮುಂದಾಳುಗಳು ವರದಕ್ಷಿಣೆಯ ಕೇಡುಗಳನ್ನು ತಮ್ಮ ಸಮುದಾಯದವರ ಲಕ್ಷ್ಯಕ್ಕೆ ತರುವ ಕುರಿತು ನಿರಂತರ ಪ್ರಯತ್ನಿಸುತ್ತಾ ಬಂದಲ್ಲಿ ಕ್ರಮೇಣ ಶುಭಪರಿಣಾಮವಾಗಿ ವರದಕ್ಷಿಣೆಯನ್ನು ತಿರಸ್ಕರಿಸಿಯೇ ವಿವಾಹವಾಗುವ ಎಷ್ಟೋ ಯುವಕರು ಮುಂದೆ ಬಂದಾರು. ವಿಚಾರಿಯು ಹೇಳುವಂತೆ ಈಗಲೇ ಸಮಾಜದವರು ಆ ಕುರಿತು ತಮ್ಮೊಳಗೆ ನಿರ್ಬಂಧ ನಿಯಮವನ್ನುಂಟುಮಾಡುವದಾದರೆ ಸಮಾಜವು ಖಂಡತುಂಡುವಾಗುವದರಲ್ಲಿ ಸಂಶಯವಿಲ್ಲ ವರದಕ್ಷಿಣೆಯನ್ನು ನಿಷೇಧಿಸುವ ಬಹು ಪಕ್ಷವನ್ನುಂಟುಮಾಡುವ ವರೇಗೆ ಸಮಾಜದವರು ಈ ಕುರಿತು ತಮ್ಮೊಳಗೆ ಯಾವ ನಿರ್ಬಂಧ ನಿಯಮವನ್ನಾದರೂ ಮಾಡದಿದ್ದದ್ದನ್ನು ಆಲೋಚಿಸಿದರೆ ಸಮಾಜದ ಮುಂದಾಳುಗಳ ಕಾರ್ಯಸಾಧನಾ ಕೌಶಲವು ವ್ಯಕ್ತವಾಗುವುದು. ಸಾಮಾಜಿಕ ರೂಢಿಗಳ ಕುರಿತು ಒಮ್ಮೆಲೆ ನಿರ್ಬಂಧ ಪೂರ್ವಕವಾದ ನಿಯಮಗಳನ್ನೇರ್ಪಡಿಸಲು ಹೋಗಿ, ನಮ್ಮ ದೇಶದಲ್ಲಿ ಎಷ್ಟೋ ಪರಿಷತ್ತುಗಳೂ ಸಂಘಗಳೂ ಮೂಲೆಗೆ ಬಿದ್ದ ವಿಷಯವು ವಿಚಾರಿಗೆ ಗೋಚರವಾಗದಿದ್ದರೂ ಲೋಕವು [illegible] ರಷ್ಟೆ.

ಪೂರ್ವಾಪರ ವಿಚಾರ ಮಾಡಿಕೊಳ್ಳದೆ ಮಾತಾಡುವ ವಿಚಾರಿಗೆ ಇನ್ನಾದರೂ ಜ್ಞಾನೋದಯವಾಗಿ ಸಂಸರಣಯಾತ್ರೆಯಲ್ಲಿ ಹ್ಯಾಗೆ ಹೆಜ್ಜೆಯನ್ನಿಟ್ಟು ನಡಿಯಬೇಕೆಂಬ ಅರಿವು ಉಂಟಾಗಿ, ತಾನು ಧರಿಸಿಕೊಂಡ ವಿಚಾರಿ ಎಂಬ ನಾಮವನ್ನು ಸಾರ್ಥಕಗೊಳಿಸಲಿ.

ವಿಮರ್ಶಿ.

ಬಹಿಷ್ಕಾರದ ಫಲಪ್ರಾಪ್ತಿ.

ಸ್ವದೇಶಾಭಿಮಾನಿ ಪತ್ರಕರ್ತರಿಗೆ.

ಅಯ್ಯಾ, ಮುಲ್ಕಿ ವೆಂಕಟ್ರಮಣ ದೇವಸ್ಥಾನದ ಆಡಳಿತೆ ಮೊಕ್ತೇಸರರು ರಾ| ಬಂಗ್ಲೆಕಾರರ ಮೇಲೆ ಮಾಡಿದ ದಾವೆಗಳು ತೆಗೆದುಹಾಕೋಣಾದವು ಎಂಬ ವರ್ತಮಾನವನ್ನು ತಮ್ಮ ಇತ್ತಲಾಗಿನ ಸಂಚಿಕೆಯಲ್ಲಿ ಓದಿ ಬಹಳ ಸಂತೋಷಪಟ್ಟೆನು. ದಕ್ಷಿಣ ಕನ್ನಡದ ಗೌಡಸಾರಸ್ವತರ ಕ್ಷೇಮಚಿಂತಕರೆಲ್ಲರಿಗೂ ಈ ವರ್ತಮಾನವು ಬಹಳ ಸಂತೋಷಕರವಾಗಿರದೇ ಇರದು. ಮಾಪ್ಸೆಯಲ್ಲಾದ ಸಂಯುಕ್ತ ಸಾರಸ್ವತ ಪರಿಷದಕ್ಕೆ ಹೋಗಲು ಧೈರ್ಯಗೊಂಡ ರಾ| ಬಂಗ್ಲೆಕಾರ್ ಮೊದಲಾದವರನ್ನು ಬಹಿಷ್ಕಾರ ಇಡಲು ಯತ್ನಿಸಿದ ಫಲವಾಗಿ ಈಗ ಹಿಂದಿನ ನಾಲ್ಕು ವರ್ಷಗಳಿಂದ ಈ ಜಾತಿಯಲ್ಲಿ ಈ ಹಾಳು ವ್ಯವಹಾರವು ನಡೆಯುತ್ತಿರುವದು. ಖಾಸಗಿ ಜನರ ಭಂಡಾರದಿಂದಲೂ ಹತ್ತು ಜನರಿಗೆ ಸಂಬಂಧಪಟ್ಟ ಖಜಾನೆಗಳಿಂದಲೂ ಈ ಬಗ್ಗೆ ದ್ರವ್ಯವು ವ್ಯರ್ಥವಾಗಿ ಚೆಲ್ಲಲ್ಪಡುತ್ತದೆ. ಜಾತಿಯಲ್ಲಿ ಜಾತಿಯ ಅಭಿವೃದ್ಧಿಯ ಪ್ರಯತ್ನಗಳೆಲ್ಲವನ್ನು ಪೂರ್ಣವಾಗಿ ಅಣಗಿಸಿಬಿಡುವ ವೈಶಮ್ಯಗಳೂ ವೈರಗಳೂ ಇದರಿಂದ ಪ್ರಾಪ್ತವಾಗಿರುವವು. ಆದ್ದರಿಂದ ಸ್ವಜಾತಿಯಲ್ಲಿ ನಡೆಯುತ್ತಿರುವ ಈ ವ್ಯವಹಾರವು ಇನ್ನಾದರೂ ಬೇಗನೇ ಮುಗಿಯುವ ಸಂಭವವು ಒದಗಿದ್ದನ್ನು ನೋಡಿ ಸಂತೋಷಪಡಬೇಕಾಗಿರುವದು

ಮೇಲಣ ನಾಲ್ಕು ವರ್ಷಗಳ ಅನರ್ಥಕಾರಿಯಾದ ವ್ಯವಹರಣೆಯಿಂದ ಸ್ವಜಾತಿಯವರು ಕೆಲವು ಫಲಿತಾಂಶವನ್ನು ಚೆನ್ನಾಗಿ ಕಲಿತುಕೊಳ್ಳಬೇಕಾಗಿದೆ. ೨೫ ವರ್ಷಗಳ ಮೊದಲೊಮ್ಮೆ ಇಂಥಾದ್ದೇ ಒಂದು ಕಲಹವು ಜಾತಿಯೊಳಗೆ ಪ್ರಾಪ್ತವಾಗಿ ಅದರಿಂದುಂಟಾದ ದುಷ್ಪರಿಣಾಮಗಳು ಗೌಡಸಾರಸ್ವತರನ್ನು ಬಿಟ್ಟುಹೋಗಿ ಬಹಳ ಸಮಯವಾಗಲಿಲ್ಲ. ಕಳೆದ ನಾಲ್ಕು ವರ್ಷಗಳ ವ್ಯವಹರಣೆಯಿಂದ ಸಹಾ ಉಂಟಾಗುವ ಪರಿಣಾಮಗಳು ಕೆಟ್ಟವೇ ಆಗುವವು. ಆದರೆ ಇಂಥಾ ಕೇಡಿನಿಂದ ಒಳ್ಳಿತವನ್ನು ಗೌಡಸಾರಸ್ವತರು ಇನ್ನಾದರೂ ತಿಳಿಯಬೇಕಾಗಿದೆ. ಅಶಿಕ್ಷಿತರಾದ ಪೂರ್ವಾಚಾರ ಪದ್ಧತಿಯವರು—ತಾವು ಶಿಕ್ಷಿತರೆಂದೆಣಿಸಿಕೊಂಡ ಕೆಲವರು—ಈ ಎರಡು ವರ್ಗದವರೂ ಕ್ರೂಡಿ ಸಂಘ ಸುಧಾರಣೆಯ ಪ್ರಯತ್ನಗಳಿಗೆ ಕಾರಣವಿಲ್ಲದ ಮತ್ತು ಅಯುಕ್ತವಾದ ರೀತಿಯಲ್ಲಿ ಅಭ್ಯಂತರಗಳನ್ನು ತಂದೊಡ್ಡಿದ್ದರಿಂದ ಏನೇನೆಲ್ಲಾ ಸಂಭವಿಸಿತೆಂಬದನ್ನು ಆಲೋಚಿಸಿ ನೋಡಲಿ. ರಾ| ಬಂಗ್ಲೆಕಾರರನ್ನೂ ಅವರ ಕೆಲವು ಸ್ನೇಹಿತರನ್ನೂ ಬಹಿಷ್ಕಾರ ಇಟ್ಟರು. ಈ ರೀತಿ ಬಂಗ್ಲೆಕಾರರೊಬ್ಬರನ್ನು ಬಹಿಷ್ಕಾರವಿಟ್ಟದ್ದರಿಂದ ಗೌಡ ಸಾರಸ್ವತರಲ್ಲಿ ಹಲವರು ಮುಂದಾಗಿ ಒಂದು ಸ್ವಾಮಿಗಳ ರಾಯಸವನ್ನು ಮನ್ನಿಸಲು ಬಹಿರಂಗವಾಗಿ ಸಂಯುಕ್ತ ಪರಿಷದವನ್ನು ಸೇರಿ ಸಹಪಂಕ್ತಿ ಭೋಜನವನ್ನು ಮಾಡುತ್ತಿರುವರು. ಇಂಥವರನ್ನು ಬಹಿಷ್ಕಾರದಿಂದ ಉಬೋಪಿಸುವ ಅಥವಾ ಇಂಥವರಿಗೆ ಕೇಡನ್ನುಂಟುಮಾಡುವ ತ್ರಾಣವು ಸ್ವಾಮಿಗಳಿಗಿರದು. ಸಮಾಜದಲ್ಲಿ ಲೂಟಿಯನ್ನು ಉಂಟುಮಾಡುವ ತ್ರಾಣವು ಪೂರ್ವಾಚಾರ ಪದ್ಧತಿಯವರೆಂದೆಣಿಸಿಕೊಳ್ಳುವ ವಿರೋಧ ಪಕ್ಷದವರಿಗೆ ಎಷ್ಟರಮಟ್ಟಿಗಿರುವದೆಂಬದನ್ನು ಪರೀಕ್ಷಿಸಿ ನೋಡುವದಕ್ಕೋಸ್ಕರ ಸಂಯುಕ್ತ ಪರಿಷದಗಳಿಗೆ ಹೋಗಿ ಸಹಪಂಕ್ತಿ ಭೋಜನವನ್ನು ಮಾಡಿದವರ ಹೆಸರುಗಳನ್ನು ಸ್ವದೇಶಾಭಿಮಾನಿಗೆ ಕಳುಹಿಸಿಕೊಟ್ಟು ಪ್ರಕಟಿಸಿದೆವು. ಇಂಥವರನ್ನೆಲ್ಲಾ ಬಹಿಷ್ಕಾರಕ್ಕೆ ಗುರಿಮಾಡಿದರೋ? ನಿಜವಾಗಿಯೂ ಇಲ್ಲ. ಹಾಗೆ ಮಾಡುವದರ ಬದಲಿಗೆ ಯಾವ ಮಠದಿಂದ ಈ ಬಹಿಷ್ಕಾರವು ಕೊಡೋಣಾಯಿತೋ ಅಂಥಾ ಕಾಶೀ ಮಠದಲ್ಲಿ ಇವರಿಗೆಲ್ಲಾ ಸಹಪಂಕ್ತಿ ಭೋಜನಗಳನ್ನು ಬಹಿರಂಗವಾಗಿ ಮಾಡಿಸಿದರು. ಇಂಥಾ ಸಹಪಂಕ್ತಿ ಭೋಜನಗಳು ಮುಂಬಾಯಿ ವಾಲ್ಕೇಶ್ವರದ ಕಾಶೀ ಮಠದಲ್ಲಿ ಗತಿಸಿದ ಶ್ರೀ ವರದೇಂದ್ರ ತೀರ್ಥ ಸ್ವಾಮಿಗಳವರ ಸಮಕ್ಷಮದಲ್ಲಿ ಬಹಿರಂಗವಾಗಿ ಮಾಡೋಣಾದವು. ಸ್ವಾಮಿಯವರೂ ಮುಂಬಯಿಯ ಪೂರ್ವಾಚಾರ ಪದ್ಧತಿಯ ಶಿಷ್ಯವರ್ಗದವರೂ ಸಂಯುಕ್ತ ಪರಿಷದಕ್ಕೆ ಹೋದವರೊಡನೆ ಸಹಪಂಕ್ತಿಭೋಜನವನ್ನು ಏನೂ ಅಭ್ಯಂತರವಿಲ್ಲದೆ ಮಾಡಿದರು. ಇಂಥಾ ಭೋಜನಗಳು ಈಗಿನ ಕಾಶೀ ಮಠದ ಗುರುಗಳಾದ ಶ್ರೀ ಸುಕೃತೀಂದ್ರ ಸ್ವಾಮಿಗಳವರ ಸಮಕ್ಷಮದಲ್ಲಿ ಸಹಾ ನಡೆಯುತ್ತಲಿವೆ. ಕಳೆದ ಕೆಲವು ಹಪ್ತೆಗಳ ಮೊದಲು ಮಾಲ್ವಾನದಲ್ಲಿ ನಡೆದ ಸಂಯುಕ್ತ ಪರಿಷತಕ್ಕೆ ಮಂಗಳೂರಿನ ರಾ| ಸರ್ಕಾಡಿ ರಾಘವೇಂದ್ರರಾಯರೆಂಬವರು ಹೋಗಿ ಬಂದಿರುವರು. ಇವರೂ, ಹಿಂದೆ ಹೀಗೆಯೇ ಸಂಯುಕ್ತ ಪರಿಷದಕ್ಕೆ ಹೋಗಿ ಬಂದವರೂ, ಮುಂಬಯಿಯ ಸ್ವಜಾತಿ ಬಾಂಧವರೆಲ್ಲರಲ್ಲಿಯೂ ಏನೂ ಆಕ್ಷೇಪವಿಲ್ಲದೆ ಎಂದಿನಂತೆಯೇ ಭೋಜನ ಇತ್ಯಾದಿಗಳನ್ನು ಮಾಡುತ್ತಿದ್ದಾರೆ. "ಧರ್ಮವು ಮುಳುಗಿತು, ಜಾತಿ ಮುಳುಗಿತು" ಎಂಬ ಆಹಾಕಾರಗಳನ್ನು ಎಬ್ಬಿಸಿ, ಅಂತಃಕಲಹಗಳನ್ನುಂಟುಮಾಡಿ ಸ್ವಪ್ರಯೋಜನವನ್ನು ಪಡೆಯುವವರು ಇಲ್ಲಿ ಯಾರೂ ಇಲ್ಲ. ಆದ್ದರಿಂದ ರಾ| ಬಂಗ್ಲೆಕಾರರನ್ನು ಬಹಿಷ್ಕಾರಕ್ಕೆ ಗುರಿಪಡಿಸಿದ ಕೃತ್ಯವು ಎಷ್ಟು ಹಾಸ್ಯಾಸ್ಪದವಾಗಿದೆಂಬದು ಈಗ ಯಥಾರ್ಥವಂತರಿಗೂ ನಿಷ್ಪಕ್ಷಪಾತಿಗಳಿಗೂ ವ್ಯಕ್ತವಾಗದೇ ಇರದು. ಬಂಗ್ಲೆಕಾರರು ಸ್ವಜಾತಿಯವರೊಡನೆ ನೆಂಟಸ್ಥಿಕೆಯನ್ನು ಮಾಡಿಕೊಳ್ಳಲು ಏನೊಂದು ಅಭ್ಯಂತರವು ಈ ಬಹಿಷ್ಕಾರದಿಂದ ಉಂಟಾಗಲಿಲ್ಲವಾದುದರಿಂದ ಇಂಥಾ ಬಹಿಷ್ಕಾರದ ಪ್ರಯೋಜನವೇನು? ಬಂಗ್ಲೆಕಾರರೊಡನೆ ಕೂಡಿ ನಡೆಯುವಂಥವರನ್ನು ಸಹಾ ಬಹಿಷ್ಕರಿಸದೆ ಇದ್ದರೆ ಇಂಥಾ ಬಹಿಷ್ಕಾರಗಳ ಅರ್ಥವೇನು? ಆದ್ದರಿಂದ ಧರ್ಮರಕ್ಷಣೆಯ ಸಾಧನೆಯು ಈ ಬಹಿಷ್ಕಾರದ್ದು ಅಲ್ಲವೆಂಬದು ಇದರಿಂದ ದೃಢವಾಗುವದು. ಹಿಂದೆ ಕಟ್ಟುಕಥೆಯಲ್ಲಿ ಒಂದು ಮುದುಕಿಯು ಹಿಡಿಗುಂಟೆಯನ್ನು ಕೈಯಲ್ಲಿ ಎತ್ತಿಕೊಂಡು ಸಮುದ್ರದ ಪ್ರವಾಹವನ್ನು ಹಿಂದಕ್ಕೆ ಅಟ್ಟಿಬಿಡುವೆನೆಂತ ನಡೆಸಿದ ಪೌರುಷದ ವಿಷಯವು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ಒಬ್ಬ ಬಂಗ್ಲೆಕಾರರನ್ನು ಬಹಿಷ್ಕರಿಸಿದದರಿಂದ ಗೌಡಸಾರಸ್ವತರಲ್ಲಿ ನೂರಾರು ಜನರು ಸಂಯುಕ್ತ ಪರಿಷದವನ್ನು ಸೇರಿದರು. ಇನ್ನೂ ಅನುಕೂಲವಾದ ರೀತಿಗಳಲ್ಲಿ ಸಂಯುಕ್ತ ಪರಿಷದಗಳನ್ನು ಜರಗಿಸಿದರೆ ನೂರಾರು ಜನರು ಇವುಗಳನ್ನು ಹೋಗಲು ಸಿದ್ಧವಿರುವರು. ವಿವಾಹ ಮೊದಲಾದ ಪ್ರಸ್ತಕಾಲಗಳಲ್ಲಿ ಬಂಗ್ಲೆಕಾರರೊಡನೆ ನೂರಾರು ಜನರು ಸೇರಿನಡೆಯುತ್ತಲಿದ್ದಾರೆ. ಸಂಯುಕ್ತ ಪರಿಷದದಿಂದ ಈ ತನಕ ಗೌಡಸಾರಸ್ವತ ಉಪಶಾಖೆಗಳಲ್ಲಿ ೧೦-೧೨ ವಿವಾಹಗಳು ನಡೆದಿವೆ. ದಕ್ಷಿಣ ಕನ್ನಡದ ಗೌಡಸಾರಸ್ವತರಲ್ಲಿ ಇಂಥಾ ವಿವಾಹವು ಆಗದೆ ಹೋದರೂ ಇಲ್ಲಿಯ ಸಾರಸ್ವತರಲ್ಲಿ (ಶೇಣ್ವಿ ಪೈಕಿ) ಇಂಥಾ ವಿವಾಹಗಳು ನಡೆದಿರುವವು. ಕಾಲಕ್ರಮೇಣ ದಕ್ಷಿಣ ಕನ್ನಡದ ಗೌಡಸಾರಸ್ವತರಲ್ಲಿ ಸಹಾ ಇಂಥಾ ವಿವಾಹಗಳು ನಡೆಯುವದೆಂಬದರಲ್ಲಿ ಸಂಶಯವಿರದು.

ಸಂಯುಕ್ತ ಪರಿಷದದ ಮಾತು ಹಾಗಿರಲಿ. ಬಹಿಷ್ಕಾರದ ರಾಕ್ಷಸನನ್ನು ಓಡಿಸಿಬಿಡಲು ಇನ್ನೊಂದು ಕೃತ್ಯವು ದಕ್ಷಿಣ ಕನ್ನಡಾ ಜಿಲ್ಲೆಯ ಗೌಡ ಸಾರಸ್ವತರಲ್ಲಿ ಪ್ರಾಪ್ತವಾಗಿದೆ. ಜಾತಿಯ ವಿದ್ಯಾರ್ಥಿಗಳಲ್ಲೊಬ್ಬರು ಸಮುದ್ರ ಪ್ರಯಾಣವನ್ನು ಮಾಡಿ ಅಂಗ್ಲಾಳಕ್ಕೆ ಹೋಗಿ ಅಲ್ಲಿ ಐ. ಎಮ್. ಎಸ್. ಪರೀಕ್ಷೆಯ ಬಗ್ಗೆ ಕಲಿಯುತ್ತಿದ್ದಾರೆ. ಇಷ್ಟರ ತನಕ ನಡೆದ ಜಾತಿ ವಿವಾದಗಳಿಂದ ಜಾತಿಯವರಿಗೆ ವಿವೇಕವು ಉಂಟಾಗಿರುವದಾದರೆ ಅಂಗ್ಲಾಳಕ್ಕೆ ಹೋದ ಈ ವಿದ್ಯಾರ್ಥಿಯು ಹಿಂದಕ್ಕೆ ಬಂದೊಡನೆ ಇವರನ್ನು ಗೌರವದಿಂದಲೂ ಮನ್ನಣೆಯಿಂದಲೂ ಜಾತಿಯಲ್ಲಿ ಸ್ವೀಕರಿಸಿಕೊಳ್ಳುವದು ಕ್ಷೇಮಕರವಾಗಿರುವದು. ಇವರನ್ನೂ ಸಹ ಜಾತಿಯವರು ಬಹಿಷ್ಕಾರ ಇತ್ಯಾದಿಗಳಿಂದ ತಲ್ಲಣಗೊಳಿಸಿದರೆ ಜಾತಿಯ ಅಭಿವೃದ್ಧಿಯು ಅಂದಿಗೆ ನಿರ್ನಾಮವಾದಂತಾಯಿತು. ಸುಮಾರು ೧೫ ವರ್ಷಗಳಿಗೆ ಹಿಂದೆ ಕೆನರಾ ಹೈಸ್ಕೂಲಿನಲ್ಲಿ ಪ್ರಖ್ಯಾತಿ ಹೊಂದಿ ಪಾಸಾಗಿ ಹೋದ ಗೌಡ ಸಾರಸ್ವತ ಮೂವರು ತರುಣರು (ಇವರ ಪೈಕಿ ಒಬ್ಬರು ಅಮ್ಮೆಂಬಳ ಪೈ ಕುಟುಂಬದವರಾಗಿರುವರು) ಅಂಗ್ಲಾಳಕ್ಕೆ ಹೋಗಿ ಶಿಕ್ಷಣ ಪಡೆಯುವ ಸಂಭವವು ಬಂದೊದಗಿದಾಗ ಇಂಥಾ ವರ್ತನೆಯು "ಗೆಲ್ಲವ್" ಆದೀತೆಂತ ಶಿಕ್ಷಿತ ಮತ್ತು ಅಶಿಕ್ಷಿತ ವ್ಯಕ್ತಿಗಳು ಆ ಉತ್ಸಾಹಪೂರಿತ ಹೃದಯರಾದ ಸ್ವರ್ಗಸ್ಥ ಅಮ್ಮೆಂಬಳ ಸುಬ್ರಾಯ ಪೈಗಳವರ ಆಲೋಚನೆಗೆ ತಣ್ಣೀರಿನ ಧಾರೆಯನ್ನು ಎರೆದರು. ಇದರಿಂದ ಜಾತಿಯ ಅಭಿವೃದ್ಧಿಯನ್ನು ಕಾಲು ಶತಮಾನ ಕಾಲಕ್ಕೆ ಹಿಂದಟ್ಟಿಬಿಟ್ಟರು. ಆ ಮೂರು ಜನ ತರುಣರನ್ನು ಅಂದು ಶಿಕ್ಷಣದ ಬಗ್ಗೆ ಅಂಗ್ಲಾಳಕ್ಕೆ ಕಳುಹಿಸಿ ಕೊಟ್ಟದ್ದೇ ಆದರೆ ಇವರನ್ನು ಅನುಸರಿಸಿ ಜಾತಿಗೆ ಕೀರ್ತಿಯನ್ನೂ ಸಂಪತ್ತನ್ನೂ ತರುವ ಹಲವು ವಿದ್ಯಾವಂತರು ಗೌಡಸಾರಸ್ವತರಲ್ಲಿ ತಲೆದೋರುತ್ತಿದ್ದರು. ಸಾರಸ್ವತರ ಇತರ ಉಪಶಾಖೆಗಳಲ್ಲಿ ಚಂದಾವರಕಾರರೂ ರಾವ್‌ರವರೂ, ಭಂಡಾರಕಾರರೂ, ಪಂಡಿತರೂ, ಬೆನಗಲ್‌ಕಾರರೂ ಹೀಗೆ ಉದ್ಭವಿಸಿ ಆಯಾ ಶಾಖೆಯವರಿಗೂ ದೇಶಕ್ಕೂ ಕೀರ್ತಿಯನ್ನು ಹೇಗೆ ತಂದರೋ ಅದೇ ರೀತಿ ಕೀರ್ತಿಯನ್ನು ಘಳಿಸುವ ಹಲವರು ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಸಾರಸ್ವತರಲ್ಲಿ ತೋರಿ ಬರುತ್ತಿದ್ದರು. ರಾ| ಮಲ್ಯರವರು ವಿಲಾಯತಿಗೆ ಹೋಗಿ ಕೀರ್ತಿಯನ್ನು ಸಂಪಾದಿಸಿ ಬಂದ ದೋಷದಿಂದ ಇವರು ತಮ್ಮವರಲ್ಲವೆಂತ ಸ್ವಜಾತಿಯವರು ಭಾವಿಸದೆ, ವಿವೇಕದಿಂದ ವರ್ತಿಸುವರೆಂತ ಕೋರುತ್ತೇವೆ. ಒಂದು ವೇಳೆ ಮಲ್ಯರ ವಿಷಯದಲ್ಲಿ ಸಹಾ ವಿರೋಧ ಸಾಧನೆಯನ್ನು ಎಬ್ಬಿಸಬೇಕೆಂತ ನೋಡಿದರೂ ಅದು ಜಾತಿಯವರಿಗೆ ಎಂದೂ ಸಾಧ್ಯವಾಗದು. ಯಾಕೆಂದರೆ ಅಶಿಕ್ಷಿತ ಯಾ ಶಿಕ್ಷಿತ ವ್ಯಕ್ತಿಗಳಿಂದ ಎಂಥಾ ಕೇಡಾದರೂ ಮಲ್ಯರವರಿಗೆ ಒಂದು ತಗಲದಂತೆ ಪ್ರಯತ್ನಿಸುವರೆ ತರುಣ ವರ್ಗದವರೆಲ್ಲರೂ ಪ್ರತಿಜ್ಞಾಬದ್ಧರಾಗಿದ್ದಾರೆ. ಮಲ್ಯರವರು ಸ್ವದೇಶಕ್ಕೆ ಹಿಂತಿರುಗಲು ಇನ್ನು ಹೆಚ್ಚು ಕಡಿಮೆ ಒಂದು ಯಾ ಒಂದೂವರೆ ವರ್ಷದ ಕಾಲವಿರುವದು. ಅಷ್ಟರಲ್ಲಿ ವ್ಯಕ್ತಿಗಳೆಲ್ಲರೂ ವಿವೇಕದಿಂದ ಧೈರ್ಯವನ್ನು ತಂದುಕೊಳ್ಳುವದು ಉಚಿತವಾಗಿದೆ. ಒಂದು ವೇಳೆ ವ್ಯಕ್ತಿಗಳು ವಿವೇಕ ಶೂನ್ಯರಾಗಿ ಹೋದರೂ, ಸುಕೃತ್ಯಗಳ ಸಾಧನೆಯು ಸಾಗಿ ಜಯ ಹೊಂದುವದರಲಿ ಏನೂ ಅನುಮಾನವಿಲ.

ಮುಂಬಯಿ
— 8 — 1 — 1915

ಯುದ್ಧ ಸಮಾಚಾರ.

ತಾ ೭ನೇ ಜನವರಿ ೧೫೫.

ಅಲ್ಸೆಸಿನ ಉತ್ತರ ಕಡೆಯಲ್ಲಿ ಕಠಿಣ ಕಾಳಗ ನಡೆದಿರುವದು ಫ್ರೆಂಚರು ಪ್ರಥಮತಃ ಸ್ಟೆನ್‌ಬೆಕಿನ ದೇವಾಲಯದ ಅಜುಬಾಜನ್ನು ಕಳಕೊಂಡರೂ ನಂತರ ಪುನಃ ಅದನ್ನು ಸ್ವಾಧೀನಮಾಡಿಕೊಂಡು ಇಡೀ ಗ್ರಾಮವನ್ನು ವಶಮಾಡಿಕೊಂಡಿರುವರು ಬೆಲ್ಜಿಯಮಿನಲ್ಲಿಯೂ ಬೆಲ್ಜಿಯನರು ಮನೆಯ ನಂತರ ಮನೆಗೆ ಮುಂದರಿದು ಸೆಂಟ್ ಜೋರ್ಜ ಪ್ರಾಂತ್ಯಗಳನ್ನು ಸ್ವಾಧೀನ ಮಾಡಿಕೊಂಡಿರುವರು ಕೆಲವು ಕಡೆಗಳಲ್ಲಿ ಬೆಲ್ಜಿಯನರ ತೋಪುಗಳು ಜರ್ಮನರ ಬತ್ತೇರಿಗಳನ್ನು ನಾಶಪಡಿಸಿರುವವು ಲಿಲ್ಲೆಯ ನೆರೆಹೊರೆಯಲ್ಲಿ ಜರ್ಮನರು ಮಿತ್ರರ ಕಂದಕಗಳಲ್ಲಿ ಒಂದಕ್ಕೆ ಸಿಡಿಮದ್ದು ಹಾಕಿ ಅದನ್ನು ಹಿಡಿದರು ಆದರೆ ನಂತರ ಫ್ರೆಂಚರು ಪುನಃ ಮೇಲ್ಪಾಯಿದು ಆ ಸ್ಥಳಗಳನ್ನು ಪಡಕೊಂಡರು ಬ್ಯಸಿನಿಂದ ಒಸೆಜೆಸಿನ ವರೆಗೆ ಕಾಲಾಳು ಸೈನಿಕರ ಕದನಗಳು ನಡೆಯಲಿಲ್ಲ ಕೆರೊನ್ನೆ ಮತ್ತು ರೈಮ್ಸ್ ಪ್ರಾಂತ್ಯದಲ್ಲಿ ತೋಪು ಕಾಳಗ ನಡೆಯುತ್ತಿದೆ ಮಿತ್ರರ ಬತ್ತೇರಿಗಳು ಮ್ಯೂಸ್ ಮತ್ತು ಅರ್ಗೋನ್ನೆಯಲ್ಲಿ ಶತ್ರುಗಳ ನೆಲೆಗಳಿಗೆ ಗುಂಡು ಹಾರಿಸುತ್ತಿವೆ

ಯುದ್ಧ ಮಾಡಲು ಸಮರ್ಥರಾದ ಸೆರೆಯವರನ್ನು ಬದಲಾಯಿಸಿಕೊಳ್ಳಬೇಕೆಂಬದಾಗಿ ಪೋಪ ಜಗದ್ಗುರುಗಳು ಕೊಟ್ಟ ಆಲೋಚನೆಗೆ ಜರ್ಮನರೂ ಇಂಗ್ಲಿಷರೂ ಒಪ್ಪಿರುವರು

ಜರ್ಮನರ "ಕ್ರಾನ್‌ಸ್ಪ್ರಿನ್ಸ್‌ವಿಲ್‌ಹೆಲ್ಮ್" ಎಂಬ ಹಡಗವು ಬ್ರಿಟಿಷರ 'ಬೆಲ್ಲಿವೆ ಎಂಬ ವ್ಯಾಪಾರ ಹಡಗವನ್ನೂ ಫ್ರೆಂಚರ ಮೂರು ವ್ಯಾಪಾರ ಹಡಗಗಳನ್ನೂ ಮುಣುಗಿಸಿರುವದು

ಪೂರ್ವ ರಣರಂಗದ ವಿಸ್ಟುಲ ನದಿಯ ಬಲಪಾರ್ಶ್ವದಲ್ಲಿ ವಿಶೇಷ ಕದನಗಳು ನಡಿಯಲಿಲ್ಲ ರುಶ್ಯನರು ಗೆಲೀಸಿಯದಲ್ಲಿ ಪುನಃ ಮುಂದರಿದು ಸಾವಿರಕ್ಕಿಂತಲೂ ಹೆಚ್ಚಿನ ಶತ್ರುಗಳನ್ನು ಸೆರೆಹಿಡಿದಿರುವರು ರುಶ್ಯನರು ಬಕೋವಿನ ಮಾರ್ಗವಾಗಿ ಮುಂದರಿದು ಸುಚಾಡ ಎಂಬ ಪಟ್ಟಣವನ್ನು ವಶಮಾಡಿಕೊಂಡಿರುವರು ಉಜಕ್ ಕಣಿವೆಯಲ್ಲಿ ರಶ್ಯನರಿಗೆ ಆಸ್ಟ್ರೀಯನರ ಒಂದು ಇಡೀ ಸೇನಾಂಗವು ಶರಣಾಗತವಾಗಿರುವದು

ಟ್ರಾನ್ಸ್ ಕೌಕಾಸೆಸಿನಲ್ಲಿ ರುಶ್ಯನರು ತುರ್ಕರ ಸೇನೆಯನ್ನು ಪೂರ್ಣವಾಗಿ ಸೋಲಿಸಿರುವರು ತುರ್ಕರು ವಿಶೇಷ ನಷ್ಟಹೊಂದಿರುವರು ಇಲ್ಲಿ ರುಶ್ಯನರಿಗೆ ಜಯವಾಗಿ ತುರ್ಕರ ೯ನೇ ಕೋರ್ ಸೇನೆಯನ್ನೆಲ್ಲಾ ಹಿಡಿದಿರುವರು. ತುರ್ಕಿ ಸೇನೆಯ ಕಮಾಂಡರ್ ಜನರಲನೂ ಇತರ ಸೇನಾಂಗಗಳ ೩ ಅಧಿಪತಿಗಳೂ ರುಶ್ಯನರಿಗೆ ಸೆರೆಬಿದ್ದಿರುವರು ರುಶ್ಯನರು ತುರ್ಕರ ಇನ್ನೊಂದು ಸೇನೆಯನ್ನು ಅಟ್ಟುತ್ತಿರುವರು.

ಬ್ರಿಟಿಷರ ಯುದ್ಧ ಹಡಗವು ಪೂರ್ವ ಆಫ್ರೀಕದಲ್ಲಿ ಡಾರ್-ಎಸ್-ಸಲಾಮು ಎಂಬಲ್ಲಿಗೆ ಗುಂಡು ಹಾರಿಸಿರುವದು. ಅಲ್ಲಿದ್ದ ಶತ್ರುಗಳ ಹಡಗಗಳೆಲ್ಲಾ ಹಾಳಾಗಿರುವವು ೧೪ ಜರ್ಮನರೂ ೨೦ ದೇಶೀಯರೂ ಹಿಡಿಯಲ್ಪಟ್ಟಿರುವರು. ಬ್ರಿಟಿಷರಲ್ಲಿ ಒಬ್ಬನು ಹತನಾಗಿರುವನು. ೧೨ ಮಂದಿ ಘಾಯ ಒಡೆದಿರುವರು

ತಾ. ೭ನೇ ಜನವರಿ.

ಬ್ರಿಟಿಷ್ ಪಾರ್ಲಿಮೆಂಟ್ ಪ್ರಭು ಮಂದಿರದಲ್ಲಿ ಕಿಚನರ್ ಪ್ರಭುಗಳು ಭಾಷಣಕೊಟ್ಟು ದಕ್ಷಿಣ ಆಫ್ರೀಕದಲ್ಲಿ ದಂಗೆಗಾರರನ್ನು ಅಡಗಿಸುವರೆ ಜನರಲ್ ಬೋಥರವರು ಕೈಕೊಂಡ ಕೆಲಸವನ್ನು ಶ್ಲಾಘಿಸಿ ಮಾತನ್ನಾಡಿರುವರು ಪಶ್ಚಿಮ ರಣರಂಗದಲ್ಲಿ ಮಿತ್ರರು ದಿನೇ ದಿನೇ ಜಯಹೊಂದುತ್ತಲಿರುವರು ಪೋಲೇಂಡಿನಲ್ಲಿ ರುಶ್ಯನರು ಜರ್ಮನರಲ್ಲಿ ವಿಶೇಷ ನಷ್ಟ ಪಡಿಸಿ ಜಯಪ್ರದರಾಗುತ್ತಿರುವರೆಂಬೀ ವಿಷಯಗಳನ್ನು ತಿಳಿಯ ಹೇಳಿರುವರು

ಪಶ್ಚಿಮ ರಣರಂಗದಲ್ಲಿ ವಿಶೇಷ ಬದಲಾವಣೆಯಾಗಲಿಲ್ಲ. ಮಿತ್ರರು ಕೆಲವು ಮುಖ್ಯ ಸ್ಥಳಗಳನ್ನ ಸ್ವಾಧೀನ ಮಾಡಿಕೊಂಡಿರುವರು

ಪೋಲೇಂಡಿನಲ್ಲಿಯೂ ವಿಶೇಷ ಕದನ ನಡೆಯಲಿಲ್ಲ ಕಾಕಾಸೆಸಿನಲ್ಲಿ ಓಡಿಹೋಗುತ್ತಿರುವ ತುರ್ಕಿ ಸೇನೆಯನ್ನು ರುಶ್ಯನರು ಮುತ್ತಿರುವರು ತುರ್ಕರು ದಾರಿಕಾಣದೆ ಹಿಮ ಬಿದ್ದಿರುವ ಒಳದಾರಿಗಳಿಗೆ ಚದರಿಹೋಗಿ ಕಷ್ಟಪಡುತ್ತಿರುವರು

ರುಮೇನಿಯ ರಾಜ್ಯದವರು ಬೇಗನೇ ಯುದ್ಧಕ್ಕೆ ಸೇರುವ ಹಾಗಿದ್ದಾರೆಂಬ ವಾರ್ತೆ ಇದೆ

ಹಿಂದೂಸ್ಥಾನದಿಂದ ಸೈಲೇಂದ್ರನಾಥ ಬಾಸುರವರು ರಣರಂಗಕ್ಕೆ ಹೊರಟಿರುವರು ಇವರು ಭೂಪೇಂದ್ರನಾಥ ಬಾಸುರವರ ಸೋದರ ಅಳಿಯ ಮತ್ತು ಛಾಯಾಸಾಕ್ಷ್ಯಮಿಯಾಗಿರುವರು

ತಾ. ೮ನೇ ಜನವರಿ

ಮಿತ್ರರು ತೋರಿಸುತ್ತಿರುವ ಶೂರಕೃತ್ಯಗಳನ್ನು ಬೆರ್ಲಿನಿನ ಪತ್ರಗಳು ಹೊಗಳುತ್ತಿವೆ ಜರ್ಮನರು ಬೆಲ್ಜಿಯಮಿನಲ್ಲಿದ್ದ ಕಾರ್ಡಿನಲ್ ಮೆರ್ಸಿಯರ್ ಎಂಬ ಗುರುಗಳನ್ನು ಹಿಡಿದಿರುವದರಿಂದ ರೋಮ ನಗರದಲ್ಲಿ ಜರ್ಮನರಿಗೆ ವಿರೋಧವಾದ ಹೆಚ್ಚಿನ ಚಳವಳವು ನಡೆದಿರುವದು

ಇಂಗ್ಲಿಷ್ ಕಾಲುವೆಯಲ್ಲಿ ಮುಣುಗಿ ಹೋದ ಫೋರ್ಮಿಡ್ಯೆಬಲ್ ಯುದ್ಧ ನಾವೆಯಲ್ಲಿ ೫೧೭ ಮಂದಿ ಪ್ರಾಣಾಪಾಯ ಹೊಂದಿದರು ಎಂತ ಪ್ರಕಟವಾಗಿದೆ

ರುಶ್ಯನರ ಸೇನೆಯು ಥಕ್ಕನೇ ಮಾಲ್ವ ಪ್ರಾಂತ್ಯದಲ್ಲಿ ಶತ್ರುಗಳ ಮೇಲೆ ಬಿದ್ದು ಸನೀನು ಕಾಳಗ ಮಾಡಿ ಶತ್ರುಗಳ ಸೇನೆಯನ್ನು ಹತಬಡಿದಿರುವದು. ಇತರ ಪ್ರಾಂತ್ಯದಲ್ಲಿ ಚಿಕ್ಕ ಕದನಗಳು ಮಾತ್ರ ನಡೆದವು ಬಕೋವಿನದಲ್ಲಿ ರುಶ್ಯನರು ಮುಂದರಿಯುತ್ತಲೇ ಇದ್ದು ಟ್ರಾನ್ಸಲ್ವೇನಿಯಕ್ಕೆ ಹೋಗುವ ದಾರಿಯಲ್ಲಿರುವ ೪ ಪಟ್ಟಣಗಳನ್ನು ಸ್ವಾಧೀನ ಮಾಡಿಕೊಂಡಿರುವರು

ರುಶ್ಯನರು ತುರ್ಕರನ್ನು ಸೋಲಿಸಿ ತುರ್ಕರ ಒಹು ರಾಶಿ ಕೋವಿಗಳನ್ನೂ ಯುದ್ಧ ಸಾಮಗ್ರಿಗಳನ್ನೂ ಹಿಡಿದಿರುವರು ತುರ್ಕಿ ಸೇನೆಯಲ್ಲಿ ಹತರಾದ ಮತ್ತು ಘಾಯ ಒಡೆದವರ ಸಂಖ್ಯೆಯು ಬಹು ಹೆಚ್ಚಾಗಿರುವದು

ತಾ. ೯ನೇ ಜನವರಿ.

ಸಮುದ್ರದಿಂದ ಲೈಸಿನ ವರೆಗೆ ತೋಪು ಕಾಳಗ ಮಾತ್ರ ನಡೆದಿರುವದು ಮಿತ್ರರಿಗೆ ಎಲ್ಲೆಲ್ಲಿಯೂ ಜಯವಾಗಿರುವದು. ಡನ್‌ಕರ್ಕಿನಕಡೆಗೆ ಹಾರುತ್ತಲಿದ್ದ ಶತ್ರುಗಳ ವಾಯುನಾವೆಗಳನ್ನು ಮಿತ್ರರ ಬತ್ತೇರಿಗಳು ಓಡಿಸಿರುವವು. ಲಿಲ್ಲೆಯಲ್ಲಿ ಮೇಲ್ಪಾಯಿದ ಜರ್ಮನರನ್ನು ಮಿತ್ರರು ಹಿಂದಟ್ಟಿರುವರು ಶತ್ರುಗಳು ಮಿತ್ರರ ಒಂದು ಕಂದಕವನ್ನು ತಕ್ಕೊಂಡರೂ ಮಿತ್ರರು ಅದನ್ನು ಪುನಃ ಸ್ವಾದೀನ ಮಾಡಿಕೊಂಡು, ಜರ್ಮನರ ಕೆಲಸಗಳನ್ನು ಸಿಡಿಮದ್ದಿನಿಂದ ನಾಶಮಾಡಿದರು . ಅರ್ಗೋನ್ನೆಯ ಬಸಿಗ್ನೆಯಲ್ಲಿ ಮೇಲ್ಪಾಯಿದ ಜರ್ಮನರೂ ಹಿಮ್ಮೆಟ್ಟಿರುವರು ಎಂತ ಪಾರಿಸಿನಲ್ಲಿ ಪ್ರಕಟವಾದ ವಾರ್ತೆಯಿಂದ ತಿಳಿದು ಬರುವದು

ಬ್ರಿಟಿಷರ ಫೋರ್ಮಿಡೆಬಲ್ ಯುದ್ಧ ಹಡಗವನ್ನು ಜರ್ಮನರ ಜಲಂತರ್ಗಾಮಿನಾವೆಯು ಮುಣುಗಿಸಿರುವದು. ಬ್ರಿಟಿಷ ಯುದ್ಧ ನಾವೆಗಳು ಈ ಜಲಂತರ್ಗಾಮಿ ನಾವೆಯನ್ನು ಹಿಂದಟ್ಟಿದವು ಆದರೆ ಜರ್ಮನರ ಜಲಂತರ್ಗಾಮಿ ನಾವೆಯು ತಪ್ಪಿಸಿಕೊಂಡು ಬಂದಿರುವದು ಎಂತ ಜರ್ಮನ್ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ, ಫೋರ್ಮಿಡಬಲ್ ನಾವೆಯು ಜರ್ಮನರ ಜಲಂತರ್ಗಾಮಿಯ ಟೋರ್ಪೆಡೋ ನಾವೆಗಳಿಂದ ಮುಣುಗಿಸಲ್ಪಟ್ಟಿರಬೇಕೆಂತ ಕ್ರೂಪ್ರಭುಗಳವರು ಪ್ರಭುಮಂದಿರದಲ್ಲಿ ಹೇಳಿರುವರು. ಬ್ರಿಟಿಷರ ಯುದ್ಧ ನಾವೆಗಳ ಸಂಖ್ಯೆಯು ಪ್ರತಿ ತಿಂಗಳಿಗೆ ಒಲಗೊಳ್ಳುತ್ತಾ ಇದೆ ಎಂತ ಕ್ರೂಪ್ರಭುಗಳವರು ಹೇಳಿರುವರು

ಉತ್ತರ ಕಡಲಲ್ಲಿ ೩ ಹಡಗಗಳು ಮತ್ತು ಒಂದು ಟ್ರವ್‌ಲರ್ ದೋಣಿಯೂ ಸಿಡಿಮದ್ದಿನ ಗಣಿಗೆ ತಗಲಿ ಮುಣುಗಿಹೋಗಿರುವದೆಂತ ಪ್ರಕಟವಾಗಿದೆ ಈ ಅವಗಡದಲ್ಲಿ ೨೫ ಮಂದಿ ಮುಣುಗಿಹೋದರು ಕೆಲವರು ಕಾಣದೆ ಹೋಗಿರುವರು

ಮದ್ಯಪಾನಗಳನ್ನು ಮಾರಕೂಡದೆಂಬ ಕಾನೂನು ಪ್ರಾನ್ಸಿನಲ್ಲಿ ಜಾರಿಗೆ ಬಂದಿರುವದು.

ಪೂರ್ವ ರಣರಂಗದಲ್ಲಿ ವಿಶೇಷ ಬದಲಾವಣೆ ನಡೆಯಲಿಲ್ಲ ರುಶ್ಯನರು ಅರ್ದಹಾನಿನಲ್ಲಿ ತುರ್ಕರನ್ನು ಪೂರ್ಣವಾಗಿ ಸೋಲಿಸಿರುವರು.

ದಕ್ಷಿಣ ಆಫ್ರೀಕದಲ್ಲಿ ಯೂನ್ಯನ್ ಸರಕಾರದ ಸೇನೆಯು ಸ್ಕ್ಯುಯಿಟ್‌ಡ್ರಿಫ್ಟವೆಂಬ ಸ್ಥಳವನ್ನು ಸ್ವಾಧೀನ ಮಾಡಿಕೊಂಡಿರುವದು ಶತ್ರುಗಳು ಒರೆಂಜ ನದಿಯನ್ನು ದಾಟಿ ಉತ್ತರ ದಡದಲ್ಲಿ ಉಳದಿರುವರು

ತಾ. ೧೧ನೇ ಜನವರಿ

ಫ್ರೆಂಚರು ಅಲ್ಸೆಸಿನಲ್ಲಿ ಮುಂದರಿಯುತ್ತಿರುವರು ಅರ್ಗೋನ್ನೆ ಮತ್ತು ಸ್ಯೊಸೂನ್ಸಿನಲ್ಲಿ ಮೇಲ್ಪಾಯಿದ ಜರ್ಮನರು ಹಿಮ್ಮೆಟ್ಟಲ್ಪಟ್ಟಿರುವರು ಇತರ ಸ್ಥಳಗಳಲ್ಲಿ ತೋಪು ಕಾಳಗ ನಡೆಯುತ್ತಿದೆ ಎಂಬದೇ ಈ ದಿನದ ವಿಶೇಷ ವಾರ್ತೆಯಾಗಿರುವದು

ಜೋರ್ಜ ಸಾರ್ವಭೌಮರವರೂ ಚಕ್ರವರ್ತಿನಿಯವರೂ ಬ್ರೈಟನಿನಲ್ಲಿ ಶೈತೋಪಚಾರ ಹೊಂದುತ್ತಲಿರುವ ಭಾರತೀಯ ಸೈನಿಕರನ್ನು ಹೋಗಿ ನೋಡಿ, ಕೆಲವರ ಕೂಡ ಸ್ವತಹಾ ಸಂಭಾಷಣೆ ನಡಿಸಿರುವರು

ಪ್ರಾನ್ಸಿನ ಪ್ರಧಾನ ಮಂತ್ರಿಯವರ ಮಗನು ರಣರಂಗದಲ್ಲಿ ಮಡಿದು ಹೋದನು ಬೆಲ್ಜಿಯಮಿನ ಒಬ್ಬ ಜನರಲನಿಗೆ ಜರ್ಮನರು ಜೀವಾಂತ ಸಜೆಯನ್ನೂ, ಲೀಜಿಯ ಇತರ ನಾಲ್ಕು ಪಟ್ಟಣಿಗರಿಗೆ ಕಠಿಣ ಸಜೆಯನ್ನೂ ವಿಧಿಸಿರುವರು. ಬೆಲ್ಜಿಯಮಿನಲ್ಲಿರುವ ಕಾರ್ಡಿನಲ್ ಮೆರ್ಸಿಯರ್‌ರವರು ಕೈದುಮಾಡಲ್ಪಡಲಿಲ್ಲ ಯಾ ಅವರ ಅರಮನೆಗೆ ಕಾವಲು ಇಡಲಿಲ್ಲ ಎಂಬದಾಗಿ ಜರ್ಮನರು ಹೇಳುವರು

ಪೂರ್ವ ರಣರಂಗದ ವಿಸ್ಟುಲ ನದಿಯ ಎಡಪಾರ್ಶ್ವದಲ್ಲಿ ವಿಶೇಷ ಬದಲಾವಣೆಯಾಗಲಿಲ್ಲ ಜರ್ಮನರು ಇಲ್ಲಿ ಹೆಚ್ಚಿನ ನಷ್ಟ ಹೊಂದಿದ್ದರೂ ಕೆಲವು ಕಡೆಗಳಲ್ಲಿ ಜೀವದ ಮರವೆ ಇಲ್ಲದೆ ಮೇಲ್ಪಾಯುತ್ತಿರುವರು ಗೆಲೀಸಿಯದ ಬಕೋವಿನದಲ್ಲಿ ರುಶ್ಯನರು ಒಂದು ವಾರದೊಳಗೆ ೮೦ ಮೈಲು ಮುಂದರಿದು ಹಂಗೇರಿಯ ಮತ್ತು ಬಕೋವಿನವನ್ನು ವಿಂಗಡಿಸುವ ಪರ್ವತ ಶ್ರೇಣಿಗಳ ಬಳಿಗೆ ತಲಪಿ, ಶತ್ರುಗಳ ೧೦೦೦ ಸೈನಿಕರನ್ನೂ ಬಹಳ ಕೊಳ್ಳೆಯನ್ನೂ ಸೆರೆಹಿಡಿದಿರುವರು.

ರುಶ್ಯನರ ಯುದ್ಧ ಹಡಗಗಳು ತುರ್ಕರ ಸಾಮಾನು ಸಾಗಿಸುವ ಎರಡು ಹಡಗಗಳನ್ನು ಮುಣುಗಿಸಿಬಿಟ್ಟಿರುವವು. ತುರ್ಕರ ಒಂದು ಕ್ರೂಜರ್ ತಪ್ಪಿಸಿಕೊಂಡು ಹೋಗಿರುವದು. ಜರ್ಮನರು ಟರ್ಕಿಸೇನೆಯಕ್ಕೆ ೬೦೦೦೦ ಸೈನಿಕರನ್ನು ಕಳುಹಿಸಿರುವರೆಂಬದಾಗಿ ರೋಮನಿಯದ

ಪೂರ್ವಾಪರ ವಿಚಾರ ಮಾಡಿಕೊಳ್ಳದೆ ಮಾತಾಡುವ ವಿಚಾರಿಗೆ ಇನ್ನಾದರೂ ಜ್ಞಾನೋದಯವಾಗಿ ಸಂಸರಣಯಾತ್ರೆಯಲ್ಲಿ ಹ್ಯಾಗೆ ಹೆಜ್ಜೆಯನ್ನಿಟ್ಟು ನಡಿಯಬೇಕೆಂಬ ಅರಿವು ಉಂಟಾಗಿ, ತಾನು ಧರಿಸಿಕೊಂಡ ವಿಚಾರಿ ಎಂಬ ನಾಮವನ್ನು ಸಾರ್ಥಕಗೊಳಿಸಲಿ.

ನಿಮುರ್ತಿ.

ಬಹಿಷ್ಕಾರದ ಫಲಪ್ರಾಪ್ತಿ.

ಸ್ವದೇಶಾಭಿಮಾನಿ ಪತ್ರಕರ್ತರಿಗೆ.

ಅಯ್ಯಾ, ಮುಲ್ಕಿ ವೆಂಕಟ್ರಮಣ ದೇವಸ್ಥಾನದ ಆಡಳಿತೆ ಮೊಕ್ತೇಸರರು ರಾ| ಬಂಗ್ಲೆಕಾರರ ಮೇಲೆ ಮಾಡಿದ ದಾವೆಗಳು ತೆಗೆದುಹಾಕೋಣಾದವು ಎಂಬ ವರ್ತಮಾನವನ್ನು ತಮ್ಮ ಇತ್ತಲಾಗಿನ ಸಂಚಿಕೆಯಲ್ಲಿ ಓದಿ ಬಹಳ ಸಂತೋಷಪಟ್ಟೆನು. ದಕ್ಷಿಣ ಕನ್ನಡದ ಗೌಡಸಾರಸ್ವತರ ಕ್ಷೇಮಚಿಂತಕರೆಲ್ಲರಿಗೂ ಈ ವರ್ತಮಾನವು ಬಹಳ ಸಂತೋಷಕರವಾಗಿರದೇ ಇರದು. ಮಾಪ್ಸೆಯಲ್ಲಾದ ಸಂಯುಕ್ತ ಸಾರಸ್ವತ ಪರಿಷದಕ್ಕೆ ಹೋಗಲು ಧೈರ್ಯಗೊಂಡ ರಾ| ಬಂಗ್ಲೆಕಾರ್ ಮೊದಲಾದವರನ್ನು ಬಹಿಷ್ಕಾರ ಇಡಲು ಯತ್ನಿಸಿದ ಫಲವಾಗಿ ಈಗ ಹಿಂದಿನ ನಾಲ್ಕು ವರ್ಷಗಳಿಂದ ಈ ಜಾತಿಯಲ್ಲಿ ಈ ಹಾಳು ವ್ಯವಹಾರವು ನಡೆಯುತ್ತಿರುವದು. ಖಾಸಗಿ ಜನರ ಭಂಡಾರದಿಂದಲೂ ಹತ್ತು ಜನರಿಗೆ ಸಂಬಂಧಪಟ್ಟ ಖಜಾನೆಗಳಿಂದಲೂ ಈ ಬಗ್ಗೆ ದ್ರವ್ಯವು ವ್ಯರ್ಥವಾಗಿ ಚೆಲ್ಲಲ್ಪಡುತ್ತದೆ. ಜಾತಿಯಲ್ಲಿ ಜಾತಿಯ ಅಭಿವೃದ್ಧಿಯ ಪ್ರಯತ್ನಗಳೆಲ್ಲವನ್ನು ಪೂರ್ಣವಾಗಿ ಅಣಗಿಸಿಬಿಡುವ ವೈಶಮ್ಯಗಳೂ ವೈರಗಳೂ ಇದರಿಂದ ಪ್ರಾಪ್ತವಾಗಿರುವವು. ಆದ್ದರಿಂದ ಸ್ವಜಾತಿಯಲ್ಲಿ ನಡೆಯುತ್ತಿರುವ ಈ ವ್ಯವಹಾರವು ಇನ್ನಾದರೂ ಬೇಗನೇ ಮುಗಿಯುವ ಸಂಭವವು ಒದಗಿದ್ದನ್ನು ನೋಡಿ ಸಂತೋಷಪಡಬೇಕಾಗಿರುವದು.

ಮೇಲಣ ನಾಲ್ಕು ವರ್ಷಗಳ ಅನರ್ಥಕಾರಿಯಾದ ವ್ಯವಹರಣೆಯಿಂದ ಸ್ವಜಾತಿಯವರು ಕೆಲವು ಫಲಿತಾಂಶವನ್ನು ಚೆನ್ನಾಗಿ ಕಲಿತುಕೊಳ್ಳಬೇಕಾಗಿದೆ. ೨೫ ವರ್ಷಗಳ ಮೊದಲೊಮ್ಮೆ ಇಂಥಾದ್ದೇ ಒಂದು ಕಲಹವು ಜಾತಿಯೊಳಗೆ ಪ್ರಾಪ್ತವಾಗಿ ಅದರಿಂದುಂಟಾದ ದುಷ್ಪರಿಣಾಮಗಳು ಗೌಡಸಾರಸ್ವತರನ್ನು ಬಿಟ್ಟುಹೋಗಿ ಬಹಳ ಸಮಯವಾಗಲಿಲ್ಲ. ಕಳೆದ ನಾಲ್ಕು ವರ್ಷಗಳ ವ್ಯವಹರಣೆಯಿಂದ ಸಹಾ ಉಂಟಾಗುವ ಪರಿಣಾಮಗಳು ಕೆಟ್ಟವೇ ಆಗುವವು. ಆದರೆ ಇಂಥಾ ಕೇಡಿನಿಂದ ಒಳ್ಳಿತವನ್ನು ಗೌಡಸಾರಸ್ವತರು ಇನ್ನಾದರೂ ತಿಳಿಯಬೇಕಾಗಿದೆ. ಅಶಿಕ್ಷಿತರಾದ ಪೂರ್ವಾಚಾರ ಪದ್ಧತಿಯವರು—ತಾವು ಶಿಕ್ಷಿತರೆಂದೆಣಿಸಿಕೊಂಡ ಕೆಲವರು—ಈ ಎರಡು ವರ್ಗದವರೂ ಕೂಡಿ ಸಂಘ ಸುಧಾರಣೆಯ ಪ್ರಯತ್ನಗಳಿಗೆ ಕಾರಣವಿಲ್ಲದ ಮತ್ತು ಅಯುಕ್ತವಾದ ರೀತಿಯಲ್ಲಿ ಅಭ್ಯಂತರಗಳನ್ನು ತಂದೊಡ್ಡಿದ್ದರಿಂದ ಏನೇನೆಲ್ಲಾ ಸಂಭವಿಸಿತೆಂಬುದನ್ನು ಆಲೋಚಿಸಿ ನೋಡಲಿ. ರಾ| ಬಂಗ್ಲೆಕಾರರನ್ನೂ ಅವರ ಕೆಲವು ಸ್ನೇಹಿತರನ್ನೂ ಬಹಿಷ್ಕಾರ ಇಟ್ಟರು. ಈ ರೀತಿ ಬಂಗ್ಲೆಕಾರರೊಬ್ಬರನ್ನು ಬಹಿಷ್ಕಾರವಿಟ್ಟದ್ದರಿಂದ ಗೌಡಸಾರಸ್ವತರಲ್ಲಿ ಹಲವರು ಮುಂದಾಗಿ ಒಂದು ಸ್ವಾಮಿಗಳ ರಾಯಸವನ್ನು ಮನ್ನಿಸಲು ಬಹಿರಂಗವಾಗಿ ಸಂಯುಕ್ತ ಪರಿಷದವನ್ನು ಸೇರಿ ಸಹಪಂಕ್ತಿ ಭೋಜನವನ್ನು ಮಾಡುತ್ತಿರುವರು. ಇಂಥವರನ್ನು ಬಹಿಷ್ಕಾರದಿಂದ ಆಟೋಪಿಸುವ ಅಥವಾ ಇಂಥವರಿಗೆ ಕೇಡನ್ನುಂಟುಮಾಡುವ ತ್ರಾಣವು ಸ್ವಾಮಿಗಳಿಗಿರದು. ಸಮಾಜದಲ್ಲಿ ಲೂಟಿಯನ್ನುಂಟುಮಾಡುವ ತ್ರಾಣವು ಪೂರ್ವಾಚಾರ ಪದ್ಧತಿಯವರೆಂದೆಣಿಸಿಕೊಳ್ಳುವ ವಿರೋಧಪಕ್ಷದವರಿಗೆ ಎಷ್ಟರಮಟ್ಟಿಗಿರುವದೆಂಬುದನ್ನು ಪರೀಕ್ಷಿಸಿ ನೋಡುವದಕ್ಕೋಸ್ಕರ ಸಂಯುಕ್ತ ಪರಿಷದಗಳಿಗೆ ಹೋಗಿ ಸಹಪಂಕ್ತಿ ಭೋಜನವನ್ನು ಮಾಡಿದವರ ಹೆಸರುಗಳನ್ನು ಸ್ವದೇಶಾಭಿಮಾನಿಗೆ ಕಳುಹಿಸಿಕೊಟ್ಟು ಪ್ರಕಟಿಸಿದೆವು. ಇಂಥವರನ್ನೆಲ್ಲಾ ಬಹಿಷ್ಕಾರಕ್ಕೆ ಗುರಿಮಾಡಿದರೋ? ನಿಜವಾಗಿಯೂ ಇಲ್ಲ. ಹಾಗೆ ಮಾಡುವದರ ಬದಲಿಗೆ ಯಾವ ಮಠದಿಂದ ಈ ಬಹಿಷ್ಕಾರವು ಕೊಡೋಣಾಯಿತೋ ಅಂಥಾ ಕಾಶೀಮಠದಲ್ಲಿ ಇವರಿಗೆಲ್ಲಾ ಸಹಪಂಕ್ತಿ ಭೋಜನಗಳನ್ನು ಬಹಿರಂಗವಾಗಿ ಮಾಡಿಸಿದರು. ಇಂಥಾ ಸಹಪಂಕ್ತಿ ಭೋಜನಗಳು ಮುಂಬಾಯಿ ವಾಲ್ಕೇಶ್ವರದ ಕಾಶೀ ಮಠದಲ್ಲಿ ಗತಿಸಿದ ಶ್ರೀ ವರದೇಂದ್ರ ತೀರ್ಥ ಸ್ವಾಮಿಗಳವರ ಸಮಕ್ಷಮದಲ್ಲಿ ಬಹಿರಂಗವಾಗಿ ಮಾಡೋಣಾದವು. ಸ್ವಾಮಿಯವರೂ ಮುಂಬಯಿಯ ಪೂರ್ವಾಚಾರ ಪದ್ಧತಿಯ ಶಿಷ್ಯವರ್ಗದವರೂ ಸಂಯುಕ್ತ ಪರಿಷದಕ್ಕೆ ಹೋದವರೊಡನೆ ಸಹಪಂಕ್ತಿಭೋಜನವನ್ನು ಏನೂ ಅಭ್ಯಂತರವಿಲ್ಲದೆ ಮಾಡಿದರು. ಇಂಥಾ ಭೋಜನಗಳು ಈಗಿನ ಕಾಶೀಮಠದ ಗುರುಗಳಾದ ಶ್ರೀ ಸುಕೃತೀಂದ್ರ ಸ್ವಾಮಿಗಳವರ ಸಮಕ್ಷಮದಲ್ಲಿ ಸಹಾ ನಡೆಯುತ್ತಲಿವೆ. ಕಳೆದ ಕೆಲವು ಹಪ್ತೆಗಳ ಮೊದಲು ಮಾಲ್ವಾನದಲ್ಲಿ ನಡೆದ ಸಂಯುಕ್ತ ಪರಿಷದಕ್ಕೆ ಮಂಗಳೂರಿನ ರಾ| ನಕ್ರಾಡಿ ರಾಘವೇಂದ್ರರಾಯರೆಂಬವರು ಹೋಗಿ ಬಂದಿರುವರು. ಇವರೂ, ಹಿಂದೆ ಹೀಗೆಯೇ ಸಂಯುಕ್ತ ಪರಿಷದಕ್ಕೆ ಹೋಗಿ ಬಂದವರೂ, ಮುಂಬಯಿಯ ಸ್ವಜಾತಿ ಬಾಂಧವರೆಲ್ಲರಲ್ಲಿಯೂ ಏನೂ ಆಕ್ಷೇಪವಿಲ್ಲದೆ ಎಂದಿನಂತೆಯೇ ಭೋಜನ ಇತ್ಯಾದಿಗಳನ್ನು ಮಾಡುತ್ತಿದ್ದಾರೆ. "ಧರ್ಮವು ಮುಳುಗಿತು, ಜಾತಿ ಮುಳುಗಿತು" ಎಂಬ ಆಹಾಕಾರಗಳನ್ನು ಎಬ್ಬಿಸಿ, ಅಂತಃಕಲಹಗಳನ್ನುಂಟುಮಾಡಿ ಸ್ವಪ್ರಯೋಜನವನ್ನು ಪಡೆಯುವವರು ಇಲ್ಲಿ ಯಾರೂ ಇಲ್ಲ. ಆದ್ದರಿಂದ ರಾ| ಬಂಗ್ಲೆಕಾರರನ್ನು ಬಹಿಷ್ಕಾರಕ್ಕೆ ಗುರಿಪಡಿಸಿದ ಕೃತ್ಯವು ಎಷ್ಟು ಹಾಸ್ಯಾಸ್ಪದವಾಗಿದೆಂಬುದು ಈಗ ಯಥಾರ್ಥವಂತರಿಗೂ ನಿಷ್ಪಕ್ಷಪಾತಿಗಳಿಗೂ ವ್ಯಕ್ತವಾಗದೇ ಇರದು. ಬಂಗ್ಲೆಕಾರರು ಸ್ವಜಾತಿಯವರೊಡನೆ ನೆಂಟಸ್ಥಿಕೆಯನ್ನು ಮಾಡಿಕೊಳ್ಳಲು ಏನೊಂದು ಅಭ್ಯಂತರವು ಈ ಬಹಿಷ್ಕಾರದಿಂದ ಉಂಟಾಗಲಿಲ್ಲವಾದುದರಿಂದ ಇಂಥಾ ಬಹಿಷ್ಕಾರದ ಪ್ರಯೋಜನವೇನು? ಬಂಗ್ಲೆಕಾರರೊಡನೆ ಕೂಡಿ ನಡೆಯುವಂಥವರನ್ನು ಸಹಾ ಬಹಿಷ್ಕರಿಸದೆ ಇದ್ದರೆ ಇಂಥಾ ಬಹಿಷ್ಕಾರಗಳ ಅರ್ಥವೇನು? ಆದ್ದರಿಂದ ಧರ್ಮರಕ್ಷಣೆಯ ಸಾಧನೆಯು ಈ ಬಹಿಷ್ಕಾರದ್ದು ಅಲ್ಲವೆಂಬದು ಇದರಿಂದ ದೃಢವಾಗುವದು. ಹಿಂದೆ ಕಟ್ಟುಕಥೆಯಲ್ಲಿ ಒಂದು ಮುದುಕಿಯು ಹಿಡಿಗುಂಜೆಯನ್ನು ಕೈಯಲ್ಲಿ ಎತ್ತಿಕೊಂಡು ಸಮುದ್ರದ ಪ್ರವಾಹವನ್ನು ಹಿಂದಕ್ಕೆ ಅಟ್ಟಿಬಿಡುವೆನೆಂತ ನಡೆಸಿದ ಪೌರುಷದ ವಿಷಯವು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತದೆ. ಒಬ್ಬ ಬಂಗ್ಲೆಕಾರರನ್ನು ಬಹಿಷ್ಕರಿಸಿದ್ದರಿಂದ ಗೌಡಸಾರಸ್ವತರಲ್ಲಿ ನೂರಾರು ಜನರು ಸಂಯುಕ್ತ ಪರಿಷದವನ್ನು ಸೇರಿದರು. ಇನ್ನೂ ಅನುಕೂಲವಾದ ರೀತಿಗಳಲ್ಲಿ ಸಂಯುಕ್ತ ಪರಿಷದಗಳನ್ನು ಜರಗಿಸಿದರೆ ನೂರಾರು ಜನರು ಇವುಗಳನ್ನು ಹೋಗಲು ಸಿದ್ಧವಿರುವರು. ವಿವಾಹ ಮೊದಲಾದ ಪ್ರಸ್ತ ಕಾಲಗಳಲ್ಲಿ ಬಂಗ್ಲೆಕಾರರೊಡನೆ ನೂರಾರು ಜನರು ಸೇರಿನಡೆಯುತ್ತಲಿದ್ದಾರೆ. ಸಂಯುಕ್ತ ಪರಿಷದದಿಂದ ಈ ತನಕ ಗೌಡಸಾರಸ್ವತ ಉಪಶಾಖೆಗಳಲ್ಲಿ ೧೦-೧೨ ವಿವಾಹಗಳು ನಡೆದಿವೆ. ದಕ್ಷಿಣ ಕನ್ನಡದ ಗೌಡಸಾರಸ್ವತರಲ್ಲಿ ಇಂಥಾ ವಿವಾಹವು ಆಗದೆ ಹೋದರೂ ಇಲ್ಲಿಯ ಸಾರಸ್ವತರಲ್ಲಿ (ಶೇಣ್ವಿ ಪೈಕಿ) ಇಂಥಾ ವಿವಾಹಗಳು ನಡೆದಿರುವವು. ಕಾಲಕ್ರಮೇಣ ದಕ್ಷಿಣ ಕನ್ನಡದ ಗೌಡಸಾರಸ್ವತರಲ್ಲಿ ಸಹಾ ಇಂಥಾ ವಿವಾಹಗಳು ನಡೆಯುವದೆಂಬದರಲ್ಲಿ ಸಂಶಯವಿರದು.

ಸಂಯುಕ್ತ ಪರಿಷದದ ಮಾತು ಹಾಗಿರಲಿ. ಬಹಿಷ್ಕಾರದ ರಾಕ್ಷಸನನ್ನು ಓಡಿಸಿಬಿಡಲು ಇನ್ನೊಂದು ಕೃತ್ಯವು ದಕ್ಷಿಣ ಕನ್ನಡಾ ಜಿಲ್ಲೆಯ ಗೌಡ ಸಾರಸ್ವತರಲ್ಲಿ ಪ್ರಾಪ್ತವಾಗಿದೆ. ಜಾತಿಯ ವಿದ್ಯಾರ್ಥಿಗಳಲ್ಲೊಬ್ಬರು ಸಮುದ್ರ ಪ್ರಯಾಣವನ್ನು ಮಾಡಿ ಅಂಗ್ಲಾಳಕ್ಕೆ ಹೋಗಿ ಅಲ್ಲಿ ಐ. ಎಮ್. ಎಸ್. ಪರೀಕ್ಷೆಯ ಬಗ್ಗೆ ಕಲಿಯುತ್ತಿದ್ದಾರೆ. ಇಷ್ಟರ ತನಕ ನಡೆದ ಜಾತಿ ವಿವಾದಗಳಿಂದ ಜಾತಿಯವರಿಗೆ ವಿವೇಕವು ಉಂಟಾಗಿರುವದಾದರೆ ಅಂಗ್ಲಾಳಕ್ಕೆ ಹೋದ ಈ ವಿದ್ಯಾರ್ಥಿಯು ಹಿಂದಕ್ಕೆ ಬಂದೊಡನೆ ಇವರನ್ನು ಗೌರವದಿಂದಲೂ ಮನ್ನಣೆಯಿಂದಲೂ ಜಾತಿಯಲ್ಲಿ ಸ್ವೀಕರಿಸಿಕೊಳ್ಳುವದು ಕ್ಷೇಮಕರವಾಗಿರುವದು. ಇವರನ್ನೂ ಸಹ ಜಾತಿಯವರು ಬಹಿಷ್ಕಾರ ಇತ್ಯಾದಿಗಳಿಂದ ತಲ್ಲಣಗೊಳಿಸಿದರೆ ಜಾತಿಯ ಅಭಿವೃದ್ಧಿಯು ಅಂದಿಗೆ ನಿರ್ನಾಮವಾದಂತಾಯಿತು. ಸುಮಾರು ೧೫ ವರ್ಷಗಳಿಗೆ ಹಿಂದೆ ಕೆನರಾ ಹೈಸ್ಕೂಲಿನಲ್ಲಿ ಪ್ರಖ್ಯಾತಿ ಹೊಂದಿ ಪಾಸಾಗಿ ಹೋದ ಗೌಡ ಸಾರಸ್ವತ ಮೂವರು ತರುಣರು (ಇವರ ಪೈಕಿ ಒಬ್ಬರು ಅಮ್ಮೆಂಬಳ ಪೈ ಕುಟುಂಬದವರಾಗಿರುವರು) ಅಂಗ್ಲಾಳಕ್ಕೆ ಹೋಗಿ ಶಿಕ್ಷಣ ಪಡೆಯುವ ಸಂಭವವು ಬಂದೊದಗಿದಾಗ ಇಂಥಾ ವರ್ತನೆಯು "ಗೆಲ್ಲಪ್" ಆದೀತೆಂತ ಶಿಕ್ಷಿತ ಮತ್ತು ಅಶಿಕ್ಷಿತ ವ್ಯಕ್ತಿಗಳು ಆ ಉತ್ಸಾಹಪೂರಿತ ಹೃದಯರಾದ ಸ್ವರ್ಗಸ್ಥ ಅಮ್ಮೆಂಬಳ ಸುಬ್ರಾಯ ಪೈಗಳವರ ಆಲೋಚನೆಗೆ ತಣ್ಣೀರಿನ ಧಾರೆಯನ್ನು ಎರೆದರು. ಇದರಿಂದ ಜಾತಿಯ ಅಭಿವೃದ್ಧಿಯನ್ನು ಕಾಲು ಶತಮಾನ ಕಾಲಕ್ಕೆ ಹಿಂದಟ್ಟಿಬಿಟ್ಟರು. ಆ ಮೂರು ಜನ ತರುಣರನ್ನು ಅಂದು ಶಿಕ್ಷಣದ ಬಗ್ಗೆ ಅಂಗ್ಲಾಳಕ್ಕೆ ಕಳುಹಿಸಿ ಕೊಟ್ಟದ್ದೇ ಆದರೆ ಇವರನ್ನು ಅನುಸರಿಸಿ ಜಾತಿಗೆ ಕೀರ್ತಿಯನ್ನೂ ಸಂಪತ್ತನ್ನೂ ತರುವ ಹಲವು ವಿದ್ಯಾವಂತರು ಗೌಡಸಾರಸ್ವತರಲ್ಲಿ ತಲೆದೋರುತ್ತಿದ್ದರು. ಸಾರಸ್ವತರ ಇತರ ಉಪಶಾಖೆಗಳಲ್ಲಿ ಚಂದಾವರಕಾರರೂ ರಾವ್‌ರವರೂ, ಭಂಡಾರಕಾರರೂ, ಪಂಡಿತರೂ, ಬೆನಗಲ್‌ಕಾರರೂ ಹೀಗೆ ಉದ್ಭವಿಸಿ ಆಯಾ ಶಾಖೆಯವರಿಗೂ ದೇಶಕ್ಕೂ ಕೀರ್ತಿಯನ್ನು ಹೇಗೆ ತಂದರೋ ಅದೇ ರೀತಿ ಕೀರ್ತಿಯನ್ನು ಘಳಿಸುವ ಹಲವರು ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಸಾರಸ್ವತರಲ್ಲಿ ತೋರಿ ಬರುತ್ತಿದ್ದರು. ರಾ| ಮಲ್ಯರವರು ವಿಲಾಯತಿಗೆ ಹೋಗಿ ಕೀರ್ತಿಯನ್ನು ಸಂಪಾದಿಸಿ ಬಂದ ದೋಷದಿಂದ ಇವರು ತಮ್ಮವರಲ್ಲವೆಂತ ಸ್ವಜಾತಿಯವರು ಭಾವಿಸದೆ, ವಿವೇಕದಿಂದ ವರ್ತಿಸುವರೆಂತ ಕೋರುತ್ತೇವೆ. ಒಂದು ವೇಳೆ ಮಲ್ಯರ ವಿಷಯದಲ್ಲಿ ಸಹಾ ವಿರೋಧ ಸಾಧನೆಯನ್ನು ಎಬ್ಬಿಸಬೇಕೆಂತ ನೋಡಿದರೂ ಅದು ಜಾತಿಯವರಿಗೆ ಎಂದೂ ಸಾಧ್ಯವಾಗದು. ಯಾಕಂದರೆ ಅಶಿಕ್ಷಿತ ಯಾ ಶಿಕ್ಷಿತ ವ್ಯಕ್ತಿಗಳಿಂದ ಎಂಥಾ ಕೇಡಾದರೂ ಮಲ್ಯರವರಿಗೆ ಬಂದು ತಗಲದಂತೆ ಪ್ರಯತ್ನಿಸುವರೆ ತರುಣ ವರ್ಗದವರೆಲ್ಲರೂ ಪ್ರತಿಜ್ಞಾಬದ್ಧರಾಗಿದ್ದಾರೆ. ಮಲ್ಯರವರು ಸ್ವದೇಶಕ್ಕೆ ಹಿಂತೆರಳಲು ಇನ್ನು ಹೆಚ್ಚು ಕಡಿಮೆ ಒಂದು ಯಾ ಒಂದೂವರೆ ವರ್ಷದ ಕಾಲವಿರುವದು. ಅಷ್ಟರಲ್ಲಿ ವ್ಯಕ್ತಿಗಳೆಲ್ಲರೂ ವಿವೇಕದಿಂದ ಧೈರ್ಯವನ್ನು ತಂದುಕೊಳ್ಳುವದು ಉಚಿತವಾಗಿದೆ. ಒಂದು ವೇಳೆ ವ್ಯಕ್ತಿಗಳು ವಿವೇಕ ಶೂನ್ಯರಾಗಿ ಹೋದರೂ, ಸುಕೃತ್ಯಗಳ ಸಾಧನೆಯು ಮುಂದು ಸಾಗಿ ಜಯ ಹೊಂದುವದರಲ್ಲಿ ಏನೂ ಅನುಮಾನವಿಲ್ಲ.

ಮುಂಬಯಿ
ತಾ. 8—1—1915.

ಪಥಿಕ.

ಯುದ್ಧ ಸಮಾಚಾರ.

ತಾ. ೬ನೇ ಜನವರಿ ೧೫.

ಆಲ್ಸೆಸಿನ ಉತ್ತರ ಕಡೆಯಲ್ಲಿ ಕಠಿಣ ಕಾಳಗ ನಡೆದಿರುವದು. ಫ್ರೆಂಚರು ಪ್ರಥಮತಃ ಸ್ಟೆನ್‌ಬೆಕಿನ ದೇವಾಲಯದ ಆಜುಬಾಜನ್ನು ಕಳಕೊಂಡರೂ ನಂತರ ಪುನಃ ಅದನ್ನು ಸ್ವಾಧೀನಮಾಡಿಕೊಂಡು ಇಡೀ ಗ್ರಾಮವನ್ನು ವಶಮಾಡಿಕೊಂಡಿರುವರು. ಬೆಲ್ಜಿಯಮಿನಲ್ಲಿಯೂ ಬೆಲ್ಜಿಯನರು ಮನೆಯ ನಂತರ ಮನೆಗೆ ಮುಂದರಿದು ಸೆಂಟ್ ಜೋರ್ಜ ಪ್ರಾಂತ್ಯಗಳನ್ನು ಸ್ವಾಧೀನ ಮಾಡಿಕೊಂಡಿರುವರು. ಕೆಲವು ಕಡೆಗಳಲ್ಲಿ ಬೆಲ್ಜಿಯನರ ತೋಫುಗಳು ಜರ್ಮನರ ಬತ್ತೇರಿಗಳನ್ನು ನಾಶಪಡಿಸಿರುವವು. ಲಿಲ್ಲೆಯ ನೆರೆಹೊರೆಯಲ್ಲಿ ಜರ್ಮನರು ಮಿತ್ರರ ಕಂದಕಗಳಲ್ಲಿ ಒಂದಕ್ಕೆ ಸಿಡಿಮದ್ದು ಹಾಕಿ ಅದನ್ನು ಹಿಡಿದರು ಆದರೆ ನಂತರ ಫ್ರೆಂಚರು ಪುನಃ ಮೇಲ್ಬಾಯಿದು ಆ ಸ್ಥಳಗಳನ್ನು ಪಡಕೊಂಡರು. ಬ್ಯಸಿನಿಂದ ಒಸೆಜಿಸಿನ ವರೆಗೆ ಕಾಲಾಳು ಸೈನಿಕರ ಕದನಗಳು ನಡೆಯಲಿಲ್ಲ. ಕೆರೊನ್ನೆ ಮತ್ತು ರೈವ್ಸ್ ಪ್ರಾಂತ್ಯದಲ್ಲಿ ತೋಫು ಕಾಳಗ ನಡೆಯುತ್ತಿದೆ. ಮಿತ್ರರ ಬತ್ತೇರಿಗಳು ಮ್ಯೂಸ್ ಮತ್ತು ಆರ್ಗೋನ್ನೆಯಲ್ಲಿ ಶತ್ರುಗಳ ನೆಲೆಗಳಿಗೆ ಗುಂಡು ಹಾರಿಸುತ್ತಿವೆ.

ಯುದ್ಧ ಮಾಡಲು ಸಮರ್ಥರಾದ ಶೆರೆಯವರನ್ನು ಬದಲಾಯಿಸಿಕೊಳ್ಳಬೇಕೆಂಬದಾಗಿ ಪೋಪ ಜಗದ್ಗುರುಗಳು ಕೊಟ್ಟ ಆಲೋಚನೆಗೆ ಜರ್ಮನರೂ ಇಂಗ್ಲಿಷರೂ ಒಪ್ಪಿರುವರು.

ಜರ್ಮನರ "ಕ್ರೌನ್ಸ್‌ಪ್ರಿನ್ಸ್‌ವಿಲ್‌ಹೆಲ್ಮ್" ಎಂಬ ಹಡಗವು ಬ್ರಿಟಿಷರ 'ಬೆಲ್ಲೆವ್' ಎಂಬ ವ್ಯಾಪಾರ ಹಡಗವನ್ನೂ ಫ್ರೆಂಚರ ಮೂರು ವ್ಯಾಪಾರ ಹಡಗಗಳನ್ನೂ ಮುಣುಗಿಸಿರುವದು.

ಪೂರ್ವ ರಣರಂಗದ ವಿಸ್ತುಲ ನದಿಯ ಬಲಪಾರ್ಶ್ವದಲ್ಲಿ ವಿಶೇಷ ಕದನಗಳು ನಡಿಯಲಿಲ್ಲ. ರುಶ್ಯನರು ಗೆಲೀಸಿಯದಲ್ಲಿ ಪುನಃ ಮುಂದರಿದು ಸಾವಿರಕ್ಕಿಂತಲೂ ಹೆಚ್ಚಿನ ಶತ್ರುಗಳನ್ನು ಶೆರೆಹಿಡಿದಿರುವರು. ರುಶ್ಯನರು ಬಕೋವಿನ ಮಾರ್ಗವಾಗಿ ಮುಂದರಿದು ಸುಚಾಡ ಎಂಬ ಪಟ್ಟಣವನ್ನು ವಶಮಾಡಿಕೊಂಡಿರುವರು. ಉಜಕ್ ಕಣಿವೆಯಲ್ಲಿ ರುಶ್ಯನರಿಗೆ ಆಸ್ಟ್ರೀಯನರ ಒಂದು ಇಡೀ ಸೇನಾಂಗವು ಶರಣಾಗತವಾಗಿರುವದು.

ಟ್ರಾನ್ಸ್ ಕೌಕಾಸಸಿನಲ್ಲಿ ರುಶ್ಯನರು ತುರ್ಕರ ಸೇನೆಯನ್ನು ಪೂರ್ಣವಾಗಿ ಸೋಲಿಸಿರುವರು. ತುರ್ಕರು ವಿಶೇಷ ನಷ್ಟಹೊಂದಿರುವರು. ಇಲ್ಲಿ ರುಶ್ಯನರಿಗೆ ಜಯವಾಗಿ ತುರ್ಕರ ೯ನೇ ಕೋರ್ ಸೇನೆಯನ್ನೆಲ್ಲಾ ಹಿಡಿದಿರುವರು. ತುರ್ಕಿ ಸೇನೆಯ ಕಮಾಂಡರ್ ಜನರಲನೂ ಇತರ ಸೇನಾಂಗಗಳ ೩ ಅಧಿಪತಿಗಳೂ ರುಶ್ಯನರಿಗೆ ಶೆರೆಬಿದ್ದಿರುವರು. ರುಶ್ಯನರು ತುರ್ಕರ ಇನ್ನೊಂದು ಸೇನೆಯನ್ನು ಅಟ್ಟುತ್ತಿರುವರು.

ಬ್ರಿಟಿಷರ ಯುದ್ಧ ಹಡಗವು ಪೂರ್ವ ಆಫ್ರೀಕದಲ್ಲಿ ಡಾರ್-ಎಸ್-ಸಲಾಮು ಎಂಬಲ್ಲಿಗೆ ಗುಂಡು ಹಾರಿಸಿರುವದು. ಅಲ್ಲಿದ್ದ ಶತ್ರುಗಳ ಹಡಗಗಳೆಲ್ಲಾ ಹಾಳಾಗಿರುವವು. ೧೪ ಜರ್ಮನರೂ ೨೦ ದೇಶೀಯರೂ ಹಿಡಿಯಲ್ಪಟ್ಟಿರುವರು. ಬ್ರಿಟಿಷರಲ್ಲಿ ಒಬ್ಬನು ಹತನಾಗಿರುವನು. ೧೨ ಮಂದಿ ಘಾಯ ಒಡೆದಿರುವರು

ತಾ. ೭ನೇ ಜನವರಿ.

ಬ್ರಿಟಿಷ್ ಪಾರ್ಲಿಮೆಂಟ್ ಪ್ರಭು ಮಂದಿರದಲ್ಲಿ ಕಿಚನರ್ ಪ್ರಭುಗಳು ಭಾಷಣಕೊಟ್ಟು ದಕ್ಷಿಣ ಆಫ್ರೀಕದಲ್ಲಿ ದಂಗೆಗಾರರನ್ನು ಅಡಗಿಸುವರೆ ಜನರಲ್ ಬೋಥರವರು ಕೈಕೊಂಡ ಕೆಲಸವನ್ನು ಶ್ಲಾಘಿಸಿ ಮಾತನ್ನಾಡಿರುವರು. ಪಶ್ಚಿಮ ರಣರಂಗದಲ್ಲಿ ಮಿತ್ರರು ದಿನೇ ದಿನೇ ಜಯಹೊಂದುತ್ತಲಿರುವರು. ಪೋಲೇಂಡಿನಲ್ಲಿ ರುಶ್ಯನರು ಜರ್ಮನರಲ್ಲಿ ವಿಶೇಷ ನಷ್ಟ ಪಡಿಸಿ ಜಯಪ್ರದರಾಗುತ್ತಿರುವರೆಂಬೀ ವಿಷಯಗಳನ್ನು ತಿಳಿಯ ಹೇಳಿರುವರು.

ಪಶ್ಚಿಮ ರಣರಂಗದಲ್ಲಿ ವಿಶೇಷ ಬದಲಾವಣೆಯಾಗಲಿಲ್ಲ. ಮಿತ್ರರು ಕೆಲವು ಮುಖ್ಯ ಸ್ಥಳಗಳನ್ನು ಸ್ವಾಧೀನ ಮಾಡಿಕೊಂಡಿರುವರು

ಪೋಲೇಂಡಿನಲ್ಲಿಯೂ ವಿಶೇಷ ಕದನ ನಡೆಯಲಿಲ್ಲ ಕಾಕಾಸಸಿನಲ್ಲಿ ಓಡಿಹೋಗುತ್ತಿರುವ ತುರ್ಕಿ ಸೇನೆಯನ್ನು ರುಶ್ಯನರು ಮುತ್ತಿರುವರು. ತುರ್ಕರು ದಾರಿಕಾಣದೆ ಹಿಮ ಬಿದ್ದಿರುವ ಒಳದಾರಿಗಳಿಗೆ ಚದರಿಹೋಗಿ ಕಷ್ಟಪಡುತ್ತಿರುವರು.

ರುಮೇನಿಯ ರಾಜ್ಯದವರು ಬೇಗನೇ ಯುದ್ಧಕ್ಕೆ ಸೇರುವವರಾಗಿದ್ದಾರೆಂಬ ವಾರ್ತೆ ಇದೆ.

ಹಿಂದೂಸ್ಥಾನದಿಂದ ಶೈಲೇಂದ್ರನಾಥ ಬಾಸುರವರು ರಣರಂಗಕ್ಕೆ ಹೊರಟಿರುವರು ಇವರು ಭೂಪೇಂದ್ರನಾಥ ಬಾಸುರವರ ಸೋದರ ಅಳಿಯ ಮತ್ತು ಭೀಮವದಾಕ್ರಮಿಯಾಗಿರುವರು

ತಾ. ೮ನೇ ಜನವರಿ.

ಮಿತ್ರರು ತೋರಿಸುತ್ತಿರುವ ಶೂರಕೃತ್ಯಗಳನ್ನು ಬೆರ್ಲಿನಿನ ಪತ್ರಗಳು ಹೊಗಳುತ್ತಿವೆ ಜರ್ಮನರು ಬೆಲ್ಜಿಯಮಿನಲ್ಲಿದ್ದ ಕಾರ್ಡಿನಲ್ ಮೆರ್ಸಿಯರ್ ಎಂಬ ಗುರುಗಳನ್ನು ಹಿಡಿದಿರುವದರಿಂದ ರೋಮ ನಗರದಲ್ಲಿ ಜರ್ಮನರಿಗೆ ವಿರೋಧವಾದ ಹೆಚ್ಚಿನ ಚಳವಳವು ನಡೆದಿರುವದು

ಇಂಗ್ಲಿಷ್ ಕಾಲುವೆಯಲ್ಲಿ ಮುಣುಗಿ ಹೋದ ಫೋರ್ಮಿಡೆಬಲ್ ಯುದ್ಧ ನಾವೆಯಲ್ಲಿ ೫೧೭ ಮಂದಿ ಪ್ರಾಣಾಪಾಯ ಹೊಂದಿದರು ಎಂತ ಪ್ರಕಟವಾಗಿದೆ.

ರುಶ್ಯನರ ಸೇನೆಯು ಥಕ್ಕನೇ ಮಾಲ್ವ ಪ್ರಾಂತ್ಯದಲ್ಲಿ ಶತ್ರುಗಳ ಮೇಲೆ ಬಿದ್ದು ಸನೀನು ಕಾಳಗ ಮಾಡಿ ಶತ್ರುಗಳ ಸೇನೆಯನ್ನು ಹತಬಡಿದಿರುವದು. ಇತರ ಪ್ರಾಂತ್ಯದಲ್ಲಿ ಚಿಕ್ಕ ಕದನಗಳು ಮಾತ್ರ ನಡೆದವು. ಬಕೋವಿನದಲ್ಲಿ ರುಶ್ಯನರು ಮುಂದರಿಯುತ್ತಲೇ ಇದ್ದು ಟ್ರಾನ್ಸಿಲ್ವೇನಿಯಕ್ಕೆ ಹೋಗುವ ದಾರಿಯಲ್ಲಿರುವ ೪ ಪಟ್ಟಣಗಳನ್ನು ಸ್ವಾಧೀನ ಮಾಡಿಕೊಂಡಿರುವರು.

ರುಶ್ಯನರು ತುರ್ಕರನ್ನು ಸೋಲಿಸಿ ತುರ್ಕರ ಬಹು ರಾಶಿ ಕೋವಿಗಳನ್ನೂ ಯುದ್ಧ ಸಾಮಗ್ರಿಗಳನ್ನೂ ಹಿಡಿದಿರುವರು ತುರ್ಕಿ ಸೇನೆಯಲ್ಲಿ ಹತರಾದ ಮತ್ತು ಘಾಯ ಒಡೆದವರ ಸಂಖ್ಯೆಯು ಬಹು ಹೆಚ್ಚಾಗಿರುವದು.

ತಾ. ೯ನೇ ಜನವರಿ.

ಸಮುದ್ರದಿಂದ ಲೈಸಿನ ವರೆಗೆ ತೋಫು ಕಾಳಗ ಮಾತ್ರ ನಡೆದಿರುವದು ಮಿತ್ರರಿಗೆ ಎಲ್ಲೆಲ್ಲಿಯೂ ಜಯವಾಗಿರುವದು. ಡನ್‌ಕರ್ಕಿನಕಡೆಗೆ ಹಾರುತ್ತಲಿದ್ದ ಶತ್ರುಗಳ ವಾಯುನಾವೆಗಳನ್ನು ಮಿತ್ರರ ಬತ್ತೇರಿಗಳು ಓಡಿಸಿರುವವು. ಲಿಲ್ಲೆಯಲ್ಲಿ ಮೇಲ್ಬಾಯಿದ ಜರ್ಮನರನ್ನು ಮಿತ್ರರು ಹಿಂದಟ್ಟಿರುವರು. ಶತ್ರುಗಳು ಮಿತ್ರರ ಒಂದು ಕಂದಕವನ್ನು ತಕ್ಕೊಂಡರೂ ಮಿತ್ರರು ಅದನ್ನು ಪುನಃ ಸ್ವಾಧೀನ ಮಾಡಿಕೊಂಡು, ಜರ್ಮನರ ಕೆಲಸಗಳನ್ನು ಸಿಡಿಮದ್ದಿನಿಂದ ನಾಶಮಾಡಿದರು ಅರ್ಗೋನ್ನೆಯ ಲಸಿಗ್ಗೆಯಲ್ಲಿ ಮೇಲ್ಬಾಯಿದ ಜರ್ಮನರೂ ಹಿಮ್ಮೆಟ್ಟಿರುವರು ಎಂತ ಪಾರಿಸಿನಲ್ಲಿ ಪ್ರಕಟವಾದ ವಾರ್ತೆಯಿಂದ ತಿಳಿದು ಬರುವದು

ಬ್ರಿಟಿಷರ ಫೋರ್ಮಿಡೆಬಲ್ ಯುದ್ಧ ಹಡಗವನ್ನು ಜರ್ಮನರ ಜಲಂತರ್ಗಾಮಿನಾವೆಯು ಮುಣುಗಿಸಿರುವದು. ಬ್ರಿಟಿಷ ಯುದ್ಧ ನಾವೆಗಳು ಈ ಜಲಂತರ್ಗಾಮಿ ನಾವೆಯನ್ನು ಹಿಂದಟ್ಟಿದವು. ಆದರೆ ಜರ್ಮನರ ಜಲಂತರ್ಗಾಮಿ ನಾವೆಯು ತಪ್ಪಿಸಿಕೊಂಡು ಬಂದಿರುವದು ಎಂತ ಜರ್ಮನ್ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಫೋರ್ಮಿಡೆಬಲ್ ನಾವೆಯು ಜರ್ಮನರ ಜಲಂತರ್ಗಾಮಿಯ ಟೊರ್ಪೆಡೋ ನಾವೆಗಳಿಂದ ಮುಣುಗಿಸಲ್ಪಟ್ಟರಬೇಕೆಂತ ಕ್ರೂಪ್ರಭುಗಳವರು ಪ್ರಭುಮಂದಿರದಲ್ಲಿ ಹೇಳಿರುವರು. ಬ್ರಿಟಿಷರ ಯುದ್ಧ ನಾವೆಗಳ ಸಂಖ್ಯೆಯು ಪ್ರತಿ ತಿಂಗಳಿಗೆ ಒಲಗೊಳ್ಳುತ್ತಾ ಇದೆ ಎಂತ ಕ್ರೂಪ್ರಭುಗಳವರು ಹೇಳಿರುವರು.

ಉತ್ತರ ಕಡಲಲ್ಲಿ ೨ ಹಡಗಗಳು ಮತ್ತು ಒಂದು ಟ್ರವ್‌ಲರ್ ದೋಣಿಯೂ ಸಿಡಿಮದ್ದಿನ ಗಣೆಗೆ ತಗಲಿ ಮುಣುಗಿಹೋಗಿರುವದೆಂತ ಪ್ರಕಟವಾಗಿದೆ. ಈ ಅವಗಡದಲ್ಲಿ ೨೫ ಮಂದಿ ಮುಣುಗಿಹೋದರು. ಕೆಲವರು ಕಾಣದೆ ಹೋಗಿರುವರು.

ಮದ್ಯಪಾನಗಳನ್ನು ಮಾರಕೂಡದೆಂಬ ಕಾನೂನು ಫ್ರಾನ್ಸಿನಲ್ಲಿ ಜಾರಿಗೆ ಬಂದಿರುವದು.

ಪೂರ್ವ ರಣರಂಗದಲ್ಲಿ ವಿಶೇಷ ಬದಲಾವಣೆ ನಡೆಯಲಿಲ್ಲ. ರುಶ್ಯನರು ಅರ್ಡಹಾನಿನಲ್ಲಿ ತುರ್ಕರನ್ನು ಪೂರ್ಣವಾಗಿ ಸೋಲಿಸಿರುವರು.

ದಕ್ಷಿಣ ಆಫ್ರೀಕದಲ್ಲಿ ಯೂನ್ಯನ್ ಸರಕಾರದ ಸೇನೆಯು ಸ್ಕೂಯಿಟ್‌ಡ್ರಿಫ್ಟವೆಂಬ ಸ್ಥಳವನ್ನು ಸ್ವಾಧೀನ ಮಾಡಿಕೊಂಡಿರುವದು ಶತ್ರುಗಳು ಒರೆಂಜ ನದಿಯನ್ನು ದಾಟಿ ಉತ್ತರ ದಡದಲ್ಲಿ ಉಳಿದಿರುವರು.

ತಾ. ೧೧ನೇ ಜನವರಿ.

ಫ್ರೆಂಚರು ಆಲ್ಸೆಸಿನಲ್ಲಿ ಮುಂದರಿಯುತ್ತಿರುವರು. ಅರ್ಗೋನ್ನೆ ಮತ್ತು ಸ್ವೊಸೊನ್ಸಿನಲ್ಲಿ ಮೇಲ್ಬಾಯಿದ ಜರ್ಮನರು ಹಿಮ್ಮೆಟ್ಟಲ್ಪಟ್ಟಿರುವರು. ಇತರ ಸ್ಥಳಗಳಲ್ಲಿ ತೋಫು ಕಾಳಗ ನಡೆಯುತ್ತಿದೆ ಎಂಬದೇ ಈ ದಿನದ ವಿಶೇಷ ವಾರ್ತೆಯಾಗಿರುವದು.

ಜೋರ್ಜ ಸಾರ್ವಭೌಮರವರೂ ಚಕ್ರವರ್ತಿನಿಯವರೂ ಬ್ರೈಟನಿನಲ್ಲಿ ಶೈತೋಪಚಾರ ಹೊಂದುತ್ತಲಿರುವ ಭಾರತೀಯ ಸೈನಿಕರನ್ನು ಹೋಗಿ ನೋಡಿ, ಕೆಲವರ ಕೂಡ ಸ್ವತಹಾಃ ಸಂಭಾಷಣೆ ನಡಿಸಿರುವರು.

ಫ್ರಾನ್ಸಿನ ಪ್ರಧಾನ ಮಂತ್ರಿಯವರ ಮಗನು ರಣರಂಗದಲ್ಲಿ ಮಡಿದು ಹೋದನು. ಬೆಲ್ಜಿಯಮಿನ ಒಬ್ಬ ಜನರಲನಿಗೆ ಜರ್ಮನರು ಜೀವಾಂತ ಸಜೆಯನ್ನೂ, ಲೀಜಿಯ ಇತರ ನಾಲ್ಕು ಪಟ್ಟಣಿಗರಿಗೆ ಕಠಿಣ ಸಜೆಯನ್ನೂ ವಿಧಿಸಿರುವರು. ಬೆಲ್ಜಿಯಮಿನಲ್ಲಿರುವ ಕಾರ್ಡಿನಲ್ ಮೆರ್ಸಿಯರ್‌ರವರು ಕೈದುಮಾಡಲ್ಪಡಲಿಲ್ಲ ಯಾ ಅವರ ಅರಮನೆಗೆ ಕಾವಲು ಇಡಲಿಲ್ಲ ಎಂಬದಾಗಿ ಜರ್ಮನರು ಹೇಳುವರು.

ಪೂರ್ವ ರಣರಂಗದ ವಿಸ್ತುಲ ನದಿಯ ಎಡಪಾರ್ಶ್ವದಲ್ಲಿ ವಿಶೇಷ ಬದಲಾವಣೆಯಾಗಲಿಲ್ಲ. ಜರ್ಮನರು ಇಲ್ಲಿ ಹೆಚ್ಚಿನ ನಷ್ಟ ಹೊಂದಿದ್ದರೂ ಕೆಲವು ಕಡೆಗಳಲ್ಲಿ ಜೀವದ ಮರವೆ ಇಲ್ಲದೆ ಮೇಲ್ಬಾಯುತ್ತಿರುವರು. ಗೆಲೀಸಿಯದ ಬಕೋವಿನದಲ್ಲಿ ರುಶ್ಯನರು ಒಂದು ವಾರದೊಳಗೆ ೮೦ ಮೈಲು ಮುಂದರಿದು ಹಂಗೇರಿಯ ಮತ್ತು ಬಕೋವಿನವನ್ನು ವಿಂಗಡಿಸುವ ಪರ್ವತ ಶ್ರೇಣಿಗಳ ಬಳಿಗೆ ತಲಪಿ, ಶತ್ರುಗಳ ೧೦೦೦ ಸೈನಿಕರನ್ನೂ ಬಹಳ [illegible]ಯನ್ನೂ ಶೆರೆಹಿಡಿದಿರುವರು.

ರುಶ್ಯನರ ಯುದ್ಧ ಹಡಗಗಳು ತುರ್ಕರ ಸಾಮಾನು ಸಾಗಿಸುವ ಎರಡು ಹಡಗಗಳನ್ನು ಮುಣುಗಿಸಿಬಿಟ್ಟಿರುವವು. ತುರ್ಕರ ಒಂದು ಕ್ರೂಸರ್ ತಪ್ಪಿಸಿಕೊಂಡು ಹೋಗಿರುವದು. ಜರ್ಮನರು ಬೋಸ್ನಿಯಕ್ಕೆ ೬೦೦೦೦ ಸೈನಿಕರನ್ನು ಕಳುಹಿಸಿರುವರೆಂಬದಾಗಿ ರೋಯಿಟರ್

ಲಂಡನ್ ಬಾತ್ಮಿದಾರರು ತಿಳಿಸುವರು ಈಜಿಪ್ಟಿಗೆ ನೇಮಿಸಲ್ಪಟ್ಟ ಹೈ ಕಮಿಷನರ್ ಸರ್ ಆರ್ಥರ್‌ಮೆಕ್ ಮೊಹಾನರವರು ಕೈರೋಗೆ ಹೋಗಿರುವರು. ಪೂರ್ವ ಆಫ್ರೀಕದಲ್ಲಿ ಜರ್ಮನರ ಒಂದು ದೊಡ್ಡ ಸೇನೆಯು ಕೆಮರೂನಿನ ಎಡಿಯು ಎಂಬದರ ಮೇಲ್ಬಾಯ್ದಿರುವದು. ಆದರೆ ಬ್ರಿಟಿಷರು ಅವರನ್ನು ಓಡಿಸಿ ಬಿಟ್ಟಿರುವರು.

ಉತ್ತರ ಹಿಂದೂಸ್ಥಾನ.

ಕಳೆದ ತಿಂಗಳ ತಾ ೭ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದೊಳಗೆ ೮,೦೩೭ ಮಂದಿಗೆ ಪ್ಲೇಗು ಬೇನೆಯು ಸೋಂಕಿ ೩,೫೦೧ ಮಂದಿ ಕಾಲವಾದರೆಂದು ತಿಳಿಯುವದು — ಈ ಪೈಕಿ ಮುಂಬಾಯಿ ಮತ್ತು ಸಿಂಧ ದೇಶ ೨೭೯ ಮರಣಗಳ, ಮದ್ರಾಸು ೭೨, ಬಿಹಾರ್ ಮತ್ತು ಒರಿಸ್ಸಾ ೩೬೭, ಸಂಯುಕ್ತ ಆಧಿಪತ್ಯಗಳು ೬೧೫, ಪಂಜಾಬು ೧೩೭೦, ಬರ್ಮ ೬೬, ಮಧ್ಯಪ್ರಾಂತ್ಯಗಳು ೧೨೩, ಮೈಸೂರು ೧೮೩, ಹೈದರಾಬಾದ್ ೩೭, ರಾಜಪುತ್ರ ಸಂಸ್ಥಾನ ೧ ಕಾಶ್ಮೀರ ೮ ಮರಣಗಳಿರುವವು.

ಕಳೆದ ವಾರ ಮುಂಬಾಯಿ ಪಟ್ಟಣದಲ್ಲಿ ಸಮುದ್ರ ತೀರದಲ್ಲಿ ತಂಗಿದ್ದ ಮೆಟಿಯಾಸ್ ಎಂಬ ರಷ್ಯನರ ಹಡಗಿನಲ್ಲಿ ಆಧಿಪತಿಯು ಕಲಾಸಿಗಳಿಗೆ ಮದ್ಯವನ್ನು ಕೊಡದೆ ಹೋದದಕ್ಕೆ ಅವರು ದಂಗೆ ಮಾಡಿದರು. ಪೋಲಿಸಿನವರು ೧೭ ಮಂದಿಯನ್ನು ಹಿಡಿದು ತಂದು ಲಾಕಪ್ಪಿನಲ್ಲಿ ಹಾಕಿರುತ್ತಾರೆ.

ಈಗ ನಡೆಯುತ್ತಿರುವ ಯುದ್ಧದಿಂದ ಯುದ್ಧಕ್ಕೆ ಸೇರಿದ ರಾಜ್ಯಗಳಿಗೆ ಉಂಟಾಗುವ ನಷ್ಟವು ಇಂಡಿಯನ್ ಡೈಲಿ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟವಾಗಿರುವದು. ಈ ಲೆಕ್ಕವನ್ನು ಮಿ॥ ಎಡ್ ಮೂರ್ ಗ್ರೈಟರವರು "ನೈಟೀಂತ್ ಸೆಂಚುರಿ" ಎಂಬ ಪತ್ರಿಕೆಗೆ ಬರೆದಿರುವರು — ರಣರಂಗದಲ್ಲಿ ಜರ್ಮನರ ೪,೩೫೦,೦೦೦ ಸೈನಿಕರೂ, ಫ್ರೆಂಚರ ೪ ಮಿಲಿಯ ಸೈನಿಕರೂ, ಆಸ್ಟ್ರಿಯರ ೩॥ ಮಿಲಿಯ ಸೈನಿಕರೂ ರುಷ್ಯನರ ೫ ಮಿಲಿಯ ಸೈನಿಕರೂ ಇರುವರು. ಒಟ್ಟಿಗೆ ೧೭ ಮಿಲಿಯ ಸೈನಿಕರಿದ್ದ ಹಾಗಾಯಿತು. ಇದಕ್ಕೆ ಬೆಲ್ಜಿಯನರ ೨೫೦,೦೦೦ ಸರ್ವಿಯನರ ೨೫೦,೦೦೦, ಮತ್ತು ಬ್ರಿಟಿಷ ಭಾರತೀಯ ಕೆನಡಾದ ಸೇನೆಯ ೧॥ ಮಿಲಿಯ ಕೂಡಿಸಿದರೆ ೧೮॥ ಮಿಲಿಯ ಸೈನಿಕರು ರಣರಂಗದಲ್ಲಿ ಇದ್ದ ಹಾಗಾಯಿತು. ಒಬ್ಬನ ದಿವಸಕ್ಕೆ ೧೦ ಶಿಲ್ಲಿಂಗ್ (ರೂ ೭—೮) ಖರ್ಚಾದರೆ ದಿವಸಕ್ಕೆ ಒಟ್ಟಿಗೆ ೯ ಮಿಲಿಯ ಪವನ, ತಿಂಗಳಿಗೆ ೨೭೦ ಮಿಲಿಯ, ೬ ತಿಂಗಳಿಗೆ ೧೬೨೦ ಮಿಲಿಯ ಪವನುಗಳು ಖರ್ಚಿಗೆ ಬೇಕಾಗುವವು. ಅದಲ್ಲದೆ ಕೈಗಾರಿಕೆಗಳೂ ಕೃಷಿಯೂ ಚನ್ನಾಗಿ ನಡೆಯಲು ಅಭ್ಯಂತರವಾಗಿರುವದರಿಂದ ಅದೇ ಕಾಲದಲ್ಲಿ ಈ ವಿಧಾನದಿಂದ ೧೬೯೩ ಮಿಲಿಯ ಪವನುಗಳ ನಷ್ಟವಾಗುವದು. ಈ ವಿಧಾನದಿಂದ ಫ್ರಾನ್ಸಿಗೆ ೧೦೦ ಮಿಲಿಯ, ಜರ್ಮನಿಗೆ ೮೩೦ ಮಿಲಿಯ, ಗ್ರೇಟ್‌ಬ್ರಿಟನಿಗೆ ೧೦೦ ಮಿಲಿಯ, ಬೆಲ್ಜಿಯಮಿಗೆ ೫೩ ಮಿಲಿಯ, ರುಷ್ಯಕ್ಕೆ ೧೦೦ ಮಿಲಿಯ ಪವನುಗಳ ನಷ್ಟವಾಗುವದು. ಗ್ರೈಟರವರು ಈ ಲೆಕ್ಕವನ್ನು ಜನರಿಗೆ ಕೊಡುವ ಕೂಲಿಯ ಮೌಲ್ಯದಿಂದ ಗಣಿಸಿರುವರು. ಸುಮಾರು ಈ ಮೌಲವು ದೇಶದ ಉತ್ಪತ್ತಿಯ ಅರ್ಧ ಮೌಲ್ಯದಷ್ಟಿರುವದು. ಕೆಲವು ದೇಶಗಳಲ್ಲಿ ಇಂಬಳದಿಂದುಟಾಗುವ ನಷ್ಟವು ಅಷ್ಟೊಂದು ಹೆಚ್ಚಿರುವದಿಲ್ಲ. ಆದರೆ ಫ್ರಾನ್ಸಿನಲ್ಲಿ ಈ ನಷ್ಟವು ೩೦೦ ಮಿಲಿಯ ಪವನುಗಳದ್ದಾಗಿರುವದು. ಅಂದರೆ ದೇಶದ ಉತ್ಪನ್ನದಲ್ಲಿ ೬೦೦ ಮಿಲಿಯ ಪವನುಗಳ ನಷ್ಟವಾದಂತಾಯಿತು. ಶೇಕಡಾ ೧೦ರಂತೆ ಜನ ನಷ್ಟವಾಯಿತೆಂದು ಎಣಿಸುವದಾದರೆ ಒಟ್ಟಿಗೆ ೧,೮೫೦,೦೦೦ ಜನರು ನಷ್ಟವಾಗುವರು. ಗ್ರೇಟ್‌ಬ್ರಿಟನಿನ ಪ್ರತಿ ಒಬ್ಬನಿಗೆ ೮೦೦ ಪವನುಗಳ ಬೆಲೆ ಕಟ್ಟುವರು. ಜರ್ಮನಿಯ ಪ್ರತಿ ಒಬ್ಬನಿಗೆ ೬೭೬ ಪವನು, ಫ್ರಾನ್ಸಿನ ಪ್ರತಿ ಒಬ್ಬನಿಗೆ ೫೮೦ ಪವನು ಬೆಲೆಯಾಗುವದೆಂದರೆ ಒಟ್ಟಿಗೆ ಇದರಿಂದ ೯೯೭ ಮಿಲಿಯ ಪವನುಗಳ ನಷ್ಟವಾಗುವದು. ಒಟ್ಟಿಗೆ ಆಗುವ ನಷ್ಟಕ್ಕೆ ಈ ಮೂರು ಸಂಖ್ಯೆಯನ್ನು ಕೂಡಿಸಿದರೆ ೬ ತಿಂಗಳಲ್ಲಿ ಜುಮ್ಲಾ ನಷ್ಟವು ೪೨೬೫ ಮಿಲಿಯ ಪವನುಗಳದ್ದಾಗುವದು.

ಕಲ್ಕತೆಯಲ್ಲಿ ಫಾಶಿ ಶಿಕ್ಷೆ ವಿಧಿಸಲ್ಪಟ್ಟ ೩ ಅಪರಾಧಿಗಳು ಬಿಡುಗಡೆ ಹೊಂದಿದ ವಾರ್ತೆಯು ಪ್ರಕಟವಾಗಿರುವದು. ಮುಂಬಾಯಿ ಮ್ಯು ಡಿಸ್ಟ್ರಿಕ್ಟಿನಲ್ಲಿ ಕ್ರಿಸ್ಟೊಮಾತೋ ಮತ್ತು ಇಬ್ಬರು ಕೊಲೆ ಮಾಡಿದ್ದರೆಂಬದಾಗಿ ಆಪಾದಿಸಲ್ಪಟ್ಟದ್ದರಿಂದ ಡಿಸ್ಟ್ರಿಕ್ಟ್ ಜಡ್ಜರು ಮೂವರಿಗೂ ಫಾಶಿ ಶಿಕ್ಷೆಯನ್ನು ವಿಧಿಸಿದರು. ಕೊಲೆ ನಡೆದ ದಿನ ಕ್ರಿಸ್ಟೊಮಾತೋ ಈ ಕೃತ್ಯವು ನಡೆದ ಸ್ಥಳಕ್ಕೆ ೭ ಮೈಲು ದೂರದಲ್ಲಿರುವ ಸ್ಥಳದಲ್ಲಿದ್ದನೆಂದು ವಾದಿಸಿದರೂ, ಶಿಕ್ಷೆಯು ಹೈಕೋರ್ಟಿನಲ್ಲಿಯೂ ಫಾಶಿ ಶಿಕ್ಷೆಯೇ ಖಾಯಂ ಆಯಿತು. ಆನಂತರ ಬಿಹಾರ್ ಮತ್ತು ಇಂಡಿಯಾ ಸರಕಾರದವರಿಗೆ ಮಾಡಿಕೊಂಡ ಮನವಿಯು ತಳ್ಳಿ ಹಾಕಲ್ಪಟ್ಟು ತಾ ೨೦ನೇ ನವಂಬರಕ್ಕೆ ಫಾಶಿ ಶಿಕ್ಷೆ ವಿಧಿಸುವದೆಂತ ನಿಶ್ಚಯವಾಗಿತ್ತು. ಆದರೆ ಒಂದೆರಡು ದಿನದ ಮೊದಲ ಸರಕಾರಿ ಕಡೆಯ ವಕೀಲನು ಈ ಮೊಕದಮೆಯ ಕೆಲವು ಸತ್ಯ ಸ್ಥಿತಿಯನ್ನು ಅರಿತು ಅಧಿಕಾರಿಗಳಿಗೆ ತಿಳಿಸಿದ್ದರಿಂದ ಶಿಕ್ಷೆಯು ನಿಲ್ಲಿಸಲ್ಪಟ್ಟಿತು. ಡ್ಯುಪಿಟಿ ಕಮಿಷನರು ಈ ವಿಷಯ ತನಕಿ ನಡಿಸುವರೆ ಕೊಲೆ ನಡೆದ ದಿನ ಕ್ರಿಸ್ಟೊಮಾತೋ ಇದ್ದನೆಂದು ಹೇಳುವ ಗ್ರಾಮಕ್ಕೆ ಹೋಗಿ, ವಿಚಾರ ಮಾಡಿ, ಸತ್ಯಸ್ಥಿತಿಯನ್ನು ಬಿಹಾರ್ ಸರಕಾರಕ್ಕೆ ತಿಳಿಸಿದ್ದರಿಂದ ಲೆಪ್ಟನೆಂಟ ಗವರ್ನರರು ಕ್ರಿಸ್ಟೊಮಾತೋ ಎಂಬವನನ್ನು ಬಿಟ್ಟು ಬಿಡಲು ಹುಕುಂ ಮಾಡಿದುದಲ್ಲದೆ ಇತರರಿಬ್ಬರ ಫಾಶಿ ಶಿಕ್ಷೆಯನ್ನು ತೆಗೆದು ಜೀವಾಂತ ಬಂಧಖಾನೆ ಶಿಕ್ಷೆಯನ್ನು ವಿಧಿಸಿದರು.

ಯೂರೋಪಿನಿಂದ ಈಚೆಗೆ ತಾನೇ ಹಿಂದರಳಿ ಮುಂಬಾಯಲ್ಲಿ ಇಳಿದ ದೇವವ್ರತ ಮುಕರ್ಜಿ ಎಂಬ ಒಬ್ಬ ಮಾನ್ಯ ಯುವಕನನ್ನು ರಾಜಕೀಯ ತಂತ್ರಕ್ಕೆ ಸೇರಿದವನೆಂಬ ತಕ್ಸೀರಿನ ಮೇಲೆ ಮುಂಬಾಯಿ ಪೋಲಿಸಿನವರು ಕೈದು ಮಾಡಿ ಕಲ್ಕತ್ತೆಗೆ ತಂದು ಆಲಿಪುರ ಬಂದಿಖಾನೆಯಲ್ಲಿಟ್ಟಿರುವರು. ಇತರ ೮ ಮಂದಿಯೂ ಇದೇ ತಕ್ಸೀರಿನ ಮೇಲೆ ಢಕ್ಕಾ ಪೋಲಿಸಿನವರಿಂದ ಕೈದುಮಾಡಲ್ಪಟ್ಟಿರುವರು.

ಅಪ್ಪರ್ ಇಂಡಿಯಾ ಬೇಂಕ್ ಲಿಮಿಟೆಡ್, ಎಂಬ ಬೇಂಕಿನಿಂದ ೫೦,೧೦೦ ರೂಪಾಯಿಯ ಕರೆನ್ಸಿ ನೋಟನ್ನು ಕಳವು ಮಾಡಿದ್ದರೆಂದು ಆಪಾದಿಸಲ್ಪಟ್ಟಿದ್ದ ೫ ಮಂದಿಯಲ್ಲಿ ರಾಂಸಿಂಘ ನೆಂಬವನನ್ನು ಮೆಜಿಸ್ಟ್ರೇಟರು ಬಿಟ್ಟು ಉಳಿದ ೪ ಮಂದಿಗೆ ಶಿಕ್ಷೆ ವಿಧಿಸಿದರು. ವಾಲಿ ಮಹಮ್ಮದ್ ಎಂಬವನಿಗೆ ೪ ವರ್ಷಗಳ ಕಠಿಣ ಸಜೆ, ಇದರಲ್ಲಿ ೩ ತಿಂಗಳ ಏಕಾಂತ ಸಜಾ, ೧೦೦೦ ರೂಪಾಯಿ ಜುಲುಮಾನೆ, ಜುಲುಮಾನೆ ಕೊಡಲು ತಪ್ಪಿದರೆ ೬ ತಿಂಗಳು ಕಠಿಣ ಸಜೆ. ಆಲಿ ಮಹಮ್ಮದ್ ೨ ವರ್ಷಗಳ ಕಠಿಣ ಸಜೆ, ಈ ಪೈಕಿ ೭ ತಿಂಗಳ ಏಕಾಂತ ಸಜೆ. ರೂ ೫೦೦ ಜುಲುಮಾನೆ, ತಪ್ಪಿದರೆ ಹೆಚ್ಚಿಗೆ ೬ ತಿಂಗಳ ಕಠಿಣ ಸಜೆ. ಸಿರಾಬುದ್ದಿನ್ ೩ ವರ್ಷ ೯ ತಿಂಗಳ ಕಠಿಣ ಸಜೆ. ಈ ಪೈಕಿ ೨ ತಿಂಗಳ ಏಕಾಂತ ಸಜೆ. ಶ್ರೀರಾಮ ಆರೋರ್, ಡಿಸ್ಟ್ರಿಕ್ಟ್ ಸರ್ಜನ್ ೨ ವರ್ಷಗಳ ಕಠಿಣ ಸಜೆ ೨ ತಿಂಗಳ ಏಕಾಂತ ಸಜೆ. ೫೦೦ ರೂಪಾಯಿ ಜುಲುಮಾನೆ, ತಪ್ಪಿದರೆ ಹೆಚ್ಚಿಗೆ ೬ ತಿಂಗಳ ಕಠಿಣ ಸಜೆ ವಿಧಿಸಿದರು.

ಡಿಸೆಂಬರ ತಾ ೩೧ಕ್ಕೆ ಅಂತ್ಯವಾಗುವ ಅರ್ಧ ವರ್ಷದಲ್ಲಿ ಮುಂಬಾಯಿ ಬೇಂಕಿಗೆ ೧೩ ಲಕ್ಷದ ೨೯ ಸಾವಿರ ರೂಪಾಯಿಗಳ ನಫೆಯಾಯಿತು.

ಪಟ್ಟಣ ವಿಸ್ತೀರ್ಣ ಮತ್ತು ಆರೋಗ್ಯ ಸಂಬಂಧವಾಗಿ ಮದ್ರಾಸಿನಲ್ಲಿ ಭಾಷಣಗಳನ್ನು ಕೊಡುವ ಬಗ್ಗೆ ಕರೆಸಲ್ಪಟ್ಟ ಪ್ರೊಫೆಸರ್ ಗೆಡ್ಡಿಸರವರು ಮುಂಬಾಯಿಯಲ್ಲಿ ಬರುವ ಮಾರ್ಚ ತಿಂಗಳಿಗೆ ಭಾಷಣಗಳನ್ನು ಕೊಡಲು ಪ್ರಾರಂಭಿಸುವರು.

ಪೂನೆಯ ಸಾಮುವೆಲ್ ದಾನಿಯೇಲ್ ಎಂಬ ಹೆಡ್ ಕನಿಸ್ಟೇಬಲನೂ ಇಬ್ಬರು ಕನಿಸ್ಟೇಬರು ಕೂಡಿ ಒಬ್ಬ ಕೂಲಿಯವನಿಗೆ ಹೊಡೆದ ಪೆಟ್ಟಿನಿಂದ ಸದರಿ ಕೂಲಿಯವನು ಮೃತಪಟ್ಟನೆಂಬ ಅಪಾದನೆಯ ಮೇಲೆ ಹೆಡ್ ಕನ್‌ಸ್ಟೇಬಲ್ ಮತ್ತು ಕನ್‌ಸ್ಟೇಬಲರ ಮೇಲೆ ಪೂನೆಯಲ್ಲಿ ಕಟ್ಲೆ ನಡೆಯುತ್ತದೆ.

ವೈಸರಾಯ ಪ್ರಭುಗಳವರ ಮಿಲಿಟರಿ ಸೆಕ್ರೆಟರಿಯಾಗಿರುವ ಕರ್ನಲ್ ಮೇಕ್ಸ್‌ವೆಲ್ಲರವರು ಕಳೆದ ಬುಧವಾರ ಪೋಲೋ ಆಟ ಆಡುತ್ತಿರುವಾಗ ಕುದುರೆಯಿಂದ ಬಿದ್ದು ಘಾಯ ಒಡೆದಿರುವರು.

ಮಾನ್ಯ ಗಂಧಿಯವರು ಪತ್ನಿ ಸಹಿತ ತಾ. ೯ರಲ್ಲು "ಅರಾಬಿಯಾ" ಎಂಬ ಹಡಗದಲ್ಲಿ ಮುಂಬಾಯಿ ಬಂದರಕ್ಕೆ ಬಂದಿಳಿದರು. ಮ॥ರಾ॥ ನರೋತ್ತಮ ಮುರಾರ್ಜಿ ಗೋಕುಲದಾಸ, ಜೆ. ಬಿ. ಪೆಟಿಟ್ ಬಿ. ಎನ್. ಹೊರ್ನಿಮೇನ್ ಮೊದಲಾದವರೇ ಹಡಗಕ್ಕೆ ಹೋಗಿ ಸ್ವಾಗತವನ್ನು ಮಾಡಿದನಂತರ ಮಾನ್ಯ ಗಂಧಿಯವರು ಅವರ ಪತ್ನಿಯವರೊಡನೆ ಸ್ಟೀಮ್ ಲೊಂಚಿನಲ್ಲಿ ಅಪೋಲ್ಲೊ ಬಂದರಕ್ಕೆ ಬಂದಿಳಿದರು. ಅಪಲ್ಲೋ ಬಂದರದಲ್ಲಿ ಇವರ ಸ್ವಾಗತವು ಖಾಸಗಿ ತರವಾಗಿದ್ದರೂ ಬಹಳ ಮಂದಿ ಭಾರತೀಯರು ಅಲ್ಲಿ ಕೂಡಿದ್ದು ಗಂಧಿಯವರಿಗೆ ಮಂಗಲವನ್ನಿತ್ತರು. ಅಲ್ಲಿಂದ ಮಾನ್ಯ ಗೋಖಲೆಯವರು ಇದ್ದ ಮುರಾರ್ಜಿಯವರ ಬಂಗ್ಲೆಗೆ ಮೋಟರಿನಲ್ಲಿ ಹೋದರು. ಬಂದರಲ್ಲಿ ಕಿಕ್ಕಿರಿದು ನಿಂತಿದ್ದ ಜನರು ಧನ್ಯವಾದವನ್ನಿತ್ತು ಹೂಮಾಲೆಗಳನ್ನೂ ಹಾಕಿದಲ್ಲದೆ ಪುಷ್ಪವೃಷ್ಟಿಯನ್ನು ಸುರಿಸಿದರು. ಮಾನ್ಯ ಗಂಧಿಯವರು ಮುಂಬಾಯಿಯ ಸಾಂತಕ್ರೂಜ್ ಎಂಬಲ್ಲಿ ಉಳಕೊಳ್ಳುವರು. ಅಲ್ಲಿಂದ ಬೋಲಾಪುರದ ಡಾಕ್ಟರ್ ರವೀಂದ್ರನಾಥ ಟಾಗೋರರ ಶಾಲೆಗೆ ತನ್ನ ಮಕ್ಕಳನ್ನು ಹಾಕುವರೆ ಹೋಗುವರು. ಮುಂಬಾಯಿ ಮಹಿಳೆಯರ ಗಂಧಿಯವರ ಪತ್ನಿಯವರಿಗೆ ಬಂದರದಲ್ಲಿ ಒಂದು ಬೆಳ್ಳಿಯ ಕರಡಿಗೆಯನ್ನು ಬಹುಮಾನಿಸಿದರು.

'ಟ್ಯಾಮ್ಸ್ ಆಫ್ ಇಂಡಿಯಾ' ಪತ್ರ ಪ್ರತಿನಿಧಿಗಳು ಮಾನ್ಯ ಗಂಧಿಯವರಿಗೆ ಭೇಟಿ ಕೊಟ್ಟು ದಕ್ಷಿಣ ಆಫ್ರೀಕದ ಈಗಿನ ಸ್ಥಿತಿಯನ್ನು ಕುರಿತು ಕೇಳಿದರ. ಹಿಂದಿಕ್ಕಿಂತ ಈಗಿನ ಸ್ಥಿತಿಯು ಅತಿ ಒಳ್ಳೇದಿದೆ. ಈಚೆಗೆ ಜಾರಿಗೆ ಬಂದ ಕಾನೂನಿನಿಂದ ಅಲ್ಲಿರುವ ಸರ್ವ ಭಾರತೀಯರು ತೃಪ್ತಿಗೊಂಡಿರುವರು ಎಂಬಿತ್ಯಾದಿ ವಿಷಯಗಳನ್ನು ಹೇಳಿರುವರ.

ಪೂನೆಯ ಒಬ್ಬ ವಕೀಲನೂ ಎಲ್ ಎಲ್ ಬಿ ವಿದ್ಯಾರ್ಥಿಯಾದ ಕಾಶಿನಾಥ ಮಹಾದೇವ ಓಕೆ ಎಂಬವನೂ ಕೂಡಿ ಕಳವು ವಸ್ತುಗಳನ್ನು ಕೊಂಡು ಕೊಂಡಿರುವರೆಂಬದಾಗಿ ಆಪಾದಿಸಲ್ಪಟ್ಟಿದ್ದರಷ್ಟೆ. ಈ ಮೊಕದಮೆಯು ತನಿಖೆಯಾಗಿ ಶಿಕ್ಷೆಯ ಮೆಜಿಸ್ಟ್ರೇಟರ ಉಭಯತರಿಗೂ ನಾಲ್ಕು ನಾಲ್ಕು ತಿಂಗಳ ಕಠಿಣ ಸಜಾ ಮತ್ತು ೩೦೦ ರೂಪಾಯಿ ಜುಲುಮಾನೆ ವಿಧಿಸಿದರ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ದಯಾರ್ಸ ಫಂಡಿನ ಆಸ್ಪತ್ರಿ ಹಡಗವು ಮುಂಬಾಯಿಗೆ ಬಂದು ತಲುಪಿರುವದು. ಅರಬಿಯದಲ್ಲಿ ಘಾಯ ಒಡೆದ ೪೬ ಯೂರೋಪಿಯನ್ ಮತ್ತು ೨೦೦ ಭಾರತೀಯ ಸೈನಿಕರನ್ನು ಈ ಹಡಗವು ಮುಂಬಾಯಿಗೆ ತರಿದಿದು. ಘಾಯ ಒಡೆದವರೂ ಅಸ್ವಸ್ಥದಲ್ಲಿರುವವರೂ ಬಹಳ ಸಂತೋಷದಲ್ಲಿರುವರು. ಸೇನೆಯೊಳಗೆ ಹೊಗೆಸೊಪ್ಪಿನ ಕೊರತೆ ಬಂದಿರುವದು. ಹಡಗದಲ್ಲಿದ್ದ ಎಲ್ಲಾ ಸಿಗರೇಟ್ ಮತ್ತು ಹೊಗೆಸೊಪ್ಪು ಕೊಡೋಣಾಗಿರುವದು. ಇನ್ನೊಂದು ಸಾರಿ ಹಡಗವು ರಣರಂಗಕ್ಕೆ ಹೋಗಬೇಕಾದರೆ ಹೊಸ ಹೊಗೆಸೊಪ್ಪು ಬೇಕಾಗಿರುವದು. ಕಂಬಳಿ ವಸ್ತ್ರವೂ ಅಗತ್ಯವಾಗಿರುವದು ಎಂತ ಈ ಹಡಗದ ಕರ್ನಲ್ ಜಿ ಜಿ ಗಿಪ್ಪರ್ಡರವರು ಮದ್ರಾಸ್ ಗವರ್ನರ ಪ್ರಭುಗಳವರಿಗೆ ತಂತೀ ಟಿಟ್ಟಿರುವರು.

ದಕ್ಷಿಣ ಕನ್ನಡ

ಕುಂಬಳೆ: — ಇಲ್ಲಿ ಹುಡುಗಿಯರ ಶಾಲೆಯು ಪ್ರತ್ಯೇಕ ವಿಲ್ಲದಿರುವದರಿಂದ ಗರೀಬರಾದವರು ತಮ್ಮ ಹುಡುಗಿಯರನ್ನು ಶಾಲಾಫೀಸು ತೆತ್ತು ಮಿಶ್ಯನ್ ಶಾಲೆಗೆ ಕಳುಹಿಸುವರೆ ಅಸಾಧ್ಯವಾದ ಕಾರಣ ಇಲ್ಲಿ ಒಂದು ಬಾಲಿಕಾ ಪಾಠಶಾಲೆಯನ್ನು ತೆರೆಯ್ಯಬೇಕಾಗಿ ತಾಲೂಕು ಬೋರ್ಡು ಪ್ರೆಸಿಡೆಂಟರವರಿಗೂ ಶಾಲಾ ಅಸಿಸ್ಟಾಂಟ ಇನ್ಸಪೆಕ್ಟರವರಿಗೂ ಅರ್ಜಿಗಳನ್ನು ಬರಕೊಂಡಿರುವದರಿಂದ ಸದ್ಯದಲ್ಲಿ ಒಂದು ಶಾಲೆಯು ತೆರಿಯೋಣಾದೀತೆಂತ ನಿರೀಕ್ಷಿಸೋಣಾಗಿಯದೆ.

ಈ ಶಹಾರಿನ ಮಧ್ಯದಿಂದ ರೈಲ್ವೆ ಲೈನು ಹಾದುಹೋಗಿ ರೈಲ್ವೆ ಸ್ಟೇಶನಿನಿಂದ ಹೊಳೆ ವರೆಗೆ ಜನ ಜಾನುವಾರು ಗಾಡಿಗಳು ಸಹ ಅವಾದರಪ್ಪಿಗೆ ರೈಲ್ವೆ ಕಲ್ವರ್ಟ ಅಡಿಯ ಒಂದೇ ದಾರಿ ಇರುವದರಿಂದ ಶಾಲಾ ಮಕ್ಕಳೂ, ಹೆಂಗಸರೂ ಸಹಾ ಈ ಅಪಾಯದಿಂದ ತಪ್ಪಿಸಿಕೊಳ್ಳುವದಕ್ಕಾಗಿ ಒಂದು ವಿಕೆಟ್ ಗೇಟನ್ನು ಮತ್ತು ರೈಲ್ವೆ ಪ್ರಯಾಣಸ್ಥರ ಅನುಕೂಲತೆ ಬಗ್ಗೆ ಸ್ಟೇಶನ್ ಬಳಿ ಒಂದು ವಿಕೆಟ್ ಗೇಟನ್ನೂ ಸಹಾ ಇಡಿಸಿ ಕೊಡಬೇಕಾಗಿ ಇಲ್ಲಿಯ ನಿವಾಸಿಕರು ಮಾನ್ಯ ಕಲೆಕ್ಟರ್ ದೊರೆಗಳವರಿಗೆ ಮನವಿ ಮಾಡಿಕೊಂಡಿರುವರು.

ಶ್ರೀ ಕೃಷ್ಣ ದೇವಸ್ಥಾನದ ಜಾತ್ರೆಯು ಇಲ್ಲಿ ಇದೇ ತಾ ೧೯ಕ್ಕೆ ಸುರುವಾಗಿ ತಾ. ೧೭ಕ್ಕೆ ಅಂತ್ಯವಾಗುವದು. ಈ ದೇವಸ್ಥಾನದ ಹಾಳು ಬಿದ್ದ ಕೆರೆಯನ್ನು ಸಮ್ಮಂಧಪಟ್ಟವರು ದುರುಸ್ತಿ ಮಾಡಿಸಬೇಕಾಗಿ ೩—೪ ವರ್ಷಗಳಿಂದ ಶಿಸ್ತೀಕು ಅಮಾಷಿಶ್ತು ವಗೈರೆ ವ್ಯವಹರಣೆ ನಡೆದು ದುರುಸ್ತಿಯಾಗುವಂತೆ ಎಷ್ಟೋ ಬಗೆ ಹುಕುಂಗಳು ಹೊರಟಿದ್ದರೂ ಈ ಕೆರೆಯು ತನ್ನ ರೂಪವನ್ನು ಮಾರ್ಪಾಟ ಹೊಂದದೆ ಒಂದು ಗುಟುಕು ನೀರನ್ನು ಸಹಾ ಕುಡಿಯುವರೆ ಕೊಡಲಿಕ್ಕಿಲ್ಲವಾಗಿ ಮೌನ ತಾಳಿದ್ದು ಪರಮಾಶ್ಚರ್ಯ ಊರವರಿಗೂ ಅನೇಕ ಪ್ರಯಾಣಸ್ಥರಿಗೂ ವ ಯಾತ್ರಸ್ಥರಾದ ಬ್ರೈವಾಗಿಗಳಿಗೆ ಸಹ ಉಪಯೋಗವಿದ್ದು ಶಹಾರಿನ ಮಧ್ಯದಲ್ಲಿರುವ ಈ ಕೆರೆಯನ್ನು ಪ್ರಜೆಗಳ ಹಿತಚಿಂತಕರಾದ ಘನಹೊಂದಿದ ಕಲೆಕ್ಟರ ದೊರೆಗಳವರು ತ್ವರ್ಯದಲ್ಲೇ ಸರಿಪಡಿಸಿ ಕೊಡದೆ ಇರಲಾರರೆಂತ ನಂಬುತ್ತೇನೆ

~~~~~

ಬಂಗ್ರ ಮಂಜೇಶ್ವರ:—ಇಲ್ಲಿ ಕೊರ್ಟ ಮೋಗೇರ ಎಂಬಲ್ಲಿ ತಾ. ೬ಲ್ಲು ಸುಮಾರು ೮ ಘಂಟೆ ಬೆಳಗ್ಗೆ ೧ ಹುಲಿಯನ್ನು ಕೊಂದರು ಮೊನ್ನೆ ರಾತ್ರೆ ಸಂಚಾರಕ್ಕೆ ಬಂದ ಹುಲಿ ಪರಮೋಶಿಯಿಂದ ವಿಂಕ್ಯದಲೆ ವಳಚೀಲಿನಲ್ಲಿ ಅವಿತುಕೊಂಡಿರುತ್ತಾ ಬೆಳಗ್ಗೆ ೬ ಘಂಟೆ ಸಮಯಕ್ಕೆ ಸರ್ತಿ ಪ್ರಕಾರ ನೀರು ಹೊಯ್ಯಲಿಕ್ಕೆ ಬಂದ ಸಣ್ಣ ಹುಡುಗನನ್ನು ಘರ್ಜಿಸಿ ಬೆದರಿಸಿದಾಗ ಆತನು ಹೆದರಿ ಗೌಜಹಾಕಿ ಇಲ್ಲಿಯ ಪೋಲಿಸ್ ಸಬ್ ಇನ್ಸ್‌ಪೆಕ್ಟರ ಕೊಡೆ ತಿಳಿಸಿದಲ್ಲಿ, ಕೂಡಲೇ ಅವರು ಇಲ್ಲಿಯ ಕಟ್ಟಣದ ಕೆಲಸದ ಮಾಣಂಚ್ ಆಯತ್ತಾನ್ ಬೆಳ್ಳಂಪಾಡ ಎಂಬವನಿಗೆ ಜನ ಕಳುಹಿಸಿ ಅವನೊಡನೆ ಆ ಸ್ಥಳಕ್ಕೆ ಒಟ್ಟಿಗೆ ಹೋಗಿ ಆ ಹುಲಿಯನ್ನು ನೋಡಿ ತನ್ನ ಕೈಯಲ್ಲಿದ್ದ ಕೋವಿಯನ್ನ ಸದರಿ ಬೆಳ್ಳಂಪಾಡನ ಕೈಯಲ್ಲಿ ಕೊಟ್ಟು ಹೊಡಿಯಲಿಕ್ಕೆ ಅವನಿಗೂ ಇನ್ನೊಬ್ಬ ಪೋಲಿಸನಿಗೂ ಅಪ್ಪಣೆಕೊಟ್ಟ ಕೂಡಲೇ ಪೋಲಿಸನು ಹೊಡೆದ ಗುಂಡು ಗುರಿ ತಪ್ಪಿ ಕಾಲಿಗೆ ತಾಗಿ ಭಾರಿ ಅಪಾಯ ಸಂಭವಿಸುವ ಮೊದಲೇ ಸದರಿ ಬೆಳ್ಳಂಪಾಡನು ಗರಿ ಇಟ್ಟು ಬಹಳ ಸಾಧನೆ ಮತ್ತು ಶ್ರಮಪಟ್ಟು ಹತ್ತರ ಬಂದ ಹುಲಿಗೆ ಹೆದರದೆ ಕೊಂದುಬಿಟ್ಟ ಸಂಗತಿ ಬಹಳ ಆಶ್ಚರ್ಯಕರವಾಗಿರುತ್ತದೆ ಸದರಿ ಹುಲಿಯು ನೋಡಲು ಭಯಂಕರವಾಗಿಯೂ, ಬಲಶಾಲಿಯಾಗಿಯೂ ಇತ್ತು

~~~~~

ಹಾಲಾಡಿ:— ಉಡುಪಿ ತಾಲೂಕು ಹಾಲಾಡಿಯಲ್ಲಿ ಒಂದು ಶಾಲೆಯುಂಟು, ಈ ಶಾಲೆಗೆ ನಮ್ಮ ಗ್ರಾಮದ ಹುಡುಗರ ಹೋಗಬೇಕು ಹಾಗೆ ಹೋಗಲಿಕ್ಕೆ ಮಳೆಗಾಲದಲ್ಲಿ ಹಾಲಾಡಿ ನಾರದ ನೀರಿನ ಕೊರತೆಯಿಂದ ನಮ್ಮ ಮಕ್ಕಳ ವಿದ್ಯಾಭಿವೃದ್ಧಿಗೆ ಇಂತಿಷ್ಟೇ ಕೆಡಕು ಉಂಟೆಂದು ಹೇಳಲು ಅಸಾಧ್ಯ ಮತ್ತು ಜನ ಜಾನವಾರುಗಳಿಗೂ ಹೋಗಲಿಕ್ಕೆ ಬಹಳ ತೊಂದರೆ ಆದುದರಿಂದ ದಯಾಳುಗಳಾದ ಸರಕಾರದವರು ನಮ್ಮ ಹಾಲಹಾವಾಲಿಗಳನ್ನು ದಿವ್ಯಚಿತ್ತದಲ್ಲಿ ಪರಾಂಬರಿಸಿ, ಈ ಹಾಲಾಡಿ ಸಾರಕ್ಕೆ ಒಂದು ಸೇತುವೆಯನ್ನು ಕಟ್ಟಿಸಿ, ನಮ್ಮ ಸಂಕಷ್ಟವನ್ನು ಪಾರು ಮಾಡಬೇಕಾಗಿ ಅಪೇಕ್ಷಿಸುತ್ತಿರುವೆವು.

~~~~~

ತಮ್ಮುಣಿಂಜೆ:— ಗುರುಪುರ ಸಂಕಕ್ಕೆ ಕಲ್ಲುಗಳು ಎಲ್ಲಿಯೂ ಸಮೀಪ ಇಲ್ಲದೆ ಸದರಿ ಕೆಲಸ ವಹಿಸಿದವರು ಯೋಚನೆಯಲ್ಲಿ ಬಿದ್ದಿರುತ್ತಾರಂತೆ ಮಳಲಿ ಪದವಿನ ಸಮೀಪ ಮೊಗರ ಗ್ರಾಮದ ಗೋಂಕಟ್ಟೆ ಎಂಬಲ್ಲಿ ಬೇಕಾದಷ್ಟು ಕಲ್ಲುಗಳು ಇದೆಯೆಂತಲೂ, ಅವುಗಳನ್ನು ಯಾರೊಬ್ಬರ ಅಡ್ಡಿ ಇಲ್ಲದೆ ಗಾಡಿಗಳ ಮುಖಾಂತರವಾಗಿ ಸಾಗಿಸಬಹುದೆಂದೂ, ಗಾಡಿ ೧ಕ್ಕೆ ಗುರುಪುರ ಹೊಳೆಗೆ ಸಾಧಾರಣ ೬ ಆಣೆ ಮಜೂರಿಯಲ್ಲಿ ಕಲ್ಲುಗಳು ಬಂದು ಬೀಳಬಹುದೆಂದೂ ಸದರಿ ಗ್ರಾಮದ ಒಬ್ಬ ಮಹನೀಯರು ಸೂಚಿಸುತ್ತಾರೆ. ಆದ್ದರಿಂದ ಸದರಿ ಸಂಕದ ವಿಷಯ ಕೈಹಾಕಿದವರು ಈ ವಿಷಯಕ್ಕೆ ಮನಸ್ಸು ಕೊಟ್ಟರೆ ಅವರಿಗೆ ಬಹಳ ಅನುಕೂಲವಿದೆ

ಶ್ರೀ ಸರಸ್ವತಿಯ ಅನುಗ್ರಹದಿಂದಲೂ ತಮ್ಮಂಥ ಮಿತ್ರ ಮಹಾಶಯರ ಸತ್ಸಹಾಯದಿಂದಲೂ ಇಲ್ಲಿ "ಶ್ರೀ ಸರಸ್ವತಿ ವಾಚಕ ಮಂದಿರ"ವೆಂಬ ಹೆಸರಿನಿಂದ ೧೯೧೪ನೇ ನವಂಬರ ೧ನೇ ತಾರೀಕಿನಲ್ಲಿ ಒಂದು ಪುಸ್ತಕಾಲಯವನ್ನು ತೆರೆದಿರುತ್ತೇವೆ. ತತ್ಕಾಲ ೨೦೦ ಪುಸ್ತಕಗಳಿವೆ ಈಗ ಸದ್ಯ, ಚಂದ್ರಿಕೆ, ಶ್ರೀ ಕೃಷ್ಣಸೂಕ್ತಿ, ಕರ್ನಾಟಕ ಚಂದ್ರಿಕೆ, ಮಧುರವಾಣಿ, ಚಿತ್ರಗುಪ್ತ, ಸದಕ್ಷರ, ವಿದ್ಯಾದಾಯಿನಿ, ಆರ್ಯಮಹಿಳಾ, ಭಾರತಿವಿಲಾಸ, ಚಾತುರ್ಯ, ವಿಕಟವಿನೋದಿನಿ. ಕಾದಂಬರಿ ಸಂಗ್ರಹ, ಸವಿನುಡಿ, ಎಂಬ ಮಾಸಪತ್ರಿಕೆಗಳೂ, ವೀರಕೇಸರಿಯೆಂಬ ಪಕ್ಷಪತ್ರಿಕೆಯೂ, ಸ್ವದೇಶಾಭಿಮಾನಿ ಎಂಬ ವಾರ ಪತ್ರಿಕೆಯೂ ತರಿಸಲ್ಪಡುತ್ತವೆ. ಸತ್ಪುರುಷರೂ, ಧಾರ್ಮಿಕರೂ, ಸಾಧುಗಳೂ, ಆದ ಮಹನೀಯರೂ ತಮ್ಮಿಂದಾದಷ್ಟು ಸಹಾಯ ಮಾಡಿ ಈ ಪುಸ್ತಕಾಲಯದ ಏಳಿಗೆಯನ್ನು ಬಯಸುತ್ತಲಿರುವರು

~~~~~

ಪರಸ್ಪರ ಸಹಾಯ

ಸರ್ಕಿಲಾರು ನಂಬ್ರ ೨.

ಪರಸ್ಪರ ಸಹಾಯಕ ಸಂಘಗಳ ಕಡೆಯಿಂದ ಬೇಂಕಿಗೆ ಯಾವ ಬಾಬಿನ ಅರ್ಜಗಳನ್ನು ಕಳುಹಿಸುವುದಾದರೂ ಸದರಿ ಅರ್ಜಗಳನ್ನು ಬರಕೊಳ್ಳುವುದರ ಕುರಿತು ಸಂಘಗಳ ಪಂಚಾಯತ ಸಭೆಯಲ್ಲಿ ನಿರ್ಣಯವನ್ನು ಮಾಡಿ ಆ ನಿರ್ಣಯದ ಸರಿ ನಕಲನ್ನು ಸಹ ಕಳುಹಿಸಬೇಕೆಂಬ ಕ್ರಮವು ಸಂಘದವರಿಗೆ ಚೆನ್ನಾಗಿ ಗೊತ್ತಿದ್ದರೂ ಅದನ್ನು ಅನೇಕ ಸಂಗತಿಗಳಲ್ಲಿ ಅನುಸರಿಸುವುದಿಲ್ಲ ಸರಿ ನಕಲುಗಳು ಬೇಂಕಿನವರಿಗೆ ಬಹಳ ಮುಖ್ಯವಾದುದರಿಂದ ಈ ವಿಷಯದಲ್ಲಿ ಸಂಘದ ಆಫೀಸರರು ಇನ್ನು ಮುಂದಕ್ಕಾದರೂ ಜಾಗ್ರತೆಯನ್ನಿಡಬೇಕಾಗಿ ಅಪೇಕ್ಷಿಸೋಣಾಗುತ್ತದೆ ಮುಖ್ಯವಾಗಿ ಸಾಲಗಳನ್ನು ಕೇಳಿಕೊಂಡು ಬರಕೊಳ್ಳುವ ಅರ್ಜಗಳ, ಪಾಲುಗಳನ್ನು ಕೇಳಿಕೊಂಡು ಬರಕೊಳ್ಳುವ ಅರ್ಜಗಳು ಸಾಲಗಳ ವಾಯಿದೆಯನ್ನು ವೃದ್ಧಿಸುವರೆ ಬರಕೊಳ್ಳುವ ಅರ್ಜಗಳು— ಈ ಮೂರು ತರದ ಅರ್ಜಗಳೊಂದಿಗಾದರೂ ನಿರ್ಣಯಗಳ ಸರಿ ನಕಲುಗಳನ್ನು ಕಳುಹಿಸದೆ ಇರಕೂಡದು

೨ ಇದು ವರೆಗೆ ಬೇಂಕಿಗೆ ಕಳುಹಿಸುತ್ತಿದ್ದ ಸರಿ ನಕಲುಗಳಲ್ಲಿ ಮುಖ್ಯವಾದ ಒಂದು ವಿಷಯವು ಕಾಣುತ್ತಲೇ ಇದ್ದಿಲ್ಲ ಸದರಿ ನಿರ್ಣಯವನ್ನು ಮಾಡಿದ ಪಂಚಾಯತ ಸಭೆಯಲ್ಲಿ ಪಂಚಾಯತ ಮೆಂಬರರ ಪೈಕಿ ಯಾರು ಹಾಜರಿದ್ದರೆಂಬುದು ಗೊತ್ತಾಗುತ್ತಿದ್ದಿಲ್ಲ ಆದುದರಿಂದ ಸರಿನಕಲುಗಳನ್ನು ಈ ಕೆಳಗಿನ ನಮೂನೆಯಲ್ಲಿ ಬರದು ಕಳುಹಿಸಬೇಕೆಂತ ಅಪೇಕ್ಷಿಸೋಣಾಗುತ್ತದೆ

ನಂಬ್ರ　　ನೇ ಪಂಚಾಯತ ಸಭೆಯ ಪ್ರೊಸೀಡಿಂಗ್ಸ್

ತಾರೀಕು — —19

ಹಾಜರು — 1

2

3

ಇತ್ಯಾದಿ

(ನಿರ್ಣಯದ ನಂಬ್ರ)

(ನಿರ್ಣಯದ ನಕಲು) -

ಸರಿ ನಕಲು

ಕಾರ್ಯದರ್ಶಿ

೩ ಪ್ರತಿಯೊಂದ ಸಂಘಕ್ಕೂ ಒಂದು ಮೊಹರು ಇರುವುದು ಅತ್ಯಗತ್ಯವಾಗಿರುತ್ತದೆ ಸಂಘಗಳಿಂದ ಬೇಂಕಿಗೆ ಬರಿಯೋಣಾಗುವ ಪತ್ರಗಳ ಮಟ್ಟಿಗೆ ಸದರಿ ಮೊಹರು ಮೇಲೆ ಹೇಳಿದ ನಿರ್ಣಯದ ಸರಿನಕಲುಗಳಷ್ಟೇ ಮುಖ್ಯವಾಗಿರುತ್ತದೆ ಆದುದರಿಂದ ಸಂಘಗಳು ಕಳುಹಿಸುವ ಪ್ರತಿಯೊಂದು ಪತ್ರದಲ್ಲಿಯೂ ಸಂಘದ ಮೊಹರನ್ನು ಸಹ ಜಾಗ್ರತೆಯಿಂದ ಒತ್ತಬೇಕು

ದಕ್ಷಿಣಕನ್ನಡಾ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್ ಲಿಮಿಟೆಡ್	ಎಮ್ ಅನಂತರಾವ್
ಪುತ್ತೂರು, ದಕ್ಷಿಣಕನ್ನಡಾ	ಕಾರ್ಯದರ್ಶಿ.
ತಾರೀಕು 11 1 -1915.	

~~~~~

ಮಂಗಳೂರು.

ಅರಸಿಕೆರೆಯಿಂದ ಮಂಗಳೂರಿಗೆ ಸುಮಾರು ೬೦೦೩ ಮೈಲುಗಳ ವರೆಗೆ ತೆರೆಯುವ ರೈಲ್ವೆ ಬಗ್ಗೆ ೩೮ ಲಕ್ಷ ರೂಪಾಯಿಗಳು ಖರ್ಚಾಗುವದೆಂತ ಅಂದಾಜಾಗಿಯದೆ. ಈ ರೈಲ್ವೆಯು ಉಪ್ಪಿನಂಗಡಿ ತಾಲೂಕು ಮಾರ್ಗವಾಗಿ ಮಂಗಳೂರಿಗೆ ಬರುವದು. ಈ ಲೈನಿನಲ್ಲಿ ಕೆಲಸ ಪ್ರಾರಂಭಿಸುವ ವಿಚಾರಗಳು ಮೈಸೂರು ಸರಕಾರದವರೊಡನೆ ನಡೆಯುತ್ತಿದೆ.

ಇದೇ ತಾ. ೯ನೇ ಶನಿವಾರ ಸಾಯಂಕಾಲ [illegible] ಬಸ್ತಿಯಲ್ಲಿ [illegible] ಎಂಬ ಹೆಸರಿನ [illegible] ಸ್ತನು ಕುದ್ರೋಳಿ ಕಾರ್ಖಾನೆಯಲ್ಲಿ ತನ್ನ ಕೆಲಸವನ್ನು ತೀರಿಸಿ [illegible] ದಿನ ಸಂಬಳವಾದುದರಿಂದ ತನಗೆ ಸಿಕ್ಕಿದ ರೂ. ೧೩ರನ್ನು ಹಿಡಕೊಂಡು ಮನೆಗೆ ಹಿಂತಿರುಗುವಾಗ ಅವನ ಹಿಂದೆಯೇ ಒಬ್ಬ ಮಾಪಿಳ್ಳೆಯು ಬಂದನಂತೆ. ಸದರಿ ಎಲ್ಯಾದನು ಮಾಪಿಳ್ಳೆಯನ್ನು ದಾರಿಗನೆಂದೆಣಿಸಿ ಏನೂ ಸರಕು ಮಾಡದೆ ಮನೇ ದಾರಿ ಹಿಡಿದು ಪದವಿನ ಮೇಲೆ ಹೋಗುತ್ತಲೇ ಕತ್ತಲೆಯಾದುದರಿಂದ ಸದರಿ ಮಾಪಿಳ್ಳೆಯು ಎಲ್ಯಾದನನ್ನು ಹಿಡಿದು ಅವನ ಕೈಯಲ್ಲಿದ್ದ ರೂಪಾಯಿಗಳನ್ನು ಸೆಳಕೊಳ್ಳಲು ನೋಡಿದ್ದರಿಂದ ಉಭಯತರೊಳಗೆ ಪದವು ಗುಡ್ಡದಲ್ಲಿ ಕದನ ಪ್ರಾರಂಭವಾಗಿ ಮಾಪಿಳ್ಳೆಯು ಬಹು ಪ್ರಯತ್ನದಿಂದ ಎಲ್ಯಾದನ ಕೈಯಿಂದ ರೂಪಾಯಿ ೨ನ್ನು ಸೆಳಕೊಂಡು ಓಡಿ ಹೋಗಿರುವನು ಸದರಿ ಎಲ್ಯಾದನ ಹಲ್ಲು ಹೋಗಿರುವದಲ್ಲದೆ ಮಾಪಿಳ್ಳೆಯು ಕಚ್ಚಿ ಮೈಯಲ್ಲಿ ಘಾಯಗಳನ್ನು ಮಾಡಿರುವನಂತೆ. ಪದವು ಗುಡ್ಡವು ಜನರಹಿತವಾದ ಸ್ಥಳವಾದುದರಿಂದ ಎಲ್ಯಾದನು ಬೊಬ್ಬಿಟ್ಟರೂ ಜನ ಸಹಾಯ ಸಿಕ್ಕದೆ ಹೋದುದರಿಂದ ಮಾಪಿಳ್ಳೆಯು ತಪ್ಪಿಸಿಕೊಂಡು ಹೋಗಿರುವನೆಂತ ಕೇಳುತ್ತೇವೆ.

ಮೈಸೂರು ಮೊದಲಾದ ಸ್ಥಳಗಳಲ್ಲಿ ನಡೆದ ವಸ್ತು ಪ್ರದರ್ಶನಗಳಲ್ಲಿ ಚಿನ್ನ ಬೆಳ್ಳಿ ಪದಕಗಳನ್ನು ಪಡೆದಿರುವ ಪೈಂಟರ್ ಎ ರಾಜಪ್ಪನವರು ಮದ್ರಾಸಿನಲ್ಲಿ ಜರಗಿದ ಓರಿಯೆಂಟಲ್ ಆರ್ಟ್ಸ ಎಕ್ಸಿಬಿಷನ್ ಎಂಬ ವಸ್ತು ಪ್ರದರ್ಶನಕ್ಕೆ ಕಳುಹಿಸಿದ ಟೆರಾಕೊಟ್ಟಾ ಬ್ಯಾಲಿನಿಂದ ಮಾಡಿದ ಆನೆಮಣ್ಣಿನ ಕೆಲಸಗಳಿಗೆ ಒಂದು ಬೆಳ್ಳಿಯ ಪದಕವನ್ನು ಪಡೆದಿರುವರು

ಇದೇ ತಾ ೮ರಲ್ಲು ಇಲ್ಲಿಯ ಬ್ರಹ್ಮ ಮಂದಿರದಲ್ಲಿ ಬ್ರಹ್ಮೋದೇವ ಕೇಶಬಚಂದ್ರಸೇನರ ಮರಣ ಜ್ಞಾಪಕಾರ್ಥವಾದ ಉತ್ಸವವು ಮ ರಾ ಜ ಕೃಷ್ಣರಾವ್ ಬಿ ಎ ಎಲ್ ಎಲ್ ಬಿ ಯವರ ಅಧ್ಯಕ್ಷತೆಯಲ್ಲಿ ಜರಗಿತು

ಕಳೆದ ವಾರ ಬಲ್ಮಠ ರಸ್ತೆಯಲ್ಲಿ ವಾಸಿಸ ವ ಮೆ ಕಾಮಿಲ್ ಸಾಲ್ದಾಞ್ಞರ ಬಂಗ್ಲೆಗೆ ಕಳ್ಳರು ನುಗ್ಗಿ ಕೆಲವು ರೂಪಾಯಿ ನೋಟು ಮತ್ತು ಆಭರಣಗಳು ಕೂಡಿ ಒಟ್ಟು ಸುಮಾರು ೨೦೦೦ ರೂಪಾಯಿಗಳ ಒಡವೆಗಳನ್ನು ಕದ್ದುಕೊಂಡು ಹೋಗಿರುವರಂತೆ.

ಸರ್ ಗಣೇಶ ಚಂದಾವರಕಾರರವರು ಬೇಗನೇ ಮಂಗಳೂರಿಗೆ ಬರಲಿಕ್ಕಿದ್ದಾರೆಂಬದಾಗಿ ಕೇಳುತ್ತೇವೆ

ಇಲ್ಲಿಯ ಗವರ್ನಮೆಂಟ ಟ್ರೈನಿಂಗ್ ಶಾಲೆಯ ಕ್ರಿಸ್ಮಸ್ ರಜೆಯು ತಾ ೧೫ಕ್ಕೆ ಮುಗಿಯುವುದು

ಹೆಡ್ ಕ್ವಾರ್ಟರ್ಸ್ ಡೆಪ್ಯುಟಿ ಕಲೆಕ್ಟರರವರು ತಾ ೧೩ರಲ್ಲು ಮುಲ್ಕಿಯತ್ತ ಕಡೆ ಸರ್ಕೀಟು ಬೆಳಸಿರುವರು

ಮೈಸೂರು ಸರಕಾರದ ಡೆಪ್ಯುಟಿ ಸೆಕ್ರೆಟರಿಗಳಾದ ಮಿ ಪಿ. ಜಿ. ಡಿ ಸೋಜರವರು ಇಲ್ಲಿಗೆ ಬಂದಿದ್ದು ತಾ. ೧೩ರಲ್ಲು ಮೈಸೂರಿಗೆ ಹಿಂದೆ ಹೊರಟು ಹೋದರು

ಇದೇ ತಾ ೨೫ರಲ್ಲು ಡಿಸ್ಟ್ರಿಕ್ಟ್ ಬೋರ್ಡ ಮಿಟಿಂಗ್ ಜರಗುವದು

ಮಿ ಪೈಂಟರ್ ಐ. ಸಿ ಎಸ್. ರವರು ದಕ್ಷಿಣ ಕನ್ನಡಾ ಜಲ್ಲೆಯ ಅಸಿಸ್ಟಾಂಟ ಕಲೆಕ್ಟರ ಮತ್ತು ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು

ವೈಸರಾಯಿ ಹಾರ್ಡಿಂಜ ಪ್ರಭುಗಳವರ ಮಗ ಲೆಪ್ಟನೆಂಟ ಹಾರ್ಡಿಂಜರವರು ರಣರಂಗದಲ್ಲಿ ಪಡೆದ ಘಾಯದಿಂದ ಗುಣವಾಗದೆ ಆಸ್ಪತ್ರೆಯಲ್ಲಿ ಮೃತರಾದುದರ ಶೋಕವನ್ನು ತೋರ್ಪಡಿಸುವ ತಂತೀಯು ಇಲ್ಲಿಯ ಮುನ್ಸಿಪಾಲಿಟಿ ಚೇಯರ್‌ಮೇನರಿಂದ ವೈಸರಾಯ ಪ್ರಭುಗಳವರಿಗೆ ಕಳುಹಿಸೋಣಾಗಿರುವದು "ವೈಸರಾಯ ಪ್ರಭುಗಳವರ ಈ ದುಃಖದಲ್ಲಿ ನೀವು ತೋರ್ಪಡಿಸಿದ ಸಹಾನುಭೂತಾವಕ್ಕಾಗಿ ವೈಸರಾಯ ಪ್ರಭುಗಳವರು ಉಪಕಾರ ಸ್ಮರಣೆ ಮಾಡುತ್ತಾರೆ"ಂಬ ಉತ್ತರವು ಮುನ್ಸಿಪಾಲ್ ಚೇಯರ್‌ಮೇನರವರಿಗೆ ಬಂದಿರುವದು

ಇಲ್ಲಿಯ ಕಸಬಾ ಗ್ರಾಮ ಮುನ್ಸೀಫ್ [illegible] ಮುಂದಕ್ಕೆ ರಾ. ಬೋಳಾರ್ [illegible] ರಾವ್, ಮಿ ಕುದ್ರೋಳಿ [illegible] ಜೋಸೆಫ್ [illegible] ಮಾತ್ರ [illegible] ದೊರೆಗಳವರು [illegible].
~~~~~

ಹಂದಿಗಳಿರುವ ಪ್ರಾಂತ್ಯದ ವಾಯುಖಾನೆಗಳಿಗೆ ಮುನ್ಸಿಪಾಲ್ ತೋಟಿಗಳು ಬರುವದಿಲ್ಲವಾದುದರಿಂದ ಈ ಪ್ರಾಂತ್ಯಗಳ ವಾಯುಖಾನೆಗಳು ಬಹಳ ಮಲಿನ ಸ್ಥಿತಿಯಲ್ಲಿರುವುದೆಂತ ಒಬ್ಬ ಮಾನ್ಯ ಪಟ್ಟಣಿಗರು ತಿಳಿಸುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯಕ್ಕೆ ನಿಗಾ ಕೊಡಬೇಕಾಗಿ ಅಪೇಕ್ಷಿಸುತ್ತೇವೆ

ಡಿಸ್ಟ್ರಿಕ್ಟ್ ಕಲೆಕ್ಟರ ಆಪೀಸು:—ಮಂಗಳೂರು ಡಿವಿಜನಲ್ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕ ಮ। ರಾ। ಎ ತಿಮ್ಮಪ್ಪ ಪೂಂಜರವರು ಕರಸ್ಪೋಂಡೆಂಟ ಸೆಕ್ಷನಿನ ೩ನೇ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು ಕರಸ್ಪೊಂಡೆಂಟ್ ಸೆಕ್ಷನಿನ ೩ನೇ ಕ್ಲಾರ್ಕ ಮ। ಆರ್. ಎಲ್ ನದರೆತರು ಒಂದು ತಿಂಗಳ ಪ್ರಿವಿಲೆಜ್ ರಜೆ ತಕ್ಕೊಂಡಿರುವರು.

ಈ ಕೆಳಗೆ ಹೆಸರ ಹೇಳಿದವರು ಎಡಿಸನಲ್ ಟೆಂಪರರಿ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ರಾ ಎಮ್, ಅಣ್ಣಪ್ಪ ಕಾಮತ್ IIನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟ ಉಡ್ಪಿ ತಾಲೂಕಿನಲ್ಲಿಯೂ ರಾ ಕೇಶವ ಕುಡ್ವರು ಕಾಸರಗೋಡಿನಲ್ಲಿಯೂ ರಾ। ಎಸ್ ಮು ಕೃಷ್ಣನವರು ಮಂಗಳೂರು ತಾಲೂಕಿನಲ್ಲಿಯೂ ಕೆಲಸ ನೋಡಬೇಕಾಗುವದು

ದಕ್ಷಿಣ ಇಂಡಿಯಾ ರೈಲ್ವೇ ಕಂಪೆನಿಯವರಿಂದ ವರ್ಜಿಸಲ್ಪಟ್ಟ ಸ್ಥಳಗಳ ಕೆಲಸ ಸಂಬಂಧ ಲೆಂಡ್‌ರಿಕೊರ್ಡ್ಸ ತಹಸೀಲದಾರ ಆಫೀಸಿನ ಆಕ್ಟಿಂಗ್ ಕ್ಲಾರ್ಕರಾಗಿರುವ ರಾ। ಎಸ್ ಗೋಪಾಲರಾಯರು ಟೆಂಪರರಿ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ಇವರು ಕೂಡಲೇ ಹೊಸದಾಗಿ ಏರ್ಪಡಿಸಿದ ರೆವಿನ್ಯೂ ಇನ್ಸ್‌ಪೆಕ್ಟರ ಕೆಲಸ ನೋಡಬೇಕಾಗುವದು. ಆಕ್ಟಿಂಗ್ I ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರ ರಾ। ಎ ಶ್ರೀನಿವಾಸ ರಾಮ್ಯನುಜೋಗರು ಈ ಸ್ಥಳಗಳ ಬಗ್ಗೆ ಸ್ಪೆಷ್ಯಲ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ಕೆಲಸ ನೋಡಬೇಕಾಗಿರುವದು

ಜಿಲ್ಲಾ ಕಲೆಕ್ಟರ ದೊರೆಗಳವರ ಜನವರಿ ತಾ ೯ ವರೆಗೆ, ತಾ ೧೦ ಕಾವು, ತಾ ೧೧ ಸುಳ್ಯ, ತಾ ೧೨-೧೫ ಸುಳ್ಯ, ತಾ ೧೬ ಕಾವು, ತಾ ೧೭-೨೩ ಪುತ್ತೂರು, ತಾ ೨೪-೨೫ ಮಂಗಳೂರು ತಾ ೨೬ ೩೦ ಬೆಳ್ತಂಗಡಿ, ಈ ಗಂತಿ ಸರ್ಕೀಟು ನಿಳಸಿ ತಾ ೩೧ಕ್ಕೆ ಮಂಗಳೂರಿಗೆ ಹಿಂತಿರಳುವರು

ಗಣಪತಿ ಸೆಕೆಂಡರಿ ಶಾಲೆಯ ನವೀನ ಕಟ್ಟೋಣದ ಪ್ರವೇಶ.

ಮೊನ್ನೆ ಶನಿವಾರ ದಿನ ಸಾಯಂಕಾಲ ೬ ಘಂಟೆಯ ಸಮಯಕ್ಕೆ ಈ ಸರ್ಕಲಿನ ಶಾಲಾ ಇನ್ಸ್‌ಪೆಕ್ಟರರಾದ ಮ। ಪೂಜಾರ್ ದೊರೆಗಳವರು ಗಣಪತಿ ಸೆಕೆಂಡರಿ ಶಾಲೆಗೆ ಕಟ್ಟಿಸಿದ ಹೊಸ ಕಟ್ಟೋಣದ ಬಾಗಿಲು ತೆರೆದರು ಇನ್ಸ್‌ಪೆಕ್ಟರರು ಬಂದೊಡನೆಯೇ ಶಾಲೆಯ ಮೆನೇಜಿಂಗ್ ಬೋರ್ಡ ಮೆಂಬರರು ಅವರಿಗೆ ಸ್ವಾಗತವನ್ನಿತ್ತು ಕಟ್ಟೋಣದ ಸಮೀಪಕ್ಕೆ ಕರದುಕೊಂಡು ಹೋದರು ಈ ಊರಿನ ಮಹನೀಯರೆಲ್ಲರೂ ಮಾತ್ರವಲ್ಲದೆ ಪುತ್ತೂರು, ಬಂಟವಾಳ, ಉಡುಪಿ ಕಾಸರಗೋಡ, ಮುಂತಾದ ಸ್ಥಳಗಳಲ್ಲಿರುವ ಹಿತೈಷಿಗಳು ಕೂಡ ನೆರೆದಿದ್ದರು ಕಲ್ಲಿಕೋಟೆ ಉಟಾಕಮಂಡ್ ಮುಂತಾದ ಸ್ಥಳಗಳಲ್ಲಿರುವವರು ತಾವು ಸ್ವತ ಬರಲು ಅನಾನುಕೂಲವಾದುದರಿಂದ ತಮ್ಮ ಹಿತೋಕ್ತಿಗಳನ್ನು ತಂತಿಯದ್ವಾರ ತಿಳುಹಿಸಿದ್ದರು. ೬ ಗಂಟೆಯಾದೊಡನೆಯೇ ಮೆನೇಜಿಂಗ್ ಬೋರ್ಡಿನ ಅಧ್ಯಕ್ಷರಾದ ಮ। ರಾ। ಸುಜೀರ ರಘುನಾಥಯ್ಯನವರು ಶಾಲೆಯ ಪೂರ್ವ ಚರಿತ್ರೆಯನ್ನ ಸಂಕ್ಷೇಪವಾಗಿ ಸೂಚಿಸಿ, ಇನ್ಸ್‌ಪೆಕ್ಟರರ ಕೈಗೆ ಬೆಳ್ಳಿಯ ಬೀಗದ ಕೈಯನ್ನು ಕೊಟ್ಟು ಬಾಗಿಲ ತೆರೆಯಲು ವಿಜ್ಞಾಪಿಸಲು ಆ ಮಹನೀಯರು ಮೆಟ್ಟಿಲಗಳನ್ನೇರಿ ಬಾಗಲನ್ನು ತೆರೆದು ಗಣಪತಿ ಸೆಕಂಡರಿ ಶಾಲೆಯ ಈ ಹೊಸ ಕಟ್ಟೋಣವು ಇಂದಿಗೆ ತೆರೆಯಲ್ಪಟ್ಟಿದೆ ಎಂದು ಹೇಳಿ ಒಳಗಡೆ ಅವರಿಗೋಸ್ಕರ ಸಿದ್ಧಪಡಿಸಿದ್ದ ಉಚ್ಚಸ್ಥಾನವನ್ನು ಸ್ವೀಕರಿಸಿದರು. ಕೂಡಲೇ ಅದು ತನಕವೂ ಹೊರಗಿದ್ದ ಮಹನೀಯರೂ, ಸ್ತ್ರೀಯರೂ ಒಳಗೆ ಹೋಗಿ ಆಸನವನ್ನಲಂಕರಿಸಿದರು. ಆಗ ಶಾಲಾ ಬಾಲರು ಗಣಪತಿಯನ್ನೂ, ಸರಸ್ವತಿಯನ್ನೂ ಇಂಪಾದ ಹಾಡುಗಳಿಂದ ಸ್ತುತಿಸಿದರು. ಅದರ ಹಿಂದೆಯೇ ಇದೇ ಶಾಲೆಯಲ್ಲಿ ಕಲಿತುಕೊಂಡವರಲ್ಲೊಬ್ಬನು ಇಂಗ್ಲಿಷ್ ಕವಿತ್ವದಲ್ಲಿ ಸರಸ್ವತೀ ಮಾತೆಯನ್ನು ಕೊಂಡಾಡಿದನು. ಇದು ತೀರಿದೊಡನೆಯೇ, ಶಾಲಾ ಬಾಲರು ಒಂದು ಚಿಕ್ಕ ಇಂಗ್ಲಿಷ್ ನಾಟಕವನ್ನು ಅಭಿನಯಿಸಿದರು.

ಆ ವೇಳೆ ಮ. ರಾ. ಮುಕ್ಕುಡ ರಾಮರಾಯರು ರೂ. ೧೧೧--೦—೦ನ್ನು ವಿದ್ಯಾರ್ಥಿ ವೇತನಕ್ಕೆ ಮೂಲ ಧನವಾಗಿ ಅಧ್ಯಕ್ಷರ ಕೈಗೆ ಕೊಟ್ಟರು ಆಗ ಇನ್ಸ್‌ಪೆಕ್ಟರರು ಎದ್ದು ನಿಂತು ಒಂದು ಚಿಕ್ಕ ಭಾಷಣವನ್ನು ಮಾಡಿದರು. ದೊಡ್ಡ ದೊಡ್ಡ ಸರಕಾರಿ ಹುದ್ದೆಗಳನ್ನ ಪಡೆದು ಈಗ ನಿವೃತ್ತರಾದವರೂ ಮಾನ್ಯರೂ ಸಭ್ಯರೂ ಆದ ಗೃಹಸ್ಥರು ತಮಗೆ ದೊರೆಯುವ ಅಲ್ಪಸ್ವಲ್ಪ ವಿರಾಮಕಾಲವನ್ನು ಈ ಶಾಲೆಯ ಅಭಿವೃದ್ಧಿಗೋಸ್ಕರ ವಿನಿಯೋಗಿಸಿರುವುದು ನೋಡಿದರೆ ಕೇವಲ ಆಶ್ಚರ್ಯಕರವೂ ಶ್ಲಾಘನೀಯವೂ ಆಗಿದೆ ಎಂತಲೂ ಸಾಮಾನುಗಳನ್ನು ತುಂಬಿಸುವ ಕೊಟ್ಟಿಗೆಯಂತಿದ್ದ ಶಾಲೆಯಲ್ಲಿ ಉಪಾಧ್ಯಾಯರುಗಳು ತೋರಿಸಿರುವ ಪ್ರಸ್ತಿಯೂ ಸ್ವಾರ್ಥ ತ್ಯಾಗವೂ ಪ್ರಶಂಸನೀಯವಾಗಿದೆಯೆಂತಲೂ, ಈಗಿನ ಕಟ್ಟೋಣವು ಇವರು ಕೈಗೊಂಡಿರುವ ಹಿತಕಾರ್ಯವನ್ನು ಸರಾಗವಾಗಿ ಸಾಗಿಸುವರೆ ತುಂಬ ಅನುಕೂಲವಾಗಿರುವುದೆಂತಲೂ ಅವರ ಭಾಷಣದ ಮಥಿತಾರ್ಥವಾಗಿತ್ತು. ಇದಾದ ಕೂಡಲೇ ಮೆನೇಜಿಂಗ್ ಬೋರ್ಡಿನ ಕಾರ್ಯದರ್ಶಿಗಳಾದ ಮ। ರಾ। ಗೋಳ್ಳಿ ಕೃಷ್ಣರಾಯರು ಆ ದಿವಸದ ಅಧ್ಯಕ್ಷರಿಗೆ ಧನ್ಯವಾದವನ್ನು ಕೊಟ್ಟರು ಆ ವೇಳೆ ನೆಶನಲ್ ಎಂಥೆಮ್ ಪಾಡಿದೊಡನೆ ಸಭೆಯು ಮುಕ್ತಾಯವಾಯಿತು ನೆರೆದಿದ್ದವರು ಜೋರ್ಜ ಪಂಚಮ ಭೂಮಾನಿಗೆ ಮೂರಾವರ್ತಿ ಧನ್ಯವಾದಗಳನ್ನು ಕೊಟ್ಟರು

ಆ ತರುವಾಯ ಇನ್ಸ್‌ಪೆಕ್ಟರರವರು ಎಲ್ಲಾ ಕ್ಲಾಸಿನ ಕೋಣೆಗಳನ್ನು ನೋಡಿ ಬಹಳ ಆನಂದಪಟ್ಟರು.

~~~~~

ಪುತ್ತೂರು ತಿದ್ದುಪಡಿ —ಜನವರಿ ೮ನೇ ತಾರೀಕಿನ ಪತ್ರಿಕೆಯಲ್ಲಿ ಜನವರಿ ೨೫ರಿಂದ ೩೦ರ ವರೆಗೆ ಬಂಟ್ವಾಳ, ಫೆಬ್ರುವರಿ ತಾ ೬ರಿಂದ ೧೨ರ ವರೆಗೆ ಮುಲ್ಕಿ ತಾ ೧೬ರಿಂದ ೨೭ರ ವರೆಗೆ ಒಡಪ್ಪೆ, ಜನವರಿ ತಾ ೧೫ರಿಂದ ೧೯ ಸರ್ಕೀಟ್ಸ ಎಂತಲೂ ಕಟೀಲು ಎಂಬದರ ಬದಲಿಗೆ ಅಪೀಲು ಎಂತಲೂ ಇಷ್ಟು ಮಾತ್ರವಲ್ಲದೆ ಗ್ರಾಮದ ಬಿಜಾರನ್ನು ಎಂಬದರ ಬದಲಿಗೆ "ಬೀಜದ ಸಸ್ಯ" "ನೆಟ್ಟು" ಬಿಡಾರಿ ಎಂಬದರ ಬದಲಿಗೆ ಬಿಟ್ಟು ಬಿಡಾರ ಎಂತಲೂ ಓದತಕ್ಕದ್ದು

ಇಲ್ಲಿಯ ಸ್ಟೇಶನ್ ಸಬ್‌ಮೆಜಿಸ್ಟ್ರೇಟರಾದ ಮ। ರಾ। ರಾ। ಟಿ ಭವಾನಿಶಂಕರರಾಯರು ರಜೆಯ ಮೇಲೆ ಹೋದದರಿಂದ ಮ। ರಾ। ರಾ। ವಿ ವೆಂಕಟರಾಯರವರು ತಾ ೧೦ರಲ್ಲಿ ಕೆಲಸಕ್ಕೆ ಹಾಜರಾಗಿರುವರು

ಇದೇ ೧೯೧೫ನೇ ಇಸವಿ ಎಪ್ರಿಲ ತಾ ೧ರ ಆರಭ್ಯ ಮದ್ರಾಸ್ ಹೊರತು ಇಡೀ ಸಂಸ್ಥಾನದಲ್ಲಿ ಕೇವಲ ಮಾರಾಟ ಮಾಡುವರೆ ಲೈಸನ್ಸ್ ಹೊಂದಿದ ಅಂಗಡಿಗಳು ಅಲ್ಲದೆ ಬೇರೆ ಎಲ್ಲಾ ತರದ ಶರಾಬ ಮಾರಾಟ ಮಾಡುವ ಅಂಗಡಿಗಳು ತೆರೆಯಬೇಕಾದ ಸಮಯವು ಬೆಳಿಗ್ಗೆ ೯ ಘಂಟೆಯೆಂದು ಸರಕಾರದವರು ಪ್ರಕಟಿಸಿರುವರು

ಹೊಸ ರಸ್ತೆಗಳು ತೆರೆಯುವರೆ ಸರಕಾರದವರು ದ್ರವ್ಯ ಸಹಾಯ ಮಾಡಿರುವರಷ್ಟೆ. ಹೆಚ್ಚು ವ್ಯಾಪಾರ ವಹಿವಾಟಗಳು ತಲೆದೋರಿಯಾಗಿ ಪುತ್ತೂರಿಗೆ ಕೊಡುಹೋಗಿ ಮಾರುವ ಬೆಟ್ಟಂಪಾಡಿ, ಇರ್ದೆ, ಕಾಟುಕುಕ್ಕೆ, ಬಲನಾಡು, ಪುಣಚ, ಕೇಪು ಈ ಗ್ರಾಮಗಳ ಜನರಿಗೆ ಅನುಕೂಲವಾಗುವಂತೆ ಗಾಡಿ ರಸ್ತೆಯನ್ನು ತೆರದದ್ದಾದರೆ ಹೆಚ್ಚಿನ ಸಂಕಷ್ಟಗಳು ನಿವಾರಣೆ ಆದೀತು ಸದರಿ ಗ್ರಾಮಗಳ ಜನರಿಗೆ ವ್ಯಾಪಾರ ವಹಿವಾಟಕ್ಕೆ ಅನುಕೂಲವಾಗುವಂತೆ ಈಗ ಹಾಲಿ ಇರುವ ಮಡಿಕೇರಿ ರಸ್ತೆಯ ೩೫ನೇ ಮೈಲು ೩ನೇ ಫರ್ಲಂಗಿನ ಹಂಚ್ಯಾರ ಎಂಬಲ್ಲಿಂದ ಬಲಕಾಡ ಗ್ರಾಮದ ಬೆಳಿರಕಟ್ಟೆ ವರೆಗೆ ಈಗಲೆಂತೂ ಊರ ನಿವಾಸಿಕರು ಮಾಡಿದ ಗಾಡಿ ಚಲಾವಣೆ ಸಾದಾರ ರಸ್ತೆ ಇರುವದು. ಈ ರಸ್ತೆಯನ್ನು ಬೆಳಿರಕಟ್ಟೆಯಿಂದ ವಿಟ್ಲ ಕಸಬಾ ಗ್ರಾಮದ ಉಕ್ಕುಡ ಎಂಬಲ್ಲಿಗೆ ಮುಟ್ಟಿಸಿದರೆ ಗಾಡಿಗಳು ಕಾಸರಗೋಡಿಗೆ ವಿಟ್ಲ, ಮಂಜೇಶ್ವರ ಈ ಕಡೆಗೆ ಹೋಗಲಿಕ್ಕೆ ಪಾತಿಲೆಯು ಕಡಿಮೆ ಆದಂತಾಗುವದು ಇದಕ್ಕೆ ಬೋರ್ಡಿನವರು ತಕ್ಕ ನಿಗಾಕೊಡುವದುತ್ತಮ

~~~~~

ವಿಜ್ಞಾಪನೆ.

ಮೊಗೇಯರಥ ಶ್ರೀಜ್ಞಾನೋದಯ ಸಮಾಜದ ಮಂದಿರ ನಿರ್ಮಾಣ ಕಾರ್ಯವು ಪ್ರಾರಂಭವಾಗಿರುವದರಿಂದ ಈ ಬಗ್ಯೆ ಧನ ಸಹಾಯಕೊಡಲೊಪ್ಪಿದ ಪುಣ್ಯಾತ್ಮರೆಲ್ಲರೂ ತಮ್ಮ ವಾಗ್ದತ್ತವನ್ನು ಆದಷ್ಟು ಬ್ಯೇಗ ಪೂರೈಸಬೇಕಾಗಿಯೂ, ನಮ್ಮ ಹಿತಚಿಂತಕರೆಲ್ಲರೂ ಒಂದಿಷ್ಟು ಧನ ಸಹಾಯ ಮಾಡಿ ಈ ಕಾರ್ಯಸಾಧನೆಯ ಪುಣ್ಯಭಾಗಿಗಳಾಗಬೇಕಾಗಿಯೂ ಬೇಡುತ್ತೇವೆ

ಮುಂಬಾಯಿಯಲ್ಲಿರುವ ಉದಾರ ಜನರು ಈ ಬಗ್ಯೆ ಕೊಡುವ ದಾನವನ್ನು ಸ್ವೀಕರಿಸಿ, ನಮಗೆ ಕಳುಹಿಸಲು ಸಮಾಜದ ಉಪ ಖಜಾನ್ಜಿಯರಾದ ಯಚ್ ಸೋಮಯ್ಯ ಮಂದಣ್ಣಾಯರನ್ನು ಅಧಿಕಾರಗೊಳಿಸಿರುತ್ತೇವೆ

ಮಂಗಳೂರು
ತಾ. 5 — 1 — 1915.

ಬಿ. ಯಂ. ತಿಂಗಲಾಯ.
ಕಾರ್ಯದರ್ಶಿ.

~~~~~

ಜೀನಸು ಧಾರಣೆ. (ರೂಂ)

ಹೊಸ ಮಸ್ಕತಿ ಅಕ್ಕಿ	5— 2—0	5— 8—0
ಹೊಸ ಗಾಡಿ ರಾಶಿ ,,	4— 7—0	4— 9—0
ಹೊಸ ಗುಡ್ಡು ,,	4—12—0	5— 1—0
ಅವ್ವಲ್ ಬೆಳ್ತಿಗೆ ,,	5— 8—0	5—11—0
ಗುಡ್ಡು ಬೆಳ್ತಿಗೆ ,,	. . .	5— 3—0
ರಂಗೂನು ಬೆಳ್ತಿಗೆ ಗೋಣಿ ಗರ	. .	10— 0—0
ಗೋಧಿ ಗೋಣಿ ಗರ	13— 4—0	14— 4—0
ಹುರುಳಿ ಗೋಣಿ ಗರ ..	6—14—0	7— 0—0
ಕಡಲೆ ಗೋಣಿ ಗರ ..	10— 8—0	11— 0—0
ತೊಗರಿ ಗೋಣಿ ಗರ ...	10—12—0	12— 0—0
ತೊಗರಿ ಬೇಳೆ ಗೋಣಿ ಗರ.	12— 8—0	14— 0—0
ಉದ್ದು ಗೋಣಿ ಗರ ..	...	10— 8—0
ಊರು ಬೆಲ್ಲ ಖಂಡಿ ಗರ .	...	50— 0—0
ಉಪ್ಪು ಗೋಣಿ ಗರ	. . . . .	3— 9—0
ಕೊಬ್ರಿ ಖಂಡಿ ಗರ . .	80— 0—0	84—0 —0
ಕೊಬ್ರಿ ಹಿಂಡಿ ಖಂಡಿ ಗರ	20— 0—0	23— 0—0
ಎಳ್ಳಿಂಡಿ ಖಂಡಿ ಗರ	30— 0—0	36— 0—0
ಕೊಬ್ರಿ ಏಣ್ಣೆ ಮಣ ಗರ	6— 0—0	6— 2—0
ಎಳ್ಳೆಣ್ಣೆ ಮಣ ಗರ (ಕುರಾಸನ)	3—14—0	4— 0—0
ಚಿಮಣಿ ಎಣ್ಣೆ ಪೆಟ್ಟಿಗೆ ಗರ	. . . .	5— 0—0
ಮೋರಿಸ್ ಸಕ್ಕರೆ ಮಣ ಗರ	. . . .	4— 3—0
ಕಾಫಿ ಖಂಡಿ ಗರ	220—0—0.	225— 0—0
ಬೇಳೆಗೋಟು ಖಂಡಿ ಗರ.	110—0—0	115— 0—0
ಹೊಸ ಬೇಳೆಗೋಟು ಖಂಡಿ ಗರ	84— 0—0	88— 0—0
ಗೇರು ಬೀಜ ಮುಡಿ ಗರ	. . . . .	1— 2—0
ಕಬ್ಬಿಣ ಖಂಡಿ ಗರ.	42—0—0	44— 0—0
ತಾಂಬ್ರ ತಗಡುಮಣ ಗರ.	16— 8—0	16—10—0
ತಾಂಬ್ರ ಪಾತ್ರೆಗಳು ಮಣ ಗರ	. . . .	22— 0—0
ಚೀನಿ ಬೆಳ್ಳಿ ಕೇರು ಗರ.	. . . .	18—12—0
~~~~~

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಆಗಾಗಲೇ ಬರೆಯಲು ಅಗತ್ಯವಾದ

1915ನೇ ವರುಷದ ಪೋಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸೋದಾಗುವ ಪ್ರೊಸೆಸ್ ಫೀಸು, ಭತ್ತೆ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋದಾಗುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು ದಸ್ತಾವೇಜುಗಳನ್ನು ರಿಜಿಸ್ಟ್ರಿಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ವಿಲ್ನಾಮೆ, ಭಾಡಿಗೆ ಚೀಟು, ರಿಜಿಸ್ಟ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು ಕಕಗಳ ಮೊಕಾಬಿಲೆ ಪಟ್ಟಿ, ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು—ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ.

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ಗದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ನೋಟ್‌ಬುಕ್ ಬೈಂಡು—ಪೆನ್ಸಿಲ್ ಸಹಿತ ಇದಕ್ಕೆ ಪ್ರತಿಯೊಂದಕ್ಕೆ ಆ 8

ಸಣ್ಣ ಸ್ಯಾಜಿನ ಡೈರಿ ಕ್ರಯ ಪ್ರತಿ ಬಾ ಆಣೆ 4 ಮಾತ್ರ

ನಮ್ಮಲ್ಲಿ ತಯ್ಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೋಲ್ ಬೈಂಡು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ವ್ಯಾಪಾರಸ್ಥರಿಗೂ ರಖಂ ತಕ್ಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ

ಡೈರಿಗಳು ಸಿಕ್ಕುವ ವಿಳಾಸ— **ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು

ನಮ್ಮ ಡೈರಿಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರೆಯುವವು

ಮೆಸ್ಸರ್ಸ್ ಕೊಟ್ಟಿಕಾರ ಬ್ರದರ್ಸ್, ಉಡುಪಿ	... ವಿಟ್ಲ
ಪ್ರಭಾಕರ ಪ್ರೆಸ್, ,,	... ಕುಂಬಳೆ
ಸದಾನಂದ ಪ್ರೆಸ್, ,,	... ರು, ಕಾಸರಗೋಡು
ಬೆಳ್ಪುರೆ ನರಸಿಂಹ ಮಲ್ಯರು, ಪುತ್ತೂರು	... ಬಂಟ್ವಾಳ
	... ಕಾರ್ಕಳ

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎರಡು ಎರಡು ಮಂದಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ ಕಡಿಮೆ ಒಣ್ಣ, ಒಳಳೆ ... ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr Navaratna & Sons,
Kalbadevi Road BOMBAY

ಏಜಂಟರು —ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ ಮಂಗಳೂರು

ಯುಕಲಿಪ್ಟಸ್ ತೈಲ.

ಮಹಾ ಅಮೂಲ್ಯವಾದ ... ನನ್ನ ಹೆಂಡತಿಯವರು ಈ ರೀತಿ ಬರೆಯುವರು ತಮ್ಮಲ್ಲಿಯ ಅತ್ಯುತ್ತಮವಾದ ಯುಕಲಿಪ್ಟಸ್ ತೈಲವೆಂಬ ... ರೋಗನಿವಾರಕ ಔಷಧವನ್ನು ತರಿಸಿಕೊಂಡ ಹೆಂಗಸರು ಮಕ್ಕಳಾಗುವ ಕಾಲದಲ್ಲಿ ಆಗುವ ಕಠಿಣ ವಿಧದ ಹೊಟ್ಟೆನೋವಿಗೆ ಉಪಯೋಗಿಸಿದ್ದಲ್ಲಿ ಅದು ಅನೇಕ ಹೆಂಗಸರ ಹೊಟ್ಟೆನೋವನ್ನು ನಿಮಿಷಮಾತ್ರದಲ್ಲಿ ಗುಣಪಡಿಸಿರುತ್ತದೆ. ನನ್ನ ತಂಗಿಗೆ ಕೆಲವು ವರುಷಗಳಿಂದ ಇದ್ದ ಕಿವಿನೋವು ಇದರಿಂದ 5 ದಿವಸಗಳಲ್ಲಿ ಪೂರ್ಣ ಗುಣವಾಗಿರುತ್ತದೆ. ತೀರಾ ಬಡವರು ಕೂಡಾ ಕೊಡಕೂಡುವ ಈ ಅಲ್ಪ ಬೆಲೆಯ ತೈಲವು ಸಾವಿರಾರು ರೂಪಾಯಿಯ ಬೆಲೆಬಾಳತಕ್ಕಂಥಾದ್ದಾಗಿದೆ. ಜ್ವರಗಡ್ಡೆ, ಮಲೇರಿಯಾ, ಶೀತ, ವಾತ, ಸನ್ನಾಮ ... ಜ್ವರ, ಕೆಮ್ಮು, ದೊಡವರ ಬಿಳುಪು, ಮೇಹ ಮೊದಲಾದ ರೋಗಗಳಿಗೆ ಸಂಜೀವಿನಿಯೋಪಾದಿ ಇರುತ್ತದೆ. ಇದನ್ನು ಉಪಯೋಗಿಸಿದ ಮಕ್ಕಳಿಗೆ ಬಾಲಾರಿಷ್ಟ ರೋಗವು ನಿಜವಾಗಿ ಕೊಲೆಗೆ ಹೋಗುತ್ತದೆಂಬ ಸಂಗತಿ ನನ್ನ ಅನುಭವ ಸಿದ್ಧವಾಗಿರುತ್ತದೆ ಇತ್ಯಾದಿ, ಸರ್ವ ರೋಗಗಳಿಗೆ ದಿವ್ಯೌಷಧವಾದ ಈ ತೈಲದ ಕ್ರಯ ಔನ್ಸ್ ಸೀಸೆಗೆ 5 ಆಣೆ ವಿ ಪಿ ಚಾರ್ಜ ... ಸೀಸೆಗೆ ವಿ. ಪಿ. ಸಹಿತ ರೂ. 3 12ಆಣೆ. ಅನುಪಾನಪತ್ರ ಸೀಸೆಯೊಂದಿಗೆ.

ಸಚಿತ್ರ! ಮಾಸಪತ್ರಿಕೆ!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಈಗಿನ ಯುದ್ಧದ ವಿಶೇಷ ಸಂಗತಿಗಳೂ, ಯುದ್ಧದ ಚಿತ್ರಗಳೂ, ಹಾಸ್ಯ, ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳು, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ 1 ರೂಪಾಯಿ. ಮಾದರಿ ಸಂಚಿಕೆಗೆ 1 ಆಣೆ ಸ್ಟಾಂಪು ಕಳುಹಿಸಿರಿ.

ವಿಳಾಸ —ಮ್ಯಾನೇಜರ್ "ಚಾತುರ್ಯ"
ಬೆಂಗಳೂರು, ಸಿಟಿ.

ಇಕ್ರಿಪ್ಸ್ ಬಾಮ್

ವಾತ, ಸಂಧುವಾತ, ಪಕ್ಷವಾತ, ಶಿರೋಭಾರ, ಎದೆನೋವು, ಹಲ್ಲುನೋವು, ... ಕಜ್ಜಿ, ನಾಯಿಕಡಿತ, ಹುಳಮೇಯುವದು, ಆನೇಕಾಲು ಮೊದಲಾದ ರೋಗಗಳಿಗೆ ಮಾತ್ರವಲ್ಲದೆ ... ವಾಗಿ ಉಪಯೋಗಿಸಬಹುದಾದ ಈ ಬಾಮ್ ... ಕ್ರಯ ಕರಡಿಗೆ 1ಕ್ಕೆ 8 ಆಣೆ ವಿ. ಪಿ. ಚಾರ್ಜ ... ರೂ. 4—12—0.

ವಿಳಾಸ,— ಏಜಂಟರು,—
ದಿ ಇಕ್ರಿಪ್ಸ್ ಏಜನ್ಸಿ, ಸುಗಂಧವಿಲಾಸ,
ಕೊಡಿಯಾಲಬೈಲ್, ಮಂಗಳೂರು. ... ಮಂಗಳೂರು.

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಲಾಗ್ಯಾಯತಿನಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ನಾಚಕರಿಗೆ ಗೋಚರವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ.

ಕಾಫಿ ಪುಡಿಯು ರಾತ್ತಲು ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ

ಇತರ ಅನುಭವಗಳಿಗೆ ನಮ್ಮ ಮೆನೇಜರರ ಪ್ರೋಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

Piedade Pinto,

Manager.

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯ ಪುಸ್ತಕವು

ಜೀವಿತಕಾಲದ ವರೆಗೂ ನಿತ್ಯ ಸಂಗಾತಿಯನ್ನು ರೋಗಗಳು ಹತ್ತರ ಬಾರದೆ ಮಾಡಿಕೊಳ್ಳುವದು ನಮ್ಮ ಮೊಟ್ಟ ಮೊದಲ ಕರ್ತವ್ಯವು ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನು ಪುನಹ ಹೇಗೆ ಪಡೆಯುವದು ಎಂಬ ವಿಷಯಗಳಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ ಈ ಗ್ರಂಥವನ್ನು [illegible] ಕೊಂಡವರಿಗೆ ಕ್ರಯ [illegible] ಈ ಪುಸ್ತಕವು ಒಂಭತ್ತು [illegible] ಯಾಗುತ್ತದೆ.

= ಅಗತ್ಯದ ಕಾಮಧೇನು

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ. ಮದನಮಂಜರಿ ಮಾತ್ರೆಗಳು ರಕ್ತವನ್ನೂ [illegible] ವೀರ್ಯವನ್ನೂ ವೃದ್ಧಿ ಮಾಡುತ್ತದೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ [illegible] ಜೀರ್ಣಶಕ್ತಿಯನ್ನು ವೃದ್ಧಿ ಮಾಡಿ [illegible] ಮಾಡುವದು. ಆಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1—0—0.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191. ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಸೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬುದನ್ನು ನೀವು ಅರಿತಿರುವಿರೋ?

ಇನ್ಸೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

			ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	...	ರೂ.	13,329—0—0	22,549—0—0
,, (ವಿವಾಹ)	...	,,	25,670—0—0	38,933—0—0
ಒಟ್ಟು ಕೇಸುಗಳು	.	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	.	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	..	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	..	,,	10,000—0—0	50,000—0—0
(ಜನರಲ್) ರಕ್ಷಿತ ಧನ	..	,,	37,220—0—0	23,778—3—2
ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ.			ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.	

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕೆಂದರೆ—

1. ಅದು 1912ನೇ ಲ್ಯಾಪ್ ಎಶ್ಯುರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ. 3,00,000ಗಿಂತಲೂ ಹೆಚ್ಚಿಗೆ ಭಾಧ್ಯತೆಗಳನ್ನು ಕೊಟ್ಟಿದೆ. 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ 9. ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೊನಸ್ ಕೊಡುವುದು ಇವಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

"ಬಂಗಾಳಿ"—14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು. ಸುಮಾರು 3 ಲಕ್ಷ ಭಾಧ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟರುಗಳು ಬೇಕಾಗಿವೆ. ಎಲ್ಲಾ ವಿಧದ ಏಜಂನ್ಸಿ ಶರ್ತಗಳಿಗೆ—

ವಿಳಾಸ.— ಲಕ್ಷ್ಮಣ ರಾವ್ ಬ್ರದರ್ಸ್,

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು ಪ್ರೋವಿನ್ಸ್, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಕನ್ನಡ ಲಿಪಿಯ ಪುಸ್ತಕಗಳು.

ಉಡುಪಿ ಶ್ರೀಕೃಷ್ಣ ಚರಿತ್ರೆ

ದಂಡಾಕಾರ, ಮೂರು ಸಂಧಿಗಳಿಂದ ಕೂಡಿರುವದು. ಪ್ರಥಮ ಸಂಧಿಯಲ್ಲಿ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠೆ ಮಾಡಿದ ವಿಷಯವೂ, ಎಂಟು ಜನ ಯತಿಗಳ ವಿಷಯವೂ, ಪ್ರತಿನಿತ್ಯ ನಡೆಯತಕ್ಕ ವಿಧಾನಗಳೂ, ಎರಡನೆಯ ಸಂಧಿಯಲ್ಲಿ ಮಕರಸಂಕ್ರಾಂತಿ ಉತ್ಸವ ವರ್ಣನೆಯೂ, ಮೂರನೇ ಸಂಧಿಯಲ್ಲಿ ವರುಷದ ಇತರ ದಿವಸಗಳಲ್ಲಿ ನಡೆಯತಕ್ಕ ಉತ್ಸವಾದಿಗಳೂ ವರ್ಣಿತವಾಗಿವೆ. ಬೆಲೆ 3 ಆಣೆ.

ಋ. ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ. ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಋಗ್ ಕಾಣ್ವ ಸಂಧ್ಯಾವಂದನ (ಮಂತ್ರಾರ್ಥದವರಿಗೆ) 3 ಆಣೆ; ಯಜುರ್ವೇದ ಸಂಧ್ಯಾವಂದನ (ಮಂತ್ರಾರ್ಥದವರಿಗೆ) 2 ಆಣೆ; ಋ. ಬ್ರಹ್ಮಯಜ್ಞ ವೈಶ್ವದೇವ ಔಪಾಸನ 3 ಆಣೆ, ಪ್ರಾತರಾಹ್ನಿಕ ಪದ್ಧತಿ 3 ಆಣೆ, ದೇವಪೂಜಾ ಪದ್ಧತಿ 3 ಆಣೆ; ವಾಯುಸ್ತುತಿ 2 ಆಣೆ, ದ್ವಾದಶಸ್ತೋತ್ರ 2 ಆಣೆ, ವಿಷ್ಣುಸಹಸ್ರನಾಮ ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ, ವಿ. ಸಹಸ್ರ ಕೃಷ್ಣಾಷ್ಟೋತ್ತರನಾಮಾವಳಿ 0-2-6, ಅಭಿಷೇಕ ಸೂಕ್ತಗಳು 0-2-0, ಶ್ರೀಸೂಕ್ತ ಪುರುಷಸೂಕ್ತ 0-1-0; ಸುಂದರ ಕಾಂಡ ಕಥಾಸಾರಸಂಗ್ರಹ ಪದ್ಯರೂಪ 0-2-0, ಗಜೇಂದ್ರ ಮೋಕ್ಷ 0-1-6; ಗೋಪಿಕಾಗೀತೆ ಪದ್ಯರೂಪ 0-1-0; ಪಾಂಡವಗೀತೆ ಪದ್ಯರೂಪ 0-1-6; ಅಣುಭಾಷ್ಯ ಪದ್ಯರೂಪ 0-0-9; ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0-2-0; ಪುರಂದರದಾಸರ ಕೀರ್ತನೆಗಳು 0-6-0; ಉದಯರಾಗ 0-4-0; ಹರಿಭಕ್ತಿಸಾರ 0-1-0; ಸ್ವಪ್ನಪದ ಮಧ್ವನಾಮ 0-1-6, ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ

ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,

ಉಡುಪಿ, ದ. ಕ.

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ. 1—12—0.

ಲಾಯರ್ ಯಂ. ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ.

ಅಚ್ಚಾಗುತ್ತಲಿದೆ! ಪುರಾತನ ಸಂಗ್ರಹ!! ನವೀನ ಗ್ರಂಥ!!!

ಭೂತಾಳಪಾಂಡ್ಯರಾಯನ

ಸಂಪೂರ್ಣ ಕಟ್ಟುಗಳು ಇರುವ

ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ.

ಈ ಪುಸ್ತಕದಲ್ಲಿ ಪರಶುರಾಮಾವತಾರದ ಕಥೆಯೂ, ಭರತಖಂಡದ ಕ್ಷತ್ರಿಯರಾದರ ವಂಶಾವಳಿಯೂ, ಧರ್ಮರಾಯನ ನಂತರ ಆಳಿದ ಅರಸರ ಹೆಸರುಗಳೂ, ವರ್ಷಗಳೂ, ಪರಶುರಾಮ ಸೃಷ್ಟಿಯ ಭೂಮಿ ವಿವರಗಳೂ, ಅದಕ್ಕೆ ಸೇರಿದ ೭೭ ದ್ವೀಪಗಳೂ, ಕನ್ನಡಾ ಜಿಲ್ಲೆಯ ಪೂರ್ವ ರಾಜರ ಸಂತತಿಯೂ, ಆಳಿದ ವರ್ಷಗಳೂ, ಕನಕವರ್ಮ ವೀರವರ್ಮ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಬಂಟರ ಯಾ ನಾಡವರ ಮತಸ್ಥಾಪನೆ ಕಥೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಷವಾದ ಕಾರಣಗಳೂ, ಭೂತಾಳ ಪಾಂಡ್ಯನ ಪೂರ್ವಜರ ಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ, ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ, ಅಳಿಯಕಟ್ಟು ಆದ ಕಾರಣವೂ, ಅದರ ೧೬ ಕಟ್ಟು ೧೬ ಕಟ್ಟಳೆಗಳ ಪೂರ್ವಾಭಿಪ್ರಾಯವೂ, ಭೂತಾಳಪಾಂಡ್ಯನ ವಿವಾಹವೂ, ಆತನು ಮಕ್ಕಳಿಗೆ ಅಸ್ವತವಾಗಿ ಕೊಟ್ಟ ಸ್ಥಳಮಾನಗಳೂ, ಅವನ ಅಳಿಯ ವಿದ್ಯಾಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿ ಕೊಟ್ಟ ಸ್ಥಳಮಾನಗಳೂ, ಚುಂಗಡಿ ಅರಸರ ಮಾನಮರ್ಯಾದೆಗಳ ವಿಷಯ ಬರಸಿದ ಶಾಸನವೂ, ಅಳಿಯಕಟ್ಟಿಗೆ ಸೇರಿದ ೧೬ ಜಾತಿಗಳೂ, ಮತ್ತು ಅವರ ಗೋತ್ರಗಳು ತೆಗೆದು ಹಾಕಿದ ೭೦, ಬಳಿಗಳೂ, ವೀರಭೂತ ಪಾಂಡ್ಯನ ಚರಿತ್ರೆಯೂ, ಚೌಟ ಬಂಗರ ಮೊದಲಾದ ಸಂಸ್ಥಾನಾಧಿಪರ ಸೀಮೆ, ಮಾಗಣೆ, ಮಾನಮರ್ಯಾದೆಗಳೂ, ಜೈನ, ಬಂಟರ ೭೦ ಜನನ, (ಕೀರ್ತಿಶಾಲಿಗಳೂ) ಸೇರಿದ ೧೬ ಜಾತಿಗಳೂ, ಸ್ಥಾನಮಾನಗಳೂ, ಹಳೆ ಮಂದಿ ರಾಜರುಗಳ ಚರಿತ್ರೆಯೂ, ಇಕ್ಕೇರಿ, ಆನೆಗುಂದಿ ವಿಜಯನಗರದ ರಾಜರುಗಳ ಚರಿತ್ರೆಯೂ, ಆ ಕಾಲದ ಕಂದಾಯ ಕ್ರಮಗಳೂ ಶಿಲಾ ಶಾಸನ, ತಾಮ್ರ ಶಾಸನಗಳ ಯಥಾ ನಕಲುಗಳೂ, ಅದರ ಅಭಿಪ್ರಾಯಗಳೂ, ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳೂ, ಅವುಗಳ ಉತ್ಸವಾದಿ ವಿವರಗಳೂ, ಮೊಗಲ್ ರಾಜರ ವಂಶಾವಳಿಯೂ, ಭರತಖಂಡಕ್ಕೆ ಅನ್ಯ ರಾಜರ ಪ್ರವೇಶ ಕಾಲಗಳೂ, ಶ್ರೀಮಾನ್ ಗೇಜಾರ್ಜ ಸಾರ್ವಭೌಮರ ಚರಿತ್ರೆಯೂ ವಗೈರೆ ಅನೇಕ ವಿಷಯವಾದ ಪೂರ್ವ ಪುರಾಣ ಅನುಭವಗಳಿಂದ ಧರಿತವಾದ ಪುರಾತನ ಸಂಗ್ರಹಗಳು ಇದರಲ್ಲಿ ಅಡಗಿರುತ್ತವೆ. ಅಳಿಯ ಸಂತಾನದವರಿಗೂ, ತಾಲೂಕು ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ಓದು ಬರಹ ಬಲ್ಲ ಸರ್ವರೂ ನೋಡತಕ್ಕ ಪುಸ್ತಕ.

ಅಪೇಕ್ಷಕರು ಆದಷ್ಟು ಬೇಗನೆ ಪತ್ರ ಬರೆದು ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳಬಹುದು. ಅಂಥವರಿಗೆ ಪುಸ್ತಕ ಒಂದರಲ್ಲಿ ೨ ಆಣೆ ಕಡಿಮೆ ದರದಲ್ಲಿ ಕೊಡಲಾಗುವುದು. ಪುಸ್ತಕವು ತಯಾರಾಗುತ್ತಾ ಬರುತ್ತದೆ. ಪುಸ್ತಕದ ಬೆಲೆ ಸಿದ್ಧವಾದ ಕೂಡಲೇ ತಿಳಿಸಲಾಗುವುದು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ವಿಳಾಸ:—

"ಕುಶಲಮಂದಿರ"
ಶ್ರೀ ರಾಜರಾಜೇಶ್ವರಿ ದೇವಸ್ಥಾನ,
ಪೊಳಲಿ

ಎನ್. ಎ. ಶೀನಪ್ಪ ಹೆಗಡೆ
ಅಮ್ಮುಂಜೆ ಗುತ್ತು
ಪೋಸ್ಟು ಗುರುಪುರ, ದ. ಕನ್ನಡ.

☞ ಇದನ್ನು ದಯುವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯರವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಮೇಹರಣ ತೈಲ:—ಇದನ್ನು ಬಿಳಿ ಬಟ್ಟೆಯಲ್ಲಿ ಹಚ್ಚಿ ರಣಗಳ ಮೇಲೆ ಹಾಕಿದರೆ, ಮೇಹದಿಂದುಂಟಾಗುವ ಕಂಠಮಾಲೆ, ತೊಡಬಾಳೆ, ಗೆಡ್ಡೆಗಳು, ಕುಸುಮ ರೋಗ ವ್ರಣಗಳು, ಆಸನ ಪವುತ್ರಗಳು, ಲಿಂಗವ್ರಣ, ಯೋನಿ ವ್ರಣ, ಮುಂತಾದ ಸಕಲ ವ್ರಣಗಳು ಮತ್ತು ಘಾಯಗಳು ಅವುಗಳಲ್ಲಿ ಹುಟ್ಟುವ ಹುಳವನ್ನು ಕೊಂದು ಹುಣ್ಣನ್ನು ಆರಿಸಿ ಚರ್ಮದ ಮೇಲಿನ ಹುರುಕನ್ನು ಸರಿಮಾಡಿ ಚೆನ್ನಾಗಿ ಬೆಳೆಯುವಂತೆ ಮಾಡುವದು ಸೀಸೆ 1ಕ್ಕೆ 8 ಆಣೆ ವಿ. ಪಿ. ಚಾರ್ಜು 3 ಸೀಸೆವರಿಗೂ 5 ಆಣೆ.

ಮಧುರಧ್ವನಿಮಾತ್ರೆ:—ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ, ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿ ಕೊಡುವದು ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು. ಹಾಡಿದರೆ ಕಿವಿಗಿಂಪಾಗುವಂತೆ ಧ್ವನಿಯು ಹೊರಡುವದು ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 6 ಸೀಸೆವರಿಗೂ 5 ಆಣೆ.

ಸ್ನಾನಕ್ಕೆ ಸುವಾಸನಾ ಪುಡಿ:—ಸುವಾಸನೆಯುಳ್ಳ ಈ ಪುಡಿಯನ್ನು ಸ್ನಾನ ಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮುದುಕರೂ, ಸಣ್ಣ ಮಕ್ಕಳೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ ಬೆವರಿನ ದುರ್ಗಂಧವನ್ನೂ ಹೋಗಲಾಡಿಸಿ, ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪು ಹಚ್ಚಿ, ತಂಪನ್ನುಂಟುಮಾಡುವದು. ಅದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ ಪೆಟ್ಟಿಗೆ 1ಕ್ಕೆ 8 ಆಣೆ ವಿ. ಪಿ. ಚಾರ್ಜು 2 ಪೆಟ್ಟಿಗೆಗಳವರಿಗೂ 5 ಆಣೆ.

ಸಂಜೀವನ ಮಾತ್ರೆಗಳು:—ಮಕ್ಕಳಿಗೆ ಜ್ವರ, ನರಗಳ ಸೆಳೆತ ನಿದ್ರೆಬಾರದಿರುವದು, ಅಧಿಕವಾಗಿ ಹೊಸುವದು, ಛಳಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣ ಸಂಬಂಧವಾದ ರೋಗಗಳಿಗೆ ಒಳ್ಳೇ ಮದ್ದಾಗಿರುವದು ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ 1ಕ್ಕೆ 10 ಆಣೆ. ವಿ. ಪಿ. ಚಾರ್ಜು 5 ಆಣೆ ಪ್ರತ್ಯೇಕವು

ಮಹಾಗೋರೋಜನಮಾತ್ರೆ:—ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮ ಶೀತಜ್ವರ, ಎರಡರ ಜ್ವರ, ಪ್ರತಿದಿನಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು. ಮಲೆನಾಡು ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಸೆಳೆತ, ನಿದ್ರೆ ಬಾರದಿರೋಣ, ಹೆಚ್ಚಾಗಿ ಹೊಸುವದು ಛಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ ಇವುಗಳನ್ನು ಪರಿಹಾರಮಾಡುವದು. ಸೀಸೆ 1ಕ್ಕೆ 10 ಆಣೆ. ವಿ. ಪಿ. 9 ಸೀಸೆ ವರಿಗೂ 5 ಆಣೆ.

ಚರ್ಮರೋಗಕ್ಕೆ ಔಷಧಿ:—ಮಕ್ಕಳಿಗೆ ಬರುವ ಕರಪಾನು, ತುರಿ, ಹುರುಕಾಲು, ಗಜ್ಜಿ ಮತ್ತು ದೊಡ್ಡವರಿಗೆ ಗಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಡು, ತಲೆಪಕ್ಕೆಯೂ ಇತರ ಕಡೆಗಳಲ್ಲಿಯೂ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳಿಗೆ ಹೊರಗೆ ಹಚ್ಚುವದರಿಂದಲೇ ಬಹು ಶೀಘ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ 1ಕ್ಕೆ 8 ಆಣೆ. ವಿ. ಪಿ. ಚಾರ್ಜು 2 ಸೀಸೆಯವರೆಗೂ 5 ಆಣೆ

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBAROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯ,
ಆಯುರ್ವೇದ ಔಷಧಶಾಲೆ,
ಶ್ರೀ ವಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು

ತ್ವರೆಮಾಡಿರಿ!

1915ನೇ ಇಸವಿಯ ಸುಂದರವಾದ ಕೆಲೆಂಡರುಗಳು.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಚಾರ್ಜು ಸೇರಿ ೧ಕ್ಕೆ ಆಣೆ ೩; ೬ಕ್ಕೆ ಆಣೆ ೧೩; ೧೨ಕ್ಕೆ ರೂ. ೧--೧೦--೦. ಇವು ಜನವರಿ ಆಖೈರ ವರೆಗೆ ಮಾತ್ರ ಸಿಕ್ಕುವವು ನಂತರ ಖರ್ಚಾಗುವವು. ಆದುದರಿಂದ ತ್ವರೆಮಾಡಿರಿ!

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷದವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿ ದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ. 5-4-0 ವಿ. ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವವರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್‌ಮಾರ್ಕ್. 0—6—0. 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮುನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0. ಡಜನ್ 1ಕ್ಕೆ 1—2—0 ವಿ. ಪಿ. ಪ್ರತ್ಯೇಕ

ಮೋಹಿನಿ ತೈಲ

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳಿಯುವವು.

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ. 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫ್ರೋರ್ಮರ್:— ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷದ

ಡಬ್ಲ್ಯು ಮೆಕ್ಸವೆಲ್, ಮೈಸಾಡ:— ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್ ಆರ್ ಗಂಗೋಲಿ:— ಅಮೃತಾಂಜನ ವಾತ, ತಲೆ ನೋವುಗಳ ಮೇ ದಿವ್ಯ ಔಷದ

ಡಾಕ್ಟರ್ ದಾಂಡೇಕರ್, ಎಲ್. ಎಮ್. ಎಂಡ್. ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ **ಅಮೃತಾಂಜನ ಡಿಪೋ ಮುಂಬಯಿ** ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ತಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕರ ಬ್ರದರ್ಸ್, ಉಡುಪಿ.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ, ಮುಂಬಯಿ.

ಶಿರದ ಭೂಷಣವು!!!

ಶ್ರೀ

ಮೃದುವಾದ, ಗುಂಗುರು ಗುಂಗುರಾಗಿರುವ, ಹೊಳಪಿನಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ಬಯಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾವುದೆಂದರೆ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

[illegible] ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು [illegible] ಹಾಗೆಯೇ [illegible] ಗಳಿಗೂ ಜನ್ಮೇ [illegible] ಈ ತೈಲವನ್ನು [illegible] ಬೇಸಿಗೆಯಲ್ಲಿ [illegible] ಶುಷ್ಕವಾಗುತ್ತವೆ [illegible] ಬಿದ್ದು ಹೋಗಲಾರವು ; [illegible] ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧ [illegible] ವೂ ಮನೋಹರವೂ ಆಗಿರುವುದು. [illegible] ಎಣ್ಣೆಗಳನ್ನು [illegible] ಉಪಯೋಗಿಸಿ ನಿಮ್ಮ ಹಣವನ್ನೂ [illegible] ಮಾಡುವುದಕ್ಕಿಂತ ಒಂದೇ [illegible] ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲ್ಲಿ, ಬೆಳಗಾಂವಿ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಅದ್ದರಿಂದ [illegible] ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

[illegible] ಅನೇಕ [illegible] ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ [illegible] ಯಿಂದ ತಮಗೆ ಅತ್ಯಲ್ಪ ಸವೆಯೇ [illegible] ಎಂದು, ಸೀವು "ಕಾಮಿನಿಯಾ ತೈಲ" ವನ್ನು [illegible] "ಇದು ಅತ್ಯಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರೆ [illegible] ಬೇರೆ [illegible] ನಮಗೆ [illegible] ಅಂಥಾ ಸಂದರ್ಭದಲ್ಲಿ [illegible] "ಕಾಮಿನಿಯಾ ಒಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ [illegible] ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದಕ್ಕೆ [illegible] ಮಾಡಿದರೆ ನೀವು [illegible] ಬೆಲೆಯಲ್ಲಿ [illegible] ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್ !!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಹೊಸಾಗಿ [illegible] ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ-ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತೊಟ್ಟುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ಸ್ವಾಭಾವಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು [illegible] ಈ ಒಟ್ಟೊ-ದಿಲ್-ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಯುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮಾಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಪೇಕ್ಷಿತದ ಪರಿಪೂರ್ತಿ

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪಿಲ್ಸ್" ಅಥವಾ

ವಿದ್ಯುಚ್ಛಕ್ತಿಯ ವಜೀಕರಣ ಮಾತ್ರೆಗಳು

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ [illegible] ವನ್ನೂ, [illegible] ನವನ್ನೂ [illegible] ಮಾಡುತ್ತದೆ. [illegible]

[illegible] ಉದಯಿಸುವ [illegible] ಶಕ್ತಿ [illegible] ಆಗುವಿಕೆಗೆ [illegible] ಅಕಾಲ [illegible] ವಿದ್ಯುಚ್ಛಕ್ತಿಯಿಂದ [illegible] ಅದಗಿ [illegible] ಮಾನಸಿಕ ಪ್ರವೃತ್ತಿ [illegible] ಆಗುತ್ತವೆ.

[illegible] ಉಂಟಾಗುವ ವೀರ್ಯಹೀನತೆಯಲ್ಲಿ ಈ ಮಾತ್ರೆಗಳ ಗುಣ [illegible] ಇಂದ್ರಿಯಗಳ [illegible] ಇವುಗಳ ಸೇವನೆಯಿಂದ [illegible] ಲಭಿಸುತ್ತವೆ.

ರೋಗಾಸ್ಪದವಾದ ಸ್ವಭಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚಿಸುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಿಸಿಲಿದು [illegible] ಈ ಸಸ್ಯ ಧಾತುಪುಷ್ಟಿಯನ್ನಿತ್ತು ಸಜೀವತನ [illegible] ಈ ಗುಳಿಗೆಗಳ [illegible] ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಹೊಳೆದು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು [illegible] ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಬಾಡಣ"ಯು ಕ್ರಮವನ್ನು ಅನುಸರಿಸುತ್ತದೆ ; ಮುಖವು ಶುಭ್ರವಾಗಿ ರಕ್ತಚಲನದ ಕಾರ್ಯಗಳನ್ನು ಸರಿಯಾಗಿ ತೋರ್ಪಡಿಸುತ್ತದೆ ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯ ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ ; ಸ್ಮರಣಶಕ್ತಿಯು ಸ್ಥಿರವಾಗುತ್ತದೆ ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ [illegible] ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

1 ದಿವಾಕರ ಕೃಷ್ಣಾಜಿ ದಾತಾರ್, ರಾ. [illegible], ತಾ. [illegible], ಜಿ. ನಾಗಪುರ.—"[illegible] ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಳಿಗೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುವದರಿಂದ ; ಅದಕ್ಕೆ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 [illegible], [illegible], ಬಂಗಾಲ ನಾಗಪುರ ರೈಲ್ವೆ, [illegible] — "ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಳಿಗೆಗಳ ಮೂರು ಬುಡ್ಡಿಗಳನ್ನು ತರಿಸಿಕೊಂಡೆನು. ಅವುಗಳಿಂದ ನಾನು ವಿಶೇಷವಾದ ಸೌಖ್ಯವನ್ನು ಹೊಂದಿರುವೆನು. ಆದ್ದರಿಂದ ಇನ್ನು ಮೂರು ಬುಡ್ಡಿಗಳನ್ನು ಕಳುಹಿಸಿಕೊಡಿರಿ."

3 [illegible] ಮಹಮ್ಮದ ಇಬ್ರಾಹಿಮ್ ದಾವೂದ್, [illegible] — "[illegible] ಪ್ರೊ. ಜೇಮ್ಸರ ಗುಳಿಗೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. [illegible] ರವಾನಿಸಿರಿ."

4 ವಿ. ಆರ್. [illegible], [illegible] ವಕೀಲ, [illegible] — "[illegible] ಪ್ರೊ. ಜೇಮ್ಸರ ಗುಳಿಗೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನು. ಅವುಗಳನ್ನು [illegible] ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು [illegible]."

5 [illegible], ಸಂಸ್ಥಾನ [illegible] — ಪ್ರೊ. ಜೇಮ್ಸರ ಗುಳಿಗೆಗಳಿಂದ ನಾನು [illegible] ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು [illegible].

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು : **ದಿ ಬೂಲನ್ ಮಾರ್ಟ್, ಮಂಗಳೂರು ದ. ಕನ್ನಡ.**

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ ಎಂಡ್ ಸನ್ಸರ

ಬಿಸ್ಕುಟುಗಳನ್ನು

ಒಮ್ಮೆ ತರಿಸಿ ನೋಡಿರಿ!

ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕೆ ದೊರೆಯುತ್ತವೆ.

ವಿಳಾಸ — ಸ್ಟೀವನ್ ಎಂಡ್ ಸನ್ಸ್, ಮಂಗಳೂರು

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 13 ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ, ಇಲ್ಕಲ್, ಬೆಳಗಾಂ, ಸೇಲಂ, ನಾರಾಯಣ ವನರ್, ವನಾರ್ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ ಮಧುರೆ ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಸ್ಲಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ, ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಷ್ಮೆ ಜರಿ, ಸಾದಾ ಸೀರೆಗಳು, ವಸ್ತ್ರಗಳು, ಧೋತ್ರಗಳು, ಎಲವಸ್ತ್ರಗಳು ವಸ್ಕೈತಿ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂದಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು

ನಮ್ಮ ವಿಳಾಸ — ನರಸಿಂಹ ಲಕ್ಷ್ಮಣಶಾಳ

ರಥಬೀದಿ ಮಂಗಳೂರು ದ. ಕ.

ಉತ್ಕೃಷ್ಟವಾದ ಮೂರು ಔಷಧಗಳು.

ಗ್ರೆಂಟ್ ಮೆಡಿಕಲ್ ಕೊಲೆಜಿನಲ್ಲಿ ಸೂಲಗಿತ್ತಿತನ ಕಲಿತು ಸರ್ಟಿಫಿಕೇಟ್ ಪಡೆದ ಕಮಲಾ ಬಾಯಿ, ತುಳಸೀ ಬಾಯಿ ಎಂಬ ಸೂಲಗಿತ್ತಿಯರಿಂದ ತಯಾರಿಸಲ್ಪಟ್ಟವುಗಳು.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1.

(ಆರ್ತವ ಶೂಲೆ ಹೋಗಲಾಡಿಸುವ ಬಗ್ಗೆ.)

ಅಬಲಾಸಂಜೀವನಿ ಗುಳಿಗೆಗಳು ಎಲ್ಲಾ ಬಗೆಯ ಆರ್ತವ ಶೂಲೆಯನ್ನು ಹೋಗಲಾಡಿಸುವುದಕ್ಕೆ ಏಕರೀತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆಗೆ ಯೋಗ್ಯವಾದ ಮಾತ್ರೆಗಳಾಗಿರುವುವು ಅನೇಕ ಕಾಲದವರೆಗೆ ಪುಷ್ಪವತಿಯಾಗದೆ ಇದ್ದುದು ಕೂಡ ಇವುಗಳಿಂದ ಸರಿಯಾಗುವುದು. ಅಂತರೌಷಧಿಗಳಿಂದ ಗುಣವಾಗಬಹುದಾದ ಎಲ್ಲಾ ಗರ್ಭಕೋಶದ ಶೂಲೆಗಳು ಇವುಗಳಿಂದ ಗುಣವಾಗಿ, ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು ಒಂದು ಶೀಸೆಯ ಕ್ರಯ ರೂ. 1 ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 2.

(ಬಿಳೀ ಸ್ರಾವದ ಬಗ್ಗೆ.)

ಈ ಬಾಧೆಯಿಂದ ವಿರಹಿತರಾದ ಸ್ತ್ರೀಯರು ಬಹಳ ವಿರಳ ಈ ಸ್ರಾವದಿಂದ ಹೆಚ್ಚಿನ ನಿಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವುವು ಈ ಸ್ರಾವವು ರಕ್ತಸ್ರಾವದಂತೆ ಬಲಹೀನಕರ ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರುವುದು, ಆಗಾಗ್ಗೆ ಕಟಿಭಾಗದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗುವುದು, ಮಲವಿಸರ್ಜನೆ ಸರಿಯಾಗದಿರುವುದು ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು — ಒಂದೇ ಪೊಟ್ಟಣವನ್ನು ಪರೀಕ್ಷೆಗಾಗಿ ತರಿಸಿದರೆ ತ್ವರ್ಯಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು. ಒಂದು ಶೀಸೆಯ ಕ್ರಯ 1 ರೂಪಾಯಿ ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 3

(ಕೆಂಪು ಸ್ರಾವದ ಬಗ್ಗೆ)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದುವುಗಳುಂಟಾಗಿ, ಗರ್ಭಕೋಶದ ಶೂಲೆ, ನಿರ್ಬಲತೆ ತಲೆದೋರುವುವು ಈ ಸ್ರಾವವು ಗರ್ಭಕೋಶದಿಂ ಸ್ರವಿಸುವ ರಕ್ತವೇ ಸರಿ ಈ ಗುಳಿಗೆಗಳನ್ನು ಕೂಡಲೇ ಸೇವಿಸುವುದಕ್ಕೆ ಅಸಡ್ಡೆ ಮಾಡಿದರೆ ಈ ಪೀಡೆಯು ಅತಿಶಯಿಸಿ, ಬೇಗನೇ ಗುಣ ಹೊಂದಲಿಕ್ಕಿಲ್ಲ. ಒಂದು ಶೀಸೆಯ ಕ್ರಯ 1 ರೂಪಾಯಿ ಅಂಚೆ ಹಾಸಲು 4 ಆಣೆ ಏಜೆಂಟರು —

ದಿ ಊಲನ್ ಮಾರ್ಟ್, ಹಂಪನ್‌ಕಟ್ಟಾ, ಮಂಗಳೂರು. ದಕ್ಷಿಣ ಕನ್ನಡ

Dr Nava Ratna & Sons,
253 Kalbadevi Road,
BOMBAY.

Estd 1888 ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ ೨೦—೨೫ ವರ್ಷಗಳ ಹಳತ, ಮೈಮನ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ಒಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು. ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾರ್ಸಾಪರಿಲ್ಲೆಯು**. ಕ್ರಯ ಬಾಟ್ಲಿ ಒಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಪಾಲ್ಗೊಂಡು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಕೀಲಿ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

ತಮ್ಮ ವಿಳಾಸ:— ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ತುರಿಕಜ್ಜಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಬ್ರಹ್ಮಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಸೂಚಿತ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M Nath & Co , *Ayurvedic Chemists,*

Vepery Post, MADRAS.

ಓದಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ನಾಡಿಗಳೂ, ಮಿಶ್ಯನ್ ಟೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ, ಬೆಟ್ಟ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original BABA BUDAN-GHIRY COFFEE POWDER PROPRIETORS J.B.SOUZA & Co MANGALORE

ಸ್ವತಃ ಒಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ.— ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟ, ಮಂಗಳೂರು

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1 ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರ್ಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆಸ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

K. K. Shanbhog, *Proprietor*

THE CANARA CYCLE MART.

Udipi, S. Canara.

ಲೋಕಪ್ರಸಿದ್ಧವಾದ ಪಂಜಾ ಸಾಲಾಮಿಸ್ರಿ ಮುರಬ್ಬಾ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂದು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನ್ನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸಬಹುದು ಹಾಗೆ ಕ್ಕೊಂದ ಸುಮ್ಮನೆ ತಯಾರು ಮಾಡಲ್ಪಟ್ಟದು.

ಪಂಜಾ ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕ್ಷಣಕ್ಷಣಕ್ಕು ಮೂತ್ರವಾಗುವದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೋಧಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವದರಿಂದ ಸ್ವಲ್ಪ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಪೂರ್ಣ ಗುಣಕೊಡುತ್ತೆ.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ ಆಣೆ 6.

ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮುನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹದಿ ಅವೆನ್ಯ ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣುತ್ತೀರಿ.

ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆ ಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು; ಹಚ್ಚಿದಮೇಲೆ ಕೂದಲು ಕೆಂಚು, ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬ್ರುರುಸು ಸಮೇತ ಬಾಟ್ಲಿ ಒಂದಕ್ಕೆ ರೂ. 1; ಅಂಚೆ ಹಾಸಲು 4 ಆಣೆ.

ವಿಳಾಸ:— ಪಿ ಎ. ಎಸ್. ಪಾಣಿ ಕಂಪೆನಿ.
ನಂಬ್ರ 3 ಅರುಳಪ್ಪನ್ ಬೀದಿ, ಮದರಾಸು.

ಸನ್ 1915 ಇಸವಿಯ

ಪಾಕೆಟ್ ಡೈರಿ.

ಶ್ರೀ ಸೀತಾ ರಾಘವ

ಪಾಕೆಟ್ ಡೈರಿಗಳು.

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ, ಅನೇಕ ಹೊಸ ಸಂಗತಿಗಳಿವೆ.

ನಂಬ್ರ ೧. ಸಣ್ಣ ಸೈಜು ಸಾದಾ 0—4—0.
" ೨. ಪೆನ್ಸಿಲ್ ಮುಚ್ಚಳವುಳ್ಳದ್ದು 0—6—0.

ಕೆಲವು ಪ್ರತಿಗಳು ಮಾತ್ರ ಉಳಿದಿವೆ. ಜಾಗ್ರತೆ ಬರದು ತರಿಸಿಕೊಳ್ಳಿ.
1 ಮತ್ತು ನಂಬ್ರ 2ನೇ ಡೈರಿಗಳು ಮಾತ್ರವೇ ಇವೆ.
ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ.
ಹೆಚ್ಚಾಗಿ ತರಿಸುವವರಿಗೆ ರೂ. ೧ಕ್ಕೆ ೨ ಆಣೆ ಕಮಿಷನ್ ದೊರೆಯುವುದು.
ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.
ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ವೈ[illegible]

Printed & Published by V. S. Kamath at the Mangalore Trading Association's Printing Press, Mangalore.

No. M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಕಿಂದಾನಿರ್ಣಯ — ವರುಷ ಗಿಕ್ಕೆ ರೂ. 1—4—0 ಟಪ್ಪಾಲು ಹಾಸಲು ಶೇರಿ ರೂ 2—1—0

ಪುಸ್ತಕ IX ಮಂಗಳೂರು ತಾ 23ನೇ ಜನವರಿ ಶನಿವಾರ 1915 ಸಂಚಿಕೆ 4

ನೋಟೀಸು.

ಈ ಕೆಳಗೆ ದಸ್ಕತು ಮಾಡಿದ ಕುಂಬಳೆ ಮಾಗಣೆ ಕ್ಯೂರಾಡಿ ಗ್ರಾಮ ... ರವ ಮೇಣ ವೆಂಕಟ ಭಟ್ಟರ ಮಗ ನಾರಾಯಣ ಬಟ್ಟನ ಈ ಮೂಲಕ ... ಜಾಹಿರಿಯುಪಡಿಸುವದೇನಂದರೆ —

ನಾನು ಮೆನೇಜರನಾಗಿ ರೂ 1300ಕ್ಕೆ ಏರ್ಪಡಿಸಿ ... ಕಂ ... ವಾಗಣೆ ಮಧ್ವನಾಡ ಗ್ರಾಮದಲ್ಲಿರುವ ಸ್ಥಾನಿಕ ಶಂಕರನಾರಾ... ನಾರಾ... ಎಂಬವನು ಒಬ್ಬ ಮೆಂಬರನಾಗಿ ಶೇರಿ 5ನೆ ಕಂತಿ ... ರಿ ಪಡ... ವಾರಿ ... ಪಡದು 5ನೆ ಕಂತಿನ ಲಾಗಾಯಿತು ವರುಷ 1ರ ಪ್ರತಿ ಕಂತಿಗೆ ಸಲ್ಲಬೇಕಾ... ...0ರ ನೋರೆಗೆ ಜುಮ್ಲಾ 8 ಕಂತುಗಳ ರೂ 800 ... ಆತನಿಂ... ರಬೇಕಾದ್ದಿರುತ್ತದೆ ಆ ಪೈಕಿ 6ನೆ ಕಂತಿನ ಐವಜಿಗ ನಾನು ಆತನ ಮೇಲೆ ಡಿಕ್ರಿ ಪಡೆ... ಪ... ಲ್ಲದ ನಂತರ 1914ನೇ ವಿಶು ವರೆಗೆ ಬಹ 3 ಕಂತುಗಳ ಐವ... ಆತನ ಮೆ... ... ಕಾಸರಗೋಡು ಡಿಸ್ತ್ರಿಕ್ಟ್ ಮುನ್ಸಿಪ್ ಕೋರ್ಟಿನಲ್ಲಿ ದಾಖಲ ಮಾಡಿ... ...ವ ತನಕಿಯಲ್ಲಿ ಬಾಕಿ ಇರುತ್ತದೆ ಹೀಗಿರುತ್ತಾ ನನಗೆ ಸಲತಕ್ಕ ಮ...ಂದಿನ 4 ಕಂತುಗಳ ಐವಜಿಗೂ ಮೇಲೆ ಕಾಣಿಸಿದ ಡಿಕ್ರಿ ವ ವ್ಯಾಜದ ಆಖ್ಯರ ತೀರ್ಮಾನದ ಐವಜಿ ... ನನಗೆ ಮೋಸಪಡಿಸುವಂಥ ಕೆಟ್ಟ ಇರಾದೆಯಿಂದ ತನ್ನ ಜಾಜತು ಸ್ಥಿರ ... ಪರಾಧೀನಪಡಿಸುವ ಇರಾದೆಯಲ್ಲಿರುತ್ತಾನಾಗಿ ನನಗೆ ವರ್ತಮಾನ ... ದೆ ... ಇನ್ನು ಮುಂದೆ ಮಾಡಬಹುದಾದ ಪರಾಧೀನಗಳು ನನಗೆ ಆತನಿಂ... ಐವ... ಮೋಸಪಡಿಸುವರೆ ಮಾಡುವದಾದ್ದರಿಂದ ಆ ಪರಾಧೀನಗ... ಆತ... ಸಲತಕ್ಕ ಐವಜಿನ ಮಟ್ಟಿಗೆ ಊರ್ಜಿತ ಯಾ ಮಂಜೂರಾಗತಕ್ಕವುಗಳಲ್ಲಾ ... ದ್ದರಿಂ... ಆತನ ಕೂಡೆ ಆಸ್ತಿಗಳ ಕುರಿತು ವ್ಯವಹಾರ ನಡಿಸುವವರಿಗ ಈ ಮೂಲಕ ಎಚ್ಚರಿಕೆ ಕೊಟ್ಟಿರುತ್ತೇನೆ

ತಾ 27 11—1914 ಮೇಣ ನಾರಾಯಣ ಬಟ್ಟ

ನೋಟೀಸು.

ಮೂಡ್ಗೆರೆ ಕಡೆ ಕಾಪಿ ತೋಟಕ್ಕೆ ಕಳುಹಿಸುವದೆ ಟೊಂಗಾ ವಗೈರೆ ಗಾಡಿ ಕೆಲಸದ ಒಳ್ಳೇ ಮಾಹೀತಿಯ ಬಡಿಗಿ ಮುತ್ತು ಕಬ್ಬಿಣದ ಕೆಲಸದ ಒಬ್ಬ ಮನುಷ್ಯನು ನಮಗೆ ಬೇಕಾಗಿರುವನು ಆತನು ಈ ಕೆಳಗಿನ ವಿಳಾಸದವರ ಕಾಪಿಕಾರ್ಖಾನೆಗೆ ಬಂದು ಮಾತನಾಡಿದ್ದಲ್ಲಿ ಆತನ ಸಂಬಳ ವಗೈರೆ ಮೊಕ್ರೂರು ಮಾಡಿ ಆತನು ಕಳುಹಿಸಲ್ಪಡುವನು

ವಿಳಾಸ: —

ವಾಲ್ಕಾರ್ಟ್ ಬ್ರದರ್ಸ್,

ಕಾಫಿ ಕ್ಯೂರಿಂಗ್ ವರ್ಕ್ಸ್,

ಮಂಗಳೂರು.

ಉತ್ತಮ ತರಗತಿಯ ಮೋಪ್ರುಗಳು.

ಕುಂಬಳ ರೈಲ್ವೆ ಸ್ಟೇಶನ್ ಬಳಿ ಹಳೇ ಅಕ್ವ ಸಾಯುರ ಕಚೇರಿ ಸಮೀಪ ಹೊಳೆ ಕಿನಾರಯಲ್ಲಿ ಸಿಹಿ 1ರಿಂದ 43 ವರೆಗೆ ಉದ್ದವಿರವ ಸಾಗುವಾನಿ, ಬೆಂಡಕಿ, ಪಿಂಟ್ಟಿ, ವರವ ವತ್ತು ತಿರುವ ಮುಂತಾದ ಅನೇಕ ಜಾತಿಯ ಒಳ್ಳೇ ಮರಗಳು ಮತ್ತು ಬೇರೆ ಬೇರೆ ಕೆಲಸಕ್ಕಾಗುವ ಸಪ್ಪರ ಮರಗಳ ಸಣ್ಣ ಸಣ್ಣ ತುಂಡುಗಳು ಮಾರಾಟಕ್ಕೆ ಸಿದ್ಧವಿವೆ ಖ್ಯಾಶ್ ಉಳ್ಳವರು ಈ ಕೆಳಗೆ ... ಮಾಡಿದವರ ಮುಂದೆ ಖುದ್ದು ಯಾ ಪತ್ರವ್ಯವಹಾರ ನಡಿಸಿದ್ದಲ್ಲಿ ಎಲ್ಲಾ ವಿವರ ತಿಳಿದ ... ಂದೀತ

ಎಸ್ ವಿಟ್ಠಳ ಕಾಮತ್,

ಕುಂಬಳೆ, ದ. ಕನ್ನಡಾ

ಬೇಕಾಗಿರುತ್ತದೆ.

ಯಷ್ಟನ ಗ್ರಾಯದ ಕಾಪಿ ಯಸ್ಟೇಟಿನ ಚನ್ನಾಗಿ ಅನುಭೋಗ ಇರುವ ಮತ್ತು 50 ಯಾ 60 ಕೂಲಿ ಜನಗಳನ್ನು ಒದಗಿಸುವ ರೈಟರ್ ಈ ಕೆಳಗಿನ ವಿಳಾಸದವರಿಗೆ ಆವಶ್ಯವಿದೆ

ಯಫ್ ಜೆ ಪಾರ್ಟನ್,

ತಿದ್ರುಬನ್ನು,

ಕೊಪ್ಪಾ ಪೋಸ್ಟ್, ಕಡೂರು ಡಿಸ್ತ್ರಿಕ್ಟ್,

ನೋಟೀಸು.

ಕುಂದಾಪುರ ಡಿಸ್ತ್ರಿಕ್ಟ್ ಮುನ್ಸಿಫಾ ಕೋರ್ಟಿನಲ್ಲಿ.

ಪ್ರೊ ಪಿ ನಂಬ್ರ 1914

ತೆರೇಜಕೋತ ಬ್ಯಾ ಕೂಡಾ 3 ಜನರು — ಅರ್ಜಿದಾರರು.

ಕುಂದಾಪುರ ಲೋಕಲ್‌ಫಂಡ್ ಆಸ್ಪತ್ರೆಯಲ್ಲಿ 1913ನೇ ಇಸವಿ ಎಪ್ರಿಲ್ ತಿಂಗಳಲ್ಲಿ ಮೃತಪಟ್ಟ ದಾವಿದಸೋಜನು ತಾ 16—4—1913ರಲ್ಲಿ ಬರೆದಿಟ್ಟ ವೀಲು ಪ್ರಕಾರ ಆತಗೆ ಬರತಕ್ಕ ಸಾಲಗಳನ್ನು ವಸೂಲು ಮಾಡುವರೆ ತಮಗೆ ಸಕ್ಸೆಶನ್ ಸರ್ಟಿಫಿಕೇಟ್ ಕೊಡಬೇಕಾಗಿ ಅರ್ಜಿದಾರರು ಕೊಟ್ಟ ಅರ್ಜಿಯು ಇದೇ ತಿಂಗಳ ತಾ. 25ಕ್ಕೆ ತನಖಿಗೆ ಇಟ್ಟಿರುತ್ತದೆ ಈ ಕುರಿತು ಆಕ್ಷೇಪಿಸುವವರು ಮೇಲ್ಕಂಡ ಕೋರ್ಟಿನಲ್ಲಿ ಸದರಿ ತಾರೀಕಿನ ಹಗಲು 10 ಗಂಟೆಗೆ ಸ್ವತಹಾ ಯಾ ಪ್ಲೀಡರ್ ಮೂಲಕ ಜ್ಯಾಹಿ ಮಾಡಬಹುದು

ಕುಂದಾಪುರ,
ತಾ 10—1—1915

K. Narayana Shenai,
Pleader.

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ ..18ನೇ ಇಸವಿ ಲಾಗಾಯ್ತಿನಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರ ವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕಾಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಶುಲಭವಾದ ಖರೀದಿಯಲ್ಲಿ ದೊರಿಯುತ್ತದೆ.

ಕಾಫಿ ಪುಡಿಯು ರಾತ್ತು ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

Piedade Pinto,

Manager.

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯಪುಸ್ತಕವು

ಜೀವಿತಕಾಲದ ವರೆಗೂ ನಮ್ಮ ಶರೀರವನ್ನ ರೋಗಗಳು ಹತ್ತರ ಬಾರದೆ ಮಾಡಿಕೊಳ್ಳುವದೇ ನಮ್ಮ ಮೊಟ್ಟಮೊದಲ ಕರ್ತವ್ಯವು ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನ ಪುನಹ ಹೇಗೆ ಪಡೆಯುವದು ಎಂಬ ವಿಷಯಗಳಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯ ಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ ಈ ಗ್ರಂಥವನ್ನು ಪ್ರಜೆಗಳ ಕ್ಷೇಮಾರ್ಥವಾಗಿ ಕೋರಿದವರಿಗೆ ಕ್ರಯವೂ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವದು. ಈ ಪುಸ್ತಕವು ಒಂಭತ್ತು ಭಾಷೆಗಳಲ್ಲಿ ಛಾಪಿಸಲ್ಪಟ್ಟು ಇದುವರೆಗೆ ನಾಲ್ಕು ಲಕ್ಷ ಪ್ರತಿಗಳು ಕಳುಹಿಸಲ್ಪಟ್ಟಿರುವದೇ ಇದು ಎಷ್ಟು ಉಪಯೋಗಕರವಾದದ್ದು ಎಂಬುವದಕ್ಕೆ ಸಾಕ್ಷಿಯಾಗಿರುತ್ತದೆ.

ಕಲಿಯುಗದ ಕಾಮಧೇನು

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷರ ಇಷ್ಟಾರ್ಥಗಳನ್ನು ಕೊಡುತ್ತವೆ ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಮಾಡಿ ಹೆಚ್ಚು ಮಾಡುತ್ತವೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ ಜೀರ್ಣಶಕ್ತಿಯನ್ನು ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗುವಂತೆ ಮಾಡುವವು. ಅಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1—0—0.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಯುನಿವರ್ಸಲ್ ಎಸ್ಯುರೆನ್ಸ್ ಕ್ಕೊ. ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಶೂರೆನ್ಸ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಶೂರೆನ್ಸ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

			ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	...	ರೂ.	13,329—0—0	22,549—0—0
,, (ವಿವಾಹ)	...	,,	25,670—0—0	38,933—0—0
ಜುಮ್ಲಾ ಕೇಸುಗಳು	..	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	...	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	..	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	...	,,	10,000—0—0	50,000—0—0
(ಜನರಲ್) ರಕ್ಷಿತ ಧನ	...	,,	37,220—0—0	23,778—3—2

ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ. ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಫ್ ಎಶ್ಶೂರೆನ್ಸ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು. 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3. ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ. 3,00,000ಗಿಂತಲೂ ಹೆಚ್ಚಿಗೆ ಭಾದ್ಯತೆಗಳನ್ನು ಕೊಟ್ಟದೆ 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಟಿ ಗ್ರಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ

"ಬಂಗಾಳಿ"—14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರೊಪಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೆಸೆಸುಗಳನ್ನು ಮಾತ್ರವೇ ಮಾಡಿತ್ತು. ಸುಮಾರು 3 ಲಕ್ಷ ಭಾದ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟುಗಳು ಬೇಕಾಗಿವೆ. ಎಲ್ಲಾ ವಿಧದ ಎಜಂನ್ಸಿ ಶರ್ತಗಳಿಗೆ—

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್,

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು, ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಕನ್ನಡ ಲಿಪಿಯ ಪುಸ್ತಕಗಳು.

ಉಡುಪಿ ಶ್ರೀಕೃಷ್ಣ ಚರಿತ್ರೆ

ದಂಡಾಕಾರ, ಮೂರು ಸಂಧಿಗಳಿಂದ ಕೂಡಿರುವದು. ಪ್ರಥಮ ಸಂಧಿಯಲ್ಲಿ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠೆಮಾಡಿದ ವಿಷಯವೂ, ಎಂಟು ಜನ ಯತಿಗಳ ವಿಷಯವೂ, ಪ್ರತಿನಿತ್ಯ ನಡಿಯತಕ್ಕ ವಿಧಾನಗಳೂ,—ಎರಡನೆಯ ಸಂಧಿಯಲ್ಲಿ ಮಕರಸಂಕ್ರಾಂತಿ ಉತ್ಸವ ವರ್ಣನೆಯೂ, ಮೂರನೇ ಸಂಧಿಯಲ್ಲಿ ವರುಷದ ಇತರ ದಿವಸಗಳಲ್ಲಿ ನಡಿಯತಕ್ಕ ಉತ್ಸವಾದಿಗಳೂ ವರ್ಣಿತವಾಗಿವೆ. **ಬೆಲೆ 3 ಆಣೆ.**

ಋ. ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ. ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಆಶ್ವಲಾಯನ ಸಂಧ್ಯಾವಂದನ (ಮರತ್ರಯದವರಿಗೆ) 3ಆಣೆ; ಯಜುರ್ವೇದ ಸಂಧ್ಯಾವಂದನ (ಮರತ್ರಯದವರಿಗೆ) 2 ಆಣೆ; ಋ. ಬ್ರಹ್ಮಯಜ್ಞ ವೈಶ್ವದೇವ ಔಪಾಸನ 3 ಆಣೆ; ಪ್ರಾತರಾಹ್ನಿಕ ಪದ್ಧತಿ 3 ಆಣೆ; ದೇವಪೂಜಾ ಪದ್ಧತಿ 3 ಆಣೆ; ನ್ಯಾಯ ಸ್ತುತಿ 2 ಆಣೆ, ದ್ವಾದಶಸ್ತೋತ್ರ 2 ಆಣೆ; ವಿಷ್ಣುಸಹಸ್ರನಾಮ ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ, ವಿ. ಸಹಸ್ರಕೃಷ್ಣಾಷ್ಟೋತ್ತರನಾಮಾವಳಿ 0-2-6; ಅಭಿಷೇಕ ಸೂಕ್ತಗಳು 0-2-0; ಶ್ರೀಸೂಕ್ತ ಪುರುಷಸೂಕ್ತ 0-1-0; ಸುಂದರ ಕಾಂಡ ಕಥಾಸಾರಸಂಗ್ರಹ ಪದ್ಯರೆ 0-2-0; ಗಜೇಂದ್ರ ಮೋಕ್ಷ 0-1-6; ಗೋಪಿಕಾಗೀತೆ ಪದ್ಯರೆ 0-1-0; ಪಾಂಡವಗೀತೆ-ಪದ್ಯರೆ 0-1-6; ಅಣುಭಾಷ್ಯ ಪದ್ಯರೆ 0-0-9; ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0-2-0; ಪುರಂದರದಾಸರ ಕೀರ್ತನೆಗಳು 0-6-0; ಉದಯರಾಗ 0-4-0; ಹರಿಭಕ್ತಿಸಾರ 0-1-0; ಸ್ವಪ್ನಪದ ಮಧ್ವನಾಮ 0-1-6; ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ

ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,

ಉಡುಪಿ, ದ. ಕ.

ಕೆಲವು ಪ್ರತಿಗಳು ಮಾತ್ರ ಉಳಿದಿವೆ.

1915ನೇ ವರುಷದ ಪ್ರೊಕೆಟ್ ಡೈರಿಗಳು.

ನೋಟು ಬೂಕು ಸೈಜು 8 ಆಣೆ. ಸಣ್ಣ ಸೈಜು 4 ಆಣೆ.

ನಮ್ಮಲ್ಲಿ ತಯ್ಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ಬ್ಯಾಂಡು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ವ್ಯಾಪಾರಸ್ಥರಿಗೂ ರಖಂ ತಕ್ಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ.

ಡೈರಿಗಳು ಸಿಕ್ಕುವ ವಿಳಾಸ:— ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಅಚ್ಚಿನಲ್ಲಿರುವುದು! ಅಚ್ಚಿನಲ್ಲಿರುವುದು!

ವೆಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು.

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ವೃದುವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನೋಹರವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು.

ಕವಿ ಎಂಡ್ ಸನ್ಸ್,

ಮಂಗಳೂರು.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳಲ್ಲಿ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ. ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊದಲಗು ಟಪ್ಪಾಲು ಹಾಸಲು ಸೇರಿ ರೂ 3—೪—೦ ಆಗಿರುತ್ತದೆ. ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,

ಮಂಗಳವಾರ ಪೇಟೆ, ಧಾರವಾಡ.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road BOMBAY

ಏಜಂಟರು.—ದಿ. ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಸಚಿತ್ರ! ಮಾಸಪತ್ರಿಕೆ!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಈಗಿನ ಯುದ್ಧದ ವಿಶೇಷ ಸಂಗತಿಗಳೂ, ಯುದ್ಧದ ಚಿತ್ರಗಳೂ, ಹಾಸ್ಯ, ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳು, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧ ರೂಪಾಯಿ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ.

ವಿಳಾಸ:—ಮ್ಯಾನೇಜರ್ "ಚಾತುರ್ಯ"

ಬೆಂಗಳೂರು, ಸಿಟಿ.

ಯುಕಲಿಪ್ಟಸ್ ತೈಲ.

ಮದ್ರಾಸು ಅಮುಂಜಿಕರೈತ್ತು ಸಿನಪ್ಪ ಹೆಗ್ಗಡೆಯವರು ಈ ರೀತಿ ಬರೆಯುವರು:—ತಮ್ಮಲ್ಲಿಯ ಅತ್ಯುತ್ತಮವಾದ "ಯುಕಲಿಪ್ಟಸ್ ತೈಲ"ವೆಂಬ ಸರ್ವರೋಗನಿವಾರಕಾ ಔಷಧವನ್ನು ತರಿಸಿಕೊಂಡು ಹೆಂಗಸರು ವಚ್ಚಿಯಾಗುವ ಕಾಲದಲ್ಲಿ ಆಗುವ ಕಠಿಣ ವಿಧದ ಹೊಟ್ಟೆನೋವಿಗೆ ಉಪಯೋಗಿಸಿದ್ದಲ್ಲಿ ಅದು ಅನೇಕ ಹೆಂಗಸರ ಹೊಟ್ಟೆನೋವನ್ನು ನಿಮಿಷಮಾತ್ರದಲ್ಲಿ ಗುಣಪಡಿಸಿರುತ್ತದೆ. ನನ್ನ ತಂಗಿಗೆ ಕೆಲವು ವರುಷಗಳಿಂದ ಇದ್ದ ಕಿವಿನೋವು ಇದರಿಂದ 5 ದಿವಸಗಳಲ್ಲಿ ಪೂರ್ಣ ಗುಣವಾಗಿರುತ್ತದೆ. ಕೀಸಾ ಬಡವರು ಕೂಡಾ ಕೊಡಕೂಡುವ ಈ ಅಲ್ಪ ಬೆಲೆಯ ತೈಲವು ಸಾವಿರಾರು ರೂಪಾಯಿಯ ಬೆಲೆಬಾಳತಕ್ಕಂಥಾದ್ದಾಗಿದೆ. ಜ್ವರಗಡ್ಡೆ, ಮಲೇರಿಯ, ಶೀತ, ವಾತ, ಸಣ್ಣ ಮಕ್ಕಳ ಜ್ವರ, ಕೆಮ್ಮು, ದೊಡ್ಡವರ ಬಳುಕು, ಮೇಹ ಮೊದಲಾದ ರೋಗಗಳಿಗೆ ಸಂಜೀವಿನಿಯೋಪಾದಿ ಇರುತ್ತದೆ. ಇದನ್ನು ಉಪಯೋಗಿಸಿದ ಮಕ್ಕಳಿಗೆ ಬಾಲಾರಿಷ್ಟ ರೋಗವು ನಿಜವಾಗಿ ತೊಲಗಿ ಹೋಗುತ್ತದೆಂಬ ಸಂಗತಿ ನನ್ನ ಅನುಭವ ಸಿದ್ಧವಾಗಿರುತ್ತದೆ ಇತ್ಯಾದಿ. ಸರ್ವ ರೋಗಗಳಿಗೆ ದಿವ್ಯೌಷಧವಾದ ಈ ತೈಲದ ಕ್ರಯ ಔನ್ಸ್ ಸೀಸೆಗೆ 5 ಆಣೆ. ವಿ. ಪಿ.ಡಜನ್ ಬೇರೆ. ೯ ಸೀಸೆಗೆ ವಿ. ಪಿ. ಸಹಿತ ರೂ. 3 12ಆಣೆ. ಅನುಪಾನಪತ್ರಿಕೆ ಸೀಸೆಯೊಂದಿಗೆ.

ಇಕ್ಲಿಪ್ಸ್ ಬಾಮ್.

ವಾತ, ಸಂದುವಾತ, ಪಕ್ಷವಾತ, ಶಿರೋಭಾರ, ಎದೆನೋವು, ಹಲ್ಲುನೋವು, ಘಾಯ, ಕಜ್ಜಿ, ನಾಯಿಕಡಿತ, ಹುಳಮೇಯುವದು, ಆನೇಕಾಲು ಮೊದಲಾದ ರೋಗಗಳಿಗೆ ಬಾಹ್ಯಲೇಪನವಾಗಿ ಉಪಯೋಗಿಸಬಹುದಾದ ಈ ಬಾಮ್ ಸ್ವಲ್ಪ ಕಾಲದಲ್ಲಿಯೇ ಖ್ಯಾತಿಯನ್ನು ಪಡೆದಿದೆ. ಕ್ರಯ ಕರಡಿಗೆ 1ಕ್ಕೆ 8 ಆಣೆ ವಿ. ಪಿ. ಬೇರೆ. ಡಜನ್ ಕರಡಿಗೆಗೆ ರೂ. 4—12—0.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ, ...ಮಾಲಟ್ಟೆಲ್, ಮಂಗಳೂರು.

ಏಜಂಟರು:— ಸುಗಂಧವಿಲಾಸ, ರಥಬೀದಿ, ಮಂಗಳೂರು.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	217,400—0—0
Paid up Capital	192,400—0—0
Deposits	455,326—7—10
Reserve Fund	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	217,400—0—0
ಆಗತ ಮೂಲ ಧನವು „	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	455,326—7—10
ರಕ್ಷಿತ ಧನವು	27,590—12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. December 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯವತಾರ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೆ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೋ ಬಳ್ಳಾರಿ.

ಸ್ವದೇಶಾಭಿಮಾನಿ.

ಮಂಗಳೂರು, ಶನಿವಾರ ತಾರೀಕು 23ನೇ ಜನವರಿ 1915

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡಲಿಕ್ಕಿರುವ ಪರಸ್ಪರ ಸಹಾಯಕ ಸಂಘಗಳ ಪರಿಷದವು

ದಕ್ಷಿಣ ಕನ್ನಡ, ಮಲೆಬಾರು, ಕೊಯಂಬತ್ತೂರು ಮತ್ತು ನೀಲಗಿರಿ ಜಿಲ್ಲೆಗಳ ಪರವಾದ ಪರಸ್ಪರ ಸಹಾಯಕ ಸಂಘಗಳ ಪರಿಷದವು ಕಳೆದ ವರುಷ ಕಲ್ಲಿಕೋಟೆಯಲ್ಲಿ ಕೂಡಿದಾಗ ಈ ಜಿಲ್ಲೆಯಿಂದ ಹೋದ ಪ್ರತಿನಿಧಿಗಳು ೧೯೧೫ನೇ ವರುಷದ ಪರಿಷದವು ದಕ್ಷಿಣ ಕನ್ನಡದಲ್ಲಿ ಕೂಡಬೇಕೆಂತ ನಿರ್ಣಯಿಸಿ ತಮ್ಮ ಈ ನಿರ್ಣಯವನ್ನು ಕಲ್ಲಿಕೋಟೆಯ ಪರಿಷದದಲ್ಲಿ ಸೂಚಿಸಿದ ಪ್ರಕಾರ ಈ ಸರ್ತಿಯ ಸಭೆಯು ದಕ್ಷಿಣ ಕನ್ನಡದಲ್ಲಿ ಕೂಡಬೇಕಾಗಿರುತ್ತದೆ ಸಭೆಯು ಕೂಡಲಿಕ್ಕೆ ಇನ್ನು ಎರಡು ಯಾ ಮೂರು ತಿಂಗಳುಗಳ ಕಾಲವು ಉಳಿದಿರುವುದರಿಂದ ಈ ಪರಿಷದದಲ್ಲಿ ಏನೇನೆಲ್ಲಾ ನಡೆಸಬೇಕೆಂಬ ಕಾರ್ಯಕ್ರಮವನ್ನು ಈಗಲೇ ಚರ್ಚಿಸಿ ನಿರ್ಧರಿಸಿದರೆ ಸಭೆಯ ಕಾರ್ಯನಿರ್ವಾಹವೆಲ್ಲವನ್ನು ಚಲೋ ರೀತಿಯಲ್ಲಿ ಸಾಂಗವಾಗಿ ನೆರವೇರಿಸಲು ಅವಕಾಶ ದೊರಕುವುದು ಆದ್ದರಿಂದ ಈ ಪರಿಷದದ ಪರವಾಗಿ ಈ ಕೆಳಗಿನ ವಿಷಯಗಳನ್ನು ಪರ್ಯಾಲೋಚಿಸಬೇಕಾಗಿರುವುದು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಪರಿಷದವು ಕೂಡಲಿಕ್ಕೆ ಅನುಕೂಲ ಸ್ಥಳವು ಯಾವುದು, ಪರಿಷದದ ಅಧ್ಯಕ್ಷರನ್ನಾಗಿ ಯಾರನ್ನು ಚುನಾಯಿಸಬೇಕು, ಸಭೆಯನ್ನು ಸಾರ್ಥಕಗೊಳಿಸುವ ವಿಧಾನವೇನ ಎಂಬೀ ವಿಷಯಗಳನ್ನು ಮುಂದಾಗಿ ಪರಿಗ್ರಹಿಸುವುದು ಆಗತ್ಯವಾಗಿರುವುದು ಮಂಗಳೂರು ಈ ಜಿಲ್ಲೆಯ ಮುಖ್ಯ ಪಟ್ಟಣವಾಗಿರುವುದರಿಂದಲೂ ಕೊಯಂಬುತ್ತೂರು, ನೀಲಗಿರಿ ಮತ್ತು ಮಲಬಾರು ಜಿಲ್ಲೆಗಳ ಪ್ರತಿನಿಧಿಗಳಿಗೆ ರೈಲ್ವೆ ಮೂಲಕ ಮಂಗಳೂರಿಗೆ ಬರಲು ಅನುಕೂಲವಾಗಿರುವುದರಿಂದಲೂ ಈ ಜಿಲ್ಲೆಯ ಆಯಾ ಕಡೆಗಳಲ್ಲಿರುವ ಪರಸ್ಪರ ಸಹಾಯ ಸಂಘಗಳ ಪ್ರತಿನಿಧಿಗಳಿಗೆ ಟ್ರಿನ್ಸ್ನೀಟುಗಳ ಮತ್ತು ಮೋಟಾರ ಬಂಡಿಗಳಲ್ಲಿ ಬರುವ ಸೌಕರ್ಯವು ಇರುವುದರಿಂದಲೂ ಮಂಗಳೂರಲ್ಲಿ ವಿದ್ಯಾರ್ಥಿ ಭವನಗಳಿರುವ ವಿಶಾಲವಾದ ಶಾಲಾ ಕಟ್ಟಡಗಳಿರುವುದರಿಂದಲೂ ಪರಿಷದವು ಕೂಡಲು ಮಂಗಳೂರಿನಷ್ಟು ಅನುಕೂಲವಾದ ಸ್ಥಳವು ಮತ್ತೊಂದಿರದು. ಆದ್ದರಿಂದ ವಿಶೇಷ ಚರ್ಚೆಯೇನೂ ಇಲ್ಲದೆ ಪರಿಷದವು ಮಂಗಳೂರಲ್ಲಿ ಕೂಡುವುದು ವಿಹಿತವೆಂತ ನಿಶ್ಚಯಿಸಬಹುದು ಆದರೆ ಮಂಗಳೂರಲ್ಲಿರ ಬೇಕಾದಷ್ಟು ಪರಸ್ಪರ ಸಹಾಯ ಸಂಘಗಳು ಇಲ್ಲಿ ಇಲ್ಲ ಈ ಸಂಘಗಳ ಪರವಾಗಿ ಉತ್ಸಾಹವುಳ್ಳ ಪ್ರಜಾ ಮುಂದಾಳುಗಳ ಸಂಖ್ಯೆಯು ಸಹಾ ಮಂಗಳೂರಲ್ಲಿ ವಿರಳವಾಗಿದೆ ಈ ವಿದ್ಯಮಾನಗಳಿಂದ ಪರಿಷದವು ಕೂಡುವದೆ ಸ್ವಲ್ಪ ಕಷ್ಟವು ತೋರಿ ಬಂದರೂ ಜಿಲ್ಲೆಯ ಇತರ ಪ್ರಾಂತ್ಯಗಳ ಸಂಘಗಳ ಪ್ರತಿನಿಧಿಗಳ ಸಹಾಯದಿಂದ ಮಂಗಳೂರಿನಲ್ಲಿಯ ಮುಂದಾಳುಗಳು ಪರಿಷದವನ್ನು ಸಾಂಗವಾಗಿ ನೆರವೇರಿಸಿಕೊಡುವರೆಂಬ ಭರವಸೆಯು ಪೂರ್ಣವಾಗಿರುವುದು. ಅಧ್ಯಕ್ಷರನ್ನಾಗಿ ಯಾರನ್ನು ಆರಿಸಬಹುದೆಂಬ ಸಂಗತಿಯಲ್ಲಿ ಲಕ್ಷ್ಯಕ್ಕೆ ತಂದುಕೊಳ್ಳಬೇಕಾದ ಒಂದೆರಡು ವಿಚಾರಗಳಿರುವವು ಉದ್ಯೋಗಸ್ಥರಲ್ಲಿ ಯಾರನ್ನಾದರೂ ಈ ಬಗ್ಗೆ ಆರಿಸಿದರೆ ಸಭಾಸದರು ದಾಕ್ಷಿಣ್ಯದಿಂದ ತಮಗೆ ಯುಕ್ತ ತೋರಿ ಬರುವಂತೆ ವಿಷಯಗಳನ್ನು ಸಭೆಯಲ್ಲಿ ವಾದಿಸರೆಂಬ ಆಕ್ಷೇಪವು ಮದ್ರಾಸಿನ ಆಂಗ್ಲ ಪತ್ರಿಕೆಯೊಂದರಲ್ಲಿ ಇತ್ತಲಾಗೆ ತೋರಿ ಬಂದಿರುವುದು ಕಳೆದ ಸರ್ತಿ ಕಲ್ಲಿಕೋಟೆಯಲ್ಲಿ ಜರುಗಿದ ಪರಿಷದದಲ್ಲಿ ಅಧ್ಯಕ್ಷರು ಸರಕಾರದ ಉದ್ಯೋಗಸ್ಥರಾದುದರಿಂದ ಸಭೆಯಲ್ಲಿ ಸಭಾಸದರಿಗೆ ಇಷ್ಟ ತೋರಿದಂತೆ ವಾದಗಳನ್ನು ನಡಿಸಲು ಅಲ್ಪಸ್ವಲ್ಪ ಅಂಜಿಕೆಯಿತ್ತೆಂಬುದಾಗಿ ಅಭಿಪ್ರಾಯವಿದೆ ಆದ್ದರಿಂದ ಪರಸ್ಪರ ಸಹಾಯಕ ಸಂಘಗಳ ವಿಷಯವಾಗಿ ಪ್ರಜಾ ಜನರು ಸರಕಾರದವರಿಗೆ ಹೇಳಿಕೊಳ್ಳಲು ಇರುವ ವಿಷಯಗಳು ಪೂರ್ಣವಾಗಿ ನಿಶ್ಚಯಿಸಿಕೊಳ್ಳಬೇಕಾದರೆ ಸರಕಾರದ ಉದ್ಯೋಗಸ್ಥರಲ್ಲದವರನ್ನು ಅಧ್ಯಕ್ಷರನ್ನಾಗಿ ಆರಿಸುವುದು ಉಚಿತವಾಗಿರುವುದು. ಆದ್ದರಿಂದ ಮಂಗಳೂರಲ್ಲಿ ಕೂಡುವ ಪರಿಷದಕ್ಕೆ ಬಹುಮಾನಸಪಟ್ಟ ಶ್ರೀನಿವಾಸ ಶಾಸ್ತ್ರಿಗಳನ್ನು ಅಧ್ಯಕ್ಷರನ್ನಾಗಿ ಚುನಾಯಿಸಬಹುದೆಂತ ಈ ಸಂದರ್ಭದಲ್ಲಿ ಸೂಚಿಸಬಹುದು. ಒಂದು ವೇಳೆ ಶ್ರೀನಿವಾಸ ಶಾಸ್ತ್ರಿಯವರಿಗೆ ಅಧ್ಯಕ್ಷರಾಗಿ ಇಲ್ಲಿಗೆ ಬರಲು ಅನನುಕೂಲವಾದರೆ ಇನ್ನು ಯಾರನ್ನು ಅಧ್ಯಕ್ಷರನ್ನಾಗಿ ಚುನಾಯಿಸಬಹುದೆಂಬದನ್ನು ನಂತರದಲ್ಲಿ ಪರ್ಯಾಲೋಚಿಸಬಹುದು

ಸಭೆಯಲ್ಲಿ ನಡಿಯತಕ್ಕ ವಿಷಯಗಳನ್ನು ಈಗ ನಿರ್ಧರಿಸತಕ್ಕದ್ದು ಪರಸ್ಪರ ಸಹಾಯಕ ಸಂಸ್ಥೆಗಳ ವಿಷಯ ಉಪನ್ಯಾಸಗಳನ್ನು ಓದುವ ವಾಡಿಕೆಯು ಇರುವುದು. ಇಂಥಾ ಉಪನ್ಯಾಸಗಳನ್ನು ಬರೆಯಲು ಈ ಜಿಲ್ಲೆಯ ಅಥವಾ ಈ ಸಂಸ್ಥಾನದ ಒಳ್ಳೇ ಮಾಹಿತಿದಾರರುಗಳನ್ನು ಮುಂದಾಗಿಯೇ ವಿಜ್ಞಾಪಿಸಿಕೊಳ್ಳತಕ್ಕದ್ದು (೧) ದಕ್ಷಿಣ ಕನ್ನಡದಲ್ಲಿ ಪ್ರಜಾ ಸಾಮಾನ್ಯರು ತಮ್ಮ ತಮ್ಮ ವಸ್ತಿಗಳಲ್ಲಿಯೇ ನಡೆಸುವ ಕೈಗಾರಿಕೆ ವೃತ್ತಿಗಳು ಮತ್ತು ಈ ವೃತ್ತಿಗಳನ್ನು ಹೇಗೆ ಅಭಿವೃದ್ಧಿಸಬಹುದು (೨) ಕೈಮಗ್ಗಗಳಿಂದ ವಸ್ತ್ರವನ್ನು ತಯ್ಯಾರಿಸುವ ವೃತ್ತಿಯನ್ನು ಪರಸ್ಪರ ಸಹಾಯಕ ಸಂಘಗಳ ಸಹಾಯದಿಂದ ಹೇಗೆ ಒಳ್ಳಿತಾಗಿ ಮಾಡಬಹುದು (೩) ಮೀನು ಕೈಗಾರಿಕೆ (೪) ತೆಂಗಿನಕಾಯಿ ಸಿಪ್ಪೆಯಿಂದ ಹಗ್ಗಗಳನ್ನು ತಯ್ಯಾರಿಸವುದು (೫) ಹೆಂಚಿನ ಕೈಗಾರಿಕೆ, ಇವುಗಳನ್ನು ಪರಸ್ಪರ ಸಹಾಯ ಸಂಘಗಳ ಸೂತ್ರಾಧಾರದಿಂದ ಹೇಗೆ ಅಭಿವೃದ್ಧಿಸಬಹುದು (೬) ಹಣವನ್ನು ಸಾಲವಾಗಿ ಕೊಡುವ ಈ ಜಿಲ್ಲೆಯಲ್ಲಿರುವ ಸಾಮಾನ್ಯ ಕ್ರಮಗಳು ಯಾವವು (೭) ಕೊಒಪರೇಟಿವ್ ಯೂನ್ಯನ್‌ಗಳು (೮) ದಕ್ಷಿಣಕನ್ನಡಾ ಜಿಲ್ಲೆಯ ರೈತ ಮತ್ತು ಆತನಲ್ಲಿ ಪ್ರಕೃತವಿರುವ ಕಂಡುಕೊರತೆಗಳು (೯) ಈ ಜಿಲ್ಲೆಯಲ್ಲಿ ಪರಸ್ಪರ ಸಹಾಯಕ ಸಂಘಗಳ ಅಭಿವೃದ್ಧಿಯು ಈ ವಿಷಯಗಳಲ್ಲಿ ಉಪನ್ಯಾಸಗಳನ್ನು ಬರೆದು ಸಭೆಯಲ್ಲಿ ಓದಿ ಹೇಳಬಹುದು ಉಪನ್ಯಾಸಗಳು ಒಳ್ಳೇ ರೀತಿ ಬರಿಯೋಕಾಗುವಂತೆ ಈಗಲೇ ಅವುಗಳ ವಿಷಯ ಯೋಚಿಸುವುದು ಒಳ್ಳೇದು ಸಭೆಯ ಮುಂದೆ ನಿರ್ಣಯಗಳ ರೂಪದಲ್ಲಿ ಬೇಕಾದ ಸಂಗತಿಗಳನ್ನು ಸಭೆಕೂಡಲು ಒಂದು ವಾರಕ್ಕೆ ಮೊದಲು ಸಭೆಯ ಕಾರ್ಯದರ್ಶಿಗಳಿಗೆ ತಿಳಿಸೋಣಾಗಬೇಕೆಂಬ ನಿಯಮವನ್ನು ಮಾಡುವುದು ಉಚಿತವಾಗಿರುವುದು

ಪರಿಷದಕ್ಕೆ ಏನೇನೆಲ್ಲಾ ಸಂಗ್ರಹ ಇತ್ಯಾದಿಗಳನ್ನು ಮಾಡಬೇಕೆಂಬದನ್ನು ವಿಚಾರಿಸಿ ಆಮಂತ್ರಣ ಸಭೆಯನ್ನು ಏರ್ಪಡಿಸುವುದು ಮೊದಲಾದ ಕಾರ್ಯನಿರ್ವಾಹವನ್ನು ಇನ್ನು ಒಂದು ವಾರದೊಳಗಾಗಿಯೇ ಮಾಡುವುದು ಆಗತ್ಯವಾಗಿದೆ ಆದ್ದರಿಂದ ಈ ಜಿಲ್ಲೆಯ ಆಯಾ ಕಡೆಗಳಲ್ಲಿರುವ ಪರಸ್ಪರ ಸಹಾಯಕ ಸಂಘಗಳು ಇನ್ನು ತಡಮಾಡದೆ ಎಚ್ಚತ್ತು ಈ ವಿಷಯವನ್ನು ಪರ್ಯಾಲೋಚಿಸುವುದು ಆಗತ್ಯ

ವಿವಾಹವಲ್ಲದೆ ಸದ್ಗತಿಗೆ ಬೇರೆ ಯಾವ ಉಪಾಯವೂ ಇರದೇ ?

ಸಂಘ ಸುಧಾರಣೆಯ ಪ್ರಸ್ತಾಪಗಳನ್ನು ಇತ್ತಲಾಗ್ಗೆ ಸ್ವದೇಶಾಭಿಮಾನಿಯಲ್ಲಿ ಓದುತ್ತಿದ್ದಾಗ ವಿವಾಹವಲ್ಲದೆ ಸದ್ಗತಿಗೆ ಬೇರೆ ಯಾವ ಉಪಾಯವೂ ಇರದೇ ಎಂಬ ಪ್ರಶ್ನೆಗೆ ಉತ್ತರವನ್ನು ಕೊಡಲು ಪ್ರಯತ್ನಿಸುವ ಎಂಬ ಅಭಿಲಾಷೆಯು ನನ್ನಲ್ಲಿ ಮೂಡಿರುವುದು ಪೂರ್ವಾಚಾರ ಪದ್ಧತಿಯವರೂ ಸುಧಾರಕರಾದ ಅರ್ವಾಚೀನ ಪಂಡಿತರೂ ಕೂಡಿಕೊಂಡು ಮೇಲಣ ಪ್ರಶ್ನೆಗೆ ಉತ್ತರವು ಯಾವುದೆಂದು ನಿರ್ಧರಿಸಲು ನೋಡಬೇಕೆಂದು ಸಹ ಈ ಮೂಲಕ ವಿಜ್ಞಾಪಿಸಿಕೊಂಡಿರುವೆನು

ಇತರ ಪ್ರಾಣಿವರ್ಗಗಳಲ್ಲಿ ನಿರ್ಮಿಸೋಣಾಗಿರುವಂತೆ ಮಾನವ ವರ್ಗದಲ್ಲಿ ಸಹ ಸಂಸಾರದ ಅಭಿವೃದ್ಧಿ ಬಗ್ಗೆ ಸ್ತ್ರೀಪುರುಷರು ಸೃಷ್ಟಿಸಲ್ಪಟ್ಟಿರುವರು ಮಾನವ ವರ್ಗವು—ಇದಕ್ಕೆ ಜ್ಞಾನವು ಇರುವುದರಿಂದ—ಎಲ್ಲಾ ಪ್ರಾಣಿವರ್ಗಗಳಲ್ಲಿ ಶ್ರೇಷ್ಠವಾಗಿರುವುದು. ಯಥಾರ್ಥವಾದ ಅಭಿವೃದ್ಧಿಯು ಯಾವುದೆಂದು ನಿಶ್ಚಯಿಸುವ ಶಕ್ತಿಯು ನಮ್ಮಲ್ಲಿರುವುದು. ಆದುದರಿಂದ ಲೋಕಕ್ಕೆ ಕಲ್ಯಾಣವನ್ನುಂಟುಮಾಡುವ ಅಭಿವೃದ್ಧಿಯೇ ಯಥಾರ್ಥವಾದ ಅಭಿವೃದ್ಧಿಯೆಂತ ನಮಗೆಲ್ಲರಿಗೂ ತೋರದೆ ಇರದು. ಎಲ್ಲಾ ಉತ್ಪತ್ತಿಯ ಪ್ರಯತ್ನಗಳು ಮುಖ್ಯವಾಗಿ ಪ್ರಜಾ ಉತ್ಪತ್ತಿಯು ಯಥಾರ್ಥವಾದ ಅಭಿವೃದ್ಧಿಗೆ ಅನುಸರಿಸಿರಬೇಕು. ಲೋಕ ಕಲ್ಯಾಣವನ್ನು ಯೋಚಿಸಿಕೊಂಡು, ವಿವಾಹ, ದಾಂಪತ್ಯ ಇವುಗಳ ಜವಾಬ್ದಾರಿಯನ್ನು ತಿಳಕೊಂಡು ಉಂಟಾಗುವ ಪ್ರಜಾ ಉತ್ಪತ್ತಿಯ ಮೂಲಕ ಸಾಧಿಸಲ್ಪಡುವ ಸಂಸಾರದ ಅಭಿವೃದ್ಧಿಯು ಮಾನವವರ್ಗಕ್ಕೆ ಉಚಿತವಾದದ್ದು; ಅಲ್ಲದೆ ಪಶುಸಮಾನರಾಗಿ ಪತ್ನಿಗಳನ್ನು ಕಟ್ಟಿಕೊಂಡುಂಟಾಗುವ ಪ್ರಜಾ ಉತ್ಪತ್ತಿಯಿಂದ ದುಃಖದರಿದ್ರಗಳು ದೇಶದಲ್ಲಿ ತಲೆದೋರುವ ಸಂಭವಗಳು ಹೆಚ್ಚುತ್ತಿವೆ ಎಂತ ತಿಳಕೊಳ್ಳಬೇಕು. ಈ ವಿಚಾರದಿಂದ ವಿವಾಹವಲ್ಲದೆ ಸದ್ಗತಿಗೆ ಬೇರೆ ಯಾವ ಉಪಾಯವು ಇರದೇ ಎಂಬ ಪ್ರಶ್ನೆಯನ್ನು [illegible] ಮೊದಲಾಗಿ ಹೇಳಕೊಳುವೆನು

ವಿಧವೆಯರು ವಿವಾಹಮಾಡಿಕೊಳ್ಳಬೇಕು, ಪ್ರೌಢ ವಿವಾಹಗಳಾಗಬೇಕು, ಜಾತಿ ಭೇದಗಳನ್ನು ಕಳಚಿಬಿಡಲು ಶೂದ್ರರನ್ನು ಬ್ರಾಹ್ಮಣರೂ ಬ್ರಾಹ್ಮಣರನ್ನು ಶೂದ್ರರೂ ವಿವಾಹಮಾಡಿಕೊಳ್ಳಬೇಕೆಂಬ ಸುಧಾರಕರ ಬೊಬ್ಬೆ. ಮರಣನಂತರ ತಿಲೋದಕಕ್ಕೆ ಗತಿಯು ನಾಸ್ತಿಯಾಗಿ ಹೋಗದಂತೆ ಕ್ಷಯರೋಗಗ್ರಸ್ಥನಾದರೂ ಕುಷ್ಟರೋಗಿಯಾದರೂ ಒಂದು ಹೆಣ್ಣನ್ನು ಹೇಗೂ ಸಂಪಾದಿಸಿಕೊಂಡು ಮಕ್ಕಳನ್ನುಂಟುಮಾಡದಿದ್ದರೆ ಸ್ವರ್ಗಹೀನನಾಗುವನಾದ್ದರಿಂದ ವಿವಾಹವಲ್ಲದೆ ಸದ್ಗತಿಯು ಪ್ರಾಪ್ತವಾಗದೆಂಬ ಪೂರ್ವಾಚಾರ್ಯಪದ್ಧತಿಯವರ ಗೋಳಾಟ. ಈ ಬೊಬ್ಬೆಯಿಂದಲೂ ಈ ಗೋಳಾಟದಿಂದಲೂ ವಿವಾಹದಿಂದಲ್ಲದೆ ಸದ್ಗತಿಗೆ ಬೇರೆ ಉಪಾಯವೇ ಇರದೆಂಬ ಅಭಿಪ್ರಾಯವು ಸಾಮಾನ್ಯರಲ್ಲಿ ಬಲವಾಗುತ್ತ ಬರುವುದು. ಈ ಎರಡು ಪಕ್ಷದವರೂ ಹಿಂದೂ ಜನಾಂಗದ ಹಿಂದಿನ ಉಚ್ಚ ಸ್ಥಿತಿಯ ಇತಿಹಾಸವನ್ನು ನೋಡಿಕೊಂಡು ಪ್ರಜಾಜನರೇ ತಮ್ಮ ಭ್ರಾತೃಗಳು, ದೇಶವೇ ತಮ್ಮ ಮಾತೆಯು ಎಂತ ಭಾವಿಸಿ ದೇಶೋದ್ಧರಣೆಗೋಸ್ಕರ ವಿವಾಹವನು ಮಾಡಿಕೊಳ್ಳದೆ ಇಹದಲ್ಲಿಯೂ ಪರದಲ್ಲಿಯೂ ಸದ್ಗತಿಗಳನ್ನು ಘಳಿಸಿಕೊಂಡವರ ಉದಾಹರಣೆಗಳು ಎಷ್ಟು ಇರುವವೆಂಬುದನ್ನು ತಿಳಕೊಳ್ಳುವುದು ಅಗತ್ಯ. ವಿದ್ಯಾವಂತ ಸುಧಾರಕರು ತಮ್ಮ ಹೆಮ್ಮಕ್ಕಳಿಗೆ ಪ್ರೌಢವಿದ್ಯಾಭ್ಯಾಸವನ್ನು ಕೊಡಿಸಿ, ಅನ್ಯಜಾತಿಯ ವರರನ್ನು ಇವರು ಆರಿಸಿ, ವಿವಾಹಮಾಡುತ್ತಿರುವರು. ಇಂಥಾ ಹೆಮ್ಮಕ್ಕಳಲ್ಲಿ ಕೆಲವರು ಯೋಗಿನಿಯರಾಗಿ ನಿಂತು ಸಮಾಜಸೇವೆಗೆ ತಮ್ಮ ಜೀವಿತವನ್ನರ್ಪಿಸುವಂತೆ ಮಾಡಿಸಿದರೆ ಇವರು ಸಮಾಜದ ಯಥಾರ್ಥ ಹಿತಚಿಂತಕರೆಂತ ಸರ್ವರಿಂದಲೂ ಮನ್ನಿಸಲ್ಪಡುವರು. ಸುಧಾರಕರು ಈ ರೀತಿ ವರ್ತಿಸಲು ಪ್ರಯತ್ನಿಸಿದರೆ ಪೂರ್ವಾಚಾರ ಪದ್ಧತಿಯವರಿಗೆ ಇವರಲ್ಲಿ ಶ್ರದ್ಧೆ ಭಕ್ತಿ ವಿಶ್ವಾಸಗಳುಂಟಾಗಿ ಸಮಾಜ ಸುಧಾರಣೆಯ ಕಾರ್ಯವು ಸುಲಭವಾಗಿ ನೆರವೇರುವುದು. ಸ್ತ್ರೀವರ್ಗದಲ್ಲಿಯೂ ಪುರುಷವರ್ಗದಲ್ಲಿಯೂ ಸಮಾಜಸೇವೆಯ ಬಗ್ಗೆ ತ್ಯಾಗಶಾಲಿಗಳ ವೃಂದವು ಈ ರೀತಿ ನಿರ್ಮಿಸಲ್ಪಟ್ಟರೆ ಜೀವಿತದ ಘನ ಉದ್ದೇಶಗಳು ವಿವಾಹವಲ್ಲದೆ ಇನ್ನೂ ಹಲವು ಉತ್ಕೃಷ್ಟ ಸಾಧನೆಗಳಿಂದ ನೆರವೇರಬಹುದೆಂಬ ಪರಿಶುದ್ಧ ಭಾವನೆಗಳು ಪ್ರಜಾವರ್ಗದಲ್ಲಿ ಬಲವಾಗಿ ಬೇರೂರಿಕೊಳ್ಳುವವು. "ಮಗೂ, ನೀನು ವಿವಾಹವಾಗುವಿಯಾ" ಎಂತ ತೊಟ್ಟಿಲಲ್ಲಿ ಕೂಸನ್ನು ತೂಗುತ್ತಿರುವಾಗಲೇ ಅದನ್ನು ಕೇಳುತ್ತ ಅದರ ನಿಷ್ಕಳಂಕ ಹೃದಯದಲ್ಲಿ ವಿವಾಹ ಬಾವನೆಯು ಕಲಸಿತವಾಗಿ ಹೋಗುವಂತೆ ಮಾಡುವ ಮುದ್ದುನುಡಿಗಳು ಮತ್ತು ಮಕ್ಕಳ ಲಾಲನೆ ಪಾಲನೆಯ ಇನ್ನೂ ಹಲವು ದೋಷಕರ ವಾಡಿಕೆಗಳು—ಇವುಗಳಿಂದ ವಯಸ್ಸು ಹೆಚ್ಚಿದಂತೆ ಸ್ತ್ರೀಪುರುಷರಲ್ಲಿ ವಿವಾಹಕ್ರಿಯೆಯು ಐಚ್ಛಿಕವಲ್ಲ, ಸದ್ಗತಿಗೆ ಇರುವ ಒಂದೇ ಒಂದು ಮಾರ್ಗವಾಗಿದೆ ಎಂಬ ಭಾವನೆಯು ಪ್ರಕೃತ ಸರ್ವರಲ್ಲಿಯೂ ಚನ್ನಾಗಿ ರೂಢಮೂಲವಾಗುತ್ತಾ ಬರುತ್ತಿರುವುದು. ಇಂಥಾ ಮೂಢಾಚಾರದ ವಾಡಿಕೆಗಳನ್ನು ಶಿಕ್ಷಣಮೂಲಕ ಮುರಿದುಬಿಡಬೇಕು ಮತ್ತು ಸಂಕಟದಲ್ಲಿರುವಂಥ ನಮ್ಮ ನೆರೆಯವರಿಗೆ, ನಮ್ಮ ಬಂಧುಗಳಿಗೆ, ನಮ್ಮ ದೇಶಬಾಂಧವರಿಗೆ ಸಹಾಯವನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆಂಬ ಸಮಾಜಸೇವೆಯ ಶೀಲವು ಬಾಲ್ಯ ಪ್ರಾಯದಲ್ಲಿಯೇ ನಮ್ಮ ಪೀಳಿಗೆಯವರಲ್ಲಿ ಬೆಳೆಯುವಂತೆ ಮಾಡಬೇಕು. ಆಗ ಜೀವಿತ ಉದ್ದೇಶಗಳೇನು, ಅವುಗಳು ವಿವಾಹ ಮೂಲಕವೇ ನೆರವೇರಬೇಕೋ ಎಂಬುದು ಸರಿಯಾಗಿ ತಿಳಿಯಲಾಗುವುದು. ವಿವಾಹವಲ್ಲದೆ ಸದ್ಗತಿಗೆ ಹಲವು ಬೇರೆ ಉತ್ಕೃಷ್ಟ ಸಾಧನೆಗಳಿರುವವೆಂಬುದೂ ಸಹ ವ್ಯಕ್ತವಾಗುವುದು.

ಅತ್ರಿಗೋತ್ರಜ.

ವೀರವೆಂಕಟಪುರದ ಕಸ್ಟಮ್ಸ್ ಆಫೀಸು.

(ಚಿತ್ರಪ್ರದರ್ಶನ)

ಸಾಯಂಕಾಲ ಆರು ಘಂಟೆಗೆ ೫ ನಿಮಿಷಗಳಿರುವುದರಿಂದ ಗೋವಿಂದಸೆಟ್ರು ಮಾನಿಫೆಸ್ತುಗಳ ಕಟ್ಟು (ಸಮುದ್ರ ಮಾರ್ಗವಾಗಿ ಬಂದ ಮತ್ತು ಹೋಗುವ ಸರಕಾರಿ ದಾಖಲೆ ಪಟ್ಟಿ) ಒಂದನ್ನು ತೆಗದುಕೊಂಡು ಅವಸರದಲ್ಲಿ ಕಸ್ಟಮ್ಸ್ ಆಫೀಸಿನ ಕಡೆ ಓಡುತ್ತಿದ್ದರು. ಗೋವಿಂದಸೆಟ್ರ ಹಿಂದಕಡೆಯಲಿಯೇ ತಾಂಡೇಲ ಬಲವಂತರಾಮನೂ ಈ ಬಲವಂತರಾಮನ 'ಫತ್ತೆಮಾರಿ'ನಲ್ಲಿ ಸರಕನ್ನು ತುಂಬಿಸಿದ ಸಾವಕಾರ ತುಂಬೆಗುಡ್ಡದ ರಾಮಪ್ಪನ್ಯಾಕರೂ ಗೋವಿಂದಸೆಟ್ರನ್ನು ಹಿಂಬಾಲಿಸಿಕೊಂಡು ಹೋಗುತ್ತಿದ್ದರು. ಮಾನಿಫೆಸ್ತು ಕಸ್ಟಮ್ಸ್ ಆಫೀಸಿನಲ್ಲಿ 'ಪಾಸಾಗಿ ಪೋರ್ಟಪೀಸಿಗೆ ಹೋಗಿ ಪೋರ್ಟ ಕ್ಲಿಯರೆನ್ಸಿ'ಗೆ ಅಂದರೆ ಫತ್ತೆಮಾರಿಯು ಬಂದರವನ್ನು ಬಿಟ್ಟು ಹೋಗಲಿಕ್ಕೆ ಅಪ್ಪಣೆ ಸಿಕ್ಕಬೇಕು. ಆಫೀಸನ್ನು ಮುಚ್ಚಲು ಇನ್ನು ಐದೇ ನಿಮಿಷಗಳಿರುವವು. ಸಾಯಂಕಾಲದಲ್ಲಿಯೇ ವೀರವೆಂಕಟಪುರದ ಬಂದರನ್ನು ಬಿಟ್ಟು ತೆರಳಲು ಆಗುವುದೋ ಇಲ್ಲವೋ ಎಂಬ ಯೋಚನೆಯು ವಿಶೇಷವಾಗಿ ಬಲವಂತರಾಮನಿಗೆ ಹಿಡಿದಿದ್ದರಿಂದ ಆತನು ತನ್ನ ಈ ಯೋಚನೆಯು ನಿವಾರಣೆಯಾಗುವಂತೆ ತುಂಬೆಗುಡ್ಡದ ರಾಮಪ್ಪನ್ಯಾಕರನ್ನು ಕಸ್ಟಮ್ಸ್ ಆಫೀಸಿಗೆ ಕರಕೊಂಡು ಹೋಗುತ್ತಿದ್ದನು. ವೀರವೆಂಕಟಪುರದಲ್ಲಿಯ ಈ ಕಸ್ಟಮ್ಸ್ ಆಫೀಸಿನಲ್ಲಿರುವ ಕಾರ್ಯ ಕ್ರಮಗಳು ಆ ಊರ ಬಂದರದ ಸಾವಕಾರರಿಗೆ ಅನುಕೂಲವಾದ ರೀತಿಯಲ್ಲಿಯೇ ಇರುವವು. ಗೋವಿಂದಸೆಟ್ರು ಕಸ್ಟಮ್ಸ್ ಆಪೀಸನ್ನು ಪ್ರವೇಶಿಸುವಾಗ ಗೋವಿಂದಸೆಟ್ರಂತೆಯೇ ಮಾನಿಫೆಸ್ತುಗಳ ಕಟ್ಟುಗಳನ್ನು ಕೈಯಲ್ಲಿ ಹಿಡಕೊಂಡು ಹಲವರು ನಿಂತಿದ್ದರು. ಇವರ ಹಿಂದಕಡೆ ನೂರಾರು ಜನ ತಂಡೇಲರು ಮತ್ತು ಕಲಾಸಿಗಳು ಸಾಲಾಗಿ ಕೈಕಟ್ಟಿ ನಿಂತುಕೊಂಡು ನಿದ್ರೆಯಿಂದ ತಲೆತೂಗುತ್ತಿದ್ದರು. ಅಯ್ಯೋ, ಪಾಪ! ಈ ತಂಡೇಲರುಗಳನ್ನೂ ಕಲಾಸಿಗಳನ್ನೂ ಯಾರಿಗೆ ಪರಿಹೋಲಿಸಲಿ! ಕಟುಕನ ಮುಂದಿರುವ ಕುರಿ ಹಿಂಡಿನಂತಿರುವರೆಂದು ಹೇಳಲೋ? ಕುರಿಗಳಂತೆ ನಿರಪರಾಧಿಗಳೋ, ಅಲ್ಲ! ವೀರವೆಂಕಟಪುರದ ಭಾಷೆಯು ಇವರಿಗೆ ತಿಳಿಯದ್ದರಿಂದ ಕುರಿಗಳಂತೆ ಮೂಕಪ್ರಾಣಿಗಳು, ಹೌದು, ಅಷ್ಟರ ಮಟ್ಟಿಗೆ ಮಾತ್ರ ಕುರಿಗಳಂತ ಹೇಳಬಹುದು. ನಿರಪರಾಧಿಗಳು ಏಕೆ ಅಲ್ಲವೆಂತ ಹೇಳೋಣಾಯಿತೆಂಬ ವಾದಕ್ಕೆ ಉತ್ತರವನ್ನು ಹೇಳಿಯೇ ಈ ಕಸ್ಟಮ್ಸ್ ಆಫೀಸಿನ ವರ್ಣನೆಯನ್ನು ಮುಂದರಿಸುವ. ತಂಡೇಲರು ಕಲಾಸಿಗಳು ಇವರು ತಮ್ಮ ಫತ್ತೆಮಾರಿಗಳ ಮೇಲ ಸರ್ವಾಧಿಕಾರಿಗಳು. ತಮ್ಮ ಕೈವಶ ಕೊಟ್ಟಿರುವ ಸರಕುಗಳಿಂದ ಒಂದಿಷ್ಟನ್ನಾದರೂ ಕದ್ದು ತೆಗೆಯಕೂಡದೆಂಬ ಸಾವಕಾರರ ಕಟ್ಟಾಜ್ಞೆಯು ಇವರಿಗಿದ್ದರೂ ಇವರು ಫತ್ತೇಮಾರಿಯನ್ನು ಬಿಟ್ಟು ಬಂದರದಲ್ಲಿ ಅತ್ತಿತ್ತ ಹೋಗುವಾಗ ಮಾತ್ರ ಈ ಕಟ್ಟಾಜ್ಞೆಗೆ ವಿಧೇಯರಾಗಿ ಅತಿ ನಮ್ರಭಾವದಿಂದ ನಡೆಯುವರು. ಒಂದು ಸರ್ತಿ ಬಂದರು ಬಿಟ್ಟು ಸಮುದ್ರಮಾರ್ಗವಾಗಿ ಹೋಗಲಿಕ್ಕೆ ಅಪ್ಪಣೆ ದೊರಕಿತೆಂದರೆ ಭೂಮಿಯಮೇಲೆ ಕುರಿಗಳಂತೆ ಇರುವ ಈ ತಾಂಡೇಲ ಕಲಾಸಿಗಳಿಗೆ ಸಮುದ್ರದಲ್ಲಿ ಹುಲಿಗಳ ಆವೇಷವು ಬರುವುದು. ಯಾರ ಕಟ್ಟಾಜ್ಞೆಯಿದ್ದರೂ ಅದು ಕೂಡಲೆ ಸಮುದ್ರ ಪ್ರವಾಹದಲ್ಲಿ ಬಿದ್ದು ಹರಿದು ಹೋಗುವಂತೆ ಮಾಡುವರು. ತಮ್ಮ ಸ್ವಾಧೀನವಿದ್ದ ಸರಕುಗಳನ್ನು ಇಚ್ಛಾನುಸಾರ ತೆಗದು ತಾವೇ ಬೇಕಾದಷ್ಟನ್ನು ಉಪಯೋಗಿಸಿಕೊಂಡು ಮತ್ತಿಷ್ಟನ್ನು ಮಾರಲಿಕ್ಕೆ ಪ್ರತ್ಯೇಕಿಸಿಡುವದೂ ಉಂಟು. ಆದ್ದರಿಂದ ಇವರು ನಿರಪರಾಧಿಗಳೆಂತ ಹೇಳಲಾಗುವುದಿಲ್ಲ. ಒಂದು ವೇಳೆ ಸಮುದ್ರತಳವನ್ನು ಬಿಟ್ಟು ಬೂತಳಕ್ಕೆ ಬಂದಾಗ ಮಾತ್ರ ಇವರು ನಿರಪರಾಧಿಗಳಾಗಿರುವರೆಂತ ಹೇಳಬಹುದೋ ಏನೋ?

(ಮುಂದೆ ಸಾಗುವುದು)

ಮೈಸೂರು ಸಂಸ್ಥಾನದ ದಿವಾನರವರ ಆಗಮನ

ಬೈಂದೂರು ಇದೇ (ತಾ ೧೬—೧—೧೫ನೇ) ಶನಿವಾರ ಮಧ್ಯಾಹ್ನ ೧೧ ಘಂಟೆ ಸಮಯ ಭಟ್ಕಳ ರೇವನ್ನು ಸಂದರ್ಶಿಸುವ ನಿಮಿತ್ತವಾಗಿ ಶ್ರೀಮನ್ ಮೈಸೂರು ಸಂಸ್ಥಾನದ ದಿವಾನ ಶಿರೋಮಣಿಗಳಾದ ಮಿ। ಎಂ. ವಿಶ್ವೇಶ್ವರೈಯ್ಯ ಬಿ. ಎ. ಸಿ. ಐ. ಇ. ಯವರ ಸವಾರಿಯು ಪ್ರೈವೇಟ್ ಸೆಕ್ರೆಟರಿಗಳ ಹಾಗೂ ಶಿವಮೊಗ್ಗಾ ಡಿ. ಡಿ. ಕಮಿಶನರ ಜತೆ ಮೋಟರು ಬಂಡಿಯಲ್ಲಿ ಕುಳಿತು ನಮ್ಮ ಬೈಂದೂರು ಮಾರ್ಗವಾಗಿ ತೆರಳೋಣಾಯಿತು. ಇಲ್ಲಿಯ ಪೋಲೀಸ್ ಸ್ಟೇಶನ್ ಬಳಿಯಲ್ಲಿ ಮ। ರಾ। ಪೋಲೀಸ್ ಸ. ಇ ರವರೂ, ಸಬ್ ರಿಜಿಸ್ತ್ರಾರರವರೂ, ಡಾಕ್ಟರರೇ ಮುಂತಾದ ಸ್ಥಳೀಯ ಅಧಿಕಾರಿಗಳೂ, ಮತ್ತು ಡಿಸ್ಟ್ರಿಕ್ಟ ವ ತಾಲೂಕುಬೋರ್ಡ ಮೆಂಬರರೂ ಆದ ಶ್ರೀಯುತ ಬೈಂದೂರು ವೆಂಕಟರಮಣ ಹೊಳ್ಳರು ಬಿ. ಎ. ಯವರೇ ಮುಂತಾದ ಸ್ಥಳೀಯ ಮಾನ್ಯ ಗೃಹಸ್ಥರೂ ಕೂಡಾ ದಿವಾನರವರ ಸಂದರ್ಶನಾರ್ಥವಾಗಿ ಕಾದುಕೊಂಡಿದ್ದರು. ಸ್ವಲ್ಪ ಕಾಲದಲ್ಲಿ ದಿವಾನರು ತಮ್ಮ ಭಟ್ಕಳ ಬಂದರು ಸಂದರ್ಶನವನ್ನು ಪೂರೈಸಿ ವಾಪಸು ಬರುತ್ತಾ ಸ್ಟೇಶನ್ ಬಳಿ ಮೋಟಾರನ್ನಿಳಿದು ನೆರದ ಮಾನ್ಯ ಗೃಹಸ್ಥರಿಗೆ ಭೇಟಿಕೊಟ್ಟರು. ಆಗ ಮಹನೀಯರೆಲ್ಲರೂ ದಿವಾನರಿಗೆ ಸ್ವಾಗತಪೂರ್ವಕವಾಗಿ ವಂದನೆಯನ್ನು ಸಮರ್ಪಿಸಿದರು. ಆ ಮೇಲೆ ಪೋಲೀಸಿನವರು ಪದ್ಧತಿ ಪ್ರಕಾರ ಸೆಲ್ಯೂಟ್ ಮಾಡಿದನಂತರ ಶ್ರೀಯುತ ಬೈಂ ವೆಂ ಹೊಳ್ಳರವರು ದಿವಾನರವರಿಗೆ ಪುಷ್ಪಗುಚ್ಛವನ್ನರ್ಪಿಸಿ ಹಸ್ತಲಾಘವವನ್ನಿತ್ತು ನೆರದಿದ್ದ ಸನ್ಮಾನ್ಯರೊಡನೆ ದಿವಾನರನ್ನು ಪೋಲಿಸ್ ಸ್ಟೇಶನಿಗೆ ಕರದೊಯ್ದರು. ಅಲ್ಲಿ ಅವರಿಗಾಗಿ ಸಿದ್ಧಪಡಿಸಿದ್ದ ಆಸನದಲ್ಲಿ ಕುಳಿತು ಎಳ ನೀರನ್ನು ಸ್ವೀಕರಿಸಿ ಸ್ಥಳೀಯಾಧಿಕಾರಿಗಳ ಮತ್ತು ಶ್ರೀಯುತ ಹೊಳ್ಳರವರ ಪರಿಚಯವನ್ನು ವಿಚಾರಿಸಿ ತಿಳಕೊಂಡು ಕೆಲ ಸಮಯದ ವರೇಗೆ ಅವರೊಡನೆ ಸಾಮಾನ್ಯರಂತೆ ಸಂಭಾಷಣೆ ಮಾಡುತ್ತಿದ್ದು ಮಂಗಳೂರು ಮತ್ತು ಕಾರವಾರ್ ಈ ಮಧ್ಯ ಇರುವ ಬಂದರುಗಳಲ್ಲಿ ಶ್ರೇಷ್ಠವಾದುದ್ಯಾವದೆಂತ ವಿಚಾರಿಸಿ ಭಟ್ಕಳವೇ (ಮತ್ತು ಮಲ್ಪೆ ಸಹಾ) ಮುಖ್ಯವಾದುದೆಂಬ ಜನಾಭಿಪ್ರಾಯವನ್ನು ಹೊಂದಿ ಇಲ್ಲಿನವರ ಸತ್ಕಾರಕ್ಕೆ ಸಂತುಷ್ಟರಾಗಿ ಚಿತ್ತೈಸಿದ್ದ

ರೆಂಬ ವಾರ್ತೆಯನ್ನು ತಿಳಿಸಲಿಕ್ಕೆ ಆನಂದಪಡುತ್ತೇನೆ ಇವರು ಭಟ್ಕಳ ರೇವನ್ನು ಸಂದರ್ಶಿಸಲಿಕ್ಕೆ ಬಂದುದು ಸಾಗರದಿಂದ ಭಟ್ಕಳಕ್ಕೆ ರೈಲ್ವೇ ಹಾಕಿಸುವ ಆಲೋಚನೆಯಿಂದಲೆಂದು ಜನಶ್ರುತಿ ಇದೆ. ಈ ಜನಶ್ರುತಿಯು ನಿಜವಾಗಿ, ಮೈಸೂರು ಸಂಸ್ಥಾನಕ್ಕೂ ನಮ್ಮ ಬೈಂದೂರು ಭಟ್ಕಳ ಪ್ರಾಂತ್ಯಕ್ಕೂ ವಿಶೇಷ ವ್ಯಾಪಾರ ವಹಿವಾಟು ನಡೆದು ಜನಾನುಕೂಲವೂ ಉಭಯ ರಾಷ್ಟ್ರಗಳ ಪರಸ್ಪರ ಪ್ರೀತಿ ವಿಶ್ವಾಸ ಸಂಪದಭ್ಯುದಯಾದಿ ಸತ್ಫಲಗಳೂ ಪ್ರಾಪ್ತವಾಗುವ ಸುಕಾಲವನ್ನು ಹಾರೈಸುತ್ತಿರುವೆವು

ಪ್ರತ್ಯಕ್ಷದರ್ಶಿ

ಹಸುಗೂಸುಗಳ ಅಕಾಲಮರಣ.

ಹಿಂದೂಸ್ಥಾನದಲ್ಲಿ ಮೃತರಾಗುವ ಹಸುಗೂಸುಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವದರಿಂದ ಹಿಂದೂಸ್ಥಾನದ ಮುಂದಾಳುಗಳೂ, ಸರಕಾರದವರೂ ಹಸುಗೂಸುಗಳ ಮರಣ ಸಂಖ್ಯೆಯು ಹೆಚ್ಚಾಗಲು ಕಾರಣವೇನೆಂಬದನ್ನು ತಿಳಕೊಳ್ಳುವ ವಿಷಯಕ್ಕೆ ಈಗಲೀಗ ಹೆಚ್ಚಿನ ಗಮನ ಕೊಡುತ್ತಿದ್ದಾರೆ ಹಿಂದೂಸ್ಥಾನದಲ್ಲಿ ಮೃತರಾಗುವ ಶಿಶುಗಳಲ್ಲಿ ಹೆಚ್ಚಿನವು ಒಂದು ತಿಂಗಳೊಳಗಾಗಿಯೇ ಮೃತಪಡುವವು ಅದಲ್ಲದೆ ಈ ಮರಣ ಸಂಖ್ಯೆಯನ್ನು ನೋಡುವದಾದರೆ ಹೆಣ್ಣುಮಕ್ಕಳಿಗಿಂತಲೂ ಮೃತರಾಗುವ ಗಂಡು ಮಕ್ಕಳ ಸಂಖ್ಯೆಯೇ ಹೆಚ್ಚಾಗಿರುವದು ಕಲ್ಕತ್ತೆಯಲ್ಲಿ ಒಂದು ವರ್ಷ ವಯಸ್ಸಿನೊಳಗೆ ಮೃತಪಟ್ಟ ೨೭೦೦ ಮಕ್ಕಳಲ್ಲಿ ಶೇಕಡಾ ೫೦ರಂತೆ ಕಾಲತಪ್ಪಿ ಜನಿಸಿದರಿಂದಲೂ ೧೦೦೦ ಮಕ್ಕಳು ದುರ್ವಾರ್ತ ಮತ್ತು ಮಕ್ಕಳ ಶೇಕ್ಷೆಯಿಂದಲೂ ಮೃತವಾಗಿರುವವೆಂತ ಕಲ್ಕತ್ತೆಯಲ್ಲಿ ಹೆಲ್ತ್ ಆಫೀಸರರಾಗಿದ್ದ ಡಾಕ್ಟರ್ ಪಿಯರ್ಸನರವರು ಹೇಳುವರು ಇಂಥಾ ಬಾಲಮೃತ್ಯುಗೆ ಹೆತ್ತವರ ಅನಾರೋಗ್ಯವೋ ಮಗುವಿನ ಜನನಕಾಲ ಹೆತ್ತವರು ವಾಸಿಸುವ ಅನಾರೋಗ್ಯ ಸ್ಥಿತಿಯು ಮನೆಗಳೂ ಕಾರಣವಾಗಿರುವವು ಹೆತ್ತವರ ಅನಾರೋಗ್ಯಕ್ಕೆ ಬಾಲವಿವಾಹವೇ ಕಾರಣವಾಗಿದೆ ಮುಖ್ಯವಾಗಿ ಹೆಂಗಸರಿಗೆ ಬಾಲ್ಯದಲ್ಲಿ ವಿವಾಹ ಮಾಡುವದರಿಂದ ಅವರ ಆರೋಗ್ಯವು ಕೆಟ್ಟು ಹೋಗುವದು ಇವೂ ಇತರ ಸಾಮಾಜಿಕ ಪದ್ಧತಿಗಳೂ ಮಕ್ಕಳ ಮರಣ ಸಂಖ್ಯೆಯು ಹೆಚ್ಚಾಗುವದಕ್ಕೆ ಕಾರಣವಾಗಿರುವುದರಿಂದ ಈ ಮರಣ ಸಂಖ್ಯೆಯನ್ನು ತಗ್ಗಿಸುವುದು ಕಷ್ಟಸಾಧ್ಯವಾಗಿದೆ ವಿದ್ಯಾಭ್ಯಾಸವನ್ನು ಜನಸಾಮಾನ್ಯರೊಳಗೆ ಹರಡಿಸುವದರಿಂದ ಮಾತ್ರ ಈ ಮರಣ ಸಂಖ್ಯೆಗೆ ತಡೆಕಟ್ಟಬಹುದಾಗಿದೆ ಹಿಂದೂಸ್ಥಾನದಲ್ಲಿ ಮಲಗುವ ಕೋಣೆಗಳು ಕಿಡಿಕಿ ಬಾಗಲುಗಳಿಲ್ಲದೆ ಗಾಳಿ ಸಂಚಾರಕ್ಕೆ ಎಡ ಇಲ್ಲದಿರುತಿರುವವು ಮನೆಯ ಮೂಲೆಯಲ್ಲಿರುವ ಕಿಡಿಕಿಗಳಿಲ್ಲದ ಕೋಣೆಗಳನ್ನು ಮಲಗಲಿಕ್ಕೆ ಪ್ರಯೋಗಿಸುವ ವಾಡಿಕೆಯು ಹೆಚ್ಚಾಗಿರುವದು ಕತ್ತಲೆ ಕವಿದಿರುವ, ಗಾಳಿ ಸಂಚಾರಕ್ಕೆ ಎಡೆ ಇಲ್ಲದ ಸಣ್ಣ ಕೋಣೆಯನ್ನು ಆರಿಸುವ. ಕಿಡಿಕಿಗಳಿದ್ದರೂ ತಾಯಿಗೆ ಯಾ ಮಗುವಿಗೆ ಶೀತ ತಗಲುತ್ತದೆಂಬ ಭಾವನೆಯಿಂದ ಮುಚ್ಚಿಕೊಳ್ಳುವ ಸೂತ್ರವನ್ನು "ಅಪ್ಪ ನೆಟ್, ಗೋಳಿಮರ"ವೆಂಬಂತೆ ಮಕ್ಕಳ ತಾಯಿಯಂದಿಯರು ಭಾವಿಸಿರುವರು ಆದರೆ ಇಂಥಾ ಭಾವನೆಯು ಈಗಲೀಗ ಕಮ್ಮಿಯಾಗುತ್ತಿದೆಯೆಂದು ಸಂತೋಷದಿಂದ ಹೇಳಬಹುದಾದರೂ ತಾಯಿಯು ಮಲಗುವ ಹಾಸಿಗೆ ಚಾಪೆ ಇತ್ಯಾದಿಗಳ ಸ್ಥಿತಿಯು ಮತ್ತಷ್ಟು ಹೇಯವಾಗಿರುವದು. ಚಾಪೆಯ ಮೇಲೆ ತಂಬಾ ಮೈಲಿಗೆಯಾದ ವಸ್ತ್ರಗಳನ್ನು ಹಾಸುವರು ಹರಿದು ಹೋದ, ಕಂಬಾದ ಚಾಪೆಯಲ್ಲಿ ಮಲಗುವರು ಮಲಗುವಂಥಾ ಚಾಪೆ ಇತ್ಯಾದಿಗಳು ನಿರ್ಮಲವಾಗಿದ್ದಾಗಬೇಕೆಂಬ ಭಾವನೆಯೇ ತಾಯಿಯಂದಿಯರಲ್ಲಿ ಇರದು. ಬಾಣಂತಿಯಾಗುವ ಕಾಲವು ಇತರ ಅಂಟುರೋಗಗಳ ಸೋಂಕಿಗೆ ವಿಶೇಷ ಎಡೆ ಇರುವಂಥಾ ಕಾಲವಾಗಿರುವದರಿಂದ ಇಂಥಾ ಸಮಯದಲ್ಲಿ ತಾಯಿಯಂದಿಯರು ಗಾಳಿ ಸಂಚಾರವಿಲ್ಲದ ಕೋಣೆಗಳಲ್ಲಿ ಅಶುದ್ಧವಾದ ಚಾಪೆಗಳಲ್ಲಿ ಮಲಗುವದರಿಂದ ಸಣ್ಣ ಪುಟ್ಟ ಕೂಸುಗಳಿಗೆ ಒಡನೆ ಅಂಟುರೋಗಗಳು ಸೋಂಕುವವು

ಶಿಶುಗಳ ಮರಣಕ್ಕೆ ಇನ್ನೂ ಅನೇಕ ಕಾರಣಗಳಿರುವವು ಆದರೆ ಬಂಗಾಳದ ಖಾನೇಶುಮಾರಿ ಸುಪರಿಂಟೆಂಡೆಂಟರಾಗಿದ್ದ ಮಿ| ಎಲ್. ಎಸ್. ಎಸ್ ಮಾಲ್ಲಿಯವರು ಬಾಲವಿವಾಹ ಪದ್ಧತಿ ಅಥವಾ ಹೆತ್ತವರ ಅಚೇತನವೂ, ಮುಖ್ಯವಾಗಿ ಮಲೇರಿಯ ಜ್ವರದ ಸೋಂಕು ಇರುವ ಪ್ರಾಂತ್ಯದ ಹೆತ್ತವರ ಅಶಕ್ತಿಯೂ ಮಕ್ಕಳ ಮರಣ ಸಂಖ್ಯೆಯು ಹೆಚ್ಚಲು ಕಾರಣವೆಂದು ಹೇಳುವರು. ಕೂಲಿಗಾರರ ತರಗತಿಯನ್ನು ನೋಡುವದಾದರೆ ಹೆಚ್ಚಿನ ಹೆಂಗಸರು ಬಾಣಂತಿಯಾಗುವ ಕಡೇ ಘಳಿಗೆಯ ವರೆಗೆ ರಾತ್ರಿ ಹಗಲು ಗಾಳಿಮಳೆಯಲ್ಲಿ ಕಾಯಕಷ್ಟಮಾಡುವರು. ಇಂಥವರು ಅಕಾಲ ಬಾಣತಿಯರಾಗುವದೂ, ಬಲಹೀನವಾದ ಮಕ್ಕಳನ್ನು ಹೆರುವದೂ ಹೆಚ್ಚಾಗಿದೆ. ಇಂಥಾ ಮಕ್ಕಳು ಬೇಗನೇ ಸಾಯುವವು ಎಂಬದಾಗಿ ಈ ಆಫೀಸರರ ವಾದವಾಗಿರುವದು. ಒಟ್ಟಾರೆ ಹೆಂಗಸರಿಗೆ ಆರೋಗ್ಯಸಂಬಂಧವಾದ ತಕ್ಕ ತಿಳುವಳಿಕೆಯೂ, ಮಕ್ಕಳ ರೋಗ ಸಂಬಂಧವಾದ ಅರುಹೂ ಇಲ್ಲದಿರುವದೇ ಮಕ್ಕಳ ಮರಣಸಂಖ್ಯೆಯು ಹೆಚ್ಚಲು ಕಾರಣವಾಗಿದೆಂದು ಹೇಳಬಹುದಾಗಿದೆ

ಆದಕಾರಣ ಮಲಗುವ ಕೋಣೆ ಸಂಬಂಧವಾದ ಅರುಹು, ಶುದ್ಧತೆಯ ಪ್ರಯೋಜನ, ಬಾಣಂತಿಯಾಗುವ ಕಾಲದಲ್ಲಿ ತಕೊಳ್ಳಬೇಕಾದ ಮುಂಜಾಗ್ರತೆ ಇತ್ಯಾದಿಗಳ ಬೋಧನೆಯನ್ನು ಜನಸಾಮಾನ್ಯರಲ್ಲಿ—ಮುಖ್ಯವಾಗಿ ಹೆಂಗಸರನ್ನು ಈ ವಿಷಯದಲ್ಲಿ ವಿದ್ಯಾವತಿಗಳಾಗ ಮಾಡುವದು ದೇಶಬಾಂಧವರ, ಮುನ್ಸಿಪಾಲಿಟಿಯವರ, ಮತ್ತು ಸರಕಾರದವರ ಕರ್ತವ್ಯವಾಗಿರುವದು ಹೀಗೆ ಮಾಡಿದರೆ ಮಕ್ಕಳ ಮರಣ ಸಂಖ್ಯೆಯು ಕಮ್ಮಿಯಾಗುವದರಲ್ಲಿ ಸಂದೇಹವಿಲ್ಲ

ಈ ಸಂದರ್ಭದಲ್ಲಿ ಮುಂಬಾಯಿ ಗವರ್ನರ ಪ್ರಭುಗಳ ಪತ್ನಿಯವರಾದ ಲೇಡಿ ವಿಲಿಂಗ್ಡನರವರು ಹೆಂಗಸರಿಗೆ ಹೆರುವ ಕಾಲದಲ್ಲಿ ಬೇಕಾದ ಅನುಭವವನ್ನು ಅಲ್ಲಿಯ ವಿದ್ಯಾಹೀನರಾದ ಹೆಂಗಸರಿಗೆ ಬೋಧಿಸುವ ಒಗ್ಗ ಮಾಡಿದ ಏರ್ಪಾಡನ್ನು ಪ್ರತಿ ಒಂದು ಸ್ಥಳದ ವಿದ್ಯಾವಂತ ಹೆಂಗಸರೂ ಕೈಕೊಂಡರೆ ದೇಶಕ್ಕೆ ಹೆಚ್ಚಿನ ಉಪಕಾರವಾಗುವದರಲ್ಲಿ ಅನುಮಾನವಿರದು.

ಹಿಂದೂಸ್ಥಾನದಲ್ಲಿ ನೀಲಿಯ ಬೆಳೆಯನ್ನು ಪುನಃರ್ಜೀವಿಸಬಹುದೋ?

ನೀಲಿ ಕೈಗಾರಿಕೆಯಲ್ಲಿ ಹೆಚ್ಚಿನ ಮಾಹಿತಿದಾರರಾದ ಡಾಕ್ಟರ್ ಪಾರ್ಕಿನರವರು ಲಂಡನಿನ ರೋಯಲ್ ಸೊಸೈಟಿ ಆವ್ ಆರ್ಟ್ಸ್ ಎಂಬ ಸಂಘದಲ್ಲಿ ಈ ವಿಷಯವಾಗಿ ಕೊಟ್ಟ ಭಾಷಣವು ವಿಶೇಷ ಮಹತ್ವವುಳ್ಳದ್ದಾಗಿರುವದು ಡಾಕ್ಟರ್ ಪಾರ್ಕಿನರವರು ನೀಲಿ ಮರವನ್ನು ಬೆಳಸುವ ವಿಧಾನ ಮತ್ತು ಈ ಬಣ್ಣವನ್ನು ತಯಾರಿಸುವ ರೀತಿ ಮೊದಲಾದ ವಿಷಯವಾಗಿ ತಯಾರಿಸಿದ ಅಧ್ಯಾಪನಾ ಸಾಹಿತ್ಯಗಳ ಮೂಲಕ ಚಲೋ ಭಾಷಣವನ್ನು ಕೊಟ್ಟಿರುವರು ಕೃತಕ ನೀಲಿ ಬಣ್ಣವು ಮುಖ್ಯವಾಗಿ ಜರ್ಮನಿಯಲ್ಲಿ ತಯಾರಾಗುತ್ತಿತ್ತು ಆದರೆ ಈಗ ಯುದ್ಧ ಪ್ರಾರಂಭವಾದುದರಿಂದ ಈ ಬಣ್ಣದ ಆಡಚಣೆಯು ಒಂದೊದಗಿರುವದು ಹಿಂದೂಸ್ಥಾನದ ನೀಲಿಯು ಜರ್ಮನಿಯ ನೀಲಿಗಿಂತಲೂ ಉತ್ಕೃಷ್ಟವಾಗಿದ್ದರೂ ಜರ್ಮನಿಯ ನೀಲಿಯ ಪ್ರಯೋಗವು ರೂಢಿಗೆ ಒಂದಂದಿನಿಂದ ಹಿಂದೂಸ್ಥಾನದ ನೀಲಿ ಕೈಗಾರಿಕೆಯು ನಿಂತುಹೋಗಿ ಈ ಕೈಗಾರಿಕೆಯು ಅಧೋಗತಿಯನ್ನು ಹೊಂದಿರುವದು 20 ವರುಷಗಳ ಹಿಂದೆ 1,400,000 ಎಕ್ರೆ ಭೂಮಿಯಲ್ಲಿ ನೀಲಿ ವ್ಯವಸಾಯವಾಗುತ್ತಿತ್ತು ಇದರಿಂದ 3 570,000 ಪವನುಗಳ ಹುಟ್ಟುವಳಿಯಾಗುತ್ತಿತ್ತು ಆದರೆ ಈಗ ನೀಲಿ ಬೆಳೆಯುವ ಭೂಮಿಯ ವಿಸ್ತೀರ್ಣವು ಅತಿ ಕಮ್ಮಿಯಾಗಿ ಸುಮಾರು 1000 ಪವನುಗಳ ಹುಟ್ಟುವಳಿ ಬರುವಷ್ಟು ಸ್ಥಳದಲ್ಲಿ ಮಾತ್ರ ನೀಲಿ ಬೆಳೆಸಲ್ಪಡುತ್ತಿದೆ ನೀಲಿಯ ವ್ಯವಸಾಯವು ಬಿದ್ದುಹೋಗಲು ಜರ್ಮನಿಯ ಕೃತಕ ನೀಲಿಯ ಪ್ರಯೋಗವೇ ಕಾರಣವಾಗಿರುವದು ಹಿಂದೂಸ್ಥಾನದಲ್ಲಿ ಬೆಳೆಸಲ್ಪಡುವ ನೀಲಿ ಗಿಡಗಳಿಂದ ಸಿಕ್ಕುವ ನೀಲಿಯು ಈ ಕೃತಕ ನೀಲಿಗಿಂತಲೂ ಅತಿ ಉತ್ಕೃಷ್ಟವಾಗಿರುವದರಿಂದಲೂ ಜರ್ಮನಿಯ ನೀಲಿ ವ್ಯಾಪಾರ ನಿಂತುಹೋಗಿ ನೀಲಿಗೆ ಕೊರತೆ ಬಂದಿರುವದರಿಂದಲೂ ಹಿಂದೂಸ್ಥಾನದ ತೋಟ ಮಾಲೀಕರು ಹಿಂದೂಸ್ಥಾನದಲ್ಲಿ ಈ ನೀಲಿ ಗಿಡಗಳ ವ್ಯವಸಾಯವನ್ನು ವೃದ್ಧಿಗೊಳಿಸುವದು ಅತ್ಯವಶ್ಯವಾಗಿರುವದು ಎಂಬದಾಗಿ ಡಾಕ್ಟರ್ ಪರ್ಕಿನರವರು ಹಿಂದೂಸ್ಥಾನದ ತೋಟ ಮಾಲೀಕರನ್ನು ವಿಜ್ಞಾಪಿಸಿಕೊಂಡಿರುವದು

ಹಿಂದೂಸ್ಥಾನದಲ್ಲಿ ಗಿಡಗಳು ಹೆಚ್ಚಾಗಿ ಬೆಳೆಸಲ್ಪಟ್ಟು, ರಸಾಯನ ವಿಧಿಗನುಸಾರವಾಗಿ ಈ ಕೈಗಾರಿಕೆಯನ್ನು ತಕ್ಕ ರೀತಿಯಿಂದ ಅಭಿವೃದ್ಧಿಗೆ ತರಲು ಪ್ರಯತ್ನಿಸಿದರೆ ಜರ್ಮನಿಯ ಕೃತಕ ನೀಲಿಗಿಂತಲೂ ಹಿಂದೂಸ್ಥಾನದ ನೀಲಿಯು ಉತ್ಕೃಷ್ಟತೆಯನ್ನು ಹೊಂದಿ ಜರ್ಮನರ ಕೃತಕ ನೀಲಿ ಕೈಗಾರಿಕೆಯೇ ನಿಂತುಹೋಗುವದರಲ್ಲಿ ಅನುಮಾನವಿರದು. ಈ ಯುದ್ಧಕಾಲವೇ ಈ ಕೈಗಾರಿಕೆಯನ್ನು ಅಭಿವೃದ್ಧಿಗೆ ತರಲು ಸಾಧ್ಯವಾಗುವ ಕಾಲವಾದುದರಿಂದ ದೇಶಬಾಂಧವರೂ ತೋಟ ಮಾಲೀಕರೂ ಈ ಕಡೆ ಲಕ್ಷ್ಯಕೊಡಬೇಕಾಗಿದೆ

ತೋಪುಗಳನ್ನು ಹಾರಿಸುವುದರಿಂದ ಮಳೆಯು ಹೆಚ್ಚಾಗಿ ಬೀಳುವುದೋ?

ಈ ವರುಷ ಮಳೆಯು ಯಥೇಷ್ಟವಾಗಿದ್ದುದರಿಂದ ಯುರೋಪಿನ ಯುದ್ಧರಂಗದಲ್ಲಿ ಹಾರಿಸೋಣಾಗುವ ತೋಪುಗಳಿಂದ ಹೀಗೆ ಮಳೆ ಹೆಚ್ಚಲು ಕಾರಣವಾಯಿತೆಂದು ಅಭಿಪ್ರಾಯವು ಹಲವರಲ್ಲಿರುವದು. ಇಂಥಾ ಅಭಿಪ್ರಾಯವು ಈ ದೇಶದಲ್ಲಿ [illegible]

ವಲ್ಲ ಅಂಗ್ಲಾಳದ ಜನರಲ್ಲಿ ಸಹ ಇತ್ತೆಂಬುದಾಗಿ ತಿಳಿದುಬರುತ್ತದೆ. ನಾಲ್ಕು ವರುಷಗಳ ಮೊದಲು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಸಭಾ ಮೆಂಬರಲ್ಲೊಬ್ಬರು ನೌಕಾಘಡೆಯ ಪ್ರಭುಗಳಿಗೆ ಮಾಡಿದ ವಿಜ್ಞಾಪನೆಯಿಂದ ತೋಪುಗಳನ್ನು ಹಾರಿಸುವುದರಿಂದ ಮಳೆಯಾಗುವುದೆಂಬ ಭಾವನೆಯು ಈ ಪಾರ್ಲಿಮೆಂಟ್ ಸಭೆಯ ಮೆಂಬರರಲ್ಲಿ ಸಹ ಇತ್ತೆಂತ ತಿಳಿಯಬಹುದು. ಬೆಳೆಯು ಕಟಾವಿಗೆ ಸಿದ್ಧವಿರುವ ಕಾಲದಲ್ಲಿ ನೌಕಾಘಡೆಯವರು ತೋಪುಗಳ ಅಭ್ಯಾಸವನ್ನು ಮಾಡಕೂಡದು; ಮಾಡಿದರೆ ಮಳೆಯು ಇದರಿಂದ ಪ್ರಾಪ್ತವಾಗಿ ಬೆಳೆಯೆಲ್ಲ ಕೆಟ್ಟುಹೋಗುವುದೆಂದು ಪಾರ್ಲಿಮೆಂಟ್ ಸಭಾಮೆಂಬರರು ನೌಕಾಪಡೆಯ ಸೇನಾಧಿಪತಿಗಳನ್ನು ವಿಜ್ಞಾಪಿಸಿಕೊಂಡ ದಾಖಲೆಗಳಿರುವವು. ಇಂಥಾ ದಾಖಲೆಗಳಿದ್ದರೂ ಈ ಅಭಿಪ್ರಾಯಕ್ಕೆ ಆಧಾರವೇ ಇರದು. ಏಕಂದರೆ ಅಮೇರಿಕದಲ್ಲಿಯೂ ಯುರೋಪಖಂಡದಲ್ಲಿಯೂ ಮೋಡಗಳು ಕವಿದಿದ್ದ ಸಮಯದಲ್ಲಿ ನಾನಾ ವಿಧಾನಗಳಲ್ಲಿ ಗುಂಡುಗಳನ್ನು ಹಾರಿಸಿ ಪರೀಕ್ಷಿಸಿದರೂ ಮಳೆಯು ಆಗಲೇ ಇಲ್ಲ. ಇಷ್ಟೇ ಅಲ್ಲ; ಯುರೋಪಿನ ಈಗಿನ ಯುದ್ಧರಂಗದ ಅನುಭವವು ಸಹ ತೋಪುಗಳ ಹಾರಿಸುವಿಕೆಯಿಂದ ಎಂದೂ ಮಳೆಯಾಗದೆಂಬ ಅಭಿಪ್ರಾಯವನ್ನು ದೃಢಪಡಿಸುವುದು. ಅಗೋಸ್ತು ಮತ್ತು ಸಪ್ಟಂಬರ ತಿಂಗಳುಗಳಲ್ಲಿ ಯುದ್ಧರಂಗದಲ್ಲಿ ತೋಪುಗಳ ಹಾರಿಸುವಿಕೆಯು ವಿಶೇಷವಾಗಿದ್ದಾಗ ಮಳೆಯು ಆ ಪ್ರಾಂತ್ಯಗಳಲ್ಲಿ ಕಳೆದ ವರುಷಗಳ ಸರಾಸರಿಗಿಂತ ಕಡಮೆಯಾಗಿತ್ತು. ರಣರಂಗದಲ್ಲಿ ಕದನಗಳು ಕಡಮೆಯಾಗಿ ಒಂದಾಗ ಮಳೆಯು ಜೋರಿನಲ್ಲಿ ಬೀಳ ಹತ್ತಿದೆ ಅದಲ್ಲದೆ ಅಂಗ್ಲಾಳದ ಶೊಬರ್ನೆಸ್ ಎಂಬಲ್ಲಿ ಕೆಲವು ಕಾಲ ಪ್ರತಿನಿತ್ಯವೆಂಬಂತೆ ತೋಪುಗಳನ್ನು ಹಾರಿಸುತ್ತಿರುವರು ಇಲ್ಲಿ ಮಳೆಯು ಇತರ ಪ್ರಾಂತ್ಯಗಳಿಗಿಂತ ಕಡಮೆಯಾಗಿರುವುದು. ಆದ್ದರಿಂದ ತೋಪುಗಳನ್ನು ಹಾರಿಸುವುದರಿಂದ ಮಳೆಯು ಹೆಚ್ಚಾಗಿ ಬೀಳುವುದೆಂಬ ಮಾತು ನಿಜವಾದದ್ದಲ್ಲ.

ಯೂಸಫ್ ಖಾನ್ ಎಂಬ ಹೆಸರಿನ ಪೂರ್ವಕಾಲದ ಒಬ್ಬ ಮುಸಲ್ಮಾನ ಸೈನಿಕನು.

ಮಧುರ ಮತ್ತು ತಿನ್ನವೆಲ್ಲಿಯ ಗವರ್ನರನಾಗಿದ್ದು ಕಡೆಗೆ ೧೭೬೪ನೇ ಇಸವಿ ಒಕ್ಟೋಬರ ತಾರೀಕು ೧೫ರಲ್ಲು ಮಧುರೆಯ ಬ್ರಿಟಿಷ ಪಾಳೆಯದಲ್ಲಿ ಗಲ್ಲಿಗೆ ಹಾಕಲ್ಪಟ್ಟ ಯೂಸಫ್‌ಖಾನನ ಪ್ರಸ್ತಾಪವು ಲೊರೆನ್ಸ್ ಯಾ ಕ್ಲೈವ್‌ಪ್ರಭುಗಳ ಕಾಲದ ಇತಿಹಾಸದಲ್ಲಿ ಆಗ್ಗಾಗ್ಗೆ ತೋರಿ ಒರುವದು ಯೂಸಫ್‌ಖಾನನು ರಾಮನಾಡ ಡಿಸ್ಟ್ರಿಕ್ಟಿನ ವೆಲ್ಲಾಲ ಜಾತಿಯಲ್ಲಿ ಹುಟ್ಟಿದನು. ಯೌವ್ವನ ಪ್ರಾಯದಲ್ಲಿ ಇವನು ಒಹಳ ಪೋಕ್ರಿ ಸ್ವಭಾವದವನಾಗಿದ್ದು, ಮನೆಯಿಂದ ಓಡಿಹೋಗಿ, ಮುಸಲ್ಮಾನ ಮತವನ್ನು ಸೇರಿದನು ಅನಂತರ ಪೊಂಡಿಚೇರಿಯಲ್ಲಿ ಫ್ರೆಂಚರ ಪಾಳೆಯದಲ್ಲಿ ಏನೋ ಒಂದು ಕೆಲಸಕ್ಕೆ ಸೇರಿದನು ಬಳಿಕ ಅಲ್ಲಿಂದ ಪುನಃ ಕರ್ನಾಟಕ ನವಾಬರಲ್ಲಿಗೆ ಹೋಗಿ ಸಿಪಾಯಿ ಕೆಲಸದಲ್ಲಿ ನಿಂತನು ಯೂಸಫ್‌ಖಾನನು ೧೭೫೨ನೇ ಇಸವಿಯಲ್ಲಿ ಕ್ಲೈವನು ನೆಲ್ಲೂರು ಡಿಸ್ಟ್ರಿಕ್ಟಿನಲ್ಲಿ ತಯಾರಿಸಿದ ಸಿಪಾಯಿಗಳ ಪಾಳೆಯಕ್ಕೆ ಸೇರಿಕೊಂಡು ಮರು ವರುಷದಲ್ಲಿ ಕ್ಲೈವನೊಡನೆ ದಂಡೆತ್ತಿಕೊಂಡು ಹೋಗಿ ವಿಶೇಷ ಶೂರತನವನ್ನು ತೋರಿಸಿದನು. ಇದರಿಂದ ಇವನ ಹೆಸರು ಒಹು ಖ್ಯಾತಿಗೆ ಬಂದು ಸುಭೇದಾರನಾಗಿ ಒಡ್ತಿ ಹೊಂದಿದನು ೧೭೫೪ನೇ ಇಸವಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಎಲ್ಲಾ ಸಿಪಾಯಿಯರ ಸೇನಾಧಿಪತಿಯಾಗಿ ನೇಮಿಸಲ್ಪಟ್ಟನು. ೧೭೫೫ನೇ ಇಸವಿಯಲ್ಲಿ ಕಂಪೆನಿಯವರು ಯೂಸಫ್‌ಖಾನನಿಗೆ ಬಂಗಾರ ಚಿನ್ನದ ಪದಕವನ್ನು ಕೊಟ್ಟರು ಈ ಪದಕದಲ್ಲಿ ಪಾರ್ಶಿ ಭಾಷೆಯಲ್ಲಿ ಹೀಗೆ ಬರೆಯಲ್ಪಟ್ಟಿದ್ದಿತು:—"ಮಾನ್ಯ ಕಂಪೆನಿಯ ಸಿಪಾಯಿಯರ ಕಮೇಂಡರನಾದ ಮಹಮ್ಮದ್ ಯೂಸಫ್‌ಖಾನ್ ಒಹದ್ದೂರರಿಗೆ, ಈ ಪದಕವು ಫೋರ್ಟ್ ಸೈಂಟ್ ಜೋರ್ಜಿನ ಕೌನ್ಸಿಲ ಗವರ್ನರರಿಂದ ಸಾಹಸಿಯಾದ ಸೈನಿಕನ, ಚತುರನಾದ ಆಫೀಸರನ, ನಂಬಿಕೆಯುಳ್ಳ ಸೇವಕನ ಧೈರ್ಯ ಸಾಹಸಗಳನ್ನು ಕಾಪಾಡುವದಕ್ಕಾಗಿ ಉಚಿತವಾಗಿ ಕೊಡಲ್ಪಟ್ಟಿರುವದು".

೧೭೬೩ನೇ ಇಸವಿಯಲ್ಲಿ ಯೂಸಫ್‌ಖಾನನು ಮಧುರೆ ಮತ್ತು ತಿನ್ನವೆಲ್ಲಿ ಜಿಲ್ಲೆಗಳ ಸಿವಿಲ್ ಮತ್ತು ಮಿಲಿಟರಿ ಗವರ್ನರನಾಗಿ ನೇಮಿಸಲ್ಪಟ್ಟನು. ಈ ಕಾಲದಲ್ಲಿ ಯೂಸಫ್‌ಖಾನನಿಗೆ ಸುಮಾರು ೩೦ ವರ್ಷ ವಯಸ್ಸಾಗಿದ್ದಿರಬಹುದು ಇವನ ಆಡಳಿತೆಯಲ್ಲಿ ಈ ಜಿಲ್ಲೆಗಳಲ್ಲಿ ಬಹಳ ಗಲಿಬಿಲಿ ಇದ್ದು ಒಂದು ಕಡೆಯಲ್ಲಿ ಹೈದರ್ ಆಲಿಯೂ ಮತ್ತೊಂದು ಕಡೆಯಲ್ಲಿ ತಂಜಾವೂರಿನ ರಾಜರೂ ದಂಡೆತ್ತಿಕೊಂಡು ಬರುವ ಸ್ಥಿತಿಯಲ್ಲಿತ್ತು. ಆದರೆ ಯೂಸಫ್‌ಖಾನನು ಅಂತಃಕಲಹಗಳನ್ನು ನಿಲ್ಲಿಸಿಬಿಟ್ಟು ಹೈದರ ಆಲಿ ಮೊದಲಾದವರು ದಂಡೆತ್ತಿಕೊಂಡು ಬಾರದ ಹಾಗೆ ಮಾಡಿದನು. ಅನೇಕಾವರ್ತಿ ಯೂಸಫ್‌ಖಾನನು ಶತ್ರುಗಳ ಕೈಗೆ ಬಿದ್ದು ಜೀವವನ್ನು ಕಳಕೊಳ್ಳುವ ಗಂಡಾಂತರದಲಿ ಸಿಲುಕಿದರೂ ತನ್ನ ಆಡಳಿತೆಯಲ್ಲಿದ್ದ ಜಿಲ್ಲೆಗಳಲ್ಲಿ ತನ್ನ ಹೆಸರು ದೀರ್ಘಕಾಲ ಉಳಿಯುವ ಹಾಗೆ ಮಾಡಿದನು. ಇವನ ಆಳಿಕೆಯು ಕಠಿಣವಾಗಿದ್ದರೂ ನೀತಿ ನ್ಯಾಯ, ಉಳ್ಳದಾಗಿದ್ದಿತು. ಎಲ್ಲಾ ಕಂದಾಯವನ್ನು ಪೂರ್ಣವಾಗಿ ಕೊಡುತ್ತಿದ್ದನು. ಹಿಂದೂಗಳೊಡನೆ ಸಾಮಭಾವದಲ್ಲಿ ನಡೆದುಕೊಂಡು ಸಾವಿರಾರು ಹಿಂದೂ ಸಿಪಾಯರ ದಂಡನ್ನು ನಿರ್ಮಿಸಿ, ಲಾಲಿಯು ಮದ್ರಾಸಿಗೆ ಮುತ್ತಿಗೆ ಹಾಕಿದಾಗ ತನ್ನ ಸರಕಾರದವರಿಗೆ ಹೆಚ್ಚಿನ ಸಹಾಯವನ್ನು ಮಾಡಿದನು. ಆದರೆ ಯೂಸಫ್‌ಖಾನನು ಗವರ್ನರನಾಗಿದ್ದ ಕಾಲವೆಲ್ಲಾ ಕರ್ನಾಟಕ ನವಾಬರ ಇಚ್ಛೆಗೆ ವಿರೋಧವಾಗಿ ನಡೆದನು. ನವಾಬನು ನಿಜವಾಗಿ ಬ್ರಿಟಿಷರ ಸೂತ್ರದ ಗೊಂಬೆಯಂತಿದ್ದರೂ ಯೂಸಫ್‌ಖಾನನು ಆಳುತ್ತಿದ್ದ ಪ್ರದೇಶಗಳಿಗೂ ನವಾಬನು ರಾಜನೆಂಬ ಭಾವನೆಯು ಕಂಪೆನಿಯವರಲ್ಲಿತ್ತು. ಯೂಸಫ್‌ಖಾನನು ಗವರ್ನರನಾಗಿದ್ದ ಪ್ರದೇಶಗಳ ಕಂದಾಯವನ್ನು ಕಂಪೆನಿಯವರಿಗೆ ಕಳುಹಿಸಿಕೊಡದೆ ಸೀದಾ ನವಾಬನಿಗೆ ಕಳುಹಿಸಿಕೊಡಬೇಕೆಂಬ ಆಜ್ಞೆಯು ಕಂಪೆನಿಯವರಿಂದ ಹೊರಟಿದ್ದರಿಂದ ಯೂಸಫ್‌ಖಾನನಿಗೆ ನವಾಬನ ಮೇಲಿದ್ದ ಉರಿಗೆ ಕಿಚ್ಚಿಟ್ಟಂಥಾಯಿತು ಈ ಆಜ್ಞೆಗೆ ಯೂಸಫ್‌ಖಾನನು ವಿಧೇಯನಾಗಿ ನಡೆದನು. ಆದರೆ ಅಂದಿನಿಂದ ಇವನು ಬ್ರಿಟಿಷರಿಗೆ ರಾಜಭಕ್ತನಾಗಿರಲಿಲ್ಲ.

ಅಂದಿನಿಂದ ಯೂಸಫ್‌ಖಾನನು ಸ್ವತಂತ್ರಾಧಿಕಾರವನ್ನು ಸ್ಥಾಪಿಸಲು ಪ್ರಯತ್ನಪಟ್ಟದ್ದರಿಂದ ದಂಗೇಗಾರರ ಅಧಿಪತಿಯೆಂದು ಕರೆಯಲ್ಪಟ್ಟನು. ಯೂಸಫ್‌ಖಾನನು ಹೈದರಾಲಿಯಂಥಾ ಸ್ವಭಾವದ ಮನುಷ್ಯನಾಗಿದ್ದನು. ಹೈದರಾಲಿಗೆ ಮೈಸೂರು ರಾಜನೊಡನೆ ಇದ್ದ ಕಲಹದಂತೆ ಯೂಸಫ್‌ಖಾನನಿಗೆ ದೇಶೀಯ ರಾಜ್ಯರೊಡನೆ ಕಲಹ ಇದ್ದುದೇ ಆದರೆ ಯೂಸಫ್‌ಖಾನನು ಕಷ್ಟವಿಲ್ಲದೆ ಅದನ್ನು ತೀರಿಸಿಕೊಳ್ಳುತ್ತಿದ್ದನು. ಆದರೆ ಯೂಸಫ್‌ಖಾನನಿಗೆ ತನ್ನನ್ನು ಮೇಲುಸ್ಥಾನಕ್ಕೆ ತಂದಿರಿಸಿದ ಬ್ರಿಟಿಷರೊಡನೆ ಕಲಹವಿದ್ದಿತು. ಆದುದರಿಂದ ಯೂಸಫ್‌ಖಾನನು ಪೊಂಡಿಚೇರಿಯಲ್ಲಿದ್ದ ಫ್ರೆಂಚರ ಸಹಾಯವನ್ನು ಹುಡುಕಿದನು ಬ್ರಿಟಿಷ್ ಧ್ವಜವನ್ನು ಜಗ್ಗಿಸಿ, ತನ್ನ ಒಡೆಯರಾದ ಬ್ರಿಟಿಷರನ್ನು ತಿರಸ್ಕರಿಸಿದನು ೨ ವರುಷ ಕಾಲವೆಲ್ಲಾ ಬ್ರಿಟಿಷರ ವಿರೋಧವಾಗಿ ತನ್ನನ್ನು ಬಲಕಾಯಿಸಿಕೊಂಡನು ಕಟ್ಟಕಡೆಗೆ ತನ್ನ ಶತ್ರುಗಳ ವಿಶ್ವಾಸಘಾತುಕ ಕೃತ್ಯಕ್ಕೆ ಸಿಕ್ಕಿಬಿದ್ದನು ಆದರೆ ಅವರ ಬಲಕ್ಕೆ ಸಿಕ್ಕಿ ಬೀಳಲಿಲ್ಲ.

ಯೂಸಫ್‌ಖಾನನು ಆಳಿದ ದೇಶದಲ್ಲಿ ಒಂದಕ್ಕಿಂತ ಹೆಚ್ಚಿನ ತಲೆಯು ದಾಟಿ ಹೋದರೂ ಅವನು ತೋರಿಸಿದ ಸಾಹಸಕೃತ್ಯಗಳು ಇನ್ನೂ ಜನಜನಿತವಾಗಿರುವವು. ಅವನಿಗೆ ವಿರೋಧವಾಗಿ ಕಾದಾಡಿದ ಬ್ರಿಟಿಷ ಸೈನಿಕರು ಅವನಿಗೆ ಬಂದೊದಗಿದ ದುರಾದೃಷ್ಟಕ್ಕಾಗಿ ವಿಷಾದಿಸುತ್ತಲಿದ್ದರು ಅವನ ಸಾಹಸಕೃತ್ಯಗಳೂ ದೇದಿಪ್ಯಮಾನವಾದ ಆಳುವಿಕೆಯೂ ಎಂದೂ ಮರೆಯತಕ್ಕದ್ದಲ್ಲ

ಪತ್ರವ್ಯವಹಾರ.

ಅಯ್ಯಾ,

ತಾರೀಕು ೧—೧—೧೯೧೫ನೇ ಇಸವಿಯಲ್ಲು ಮೂಡುಪ್ರಾಂತ್ಯದ ಗೋಳಿತಟ್ಟು ಶಿರಾಡಿಗಳಲ್ಲಿ ಪೋಸ್ಟಲ್ ಡಿಪಾರ್ಟಮೆಂಟಿನವರು ಟಪ್ಪಾಲ್ ಆಫೀಸುಗಳನ್ನು ತೆರೆದಿರುವರು. ಇದರಿಂದ ನೆರೆ ಗ್ರಾಮಸ್ಥರಾದ ನಮಗೆ ಆಲ್ಹಾದಕರವಾಗಿದೆ. ಆದರೆ ಸಾರ್ವಜನಿಕ ಪ್ರಯೋಜನವನ್ನು ಆಲೋಚಿಸಿ ಟಪ್ಪಾಲ್ ಆಫೀಸ್ ಇರಿಸಿದಂತೆಯೇ, ಅವರಿಂದ ನೆರೆ ಗ್ರಾಮಸ್ಥರಾದ ನಮಗೆ ಪ್ರಯೋಜನಕರವಾಗುವಂತೆ ಒಬ್ಬ ವಿಲೇಜ್ ಪೋಸ್ಟುಮೇನನ್ನು ಕೊಡುವರಾಗಿ ನಂಬುತ್ತೇವೆ ಈಗ ಒಠೇ ಈ ಟಪ್ಪಾಲು ಆಫೀಸುಗಳಿಂದ ಗೋಳಿತಟ್ಟು, ಶಿರಾಡಿ ಈ ಎರಡು ಗ್ರಾಮದವರಿಗೆ ಪ್ರಯೋಜನವಲ್ಲದೆ ಇತರ ಗ್ರಾಮಗಳಿಗೆ ಸಮ್ಮಂಧಪಟ್ಟ ಕಾಗದಗಳು ಸದರಿ ಆಫೀಸಿಗೆ ಬರುವದಿಲ್ಲ: ಅಥವಾ ಬಂದರೂ ಪೇದೆ ಇಲ್ಲದ್ದರಿಂದ ಜನರಿಗೆ ಸರಿಯಾಗಿ ಪತ್ರಗಳು ಕೈ ಸೇರಲಿಕ್ಕಿಲ್ಲ. ಆದ್ದರಿಂದ ಉಪ್ಪಿನಂಗಡಿ ಟಪ್ಪಾಲ್ ಆಫೀಸಿನ ಇನೇ ಜೀಟಿಗೆ ಸಮ್ಮಂಧಪಟ್ಟ ಗ್ರಾಮದವನ್ನೆಲ್ಲಾ ಗೋಳಿತಟ್ಟು ಟಪ್ಪಾಲ್ ಆಫೀಸಿಗೆ ಸೇರಿಸಿ ಸದರಿ ಆಫೀಸಿನ ಒಬ್ಬ ಟಪ್ಪಾಲ್ ಪೇದೆಯನ್ನು ಇಲ್ಲಿಗೆ ಕೊಡುತ್ತಿದ್ದರೆ ದಯಾಳು ಸರಕಾರದವರಿಗೆ ಹೆಚ್ಚಿನ ಖರ್ಚು ಇಲ್ಲ. ಮತ್ತು ಒಹಗ್ರಾಮಸ್ಥರಾದ ನಮಗೆ ಹೆಚ್ಚಿನ ಪ್ರಯೋಜನಕರವಾಗುತ್ತಿತ್ತು. ಅದು ಅಲ್ಲದೆ ಹೀಗೆ ವಿಲೆವಾರಿ ಆದರೆ ಇಲ್ಲಿಯ ಟಪ್ಪಾಲ್ ಆಫೀಸಿನಿಂದ ಹೆಚ್ಚಿನ ಉತ್ಪತ್ತಿ ಸಿಕ್ಕುವದರೇ ಸಂದೇಹವಿಲ್ಲ. ಆದ್ದರಿಂದ ಈ ವಿಷಯ ಸಂಬಂಧಿ ಟಪ್ಪಾಲ್ ಇಲಾಖೆಯವರು ತುಸ ಗಮನಕೊಡಬೇಕಾಗಿ ಬೇಡುವೆನು.

ತಾ. 11—1—1915. ಇಂತಿ ನೆಲ್ಯಾಡಿ ಗ್ರಾಮಸ್ಥನ ಅರಿಕೆಗಳು.

ಯುದ್ಧ ಸಮಾಚಾರ.

—-o-—

ತಾ. ೧೩ನೇ ಜನವರಿ.

ಮಿತ್ರ ಸೈನಿಕರು ಮೆಲ್ಲಮೆಲ್ಲನೆ ಅಲ್ಲಲ್ಲಿ ಮುಂದರಿಯುತ್ತಿರುವರು. ಪರಿಸಿನ ಉತ್ತರ ದಿಕ್ಕಿನಲ್ಲಿ ಮಿತ್ರರು ಮೇಲ್ಬಾಯಿದ ಜರ್ಮನರನ್ನು ಹಿಂದಟ್ಟಿ ೨೦೦ ಮೀಟರ್ ವಿಸ್ತೀರ್ಣದ ವರೆಗಿನ ಕಂದಕಗಳನ್ನು ಹಿಡಿದಿರುವರು ಶತ್ರುಗಳು ಇದನ್ನು ಪುನಃ ಪಡೆಕ್ಕೊಳ್ಳುವರೆ ವಿಶೇಷ ಪ್ರಯತ್ನಪಟ್ಟು ಕಾದಾಡಿದರೂ ಸಫಲವಾಗದೆ ಹಿಮ್ಮೆಟ್ಟಿದರು ಸ್ವೊಸನ್ಸಿನ ಉತ್ತರ ಪೂರ್ವದಲ್ಲಿಯೂ ಮಿತ್ರರು ಮೇಲ್ಬಾಯಿದ ಶತ್ರುಗಳನ್ನು ಓಡಿಸಿ ೫೦೦ ಮೀಟರ್ ಕಂದಕಗಳನ್ನು ಸ್ವಾಧೀನ ಪಡಿಸಿಕೊಂಡಿರುವರು. ವೊಸೆಜೆಸಿನಲ್ಲಿ ವಿಶೇಷ ಹಿಮ ಬಿದ್ದಿರುವದು.

ರಣರಂಗದಲ್ಲಿ ಘಾಯ ಒಡೆದ ಸೈನಿಕರು ತುಂಬಿದ ಎರಡು ಆಸ್ಪತ್ರಿ ಹಡಗಗಳು ಮುಂಬಾಯಿಗೆ ಬಂದು ತಲಪಿರುವವು. ಒಂದರಲ್ಲಿ ಪಾರ್ಶಿ ಕೊಲ್ಲಿಯಲ್ಲಿ ಘಾಯ ಒಡೆದ ೨೦೦ ಸೈನಿಕರಿದ್ದರು. ಮತ್ತೊಂದರಲ್ಲಿ ಯೂರೋಪ ರಣರಂಗದಲ್ಲಿ ಘಾಯ ಒಡೆದ ೨೫೦ ಮಂದಿ ಸೈನಿಕರಿದ್ದರು

ಜರ್ಮನರ ೧೨ ವಿಮಾನಗಾಮಿಗಳು ಡನ್‌ಕರ್ಕಿನ ಮತ್ತು ಅದರ ಆಜುಬಾಜಿನಲ್ಲಿ ೩೦ ಸಿಡಿಮದ್ದುಗಳನ್ನು ಬಿಸಾಡಿರುವರು ಆದರೆ ಡನ್‌ಕರ್ಕಿನಲ್ಲಿ ಮಿತ್ರರು ಮೊದಲೇ ತಕ್ಕ ಮುಂಜಾಗ್ರತೆ ತಕ್ಕೊಂಡಿದ್ದುದರಿಂದ ಪ್ರಾಣಾಪಾಯವು ವಿಶೇಷವಾಗಲಿಲ್ಲ ೫ ಮಂದಿ ಮಾತ್ರ ಮೃತರಾದರು ಎಮಿನ್ಸಿನ ಸಮೀಪ ಜರ್ಮನರ ವಿಮಾನಗಾಮಿಯನ್ನು ಫ್ರೆಂಚ ವಿಮಾನಗಾಮಿಯು ಓಡಿಸಿಕೊಂಡು ಹೋಗಿ ಅದನ್ನು ಕೆಳಗೆ ದೊಬ್ಬಿದನು. ಒಬ್ಬ ಜರ್ಮನ ಆಫೀಸರನು ಮೃತನಾದನು ಮತ್ತೊಬ್ಬನು ಘಾಯ ಒಡೆದಿರುವನು

ಪೂರ್ವ ರಣರಂಗದಲ್ಲಿ ವಿಸ್ತುಲದ ಎಡಪಾರ್ಶ್ವದಲ್ಲಿ ಜರ್ಮನರು ಹಿಮ್ಮೆಟ್ಟಿರುವರು ಜರ್ಮನರು ಸ್ಕರ್ನಿವೈಸಿನ ಪೂರ್ವದಲ್ಲಿ ಮುಂದರಿದು "ಗುಂಡು ಹಾರಿಸ ಬೇಡಿರಿ, ನಾವು ನಿಮ್ಮ ಸ್ವಂತ ಜನರು" ಎಂದು ಕೂಗಿ ರುಶ್ಯನರನ್ನು ಮೋಸಗೊಳಿಸಲು ನೋಡಿದರು. ಆದರೆ ರುಶ್ಯನರು ಮೋಸಹೋಗದೆ ಈ ಜರ್ಮನ ಸೇನೆಯ ಮೇಲ ಕಠಿಣವಾಗಿ ಗುಂಡು ಹಾರಿಸಿ, ಬಹಳ ನಷ್ಟಪಡಿಸಿ, ಅವರನ್ನು ಹಿಂದಕ್ಕೆ ಓಡಿಸಿದರು.

ರುಶ್ಯನರ ಯುದ್ಧ ನಾವೆಗಳು ಬಾಲ್ಟಿಕ್ ಸಮುದ್ರದಲ್ಲಿ "ಬ್ರೆಸ್‌ಲೋ" ಮತ್ತು "ಹಮಿಾದಿಯ" ಎಂಬ ಶತ್ರುಗಳ ಯುದ್ಧ ನಾವೆಗಳೊಡನೆ ಕದನ ಮಾಡಿ ವಿಶೇಷ ನಷ್ಟಪಡಿಸಿದವು ಸಿನೋಪು ಎಂಬಲ್ಲಿ ಇದ್ದ ಶತ್ರುಗಳ ಹಡಗ ಮತ್ತು ಟೊರ್ಪೆಡೋ ದೋಣಿಗಳ ಮೇಲೆಯೂ ರುಶ್ಯನರು ಗುಂಡು ಹಾರಿಸಿ ಹಿಟ್ಟು ತುಂಬಿದ ಎರಡು ಹಡಗಗಳನ್ನು ಸುಟ್ಟು ಬಿಟ್ಟರಲ್ಲದೆ ಶತ್ರುಗಳನ್ನು ಸೆರೆಹಿಡಿದಿರುವರು. ತುರ್ಕರ ಹಡಗಗಳನ್ನೂ ಜಪ್ತಿ ಮಾಡಿರುವರು.

ತುರ್ಕರು ಸಹಾಪ್ಸ್ಯದಲ್ಲಿರುವ ಗ್ರೀಕ ಜನರನ್ನು ಪೀಡಿಸುತ್ತಿರುವದರಿಂದ ಗ್ರೀಕರು ತುರ್ಕರ ಮೇಲೆ ಆಗ್ರಹಗೊಂಡಿರುವರು.

ತಾ. ೧೪ನೇ ಜನವರಿ.

ಸ್ವೊಸನ್ಸಿನ ಉತ್ತರದಲ್ಲಿ ಕಠಿಣ ಕಾಳಗ ನಡೆಯುತ್ತಿರುವದು. ಇತರ ಸ್ಥಳಗಳಲ್ಲಿ ಬದಲಾವಣೆಯಾಗಲಿಲ್ಲ.

ಯುದ್ಧಕ್ಕೆ ಸೇರಿದ ಎಲ್ಲಾ ರಾಜ್ಯಗಳಿಗೆ ದಿನ ಒಂದಕ್ಕೆ ಒಟ್ಟಿಗೆ ೯ ಮಿಲಿಯ ಪವನುಗಳು ಖರ್ಚಾಗುತ್ತಿದೆಂದೂ ಈ ವರೆಗೆ ಕೈಗಾರಿಕೆ ಮೊದಲಾದವುಗಳು ನಿಲ್ಲಿಸಲ್ಪಟ್ಟು ಉಂಟಾಗಿರುವ ನಷ್ಟವು ಕೂಡಿ ಒಟ್ಟಿಗೆ ಮೂವತ್ತು ಸಾವಿರ ಮಿಲಿಯ ಪವನುಗಳು ನಷ್ಟವಾಗಿರುವದೆಂದೂ ಜರ್ಮನಿಯ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ

ಎಂಟವರ್ಪಿನ ಮೂರು ಎಣ್ಣೆ ಕಾರ್ಖಾನೆಗಳಿಗೆ ಬೆಂಕಿಬಿದ್ದು ವಿಶೇಷ ನಷ್ಟವಾಗಿರುವದು

ಭಾರತೀಯ ಸೇನೆಯನ್ನು ಫೀಲ್ಡ್ ಮಾರ್ಶಲ್ ಫ್ರೆಂಚರವರು ಸಂದರ್ಶಿಸಿ, ಭಾರತೀಯ ಸೇನೆಯನ್ನು ಬಹಳವಾಗಿ ಶ್ಲಾಘಿಸಿರುವರು

೧೬ ಜರ್ಮನ ವಾಯು ನಾವೆಗಳು ಇಂಗ್ಲಿಷ್ ಕಾಲುವೆಯ ಮೇಲೆ ಕಾಣಿಸಿಕೊಂಡಿರುವವು. ಇವು ಇಂಗ್ಲಂಡಿನ ಮೇಲೆ ದಾಳಿ ನಡಿಸಲಿಕ್ಕಾಗಿ ಬಂದದ್ದಿರಬೇಕು. ಆದರೆ ವಾಯುಗುಣವು ನೆಟ್ಟಗೆ ಇಲ್ಲದ್ದರಿಂದ ಇವು ಡನ್‌ಕರ್ಕಿನ ಕಡೆಗೆ ತಿರುಗಿತು ಎಂತ "ಟ್ರಾಮ್ಸ್" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಬಿಕಾನಿರ್ ಮಹಾರಾಜರವರು ಲಂಡನಿಗೆ ಹೋಗಿ ಬಕ್ಕಿಂಗ್ಹಾಮ್ ಅರಮನೆಯಲ್ಲಿ ಸಾರ್ವಭೌಮರೊಡನೆ ಊಟ ಮಾಡಿರುವರು

ಪೂರ್ವ ರಣರಂಗದಲ್ಲಿ ಜರ್ಮನರು ಬೊಲಿಮೊಫನ್ನು ತೆಗೆದುಕೊಳ್ಳುವರೆ ವಿಶೇಷ ಪ್ರಯತ್ನ ಪಡುತ್ತಿರುವರು. ಆದರೆ ಈ ವರೆಗೆ ಸಾಧ್ಯವಾಗಲಿಲ್ಲ ಜರ್ಮನರು ತಂಡತಂಡಗಳಾಗಿ ರುಶ್ಯನರ ಬಳಿಗೆ ಬಂದು ಚಳಿಯನ್ನು ತಡೆಯಲಾರದೆ ಶರಣಾಗತರಾಗುತ್ತಿರುವರು ಎಂತ ಡೈಲಿ ಟೆಲಗ್ರಾಫ್ ಪತ್ರಿಕೆಯಲ್ಲಿ ಪ್ರಕಟವಾಗಿದೆ

ಕೌಕಾಸೆಸಿನಲ್ಲಿ ರುಶ್ಯನರು ಪುನಃ ತುರ್ಕರನ್ನು ಸೋಲಿಸಿರುವರು. ರುಶ್ಯನರು ೨ ತುರ್ಕಿ ಸೇನಾಂಗಗಳನ್ನೂ ೨ ಮೆಶಿನ್‌ಗನ್ ಎಂಬ ಫಿರಂಗಿಗಳನ್ನೂ ಹಿಡಿದಿರುವರು.

ರುಶ್ಯನರಿಗೆ ಇದೇ ಪ್ರಕಾರ ಜಯವಾಗುತ್ತಾ ಬಂದರೆ ಹಂಗೇರಿಯದವರು ಆಸ್ಟ್ರಿಯನರಿಗೆ ವಿರೋಧವಾಗಿ ದಂಗೆ ಏಳುವದರಲ್ಲಿ ಅನುಮಾನವಿಲ್ಲವೆಂತ ಹಂಗೇರಿಯದ ಸೋಶ್ಯಲಿಸ್ಟ ಮುಂದಾಳುಗಳಲ್ಲಿ ಒಬ್ಬನಾದ ಎಮ್ ರಫಿಯಾಗಿಯವರು ಹೇಳಿರುವರು ಅಲ್ಲಿಯ ಬೇಸಾಯಗಾರರು ಈಗಲೇ ಅಧಿಕಾರಿಗಳಿಗೆ ವಿರೋಧವಾಗಿ ತಿರಿಗಿ ಬಿದ್ದಿರುವರು ಆಸ್ಟ್ರಿಯನರು ಇವರಿಗೆ ಬಹಳ ಸುಳ್ಳು ಸುದ್ದಿಯನ್ನು ಹೇಳಿದರೂ ಅವರು ನಂಬಲಾರರು ಎಂತ ತಿಳಿದು ಬಂದದೆ.

ತಾ. ೧೫ನೇ ಜನವರಿ.

ಸ್ವೊಸನ್ಸಿನಲ್ಲಿ ಶತ್ರುಗಳು ಫ್ರೆಂಚರ ನೆಲೆಗಳಿಗೆ ಬಲವಾಗಿ ಗುಂಡು ಹಾರಿಸಿರುವರು ನೆಲೆಗಳ ಪೈಕಿ ಒಂದನ್ನಾದರೂ ಪಡೆಯ ಬೇಕೆಂದು ಜೀವದ ಮರವೆ ಇಲ್ಲದೆ ಕಾದಾಡಿದರು ಫಲಿತಾಂಶ ಗೊತ್ತಾಗಲಿಲ್ಲ

ಒಬ್ಬ ಫ್ರೆಂಚ ವಿಮಾನಗಾಮಿಯು ಜರ್ಮನ ವಾಯು ನಾವೆಯನ್ನು ಕಂಡು ಅದಕ್ಕೆ ಗುಂಡು ಹಾರಿಸಿ ಈ ವಿಮಾನದ ಲೆಪ್ಟನೆಂಟನನ್ನೂ ಒಬ್ಬ ಕಲಾಶಿಯನ್ನೂ ಕೊಂದಿರುವನು.

ದಕ್ಷಿಣ ಆಫ್ರಿಕದಲ್ಲಿ ಒರೆಂಜ್ ನದಿಯ ಬಳಿ ಪುನಃ ಕದನಗಳಾಗಿರುವವು ಜರ್ಮನರು ತಮ್ಮ ನೆಲೆಗಳಿಂದ ಹಿಮ್ಮೆಟ್ಟಿರುವರು.

ಪೋಲೆಂಡಿನಲ್ಲಿ ಜರ್ಮನರು ಮೇಲ್ಬಾಯಿದಷ್ಟು ಸಾರಿ ಹಿಮ್ಮೆಟ್ಟಲ್ಪಟ್ಟಿರುವರು. ಆಸ್ಟ್ರಿಯಾದ ಮುಖ್ಯ ಪಟ್ಟಣವಾದ ವಿಯನ್ನಾದ ಸ್ಥಿತಿಯನ್ನು ಹೇಳ ತೀರದು. ಸಿಡುಬು, ವಾಂತಿಭೇದಿ, ವಿಷಮ ಜ್ವರದ ಭಾದೆಯು ಹೆಚ್ಚಿರುವದು. ದವಸ ಧಾನ್ಯಗಳ ಬೆಲೆಯು ಮೂರಷ್ಟು ಏರಿರುವದು. ಬೆಣ್ಣೆಯ ಕ್ರಯ ಎರಡಷ್ಟು ಏರಿರುತ್ತದೆ. ರುಮೇನಿಯ ಸರಹದ್ದಿನಿಂದ ಸುಮಾರು ಅರ್ಧ ಮಿಲಿಯ ನಿವಾಸಿಗರು ವಿಯನ್ನಕ್ಕೆ ಓಡಿಬಂದಿರುವರು.

ಕೌಕಸೆಸಿನಲ್ಲಿ ತುರ್ಕರಿಗೂ ರುಶ್ಯನರಿಗೂ ಕಠಿಣ ಕಾಳಗ ನಡೆಯುತ್ತಿದೆ. ರುಶ್ಯನರು ತುರ್ಕರ ಒಂದು ಬೆಟಲಿಯನ್ ಸೇನೆಯನ್ನು ಹಿಡಿದು ಮತ್ತೊಂದು ಸೇನೆಯನ್ನು ನಿರ್ನಾಮ ಮಾಡಿದರು. ರುಶ್ಯನರು ತುರ್ಕರ ಯುದ್ಧ ಸಾಮಾಗ್ರಿಗಳ ಕೋಠಡಿಯನ್ನೂ ಹಿಡಿದಿರುವರು. [illegible] ೬ ವಿಮಾನಗಳಿಂದ [illegible] ತುರ್ಕರು ಕಠಿಣ ಕಾಳಗಕ್ಕೆ [illegible] ಮತ್ತು ಎರ್ಜಿಂಡ್ಜಾನಿಂದ ಬೆಂಬಲ ಸೇನೆಯು ಬಂದು [illegible]ವದು. ಈ ಸ್ಥಳಗಳಲ್ಲಿ ತುರ್ಕರು ವಿಶೇಷ ನಷ್ಟಹೊಂದಿ ಸೋತು ಹೋದ ವಾರ್ತೆಯಿಂದ ಸಿರಿಯದವರೂ ಅರಬಿಯದವರೂ [illegible] ಹಿಂಜರಿಯುತ್ತಲಿದ್ದಾರೆ.

ತುರ್ಕರು ಪರ್ಶಿಯದಲ್ಲಿ ಟೆಬ್ರಿಜನ್ನು ವಶಮಾಡಿಕೊಂಡಿರುವರು

ಜಪಾನಿಯರ ರೆಡ್‌ಕ್ರಾಸ್ ಎಂಬುಲೆನ್ಸ್ ಕೋರು ತಾ. ೨೧ ರೊಳಗೆ ಲಿವರ್‌ಪೂಲಿಗೆ ತಲಪಲಿದೆ.

ತಾ. ೧೬ನೇ ಜನವರಿ.

ಜರ್ಮನರು ಸ್ವೊಸನ್ಸಿನ ಸಮೀಪ ಫ್ರೆಂಚರ ಕಂದಕಗಳಿಗೆ ಒಂದರ ನಂತರ ಒಂದಕ್ಕೆ ರಾತ್ರಿಯಾಗುವ ತನಕ ಗುಂಡು ಹಾರಿಸಿ ೧೪ ಫ್ರೆಂಚ ಆಫೀಸರರನ್ನೂ ೧೧೩೦ ಸೈನಿಕರನ್ನೂ ೪ ಫಿರಂಗಿಗಳನ್ನೂ, ೪ ಮೆಶಿನ್‌ಗನ್ ಎಂಬ ಫಿರಂಗಿಗಳನ್ನೂ ಹಿಡಿದಿರುವರೆಂತ ಬೆರ್ಲಿನ್ ನಗರದಲ್ಲಿ ಪ್ರಕಟಿಸೋಣಾಗಿದೆ. ಜರ್ಮನರ ಈ ಕಾರ್ಯ ಕೈಸರರ ಕಣ್ಣೆದುರಲ್ಲಿಯೇ ನಡೆದಿರುವರೆಂತಲೂ ಬೆರ್ಲಿನ್ ನಗರದಲ್ಲಿ ಪ್ರಸಿದ್ಧಿಯಾಗಿದೆ.

ಪರ್ತೆಸಿನ ಸಮೀಪ ಜರ್ಮನರು ಸೋಲಿಸಲ್ಪಟ್ಟಿರುವರೆಂಬದನ್ನು ಜರ್ಮನರು ಒಪ್ಪುವರು. ಫ್ಲೇಂಡರಲ್ಲಿ ಬೆಲ್ಜಿಯನರು ಜರ್ಮನರ ಮದ್ದುಗುಂಡುಗಳ ಒಂದು ಕೊಠಡಿಯನ್ನು ಹಾರಿಸಬಿಟ್ಟರು. ರೋಯೆಯ ಉತ್ತರದಲ್ಲಿ ಜರ್ಮನರು ಈಚೆಗೆ ನಿರ್ಮಿಸಿದ ಕಂದಕಗಳನ್ನು ಫ್ರೆಂಚರು ಹಾಳುಮಾಡಿರುವರು. ಲಾಬಸ್ಸೆಯಲ್ಲಿ ಬ್ರಿಟಿಷರು ಜರ್ಮನರ ನೆಲೆಯನ್ನು ಸ್ವಾಧೀನಮಾಡಿಕೊಂಡಿರುವರು. ಇತರ ಎಲ್ಲಾ ರಣರಂಗದಲ್ಲಿಯೂ ಮಿತ್ರರು ಮುಂದರಿಯುತ್ತಲೇ ಇದ್ದಾರೆ.

ಬ್ರಿಟಿಷರ ವಿಮಾನಗಾಮಿಗಳು ಎಂಟ್‌ವರ್ಪಿನ ಮೇಲೆ ಸಿಡಿಮದ್ದನ್ನು ಹಾಕಿರುವರು ಅಲ್ಲಿ ಆದ ನಷ್ಟ ಗೊತ್ತಾಗಲಿಲ್ಲ. ಪೂರ್ವ ರಣರಂಗದಲ್ಲಿ ಜರ್ಮನರನ್ನು ರುಶ್ಯನರು ಹಿಂದಟ್ಟುತ್ತಲಿರುವರು. ಶತ್ರುಗಳ ಒಂದು ವಾಯುನಾವೆಯನ್ನು ರುಶ್ಯನರು ಗುಂಡು ಹಾರಿಸಿ ಕೆಳದೊಬ್ಬಿರುವರು ತುರ್ಕರ ಅರ್ಮೇನಿಯದಿಂದ ೮೦,೦೦೦ ಅರ್ಮೇನಿಯರು ರುಶ್ಯರ ಪ್ರದೇಶಕ್ಕೆ ಓಡಿಬಂದಿರುವರು. ಕೌಕಾಸೆಸಿನ ಓಲ್ಟಿಯಲ್ಲಿ ತುರ್ಕರು ಸೋತು ಹೋಗಿರುವರು ಕಾರಉರ್ಗಾನಿನಲ್ಲಿ ತುರ್ಕರ ಸೇನೆಯಲ್ಲಿ ವಿಶೇಷ ನಷ್ಟವಾಗಿದೆ.

ತಾ. ೧೭ನೇ ಜನವರಿ.

ಸ್ವೊಸನ್ಸಿನಲ್ಲಿ ಜರ್ಮನರ ಸೆರೆಬಿದ್ದ ಫ್ರೆಂಚರ ಸಂಖ್ಯೆಯು ಸಾವಿರಕ್ಕಿಂತ ಹೆಚ್ಚಾಗಿರದು. ಇತರ ರಣರಂಗದಲ್ಲಿ ಹೊಸ ಬದಲಾವಣೆಯಾಗಲಿಲ್ಲ. ನ್ಯೂಪೋರ್ಟ ಮತ್ತು ವೈಪ್ರೆಸಿನಲ್ಲಿ ಮೇಲ್ಬಾಯಿದ ಜರ್ಮನರು ಹಿಮ್ಮೆಟ್ಟಿರುವರು. ಪರ್ತೆಸಿನ ಸಮೀಪ ಫ್ರೆಂಚರು ಜರ್ಮನರ ಇನ್ನೊಂದು ಕಂದಕವನ್ನು ಹಿಡಿದಿರುವರು.

ದಕ್ಷಿಣ ಆಫ್ರಿಕದಲ್ಲಿ ಯೂನಿಯನ್ ಸರಕಾರದ ಸೇನೆಯು ಸ್ವಾಕೋಮಂಡ್ ಎಂಬ ಜರ್ಮನರ ಸ್ಥಳವನ್ನು ಸ್ವಾಧೀನಮಾಡಿಕೊಂಡಿರುವದು.

ಪೂರ್ವ ರಣರಂಗದಲ್ಲಿ ವಿಸ್ತುಲದ ಬಲಪಾರ್ಶ್ವದಲ್ಲಿ ರುಶ್ಯನರು ಜರ್ಮನರ ಕುದುರೆಪಡೆಯನ್ನೂ ಕಾಲಾಳು ಸೇನೆಯನ್ನೂ ಹಿಂದಟ್ಟಿರುವರು. ಇತರ ಕಡೆಗಳಲ್ಲಿಯೂ ಜರ್ಮನರು ವಿಶೇಷ ನಷ್ಟಪಟ್ಟು ಹಿಂದರಿಯುತ್ತಿದ್ದಾರೆ.

ಕಾರಉರ್ಗಾನಿನಲ್ಲಿ ರುಶ್ಯನರು ತುರ್ಕರ ಅನೇಕ ಆಫೀಸರರನ್ನೂ, ಸೈನಿಕರನ್ನೂ ಸೆರೆಹಿಡಿದಿರುವರು. ಇಲ್ಲಿಯ ಕದನವು ರುಶ್ಯರಿಗೆ ಜಯಕರವಾಗಿಯೇ ನಡಿಯುತ್ತಿದೆ. ಅನಟೋಲಿಯದಲ್ಲಿರುವ ತುರ್ಕರ ಸೇನೆಗೆ ಸಹಾಯವಾಗಿ ಹೋಗುತ್ತಿದ್ದ ೮೦ ಹಡಗಗಳಿದ್ದ ಸಾಮಾನುಗಳನ್ನು ರುಶ್ಯನರ ಯುದ್ಧ ಹಡಗಗಳು ಕಪ್ಪು ಸಮುದ್ರದಲ್ಲಿ ಮುಣುಗಿಸಿರುವವು.

ತುರ್ಕರು ಪರ್ಶಿಯಾದ ಸುಜುಬುಲಾಕಿನಲ್ಲಿದ್ದ ಪರ್ಶಿಯಾ ಗವರ್ನರರಿಗೆ ಗುಂಡು ಹೊಡೆದು ಕೊಂದಿರುವರೆಂದೂ ಒಬ್ಬ ರುಶ್ಯ ಮತ್ತು ಅರ್ಮೇನಿಯದವನನ್ನು ಸುಟ್ಟುಬಿಟ್ಟಿರುವರೆಂದೂ ವಾರ್ತೆ ಬಂದಿರುವದು.

ಇಟಲಿಯಲ್ಲಿ ಆದ ಭೂಕಂಪ.

೧೩ರಲ್ಲು ಇಟಲಿಯಲ್ಲಿ ಎನ್‌ಕೋನದಿಂದ ನೇಪಲ್ಸ್ ವರೆಗೆ ದೊಡ್ಡ ಭೂಕಂಪವಾಗಿ ವಿಶೇಷ ನಷ್ಟವಾಗಿರುವದು. ಎವೆಜೋನೋ ಪಟ್ಟಣವು ನೆಲಸಮವಾಗಿ ಸಾವಿರಾರು ನಿವಾಸಿಕರು ನಾಶವಾದರು. ೨೦ ಅಡಿ ಎತ್ತರದ ಸ್ಯೆಂಟ್ ಪೌಲು ಪ್ರತಿಮೆಯು ರೋಮನಗರದ ಸ್ಯೆಂಟ್ ಜ್ಹೋನ್ ದೇವಾಲಯದಿಂದ ಕೆಳಬಿದ್ದು ಪುಡಿಪ್ಪುಡಿಯಾಯಿತು. ಎವೆಜೋನೊ ಪಟ್ಟಣವು ಪೂರ್ಣವಾಗಿ ನಾಶವಾಯಿತು. ಆಜುಬಾಜಿನ ಪ್ರಾಂತ್ಯಗಳಲ್ಲಿಯೂ ವಿಶೇಷ ನಷ್ಟವಾಗಿದೆ. ೮೦೦ ಜನರು ಮಾತ್ರ ರಕ್ಷಿಸಲ್ಪಟ್ಟಿರುವರು. ಒಟ್ಟಿಗೆ ೧೫ ಸಾವಿರ ಮಂದಿ ಕೂಡ್ಲೇ ಮೃತರಾಗಿರುವರು. ೨೦ ಸಾವಿರ ಮಂದಿ ಘಾಯ ಒಡೆದಿರುವರು. ಎವಜೋನದಲ್ಲಿ ೮ ಸಾವಿರ ಮಂದಿ ಹತರಾದರು. ೧೦೦೦ ಮಂದಿ ಜಕಂ ಹೊಂದಿದರು. ರೋಮನಗರದ ವೆಟಿಕಾನ್ ಮಂದಿರದ ಸಾವಿರಾರು ಕಿಡಿಕಿಗಳು ಒಡೆದು ಹೋದವು. ಕಟ್ಟೋಣಕ್ಕೆ ಕೇಡಾಗಲಿಲ್ಲ. ಆಯಾ ಸ್ಥಳಗಳಲ್ಲಿ ಮೃತರಾದವರ ಸಂಖ್ಯೆಯು ಹೆಚ್ಚುತ್ತಿದೆ. ಎವಜೋನ್ನದಲ್ಲಿ ಮೃತರಾದವರಲ್ಲಿ ಸರಕಾರ ಕಡೆಯ ಆಫೀಸರರೂ, ಮುನ್ಸಿಪಾಲ್ ಮೆಂಬರರೂ, ಅಲ್ಲಿದ್ದ ಸೈನಿಕರಲ್ಲಿ ೧೦೦ರಲ್ಲಿ ೯೫ ಮಂದಿಯೂ, ೯ರಲ್ಲಿ ೮ರಂತೆ ಪೋಲಿಸರೂ ನಾಶವಾದರು. ಕಟ್ಟೋಣಗಳಲ್ಲಿ ಪ್ರಖ್ಯಾತ ಹೊಂದಿದ ಕೊಲೊನ್ನಾಸ್ ಅರಮನೆಯೂ ಬಿದ್ದು ಹೋಗಿರುವದು.

ಭೂಕಂಪದಿಂದ ಘಾಯ ಒಡೆದವರನ್ನು ಪೋಪ ಮಹಾ ಗುರುಗಳು ಆಸ್ಪತ್ರಿಗೆ ಹೋಗಿ ನೋಡಿಬಂದಿರುವರು. ೧೮೭೦ನೇ ಇಸವಿಯಿಂದ ಪೋಪ ಗುರುಗಳು ಅರಮನೆಯನ್ನು ಬಿಟ್ಟು ಹೋದದ್ದು ಇದೇ ಮೊದಲನೇ ಸಾರಿಯಾಗಿದೆ.

ಭೂಕಂಪ ಸಂಭವಿಸಿದ ಪ್ರತಿ ಒಂದು ಪ್ರಾಂತ್ಯವನ್ನು ಇಟಲಿ ಅರಸರು ಸಂದರ್ಶಿಸಿ ಎವೆಜೋನ್ನದ ಜನಸಂಖ್ಯೆಯಲ್ಲಿ ಸೇಕಡಾ ೩ ರಂತೆ ಮಾತ್ರ ಉಳಿದಿರುವರು ಎಂತ ಹೇಳಿರುವರು. ಹಿಂದೆ ಮೆಸೀನದಲ್ಲಿ ಸಂಭವಿಸಿದ ಭೂಕಂಪದಲ್ಲಿ ಸೇಕಡಾ ೩೦ರಂತೆ ಜನರು ಉಳಿದಿದ್ದರು.

ಈ ಭೂಕಂಪದಲ್ಲಿ ಭೂಮಿಯ ಅಡಿಗೆ ಬಿದ್ದವರನ್ನು ರಕ್ಷಿಸುವ ಕೆಲಸವು ಬಹು ಕಷ್ಟಸಾಧ್ಯವಾಗಿರುವದೆ. ಭೂಮಿಯ ಅಡಿಯಿಂದ ಕೂಗುಗಳು ಕೇಳಿಸುತ್ತಲಿವೆ. ರಕ್ಷಣೆ ಮಾಡುವ ಸಂಘದವರು ಅಲ್ಲಿಗೆ ಬಂದು ಅವರನ್ನು ರಕ್ಷಿಸುವ ಹಾಗೆ ಅಂಥಾ ಸ್ಥಳದಲ್ಲಿ ಕೋಲುಗಳನ್ನು ನೆಟ್ಟಿರುವರು. ಅದಲ್ಲದೆ ಚಳಿಯು ಅಸಾಧ್ಯವಾಗಿ ಹೆಚ್ಚಿರುವದು. ಚಿಂತೆ ನೊಂದಿಸುವದೆ ಸಂತ ಸಾಹಸವನ್ನು ಇರದು.

ಉತ್ತರ ಹಿಂದೂಸ್ಥಾನ.

ಡಕ್ಕದ ನವಾಬರಾಗಿರುವ ಬಹುಮಾನಪಟ್ಟ ಬಹದ್ದೂರ್ ಸರ್ ಖಿವಾಜಸಾಲಿ ಮಲ್ಲಿರವರು ಕಲ್ಕತ್ತೆಯಲ್ಲಿರುವ ಅವರ ಬಂಗ್ಲೆಯಲ್ಲಿ ತಾ ೧೬ನೇ ಬೆಳಿಗ್ಯೆ ಫಕ್ಕನೆ ಹೃದಯ ರೋಗದಿಂದ ಕಾಲವಾದರು. ಅದೇ ದಿನ ಮಧ್ಯಾಹ್ನದನಂತರ ಶವವನ್ನು ಡಕ್ಕಕ್ಕೆ ಕೊಂಡುಹೋದರು. ಬಂಗಾಳ ಗವರ್ನರರವರು ತನ್ನ ಇತರ ಜಂಬರವನ್ನು ನಿಲ್ಲಿಸಿ ಇವರ ಶವವನ್ನು ಕೊಂಡುಹೋಗುವಾಗ ರೈಲ್ವೆ ಸ್ಟೇಶನಿಗೆ ಹೋಗಿದ್ದರು.

ಬಂಗಾಳದ ಬಸರಾಟ್ ಸಬ್ ಡಿವಿಜನಿನಲ್ಲಿ ಈಚೆಗೆ ನಡೆದ ದರೋಡೆಯ ತನಿಕೆ ನಡಿಯುವರೆ ನೇಮಿಸಲ್ಪಟ್ಟ ಆಫೀಸರರು ಅನುಮಾನದ ಮೇಲೆ ಒಬ್ಬನನ್ನು ಕೈದುಮಾಡಿ ವಿಚಾರಿಸಲು ಎಲ್ಲಾ ಗುಟ್ಟು ಹೊರಗೆ ಬಿತ್ತಲ್ಲದೆ ಇತ್ತಲಾಗೆ ನಡೆದ ದರೋಡೆಗಳ ಕೊಳ್ಳೆಗಳೂ ದೊರಕಿದವು. ದರೋಡೆ ಮಂಡಳಿಯ ಇತರ ೧೫ ಮಂದಿಯೂ ಹಿಡಿಯಲ್ಪಟ್ಟಿರುವರು.

ಹಿಂದೂಸ್ಥಾನದಿಂದ ಮಕ್ಕಾ ಜೆಡ್ಡಾ ಮೊದಲಾದ ಮಹಮ್ಮದೀಯರ ಪುಣ್ಯ ಸ್ಥಳಗಳಿಗೆ ಹೋಗುವ ಯಾತ್ರಿಕರ ಪರವಾಗಿ ಹಿಂದೂಸ್ಥಾನದಲ್ಲಿ ರೂಪಿತವಾಗಿರುವ ಕಮಿಟಿಗಳು ೧೯೧೩-೧೪ನೇ ಇಸವಿಯಲ್ಲಿ ಹೆಚ್ಚಿನ ಪ್ರಯೋಜನಕರವಾದ ಕೆಲಸವನ್ನು ಮಾಡಿರುವವೆಂತ ಮುಂಬಾಯಿ ಸರಕಾರದವರು ಶ್ಲಾಘಿಸಿರುವರು. ಹಿಂದೂಸ್ಥಾನದ ಆಯಾ ಪ್ರಾಂತ್ಯಗಳಲ್ಲಿ ಇಂಥಾ ಕಮಿಟಿಗಳು ಹೆಚ್ಚುತ್ತಲಿವೆ. ಮುಖ್ಯವಾಗಿ ಮದ್ರಾಸ್ ಸಂಸ್ಥಾನದಲ್ಲಿ ಇಂಥಾ ೫೪ ಕಮಿಟಿಗಳು ಇದ್ದು ಮುಂಬಾಯಿ ಕಮಿಟಿಯೊಂದಿಗೆ ಸೇರಿಕೊಂಡು ಒಳ್ಳೇ ಕೆಲಸ ನಡಿಸುತ್ತಿದೆ. ಜೆಡ್ಡಾ ಆಸ್ಪತ್ರಿ ಫಂಡಿಗೆ ವರ್ಷ ಕಾಲದಲ್ಲಿ ರೂ. ೧೨೦೦ ಕೂಡಿಸಲ್ಪಟ್ಟಿರುವುದು. ಒಟ್ಟಿಗೆ ಈ ಫಂಡಿನಲ್ಲಿ ಈಗ ರೂ ೧೪,೩೫೬ ಇದೆ. ಬಡ ಯಾತ್ರಿಕರ ಫಂಡಿನಲ್ಲಿ ಈಗ ೯೬೧೭ ರೂಪಾಯಿ ಇದೆ. ಈ ಹಣವು ಆಯಾ ಸ್ಥಳದ ಕಮಿಟಿಗಳೂ ಅಂಜುಮಾನ್ ಸಭೆಗಳೂ ಕೂಡಿಸಿ ಕೊಟ್ಟಂಥದ್ದಾಗಿರುವದು. ಮಕ್ಕಳಿಗೆ ರಿಯಾಯತಿಯ ದರವನ್ನು ಕೊಡಿಸುವಂಥಾ ಆಲೋಚನೆಯೂ ಮುಂಬಾಯಿ ಸರಕಾರದವರಿಗಿರುವದು. ಈ ಆಲೋಚನೆಯನ್ನು ಜಾರಿಗೆ ತರುವದು ಸುಲಭ ಸಾಧ್ಯವಲ್ಲ. ಯಾಕಂದರೆ ಇಂಥಾ ರಿಯಾಯತಿಯನ್ನು ತೋರಿಸಿದರೆ ಯಾತ್ರೆಮಾಡುವ ಚಿಕ್ಕ ಮಕ್ಕಳ ಸಂಖ್ಯೆಯು ಹೆಚ್ಚಾಗಿ ಈ ಪ್ರಯಾಣದ ಹೆಚ್ಚಿನ ಕಷ್ಟವನ್ನು ಮಕ್ಕಳು ಕೂಡಾ ಅನುಭವಿಸುವಂತಾಗುವದು. ಆದದರಿಂದ ಸದ್ಯಾ ಈ ಪ್ರಸ್ತಾಪವನ್ನು ಮುಂಬಾಯಿ ಗವರ್ನರರು ಕೌನ್ಸಿಲ್ ಸಭೆಯ ಮುಂದಿಡುವ ಹಾಗೆ ಇಲ್ಲ.

ಮುಂಬಾಯಿಯ ಗುಜರಾಥ್ ಎಸೋಸಿಯೇಶನವರು ಮಾನ್ಯ ಗಂಧಿಯವರಿಗೂ ಅವರ ಪತ್ನಿಯವರಿಗೂ ತಾ ೧೪ರಲ್ಲು ಆಥಿತ್ಯ ಸತ್ಕಾರವನ್ನು ಮಾಡಿದರು. ಈ ಸಂದರ್ಭದಲ್ಲಿ ಬೆರಿಸ್ಟರರಾದ ಮೆ। ಜಿನ್ನಾರವರು ಅಧ್ಯಕ್ಷರಾಗಿದ್ದು ಗಂಧಿಯವರು ದಕ್ಷಿಣ ಆಫ್ರೀಕದಲ್ಲಿ ಮಾಡಿದ ಕೆಲಸವನ್ನು ಬಹಳವಾಗಿ ಹೊಗಳಿದರು. ಇದಕ್ಕೆ ಉತ್ತರವಾಗಿ ಮಾನ್ಯ ಗಂಧಿಯವರು ದಕ್ಷಿಣ ಆಫ್ರೀಕದ ಭಾರತೀಯರ ಮಧ್ಯ ತಾನು ಮಾಡಿದ ಕೆಲಸವು ತನ್ನ ಹೃದಯಕ್ಕೆ ಸದಾ ಪ್ರಿಯಕರವಾಗಿರುವದು. ಭಾರತೀಯರ ಆ ಕಾಂಕ್ಷೆಯನ್ನು ತಿಳಿದುಕೊಳ್ಳುವರೆ ತನ್ನ ಪೂರ್ಣ ಶಕ್ತಿಯನ್ನೂ ಸಮಯವನ್ನೂ ಉಪಯೋಗಿಸಿ ಅನಂತರ ಅವರ ಇಚ್ಛಾ ಫಲವನ್ನು ಸಾಧಿಸುವರೆ ತನ್ನ ಪೂರ್ಣ ಹೃದಮನಗಳನ್ನು ಅರ್ಪಿಸುವನೆಂದು ಹೇಳಿದರು. ಸಾಯಂಕಾಲ ಮಾನ್ಯ ಗಂಧಿಯವರು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಆಫೀಸಿಗೆ ಸಂದರ್ಶಿಸಿ ಇದರ ಸ್ಥಾಪಕರಾದ ಮಾನ್ಯ ಗೋಖಲೆಯವರ ಈ ಕೆಲಸವನ್ನು ಬಹಳವಾಗಿ ಹೊಗಳಿದರು.

ಹಾರ್ಡಿಂಜ ಪ್ರಭುಗಳವರ ಪತ್ನಿಯವರ ಒಂದು ಪ್ರತಿಮೆಯನ್ನು ಬಂಕಿಪುರದಲ್ಲಿ ಪ್ರಭುಗಳ ಪ್ರತಿಮೆಯೊಡನೆ ಇಡಬೇಕೆಂಬದಾಗಿ ದಾರ್‍ಭಂಗ ಮಹಾರಾಜರವರು ೩೦,೦೦೦ ರೂಪಾಯಿ ವಂತಿಗೆ ಕೊಟ್ಟಿದ್ದರು. ಆದರೆ ಲೇಡಿ ಹಾರ್ಡಿಂಜರವರು ಸಾಯುವ ಮೊದಲು ಈ ಹಣದಿಂದ ಪ್ರತಿಮೆಯನ್ನು ಮಾಡಿಸದೆ ಭಾರತೀಯ ಹೆಂಗಸರ ಉದ್ಧಾರಕ ಕಾರ್ಯಕ್ಕಾಗಿ ಕೊಡಬೇಕೆಂದು ವಿಜ್ಞಾಪಿಸಿಕೊಂಡುದ್ದರಿಂದ ೩೦,೦೦೦ ರೂಪಾಯಿಯು ಡಿಲ್ಲಿಯಲ್ಲಿ ಸ್ಥಾಪಿಸಿದ ಲೇಡಿ ಹಾರ್ಡಿಂಜ್ ಕಾಲೇಜಿಗೆ ಕೊಡಲ್ಪಟ್ಟಿರುವದು.

ಕಲ್ಕತ್ತೆಯ ಜಮಿನ್ದಾರ ಮತ್ತು ಹೈಕೋರ್ಟ ವಕೀಲರಾಗಿದ್ದ ಬಾಬು ಮೊನಮೊನ್ ಪೋಸರವರ ಜೀವವನ್ನು ತೆಗೆಯಲು ಪ್ರಯತ್ನಿಸಿದ್ದನೆಂಬದಾಗಿ ಆಪಾದಿಸಲ್ಪಟ್ಟ ಮುನೀಂದ್ರನಾಥ ಘೋಸ ಎಂಬವನ ಮೇಲಿನ ಮೊಕದ್ದಮೆಯು ತನಿಖಿ ನಡೆದು ಜೂರಿಯರು ಆಪಾದಿತನನ್ನು ನಿರಪರಾಧಿ ಎಂದು ಹೇಳಿದ್ದರಿಂದ ಜಡ್ಜರು ಅವನನ್ನು ಖುಲಾಸುಪಡಿಸಿದರು.

ಕಲ್ಕತ್ತೆಯ ಸಾಗಾರ ದ್ವೀಪದಲ್ಲಿ ವರ್ಷಾವಧಿ ನಡೆಯುತ್ತಲಿರುವ ಗಂಗಾ ಸಾಗಾರ್ ಮೇಳಕ್ಕೆ ಹಿಂದೂಸ್ಥಾನದ ಎಲ್ಲಾ ಭಾಗಗಳಿಂದ ಪ್ರತಿ ವರ್ಷವೂ ೧೦-೫೦ ಸಾವಿರ ಯಾತ್ರಿಕರು ಹೋಗುತ್ತಿದ್ದರು. ಈ ವರ್ಷ ೧೫ ಸಾವಿರ ಮಂದಿ ಯಾತ್ರಿಕರು ಮಾತ್ರ ಹೋಗಿದ್ದರು. ಇದರ ಕಾರಣವನ್ನು ಪೋಲಿಸಿನವರು ವಿಚಾರಿಸಿದಲ್ಲಿ ಜರ್ಮನರ ಎಮ್ಡೆನ್ ಕ್ರೂಜರ್ ನಾವೆಯು ಇನ್ನೂ ಬಂಗಾಳ ಅಖಾತದಲ್ಲಿ ಚಲಿಸುತ್ತಿದೆಂಬದಾಗಿ ಜನರು ಭಾವಿಸಿರುವರು ಎಂಬದಾಗಿ ತಿಳಿದುಬಂದಿರುವದು.

ಬರುವ ಶನಿವಾರ ಮುಂಬಾಯಿಗೆ ಬಂದು ಲೇಡಿ ಹಾರ್ಡಿಂಜ ಆಸ್ಪತ್ರಿಯನ್ನು ಸಂದರ್ಶಿಸುವರೆಂದೂ ಅಲ್ಲಿಂದ ಕರಾಚಿಗೆ ಹೋಗುವರೆಂದೂ ಪ್ರಕಟವಾಗಿದೆ. ಪ್ರಭುಗಳವರು ತಾ. ೨೧ರಲ್ಲು ಡಿಲ್ಲಿಯಿಂದ ಹೊರಟು ತಾ. ೨೩ರಲ್ಲು ಮುಂಬಾಯಿಗೆ ತಲಪಿ ತಾ. ೨೫ರಲ್ಲು ಮುಂಬಾಯಿಂದ ಹಿಂದೆ ಹೋಗುವರು.

ಮುಂಬಾಯಿಯ ಒಬ್ಬ ಸರಾಫನು ೧೪ ಚಿನ್ನದ ಗಟ್ಟಿಗಳದ್ದ ಒಂದು ಚೀಲವನ್ನು ಟಂಕ ಶಾಲೆಗೆ ಸಾಗಿಸಿಕೊಂಡು ಹೋಗುವಾಗ ದಾರಿಯಲ್ಲಿ ಒಬ್ಬ ಭಾರತೀಯನು ಅವನನ್ನು ಕರೆದು, ತಾನು ಪೋಲಿಸ ಆಫೀಸರನಾಗಿರುವದರಿಂದ ಆ ಚೀಲವನ್ನು ಪರಿಶೋಧಿಸಬೇಕಾಗಿದೆ ಎಂದು ಹೇಳಿದನು. ಸರಾಫನು ಚೀಲವನ್ನು ಬಿಚ್ಚಿ ತೋರಿಸಿದನು. ಈ ಮನುಷ್ಯನು ಅದನ್ನು ನೋಡಿಕೊಂಡು ಸರಾಫನಿಗೆ ಒಂದು ಕಾರ್ಡನ್ನು ಕೊಟ್ಟು ಇನ್ನು ಈ ಕಾರ್ಡನ್ನು ತೋರಿಸಿದರೆ ಪೋಲಿಸಿನವರ ಬಾಧೆ ಇರದೆಂದು ಹೇಳಿಕಳುಹಿಸಿದನು. ಸರಾಫನು ಟಂಕ ಶಾಲೆಗೆ ಹೋಗಿ ನೋಡಲು ಚಿನ್ನದ ಒಂದು ಗಟ್ಟಿ ಕಾಣೆಯಾಗಿ ಹೋಗಿತ್ತು. ಕಳ್ಳನು ಪರಾರಿಯಾಗಿರುವನು.

ಮಾನ್ಯ ಗಂಧಿಯವರು ರಾಜಕೋಟನ್ನು ಸಂದರ್ಶಿಸಿರುವರು. ರಾಜಕೋಟಿನವರು ಮಾನ್ಯ ಗಂಧಿಯವರನ್ನು ಬಹು ವಿಜೃಂಭಣೆಯಿಂದ ಸ್ವಾಗತ ಮಾಡಿಕೊಂಡರು. ಅಗ್ಗಾಡಿಯು ತಲಪುತ್ತಲೇ ಮಾಜಿ ದಿವಾನರಾಗಿದ್ದ ಮೆ। ಬೆಜೋನ್ಜಿ ಮೆರ್‍ವಂಜಿಯವರು ಸ್ವಾಗತ ಭಾಷಣವನ್ನು ಕೊಟ್ಟರು. ಅನಂತರ ಮೆ। ಡೆಲ್ಪತ್ರಾಮ್ ಭಗವಂಜೀಯವರು ಮಾನಪತ್ರವನ್ನು ಓದಿದರು. ಮಾನ್ಯ ಗಂಧಿಯವರು ಕಾಲೋಚಿತ ಭಾಷಣದಿಂದ ರಾಜಕೋಟ್ಟ ಜನರನ್ನು ವಂದಿಸಿದರು. ಅನಂತರ ಮೆರವಣಿಗೆ ಹೊರಟು ವಿದ್ಯಾರ್ಥಿಗಳು ಮಾನ್ಯ ಗಂಧಿಯವರು ಕುಳಿತ ಗಾಡಿಯನ್ನು ಪಟ್ಟಣವೆಲ್ಲಾ ಎಳಕೊಂಡು ಹೋದರು. ಸುಮಾರು ೨೦೦೦ ಮಂದಿ ಈ ಮೆರವಣಿಗೆಯಲ್ಲಿ ಪಾಲು ತಕ್ಕೊಂಡರು.

ಬಾರಿಸಾಲ್ ಜಿಲ್ಲೆಗೆ ಸೇರಿದ ವಜೀರಪುರದ ಗಂಗೋಲಿ ಎಂಬವನು ಪ್ಲೇಗಿನಿಂದ ಮೃತನಾಗಲು ಆತನ ಚಿತೆಯೊಡನೆ ಬಿದ್ದು ಸಾಯಬೇಕೆಂದು ಆತನ ಪತ್ನಿಯು ಬಹಳ ಪ್ರಯತ್ನ ಪಟ್ಟಳು. ನೆರೆಹೊರೆಯವರು ಸಾಗಗೊಡಲಿಲ್ಲ. ಕಡೆಗೆ ಅವಳು ಹರ್ದ್ವಾರಕ್ಕೆ ಸ್ವಸ್ಥಾನಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ಹಡಗಿನಿಂದ ಹಾರಿ ಆತ್ಮಹತ್ಯಮಾಡಿಕೊಂಡಳಂತೆ.

ಯುದ್ಧದಲ್ಲಿ ನಿರತರಾಗಿರುವ ಸೈನಿಕರಿಗೆ ತಕ್ಕಷ್ಟು ಬಿಸ್ಲೆಯು ಪರ್ಮಗಳ ಹಾಲಿನ ಮೂಲಕ ದೊರೆಯದೆ ಇರುವ ಕಾರಣ ಕೊಬ್ಬರಿಯಿಂದ ಬೆಣ್ಣೆಯನ್ನು ನಿರ್ಮಿಸಿ ಒದಗಿಸಬೇಕೆಂಬ ಯೋಚನೆಯು ನಡಿಯುತ್ತಿದೆ. ಆದುದರಿಂದ ಕೊಬ್ಬರಿಗೆ ಹೆಚ್ಚು ಬೆಲೆಯಾದೀತೆಂದು ನಿರೀಕ್ಷಿಸಲ್ಪಟ್ಟಿದೆ.

ದಕ್ಷಿಣ ಹಿಂದೂಸ್ಥಾನ.

ಮೈಸೂರು ಮಹಾರಾಜರವರು ತಾ ೧೭ರಲ್ಲು ಮದ್ರಾಸಿಗೆ ಚಿತ್ತೈಸಿರುವರು.

ಪಟ್ಟಣ ರಚನೆ ಮತ್ತು ಆರೋಗ್ಯ ಸಂಬಂಧ ಪ್ರೊಫೆಸರ್ ಗೆಡ್ಡಿಸರ್‌ರವರು ಮದ್ರಾಸ್ ಸಂಸ್ಥಾನದ ಮತ್ತು ಮೈಸೂರು ಆಯಾ ಪಟ್ಟಣಗಳ ಪ್ಲೇನುಗಳ ಪ್ರದರ್ಶನವನ್ನು ತಾ. ೧೮ರಲ್ಲು ಮದ್ರಾಸಿನಲ್ಲಿ ತೆರೆದಿರುತ್ತಾರೆ. ಈ ಪ್ರದರ್ಶನವು ತಾ. ೩೦ರ ವರೆಗೆ ಪ್ರತಿ ದಿನ ಬೆಳಗ್ಯೆ ೭-೩೦ ಗಂಟೆಯಿಂದ ೭-೩೦ ಗಂಟೆಯ ವರೆಗೆ ತೆರೆಯೋಣಾಗುವದು. ಪ್ರೊಫೆಸರ್ ಗೆಡ್ಡಿಸರವರು ಶನಿವಾರ ಮತ್ತು ಆದಿತ್ಯವಾರ ವಿನಹಾ ಇಂಜಿನಿಯರಿಂಗ್ ಕಾಲೇಜಿಯ ಸಭಾಸದನದಲ್ಲಿ ಸಾಯಂಕಾಲ ೫-೩೦ ಗಂಟೆಗಳನ್ನು ಭಾಷಣಗಳನ್ನು ಕೊಡುವರು.

ದಕ್ಷಿಣ ಕನ್ನಡ.

ಬಂಟ್ವಾಳ: — ಮದ್ರಾಸು ಸಂಸ್ಥಾನದ ಪರಸ್ಪರ ಸಹಾಯ ಸಂಘಗಳ ರಿಜಿಸ್ಟ್ರಾರರಾದ ಬಹುಮಾನಪಟ್ಟ ಎಲ್. ಡಿ. ಸ್ವಾಮಿಕಣ್ಣು ಪಿಳ್ಳೆಯವರು ಇದೇ ತಾ. ೧೭ಕ್ಕೆ ಬಂಟ್ವಾಳ ಪರಸ್ಪರ ಸಹಾಯ ಸಂಘದ ಲೆಕ್ಕ ಪತ್ರಗಳನ್ನು ಪರಿಶೋಧಿಸಿ ಈ ಕೆಳಗಿನ ಅಭಿಪ್ರಾಯವನ್ನು ಬರೆದಿಟ್ಟಿರುತ್ತಾರೆ. "ಈ ಸಂಘವು ಸ್ಥಾಪನೆಯಾಗಿ ಒಂದೇ ವರ್ಷ ಕಾಲವು ದಾಟಿತು. ಆದರೂ ಈ ಸಂಘದ ಅಧ್ಯಕ್ಷರಾದ ಮೆ। ರಾ। ಕೊಂಚ್ರಬೈಲ ಕೃಷ್ಣರಾಯರ ಪ್ರಯತ್ನಗಳಿಂದಲೂ ಜನೋಪಕಾರ ಬುದ್ಧಿಯಿಂದಲೂ ಆಶ್ಚರ್ಯಕರವಾಗಿ ಈ ಸಂಘವು ಅಭಿವೃದ್ಧಿ ಹೊಂದಿದೆ. ರೂಪಾಯಿ ೨೫,೦೦೦ಕ್ಕೆ ಮಿಕ್ಕ ಠೇವಣಾತಿಗಳು ಈ ಸಂಘದಲ್ಲಿ ಇರುವುದಲ್ಲದೆ ಆಸ್ತಿ ೬೫೦೦ ರೂಪಾಯಿಗಳನ್ನು ಪುತ್ತೂರಿನ ಸೆಂಟ್ರಲ್ ಬೇಂಕಿನಲ್ಲಿ ಇಟ್ಟಿರುತ್ತಾರೆ. ಸಂಘಕ್ಕೆ ೪೬೬ ಮೆಂಬರುಗಳು ಇದ್ದಾರೆ.

[illegible] ಶೀರು (ಪಾಲುಗಳು)ಗಳನ್ನು ಕೊಟ್ಟಿರುತ್ತಾರೆ. ಇಂತಹ ದೊಡ್ಡ ಶಹರಿನಲ್ಲಿ ಪರಸ್ಪರ ಸಹಾಯದ ಕ್ರಮ, ಉಪಯೋಗ, ಅವುಗಳನ್ನು ವಿವರಿಸುವುದಕ್ಕೆ ಮೂರು ಯಾ ನಾಲ್ಕು ತಿಂಗಳಿಗೊಮ್ಮೆಯಾದರೂ ಸಭೆ ಸೇರಿಸಿ ಜನಗಳಿಗೆ ಬೋಧನೆ ಕೊಡುವುದು ಅಗತ್ಯ" ಆದರೆ ಅವರು ಎತ್ತಿ ತೆಗೆದ ಒಂದು ಕುಂದುಕವನ್ನು ಜನಸಾಮಾನ್ಯವು ಮನಸ್ಸಿಗೆ ತಕ್ಕೊಳ್ಳಬೇಕಾಗಿದೆ. "ಸಂಘದ ಜನರಲ್ ಮೀಟಿಂಗ್‍ಗಳಲ್ಲಿ ಅಗತ್ಯವೆಂದು ನಿರ್ಣಯಿಸಿದ ಮೆಂಬರರು ಹಾಜರಾಗುವುದಕ್ಕೂ ಕುಟ್ಟಿಯಾಗಿದೆ ಎಂದು ಪ್ರೆಸಿಡೆಂಟರು ಹೇಳುವುದಲ್ಲದೆ ಇಂಥ ನಿರ್ಣಯದ ಸಂಖ್ಯೆಯನ್ನು ಕಡಿಮೆಮಾಡಬೇಕಾಗಿ ರಿಪೋರ್ಟು ಮಾಡಿರುತ್ತಾರೆ ಈ ಸಂಗತಿಯು ವಿಷಾದಾಸ್ಪದವಾಗಿದೆ. ಇಂತಹ ಸಂದರ್ಭಗಳಲ್ಲಿ ಸ್ಥಳೀಯ ರೆವಿನ್ಯು ಅಧಿಕಾರಿಗಳ ಸಹಾಯವೂ ಬೆಂಬಲವೂ ಪ್ರಯೋಜನಕಾರಿಯಾಗಬಹುದು." ಈ ಸಂಗತಿಯು ಶೋಚನಿಯವೆಂದು ರಿಜಿಸ್ಟ್ರಾರರು ಹೇಳುವುದು ಆಶ್ಚರ್ಯವಲ್ಲ ನಮ್ಮ ಸ್ವಪ್ರಯೋಜನಕ್ಕೋಸ್ಕರ ನಾವು ಮಾಡುವ ಸಂಸ್ಥೆಗಳಲ್ಲಿ ಅಗತ್ಯವಿದ್ದಷ್ಟು ಸರಕಾರಿ ಬೆಂಬಲವು ನಮಗೆ ಸಿಕ್ಕಿದರೂ ಇನ್ನೂ ಆಗಾಗ ಸಭೆಗಳಿಗೆ ಮೆಂಬರುಗಳು ಬರುವಂತೆ ಸರಕಾರದ ಅಧಿಕಾರಿಗಳ ಸಹಾಯವೂ ಪ್ರಯತ್ನವೂ ಬೇಕಾಗಿದೆ ಎಂದರೆ ಇಂಥ ಶಿಫಾರಸು ಪತ್ರವು ನಮಗೆ ಶ್ರೇಯಸ್ಕರವಲ್ಲ.

~~~~~

ಕಾರ್ಕಳ:—ಹಿಂದುಳಿದ ಜಾತಿಯವರ ಬಗ್ಗೆ ಕಲ್ಯ ಗ್ರಾಮದಲ್ಲಿ ಒಂದು ಬೋರ್ಡು ಶಾಲೆಯು ತೆರಿಯಲ್ಪಟ್ಟಿರುವದು. ಶಾಲಾ ಕಟ್ಟೋಣವನ್ನು ಇದೇ ಗ್ರಾಮದ ದಾದು ಮೋಂಟ್ರನೆಂಬವರು ಕಟ್ಟಿಸಿಕೊಟ್ಟು ಬಡವರ ಏಳಿಗೆಗೆ ಪಾತ್ರರಾದರು. ಆದರೆ ಶಾಲಾ ಕಟ್ಟೋಣವು ಈಗ ಹೀನ ಸ್ಥಿತಿಯಲ್ಲಿರುವುದರಿಂದ ಶಾಲಾ ಕಟ್ಟೋಣದ ದುರುಸ್ತಿಯು ಏರ್ಪಾಡು ಆಗುತ್ತಿದ್ದರೆ ಬಹಳ ಉಪಕಾರವಾಗುತ್ತಿತ್ತು.

ಇದೇ ದಶಂಬರ ತಾ ೩೦ರಲ್ಲು ಕಟಪಾಡಿಯಲ್ಲಿ ಒಂದು ಮಹಾಜನ ಸಭೆಯು ಕೂಡಿತ್ತು. ಈ ಸಭೆಗೆ ಹೈಕೋರ್ಟು ವಕೀಲ ರಾ| ಪಿ ಪಾಂಡುರಂಗ ನಾಯಕರವರೂ, ವಕೀಲರಾದ ರಾ| ಪಿ. ರಾಮಕೃಷ್ಣರಾವ್ ಬಿ ಎ. ಬಿ ಎಲ್. ಮೊದಲಾದ ಮಾನ್ಯ ಗೃಹಸ್ಥರೂ ಹಾಜರಿದ್ದರು ಈ ಸಭೆಗೆ ಉಡುಪಿ ರೇಂಜ್ ಶಾಲಾ ಸಬ್ ಅ. ಇನ್ಸ್‌ಪೆಕ್ಟರಾದ ರಾ| ಉಳ್ಳಾಲ ಮಂಗೇಶರಾಯರು ಸಭಾಧ್ಯಕ್ಷರಾಗಿದ್ದರು ಕೆಲವು ವರ್ಷಗಳಿಂದ ಕಟಪಾಡಿಯಲ್ಲಿದ್ದ II ಗ್ರೇಡ್ ಎಲಿಮೆಂಟರಿ ಶಾಲೆಯ ಮಂಜೂರಾತಿಯು ಹೋಪದ್ದೇ ಈ ಸಭೆ ಕೂಡಿದ್ದರ ಉದ್ದೇಶವಾಗಿತ್ತ. ಸಭೆಯಲ್ಲಿ ಈ ಶಾಲೆಯ ಮಂಜೂರಾತಿ ಹೋದುದರ ವಿಷಯವಾದ ಚರ್ಚೆ ನಡೆದು ಅನಂತರ I ಗ್ರೇಡ್ ಎಲಿಮೆಂಟರಿ ಶಾಲೆಯನ್ನು ಸ್ಥಾಪಿಸಬೇಕೆಂಬ ಪ್ರಸ್ತಾಪ ನಡೆಯಿತು ಈ ಬಗ್ಯೆ ಬೇಕಾದ ಧನವನ್ನು ಒದಗಿಸಿ ಕೊಟ್ಟು ಶಾಲೆಯ ಆಡಳಿತೆಯು ಸರಿಯಾಗಿ ನಡೆಯುವ ವಿಲೆವಾರಿಯನ್ನು ಮಾಡಿದರೆ ಶಾಲೆಯು ಮಂಜೂರು ಆಗುವ ಹಾಗೆ ಪ್ರಯತ್ನ ಪಡುವೆನೆಂದು ಸಭಾಧ್ಯಕ್ಷರು ಅಭಯವಿತ್ತರು

ಉಡುಪಿ ರೇಂಜಿನ ಶಾಲಾ ಅ ಇನ್ಸ್‌ಪೆಕ್ಟರರು ತನ್ನ ರೇಂಜಿನ ಶಾಲೆಗಳಲ್ಲಿ ಮೂಲ ವಿದ್ಯಾಭ್ಯಾಸವನ್ನು ಅತ್ಯುಚ್ಚ ಸ್ಥಿತಿಗೆ ತರುವರೆ ಮಾಡುವ ಸಾಹಸಗಳಿಗೆ ಊರ ಜನರೂ ಉತ್ತೇಜನ ಕೊಟ್ಟರೆ ಪ್ರಜಾ ಜನರಲ್ಲಿ ವಿದ್ಯೆಯೂ ನಾಗರಿಕತೆಯೂ ಬೇಗನೇ ಹುಟ್ಟುವದೆಂಬದು ನಿರ್ವಿವಾದ ಮಾತು ಆಗಿರುತ್ತದೆ.

~~~~~

ಪಂಜ:—ನಮ್ಮ ದಕ್ಷಿಣಕನ್ನಡಾ ಜಿಲ್ಲಾ ಗೌಡ ಜಾತಿಯವರ ಸಂಘದ ನಾಲ್ಕನೆ ವರ್ಷಾವಧಿ ಮಹಾ ಸಭೆಯು ತಾ. ೯-೧-೧೫ನೇ ಶನಿವಾರ ಹಗಲು ಘಂಟೆ ೩ಕ್ಕೆ ಸರಿಯಾಗಿ ಕಡಬ ಕಸಬಾ ಗ್ರಾಮದ ಕೆರೆಮುದೇಲು ಜಾಣ ಗೌಡರ ಮನೆ ಎದುರಿಗೆ ಈ ಬಗ್ಗೆ ಹಾಕಿಸಿರುವ ಚಪ್ಪರದಲ್ಲಿ ಜರಗಿತು. ಈ ಸಭೆಗೆ ನಮ್ಮ ದ. ಕ. ಜಿಲ್ಲೆಯೊಳಗಣ ಸುಮಾರು ೩೦೦ ಮಂದಿ ಸ್ವಜಾತಿಯ ಗೃಹಸ್ಥರು ನೆರೆದಿದ್ದರು. ಆರಂಭ ಕಾಲದಲ್ಲಿ ಆಡಳಿತೆ ಸಭೆಯವರ ಕಡೆಯಿಂದ ರಾ| ಕೊಜುಗೋಡು ಕಟ್ಟೆ ಮನೆ ದೇವಣ್ಣ ಗೌಡರು ಸೊಗಸಾದ ಮಾತುಗಳಿಂದ ಸ್ವಾಗತ ಭಾಷಣ ಮಾಡಿದ್ದರು ಆ ಮೇಲೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ರಾ| ಕರ್ಮಾಜೆ ನಾಗಣ್ಣ ಗೌಡರ ಗೈರ್ಹಾಜರಿ ಸಮ್ಮಂದ ರಾ| ಟಿ ಬೊಮ್ಮಣ್ಣ ಗೌಡರು ಕೊಟ್ಟ ಸೂಚನೆಗೆ ಒಳಪಟ್ಟು ಸಭಿಕರೆಲ್ಲರೂ ರಾ| ಎ ಕುಕ್ಕಪ್ಪ ಗೌಡರನ್ನು ಅಧ್ಯಕ್ಷರನ್ನಾಗಿ ಆರಿಸಿದರು ಸಭಿಕರ ಕೋರಿಕೆಯಂತೆ ಎ. ಕುಕ್ಕಪ್ಪನವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು ತರುವಾಯ ರಾ| ಪಿ ಸೋಮಪ್ಪನವರು ಮದ್ಯಪಾನದಿಂದ ಉಂಟಾಗತಕ್ಕ ಕೆಡಕಿನ ವಿಷಯದಲ್ಲೂ ರಾ ತೋಟದ ಕರಿಯಪ್ಪ ಗೌಡರು ವಿದ್ಯಾಭ್ಯಾಸದಿಂದಾಗುವ ಪ್ರಯೋಜನಗಳ ವಿಷಯದಲ್ಲೂ ಈಗಿನ ಕಾಲಮಾನಗಳಿಗನುಸಾರವಾಗಿ ಸಮಯೋಚಿತ ಸೊಗಸಾದ ಮಾತುಗಳಿಂದ ಉಪನ್ಯಾಸವನ್ನು ಓದಿದ ನಂತರ ರಾ| ಬಿ. ವೆಂಕಪ್ಪ ಗೌಡರು ಸಂಘದ ಏರ್ಪಾಡುಗಳ ವ ಅವುಗಳ ಪ್ರಯೋಜನಗಳ ವಿಷಯವಾಗಿ ಸಭಿಕರಿಗೆ ಕರ್ಣಾನಂದವನ್ನುಂಟುಮಾಡುವ ರೀತಿಯಿಂದ ಪದ್ಯ ವ ಗದ್ಯರೂಪವಾಗಿ ವಿವರಿಸಿದರು. ಬಳಿಕ ರಾ| ಟಿ ಬೊಮ್ಮಣ್ಣ ಗೌಡರು ನಮ್ಮ ಸ್ವಜಾತಿಯವರ ಒಕ್ಕಟ್ಟಿನ ವಿಷಯವಾಗಿ ಕೆಲವು ದೃಷ್ಟಾಂತಗಳ ಮೂಲಕ ಭಾಷಣಮಾಡಿದಲ್ಲದೆ ಸಂಘದ ಕ್ರಮಗಳಲ್ಲಿ ತಿದ್ದುಪಡಿ ಆಗತಕ್ಕ ಭಾಗಗಳನ್ನು ಮಸೂದೆ ಮಾಡಿ ಸಭಿಕರ ಮುಂದಿರಿಸಿದರು

ಅಧ್ಯಕ್ಷರು ಪ್ರತಿ ಒಬ್ಬನು ಮಾಡಿದ ಭಾಷಣಗಳಲ್ಲಿ ಯುಕ್ತ ಕಂಡ ವಚನಗಳನ್ನು ಮನನ ಮಾಡಿ ಸಭಿಕರಿಗೆ ಉತ್ತೇಜನ ವ ತಿಳುವಳಿಕೆಯುಂಟಾಗುವಂತೆ ರುಚಿಕರವಾದ ಮೃದು ನುಡಿಗಳಿಂದ ಭಾಷಣ ಮಾಡಿದಲ್ಲದೆ ಸಭ್ಯರಲ್ಲಿ ಬಹು ಪಕ್ಷದವರ ಮತದಂತೆ ಈ ಕೆಳಗೆ ಕಾಣಿಸಿದ ನಿರ್ಣಯಗಳನ್ನು ತಿದ್ದುಪಡಿ ಮಾಡಿದರು.

ಸಂಘದ ನಿರ್ಣಯಗಳು.

ಸಂಘದ ಅಧ್ಯಕ್ಷರುಗಳ ಮತ್ತು ಕಾರ್ಯದರ್ಶಿಗಳ ದಸ್ಕತು ನಿಶಿ ಕೊಡೋಣಾಗುವ ಪಟ್ಟಿ ಪ್ರಕಾರ ಸಂಘದ ಹಣ ವಸೂಲಿಯನ್ನು ಗ್ರಾಮದ ಗೌಡರು ಮಾಡಬೇಕಾಗಿ ನಿರ್ಣಯಿಸಲಾಯಿತು. ಸದಾ ಪ್ರಾರ್ಥನೆ ನಡಿಯುವ ಬಗ್ಗೆ ಚಾಲ್ತಿ ವರುಷದ ಬಾಬತು ರೂ. ೫೦. ಗತಿಸಿದ ವರುಷಗಳ ಬಾಬತು ರೂ. ೧೫೦ ಕೂಡಾ ರೂ ೨೦೦ ರನ್ನು ಶೃಂಗೇರಿ ಶ್ರೀ ಮಠಕ್ಕೆ ಕಳುಹಿಸಿಕೊಡುವುದಾಗಿ ನಿಶ್ಚೈಸಿದ್ದಾಯಿತು. ಮದ್ಯಪಾನವನ್ನು ಜಾತಿಯರೊಬ್ಬರು ಅಂಗಡಿ ವ ಗುತ್ತಿಗೆಗಳಿಗೆ ಹೋಗಿ ಕುಡಿಯಬಾರದೆಂತಲೂ, ಶುಭಶೋಭನಾದಿ ಕಾರ್ಯಗಳ ವೇಳೆ ಸೇವಿಸುವುದನ್ನೂ, ಸೇವಿಸಿಕೊಂಡು ಬರುವುದನ್ನೂ ಮನ್ನ ಇಡುವುದಾಗಿ ವಿಧಿಸಿದ್ದಾಯಿತು. ಕೂಜುಗೋಡು ವ ಬಲ್ಲಾಡು ಕಟ್ಟೆಮನೆಯವರು ಅದ್ಯಕ್ಷರಾಗಿಯೂ ಹೊಸಳ್ಳಿ ಕಟ್ಟೆಮನೆಯವರು ಉಪಾಧ್ಯಕ್ಷರಾಗಿಯೂ ಇರುವುದಲ್ಲದೆ ಹೊಸತಾಗಿ ಟಿ. ಬೊಮ್ಮಣ್ಣ ಗೌಡರನ್ನು ಕಾರ್ಯದರ್ಶಿಯನ್ನಾಗಿಯೂ, ಚಾರ್ವಾಕ ಮಾಜಿ ಪಟೇಲ್ ಕುಕ್ಕಪ್ಪ ಗೌಡರು, ಬಾಳು ಸೋಮಣ್ಣ ಗೌಡರು, ಏನಜೆ ಪೆರ್ನು ಗೌಡರು, ಮಾಜಿ ಪಟೇಲ ಪಲ್ಲಾಣಿ ಮುಂಡಪ್ಪ ಗೌಡರು, ಕರಿಯನು ಉಮ್ಮಣ್ಣ ಗೌಡರು ಈ ೫ ಜನರು ಆಡಳಿತೆ ಸಭೆಯ ಮೆಂಬರರಾಗತಕ್ಕದಂತಲೂ ಕಾರ್ಯದರ್ಶಿಗೆ ಮಾತ್ರ ಪ್ರತಿಫಲ ಕೊಡಬೇಕಾಗಿಯೂ ನಿರ್ಣಯಿಸಲಾಯಿತು ಸಂಘದ ಚಾಲ್ತಿ ವರುಷದ ಅಂದಾಜು ಖರ್ಚು ರೂಪಾಯಿ ೩೫೦ನ್ನು ಸೆಂಕ್ಷನ್ ಮಾಡಲಾಯಿತು. ಬರುವ ಮಹಾ ಸಭೆಯು ಧರ್ಮಸ್ಥಳದಲ್ಲಿ ಸೇರಬೇಕಾಗಿ ನಿಯಮಿಸಿದ್ದಾಯಿತು. ನಂತರ ಶ್ಯಾಮ ೬ ಗಂಟೆ ಸಮಯದಲ್ಲಿ ಸಭಾಧ್ಯಕ್ಷರೂ ಸಭಿಕರೂ ಎದ್ದು ನಿಂತು ನಮ್ಮ ಸಂಘವು ಸ್ಥಿರವಾಗಿ ಅಭಿವೃದ್ಧಿಯಾಗುವಂತೆಯೂ ನಮ್ಮನ್ನು ಆಳತಕ್ಕ ಸಾರ್ವಭೌಮರು Vನೇ ಜೋರ್ಜ್ ಚಕ್ರವರ್ತಿಗಳವರಿಗೆ ಯುದ್ಧದಲ್ಲಿ ಜಯಪ್ರದವಾಗುವಂತೆಯೂ ಸರ್ವಶಕ್ತನಾದ ದೇವರನ್ನು ಪ್ರಾರ್ಥಿಸಿಕೊಂಡ ನಂತರ ಸಭೆಯು ಅಗಲಿದ್ದಾಯಿತು.

ಪಂಜ.
ತಾ. 15—1—15 } ಪಂಬೆತ್ತಾಡಿ ವೀರಪ್ಪ ಗೌಡ.

~~~~~

ಕಾಪು:—ಅಣ್ಣಪ್ಪಸೆಟ್ಟಿ ಎಂಬಾತನಿಂದ ಬರತಕ್ಕ ಸಾಲಕ್ಕೆ, ಬೊಗ್ರಸೆಟ್ಟಿ ಎಂಬವನು ಅಮಲ್ದಾರಿ ವಾರಾಂಟು ತಕ್ಕೊಂಡು ಜಪ್ತಿ ಮಾಡುವರೆ ಅಮೀನರ ಸಮೇತ ಅಣ್ಣಪ್ಪಸೆಟ್ಟಿಯ ಮನೆಗೆ ಹೋದಲ್ಲಿ ಸದರಿ ಸೆಟ್ಟಿ ಆತನ ಹೆಂಡತಿ ಮಗಳು ಕೂಡಾ ೩ ಜನರು ಬೊಗ್ರಸೆಟ್ಟಿಯನ್ನು ಹಿಡಿದು ಮುಷ್ಟಿ ಪ್ರಹಾರವನ್ನು ಗೈದು ಅಪಮಾನಪಡಿಸಿದ ಪ್ರಯುಕ್ತ ಉಡುಪಿ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ಬೊಗ್ರಸೆಟ್ಟಿಯು ಮಾಡಿದ್ದನು. ಸದರಿ ಫಿರ್ಯಾದಿ ತನಿಕೆಯಿಂದ

~~~~~

ಆಪಾದಿತ ೩ ಜನರಿಗೂ ಮೂರು ಮೂರು ತಿಂಗಳ ಕಠಿಣ ಸಜೆ ಆಗುವದಾಯಿತು ಎಂತ ಕೇಳುತ್ತೇವೆ.

ಎಮಾ೯ಳ ನಿವಾಸಿಗಳಿಗೆ ಪಡುಬಿದ್ರೆ, ಕಾಪು, ಪೋಸ್ಟಾಫೀಸುಗಳು ಬಹಳ ದೂರವಾಗಿದ್ದು ಕಾಗದ ಪತ್ರಾದಿಗಳು ವರ್ತಮಾನ ಪತ್ರಿಕೆಗಳು ಎಲ್ಲಾ ಸರಿಯಾಗಿ ಸೇರುವರೆ ಬಹಳ ವಿಳಂಬವಾಗುತ್ತದೆಂತಲೂ ಎರ್ಮಾಳದಲ್ಲಿ ಮುಂಚೆ ಇದ್ದಂತೆಯೇ ಒಂದು ಬ್ರೇಂಚಾಫೀಸು ತೆರೆಯುವದು ಜನರಿಗೆ ಎಷ್ಟೋ ಉಪಕಾರದ ಸಂಗತಿ ಎಂತಲೂ ಈ ವಿಷಯ ಸರಕಾರದವರು ತಕ್ಕ ವಿಚಾರ ಕೊಡುವದು ವಿಹಿತವಾದದ್ದು ಎಂತಲೂ ಅಲ್ಲಿಯ ಜನರು ವಿಜ್ಞಾಪಿಸಿಕೊಂಡಿರುವರು.

ಎರ್ಮಾಳದಲ್ಲಿ ಹೊಸತಾಗಿ ತೆರೆಯಲ್ಪಟ್ಟ ಹಿಂದೂಸ್ಥಾನಿ ಬೋರ್ಡು ಶಾಲೆಗೆ ಒಂದು ಹೊಸ ಕಟ್ಟೋಣ ಕಟ್ಟಿಸಿ ಬೋರ್ಡಿನವರಿಗೆ ಬಾಡಿಗೆಗೆ ಕೊಡುವರೆ ಮ| ರಾ| ಪಟೇಲ ಕುಮಾರರಾಯರು ಒಪ್ಪಿಕೊಂಡಿರುವದು ಕೇಳಿ ಸಂತೋಷವೇ ಸರಿ. ಆದರೆ ಈಗ ಬರೇ ಸಣ್ಣ ಕಟ್ಟೋಣದಲ್ಲಿದ್ದು ಪೇಚಾಟಪಡುತ್ತಲಿರುವ ಬಡ ಮಕ್ಕಳನ್ನು ಆದಷ್ಟು ಬೇಗನೆ ಹೊಸ ಕಟ್ಟೋಣ ಕಟ್ಟಿಸಿ ಸದರಿ ಕಟ್ಟೋಣಕ್ಕೆ ಬರುವಂತೆ ಮ| ರಾ| ಪಟೇಲರು ಮನಸ್ಸು ಕೊಡುವದು ವಿಹಿತವಾಗಿದೆ.

~~~~~

ಕಲ್ಯಾಣಪುರ:— ಇಲ್ಲಿಯ ರುಜಾರಿಯೊ ಇಗರ್ಜಿಯ ವರ್ಷಾವಧಿ ಹಬ್ಬವು ಬಹಳ ವಿಜೃಂಭಣೆಯಿಂದ ತಾ. ೧೩ರಲ್ಲಿ ನಡೆಯಿತು. ತಾ ೧೪ನೇ ಬೃಹಸ್ಪತಿವಾರ ರುಜಾರಿಯೊ ಇಗರ್ಜಿಯ ವಿಕಾರರಾದ ರೆವೆರೆಂಡ್ ಫಾದರ್ ಜೆ ಎಮ್ ಮಸೆಯವರು ಇಲ್ಲಿಗೆ ಒಂದು ೨೫ ವರ್ಷವಾದ್ದರಿಂದ ಆ ದಿನ ಸಿಲ್‌ವರ್ ಜುಬಿಲಿಯನ್ನು ಬಹಳ ಸಡಗರದಿಂದ ಮಾಡಿದರು. ಬುಧವಾರ ಸಾಯಂಕಾಲ ಇಲ್ಲಿಯ ಹುಡುಗರು ಕೂಡಿ ಒಂದು ನಾಟಕವನ್ನು ಆಡಿ ಎಲ್ಲವರ ಮನಸ್ಸನ್ನು ಸಂತೋಷಗೊಳಿಸಿದರು. ಗುರುವಾರ ಬೆಳಿಗ್ಯೆ ಫಾದರ್ ಮಸೆಯವರೇ ಪೂಜೆಯನ್ನು ಹೇಳಿದ ಮೇಲೆ ಪೇಜಾವರ ಗುರುಗಳಾದ ಫಾದರ್ ಕುಲಾಸೊರವರು ಫಾದರ್ ಮಸೆಯವರು ಈ ಇಗರ್ಜಿಗೆ ಬಂದು ಮಾಡಿದ ಒಳ್ಳೇ ಕೆಲಸಗಳನ್ನೂ ಕುರಿತು ಮಾತನ್ನಾಡಿದರು. ನಂತರ ಈ ಇಗರ್ಜಿಗೆ ಸಂಬಂಧಪಟ್ಟವರೆಲ್ಲರೂ ಒಂದು ಎಡ್ರೆಸನ್ನು ಓದಿ ಕಾಣಿಕೆಯನ್ನು ಅರ್ಪಿಸಿದರು ಆ ಮೇಲೆ ಕೆಳ ಇಗರ್ಜಿಯವರು ಮತ್ತು ಅನೇಕರೂ, ಹಿಂದೂ ಬಾಂಧವರು ಸಹ ಕಾಣಿಕೆಗಳನ್ನು ಕೊಟ್ಟರು ಆ ಮೇಲೆ ಫಾದರ್ ಮಸೆಯವರು ಎದ್ದು ನಿಂತು ಎಲ್ಲವರೂ ಮಾಡಿದ ಈ ಉಪಕಾರಕ್ಕೆ ಬಹಳವಾಗಿ ವಂದಿಸಿದರು. ಕಡೆಗೆ ಎಲ್ಲಾ ಜನರಿಗೆ ಕಾಫಿಯನ್ನೂ ಬಾಳೇಹಣ್ಣುಗಳನ್ನೂ ಬಿಸ್ಕಿಟ್‌ಗಳನ್ನೂ ಹಂಚಿ ಉಪಚರಿಸಿದರು.

~~~~~

ಮಂಗಳೂರು

~~~~~

ಇಲ್ಲಿಯ ಸ್ಟೂಡೆಂಟ್ಸ್ ಬ್ರದರ್ [illegible] ಭ್ರಾತೃ ಸಂಘದಲ್ಲಿ ಇದೇ ತಾ. ೧೭ನೇ ಆದಿತ್ಯವಾರ ಮ. ರಾ. ಕೆ. ಟಿ. ಆಳ್ವರವರು ಮ. ರಾ ಪಿ. ಭೋಜರಾಯರವರ ಅಧ್ಯಕ್ಷತೆಯಲ್ಲಿ "ವ್ಯವಸಾಯ ಸಂಬಂಧವಾದ ಚಲೋ ಭಾಷಣವನ್ನು ಕೊಟ್ಟು ವಿದ್ಯಾರ್ಥಿಗಳ ಮನಸ್ಸನ್ನು ವ್ಯವಸಾಯದ ಕಡೆಗೆ ಆಕರ್ಷಿಸಿರುವರು."

ದಕ್ಷಿಣಕನ್ನಡ ಜಿಲ್ಲೆಗೆ ಸ್ಪೆಶಲ್ ಡ್ಯೂಟಿಯ ಮೇಲೆ ಬಂದಿರುವ ಕಳಿಪರಂಬ ಫಾರ್ಮ್ ಮೆನೇಜರ್ ಮ. ರಾ. ಕೆ. ಟಿ. ಆಳ್ವರು ಅಮ್ಮ ಮೊಗರು, ವಿಜಾರು, ಪಣಂಬೂರು, ಕಂಕನಾಡಿ, ಸಮೀಪದಿರುವ ಅಲಪ್ಪೆ, ಕೊಡಿಯಾಲಬೈಲು ಗ್ರಾಮಗಳಲ್ಲಿ ಎತ್ತುಗಳ ಮೂಲಕ ನೀರು ಎಳೆಸುವ "ಕಪಿಲೆ ಹೊಡೆಸುವ" ಕ್ರಮವನ್ನು [illegible] ರಿಗೆ ಹೇಳಿಕೊಟ್ಟು ಈ ಕ್ರಮವನ್ನು ಆ ಗ್ರಾಮಗಳಲ್ಲಿ [illegible] ರುವರು. ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ [illegible]
~~~~~

ಮೂಲಕ ಕೂಲಿಯಾಳುಗಳು ಎಳದು ಗದ್ದೆಗೆ ನೀರು ಬಿಡುವ ವಾಡಿಕೆ ಇದೆ. ಈ ಕೆಲಸವನ್ನು ಮಾಡಲಿಕ್ಕೆ ಕನಿಷ್ಟಪಕ್ಷಕ್ಕೆ ೩-೪ ಆಳುಗಳು ಬೇಕಾಗುವರು. ಆದರೆ ಈ ಕಪಿಲೆ ಹೊಡೆಸುವದಕ್ಕೆ ಒಬ್ಬ ಆಳು ಮತ್ತು ಎರಡು ಎತ್ತುಗಳು ಸಾಕಾಗುವವು. ಹೀಗೆ ಎತ್ತುಗಳು ಉಳುವದಕ್ಕೂ ನೀರು ಎಳೆಯುವುದಕ್ಕೂ ಪ್ರಯೋಗಿಸಲ್ಪಡುವದರಿಂದ ರೈತರಿಗೆ ಹೆಚ್ಚಿನ ಖರ್ಚು ಉಳಿದಂತಾಗುವದು.

ಇದೇ ತಾ. ೧೪ನೇ ರಾತ್ರಿ ಹೂವಿನ ಮಾರ್ಕೆಟಿನ ಬಳಿ ಇರುವ ರಾ। ಮಹೇಲ್ ಅನಂತಶ್ಯಾನುಭಾಗರ ಹಿತ್ತಲ್ಲಿರುವ ಒಂದು ಮನೆಗೆ ಕಳ್ಳರು ಕನ್ನ ಕೊರೆದು ನುಗ್ಗಿ ಸುಮಾರು ೨೦೦ ೩೦೦ ರೂಪಾಕ್ರಯ ಬಾಳುವ ಆಭರಣ ಇತ್ಯಾದಿಗಳನ್ನು ಕಳವು ಮಾಡಿರುವರು.

ಹಂಪನಕಟ್ಟೆಯ ಪೋಸ್ಟಾಫೀಸಿನಲ್ಲಿ ಪ್ಲೇಗು ಸೋಂಕಿದ ಇಲಿಗಳು ಬಿದ್ದುದರಿಂದ ಅದರ ಕೆಲಸವು ಸದ್ಯ ನಿಲ್ಲಿಸಲ್ಪಟ್ಟಿರುವದು ಆದರೆ ಕಾಗದಗಳನ್ನು ಮಾತ್ರ ಪೆಟ್ಟಿಗೆಯಲ್ಲಿ ಹಾಕಬಹುದೆಂತ ಪ್ರಕಟವಾಗಿದೆ.

ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟ ದೊರೆಗಳವರು ವೆಲ್ಲೂರಿನಲ್ಲಿ ನಡಿಯುವ ಪೋಲಿಸ್ ಕನ್ಪರೆನ್ಸಿಗೆ ಹೋಗಿರುವರು. ಇದೇ ತಾ. ೨೯ಕ್ಕೆ ಹಿಂತಿರಗಿ ಬರುವರು

ಮುಂಬಾಯಿಂದ ಇಲ್ಲಿಯ ಮಟಾಡ ಎಂಡ್ ಸನ್ಸ್‌ರವರಿಗೆ ಬಂದಿದ್ದ ವಸ್ತ್ರದ ಕಟ್ಟುಗಳಿಂದ ಒಂದು ಕಟ್ಟನ್ನು ಇಲ್ಲಿಯ ಮಂಜಯ ಮಾಪಿಳ್ಳೆಯೊಬ್ಬನು ಚಾರಿಸಿದ ವಿಷಯವು ಪೋಲಿಸರಿಗೆ ತಿಳಿದು ಬಂದುದರಿಂದ ಪೋಲಿಸರು ಸದರಿ ಮಾಪಿಳ್ಳೆಯನ್ನು ಕೈದುಮಾಡಿ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ.

ಇಲ್ಲಿಯ ರೈಲ್ವೆ ಸ್ಟೇಶನಿನ ಕಳವಾಗಿದ್ದ ಗಾಡ್ಸ್ ಬಾಂದರೊಂದು ಹಳೇ ವಸ್ತ್ಯಾಲುಗಳನ್ನು ಮಾರುವ ಮಾಪಿಳ್ಳೆಯೊಬ್ಬನ ಕೂಡೆ ಸಿಕ್ಕಿದ್ದರಿಂದ ಪೋಲಿಸಿನವರು ಅವನನ್ನು ಕೈದು ಮಾಡಿರುವರು.

ಬರುವ ಫೆಬ್ರುವರಿ ತಿಂಗಳ ತಾ ೧೬ರಲ್ಲಿ ಮುನ್ಸಿಪಾಲಿಟಿಯ ವ್ಹಾಯಿಸ್ ಚೇಯರ್ಮೇನರನ್ನು ಆರಿಸುವ ಬಗ್ಗೆ ಮುನ್ಸಿಪಲ್ ಕೌನ್ಸಿಲಿನ ಸಭೆಯು ಕೂಡುವುದಾಗಿ ಕೇಳುತ್ತೇವೆ.

ಈ ಪ್ರಾಂತ್ಯಗಳ ವಿದ್ಯಾ ವಿಲಾಖೆಯ ಇನ್ಸ್‌ಪೆಕ್ಟರರಾದ ಮೆ। ಹೊಜನ್ಸ್‌ರವರು ಸದ್ಯದಲ್ಲಿ ವಿಲಾಯತಿಗೆ ತೆರಳುವರೆಂಬ ವರ್ತಮಾನವಿರುವುದು

ಇಲ್ಲಿಯ ಬಸವನಗುಡಿ ರಸ್ತೆಯಲ್ಲಿರುವ ಹುಲ್ಲು ಛಾವಣಿಯ ಮನೆಯೊಂದಕ್ಕೆ ಕಳದ ತಾ. ೨೧—೧—೧೫ರಲ್ಲು ಬೆಂಕಿ ತಾಗಿ ನಾಶವಾಗಿರುವುದು. ಬೆಂಕಿಯ ಜ್ವಾಲೆಯು ಬಹಳ ವಿಶೇಷ ಇದ್ದದ್ದರಿಂದ ಮನೆಯ ಹತ್ತಿರಕ್ಕೆ ಹೋಗಲಿಕ್ಕೆ ಯಾರೂ ಧೈರ್ಯಪಡದೇ ಇದ್ದರೂ ಸಬ್ ಇನ್ಸ್‌ಪೆಕ್ಟರಾದ ಮ। ರಾ। ರಾ। ಡಿ. ವೆಂಕಟೇಶಪ್ಪೈಗಳು ತಾನೇ ಮಾಡಿನ ಮೇಲೆ ಏರಿ ಬೆಂಕಿಯನ್ನು ನೊಂದಿಸಲು ಪ್ರಯತ್ನಪಟ್ಟದ್ದರಿಂದ ಇತರರೂ ಅವರಿಗೆ ಸಹಾಯ ಮಾಡಿದ್ದರಿಂದ ಸಮೀಪದ ಬೇರೆ ಮನೆಗಳಿಗೆ ಬೆಂಕಿಯು ಪ್ರವೇಶಿಸದ ಹಾಗಾಯಿತು.

ಬೆಳ್ತಂಗಡಿ ಸಬ್ ಮೇಜಿಸ್ಟ್ರೇಟರಿಂದ ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟ ಮೊಕದಮೆಯು ಈ ತಿಂಗಳಲ್ಲಿ ಸೆಶ್ಶನ್ಸ್ ಕೋರ್ಟಿನಲ್ಲಿ ತನಖಿಯಾಯಿತು. ಈ ಮೊಕದಮೆಯಲ್ಲಿ ದೂಜಗೌಡ ಎಂಬವನು ಕಣಿಯಾಡಿ ಗ್ರಾಮದ ರುಕ್ಮಯಾಚಾರಿ ಎಂಬವನನ್ನು ಕಳೆದ ದಶಂಬರ ತಾ. ೧೦ರಲ್ಲು ತಿವಿದು ಕೊಂದನೆಂಬದಾಗಿ ಇ. ಪಿ. ಕೋಡಿನ ೩೦೩ನೇ ಪ್ರಕರಣದ ಮೇಲೆ ಆಪಾದಿಸಲ್ಪಟ್ಟಿದ್ದನು. ಎಸ್ಸೆಸರುಗಳು ತಕ್ಕ ರುಜುವಾತು ಇರುವದಿಲ್ಲವೆಂದು ಹೇಳಿದ್ದರಿಂದ ಜಡ್ಜರು ಆಪಾದಿತನನ್ನು ಖುಲಾಸುಪಡಿಸಿದರು.

ಕುಂದಾಪುರ ಡಿವಿಜನ್ ಸಬ್ ಕಲೆಕ್ಟರರ ಸರ್ಕೀಟು ಕ್ರಮಪಟ್ಟಿ:—ಜನವರಿ ತಾ. ೧೯ ವೇಣೂರು; ತಾ. ೨೦ ವೇಣೂರಿಂದ ಮೂಡಬಿದ್ರೆ; ತಾ. ೨೧ ಮೂಡಬಿದ್ರೆಯಿಂದ ನಾರಾವಿ; ತಾ. ೨೨ ನಾರಾವಿ; ತಾ. ೨೩ ನಾರಾವಿಯಿಂದ ಮೂಡಬಿದ್ರೆ; ತಾ. ೨೪ ಮೂಡಬಿದ್ರೆಯಿಂದ ಗುರುಪುರ; ತಾ. ೨೫ ಗುರುಪುರದಿಂದ ಮಂಗಳೂರು; ತಾ. ೨೬ ಮಂಗಳೂರಿಂದ ಮೂಡಬಿದ್ರೆ; ತಾ. ೨೭ ಮೂಡಬಿದ್ರೆಯಿಂದ ಅಜೆಕಾರ್; ತಾ. ೨೮-೩೧ ಅಜೆಕಾರ್; ಫೆಬ್ರವರಿ ತಾ. ೧ ಅಜೆಕಾರಿಂದ ಕಾರ್ಕಳ; ತಾ. ೨-೬ ಕಾರ್ಕಳ; ತಾ. ೭ ಕಾರ್ಕಳದಿಂದ ಹಿರಿಯಡ್ಕ; ತಾ. ೮ ಹಿರಿಯಡ್ಕ; ತಾ. ೯ ಹಿರಿಯಡ್ಕದಿಂದ ಉಡ್ಪಿ; ತಾ. ೧೦ ಉಡ್ಪಿಯಿಂದ ಕೋಟ; ತಾ. ೧೧ ಕೋಟದಿಂದ ಕುಂದಾಪುರ; ತಾ. ೧೨-೧೩ ಕುಂದಾಪುರ; ತಾ. ೧೪ ಕುಂದಾಪುರದಿಂದ ಉಡುಪಿ.

ಪರಸ್ಪರ ಸಹಾಯ

ಸರ್ಕಿಲಾರು ನಂಬ್ರ ೨.

ಪರಸ್ಪರ ಸಹಾಯಕ ಸಂಘಗಳ ಕಡೆಯಿಂದ ಬೇಂಕಿಗೆ ಯಾವ ಬಾಬಿನ ಅರ್ಜಿಗಳು ಕಳುಹಿಸುವುದಾದರೂ ಸದರಿ ಅರ್ಜಿಗಳನ್ನು ಬರಕೊಳ್ಳುವುದರ ಕುರಿತು ಸಂಘಗಳ ಪಂಚಾಯತ ಸಭೆಯಲ್ಲಿ ನಿರ್ಣಯವನ್ನು ಮಾಡಿ ಆ ನಿರ್ಣಯದ ಸರಿ ನಕಲನ್ನು ಸಹ ಕಳುಹಿಸಬೇಕೆಂಬ ಕ್ರಮವು ಸಂಘದವರಿಗೆ ಚೆನ್ನಾಗಿ ಗೊತ್ತಿದ್ದರೂ ಅದನ್ನು ಅನೇಕ ಸಂಗತಿಗಳಲ್ಲಿ ಅನುಸರಿಸುವುದಿಲ್ಲ. ಸರಿ ನಕಲುಗಳು ಬೇಂಕಿನವರಿಗೆ ಬಹಳ ಮುಖ್ಯವಾದುದರಿಂದ ಈ ವಿಷಯದಲ್ಲಿ ಸಂಘದ ಆಫೀಸರರು ಇನ್ನು ಮುಂದಕ್ಕಾದರೂ ಜಾಗ್ರತೆಯನ್ನಿಡಬೇಕಾಗಿ ಅಪೇಕ್ಷಿಸೋಣಾಗುತ್ತದೆ ಮುಖ್ಯವಾಗಿ ಸಾಲಗಳನ್ನು ಕೇಳಿಕೊಂಡು ಬರಕೊಳ್ಳುವ ಅರ್ಜಿಗಳು, ಪಾಲುಗಳನ್ನು ಕೇಳಿಕೊಂಡು ಬರಕೊಳ್ಳುವ ಅರ್ಜಿಗಳು, ಸಾಲಗಳ ಮಾಯಿದೆಯನ್ನು ವೃದ್ಧಿಸುವರೆ ಬರಕೊಳ್ಳುವ ಅರ್ಜಿಗಳು ಈ ಮೂರು ತರದ ಅರ್ಜಿಗಳೊಂದಿಗಾದರೂ ನಿರ್ಣಯಗಳ ಸರಿ ನಕಲುಗಳನ್ನು ಕಳುಹಿಸದೆ ಇರಕೂಡದು.

೨ ಇದು ವರೆಗೆ ಬೇಂಕಿಗೆ ಕಳುಹಿಸುತ್ತಿದ್ದ ಸರಿ ನಕಲುಗಳಲ್ಲಿ ಮುಖ್ಯವಾದ ಒಂದು ವಿಷಯವು ಕಾಣುತ್ತಲೇ ಇದ್ದಿಲ್ಲ. ಸದರಿ ನಿರ್ಣಯವನ್ನು ಮಾಡಿದ ಪಂಚಾಯತ ಸಭೆಯಲ್ಲಿ ಪಂಚಾಯತ ಮೆಂಬರರ ಪೈಕಿ ಯಾರು ಹಾಜರಿದ್ದರೆಂಬುದು ಗೊತ್ತಾಗುತ್ತಿದ್ದಿಲ್ಲ. ಆದುದರಿಂದ ಸರಿ ನಕಲುಗಳನ್ನು ಈ ಕೆಳಗಿನ ನಮೂನೆಯಲ್ಲಿ ಬರದು ಕಳುಹಿಸಬೇಕೆಂತ ಅಪೇಕ್ಷಿಸೋಣಾಗುತ್ತದೆ

ನಂಬ್ರ ನೇ ಪಂಚಾಯತ ಸಭೆಯ ಪ್ರೊಸೀಡಿಂಗ್ಸ್.

ತಾರೀಕು — —19

ಹಾಜರು — 1.
2
3.
ಇತ್ಯಾದಿ.

(ನಿರ್ಣಯದ ನಂಬ್ರ.)

(ನಿರ್ಣಯದ ನಕಲು.)

ಸರಿ ನಕಲು

ಕಾರ್ಯದರ್ಶಿ.

೩ ಪ್ರತಿಯೊಂದು ಸಂಘಕ್ಕೂ ಒಂದು ಮೊಹರು ಇರುವುದು ಅತ್ಯಗತ್ಯವಾಗಿರುತ್ತದೆ. ಸಂಘಗಳಿಂದ ಬೇಂಕಿಗೆ ಬರಿಯೋಣಾಗುವ ಪತ್ರಗಳ ಮಟ್ಟಿಗೆ ಸದರಿ ಮೊಹರು ಮೇಲೆ ಹೇಳಿದ ನಿರ್ಣಯದ ಸರಿ ನಕಲುಗಳಷ್ಟೇ ಮುಖ್ಯವಾಗಿರುತ್ತದೆ. ಆದುದರಿಂದ ಸಂಘಗಳು ಕಳುಹಿಸುವ ಪ್ರತಿಯೊಂದು ಪತ್ರದಲ್ಲಿಯೂ ಸಂಘದ ಮೊಹರನ್ನು ಸಹ ಜಾಗ್ರತೆಯಿಂದ ಹಿತ್ತಬೇಕು.

ದಕ್ಷಿಣಕನ್ನಡಾ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್ ಲಿಮಿಟೆಡ್.
ಪುತ್ತೂರು ದಕ್ಷಿಣಕನ್ನಡಾ.
ತಾರೀಕು 11—1—1915.

ಎಮ್. ಅನಂತರಾವ್
ಕಾರ್ಯದರ್ಶಿ.

ಯುದ್ಧ ರಿಲೀಫ್ ಫಂಡಿಗೆ ಮಂಗಳೂರಲ್ಲಿ ವಂತಿಗೆ ಕೊಟ್ಟವರ ಹೆಸರುಗಳೂ ಮೊಬಲಗುಗಳೂ.

—:o:—

ಮ। ರಾ। ಸಾಹುಕಾರ ಶ್ರೀನಿವಾಸಪ್ಪ ರೂ. ೫೧; ಎಫ್. ಬ್ರಿಸ್ ದೊರೆಗಳವರು ಕೂಡಿಸಿಕೊಟ್ಟ ರೂ. ೫೦; ರೆವರೆಂಡ್ ಜೆ. ಬಿ. ಸೋನ್ಸರು ಕೂಡಿಸಿಕೊಟ್ಟ ರೂ. ೨೫; ರೆವರೆಂಡ್ ಒ. ಸುಮ್ಸರವರು ಕೂಡಿಸಿಕೊಟ್ಟ ರೂ. ೨೫; ಮ। ರಾ। ವಿ. ಎಸ್. ಕಾಮತ್ ಸ್ವದೇಶಾಭಿಮಾನಿ ಆಫೀಸು, ಮಂಗಳೂರು ರೂ. ೨೫; ಮೆಸರ್ಸ್ ಬಿ. ಎಸ್. ಪ್ರಭು ಎಂಡ್ ಕೋ ರೂ. ೧೫; ಮ। ರಾ। ಉಳ್ಳಾಲ ಸರ್ವೋತ್ತಮಕಿಣಿ ರೂ. ೧೦; ಮ। ರಾ। ಹುಂಡೀ ಪುರುಷೋತ್ತಮಕಾಮತ್ ರೂ. ೧೦; ಮೆ। ಎಸ್. ಇ. ಐಮನರು ಕೂಡಿಸಿಕೊಟ್ಟ ರೂ. ೫-೬-೦; ಇಪ್ಪ ಬಿ. ಎಮ್. ಹಂಚು ಕಾರ್ಖಾನೆಯ ಕೂಲಿಯಾಳುಗಳು ಕೂಡಿಸಿದ ರೂ. ೫-೩-೬; ಒಬ್ಬ ಸ್ನೇಹಿತರು ರೂ. ೫; ಮೆ। ಕ್ರಿಸ್ಟಿಯನ್ ತಿಯಡೊರರವರು ರೂ. ೫; ಮೆಸರ್ಸ್ ಎಲ್ ಜೋಶುವ ಎಂಡ್ ಸನ್ಸ್ ರೂ. ೫; ಮೆ। ಎ. ಸಿವಿಯೋನರು ಕೂಡಿಸಿದ ರೂ. ೫; ಮೆಸರ್ಸ್ ಪಿ. ಎಮ್ ಕಾಮತ್ ಎಂಡ್ ಕೋ ರೂ. ೫; ಮೆಸರ್ಸ್ ಕಂಡಿಗೆ ವೆಂಕಟೇಶ ಪ್ರಭು ಎಂಡ್ ಕೋ ರೂ. ೫, ಮೆಸರ್ಸ್ ಗುಣ್ಣನರ್ಸಯ್ಯಪ್ರಭು ಎಂಡ್ ಬ್ರದರ್ಸ್ ರೂ. ೫, ಮೆ। ಆದೊಲ್ಫ ಎಮ್ ಅಮ್ಮಣ್ಣರ ಮೂಲಕ ರೂ. ೪-೧೨-೬; ಮೆ। ಎಸ್. ಕೋಟ್ಯಣ್ಣರ ಮೂಲಕ ರೂ ೪, ಮೆ। ಕ್ರಿಸ್ಟಿಯಾನ್ ಮಾಬೆನ್ನರು ರೂ. ೪, ಮೆಸರ್ಸ್ ಪೆರ್ಲ್ ಎಂಡ್ ಸನ್ಸ್ ರೂ. ೩; ಎಸ್. ಎನ್. ರೂ. ೨-೬-೫; ಕಲೆಕ್ಟರ ಆಫೀಸಿನ ಕ್ಲಾರ್ಕ ಮೆ। ಎ. ಜಿ. ಸೋನ್ಸು ರೂ. ೨; ಮೆ। ಎ. ಶಿರಿ ರೂ. ೨; ಮ। ರಾ। ಅಲ್ಕೆ ವಾಮನಪ್ಪೈ ರೂ ೨, ಕೋಡರ್ ದಾಮೋದರಕಮ್ತಿ ರೂ. ೨, ಮ। ರಾ। ಮರ್ಕಡ ಬಾಬಕಮ್ತಿ ರೂ. ೨; ಮೆ। ಎಸ್. ಪೀಟರ್ಸ್ ರೂ ೨, ಮೆ। ಸ್ಟಿಫನ್ ಸಿಮೆಯೋನ್ ರೂ. ೨; ಮೆ। ಡಿ. ಬುನ್ಯನ್ ರೂ. ೨; ಮೆ। ಬೆತುವೆಲ್ ಜೋನ್ ರೂ. ೨; ಮೆ। ಕ್ರೈಸ್ತಯ್ಯ ಮುತ್ತು ರೂ ೨, ಮೆ। ಸಲಮೋನ್ ಬಂಗೇರ ರೂ. ೧; ಮೆ। ದಾವೀದ್ ಸೋನ್ಸು ರೂ. ೧, ರೆವರೆಂಡ್ ವಿವಾಕ ರೂ. ೧, ಮೆ। ಹೊಸೇಯ ಐರನ್ ರೂ. ೧; ಮೆ। ಸಿ. ಯಸ್. ವೇದಮುತ್ತು ರೂ. ೧; ಎ. ಎಮ್. ಎಸ್. ರೂ ೧, ರೆವರೆಂಡ್ ಜೆ. ಬಿ. ಸೋನ್ಸು ರೂ. ೧; ರೆವರೆಂಡ್ ಎಮ್ ಸದಾನಂದ ರೂ. ೧; ಮೆ। ಜಿ. ಜೋನ್ ರೂ. ೧; ಮೆ। ಡಿ ಐರನ್ ರೂ. ೧; ರೆವರೆಂಡ್ ಪಿ. ಶಿರಿ ರೂ. ೧, ಮೆ। ಇಮ್ಮಾನುವೇಲ್ ರಾಮರಾವ್ ರೂ ೧; ಮೆ। ಸಿ. ವಾಟ್ಸ್ ರೂ. ೧; ಮೆ। ಚಾರ್ಲ್ಸ್‌ಫೈಲ್ ರೂ ೧, ಮೆ। ಎಮ್ ಮಾಟಿನ್ ರೂ. ೧, ಮ। ರಾ। ಎಮ್ ಶೇಷಗಿರಿ ಭಂಡಾರಿ ರೂ ೧, ಮ। ರಾ। ಪಾಂಡುರಂಗಶ್ಯಾನುಭಾಗ (ರಥಬೀದಿ) ರೂ ೧, ಮ। ರಾ। ಐ. ರಘುವೇಂದ್ರಹೆಗ್ಗಡೆ ಎಂಡ್ ಕೋ ರೂ ೧. ಮ। ರಾ। ಪಿ. ಪಕೀರ ಯಾನೆ ರಾಮಚಂದ್ರಪೈ ರೂ ೧; ಮ। ರಾ। ಕೃಷ್ಣ ಭಂಡಾರಿ ಮತ್ತು ಪದ್ಮನಾಭ ಭಂಡಾರಿ ರೂ. ೧, ಮ। ರಾ। ಕೊಂಚಾಡಿ ಅಪ್ಪಯ್ಯಶ್ಯಾನುಭೋಗ ರೂ. ೧; ಮ। ರಾ। ಶಿಬೂರು ನಾರಾಯಣಕಾಮತ್ ರೂ ೧, ಮ। ರಾ। ಬಿ ವಿಟ್ಟಪ್ಪಕಮ್ತಿ ರೂ. ೧, ಮ। ರಾ। ನರಾವಿ ಕೊಗ್ಗಪ್ರಭು ರೂ. ೧; ಮ। ರಾ। ಪಸಾರ ರಘುನಾಥಪ್ರಭು ರೂ. ೧, ಮ। ರಾ। ಕುಂಬಳೆ ಕೃಷ್ಣಪ್ರಭು ರೂ ೧.

ಮುಂದರಿಯುವದು.

ಜೀನಸು ಧಾರಣೆ. (ರಖಂ)

ಹೊಸ ಮಸ್ಕತಿ ಅಕ್ಕಿ .	5— 2—0	5— 8—0
ಹೊಸ ಗಾಡಿ ರಾಶಿ ,, .	4— 7—0	4— 9—0
ಹೊಸ ಗುಡ್ಡು ,, .	4—12—0	5— 1—0
ಅಪ್ಸೆಲ್ ಬೆಳ್ತಿಗೆ ,, .	5— 8—0	5—11—0
ಗುಡ್ಡು ಬೆಳ್ತಿಗೆ ,, ...		5— 3—0
ರಂಗೂನು ಬೆಳ್ತಿಗೆ ಗೋಣಿ ೧ರ		10— 0—0
ಗೋಧಿ ಗೋಣಿ ೧ರ ...	13— 4—0	14— 4—0
ಹುರುಳಿ ಗೋಣಿ ೧ರ ...	6—14—0	7— 0—0
ಕಡಲೆ ಗೋಣಿ ೧ರ ...	10— 8—0	11— 0—0
ತೊಗರಿ ಗೋಣಿ ೧ರ ...	10—12—0	12— 0—0
ತೊಗರಿ ಬೇಳೆ ಗೋಣಿ ೧ರ.	12— 8—0	14— 0—0
ಉದ್ದು ಗೋಣಿ ೧ರ		10— 8—0
ಊರು ಬೆಲ್ಲ ಖಂಡಿ ೧ರ		50— 0—0
ಉಪ್ಪು ಗೋಣಿ ೧ರ		3— 9—0
ಕೊಬ್ರಿ ಖಂಡಿ ೧ರ . .	80— 0—0	84—0 —0
ಕೊಬ್ರಿ ಹಿಂಡಿ ಖಂಡಿ ೧ರ	20— 0—0	23— 0—0
ಎಳ್ಳಿಂಡಿ ಖಂಡಿ ೧ರ .	30— 0—0	36— 0—0
ಕೊಬ್ರಿ ಎಣ್ಣೆ ಮುಡಿ ೧ರ .	6— 0—0	6— 2—0
ಎಳ್ಳೆಣ್ಣೆ ಮುಡಿ ೧ರ ([illegible])	3—14—0	4— 0—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ		5— 0—0
ಮೋರಿಸ್ ಸಕ್ಕರೆ ಮುಡಿ ೧ರ		4— 3—0
ಕಾಫಿ ಖಂಡಿ ೧ರ.	220—0—0.	225— 0—0
ಬೀಗೋಟು ಖಂಡಿ ೧ರ .	110—0—0	115— 0—0
ಹೊಸ ಬೀಗೋಟು ಖಂಡಿ ೧ರ	84— 0—0	88— 0—0
ಗೇರು ಬೀಜ ಮುಡಿ ೧ರ		1— 2—0
ಕಬ್ಬಿಣ ಖಂಡಿ ೧ರ .	42—0—0	44— 0—0
ಹಿಂಬ್ರ ತಗಡುಮುಡಿ ೧ರ .	16— 8—0	16—10—0
ಹಿಂಬ್ರ ಪಾತ್ರೆಗಳು ಮುಡಿ ೧ರ .		22— 0—0
[illegible]		18—12—0

BOX LOCKS.



PADLOCKS.



ನಾರಣೆ ಸುಲಬ! ಅಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಬಲವಾಗಿಯೂ ಇರುವುದು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವ ಇಲ್ಲ ನೋಡುವುದಕ್ಕೆ ಅಂದವಾಗಿಯೂ ಇರುವುದು ಈ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳ

ನಂಬ್ರ	1	2	3	4	5
	0—12—0	0—10—0	1—4—0	1—10—0	

ಆರು ಚಕ್ರಗಳಿರುವ ಬೀಗಗಳು

1—2—0	1—8—0	2—4—0	3—0—0	3—8—0

ಮಿಲ್ಲರ್ ಬೀಗಗಳು

0—4—0	0—5—0	0—6—0	0—8—0	0—10—0

ಟ್ರಂಕುಗಳಿಗೆ ಹಾಕುವ ಕೊಂಡಿ ಬಿಗ್ಗಿಸಿರುವ ಬೀಗ ೧ಕ್ಕೆ 0—13—0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ೧ಕ್ಕೆ 1—8—0, 1—12—0

ವಿಳಾಸ — ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ಪುಸ್ತಕ, ಹೊಸತರಹ, ಅಂದವಾದ ಅಚ್ಚು, ಐದು ಭಾಗ ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ಇದು ಒಂದನೇ ಪುಸ್ತಕ ಬೆಲೆ ರೂ 1 ದೇಶಬಾಂಧವರಿಗೆ ಬೆಲೆ ಕಡಿಮೆ ಮಾಡಿದೆ ಇದನ್ನು ಗುರುವಿನಂತೆ ಭಾವಿಸಿ ತಪಾಲು ಖರ್ಚು 0—2—0

ಅಪೂರ್ವ ಪುಸ್ತಕಗಳು

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ ರೂ. 3

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1—4—0.

ರಾವ್‌ಬಹದೂರ್ ವೀರೇಶಲಿಂಗಂ ಪನ್ತುಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಷನ್ ಬೆಲೆ ರೂಪಾಯಿ 1—0—0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗ, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟು ಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ

	ರೂ ಆ		ರೂ. ಆ.		ರೂ ಆ.
ಜಮಾ ಖರ್ಜಿನ ಪದ್ಧತಿ	0—12	ಆರ್ಯಕೀರ್ತಿ	0 10	ಕುಣಿಗಲು ರಾಮಶಾಸ್ತ್ರಿ	
ಇಂಡ್ಯನ್ ಪೆನಲ್ ಕೋಡ	2—0	ಶಾಕುಂತಲ ನಾಟಕ	0—8	ಗಳವರ ಚರಿತ್ರೆ	1—0
ಅರೇಬಿಯನ್ ನೈಟ್ಸ್	2—4	ಸ್ತ್ರೀ ಧರ್ಮನೀತಿ	0—8	ಸುಮತಿ ಮದನಕುಮಾರರ	
ಸುರಸ	0—4	ಶೋಭನೆ	0—8	ಚರಿತ್ರೆ I	0—8
ಕ್ಯಾಮ.	0—1	ಚಂದ್ರಕಳಾ	0—4	" II	0—7
ಇಂದ್ರ ವಜ್ರ	0—4	ಕಲಾನಾಥ	0—6	ಶಿವಗೀತೆ	0—6
ಬಿಕ್ಕೋಜ	0—3	ಪ್ರ. ಲೇಖ್ಯಬೋಧಿನಿ	1—4	ಪಾಕಶಾಸ್ತ್ರ	0—8
ಕನಕಾಲುಕ	0—6	ವಿಷವೃಕ್ಷ	1—4	ಸನಾತನಧರ್ಮ ದೀಪಿಕೆ	1—0
ಹನುಮದ್ವಿಲಾಸ	0—8	ಮುದ್ರಾಮಂಜೂಷ	1—8	ಬಾಲರಾಮಾಯಣ	0—4
ಶಿವಾನಂದಲಹರಿ	0—6	ಶುಕಸಪ್ತತಿ	2—0	ಕಥಾ ಮಂಜರಿ	0—6

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿ[illegible]ಹೂರ್ತ, ಮಾಯಾಧಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರ ರಾಕ್ಷಸಿ, ಪ್ರತಿಯೊಂದು ಪ್ರ[illegible] 2 ಆಣೆ.

ವಿಳಾಸ:— ವಿದ್ಯಾಸಾಗರ ಬುಕ್ ಡಿಪೋ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತೆಗೆಯಲ್ಪಡುವುದು. ಇದರಿಂದ ದೊರಕತಕ್ಕ ಲಾಭವಾದರೋ ಅದರ ಅರಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ತೆಗೆಯಲ್ಪಟ್ಟ ಬೇರೆ ಔಷಧಗಳು ಹೊಲಸಾಗಿಯೂ ಶುಷ್ಕವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವವರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅನಾರೋಗ್ಯಗಳಾವವು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ನವೀನ ಸುಲಭವಾದ ವಿಧದಿಂದ ಸೇರಿಸ್ಪಟ್ಟ ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಮಾರ್ಟ್ ಮಂಗಳೂರು,

ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರಿತವಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨ ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ನಿಶ್ಯಕ್ತರಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ ಬಾಟ 1ಕ್ಕೆ —0—0

೩ ಬಾಲಸಂಜೀವನಿ—ಮಧುರ ಟೋನಿಕ್ ಅರಕ್ಕ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ ಬಾಟ್ಲಿ 1ಕ್ಕೆ 0—12—0

೪ ವಸಂತ ಕುಸುಮಾಕರ ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ದೂರ ಮಾಡುತ್ತದೆ ಬಾಟ 1ಕ್ಕೆ 1—0 0

೫ ಸುದರ್ಶನಮಾಲಿನಿ—ಈ ಎದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು ಕ್ರಯ 4—0—0

೬ ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2—0—0

೭ ಅನಂದವನವಿಲಾಸ—ಇದು ಡಯಾಬಿಟಿಸ್ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ ಪೂರ್ಣ ಔಷಧಕ್ಕೆ 5—0—0

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಅಸವಾರಿಷ್ಟಗಳೂ ತುಂಬಾ ಇರುತ್ತವೆ ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್ ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

---

150 ಪುಟಗಳ ಪುಸ್ತಕವು

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನು ತಿಳಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುಷ್ಯವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 92, ಬ್ರಾಡ್ವೇ, ಮದ್ರಾಸ್

ನಮ್ಮ ಏಜಂಟರು:— 1. [illegible]

2. [illegible]

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ಪ್ರಿಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	ಅರಗಜ	ತೊಲೆ 1ಕ್ಕೆ		2-0-0
ಅಂಬರ್ ಬತ್ತಿ	,,	,,	6-0-0	B ಅರಗಜ	,,	,,	1-0-0
ಕಸ್ತೂರಿ ಬತ್ತಿ	,,	,,	3-0-0	ಕಸ್ತೂರಿ ಬಿಲ್ಲೆ	,,	,,	2-0-0
ಜವಾಜಿ ಬತ್ತಿ	,,	,,	2-0-0	ಜವಾಜಿ ಬಿಲ್ಲೆ	,,	,,	1-0-0
ಕೇದಗಿನ ಬತ್ತಿ	,,	,,	1-8-0	ಕೇಸರಿ ಬಿಲ್ಲೆ	,,	,,	0-8-0
ಪನ್ನೀರ್ ಬತ್ತಿ	,,	,,	0-12-0	ತಾಂಬೂಲ ರತ್ನ ಶೀಸೆ 1ಕ್ಕೆ			0-4-0
ಮಸಾಲಾ ಬತ್ತಿ	,,	,,	0-6-0	ದಶಾಂಗ ಡಬ್ಬಿ 1ಕ್ಕೆ			0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕವಮ ಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯಾವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 4 ರೂ ತೂಕದ ಸೇರು 1ಕ್ಕೆ ರೂ. 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. ಬಾಲಗ್ರಹ ಧೂಪ ಟಿನ್ 1ಕ್ಕೆ 0—8—0. ಕಸ್ತೂರಿ ಮಾತ್ರೆ ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು ಅನೇಕ ತರಹ ಸೆಂಟ್ಸುಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.



ಅತ್ಯುತ್ತಮವಾದ ಕಸ್ತೂರಿ ತೊಲೆ ಗಕ್ಕೆ ರೂ 30. ನಂಬ್ರ 2 ತೊಲೆಗಕ್ಕೆ ರೂ 25 ಸನ್ ಫ್ರೆಂಡ್ ಕೇಸರಿ ತೊಲೆಗಕ್ಕೆ ರೂ. 1—6—0. ಕಾಶ್ಮೀರ ಕೇಸರಿ ತೊಲೆಗಕ್ಕೆ ರೂ 1—4—0. ಅತ್ಯುತ್ತಮವಾದ ಸಿಂಗಾಪ್ರರದ ಪಚ್ಚೆ ಕರ್ಪೂರ ತೊಲೆ ಗಕ್ಕೆ ರೂ 2 ಜವಾದಿ ಸುಗಂಧ ಶಾಮಿಗಳು ಟಿನ್ ಒಂದಕ್ಕೆ ಆಣೆ 8.

ಪಿ ಎನ್ ಸಿಂಹಂ ಮತ್ತು ಕಂಪೆನಿ,

ಆದಿಯಪ್ಪನ್ನಾಕ ರಸ್ತೆ,

ಮದರಾಸು.

ಪಾಣ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾವ ಯಹರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ಬೆಳ್ಳಿ, ಉತ್ತಮವಾದ ಕಸ್ತೂರಿ ಮೊದಲಾದ ಕೆಟ್ಟ ಬೆಲೆಯುಳ್ಳ ಪದಾರ್ಥಗಳಿಂದ ತಯಾರಿಸಿದೆ. ಕ್ಷಯ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಕೈ ಕಾಲು ಹೊಡತ (ಬಾವು), ಮೈ ನಡುಕ, ವಾತಗಳ ಬಾಧೆ, ಅಜೀರ್ಣ, ಅಗ್ನಿಸಪ್ಪ ಹಲ್ಲುನೋವು, ಕೆಮ್ಮಲು, ನೆಗಡಿ, ಅಶಕ್ತಿ ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನರಗಳ ಹವಾ ಬಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಹೊಟ್ಟೆ ಶೂಲೆ, ಮಕ್ಕಳ ಎಳವು, ಜ್ವರ, ಸಟ್ಟು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಕ್ಷಯ ರೋಗಕ್ಕೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. — 20 ಮಾತ್ರೆಗಳುಳ್ಳ ಕುಪ್ಪಿಗೆ 1 ರೂ. 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.

ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನಿ ಯಾಗಿದೆ. ಕೈಮೀರಿಹೋದ ರೋಗಿಗಳೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದ ಕೂಡಲೇ ಬೇಧಿಯಿಲ್ಲದೆ, ಗುಣವು ತೋರುತ್ತದೆ. ಸಮಯದಲ್ಲಿ ವೇದ್ಯರ ಸಹಾಯವಿಲ್ಲದಿದ್ದರೂ ಒಂದು ಬುದ್ಧಿಯು ಇದ್ದರೆ ವೈದ್ಯರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಅಮೃತ ಇದೊಂದೇ.

ಅನುಪಾನ ಪತ್ರವು ಜೊತೆಯಲ್ಲಿ ಇರುವುದು ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು.

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಹೊಸರಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರಿ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಉಚಿತವಾಗಿ ಕಳುಹಿಸಲಾಗುತ್ತದೆ.

ನಮ್ಮ ವಿಳಾಸ:—ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨-೮-೦.

೩. ಪಂಚಪೇರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿಕೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯಲ್ಲಿ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ.

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

ತಮ್ಮ ವಿಳಾಸ—ಬಿ ಎಮ್. ನಾಥ್ ಮತ್ತು ಕಂಪೆನಿ,

ವೇಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಕಾಲ್ಯಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನು ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ತುರಿಕಜ್ಜಿ, ತುರಿಗಜ್ಜೆ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಬ್ರಹ್ಮಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M. Nath & Co, *Ayurvedic Chemists*,

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಕಾರ ಮಿಶ್ಯನ್ ಚೇಕುಗಳೂ, ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ. ಪೆಬ್ಬ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪನ್ನಿ,

ಕೆಂಪನ್‌ಪೇಟ್, ಬೆಂಗಳೂರು

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಲ್, ಮಿನರ್ವಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ ಫ್ರೀಂಪ್ಸನ್, ಒಪ್ರಿಕ್ಸ್, ಒಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೇಂಬ್ರಿಜ್, ಇಂಗ್ಲೀಷ ಹೋಂಡ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಬೇಕೆನ್ನುವವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಪ್ರಿಯಸ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿರುದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, Proprietor,

THE CANARA CYCLE MART,

Udipi, S. Canara.

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ ಎಂಡ್ ಸನ್

ಬಿಸ್ಕತ್ತು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು:—ಅಂತೋನಿ ಎಲ್. ರೇಗೊ, ಸ್ವೀಟ್‌ಮಾರ್ಟ್ ಬಜಾರ್, ಕಲ್ಲಿಕೋಟೆ.
ಸ್ವದೇಶಿ ಎಂಪೋರಿಯಮ್, ಸೇಲಂ.
ಕನಕಾಸಬಾ ಚೆಟ್ಟಿಯರ್, ಲಾಲ್‌ಗುಡಿ, ಪುವಲೂರ್, ತಿರುಚಿನಾಪಳ್ಳಿ
ಎಮ್. ಪ್ಯಾಸ್ ಶೋಪ್, ಮಡಿಕೇರಿ.
ವಿ. ಬಾಲಕೃಷ್ಣ ನ್ಯಾಡು, ಬಿಗ್ ಬಜಾರ್ ಸ್ಟ್ರೀಟ್, ಕೊಯಂಬುತ್ತೂರು
ಅರ್ನೋನ್ ಎಂಡ್ ಐಮಸ್ ಶೋಪ್, ಉಡ್ಪಿ.

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ ಇಲ್ಲವಾದರೆ ನಮಗೆ ತಿಳಿಸಿದರೆ ನಿಮ್ಮನ್ನು ತೃಪ್ತಿಪಡಿಸುವೆವು.

ವಿಳಾಸ:— ಸ್ಟೀವನ್ ಎಂಡ್ ಸನ್ಸ್, ಮಂಗಳೂರು

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 13 ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣ ವನಮ್, ವನ್ನಾರ್‌ಪೇಟೆ, ಆರ್ನಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ—ನರಸಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

ಉತ್ಕೃಷ್ಟವಾದ ಮೂರು ಔಷಧಗಳು.

ಗ್ರಾಂಟ್ ಮೆಡಿಕಲ್ ಕೊಲೆಜಿನಲ್ಲಿ ಸೂಲಗಿತ್ತಿತನ ಕಲಿತು ಸರ್ಟಿಫಿಕೇಟ್ ಪಡೆದ ಕಮಲಾ ಬಾಯಿ, ತುಳಸೀ ಬಾಯಿ ಎಂಬ ಸೂಲಗಿತ್ತಿಯರಿಂದ ತಯಾರಿಸಲ್ಪಟ್ಟವುಗಳು.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1.
(ಆರ್ತವ ಶೂಲೆ ಹೋಗಲಾಡಿಸುವ ಬಗ್ಗೆ.)

ಅಬಲಾಸಂಜೀವನಿ ಗುಳಿಗೆಗಳು ಎಲ್ಲಾ ಬಗೆಯ ಆರ್ತವ ಶೂಲೆಯನ್ನು ಹೋಗಲಾಡಿಸುವುದಕ್ಕೆ ಏಕರೀತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆಗೆ ಯೋಗ್ಯವಾದ ಮಾತ್ರೆಗಳಾಗಿರುವುವು. ಅನೇಕ ಕಾಲದವರೆಗೆ ಪುಷ್ಪವತಿಯಾಗದೆ ಇದ್ದುದು ಕೂಡ ಇವುಗಳಿಂದ ಸರಿಯಾಗುವುದು. ಅಂತರೌಷಧಿಗಳಿಂದ ಗುಣವಾಗಬಹುದಾದ ಎಲ್ಲಾ ಗರ್ಭಕೋಶದ ಶೂಲೆಗಳು ಇವುಗಳಿಂದ ಗುಣವಾಗಿ, ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು. ಒಂದು ಶೀಸೆಯ ಕ್ರಯ ರೂ. 1. ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 2.
(ಬಿಳೀ ಸ್ರಾವದ ಬಗ್ಗೆ.)

ಈ ಬಾಧೆಯಿಂದ ವಿರಹಿತರಾದ ಸ್ತ್ರೀಯರು ಬಹಳ ವಿರಳ. ಈ ಸ್ರಾವದಿಂದ ಹೆಚ್ಚಿನ ನಿರ್ಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವುವು. ಈ ಸ್ರಾವವು ರಕ್ತಸ್ರಾವದಂತೆ ಬಲಹೀನಕರ. ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರುವುದು, ಆಗಾಗ್ಗೆ ಕಟಿಭಾಗದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗುವುದು, ಮಲವಿಸರ್ಜನೆ ಸರಿಯಾಗದಿರುವುದು. ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು.—ಒಂದೇ ಪೊಟ್ಟಣವನ್ನು ಪರೀಕ್ಷೆ ಬಗ್ಗಾಗಿ ತರಿಸಿದರೆ ಆಶ್ಚರ್ಯಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು. ಒಂದು ಶೀಸೆಯ ಕ್ರಯ 1 ರೂಪಾಯಿ. ಅಂಚೆ ಹಾಸಲು 4 ಆಣೆ.

ಅಬಲ ಸಂಜೀವನಿ ಗುಳಿಗೆಗಳು ನಂಬ್ರ 3
(ಕೆಂಪು ಸ್ರಾವದ ಬಗ್ಗೆ.)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು. ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದುವುಗಳು ಉಂಟಾಗಿ, ಗರ್ಭಕೋಶದ ಶೂಲೆ, ನಿರ್ಬಲತೆ ತಲೆದೋರುವುವು ಈ ಸ್ರಾವವು ಗರ್ಭಕೋಶದಿಂದ ಸ್ರವಿಸುವ ರಕ್ತವೇ ಸರಿ ಈ ಗುಳಿಗೆಗಳನ್ನು ಕೂಡಲೇ ಸೇವಿಸುವುದಕ್ಕೆ ಅಸಡ್ಡೆ ಮಾಡಿದರೆ, ಈ ಪೀಡೆಯು ಅತಿಶಯಿಸಿ, ಬೇಗನೇ ಗುಣ ಹೊಂದಲಿಕ್ಕಿಲ್ಲ. ಒಂದು ಶೀಸೆಯ ಕ್ರಯ 1 ರೂಪಾಯಿ. ಅಂಚೆ ಹಾಸಲು 4 ಆಣೆ ಏಜೆಂಟರು —

ದಿ ಊಲನ್ ಮಾರ್ಟ್, ಹಂಪನ್‌ಕಟ್ಟಾ, ಮಂಗಳೂರು. ದಕ್ಷಿಣ ಕನ್ನಡ

Dr. Nava Ratna & Sons, 253 Kalbadevi Road, BOMBAY 2.

Estd. 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳೆತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಿಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಾಯು.

ಇದರಲ್ಲಿ ಪಾರ ವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ. ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿಗಿಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್

ಕೆ. ಬಿ. ರೇಳೆ ಸನ್ಸ ಕಂಪೆನಿ ಗಿರಗಾಂವ ನಂ. ೪ ಮುಂಬಯಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು ಗೆಯಾಗಿ ಮಾಡೆಸಿಕೊಳ್ಳೋ, ಹಾಗೆಯೇ ಬುದ್ಧಿ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿ



ಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಒಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧ ವಾದರೋ ಮಧುರವೂ ಮೋಹಕವೂ ಆಗಿರುವುದು. ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪ ಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋ ಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯು ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಪ್ ಮೇರಿಟ್" ಅಥವಾ ಯೋಗ್ಯ ತಾಪತ್ರವೂ, ಇತರ ಸಾವಿರಾರು ಗ್ರಹಸ್ಥರ ಉತ್ತ ಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ಟಪಾಲ ರವಾನಿಸುವುದು.

ಸೀಸೆಯೊಂದರ ಕ್ರಯ ರೂ. 1 0-0, ಅ ವೆ 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10 0, ಅ ವೆ 0-7 0 ಬೇರೆ.

ಸೂಚನೆ — ಅನೇಕ ದಗಾಕೋರರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಮಾರಾಟದಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕ ಲಿಕ್ಕೆ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದಕ್ಕು ಮುಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀವ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮದುರ ಕೋವಲ ಅಚಿರಸ್ಥಾಯಿ ಮತ್ತು ಅತ್ಯಂತ ಮನೋಹರವಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೋಹೋಲ್) ಸಂಪರ್ಕವಿಲ್ಲ. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮು ಕಿಸಿದರೆ, ನಿಮ್ಮ ಸುತ್ತಲು ಸ್ವರ್ಗೀಯವಾದೊಂದು ಪುಷ್ಪವಾಟಿಕೆಯು ಆರಳಿದಂತಾಗು ವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೋದ ಬಳಿಕ ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದು ಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0- 12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0 ಒಟ್ಟೋ ದಿಲ್ ಬಹಾರಿನ ವಿಜ್ಞಾಪಕ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪಿಲ್ಸ್" ಅಥವಾ ವಿದ್ಯುಚ್ಛಕ್ತಿಯ ವಜೀಕರಣ ಮಾತ್ರೆಗಳು

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ



ಪಕ್ಷವಾತಗಳನ್ನೂ, ವಾತೋನ್ಮಾದ ವನ್ನೂ, ಅಪಸ್ಮಾರವನ್ನೂ ಧಾತು ದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯ ನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವ ದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವ್ಯಸನದಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾಭ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತುವಾರದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿ ರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮಾತ್ರೆಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ತ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗ ಗಳನ್ನು ಇವು ಮರಳಿ ರಚಿಸಗೈಯುತ್ತವೆ. ರೋಗದಿಂದ ಮುದಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಜೀವನ ಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವ ದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡರ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುದ್ಧ ವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢ ವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗು ತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಜಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2 0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

ದಿವಾಕರ ಕೃಷ್ಣಾಜಿ ದಾಹರೀ, ರಾ. ಶಾಂತಾವಣೀ, ತಾ, ರಾಮಟೇಕ, ಜಿ. ನಾಗಪುರ. —"ತಾವು ನನಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಳಿಗೆಗಳಿಂದ ನನಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ , ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಳ ನಾಗಪುರ ರೈಲ್ವೆ, ಗೋಂದಿಯಾ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿ ದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ "

3 ಅಮೀರ್ ವಲ್ಲದ ಮಹಮ್ಮದ ಭಾಯಾ ಇಬ್ರಾಹಿಮ್ ಪಾಟಿಲ್, ಪನವೇಲ್—"ತಾವು ಕಳು ಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಇನ್ನು ಕಳುಹಿಸಿರಿ."

4 ಬಿ. ಆರ್. ಬಾಳೆಕರ್, ಡಿಸ್ಟ್ರಿಕ್ಟ್ ಕೋರ್ಟ್ ವಕೀಲ, ಕೊಟ್ಟಯಮ್, ತ್ರಾವಣಕೋರ್ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡಿದ್ದೆನು, ಅವುಗಳನ್ನು ಉಪಯೋ ಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮೂನಜೀ ನರಸಿಂಗರಾವ್, ಸಂಸ್ಥಾನ ಪಲಟನ.—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಹೆಚ್ಚಾದ ಗುಣವನ್ನು ಹೊಂದಿರುವದರಿಂದ ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡ.

ತ್ವರೆಮಾಡಿರಿ!

1915ನೇ ಇಸವಿಯ ಸುಂದರವಾದ ಕೆಲೆಂಡರುಗಳು.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಚಾರ್ಜು ಸೇರಿ ೧ಕ್ಕೆ ಆಣೆ ೩; ೬ಕ್ಕೆ ಆಣೆ ೧೩; ೧೨ಕ್ಕೆ ರೂ. ೧--೧೦--೦. ಇವು ಜನವರಿ ಆಖೈರ ವರೆಗೆ ಮಾತ್ರ ಸಿಕ್ಕುವವು. ನಂತರ ಖರ್ಚಾಗುವವು. ಆದುದರಿಂದ ತ್ವರೆಮಾಡಿರಿ!

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ. 5 4 0 ವಿ. ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ —ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾವೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್‌ಮಾರ್ಕ. 0—6—0 12 ಡಬ್ಬಿಗಳಿಗೆ 3—8—0. ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮುನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ ಡಬ್ಬಿ 1ಕ್ಕೆ 0—2—0. ಡಜನ್ 1ಕ್ಕೆ 1—2—0 ವಿ. ಪಿ ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ. 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫೊರ್ಮರ್: — ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ

ಡಬ್ಲ್ಯು ಮೆಕ್ಸವೆಲ್, ವೈನಾಡ: — ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ

ಆರ್. ಆರ್ ಗಂಗೋಲಿ: — ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ

ಡಾಕ್ಟರ್ ದಾಂಡೆಕರ್, ಎಲ್ ಎಮ್. ಎಂಡ್ ಎಸ್: — ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ — ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಶಿಕ್ಕುವವು

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ.

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ 1—12—0

ಲಾಯರ್ ಯಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಶೇರಿ 15-0-0 ಆಗುತ್ತೆ.

ಅಚ್ಚಾಗುತ್ತಲಿದೆ! ಪುರಾತನ ಸಂಗ್ರಹ!! ನವೀನ ಗ್ರಂಥ!!!

ಭೂತಾಳಪಾಂಡ್ಯರಾಯನ

ಸಂಪೂರ್ಣ ಕಟ್ಟುಗಳು ಇರುವ

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ.

ಈ ಪುಸ್ತಕದಲ್ಲಿ ಪರಶುರಾಮಾವತಾರದ ಕಥೆಯೂ, ಭರತಖಂಡದ ಕ್ಷತ್ರಿಯರಾಜರ ವಂಶಾವಳಿಯೂ, ಧರ್ಮರಾಯನ ನಂತರ ಆಳಿದ ಅರಸರ ಹೆಸರುಗಳೂ, ವರ್ಷಗಳೂ, ಪರಶುರಾಮ ಸೃಷ್ಟಿಯ ಭೂಮಿ ವಿವರಗಳೂ, ಅದಕ್ಕೆ ಶೇರಿದ ೭೭ ದ್ವೀಪಗಳೂ, ಕನ್ನಡಾ ಜಿಲ್ಲೆಯ ಪೂರ್ವ ರಾಜರ ಸಂತತಿಯೂ, ಆಳಿದ ವರ್ಷಗಳೂ, ಕನಕವರ್ಮ ವೀರವರ್ಮ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಬಂಟರ ಯಾ ನಾಡವರ ಮತಸ್ಥಾಪನೆ ಕಥೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಶವಾದ ಕಾರಣಗಳೂ, ಭೂತಾಳ ಪಾಂಡ್ಯನ ಪೂರ್ವಜರ ಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ, ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ, ಅಳಿಯಕಟ್ಟು ಆದ ಕಾರಣವೂ, ಅದರ ೧೪ ಕಟ್ಟು ೧೬ ಕಟ್ಟಳೆಗಳ ಪೂರ್ಣಾಭಿಪ್ರಾಯವೂ, ಭೂತಾಳಪಾಂಡ್ಯನ ವಿವಾಹವೂ, ಆತನು ಮಕ್ಕಳಿಗೆ ಅನ್ಯತವಾಗಿ ಕೊಟ್ಟ ಸ್ಥಳಮಾನಗಳೂ, ಅವನ ಅಳಿಯ ವಿದ್ಯಾವಣ್ಣ ಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿ ಕೊಟ್ಟ ಸ್ಥಳ ಮಾನಗಳೂ, ಚೌಂಗಡಿ ಅರಸರ ಮಾನಮರ್ಯಾದೆಗಳ ವಿಷಯ ಬರಸಿದ ಶಾಸನವೂ, ಅಳಿಯಕಟ್ಟಿಗೆ ಶೇರಿದ ೪೩ ಜಾತಿಗಳೂ, ಮತ್ತು ಅವರ ಗೋತ್ರಗಳು ತೆಗೆದು ಮಾಡಿದ ೬೦, ಬಳಿಗಳೂ, ವಿನೇ ಭೂತಪಾಂಡ್ಯನ ಚರಿತ್ರೆಯೂ, ಚೌಟ ಬಂಗರೇ ಮೊದಲಾದ ಸಂಸ್ಥಾನಾಧಿಪರ ಸೀಮೆ, ಮಾಗಣೆ, ಮಾನ ಮರ್ಯಾದೆಗಳೂ, ಜೈನ, ಬಂಟರ ೬೦ ಜನನ, (ಕೀರ್ತಿನಾಮಗಳೂ) ಕೇರಳದ ೬೪ ಜಾತಿಗಳೂ, ಸ್ಥಳನಾಮಾವಳಿಗಳೂ, ಏಳು ಮಂದಿ ರಾಜಂದ್ಯವರ ಚರಿತ್ರೆಯೂ, ಇಕ್ಕೇರಿ, ಆನೆಗುಂದಿ ವಿಜಯನಗರದ ರಾಜರುಗಳ ಚರಿತ್ರೆಯೂ, ಆ ಕಾಲದ ಕಂದಾಯ ಕ್ರಮಗಳೂ, ಶಿಲಾ ಶಾಸನ, ತಾಮ್ರ ಶಾಸನಗಳ ಯಥಾ ನಕಲುಗಳೂ, ಅದರ ಅಭಿಪ್ರಾಯಗಳೂ, ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳೂ, ಅವುಗಳ ಉತ್ಸವಾದಿ ವಿವರಗಳೂ, ಮೊಗಲ್ ರಾಜರ ವಂಶಾವಳಿಯೂ, ಭರತಖಂಡಕ್ಕೆ ಅನ್ಯ ರಾಜರ ಪ್ರವೇಶ ಕಾಲಗಳೂ, ಶ್ರೀಮನ್ ೫ನೇ ಜಾರ್ಜ ಸಾರ್ವಭೌಮರ ಚರಿತ್ರೆಯೂ ವಗೈರೆ ಅನೇಕ ವಿಧವಾದ ಪೂರ್ವ ಪುರಾಣಗಳ ಅನುಭವಗಳಿಂದ ಭರಿತವಾದ ಪುರಾತನ ಸಂಗ್ರಹಗಳು ಇದರಲ್ಲಿ ಅಡಗಿರುತ್ತವೆ ಅಳಿಯ ಸಂತಾನದವರಿಗೂ, ಶಾಲಾ ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ಓದು ಬರಹ ಬಲ್ಲ ಸರ್ವರೂ ನೋಡತಕ್ಕ ಪುಸ್ತಕ.

ಅಪೇಕ್ಷಕರು ಅವಶ್ಯ ಬೇಗನೆ ಪತ್ರ ಬರೆದು ಹೆಸರುಗಳನ್ನು ದಾಖಲ್ಲು ಮಾಡಿಸಿಕೊಳ್ಳಬಹುದು. ಅಂಥವರಿಗೆ ಪುಸ್ತಕ ಒಂದರಲ್ಲಿ ೨ ಆಣೆ ಕಡಿಮೆ ದರದಲ್ಲಿ ಕೊಡಲಾಗುವುದು. ಪುಸ್ತಕವು ತಯಾರಾಗುತ್ತಾ ಬರುತ್ತದೆ. ಪುಸ್ತಕದ ಬೆಲೆ ನಿಷ್ಕರ್ಷವಾದ ಕೂಡಲೇ ತಿಳಿಸಲಾಗುವುದು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ವಿಳಾಸ:—

"ಕುಶಲಮಂದಿರ"
ಶ್ರೀ ರಾಜರಾಜೇಶ್ವರಿ ದೇವಸ್ಥಾನ,
ಪೋಲಿ
ಎನ್. ಎ ಶೀನಪ್ಪ ಹೆಗಡೆ
ಅಮುಣಂಜೆ ಗುತ್ತು,
[illegible]

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಯ್ಯನವರ

ಲೋಕ ಪ್ರಸಿದವಾದ ಆಯುರ್ವೇದ

ಔಷಧಿಗಳು.

ಕೇಶ ಸುವಾಸಿನಿ:— ಈ ತೈಲವು ಪೂರ್ವ ಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾದ್ರವ್ಯಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ. ಇದರಿಂದ ಕೂದಲು, ಮೀಸೆಗಳು, ಕಣ್ಣುರೆಪ್ಪೆಗಳು ಸಮೃದ್ಧಿಯಿಂದ ಬೆಳೆಯುತ್ತವೆ. ತಲೆಗೂ, ಮೆದುಳಿಗೂ, ಕಣ್ಣುಗಳಿಗೂ ತಂಪುಕೊಡುತ್ತದೆ. ಬೋಳು ತಲೆ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ. ವಿಲಾಯತಿಯ ಪರಿಮಳ ವಸ್ತುಗಳಮೇಲೆ ಪ್ರೀತಿ ಇರುವವರಿಗೆ ಅಚ್ಚುಮೆಚ್ಚಿನದ್ದಾಗಿರುತ್ತದೆ. ಬೆಲೆ ಸೀಸೆ 1ಕ್ಕೆ ರೂ. 1 ವಿ. ಪಿ. ಚಾರ್ಜು 2 ಸೀಸೆವರಿಗೂ 5 ಆಣೆ

ರಕ್ಷಾಮೃತ:— ಕಾಪಿ, ಟೀ ಇವುಗಳಿಗೆ ಬದಲಾಗಿ ಉಪಯೋಗಿಸುವ ಚೂರ್ಣವು ಅನೇಕ ಬೇರುಗಳಿಂದಲೇ ಮಾಡಲ್ಪಟ್ಟಿದೆ.— ಕಾಪಿ, ಟೀ, ಇವುಗಳಿಂದುಂಟಾಗುವ ಕೇಡುಗಳೊಂದೂ ಇಲ್ಲದೇ, ಜೀರ್ಣಶಕ್ತಿಯನ್ನು ಹೆಚ್ಚಿಸಿ, ಕ್ಷಯರೋಗ ತಲೆನೋವು ಮುಂತಾದ್ದನ್ನು ಹೋಗಲಾಡಿಸುವದು. ರಕ್ತಶುದ್ಧಿಯನ್ನು ಮಾಡಿ ನರ ಸಂಬಂಧವನ್ನು ಬಲಪಡಿಸುತ್ತದೆ. ಇದನ್ನು ಬಿಡದೆ ಉಪಯೋಗಿಸುತ್ತಿದ್ದರೆ, ಅಜೀರ್ಣದಿಂದಲೂ ಮಧುಮೂತ್ರದಿಂದಲೂ ಕಷ್ಟಪಡುವವರು ಶೀಘ್ರದಲ್ಲಿ ಗುಣ ಹೊಂದುವರು. ಜ್ವರದವರಿಗೂ ಬಸಿರು ಬಾಣಂತಿಯರಿಗೂ, ವಾಂತಿಬೇದಿ ಮುಂತಾದ ರೋಗಕಾಲಗಳಲ್ಲಿಯೂ ಶರೀರದ ಉಷ್ಣವನ್ನು ನಿಶ್ಚಯವಾಗಿ ತಗ್ಗಿಸುವದು ವಿದ್ಯಾರ್ಥಿಗಳಿಗೂ, ಉದ್ಯೋಗಸ್ಥರಿಗೂ, ಅನಿಷ್ಟವಾದ ಕಾಪಿ, ಟೀ ಮುಂತಾದುವುಗಳಿಗೆ ಬದಲಾಗಿ ಮಕ್ಕಳು ದೊಡ್ಡವರೆಲ್ಲರು ಉಪಯೋಗಿಸಬಹುದು. ಅರ್ಧತೊಲೆ ಚೂರ್ಣವು ಒಂದು ಬಟ್ಟಲು ಕಷಾಯಕ್ಕೆ ಸಾಕು 20 ಸಲಕ್ಕೆ ಉಪಯೋಗಿಸುವಷ್ಟು ಚೂರ್ಣವಿರುವ ಟಿನ್ 1ಕ್ಕೆ 6 ಆಣೆ ವಿ ಪಿ. ಚಾರ್ಜು 3 ಆಣೆ. 8 ಆಣೆಟಪ್ಪಾಲಾ ಸ್ಟಾಂಪುಗಳನ್ನು ನಮಗೆ ಕಳುಹಿಸುವವರಿಗೆ 1ಟಿನ್ ಮಾದರಿಯಾಗಿ ಹಾಸಲ್ ಕೊಟ್ಟು ಕಳುಹಿಸಲ್ಪಡುವದು.

ಸರ್‌ಬತ್ತುಗಳು:— ದ್ರಾಕ್ಷೆ, ಸುಗಂಧಪಾಲೆ, ಗುಲಾಬಿ, ಬಾಳೆ, ನಿಂಬೆ, ಕಿತ್ತಳೆ, ಬಾದಾಮಿ, ಸೇಬು, ದಾಳಿಂಬೆ, ಸುಂಟೆ ಮುಂತಾದ ಹಣ್ಣುಗಳ ರಸಗಳು ಇದರಲ್ಲಿ 5 ತೊಟ್ಟನ್ನು ಸೇರಿಸಿದರೆ 1 ಬಟ್ಟಲು ನೀರಿಗಾಗಲಿ ಸೋಡಾವಿಗಾಗಲಿ ಆಯಾ ಹಣ್ಣುಗಳ ವಾಸನೆಯಿಂದ ಅತಿ ಮನೋಹರ ರುಚಿಕರವಾಗಿರುವದು. ಅಂಗಡಿಗಳಲ್ಲಿ ಮಾರುವ ರಸಗಳಿಗಿಂತಲೂ ಎಷ್ಟೋ ಅಗ್ಗವಾಗಿಯೂ ಮತ್ತು ವಿ. ಪಿ ಚಾರ್ಜುಗಳು ಕಡಿಮೆಯಾಗುವಂತೆಯೂ ಮಾಡಲ್ಪಟ್ಟಿದೆ. ಒಂದು ಸೀಸೆ ರಸದಿಂದ ರುಚಿಕರವಾದ 50 ಬಟ್ಟಲು ಪಾನಕವನ್ನು ಮಾಡಬಹುದು ಸೀಸೆ 1ಕ್ಕೆ ಆಣೆ 8. ವಿ. ಪಿ. ಚಾರ್ಜು 3 ಸೀಸೆವರಿಗೂ 5 ಆಣೆ

ಸುಗಂಧನಾಸಿಕಾ ಚೂರ್ಣ!— ಈ ನಾಸಿಕಾ ಚೂರ್ಣವು ಅತ್ಯುತ್ತಮವಾದ ಸುಗಂಧವಸ್ತುಗಳಿಂದ ತಯಾರಿಸಿದ್ದು. ಇದನ್ನು ಸಾಧಾರಣ ನಸ್ಯದೊಡನೇ ಕೊಂಚಸೇರಿಸಿ ಉಪಯೋಗಿಸಿದರೆ ಹೊಗೆಸೊಪ್ಪಿನ ದುರ್ವಾಸನೆ ಮೂಲಕವಾಗಿ ಹೋಗುವದಲ್ಲದೆ ಮನಸ್ಸಿಗೆ ಸಂತೋಷವಾದ ಸುವಾಸನೆಯನ್ನು ಕೊಡುವದು ಇದು ತಲೆನೋವು, ಪಿತ್ತದಿಂದ ತಲೆತಿರುಗುವದು, ಪೀನಸ ಮುಂತಾದ ರೋಗಗಳನ್ನು ನಿವೃತ್ತಿ ಮಾಡಿ ಕ್ರಮೇಣ ನಸ್ಯದ ದುರಭ್ಯಾಸವನ್ನು ಹೋಗಲಾಡಿಸುವದು. ಒಂದು ಸೀಸೆ ಒಂದು ತಿಂಗಳಿಗೆ ಸಾಕು. ಸೀಸೆ 1ಕ್ಕೆ 4 ಆಣೆ ಟಪ್ಪಾಲ್ ಚಾರ್ಜು 1 ಸೀಸೆಯಿಂದ 3 ಸೀಸೆವರಿಗೆ 3 ಆಣೆ 4 ಸೀಸೆಯಿಂದ 6 ಸೀಸೆವರಿಗೆ 5 ಆಣೆ. 7 ಸೀಸೆಯಿಂದ 12 ಸೀಸೆವರಿಗೆ 7 ಆಣೆ.

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದ್ದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರೆಯಬೇಕು.

MY ADDRESS.
P. SUBBAROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ್ಯ,
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು.

ಲೋಕಪ್ರಸಿದ್ಧವಾದ ಪಂಜಾ ಸಾಲಾಮಿಸ್ರೀ ಮುರಬ್ಬಾ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!.

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳುಗಡೆ, ಶಾಮುಗಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು "ಪಂಜಾ ಸಾಲಾ" ಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ... ನಮ್ಮಲ್ಲಿ ತಯಾರು ಮಾಡಲ್ಪಟ್ಟಿರುವದು

ಪಂಜಾ ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವದರಿಂದ ಪೂರ್ತ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಜನ್ಮಾಂತರದ ರೋಗವೂ ಗುಣಕೊಡುತ್ತೆ.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6

ಏಜಂಟರು— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ
ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ. ಮುನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣು

ತ್ರಿರಿ ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು, ಹಚ್ಚಿದಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂ. 1, ಅಂಚೆ ಹಾಸಲು 4 ಆಣೆ

ವಿಳಾಸ:— ವಿ. ಎಂ. ಎಸ್. ಪಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

ಸನ್ 1915 ಇಸವಿಯ

ಪಾಕೆಟ್ ಡೈರಿ.

ಶ್ರೀ ಸೀತಾ ರಾಘವ

ಪಾಕೆಟ್ ಡೈರಿಗಳು.

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ, ಅನೇಕ ಹೊಸ ಸಂಗತಿಗಳಿವೆ.

ನಂಬ್ರ ೧. ಸಣ್ಣ ಸೈಜು ಸಾದಾ 0—4—0.
,, ೨. ಪೆನ್ಸಿಲ್ ಮುಚ್ಚಳವುಳ್ಳದ್ದು 0—6—0.

ಕೆಲವು ಪ್ರತಿಗಳು ಮಾತ್ರ ಉಳಿದಿವೆ. ಜಾಗ್ರತೆ ಬರದು ತರಿಸಿಕೊಳ್ಳಿ. ನಂಬ್ರ 1 ಮತ್ತು ನಂಬ್ರ 2ನೇ ಡೈರಿಗಳು ಮಾತ್ರವೇ ಇವೆ.

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ.

ಹೆಚ್ಚಾಗಿ ತರಿಸುವವರಿಗೆ ರೂ. ೧ಕ್ಕೆ ೨ ಆಣೆ ಕಮಿಷನ್ ದೊರೆಯುವುದು.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Printed & Published by V. S. Kamath at the Mangalore Trading Association's Sharada Press, Mangalore

Registered No. 408 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ IX | ಮಂಗಳೂರು ತಾ. 29 ನೇ ಜನವರಿ ಶುಕ್ರವಾರ 1915. | ಸಂಚಿಕೆ 5

Notice.

In the Court of the District Munsif of Kundapur

O P No 1/15

Between

Sooramma Shettati ... Petitioner

AND

Marli Shettati and 5 others C Petitioners

Take notice that the petitioner above named has applied for a succession certificate to collect the debts due to Humbadi Muttaya Shetty of Ullur village and that the said petition is posted to 18—2—1915 for hearing, when all objections to the grant of such certificate will be heard before the said court

Coondapur, 25—1—1915

K K Bhandari,
Pleader for Petitioner

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಒ. ಪಿ. ನಂಬ್ರ 12/15

ಹಾಸ್ಸಮ್ ಶೇಟ್ ... ... **ಅರ್ಜಿದಾರ**

ಮತ್ತು

ಸುಲೇಮಾನ್ ಮೇಗ್‌ಜಿ ಶೇಟ್ . **ರೆಸ್ಪಾಂಡೆಂಟ್**

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—

ಮಂಗಳೂರಲ್ಲಿ ಸಾವಕಾರರು ಆದಿದ್ದ ಜಾಫರ್ ಮೇಗ್‌ಜಿ ಶೇಟ್‌ರು ತಾ. 2—10—14ರಲ್ಲು ಮಂಗಳೂರಲ್ಲಿ ಮೃತಪಟ್ಟು, ಅವರ ಮಕ್ಕಳ- ಮರಿಯಮ್ಮ ಬಾಯಿ, ಸಕಿನಾಬಾಯಿ, ಇಸ್ಮಾಯಿಲ್ ಮತ್ತು ಅಬ್ಬಾಸ್ ಅಲಿ ಕೂಡಾ ಮ್ಯಾನರು ಆಗಿರುವದರಿಂದ ಸದರಿ ಮೃತಪಟ್ಟ ಜಾಫರ್ ಮೇಗ್‌ಜಿ ಶೇಟ್‌ರ ಸಮಸ್ತ ಸ್ಥಿರಚರ ಸೊತ್ತುಗಳಿಗೆ ಅವರ ಗಂಡು ಮಕ್ಕಳು ಇಸ್ಮಾಯಿಲ್ ಮತ್ತು ಅಬ್ಬಾಸಾಲಿ ಹಕ್ಕುದಾರರು ವ ವಾರಿಸುದಾರರು ಆಗಿರುವದರಿಂದ ಸದರಿ 4 ಜನ ಮ್ಯಾನರರ ದೇಹದ ಬಗ್ಗೆ ಸದರಿ ಮ್ಯಾನರರ ತಾಯಿಯ ತಂದೆ ಹಾಸ್ಸಮ್ ಶೇಟ್‌ರನ್ನು ಗಾರ್ಡಿಯನ್ ಆಗ ನೇಮಿಸಬೇಕೆಂತಲೂ ಮತ್ತು ಮ್ಯಾನರರು ಇಸ್ಮಾಯಿಲ್ ಮತ್ತು ಅಬ್ಬಾಸ್ ಅಲಿ ಕೂಡಾ 2 ಜನರ ಸ್ಥಿರಚರಸೊತ್ತುಗಳ ಗಾರ್ಡಿಯನ್ ಆಗಿ II ಗ್ರೇಡ್ ಪ್ಲೀಡರ್ ಮಿಜಾರ ಗಣೇಶ ಪೈಗಳನ್ನು ನೇಮಿಸಬೇಕಾಗಿ ಸದರಿ ಗಣೇಶ ಪೈಗಳ ಕಬೂಲಿ ಸಮೇತ ಸದರಿ ಹಾಸ್ಸಮ್ ಶೇಟ್‌ರು ಕೋರ್ಟಿನಲ್ಲಿ ಅರ್ಜಿ ದಾಖಲು ಮಾಡಿ ಸದರಿ ಅರ್ಜಿಯನ್ನು ಇದೇ ಬರುವ ಫೆಬ್ರುವರಿ ತಾ. 9ಕ್ಕೆ ತನಕಿಗೆ ಇಟ್ಟಿರುತ್ತದೆ. ಇದಕ್ಕೆ ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಆ ತಾರೀಕಿಗೆ ಹಾಜೀರು ಮಾಡಿಕೊಳ್ಳತಕ್ಕದ್ದು.

Pangal Subba Rao,
Vakil for Petitioner.

ತಾರೀಖು 27—1—1915.

ಉತ್ತಮ ತರಗತಿಯ ಮೋಪುಗಳು.

ಕುಂಬಳೆ ರೈಲ್ವೆ ಸ್ಟೇಶನ್ ಬಳಿ ಹಳೇ ಅಕ್ಷೆ ಸಾಯರ ಕಚೇರಿ ಸಮೀಪ **ಹೊಳೆ** ಕಿನಾರೆಯಲ್ಲಿ ಪೀಟ್ 15ರಿಂದ 43' ವರೇಗೆ ಉದ್ದವಿರುವ ಸಾಗುವಾನಿ, **ಬೆಂಡಕಿ,** ಬೀಟಿ, ಮರವ ಮತ್ತು ತಿರುವ ಮುಂತಾದ ಅನೇಕ ಜಾತಿಯ ಒಳ್ಳೇ ಮರಗಳು ಮತ್ತು ಬೇರೆ ಬೇರೆ ಕೆಲಸಕ್ಕಾಗುವ ಸಪ್ಪರ ಮರಗಳ ಸಣ್ಣ ಸಣ್ಣ ತುಂಡುಗಳು **ಮಾರಾಟಕ್ಕೆ** ಸಿದ್ಧವಿವೆ ಖ್ವಾಹಿಶ್ ಉಳ್ಳವರು ಈ ಕೆಳಗೆ ದಸ್ಕತು ಮಾಡಿದವರ ಮುಂದೆ **ಖುದ್ದು** ಯಾ ಪತ್ರವ್ಯವಹಾರ ನಡಿಸಿದ್ದಲ್ಲಿ ಎಲ್ಲಾ ವಿವರ ತಿಳಿದು ಬಂದೀತು.

ಎಸ್ ವಿಟ್ಠಳ ಕಾಮತ್,
ಕುಂಬಳೆ, ದ. ಕನ್ನಡಾ.

ಬೇಕಾಗಿರುತ್ತದೆ.

ಯವ್ವನ ಪ್ರಾಯದ ಕಾಫಿ ಯಸ್ಟೇಟಿನ ಚನ್ನಾಗಿ ಅನುಭೋಗ ಇರುವ ಮತ್ತು 50 ಯಾ 60 ಕೂಲಿ ಜನಗಳನ್ನು ಒದಗಿಸುವ ರೈಟರ್ ಈ ಕೆಳಗಿನ ವಿಳಾಸದವರಿಗೆ ಅವಶ್ಯವಿದೆ.

ಯಫ್. ಜೆ. ಪಾರ್ಟನ್,
ತಿದ್ರಬನ್ನು,
ಕೊಪ್ಪಾ ಪೋಸ್ಟ್, ಕಡೂರು ಡಿಸ್ಟ್ರಿಕ್ಟ್.

ನೋಟೀಸು.

ಮಂಗಳೂರು ಶ್ಯಾಹರ ಡೊಂಗರಕೇರಿಯಲ್ಲಿರುವ ತೋಂಭತ್ತ ಸುಬ್ರಾಯರವರ ಮಗ ಪೆನ್ಶನದಾರ ತೋಂಭತ್ತ ಸದಾಶಿವರಾಯನು ಎಲ್ಲಾ ಜನರಿಗೂ, ಅಂಗಡಿಗಾರರಿಗೂ, ಕಾಫಿ ಹೊಟೇಲ್ ಕೀಪರರಿಗೂ, ಊಟದ ಹೊಟೇಲ್ ಕೀಪರರಿಗೂ ಇದರ ಮೂಲಕ ಖಂಡಿತವಾಗಿ ತಿಳಿಸುವದೇನಂದರೆ:— ನನ್ನ ಮಗ ತೋಂಭತ್ತ ಸುಬ್ರಾಯನು ಮ್ಯಾನರನಾಗಿರುತ್ತಾನೆ ಅವನು ಸ್ಕೂಲಿಗೆ ಹೋಗದೆ ಬುದ್ಧಿ ಸಮಯಿಲ್ಲದ ಹಾಗೆ ಕೆಟ್ಟ ಹುಡುಗರ ಸಂಗಡ ಕಂಡಾಬಟ್ಟೆ ತಿರುಗಾಡುತ್ತಾನೆ. ಅವನಿಂದ ಕೆಲವು ಹುಡುಗರು ಮತ್ತು ಜನರು ಹಣ ಅವನಿಗೆ ಕೊಡದೆ ಪ್ರೋಮಿಸರಿ ನೋಟುಗಳು ಬರಸಿಕೊಂಡಿರುವದಾಗಿ ನಾನು ಕೇಳುತ್ತೇನೆ. ಆ ಜನರಿಗೆ ಸದರಿ ದಿವಜು ಕೊಡಲಿಕ್ಕೆ ನನ್ನ ಮಗ ಸುಬ್ರಾಯನು ಸರ್ವತ್ರ ಬದ್ಧನಲ್ಲ. ನಾನು ಸಹಾ ಅವರಿಗೆ ಹಣ ಕೊಡಲಿಕ್ಕೆ ಸರ್ವತ್ರ ಬದ್ಧನಲ್ಲ ಎಂಬ ಸಂಗತಿ ಇದರ ಮೂಲಕ ಸರ್ವ ಜನರಿಗೂ ಆ ನೋಟುಗಳು ಬರಸಿಕೊಂಡವರಿಗೂ ಖಂಡಿತವಾಗಿ ತಿಳಿಸಿದ್ದೇನೆ.

ಮಂಗಳೂರು,
ತಾ. 27—1—1915

T. Sadashiva Rao,

ಬಹುಮಾನ! ಬಹುಮಾನ!!

25 ಸಾವಿರ ರೂಪಾಯಿಗಳು ಹಂಚಲ್ಪಡುವವು.

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ ಇವರ ನಾರಶಿಂಹಚೂರ್ಣವು.

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವು ವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರೆ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವು ವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರೂ ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವದಕ್ಕಾಗಿ "ನಾರಶಿಂಹಚೂರ್ಣವು" ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕ ತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯ ಕುಷ್ಠಗಳು, ಎಂಟು ವಿಧ ಉದರ ರೋಗಗಳು, ಭಗಂದರವು, ಮೂತ್ರಕೃಚ್ಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ಐದು ಬಗೆಯ ಕಾಸಗಳು, ಎಂಬತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯ ಪಿತ್ಥಗಳು, ಇಪ್ಪತ್ತು ಬಗೆಯ ಶ್ಲೇಷ್ಮರೋಗಗಳು, ಧ್ವಂಸ್ತಸನ್ನಿವಾತ ರೋಗಗಳು, ಮೂಲವ್ಯೋಗಗಳು ಇವೇ ಮುಂತಾದ ಸಮಸ್ತರೋಗಗಳು ಶಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಂಹನಂತೆ ಪರಾಕ್ರಮವು ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯುಳ್ಳವರಾಗುವರು. ಇವರಲ್ಲಿ ಯಾವ ವಿದವಾದ ರಸಗಳಾಗಲಿ ಮಿಶ್ರವಾಗಿ ಇಲ್ಲ. ಇನಾವ ದೋಷಗಳೂ ಇಲ್ಲ ನಿರ್ದುಷ್ಟವಾದದ್ದು. ಫಕ್ತಾ ವನಸ್ಪತಿಗಳಿಂದಲೇ ಸಿದ್ಧಪಡಿಸಿದ ದಿವ್ಯವಾದ ಔಷಧ ಅನೇಕ ಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು

14 ದಿನ ಉಪಯೋಗಕ್ಕೆ ಬರುವ ಡಬ್ಬಿ ಒಂದಕ್ಕೆ ಬೆಲೆ ರೂಪಾಯಿ 1—0—0

ಬಹುಮಾನಗಳನ್ನು ಹಂಚುವ ವಿಧಾನ.

1 ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 10000 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 6000 3 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 4000 2 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 3000 1 ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ರೂ 2000.

1914ನೇ ಜುಲ್ಯಾ 1ನೇ ತೇದಿ ಮೊದಲು 1915ನೇ ಜುಲ್ಯಾ 1ನೇ ತೇದಿವರೆಗೆ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದ ಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತು ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ ಈ ವಿಷಯದಲ್ಲಿ ತಿಲ ಮಾತ್ರವಾದರೂ ಸಂಶಯವಿಲ್ಲ. ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಒಂದೇಸವಾಗಿ ಹಂಚಲ್ಪಡುವವು ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಠಕ್ಕತನವೂ ಇಲ್ಲ ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು ಜಾಗ್ರತೆಯಾಗಿ ತರಿಸಿಕೊಳ್ಳಿರಿ ಔಷಧಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇವರ ಅನುಪಾನಪತ್ರಿಕೆಯನ್ನೂ ಬಹುಮಾನದ ಟಿಕೀಟನ್ನೂ ಡಬ್ಬಿಯ ಸಂಗತ ಕಳುಹಿಸುವೆವು. ನಮ್ಮ ಕಂಪೆನಿಯ ಕಾಪಿ ವಿಶ್ವಾಸ ಮಾರ್ಕಿನ ... ಲನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು: —

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 4 ರೂ ತೂಕದ ಶೇರು 1ಕ್ಕೆ ರೂ, 12-0-0, 5-0-0, 3-0-0. 2—8—0, 1—4—0, 1—[illegible]—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. ಬಾಲಗ್ರಹ ಧೂಪ ಟಿನ್ 1ಕ್ಕೆ 0—8—0. ಕಸ್ತೂರಿ ಮಾತ್ರೆ ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು ಅನೇಕ ತರಹ ಸೆಂಟ್ಸುಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ಶೂಲೆ, ಮಕ್ಕಳ ಎಳವು, ಜ್ವರ, ನಾಟ್ಟುಜ್ವರ, ಕ್ಷತಕ್ಷಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.

ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿ! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬ

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಶ್ರೀ ಸೀತಾರಾಘವ ವೈದ್ಯಶಾಲಾ

ಮೈಸೂರು.

Box Locks. **Padlocks.**





ಬೆಲೆ ಸುಲಭ! ಅಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಜನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ್ರ	1	2	3	4	5
	0–12–0	0–15–0	1–4–0	1–10–0	...

ಆರು ಚಕ್ರಗಳಿರುವ ಬೀಗಗಳು

1–2–0 1–8–0 2–4–0 3–0–0 3–8–0

ಪಿಲ್ಲರ್ ಬೀಗಗಳು

0–4–0 0–5–0 0–6–0 0–8–0 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ 0–13–0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ.

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ೧ಕ್ಕೆ 1–8–0, 1–12–0.

ವಿಳಾಸ.— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ಪುಸ್ತಕ, ಹೊಸತರಹ, ಅಂದವಾದ ಅಚ್ಚು, ಐದು ಭಾಗ ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ಇದು ಒಂದನೇ ಪುಸ್ತಕ. ಬೆಲೆ ರೂ 1 ದೇಶಬಾಂಧವರಿಗೆ ಬೆಲೆ ಕಮ್ಮಿ ಮಾಡಿದೆ ಇದನ್ನು ಗುರುವಿನಂತೆ ಭಾವಿಸಿ. ತಪಾಲು ಖರ್ಚು 0–2–0.

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ. ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3.

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1–4–0.

ರಾವ್‌ಬಹದೂರ್ ವೀರೇಶಲಿಂಗಂ ಪಂತುಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಶನ್. ಬೆಲೆ ರೂಪಾಯಿ 1–0–0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಷನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ. ಆ.		ರೂ. ಆ.		ರೂ. ಆ.
ಜಮಾ ಖರ್ಚಿನ ಪದ್ಧತಿ	0–12	ಆರ್ಯಕೀರ್ತಿ	0 10	ಕುಣಿಗಲು ರಾಮಶಾಸ್ತ್ರಿ	
ಇಂಡ್ಯನ್ ಪೆನಲ್ ಕೋಡ	2–0	ಶಾಕುಂತಲ ನಾಟಕ	0–8	ಗಳವರ ಚರಿತ್ರೆ	1–0
ಅರೇಬಿಯನ್ ನೈಟ್ಸ್	2–4	ಸ್ತ್ರೀ ಧರ್ಮನೀತಿ	0–8	ಸುಮತಿ ಮದನಕುಮಾರರ	
ಸುರಸ	0–4	ಶೋಧನೆ	0–8	ಚರಿತ್ರೆ I	0–8
ಶ್ಯಾಮು	0–1	ಚಂದ್ರಕಳಾ	0–4	,, II	0–7
ಇಂದ್ರ ವಜ್ರ	0–4	ಕಲಾನಾಥ	0–6	ಶಿವಗೀತೆ	0–6
ಬೆಕ್ಸ್ಲೀಜ	0–3	ಪ್ರ. ಲೆಕ್ಕಬೋಧಿನಿ	1–4	ಶಾಕಶಾಸ್ತ್ರ	0–8
ಕನಕಾಲುಕ	0–6	ವಿಷವೃಕ್ಷ	1–4	ಸನಾತನಧರ್ಮ ದೀಪಿಕೆ	1–0
ಹನುಮದ್ವಿಲಾಸ	0–8	ಮುದ್ರಾಮಂಜೂಷ	1–8	ಬಾಲರಾಮಾಯಣ	0–4
ಶಿವಾನಂದಲಹರಿ	0–6	ಶುಕಸಪ್ತತಿ	2–0	ಕಥಾ ಮಂಜರಿ	0–6

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮುಹೂರ್ತ, ಮಾಯಾವಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರ ರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಆಣೆ.

ವಿಳಾಸ:— ವಿದ್ಯಾಸಾಗರ ಬುಕ್ ಡಿಪೋ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಮತ್ಸ್ಯದ ಯಕೃತ್ತಿಂದ ತೆಗೆಯಲ್ಪಟ್ಟದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಬಿಯ ಎಷ್ಟನೆಯ ಅಂಶವು ಶರೀರಕ್ಕೆ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ತಯಾರಿಸಲ್ಪಟ್ಟ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಶರೀರಕ್ಕೆ ಹೊಂದಿಕೊಳ್ಳದಿರುವುದರಿಂದ ಅವನ್ನು ಸೇವಿಸುವದರಿಂದ ಅಜೀರ್ಣವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರೂ ದೋಷವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಐರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಐರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ತಮ್ಮಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3–4–0. ಅರ್ಧ ಬಾಟ್ಲಿಗೆ 1–12–0.

ದಿ. ಊಲನ್ ಮಾರ್ಟ್ ಮಂಗಳೂರು,
ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8–0–0

೨. ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ನಿತ್ರಾಣಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1–0–0

೩. ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0–12–0

೪. ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪುಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1–0–0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸ್ಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4–0–0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2–0–0

೭. ಆನಂದವನವಿಲಾಸ—ಇದು ಡಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5–0–0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳು ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

---

150 ಪುಟಗಳ ಪುಸ್ತಕವು.

ಉಚಿತವು

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ್.
[illegible]— 1. ಮೆಸ್ಸರ್ಸ್ [illegible]
2. [illegible]

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	217,400—0—0	ಪ್ರತಿಜ್ಞಾತ ಮೂಲ ಧನವು ,,	217,400—0—0
Paid up Capital	192,400—0—0	ಆಗತ ಮೂಲ ಧನವು ,,	192,400—0—0
Deposits	455,326—7—10	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	455,326—7—10
Reserve Fund	27,590—12—0	ರಕ್ಷಿತ ಧನವು	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2¼% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅛%.

Loans granted on proper securities and pledges.

Sealed Parcels for safe custody received on a moderate charge.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2¼ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವೀತು. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. December 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣೀಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ

[illegible]

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 29ನೇ ಜನವರಿ 1915

ಮದ್ರಾಸು ಸಂಸ್ಥಾನಿಕ ತೃತೀಯ ಪರಸ್ಪರ ಸಹಾಯಕ ಪರಿಷದ

ಈ ಪರಿಷದದ ಗತಚರಿತ್ರೆಯನ್ನು ಹೇಳಿ ಕಳೆದ ವಾರ ಸಭೆಯಲ್ಲಿ ನಡೆದ ಮುಖ್ಯ ವಿಷಯಗಳ ಸಾರಾಂಶವನ್ನು ಹಿಂದೆ ವಿವರಿಸಿದ್ದಾಯಿತು. ಆದರೆ ಮ| ರಾ| ರಾ ಆದಿನಾರಾಯಣಯ್ಯನವರು ಮತ್ತು ಸಭಾಧ್ಯಕ್ಷರಾಗಿದ್ದ ಸರ್ ಹೇರಾಲ್ಡ್ ಸ್ಟೂವರ್ಟ ರವರ ಭಾಷಣಗಳಲ್ಲಿ ಪರಸ್ಪರ ಸಹಾಯ ಪದ್ಧತಿಯ ಕುರಿತು ಅಮೌಲ್ಯವಾದ ಕೆಲವು ಸೂಚನೆಗಳಿರುವುದರಿಂದ ನಮ್ಮ ನಾಡಿನ ಪರಸ್ಪರ ಸಹಾಯಾನುವರ್ತಿಗಳ ಅನುಭವ ಕೋಸ್ಕರವಾಗಿ ಆ ಭಾಷಣಗಳಲ್ಲಿನ ಕೆಲವು ಮುಖ್ಯ ವಿಷಯಗಳನ್ನು ವಿವರಿಸುವುದು ಆಗತ್ಯವೆಂದು ನಮಗೆ ತೋರುತ್ತದೆ.

ಆದಿನಾರಾಯಣಯ್ಯನವರು ಭಾಷಣದ ಪ್ರಾರಂಭದಲ್ಲಿ ಕಾಲೋಚಿತವಾಗಿ ಪ್ರಕೃತದ ಘೋರ ಯುದ್ಧ ಘಟನಾವಳಿಗಳಲ್ಲೆಲ್ಲಾ ನಮ್ಮ ಅರಸರಿಗೆ ಜಯಪ್ರಾಪ್ತಿಯಾಗಲೆಂದು ಪ್ರಾರ್ಥಿಸಿಕೊಂಡರು. "ಯುರೋಪಿನಲ್ಲಿ ಈಗ ನಡೆಯುತ್ತಿರುವ ಮಹಾ ಯುದ್ಧ ಕೋಲಾಹಲದ ತಡವೆಯಿಲ್ಲದೆ ನಾವು ಎಂದಿನಂತೆ ಸಭೆಸೇರಿ ನಮ್ಮ ಕೆಲಸಗಳನ್ನು ನಿರ್ವಿಘ್ನವಾಗಿ ನಡೆಯಿಸಲು ಶಕ್ತರಾಗಿರುವುದು ಗ್ರೇಟ್‌ಬ್ರಿಟನಿನ ಬಲವತ್ತಾದ ತೋಳುಗಳ ರಕ್ಷಣೆಯ ನಾವ ದುರ್ಗದ ದೆಸೆಯಿಂದಲೇ ಆಗಿರುತ್ತದೆ. ಈ ದಕ್ಷಮಯವಾದ ಕಾಳಗದಲ್ಲಿ ಅತ್ಯುತ್ಕೃಷ್ಟವಾದ ಸತ್ಯ, ನ್ಯಾಯ, ನೀತಿ, ಮೊದಲಾದವುಗಳ ಮೂಲತತ್ವಗಳನ್ನು ಕಾಪಾಡುವುದಕ್ಕೋಸ್ಕರ ಕಾದಾಡುತ್ತಿರುವ ಗ್ರೇಟ್‌ಬ್ರಿಟನಿನವರು ಮತ್ತು ಅವರ ಮಿತ್ರರು ಸಹ ಜಯಶೀಲರಾಗಿ ಖ್ಯಾತಿಗೊಂಡು ಬಾಳಲೆಂದೇ ಪ್ರತಿಯೊಬ್ಬ ಪರಸ್ಪರ ಸಹಾಯಾನುವರ್ತಿಯ ಹೃದಯಪೂರ್ವಕವಾದ ಪ್ರಾರ್ಥನೆಯಾಗಿರುತ್ತದೆ. ನಮ್ಮೆಲ್ಲಾ ರಾಜನ್ಯರ ಮೇಲಿಗೆ ಇರುವ ಭಕ್ತಿಭಾವವು ತಲೆತಲಾಂತರಗಳಿಂದಲೂ ಸ್ವಾಭಾವಿಕವಾಗಿ ನಿಂತಿರುವ ಸದ್ಗುಣವಷ್ಟೇ, ಇದರ ವಿನಹಾ ಪರಸ್ಪರ ಸಹಾಯಾನುವರ್ತಿಗಳ ಭಕ್ತಿಯೆಂಬುದು ವಿಚಾರಶೀಲತೆಯಿಂದ ನೆಲೆಗೊಂಡ ವಿಶ್ವಾಸದ ಮೇಲೆಯೂ ಆಧರಿಸಿದೆ; ಏಕೆಂದರೆ, ಬ್ರಿಟಿಷ್ ಸರಕಾರದವರ ಕೆಳಗೆ ನಮ್ಮ ದೇಶವು ಅನುಭವಿಸುತ್ತಿರುವಂತಹ ಶಾಂತತೆಯಿಲ್ಲದಿದ್ದರೆ, ಪರಸ್ಪರ ಸಹಾಯವು ವೃದ್ಧಿಯನ್ನೈದುತ್ತಿರಲೇ ಇಲ್ಲವೆಂದು ಅವರು ಚೆನ್ನಾಗಿ ಬಲ್ಲವರಾಗಿರುತ್ತಾರೆ." ಆದಿನಾರಾಯಣಯ್ಯನವರ ಈ ಸವಿನುಡಿಗಳಿಗೆ ಯಾರೂ ಒಪ್ಪದಿರಲಾರರು.

ಅರಸರ ಸತ್ಕೃತಿಗಳನ್ನು ಸ್ಮರಿಸಿದನಂತರ ಆದಿನಾರಾಯಣಯ್ಯನವರು ತಾನು ಆಗಾಗ್ಯೆ ಈ ಸಂಸ್ಥಾನದಲ್ಲಿ ಹಲವು ಕಡೆಗಳಲ್ಲಿ ನಡೆಯುತ್ತಿರುವ ಸಂಘಗಳನ್ನು ನೋಡಲು ಹೋಗಿದ್ದಾಗ ಮಾಡಿಕೊಂಡ ಅನುಭವದ ಆಧಾರದಿಂದ ಕೆಲವು ಸೂಚನೆಗಳನ್ನು ವಿವರಿಸಿದರು. ಪರಸ್ಪರ ಸಹಾಯವೆಂಬುದು ಬಹು ಸುಲಭವಾದ ಕೆಲಸವೆಂದು ಅನೇಕ ಕಡೆಗಳಲ್ಲಿ ಅಭಿಪ್ರಾಯವಿದೆ. ಸರಕಾರದವರು ಈಗ ಪರಸ್ಪರ ಸಹಾಯ ಪದ್ಧತಿಗೋಸ್ಕರವೆಂದು ಪ್ರತ್ಯೇಕ ಇಲಾಖೆಯನ್ನು ಏರ್ಪಡಿಸಿದ್ದಾರಷ್ಟೇ. ಆದುದರಿಂದ ಜನರು ತಾವಾಗಿ ಸಾಧಿಸುವುದರ ಬದಲಾಗಿ ತಮ್ಮ ಕೆಲಸಗಳಲ್ಲಿ ಸ್ವಲ್ಪ ಮಟ್ಟಿನ ಆಲಸ್ಯವನ್ನು ತೋರಿಸುತ್ತ, ತಪ್ಪುಗಳೇನಾದರೂ ಸಂಭವಿಸಿದರೆ ಸರಕಾರದವರು ಸರಿಪಡಿಸ್ಯಾರೆಂದು ಅನೇಕರು ನೆನಸುತ್ತಾರೆ. ಅಂಥವರು ಆದಿನಾರಾಯಣಯ್ಯನವರು ಸಂಕ್ಷೇಪವಾಗಿ ಹೇಳಿದ ಆದರ್ಶವನ್ನು ತಮ್ಮ ಮುಂದಿಟ್ಟುಕೊಳ್ಳುವುದು ಒಳ್ಳೇದು. "ಪರಸ್ಪರ ಸಹಾಯದ ಸರಿಯಾದ ಬೆಳವಣಿಗೆಗೆ ಹೊರಗಣ ಸಹಾಯದ ಮೇಲೆಯೇ ಪೂರಾ ಆಧರಿಸಿರುವಷ್ಟು ಹಾನಿಕರವಾದದು ಬೇರೆ ಯಾವುದೂ ಇಲ್ಲ. ಪರಸ್ಪರ ಸಹಾಯವೆಂಬುದು ಜನರೇ ತಾವಾಗಿ ಏರ್ಪಡಿಸಿ ನಡೆಯಿಸಿ ಸಾಧಿಸತಕ್ಕಂಥಾದೆಂಬುದನ್ನು ಚೆನ್ನಾಗಿ ಗ್ರಹಿಸಬೇಕು".

ಸಂಘಗಳ ವಹಿವಾಟುಗಳನ್ನು ನೋಡುವದರಿಂದ ಜನರು ಹೆಚ್ಚಾಗಿ ಉಳಿಸಿಕೊಳ್ಳುವುದಕ್ಕೆ ಬದಲಾಗಿ ಸಾಲಮಾಡುತ್ತಾರೆಂಬುದೊಂದು ಅನುಮಾನವು ಮನಸ್ಸಿನಲ್ಲಿ ಹುಟ್ಟುತ್ತದೆ. ಅನೇಕ ಸಂಘಗಳಲ್ಲಿ ಮೆಂಬರರು ಕೇಳಿದ ಎಲ್ಲಾ ಸಾಲಗಳನ್ನು ಕೊಟ್ಟು ಅವರ ಅಭಿಲಾಷೆಗಳನ್ನು ಪೂರೈಸಬೇಕಾದರೆ ಸಂಘದಲ್ಲಿ ಹೊರಗಿನಿಂದ ಹೆಚ್ಚು ಹಣಗಳನ್ನು ಪಡಕೊಳ್ಳಬೇಕಾಗುತ್ತದೆ. ಈ ಹಣಗಳು ಸಹ ಪ್ರಾಯೇಣ ಸಂಘವು ಹೊರಗಿನಿಂದ ಸಾಲಗಳಾಗಿ ಪಡಕೊಳ್ಳಬೇಕಾಗುತ್ತದೆ. ಠೇವಣಾತಿಗಳನ್ನು ನೋಡಿದರೂ ಹೆಚ್ಚಿನವುಗಳು ಮೆಂಬರರಲ್ಲದವರಿಂದಲೇ ಬಂದವುಗಳೆಂದು ಕಾಣುತ್ತದೆ. ಈ ಕಾರಣಗಳಿಂದ ಸಂಘಗಳು ತಮಗೆ ಬೇಕಾದ ಹಣಗಳ ವಿಷಯದಲ್ಲಿ ಹೆಚ್ಚಾಗಿ ಅನ್ಯರನ್ನೇ ಆಶ್ರಯಿಸಿರಬೇಕಾಗುತ್ತದೆ. ಹೀಗಾಗುವುದಕ್ಕಿಂತ ಸಂಘವಿದ್ದ ಗ್ರಾಮದವರೆಲ್ಲರೂ ಸಂಘಕ್ಕೆ ಕೂಡಿ ತಂತಮ್ಮ ವ್ಯಯವನ್ನು ಆಯಕ್ಕೆ ಸರಿಗೊಳಿಸಿ ಕಾಲಾನುಸಾರವಾಗಿ ಸಂಭವಿಸಬಹುದಾದ ಅಡಚಣೆಗಳಿಗೆ ಮಾತ್ರ ಸಂಘದಿಂದ ಸಾಲಗಳನ್ನು ಪಡಕೊಂಡು ಇತರ ವೇಳೆಗಳಲ್ಲಿ ತಮ್ಮ ಸಂಪತ್ತನ್ನೆಲ್ಲಾ ಸಂಘದಲ್ಲೇ ಠೇವಣಾತಿಗಳಾಗಿಟ್ಟು ಗ್ರಾಮದ ಅವಶ್ಯ ಕಡೆಗಳಿಗೆ ಬೇಕಾದ ಹಣವನ್ನು ಗ್ರಾಮದಲ್ಲೇ ಶೇಕರಿಸುವುದಕ್ಕೆ ಪ್ರಯತ್ನಿಸುವುದು ಬಹಳ ಒಳ್ಳೇದಾಗಿರುತ್ತದೆ. ಆದುದರಿಂದ ಆದಿನಾರಾಯಣಯ್ಯನವರು ಈ ವಿಷಯದಲ್ಲಿ ಕೊಟ್ಟ ಸೂಚನೆಯು ಅತ್ಯುಚಿತವಾಯಿತು.

ಪರಸ್ಪರ ಸಹಾಯವೆಂಬುದು ಈಗ ಸುಮಾರು ೧೦ ವರ್ಷಗಳ ಹಿಂದೆ ಪ್ರಥಮತಃ ನಮ್ಮ ದೇಶದಲ್ಲಿ ಕಾಲಿಟ್ಟಂದಿನಿಂದ ಇದುವರೆಗೆ ಮುಂದರಿಸಿ ಬಂದ ರೀತಿಯನ್ನು ಪರಿಶೀಲಿಸಿ ನೋಡಿದರೆ ಪರಸ್ಪರ ಸಹಾಯಕ ಸಂಘಗಳು ಲೇವಾದೇವಿಗಳ ಸಂಗತಿಯಲ್ಲಿ ಮಾತ್ರ ಹೆಚ್ಚಾಗಿ ಏರ್ಪಡಾಗಿಯದೆಂದು ಸ್ಪಷ್ಟವಾಗುತ್ತದೆ. ಇದು ಸಹ ಕೇವಲ ಹರ್ಷಸೂಚಕವಾದ ಚಿಹ್ನೆಯಲ್ಲ. ಜನರ ಜೀವನಾವಸ್ಥೆಯು ಎಲ್ಲಾ ತರಗಳಲ್ಲಿಯೂ ಉಚ್ಚಸ್ಥಿತಿಗೆ ಬರಬೇಕಾದರೆ ಜನರಿಗೆ ಬೇಕಾದ ಯಾವತ್ತು ವಸ್ತುಗಳನ್ನು ಮಾಡಿಸುವುದರಲ್ಲಿಯೂ ಒದಗಿಸುವುದರಲ್ಲಿಯೂ ಸಹ ಪರಸ್ಪರ ಸಹಾಯದ ಸೂತ್ರಗಳನ್ನು ಪ್ರಯೋಗಿಸಬೇಕು. ಆದುದರಿಂದ ಪರಸ್ಪರ ಸಹಾಯದ ತತ್ವಗಳನ್ನು ನಾವಾಗಿ ಚೆನ್ನಾಗಿ ಕಲಿತು ಮನನಮಾಡಿಕೊಂಡು ನಮ್ಮ ಐಹಿಕ ಸಾಂಪ್ರದಾಯಗಳಲ್ಲೆಲ್ಲಾ ಉಪಯೋಗಿಸಿ ಜನರ ಯಾವ ತರದ ಆವಶ್ಯಕತೆಗಳನ್ನಾದರೂ ಪರಸ್ಪರ ಸಹಾಯ ಪದ್ಧತಿಯ ದೆಸೆಯಿಂದಲೇ ಪೂರೈಸಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ಆದಿನಾರಾಯಣಯ್ಯನವರು ಹೇಳಿದಂತೆ, "ಜನರು ಮಾತ್ರ ಸಾಕಷ್ಟು ಜಾಣರಾಗಿದ್ದರೆ ಪರಸ್ಪರ ಸಹಾಯವನ್ನು ಉಪಯೋಗಿಸಿಕೊಳ್ಳುವ ಬಗೆಗೆ ಮಿತಿಯೇ ಇಲ್ಲ."

ಈ ಎಲ್ಲಾ ಪ್ರಯೋಜನಗಳ ಕುರಿತು ಆದಿನಾರಾಯಣಯ್ಯನವರು ಹೇಳಿದ ಮಾತುಗಳು ಬಹು ಸೊಗಸಾಗಿದೆ. ಅವುಗಳಲ್ಲಿನ ಭಾವನೆಗಳು ಕನ್ನಡಿಗರ ಉಪಯೋಗಾರ್ಥವಾಗಿ ಈ ಕೆಳಗೆ ಕನ್ನಡಿಸಲ್ಪಟ್ಟಿವೆ —

"ನಮ್ಮೆಲ್ಲಾ ಜನಾಂಗವೆಂಬುದು ಗ್ರಾಮವಾಸಿಯಾಗಿದೆ. ಕೃಷಿಯೇ ನಮ್ಮ ಮುಖ್ಯ ಕೈಗಾರಿಕೆಯಾಗಿದೆ. ಜನರ ಪೈಕಿ ಸುಮಾರು ಶೇಕಡಾ ಒಂಬತ್ತು ಅದರಿಂದಲೇ ಜೀವನ ಮಾಡುತ್ತಾರೆ. ನಮ್ಮಲ್ಲಿ ಗ್ರಾಮವಾಸಿಗಳ ಜೀವನದ ಅನುಭವವನ್ನು ಮಾಡಿಕೊಂಡವರು ಅದು ನಿಸ್ಸಾರವೆಂದೂ ಕ್ಷುದ್ರವೆಂದೂ ಚೆನ್ನಾಗಿ ಬಲ್ಲರು. ಅಂತಹ ಜೀವನದಲ್ಲಿನ ಕಗ್ಗತ್ತಲೆಯನ್ನು ಹೋಗಲಾಡಿಸಿ ಅದಕ್ಕೆ ಸ್ವಲ್ಪವಾದರೂ ಬೆಳಕನ್ನು ಕೊಡುವುದು ಹೇಗೆಂಬುದು ಅತಿ ಮುಖ್ಯ ವಿಷಯವಾಗಿ ಅದಕ್ಕೆ ಬೇಕಾದ ಸಾಧನೆಗಳನ್ನು ನಾವು ನಡೆಸಬೇಕಾಗಿದೆ. ಪರಸ್ಪರ ಸಹಾಯವೆಂಬುದು ನಮಗೆ ಒಂದು ಕಲ್ಪವೃಕ್ಷವಾಗಿ ಬಂದದೆ. ಅದನ್ನು ನಾವು ಸರಿಯಾಗಿ ಉಪಯೋಗಿಸಿಕೊಂಡರೆ ಅದರ ದೆಸೆಯಿಂದ ಜನರ ಐಹಿಕ ಸೌಖ್ಯವು ವೃದ್ಧಿಯಾಗುವುದಲ್ಲದೆ ಅವರ ಗುಣಗಳು ಸಹ ಪರಿಷ್ಕರಿಸಲ್ಪಡುತ್ತದೆ. ಗ್ರಾಮ ನಿವಾಸಿಗಳ ಜೀವನವನ್ನು ಉದ್ಧರಿಸುವುದಕ್ಕೆ ಇದರಷ್ಟು ಯೋಗ್ಯವಾದ ಉಪಾಯವು ಬೇರೊಂದಿಲ್ಲ."

ಪರಸ್ಪರ ಸಹಾಯವು ಕೆಲವು ಮಟ್ಟಿಗೆ ನಮ್ಮ ಜನರ ಪುರಾತನ ಆಚಾರಗಳಿಗನುಸಾರವಾಗಿರುವುದರಿಂದ ನಮ್ಮ ರೀತಿನೀತಿಗಳು ಅದರ ಅಭಿವೃದ್ಧಿಗೆ ಅನುಕೂಲವಾಗಿಯೇ ಇದೆ. ಆ ಕಾರಣದಿಂದ ಪರಸ್ಪರ ಸಹಾಯವು ಮೊದಲೇ ಸ್ವಲ್ಪ ಅಭಿವೃದ್ಧಿಗೆ ಬಂದಿರುತ್ತದೆ; ಗ್ರಾಮ ಪಂಚಾಯತ ಸಭೆಗಳು ಜೀರ್ಣೋದ್ಧಾರವಾಗಿ ಜನರಲ್ಲಿ ವಿದ್ಯೆಯು ಹೆಚ್ಚಾಗಿ ಪಸರಿಸಿದರೆ ಪರಸ್ಪರ ಸಹಾಯದ ಅಭಿವೃದ್ಧಿಯು ಇನ್ನಷ್ಟು ಉನ್ನತಿಯನ್ನೈದುವುದಕ್ಕೆ ಸಂದೇಹವಿಲ್ಲ. ಈ ಎರಡು ಸುಧಾರಣೆಗಳಿಗೂ ಸರಕಾರದವರು ಹೆಚ್ಚಿನ ಮನಸ್ಸನ್ನು ಕೊಡಲು ಪ್ರಾರಂಭಿಸಿರುವುದರಿಂದ [illegible]

ಪ್ರಚಾರಕ್ಕೆ ಬಂದಾವೆಂದು ನಾವು ಕೋರುತ್ತೇವೆ.

ಹಿಂದೂ ದೇಶದ ಏಳಿಗೆಗೆ ಸ್ತ್ರೀ ವಿದ್ಯಾಭ್ಯಾಸವು ಅವಶ್ಯಕವು.

III

ದೇಶದ ಏಳಿಗೆಗೆ ಅವಶ್ಯಕವಾದ ಆರೋಗ್ಯ, ವಿದ್ಯಾಭ್ಯಾಸ, ಕಾಯಪುಷ್ಟಿ, ಸಂತಾನ ವೃದ್ಧಿ, ಸಂಸಾರ ಸೌಖ್ಯ, ದಾಂಪತ್ಯಾನುಕೂಲ ಮೊದಲಾದವುಗಳೆಲ್ಲಕ್ಕೂ ಸರಿಯಾದ ವಿವಾಹವು ತಳಹದಿಯು ಅಕ್ರಮ ಮತ್ತು ಅಕಾಲ ವಿವಾಹಗಳಿಂದ ತಂದೆ ತಾಯಿಗಳಿಗೂ ಮಕ್ಕಳಿಗೂ ದೇಹಾರೋಗ್ಯ ಕಾಯಪುಷ್ಟಿಗಳು ಕಡಮೆಯಾಗಿ ಅಶಕ್ತತೆಯೂ ರೋಗಗಳೂ ಇಂದ್ರಿಯ ಚಾಪಲ್ಯವೂ ಹೆಚ್ಚುವವು ಬಾಲ್ಯ ವಿವಾಹದಿಂದ ವಿದ್ಯಾಭಿವೃದ್ಧಿಗೆ ಹಾನಿ; ದಾರಿದ್ರ್ಯ ಮತ್ತು ಸಂಸಾರ ತಪ್ಪುಗಳು ಹೆಚ್ಚುವವು. ಗಂಡನು ಎಷ್ಟೇ ವಿದ್ಯಾ ವಿವೇಕ ಗುಣಸಂಪನ್ನನೂ ಧೈರ್ಯಶಾಲಿಯೂ ಆದ ದೇಶ ಹಿತೈಷಿಯಾಗಿದ್ದರೂ ಹೆಂಡತಿಯು ಅನುಕೂಲಳಾಗದಿದ್ದರೆ ಅತಿ ಕಷ್ಟ, ವಿವಾಹ ವಿಚಾರಗಳಲ್ಲಂತೂ "ಎತ್ತು ತಿಟ್ಟಿಗೆ ಎಳೆಯಿತು, ಕೋಣ ನೀರಿಗೆ ಎಳೆಯಿತು" ಎಂಬಂತೆ ಈತನದೇ ಒಂದು ದಾರಿ, ಆಕೆಯದು ಮತ್ತೊಂದು ದಾರಿಯಾಗುವುದು ದೇಶಬಾಂಧವರನೇಕರು ಬಾಲ್ಯ ವಿವಾಹದ ಕೇಡುಗಳನ್ನು ನೋಡಿ ಈ ದುಷ್ಟ ಪದ್ಧತಿಯನ್ನು ಹೇಗಾದರೂ ತಪ್ಪಿಸಬೇಕೆಂದು ನಿಶ್ಚೈಸಿ, ಉಪನ್ಯಾಸ ಪತ್ರಿಕಾಲೇಖನ ಮೊದಲಾದವುಗಳ ದ್ವಾರಾ ಬಾಲ್ಯವಿವಾಹದ ಅನರ್ಥಗಳನ್ನು ಮನಕರಗುವಂತೆ ಇತರರಿಗೆ ಬೋಧಿಸುವರು ಆದರೆ ಮನೆಗೆ ಬಂದರೆ ಹೊರಗೆ ಹೇಳಿದೊಂದೂ ಸಾಗದು, ಹೆಂಗಸರು ಒಪ್ಪರು ೭-೮ ವರ್ಷದ ಹುಡುಗಿ, ೧೩ ೧೪ ವರ್ಷದ ಹುಡುಗ,--ಇವರಿಗೆ ಮದುವೆ ಏಕೆ? ಹೆಂಗಸರು ಸರಿಯಾದ ವಿದ್ಯಾವತಿಯರಲ್ಲ ತಾವು ದೇಶದಲ್ಲಿ ಒಂದಂಶವೆಂದೂ, ತಮ್ಮ ಮನೆಯಲ್ಲಿ ತಾವು ಕೊಡುವ ಕೆಲಸದಿಂದ ದೇಶಕ್ಕೇ ಮೇಲು ಕೇಡುಗಳಾಗುತ್ತಿವೆ ಎಂದೂ ದೇಶಹಿತಕ್ಕಾಗಿ ಕೆಲಸಮಾಡವದು ತಮ್ಮ ಕರ್ತವ್ಯವೆಂದೂ ಗೊತ್ತಿಲ್ಲ ಏನು ಮಾಡಿದರೆ ಏನಾಗುತ್ತೆಂಬ ಕಾರ್ಯ ಕೆಲಸಗಳನ್ನು ಯೋಚಿಸಿಲ್ಲ ಅಲ್ಲದೆ ಮಕ್ಕಳು ಯಾರು, ಭಗವದಂಶರಾದ ಶಾಶ್ವತ ಜೀವರಾದ ಅವರು ತಮ್ಮ ಮನೆಗಳಲ್ಲಿ ಏಕೆ ಹುಟ್ಟಿರುವರು, ಅವರೊಳಗೆ ಅಡಗಿರುವ ಭಗವಂತನ ಗುಣಗಳನ್ನು ಸರಿಯಾದ ವಿವಾಹದ ದ್ವಾರಾ ಹೇಗೆ ವ್ಯಕ್ತಗೊಳಿಸಬಹುದು, ಎಂಬ ಇವೇ ಮೊದಲಾದ ಅನೇಕ ಸಂಗತಿಗಳು ಮರೆತು ಹೋಗಿವೆ ಹೆಂಗಸು ಇವೆಲ್ಲವನ್ನೂ ತಕ್ಕಮಟ್ಟಿಗೆ ತಿಳಿದು ಕೆಲಸ ಮಾಡದೆ ಹೋದರೆ ದೇಶವು ಉತ್ತಮ ಸ್ಥಿತಿಗೆ ಬಾರದು ಇವೆಲ್ಲವನ್ನೂ ತಿಳಿದು ವರ್ತಿಸಬೇಕಾದರೆ ಹೆಂಗಸರು ಒಳ್ಳೆಯ ವಿದ್ಯಾವತಿಯರಾಗಬೇಕು ಇಲ್ಲದಿದ್ದರೆ ಮುಂದೆ ಗತಿಯೇ ಇಲ್ಲವು

ಪೂರ್ವದಲ್ಲಿದ್ದ ಮನು ವ್ಯಾಸ ನಾರದ ಮಾರ್ಕಂಡೇಯಾದಿ ಮಹರ್ಷಿಗಳೂ, ದೇವತೆಗಳೂ, ಭಗವಂತನೂ ಈಗ ಇಲ್ಲವೆ? ಅನೇಕ ಮಹರ್ಷಿಗಳೂ, ದೇವತೆಗಳೂ ಪೂರ್ವ ಕಾಲದಲ್ಲಿ ನಮ್ಮ ಮನೆಗಳಲ್ಲಿ ಹುಟ್ಟಿ ತಂದೆತಾಯಿ ಅಣ್ಣತಮ್ಮ ಅಕ್ಕತಂಗಿ, ಬಂಧುವರ್ಗ, ಸ್ನೇಹಿತರು, ರಾಜರೇ ಮೊದಲಾದವರಾಗಿದ್ದುಕೊಂಡು ನಮ್ಮನ್ನು ತಿದ್ದಿ, ನಮಗೆ ತಿಳುವಳಿಕೆಯನ್ನು ಕೊಟ್ಟು, ನಮ್ಮನ್ನು ವೃದ್ಧಿಸ್ಥಿತಿಗೆ ತರಲಿಲ್ಲವೆ? ಈಗ ಅವರೆಲ್ಲಿ? ಆಗಿನಂತೆ ಈಗ ಏಕೆ ನಮ್ಮ ಮಧ್ಯೆ ಬಂದು ಹುಟ್ಟುತ್ತಿಲ್ಲ? ಅವರು ಬರುವುದಕ್ಕೆ ಅನುಕೂಲಿಸುವಂತಹ ದೇಹ ಮತ್ತು ಸಂದರ್ಭಗಳನ್ನು ಒದಗಿಸಿಕೊಡಬೇಕಾದರೆ ನಾವು ಎಂತಹ ದೇಹದಾರ್ಢ್ಯ ಮತ್ತು ಗುಣಶೀಲಸಂಪನ್ನರಾಗಿರಬೇಕು ಸುತ್ತಲೂ ಇರುವ ಜನರ ವಿದ್ಯಾಭ್ಯಾಸ, ನಡೆನುಡಿ ಶುಚಿತ್ವ, ಪಾರಮಾರ್ಥಿಕತೆ, ಪ್ರೀತಿ, ಪರೋಪಕಾರ ಬುದ್ಧಿ ಭೂತದಯಾಪಶ್ಚಾತ್ತಾಪ ಮೊದಲಾದವು ಹೇಗಿರಬೇಕು? ಇವೆಲ್ಲವನ್ನೂ ತಿಳಿದು ತಕ್ಕಂತೆ ನಡೆದುಕೊಳ್ಳಲು ಹೆಂಗಸು ಎಷ್ಟು ವಿದ್ಯಾವಂತಳಾಗಬೇಕು?

ದೇವಸ್ಥಾನಗಳ, ಪುರಾಣಗಳು, ಮಠಗಳು, ಸತ್ಸಂಪ್ರದಾಯಗಳು ಇವುಗಳಲ್ಲಿ ವೇಷ ಮಾತ್ರ ನಿಂತು ಒಳಗಿನ ಸಾರವು ನಶಿಸಿಹೋಗುತ್ತಿದೆಯಲ್ಲ! ಇವೆಲ್ಲವು ಇನ್ನೂ ಕೊಂಚ ಮಟ್ಟಿಗೆ ಹೆಂಗಸರಿಂದ ನಿಂತಿದೆ ಆದರೆ ತಿಳುವಳಿಕೆ ಇಲ್ಲದೆ ಹೀಗೆಯೇ ಅಂಧ ಪರಂಪರೆಯಾಗಿ ಕುರುಡು ಭಕ್ತಿಯಲ್ಲಿಯೇ ಇರುವುದಾದರೆ ಈ ಕೊಂಚವು ಕೂಡ ಬಹು ದಿನ ನಿಲ್ಲುವಂತಿಲ್ಲ ಈಗಿನ ವಿದ್ಯಾಭ್ಯಾಸವು ಕುರುಡುವಾರವಾಗಿಲ್ಲ ವಿಚಾರಪರತೆಯನ್ನು ಹೆಚ್ಚಿಸುತ್ತಿರುವುದು. ಏನು ಮಾಡಿದರೂ ತಿಳಿದು ಮಾಡಬೇಕೆಂಬ ಆಸೆಯು ಹೆಚ್ಚಿಸುತ್ತಿರುವದು. ಪ್ರತಿಯೊಂದಕ್ಕೂ ಕಾರಣವನ್ನೂ, ಸದುತ್ತರವನ್ನೂ ಹುಡುಕುತ್ತಿರುವದು ಅಂತಹವರಿಗೆ ಕಣ್ಣು ಮುಚ್ಚಿಕೊಂಡು ನಂಬಿರೆಂದರೆ ಅವರು ನಂಬುವುದಿಲ್ಲ. ಯಾವುದೊಂದು ಸಂಗತಿಯನ್ನು ತೆಗೆದುಕೊಂಡರೂ ಅದರ ಉದ್ದೇಶ, ನಿಜಾಂಶ, ಪ್ರಯೋಜನ, ಏತಕ್ಕಾಗಿ ಏರ್ಪಡಿಸಲ್ಪಟ್ಟಿತು ಎಂಬ ಸಂಗತಿಗಳನ್ನು ತಿಳಿಯಬೇಕು. ಕಾಲಕ್ರಮದಲ್ಲಿ ವಿಚಾರಶೂನ್ಯತೆಯಿಂದ ಬಂದಿರುವ ಅನೇಕ ಅನುಪಯುಕ್ತವಾದ—ಕೆಲವು ವೇಳೆ ಅನರ್ಥ ಹೇತುಗಳಾದ—ವಿಷಯಗಳನ್ನು ಬಿಟ್ಟು ಸಾರವಾದ ಸಂಗತಿಗಳನ್ನು ಅರಿತು ಅವುಗಳನ್ನು ತಾವು ಆಚರಿಸುತ್ತ ಬರಬೇಕು. ಅಲ್ಲದೆ ಇತರರಿಗೆ ಬೋಧಿಸಲೂ ಬೇಕು. ಇದರಿಂದ ಹಿಂದೂ ಮತವೂ ಅದರಲ್ಲಿರುವ ಅನೇಕ ಅಮೌಲ್ಯವಾದ ಸಂಗತಿಗಳೂ ಉಳಿಯುವುವು ಇಲ್ಲವಾದರೆ ಇಂತಹ ಶ್ರೇಷ್ಟವಾದ ರತ್ನಗಳು ಹಿಂದೆ ಇದ್ದವೆಂದು ಹೇಳಬೇಕಾಗುವುದು ಇದೊಂದನ್ನು ನೋಡಿದರೂ ಹೆಂಗಸಿನ ವಿದ್ಯಾಭ್ಯಾಸದ ಪ್ರಯೋಜನವು ಕೊಂಚಮಟ್ಟಿಗಾದರೂ ಗೊತ್ತಾಗದೆ ಇರದು

ಮತವಿಚಾರ, ಮಕ್ಕಳ ಏಳಿಗೆ, ಆರೋಗ್ಯ ವಿಚಾರ, ವಿದ್ಯಾಭ್ಯಾಸ, ವಿವಾಹ, ದೇಶಾಂತರ ಸಂಚಾರ, ಕೈಗಾರಿಕೆಗಳ ಸ್ಥಿತಿ, ದೇಶದ ಬಡತನ, ಬಡವರಸ್ಥಿತಿ, ಪಂಚಮರೇ ಮೊದಲಾದ ಕೀಳು ಜಾತಿಯವರ ಸ್ಥಿತಿ, ವರ್ಣಾಶ್ರಮ ಧರ್ಮಗಳ ಈಗಿನ ಸ್ಥಿತಿ ಮತ್ತು ಅವುಗಳಿಂದ ಆಗುತ್ತಿರುವ ಪ್ರಯೋಜನ ಮತ್ತು ಅನರ್ಥಗಳು ಜಾತಿ ದೇಶ ಕುಲ ಬಾಷೆಗಳಿಗಿರುವ ಪರಸ್ಪರ ಸಂಬಂಧ ಈ ಮೊದಲಾದ ಸಂಗತಿಗಳು ಸಕಾರಣವಾಗಿ ಹೆಂಗಸರಿಗೆ ತಿಳಿಯದಿದ್ದರೆ ಜನಾಂಗದಲ್ಲಿ ಅರ್ಧ ಜನವೇ ತಮ್ಮ ಭಾಗಕ್ಕೆ ಇಲ್ಲದಂತಾಗುವುದು ಅಷ್ಟೇ ಅಲ್ಲ, ಉಳಿದ ಅರ್ಧ ಜನರು ಮಾಡುವ ಕೆಲಸಕ್ಕೆ ಅಡಿಗಡಿಗೂ ಅಡ್ಡವಾಗುವದು ಆದ್ದರಿಂದ ಇದನ್ನೆಲ್ಲಾ ನೋಡಿದರೆ ನಮ್ಮ ದೇಶದ ಏಳಿಗೆಯು ಬಹುಮಟ್ಟಿಗೆ ಹೆಂಗಸರ ವಿದ್ಯಾಭ್ಯಾಸದ ಮೇಲೆ ನಿಂತಿರುವಂತಿದೆ ಆದರಲ್ಲೂ ಈಗಿನ ಕಾಲಸ್ಥಿತಿಯನ್ನು ಅನುಸರಿಸಿ ಇಂಗ್ಲಿಷ್ ವಿದ್ಯಾಭ್ಯಾಸ ಕೂಡ ತಕ್ಕಮಟ್ಟಿಗೆ ಅವಶ್ಯವೆಂದು ಗೊತ್ತಾಗುವುದು

ವಿಚಾರಪರರಾದ ಸಹೋದರ ಸಹೋದರಿಯರು ಈ ಮೊದಲಾದ ವಿಚಾರಗಳನ್ನೆಲ್ಲಾ ಚನ್ನಾಗಿ ಮನನ ಮಾಡಿ, ವಿಮರ್ಶಿಸಿ, ಯುಕ್ತವೆಂದು ತೋರಿದಲ್ಲಿ ಈಗಲೇ ಹೆಂಗಸರ ಏಳಿಗೆಗಾಗಿ ಅವರ ವಿದ್ಯಾಭ್ಯಾಸವನ್ನು ಪ್ರಾರಂಭಿಸೋಣ, ಪ್ರಾರಂಭಿಸಿದ್ದರೆ ಹೆಚ್ಚು ಮುತುವರ್ಜಿಯಿಂದ ಜಾಗ್ರತೆಯಲ್ಲಿ ಅಭಿವೃದ್ಧಿಗೊಳಿಸೋಣ

ಅಡಿಯಾರು, ಮದ್ರಾಸು — ಕೆ. ನರಹರಿ ಶಾಸ್ತ್ರಿ.

ಶಾಸ್ತ್ರೀಯ ವ್ಯವಸಾಯ.

("ಸ್ಟುಡೆಂಟ್ಸ್ ಬ್ರದರ್ಹುಡ್" ಎಂಬ ವಿದ್ಯಾರ್ಥಿ ಸಂಘದಲ್ಲಿ ಮ॥ ರಾ॥ ಕೆ ಟಿ ಆಳ್ವರೂ, ಡಾಕ್ಟರ್ ಕೆ ರಾಮರಾಯರೂ ಕೊಟ್ಟ ಭಾಷಣಗಳನ್ನು ಕೇಳಿ ಬರೆದುದು")

ಅನಾದಿಯಿಂದ ಕಟ್ಟುಬಿದ್ದ ಕ್ರಮಗಳನ್ನು ಅಭಿಮಾನದಿಂದ ಅನುಸರಿಸುವುದೆಂದರೆ ಹಿಂದುಸ್ಥಾನದ ಜನರಿಗೆ ಬಹಳ ಇಷ್ಟವು ಈ ದೇಶದಲ್ಲಿ ಮುಖ್ಯವೃತ್ತಿಯಾಗಿರುವ ವ್ಯವಸಾಯವನ್ನು ನೂತನವಾದ ಶಾಸ್ತ್ರೀಯ ರೀತಿಯಿಂದ ಮಾಡಿದರೆ ಹುಟ್ಟುವಳಿಯು ಎರಡರಷ್ಟು ಹೆಚ್ಚುವುದೆಂಬುದನ್ನು ಕೇಳಿಯೂ ತಮ್ಮ ಪೂರ್ವಕ್ರಮಗಳನ್ನು ಇನ್ನೂ ಬಿಡಲಿಲ್ಲ ಅಮೇರಿಕಾ ದೇಶದಲ್ಲಿಯೂ ಯುರೋಪುಖಂಡದಲ್ಲಿಯೂ ಆರಂಬವನ್ನು ರಸಾಯನಶಾಸ್ತ್ರ ಮೊದಲಾದವುಗಳ ಸಹಾಯದಿಂದ ವೃದ್ಧಿಪಡಿಸಿ ಅಲ್ಲಿನ ರೈತರು ಸಂಪತ್ಸಮೃದ್ಧಿಯನ್ನು ಪಡೆದರು. ಮೂವತ್ತು ವರುಷಗಳಿಂದೀಚೆಗೆ ಇಲ್ಲಿನ ಸರಕಾರದವರು ಈ ಅಮೌಲ್ಯವಾದ ಶಿಕ್ಷಣವನ್ನು ಜನರಿಗೆ ಹೇಳಿಕೊಡಲು ಕಲಾಶಾಲೆಗಳನ್ನೂ, ವ್ಯವಸಾಯ ಪ್ರದರ್ಶನಗಳನ್ನೂ, ಇವಕ್ಕೆ ಬೇಕಾದ ಸಮಾಜಗಳನ್ನೂ, ಕೃಷಿಕ್ಷೇತ್ರಗಳನ್ನೂ ಏರ್ಪಡಿಸಿದ್ದಾರೆ ಈ ಸಂಸ್ಥೆಗಳಲ್ಲಿ ಶಿಕ್ಷಣಹೊಂದಿದವರು ತಮ್ಮ ದೇಶದ ಏಳಿಗೆಯನ್ನು ಮನಸ್ಸಿಗೆ ತೆಗೆದುಕೊಂಡು ಭಾಷಣಗಳಿಂದಲೂ, ಪತ್ರಿಕೆಗಳಿಂದಲೂ, ಮನವೊಪ್ಪುವ ವ್ಯವಸಾಯಕ್ರಿಯೆಗಳಿಂದಲೂ ಒಕ್ಕಲಿಗರಿಗೆ ಶಾಸ್ತ್ರೀಯ ವ್ಯವಸಾಯದ ರುಚಿ ಹತ್ತುವಂತೆ ಮಾಡಬೇಕು.

ಹಿಂದುಸ್ಥಾನದ ಮಣ್ಣಿನ ಗುಣವು ಆರಂಬಕ್ಕೆ ಸಹಕಾರಿಯಾಗಿದ್ದು, ಇಲ್ಲಿನ ಬಹುಮಂದಿಯು ಆ ವೃತ್ತಿಯನ್ನೇ ಕೈಕೊಂಡಿರುವರು. ವ್ಯವಸಾಯವು ಸರಿಯಾಗಿ ನಡೆದರೆ ಒಕ್ಕಲಿಗರಿಗೆ ಸುಖವೂ, ಜಮೀನುದಾರರಿಗೆ ಸಮೃದ್ಧಿಯೂ ಇರುವುದು. ವ್ಯಾಪಾರ ವ್ಯವಹಾರಗಳು ಕ್ರಮವಾಗಿ ನಡೆಯುವುವು ನೇಯಿಗೆ ಇತ್ಯಾದಿ ಕೈಗಾರಿಕೆ ಕೆಲಸಗಳು ಸರಾಗವಾಗಿ ನಡೆಯುತ್ತಿದ್ದು, ಕಾಯಕಷ್ಟದಿಂದಲೇ ಜೀವನವೆತ್ತುವ ಬಡಬಗ್ಗರೂ ಸುಖವಾಗಿ ಇರುವರು. ವ್ಯವಸಾಯವನ್ನು ಅರ್ವಾಚೀನ ಕಾಲಕ್ಕೆ ತಕ್ಕುದಾಗುವಂತೆ ವೃದ್ಧಿಪಡಿಸಲು ಶಾಸ್ತ್ರೀಯ ಕ್ರಮಗಳಿಗೆ ಮನಗೊಡುವುದು ನಮ್ಮ ಕರ್ತವ್ಯವಾಗಿದೆ.

ರೈತರಿಗೆ ಗೊತ್ತಾಗುವಂತೆ ಶಾಸ್ತ್ರೀಯ ವ್ಯವಸಾಯವನ್ನು ಮೂರು ವಿಧವಾಗಿ ವಿಭಾಗಿಸಬಹುದು. ಮಣ್ಣು ಪರೀಕ್ಷೆ, ರಸಾಯನಶಾಸ್ತ್ರ

ಮಣ್ಣಿನಲ್ಲಿ ಹಲವು ಬಗೆಗಳುಂಟು. ಹೊಯಿಗೆಮಣ್ಣು, ಹುಡಿಮಣ್ಣು, ಜೇಡಿಮಣ್ಣು, ಬಿಳುಸುಮಣ್ಣು ಇತ್ಯಾದಿ. ಇವುಗಳಲ್ಲಿ ರಸಾಯನ ಶಾಸ್ತ್ರದ ಪ್ರಕಾರ ಮೂಲವಸ್ತುಗಳಿವೆ. ಸಸಿಯು ಬೆಳವಣಿಗೆಗೆ ಮೂಲವಸ್ತುಗಳ ಸಹಾಯ ಅಗತ್ಯವಾದುದು. ಪೈರು ಚೆನ್ನಾಗಿ ಬೆಳೆಯುವುದು ಮಣ್ಣಿನ ಮೇಲೆಯೂ, ಅದರಲ್ಲಡಗಿರುವ ಮೂಲವಸ್ತುಗಳ ಮೇಲೆಯೂ ಹೊಂದಿಯುಂಟು. ಇದಲ್ಲದೆ ಬಹಳ ಸೂಕ್ಷ್ಮವಾದ ಕ್ರಿಮಿಗಳು ಮಣ್ಣಿನಲ್ಲಿ ಸೇರಿಕೊಂಡಿದ್ದು, ಸಸಿಗೆ ಆಹಾರವನ್ನು ಒದಗಿಸಿಕೊಡುವುದು, ಆಯಾಯ ಮಣ್ಣಿನಲ್ಲಿ ಆಯಾಯ ಪೈರು ಚೆನ್ನಾಗಿ ಬೆಳೆಯುವುದು ಎಂದಿರುವುದರಿಂದ ರೈತನು ಮಣ್ಣಿನ ಪರೀಕ್ಷೆಯನ್ನೂ, ರಸಾಯನ ಶಾಸ್ತ್ರವನ್ನೂ ಜಂತುವಿಜ್ಞಾನ ಶಾಸ್ತ್ರವನ್ನೂ ಕಲಿಯಬೇಕು.

ನೆಲದಲ್ಲಿಯೆ ಹಲವು ಜಾತಿಯ ಕ್ರಿಮಿಗಳು ಹುಟ್ಟಿ ಪೈರನ್ನು ಕೆಡಿಸುವುದುಂಟು. ಒಂದೊಂದು ಕಡೆಯಲ್ಲಿ ಮಿಡಿತೆಗಳೂ ಬೆಳೆಯನ್ನು ಹಾಳುಮಾಡುವುವು ಕಬ್ಬು, ಬಾಳೆ, ತೆಂಗು, ಅಡಕೆ, ಇವುಗಳಿಗೆ ರೋಗತಟ್ಟುವುದುಂಟು. ಈ ರೋಗಗಳಿಗೆ ತಕ್ಕ ನಿವಾರಣೆಯನ್ನು ಹುಡುಕಬೇಕು. ಮೈಸೂರು ಅತ್ತಕಡೆ ಅಡಕೆಮರಗಳಿಗೆ ತಾಗುವ ಕೊಳೆರೋಗವನ್ನು ನಿವಾರಣೆ ಮಾಡಿರುವರು ಕಬ್ಬು ಒಡೆದು ಒಳಗೆ ಕೆಂಪಾಗುವುದೂ ಒಂದು ರೋಗವಾಗಿದೆ. ಇದಕ್ಕೂ ಔಷಧವನ್ನು ಕಂಡುಹಿಡಿದಿರುವರು. ರೈತರು ಈ ಎಲ್ಲಾ ರೋಗಗಳನ್ನು ತಿಳಿಯುವುದರಲ್ಲಿಯೂ ಅವಕ್ಕೆ ಮದ್ದನ್ನರೆಯುವುದರಲ್ಲಿಯೂ ಆಸಕ್ತರಾಗಬೇಕು.

ವನಸ್ಪತಿ ಶಾಸ್ತ್ರದಿಂದಲೂ ಅವರು ಹೆಚ್ಚು ಉಪಯೋಗವನ್ನು ಪಡೆಯಬಹುದು. ಮರಗಿಡಗಳನ್ನು ಪರೀಕ್ಷಿಸಿ ಅವುಗಳಿಗೆ ಕಸಿಕಟ್ಟಿ ಹೊಸ ಹೂಗಳನ್ನೂ ಫಲಗಳನ್ನೂ ಪಡೆಯಲು ಈ ಶಾಸ್ತ್ರವು ಅಗತ್ಯವಾದುದು ಕಬ್ಬಿನ ತುದಿಯನ್ನು ಕಡಿದು ಅದನ್ನು ನಟ್ಟು ಬೆಳೆಸುವುದು ಮಾತ್ರ ನಮ್ಮ ಜನಗಳಿಗೆ ಗೊತ್ತು ಮೊರೀಸಿಯಸ್ ದ್ವೀಪದಲ್ಲಿ ಕಬ್ಬಿನ ಬೀಜವನ್ನು ಬಿತ್ತಿ ಪೈರುಮಾಡುತ್ತಾರೆ. ಹೀಗೆ ದೊರೆತ ಕಬ್ಬು ಹೆಚ್ಚು ಸಕ್ಕರೆಯನ್ನು ಕೊಡುವುದು. ಹೇಗೆ ನಟ್ಟರೆ ಹೆಚ್ಚು ಉತ್ಪನ್ನವಾಗುವುದೆಂಬುದನ್ನು ಕಂಡುಹಿಡಿಯುವುದರಲ್ಲಿಯೇ ಆರಂಬಗಾರರು ನಿರತರಾಗಬೇಕು

ಒಂದೇ ಬೆಳೆಕೊಡುವ ಗದ್ದೆಗಳಿಂದ ಎರಡು ಪೈರನ್ನು ಪಡೆಯುವಂತೆ ಪ್ರಯತ್ನಪಡಬೇಕು. ಗುಡ್ಡಗಳಿಂದ ಕಾಸಿನ ಪ್ರಯೋಜನವೂ ಇಲ್ಲದೆ ಬೇರೆಕಡೆಗೆ ಹರಿದು ಹೋಗುವ ನೀರನ್ನು ಯಂತ್ರಸಾಧನೆಗಳಿಂದ ತಮ್ಮ ಹೊಲಗಳಿಗೆ ತಿರಿಗಿಸಿಕೊಂಡರೆ ಇದು ಕಷ್ಟಸಾಧ್ಯವಲ್ಲ ಬೆಳೆಗೆ ತಕ್ಕ ಗೊಬ್ಬರವನ್ನು ಉಪಯೋಗಿಸಲೂ ಬೇಕು. ಇಂಥ ಪೈರಿಗೆ ಇಂಥ ಗೊಬ್ಬರವೇ ಸಹಕಾರಿಯೆಂದುಂಟು ಈ ಗೊಬ್ಬರಗಳನ್ನುಪಯೋಗಿಸದೆ ಬರೇ ನೆಲದ ಗುಣದಮೇಲೆ ಹೊಂದಿದ್ದು ಪೈರು ಮಾಡುತ್ತಾ ಬಂದರೆ ಕ್ರಮೇಣ ನೆಲದ ಸಫಲತ್ವವು ಕಡಿಮೆಯಾಗುವುದು

ವ್ಯವಸಾಯಕ್ಕೆ ಬೇಕಾದ ಜಾನುವಾರು ಇತ್ಯಾದಿಗಳ ಆರೈಕೆಯನ್ನು ತೆಗೆದುಕೊಳ್ಳಬೇಕು. ಇವಕ್ಕೆ ಸ್ವಸ್ಥವಿಲ್ಲದಾಗ ಔಷದ ಕೊಡಲು ಪಶು ಚಿಕಿತ್ಸೆಯನ್ನು ಕಲಿಯುವುದು ಅಗತ್ಯವು ಪಶು ಪ್ರದರ್ಶನಗಳನ್ನು ಇಲ್ಲಲ್ಲಿ ಏರ್ಪಡಿಸಿದರೆ ತುಂಬಾ ಸಹಕಾರಿಯಾಗಬಹುದು ಪ್ರತಿಯೊಂದು ಹಳ್ಳಿಯಲ್ಲಿಯೂ ಪರಸ್ಪರ ಸಹಾಯಕ ಸಂಘಗಳನ್ನು ಮಾಡಿ ಬಡ ರೈತರಿಗೆ ಕಡಿಮೆ ಬಡ್ಡಿಯಲ್ಲಿ ಹಣ ಸಿಕ್ಕುವಂತೆ ಸಹಾಯ ಮಾಡಬೇಕು. ಒಕ್ಕಲಿಗರ ಸಮಾಜಗಳೂ ಪತ್ರಿಕೆಗಳೂ ಅಲ್ಲಲ್ಲಿರಬೇಕು. ಹೀಗೆ ಒಂದೇ ಮನಸ್ಸಿನಿಂದ, ಬೇರೆ ಪ್ರಾಂತ್ಯಗಳಲ್ಲಿ ಪ್ರಯತ್ನಪಡುವ ಹಾಗೆಯೇ ನಾವೂ ಸಾಹಸಪಡಬೇಕು.

ನಮ್ಮ ಜಿಲ್ಲೆಯಲ್ಲಿ ಇಂಥ ಪ್ರಯತ್ನಗಳು ಕೆಲಕಾಲ ನಡೆಯುತ್ತಿದ್ದುವೆಂದು ಇಲ್ಲಿನ ಮಹನೀಯರೊಬ್ಬರು ಹೇಳಿದರು. ಪ್ರಾರಂಭದಲ್ಲಿ ಅನೇಕರು ಮನಸ್ಸು ಕೊಟ್ಟು, ಮತ್ತೆ ವಿಮನಸ್ಕರಾದರೆಂದೂ ಹೇಳುತ್ತಿದ್ದರು. ನಮ್ಮ ಜಿಲ್ಲೆಯ ವ್ಯವಸಾಯ ಕ್ರಮಗಳು ಇನ್ನೂ ಪೂರ್ವಸ್ಥಿತಿಯಲ್ಲಿಯೇ ಇವೆ. ವಿದ್ಯಾವಂತರಾದ ಜಮೀನುದಾರರು ತಮ್ಮ ತನುಮನಧನದಿಂದ ಇದಕ್ಕೆ ನೆರವಾಗಬೇಕೆಂದು ಬಯಸುವೆನು

ಉ. ಮು. ರಾ. .

ಉಪಾಧ್ಯಾಯರೊಡನೆ ಒಂದೇ ಒಂದು ಮಾತು.

ಈಗಿನ ಕಾಲದ ಮಕ್ಕಳಲ್ಲಿ ಗುರುಭಕ್ತಿಯೂ ದೈವಭಕ್ತಿಯೂ ಶೂನ್ಯವಾಗುತ್ತ ಬರುವುದು ಎಲ್ಲರಿಗೂ ತಿಳಿದಿರುವ ವಿಷಯ. ಅದರೊಂದಿಗೆ ಮತಪದ್ಧತಿಯೂ ತೀರಾ ಶಿಥಿಲವಾಗಿದೆ. ಸರ್ವರೂ ಪಾಶ್ಚಾತ್ಯರ ರೀತಿಯನ್ನವಲಂಬಿಸಲು ಸಾಧ್ಯವಾದಷ್ಟು ಯತ್ನಿಸುತ್ತಿರುವರು. ಹೊತ್ತು ಹೊತ್ತಿಗೆ ಸ್ನಾನ, ಸಂಧ್ಯಾವಂದನೆ, ಮುಂತಾದುವುಗಳಲ್ಲಿ ವಿಶ್ವಾಸವು ಕಡಿಮೆಯಾಗುತ್ತ ಬರುತ್ತಿದೆ. ಹೆಚ್ಚೇಕೆ? ದೇವರ ಸ್ಮರಣೆಯೆ ಬಾಯಿಂದ ಹೊರಡುವುದಪೂರ್ವ! ಇದಕ್ಕೆ ಹಲವು ಕಾರಣಗಳಿವೆ. ಮನೆಯಲ್ಲಿ ಮಕ್ಕಳ ತಾಯಿತಂದೆಗಳೂ ದೈವಭಕ್ತಿಯುಳ್ಳವರಾಗಿರಬೇಕು. ಶಾಲೆಯಲ್ಲಿಯೂ ಸ್ವಲ್ಪ ಮಟ್ಟಿಗೆ ಹಿಂದೂ ಧರ್ಮವನ್ನು ಬೋಧಿಸಬೇಕು. ಆದರೆ ಅಷ್ಟು ಚಿಕ್ಕ ಮಕ್ಕಳು ಗ್ರಹಿಸಿಕೊಳ್ಳಲಾರರೆಂದು ಕೆಲವರ ಆಕ್ಷೇಪಣೆ ಇರಬಹುದು. ಆ ಬಾಲಕರಿಗೆ ವೇದಾಂತ ರಹಸ್ಯಗಳನ್ನು ಹೇಳಬೇಕಾದ ಅವಶ್ಯಕವಿಲ್ಲ. ಪುರಾಣಾದಿಗಳಲ್ಲಿರುವ ವೀರಪುರುಷರ ಚರಿತ್ರೆಗಳನ್ನು ಸರಸವಾಗಿಯೂ ಸರಳವಾಗಿಯೂ ಹೇಳಿ, ಅದರೊಳಗಿನ ನೀತಿಯು ಪ್ರಕಾಶವಾಗುವಂತೆ ಮಾಡಿದರೆ ತೀರಿತು. ಇದರ ಸಾರವು ಅವರ ಹೃದಯದೊಳಗೆ ಎಂದೆಂದಿಗೂ ನಿಂತುಬಿಡುವುದು. ಒಂದಲ್ಲದಿದ್ದರೊಂದು ದಿನ ಆ ಬಾಲಕರು ದೊಡ್ಡವರಾದ ಮೇಲೆ ಕುತೂಹಲವುಳ್ಳವರಾಗಿ ವಿಚಾರ ಮಾಡಿಯಾರು. ಶಾಲೆಯಲ್ಲಿ ಕಲಿಸುವುದಕ್ಕೆ ಹಲವು ವಿಷಯಗಳಿರುವಾಗ ಇದಕ್ಕೆ ಸಾಕಷ್ಟು ಸಮಯವು ದೊರೆಯಲಾರದೆಂದೆನ್ನುವಿರಾದರೆ, ರಜಾ ದಿನಗಳಲ್ಲಿಯಾದರೂ ಆಗಿಂದಾಗ ಇದಕ್ಕೆ ಅವಕಾಶವನ್ನೊದಗಿಸ ಬಹುದಲ್ಲವೆ ?

ಈ ವಿಷಯದಲ್ಲಿ ಇಲ್ಲಿನ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಕೊಂಚ ಪ್ರಯತ್ನಪಡುವುದಕ್ಕಾರಂಭಿಸಿದ್ದಾರೆ ಅದನ್ನು ಕಂಡೇ ನಾನು ಈ ಎರಡು ಮಾತುಗಳನ್ನು ಬರೆಯುವುದಕ್ಕೆ ತೊಡಗಿದ್ದೇನೆ ಮೊನ್ನೆ ಶನಿವಾರ ದಿನ ಭೀಷ್ಮಾಷ್ಟಮಿಯಾದುದರಿಂದ ಭೀಷ್ಮನ ಚರಿತ್ರೆಯನ್ನೂ, ಮರುದಿನ ಮಧ್ವಾಚಾರ್ಯರ ಚರಿತ್ರೆಯನ್ನೂ, ಗವರ್ನಮೆಂಟ್ ಕಾಲೇಜಿನ ಪಂಡಿತರುಗಳಾದ ಮ| ರಾ| ಸಾಬಾಜಿ ಶ್ರೀನಿವಾಸಾಚಾರ್ಯರೂ ಮ| ರಾ| ರಾಜಾಚಾರ್ಯರೂ, ನೆರೆದಿದ್ದ ಬಾಲಕರಿಗೆ ಹೃದಯಂಗಮವಾಗುವಂತೆ ಸುಲಭ ರೀತಿಯಿಂದ ವಿವರಿಸಿದರು. ಭೀಷ್ಮಾಚಾರ್ಯರ ಪಿತೃಭಕ್ತಿ, ಘೋರಪ್ರತಿಜ್ಞೆ, ಅಪ್ರತಿಮವೀರ್ಯ, ಮಧ್ವಾಚಾರ್ಯರ ಸಾಹಸಿತಕಾರ್ಯ, ಮಹಾತ್ಮೆ, ಇವೇ ಮೊದಲಾದುವನ್ನು ಕೇಳುತ್ತಿದ್ದಾಗ ಆ ಬಾಲಕರು ತೋರಿದ ಉತ್ಸಾಹವೇ ಅವರ ಮನೋಭಾವವನ್ನು ಸೂಚಿಸುತ್ತಲಿದ್ದಿತು ಇದೇ ರೀತಿಯಾಗಿ ಆಗಿಂದಾಗ ಬಲ್ಲವರಿಂದ ಭಾಷಣಗಳನ್ನು ಮಾಡಿಸ ಬೇಕೆಂದು ಅಲ್ಲಿನ ಉಪಾಧ್ಯಾಯರುಗಳ ಅಭಿಪ್ರಾಯವಂತೆ. ಹಾಗೆ ಮಾಡಿದರೆಂದರೆ ಅದು ಮಕ್ಕಳ ಸನ್ಮಾರ್ಗವರ್ತನೆಗೆ ತುಂಬ ಸಹಕಾರಿಯಾಗುವುದರಲ್ಲಿ ಲೇಶವಾದರೂ ಅನುಮಾನವಿಲ್ಲ ಭರತಖಂಡವು ಉದ್ಧಾರವಾಗಬೇಕಾದರೆ ಈ ರೀತಿಯಾದ ನೀತಿ ಬೋಧನೆಯು ಕೇವಲ ಅವಶ್ಯಕ ಮಕ್ಕಳ ಮನಸ್ಸೆಂಬುದು ಸಮತಟ್ಟಾದ ನೆಲದಲ್ಲಿ ಹರಿಯುವ ನೀರಿನಂತೆ ಎಲ್ಲ ಕಡೆಗಳಿಗೂ ಪ್ರಸರಿಸುವುದು ಬಹು ಚಂಚಲ. ಅಂಥಾ ಪ್ರವಾಹವನ್ನು ಬಾಲ್ಯದಲ್ಲಿಯೆ ಕಾಲುವೆಗಳ ಮೂಲಕ ಸರಿಯಾದ ಕಡೆಗಳಿಗೆ ತಿರುಗಿಸದೆ ಹೋದರೆ, ಪ್ರಬಲವಾದ ಮೇಲೆ ದೊಡ್ಡ ಅಣೆಕಟ್ಟು ಹಾಕಿದರೂ ತಡೆಯಲಾರದು. ಆದರೆ ಈ ಕಾರ್ಯವು ಒಬ್ಬಿಬ್ಬರಿಂದ ಸಾಧ್ಯವಾಗುವ ಹಾಗಿಲ್ಲ. ಹಾಗೆಂದು ಎಲ್ಲರಿಂದಲೂ ಸಾಧ್ಯವಾಗುವ ಹಾಗೂ ಇಲ್ಲ. ಇದನ್ನು ಸಾಧಿಸತಕ್ಕವರು ಉಪಾಧ್ಯಾಯರುಗಳೇ ಸರಿ. ಅವರಿಂದಲೇ ದೇಶಕ್ಕೆ ಉನ್ನತಸ್ಥಿತಿಯೂ ಹೀನಸ್ಥಿತಿಯೂ ಉಂಟಾಗತಕ್ಕದ್ದು ಅವರು ಮಕ್ಕಳಿಗೆ ಸರಿಯಾದ ಮಾರ್ಗವನ್ನು ತೋರಿಸದೆ ಹೋದರೆ, ಆ ಬಾಲಕರು ಮನಬಂದಂತೆ ಪ್ರವರ್ತಿಸಿ, ಮಾನಮರ್ಯಾದೆಗಳನ್ನರಿಯದೆ, ಕಂಡಕಡೆಗೆ ಅಲೆದಾಡಿ, ಭೂಭಾರ ಹೇತುಗಳಾಗುವರು.

ಆದುದರಿಂದ ಉಪಾಧ್ಯಾಯರುಗಳಿರಾ, ಅರಿಯದವರು ನಿಮ್ಮನ್ನು ಉರಿಮೇಯಿಸುವವರೆಂದು ಕರೆದರೂ ಎದೆಗುಂದ ಬೇಡಿರಿ. ನೀವು ಕಲಿಸಿದ ಮಕ್ಕಳು ಸನ್ಮಾರ್ಗ ಪ್ರವರ್ತಕರಾಗಿ, ತುಂಬ ಯಶೋವಂತರಾಗಿ, ನಿಮ್ಮನ್ನು ಆಜನ್ಮಾಂತವೂ ಗುರುಭಾವದಿಂದ ಕಾಣುವ ಪುಣ್ಯವನ್ನು ಸಂಪಾದಿಸಿಕೊಳ್ಳಿರಿ! ಇದುವೆ ಮಾನವನು ಮಾಡತಕ್ಕ ಉತ್ಕೃಷ್ಟವಾದ ಕಾರ್ಯ!

ಆದರೆ ಇಂಥಾ ಮಹತ್ಕಾರ್ಯವನ್ನು ಹೇಗೆ ಮಾಡಲೆಂದು ಕೇಳುವಿರಲ್ಲವೆ? ಅದು ಮಾತ್ರ ನನಗೆ ತಿಳಿಯದು; ನನಗದರಲ್ಲಿ ಅನುಭವ ಸಾಲದು. ಆದರೆ ನಾನು ನೋಡಿದ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಮಾಡಿದಂತೆಯೇ ಪದೇ ಪದೇ ಉತ್ತಮವಾದ ಭಾಷಣಗಳನ್ನೂ ಮಹಾಪುರುಷರ ಚರಿತ್ರೆಗಳನ್ನೂ ಬಲ್ಲವರಿಂದ ಹೇಳಿಸಿದರೆ, ನಿಮ್ಮ ಕರ್ತವ್ಯವು ಕೊಂಚಮಟ್ಟಿಗೆ ಸಂದಂತಾಗುವುದೆಂದು ನನ್ನ ಅಭಿಪ್ರಾಯ. ಈಗ ಆ ಮಕ್ಕಳಿಗೆ ತಿಲಮಾತ್ರ ಹೇಳಿದಿಟ್ಟರೆ ಮುಂದಕ್ಕೆ ಅವರಿಗೆ ಪ್ರಾಯಬಂದಾಗ ತಾವು ಚಿಕ್ಕಂದಿನಲ್ಲಿ ಕೇಳಿದ ವಿಷಯ [illegible] ಆಸೆಯೊಂದುಳಿದಿರುವುದು. ಅದು [illegible] ತೊರೆದು [illegible] ಕ್ರಮೇಣ

ಅವರಲ್ಲಿ ರಾಮದಾಕ್ಷಸನೋ ರಾವಣರಾಕ್ಷಸನೋ ಎಂಬ ಸಂದೇಹ ಕೂಡ ಉಂಟಾಗುವ ಕಾಲ ಬಾರದಿರದು! ಪ್ರಿಯರೇ, ನೀವು ನಿಮ್ಮ ಕರ್ತವ್ಯವನ್ನು ಸಂಪೂರ್ಣವಾಗಿ ಮಾಡಿ ಹೆತ್ತು ಹೊತ್ತು ಸಲಹಿದ, ಭಾರತಮಾತೆಗೆ ಸತ್ಪುತ್ರರೆಂಬ ಅಭಿಮಾನವನ್ನುಂಟು ಮಾಡಿರಿ. ಮಕ್ಕಳ ಮಾತಾಪಿತೃಗಳೊಂದಿಗೆ ಇದೇ ವಿಷಯ ಮುಂದೊಮ್ಮೆ ಮಾತನಾಡುವೆನು.

ಇಂತಿ,

"ಭಾರತೀಯ."

~~~~~~~~

ವೀರ ವೆಂಕಟಪುರದ ಕಸ್ಟಮ್ಸ್ ಆಫೀಸು.

~~~~~~~~

(ಚಿತ್ರಪ್ರದರ್ಶನ)

"ಅದು ಎಂದೂ ಆಗದು! ಸರ್ವಥಾ ಕೂಡದು! ಆ ಮಾತನ್ನೇ ಎತ್ತಬೇಡಿರಿ ಘಂಟೆ ಆರು ದಾಟಿತು ಇನ್ನು ಎಲ್ಲಾ ಕೆಲಸಕ್ಕೂ ರೂಲ್ ಪ್ರಕಾರ ಫೀಸು ಯಾರಲ್ಲಿ! ಅಣ್ಣಪ್ಪಸೆರಿಗಾರ! ಆ ಬಲವಂತ ರಾಮನ ಪತ್ತೆಮಾರಿ'ಯು ಬಂದರನ್ನು ಬಿಟ್ಟು ಹೋಗದಂತೆ ನೋಡಿ ಬಿಡು!"

"ಖಾವಂದರೇ, ಗಬ್ಬಿ ಮೇಲೆ ಬ್ರಹ್ಮಾಸ್ತ್ರವೇ? ಫೀಸಿನ ಆಕ್ಷೇಪ ಈ ತನಕ ತೆಗದಿರುವೆನೇ? ಆಫೀಸರರುಗಳ ಮನಸ್ಸಿಗೆ ವಿರೋಧವಾಗಿ ನಡದರೆ ನಮ್ಮ ಜೀವನ ಸಾಗುವ ಬಗೆ ಎಂತು? ಎಲ್ಲಾ ವಿಷಯಗಳಲ್ಲಿಯೂ ತಮ್ಮಂಥವರ ಮನಸ್ಸು ಸಂತೋಷಗೊಳಿಸಿಯೇ ನಡಿಯುತ್ತಿರುವೆನು ಅಷ್ಟಣೆ ಏನೆಂತ ತಿಳಿದರೆ ಏನೂ ಅಭ್ಯಂತರವಿಲ್ಲದೆ ವರ್ತಿಸುವೆನು"

ಮೂನುಫೆಸ್ತುಗಳನ್ನು ಬರೆಯುವ ಗೋವಿಂದಸೆಟ್ಟಿಯು ಉತ್ತರವನ್ನು ಕೇಳುತ್ತಲೆ ಕಸ್ಟಮ್ಸ್ ಆಫೀಸಿನ ಸಹಾಯಕ ಆಫೀಸರರು ಕುರ್ಚಿಯನ್ನು ತೊಡೆಗಳಿಂದ ಹಿಂದಕ್ಕೆ 'ಪರ್‍ರ್' ಎಂತ ನೂಕಿಬಿಟ್ಟು ತಟ್ಟನೆ ಎದ್ದು ನಿಂತು—"ನೀವಿಲ್ಲೇ ಬೊಬ್ಬಿಡುತ್ತ ಇರ್‍ರಿ–" ಎಂದು ಗರ್ಜಿಸಿ ಹುಬ್ಬುಗಳಿಗೆ ಗಂಟನ್ನಿಕ್ಕುತ್ತ ಆಫೀಸಿನ ಹೊರಕ್ಕೆ ಹೋದರು ಗೋವಿಂದಸೆಟ್ಟಿ! ಅತಿಜಾಣ! ಅನ ಬವಸ್ಥ! ನೂರಾರು ಜನ ಕಸ್ಟಮ್ಸ್ ಆಫೀಸರರನ್ನು ನೋಡಿದವ! ಆಫೀಸರರು ಹೊರಗ ಹೋಗುತ್ತಿದ್ದಾಗಲೆ ಅವರಿಗೆ ಕೇಳಿಸುವಂತೆ ಬಲವಂತ ರಾಮನನ್ನು ಇದಿರಿಗ ಕರೆದು, ಸಾಯಂಕಾಲ ತನಕ ಆತನು ಯಾವ ಮೂಲೆಯಲ್ಲಿ ಬಿದ್ದುಕೊಂಡಿದ್ದನೆಂತ ನಾನಾ ವಿದಗಳಲ್ಲಿ ತಂಡೇಲನಿಗೆ ಬೈದಾದ ಮೇಲೆ ಗೋವಿಂದಸೆಟ್ಟಿಯು ರೋಷಾವೇಷದ ನಟನೆಯನ್ನು ಮಾಡುತ್ತ ಆಫೀಸರರ ಹಿಂದುಕಡೆಯಲ್ಲಿ ಆಫೀಸನ್ನು ಬಿಟ್ಟು ತೆರಳಿದನು ಆಫೀಸರರು ನದಿ ದಡದಲ್ಲಿ ನಿಂತುಕೊಂಡು ಸಿಗರೆಟ್ಟಿನ ಪೆಕೆಟನ್ನು ಕೈಯಲ್ಲಿ ಹಿಡಿದು ಅಂಗಿಕಿಸೆಗಳಲ್ಲಿ ಏನೋ ಹುಡುಕುತ್ತಿದ್ದರು ಒಂದು ನಿಮಿಷ ಮಾತ್ರದಲ್ಲಿ ಗೋವಿಂದಸೆಟ್ಟಿಗೆ ಎಲ್ಲವೂ ತಿಳಿಯಿತು ತನ್ನ ಅಂಗಿಕಿಸೆಯಲ್ಲಿದ್ದ ಬೆಂಕಿಪೆಟ್ಟಿಗೆಯನ್ನು ತೆಗೆದು ಸ್ವಾಮೀ, ಬೆಂಕಿಪೆಟ್ಟಿಗೆಯು ಇಲ್ಲಿ ಇದುವುದು ಎಂತ ಆಫೀಸರರು ನಿಂತಲ್ಲಿಗೆ ಗೋವಿಂದಸೆಟ್ಟಿಯು ಹೋದನು

ಸಿಗರೆಟನ್ನು ಸೇದುತ್ತಿದ್ದಾಗ ಆಫೀಸರರು ಗೋವಿಂದಸೆಟ್ಟಿಯನ್ನು ನೋಡಿ—ಏನು, ಗೋವಿಂದಸೆಟ್ರೇ, ಸೆಟ್ರ ಮಕ್ಕಳ ಬುದ್ಧಿ ಇನ್ನೂ ಮುದುಕರಾದರೂ ಹೋಗದು ಸ್ವಿಮಿಂಗ್‌ಲೇಂಡ್‌ನಿಂದ ಒಂದಿಸ್ದ ಡಾಗೀನುಗಳನ್ನು ಕಾನೂನು ಪ್ರಕಾರ ಬಿಚ್ಚಿನೋಡಿ ಬಿಟ್ಟುಕೊಡಬೇಕಿತ್ತು ಎಲ್ಲಾ 'ವಿಲೆವಾರಿ' ನಾನು ಮಾಡಿಸುತ್ತೇನೆಂತ ಹೇಳಿಬಿಟ್ಟು ನಿನ್ನೆ ಆ ಗೋವಿಂದನಾಯ್ಕರ ಸಾಮಾನನ್ನು ತಕ್ಕೊಂಡು ಹೋದಿರಿ. ಈ ದಿನ ಇನ್ನೊಂದು ವಿಷಯ ಹಿಡಕೊಂಡು ಬಂದಿರ ಏರಿ. ಆಫೀಸರರುಗಳ ಮನಸ್ಸಿಗೆ ವಿರೋಧವಾಗಿ ನಡೆಯುವದಿಲ್ಲ, ನಮ್ಮ ಮನಸ್ಸು ಸಂತೋಷ ಮಾಡಿಸುವುದು! ಏನಪ್ಪಾ ಇದು ನಿಮ್ಮ ದೊಡ್ಡ ಕುಂಬಳಕಾಯಿ' ಮಾತುಗಳು!"

ಆಫೀಸರರು ಹೀಗೆಂದಕೂಡಲೆ ಗೋವಿಂದಸೆಟ್ಟಿಯು ಆಫೀಸರರ ಮತ್ತಷ್ಟು ಹತ್ತಿರ ಸೇರಿ ಏನೋ ಮೆಲ್ಲಗೆ ಮಾತಾಡಲು ಪ್ರಾರಂಭಿಸಿದನು. ಆಫೀಸರರ ಸ್ವರವೂ ಸಹ ನಿಧಾನವಾಯಿತು, ಕೂಡಲೆ ಇಬ್ಬರೂ ಅಲ್ಲಿಂದ ತೆರಳಿದರು ಆಫೀಸರರು ಆಫೀಸಿನೊಳಗೆ ಆಸೀನರಾದ್ದನ್ನು ನೋಡಿ ಗೋವಿಂದಸೆಟ್ಟಿಯು ಮೆಲ್ಲನೆ ಮುಂದಕ್ಕೆ ಹೋಗಿ ತನ್ನ ಕಂಕುಳಲ್ಲಿರುವ ಮಾನುಫೆಸ್ತುಗಳ ಕಟ್ಟನ್ನು ಮೇಜಿಯ ಮೇಲಿರಿಸಿದನು. ಆಫೀಸರರು ಸಿಟ್ಟಿನಿಂದ ಆ ಕಟ್ಟನ್ನು ತೆಗದು ಅದನ್ನು ಬಿಚ್ಚಿ ಅದರಲ್ಲಿ ಏನೋ ಗೀಚಿ ಕಟ್ಟನ್ನು ಮೇಜಿನಿಂದ ಕೆಳಕ್ಕೆ ಬಿಸಾಡಿಬಿಟ್ಟರು.

ಗೋವಿಂದಸೆಟ್ಟಿಯು ಆಫೀಸರರು ಬಿಸಾಡಿದ ಕಟ್ಟನ್ನು ಹಿಡಕೊಂಡು ಆಫೀಸನ್ನು ಬಿಟ್ಟು ತೆರಳಿದನು. ಅಷ್ಟರಲ್ಲಿ ಕುಂದಗುಡ್ಡದ ಸಾವಕಾರ ರಾಮಪ್ಪನ್ಯಾಕರು ಆಫೀಸಿನ ಬಳಿ ಬಂದಿದ್ದರು ರಾಮಪ್ಪನ್ಯಾಕರನ್ನು ನೋಡುತ್ತಲೇ—ನ್ಯಾಕರೆ, ತಮ್ಮ ಕೆಲಸ ಹೇಗೂ ಈ ದಿನವೇ ನೆರವೇರಿತು. ಕಷ್ಟವಿಲ್ಲನ ತೊಂದರೆ ಮುಗಿಯಿತು. ರೂಪಾಯಿ ಏಳುವರೆ ಕೊಟ್ಟದ್ದಿರಲ್ಲ, ಕಾಸು ಉಳಿಯಲಿಲ್ಲ ಇನ್ನೂ ಐದು ರೂಪಾಯಿ ಇದ್ದರೆ, ಈಗಲೇ ಕೊಟ್ಟುಬಿಡಿ ಸಾಯಂಕಾಲವಾಯಿತು. ಪೋರ್ಟು ಆಫೀಸಿಗೆ ಹೋಗಬೇಕು, ಹೆಲ್ತ ಆಫೀಸರರನ್ನು ಕಾಣಬೇಕು. ಲೆಕ್ಕದ ಪಟ್ಟಿ ರಾತ್ರೆ ತಮ್ಮ ಶ್ಯಾನುಭಾಗರ ಹತ್ತಿರ ಕೊಡುವೆನು'—ಎಂದು ಗೋವಿಂದಸೆಟ್ಟಿಯು ನಗಾಡುತ್ತಾ ರಾಮಪ್ಪನ್ಯಾಕರನ್ನು ಕೇಳಿದನು.

ರೂಪಾಯಿ ಐದು ಕೂಡಲೇ ರಾಮಪ್ಪನ್ಯಾಕರಿಂದ ಕೊಡೋಣಾಯಿತು ಗೋವಿಂದ ಸೆಟ್ರು ಕಸ್ಟಮ್ಸ್ ಆಫೀಸಿನಿಂದ ಪೋರ್ಟು ಆಫೀಸಿಗೆ ಓಡಿದರು ಧಕ್ಕೆ ಅಥವಾ ದಕ್ಕೆ ಫೀಸಿನ ಕ್ರಮವಿದ್ದದ್ದರಿಂದ ಪೋರ್ಟು ಆಫೀಸಿನಲ್ಲಿ ಕಸ್ಟಮ್ಸ್ ಆಫೀಸಿನಷ್ಟು ತೊಂದರೆ ಇರಲಿಲ್ಲ ವೀರವೆಂಕಟಪುರದಲ್ಲಿ ಸ್ಟಾಂಪುಗಳ ಚಲಾವಣೆಯಿಲ್ಲದ್ದರಿಂದ ಪಾವಾಣೆ ನೀಮಾಣೆಗಳನ್ನು ಕಾಗದಕ್ಕೆ ಅಂಟಿಸುತ್ತಿದ್ದರು ಪಾವಾಣೆ ಅಂಟಿಸುವ ಬದಲಿಗೆ ಆಫೀಸು ಸಮಯದ ನಂತರ ನೀಮಾಣೆ ಅಂಟಿಸಿದರೆ ಅಷ್ಟಣೆ ಕೂಡಲೇ ದೊರಕುತ್ತಿತ್ತು ಪೋರ್ಟಾಫೀಸರರಿಂದ ಅಧಿಕಾರ ಹೊಂದಿದ ಕಾರ್ಕೂನರಲ್ಲೊಬ್ಬರು ಸಾವಕಾರರಿಗೆ ಏನೂ ಅಡಚಣೆಯಿಲ್ಲದಂತೆ ಈ ಆಫೀಸಿನ ಕಾರ್ಯನಿರ್ವಾಹವನ್ನು ನಡೆಸಿ ಬಹಳ ಕೀರ್ತಿಯನ್ನು ಪಡೆದಿದ್ದರು. ಹೆಲ್ತ ಆಫೀಸರರ ಕೂಡೆ ಸಹ ತೊಂದರೆಯಿರಲಿಲ್ಲ ವೀರವೆಂಕಟಪುರದ ಸರಕಾರದವರು ಈ ಆಫೀಸರರಿಗೆ ಕೊಡುವ ಸಂಬಳವು ಕಡಮೆಯಾಯಿತೆಂಬುದನ್ನು ಜನರು ತಿಳಕೊಳ್ಳುವಂತೆ ಈ ಆಫೀಸರರ ಪೂರ್ವಾಧಿಕಾರಿಗಳೊಬ್ಬರು ಸಾಹಸಪಟ್ಟು ಸಾಧಿಸಿದ್ದರು ಅಂಥಾ ಸಾಧನೆಯು ನೆರೆವೇರಿದಂದಿನಿಂದ ಒಂದು ಮಾಮೂಲು ನಡಿಯುತ್ತ ಬಂದಿತ್ತು "ಪತ್ತೆಮಾರಿ"ಯ ಪೋರ್ಟಕ್ಲಿಯರೆನ್ಸ ಒಂದಕ್ಕೆ ಫೀಸು ರೂ ೧, ತಂಡೇಲ ಫೀಸು ಆಣೆ ೮, ಮತ್ತು ಕಲಾಸಿಗಳಿಗೆ ಎರಡಾಣೆ ಪ್ರಕಾರ,—ಈ ರೀತಿ ಪೂರ್ಣ ಮನಸ್ಸಿನಿಂದ ಕಾಣಿಕೆಯು ಹಾಜರಾಗುತ್ತಿದ್ದರಿಂದ ಹೆಲ್ತ ಆಫೀಸರರು ಕೂಡಲೇ ತಂಡೇಲರು ಮೊದಲಾದವರನ್ನು ಪರೀಕ್ಷಿಸಿ ಕಳುಹಿಸುವರೆ ಅನುಕೂಲವಾಗುತ್ತಿತ್ತು ಆದ್ದರಿಂದ ಗೋವಿಂದ ಸೆಟ್ಟಿಯು ತನ್ನ ಕೆಲಸವನ್ನು ಬೇಗನೇ ಮುಗಿಸಿ ಬಲವಂತರಾಮನ ಪೋರ್ಟಕ್ಲಿಯರೆನ್ಸನ್ನು ಪಾಸ್ ಮಾಡಿಸಿ, ಸಾಯಂಕಾಲಕ್ಕೆ ಸಾವುಕಾರರಿಗೆ ಕೊಡಬೇಕಾದ ಪಟ್ಟಿಗಳನ್ನು ತಯ್ಯಾರಿಸಲು ಪ್ರಾರಂಭಿಸಿದನು

ಮುಂದರಿಯುವದು

~~~~~~~~

ಪತ್ರವ್ಯವಹಾರ.

~~~~~~~~

ಮಂಗಳೂರು ಕೊಡಿಯಾಳಬೈಲ್ ಶ್ರೀ ಗೋಕರ್ಣನಾಥಕ್ಷೇತ್ರದಿಂದ ಕಳೆದ ದಶಂಬರ ತಿಂಗಳ ತಾ ೨೬ನೇ ದಿವಸ ಇದೇ ಬರುವ ಶಿವರಾತ್ರಿ ಮಹೋತ್ಸವದ ನಿಮಿತ್ತ ರಾ| ಜಾರದ ಜಾರಪ್ಪ ನ್ಯಾಕರು ಮತ್ತು ರಾ| ಕಣ್ಣಪ್ಪ ವೈದ್ಯರು ಕೂಡಾ ಮುಂಬಯಿಗೆ ಹೋಗಿ ಅಲ್ಲಿ ಶ್ರೀ ಗೋಕರ್ಣನಾಥನ ಮೇಲೆ ಭಕ್ತಿ ಪೂರ್ವಕದಿಂದ ದ್ರವ್ಯ ಸಹಾಯ ಮಾಡಿದ ಮಹಾನ ಬಾವರಾದ ಮ| ರಾ| ಕೊಲ್ನಾಡುಗುತ್ತು ನೀಲಯ್ಯ ಶೆಟ್ರವರಿಂದ ರೂ ೧೦, ರಾ| ಎಮ್ ರಾಮಯ್ಯ ಶೆಟ್ರಿಂದ ರೂ ೧, ರಾ| ಬಿ ವಾಮನರಾಯರಿಂದ ರೂ ೨, ರಾ| ಸುರತಕಲ್ಲು ಸೋಮಪ್ಪನವರಿಂದ ರೂ ೫, ಇ. ಎ ಗೋಲ್ ಆಫೀಸಿನ ರಾ| ವಿ ಸಿ ಅಮೀನರಿಂದ ರೂ ೫, ಮತ್ತು ಶ್ರೀ ಗೋಕರ್ಣನಾಥಕ್ಷೇತ್ರದ ಮುಂಬಯಿಯಲ್ಲಿರುವ ಧನಸಹಾಯಕ ಸಂಘದಿಂದ ಮಂಗಳೂರು ಶ್ರೀ ದೇವಸ್ಥಾನದ ಬಂಡಾರಕ್ಕೆ ಒಪ್ಪಿಸಬೇಕಾಗಿ ಸಂಘದ ೨ನೇ ಪ್ರೆಸಿಡೆಂಟ ರಾ| ಹಿಮ್ಮಂತ ಸ್ವಾಮಿಯವರು ಕೂಡಾ ಮುಂಬಯಿ ಸಂಘದವರು ನೇಮಿಸಲ್ಪಟ್ಟ ೧ನೇ ಪ್ರೆಸಿಡೆಂಟ ರಾ| ಜಾರಪ್ಪ ನ್ಯಾಕರ ಹಸ್ತ ಸಲಾಯಿಸಿದ ರೂ. ೪೩೮—೯—೫ನ್ನು ಕೂಡಾ ಶ್ರೀ ದೇವರ ಭಂಡಾರಕ್ಕೆ ಒಪ್ಪಿಸಿರುವದರಿಂದ ಶ್ರೀ ದೇವಸ್ಥಾನದ ಸಂಘದವರೆಲ್ಲರು ದ್ರವ್ಯ ಸಹಾಯ ಮಾಡಿದ ಸರ್ವರ ಉಪಕಾರಕ್ಕೂ ಮತ್ತು ಸ್ವಜಾತಿ ಬಾಂಧವರ ಸಂಘದ ಉಪಕಾರವನ್ನೂ ಭಕ್ತಿ ವಾತ್ಸಲ್ಯವನ್ನೂ ಸ್ವದೇಶಾಭಿಮಾನವನ್ನೂ ಶ್ರೀ ದೇವರ ಮೇಲಣ ವಿಶ್ವಾಸವನ್ನೂ ಕುರಿತು ಹೇಳುವರೆ ಅಸಾಧ್ಯವಾಗಿರುವದು. ಮಹಾನೀಯರಾದ ಶ್ರೀ ಗೋಕರ್ಣನಾಥ ದೇವಸ್ಥಾನದ ಏಳಿಗೆಯನ್ನು ಬಯಸಿ ಶ್ರಮ ಪಡುವ ಈ ಸರ್ವರನ್ನೂ ಕುರಿತು ನಾವೆಲ್ಲರೂ ಕೂಡಿ ಈ ಸರ್ವರ ಅಭಿವೃದ್ಧಿಗೋಸ್ಕರ ಶ್ರೀ ದೇವರಿಗೆ ಆರಾಧನಾದಿಗಳಿಂದ ಪ್ರಾರ್ಥಿಸುತ್ತೇವೆ.

H. Koragappa.

ಯುದ್ಧ ಸಮಾಚಾರ.

——೦——

ತಾ. ೧೯ನೇ ಜನವರಿ.

ಪಶ್ಚಿಮ ರಣರಂಗದ ನ್ಯೂಪೋರ್ಟ್, ಲಾಬಾಸ್ಸೆ ಮೊದಲಾದ ಸ್ಥಳಗಳಲ್ಲಿ ಮಿತ್ರರು ಮುಂದರಿಯುತ್ತಲಿದ್ದಾರೆ ಕಳೆದ ೧೫ ದಿವಸಗಳಲ್ಲಿ ಬಾಲ್ಟಿಕ್ ಸಮುದ್ರದಲ್ಲಿ ಜರ್ಮನರ ೫ ಸಾಮಾನಿನ ಹಡಗಗಳು ಮುಣುಗಿಸಲ್ಪಟ್ಟಿರುವವು.

ರಾಶ್ಯನರು ಕರ್ಪಾಥೇನಿಯದಲ್ಲಿ ಕಿರ್ಲಿಬಾಬ ಎಂಬ ಮುಖ್ಯವಾದ ಪರ್ವತ ದಾರಿಯನ್ನು ಹಿಡಿದಿರುವರು ಕರ್ಪಾಥೇನಿಯದಲ್ಲಿ ಹಿಮ ಬೀಳುವದರಿಂದಲೂ ವಿಶೇಷ ಚಳಿ ಇರುವದರಿಂದಲೂ ಅಲ್ಲಿಯ ರಣರಂಗದ ಸ್ಥಿತಿಯಲ್ಲಿ ಬದಲಾವಣೆಯಾಗಲಿಲ್ಲ

ಕರ್ಗಾನಿನಲ್ಲಿ ರಾಶ್ಯನರಿಗೂ ತುರ್ಕರಿಗೂ ೩ ದಿವಸಗಳ ಕಠಿಣ ಕಾಳಗ ನಡೆದು ರಾಶ್ಯನರಿಗೆ ಜಯವಾಗಿರುವದು ತುರ್ಕರ ಸೇನಿಕರು ಎರ್ಜರಮ್ ಕಡೆಗೆ ಓಡುತ್ತಿದ್ದಾರೆ

ಪರ್ಶಿಯಕ್ಕೆ ಸೇರಿದ ಕುರ್ದ ಎಂಬ ಪಣಗಳವರು ಜರ್ಮನರ ಪ್ರೇರಣೆಯಿಂದ ತುರ್ಕರಿಗೆ ಸೇರಿರುವರೆಂತಲೂ ೬೦೦ ತುರ್ಕರೂ ೨೫,೦೦೦ ಕುರ್ದರೂ ತೆಬ್ರಿಜಗೆ ದಾಳಿ ಮಾಡಿರುವರೆಂತಲೂ ವಾರ್ತೆ ಬಂದದೆ ಮಿಯಾಂಡೋಬಿನಲ್ಲಿ ಪರ್ಶಿಯನರು ಶತ್ರುಗಳನ್ನು ಎದುರಿಸಿದರು ತೆಬ್ರಿಜಿನ ಪೂಜಿ ಗವರ್ನರನಾಗಿದ್ದ ಪರ್ಶಿಯನರ ಸೇನಾಧಿಪತಿಯಾಗಿರುವ ಶೂಜಾ ಉದ್ದೌಲರವರಿಗೆ ಕಾಲಿನಲ್ಲಿ ಘಾಯವಾಗಿದೆಂತಲೂ ಇವರ ಸವಾರರು ನಿರ್ನಾಮವಾದರೆಂತಲೂ ಸುದ್ದಿ ಇದೆ ಕುರ್ದರು ಮಿಯಾಂಡೋಬಿನ ಜನರನ್ನು ಕೊಲೆ ಮಾಡುತ್ತಿರುವರು

ಆಸ್ತ್ರಿಯದ ಸ್ಥಿತಿಯು ದಿನೇ ದಿನೇ ಭಯಂಕರವಾಗುತ್ತಿರುವದು ದವಸಧಾನ್ಯಗಳ ಬೆಲೆಯು ಏರುತ್ತಿದೆ, ಯುದ್ಧ ಮಾಡಬಾರದೆಂಬ ಚಳವಳವು ನಡೆದು ದಂಗೆಗಾರರಿಗೂ ಪೋಲಿಸಿನವರಿಗೂ ಕೆಲವು ಕಡೆಗಳಲ್ಲಿ ಜಟಾಪಟಿಯಾಗಿರುವದು

ತಾ. ೨೦ನೇ ಜನವರಿ.

ಸಮುದ್ರದಿಂದ ಬ್ಯಾಸಿನ ವರೆಗೆ ವಿಶೇಷ ಬಿರುಗಾಳಿ ಬೀಸಿರುವದ ಕೆಲವು ಕಡೆಗಳಲ್ಲಿ ತೋಪು ಕಾಳಗಗಳು ನಡೆದಿರುವವು. ಎರಡು ಸಾರಿ ಹಲ್ಲಾ ಮಾಡಿದ ಜರ್ಮನರು ಹಿನ್ನೆಟ್ಟಿರುವರು ಮಧ್ಯ ರಣರಂಗದ ಸ್ವೊಸನ್ಸಿನಿಂದ ರೈಮ್ಸಿನ ವರೆಗೆ ಮಿತ್ರರು ಜರ್ಮನರ ಕೆಲವು ಕಾಮಗಿರಿಗಳನ್ನು ಸ್ವಾಧೀನ ಮಾಡಿಕೊಂಡಿರುವರು ಒಸೆಜೆಸಿನಲ್ಲಿ ಹಿಮ ಬಿದ್ದದೆ ಕೆಂಪಾಗ್ನೆಯಲ್ಲಿ ಮಿತ್ರರ ನೆಲೆಗಳ ಮೇಲೆ ಹಾರತ್ತಿದ್ದ ಶತ್ರುಗಳ ಎರಡು ವಾಯುನಾವೆಗಳನ್ನು ಮಿತ್ರರು ಕೆಳದೊಬ್ಬಿ ೪ ವಿಮಾನಗಾಮಿಗಳನ್ನು ಸೆರೆಹಿಡಿದಿರುವರು. ವಿಶೇಷ ಮಳೆ ಬರುತ್ತಿದೆ ಕಂದಕಗಳಲ್ಲಿ ೧ ಅಡಿ ಎತ್ತರ ನೀರು ನಿಂತಿರುವದು

ರುಶ್ಯನರು ಕಳಕೊಂಡ ಕಂದಕವನ್ನು ಪುನಃ ಹಿಡಿದಿರುವರು ಕಂದಕದಲ್ಲಿದ್ದ ಎಲ್ಲಾ ಜರ್ಮನರು ಹತರಾದರು, ಪುನಃ ಎರಡು ಸಾರಿ ಜರ್ಮನರು ಹಲ್ಲಾ ಮಾಡಿದರೂ ಜಯಪ್ರದರಾಗಲಿಲ್ಲ

ಜೆನಿಕಿಯೋ ಎಂಬಲ್ಲಿ ತುರ್ಕರಿಗೂ ರುಶ್ಯನರಿಗೂ ಎರಡು ದಿವಸಗಳ ಕಾಳಗ ನಡೆದು ತುರ್ಕರು ವಿಶೇಷ ನಷ್ಟಪಟ್ಟು ಓಡುತ್ತಿರುವರು ೩೦೦ ತುರ್ಕರು ಹತರಾದರು ಕೆಲವರು ಅಪಾಯಪಟ್ಟರು ಎಡ್ರಿನೋಪಲಿನಲ್ಲಿರುವ ತುರ್ಕಿ ಸೇನೆಯು ಹಿಂದಕ್ಕೆ ಕರೆಯಲ್ಪಟ್ಟಿರುವದೆಂತ ಅಥೆನ್ಸಿನಲ್ಲಿ ವಾರ್ತೆ ಇದೆ ಕೌಕಾಸಸಿನಲ್ಲಿ ತುರ್ಕರ ೧೧ನೇ ಸೇನಾಂಗವು ನಿರ್ನಾಮವಾಗಿರುವದು ಕೆಲವರು ಮಾತ್ರ ತಪ್ಪಿಸಿಕೊಂಡಿರುವರು. ತುರ್ಕಿ ಸೇನೆಯ ಎಲ್ಲಾ ಫಿರಂಗಿಗಳು ಹಿಡಿಯಲ್ಪಟ್ಟಿರುವವು

ಜರ್ಮನರ ಪ್ರುಶ್ಯಿಯನ್ ಸೇನೆಯ ಪ್ರಾಣಾಪಾಯಪಟ್ಟವರ ೧೨ನೇ ಪಟ್ಟಿಯಲ್ಲಿ ೮,೬೭,೧೦೭ ಮಂದಿಯ ಸಂಖ್ಯೆ ತೋರುತ್ತದೆ, ಬವೇರಿಯ, ಸೆಕ್ಸನ್, ವ್ಯುರ್ಟೆನ್‌ಬರ್ಗ್ ಸೇನಾ ಪಟ್ಟಿ ಮತ್ತು ಇದನ್ನು ಒಟ್ಟು ಕೂಡಿಸಿದರೆ ಈ ವರೆಗೆ ಜರ್ಮನ ಸೇನೆಯಲ್ಲಿ ಎರ[illegible] ಬರುವದು.

ಮಸ್ಕಾಟಿನ ಅರಬಿಯರು ಅಲ್ಲಿಯ ಸುಲ್ತಾನನಿಗೆ ವಿರೋಧವಾಗಿ ಎದಿರು ಬಿದ್ದಿರುವರು. ಸುಲ್ತಾನನ ಸೇನೆಗೆ ಸಹಾಯವಾಗಿ ಈ ಮೊದಲೇ ಬ್ರಿಟಿಶರು ಸೇನೆ ಕಳುಹಿಸಿದ್ದರಿಂದ ದಂಗೆಗಾರರು ಈಗ ಎದೆಗುಂದಿದವರಾಗಿರುವರು

ತಾ. ೨೧ನೇ ಜನವರಿ.

ಈ ದಿನದ ವಾರ್ತೆಯಲ್ಲಿ ಜರ್ಮನರ ವಾಯುನಾವೆಗಳು ಸಂಡ್ರಿಂಗ್ಹಮಿಗೆ ಬೊಂಬು ಹಾಕಿದ ವಾರ್ತೆಯೇ ವಿಶೇಷವಾಗಿರುವದು ಈ ಬೊಂಬಿನಿಂದ ಒಬ್ಬ ಹುಡುಗನು ಮೃತನಾಗಿರುವನು ೩ ಮಂದಿ ಅಪಾಯ ಹೊಂದಿರುವರು ಜರ್ಮನರ ವಾಯುನಾವೆಯು ಸಂಡ್ರಿಂಗ್ಹಮಿನ ಸಮೀಪ ಸಿಡಿಮದ್ದು ಬಿಸಾಡುವ ಕೆಲವು ತಾಸುಗಳ ಮೊದಲು ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಲಂಡನಿಗೆ ಹೊರಟು ಹೋಗಿದ್ದರು. ಯಾರ್ಮೂತಿನಲ್ಲಿ ಶತ್ರುಗಳ ವಾಯುನಾವೆಗಳು ಹಾಕಿದ ಸಿಡಿಮದ್ದಿನಿಂದ ಹೆಚ್ಚೆಂದರೆ ೫೦ ಭವನುಗಳ ನಷ್ಟವಾಗಬಹುದು ಒಟ್ಟಿಗೆ ಇಬ್ಬರು ಹೆಂಗಸರೂ ಇಬ್ಬರು ಗಂಡಸರೂ ಹತರಾಗಿರುವರು ೬ ವಾಯುನಾವೆಗಳು ಇಂಗ್ಲಾಂಡ್ ಕರಾವಳಿಯಲ್ಲಿ ಕಾಣಿಸಿಕೊಂಡು ನಂತರ ಯಾರ್ಮೂತಿನ ದಕ್ಷಿಣಕ್ಕೂ ಉತ್ತರಕ್ಕೂ ಹೋದವೆಂದು ಜನರ ಹೇಳಿಕೆ ಇದೆ ಜರ್ಮನರ ವಾಯುನಾವೆಗಳ ಈ ಕೆಲಸವನ್ನು ಅಮೇರಿಕದ "ನ್ಯೂಯೊರ್ಕ್ ಹೆರಾಲ್ಡ್" ಎಂಬ ಪತ್ರವು ಹುಚ್ಚು ಕೆಲಸವೆಂದೂ ನಿರಾಪರಾಧಿಗಳಿರುವ ಸ್ಥಳಗಳಿಗೆ ಹೀಗೆ ಸಿಡಿಮದ್ದುಗಳನ್ನು ಬಿಸಾಡುವದರಿಂದ ಜರ್ಮನರಿಗೆ ಲಾಭವೇನೆಂದೂ ಕೇಳಿರುವದು ಯಾರ್ಮೂತಿನಲ್ಲಿ ಬಿದ್ದ ಬೊಂಬಿನಿಂದ ಒಬ್ಬ ಸೋಲ್ಜರನು ಗಾಯ ಒಡೆದು ನಂತರ ಮೃತಪಟ್ಟನು

ರುಶ್ಯನರು ಜರ್ಮನರಲ್ಲಿ ವಿಶೇಷ ನಷ್ಟಪಡಿಸಿ ಅವರು ಮುಂದರಿಯದ ಹಾಗೆ ಮಾಡಿರುವರು

ತಾ. ೨೨ನೇ ಜನವರಿ

ಪಶ್ಚಿಮ ರಣರಂಗದಲ್ಲಿ ಬದಲಾವಣೆಯಾಗಲಿಲ್ಲ ಯಾರ್ಮೂತಿನ ಮೇಲೆ ಹಾರಿದ ಜರ್ಮನರ ವಾಯುನಾವೆಗಳು ಕೆಲವು ಸಿಡಿಮದ್ದುಗಳನ್ನು ಹಾಕಿರುವದು ಇದರಿಂದ ಕಟ್ಟೋಣಗಳಿಗೆ ಹಾನಿಯಾಗಿರುವದಲ್ಲದೆ ಪ್ರಾಣಾಪಾಯವೂ ಸಂಭವಿಸಿರುವದು ರಾತ್ರಿ ೮॥ ಗಂಟೆಗೆ ವಾಯುನಾವೆಯು ಕಾಣಿಸಿಕೊಂಡಿತು ಆದರೆ ಅದು ಕಣ್ಣಿಗೆ ಕಾಣಲಿಲ್ಲ ಶಬ್ದ ಮಾತ್ರ ಕೇಳುತ್ತಿತ್ತು ೧೦ ನಿಮಿಷದೊಳಗೆ ೫ ಬೊಂಬುಗಳನ್ನು ಹಾಕಿತು ಒಬ್ಬ ಮನುಷ್ಯನ ತಲೆಯೇ ಹಾರಿಹೋಗಿರುವದು ಮೂರು ಜನರು ಕೊಲ್ಲಲ್ಪಟ್ಟರು ಕೆಲವು ಮನೆಗಳು ಕೆಡವಿ ಹೋದವು ಅನೇಕ ಕಿಡಿಕಿಗಳು ಒಡೆದವು ಶೆರಿಂಗ್ಹಾಮಿನ ಮೇಲೆ ೨ ಬೊಂಬುಗಳನ್ನು ಹಾಕಿತು ಆದರೆ ಹಾನಿ ಸಂಭವಿಸಲಿಲ್ಲ

ರುಶ್ಯನರು ಬಕೋವಿನದಲ್ಲಿ ಜಯ ಪ್ರದರಾಗುತ್ತಾ ಮುಂದರಿಯುತ್ತಲಿರುವರು ಡೊರ್ನವಾಟ್ರ ಎಂಬವಕ್ಕೆ ೭ ಮೈಲು ದೂರದಲ್ಲಿರುವ ಗ್ರಾಮಗಳನ್ನು ರುಶ್ಯನರು ಹಿಡಕೊಂಡಿರುವರು ರಾವದಲ್ಲಿದ್ದ ಜರ್ಮನರು ಎರಡಾವರ್ತಿ ಹಲ್ಲಾ ಮಾಡಲು ನೋಡಿದರೂ ಹಿಂದಕ್ಕಟ್ಟಲ್ಪಟ್ಟರು

ರುಶ್ಯನರು ಟ್ರಾನ್ಸ್ ಚೊರೊಕ್ ಪ್ರದೇಶದಿಂದ ತುರ್ಕರನ್ನು ಓಡಿಸಿ, ಸುಲ್ತಾನ್ ಸೆಲಿಮ್ ಪರ್ವತದಲ್ಲಿದ್ದ ಅವರ ಸೇನಾ ನೆಲೆಗಳನ್ನು ಸ್ವಾಧೀನ ಮಾಡಿಕೊಂಡು ವಿಶೇಷ ನಷ್ಟ ಪಡಿಸಿರುವರು

ತಾ. ೨೩ನೇ ಜನವರಿ.

ಫ್ಲೇಂಡರಿನಲ್ಲಿ ಬ್ರಿಟಿಷ ಯುದ್ಧ ನಾವೆಗಳು ಸಮುದ್ರದಿಂದ ಜರ್ಮನರ ನೆಲೆಗಳಿಗೆ ಗುಂಡು ಹಾರಿಸಿ, ಜರ್ಮನರು ಮರಿಯಕರ್ಕ ಎಂಬ ಸ್ಥಳದ ವರೆಗೆ ತಮ್ಮ ನೆಲೆಗಳನ್ನು ಬಿಟ್ಟು ಹೋಗುವ ಹಾಗೆ ಮಾಡಿರುವದು.

ಬ್ರಿಟಿಷರ ವಾಯುನಾವೆಗಳು ಒಸ್ಟೆಂಡಿನ ಮೇಲೆ ಸಿಡಿಮದ್ದನ್ನು ಹಾಕಿರುವವು. ರೈಲ್ವೆ ಸ್ಟೇಶನುಗಳಿಗೆ ಹಾನಿಯಾಗಿರುವದಲ್ಲದೆ ಕೆಲವು ಸೈನಿಕರು ಹತರಾದರು. ಆದರೆ ಪ್ರಜಾ ಜನರಲ್ಲಿ ಯಾರಿಗೂ ಹಾನಿಯಾಗಲಿಲ್ಲ ಎಂತ ಎಮ್ಸ್ಟರ್‌ಡಮಿನ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾಗಿದೆ ಬ್ರಿಟಿಷರ ಮೂರು ವಾಯುನಾವೆಗಳು ಜಬ್ರುಗೇಯ ಮೇಲೆ ಸಿಡಿಮದ್ದನ್ನು ಹಾಕಿರುವವು ಒಂದು ನಿರ್ವಾಹವಿಲ್ಲದೆ ಕೆಳಗಿಳಿಯಬೇಕಾಯಿತು ಬ್ರಿಟಿಷ ವಿಮಾನಗಾಮಿಗಳು ವಿಶೇಷ ಸಾಹಸವನ್ನು ತೋರಿಸಿದರು. ಜರ್ಮನರ ಒಂದು ವಾಯುನಾವೆಯು ಎಟೀಫನ್ಸ್ ಎಂಬ ಪಟ್ಟಣದ ಮೇಲೆ ಸಿಡಿಮದ್ದು ಹಾಕಿರುವದು. ಇದು ಇಬ್ಬರು ಸೈನಿಕರಿಗೆ ತಗಲಿರುವದು.

ರುಶ್ಯನರು ಪೋಲಾಂಡಿಗೆ ೩೫ ಮೈಲು ದೂರದಲ್ಲಿರುವ ಲಿಕ್ಕ ಎಂಬಲ್ಲಿಗೆ ತಲುಪಿರುವರೆಂತ ಜರ್ಮನ ಸರಕಾರದವರ ವಾರ್ತೆಯಿಂದ ತಿಳಿದು ಬರುತ್ತದೆ.

ತಾ. ೨೪ನೇ ಜನವರಿ.

ರಣರಂಗದಲ್ಲಿ ಗಾಳಿ ಮಳೆಯಿಂದ ಹಾಳಾಗಿ ಹೋದ ಸ್ಥಳಗಳನ್ನು ಮಿತ್ರರ ಕಾಲಾಳು ಸೇನಿಕರು ದುರುಸ್ತಿ ಮಾಡುತ್ತಲಿರುವರು ಲೊಂಬರ್ಟ್ಜೈಡ್ ಡಿಸ್ಟ್ರಿಕ್ಟಿನಲ್ಲಿ ಮಿತ್ರರು ೧೦೦ ಮೀಟರ್ ಮುಂದರಿಸಿರುವರು. ಎಪ್ರೆಸ್, ಅರ್ರಾಸ್, ರೋಯೆ, ಮತ್ತು ಸ್ವೊಸನ್ಸಿನಲ್ಲಿ ಮಿತ್ರರು ತೋಪುಗಳಿಂದ ಜರ್ಮನರನ್ನು ಹಿಂದಟ್ಟಿರುವರು ಆರ್ಗೋನ್ನೆಯಲ್ಲಿ ಜರ್ಮನರ ಮುಂದರಯೋಣವು ಪೂರ್ಣವಾಗಿ ತಡೆಯಲ್ಪಟ್ಟಿರುವದು ಮಿತ್ರರ ಕಾಲಾಳು ಸೈನಿಕರು ಸೈಂಟ್ ಹ್ಯುಬರ್ಟನಲ್ಲಿ ಶತ್ರುಗಳೊಡನೆ ಕಾದಾಡುತ್ತಿರುವರು, ಮಾಸ್ಯುಸಿನಲ್ಲಿಯೂ ಮಿತ್ರರು ಜಯಹೊಂದುತ್ತಲಿದ್ದಾರೆ.

ರಣರಂಗದಲ್ಲಿರುವ ಭಾರತೀಯ ಸೈನಿಕರಲ್ಲಿ ಈ ವರೆಗೆ ೨೧೨ ಮಂದಿಗೆ ವಿಷಮಜ್ವರವು ಸೊಂಕಿರುವದು ಈ ಪೈಕಿ ೨೨ ಮಂದಿ ಮೃತರಾದರು ಉಳಿದವರಿಗೆ ಡಾಕು ಹಾಕಿದ್ದರಿಂದ ಬದುಕಿರುವರು ಸೇನೆಯು ಆರೋಗ್ಯ ಸಂಬಂಧವಾದ ಏರ್ಪಾಡಿಗೆ ವಿಶೇಷ ನಿಗಾ ಕೊಡಲ್ಪಟ್ಟಿರುವದು

ಫ್ರೆಂಚರ ರಾಯಭಾರಿ ಎಮ್ ಮಿಲ್ಲರೆಂಡರವರು ಲಂಡನಿಗೆ ಹೋಗಿ ಜೋರ್ಜ ಚಕ್ರವರ್ತಿಯವರಿಗೆ ಭೇಟಿ ಕೊಟ್ಟದ್ದಲ್ಲದೆ ಸೇನಾ ಸಂಬಂಧವಾಗಿ ಕಿಚಿನರ್ ಪ್ರಭುಗಳವರೊಡನೆ ಪ್ರತ್ಯೇಕ ಆಲೋಚನೆ ನಡಿಸಿ ಫ್ರಾನ್ಸಿಗೆ ಹಿಂದೆರಳಿದರು

ಇಂಗ್ಲಿಷ್ ಕರಾವಳಿಗೆ ಬರುತ್ತಿದ್ದ ಜರ್ಮನರ ೪ ಯುದ್ಧ ನಾವೆಗಳನ್ನು ಬ್ರಿಟಿಷರ ಯುದ್ಧ ನಾವೆಗಳು ಕಂಡು ಅದನ್ನು ಹಿಂದಟ್ಟಿಕೊಂಡು ಹೋದವು ೯॥ ಗಂಟೆಗೆ ಬ್ರಿಟಿಷರ ನಾವೆಗಳಿಗೂ ಜರ್ಮನರ ನಾವೆಗಳಿಗೂ ಕದನವೆಸಗಿ ಜರ್ಮನರ ನಾವೆಗಳು ಓಡಿ ಹೋದವು ಜರ್ಮನರ "ಬ್ಲುಚೆರ್" ಎಂಬ ಯುದ್ಧ ನಾವೆಯನ್ನು ಬ್ರಿಟಿಷರು ಹಿಡಿದು ಮುಣಗಿಸಿದರು ಉಳಿದ ಯುದ್ಧ ನಾವೆಗಳು ತಪ್ಪಿಸಿಕೊಂಡು ಹೋದವು ಜರ್ಮನರ ಎರಡು ನಾವೆಗಳಿಗೆ ಹಾನಿಯಾಗಿರುವದು

ಜರ್ಮನರ ಜಲಾಂತರ್ಗಾಮಿ ನಾವೆಯಿಂದ ಬ್ರಿಟಿಷರ "ಡರ್ವಾಡ್" ಎಂಬ ವ್ಯಾಪಾರ ಹಡಗವು ಮುಣುಗಿಸಲ್ಪಟ್ಟಿತ. ಬ್ರಿಟಿಷರು ಜರ್ಮನರ ಒಂದು ವ್ಯಾಪಾರ ಹಡಗವನ್ನು ಮುಣುಗಿಸಿ ನಾವಿಕರನ್ನು ಸೆರೆಹಿಡಿದಿರುವರು.

ಸಮುದ್ರದಲ್ಲಿ ತೇಲಾಡುತ್ತಿದ್ದ ಜರ್ಮನರ ಜೆಪಲಿನ್ ನಾವೆಯೊಂದನ್ನು ಕಂಡಿರುವೆವೆಂತ ಡಚ್ಚರ ಮಿನು ಶಿಕಾರಿಯವರು ಹೇಳುವರು.

ಬ್ರಿಟಿಷರ ವಾಯುನಾವೆಯು ಜೀಬ್ರುಗೇಯ ಮೇಲೆ ೨೭ ಬೊಂಬುಗಳನ್ನು ಹಾಕಿರುವದು. ಅಲ್ಲಿದ್ದ ಜಲಾಂತರ್ಗಾಮಿ ನಾವೆಗಳಲ್ಲಿ ಒಂದಕ್ಕೆ ವಿಶೇಷ ಹಾನಿಯಾಗಿರುವದೆಂದೂ ಸೈನಿಕರಲ್ಲಿ ಅನೇಕರು ಪ್ರಾಣಾಪಾಯ ಹೊಂದಿರುವರೆಂದೂ ತಿಳಿದು ಬಂದದೆ. ಬ್ರಿಟಿಷರ ಕಮೇಂಡರ್ ಡೇವಿಸರು ಜೀಬ್ರುಗೇಗೆ ಹಲ್ಲಾ ಮಾಡುವ ಮೊದಲು ಜರ್ಮನರ ೭ ವಾಯುನಾವೆಗಳು ಅವರನ್ನು ಮುತ್ತಿದವು. ಡೇವಿಸರ ತೊಡೆಗೆ ಪೆಟ್ಟಾದರೂ ಅವರು ತಪ್ಪಿಸಿಕೊಂಡು ಹೋದರು.

ವಿಸ್ತುಲದಲ್ಲಿ ರುಶ್ಯನರಿಗೂ ಜರ್ಮನರಿಗೂ ಸಣ್ಣ ಸಣ್ಣ ಕದನಗಳು ನಡೆಯುತ್ತಲಿವೆ ಇತರ ರಣರಂಗಗಳು ಶಾಂತವಾಗಿರುವವು. ಆಸ್ಟ್ರಿಯನರ ಒಂದು ಸೇನೆಯು [illegible] ಹಲ್ಲಾ ಮಾಡಿ ಹಿಂದಕ್ಕಟ್ಟಲ್ಪಟ್ಟಿತು. ೨೦೦ ಆಸ್ಟ್ರಿಯ ಸೇನಿಕರು ರುಶ್ಯನರ ಕೈಗೆ ಬಿದ್ದಿರುವರು.

ರುಶ್ಯನರು ಈ ವರೆಗೆ ಶತ್ರುಗಳ [illegible] ಫಿರಂಗಿಗಳನ್ನೂ ೧೨೦ ಮೆಷಿನ್‌ಗನ್ ಎಂಬ ಫಿರಂಗಿಗಳನ್ನೂ [illegible] ಯುದ್ಧ ಸಾಮಾಗ್ರಿಗಳನ್ನು ಸಾಗಿಸುವ ಗಾಡಿಗಳನ್ನೂ [illegible] ತೋಪಿಗಳನ್ನೂ [illegible] ವಾಯುನಾವೆಗಳನ್ನೂ [illegible] ೫೦೦ ಆಫೀಸರರನ್ನೂ [illegible] ಸೆರೆ ಹಿಡಿದಿರುವರು.

ತಾ. ೨೬ನೇ ಜನವರಿ.

ಪಶ್ಚಿಮ ರಣರಂಗದಲ್ಲಿ ಮಿತ್ರರ ತೋಫುಸೇನೆಯು ಜರ್ಮನರೊಡನೆ ಕಾದಾಡುತ್ತಿರುವದು. ಇತರ ವಿಶೇಷ ಬದಲಾವಣೆಗಳಾಗಲಿಲ್ಲ.

ಡಚ್ಚ ಪ್ರಾಂತ್ಯದ ಮೇಲ್ಗಡೆಯಿಂದ ಜರ್ಮನ ವಾಯುನಾವೆಗಳು ಹಾರಿ ಹೋಗುವದು ಡಚ್ಚರ ತಟಸ್ಥಭಾವಕ್ಕೆ ಭಂಗವನ್ನುಂಟು ಮಾಡುವದಾಗಿದೆಂತ ಬೆರ್ಲಿನಿನ ಡಚ್ಚ ರಾಯಭಾರಿಯು ಜರ್ಮನರಿಗೆ ತಿಳಿಸಿರುವನು. ಜರ್ಮನರ ವಾಯುನಾವೆಯು ಡನ್‌ಕರ್ಕಿನ ಮೇಲೆ ೮ ಸಿಡಿಮದ್ದುಗಳನ್ನು ಬಿಸಾಡಿತು. ಇದರಿಂದ ೭ ಮಂದಿ ಮೃತಪಟ್ಟರು ೧೨ ಮಂದಿಗೆ ಅಪಾಯವಾಯಿತು ತುಂಬಾ ಸಾಮಾನುಗಳಿದ್ದ ಒಂದು ಹಂದರಕ್ಕೆ ಬೆಂಕಿ ತಾಗಿರುವದು ಬ್ರಿಟಿಷ ಮತ್ತು ಫ್ರೆಂಚ ವಾಯುನಾವೆಗಳು ಇದನ್ನು ಹಿಂದಟ್ಟಿ ಜರ್ಮನರ ಒಂದು ವಾಯುನಾವೆಯನ್ನು ಹಿಡಿದಿರುವರು

ತುರ್ಕಿ ಸೇನೆಯಲ್ಲಿ ದಂಗೆ ಉಂಟಾದುದರಿಂದ ೧೭ ಆಫೀಸರರನ್ನು ಗುಂಡು ಹೊಡೆದು ಕೊಂದರೆಂತ ಒಡೆಸ್ಸಕ್ಕೆ ವಾರ್ತೆ ಬಂದದೆ

ವಿಸ್ತುಲದ ಬಲಗಡೆಯಲ್ಲಿ ರಶಿಯನರಿಗೂ ಜರ್ಮನರಿಗೂ ಕದನ ನಡೆಯುತ್ತಿದೆ ಆದರೆ ವಿಶೇಷ ಕದನಗಳು ನಡೆಯಲಿಲ್ಲ

ರುಮೇನಿಯದವರು ತಮ್ಮ ಸೇನೆಯನ್ನು ಕೂಡಿಸುತ್ತಿರುವದರಿಂದ ಜರ್ಮನರು ಇವರ ಈ ಕೆಲಸವನ್ನು ವಿರೋಧಿಸಿರುವರು ಎಂತ ವಾರ್ತೆ ಇದೆ.

ಲೀಜಯಲ್ಲಿದ್ದ ಇಟಲಿ ರಾಯಭಾರಿಯನ್ನು ಜರ್ಮನರು ಕೈದು ಮಾಡಿರುವರೆಂದೂ ಈ ವಿಷಯ ಇಟಲಿ ಸರಕಾರದವರ ಜರ್ಮನರೊಡನೆ ಪತ್ರವ್ಯವಹಾರ ನಡಿಸಿರುವರೆಂದೂ ಸುದ್ದಿ ಇದೆ

ದಕ್ಷಿಣ ಆಫ್ರಿಕದ ದಂಗೆಗಾರರ ಮುಂದಾಳುಗಳಾದ ಕೆಂಪ್ ಮತ್ತು ಮೊರಿಟ್ಜನು ೧೨೦೦ ಸೇನಿಕರೊಡನೆ ಉಪ್ಪಿಂಗ್ಟನ್ ಎಂಬ ಪಟ್ಟಣದ ಮೇಲೆ ದಾಳಿ ಮಾಡಿದನು. ಆದರೆ ದಂಗೆಗಾರರಲ್ಲಿ ೧೨ ಮಂದಿ ಹತರಾದರು ೨೩ ಮಂದಿ ಘಾಯ ಒಡೆದರ ಯೂನ್ಯನ್ ಸೇನೆಯಲ್ಲಿ ೩ ಮಂದಿ ಹತರಾದರು ೨೨ ಮಂದಿ ಘಾಯ ಒದೆದರು

ವಿದೇಶ ವೃತ್ತಾಂತ.

ಟೋರ್ಪೆಡೋ ಎಂಬ ದೋಣಿಯನ್ನ ನಿರ್ಮಿಸುವದಕ್ಕೆ ಸುಮಾರು ೨೦೦೦ ಪವನು (ಅಂದರೆ ೩೦ಸಾವಿರ ರೂಪಾಯಿಗಳು) ಬೇಕಾಗುವವು.

೪ ದೊಡ್ಡ ಪಿರಂಗಿಗಳನ್ನು ಸಾಗಿಸಿಕೊಂಡು ಹೋಗಲು ಅವಕಾಶವುಳ್ಳ ಪ್ರತಿಯೊಂದು ಯುದ್ಧ ಹಡಗಿಗೂ ಡ್ರೆಡ್‌ನಾಟ್ ಎಂದು ಹೆಸರಿಟ್ಟಿರುವರು.

ಅನೇಕ ಮಂದಿ ಅಂಡರ್ ಗ್ರ್ಯಾಜ್ಯುವೇಟುಗಳು ಯುದ್ಧ ಕಾರ್ಯದಲ್ಲಿ ಪ್ರವೃತ್ತರಾದುದರಿಂದ ಕೇಂಬ್ರಿಡ್ಜ್ ವಿಶ್ವವಿದ್ಯಾ ಕಲಾಶಾಲೆಯ ೧೫೦೦ ಕೊಟಡಿಗಳು ಖಾಲಿಯಾಗಿರುವವೆಂದು ತಿಳಿದು ಬರುತ್ತದೆ.

ಬರ್ಲಿನ್ ಪಟ್ಟಣದ ಮುನ್ಸಿಪಾಲಿಟಿಯವರು ಅಲ್ಲಿನ ಬೀದಿಗಳ ಪೂರ್ವದ ಹೆಸರನ್ನು ಬಿಟ್ಟು ಈಗಣ ಯುದ್ಧದಲ್ಲಿ ಶಕ್ತಿ ಸಾಹಸಗಳನ್ನು ತೋರಿಸಿದ ಜರ್ಮನ್ ಜನರಲುಗಳ ಹೆಸರನ್ನು ಇಡುತ್ತಿರುವರು.

ಕೀಲ್ ಕಾಲಿವೆಯ ಅಂಖಿತನಾಮವು ಕೈಸರ್ ವಿಲ್ ಹೆಲ್ಮ್ ಕಾಲಿವೆ ಎಂಬದಾಗಿರುವದು. ಇದಕ್ಕೆ ಪ್ರಥಮತಾ ೭,೮೦೦,೦೦೦ ಪವನುಗಳ ಖರ್ಚು ಮುಟ್ಟಿರುವದು. ನಂತರ ಸರಿಯಾಗಿ ಕಟ್ಟಿಸುವದಕ್ಕೆ ೧೦,೦೦೦,೦೦೦ ಪವನುಗಳ ಖರ್ಚು ತಗಲಿರುವದು. ಅದು ೩೯ಅಡಿ ಆಳವಿತ್ತು. ಈಗ ಬಹಳ ಅಗಲ ಮತ್ತು ಆಳವಾಗಿ ಮಾಡಲ್ಪಟ್ಟು ಅತಿ ದೊಡ್ಡ ಡ್ರೆಡ್‌ನೋಟ್ ಹಡಗವು [illegible] ಹೋಗಬಲು ದಾಗಿದೆ.

ಬ್ರಿಟಿಷರ ನೌಕಾಸೇನೆಯಲ್ಲಿ ಪ್ರತಿಯೊಬ್ಬ ನಾವಿಕನಿಗೂ ವರ್ಷ ೧ಕ್ಕೆ ೩೧ ಪೌಂಡು ೧೮ ಶಿಲ್ಲಿಂಗು ಮತ್ತು ೯ ಪೆನ್ನಿಗಳ ಸಂಬಳವಿರುವದು. ಇದರಲ್ಲಿ ನೌಕಾಸೇನಾವಿನ್ಯಾಸ ಕ್ರಮವನ್ನು ಬೋಧಿಸುವ ವೆಚ್ಚಕ್ಕಾಗಿ ವರ್ಷ ೧ಕ್ಕೆ ೫ ಪವನುಗಳು ಕಡಿಮೆ ಮಾಡಲಾಗುವದು. ಈ ನೌಕಾ ಸೇನೆಯಲ್ಲಿ ಆಕ್ಟಿಂಗ್ ಸಬ್ ಲೆಪ್ಟನೆಂಟನಿಗೆ ಮೇಲ್ಕಂಡ ಹಣಕ್ಕೆ ಎರಡಷ್ಟು ಸಂಬಳವಿದೆ. ಖಾಯಂ ಸಬ್ ಲೆಪ್ಟನೆಂಟನಿಗೆ ದಿನ ೧ಕ್ಕೆ ೫ ಶಿಲಿಂಗುಗಳು ದೊರೆಯುವದು. ಒಬ್ಬ ಲೆಪ್ಟನೆಂಟನ ಸಂಬಳವು ದಿನ ೧ಕ್ಕೆ ೧೦ಶಿಲಿಂಗುಗಳಾಗುವುದು

ರಣರಂಗದಲ್ಲಿರುವ ರಷ್ಯಾದೇಶದ ಸಿಪಾಯಿಯೊಬ್ಬನಿಗೆ ಒಂದು ಗುಂಡು ಹಣೆಯಲ್ಲಿ ಹೊಕ್ಕು ತಲೆಯ ಹಿಂಭಾಗದಿಂದ ಹೊರಗೆ ಬಂದಿರುವದಾಗಿಯೂ ಇದರಿಂದ ಅವನಿಗೆ ಜ್ಞಾನವು ಕೂಡಾ ತಪ್ಪದೆ ವೈದ್ಯಶಾಲೆಗೆ ನಡೆದು ಬರಲು ಶಕ್ತಿಯಿದ್ದಂತೆಯೂ ಈ ಗುಂಡಿನೇಟಿನಿಂದ ಅವನಿಗೆ ಕಾಣುವ ಎಲ್ಲಾ ಪದಾರ್ಥಗಳೂ ಎಲೆಯ ಹಸುರು ಬಣ್ಣವಾಗಿರುತ್ತದೆಂತಲೂ ಈ ವಿಷಯವು ರುಷ್ಯಾ ವೈದ್ಯರೆಲ್ಲರನ್ನು ವಿಸ್ಮಯಪಡಿಸುತ್ತಲಿದೆಂದೂ ತಿಳಿದು ಬಂದಿದೆ

ಪಿರಂಗಿಗಳು ಎಷ್ಟೆಷ್ಟು ದೊಡ್ಡವಾಗಿರುವವೋ ಅವುಗಳು ಹಾರುವ ವೇಗವೂ ಅಷ್ಟಷ್ಟು ಕಡಿಮೆಯಾಗಿರುವದು. ೧೨ ಅಂಗುಲ ಬಾಯಿಯ ಫಿರಂಗಿಯು ನಿಮಿಷ ೧ಕ್ಕೆ ೨೫ ಗುಂಡುಗಳನ್ನು ಹಾರಿಸುವದು ೧೫ ಅಂಗುಲ ಬಾಯಿಯ ಫಿರಂಗಿಯು ನಿಮಿಷ ೧ಕ್ಕೆ ೧-೨ ಗುಂಡುಗಳನ್ನು ಮಾತ್ರ ಹಾರಿಸುವದು.

"ಸಬ್‌ಮೆರಿನ್" ಎಂಬ ಜಲಂತರ್ಗಾಮಿ ಹಡಗದಲ್ಲಿ "ಪೆರಿಸ್‌ಕೋಪ್" ಎಂಬ ಕನ್ನಡಿಯ ಯಂತ್ರ ವಿಶೇಷವು ಇಡಲ್ಪಟ್ಟಿರುವದು ಈ ಹಡಗು ಜಲಮಧ್ಯದಲ್ಲಿ ಸಂಚರಿಸುತ್ತಿರುವಾಗ ಮೇಲ್ಭಾಗದಲ್ಲಿ ನಡೆಯುತ್ತಿರುವ ಕೃತ್ಯಗಳನ್ನು ತಿಳಿದುಕೊಂಡು ಸುಖವಾಗಿ ಮುಂದೆ ಮುಂದೆ ನುಗ್ಗಿ ಹೋಗುವುದಕ್ಕೆ ಈ ಯಂತ್ರ ವಿಶೇಷವು ಸಹಾಯಕಾರಿಯಾಗುವುದು ಮೇಲ್ಭಾಗದಲ್ಲಿ ನಡೆಯುವ ಪ್ರತಿ ಒಂದು ವಿಷಯವೂ ಈ ಕನ್ನಡಿಗಳಲ್ಲಿ ಪ್ರತಿ ಬಿಂಬಿತವಾಗಿ ಇದಿರಿಗೆ ನಡೆವಂತೆಯೆ ಕಾಣುವದು

ಅಮೇರಿಕದಿಂದ ಇಟಲಿಗೆ ತಾಂಬ್ರವನ್ನು ಇಟಲಿ ಹಡಗಗಳಲ್ಲಿ ಪ್ರಸಿದ್ಧ ಕಂಪೆನಿಗಳಿಗೆ ಕಳುಹಿಸಿದರೆ ತಮ್ಮ ಅಡ್ಡಿ ಇಲ್ಲವೆಂದು ಇಂಗ್ಲಾಂಡದವರು ತಿಳಿಸಿದ್ದಾರೆಂದು ಪ್ರಸಿದ್ಧವಾಗಿದೆ. ಸ್ವೀಡನ್ ನಾರ್ವೆ ದೇಶಗಳಿಗೂ ಇದೇ ರೀತಿ ತಿಳಿಸಿದ್ದಾರೆಂದು ತಿಳಿದು ಬಂದದೆ

ಉತ್ತರ ಹಿಂದೂಸ್ಥಾನ

ಅಲಿಪುರದಲ್ಲಿ ಒಂದು ಕೊಲೆಯೂ ಅದರೊಡನೆ ಸತಿಸಹಗಮನವೂ ನಡೆದಿರುವದೆಂಬ ವಾರ್ತೆ ಬಂದಿರುವದು. ಕಳೆದ ಶುಕ್ರವಾರ ಸಾಯಂಕಾಲ ಮಹಿತ ಮತ್ತು ಅವನೀಶ ಎಂಬ ಹೆಸರಿನ ಇಬ್ಬರು ದಾಯಾದ್ಯರೊಳಗೆ ವಿವಾದಹುಟ್ಟಿ, ಮಧ್ಯೆ ಅವನೀಶನು ಒಂದು ಇಟ್ಟಿಗೆಯ ತುಂಡಿನಿಂದ ಮಹಿತನಿಗೆ ಹೊಡದ್ದರಿಂದ ಮಹಿತನು ಸತ್ತನು ಈ ಕೊಲೆಯನ್ನು ನೋಡಿದ ಮೃತನ ಯೌವ್ವನ ಪ್ರಾಯದ ಹೆಂಡತಿಯು ಮನೆಗೆ ಹೋಗಿ ಕೋಣೆಯ ಚಿಲುಕುಹಾಕಿ ಪತಿಯ ಒಂದು ಕಾಲಿನ ಜೋಡನ್ನು ಕುತ್ತಿಗೆಗೆ ಕಟ್ಟಿಕೊಂಡು, ವಸ್ತ್ರಕ್ಕೆ ಬೆಂಕಿಟ್ಟುಕೊಂಡಳು. ಕೋಣೆಯಿಂದ ಬೆಂಕಿ ಜ್ವಾಲೆಯನ್ನು ನೆರೆಹೊರೆಯವರು ಕಂಡು ಬಾಗಲು ಒಡೆದು ಒಳಹೋದಾಗ ಇವಳು ಸುಟ್ಟುಹೋಗಿದ್ದಳು

ಮೈಸರಾಯ ಪ್ರಭುಗಳವರ ಮಗ ಮಾನ್ಯ ಎ. ಎಮ್. ಹಾರ್ಡಿಂಜರವರು ತಾ ೨೩ರಲ್ಲಿ ಸೀಮೆಯಿಂದ ಮುಂಬಾಯಿಗೆ ಬಂದಿಳಿದರು.

ಬರೋಡೆಯಲ್ಲಿ ಆರೋಗ್ಯ ಸಂಬಂಧವಾದ ವಸ್ತುಪ್ರದರ್ಶನವನ್ನು ನಡಿಸುವ ಏರ್ಪಾಡು ಮಾಡಲ್ಪಟ್ಟಿರುವದು. ಜನಸಾಮಾನ್ಯರಲ್ಲಿ ಆರೋಗ್ಯದ ಮೂಲಸೂತ್ರಗಳನ್ನುಂಟುಮಾಡುವರೆ ಪ್ರಯತ್ನಿಸುವದೇ ಈ ವಸ್ತುಪ್ರದರ್ಶನದ ಉದ್ದೇಶವಾಗಿರುವದು.

ರಂಗೂನಿಗೆ ಬಂದಿದ್ದ "ಡೊವೆ" ಎಂಬ ಹಡಗದ ಕಲಾಸಿಗಳು ಕದ್ದು ಬಚ್ಚಿಟ್ಟ ೫೦೦೦ ಸಿಗರೇಟುಗಳೂ "ಗ್ಲೆಂಗ್ಲೆ" ಎಂಬ ಹಡಗದಲ್ಲಿ ೧೦೦,೦೦೦ ಸಿಗರೇಟುಗಳೂ, ಚೀನದ ಹೊಗೆಸೊಪ್ಪೂ ದೊರಕಿರುವದು.

ಕಲ್ಕತ್ತೆಯ ಪೋಲಿಸ್ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ಹಲೀಮಬೀಬಿ ಎಂಬ ಸ್ತ್ರೀಯೆನ್ನು ಅವಳ ಗಂಡನೂ ಗಂಡನ ಹೆತ್ತವರೂ ಮನೆಯಿಂದ ಹೊರಗೆ ಹಾಕಿದ್ದರೆಂಟ ಮೊಕದ್ದಮೆಯು ಬಂದಿರುವದು. ಹಲೀಮಬೀಬಿಯು ನರ್ತನದಲ್ಲಿ ವಿಶೇಷ ಕೀರ್ತಿಯನ್ನು ಪಡೆದು ಬಹಳ ಹಣವನ್ನೂ ಆಭರಣವನ್ನೂ ಸಂಪಾದಿಸಿದ್ದಳು. ಇದನ್ನು ತಿಳಿದ ಅಮೀರ ಹುಸೇನ್ ಯಾನೆ ಅಬ್ದುಲ ಬಾಬರ್ ಎಂಬವನು ತನ್ನ ಹೆತ್ತವರ ಸಹಾಯದಿಂದ ಈ ಹುಡುಗಿಯ ಬಲೆಯನ್ನೊಡ್ಡಿ, ತನ್ನನ್ನು ನವಾಬನೆಂದು ಹೇಳಿಸಿಕೊಂಡು ಆ ಬೀಬಿಯನ್ನು ಮದುವೆಯಾದನು. ಕೆಲವು ಸಮಯದ ವರೆಗೆ ಇವರಿಬ್ಬರೂ ಸಂತೋಷದಿಂದ ಕಾಲಕ್ಷೇಪ ಮಾಡಿದರು. ನಂತರ ಹುಡುಗಿಗೆ ತನ್ನ ಗಂಡನು ನವಾಬನಲ್ಲವೆಂದೂ ಚಿಕ್ಕಾಸು [illegible] ಕೇವಲ ಬಡವನೆಂದೂ ಗೊತ್ತಾಯಿತು. ಆದರೆ ತಪ್ಪಿಸಿಕೊಳ್ಳಲು ಉಪಾಯವಿಲ್ಲದ್ದರಿಂದ ಹುಡುಗಿಯು ಗಂಡನನ್ನೂ ಅವನ ಹೆತ್ತವರನ್ನೂ ತನ್ನ ಸ್ವಂತ ಖರ್ಚಿನಿಂದ ಸಾಕುತ್ತಿದ್ದಳು. ಆದರೆ ಇವರು ಅಷ್ಟರಲ್ಲಿಯೇ ತೃಪ್ತಿಹೊಂದದೆ ಅವಳ ಪೂರಾ ಆಸ್ತಿಯನ್ನು ಸ್ವಾಧೀನ ಮಾಡಿಕೊಳ್ಳಬೇಕೆಂತ ನಿಶ್ಚಯಿಸಿ ಜರ್ಮನರು ಕಲ್ಕತ್ತೆಗೆ ಹಲ್ಲಾ ಮಾಡಲಿಕ್ಕಿದ್ದಾರೆಂದೂ ಅವರು ಹಲ್ಲಾ ಮಾಡಿದರೆ ಹುಡುಗಿಯ ಆಸ್ತಿಯೆಲ್ಲಾ ಹೋಗುವದೆಂದೂ ಅವಳಿಗೆ ಹೆದರಿಸಿ, ಆಸ್ತಿಯನ್ನು ಅಮರತೋಳದಲ್ಲಿರುವ ಒಂದು ಮನೆಯಲ್ಲಿಡುವದುತ್ತಮವೆಂದು ಆಕೆಗೆ ಬೋಧಿಸಿದರಿಂದ ಅವಳು ಒಪ್ಪಿಕೊಂಡಳು ಹುಡುಗಿಯ ಚಿನ್ನಾಭರಣಗಳು ಗಂಡನ ಮತ್ತು ಅವನ ಹೆತ್ತವರ ಸ್ವಾಧೀನ ಬಂದೊಡನೆ ಅವರು ಅವಳನ್ನು ಮನೆಯಿಂದ ಅಟ್ಟಿಬಿಟ್ಟಿರುವರೆಂಬುದೇ ವಾದಿ ಕಡೆಯ ವಾದವಾಗಿರುವದು.

ಡಾಕ್ಟರ್ ಸರ್ವಾಧಿಕಾರಿ ಮತ್ತು ಮಿ। ಭೂಪೇಂದ್ರನಾಥ ಬಾಸುರವರು ಸ್ಥಾಪಿಸಿದ ಬಂಗಾಳ ವಲಂಟಿಯರ್ ಫೀಲ್ಡ್ ಎಂಬ್ಯುಲೆನ್ಸ್ ಕೋರಿಗೆ ಒಂದೂವರೆ ಲಕ್ಷ ರೂಪಾಯಿ ಕೂಡಿರುವದು ೭೦೦ ಮಂದಿ ವಲಂಟಿಯರರ ಪೈಕಿ ೨೦೦ ಮಂದಿ ಮೊದಲನೇ ಸೇನಾಂಗವಾಗಿ ಆರಿಸಲ್ಪಟ್ಟಿರುವರು.

ತಾ. ೧೮ನೇ ರಾತ್ರಿ ೧೧ ಗಂಟೆಗೆ ಶಿಮ್ಲಾಗಿನಲ್ಲಿ ಭೂಕಂಪವಾಗಿರುವದು ಕೆಲವು ಕಟ್ಟೋಣಗಳಿಗೆ ತುಸ ಹಾನಿಯಾಗಿದೆ.

ಮುಂಬಾಯಿಯಲ್ಲಿ ಗೋಮಾಳಗಳ ಒಂದು ಸಂಸ್ಥೆಯನ್ನು ಸ್ಥಾಪಿಸುವ ಆಲೋಚನೆಯು ಮುಂಬಾಯಿ ಸರಕಾರದವರಿಗಿರುವದು

ಲೇಡಿಹಾರ್ಡಿಂಜರವರು ೪,೮೦೮ ಪವನುಗಳ ಮೌಲ್ಯದ ಆಸ್ತಿಯನ್ನು ಇತ್ಯರ್ಥ ಮಾಡದನೇ ಬಿಟ್ಟಿರುವಳು.

ಕಳೆದ ನವಂಬರ ತಿಂಗಳಲ್ಲಿ ಕಿಂಗ್‌ಜೋರ್ಜ್ ಓನ್ ಬಲೂಚಿಸ್ ಸೇನೆಯ ಮೇಜರ್ ಎಂಡರ್ಸನರವರು ತನ್ನ ಸೇನೆಯ ಸಹಿತ ರಣರಂಗಕ್ಕೆ ಹೊರಡಲು ಮುಂಬಾಯಿಯಲ್ಲಿ ಹಡಗ ಹತ್ತುತ್ತಿರುವಾಗ ಅದೇ ಸೇನೆಯ ಒಬ್ಬ ಸೈನಿಕನು ಮೆಜರ್ ಅಂಡರ್ಸನರನ್ನು ಕೊಂದುಬಿಟ್ಟದ್ದು ವಾಚಕರಿಗೆ ಜ್ಞಾಪಕವಿದ್ದಿರಬಹುದು. ಈ ಸಂದರ್ಭದಲ್ಲಿ ಸದರಿ ಸೇನೆಯ ಸೈನಿಕರಲ್ಲಿ ಅನೇಕರ ಮೇಲೆ ಅನುಮಾನ ಹುಟ್ಟಿದ್ದರಿಂದ ತಕ್ಕ ತನಕಿ ನಡಿಸುವರೆ ಈ ಸೇನೆಯನ್ನು ರಂಗೂನಿನಲ್ಲಿ ಇಳಿಸಿ, ತನಕಿ ನಡಿಸಿ, ಈ ಕೃತ್ಯದಲ್ಲಿ ಸೇರಿದ್ದ ಸೇನಿಕರಿಗೆ ತಕ್ಕ ಶಿಕ್ಷೆ ಕೊಡಲಾಯಿತು. ಉಳಿದ ಸೇನಿಕರು ತಾ. ೨೪ರಲ್ಲು ರಣರಂಗಕ್ಕೆ ಹೊರಡುವದೆಂತ ನಿಶ್ಚಯವಾಗಿತ್ತು ಆದರೆ ತಾ. ೨೦ರಲ್ಲು ಕೆಲವು ಪಠಾನ ಸಿಪಾಯಿರ ಮೇಲೆ ಅನುಮಾನ ಕಂಡದ್ದರಿಂದ ಅವರನ್ನು ಕೈದುಮಾಡಿ, ಉಳಿದ ಸೇನಿಕರಿಗೆ ರಣರಂಗಕ್ಕೆ ಹೊರಡಲು ಅಪ್ಪಣೆಯಾಗಿರುವದು.

ಕಲ್ಕತ್ತೆಯ ಹೈಕೋರ್ಟ ಜಸ್ಟಿಸರಾಗಿದ್ದ ಸರ್ ಹರ್ಬರ್ಟ್ ಕನ್ಸ್ಟಫರವರು ತಾ. ೨೩ರಲ್ಲು ದೈವಾಧೀನರಾದರು ಇವರ ಶವಸಂಸ್ಕಾರವು ಅಂದೇ ಸಾಯಂಕಾಲ ಬಹು ವಿಜೃಂಭಣೆಯಿಂದ ನಡೆಯಿತು. ಚೀಫ್ ಜಸ್ಟಿಸರವರೂ, ಇತರ ಜಸ್ಟಿಸರೂ ಕಲ್ಕತ್ತೆಯ ಮಹನೀಯರಲ್ಲಿ ಅನೇಕರೂ, ಸರ್. ಫ್ರೆಡರಿಕ್ ಹಲಿಡೇರವರೂ ಹಾಜರಿದ್ದರು.

ಕಲ್ಲಿಕೋಟೆಗೆ ೧೫ ಮೈಲು ದೂರದಲ್ಲಿರುವ ಸಿಂಧಿಪುರ ಗ್ರಾಮದ ಬಾಬು ಕೃಷ್ಣಾಡೋನ್ ರಾಕೆಟ್ ಎಂಬವರ ಮನೆಗೆ ಸುಮಾರು ೧೦೦ ಮಂದಿ ದರೋಡೆಕಾರರು ನುಗ್ಗಿ ಸುಮಾರು ೨೦ ಸಾವಿರ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳನ್ನು ಸುಲಿಗೆ ಮಾಡಿಕೊಂಡು ಹೋಗಿರುವರು. ಗ್ರಾಮಸ್ಥರು ಕೂಡಿ ದರೋಡೆಕಾರರನ್ನು ಹಿಡಿಯ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ.

ವೈಸರಾಯ ಪ್ರಭುಗಳವರು ತಾ. ೨೩ನೇ ಶನಿವಾರ ಮುಂಬಾಯಿಗೆ ಚಿತ್ತೈಸಿದರು. ಮುಂಬಾಯಿ ಗವರ್ನರ ಪ್ರಭುಗಳವರು ಪರಿವಾರ ಸಹಿತ ವೈಸರಾಯ ಪ್ರಭುಗಳವರನ್ನು ಸ್ವಾಗತ ಮಾಡಿಕೊಂಡು ಸರಕಾರ ಮಂದಿರಕ್ಕೆ ಹೋದರು. ಅನಂತರ ವೈಸರಾಯ ಪ್ರಭುಗಳವರೂ, ಮುಂಬಾಯಿ ಗವರ್ನರರೂ, ಅವರ ಪತ್ನಿಯವರೂ ಲೇಡಿ ಹಾರ್ಡಿಂಜಿಯರ ಆಸ್ಪತ್ರೆಯನ್ನು ಸಂದರ್ಶಿಸಿ, ಗಾಯ ಒಡೆದಿದ್ದ ಕೆಲವು ಸೇನಿಕರೊಡನೆ ಸಂಭಾಷಿಸಿದರು. ಸಾಯಂಕಾಲ ಶೀಮೆಯಿಂದ ಬಂದ ಮಗನ ಸಹಿತ ಲೇಡಿ ಹಾರ್ಡಿಂಜರ ಆಸ್ಪತ್ರೆಯನ್ನು ಸಂದರ್ಶಿಸಿದರು. ವೈಸರಾಯ ಪ್ರಭುಗಳವರು ವಾರ್ಧ್ಯಕ್ಕೆ ಹೋಗಿ ಮಿ॥ ಧಾದಬಾಯಿ ನೌರೋಜಿಯವರಿಗೂ ಭೇಟಿಕೊಡುವರು. ಹೈದರಾಬಾದ್ ನೈಜಾಮರವರ ಭೇಟಿಯನ್ನು ತಕ್ಕೊಂಡು ಮಿ॥ ನೌರೋಜಿಯವರ ವಿದ್ಯುಚ್ಛಕ್ತಿಯಿಂದ ಕೆಲಸ ನಡಿಸುವ ಕಾರಖಾನೆಯನ್ನು ಸಂದರ್ಶಿಸಿರುವರು.

ದಕ್ಷಿಣ ಹಿಂದೂಸ್ಥಾನ.

ಇದೇ ತಾ. ೨೨ರಲ್ಲು ಕೊಚ್ಚಿಯ ಹೊಸ ರಾಜರವರ ಪಟ್ಟಾಭಿಷೇಕವು ನಡೆಯಿತು. ಗಂಟೆ ೪-೨೦ಕ್ಕೆ ರಾಜರವರು ಅರಮನೆಯ ಸಭಾಸದನಕ್ಕೆ ಬರುತ್ತಲೇ ದಿವಾನರವರೂ ಚೀಫ್ ಜಡ್ಜರವರೂ ಅವರನ್ನು ಸ್ವಾಗತ ಮಾಡಿಕೊಂಡರು. ದಿವಾನರವರು ರಾಜರನ್ನು ಆಸನಕ್ಕೆ ಕರಕೊಂಡು ಹೋದರು. ರಾಜರವರು ಕೋಣೆಯೊಳಗೆ ಪ್ರವೇಶಿಸುತ್ತಲೇ ಅಲ್ಲಿ ಕೂಡಿದ್ದ ಸ್ತ್ರೀಪುರುಷರೆಲ್ಲರೂ ಎದ್ದು ನಿಂತರು. ರಾಜರವರು ಆಸೀನರಾಗುತ್ತಲೇ ಸಭಿಕರೂ ತಂತಮ್ಮ ಆಸನಗಳಲ್ಲಿ ಕುಳಿತರು. ಸಭಾಸದನವು ಸಣ್ಣದಾದುದರಿಂದ ಕೆಲವು ಮಂದಿಗೆ ಮಾತ್ರವೇ ಆಮಂತ್ರಣವಿತ್ತು. ಪ್ರಜಾ ಮುಂದಾಳುಗಳೂ, ಕೋಲ್ಲಂಗೋಡಿನ ವಾಸುದೇವ ರಾಜರವರೂ ಕವಾಲಪರ ನಾಯರರೇ ಮೊದಲಾದ ದೊಡ್ಡ ದೊಡ್ಡ ಮನುಷ್ಯರೂ ಬಂದಿದ್ದರು. ಆಸನದ ಎಡಬಲಪಾರ್ಶ್ವದಲ್ಲಿ ರಾಜಕುಟುಂಬದವರೂ, ಅತಿಥಿಗಳೂ ಕುಳಿತರು. ೪-೩೦ ಗಂಟೆಗೆ ಬಲ್ಗಾಟಿಯಿಂದ ರೆಸಿಡೆಂಟರು ಬಂದೊಡನೆ ೧೩ ಫಿರಂಗಿಗಳು ಹಾರಿಸೋಣಾದವು. ಎಲಿಯಾಯ ರಾಜರವರೂ, ದಿವಾನರವರೂ ರೆಸಿಡೆಂಟರನ್ನು ಸ್ವಾಗತ ಮಾಡಿಕೊಂಡು ರಾಜರವರ ಬಲಪಾರ್ಶ್ವದಲ್ಲಿದ್ದ ಆಸನದಲ್ಲಿ ಕೂಂಡ್ರಿಸಿದರು. ರೆಸಿಡೆಂಟರ ಬಲಕಡೆಯಲ್ಲಿ ಅಸಿಸ್ಟಂಟ ರೆಸಿಡೆಂಟರೂ, ಎಡಕಡೆಯಲ್ಲಿ ಎಲಿಯಾ ರಾಜರವರೂ ಕುಳಿತರು. ರಾಜರವರೂ ರೆಸಿಡೆಂಟರೂ ಸಭಾಸದನದ ಒಳಗೆ ಪ್ರವೇಶಿಸುತ್ತಲೇ ಸಭಿಕರೆಲ್ಲರೂ ಎದ್ದು ನಿಂತರು. ರೆಸಿಡೆಂಟರು ರಾಜರನ್ನು ಸಿಂಹಾಸನದಲ್ಲಿ ಕೂಂಡ್ರಿಸಿದ ಕೂಡಲೇ ಸರ್ವರೂ ಆಸೀನರಾದರು. ಅನಂತರ ರೆಸಿಡೆಂಟರು ರಾಜಶಾಸನವನ್ನು ಓದಿದರು. ಆಗ ಎಲ್ಲರೂ ಎದ್ದು ನಿಂತಿದ್ದರು. ಓದಿ ಆದನಂತರ ಬಹುಮಾನಾರ್ಥವಾಗಿ ೧೭ ಫಿರಂಗಿಗಳು ಹಾರಿಸೋಣಾದವು. ಬೇಂಡಿನವರು ಕೊಚ್ಚಿಯ ರಾಜಗೀತವನ್ನು ಹಾಡಿದರು. ಅನಂತರ ರಾಜರವರು ರೆಸಿಡೆಂಟರೊಡನೆ ಪ್ರಜಾ ಜನರಿಗೆ ರಾಜಶಾಸನವನ್ನು ಓದಿದರು. ಪುನಃ ೧೭ ಫಿರಂಗಿಗಳು ಹಾರಿಸೋಣಾದವು. ಅನಂತರ ರೆಸಿಡೆಂಟರು ಬಾಲ್ಗೋಟಿಗೆ ಹಿಂತೆರಳಿದರು. ಪುನಃ ೧೩ ಫಿರಂಗಿಗಳು ಹಾರಿಸೋಣಾದವು. ಬಳಿಕ ರಾಜರವರು ಸಭಾಸದನದಿಂದ ಹೊರಟರು. ವೈಸರಾಯ ಪ್ರಭುಗಳವರು ರಾಜರವರಿಗೆ ತಂತೀ ಕಳುಹಿಸಿ ತನ್ನ ಸಂತೋಷವನ್ನು ಪ್ರದರ್ಶಿಸಿದರು. ಸಾಯಂಕಾಲ ಪ್ರಜಾಜನರ ಪರವಾಗಿ ರಾಜರವರಿಗೆ ವಿಜ್ಞಾಪನಾ ಪತ್ರಿಕೆ ಒಪ್ಪಿಸಲಾಯಿತು. ರಾಜರವರು ಕಾಲೋಚಿತ ಉತ್ತರವನ್ನು ಕೊಟ್ಟರು. ರಾತ್ರಿಗೆ ಪಟ್ಟಣದಲ್ಲಿ ದೀಪೋತ್ಸವವು ನಡೆಯಿತು.

ದಕ್ಷಿಣ ಕನ್ನಡ.

ಪರಸ್ಪರ ಸಹಾಯ.

ದಕ್ಷಿಣಕನ್ನಡಾ ಸೆಂಟ್ರಲ್ ಕೊ-ಆಪರೇಟಿವ್-ಬೇಂಕಿನ A ಡಿವಿಜನಿನ ಸುಪರ್‌ವೈಜರರ

ಫೇಬ್ರುವರಿ ತಿಂಗಳಿನ ಸರ್ಕೀಟಿನ ಪಟ್ಟಿ.

ತಾರೀಕು		
2.	ನರಿಮೊಗರು ಪರಸ್ಪರ ಸಹಾಯಕ ಸಂಘ	.
3.	ಆರ್ಯಾಪು ,,	.
5.	ಕಬಕ ,,	.
6. 7. 8.	ಪುತ್ತೂರು ,,	.
9.	ಪಡ್ನೂರು ,,	
10.	ಕುಳ ,,	.
11.	ವಿಟ್ಲ ,,	
12	ವಿಟ್ಲದಿಂದ ಪುಂಜಾಲ ಕಟ್ಟೆಗೆ	.
13	ಪುಂಜಾಲಕಟ್ಟೆ ಪರಸ್ಪರ ಸಹಾಯಕ ಸಂಘ.	
14.	ಉಜ್ರೆ ,,	.
15.	ಬೆಳತಂಗಡಿ ,,	.
16.	ಸವಣಾಲ ,,	.
17.	ಗುರುವಯ್ಯನ ಕೆರೆ ,,	.
18.	ಕಳಿಯ ,,	.
19.	ಉಪ್ಪಿನಂಗಡಿ ,,	.
20.	ಕೋಡಿಂಬಾಡಿ ,,	
22	ಬೆಳ್ಳಾರೆ ಪರಸ್ಪರ ಸಹಾಯಕ ಸಂಘ	.
23.	ಸುಳ್ಯ ,,	.
24. 25.	ಮಾಡ್ನೂರು ,,	.
26	ಪಂಜ ,,	.

[ಬಂಟವಾಳದ ಸಂಘವೂ A ಡಿವಿಜನಿನಲ್ಲಿ ಕೂಡಿದ್ದಾಗಿದ್ದರೂ ಪ್ರಕೃತ ಕೆಲವು ಸಮಯಕ್ಕೆ ಅದನ್ನು ನೋಡಿಕೊಳ್ಳುವದು ಅಗತ್ಯವಿಲ್ಲವೆಂದು ಬೇಂಕಿನ ಕಾರ್ಯನಿರ್ವಾಹಕ ಸಭೆಯವರು ನಿರ್ಣಯಿಸಿದ್ದಾರೆ.]

ದಕ್ಷಿಣಕನ್ನಡಾ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್ ಲಿಮಿಟೆಡ್ ಪುತ್ತೂರು ದಕ್ಷಿಣಕನ್ನಡಾ. ತಾರೀಕು 11—1—1915.

ಎಮ್ ಅನಂತರಾವ್
ಕಾರ್ಯದರ್ಶಿ.

ಯುದ್ಧ ರಿಲೀಫ್ ಫಂಡಿಗೆ ಮಂಗಳೂರಲ್ಲಿ ವಂತಿಗೆ ಕೊಟ್ಟವರ ಹೆಸರುಗಳೂ ಮೊಬಲಗುಗಳೂ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

ಮೆಸ್ಸರ್ಸ್, ದಯಾನಂದ ಆಂಡ್ರ್ಯೂಸ್ ಆಣೆ ೧೨, ಸಿ. ಯಚ್. ದೇವದತ್ತ ಪಿನೆ ಆ. ೮, ಗಾಬ್ರಿಯೇಲ್ ಸೋನ್ಸ್ ಆ. ೮; ಸಿಲ್ವೆಸ್ತರ್ ಸೋನ್ಸ್ ಆ. ೮, ಡಿ ಬಂಗೇರ ಆ. ೮; ಲುಥರ್ ಮಾಟಿನ್ ಆ ೮, ಇ. ಪಿ. ಕಾಪಾಟ್ ಆ. ೮, ಮತ್ಯಾಸ್ ಥೋಮಸ್ ಆ ೮, ಜೆ. ಜಕರೀಯಸ್ ಆ ೮, ಜೆ ಮಾಬೆನ್ ಆ ೮; ರಾ॥ ವಾಸುದೇವಪ್ಯೆ ಆ ೮, ರಾ॥ ಕೆ. ಎಮ್. ದಾಸಪ್ರಭು ಆ. ೮; ರಾ॥ ಎಮ್ ನಾರಾಯಣ ಕಾಮತ್ ಆ. ೮, ರಾ॥ ಎಮ್. ಗಣಪಯ್ಯ ಎಂಡ್ ಸನ್ಸ್ ಆ ೮; ಮೆಸ್ಸರ್ಸ್ ಇಮ್ಮಾನುವೇಲ್ ಮಾಬೆನ್ ಆ ೬; ಸಲಮೋನ್ ಎಚ್ ಬಂಗೇರ ಆ. ೪; ಪಿ. ಇ. ಅಮ್ಮಣ್ಣಿ ಆ ೪, ಇ. ದಾನಿಯೇಲ್ ಆ. ೪; ಪೊರ್ಸ್ ಮೇಸ್ತ್ರಿ ಆ. ೪, ಜೋನ್ ಚಿನ್ನಪ್ಪ ಆ. ೪, ಇ. ಸಿ. ಪಾಲನ್ನ ಆ. ೪; ಎಚ್ಚ ಚಿದಾನಂದ ಆ. ೪, ಜೊಶುವ ಕುಂದರ್ ಆ. ೪, ಜಿ. ಅಮ್ಮನ್ನ ಆ. ೪, ಜೋನ್ ಬಂಗೇರ ಆ ೪, ಲಾಜರ್ ಫೆರ್ನಾಂಡಿಸ ಆ. ೪, ಜೆ ಐಮನ್ ಆ. ೪, ಬೈರನ್ನಾಕ ಆ. ೪; ಬೈರಿ ಆ. ೪; ಅಮೃತ ಪೆಂಗಾಳ್ ಆ ೪; ಮಂಜಪ್ಪ ಗುರಿಕಾರ ಆ. ೪, ಸಲಥಿಯೆಲ್ ತಿತೂಸು ಆ. ೪; ಎಸ್. ಟಿ. ಬಂಗೇರ ಆ. ೪, ಜಾಕೋಬ್ ಬಂಗೇರ ಆ ೪; ಜಿ. ಬಿ. ಕೋಡ್ದೊಟ್ ಆ. ೪; ಸೋನ್ಸು ಆ. ೪; ಒಬೆದ್ ಸೋನ್ಸು ಆ. ೪; ರಾ॥ ಎಮ್. ಮಂಜುನಾಥ ಕಿಣಿ ಆ. ೪; ರಾ॥ ಬಿ. ಪದ್ಮನಾಥ ಭಂಡಾರಿ ಆ. ೪; ಮೆಸ್ಸರ್ಸ್ ರೂದೊಲ್ಫ್ ಸತ್ಯವ್ರತ ಆ. ೩; ದೇವಿಡ್ ಪಿ. ಐರನ್ ಆ. ೩; ಪಿ. ಸಾಲಿನ್ಸ್ ಆ. ೨; ಡಿ. ಎ. ಬಂಗೇರ ಆ. ೨; ಸ್ವಾಂತಪ್ಪ ಮಾಟಿನ್ ಆ. ೨; ಸೊಲಮೊನ್ ಸಾಲಿನ್ಸ್ ಆ. ೨; ವಿಲಿಯಮ್ ಬಂಗೇರ ಆ. ೨; ಮಾನುವೇಲ್ ಸಾಲಿನ್ಸ್ ಆ. ೨; ಎಬ್ನೇಜರ್ ಕೈರನ್ನ ಆ. ೨. ಜುಮ್ಲಾ ರೂ. ೩೩೫—೧೦—೬.

ಮಂಜೇಶ್ವರ:—ಸತ್ಕಾರ್ಯಕ್ಕೆ ವಿಘ್ನಗಳು ವಿಶೇಷವಾದರೂ ಸಾಹಸದಿಂದ ಗೈದಲ್ಲಿ ಶುಭಕರವಾಗಿ ಪೂರ್ಣವಾಗುವುದು ನಿಸ್ಸಂದೇಹವೇ. ಈ ಊರಲ್ಲಿ ಕಳೆದ ೧೯೦೭ನೇ ಇಸವಿಯಲ್ಲಿ ತಲೆ ಎತ್ತಿದ ಶ್ರೀ ಸರಸ್ವತಿ ವಿದ್ಯಾಲಯವು ಹಲವು ವರ್ಷಗಳ ವರೇಗೆ ಧನಿಕ ಜನರ ಉದಾರ ಆಶ್ರಯವನ್ನು ಪಡೆದು ಕಡೆಗೆ ಆ ಸದ್ಧಸ್ತರ ಆಶ್ರಯವಿಲ್ಲದೆ ಬಹು ವಿಘ್ನಗಳು ಬಂದೊದಗಲು ಮೆನೇಜರರು ಅತಿ ಧಾವತಿಯನ್ನು ಪಟ್ಟು ಕೈಕೊಂಡ ಕಾರ್ಯವನ್ನು ಕಡೆಗಾಣಿಸಲು ಮಾಡಿದ ಭಗೀರಥ ಪ್ರಯತ್ನಗಳು ಇಂದಿಗೆ ಸಾಫಲ್ಯವಾದುದೆಂಬುದನ್ನು ತಿಳಿಸಲು ಬಹಳ ಸಂತೋಷಪಡುತ್ತೇನೆ. ಸದರೀ ವಿದ್ಯಾಲಯವನ್ನು ನಮ್ಮ ಪುತ್ತೂರು ತಾಲೂಕು ಬೋರ್ಡಿನವರು ಇದೇ ತಿಂಗಳ ಕಳದ ತಾ ೧೫ರಲ್ಲು ಕೈಕೊಂಡಿರುವರು. ಈ ವಾರ್ತೆಯನ್ನು ಕೇಳಿ ಜನರ ಅತ್ಯಾನಂದವನ್ನು ಸೂಚಿಸಲು ಶಾಲೆಯ ಬಾಲಿಕೆಯರು ಆ ದಿನ "ಶ್ರೀ ಸಾವಿತ್ರಿ ಪರಿಣಯ" ವೆಂಬ ನಾಟಕವನ್ನು ಆಡಿ ಕೂಡಿದ ಹಣವನ್ನು ಇಂಪೀರಿಯಲ್ ಯುದ್ಧ ಫಂಡಿಗೆ ಕಳುಹಿಸಿರುತ್ತಾರೆ. ಅದೇ ದಿನ ಸಾಯಂಕಾಲಕ್ಕೆ ಇಲ್ಲಿಯ ಯುವಕ ಜನ ಸಮಾಜದವರು ಶ್ರೀ ಮದನಂತೇಶ್ವರ ದೇವಸ್ಥಾನದ ಹಾಲಿ ಆಡಳ್ತೆದಾರ ಮ॥ ರಾ॥ ರಾ॥ ರಾಮಯ್ಯ ಶ್ಯಾನುಭೋಗರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಶಾಲೆಯು ಇನ್ನು ತೃಪ್ತಿಕರವಾಗಿ ನಡೆಯುವದೆಂತ ಸಂತೋಷಪಟ್ಟದಲ್ಲದೆ ಯೂರೋಪು ಖಂಡದಲ್ಲಿ ಈಗ ನಡೆಯುವ ಯುದ್ಧವು ನಮ್ಮ ಸಾರ್ವಭೌಮರಿಗೆ ವಿಜಯಪ್ರದವಾಗಿ ಪರಿಣಮಿಸಲಿ ಎಂತ ಸಹಾ ಭಗವಂತನನ್ನು ಪ್ರಾರ್ಥಿಸಿದರು.

ಇಲ್ಲಿಯ ರಾಜರಸ್ತೆಯಲ್ಲಿ ಸರ್ಪ ಸಂಚಾರವು ಇತ್ತಲಾಗೆ ವಿಶೇಷವಾಗಿದೆ. ಇದೇ ತಿಂಗಳ ಕಳೆದ ತಾ. ೨೦ರಲ್ಲು ಕಾಸರಗೋಡು ಕೆಳಗಿನ ಮನೆ ಮಾಧವಶ್ಯಾನುಭಾಗರು ರಾತ್ರೆ ಸುಮಾರು ೮ ಗಂಟೆಗೆ ತಮ್ಮ ಮನೆಗೆ ಹೋಗುತ್ತಿದ್ದಾಗ್ಯೆ ಸಂಸ್ಕೃತ ವಿದ್ಯಾಶಾಲೆಯ ಹತ್ತರ ಹಾದಿಯಲ್ಲಿದ್ದ ಸುಮಾರು ೫ ಫೀಟು ಉದ್ದದ ದೊಡ್ಡದೊಂದು ಸರ್ಪದ ಹೆಡೆಯ ಮೇಲೆ ಕಾಲನ್ನಿಟ್ಟರು. ಕೂಡಲೇ ಗಾಬರಿಯಾಗಿ ಹಾರಿ ಇಟ್ಟ ಕಾಲು ಪುನಃ ಹೆಡೆಯ ಮೇಲಾಗಲು ಸರ್ಪವು ಇನ್ನೊಂದು ಕಾಲನ್ನು ಸುತ್ತಿಕೊಂಡಿತು. ಅವರು ಮಾಡಿದ ಗದ್ದಲದಿಂದ ಲಾಟೀನುಗಳೊಡನೆ ಬಹಳ ಜನ ಕೂಡಿತು. ಕಾಲನ್ನು ಆಡಿಸಲು ಸರ್ಪವು ಸ್ವಲ್ಪ ದೂರಕ್ಕೆ ಹೋಗಿ ಬಿತ್ತು. ನಂತರ ಅದು ಹತ್ತಿರದಲ್ಲಿದ್ದ ಹಂಚಿನ ರಾಶಿಯಲ್ಲಿ ಹೊಕ್ಕಿಕೊಂಡಿತು. ಆದರೆ ಶ್ರೀ ದೇವರ ದಯದಿಂದ ಏನೊಂದೂ ಅಪಾಯ ಸಂಭವಿಸಲಿಲ್ಲ. ಇಲ್ಲಿಯ ಕಲೀಫ್ ಅಬ್ದುಲ್ಲ ರಹಿಮಾನ್ ಹಾಜಿಯವರು ಸದರಿ ಸರ್ಪವನ್ನು ಆ ಹಂಚಿನ ರಾಶಿಯಿಂದ ಹೊರಗೆ ತೆಗೆದು ವಿಷದ ಹಲ್ಲುಗಳನ್ನು ಕಿತ್ತು ಸಜೀವವಾಗಿ ದೂರಕ್ಕೆ ತಕ್ಕೊಂಡು ಹೋಗಿ ಬಿಟ್ಟಿರುವರು.

ಸಾವಿರಾರು ಜನರ ಎಡೆಯಾಟದ ಸ್ಥಳವಾದ ಈ ಮಂಜೇಶ್ವರ ರಾಜರಸ್ತೆಯಲ್ಲಿ ಒಂದು ದೀಪವಾದರೂ ಇಲ್ಲದೆ ಇರುವದು ಬಹಳ ಶೋಚನೀಯವಾದ ಸಂಗತಿಯೇ ಸರಿ. ಈ ವಿಷಯದಲ್ಲಿ ಇಲ್ಲಿಯ ಶ್ರೀಮಂತರಾಗಲೀ ಶ್ರೀ ದೇವಸ್ಥಾನದವರಾಗಲೀ ಹೆಚ್ಚು ಗಮನವನ್ನು ಇನ್ನಾದರೂ ಕೊಡದಿರರೆಂತ ಪರಿಪೂರ್ಣವಾಗಿ ನಂಬುತ್ತೇನೆ.

ಮಂಗಳೂರು.

ರಥ ಬೀದಿಯ ಪುತ್ತು ಪ್ರಭು ಓಣಿಯಾ ಹೊಸಗದ್ದೆ ಕೇರಿ ರಸ್ತೆಯ ಸಮೀಪದ ಮನೆಯೊಂದರಲ್ಲಿ ಕಳದವಾರ ಒಂದು ಪ್ಲೇಗು ಮರಣವಾಗಿರುವದು.

ಮುಲ್ಕಿಯ ಪಲ್ಲ್ಯಾರ್ ನಾರಾಯಣ ಪ್ರಭುಗಳವರ ಸೊಸೆ ದೇವಿಬಾಯಿ ತಾ. ೨೦ನೇ ಬುಧವಾರ ಮಂಗಳೂರಲ್ಲಿರುವ ತನ್ನ ತಂದೆಯ ಮನೆಯಿಂದ ಮುಲ್ಕಿಗೆ ಹೋಗಿದ್ದಳು. ಇವಳಿಗೆ ಅಲ್ಲಿ ಹೋದೊಡನೆ ಪ್ಲೇಗುಬೇನೆ ಸೋಂಕಿ ತಾ. ೨೪ರಲ್ಲು ಮೃತಳಾದಳು ಎಂಬ ವಾರ್ತೆ ಬಂದಿರುವದು.

ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವದ ಓಕಳಿ ದಿವಸ ತಾ. ೨೩ನೇ ಶನಿವಾರ ಇಲ್ಲಿಯ ಮುನ್ಸಿಪಾಲ್ ಆಫೀಸಿನ ಹೆಡ್ ಕ್ಲಾರ್ಕರಾದ ರಾ॥ ಪಾಂಡುರಂಗರಾಯರ ದತ್ತಾತ್ರಿಯ ಎಂಬ ಮಗನ ವಸ್ತ್ರಕ್ಕೆ ಆರತಿಯ ಬೆಂಕಿ ಅಕಸ್ಮಾತ್ತಾಗಿ ತಾಗಿ ತಾ. ೨೪ನೇ ಮಧ್ಯಾಹ್ನ ಮೃತಪಟ್ಟನು ಎಂತ ತಿಳಿಸಲು ವಿಷಾದಿಸುತ್ತೇವೆ.

ಗಣಪಯ್ಯ ಎಂಬ ಒಬ್ಬನು ತಾ. ೨೩ರಲ್ಲು ಧರ್ಮಾಸ್ಪತ್ರೆಗೆ ಹೋಗಿ ಔಷಧ ತಕ್ಕೊಂಡು ಹಿಂದೆ ಮನೆಗೆ ಬಂದು ರಾತ್ರಿ ಮಲಗಿದವನು ಬೆಳಗ್ಗೆ ಏಳುವಾಗ ಮೃತಪಟ್ಟಿದ್ದನು. ಇವನು ಗುಂಡಿಗೆ

ರೋಗಕ್ಕೆ ಔಷಧಿ ತಕ್ಕೊಂಡಿದ್ದನೆಂದೂ ಅದೇ ರೋಗದಿಂದ ಅಕಾಲ ಮರಣ ಪಟ್ಟನೆಂದೂ ಡಾಕ್ಟ್ರರು ಅಭಿಪ್ರಾಯಪಟ್ಟಿರುವರಂತೆ.

ಇಂಪೀರಿಯಲ್ ಸಿನಮೊಟಗ್ರಾಫ್ ಕಂಪೆನಿಯವರು ನಿನ್ನೆಯಿಂದ ಇಲ್ಲಿ ತಮ್ಮ ಚಿತ್ರವಿಚಿತ್ರವಾದ ದೇಖಾವೆಗಳನ್ನು ತೋರಿಸಲು ಪ್ರಾರಂಭಿಸಿರುವರು

ಹಂಪನ ಕಟ್ಟೆಯ ಮಾಧವ ಬಿಲ್ಡಿಂಗಿನ ಹಿಂದುಗಡೆ ಪ್ಲೇಗು ಮರಣಗಳಾದುದರಿಂದಲೂ ಸಬ್ ಪೋಸ್ಟಾಫೀಸಿನಲ್ಲಿ ಇಲಿಗಳು ಸತ್ತು ಬಿದ್ದುದರಿಂದಲೂ ಅಜುಬಾಜಿನ ಅಂಗಡಿ ಮನೆಗಳನ್ನೆಲ್ಲಾ ಪ್ಲೇಗು ಇಲಾಖೆಯವರು ಖಾಲಿ ಮಾಡಿಸಿದ್ದರು ಈಗ ಪುನಃ ಅಂಗಡಿಗಳನ್ನು ತೆರೆಯಲು ಹುಕುಮ ಕೊಟ್ಟಿರುವರು ಈ ಪ್ರಾಂತ್ಯದಲ್ಲಿ ವರ್ಷಂಪ್ರತಿ ಪ್ಲೇಗು ಮರಣಗಳಾಗುವದರಿಂದಲೂ ಇಲಿಗಳು ಆಗಾಗ್ಗೆ ಸಾಯುತ್ತಿರುವದರಿಂದಲೂ ಈ ಪ್ರಾಂತ್ಯದ ಮನೆ ಅಂಗಡಿಗಳನ್ನು ಕೆಲವು ಕಾಲದ ವರೆಗೆ ಖಾಲಿಯಾಗಿರಿಸಿ, ಮಾಡಿನ ಹಂಚು ತೆಗೆಯಿಸಿ, ಒಳಗೆ ಸೂರ್ಯನ ಬಿಸಲು ತಾಗುವಂತೆ ಮಾಡುತ್ತಿದ್ದರೆ ಹಿತವಾಗುತ್ತಿತ್ತು ಎಂತ ಒಬ್ಬ ಬಾತ್ಮಿದಾರರು ತಿಳಿಸುವರು

ಐತಪ್ಪ ಯಾನೆ ಬಸ್ತಿಯಾವ್ ಮಸ್ಕರೇಂಞ ಎಂಬವನು ಬಂದರದಲ್ಲಿ ಮಂಜಿಯಿಂದ ತನ್ನ ಕಳವು ಮಾಡಿದ್ದಾನೆಂಬದಾಗಿ ಅಪಾದಿಸಲ್ಪಟ್ಟಿದ್ದನು ಇವನಿಗೆ ಟೌನ್ ಮೆಜಿಸ್ಟ್ರೇಟರು ಮೂರು ತಿಂಗಳ ಕಠಿಣ ಸಜಾ ವಿಧಿಸಿದರು

ಕಂಕನಾಡಿಯ ಕೊಸ್ಮ ವೇಗಸ್‌ರವರ ಮನೆಯಿಂದ ಎರಡು ಆಡುಗಳನ್ನು ಕದ್ದುಕೊಂಡಿದ್ದನೆಂಬದಾಗಿ ಕಸಾಯಿ ವಾಬು ಸಾಹೇಬನು ಪೋಲಿಸರಿಂದ ಚಾರ್ಜು ಮಾಡಲ್ಪಟ್ಟಿರುವನು

ಇಲ್ಲಿಯ ವೆಬ್‌ಸ್ಟರ್ ಮಾರ್ಕೆಟಿನಲ್ಲಿ ಆಗ್ಗಾಗ್ಗೆ ಕಿಸೆಕಳವುಗಳ ಆಗುತ್ತಲಿ ಇದ್ದುದರಿಂದ ಪೋಲಿಸರು ಈ ವಿಷಯ ಬಹು ಜಾಗ್ರತೆ ತಕ್ಕೊಂಡ ಕೇಡಿ ಪೂವಗಟ್ಟ ಎಂಬವನು ಕಿಸೆ ಕಳವು ಮಾಡುವಾಗಲೇ ಹಿಡಿದು ವಿಚಾರಣೆಗೆ ಗುರಿಪಡಿಸಿದರು ಅಪಾದಿತನಿಗೆ ಮೆಜಿಸ್ಟ್ರೇಟರು ೬ ತಿಂಗಳ ಸಜಾ ವಿಧಿಸಿದರು

ಕನ್ನತ್ತೂರಿನ ಐತುಮುಲ್ಲ ಎಂಬವನ ಸುಳ್ಳು ಹೆಸರಿನಿಂದ ಇಲ್ಲಿಯ ಹೋಟೇಲೊಂದರಲ್ಲಿದ್ದುಕೊಂಡು ಹೋಟೇಲಿಗೆ ಬಂದವರ ೨೫ ರೂಪಾಯಿ ಕ್ರಯ ಬಾಳುವ ವಾಚು ಇತ್ಯಾದಿಗಳನ್ನು ಕಳವು ಮಾಡಿದ್ದರಿಂದ ಇವನಿಗೆ ೩ ತಿಂಗಳ ಕಠಿಣ ಸಜಾ ವಿಧಿಸಲಾಗಿರುವದು.

ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಕಂಪೆನಿಯವರು ಪುತ್ತೂರು ಲೈನಿನ ಬಗ್ಗೆ ೧೫ ಜನರು ಕೂತುಕೊಳ್ಳಬಹುದಾದ ಎರಡು ಬಸ್ಸುಗಳಿಗೆ ಆರ್ಡರ್ ಕೊಟ್ಟಿರುವರು

ಮಾರ್ಕೆಟ್ ವಾರ್ಡಿನ ಕೌನ್ಸಿಲ್ಲರಾಗಿದ್ದ ಮು। ರಾ। ಗೊಲ್ಲರಕೇರಿ ಕೃಷ್ಣರಾಯರವರ ಅವಧಿಯು ಮುಗಿದಿರುವುದರಿಂದ ಮಾರ್ಕೆಟ್ ವಾರ್ಡ್ ಕೌನ್ಸಿಲ್ಲ ಚುನಾವಣೆಯು ಮಾರ್ಚಿ ತಾ ೨ರಲ್ಲ ಇಲ್ಲಿಯ ಬ್ರಾಹ್ಮಣ ಹುಡುಗಿಯರ ಶಾಲೆಯಲ್ಲಿ ಜರಗುವುದು. ರಾ ಗೊಲ್ಲರಕೇರಿ ಕೃಷ್ಣರಾಯರವರು ಉಮೇದ್ವಾರರಾಗಿರುವರು

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡು ಮಿಟಿಂಗ್ ತಾ. ೨೫ನೇ ಸೋಮವಾರ ಜರಗಿತು ಈ ಮಿಟಿಂಗ್‌ನಲ್ಲಿ ಮುಖ್ಯವಾಗಿ ಆಯಾ ದಾರಿಗಳ ದುರಸ್ತಿ ಬಗ್ಗೆ ಇಂಜನಿಯರಿಂದ ಕಳುಹಿಸಲ್ಪಟ್ಟ ಅಂದಾಜು ಪಟ್ಟಿ ಸೆಂಕ್ಷನ್ ಆಗಿರುವದು

ಡಿಸ್ಟ್ರಿಕ್ಟ್‌ಬೋರ್ಡು ಆಸ್ಪತ್ರೆಗಳ ಬಗ್ಗೆ ಕೆಲವು ಕಟ್ಟೋಣಗಳನ್ನು ಕಟ್ಟಿಸುವರೆ ಪ್ರೊವಿನ್ಸಿಯಲ್ ಫಂಡಿನಿಂದ ೧೦ ೦೪೦ ರೂಪಾಯಿ ಸೆಂಕ್ಷನ್ ಆಗಿರುವದು ಈ ಪೈಕಿ ಬಂಟವಾಳ ಆಸ್ಪತ್ರೆಗೆ ಶಸ್ತ್ರಪ್ರಯೋಗದ ಕೋಣೆ ಬಗ್ಗೆ ರೂ ೬೩೦, ಅದೇ ಆಸ್ಪತ್ರೆಗೆ ಅಂಟುರೋಗಿಗಳ ಶೆಡ್ಡು ಕಟ್ಟಿಸುವರೆ ರೂ. ೯೯೦, ಮುಲ್ಕಿ ಸಬ್ ಅಸಿಸ್ಟಾಂಟ್ ಸರ್ಜನರ ಬಗ್ಗೆ ವಸ್ತಿಯನ್ನು ಕಟ್ಟಿಸುವರೆ ರೂ. ೧೯೫೦, ಬೆಳ್ತಂಗಡಿ ಸಬ್ ಅಸಿಸ್ಟಾಂಟರ ವಸ್ತಿ ಬಗ್ಗೆ ರೂ ೧೯೮೦, ಅಂಟುರೋಗಿಗಳ ಶೆಡ್ಡು ಬಗ್ಗೆ ಪುತ್ತೂರು ಆಸ್ಪತ್ರೆಗೆ ರೂ ೧೦೦೦, ಉಡ್ಪಿಯಲ್ಲಿ ಒಂದು ಆಸ್ಪತ್ರೆ ಕಟ್ಟಿಸುವರೆ ರೂ ೨೫೦೦, ಪುತ್ತೂರಿನ ಆಸ್ಪತ್ರೆ ಬಗ್ಗೆ ಶಸ್ತ್ರಪ್ರಯೋಗದ ಕೋಣೆಗೆ ೯೯೦ ರೂಪಾಯಿ ಸೆಂಕ್ಷನ್ ಆಗಿಯದೆ

ಕಂಡಲೂರ ಕಡವಿನಲ್ಲಿ ಒಂದು ಹೊಸ ಶೆಡ್ಡು ಕಟ್ಟಿಸುವರೆ ರೂ. ೨೧೫ ಸೆಂಕ್ಷನ್ ಆಗಿಯದೆ.

ಪ್ರತಿ ಒಬ್ಬ ಲೋಕಲ್‌ಫಂಡ್ ಸಬ್ ಅಸಿಸ್ಟಾಂಟ ಸರ್ಜನರು ಇಲ್ಲಿಯ ವೆನ್‌ಲಕ್ ಆಸ್ಪತ್ರೆಯಲ್ಲಿ ಆರು ತಿಂಗಳ ವರೆಗೆ ಶವಪರೀಕ್ಷೆ ಇತ್ಯಾದಿಗಳ ಮಾಹಿತಿಯನ್ನು ಪಡೆಯುವ ಬಗ್ಗೆ ರಿಸರ್ವ್ ಡ್ಯೂಟಿಯಲ್ಲಿರಬೇಕೆಂಬ ಜಿಲ್ಲಾ ಮೆಡಿಕಲ್ ಆಫೀಸರರು ಕಳುಹಿಸಿಕೊಟ್ಟ ಆಲೋಚನೆಯು ಡಿಸ್ಟ್ರಿಕ್ಟ್‌ಬೋರ್ಡು ಮಿಟಿಂಗ್‌ನಲ್ಲಿ ಮಂಜೂರಾತಿಯನ್ನು ಪಡೆದಿರುವುದು

ಗುರುಪುರ ನದಿಗೆ ಸಂಕವನ್ನು ಕಟ್ಟಿಸುವ ವಿಷಯ ತಕ್ಕ ವಿಚಾರಣೆ ನಡಿಸುವ ಬಗ್ಗೆ ರೂ ೨೪೦ ಸೆಂಕ್ಷನ್ ಆಗಿರುವದು

ಕಾರಾವಳಿಯ ದಾರಿಗಳಿಗೆ ಕಲ್ಲು ಹಾಕಿ ದುರುಸ್ತಿ ಮಾಡಿಸುವರೆ ಆಯಾ ದಾರಿಗಳಿಗೆ ರೂ ೩೦೦೦, ೧೦೦೦, ೨೫೦೦ ಈ ಪ್ರಕಾರ ಸೆಂಕ್ಷನ್ ಆಗಿಯದೆ

ಸರ್ ಚಂದಾವರಕಾರರವರು ಇದೇ ತಾ ೨೭ನೇ ಮೈಲ್ ಬಂಡಿಯಲ್ಲಿ ಇಲ್ಲಿಗೆ ಚಿತ್ತೈಸ ಪರೆಂಬದಾಗಿ ಬ್ರಹ್ಮಸಮಾಜದ ಮಂದಾಳುಗಳು ಬಹು ಆತುರತೆಯಿಂದ ಸರ್ ಚಂದಾವರಕಾರರವರ ಕಾರರವರ ಆಗಮನವನ್ನು ಇದಿರ ನೋಡುತ್ತಿದರು ಆದರೆ ಬರುವ ವಾರ ಮಂಗಳೂರಿಗೆ ಚಿತ್ತೈಸುತ್ತೇನೆಂಬ ಪತ್ರವು ಅಂದೇ ಸಾಯಂಕಾಲ ಅವರಿಂದ ಬಂದಿರುತ್ತದೆಂಬದಾಗಿ ತಿಳಿಯುತ್ತೇವೆ ಸರ್. ಚಂದಾವರಕಾರರವರು ಈಗ ಮಲಬಾರ್ ಜಿಲ್ಲೆಯನ್ನು ಸಂದರ್ಶಿಸುತ್ತಿರುವರು

ಇಲ್ಲಿಯ ಸಬ್ ಜಡ್ಜರಾಗಿರುವ ರಾ। ಬಿ ಕೃಷ್ಣರಾವ್‌ರವರು ೩ ವಾರಗಳ ಪ್ರಿವಿಲೇಜ್ ರಜೆ ಪಡಕೊಂಡಿರುವರು

ಕರಂಗಾಲವಾಡಿಯ ಪರಾರಲ್ಲಿ ಕಳೆದ ಒಂದೆರಡು ವರುಷಗಳಿಂದಾಗುತ್ತಿರುವ ಕಳವುಗಳು ಪತ್ತೆಯಾಗದ ಹೋದ್ದರಿಂದ ಆ ಪ್ರಾಂತ್ಯದಲ್ಲಿ ಕಳ್ಳರು ನಿರ್ಭೀತರಾಗಿರುವರು. ಕೆಲವು ದಿವಸಗಳ ಹಿಂದೆ ಕರಂಗಲಪಾಡಿ ದೇವಸ್ಥಾನದ ಒಳಿ ವಾಸಿಸಿರುವ ಕಲೆಕ್ಟರರ ಆಫೀಸಿನ ಕ್ಲಾರ್ಕರಾದ ರಾ ಮುಕುಂದ ಸುಬ್ಬರಾಯರ ಮನೆಗೆ ಕನ್ನ ಕೊರೆದು ಬಾಗಿಲನ್ನು ತೆರೆದು ಮನೆ ಪ್ರವೇಶಿಸಿ ಒಬರಣ ಇತ್ಯಾದಿಗಳೇನಾದರೂ ಸಿಕ್ಕುವವೆಂತ ಹುಡುಕುವಷ್ಟರಲ್ಲಿ ಮನೆಯವರು ನಿದ್ರೆಯಿಂದ ಎಚ್ಚತ್ತದ್ದರಿಂದ ಕಳ್ಳರು ಓಡಿ ಹೋದರು

ಈ ಕಳ್ಳರ ಉಪಟಳದ ಸೊಂಕು ಪ್ರಕೃತ ಕರಂಗಲಪಾಡಿಯಿಂದ ಕೆನರಾ ಹೈಸ್ಕೂಲು ಒಳಿ ಡೊಂಗರಕೇರಿಗೂ ತಗಲಿರುವುದು ಡೊಂಗರಕೇರಿಯಲ್ಲಿ ಎರಡು ಮೂರು ಮನೆಗಳಲ್ಲಿ ನಡದ ಕಳ್ಳರ ಉಪಹತಿಯನ್ನು ಈ ಸಂಚಿಕೆಯಲ್ಲಿ ಸ್ಥಳವಿಲ್ಲದ್ದರಿಂದ ಪ್ರಕಟಿಸಲಿಲ್ಲ

ರಾತ್ರೆ ಸಮಯದಲ್ಲಿ ಕಳ್ಳರು ದಾರಿಗರನ್ನು ಸುಲಿದು ಕೊಳ್ಳುವ ವರ್ತಮಾನಗಳು ಈಗ ಕೆಲವು ಒಂದೆರಡು ವಾರಗಳಿಂದ ಕೇಳಬರುತ್ತಿರುವವು. ಕರಂಗಲಪಾಡಿ ಪಟಾರದಲ್ಲಿಯ ಒಬ್ಬ ಹೊಟೇಲಿನವನು ರಾತ್ರೆ ಎಣ್ಣೆ ಇತ್ಯಾದಿ ಸಾಮಾನುಗಳನ್ನು ತರುತ್ತಿರುವಾಗ ಆತನನ್ನು ಕಳ್ಳರು ತಡದು ಕೈಯಲ್ಲಿರುವ ಹಣಕಾಸು ಇತ್ಯಾದಿಗಳನ್ನು ಸೆಳಕೊಳ್ಳಲು ಪ್ರಯತ್ನಿಸಿದರೆಂಬ ಇನ್ನೊಂದು ವರ್ತಮಾನವು ಪ್ರಕಟಣೆ ಬಗ್ಗೆ ಬಂದಿರುವುದು ಈ ರೀತಿ ಪಟ್ಟಣದಲ್ಲಿ ಕಳವುಗಳು ಹೆಚ್ಚುತ್ತಿವೆ ಎಂತ ಹೇಳಲೋ? ಕಳವುಗಳು ಸಂಭವಿಸಿದ ಕೂಡಲೇ ಆಯಾ ಮನೆಯವರನ್ನು ಕರೆತರಿಸಿ ಅವರ ಹೇಳಿಕೆಯನ್ನು ಕೇಳಿಕೊಂಡು ರಿಜಿಸ್ಟ್ರಿಗಳಲ್ಲಿ ಇಂಥಾ ಹೇಳಿಕೆಗಳನ್ನು ದಾಖಲುಮಾಡಿಕೊಂಡು ಇವರ ಹೇಳಿಕೆಯು ನಿಜವಾದದ್ದು ಅಥವಾ ಸುಳ್ಳು ಎಂತ ಶೋಧನೆ ನಡಿಸುವ ಅಧಿಕಾರವಾಗಲಿ ಕ್ರಮವಾಗಲಿ ವರ್ತಮಾನ ಪತ್ರಗಳ ಆಪೀಸುಗಳಲ್ಲಿಲ್ಲದರಿಂದ ಕಳವು ಹೆಚ್ಚಿರುವವೆಂಬ ಮಾತನ್ನು ಬರೆಯಲಾರೆವು . ಹ್ಯಾಗೂ ಕಳವಿನ ವೃತ್ತಾಂತಗಳು ಮಂಗಳೂರಲ್ಲಿ ಉದ್ದುದ್ದ ಬೆಳಿಯುತ್ತಿವೆಂತ ಹೇಳಿದರೆ ಅದರಲ್ಲೇನೂ ಆಕ್ಷೇಪ ತೋರದು.

ಪ್ಲೇಗಿನ ಸೋಂಕು ಈ ವರುಷ ರಥಬೀದಿಯ ರಥೋತ್ಸವ ಕಾಲದಲ್ಲಿ ಕಡಮೆಯಾಗಿದ್ದದ್ದರಿಂದ ಈ ತಿಂಗಳ ತಾ. ೨೨ರಲ್ಲಿ ನಡದ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ಬಹಳ ಸಂಭ್ರಮದಿಂದ ನಡೆಯಿತು. ಉತ್ಸವ ಸಮಾರಾಧನೆಗಳಿಗೆ ಪರವೂರುಗಳಿಂದ ಅನೇಕ ಗೌಡ ಸಾರಸ್ವತರು ಒಂದಿದ್ದರು ಜನರ ಆರೋಗ್ಯವೂ ಕೆಟ್ಟು ಜನರಲ್ಲಿ ನಿರರ್ಥಕವಾದ ಆಯಾಸವು ಉಂಟಾಗದಂತೆ ಕ್ಲಪ್ತ ಸಮಯದಲ್ಲಿ ಉತ್ಸವ ಸಮಾರಾಧನೆಗಳನ್ನು ಮುಗಿಸಲು ಒಹಳ ಪ್ರಯತ್ನಪಟ್ಟ ರಾ। ಮೊಕ್ತೇಸರ ಸಾವುಕಾರ ರಂಗಪ್ಪೈ ಮತ್ತು ದೇವಸ್ಥಾನದ ಕೌನ್ಸಿಲಿನ ಮೆಂಬರರಾದ ಸಾವುಕಾರ ರಾ। ಉಳ್ಳಾಲ ವಾಸುದೇವ ಮಲ್ಯರವರ ಶ್ರಮವು ಈ ಸಂದರ್ಭದಲ್ಲಿ ಕೊಂಡಾಡತಕ್ಕದ್ದಾಗಿದೆ ವುದು

ಕೆನರಾ ಹೈಸ್ಕೂಲಿನ ವಿದ್ಯಾರ್ಥಿಭವನದ ವಾರ್ಷಿಕ ದಿನೋತ್ಸವವು ಮ। ರಾ। ರಾ। ಮಾಜಿ ಸಬ್ ಜಡ್ಜರೂ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರೂ ಆದ ರಾ। ಸುಜೀರ ರಘುನಾಥಯ್ಯನವರ ಅಧ್ಯಕ್ಷತೆಯಲ್ಲಿ ಈ ತಿಂಗಳ ತಾ ೩೧ರ ಸಾಯಂಕಾಲ ಜರುಗುವುದು

ಮೊಗೇಯರರ ಶ್ರೀಜ್ಞಾನೋದಯ ಸಮಾಜದ ಮಂದಿರ ನಿರ್ಮಾಣದ ಬಗ್ಗೆ ಧನ ಸಹಾಯಕೊಡಲೊಪ್ಪಿ ತಮ್ಮ ವಾಗ್ದತ್ತವನ್ನು ಪೂರೈಸಿದ ಪುಣ್ಯಾತ್ಮರು — ಕಾಡಿಪಟ್ಣ ಅಣ್ಣಪ್ಪ ಪುತ್ರನ್ನಾಯರು ರೂ ೩ ಗುಂಡಿ ಕುಪ್ಪ ಬಂಗೇರರು ರೂ ೨ ಪಲ್ತಾರ ಚನ್ನಪ್ಪ ಗುರಿಕಾರರು ರೂ ೧ ಉಚ್ಚಿಲ ಕೊರಗಪ್ಪ ಕರಿಯಾದ ನಾಯರು ರೂ ೧, ಕಾಡಿಪಟ್ಣ ಚಂದು ಕಾರಿಬನ್ನಾಯರು ಆಣೆ ೮ ಸೇಟ್ ಜರತಸ್ಟ ಹಕೀಮ್‌ರವರ ಆಣೆ ೮ ಜುಮಾ ರೂ ೮

Bombay / ಹಂಚ್ ಸೋಮಯ್ಯ ಮಂಜಣ್ಣಾಯ
1-1 ಉಪ ಖಜಾನ್ಜಿ.

ಜೀನಸು ಧಾರಣೆ (ರಖಂ)

ಹೊಸ ಮಸ್ಕತಿ ಅಕ್ಕಿ	5 — 2 — 0	5 — 10 — 0
ಹೊಸ ಗಾಡಿ ರಾಸಿ ,,	4 — 5 — 0	4 — 8 — 0
ಹೊಸ ಗುಡ್ಡು ,,	4 — 12 — 0	5 — 2 — 0
ಅವ್ವಲ್ ಬೆಳ್ತಿಗೆ ,,	5 — 8 — 0	5 — 11 — 0
ಗುಡ್ಡು ಬೆಳ್ತಿಗೆ ,,	. .	5 — 3 — 0
ರಂಗೂನು ಬೆಳ್ತಿಗೆ ಗೋಣಿಗೆ ದರ		9 — 8 — 0
ಗೋದಿ ಗೋಣಿ ದರ ...	13 — 4 — 0	14 — 4 — 0
ಹುರುಳಿ ಗೋಣಿ ದರ	6 — 8 — 0	7 — 0 — 0
ಕಡಲೆ ಗೋಣಿ ದರ .		11 — 12 — 0
ತೊಗರಿ ಗೋಣಿ ದರ ...	10 — 12 — 0	12 — 0 — 0
ತೊಗರಿ ಬೇಳೆ ಗೋಣಿ ದರ.	12 — 8 — 0	14 — 0 — 0
ಉದ್ದು ಗೋಣಿ ದರ . .	.	10 — 8 — 0
ಊರು ಬೆಲ್ಲ ಖಂಡಿ ದರ .	..	50 — 0 — 0
ಉಪ್ಪು ಗೋಣಿ ದರ .	.	3 — 9 — 0
ಕೊಬ್ರಿ ಖಂಡಿ ದರ .	80 — 0 — 0	84 — 0 — 0
ಕೊಬ್ರಿ ಹಿಂಡಿ ಖಂಡಿ ದರ	20 — 0 — 0	23 — 0 — 0
ಎಳ್ಳಿಂಡಿ ಖಂಡಿ ದರ	30 — 0 — 0	36 — 0 — 0
ಕೊಬ್ರಿ ಎಣ್ಣೆ ಮುಡಿ ದರ	6 — 0 — 0	6 — 2 — 0
ಎಳ್ಳೆಣ್ಣೆ ಮುಡಿ ದರ (ಕುತಾಸನ)	3 — 14 — 0	4 — 0 — 0
ಚಿವಿಣಿ ಎಣ್ಣೆ ಪೆಟ್ಟಿಗೆ ದರ .		5 — 0 — 0
ಮೋರಿಸ್ ಸಕ್ಕರೆ ಮುಡಿ ದರ . .		4 — 6 — 0
ಕಾಫಿ ಖಂಡಿ ದರ.	220 — 0 — 0.	225 — 0 — 0
ಬೆಳೆಗೋಟು ಖಂಡಿ ದರ .	115 — 0 — 0	118 — 0 — 0
ಹೊಸ ಬೆಳೆಗೋಟು ಖಂಡಿ ದರ	85 — 0 — 0	87 — 0 — 0
ಗೇರು ಬೀಜ ಮುಡಿ ದರ		1 — 2 — 0
ಕಬ್ಬಿಣ ಖಂಡಿ ದರ. .	42 — 0 — 0	44 — 0 — 0
ಕಾಂಟ್ರ ತಗಡುಮುಡಿ ದರ .	16 — 8 — 0	16 — 10 — 0
ಕಾಂಟ್ರ ಪಾತ್ರೆಗಳು ಮುಡಿ ದರ . . .		22 — 0 — 0
ಬೀಣ ಬೆಳ್ಳಿ ಸೇರು ದರ . .		18 — 12 — 0

ಕೆಲವು ಪ್ರತಿಗಳು ಮಾತ್ರ ಉಳಿದಿವೆ.

1915ನೇ ವರುಷದ ಪೋಕೆಟ್ ಡೈರಿಗಳು.

ನೋಟು ಬೂಕು ಸೈಜು 8 ಆಣೆ. ಸಣ್ಣ ಸೈಜು 4 ಆಣೆ.

ನಮ್ಮಲ್ಲಿ ತಯ್ಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ಬ್ಯಾಂಡು ಮಾಡಿದ ಕ್ರಮ. ಇತ್ಯಾದಿಗಳನು. ನೋಡಿಕೊಳ್ಳಿರಿ!

ವ್ಯಾಪಾರಸ್ಥರಿಗೂ ರಖಂ ತಕ್ಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ.

ಡೈರಿಗಳು ಸಿಕ್ಕುವ ವಿಳಾಸ:— **ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು

ಅಚ್ಚಿನಲ್ಲಿರುವುದು! ಅಚ್ಚಿನಲ್ಲಿರುವುದು!

ವೆಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ

ಕವಿ ಎಂಡ್ ಸನ್ಸ್,

ಮಂಗಳೂರು

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ ೨—೪—೦ ಆಗಿರುತ್ತದೆ, ಚಂದಾದಾರರಾಗಿ ಸೇರ ಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,

ಮಂಗಳವಾರ ಪೇಟೆ, ಧಾರವಾಡ

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road BOMBAY

ಏಜಂಟರು:—ದಿ. ಗ್ಲೋಬ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಯುಕಲಿಪ್ಟಸ್ ತೈಲ.

ಮ. ರಾ, ಅಮುಣಂಜೆಗುತ್ತು ಸೀನಪ್ಪ ಹೆಗ್ಗಡೆಯವರು ಈ ರೀತಿ ಬರೆಯುವರು:— ತಮ್ಮಲ್ಲಿಯ ಅತ್ಯುತ್ತಮವಾದ "ಯುಕಲಿಪ್ಟಸ್ ತೈಲ"ವೆಂಬ ಸರ್ವರೋಗನಿವಾರಕಾ ಔಷಧವನ್ನು ತರಿಸಿಕೊಂಡು ಹೆಂಗಸರು ಮಕ್ಕಳಾಗುವ ಕಾಲದಲ್ಲಿ ಆಗುವ ಕಠಿಣ ವಿಧದ ಹೊಟ್ಟೆನೋವಿಗೆ ಉಪಯೋಗಿಸಿದ್ದಲ್ಲಿ ಅದು ಅನೇಕ ಹೆಂಗಸರ ಹೊಟ್ಟೆನೋವನ್ನು ನಿಮಿಷಮಾತ್ರದಲ್ಲಿ ಗುಣಪಡಿಸಿರುತ್ತದೆ. ನನ್ನ ತಂಗಿಗೆ ಕೆಲವು ವರುಷಗಳಿಂದ ಇದ್ದ ಕಿವಿನೋವು ಇದರಿಂದ 5 ದಿವಸಗಳಲ್ಲಿ ಪೂರ್ಣ ಗುಣವಾಗಿರುತ್ತದೆ. ತೀರಾ ಬಡವರು ಕೂಡಾ ಕೊಡಕೊಡುವ ಈ ಅಲ್ಪ ಬೆಲೆಯ ತೈಲವು ಸಾವಿರಾರು ರೂಪಾಯಿಯ ಬೆಲೆಬಾಳತಕ್ಕಂಥಾದ್ದಾಗಿದೆ. ಜ್ವರಗಳ್ಲ, ಮಲೇರಿಯಾ, ಶೀತ, ವಾತ, ಸಣ್ಣ ಮಕ್ಕಳ ಜ್ವರ, ಕೆಮ್ಮು, ದೊಡ್ಡವರ ಕೆಮ್ಮು, ಪ್ರಮೇಹ ಮೊದಲಾದ ರೋಗಗಳಿಗೆ ಸಂಜೀವಿನಿಯೋಪಾದಿ ಇರುತ್ತದೆ. ಇದನ್ನು ಉಪಯೋಗಿಸಿದ ಮಕ್ಕಳಿಗೆ ಬಾಲಾರಿಷ್ಟ ರೋಗವು ನಿಜವಾಗಿ ತೊಲಗಿ ಹೋಗುತ್ತದೆಂಬ ಸಂಗತಿ ನನ್ನ ಅನುಭವ ಸಿದ್ಧವಾಗಿರುತ್ತದೆ ಇತ್ಯಾದಿ, ಸರ್ವ ರೋಗಗಳಿಗೆ ದಿವ್ಯೌಷಧವಾದ ಈ ತೈಲದ ಕ್ರಯ ಟಿನ್ನು ಸೀಸೆಗೆ 5 ಆಣೆ ವಿ. ಪಿ.ಡಬನ ಬೇರೆ *|ಸೀಸೆಗೆ ವಿ. ಪಿ.[illegible]|ರೂ.|3. 12ಆಣೆ, ಅನುಭವಸ್ಥಪತ್ರಿಕೆ ಸೀಸೆಯೊಂದಿಗೆ

ವಿನೋದ ಮಾಸಪತ್ರಿಕೆ!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಪತ್ತೆದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯ, ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳು, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧ ರೂಪಾಯಿ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ.

ವಿಳಾಸ:—ಮ್ಯಾನೇಜರ್ "ಚಾತುರ್ಯ"

ಬೆಂಗಳೂರು, ಸಿಟಿ.

ಇಕ್ಲಿಪ್ಸ್ ಬಾಮ್

ವಾತ, ಸಂದುವಾತ, ಪಕ್ಷವಾತ, ಶಿರೋಭಾರ, ಎದೆನೋವು, ಹಲ್ಲುನೋವು, ಥಂಡಿ, ಕೆಮ್ಮು, ನಾಯಿಕಡಿತ, ಹುಳಕಡಿಯುವದು, ಆನೆಕಾಲು ಮೊದಲಾದ ರೋಗಗಳಿಗೆ ಬಾಹ್ಯೋಪಚಾರವಾಗಿ ಉಪಯೋಗಿಸಬಹುದಾದ ಈ ಬಾಮ್ ಸ್ವಲ್ಪ ಕಾಲದಲ್ಲಿಯೇ ಖ್ಯಾತಿಯನ್ನು ಪಡೆದಿದೆ. ಕ್ರಯ ಕರಡಿಗೆ 1ಕ್ಕೆ 8 ಆಣೆ ವಿ. ಪಿ. ಬೇರೆ. ಡಜನ್ ಕರಡಿಗೆಗೆ ರೂ 4—12—0.

ವಿಳಾಸ:— ಏಜಂಟರು:—

ದಿ ಇಕ್ಲಿಪ್ಸ್ ಏಜನ್ಸಿ, ಸುಗಂಧವಿಲಾಸ,
ಕೊಡಿಯಾಲಬೈಲ್, ಮಂಗಳೂರು. [illegible]

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಆಗೋಸ್ತಿನಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಶುಲಭವಾದ ಖರೀದಿಯಲ್ಲಿ ದೊರಿಯುತ್ತದೆ.

ಕಾಫಿ ಪುಡಿಯು ರಾತ್ಲ ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೇನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

Piedade Pinto,

Manager.

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯ ಪುಸ್ತಕವು.

ಜೀವಿತಕಾಲದ ವರೆಗೂ ನಮ್ಮ ಶರೀರವನ್ನು ರೋಗಗಳು ಹತ್ತರ ಬಾರದೆ ಮಾಡಿಕೊಳ್ಳುವದೇ ನಮ್ಮ ಮೊಟ್ಟಮೊದಲು ಕರ್ತವ್ಯವು. ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನು ಪುನಹ ಹೇಗೆ ಪಡೆಯುವದು ಎಂಬ ವಿಷಯಗಳಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ ಈ ಗ್ರಂಥವನ್ನು ಪ್ರಜೆಗಳ ಕ್ಷೇಮಾರ್ಥವಾಗಿ ಕೋರಿದವರಿಗೆ ಕ್ರಯವೂ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವದು. ಈ ಪುಸ್ತಕವು ಒಂಭತ್ತು ಭಾಷೆಗಳಲ್ಲಿ ಛಾಪಿಸಲ್ಪಟ್ಟು ಇದುವರೆಗೆ ನಾಲ್ಕು ಲಕ್ಷ ಪ್ರತಿಗಳು ಕಳುಹಿಸಲ್ಪಟ್ಟಿರುವದೇ ಇದು ಎಷ್ಟು ಉಪಯೋಗಕರವಾದದ್ದು ಎಂಬುವದಕ್ಕೆ ಸಾಕ್ಷಿಯಾಗಿರುತ್ತದೆ.

ಕಲಿಯುಗದ ಕಾಮಧೇನು.

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಿಮಾಡಿ ಹೆಚ್ಚುಮಾಡುತ್ತದೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ. ಜೀರ್ಣಶಕ್ತಿಯನ್ನು ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗುವಂತೆ ಮಾಡುವದು. ಅಕಾಲದಲ್ಲಿ ಬರುವ ಮುಪ್ಪನ್ನು ಕಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಗುಳಿಗೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1—0—0.

ರಾಜವೈದ್ಯ ನಾರಾಯಣಜಿ ಕೇಶವಜಿ
20 ಚೀನಾ ಬಜಾರ್ ರೋಡ್,
ಮದರಾಸು.

ಯುನಿವರ್ಸಲ್ ಎಸ್ಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಸೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬುದನ್ನು ನೀವು ಅರಿತಿರುವಿರೋ?

ಇನ್ಸೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

			ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	...	ರೂ.	13,329—0—0	22,549—0—0
,, (ವಿವಾಹ)	.	,,	25,670—0—0	38,933—0—0
ಜುಮ್ಲಾ ಕೇಸುಗಳು	..	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	.	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	..	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	..	,,	10,000—0—0	50,000—0—0
(ಜನರಲ್) ರಕ್ಷಿತ ಧನ	.	,,	37,220—0—0	23,778—3—2

ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟದೆ. ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಫ್ ಎಸ್ಸೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು. 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ. 3,00,000ಗಿಂತಲೂ ಹೆಚ್ಚಿಗೆ ಭಾದ್ಯತೆಗಳನ್ನು ಕೊಟ್ಟದೆ 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರೆ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

"ಬಂಗಾಳಿ"—14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು. ಸುಮಾರು 3 ಲಕ್ಷ ಭಾದ್ಯತ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟುಗಳು ಬೇಕಾಗಿವೆ. ಎಲ್ಲಾ ವಿಧದ ಏಜನ್ಸಿ ಶರ್ತಗಳಿಗೆ—

ವಿಳಾಸ:— ಲಕ್ಷ್ಮಣ ರಾವ್ ಬ್ರದರ್ಸ್,

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು, ಪೇಟ್ಸು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಕನ್ನಡ ಲಿಪಿಯ ಪುಸ್ತಕಗಳು.

ಉಡುಪಿ ಶ್ರೀಕೃಷ್ಣ ಚರಿತ್ರೆ

ದಂಡಾಕಾರ, ಮೂರು ಸಂಧಿಗಳಿಂದ ಕೂಡಿರುವದು. ಪ್ರಥಮ ಸಂಧಿಯಲ್ಲಿ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠೆಮಾಡಿದ ವಿಷಯವೂ, ಎಂಟು ಜನ ಯತಿಗಳ ವಿಷಯವೂ, ಪ್ರತಿನಿತ್ಯ ನಡಿಯತಕ್ಕ ವಿಧಾನಗಳೂ, ಎರಡನೆಯ ಸಂಧಿಯಲ್ಲಿ ಮಕರಸಂಕ್ರಾಂತಿ ಉತ್ಸವ ವರ್ಣನೆಯೂ, ಮೂರನೇ ಸಂಧಿಯಲ್ಲಿ ವರುಷದ ಇತರ ದಿವಸಗಳಲ್ಲಿ ನಡಿಯತಕ್ಕ ಉತ್ಸವಾದಿಗಳೂ ವರ್ಣಿತವಾಗಿವೆ. ಬೆಲೆ 3 ಆಣೆ.

ಋ. ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ. ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಆಶ್ವಲಾಯನ ಸಂಧ್ಯಾವಂದನ (ಮಂತ್ರಯುದವರಿಗೆ) 3ಆಣೆ; ಯುಜರ್ವೇದ ಸಂಧ್ಯಾವಂದನ (ಮಂತ್ರಯುದವರಿಗೆ) 2 ಆಣೆ; ಋ. ಬ್ರಹ್ಮಯಜ್ಞ ವೈಶ್ವದೇವ ಔಪಾಸನ 3 ಆಣೆ; ಪ್ರಾತರಾಹ್ನಿಕ ಪದ್ಧತಿ 3 ಆಣೆ; ದೇವಪೂಜಾ ಪದ್ಧತಿ 3 ಆಣೆ; ವಾಯುಸ್ತುತಿ 2 ಆಣೆ, ದ್ವಾದಶಸ್ತೋತ್ರ 2 ಆಣೆ; ವಿಷ್ಣುಸಹಸ್ರನಾಮ ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ; ವಿ. ಸಹಸ್ರಕೃಷ್ಣಾಷ್ಟೋತ್ತರನಾಮಾವಳಿ 0-2-6; ಅಭಿಷೇಕ ಸೂಕ್ತಗಳು 0 2-0; ಶ್ರೀಸೂಕ್ತ ಪುರುಷಸೂಕ್ತ 0-1-0; ಸುಂದರ ಕಾಂಡ ಕಥಾಸಾರಸಂಗ್ರಹ ವಗೈರೆ 0-2-0; ಗಜೇಂದ್ರ ಮೋಕ್ಷ 0-1-6; ಗೋಪಿಕಾಗೀತೆ ವಗೈರೆ 0-1-0; ಪಾಂಡವಗೀತೆ ವಗೈರೆ 0-1-6; ಅಣುಭಾಷ್ಯ ವಗೈರೆ 0-0-9; ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0-2-0; ಪುರಂದರದಾಸರ ಕೀರ್ತನೆಗಳು 0-6-0; ಉದಯರಾಗ 0-4-0; ಹರಿಭಕ್ತಿಸಾರ 0-1-0; ಸ್ವಪ್ನಪದ ಮಧ್ವನಾಮ 0 1-6; ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ

ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ
ಉಡುಪಿ, ದ. ಕ.

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗ್ಯೆರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗ್ಯೆರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ. 1—12—0

ಲಾಯರ್ ಯಂ ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಶೇರಿ 15-0-0 ಆಗುತ್ತೆ.

ಅಚ್ಚಾಗುತ್ತಲಿದೆ! ಪುರಾತನ ಸಂಗ್ರಹ!! ನವೀನ ಗ್ರಂಥ!!!

ಭೂತಾಳಪಾಂಡ್ಯರಾಯನ

ಸಂಪೂರ್ಣ ಕಟ್ಟುಗಳು ಇರುವ

ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ.

ಈ ಪುಸ್ತಕದಲ್ಲಿ ಪರಶುರಾಮಾವತಾರದ ಕಥೆಯೂ, ಭರತಖಂಡದ ಕ್ಷತ್ರಿಯರಾಜರ ವಂಶಾವಳಿಯೂ, ಧರ್ಮರಾಯನ ನಂತರ ಆಳಿದ ಅರಸರ ಹೆಸರುಗಳೂ, ವರ್ಷಗಳೂ, ಪರಶುರಾಮ ಸೃಷ್ಟಿಯ ಭೂಮಿ ವಿವರಗಳೂ, ಅದಕ್ಕೆ ಶೇರಿದ ೭೭ ದ್ವೀಪಗಳೂ, ಕನ್ನಡಾ ಜಿಲ್ಲೆಯ ಪೂರ್ವ ರಾಜರ ಸಂತತಿಯೂ, ಆಳಿದ ವರ್ಷಗಳೂ, ಕನಕವರ್ಮ ವೀರವರ್ಮ ಚರಿತ್ರೆಯೂ, ವೀರವರ್ಮನು ಮಯ್ಯೂರವರ್ಮನಾಗಿ ಬಂಟರ ಯಾ ನಾಡವರ ಮತಸ್ಥಾಪನೆ ಕಥೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಶವಾದ ಕಾರಣಗಳೂ, ಭೂತಾಳ ಪಾಂಡ್ಯನ ಪೂರ್ವಜರ ಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ, ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ, ಅಳಿಯಕಟ್ಟು ಆದ ಕಾರಣವೂ, ಅದರ ೧೪ ಕಟ್ಟು ೧೬ ಕಟ್ಟಳೆಗಳ ಪೂರ್ಣಾಭಿಪ್ರಾಯವೂ, ಭೂತಾಳಪಾಂಡ್ಯನ ವಿವಾಹವೂ, ಆತನು ಮಕ್ಕಳಿಗೆ ಅನ್ಯತವಾಗಿ ಕೊಟ್ಟ ಸ್ಥಳಮಾನಗಳೂ, ಅವನ ಅಳಿಯ ರಿದ್ಯಮ್ಮ ಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿ ಕೊಟ್ಟ ಸ್ಥಳ ಮಾನಗಳೂ, ಚುಂಗಡಿ ಅರಸರ ಮಾನಮರ್ಯಾದೆಗಳ ವಿಷಯ ಬರಸಿದ ಶಾಸನವೂ, ಅಳಿಯಕಟ್ಟಿಗೆ ಶೇರಿದ ೪೩ ಜಾತಿಗಳೂ, ಮತ್ತು ಅವರ ಗೋತ್ರಗಳು ತೆಗೆದು ಮಾಡಿದ ೬೦, ಬಳಿಗಳೂ, ೨ನೇ ಭೂತಪಾಂಡ್ಯನ ಚರಿತ್ರೆಯೂ, ಚೌಟ ಬಂಗರೇ ಮೊದಲಾದ ಸಂಸ್ಥಾನಾಧಿಪರ ಸೀಮೆ, ಮಾಗಣೆ, ಮಾನ ಮರ್ಯಾದೆಗಳೂ, ಜೈನ, ಬಂಟರ ೬೦ ಜನನ, (ಕೀರ್ತಿನಾಮಗಳೂ) ಕೇರಳದ ೪೩ ಜಾತಿಗಳೂ, ಸ್ಥಳನಾಮಾವಳಿಗಳೂ, ಏಳು ಮಂದಿ ರಾಜಂದ್ಯೆವಗಳ ಚರಿತ್ರೆಯೂ, ಇಕ್ಕೇರಿ, ಆನೆಗುಂದಿ ವಿಜಯನಗರದ ರಾಜರುಗಳ ಚರಿತ್ರೆಯೂ, ಆ ಕಾಲದ ಕಂದಾಯ ಕ್ರಮಗಳೂ, ಶಿಲಾ ಶಾಸನ, ತಾಮ್ರ ಶಾಸನಗಳ ಯಥಾ ನಕಲುಗಳೂ, ಅದರ ಅಭಿಪ್ರಾಯಗಳೂ, ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳೂ, ಅವುಗಳ ಉತ್ಸವಾದಿ ವಿವರಗಳೂ, ಮೊಗಲ್ ರಾಜರ ವಂಶಾವಳಿಯೂ, ಭರತಖಂಡಕ್ಕೆ ಅನ್ಯ ರಾಜರ ಪ್ರವೇಶ ಕಾಲಗಳೂ, ಶ್ರೀಮನ್ ೫ನೇ ಜಾರ್ಜಸಾರ್ವಭೌಮರ ಚರಿತ್ರೆಯೂ ವಗ್ಯೆರೆ ಅನೇಕ ವಿಧವಾದ ಪೂರ್ವ ಪುರಾಣಗಳ ಅನುಭವಗಳಿಂದ ಭರಿತವಾದ ಪುರಾತನ ಸಂಗ್ರಹಗಳು ಇದರಲ್ಲಿ ಅಡಗಿರುತ್ತವೆ. ಅಳಿಯ ಸಂತಾನದವರಿಗೂ, ಶಾಲಾ ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ಓದು ಬರಹ ಬಲ್ಲ ಸರ್ವರೂ ನೋಡತಕ್ಕ ಪುಸ್ತಕ.

ಅಪೇಕ್ಷಕರು ಆದಷ್ಟು ಬೇಗನೆ ಪತ್ರ ಬರೆದು ಹೆಸರುಗಳನ್ನು ದಾಕಲ್ಲು ಮಾಡಿಸಿಕೊಳ್ಳಬಹುದು. ಅಂಥವರಿಗೆ ಪುಸ್ತಕ ಒಂದರಲ್ಲಿ ೨ ಆಣೆ ಕಡಿಮೆ ದರದಲ್ಲಿ ಕೊಡಲಾದೀತು. ಪುಸ್ತಕವು ತಯಾರಾಗುತ್ತಾ ಬರುತ್ತದೆ. ಪುಸ್ತಕದ ಬೆಲೆ ಸಿದ್ಧವಾದ ಕೂಡಲೇ ತಿಳಿಸಲಾದೀತು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ವಿಳಾಸ:—

ಎನ್ ಎ. ಶೀನಪ್ಪ ಹೆಗಡೆ

ಅಮುಣಂಜೆ ಗುತ್ತು

ಪೋಸ್ಟು ಗುರ್ಪುರ, ದ. ಕನ್ನಡ.

'ಕುಶಲಮಂದಿರ'

ಶ್ರೀ ರಾಜರಾಜೇಶ್ವರಿ ದೇವಸ್ಥಾನ,

ಪೊಳಲಿ

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಅಶೋಕಘೃತ:— ಸ್ತ್ರೀಗಳಿಗೆ ಕ್ರಮತಪ್ಪಿ ಬಹಿಷ್ಟೆಯಾಗೋಣ, ಮುಟ್ಟಾದ ಕಾಲದಲ್ಲಿ ಬಹು ನೋವುಂಟಾಗುವಿಕೆ, ಮುಟ್ಟು ಕಳೆಯುವ ವರೆಗೂ ತೊಡೆಯ ಸಂದಿನಲ್ಲಿ ವಿಪರೀತವಾಗಿ ಬಾಧೆಯಾಗುವುದು, ಹೊತ್ತು ಗೊತ್ತಿಲ್ಲದೆ ಮುಟ್ಟಾಗೋಣ, ಅತ್ಯಲ್ಪವಾಗಿಯಾಗಲಿ ಅಥವಾ ಅತ್ಯಧಿಕವಾಗಿಯಾಗಲಿ ರಜಸ್ಸು ಸುರಿಯುವುದು, ಮಕ್ಕಳಿಲ್ಲದೆ ಬಹುಕಾಲ ಒಂಜೆಯಾಗಿರುವುದು, ವಾಡಿಕೆಯಾಗಿ ಗರ್ಭ ಸ್ರಾವವಾಗುವಿಕೆ, ಇವೇ ಮೊದಲಾಗಿ ನಾನಾ ತರದ ವ್ಯಾಧಿಗಳಿಗೂ ಅತ್ಯುತ್ತಮವಾದ ಔಷಧವು. ಆರೋಗ್ಯ ಮತ್ತು ಅಂದವಾಗಿಯೂ ಇರತಕ್ಕ ಮಕ್ಕಳನ್ನು ಪಡೆಯಬೇಕೆಂದು ಬಯಸುವ ಪ್ರತಿಯೊಬ್ಬ ಸ್ತ್ರೀಯು ನಮ್ಮ ಅಶೋಕಘೃತವನ್ನು ಅತ್ಯವಶ್ಯವಾಗಿ ಉಪಯೋಗಿಸಬೇಕು. ಸೀಸೆ 1ಕ್ಕೆ 1 ರೂಪಾಯಿ, ಎರಡು ಸೀಸೆ ವರೆಗೆ ವಿ. ಪಿ. ಚಾರ್ಜು 5 ಆಣೆ.

ಬೃಹತ್ ಚಂದ್ರೋದಯ ಮಕರಧ್ವಜ:— ನರಗಳ ದುರ್ಬಲತೆಗೂ, ಸತ್ವಗುಂದಿರುವುದಕ್ಕೂ, ಪುರುಷೇಂದ್ರಿಯವು ಕ್ಷೀಣಿಸಿರುವುದಕ್ಕೂ, ಜ್ಞಾಪಕ ಶಕ್ತಿಯು ಉಡುಗಿ ಹೋಗಿರುವುದಕ್ಕೂ ಮತ್ತು ಸ್ವಪ್ನ ಸ್ಖಲನಗಳಿಗೂ ಇದು ಅಮೂಲ್ಯವಾದ ಸಂಜೀವನವು "ಮದ್ದು ಕುಡಿಯುತ್ತಲೆ ಎದ್ದು ಕುಳಿತುಕೊಂಡರು" ಎಂಬದು ಮತ್ಯಾವ ಔಷಧಗಳಿಗೆ ಸುಳ್ಳಾದರೂ ನಮ್ಮ ಬೃಹತ್ ಚಂದ್ರೋದಯ ಮಕರಧ್ವಜಕ್ಕೆ ಮಾತ್ರ ಸುಳ್ಳಾಗದು. ಇಂದ್ರಜಾಲ ವಿದ್ಯೆಯೋ ಎಂಬಂತೆ ಇದನ್ನು ಸೇವನೆಮಾಡುತ್ತ ಬಂದ ಹಾಗೆಲ್ಲ ದಿನದಿನಕ್ಕೂ ವ್ಯಾಧಿಯನ್ನು ನೀಗಿ ಪಟುತ್ವವನ್ನು ಕೊಡುವ ವಿಷಯವು ಬಹು ಸ್ಪಷ್ಟವಾಗಿ ತಿಳಿಯುವುದರಿಂದ ನಾವೇ ವಿಶೇಷವಾಗಿ ಹೇಳಿ ಪ್ರಯೋಜನವಿಲ್ಲವು ಚಿಕ್ಕಂದಿನಲ್ಲಿ ದುರ್ವ್ಯಾಪಾರಕ್ಕೆ ಬಿದ್ದು ಪುರುಷ ಶಕ್ತಿಯನ್ನೇ ಕೆಡಿಸಿಕೊಂಡಿರುವವರು ಇದನ್ನು ಉಪಯೋಗಮಾಡಿದರಲ್ಲವೆ ಇದರ ಸರ್ವೋತ್ಕೃಷ್ಟತೆಯು ತಿಳಿಯುವುದು? ಬಹು ಸ್ವಲ್ಪ ಕಾಲದಲ್ಲಿಯೇ ಇಂದ್ರಿಯ ಪಟುತ್ವದವರನ್ನಾಗಿ ಮಾಡಿ ಸಂಪೂರ್ಣ ಪುರುಷ ಶಕ್ತಿಯನ್ನು ಕೊಡುವುದೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಒಂದು ವಾರದ ಮಟ್ಟಿಗೆ ಉಪಯೋಗವಾಗುವ ಔಷಧಕ್ಕೆ 3 ರೂಪಾಯಿ ವಿ. ಪಿ. ಚಾರ್ಜು 5 ಆಣೆ.

ಚ್ಯವನಪ್ರಾಶನ:— ಗಂಟಲಿನಲ್ಲಿಯೂ, ಶ್ವಾಸಕೋಶದಲ್ಲಿಯೂ ಉಂಟಾಗುವ ಎಲ್ಲಾ ವ್ಯಾಧಿಗಳಿಗೂ ಇದು ಅತ್ಯುತ್ತಮವಾದ ಗುಣಕಾರಿಯಾಗಿದೆ. ಶ್ಲೇಷ್ಮ ಸಂಬಂಧವಾದ ಎಲ್ಲಾ ವ್ಯಾಧಿಗಳಿಗೂ ಇದರಿಂದ ಸಂಪೂರ್ಣ ಗುಣ ಕಂಡು ಬಂದದೆ. ನಮ್ಮ ಚ್ಯವನಪ್ರಾಶನ ಎಲ್ಲಾ ವಿಧವಾದ ಕಫಗಳು, ಗೂರಲು, ಉಬ್ಬಸ, ಕ್ಷಯರೋಗ, ಗಾರ್ದಭಸ್ವರದಂತಹ ಒಡ್ಡಧ್ವನಿ, ಗಂಟಲಿನಲ್ಲಿ ಜನಿಸಿ ಇರತಕ್ಕ ಸಕಲ ವಿಧವಾದ ಹುಣ್ಣುಗಳು ಮೊದಲಾದವುಗಳನ್ನು ಕ್ಷಿಪ್ರದಲ್ಲಿಯೇ ವಾಸಿಮಾಡುವದಲ್ಲದೆ ಶಕ್ತಿವರ್ಧಕವಾದ ಟಾನಿಕ್ ಆಗಿದೆ. ಅನೇಕರು ನಮ್ಮ ಚ್ಯವನಪ್ರಾಶನವನ್ನು ಉಪಯೋಗಿಸಿ ಸರ್ವೋತ್ಕೃಷ್ಟವೆಂದು ತಿಳಿಸಿದ್ದಾರೆ. ಇದರ ಬೆಲೆ ಪೆಟ್ಟಿಗೆ ಒಂದಕ್ಕೆ 2 ರೂಪಾಯಿ, ವಿ. ಪಿ. ಚಾರ್ಜು 5 ಆಣೆ.

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಅರ್ಜಿಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರೆಯಬೇಕು.

MY ADDRESS.

P. SUBBAROY,

Ayurvedic Pharmacy,

Sri Perumalkoil,

SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,

ಆಯುರ್ವೇದ ಔಷಧಶಾಲೆ,

ಶ್ರೀ ಪೆರುಮಾಳ್ ದೇವಸ್ಥಾನ,

ಸನ್ನಧಿ, ತಂಜಾವೂರ್

ತ್ವರೆಮಾಡಿರಿ!

1915ನೇ ಇಸವಿಯ ಸುಂದರವಾದ ಕೆಲೆಂಡರುಗಳು.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಚಾರ್ಜು ಸೇರಿ ೧ಕ್ಕೆ ಆಣೆ ೩; ೬ಕ್ಕೆ ಆಣೆ ೧೩; ೧೨ಕ್ಕೆ ರೂ. ೧--೧೦--೦. ಇವು ಜನವರಿ ಆಖೈರ ವರೆಗೆ ಮಾತ್ರ ಸಿಕ್ಕುವವು ನಂತರ ಖರ್ಚಾಗುವವು. ಆದುದರಿಂದ ತ್ವರೆಮಾಡಿರಿ!

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು.

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತ್ತು ಆಣೆ 8 ಡಜನ್ 1ಕ್ಕೆ ರೂ. 5-4-0 ವಿ. ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಧಾವೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್‌ಮಾರ್ಕ್. 0—6—0. 12 ಡಬ್ಬಿಗಳಿಗೆ 3—8—0. ವಿ ಪಿ. ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ್.

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮುನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0. ಡಜನ್ 1ಕ್ಕೆ 1—2—0. ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು ಡಬ್ಬಿ 1ಕ್ಕೆ ರೂ. 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ದಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ. 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫೋರ್ಮರ್:— ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ

ಡಬ್ಲ್ಯು ಮೆಕ್ಸವೆಲ್, ವೈನಾಡ:— ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್. ಆರ್. ಗಂಗೋಲಿ:— ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ

ಡಾಕ್ಟರ್ ದಾಂಡೇಕರ್, ಎಲ್ ಎಮ್. ಎಂಡ್. ಎಸ್:— ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರೆಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಉಲನ್ ಮಾರ್ಟ್, ಕೊಚ್ಚಿಕರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೋ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿರುವುದೋ, ಹಾಗೆಯೇ ಬುದ್ಧಿ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು. ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೇರಿಟ್ "ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವದ

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0 4-0 ಬೇರೆ; 3 ಸೀಸೆಗಳ ಕ್ರಯ ರೂ. 2-10 0, ಅ. ವೆ. 0-7-0 ಬೇರೆ.

ಸೂಚನೆ — ಅನೇಕ ದಗಾಕೋರರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಹೆಸರಿಯಿಂದ ತಮಗೆ ಹೆಚ್ಚು ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕುತ್ತ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ನೀವು ಹೋಗಬಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ದುಹರುಬಾಸ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವ್ಯವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಆಕ್ಟಕ್ಷ ಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುದು. ಇದರಲ್ಲಿ ಮದ್ಯದ (ಅಲ್ಕೊಹೋಲ್) ಸಂಪರ್ಕವಿಲವು. ಒಂದೇ ಒಂದು ಸಲ ನಿಮ್ಮ ಕೈವಸ್ತ್ರದಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ 0-8 0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕೆ 0- 12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್ ಇಮಾಕದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪಿಲ್ಸ್" ಅಥವಾ ವಿದ್ಯುಚ್ಛಕ್ತಿಯ ವಶೀಕರಣ ಮೌಕ್ತಿಕಗಳು

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತು ದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವ್ಯಸನದಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.



ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ವಭಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಒಣಗಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಿಸಿ"ಯು ಕ್ರಮವನ್ನು ಅನುಸರಿಸುತ್ತದೆ, ಮುಖವು ಶುದ್ಧವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2 0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ತಾವು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು, ಅವುಗಳಿಂದ ನಾನು ವಿಶೇಷವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ"

3 ಅಮೋದ್ ವಲ್ಲದ ಮುಹಮ್ಮದ ಭಾಯೀ ಇಬ್ರಾಹಿಮ್ ಪಾಟೇಲ್, ಪನವೇಲ್—"ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ."

4 ವಿ. ಆರ್ ಶಾಸ್ತ್ರಿ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಯಮ್, ತ್ರಾವಣಕೋರ್ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾನಜೀ ನರಸಿಂಗರಾವ್, ಸಂಸ್ಥಾನ ಪಲಟನ.—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಹೆಚ್ಚಾಗಿ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ.**

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು:—ಅಂತೋನಿ ಎಲ್ ರೇಗೊ, ಸ್ಟ್ರೀಟ್ ಮಾರ್ಕೆಟ್ ಬಜಾರ್, ಕಲ್ಲಿಕೋಟೆ.
ಸ್ವದೇಶಿ ಎಂಪೋರಿಯಮ್, ಸೇಲಂ.
ಶ್ರೀನಿವಾಸಮ ಚೆಟ್ಟಿಯಾರ್, ಲಾಲ್‌ಗುಡಿ, ಪುವಲೂರ್, ತಿರುಚಿನಾಪಳ್ಳಿ
ಎವರ್ ಪ್ಯಾಸ್ ಶಾಪ್, ಮಡಿಕೇರಿ.
ವಿ ಬಾಲಕೃಷ್ಣ ಸ್ವಾಮಿ, ಬಿಗ್ ಬಜಾರ್ ಸ್ಟ್ರೀಟ್, ಕೊಯಂಬುತ್ತೂರು
ಆರ್ಮೊನ್ ಎಂಡ್ ಮಯರ್ ಶೋಪ್, ಉಡ್ಪಿ.

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ ಇಲ್ಲವಾದರೆ ನಮಗೆ ತಿಳಿಸಿದರೆ ನಿಮ್ಮನ್ನು ತೃಪ್ತಿಪಡಿಸುವೆವು.

ವಿಳಾಸ:— ಸ್ಟೀವನ್ ಎಂಡ್ ಸನ್ಸ್, ಮಂಗಳೂರು.

S. U. N. & CO.,

BENARES CITY, U P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಸೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮವಾಗಿ ಕಳುಹಿಸಲಾಗುವುದು.

ತಮ್ಮ ವಿಳಾಸ.— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ.

ಉತ್ಕೃಷ್ಟವಾದ ಮೂರು ಔಷಧಗಳು.

ಗ್ರೆಂಟ್ ಮೆಡಿಕಲ್ ಕೊಲೇಜಿನಲ್ಲಿ ಸೂಲಗಿತ್ತಿತನ ಕಲಿತು ಸರ್ಟಿಫಿಕೇಟ್ ಪಡೆದ ಕಮಲಾ ಬಾಯಿ, ತುಲಸೀ ಬಾಯಿ ಎಂಬ ಸೂಲಗಿತ್ತಿಯರಿಂದ ತಯಾರಿಸಲ್ಪಟ್ಟವುಗಳು.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1.

(ಆರ್ತವ ಶೂಲೆ ಹೋಗಲಾಡಿಸುವ ಬಗ್ಗೆ.)

ಅಬಲಾಸಂಜೀವನಿ ಗುಳಿಗೆಗಳು ಎಲ್ಲಾ ಬಗೆಯ ಆರ್ತವ ಶೂಲೆಯನ್ನು ಹೋಗಲಾಡಿಸುವುದಕ್ಕೆ ಏಕರೀತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆಗೆ ಯೋಗ್ಯವಾದ ಮಾತ್ರೆಗಳಾಗಿರುವುವು ಅನೇಕ ಕಾಲದವರೆಗೆ ಪುಷ್ಪವತಿಯಾಗದೆ ಇದ್ದುದು ಕೂಡ ಇವುಗಳಿಂದ ಸರಿಯಾಗುವುದು. ಅಂತರೌಷಧಿಗಳಿಂದ ಗುಣವಾಗಬಹುದಾದ ಎಲ್ಲಾ ಗರ್ಭಕೋಶದ ಶೂಲೆಗಳು ಇವುಗಳಿಂದ ಗುಣವಾಗಿ, ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು ಒಂದು ಸೀಸೆಯ ಕ್ರಯ ರೂ. 1 ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 2.

(ಬಿಳೀ ಸ್ರಾವದ ಬಗ್ಗೆ.)

ಈ ಬಾಧೆಯಿಂದ ವಿರಹಿತರಾದ ಸ್ತ್ರೀಯರು ಬಹಳ ವಿರಳ. ಈ ಸ್ರಾವದಿಂದ ಹೆಚ್ಚಿನ ನಿರ್ಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವುವು ಈ ಸ್ರಾವವು ರಕ್ತಸ್ರಾವದಂತೆ ಬಲಹೀನಕರ ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರುವುದು, ಆಗಾಗ್ಗೆ ಕಟಿಭಾಗದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗುವುದು, ಮಲವಿಸರ್ಜನೆ ಸರಿಯಾಗದಿರುವುದು. ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು — ಒಂದೇ ಪೊಟ್ಟಣವನ್ನು ಪರೀಕ್ಷೆಬಗ್ಗಾಗಿ ತರಿಸಿದರೆ ಆಶ್ಚರ್ಯಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು. ಒಂದು ಸೀಸೆಯ ಕ್ರಯ 1 ರೂಪಾಯಿ. ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 3.

(ಕೆಂಪು ಸ್ರಾವದ ಬಗ್ಗೆ.)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದುವುಗಳು ಉಂಟಾಗಿ, ಗರ್ಭಕೋಶದ ಶೂಲೆ, ನಿರ್ಬಲತೆ ತಲೆದೋರುವುವು. ಈ ಸ್ರಾವವು ಗರ್ಭಕೋಶದಿಂದ ಸ್ರವಿಸುವ ರಕ್ತವೇ ಸರಿ. ಈ ಗುಳಿಗೆಗಳನ್ನು ಕೂಡಲೇ ಸೇವಿಸುವುದಕ್ಕೆ ಅಸಡ್ಡೆ ಮಾಡಿದರೆ, ಈ ಪೀಡೆಯು ಅತಿಶಯಿಸಿ, ಬೇಗನೇ ಗುಣ ಹೊಂದಲಿಕ್ಕಿಲ್ಲ. ಒಂದು ಸೀಸೆಯ ಕ್ರಯ 1 ರೂಪಾಯಿ ಅಂಚೆ ಹಾಸಲು 4 ಆಣೆ ಏಜೆಂಟರು:—

ದಿ ಊಲನ್ ಮಾರ್ಟ್, ಹಂಪನ್‌ಕಟ್ಟಾ, ಮಂಗಳೂರು. ದಕ್ಷಿಣ ಕನ್ನಡ.

Dr Nava Ratna & Sons,
253 Kalbadevi Road,
BOMBAY.

Estd 1888 ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ವ ತ್ತು ಹಟಮಾರಿ **ಗಜಕರ್ಣವು** ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರೆ ವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಿಬ್ಬೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕರೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾರ್ಸಾಪರಿಲ್ಲೆಯು**. ಕ್ರಯ ಬಾಟ್ಲಿಗಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ನೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಶರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಬ್ರಹ್ಮಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ತಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿಯ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M. Nath & Co, *Ayurvedic Chemists*,

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ, ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜಂ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ



ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟಾ, ಮಂಗಳೂರು

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*,

THE CANARA CYCLE MART

Udipi, S. Canara.

ಲೋಕಪ್ರಸಿದ್ಧವಾದ ಪಂಜಾ ಸಾಲಾಮಿಸ್ರಿ ಮುರಬ್ಬಾ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳುಗಡೆ, ಶಾಮಗಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾ ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬವನ್ನು ಪ್ರತಿಯೊಬ್ಬರು ಸೇವಿಸುವ ಹಾ.. ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವದು.

ಪಂಜಾ ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು

ಒಂದು ಡಬ್ಬಿ ಮುರಬ್ಬವನ್ನು 15 ದಿನಗಳು ಉಪಯೋಗಿಸುವದರಿಂದ ಪೂರ ಗುಣಕೊಡುತ್ತೆ 2—3 ಡಬ್ಬಿ ಮುರಬ್ಬವನ್ನು ಉಪಯೋಗಿಸುವದರಿಂದ ಜನ್ಮಾಂತರದ ವರಿವಿಗೂ ಗುಣಕೊಡುತ್ತೆ.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6.

ಏಜಂಟರು — ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ. ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ ಮನ್ನಾಲಾಲ್, ಡಿಲ್ಲೀ ವೈದ್ಯರು, 5 ಹಾಜಿಸಾಹೇಬ್ ಮಹಡಿ ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣುತ್ತಿರಿ. ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಿಕೆಗೆ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು; ಹಚ್ಚಿದಮೇಲೆ ಕೂದಲು ಕೆಂಪು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂ 1; ಅಂಚೆ ಹಾಸಲು 4 ಆಣೆ

ವಿಳಾಸ:— ವಿ. ಎ. ಎಸ್. ಪ್ರಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

ಸನ್ 1915 ಇಸವಿಯ

ಪಾಕೆಟ್ ಡೈರಿ.

ಶ್ರೀ ಸೀತಾ ರಾಘವ



ಪಾಕೆಟ್ ಡೈರಿಗಳು.

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ, ಅನೇಕ ಹೊಸ ಸಂಗತಿಗಳಿವೆ.

ನಂಬ್ರ ೧. ಸಣ್ಣ ಸೈಜು ಸಾದಾ 0—4—0.
„ ೨. ಪೆನ್ಸಿಲ್ ಮುಚ್ಚಳವುಳ್ಳದ್ದು 0—6—0.

ಕೆಲವು ಪ್ರತಿಗಳು ಮಾತ್ರ ಉಳಿದಿವೆ. ಜಾಗ್ರತೆ ಬರದು ತರಿಸಿಕೊಳ್ಳಿ. ನಂಬ್ರ 1 ಮತ್ತು ನಂಬ್ರ 2ನೇ ಡೈರಿಗಳು ಮಾತ್ರವೇ ಇವೆ.

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ.
ಹೆಚ್ಚಾಗಿ ತರಿಸುವವರಿಗೆ ರೂ. ೧ಕ್ಕೆ ೨ ಆಣೆ ಕಮಿಷನ್ ದೊರೆಯುವುದು.
ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.
ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

Printed & Published by V. S. Kamath at the Mangalore Trading Association's Sharada Press, Mangalore

Registered No. 498 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ —ವರುಷ ೧ಕ್ಕೆ ರೂ. 1—4—0 ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ IX | ಮಂಗಳೂರು ತಾ 5ನೇ ಫೆಬ್ರುವರಿ ಶುಕ್ರವಾರ 1915 | ಸಂಚಿಕೆ 6

ಕೆಲವು ಪ್ರತಿಗಳು ಮಾತ್ರ ಉಳಿದಿವೆ.

1915ನೇ ವರುಷದ ಪೋಕೆಟ್ ಡೈರಿಗಳು.

ನೋಟು ಬೂಕು ಸೈಜು 8 ಆಣೆ

ನಮ್ಮಲ್ಲಿ ತಯ್ಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ಬ್ಯಾಂಡು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ! ವ್ಯಾಪಾರಸ್ಥರಿಗೂ ರಖಂ ತಕ್ಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ.

ಡೈರಿಗಳು ಸಿಕ್ಕುವ ವಿಳಾಸ:— **ಶಾರದಾ ಛಾಪಖಾನೆ,**

ರಥಬೀದಿ, ಮಂಗಳೂರು

ನೋಟೀಸು.

ಒಂಟ್ವಾಳ ಕಸಬಾ ಚಣ್ಣಿಮಾರಲ್ಲಿರುವ ಪಿಲತಬೆಟ್ಟು ಮಂಜುನಾಥ ನ್ಯಾಕರ ಮಗ ಶ್ರೀನಿವಾಸ ನ್ಯಾಕನು ಈ ಮೂಲಕ ತಿಳಿಸುವದೇನಂದರೆ — ನನ್ನ ತಂದೆ ಮಂಜುನಾಥ ನ್ಯಾಕರಿಗೆ ಹೆಚ್ಚಿನ ಕಾಹಿಲೆಯಿದ್ದಾಗ್ಯೆ ತಾ 22—1—1915ಲ್ಲು ನಾನು ಚಣ್ಣಿಮಾರು ನನ್ನ ಮನೆಯಿಂದ ಒಂಟ್ವಾಳ ಆಸ್ಪತ್ರಿಯ ಡಾಕ್ಟರರಿಗೆ ಕರತರುವ ಒಗ್ಯೆ ಹೊರಟು ಒರುವಾಗ ನನ್ನ ಕೂಡೆಯಿದ್ದ ನಾನು ಒರಿಸಿಕೊಂಡ ಕೆಲವು ದಿವಾಂಡ ನೋಟುಗಳ, ಮತ್ತು ನಮ್ಮ ಹೆಸರಿಗೆ ಒರಿಸಿಕೊಂಡ ಕೆಲವು ಆವೃಪಸ್ತೈವಜಗಳು ವ ಕಾರ್ಕಳದಿಂದ ಒಂದರೆ ವ್ಯವಹರಣೆ ಸವಸ್ಮಂದ ಅಪೀಲು ಮಾಡುವ ಒಗ್ಯೆ ತಂದ ಜಿಡ್ಡಮೆಂಟು ಡಿಕ್ರಿ ವಿನಹಾ ಇತರ ದಾಕ್ಕೆಗಳು ವಗ್ಯೆರೆ ರಿಕಾರ್ಡು, ಕೆಲವು ಕೈ ಕಾಗದಗಳು, ಮತ್ತು 1912-1913-1914 ಇಸವಿಗಳ ಬಾಬ್ತು ಮಕ್ಲುಗಳು ಬರಕೊಟ್ಟ ಗೇಣಿಚೀಟುಗಳು, ಕೆಲವು ರಶೀದಿಗಳು, ಮುಂತಾದ ರಿಕಾರ್ಡುಗಳು ಇರುವ ಒಂದು ರಿಕಾರ್ಡಿನ ಕಟ್ಟು ಗೈರವಿಲೆಯಾಗಿ ಹೋಗಿಯದೆ

ಆದುದರಿಂದ ಸದರಿ ರಿಕಾರ್ಡಿನ ಕಟ್ಟು ನನಗೆ ಯಾರಾದರೂ ತಂದು ಕೊಟ್ಟರೆ ಅವರಿಗೆ ನಾನು 10 ಹತ್ತು ರೂಪಾಯಿಗಳು ಇನಾಮಾಗಿ ಕೊಡಲಿಕ್ಕೆ ಸಿದ್ಧನಿರುತ್ತೇನೆಂಬ ಸಂಗತಿ ಈ ಮೂಲಕ ಶೃತಪಡಿಸಿರುತ್ತೇನೆ

ಶ್ರೀನಿವಾಸನ್ಯಾಕ.

ಉತ್ತಮ ತರಗತಿಯ ಮೋಪುಗಳು.

ಕುಂಬಳೆ ರೈಲ್ವೆ ಸ್ಟೇಶನ್ ಒಳಿ ಹಳೇ ಅಬ್ಕಾರಿ ಸಾಯರ ಕಚೇರಿ ಸಮೀಪ ಹೊಳೆ ಕಿನಾರೆಯಲ್ಲಿ ಫೀಟ್ 15ರಿಂದ 43 ವರೆಗೆ ಉದ್ದವಿರುವ ಸಾಗುವಾನಿ, ಬೆಂಡಕಿ, ಬೀಟೆ, ಮರವ ಮತ್ತು ತಿರುವ ಮುಂತಾದ ಅನೇಕ ಜಾತಿಯ ಒಳ್ಳೇ ಮರಗಳು ಮತ್ತು ಬೇರೆ ಬೇರೆ ಕೆಲಸಕ್ಕಾಗುವ ಸಪೂರ ಮರಗಳ ಸಣ್ಣ ಸಣ್ಣ ತುಂಡುಗಳು ಮಾರಾಟಕ್ಕೆ ಸಿದ್ಧವಿವೆ. ಖ್ಯಾಶ್ ಉಳ್ಳವರು ಈ ಕೆಳಗೆ ದಸ್ಕತು ಮಾಡಿದವರ ಮುಂದೆ ಖುದ್ದು ಯಾ ಪತ್ರವ್ಯವಹಾರ ನಡಿಸಿದ್ದಲ್ಲಿ ಎಲ್ಲಾ ವಿವರ ತಿಳಿದು ಬಂದೀತು.

ಎಸ್ ವಿಟ್ಠಳ ಕಾಮತ್,

ಕುಂಬಳೆ, ದ. ಕನ್ನಡಾ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಓ. ಪಿ. ನಂಬ್ರ $\frac{16}{1915}$.

ಕಾರ್ನಾಡ ಲಕ್ಷ್ಮಣರಾವ್ ಕೂಡಾ ನಾಲ್ಕು ಜನರು—ಅರ್ಜಿದಾರರು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ.—

ಕಾರ್ನಾಡ ವೆಂಕಟರಾಯರ ಮಗ ಬೊಂಬೈ ಸ್ಟೆಂಡಾರ್ಡ್ ಒಯಿಲ್ ಕಂಪೆನಿಯಲ್ಲಿ ಟ್ಯಾಪಿಸ್ಟನಾಗಿರುತ್ತಿದ್ದ ಕಾರ್ನಾಡ ರಾಘವೇಂದ್ರರಾಯರು ಇದೇ ಕಳೆದ ತಾ. 20—10—1914ರಲ್ಲು ಮಂಗಳೂರಲ್ಲಿ ಮೃತವಾಗಿರುವದರಿಂದ ಸದರಿಯವರಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲು ಮಾಡುವರೆ ಸೆಕ ನ್ ಸರ್ಟಿಫಿಕೇಟು ಬಗ್ಯೆ ಮೇಲ್ಕಂಡ ಅರ್ಜಿದಾರರು ಬರಕೊಂಡ ಅರ್ಜಿಯನು 18—2—1915ರಲು ತನಿಖೆಗೆ ಇಟ್ಟಿರುತ್ತದೆ. ಇದಕೆ [illegible] ಕಾರ್ತಿಕನಲ್ಲಿ ಜಾಹೀರು ಮಾಡಿಕೊಳ್ಳತಕ್ಕದು.

ಕುಪ್ಪಾ ಕೋರ್ಟ್ ಕಡೂರು ಡಿಸ್ಟ್ರಿಕ್ಟ್ | ತಾರೀಖು 30—1—1915.

[illegible]

ಬೇಕಾಗಿರುತ್ತದೆ.

ಯವ್ವನ ಪ್ರಾಯದ ಕಾಫಿ ಯಸ್ಟೇಟಿನ ಚನ್ನಾಗಿ ಅನುಭೋಗ ಇರುವ ಮತ್ತು ೫೦ ಯಾ 60 ಕೂಲಿ ಜನಗಳನ್ನು ಒದಗಿಸುವ ರೈಟರ್ ಈ ಕೆಳಗಿನ ವಿಳಾಸದವರಿಗೆ ಅವಶ್ಯವಿದೆ.

ಯಫ್. ಜೆ. ಪಾರ್ಟಿನ್,

ಚಿದ್ರಬನ್ನು

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಲಾಗ್ಯಾತಿನಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರ ವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ

ಕಾಪಿ ಪುಡಿಯು ರಾತ್ಲ ಒಂದಕ್ಕೆ 0—1—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ಕೇಳಿಕೊಳ್ಳಬಹುದು

Piedade Pinto,

Manager.

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯ ಪುಸ್ತಕವು.

ಜೀವಿತಕಾಲದ ವರೆಗೂ ನಮ್ಮ ಶರೀರವನ್ನ ರೋಗಗಳು ಹತ್ತರ ಬಾರದೆ ಮಾಡಿಕೊಳ್ಳುವದೇ ನಮ್ಮ ಮೊಟ್ಟಮೊದಲು ಕರ್ತವ್ಯವು ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನ ಪುನಹ ಹೇಗೆ ಪಡೆಯುವದು ಎಂಬ ವಿಷಯಗಳಲ್ಲಿ ಸಂಪೂರ್ಣ ಜ್ಞಾನವನ್ನ ಪಡೆಯ ಬೇಕಾದವರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನ ಓದಿರಿ ಈ ಗ್ರಂಥವನ್ನು ಪ್ರಜೆಗಳ ಕ್ಷೇಮಾರ್ಥವಾಗಿ ಕೋರಿದವರಿಗೆ ಕ್ರಯವೂ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವದು ಈ ಪುಸ್ತಕವು ಒಂಭತ್ತು ಭಾಷೆಗಳಲ್ಲಿ ಛಾಪಿಸಲ್ಪಟ್ಟು ಇದುವರೆಗೆ ನಾಲ್ಕು ಲಕ್ಷ ಪ್ರತಿಗಳ ಕಳುಹಿಸಲ್ಪಟ್ಟಿರುವದೇ ಇದು ಎಷ್ಟು ಉಪಯೋಗಕರವಾದದ್ದು ಎಂಬದಕ್ಕೆ ಸಾಕ್ಷಿಯಾಗಿರುತ್ತದೆ

ಕಲಿಯುಗದ ಕಾಮಧೇನು

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಿಮಾಡಿ ಹೆಚ್ಚುಮಾಡುತ್ತದೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ ಜೀರ್ಣಶಕ್ತಿಯನ್ನ ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗ ಮಂತೆ ಮಾಡುವದು ಅಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನ ಪುನಃ ಕೊಡುತ್ತದೆ ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1—0—0.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಸೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಸೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ

		ಮೊದಲನೇ ವರ್ಷ	2ನೇ ವರ್ಷ
ಹೊಸಕೇಸ್ (ಜೀವ)	ರೂ	13,329—0—0	22,549—0—0
„ (ವಿವಾಹ)	„	25,670—0—0	38,933—0—0
ಒಟ್ಟು ಕೇಸುಗಳು	„	38,999—0—0	61,482—0—0
ವಸೂಲಾದ ಪ್ರೀಮಿಯುಮ್	„	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	„	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	„	10,000—0—0	50,000—0—0
(ಜನರಲ್) ರಕ್ಷಿತ ಧನ	„	37,220—0—0	23,778—3—2

ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1 ಅದು 1912ನೇ ಲೈಫ್ ಎಸ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು 2 ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು 4 ರೂ 3,00,000ಗಿಂತಲೂ ಹೆಚ್ಚಿಗೆ ಭಾಧ್ಯತೆಗಳನ್ನು ಕೊಟ್ಟಿದೆ 5 ಫಂಡು 1,00,000 ರೂಪಾಯಿಗೆ ಹೆಚ್ಚಿದೆ. 6 ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ 7 ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ 8 ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ 9 ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು 10 ಕೊಟ್ಟ ಪ್ರೀಮಿಯುಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ

"ಬಂಗಾಳೀ"—14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು ಸುಮಾರು 3 ಲಕ್ಷ ಭಾಧ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟುಗಳು ಬೇಕಾಗಿವೆ ಎಲ್ಲಾ ವಿಧದ ಏಜಂಸ್ಸಿ ಶರ್ತಗಳಿಗೆ—

ವಿಳಾಸ— **ಲಕ್ಷ್ಮಣ ರಾವ್ ಬ್ರದರ್ಸ್,**

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು ಪ್ರೋನ್ಸು, ಉಡುಪಿ ಇವರಿಗೆ ಬರೆದುಕೊಳ್ಳಿರಿ

ಕನ್ನಡ ಲಿಪಿಯ ಪುಸ್ತಕಗಳು.

ರಾಕ್ಷಸ ಸಂ|ದ ಉಡುಪಿ ಪಂಚಾಂಗವು.

ಈ ಆರ್ಯಸಿದ್ಧಾಂತ ಪಂಚಾಂಗದಲ್ಲಿ ವಿವಾಹೋಪನಯನಾದಿ ಮುಹೂರ್ತಗಳೇ ಮೊದಲಾದ ಅನೇಕ ಉಪಯುಕ್ತ ವಿಷಯಗಳಿರುವದಲ್ಲದೆ ಸೂರ್ಯಸಿದ್ಧಾಂತ ಪ್ರಕಾರ ತಿಥಿ ನಕ್ಷತ್ರಗಳನ್ನೂ ಕೊಟ್ಟದೆ ಪಂಚಾಂಗವು 60 ಪುಟಗಳಿಂದ ಕೂಡಿರುವದು. ಬೆ: 0—2—6 ಮಾತ್ರ ವ್ಯಾಪಾರಿಗಳಿಗೆ ಡಿಸ್ಕೌಂಟು ಕೊಡಲಾಗುವದು

ಋ ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಆಶ್ವಲಾಯನ ಸಂಧ್ಯಾವಂದನ (ಮರತ್ರಯದವರಿಗೆ) 3 ಆಣೆ, ಯಜುರ್ವೇದ ಸಂಧ್ಯಾವಂದನ (ಮರತ್ರಯದವರಿಗೆ) 2 ಆಣೆ, ಋ ಬ್ರಹ್ಮಯಜ್ಞ ವೈಶ್ವದೇವ ಔಪಾಸನ 3 ಆಣೆ, ಪ್ರಾತರಾಹ್ನಿಕ ಪದ್ಧತಿ 3 ಆಣೆ, ದೇವಪೂಜಾ ಪದ್ಧತಿ 3 ಆಣೆ, ವಾಯುಸ್ತುತಿ 2 ಆಣೆ, ದ್ವಾದಶಸ್ತೋತ್ರ 2 ಆಣೆ, ವಿಷ್ಣುಸಹಸ್ರನಾಮ ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ, ವಿ ಸಹಸ್ರಕೃಷ್ಣಾಷ್ಟೋತ್ತರನಾಮಾವಳಿ 0-2-6, ಅಭಿಷೇಕ ಸೂಕ್ತಗಳು 0 2 0, ಶ್ರೀಸೂಕ್ತ ಪುರುಷಸೂಕ್ತ 0 1 0, ಸುಂದರ ಕಾಂಡ ಕಥಾಸಾರಸಂಗ್ರಹ ವಗೈರೆ 0 2 0, ಗಜೇಂದ್ರ ಮೋಕ್ಷ 0-1 6, ಗೋಪಿಕಾಗೀತೆ ವಗೈರೆ 0 1-0, ಪಾಂಡವಗೀತೆ ವಗೈರೆ 0-1-6, ಅಣುಭಾಷ್ಯ ವಗೈರೆ 0-0 9, ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0-2-0, ಪುರಂದರದಾಸರ ಕೀರ್ತನೆಗಳು 0-6 0, ಉದಯರಾಗ 0-4-0, ಹರಿಭಕ್ತಿಸಾರ 0-1-0, ಸ್ವಪ್ನಪದ ಮಧ್ವನಾಮ 0 1-6, ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0, ಉಡುಪಿ ಶ್ರೀ ಕೃಷ್ಣ ಚರಿತ್ರೆ 0-3-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ.

ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,

ಉಡುಪಿ, ದ. ಕ.

ಅಚ್ಚಿನಲ್ಲಿರುವುದು!   ಅಚ್ಚಿನಲ್ಲಿರುವುದು!

ವೆಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು
(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯ ನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನ ನಿತ್ಯದ ಪರಣಪುಸ್ತಕವಾಗಿರಲು ಉಚಿತವಾಗಿರುವುದು ವೆಂಕಟೇಶನು ಗಿರಿಯಲ್ಲಿ ನಡಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ

ಕವಿ ಎಂಡ್ ಸನ್ಸ್,
ಮಂಗಳೂರು

ವಿನೋದ!   ಮಾಸಪತ್ರಿಕೆ!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಪತ್ತೆದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯ-ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳು, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧ ರೂಪಾಯಿ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ

ವಿಳಾಸ —ಮ್ಯಾನೇಜರ್ "ಚಾತುರ್ಯ"
ಬೆಂಗಳೂರು, ಸಿಟಿ.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ

ಡೊಸ್ತ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ ೩—೪—೦ ಆಗಿರುತ್ತದೆ, ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು

ಮ್ಯಾನೇಜರ್,   ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರ ಪೇಟೆ, ಧಾರವಾಡ

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಉತ್ಕೃಷ್ಟವಾದದ್ದಾಗಿದೆ 5 ನಿಮಿಷದೊಳಗ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎರಡು ಒರುವಂದಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr Navaratna & Sons,
Kalbadevi Road BOMBAY

ಏಜಂಟರು —ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ನರಳುವದೇತಕ್ಕೆ?

ಮನೆಯಲ್ಲಿಯೇ ವೈದ್ಯನಂತಿರುವ

ಇಕ್ಲಿಪ್ಸ್ ಬಾಮ್ ಎಂಬ ಔಷಧವಿರುವಾಗ?

ಇದು ತಲೆನೋವು, ಸೊಂಟದ ನೋವು, ಉಳುಕು, ಸಂಧಿ ದೌರ್ಬಲ್ಯ, ವಾತ, ಮೇಹ ವಾತ, ನೆಗಡಿ, ಶೈತ್ಯ, ಗಂಟಲು ನೋವು, ವಾತಶೂಲೆ, ಹಲ್ಲು ನೋವು, ಎದೆನೋವು ಇತ್ಯಾದಿ ನೋವುಗಳನ್ನು ಗುಣಪಡಿಸುವದು ಚೇಳು, ಜಾಡರ ಹುಳ, ನಾಯಿ ಮೊದಲಾದವುಗಳ ಕಡಿತ ಇದರಿಂದ ಖಂಡಿತವಾಗಿ ಪರಿಹಾರ ಕುರು, ರಾಜಕುರು, ಹುಣ್ಣು, ದದ್ದು, ಘಾಯ, ಬೆಂಕಿ ತಾಗಿದ ಸುಟ್ಟ ಘಾಯ, ಬಾಣಂತಿಗಳ ಮೊಲೆ ಒಡೆಯುವದು, ಮೊಡವೆ, ಕಾಲು ಒಡೆಯುವದು, ಇತ್ಯಾದಿ ವ್ಯಾಧಿಗಳಿಗೆ ಸಿದ್ಧೌಷಧ!!

ಕ್ರಯ ಕರಡಿಗೆ 1ಕ್ಕೆ 8 ಆಣೆ ವಿ. ಪಿ. ಬೇರೆ. ಡಜನ್ ಕರಡಿಗೆ 4—12—0, ವಿ. ಪಿ. ಬೇರೆ.

ಸಿಫಾರಸು ಪತ್ರ:—ಬಿ ಸಿ ಎಸ್. ಹೆಬ್ರಿ — ನನ್ನ ಸ್ನೇಹಿತರೊಬ್ಬರಿಗೆ ಸೊಂಟ ಹುಣ್ಣು ಕೊಳಕು ಹುಣ್ಣುಗಳಿದ್ದವು. ಎಂಥೆಂಥಾ ಔಷಧಿಗಳನ್ನು ಮಾಡಿದರೂ ನಾಲ್ಕು ವರ್ಷಗಳಿಂದಲೂ ಆ ಹುಣ್ಣು ಗುಣವಾಗಲೇ ಇಲ್ಲ ನಿಮ್ಮಿಂದ ತರಿಸಿ ಒಂದು ಕರಡಿಗೆ ಬಾಮನ್ನು ನಾನು ಪರೀಕ್ಷೆ ಬಗ್ಗೆ ಅವರಿಗೆ ಕೊಟ್ಟಲ್ಲಿ ಆ ಹುಣ್ಣು ಒಂದೇ ವಾರದಲ್ಲಿ ಮಾಯವಾಗಿರುವದು. ಕೂಡಲೇ 1 ಡಜನ್ ಬಾಮ್ ವಿ. ಪಿ ಮೂಲಕ ಕಳುಹಿಸಿರಿ

☞ ಹೆಚ್ಚಿನ ಔಷಧಿ ಮಾಹಿತಿಗೆ ಅರ್ಧಾಣೆ ಚೀಟು ಇಟ್ಟು ಬರಕೊಳ್ಳುವದು.

ವಿಳಾಸ: —
ದಿ ಇಕ್ಲಿಪ್ಸ್ ಕಂಪೆನಿ,
ಕೊಡಿಯಾಲಬೈಲ್, ಮಂಗಳೂರು

ಏಜಂಟರು: —
ಸುಗಂಧವಿಲಾಸ,
[illegible]

ಅರ್ಧ ಬೆಲೆ!

ಒಂದು ತಿಂಗಳ ತನಕ ಮಾತ್ರ



ನಮ್ಮ ಸೆಟಿಸ್‌ಫೇಕ್ಷನ್ ಫ್ಲೂಟ್ ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತದಲ್ಲದೆ ಎಲ್ಲಾ ವಾಯುಗುಣಗಳಲ್ಲಿಯೂ ಬಾಳುವಂಥಾದ್ದಾಗಿದೆ ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ ಗಾಳಿ ಒರುವ ಪೆಟ್ಟಿಗೆಯು ಎಂಥಾ ಶಿಖೆಯನ್ನೂ ತಡೆಯುವದು. ಖಾಯಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು

ಕ್ರಯ ಸಿಂಗಲ್ ರೀಡ್ ರೂ 38, 44, 50, ಈಗ ರೂ. 19, 22, 25ಕ್ಕೆ ಕೊಡಲ್ಪಡುವದು ಡಬ್ಬಲ್ ರೀಡ್ ರೂ 60, 70, 80, ಈಗ ರೂ 30, 35, 40ಕ್ಕೆ ಕೊಡೋಣಾಗುವದು ಆರ್ಡರಿನೊಂದಿಗೆ ರೂ 5 ಅಡ್ವಾನ್ಸ್ ಕಳುಹಿಸಬೇಕಾಗಿದೆ

ವಿಳಾಸ:— ನೇಶನಲ್ ಹಾರ್ಮೋನಿಯಮ್ ಕೊ,
ಸಿಮ್ಲಾ ಪೋಸ್ಟು (ಬಿ) ಕಲ್ಕತ್ತಾ.

National Harmonium Co.,
Simla P. O. (*B*) CALCUTTA.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	217,400—0—0
Paid up Capital	192,400—0—0
Deposits	455,326—7—10
Reserve Fund	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs 21,685/ have been invested in Government Paper of the face value of Rs.22,500/.

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½%. per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%

Loans granted on proper securities and pledges

Sealed Parcels for safe custody received on a moderate charge.

Canara Bank Ltd.,
Mangalore, 1st. December 1914

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	217,400—0—0
ಬಗೆತ ಮೂಲ ಧನವು „	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	455,326—7—10
ರಕ್ಷಿತ ಧನವು	27,590—12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸಮನಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರ ಪ್ರಾಮಿಸರಿ ಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೆಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾದುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯ ಆವಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮಾ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಸ್ತ್ರೀಯರ ಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತನಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ಇದರ ಬೆಲೆ [illegible] ರೂ ೧—೧—೦ [illegible] ಹಾಸಲು ೦—೩—೦.

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೋ ಬಳ್ಳಾರಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 5ನೇ ಫೆಬ್ರುವರಿ 1915

ಶಿಕ್ಷಿತ ಹಿಂದೂಗಳ ಭವಿಷ್ಯವು.

ಸ್ವರ್ಗಸ್ಥರಾದ ರೈಬಹದ್ದೂರ್ ಲಾಲಾ ವೈಜ್ನಾಥರವರಿಂದ ಬರೆಯಲ್ಪಟ್ಟ ಈ ಲೇಖವು ಈ ತಿಂಗಳ ಆಂಗ್ಲಭಾಷೆಯ ಮಾಸ ಪತ್ರಿಕೆಯೊಂದರಲ್ಲಿ ಪ್ರಕಟಿಸಲ್ಪಟ್ಟಿರುವುದು. ಆಂಗ್ಲಭಾಷೆಯ ಪರಿಚಿತಿಯಿಲ್ಲದವರು ಸಹ ಈ ಲೇಖಕರು ತೋರಿಸಿಕೊಟ್ಟಿರುವ ಹಿಂದೂ ಸಮಾಜ ದೋಷಗಳನ್ನು ಅರಿತು, ಸಮಾಜ ಸಂಸ್ಕರಣೆಯ ಪ್ರಯತ್ನದಲ್ಲಿ ಸಹಾಯಕರಾಗುವುದು ಅಗತ್ಯವಾಗಿದೆ. ಹಿಂದೂ ಜನಾಂಗವು ಹೇಗೆ ಮತ್ತು ಯಾವ ಕಾರಣಗಳಿಂದ ದಿನೇ ದಿನೇ ಕ್ಷಯಿಸುತ್ತಿರುವದೆಂಬುದನ್ನು ಹಿಂದೊಮ್ಮೆ ಪ್ರಸ್ತಾಪಿಸಿದ್ದೇವೆ. ಇತರ ಹಿಂದೂಗಳಿಗಿಂತ ಹೆಚ್ಚಾಗಿ ಶಿಕ್ಷಿತ ಹಿಂದೂಗಳು ಅಳಿದು ಹೋಗುತ್ತಿರುವರು. ಏಕೆಂದರೆ ಇವರಿಗೆ ಪ್ರಾಪ್ತವಾಗುವ ಕಷ್ಟ ಅಡಚಣೆಗಳು ಇತರರಿಗೆ ಪ್ರಾಪ್ತವಾಗವು. ಇದು ಹೇಗೆಂಬುದನ್ನು ಶಿಕ್ಷಿತ ಹಿಂದುವಿನೊಬ್ಬನ ಜೀವಿತವನ್ನು ಆತನ ಬಾಲ್ಯದಿಂದ ಪರಿಶೀಲಿಸಿ ನೋಡಿ ತಿಳಿಯಬಹುದು. ಈಗಿನ ವಿದ್ಯಮಾನಗಳಲ್ಲಿ ಸಾಮಾನ್ಯವಾಗಿ ಈತನು ಅಪ್ರಾಯಸ್ಥ ಹೆತ್ತವರಲ್ಲಿ ಜನ್ಮವೆತ್ತುವನು. ಹದಿನೆರಡು ಯಾ ಹದಿಮೂರು ವರುಷಗಳ ಪ್ರಾಯದ ತಾಯಿಗೆ ಶಿಶುಪಾಲನೆಯು ಏನೆಂಬುವುದು ತಿಳಿಯದು. ಶಾಲೆಗೆ ಹೋಗಿ ಅಕ್ಷರಾಭ್ಯಾಸವನ್ನು ಮಾಡುತ್ತಿರುವ ೧೬ ವರುಷಗಳ ಪ್ರಾಯದ ತಂದೆಗೆ ತನಗೆ ಮಗು ಜನಿಸಿತೆಂದರೆ ತುಂಬಾ ನಾಚಿಕೆ. ಮೊದಲೇ ಒಂದು ಬುಟ್ಟಿ ತುಂಬ ಎಳೆಕೂಸುಗಳನ್ನು ಸಾಕುತ್ತಿರುವ ಅಜ್ಜಿ ಯಾ ಅಜ್ಜನು ತಮ್ಮ ಚಿರಂಜೀವಿಗಳಲ್ಲಿ ಜನಿಸಿರುವ ಮಗುವನ್ನು ಪಾಲಿಸುವ ಭಾರವನ್ನು ವಹಿಸಿಕೊಳ್ಳಬೇಕಾಗುವುದು. ಬಾಲಕರಲ್ಲಿ ಜನಿಸಿದ ಬಾಲಕನ ದೇಹದ ಅವಸ್ಥೆಯು ಹೇಗಿರುವುದೆಂತ ಹೇಳಬೇಕೆಂತಿಲ್ಲ. ಜನಿಸುವಾಗಲೇ ಸಾಮಾನ್ಯವಾಗಿ ಅತಿ ಸೀತಳನಾದ ಚಂದ್ರನ ದಶೆ. ಮಗುವಿಗೆ ಕೆಮ್ಮು ಮತ್ತು ಅಸ್ಥಿಜ್ವರ ತಪ್ಪಲಿಕ್ಕೇ ಇಲ್ಲ. ಗ್ರಹಸ್ಫುಟವನ್ನು ಮಾಡಿ ಮುಂದಿನ ದಶೆಗಳಲ್ಲಿ ಏನೇನು ಫಲವಿರುವುದೆಂದು ಹೇಳೆಂದರೆ ಮಗುವಿಗೆ ೯ ವರುಷಗಳ ಪ್ರಾಯ ದಾಟಿದ ಮೇಲೆ ಇದನ್ನೆಲ್ಲಾ ನಿಶ್ಚಯಿಸಬಹುದೆಂದು ಮೆಲ್ಲನೆ ಜ್ಯೋತಿಷ್ಯಗಾರನು ಸೂಚಿಸುವನು. ಅಂದರೆ ೯ ವರುಷಗಳ ಪ್ರಾಯವಾಗುವಷ್ಟರಲ್ಲಿಯೇ ಮಡಿಯುತ್ತಿರುವ ಬಾಲಕರ ಸಂಖ್ಯೆಯು ಹೆಚ್ಚಾಗಿರುವುದು. ಇಂಥಾ ಅಕಾಲಮೃತ್ಯುವಿನ ಬಾಯಿಯಿಂದ ತಪ್ಪಿಸಿಕೊಂಡ ಬಾಲಕನ ಮುಂದಿನ ಗತಿಯು ಮತ್ತಷ್ಟು ಗಂಡಾಂತರಗಳಿಂದ ತುಂಬಿರುವುದು. ತಂದೆತಾಯಿಗಳು, ಇವರು ಇನ್ನೂ ಬಾಲಕರಾಗಿರುವುದರಿಂದ ಇವರಿಂದ ಎಂಥಾ ಶಿಕ್ಷಣವಾದರೂ ದೊರಿಯಲು ಸಾಧ್ಯವಿಲ್ಲ. ಸಂಸಾರವನ್ನು ಸಾಕುವ ಪೂರ್ಣ ಭಾರವನ್ನು ವಹಿಸಿಕೊಂಡಿರುವ ಅಜ್ಜನಿಗೆ ಮಕ್ಕಳ ಶಿಕ್ಷಣಕ್ಕೆ ಸಮಯವೇ ಇಲ್ಲ. ಮಧ್ಯಮ ತರಗತಿಯವರಲ್ಲಿ ಮಕ್ಕಳ ಅವಸ್ಥೆಯು ಇದಾಗಿರುವುದು. ಸಂಪನ್ನರಾದವರಲ್ಲಿ ಮಕ್ಕಳನ್ನು ಆಭರಣಗಳಿಂದ ಅಲಂಕರಿಸುವುದು, ನಾನಾ ಬಗೆಯ ನವೀನ ತಿಂಡಿಗಳನ್ನು ತಯ್ಯಾರಿಸಿ ಇವರನ್ನು ಸಾಕುವುದು, ಇದು ಹೊರತಾಗಿ ಮಕ್ಕಳ ಗ್ರಹಶಿಕ್ಷಣವಂದರೆ ಏನೆಂತ ತಿಳಿಯದು. ಈ ರೀತಿಯ ಬಾಲಾವಸ್ಥೆ ಇಂಥಾ ಅವಸ್ಥೆಯಲ್ಲಿ ಬಳಲಿ ಬಾಳುತ್ತಿರುವ ಮಕ್ಕಳು ಶಾಲೆಗಳಲ್ಲಿ ಪ್ರಕೃತ ಕೊಡಲ್ಪಡುವ ಶಿಕ್ಷಣದಿಂದ ಮತ್ತಷ್ಟು ಬೆಂಡಾಗಿ ಹೋಗುವರು. ಸದಾ ಅತೃಪ್ತರಾಗಿರುವ ಶಿಕ್ಷಕರುಗಳು ಶಾಲಾ ಮಕ್ಕಳಿಗೆ ಅಕ್ಕರೆಯಿಂದ ಕಲಿಸುವದೆಂದರೆ ಶುಲಭಸಾಧ್ಯವಲ್ಲ. ೧೬ ಯಾ ೧೭ ವರುಷಗಳಾಗುವಷ್ಟರಲ್ಲಿ ತನ್ನ ಜೀರ್ಣಶಕ್ತಿ, ದೃಷ್ಟಿಶಕ್ತಿ, ದೇಹದಾರ್ಢ್ಯ ಇವುಗಳನ್ನು ಕೆಡಿಸಿ ಏನಾದರೂ ಕಲಿತುಕೊಂಡ ಬಾಲಕನು ಸೆಕೆಂಡರಿ ಶಾಲೆಯನ್ನು ಪ್ರವೇಶಿಸುವನು. ಸೆಕೆಂಡರಿ ಶಾಲೆಯನ್ನು ಪ್ರವೇಶಿಸಿದ ಒಂದೆರಡು ವರುಷಗಳಲ್ಲಿ ಈತನಿಗೆ ವಿವಾಹವಾಗುವುದು. ಆಮೇಲೆ ಈತನ ವ್ಯಥೆಯು ಇಮ್ಮಡಿಸುವುದು. ವಿವಾಹದ ವ್ಯಥೆಯೊಂದು, ವಿದ್ಯಾಭ್ಯಾಸದ ವ್ಯಥೆ ಮತ್ತೊಂದು.

ಇಂಥಾ ವ್ಯಥೆಗಳನ್ನು ದಾಟಿ ಸುರಕ್ಷಿತನಾಗಿ ಉಳಿಯುವಂಥವನ ಮುಂದಿನ ಭಾಗ್ಯವು ಮತ್ತಷ್ಟು ವಿಶೇಷವಾಗಿರುವುದು. ಶಿಕ್ಷಣದಿಂದ ವಕೀಲ, ಡಾಕ್ಟರ ಅಥವಾ ಸರಕಾರದ ಉದ್ಯೋಗಸ್ಥನಾಗುವರೆ ಇವನಿಗೆ ಗೊತ್ತಲ್ಲದ ಯಾವುದೇ ವೃತ್ತಿಯೂ ಈತನಿಗೆ ತಿಳಿಯದು. ಕೋರ್ಟುಕಚೇರಿಗಳಲ್ಲಿ ಖಾಲಿ ಹುದ್ದೆಗಳು ದೊರಿಯುವುದು ಅತಿರೇಕ ಕಷ್ಟವಾಗಿದೆ. ವಕೀಲರ ಪರೀಕ್ಷೆ ಪಾಸಾಗಿಕೊಂಡು ಕೆಲವು ವರುಷಗಳ ವರೆಗೆ ಕೋರ್ಟುಕಚೇರಿಗಳಲ್ಲಿ ಕುಣಿದಾಡಿದರೂ ಜೀವನಕ್ಕೆ ಬೇಕಾದಷ್ಟು ಸಂಪಾದಿಸಿಕೊಳ್ಳಲು ಸಾಧ್ಯವಾಗುವದಿಲ್ಲ. ಡಾಕ್ಟರರಾಗಿರುವವರು ಮೊದಲೇ ಹಲವರಿರುತ್ತಾರೆ. ಆದ್ದರಿಂದ ನೂತನವಾಗಿ ಈ ವೃತ್ತಿಯನ್ನು ಪ್ರಾರಂಭಿಸುವವರಿಗೆ ಬಹಳ ಕಷ್ಟವಿದೆ. ಶಿಕ್ಷಣವನ್ನು ಪೂರೈಸಿ ಬರುವಷ್ಟರಲ್ಲಿಯೇ ಈತನು ಸಾಕಬೇಕಾದ ಸಂಸಾರವು ಬೆಳೆದಿರುವುದು. ಹೀಗೆ ಶಿಕ್ಷಣಹೊಂದಿ ಪೇಚಾಡುವವರಲ್ಲಿ ಒಬ್ಬಿಬ್ಬರು ಸಾಕಾದಷ್ಟು ದ್ರವ್ಯ ಸಂಪಾದನೆಯನ್ನು ಮಾಡಿ ಐಶ್ವರ್ಯವಂತರಾಗುವರಾದರೂ ಇವರಲ್ಲಿ ಹೆಚ್ಚಿನವರು ಜೀವನ ಹೋರಾಟದ ಶ್ರಮವನ್ನು ಎದುರಾಡಲು ಅಶಕ್ತರಾಗಿ ಬಿದ್ದು ಹೋಗುವರು ಅಥವಾ ಇಂಥವರು ಹೊಟ್ಟೆಹೊರೆಕೊಳ್ಳಲು ಶಕ್ತರಾಗಿ ಹೋದರೆ ಸಾಯುವತನಕ ವೃದ್ಧಾಪ್ಯವಾದರೂ ಜೀವನ ಹೋರಾಟದಲ್ಲಿಯೇ ಇರಬೇಕಾಗಿರುತ್ತದೆ. ಆದ್ದರಿಂದ, ದೇಶಾಭಿವೃದ್ಧಿ ಸಾಧನೆ ಬಗ್ಗೆ ಇಂಥವರಿಗೆ ಅವಕಾಶವೆಲ್ಲಿಂದ, ಶಕ್ತಿ ಎಲ್ಲಿಂದ? ದುಃಖ ದಾರಿದ್ರಗಳಲ್ಲಿ ಅದ್ದಿಹೋಗಿ, ಅಕಾಲದಲ್ಲಿ ಮರಣಹೊಂದುವ ವಿದ್ಯಾವಂತರುಗಳಲ್ಲಿ ಸ್ವಾರ್ಥತ್ಯಾಗವೆಲ್ಲಿ, ಸಹಕಾರವೆಲ್ಲಿ, ಅಧಿಕಾರವನ್ನು ವಹಿಸಬೇಕಾದಂಥಾ ವಿಧೇಯತ್ವವೆಲ್ಲಿ? ದ್ವಾರಕನಾಥಮಿತ್ರ, ಮಾಧವಗೋವಿಂದ ರಾನಡೆ, ಬಂಕಿಂಚಂದ್ರ ಚಟರ್ಜಿ, ಡಾಕ್ಟರ್ ಭಂಡಾರಕಾರ್ ಇವರಂಥಾ ದೇಶೋದ್ಧಾರಕರು ಮುಂದಿನ ಪೀಳಿಗೆಯವರಲ್ಲಿ ಜನಿಸುವದು ಹೇಗೆ? ಯೌವ್ವನಕ್ಕೆ ತಕ್ಕದಾದಂಥಾ ಉತ್ಸಾಹವು ಈಗಿನ ವಿದ್ಯಮಾನಗಳಲ್ಲಿ ವೃತ್ತಿಯನ್ನು ಆರಂಭಿಸುವ ಮೊದಲೇ ನಮ್ಮಲ್ಲಿ ಬತ್ತಿಹೋಗುವುದರಿಂದ ಉದಾತ್ತ ಭಾವನೆ ಕಲ್ಪನೆಗಳು ನಮ್ಮಲ್ಲಿ ಇರುವುದು ಹೇಗೆ? ಆದ್ದರಿಂದ ಜೀವಕಾಲದಲ್ಲಿ ಹಣ ಸಂಪಾದನೆಯೊಂದರ ಹೊರತು ಮಿಕ್ಕ ಜೀವನೋದ್ದೇಶಗಳು ವಿದ್ಯಾವಂತರಲ್ಲಿ ಅಪರೂಪವಾಗುತ್ತಿರುವುದು ಆಶ್ಚರ್ಯವಲ್ಲ.

ಕೊಲೇಜು ವಿದ್ಯಾಭ್ಯಾಸವನ್ನು ಹೊಂದಿದ ಶಿಕ್ಷಿತರ ದುಸ್ಥಿತಿಯನ್ನೂ ಅವರ ಅಕಾಲಮರಣಗಳ ಕಾರಣಗಳನ್ನೂ ಲಾಲಾ ವೈಜ್ನಾಥರವರು ಈ ರೀತಿ ವ್ಯಕ್ತಗೊಳಿಸಿದ ನಂತರ ಶಿಕ್ಷಿತ ಹಿಂದೂಗಳ ಮುಂದಿನ ಗತಿ ಏನಾಗಬಹುದೆಂಬುದನ್ನು ವಾಚಕರು ಊಹಿಸಿಕೊಳ್ಳಬಹುದು. ಕೊಲೇಜುಗಳಿಗೆ ಹೋಗಲು ಸಾಮರ್ಥ್ಯವಿಲ್ಲದೆ ಸೆಕೆಂಡರಿ ವಿದ್ಯಾಶಾಲೆಗಳಲ್ಲಿಯೇ ತಮ್ಮ ಶಿಕ್ಷಣವನ್ನು ಮುಗಿಸುವಂಥವರ ವಿಷಯ ಈ ಲೇಖಕರು ಹೇಳಿರುವ ಮಾತುಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳುವುದು ಅಗತ್ಯ. ಶಾಲೆಗಳನ್ನು ಬಿಟ್ಟ ನಂತರ ಎಲ್ಲಿಯಾದರೂ ೧೫ ಅಥವಾ ೨೦ ರೂಪಾಯಿಗಳ ಕೆಲಸವನ್ನು ಇಂಥವರು ಸಂಗ್ರಹಿಸಿಕೊಳ್ಳುವರು. ವಸ್ತ್ರ, ಜಿನಸು ಇತ್ಯಾದಿಗಳ ವ್ಯಾಪಾರವನ್ನು ಮಾಡಿ ಗುಮಾಸ್ತೆ ಕೆಲಸಕ್ಕಿಂತಲೂ ನಾಲ್ಕಾರು ಪಾಲಷ್ಟು ದುಡಿಯುವ ಸಾಮಾನ್ಯ ವ್ಯಾಪಾರರಸ್ಥರಲ್ಲಿ ಉಮೇದ್ವಾರರಾಗಿ ನಿಂತು ಅಂಥಾ ವೃತ್ತಿಗಳನ್ನು ಕಲಿತುಕೊಳ್ಳುವದು ತುಚ್ಛವೆಂದೆಣಿಸುವರು. ಕೈಗಾರಿಕೆಗಳಿಗೆ ಬೇಕಾದ ಶಿಕ್ಷಣ ಮಾಹಿತಿಯು ಇವರಲ್ಲಿಲ್ಲದ್ದರಿಂದ ಕ್ಲಾರ್ಕರಾಗಿ ಇಂಥವರು ಕಾರಖಾನೆಗಳನ್ನು ಸೇರಬೇಕಾಗಿದೆ ವಿನಹ ಕಾರಖಾನೆಗಳಲ್ಲಿ ಇತರ ಲಾಭಕರ ವೃತ್ತಿಯು ಇವರಿಗೆ ಸಾಧ್ಯವಲ್ಲ. ಹೀಗೆ ಕೂಲಿ ಜನರಷ್ಟು ಸಂಪಾದನೆಯು ಇವರಿಂದ ಮಾಡಲಾಗದೆ ಹಿಂದೂ ಸಮಾಜದಲ್ಲಿ ಇಂಥವರು ಬರಗಾಲದ ಪ್ರಾಣಿಗಳಂತೆ ಪೇಚಾಡುವುದನ್ನು ನೋಡುವುದು ಅತಿ ದುಃಖಮಯವಾದ ನೋಟವಾಗಿರುವುದು. ಈಗಿನ ಶಿಕ್ಷಣ ಕ್ರಮದಿಂದಲೂ ಸಮಾಜದಲ್ಲಿ ರೂಢಿಯಲ್ಲಿರುವ ಕೆಲವು ಆಚಾರಗಳಿಂದಲೂ ಇಂಥವರ ಸಂಖ್ಯೆಯು ಪ್ರಕೃತ ಹೆಚ್ಚುತ್ತಿರುವುದು ವಿಷಾದಕರ ವಿಷಯವಾಗಿರುತ್ತದೆ.

ಈ ರೀತಿ ಶಿಕ್ಷಿತ ಹಿಂದೂ ಸಮಾಜದಲ್ಲಿರುವ ದೋಷಗಳನ್ನು ಲಾಲಾ ವೈಜ್ನಾಥರವರು ತೋರಿಸಿಕೊಟ್ಟು ಈ ದೋಷನಿವಾರಣೆಯ ಉಪಾಯಗಳನ್ನು ಸೂಚಿಸಿರುವರು. ಬಾಲ ವಿವಾಹ ಪದ್ಧತಿಯನ್ನು ನಿಲ್ಲಿಸಿಬಿಡುವುದು, ಮತ್ತು ವಿದ್ಯಾರ್ಥಿಗಳು ಬ್ರಹ್ಮಚರ್ಯವನ್ನು ಸರಿಯಾಗಿ ಆಚರಿಸುವಂತೆ ಪ್ರಯತ್ನಿಸುವುದು, ಇವೆರಡು ಸಾಧನಗಳು ಲೇಖಕರು ಸೂಚಿಸಿದ ಉಪಾಯಗಳಲ್ಲಿ ಮುಖ್ಯವಾಗಿರುತ್ತವೆ. ಆಡಂಬರವಿಲ್ಲದ ಯಥಾರ್ಥ ರೀತಿಗಳಲ್ಲಿ ಜೀವಿಸಲು ಅಭ್ಯಾಸಿಸುವುದು ಮತ್ತು ಅಲ್ಲದಸಲ್ಲದ ತಿಂಡಿಗಳನ್ನು ಸೇವಿಸಿ ನಾಲಗೆಯ ರುಚಿಗೆ ದಾಸನಾಗಿ ಬೆಳೆಯದಂತೆ ಎಚ್ಚರವುಳ್ಳವರಾಗಿರುವುದು. ವೈಜ್ನಾಥರವರು ಇಂಥಾ ಉಪಾಯಗಳನ್ನು ಸೂಚಿಸಿ ತಮ್ಮ ಲೇಖನವನ್ನು ಮುಗಿಸಿರುತ್ತಾರೆ.

ಮಹಾತ್ಮರಾದ ಗಾಂಧಿಯು

ದಕ್ಷಿಣ ಆಫ್ರಿಕಾದಲ್ಲಿ ಹಿಂದೂ ಜನರ ಹಿತಚಿಂತನದ ಕಾರ್ಯದಲ್ಲಿ ತಮ್ಮ ಸರ್ವಸ್ವವನ್ನೆಲ್ಲ ಅರ್ಪಿಸಿ ಸ್ವಾರ್ಥತ್ಯಾಗದ ಪರಾಕಾಷ್ಠೆಯನ್ನು ತೋರಿಸಿ ತಮ್ಮ ದೇಶದವರ ಹಾಗೂ ಪರದೇಶದವರ ಅಖಂಡ ಸ್ತುತಿಗೆ ಪಾತ್ರರಾದ ಮಿ| ಗಾಂಧಿಯವರು ತಮ್ಮ ಪತ್ನಿಯವರ ಸಹಿತಾ ತಮ್ಮ ಮಾತೃಭೂಮಿಗೆ ಮರಳಿಬಂದಿರುತ್ತಾರೆ ಅವರು ನಮ್ಮ ದೇಶಕ್ಕೆ ಬಂದದರಿಂದ ಎಲ್ಲ ಹಿಂದುವಾಸಿಗಳಿಗೆಲ್ಲಾ ಸಂತೋಷವಾಗಿದೆ ವೃತ್ತಪತ್ರಿಕೆಗಳಲ್ಲಿ ಅವರ ಜಯಜಯಕಾರವು ನಡದಿರುತ್ತದೆ. ಎಲ್ಲ ಜನರಿಂದ ಅವರಿಗೆ ಸನ್ಮಾನವಾಗಿರುತ್ತದೆ ಅವರ ವಿಷಯಕ್ಕೆ ಕಿವಿಗೆಬೀಳುವ ಜನರ ಉದ್ಗಾರಗಳನ್ನು ನೋಡಿದರೆ ಒಬ್ಬ ದೊಡ್ಡ ವಿಭೂತಿ ಪುರುಷರಿಗೆ ತಿಗತಕ್ಕ ಸತ್ಕಾರವು ಅವರಿಗೆ ಆಗಿರುತ್ತದೆ. ಯಾಕಂದರೆ ಗಾಂಧಿಯವರಿಗೆ ಆದರಸತ್ಕಾರವನ್ನು ಮಾಡುವದರಲ್ಲಿ ನಾವು ಅವರ ಗುಣಗಳ ಸ್ತುತಿಯನ್ನು ಮಾಡಿದಂತಾಗುವದು ಅವರಲ್ಲಿದ್ದ ಸದ್ಗುಣಗಳು ಇಷ್ಟೆಂದು ಹೇಳಲಿಕ್ಕೆ ಸಾಲದು. ದೇಶಾಭಿಮಾನದಲ್ಲಿ ಅಗ್ರಗಣ್ಯರೂ, ಕೈಕೊಂಡ ಕೆಲಸದಲ್ಲಿ ಅಚಲಸ್ವಭಾವದವರೂ ಬಡಜನರ ಒಳಿತಿಕೆಯಲ್ಲಿ ನಿಃಸ್ವಾರ್ಥ ಬುದ್ಧಿಯವರೂ ಸಾರ್ವಜನಿಕ ಕಾರ್ಯದಲ್ಲಿ ನಿರ್ದಿಷ್ಟ ಮಾರ್ಗವುಳ್ಳವರೂ ಸ್ವಕಾರ್ಯವೆಂದರೆ ಪರಹಿತಕಾರ್ಯವೆಂದು ತಿಳಿಯುವವರೂ ಇರುತ್ತಾರೆ ಅವರಿಗೆ ಸಿಕ್ಕಸನ್ಮಾನವೆಲ್ಲ ಅವರಲ್ಲಿರತಕ್ಕ ಅಮೌಲ್ಯ ಸದ್ಗುಣಗಳ ದ್ಯೋತಕವಾಗಿರುತ್ತದೆ ಅವರು ಆಫ್ರಿಕಾಖಂಡದಲ್ಲಿ ಮಾಡಿದ ಮಹತ್ಕಾರ್ಯಕ್ಕಾಗಿ ಇಷ್ಟು ಸನ್ಮಾನವು ದೊರೆಯುತ್ತದೆಂದು ಅನ್ನಲಿಕ್ಕೆ ಬರುವಂತಿಲ್ಲ ಯಾಕಂದರೆ ಮಹಾನ್‌ಮಹಾನ ಕಾರ್ಯಗಳನ್ನು ಮಾಡಿದರೂ ಜನರ ಕಿವಿಗೆ ಸಹ ಹೆಸರುಬೀಳದಂಥ ಪುರುಷರ ದೃಷ್ಟಾಂತಗಳು ಇತಿಹಾಸದಲ್ಲಿ ದೊರೆಯುವವು ಆದರೆ ಗಾಂಧಿಯವರಲ್ಲಿದ್ದ ಪ್ರೇಮ-ಭಾವವೂ, ಪರಹಿತ ಚಿಂತನ ಸ್ವಭಾವವೂ, ಸದಾಸದ್ಬುದ್ಧಿಯೂ ಅವರ ಹೆಸರಿನ ಕೀರ್ತಿಯನ್ನು ಜಗತ್ತಿನ ಒಂದು ಮೂಲೆಯಿಂದ ಮತ್ತೊಂದು ಮೂಲೆಯ ವರೆಗೆ ಹಬ್ಬಿಸಿ ಬಿಟ್ಟಿರುತ್ತವೆ ಇಂಥ ಮಹಾಪುರುಷರು ಮರಳಿ ತಮ್ಮ ದೇಶಕ್ಕೆ ಅವರು ಬಂದದ್ದರಿಂದ ದೇಶಬಾಂಧವರು ಧನ್ಯರಿರುತ್ತಾರೆ.

ಮಿ| ಗಾಂಧಿಯವರ ಗೂಡ ಅವರ ಪತ್ನಿಯವರು ಬಂದಿರುವರೆಂದು ಮೇಲೆ ಹೇಳಿವೆಯಷ್ಟೇ ಪತಿಕಾರ್ಯದಲ್ಲಿ ಟೊಂಕಕಟ್ಟಿದ ಆ ವೀರಪತ್ನಿಯ ಹೆಸರು ಹಿಂದುಸ್ಥಾನದ ಇತಿಹಾಸದಲ್ಲಿ ಚಿರಕಾಲ ಉಳಿಯುವದು. ಅವರು ಸೋಸಿದ ಕಷ್ಟಗಳನ್ನೂ, ಸಹಿಸಿದ ವ್ಯಾಥೆಗಳನ್ನೂ ತಮ್ಮ ಪತಿಗಳ ಆಜ್ಞೆಗಳನ್ನೆಲ್ಲಾ ಒಂದೂ ಬಿಡದೆ ಪಾಲಿಸಿ ದಕ್ಷಿಣ ಆಫ್ರಿಕಾದೊಳಗಿನ ಹಿಂದೀ ಸ್ತ್ರೀಯರಿಗೆ ಹಾಕಿಕೊಟ್ಟ ಮಾರ್ಗವನ್ನು ನೋಡಲಾಗಿ ಅವರು ಗಾಂಧಿಯವರಿಗೆ ತಕ್ಕ ಪತ್ನಿಗಳಾಗಿರುತ್ತಾರೆ ಈಗಿನ ಕಾಲದಲ್ಲಿಯಾಗಲಿ ಪತಿಕಾರ್ಯವನ್ನೆಲ್ಲ ತನ್ನ ಕಾರ್ಯವೆಂದು ತಿಳಿದು, ಪತ್ನಿಧರ್ಮವನ್ನು ಪೂರೈಸುವ ಸ್ತ್ರೀಯರು ಬಹು ವಿರಳ ಅಂಥಾ ಸ್ತ್ರೀಯರು ಎಲ್ಲಿರುವರೋ ಆ ದೇಶವು ಪುಣ್ಯದೇಶವೆಂದು ಅನ್ನಲಿಕ್ಕೆ ಅಡ್ಡಿಯಿಲ್ಲ ಅಂಥಾ ಸ್ತ್ರೀಯರು ವೀರ ಸ್ತ್ರೀಯರೆಂದು ಅನ್ನಿಸಿಕೊಳ್ಳುವರು

ಇವರೀರ್ವರು ಮುಂಬಯಿಗೆ ಬಂದಿಳಿದ ಕೂಡಲೆ ಮುಂಬಯಿಯ ನಗರವಾಸಿಗಳು ಬಹು ಉತ್ಸವದಿಂದ ಅವರ ಸತ್ಕಾರಮಾಡಿದರು ಗಾಂಧಿಯವರು ತಮ್ಮ ಸಂಭಾಷಣದಲ್ಲಿ ಅಂದದ್ದೇನಂದರೆ—ದಕ್ಷಿಣ ಆಫ್ರಿಕಾದಲ್ಲಿ ತಮ್ಮ ಪ್ರಯತ್ನಕ್ಕೆ ತಕ್ಕ ಫಲವು ಹಿಂದುಸ್ಥಾನದ ವ್ಯಾಸರಾಯ ದೊರೆಗಳವರ ಸಹಾಯದಿಂದಲೂ, ಹಿಂದುಸ್ಥಾನದ ಜನರ ಸಹಾನುಭೂತಿಯಿಂದಲೂ ಸಿಕ್ಕಿತೆಂದು ಹೇಳಿದರು. ಆಹಹ ಎಂಥ ಉದಾರ ವಿಚಾರಗಳು! ನಾವು ಹೀಗೆ ಅನ್ನಬಹುದು ಕಲಹದ ಸ್ಥಳದಲ್ಲಿ ಗಾಂಧಿಯವರಂಥ ಧೀರ ಮುತ್ಸದ್ದಿ ಪುರುಷರಿರದಿದ್ದರೆ, ಹಿಂದುಸ್ಥಾನದ ವ್ಯಾಸರಾಯ ದೊರೆಗಳಿಗೆ ಸಹಾಯ ಮಾಡುವ ಅವಧಿಯೇ ಬೇಗ ಬರುತ್ತಿದ್ದಿಲ್ಲ. ಮತ್ತು ಹಿಂದೂ ಜನರ ಸಹಾನುಭೂತಿಪರದೃಷ್ಟಿಯು ಅತ್ತಕಡೆಗೆ ಬೇಗನೆ ಬೀಳುತ್ತಿದ್ದಿಲ್ಲ ಗಾಂಧಿಯವರು ನಡಿಸಿದ ಧರ್ಮಕಲಹವೂ, ಅವರು ಉಪಯೋಗಿಸಿದ ಧರ್ಮಸಾಧನಗಳೂ ಮತ್ತು ಅವರೂ ಅವರ ಹೆಂಡತಿಯೂ ತೋರಿಸಿದ ಧರ್ಮಬುದ್ಧಿಯೂ ನಮ್ಮ ದಯಾಳು ವ್ಯಾಸರಾಯ ದೊರೆಗಳ ಕೃಪಾ ಬುದ್ಧಿಯನ್ನು ತಟ್ಟನೆ ಆಕರ್ಷಿಸಿದವು. ಹಾರ್ಡಿಂಜ ದೊರೆಗಳವರ ಆಳಿಕೆಯಲ್ಲಿ ಬಡ ಹಿಂದೀ ಜನರ ಗೋಳಾಟವು ನಿಂತಿತೆಂದು ಹೇಳಲಿಕ್ಕೆ ಅತ್ಯಾನಂದವೆನಿಸುತ್ತದೆ.

ಗಾಂಧಿಯವರು ತಮ್ಮ ಸಂಭಾಷಣದಲ್ಲಿ ತಾವು ಇಲ್ಲಿಯೇ ಉಳಿಯುವರು, ತಿರಗಿ ದಕ್ಷಿಣ ಆಫ್ರಿಕಾಕ್ಕೆ ಅಂಥ ಪ್ರಸಂಗವಿರದೆ ಹೋಗುವದಿಲ್ಲವೆಂದು ಹೇಳಿದ್ದರಿಂದ [illegible] ಜನರ [illegible]ಗಳದ ಸುದಿನವೆಂದು ಅನ್ನಬಹುದು. ಅವರಂಥ ದೊಡ್ಡ ಪುರುಷರ ಉಪದೇಶವೂ ಅನುಭವವೂ ನಮ್ಮ ಜನರಿಗೆ ಫಲಪ್ರದವಾಗಿ ಸಂಭವಿಸದೆ ಇರವು. ಗಾಂಧಿಯವರು ನಿಂತ ಸ್ಥಳಗಳಲ್ಲೆಲ್ಲ, ಧೈರ್ಯ, ವಿವೇಕ, ಕರುಣ ಮುಂತಾದ ಧರ್ಮಸಂಗ್ರಹದ ಉದಾತ್ತ ಗುಣಗಳು ನೆಲೆಗೊಳ್ಳುವವೆಂದನ್ನಲಿಕ್ಕೆ ನಮಗೆ ಸ್ವಲ್ಪಾದರೂ ಸಂಶಯವೆನಿಸುವದಿಲ್ಲ. ಗಾಂಧಿಯವರಲ್ಲಿ ಈಗಿದ್ದ ವರ್ಚಸ್ಸು ಮುಂದೆಯಾದರೂ ಅವರಲ್ಲಿ ಉಳಿಯಲಿ ಅವರ ಮನಸ್ಸು ಯಾವ ರೀತಿಯಿಂದಾದರೂ ಕುಲುಷಿತವಾಗದಿರಲಿ ಅವರ ಸದ್ಬುದ್ಧಿಯು ನಮ್ಮ ಲೋಕನಾಯಕರಲ್ಲಿಯೂ ಹೆಚ್ಚಾಗಲಿಯೆಂದು ಹಾರೈಸುತ್ತೇವೆ

ಕೆಲವು ದಿವಸಗಳ ಹಿಂದೆ ಘಾಟಕೋಪರಿಯಲ್ಲಿ ಗಾಂಧಿಯವರಿಗೆ ಒಂದು ಬಂಗಾರದ ಸುತ್ತುಗಟ್ಟುಗಳುಳ್ಳ ಬೆಳ್ಳಿಯ ಪೆಟ್ಟಿಗೆಯನ್ನು ಕೊಟ್ಟು ಸನ್ಮಾನಮಾಡಿದರೆಂಬ ಸಂಗತಿಯನ್ನು ನಮ್ಮ ವಾಚಕರು ಓದಿರಬಹುದು ಆ ಕಾಲಕ್ಕೆ ಸಭೆಯಲ್ಲಿ ಅವರ ಮಾಡಿದ ಭಾಷಣವು ಚಿರಸ್ಮರಣೀಯವಿರುತ್ತದೆ ದೇಶಸೇವೆಯನ್ನು ಕೈಕೊಂಡ ಪ್ರತಿಯೊಬ್ಬ ಲೋಕನಾಯಕನು ಅವರು ಆಡಿದ ಮಾತುಗಳನ್ನು ಸ್ಮರಣೆಯಲ್ಲಿಡತಕ್ಕದ್ದು. ನನಗೆ ಬಂಗಾರದ ಸರಪಳಿಗಳೂ ಅಷ್ಟೆ ಕಬ್ಬಿಣದ ಸರಪಳಿಗಳೂ ಅಷ್ಟೇ ಕೇವಲ ದೇಶದ ಕಲ್ಯಾಣದ ದೆಸೆಯಿಂದ ನಾನು ನನ್ನ ಕೈಲಾದಷ್ಟು ಪ್ರಯತ್ನಮಾಡಿರುತ್ತೇನೆ. ಇದು ಪ್ರತಿಯೊಬ್ಬನ ದರ್ಮವಿರುತ್ತದೆ ಹೀಗೆ ಮಾಡಿ ಅವನು ತಮ್ಮ ದೇಶಬಾಂದವರ ಸನ್ಮಾನವನ್ನಾಗಲಿ ಕಾಣಿಕೆಯನ್ನಾಗಲಿ ಅಪೇಕ್ಷಿಸತಕ್ಕದ್ದಿಲ್ಲ ಈ ವರೆಗೆ ನಾನು ಮಾಡಿದ ಕೆಲಸವು ಒಂದು ರೂಪಾಯಿಯಲ್ಲಿ ಒಂದು ಆಣೆಯಷ್ಟು ಆಗಿರುವದು. ಉಳಿದ ೧೫ ಪಾಲು ಕಾರ್ಯವನ್ನು ನನಗೆ ಉಳಿದ ಆಯುಷ್ಯದಲ್ಲಿ ಅದಷ್ಟು ಕೊನೆಗಾಣಿಸಲಿಕ್ಕೆ ಸದಾ ಪ್ರಯತ್ನಮಾಡುತ್ತೇನೆ ಅವರು ಆಡಿದ ಮಾತುಗಳನ್ನು ಸುವರ್ಣಾಕ್ಷರದಲ್ಲಿ ಬರೆದಿಡಲಿಕ್ಕೆ ಯೋಗ್ಯವಾಗಿರುತ್ತವೆ ಸಂಘಸಂತರ ಧರ್ಮ ವಿಷಯದಲ್ಲಿ ಆಡಿದ ಉಕ್ತಿಗಳಂತೆ ಗಾಂಧಿಯವರು ಆಡಿದ ಮಾತುಗಳು ಸಾರ್ವಜನರ ಕಾರ್ಯಗಳನ್ನು ಕೈಕೊಂಡವರಿಗೆ ಮಾರ್ಗದರ್ಶಕವಿರುತ್ತದೆ ಕಾ ವೈ

ಜನನ — ಮರಣ

| ಬಾ ||

ಧರಣೀತಳದೊಳು ಬೀಳ್ವಶಿಶುತಾ— |
ನರಚುವುದು ಪಿರಿದಾದ ಬವದೊಳು |
ನರಳಿಕದುದುಃಖದ ನುಪಡೆಯಲ್ಕಿರುವುದೆಂದೆನುತಾ ||
ಹರಿಸದಲಿ ತಾಯ್ತಂದೆಗಳುಮನೆ— |
ಸಿರಿಯಿದೆನುತಲಿ ಪರಮಸಂತಸ |
ಬರಿತರಾಗುತೆ ಪೆತ್ತ ಪಸುಳೆಯನೆತ್ತಿತಪಿಸುವರು. || ೧ ||
ಬರಗಿ ಕೊನೆನಿದ್ದೆಯನು ಗೈವನ |
ಕೊರಗಿದಾಸ್ಯದೊಳಿನಿತು ನೆಲೆಸುವು |
ದರನಗೆಯ ತಾಂತಳುವನು ಸುರಲೋಕಕಂದೆನುತಾ ||
ಮರುಗುವರು ತಾಯ್ತಂದೆಗಳೆಯರು |
ಹರಿಸದಲ ಕೂಡುತ್ತೆ ತಾನಿವ |
ಮರಣ ಪೊಂದಿದನೆನುತಯೆದೆತಲೆನಾಡೆಬಡಕೊಂಡು | ೨ ||

ಉ. ಮ. ರಾ.

ಮಕ್ಕಳ ವಿಷಯ ಹೆತ್ತವರಲ್ಲೊಂದು ಮಾತು.

ಪೂರ್ವದಲ್ಲಿ ಪಿತೃಭಕ್ತಿಯು ವಿಶೇಷವಾಗಿತ್ತೆಂಬುದಕ್ಕೆ ದೃಷ್ಟಾಂತಗಳು ಬೇರೆ ಆವಶ್ಯಕವಿಲ್ಲವಷ್ಟೆ ಶ್ರೀ ರಾಮಚಂದ್ರನು ವನವಾಸ ಮಾಡಲಿಲ್ಲವೆ? ಭೀಷ್ಮಾಚಾರ್ಯರು ಸರ್ವಸುಖಪರಿತ್ಯಾಗ ಮಾಡಿ ಯಶೋವಂತರಾಗಲಿಲ್ಲವೆ? ಶ್ರಾವಣನು ತಂದೆ ತಾಯಿಗಳನ್ನು ಕಾವಡಿಯೊಳಗಿರಿಸಿಕೊಂಡು ಸಂಚರಿಸಿದುದಕ್ಕೇನು ಕಾರಣ? ಅವರೆಲ್ಲರೂ ಹೆತ್ತವರೆಂದರೆ ಸಾಕ್ಷಾತ್ ದೇವರೇ ಎಂದು ಭಾವಿಸಿಕೊಂಡಿದ್ದರು. ಆದರೆ ಈಗಿನ ಕಾಲದ ನಮ್ಮ ಮಕ್ಕಳು ನಮ್ಮನ್ನು ಹೇಗೆ ಭಾವಿಸಿರುವರು? ನಮ್ಮ ಹೆತ್ತವರನ್ನು ನಾವು ಹೇಗೆ ಕಾಣುತ್ತಿದ್ದೆವು? ನಮಗಾದರೊ ಗುರುಗಳನ್ನು ಕಂಡರೆ ಬಹುಭೀತಿ; ಅವರೆದುರಿಗೆ ಒಂದು ಅಪಶಬ್ದವನ್ನಾದರೂ ಆಡುವುದಕ್ಕೆ ಧೈರ್ಯವಿರಲಿಲ್ಲ. ನಮಗವರಲ್ಲಿ ಅಪ್ಪರಮಪ್ಪನ ಗೌರವವಿದ್ದಿತು. ಈಗ ನಮ್ಮ ಮಕ್ಕಳು ನಮ್ಮಲ್ಲಿ ಎಷ್ಟರಮಟ್ಟಿನ ಗೌರವವನ್ನಿಟ್ಟಿರುವರು? ಅವರಿಗೆ ಗುರುಗಳೆಂದರೆ ಯಾವದೊಂದು ಭೀತಿಯೂ ಇಲ್ಲ. ಅದೇಕೆ ಹಾಗಾಯಿತು?

ಮಕ್ಕಳಲ್ಲಿ ಯಾವುದು ಒಳ್ಳೆಯದು, ಯಾವುದು ಕೆಟ್ಟದೆಂದು ವಿಚಾರಿಸುವ ಶಕ್ತಿಯು ಇರುವುದಿಲ್ಲ ಅವರು ಸರ್ವವಿಧವಾಗಿಯೂ ತಮಗಿಂತ ದೊಡ್ಡವರಾದವರು ಮಾಡುವಂತೆಯೆ ಮಾಡಲು ಯತ್ನಿಸುವರು ನಾವು ಅವರೆದುರಿಗೆ ಸಿಗರೇಟ್ ಬೀಡಿಗಳನ್ನು ಸೇದುವುದಕ್ಕೆ ತೊಡಗಿದರೆ, ನಾವು ಬಿಸಾಡಿದ ಕಡೆಗಳನ್ನಾದರೂ ಹೆಕ್ಕಿಕೊಂಡು ಅವರು ಸೇದದೆ ಬಿಡರು ಅಂತೆಯೆ ನಾವು ಗುರುಹಿರಿಯರಲ್ಲಿ ಭಕ್ತಿವಿಶ್ವಾಸಗಳನ್ನು ತೋರಿಸುವವರಾದರೆ ಅವರು ಕೂಡ ನಮ್ಮನ್ನನುಸರಿಸುವರು ನಾವು ಒಳ್ಳೆಯ ಮಾತುಗಳನ್ನಾಡುವವರಾದರೆ ಅವರು ಕೂಡ ಒಳ್ಳೆಯ ಮಾತುಗಳನ್ನೆ ಆಡುವರು ಆದರೆ ನಾವು ಯಾವಾಗಲೂ ಕೆಟ್ಟ ಮಾತುಗಳನ್ನೆ ಆಡುವವರಾದರೆ ನಮ್ಮ ಮಕ್ಕಳು ನಮಗಿಂತ ಒಳ್ಳೆಯವರಾಗಲಾರರು. ಹಲವರು ತಮ್ಮ ಮಕ್ಕಳ ಮುಂದೆ ಆಡಬಾರದ ಮಾತುಗಳನ್ನಾಡುವರು, ಮಾಡಬಾರದ ಕೃತ್ಯಗಳನ್ನು ಮಾಡುವರು. ಆ ಮಕ್ಕಳು ತಮ್ಮ ಹಿರಿಯರು ಮಾಡುವ ಕೃತ್ಯವು ಒಳ್ಳೆಯದೆಂದೇ ಭಾವಿಸಿ ತಾವು ಕೂಡ ಅಂತೆಯೆ ಮಾಡುವುದಕ್ಕೆ ತೊಡಗುವರು ಹುಡುಗನು ಸಂಧ್ಯಾವಂದನೆ ಮಾಡದೆ ಹೋದರೆ ಅದು ಇಂಗ್ಲಿಷ್ ವಿದ್ಯೆಯ ಪರಿಣಾಮವೆಂದೆನ್ನುವರು ಆದರೆ ಆತನನ್ನು ೯॥ ಗಂಟೆಗೆ ಸ್ನಾನಮಾಡಿಸಿ 'ಶಾಲೆಗೆ ಹೊತ್ತಾಯಿತು ಸಂಧ್ಯಾವಂದನೆ ನಾಳೆ ಮಾಡಬಹುದು. ಬೇಗನೆ ಉಂಡುಕೊಂಡು ಹೋಗು,' ಎಂದು ತಾವು ಹೇಳಿ, ಕಳುಹಿದ ಸಂಗತಿಯು ಅವರ ಜ್ಞಾಪಕ್ಕೆ ಬರುವುದಿಲ್ಲ ಹುಡುಗನು ದುರ್ಮಾರ್ಗಿಯಾದರೆ ಸಮಸ್ತ ದೋಷಗಳನ್ನು ಉಪಾಧ್ಯಾಯನ ಮೇಲೆ ಹೊರಿಸುವರಲ್ಲದೆ, ಆತನ ಶಿಕ್ಷಣದ ವಿಷಯದಲ್ಲಿ ತಮ್ಮಮೇಲೆ ಯಾವದೊಂದು ಭಾರವೂ ಇಲ್ಲವೆಂದು ಭಾವಿಸುವರು ಇದು ಕೇವಲ ಮೂಢತನ. ಹುಡುಗರು ಹೆಚ್ಚಿನಕಾಲವನ್ನು ಮನೆಯಲ್ಲಿ ಕಳೆಯುವರು. ಆದುದರಿಂದ ಅವರು ಮನೆಯಲ್ಲಿ ಕಲಿತುಕೊಳ್ಳುವಷ್ಟು ವಿಷಯಗಳನ್ನು ಶಾಲೆಯಲ್ಲಿ ಕಲಿಯಲಾರರು. ಹುಡುಗನ ಗುಣದೋಷಗಳು ಹೆಚ್ಚಾಗಿ ಮನೆಯನ್ನೆ ಹೊಂದಿಕೊಂಡಿವೆ ಆದರಲ್ಲಿಯೂ ಕೆಲವರು ಆತ್ಮಸ್ತುತಿ ಪರನಿಂದೆಗಳಲ್ಲೆ ನಿರತರಾಗುವವರಿರುವರು ಅಂತವರು ತಮ್ಮ ಮಕ್ಕಳ ಮುಂದೆ ಉಪಾಧ್ಯಾಯರ ವಿಷಯ ಸಲ್ಲದ ಮಾತುಗಳನ್ನಾಡಿ ಮಕ್ಕಳ ಮನಸ್ಸನ್ನು ಕೆರಳಿಸಿಬಿಡುವರು. ಇದರಿಂದ ತುಂಬ ಕೆಡುಕಿದೆ ಕೆಲವರು ಉಪಾಧ್ಯಾಯರು ಮಕ್ಕಳೆದುರಿಗೆ ಬೀಡಿಸೇದಿ ತಮ್ಮಮೇಲೆ ಮಕ್ಕಳಿಗಿದ್ದ ಅಭಿಮಾನವನ್ನು ಮೊದಲೆ ಕೆಡಿಸಿಕೊಂಡಿರುತ್ತಾರೆ ಅದರಲ್ಲಿಯೂ ತಮ್ಮ ಹೆತ್ತವರಿಂದಲೆ ಅವರ ನಿಂದೆಗಳನ್ನು ಕೇಳಿದರೆಂದರೆ ಆ ಮಕ್ಕಳಿಗೆ ಉಪಾಧ್ಯಾಯರ ಮೇಲಣ ವಿಶ್ವಾಸವೆಲ್ಲವೂ ಹೋಗಿಬಿಟ್ಟು ಮನಸ್ಸು ಸ್ಥಿರವಾಗಿರದೆ ಅಸಭ್ಯ ರೀತಿಯಿಂದ ಪ್ರವರ್ತಿಸತೊಡಗುವರು. ಅಹಂಭಾವವೂ ಸ್ವಾರ್ಥಪರತೆಯೂ ಅವರಲ್ಲಿ ಹುಟ್ಟಿಕೊಳ್ಳುವುದು

ಕೆಲವರು ಬಹು ಕರುಣಾಮಯರಾದ ತಂದೆತಾಯಿಗಳಿರುವರು ಅಂಥವರು ತಮ್ಮ ಹುಡುಗನು ಶಾಲೆಗೆ ಹೋಗುವುದಿಲ್ಲವೆಂದು ಚಂಡಿ ಹಿಡಿದು ಅತ್ತರೆ ಅವನನ್ನು ಮನೆಯಲ್ಲೆ ಇರಿಸಿಕೊಂಡು ಮರುದಿನ ಶಾಲೆಗೆ ಹೋಗುವಾಗ 'ನಮ್ಮ ಹುಡುಗನಿಗೆ ಕೊಂಚ ದೇಹಾಲಸ್ಯವಿದ್ದುದರಿಂದ ನಿನ್ನೆ ಶಾಲೆಗೆ ಬರಲಾಗಲಿಲ್ಲ' ಎಂದು ಚೀಟಿ ಬರೆದು ಹುಡುಗನ ಕೈಯು ಕಳುಹಿಸುವರು ಹೆತ್ತವರೇ ಈಪರಿ ಸುಳ್ಳುಹೇಳುವುದಕ್ಕೆ ತೊಡಗಿದರೆ ಮಕ್ಕಳ ಅವಸ್ಥೆಯೇನಾಗಬೇಕು?

ಶಾಲೆಯಿಂದ ಒಂದು ಮಗನು, 'ಅಪ್ಪಾ ನನಗಿಂದು ಮಾಸ್ತರರು ಹೊಡೆದರು' ಎಂದು ಹೇಳಿದೊಡನೆಯೆ ಅಪ್ಪನು ರೇಗಿಕೊಂಡು 'ನಮ್ಮ ಹುಡುಗನಿಗೆ ಹೊಡೆಯಬಾರದು, ಕಲಿಯದಿದ್ದರೂ ಚಿಂತಿಲ್ಲ,' ಎಂದು ಚೀಟಿ ಬರೆದು ಕಳುಹಿಸಿದರೆ, ಆ ಹುಡುಗನು ಹೇಗೆ ತಾನೇ ಸರಿಯಾದ ಮಾರ್ಗಕ್ಕೆ ಬಂದಾನು?

ಆದುದರಿಂದ, ಸಹೋದರರೇ ಈ ಸಂಗತಿಗಳನ್ನು ವಿಚಾರಿಸಿ ನೋಡಿದರೆ, ಹೆತ್ತವರೂ ಉಪಾಧ್ಯಾಯರೂ ಒಂದಾದ ವಿನಹಾ ಮಕ್ಕಳಿಗೆ ಏಳಿಗೆಯಿಲ್ಲ. ಉಪಾಧ್ಯಾಯರುಗಳು ಕೂಡ ನಮ್ಮಂತೆಯೆ ಮಕ್ಕಳೊಂದಿಗರು, ನಮ್ಮ ಮಕ್ಕಳ ಮೇಲೆ ಅವರಿಗೆ ಕೂಡ ನಮಗಿರುವಷ್ಟು ಮಮತೆಯಿರುವುದು ಅಷ್ಟು ಮಾತ್ರವಲ್ಲದೆ ಈಚೀಚೆಗೆ ಬೆತ್ತವು ಜ್ಞಾನವೃಕ್ಷದ ಬೇರಲ್ಲವೆಂದು ನಿರ್ಧರಿಸಿರುವರು ಆದುದರಿಂದ ನಾವು ನಿಶ್ಚಿಂತರಾಗಿ ಮಕ್ಕಳನ್ನು ಉಪಾಧ್ಯಾಯರ ವಶಕ್ಕೊಪ್ಪಿಸಿ, ಅವರಲ್ಲಿ ವಿಶ್ವಾಸವಿಹೀನರಾಗಿರದೆ, ಅವರ ಕರ್ತವ್ಯವು ಚೆನ್ನಾಗಿ ನೆರವೇರುವಂತೆ ಪದೇಪದೇ ನಮ್ಮ ಮಕ್ಕಳ ವಿಷಯ ಅವರೊಡನೆ ವಿಚಾರಿಸುತ್ತ ನಮ್ಮಿಂದ ಕೂಡಿದಷ್ಟು ಸಹಾಯಮಾಡೋಣ. ಹಾಗೆ ಮಾಡಿದೆವೆಂದರೆ ಮಕ್ಕಳೆಲ್ಲರೂ ಸನ್ಮಾರ್ಗಿಗಳಾಗುವುದರಲ್ಲಿ ಕೊಂಚವೂ ಅನುಮಾನವಿಲ್ಲ.

ಈ ವಿಚಾರವಾಗಿ ಬಲ್ಲವರು ತಂತಮ್ಮ ಸೂಚನೆಗಳನ್ನು ಬರೆದು ಕಳುಹಿದರೆ ಲೋಕೋಪಕಾರವಾದೀತೆಂಬುದೇ ನನ್ನ ಉದ್ದೇಶ

ಇತಿ 'ಭಾರತೀಯ'

ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣ [illegible]

ರತ್ನಾಗಿರಿ ಡಿಸ್ಟ್ರಿಕ್ಟ್ ಮಾಲವಣದಲ್ಲಿ ಸೇರಿದ ಆರನೇ ಅಧಿವೇಶನ.

ಸನ್ 1915ನೇ ದಶಂಬರ ತಾರೀಕು 27, 28, 29 ಈ ಮೂರು ದಿವಸವೂ ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣ ಪರಿಷದದ ದ್ಯೋತಕವಾಗಿ ಅನಂತ ಶಿವಾಜಿ ಟೋಪಿವಾಲೆ ಇವರಿಂದ ಸ್ಥಾಪಿಸಲ್ಪಟ್ಟ ಹೈಸ್ಕೂಲಿನಲ್ಲಿ ಪರಿಷದವು ನಡೆಯಿತು. ಅಧ್ಯಕ್ಷಸ್ಥಾನವು ರತ್ನಾಗಿರಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಲೆಕ್ಟರ್ ರಾವ್ ಬಹದ್ದೂರ್ ಜಿ. ಆರ್. ಕಲ್ಯಾಣಪುರಕಾರ್ ಬಿ. ಎ. ಇವರಿಂದ ಅಲಂಕರಿಸಲ್ಪಟ್ಟಿತು.

ಮೊದಲನೆಯ ದಿವಸ ಸ್ವಾಗತ ಕಮಿಟಿ, ಅಧ್ಯಕ್ಷರಾದ ಎನ್ ಪಿ ಭಂಡಾರ್‌ಕಾರ್ ಎಲ್ ಸಿ. ಇ ಇವರ ಮತ್ತು ಪರಿಷದದ ಅಧ್ಯಕ್ಷರ ಭಾಷಣಗಳು ನಡೆದವು ವಾಸುದೇವರಾವ್, ವಾಮನರಾವ್, ಠಾಕುರ್ ಬಿ. ಎ ರವರು ಮರಾಠಿಯಲ್ಲಿ ಅಧ್ಯಕ್ಷರ ಭಾಷಣವನ್ನು ತರ್ಜುಮೆ ಮಾಡಿ ಹೇಳಿದರು.

ಈ ಸಭೆಗೆ ರತ್ನಾಗಿರಿ ಡಿಸ್ಟ್ರಿಕ್ಟ್ ಕಲೆಕ್ಟರ್ ಸಾಹೇಬರವರಾದ ಮೆ। ಚಕ್ರವರ್ತಿಯವರು ದಯಮಾಡಿಸಿದ್ದರು

ಪ್ರಕೃತ ನಡೆಯುವ ಯುದ್ಧದಲ್ಲಿ ನಮ್ಮ ಬ್ರಿಟಿಷ್ ಸರಕಾರಕ್ಕೆ ಜಯ ಉಂಟಾಗಲೆಂದೂ ವೈಸರಾಯಿ ಸಾಹೇಬರವರ ಮಕ್ಕಳ ಅಕಾಲ ಮರಣದಿಂದ ಪರಿಷದದವರಿಗೆ ಉಂಟಾದ ಖೇದವನ್ನೂ ವೈಸರಾಯಿ ಸಾಹೇಬರವರಿಗೆ ಸೂಚಿಸಬೇಕಾಗಿ ಸರ್ವಾನುಮತದಿಂದ ಠರಾವು ಮಾಡಲ್ಪಟ್ಟು ಅಧ್ಯಕ್ಷರ ಸಹಿಯಿಂದ ನಾಮದಾರ್ ವೈಸರಾಯಿ ಸಾಹೇಬರವರಿಗೆ ಟೆಲಿಗ್ರಾಮ್ ಮೂಲಕ ತಿಳಿಸೋಣಾಯಿತು.

ಪರಿಷದ ಕಾರ್ಯಕ್ಕೆ ಅನುಮೋದನ ಪೂರ್ವಕವಾದ ಭಾಷಣವು ಡಿಸ್ಟ್ರಿಕ್ಟ್ ಕಲೆಕ್ಟರ್ ಸಾಹೇಬರವರಿಂದ ಸುಮಾರು 15 ನಿಮಿಷ ಮಾಡಲ್ಪಟ್ಟಿತು. ಶ್ರೀಯುತ ಬಾಬೂರಾವ್, ಗೋಪಾಲರಾವ್ ವರಾಡಕರ್ ಬಿ ಎ ಯವರಿಂದ ಮರಾಠಿಯಲ್ಲಿ ಸಭಾಸದರಿಗೆ ಭಾಷಾಂತರಿಸಿ ಹೇಳಲ್ಪಟ್ಟಿತು

ಡೆಲಿಗೇಟ್ ಪ್ರೇಕ್ಷಕ ಸ್ವಯಂ ಸೇವಕರಾದಿಯಾಗಿ ಪರಿಷದಕ್ಕೆ ಸುಮಾರು 600 ಜನರು ಹಾಜರಿದ್ದರು

ತಾಲೂಕು ಮಾಮಲೇದಾರ್ ಮಿಸ್ಟರ್ ವಿಜೂರ್‌ಕರ್‌ರವರು ಮತ್ತು ಮಾಲವಣದ ಸುಪ್ರಸಿದ್ಧ ಗೃಹಸ್ಥರಾದ ರಾವ್ ಬಹದ್ದೂರ್ ಮೊರೆ ವಗೈರೆ ನಾಮಾಂಕಿತರೂ ಸಭೆಗೆ ದಯಮಾಡಿಸಿದ್ದರು.

ಪರಿಷದಕ್ಕೆ ಕುಲೀನ ಸ್ತ್ರೀಯರು ಮತ್ತು ಕೌಮಾರಿಯರು ಕೂಡಾ 52 ಜನರು ದಯಮಾಡಿಸಿದ್ದರು. ಮಿಸೆಸ್ ಧೊಂಡ್, ಮಿಸೆಸ್ ಠಾಕೂರ್, ಮಿಸೆಸ್ ದೆಶಾಯಿ ವಗೈರೆ ಕುಲಾಂಗನೆಯರು ಸ್ವಯಂ ಸೇವಿಕೆಯರಾಗಿ ಬಹಳ ಉತ್ಸುಕತೆಯಿಂದ ಕೆಲಸ ನೆರವೇರಿಸುತ್ತಲಿದ್ದರು

ಪರಿಷದಕ್ಕೆ ಕುಲೀನ ಸ್ತ್ರೀಯರನ್ನು ಡೆಲಿಗೇಟ್‌ರಾಗಿ ಸೇರಿಸುವ ವಿಷಯ ಬಹಳ ಹೊತ್ತು ಚರ್ಚಿಸಲ್ಪಟ್ಟಿತು.

ಮಾಲವಣದಲ್ಲಿ ಬಾಲಕಿಯರಿಗೆ ಇಂಗ್ಲಿಷ್ ವಿದ್ಯಾಭ್ಯಾಸ ಮಾಡಿ ಸುವ ಅನುಕೂಲತೆಯನ್ನು ಅಲ್ಲಿಯ ಪ್ರಸಿದ್ಧ ಗೃಹಸ್ಥರಾದ ರಾ। ರಾ। ಕೃಷ್ಣರಾವ್ ಸೀತಾರಾಮದೇಸಾಯಿ ಇವರು ಈ ಮೊದಲೇ ಮಾಡಿರುವ ವಿಷಯ ಪರಿಷದದಲ್ಲಿ ಪ್ರಶಂಸೆ ಮಾಡಲ್ಪಟ್ಟು, ತಕ್ಷಣನೇ ಇದರ ಅಭಿವೃದ್ಧಿಗಾಗಿ ನೆರೆದ ಸದ್ಗೃಹಸ್ಥರಿಂದ 1200 ರೂಪಾಯಿ ವಂತಿಗೆ ಕೂಡಿಸಲ್ಪಟ್ಟಿತು. ಶ್ರೀಮಂತ ರಾ। ರಾ। ಶಾಂತಾರಾಮ ಬಾಬಾ ಸಾಹೇಬ್ ದಾಭೋಲಕರ್ ಇವರಿಂದ ಸ್ತ್ರೀಶಿಕ್ಷಣಕ್ಕಾಗಿ 500 ರೂಪಾಯಿಗಳು ಕೊಡಲ್ಪಟ್ಟಿತು. ರಾವ್ ಬಹದ್ದೂರ್ ಮೊರೆ ವಗೈರೆ ಗೃಹಸ್ಥರಿಂದ ಸಹಾನುಭೂತಿ ದೊರೆಯಲಿಕ್ಕಿದೆ

ಪರಿಷದದಲ್ಲಿ ಪ್ರತ್ಯೇಕ ಪ್ರತ್ಯೇಕ ವಿಷಯಗಳ ಕುರಿತು ನಡೆದ ಭಾಷಣಗಳಲ್ಲಿ ಶ್ರೀಯುತ ರಾ। ಶಾಂತಾರಾಮ ಬಾಬಾ ಸಾಹೇಬ್ ದಾಭೋಲಕರ್, ಪ್ರೊಫೆಸರ್ ಪಾಂಡುರಂಗಭಿಕಾಜಿ ನಾಯಕ್, ಪ್ರೊಫೆಸರ್ [illegible], ರಾ। [illegible] ವಕೀಲ್, ರಾ। ಪರುಳೇಕರ್ ವಕೀಲ್, ರಾ। ಕೃಷ್ಣರಾವ್ ಸೀತಾರಾಮದೇಸಾಯಿ, ವಗೈರೆ ಗೃಹಸ್ಥರ ಭಾಷಣಗಳು ಅತ್ಯಂತ ಉತ್ಸಾಹ ಪೂರಿತವಾಗಿಯೂ ಸುಶ್ರಾವ್ಯವಾಗಿಯೂ ಇದ್ದುದಲ್ಲದೆ ಅಲ್ಲಿ ನೆರೆದ ಸದ್ಗೃಹಸ್ಥರ ಮನಸ್ಸು ಆಕರ್ಷಿಸಿದವು.

ಸ್ತ್ರೀ ಡೆಲಿಗೇಟ್ ಚುನಾವಣೆಯ ವಿಷಯವಾಗಿ ಶ್ರೀಯುತ ರಾ। [illegible] ಮಹದೇವವರ್ದೆ ಬಿ. ಎ. ಎಲ್. ಎಲ್. ಬಿ. ಇವರು [illegible]

ಮಾಡಿದ ಸುಶ್ರಾವ್ಯ ಭಾಷಣವು ಬಹಳ ಚಮತ್ಕಾರವಾಗಿತ್ತು. ಇದೇ ವಿಷಯವಾಗಿ ರಾ। ರಾ। ಪದ್ಮನಾಭ ಆತ್ಮಾರಾಮ ಘೋಂಡ್ ಎಮ್. ಎ. ಯವರು ಉತ್ಸಾಹಪೂರಿತವಾದ ವಿಚಾರಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿದರು.

ಫಾರ್ಸೈನ್ ಯಜುಕೇಷನ್ ಫಂಡು ವಿಷಯವಾಗಿ ಪ್ರೊಫೆಸರ್ ನಾಯಕ್‌ರವರು ಮಾಡಿದ ಪ್ರಶ್ನೆಯು ಸಮಾಧಾನಕರವಾಗಿದ್ದು ಪ್ರಯುಕ್ತ ತಕ್ಷಣವೇ ಫಂಡಿನ ಮತಿಗಾಗಿ ಸುಮಾರು 700 ರೂಪಾಯಿ ಸಭಿಕರಿಂದ ವಾಗ್ದಾನ ಮಾಡಲ್ಪಟ್ಟಿತು.

ಮಾಲವಣ ಪರಿಷದದ ಆಫೀಸ್ ವ್ಯವಸ್ಥೆ ಶ್ರೀಯುತ ಬಾಬಾ ಸಾಹೇಬ್ ವರಾಡಕರ್ ಬಿ. ಎ. ರಾ। ರಾ। ಬಾವು ಸಾಹೇಬ್ ಅಜಗಾಂಕರ್ ಬಿ. ಎ. ಡಾಕ್ಟರ್ ಅಜಗಾಂಕರ್ ಎಲ್ ಎಮ್ ಎಂಡ್ ಎಸ್ ಇವರುಗಳಿಂದ ಸುರಳಿತವಾಗಿ ನಡಿಸಲ್ಪಟ್ಟಿತು.

ಸ್ವಯಂ ಸೇವಕರ ಕೆಲಸ ಬಹಳ ಚೆನ್ನಾಗಿತ್ತು. ಮುಂಬಾಯಿಯಿಂದ ಸಾರಸ್ವತ ಮಿತ್ರ ಮಂಡಳಿಯು ಕೆಲವು ಸಭಾಸದರು ಡೆಲಿಗೇಟರಾಗಿಯೂ ಸ್ವಯಂ ಸೇವಕರಾಗಿಯೂ ದಯಮಾಡಿಸಿದುದರಿಂದ ಮಾಲವಣದವರಿಗೆ ತುಂಬಾ ಸಹಾಯವಾಯಿತು.

ಮಾಲವಣ ಹೈಸ್ಕೂಲ್ ಹೆಡ್‌ಮಾಸ್ತರ್ ರಾ। ರಾಮಭಾವು ಪರೂಳೇಕರ್ ಎಮ್. ಎ. ಇವರ ಮೋಹನತು ಶ್ಲಾಘನೀಯವಾಗಿದೆ. ಪರಿಷದದ ಎಲ್ಲಾ ಕೆಲಸಗಳೂ ಉತ್ಸಾಹಪೂರ್ವಕ ನೆರವೇರಿಸಲ್ಪಟ್ಟು ಮುಂದಿನ ಸಭೆ ಹರದೆಯ ಸಸ್ವತರ ಅಪೇಕ್ಷೆಯಂತೆ ಹರದೆ ಅಥವಾ ಇಂದೂರು ಸೇಶನಲ್ಲಿ ನೆರವೇರತಕ್ಕದೆಂದು ನಿರ್ಣಯಿಸಲ್ಪಟ್ಟು ಕೃತಜ್ಞತಾಪೂರ್ವಕವಾದ ಠರಾವ್ ನ ಮಂಜೂರು ಮಾಡಲಾಯಿತು.

ಎಲ್ಲಾ ಕಾರ್ಯಗಳಿಗೂ ರಾವ್ ಬಹದ್ದೂರ್ ಅಚ್ಯುತರಾವ್ ದೇಸಾಯಿ ಇವರ ಸಹಾಯ ಕೊನೆ ವರೆಗೂ ತುಂಬಾ ಇತ್ತು.

ಅಧ್ಯಕ್ಷರೂ ಸಭಾಸದರೂ ಸ್ವಯಂ ಸೇವಕರೂ ಸ್ವಾಗತ ಕಮಿಟಿಯವರೂ ಕೂಡಾ ನಡಿಸಿದ ಕಾರ್ಯಗಳಿಗೋಸ್ಕರ ಧನ್ಯವಾದವನ್ನಿತ್ತು ಸಭೆ ಬರಕಾಸ್ತು ಮಾಡಲ್ಪಟ್ಟಿತ.

——— o ———

ವೀರವೆಂಕಟಪುರದ ಕಸ್ಟಮ್ಸ್ ಆಫೀಸು.

(ಕಳೆದ ಸಂಚಿಕೆಯಿಂದ ಮುಂದರಿದುದು)

"ನೋಡಿದಿಯಾ, 'ಪತ್ತೆಸಾರೆ'ನಲ್ಲಿ ತುಂಬಿದ ಸರಕುಗಳ ಮೇಲೆ ಒಟ್ಟಿಗೆ ರೂ ೨೫ ಸಿಕ್ಕುವುದು ದುರ್ಲಭ. ಮಾನ ಫೆಸ್ಸು ಫೀಸು ಗೋವಿಂದಸೆಟ್ಟಿ ಪಟ್ಟಿ ಪ್ರಕಾರ ರೂ ೧೭—೮—೦ ಆಗುವುದು. ವ್ಯಾಪಾರ! ಆ ಹೊಲಸು ಬೇಂಕಿನವರ ತಗಾದೆ ಇಲ್ಲದಿದ್ದರೆ ಈ ಸರ್ತಿ ನಾನು ಎಂದೂ ಸರಕುಗಳನ್ನು ತುಂಬಿಸಿ ರಾಜಪುರ ಬಂದರಕ್ಕೆ ಕಳುಹಿಸುತ್ತಿದ್ದಿಲ್ಲ. ಹೇಗಾದರೂ ಮಾಲನ್ನು ವಿಕ್ರಯಿಸಬೇಕು. ಬೇಂಕಿನವರ ಅಪಚಕ್ಕೆ ಏನು ಮಾಡುವೆ ಲಾಭವಷ್ಟೇ ಮಾತೇ? ಕಂಡೇಲ ಬಲವಂತರಾವ! ಕಳ್ಳರ ಶಿಖಾಮಣಿ! ಹರಳಿ ಗೋಣಿಗಳಿಂದ ಹ್ಯಾಗೂ ನಾಲ್ಕು ನಾಲ್ಕು ಸೇರುಗಳ ಪ್ರಕಾರ ತೆಗೆಯದೆ ಬಿಡನು! ಪರಮೇಶ್ವರಾ, ವ್ಯಾಪಾರಸ್ಥಿತಿ! ನಮ್ಮ ಮಕ್ಕಳಿಗೆ ಇದು ಎಂದೆಂದಿಗೂ ಸಲ್ಲದು. ವೀರವೆಂಕಟಪುರ! ಇಲ್ಲಿಯ ಕಸ್ಟಮ್ಸ್ ಆಫೀಸಿನ ಸ್ಥಿತಿಯು ಎಂದು ನೆಟ್ಟಗಾಗುವುದೋ? ಆಹಾ! ಈ ಊರ ಮಹಿಮೆಯೆ!"

ಸಿಂಗಾಪುರದಿಂದ ಆ ದಿವಸವೇ ಬಂದಿದ್ದ ರಾಮಪ್ಪನ್ಯಾಕರ ಆಚ್ಚುಮೆಚ್ಚಿನ ಆಪ್ತರಾದ ಮಲ್ಲೇಶ್ವರರಾಯರವರು ನ್ಯಾಕರವರ ಸಂಗಾತವಿದ್ದರು. ರಾತ್ರೆ ಭಂಡಸಾಲೆಯ ಬಾಗಿಲುಗಳನ್ನು ಮುಚ್ಚಿ ರಾಮಪ್ಪನ್ಯಾಕರು ತನ್ನ ಸ್ನೇಹಿತನೊಡನೆ ಬರುತ್ತಿದ್ದರು. ಮಲ್ಲೇಶ್ವರರಾಯರು ಸಿಂಗಾಪುರ ಊರಿನ ಸರಕಾರದ ರೆವಿನ್ಯೂ ಇಲಾಖೆಯ ಆಫೀಸರರು. ಸ್ನೇಹಿತ ರಾಮಪ್ಪನ್ಯಾಕರು ಯೋಚಿಸುತ್ತ ಆಡುವ ಮಾತುಗಳನ್ನು ಕೇಳಿ—ನ್ಯಾಕರೇ, ವ್ಯಾಪಾರ ಸ್ಥಿತಿಯಲ್ಲಿ ಇಷ್ಟು ಬೇಸರವೇನು? ನಮ್ಮಲ್ಲಿ ವ್ಯಾಪಾರಸ್ಥರಿಗೆ ಸಿಕ್ಕುವ ಮಾನವು ಇತರರ್ಯಾರಿಗಾದರೂ ಸಿಕ್ಕುವುದು ಅಪರೂಪ. ಸರಕಾರಿ ಆಫೀಸರರ ಗಣನೆಯೋ ನಮ್ಮಲ್ಲಿಲ್ಲದು. ಕಸ್ಟಮ್ಸ್ ಆಫೀಸಿನವರು ತೊಂದರೆಪಡಿಸುವರಾದರೆ ಇಂಥಾ ತೊಂದರೆಗಳನ್ನು ಸರಕಾರದವರ ಲಕ್ಷಕ್ಕೆ ತಂದುಬಿಡಿ. ನಿವೃತ್ತಿ ತಮಗೆ ಸಿಕ್ಕದೆ ಇರದು. ಹಣ ಹೊರಗಿನಿಂದ ವಸೂಲುಮಾಡುವ ಕ್ರಮವನ್ನು ನೀವು ಸ್ವಲ್ಪ ಇನ್ನಷ್ಟು ಜೋರಿನಿಂದ ಮಾಡಬೇಕೆಂದು ಕಳೆದ ಸರ್ತಿ ಬಂದಾಗ ನಿಮಗೆ ಸೂಚಿಸಿದ್ದೆ. ಲೆಕ್ಕಗಳೆಲ್ಲವು ಕ್ಲಪ್ತಕಾಲದಲ್ಲಿ ತಯ್ಯಾರಾಗುವಂತೆ ಇನ್ನೊಬ್ಬ ಶ್ಯಾನುಭೋಗರನ್ನು ನೇಮಿಸಿರೆಂತ ಆಗಲೇ ಹೇಳಿದ್ದೆ. ನೀವು ನನ್ನ ಒಂದು ಸೂಚನೆಯನ್ನಾದರೂ ನಡಿಸಿದ್ದಿಲ್ಲ. ಆದ್ದರಿಂದ ಬೇಂಕಿನ ತಗಾದೆ ತಪ್ಪುವ ಬಗೆ ಹೇಗೆ?—ಎಂದು ಮಲ್ಲೇಶ್ವರರಾಯರು ಅಂದರು.

"ಎಂಥಾ ಕ್ರಮವೂ ವೀರವೆಂಕಟಪುರದಲ್ಲಿ ಸಾಧ್ಯವಿಲ್ಲ. ನಮ್ಮ ಆಚಾರ್ಯರು ಈ ಊರಿನ ವಿಷಯ ಭವಿಷ್ಯತ್ಪುರಾಣದಲ್ಲಿ ಹೀಗೀಗೆ ಹೇಳೋಣಾಗಿರುವುದೆಂದನ್ನುತ್ತಿರುವದನ್ನು ನಾನು ಒಂದು ಕಲ್ಪಿತ ಕಥೆಯೆಂತ ನಂಬುತ್ತಿದ್ದಿಲ್ಲ. ಈಗ ಅವರು ಹೇಳಿದುದೆಲ್ಲಾ ವಿವರವು ಒಂದೊಂದೇ ರುಜುವಾಗುತ್ತಿದೆ. ಆಹಾ! ವೀರವೆಂಕಟಪುರದ ಮಹಿಮೆಯೇ!"

ರಾಮಪ್ಪನ್ಯಾಕರ ಈ ಮಾತುಗಳನ್ನು ಕೇಳಿ ಭವಿಷತ್ಪುರಾಣದಲ್ಲಿ ವೀರವೆಂಕಟಪುರದ ವಿಷಯ ಏನಿರುವುದೆಂಬುದನ್ನು ತಿಳಕೊಳ್ಳಬೇಕೆಂಬ ಕುತೂಹಲವು ಮಲ್ಲೇಶ್ವರರಾಯರಲ್ಲಿ ಹುಟ್ಟಿತು. ಆದರೆ ಮನೆಗೆ ಹೋಗಿ ಊಟ ತೀರಿದನಂತರ ಈ ಪ್ರಸ್ತಾಪವನ್ನು ಸ್ನೇಹಿತನೊಡನೆ ಕೇಳಬಹುದೆಂದು ಮಲ್ಲೇಶ್ವರರಾಯರು ರಾಮಪ್ಪನ್ಯಾಕರ ಮಾತುಗಳಿಗೆ ಪ್ರತ್ಯುತ್ತರಗಳನ್ನು ಕೊಡದೆ ಸುಮ್ಮನಿದ್ದರು. ರಾಮಪ್ಪನ್ಯಾಕರ ಮನೆಗೆ ಹೋಗಿ ತಲ್ಪಲು ಇನ್ನೂ ಒಂದೆರಡು ಫರ್ಲಂಗುಗಳಿದ್ದವು. ಗೋವಿಂದಸೆಟ್ಟಿಯ ಪಟ್ಟಿಯ ರೂ ೧೭—೮—೦. ಈ ವಿಷಯವು ಇನ್ನೊಮ್ಮೆ ನ್ಯಾಕರವರ ಸ್ಮರಣೆಗೆ ಬಂತು.

(ಮುಂದರಿಯುವದು)

ಪತ್ರವ್ಯವಹಾರ.

ಅಯ್ಯಾ,

ಮಂಗಳೂರಿನ ಶ್ರೀ ಗೋಕರ್ಣನಾಥ ದೇವಸ್ಥಾನದ ಸಹಾಯಾರ್ಥವಾಗಿ ಧನಸಂಗ್ರಹ ಮಾಡಲು ದೇವಸ್ಥಾನದ ಆಡಳಿತೆಮೊಕ್ತೇಸರರು ನಿರ್ಣಯಿಸಿದ ಏರ್ಪಾಡಿನಂತೆ ಕಳೆದ ನಾಲ್ಕು ವರ್ಷಗಳಾರಭ್ಯ ವರ್ಷಾವಧಿ ಮಹೋತ್ಸವಕ್ಕೆ ಮುಂಚಿತವಾಗಿ ಊರ ಪರವೂರುಗಳಿಂದ ಕಾಣಿಕೆಯನ್ನು ಸಂಗ್ರಹಿಸಿ ಬಂಡಾರಕ್ಕೆ ಒಪ್ಪಿಸುವ ಸಂಗತಿಯು ಜಾತಿಬಾಂಧವರೆಲ್ಲರಿಗೂ ವಿದಿತವಾಗಿರುವದಷ್ಟೆ? ಆಯಾಯ ಗ್ರಾಮಗಳಿಂದ ಸಂಗ್ರಹಿಸಲ್ಪಟ್ಟ ಐವಜಿಗಿಂತ ಮುಂಬಾಯಿಯ ಧನಸಹಾಯಕ ಸಂಘದಿಂದ ಭಂಡಾರಕ್ಕೆ ಕಾಣಿಕೆಯಾಗಿ ಒಪ್ಪಿಸಲ್ಪಟ್ಟ ಐವಜು ಹೆಚ್ಚಿನದಾಗಿರುವದು. ಮುಂಬಾಯಿಯ ಸಂಘದಲ್ಲಿ ಶೇಖರಿಸಲ್ಪಟ್ಟ ಐವಜನ್ನು ತರುವದಕ್ಕಾಗಿ ಕಳೆದ ೩ ವರ್ಷಗಳಿಂದ ದೇವಸ್ಥಾನದ ಕಡೆಯಿಂದ ಪ್ರತಿನಿಧಿಗಳನ್ನು ಮೊಕ್ತೇಸರರು ಕಳುಹಿಸಿರುವಂಥಾದ್ದು ಎಲ್ಲರಿಗೂ ತಿಳಿದೇ ಇರುವದು. ೧೯೧೩ನೇ ಮತ್ತು ೧೯೧೪ನೇ ಇಸವಿಗಳಲ್ಲಿ ಮುಂಬಾಯಿಯ ಸಂಘದಿಂದ ಸುಮಾರು ೮೫೦ ರೂಪಾಯಿಗಳಿಗೆ ಮಿಕ್ಕಿದ ಕಾಣಿಕೆಯು ಕೊಡಲ್ಪಟ್ಟ ಕುರಿತು ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟವಾಗಿರುವದು. ೧೯೧೫ನೇ ಇಸವಿಯಲ್ಲಿ ಮುಂಬಾಯಿಗೆ ಕಳುಹಿಸಲ್ಪಟ್ಟ ಪ್ರತಿನಿಧಿಗಳು ಮಾತ್ರ ಅಲ್ಲಿಂದ ಏನೂ ಕಾಣಿಕೆಯನ್ನು ತಾರದೆ ಬರಿಗೈಯಿಂದ ಹಿಂತಿರುಗಿ ಬಂದಿರುವದರಿಂದ ಅವರ ಪ್ರಯಾಣದ ಖರ್ಚಿನ ಬಗ್ಗೆ ಭಂಡಾರದಿಂದ ಕೊಡೋಣಾದ ಹಣವು ನಿಷ್ಪ್ರಯೋಜಕ ವ್ಯಯವಾಗಿರುವದೆಂತಲೂ ಆ ಐವಜನ್ನು ಕಳೆದ ವರ್ಷ ಮುಂಬಾಯಿಗೆ ಹೋದ ಸದರಿ ಪ್ರತಿನಿಧಿಗಳಿಂದ ಭಂಡಾರಕ್ಕೆ ಭರಮಾಡಿಕೊಳ್ಳುವರೆ ಏರ್ಪಾಡು ಮಾಡತಕ್ಕದ್ದೆಂತಲೂ ಅಲ್ಲಲ್ಲಿ ಆಡಿಕೊಳ್ಳುತ್ತಿರುವರು. ಆದಕಾರಣ ದೇವಸ್ಥಾನದ ಆಡಳಿತೆ ಮೊಕ್ತೇಸರರು ಈ ವಿಷಯ ತಕ್ಕ ಏರ್ಪಾಡು ನಡಿಸಿ ಇದರ ಫಲಿತಾಂಶವನ್ನು ಸರ್ವಜನ ವೇದ್ಯವಾಗುವಂತೆ ಪತ್ರಿಕಾ ಮೂಲಕ ಪ್ರಕಟಗೊಳಿಸುವರೆಂತ ನಂಬುತ್ತೇನೆ.

ಭಜಕರಲ್ಲೊಬ್ಬ.

ಅಯ್ಯಾ ಪತ್ರಕರ್ತರೇ,

ಮಂಗಳೂರಿನಲ್ಲಿ ಕಳವುಗಳು ಪತ್ತೆಯಾಗದೆ ಇರಲು ಕಾರಣವೇನೋ ತಿಳಿಯದು. ಪೋಲೀಸು ಸಿಬಂದಿಯ ಕಾರ್ಯನಿರ್ವಾಹವು ಚಲೋದಾಗಿಲ್ಲವೆಂತ ಹೇಳಲು ಕಾರಣವಿಲ್ಲ. ಯಾಕೆಂದರೆ ಮಂಗಳೂರು ಪಟ್ಟಣದಲ್ಲಿ ರಾತ್ರೆ ಒಮ್ಮೆ ತಿರುಗಾಡಲು ಹೋದರೆ ಪೋಲೀಸಿನವರ ಬಿಗಿಲುಗಳ ಘೋಷವು ಎಲ್ಲೆಲ್ಲಿಯೂ ಕೇಳಿಸುತ್ತಿದೆ. ಅದಲ್ಲದೆ ಪಬ್ಲಿಕ್ ಇಂಟರೆಸ್ಟ್ ಅಂದರೆ ಜನರ ಉಪಯೋಗಾರ್ಥವಾಗಿ ಇಲ್ಲಿಯ ಸಬ್ ಇನ್ಸ್‌ಪೆಕ್ಟರರಲ್ಲಿ ಹಲವರಿಗೆ ಇಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರರ ಕೆಲಸವನ್ನು ಕೊಡದೆ ಬೇರೆ ಜಿಲ್ಲೆಯ ಸಬ್ ಇನ್ಸ್‌ಪೆಕ್ಟರರನ್ನು ಇಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರುಗಳನ್ನಾಗಿ ಮಾಡಿರುತ್ತಾರೆ. ಆದ್ದರಿಂದ ಶಿಬಂದಿಯಲ್ಲಿ ಏನಾದರೂ ದೋಷವಿದ್ದೀತೆಂತ ಹೇಳಕಾರಣವಿರುವುದೇ? ಹ್ಯಾಗೂ ಕಳವುಗಳಲ್ಲಿ ಹಲವು ಪತ್ತೆಯಾಗುವುದಿಲ್ಲವೆಂಬುದು ನಿಜ. ಇಂಥಾ ವಿದ್ಯಮಾನಗಳಲ್ಲಿ ಅಧಿಕಾರಿಗಳು ಈ ಕೊರತೆಯ ಕಾರಣಗಳನ್ನು ಶೋಧಿಸಿ ಹಿಡಿಯುವದು ಅಗತ್ಯ. ಈ ಬಗ್ಗೆ ಪತ್ತೆದಾರಿ ಆಫೀಸರರ ಒಂದು ಕಮ್ಮಿಟಿಯನ್ನು ಏರ್ಪಡಿಸುವುದು ಉತ್ತಮವೆಂತ ಭಾವಿಸುತ್ತೇನೆ.

ಪ್ರಜಾಹಿತಚಿಂತ.

ಯುದ್ಧ ಸಮಾಚಾರ.

ತಾ. ೨೭ನೇ ಜನವರಿ.

ಬ್ರಿಟಿಷರ "ವಿಕ್‌ನೊರ್" ಎಂಬ ಹಡಗವು ಐರ್ಲಂಡಿನ ಉತ್ತರ ಸಮುದ್ರದಲ್ಲಿ ಹಾಕಿದ್ದ ಸಿಡಿಮದ್ದಿನ ಗಣೆಗೆ ತಾಗಿ ಯಾ ಬಿರುಗಾಳಿಗೆ ಸಿಕ್ಕಿ ಸಿಡಿದುಹೋಯಿತು. ಹಡಗದಲ್ಲಿದ್ದವರೆಲ್ಲರೂ ನಾಶವಾದರು ಎಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುವರು.

ಎಸೆನ್ ಎಂಬಲ್ಲಿದ್ದ ಜರ್ಮನರ ಮೋಟರ್ ಬಂಡಿಗಳನ್ನು ದುರುಸ್ತಿಮಾಡುವ ಶೆಡ್ಡುಗಳ ಮೇಲೆ ಬ್ರಿಟಿಷ ವಾಯುನಾವೆಗಳು ಸಿಡಿಮದ್ದುಗಳನ್ನು ಬಿಸಾಡಿ ಹಾಳುಮಾಡಿರುವರು. ಅಲ್ಲಿ ಸುಮಾರು ೪೦೦ ಮೋಟರ್ ಗಾಡಿಗಳು ಇದ್ದವು ಎಂತ ಅಮ್ಸ್ಟರ್‌ಡಮಿನಲ್ಲಿ ಪ್ರಕಟವಾಗಿದೆ.

ಆಸ್ಟ್ರಿಯನರು ಕರ್‌ಪಥೇನಿಯದಲ್ಲಿ ಬಹು ಚುರುಕಿನಿಂದ ಕದನಕ್ಕೆ ತೊಡಗಿರುವರಲ್ಲದೆ ರಣರಂಗದಲ್ಲಿ ಇತರ ಬದಲಾವಣೆಯಾಗಲಿಲ್ಲ.

ತಾ ೨೮ನೇ ಜನವರಿ.

ನೌಕಾವಳಿ ಯುದ್ಧದಲ್ಲಿ ನಾಶವಾದ ಜರ್ಮನರ ಬ್ಲುಚರ್ ನಾವೆಯು ಹತಶೇಷರಲ್ಲಿ ಸುಮಾರ ೨೦೦ ಮಂದಿ ಸೌತ್‌ಕ್ವೀನ್ಸ್ ಫೆರಿನಲ್ಲಿ ಇಳಿದಿರುವರು. ಇವರನ್ನು ಎಡಿನ್‌ಬರ್ಗ ಅರಮನೆಗೆ ಕೊಂಡು ಹೋಗಿರುವರು. ಈ ಕದನದಲ್ಲಿ ಬ್ರಿಟಿಷ ನಾವೆಗಳ ಲಯನ್ ನಾವೆಯಲ್ಲಿ ೧೭ ಮಂದಿ ಗಾಯ ಒಡೆದಿರುವರು. "ಟೈಗರ್" ಎಂಬ ನಾವೆಯಲ್ಲಿ ಒಬ್ಬ ಆಫೀಸರನೂ ೯ ಸೈನಿಕರೂ ಹತರಾಗಿರುವರು. ೩ ಆಫೀಸರರೂ ೮ ಸೈನಿಕರೂ ಗಾಯ ಒಡೆದಿರುವರು. ಮತ್ತೊಂದು ನಾವೆಯಲ್ಲಿ ೪ ಮಂದಿ ಹತರಾಗಿರುವರು. ಒಬ್ಬನು ಗಾಯ ಒಡೆದಿರುವನು.

ಫ್ಲಾಂಡರಿನಲ್ಲಿ ಬೆಲ್ಜಿಯನರು ಯಿಪ್ರೆಸಿನ ದಾರಿಯಲ್ಲಿ ಮುಂದರಿದಿರುವರು. ಯಿಪ್ರೆಸಿನ ಮಾರ್ಗದಲ್ಲಿ ಮೇಲ್ಬಾಯುವ ಜರ್ಮನರನ್ನು ಮಿತ್ರರು ಹಿಂದಕ್ಕಟ್ಟಿರುವರು. ಒಂದು ಬ್ರಿಟಿಷ ಸೇನೆಯು ಲಾಬಾಸ್ಸೆಯ ಸಮೀಪ ಐದಾವರ್ತಿ ಮೇಲ್ಬಾಯುದ ಜರ್ಮನರನ್ನು ಓಡಿಸಿಬಿಟ್ಟಿರುವರು. ಇಲ್ಲಿ ಜರ್ಮನರಿಗೆ ವಿಶೇಷ ನಷ್ಟ ಸಂಭವಿಸಿರುವದು. ಜರ್ಮನ ಆಫೀಸರರ ೬ ಶವಗಳೂ ಸೈನಿಕರ ೪೦೦ ಶವಗಳೂ ದೊರಕಿರುವದು.

ಖಾನ್ ಬಹಾದರ ಖಾನ್ ಎಂಬ ಹಿಂದೀ ಸೈನಿಕನಿಗೆ ಜೋರ್ಜ ಚಕ್ರವರ್ತಿಯವರು ಸ್ವತಹಾ ವಿಕ್ಟೋರಿಯಾ ಕ್ರೋಸ್ ಎಂಬ ಬಿರುದನ್ನು ಕೊಟ್ಟಿರುವರು.

ಜರ್ಮನಿ ಕೈಸರರ ಸ್ನೇಹಿತರೂ ದೊಡ್ಡ ಸಾಹುಕಾರರೂ ಆದ ಲ್ಯುಬೆಕಿನ ಸಸೇಟರ್ ಪೊಸ್ಸೆಲ್ ಎಂಬವರು ಜರ್ಮನಿಯ ಶತ್ರುಗಳೊಡನೆ ವ್ಯಾಪಾರ ಮಾಡಿದರೆಂಬ ಅಪಾದನೆಯ ಮೇಲೆ ಕೈದುಮಾಡಲ್ಪಟ್ಟಿರುವರು. ಇದರಿಂದ ಜರ್ಮನಿಯಲ್ಲಿ ವಿಶೇಷ ಚಳವಳ ಉಂಟಾಗಿರುವದು.

ಪೂರ್ವಪ್ರುಷ್ಯದ ಪಿಲ್ಕಾಲೆನ್ ಪ್ರಾಂತ್ಯದಲ್ಲಿ ರುಶ್ಯನರು ಜರ್ಮನರ ಮೇಲ್ಬಾಯಿದು ಜರ್ಮನರನ್ನು ಓಡಿಸಿರುವರು. ಇಲ್ಲಿ ಸನೀನು ಕಾಳಗ ನಡೆಯಿತು. ವಿಸ್ಟುಲದ ಎಡಪಾರ್ಶ್ವದಲ್ಲಿ ಜರ್ಮನರು ಪುನಃ ಹಲ್ಲಾಮಾಡಲು ಯತ್ನಿಸಿದರು. ಶತ್ರುಗಳು ಜೀವದ ಮರವೆ ಇಲ್ಲದೆ ಮೇಲ್ಬಾಯಿದರೂ ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿರುವರು. ಸ್ಕರ್ನಿವಿಸಿನಲ್ಲಿ ಜರ್ಮನರ ತೋಪುಗಳನ್ನು ರುಶ್ಯನರು ಹಾಳುಮಾಡಿರುವರು. ಗೆಲಿಶಿಯದಲ್ಲಿ ಶತ್ರುಗಳ ಚಟುವಟಿಕೆಯು ಹೆಚ್ಚುತ್ತಿದೆ. ತೋಪುಗಳ ಕಾಳಗವೂ ಹಲ್ಲಾ ಮಾಡುವ ಯತ್ನವೂ ನಡೆಯುತ್ತಿದೆ. ಆದರೆ ಪ್ರತಿ ಒಂದು ಕಡೆಯಲ್ಲಿಯೂ ಶತ್ರುಗಳು ಹಿಮ್ಮೆಟ್ಟುತ್ತಿರುವರು. ರುಶ್ಯನರು ಮೂರು ಆಫೀಸರರನ್ನೂ ೩೦೦ ಸೈನಿಕರನ್ನೂ ಕೈದು ಮಾಡಿರುವರು ಎಂತ ಪೆಟ್ರೋಗ್ರೇಡಿನಿಂದ ಬಂದ ವಾರ್ತೆಯಿಂದ ತಿಳಿದುಬರುತ್ತದೆ.

ಕಾಂತಾರ ಎಂಬಲ್ಲಿಯು ಪೂರ್ವದಲ್ಲಿ ಬ್ರಿಟಿಷರಿಗೂ ತುರ್ಕರಿಗೂ ಕದನ ನಡೆದಿರುವದು. ಬ್ರಿಟಿಷರಲ್ಲಿ ಒಬ್ಬ ಆಫೀಸರನಿಗೂ ೪ ಸೈನಿಕರಿಗೂ ಸ್ವಲ್ಪ ಗಾಯವಾಗಿರುವದು. ಶತ್ರುಗಳಿಗೆ ಹೆಚ್ಚಿನ ನಷ್ಟವಾಗಿರುವದೆಂತ ಈಜಿಪ್ಟಿನ ಕೈರೋ ನಗರದಿಂದ ವಾರ್ತೆ ಬಂದದೆ.

ಲಿಬೋ ಪಟ್ಟಣದ ಮೇಲೆ ಶತ್ರುಗಳ ಜೆಫಲಿನ್ ಆಕಾಶ ನಾವೆಯು ಹಾರಿಕೊಂಡು ಬೊಂಬುಗಳನ್ನು ಬಿಸಾಡಿತು. ಅಲ್ಲಿನ ಕೋಟೆಗಳು ಜೆಫಲಿನ್ ನಾವೆಗೆ ಗುಂಡು ಹಾರಿಸಿ ನಾವೆಯನ್ನು ಕೆಳಕ್ಕೆ ದೊಬ್ಬಿರುವದು. ಜೆಫಲಿನ್ ನಾವೆಯು ಸಮುದ್ರಕ್ಕೆ ಬಿತ್ತು ಎಂತ ಪ್ರಕಟವಾಗಿದೆ.

ಬರ್ಮದಲ್ಲಿ ಕೂಡಿಸಲ್ಪಡುವ ಯುದ್ಧಸಹಾಯ ಫಂಡಿಗೆ ಈ ವರೆಗೆ ೬ ಲಕ್ಷ ರೂಪಾಯಿ ವಂತಿಗೆ ಕೂಡಿರುವದು.

ತಾರೀಕು ೨೯ನೇ ಜನವರಿ.

ಫ್ರೆಂಚ ನೌಕಾವಳಿ ಮಂತ್ರಿಯವರು ಲಂಡನಿಗೆ ಹೋಗಿ ಬ್ರಿಟಿಷ ಹಡಗುಪಡೆ ಮಂತ್ರಿಯವರ ಕೂಡೆ ಆಲೋಚನೆ ನಡಿಸಿ ಫ್ರಾನ್ಸಿಗೆ ಹಿಂದೆರಳಿ ಬಂದಿರುವರು.

ಅರ್ಗೋನ್ನಿಯ ಸೈಂಟ್ ಹ್ಯುಬರ್ಟಿನಲ್ಲಿ ಜರ್ಮನರು ನಾಲ್ಕುಸಾರಿ ಹಲ್ಲಾ ಮಾಡಿದರೂ ಹಿಮ್ಮೆಟ್ಟಲ್ಪಟ್ಟರು.

ಜರ್ಮನರು ಪುನಃ ವಿಸ್ಟುಲದ ಎಡಪಾರ್ಶ್ವದಲ್ಲಿ ಹಲ್ಲಾ ಮಾಡಲು ಪ್ರಯತ್ನಿಸಿದರು. ಆದರೆ ರುಶ್ಯನರು ಜರ್ಮನರು ಹಿಂದಟ್ಟಿದರು.

ಪೂರ್ವ ಪ್ರುಶ್ಯದ ಲೆಸ್‌ಡೆನ್ ಮತ್ತು ಮಾಲ್ವಿಶ್ಕೆನಿನ ಬಳಿ ಕದನ ನಡೆಯುತ್ತಿದೆ. ಇನ್‌ಸ್ಟರ್ ಬರ್ಗಿಗೆ ಸಮೀಪವೂ ಕದನವಾಗುತ್ತಿದೆ. ಬೋರ್ಜಿಮೊಫಿನಲ್ಲಿ ಜರ್ಮನರು ತಿರಿಗಿ ತಿರಿಗಿ ಮೇಲ್ಬಾಯಿದರೂ ಹಿಮ್ಮೆಟ್ಟಿದರು.

ಜರ್ಮನರು ರಶ್ಯನರ ಕೂಡೆ ಪ್ರತ್ಯೇಕ ಸಂಧಾನ ಮಾಡಿಕೊಳ್ಳಲು ಮನಸ್ಸುಳ್ಳವರಾಗಿದ್ದಾರೆಂದೂ ಆದರೆ ರುಶ್ಯನರು ಮಿತ್ರರನ್ನು ಬಿಟ್ಟು ಯಾವುದೊಂದು ಕಾರ್ಯವನ್ನು ಮಾಡಲಾರರು ಎಂದೂ ಲಂಡನಿನಲ್ಲಿರುವ ರುಶ್ಯ ರಾಯಭಾರಿಯು ಹೇಳಿರುವರು.

ಈಜಿಪ್ಟಿಗೆ ಒಳನುಗ್ಗುವ ತುರ್ಕರ ಸೇನೆಗೆ ಮಾಜಿ ಮಂತ್ರಿ ಡೆಮಾಲ್ ಪಾಶರವರು ಜನರಲರಾಗಿರುವರು. ೩ ಸೇನಾಂಗಗಳು ಈಜಿಪ್ಟಿನ ಕಡೆಗೆ ಮುಂದರಿಯುತ್ತಲಿದೆಂತ ಅಥೆನ್ಸಿನಲ್ಲಿ ಪ್ರಕಟವಾಗಿದೆ.

ತಾರೀಕು ೩೦ನೇ ಜನವರಿ.

ಜರ್ಮನರ "ಗಜೆಲ್ಲಿ" ಎಂಬ ನಾವೆಗೆ ಬ್ರಿಟಿಷರ ಟೊರ್ಪೆಡೋ ನಾವೆಯು ಮೇಲ್ಬಾಯಿದಿರುವದು.

ಯಿಪ್ರೆಸ್, ಲಾಬಾಸ್ಸೆ, ಕೆರೊನ್ನೆ ಮತ್ತು ಅರ್ಗೋನ್ನೆ ವೊವ್ರೆ ಮತ್ತು ವೊಸೆಜೆಸಿನಲ್ಲಿ ಆದಿತ್ಯವಾರ, ಸೋಮವಾರ, ಮಂಗಳವಾರ ನಡೆದ ಕದನದಲ್ಲಿ ಜರ್ಮನರಲ್ಲಿ ಕಡಿಮೆ ಎಂದರೆ ೨೦ ಸಾವಿರ ಮಂದಿ ಹತರಾಗಿರುವರು. ಜರ್ಮನರು ಈ ಘೋರ ಕದನಗಳನ್ನು ನಡಿಸಲು ಕೈಸರರ ಜನನ ದಿನವೇ ಕಾರಣವಾಗಿತ್ತೆಂದು ಜರ್ಮನರು ಹೇಳುವರು. ಆದರೆ ಆ ದಿನ ಜರ್ಮನರಿಗೆ ಜಯವಾಗಲಿಲ್ಲ. ವಿಕ್ರಾ ಬೆಲ್ಜಿಯಮಿನಲ್ಲಿದ್ದ ಜರ್ಮನರಕಂದಕಗಳನ್ನು ನಾಶಮಾಡಿರುವರು. ಅರ್ರಾಸ್, ಅಲ್ಬರ್ಟ್, ರೋಯೆ, ನೊಯನ್ ಮತ್ತು ಸ್ಯೊಸೊನ್ಸ್‌ನಲ್ಲಿ ತೋಪುಕಾಳಗ ನಡೆಯುತ್ತಿದೆ. ಶತ್ರುಗಳು ಕೆಲವು ಕಡೆಗಳಲ್ಲಿ ಕಂದಕಗಳನ್ನು ಬಿಟ್ಟು ಹೋಗಲು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ಈ ದಿನದ ಕದನದಲ್ಲಿ ಮಿತ್ರರ ಒಟ್ಟು ನಷ್ಟ ೮೦೦ ಮಾತ್ರವಾಗಿರುವದು. ಸೈಂಟ್ ಮಿಹಿಯೆಲಿನಲ್ಲಿ ಮೇಲ್ಬಾಯಿದ ಜರ್ಮನರೂ ಹಿಮ್ಮೆಟ್ಟಿರುವರು. ನ್ಯೂಪೋರ್ಟಿನಲ್ಲಿ ಫ್ರೆಂಚರ ಫಿರಂಗಿಗಳು ಜರ್ಮನರ ವಾಯುನಾವೆಯನ್ನು ಕೆಡವಿರುವವು.

ಲಾಬಾಸ್ಸೆಯಲ್ಲಿ ನಡೆದ ಕದನದ ವಿಷಯ ಈ ರೀತಿ ಪ್ರಕಟಿಸಲ್ಪಟ್ಟಿರುವದು. ಬೆಥ್ಯೂನನ್ನು ಹಿಡಿಯುವ ಉದ್ದೇಶದಿಂದ ಬ್ರಿಟಿಷ ನೆಲೆಗಳನ್ನು ಒಡೆದುಹಾಕುವ ಬಗ್ಗೆ ಜರ್ಮನರು "ಲಾಬಾಸ್ಸೆ ಮತ್ತು ಫೆಸ್ಟುಬರ್ಗಿನ ಮಧ್ಯೆ ದೊಡ್ಡ ಸೇನೆಯನ್ನು ತಂದೊಡ್ಡಿದರು. ಬೆಳಿಗ್ಗೆ ೬॥ ಗಂಟೆಗೆ ತೋಪು ಮತ್ತು ಆಯುಧ ಪಾಣಿಯಾದ ಅಗ್ನಿಡಿಯ ಸಹಾಯದಿಂದ ಹಲ್ಲಾ ಮಾಡಲು ಯತ್ನಿಸಿದರು. ಬೆಳಿಗ್ಗೆ ೭ ೩೦—೯ ೩೦ ಗಂಟೆಯ ಮಧ್ಯಕಾಲ ಬೆಥ್ಯೂನಿಗೆ ೨೦ ಗುಂಡುಗಳನ್ನು ಹಾರಿಸಿದರು. ಹೀಗೆ ಬೆಥ್ಯೂನಿನ ಮೇಲ್ಬಾಯುವ ಸಿದ್ಧತೆಯು ಕೆಲವು ದಿವಸಗಳ ಮುಂಚಿತವಾಗಿಯೇ ಮಾಡಲ್ಪಟ್ಟಿದ್ದಿತೆಂದೂ ಕೈಸರರು ಈ ಸನ್ನಾಹವನ್ನು ನೋಡುತ್ತಿದ್ದು ೨ ದಿವಸಗಳ ಮುಂಚೆ ಜರ್ಮನರ ನೆಲೆಗಳನ್ನು ನೋಡಿಹೋಗಿದ್ದಾರೆಂದೂ ಸೆರೆಬಿದ್ದ ಜರ್ಮನರು ಹೇಳುವರು. ಮಿತ್ರಸೇನಿಕರನ್ನು ಫೆಸ್ಟುಬರ್ಗಿನ ಕಡೆಗೆ ಮುಂದರಿಯುವ ಹಾಗೆ ಮಾಡಿ ಅವರ ಮೇಲ್ಬಾಯಬೇಕೆಂದು ಜರ್ಮನರು ಆಲೋಚಿಸಿ ಎರಡು ಕಾಲಾಳು ಸೇನೆಗಳನ್ನು ಬ್ರಿಟಿಷರ ಮೇಲೆ ಕಳುಹಿಸಿದರು. ಆದರೆ ಮಿತ್ರರಿಗೆ ಈ ಮೊದಲೇ ಜರ್ಮನರ ಈ ವಿಚಾರವು ತಿಳಿದು ಬಂದುದರಿಂದ ಜರ್ಮನರ ಕಾಲಾಳುಸೇನೆಯು ಅತಿ ಸಮೀಪ ಸೇರುವ ಹಾಗೆ ಮಾಡಿ, ಎದುರುಗಡೆಯಿಂದ ಬ್ರಿಟಿಷ ತೋಪುಗಳೂ ಮಗ್ಗುಲಲ್ಲಿ ಫ್ರೆಂಚ ತೋಪುಗಳೂ ಈ ಶತ್ರುಸೇನೆಯ ಮೇಲೆ ಗುಂಡುಹಾರಿಸಿ ವಿಶೇಷ ನಷ್ಟಪಡಿಸಿದರು. ಮಿತ್ರರ ಲೈನಿಗೆ ೫೦೦ ಮೀಟರ್ ದೂರದ ವರೆಗೆ ಜರ್ಮನರ ೨ ರೆಜಿಮೆಂಟ್ ಸೇನೆಯನ್ನು ಬರಲು ಫ್ರೆಂಚರು ಬಿಟ್ಟು ನಂತರ ತೋಪು ಹಾರಿಸಿದರು. ಜರ್ಮನರ ೩ ಸೇನಾಂಗಗಳು ಮಿತ್ರರ ಕೈ ಸೇರಿದವು. ಜರ್ಮನರು ಐದಾವರ್ತಿ ಮೇಲ್ಬಾಯಿದರು. ಆದರೆ ಹಿಮ್ಮೆಟ್ಟಿದರು. ಮಾರ್ಲೆಸಿನ ಸಮೀಪ ಸನೀನು ಕಾಳಗ ನಡೆದು ಜರ್ಮನರಲ್ಲಿ ದೊಡ್ಡ ನಷ್ಟವಾಗಿರುವದು.

ಜರ್ಮನರ ಪ್ರುಶ್ಯದ ಸೇನಿಕರಲ್ಲಿ ಹತರಾದವರ ೧೪೧ನೇ ಪಟ್ಟಿಯಲ್ಲಿ ಹತರಾದ ೯೮೮,೯೬೦ ಮಂದಿಯ ಸಂಖ್ಯೆಯು ತೋರಿಬರುತ್ತದೆ.

ಕರ್‌ಪಥೇನಿಯದಲ್ಲಿ ರುಶ್ಯನರಿಗೆ ದೊಡ್ಡ ಜಯವಾಗಿರುವದು. ಶತ್ರುಗಳು ಇಲ್ಲಿ ತಮ್ಮ ಯುದ್ಧಸಾಮಗ್ರಿಗಳನ್ನೂ ಕಂದಕಗಳನ್ನು ತೋಡುವ ಸಾಮಾನುಗಳನ್ನೂ ಬಿಟ್ಟು ಓಡಿರುವರು. ಪ್ರತಿ ಕಡೆಯಲ್ಲಿಯೂ ಶತ್ರುಗಳು ಸೋತು ಹೋಗಿರುವರು.

ಪೂರ್ವ ಪ್ರುಶ್ಯದಲ್ಲಿ ರುಶ್ಯನರು ಮುಂದರಿಯುತ್ತಲಿದ್ದಾರೆ. ಪಿಲ್ಕಾಲೆನ್ ಮತ್ತು ಗಂಬಿನೆನಿನ ಅಡವಿಯಲ್ಲಿ ಕಠಿಣ ಕಾಳಗ ನಡೆಯುತ್ತಿದೆ.

ತಾ. ೧ನೇ ಫೆಬ್ರುವರಿ.

ಸ್ಯೊಸನ್ಸಿನ ಪೂರ್ವದಲ್ಲಿ ಜರ್ಮನರು ಎರಡು ಸಾರಿ ಐನೆ ನದಿಯನ್ನು ದಾಟಲು ಪ್ರಯತ್ನಿಸಿ ಹಿಮ್ಮೆಟ್ಟಿರುವರು.

ತಾ ೨೮ನೇ ರಾತ್ರಿ ಜರ್ಮನರ ಕೆಲವು ವಾಯುನಾವೆಗಳು ಡನ್‌ಕರ್ಕಿನ ಮೇಲೆ ಸಿಡಿಮದ್ದುಗಳನ್ನು ಬಿಸಾಡಿದವು. ಇದರಿಂದ ಕೆಲವು ಮಂದಿ ಹತರಾಗಿರುವರು. ಕೆಲವರಿಗೆ ಗಾಯವಾಗಿದೆ. ಆಸ್ತಿ ನಷ್ಟವು ಅತಿ ವಿಶೇಷವಾಗಿರುವದು.

ಎರಡು ಫ್ರೆಂಚ ವಾಯುನಾವೆಗಳು ಈ ದಿನ ಬೆಳಿಗ್ಗೆ ಲೋನ್, ಲಿಫ್ರೆ, ಮತ್ತು ಸ್ಯೊಸನ್ಸ್ ಪ್ರಾಂತ್ಯದಲ್ಲಿದ್ದ ಶತ್ರುಗಳ ನೆಲೆಗಳಿಗೆ ಬೊಂಬುಗಳನ್ನು ಬಿಸಾಡಿರುವವು. ಗರ್ಬೆವಿಲ್ಲರಿನ ಬಳಿ ಒಂದು ಜರ್ಮನರ ವಾಯುನಾವೆಯನ್ನು ಫ್ರೆಂಚರು ಕೆಳದೊಬ್ಬಿರುವರು.

ಲಾಬಾಸ್ಸೆ, ಲೊಂಬರ್ಟ್ಜೈಡ್ ಎಂಬಲ್ಲಿ ನಡೆದ ಕದನಗಳಲ್ಲಿ ಉಭಯಪಾರ್ಶ್ವದಲ್ಲಿಯೂ ವಿಶೇಷ ನಷ್ಟವಾಗಿರುವದೆಂತ ಪ್ರಕಟವಾಗಿದೆ.

ಜರ್ಮನರ ಜಲಾಂತರ್ಗಾಮಿ ನಾವೆಯು ಬ್ರಿಟಿಷರ ಇನ್ನೊಂದು ವ್ಯಾಪಾರ ಹಡಗವನ್ನು ಮುಣುಗಿಸಿರುವದು. ಐರ್ಲಾಂಡ್ ತೀರದಲ್ಲಿ ಮುಣುಗಿಹೋದ "ವಿಕ್‌ನೊರ್" ನಾವೆಯಲ್ಲಿ ೨೭೩ ಮಂದಿ ಮುಣುಗಿ ಸತ್ತರು.

ಪೂರ್ವ ಪ್ರುಶ್ಯದಲ್ಲಿಯೂ ವಿಸ್ಟುಲದ ಎರಡು ಪಕ್ಕಗಳ ರಣರಂಗದಲ್ಲಿಯೂ ಹೆಚ್ಚಿನ ಬದಲಾವಣೆಯಾಗಲಿಲ್ಲ. ಪಿಲ್ಕಾಲೆನ್ ಮತ್ತು ಗುಂಬಿನೆನ್ ಪ್ರಾಂತ್ಯದಲ್ಲಿ ಕದನಗಳು ನಡೆಯುತ್ತಿವೆ. ಕರ್‌ಪಥೇನಿಯದಲ್ಲಿ ಕಳೆದ ೩ ದಿವಸಗಳಲ್ಲಿ ರುಶ್ಯನರು ೨೪೬೦ ಶತ್ರುಗಳನ್ನು ಸೆರೆಹಿಡಿದಿರುವರು. ಡುಕ್ಲದ ಸಮೀಪ ಆಸ್ಟ್ರಿಯನರು ಸೋಲಿಸಲ್ಪಟ್ಟಿರುವರು. ಇಲ್ಲಿ ಸನೀನು ಕಾಳಗವು ತೀಕ್ಷ್ಣವಾಗಿದ್ದು ೨೫೦೦ ಆಸ್ಟ್ರಿಯನರು ಮೂರು ಫಿರಂಗಿಗಳ ಸಹಿತ ಸೆರೆಬಿದ್ದಿರುವರು. ಬೋರ್ಜಿಮೊಫಿನಲ್ಲಿ ಜರ್ಮನರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು.

ರುಶ್ಯನರು ಪಿಲ್ಕಾಲೆನಿನ ಮೇಲೆ ಒಂದು ದಿವಸ ಗುಂಡು ಹಾರಿಸಿ ಅದನ್ನು ವಶಮಾಡಿಕೊಂಡರು. ರುಶ್ಯನರು ಕೋಟೆಯೊಳಗೆ ಪ್ರವೇಶಿಸುವಾಗ ಪಟ್ಟಣ ಜನರ್ವ ೬೦೦—೭೦೦ರ ಪೈಕಿ ಬರೀ ೩೦೦ ಮಂದಿ ಪಟ್ಟಣಿಗರು ಮಾತ್ರ ಅಲ್ಲಿದ್ದರು. ರುಶ್ಯನರು ಟಿಲ್‌ಸಿಟಿನ ಪ್ರಾಂತ್ಯದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಮುಂದರಿಯುತ್ತಲಿರುವರು. ವಾರ್‌ಶೋದ ಪಶ್ಚಿಮದ ಕದನವು ಈಗ ಮುತ್ತಿಗೆಯ ರೀತಿಗೆ ಮಾರ್ಪಟ್ಟಿರುವದು. ಜರ್ಮನರು ಅಲ್ಲಿ ಈಗ ಕಂದಕಗಳನ್ನು ತೋಡಿ ಬಲಕಾಯಿಸುತ್ತಿರುವ[illegible]

ಆಸ್ಟ್ರಿಯನರ ಮತ್ತು ಹಂಗೇರಿಯನ್ ಸೇನೆಯು ಎರಡು ವಿಭಾಗವಾಗಿ ವಿಂಗಡಿಸಲ್ಪಟ್ಟು ೩೦೦,೦೦೦ ಸೈನಿಕರು ಸರ್ವಿಯಕ್ಕೆ ಒಳನುಗ್ಗಲು ಎತ್ತುಗಡೆ ಮಾಡಿರುವರು. ಉಳಿದ ೩೦೦,೦೦೦ ಸೈನಿಕರಿಗೆ ಜರ್ಮನರ ಬೆಂಬಲ [illegible] ಎಂತ ತಿಳಿದುಬರುತ್ತದೆ.

[illegible] ಅಲೆಕ್ಸಾಂಡ್ರಾಯಿಂದ ೫೦೦೦ [illegible] ಎಂಬ ಹಡಗವು ಬಂದಿರುವದು [illegible] ೬೦೦೦ [illegible] ಆಗಿರುವರು. [illegible]

೭೫ ಇಂಗ್ಲಿಷರಿರುವರು. ಸರಕಾರದವರು ಪಟ್ಟಣದಲ್ಲಿ ಇವರ ಬಗ್ಗೆ ತಕ್ಕ ಏರ್ಪಾಡು ಮಾಡುತ್ತಿರುವರು. ಪುನಃ ಇನ್ನೊಂದು ಹಡಗದಲ್ಲಿ ೧೨,೦೦೦ ಮಂದಿ ಬರಲಿಕ್ಕಿರುವರಂತೆ.

ಆದಿತ್ಯವಾರ ಮತ್ತು ಮಂಗಳವಾರ ಬ್ರಿಟಿಷರು ಸಣ್ಣಸಣ್ಣ ಪಂಗಡಗಳಾಗಿ ಅಲೆಕ್ಸಾಂಡ್ರಿಯದಲ್ಲಿ ಇಳಿದು ೬ ತಂತೀ ಸರಿಗೆಗಳನ್ನು ಕಡಿದು ಹಾಕಿದರು. ತುರ್ಕರು ಇವರನ್ನು ಕಠಿಣವಾಗಿ ಎದುರಿಸಲಿಲ್ಲ. ಸಿಡೋನಿನಲ್ಲಿ ತಂತೀಯನ್ನೂ ಬ್ರಿಟಿಷ ನಾವಿಕರು ಕಡಿದಿರುವರು. ಈಜಿಪ್ತಿಗೆ ಒಳನುಗ್ಗುವ ತುರ್ಕೀ ಸೈನ್ಯದ ಒಂದಂಶವು ಕಾಂತರಕ್ಕೆ ೨೫ ಮೈಲು ಉತ್ತರಪೂರ್ವದ ಕಾಟಿಯ ಎಂಬಲ್ಲಿ ಇದೆ. ಮತ್ತೊಂದು ತುರ್ಕೀ ಸೇನೆಯು ಮೊಯಿಲಿರಾಬ್ ಎಂಬಲ್ಲಿಯೂ ಇನ್ನೊಂದು ಸೇನೆಯು ಸೂಯೆಜಿನ ೧೦ ಮೈಲು ಪೂರ್ವಕ್ಕಿರುವ ಬಿವರ್ಬಲೆಕ್ ಎಂಬಲ್ಲಿಯೂ ಇದೆ. ಕೆಂಪು ಸಮುದ್ರದ ಮೇಲಿರುವ ಟೊರ್ ಎಂಬಲ್ಲಿ ತುರ್ಕರ ಸಣ್ಣ ಒಂದು ಸೇನೆಯು ಇದೆ. ಕಳೆದ ಗುರುವಾರ ತುರ್ಕರ ಸೇನೆಯು ಕಾಂತಾರದಲ್ಲಿ ಬ್ರಿಟಿಷ ಸಣ್ಣ ಸೇನೆಯ ಮೇಲೆ ಒತ್ತಿತು. ಆದರೆ ಬ್ರಿಟಿಷರು ಅವರನ್ನು ಓಡಿಸಿದರು. ತುರ್ಕರಲ್ಲಿ ೪ ಮಂದಿ ಹತರಾದರು. ಬ್ರಿಟಿಷರಲ್ಲಿ ಒಬ್ಬ ಭಾರತೀಯ ಆಫೀಸರನೂ ಒಬ್ಬ ಭಾರತೀಯ ಸೈನಿಕನೂ ಮಡಿದರು. ೫ ಗುರ್ಖಾ ಸೈನಿಕರಿಗೆ ಘಾಯವಾಗಿದೆ. ಶತ್ರುಗಳು ಸೂಯೆಜಿನ ಪೂರ್ವಕ್ಕಿರುವ ಕಚ್ಚಿ ಎಂಬಲ್ಲಿಯೂ ಬ್ರಿಟಿಷರ ಮೇಲ್ಬಿದ್ದು ಸೋತುಹೋದರು.

~~~~~

ಯುದ್ಧ ಸಂಬಂಧವಾದ ವಿವಿಧ ಸಮಾಚಾರಗಳು

ಜರ್ಮನಿಯು ಯುದ್ಧರಂಗದಲ್ಲಿ ಒಂದು ಲಕ್ಷಕ್ಕಿಂತಲೂ ಹೆಚ್ಚಾಗಿ ಮೋಟರ್ ಬಂಡಿಗಳನ್ನು ಉಪಯೋಗಿಸುತ್ತಿರುವರು.

~~~~~

ಒಂದು ಕುಟುಂಬದಲ್ಲಿ ಏಕಮಾತ್ರ ಪುತ್ರನಿದ್ದರೆ ಅವನು ರಣರಂಗಕ್ಕೆ ಹೋಗಬೇಕಾದುದಿಲ್ಲವೆಂದು ಪ್ರುಶ ದೇಶದಲ್ಲಿ ಒಂದು ಕಾನೂನು ಏರ್ಪಾಡಾಗಿರುವದು.

~~~~~

ಯುದ್ಧಕಾಲಿಕ ಶಾಸನರೀತ್ಯಾ ಸೆರೆಹಿಡಿದು [illegible]ನಲ್ಲಿ ಇಡಲ್ಪಟ್ಟಿರುವ ಜರ್ಮನರಲ್ಲಿ ಕೆಲವರು ತಮ್ಮ ಸ್ನೇಹಿತರಿಗೆ ಒಂದು ಬಗೆಯಾದ ಶಾಯಿಯಿಂದ ಕಾಗದಗಳನ್ನು ಬರೆಯುವರು. ಈ ರೀತಿಯಾಗಿ ಬರೆಯಲ್ಪಟ್ಟ ಕಾಗದಗಳಲ್ಲಿ ಅಕ್ಷರಗಳೊಂದಾದರೂ ಕಾಣಿಸುವದಿಲ್ಲ. ಇಂಥಾ ಕಾಗದಗಳನ್ನು ಪಡೆದ ಜನರು ಅವುಗಳನ್ನು ರಸಾಯನದ ಮೂಲಕ ಅಕ್ಷರಗಳು ಸ್ಪಷ್ಟವಾಗಿ ಕಾಣುವಂತೆ ಮಾಡಿಕೊಳ್ಳುವರು. ಇಂಥಾ ಕಾಗದ ಒಂದು ಈಚೆಗೆ ಕಂಡು ಹಿಡಿಯಲ್ಪಟ್ಟು ಅಪರಾಧಿಗೆ ೬ ತಿಂಗಳ ಕಾರಾಗಾರವಾಸ ಶಿಕ್ಷೆಯು ವಿಧಿಸಲ್ಪಟ್ಟಿತು.

~~~~~

ಯುದ್ಧಾಂಗಣದಲ್ಲಿ ಚಿತ್ರವಿಚಿತ್ರವಾದ ಹೊಸ ಹೊಸ ಶಸ್ತ್ರಾಸ್ತ್ರಗಳು ಉಪಯೋಗಿಸಲ್ಪಡುತ್ತಿರುವವೆಂಬ ವಾರ್ತೆಯು ಬರುತ್ತಲಿದೆ. ಜರ್ಮನರು ನೀರಿನಲ್ಲಿ ಬಿಡುವಂತೆ ಭೂಮಿಯ ಮೇಲೂ ಒಂದು ವಿಧದ ಟೊರ್ಪೆಡೋವನ್ನು ಬಿಡುತ್ತಿರುವರಂತೆ. ಬೆಲ್ಜಿಯಮಿನವರು ಒಂದು ಫಿರಂಗಿಯನ್ನು ರಚಿಸಿದ್ದಾರೆ. ಅದರ ಬಳಿಯಲ್ಲಿ ನಿಂತು ಗುಂಡನ್ನು ಹಾರಿಸುವದು ಯಾರಿಗೂ ಸಾಧ್ಯವಲ್ಲ. ಹಾರಿಸತಕ್ಕವನು ಅದಕ್ಕೆ ೫ ಮೈಲುಗಳ ದೂರದಲ್ಲಿ ನಿಂತು ತಂತಿಯ ಸಹಾಯವಿಲ್ಲದೆ ವಾರ್ತೆ ಕಳುಹಿಸುವ ರೀತಿಯಂತೆ ತಂತಿಯ ಸಹಾಯವಿಲ್ಲದೆ ಯಂತ್ರದ ಮೂಲಕ ಆ ಫಿರಂಗಿಗೆ ರಂಜಕವನ್ನು ಪ್ರಯೋಗಿಸುವರು. ಆ ಫಿರಂಗಿಯಿಂದ ಗುಂಡುಗಳು ಹಾರುವದ[illegible]ವು. ಫಿರಂಗಿಯು ತನ್ನಷ್ಟಕ್ಕೆ ತಾನೇ ಮೂರು ಕಡೆಗೂ ತಿರುಗುತ್ತಾ ಗುಂಡುಗಳನ್ನು ಹಾರಿಸುತ್ತಿರುವದು. ಫ್ರೆಂಚರು ಒಂದು ತರದ ತುಪಾಕಿಗಳನ್ನು ಉಪಯೋಗಿಸುತ್ತಿರುವರು. ಇದರಿಂದ ಗುಂಡುಗಳು ಹೊರಟ ಕೂಡಲೇ ಸುತ್ತಮುತ್ತಣ ಭೂಮಿಯೆಲ್ಲಾ ಬೆಳಕಾಗಿ ಹೋಗುವದು.

~~~~~

ರಣರಂಗದಿಂದ ಒಬ್ಬ ಇಂಗ್ಲಿಷ ಲೆಫ್ಟಿನೆಂಟನು ಬರೆದ ಪತ್ರವು 'ಡೈಲಿಮೈಲ್' ಎಂಬ ಪತ್ರಿಕೆಯಲ್ಲಿ ಪ್ರಕಟಿಸೋಣಾಗಿರುವದು. ನಮ್ಮ ಮತ್ತು ಜರ್ಮನರೊಳಗೆ ನಿನ್ನೆಯ ದಿನ ಒಂದು ವಿಶೇಷ ಕಾರ್ಯ ನಡೆದಿರುವದು. ನಾವು ಸ್ನೇಹಿತರಂತೆಯೇ ಇದ್ದೆವು. ನಾವು ಬಹಳವಾಗಿ ಮಾತನಾಡಿಕೊಂಡು ಕೈಚಪ್ಪಾಳೆ ಹೊಡೆದು [illegible]ಅನಂತರ ನಮ್ಮೊಳಗಿಂದ ಒಬ್ಬ ಸೈನಿಕನು ಅರ್ಧ ದಾರಿಗೆ ಹೋಗಿ ಜರ್ಮನರೊಡನೆ [illegible] ಮಾಡಿಕೊಂಡೆವು. ತನ್ಮಧ್ಯೆ ಗುಂಡುಹಾರಿಸೋಣಾಗಲಿಲ್ಲ. ಉಭಯ ಕಡೆಯವರೂ ಒಂದೇ ಕಾಲಕ್ಕೆ ತಮ್ಮ ತಮ್ಮ ಕಂದಕದೊಳಗಿಂದ ಹೊರ ಬಂದರು. ಎರಡು ಕಡೆಯ ಕಂದಕದೊಳಗಿನ ಜನರೂ ಹೊರಗೆ ನೋಡುತ್ತಿದ್ದರು. ಈ ಸೈನಿಕರು ಒಬ್ಬರನ್ನೊಬ್ಬರು ಕಲೆತು ಹಸ್ತಲಾಘವನ್ನು ಕೊಟ್ಟರು. ಎರಡು ಕಡೆಯ ಕಂದಕಗಳಿಂದಲೂ ಧನ್ಯವಾದವಾಯಿತು. ನಾವು ಜರ್ಮನರಿಗೆ ಸಿಗರೇಟುಗಳನ್ನು ಕೊಟ್ಟೆವು. ಅವರು ನಮಗೆ ಚಕೋಲೇಟನ್ನು ಕೊಟ್ಟರು. ನಾನೂ ಹೊರಗೆ ಹೋಗಿ ಒಬ್ಬ ಜರ್ಮನನನ್ನು ಎದುರ್ಗೊಂಡು ಅವನಿಗೆ ಸಿಗರೇಟನ್ನು ಕೊಟ್ಟೆನು. ಸಿಕ್ಕಿದ ಇತರರಿಗೂ ಹಾಗೆಯೇ ಮಾಡಿದೆನು. ನಾನು ನೆಟ್ಟಗೆ ಜರ್ಮನರ ಕಂದಕದ ಮೇಲಕ್ಕೆ ಹೋಗಿ ಅವರೊಡನೆ ಮಾತಾಡಿದೆನು. ಜರ್ಮನರಲ್ಲಿ ಕೆಲವರು ಚೆನ್ನಾಗಿ ಇಂಗ್ಲಿಷ ಮಾತನಾಡಬಲ್ಲವರಾಗಿದ್ದರು. ಅವರಲ್ಲಿ ಕೆಲವರು "ಈ ಹಾಳು ಯುದ್ಧವನ್ನು ನಿಲಿಸುವರೆ ಬೇಗ ಬೇಗ ಅವಸರ ಮಾಡಿರಿ" ಅಂದರು. ಕಂದಕಗಳಲ್ಲಿ ತಮಗೆ ನೀರು ದೊರಕುವದಿಲ್ಲವೆಂದೂ ಆದರೆ ಆಹಾರವು [illegible] ಸಿಕ್ಕುತ್ತದಲ್ಲದೆ ೫ ದಿವಸಕ್ಕೊಂದಾವರ್ತಿ [illegible] ಪತ್ರಗಳು ದೊರಕುವ ಏರ್ಪಾಡು ಮಾಡಲ್ಪಟ್ಟಿದೆಯೆಂದೂ ಹೇಳಿದರು. ಅಷ್ಟರೊಳಗೆ ಜರ್ಮನರ ಒಬ್ಬ ಆಫೀಸರರು ಬಂದು [illegible] ಹೋಗಲಿಕ್ಕೆ ಹೇಳಿ ಆಫೀಸರನ ಕಣ್ಣು ಕಟ್ಟಿಸುವದಕ್ಕಾಗಿ ನಮಗೆ ತಗಲದ ಹಾಗೆ ನಮ್ಮ ತಲೆಯ ಮೇಲಿಂದ ಗುಂಡು ಹಾರಿಸಿದರು.

~~~~~

ಯುದ್ಧಕ್ಕೆ ಸೇರಿದ ರಾಜ್ಯಗಳಿಗೆ ಒಟ್ಟಿಗೆ ದಿನ ೧ಕ್ಕೆ ೯೧೬೦ ೦೦೦ ಪವನು ಖರ್ಚಾಗುತ್ತಿದೆ. ಬೆಲ್ಜಿಯಮಿನ ಆಸ್ತಿಪಾಸ್ತಿಗಳಿಗಾದ ನಷ್ಟ ೨೬ ೦೦೦ ೦೦೦ ಪವನು. ರುಶ್ಯನರು ಪೂರ್ವ ಪ್ರುಶ್ಯದಲ್ಲಿ ಮಾಡಿದ ನಷ್ಟ ೨ ೦೦೦ ೦೦೦ ಪವನು ಆಗಿರುತ್ತದೆಂತ ಬರ್ಲಿನ್ ನಗರದ ಲೋಕಲ್ ವರ್ತಮಾನ ಪತ್ರವು ಅಂದಾಜು ಮಾಡಿರುವದು.

~~~~~

ಯುದ್ಧದಲ್ಲಿ ಜರ್ಮನರಿಗೆ ಅಪಜಯವಾದರೆ ಯುದ್ಧದ ಬಗ್ಗೆ ಪರಿಹಾರ ದ್ರವ್ಯವನ್ನು ಕೊಡುವದು ಅದಕ್ಕೆ ಅಸಾಧ್ಯವಾಗುವದು. ಯಾಕಂದರೆ ಜರ್ಮನಿಯು ತನ್ನ ಕಡೆ ಮನುಷ್ಯನಿರುವವರೆಗೆ ಮತ್ತು ತನ್ನ ಕಡೇ ಕಾಸು ಖರ್ಚಾಗುವವರೆಗೆ ಕಾದಾಡುವದೆಂತ ಪ್ರೊಫೆಸರ್ [illegible] ಎಂಬವರು ಕೊಲೋನಿನ ಒಂದು ಪತ್ರಿಕೆಗೆ ಬರೆದಿರುವರು.

~~~~~

ಉತ್ತರ ಹಿಂದೂಸ್ಥಾನ

~~~~~

ಬಂಗಾಳದ ಬಾರ್ಸೆಟ್ ಎಂಬಲ್ಲಿ ದಕಾಯತಿಗಳು ನಡೆದಿರುವದೆಂಬ ವಾರ್ತೆ ಬಂದಿರುವದು. ಸುಮಾರು ೪೦ ಮಂದಿ ಆಯುಧಪಾಣಿಗಳಾದ ದಕಾಯಿತರು ಬಾರುಗಾಟಿಯಲ್ಲಿರುವ ಬಿದ್ಧುಮೊಂಡಾಲ್ ಎಂಬವರ ಮನೆಯ ಬಾಗಿಲು ಒಡೆದು ಬಲತ್ಕಾರದಿಂದ ಒಳನುಗ್ಗಿ ಬಿದ್ಧುಮೊಂಡಾಲ್ ಮತ್ತು ಅವನ ಹೆಂಡತಿಗೆ ಕಠಿಣವಾಗಿ ಹೊಡೆದು ಹಗ್ಗದಿಂದ ಅವರನ್ನು ಕಟ್ಟಿ ಪೆಟ್ಟಿಗೆಗಳ ಬೀಗದ ಕೈಗಳನ್ನು ಹುಡುಕಿ ಸುಮಾರು ೧೦೦೦ ರೂಪಾಯಿ ಕ್ರಯಬಾಳುವ ಚಿನ್ನಾಭರಣದೊಂದಿಗೆ ಓಡಿ ಹೋಗಿರುವರು. ಅಂದೇ ಪುನಃ ೨೦ ದಕಾಯಿತರು ಛತ್ರ ಎಂಬಲ್ಲಿ ವಾಸಿಸುವ ಅಶೋಕಿ ಮೊಂಡಾಲ್ ಎಂಬವನ ಮನೆಗೆ ನುಗ್ಗಿ ಮನೆಯಲ್ಲಿದ್ದವರನ್ನು ಹೊರಗೆ ಎಳದು ಹಾಕಿ ಸುಮಾರು ೫೦೦ ರೂಪಾಯಿ ಕ್ರಯಬಾಳುವ ಚಿನ್ನಾಭರಣಗಳನ್ನು ಎತ್ತಿಹಾಕಿರುವರು. ಅದೇ ರಾತ್ರಿ ಬಾರ್ಸೆಟ್ ಎಂಬಲ್ಲಿ ಒಬ್ಬ ಗೋಕಾಯಿಗಳ ವ್ಯಾಪಾರಗಾರನ ಮನೆಯಲ್ಲಿಯೂ ದಕಾಯತಿಯು ನಡೆದಿರುವದು. ಸುಮಾರು ೨೦ ದಕಾಯಿತರು ಅವನ ಮನೆಗೆ ನುಗ್ಗಿ ಮನೆಯಲ್ಲಿದ್ದವರನ್ನು ಪೀಡಿಸಿ ಸುಮಾರು ೮೦೦ ರೂಪಾಯಿ ಮೌಲ್ಯದ ಒಡವೆಗಳನ್ನು ಕೊಂಡೊಯ್ದಿರುವರು.

~~~~~

ಮುಂಬಾಯಿಗೆ ಬಂದಿದ್ದ ವೈಸರಾಯ ಪ್ರಭುಗಳವರು ಕಳದ ತಾ ೨೫ರಲ್ಲು ಅಲೆಕ್ಸಾಂಡ್ರಿಯ ಬಂದರವನ್ನು ನೋಡಿಕೊಂಡು ಮುಂಬಾಯಿಂದ ತೆರಳಿದರು.

~~~~~

ಕ್ಷಯರೋಗದ ಉಲ್ಬಣಕ್ಕೆ ತಡೆಕಟ್ಟುವರೆ ಕಳದ ವರ್ಷ ಮಿ ರತನ್ ಟಾಟರವರು ಮಾಡಿದ ದ್ರವ್ಯಸಹಾಯದಿಂದ ಮುಂಬಾಯಿಯ [illegible] ಆಸ್ಪತ್ರೆಯಲ್ಲಿ ಈ ರೋಗಿಗಳ ಬಗ್ಗೆ ಪ್ರತ್ಯೇಕ ವಾರ್ಡುಗಳನ್ನು [illegible]ಳಬೇಕೆಂಬ ಆಲೋಚನೆಯು ಮುಂಬಾಯಿ ಮುನ್ಸಿಪಾಲಿಟಿಯ ಮುಂದಿಡಲ್ಪಟ್ಟಿತು. ಆದರೆ ವಿಶೇಷ ಚರ್ಚೆ ನಡೆದು ಮುನ್ಸಿಪಾಲಿಟಿ ಕಮಿಟಿಯವರ ಬಹುಮತಿಯು ಈ ಆಲೋಚನೆಗೆ ಒಪ್ಪಲಿಲ್ಲ.

~~~~~

ಇತ್ತಲಾಗ್ಗೆ ಅಮೇರಿಕದಿಂದ ಹಿಂದೆರಳಿದ ೫ ಸಿಕ್ಕರೂ, ಒಬ್ಬ ಹಿಂದೂ ಕೂಡಿ ಫೆರೋಜಪುರದಲ್ಲಿ ಸಬ್ ಇನ್ಸ್‌ಪೆಕ್ಟರನನ್ನೂ ಜೈಲ್‌ದಾರನನ್ನೂ ಕೊಂದಿದ್ದರೆಂಬದಾಗಿ ಆಪಾದಿಸಲ್ಪಟ್ಟಿರುವರು.

~~~~~

ಬಂಗಾಳದ ರಂಗಪುರ ಡಿಸ್ಟ್ರಿಕ್ಟಿನಲ್ಲಿ ಕುರಿಗ್ರಾಮ ಎಂಬವರ ಮನೆಗೆ ಆಯುಧಪಾಣಿಗಳಾದ ದಕಾಯಿತರು ನುಗ್ಗಿ ೬೦,೦೦೦ ರೂಪಾಯಿಯ ಚಿನ್ನಾಭರಣಗಳನ್ನು ಕೊಂಡುಹೋಗಿರುವರು.

~~~~~

ಪೂರ್ವ ಬಂಗಾಳದಲ್ಲಿ ೫೦ ದಕಾಯಿತರು ಗರೂರಿಯ ಎಂಬವನ ಮನೆಗೆ ನುಗ್ಗಿ ಸುಮಾರು ೬ ಸಾವಿರ ರೂಪಾಯಿಯ ಒಡವೆಗಳನ್ನೂ, ಬಾರಿಯ ಎಂಬ ಗ್ರಾಮದಲ್ಲಿ ೨೫ ದಕಾಯಿತರು ಒಬ್ಬ ಮಹಮ್ಮದೀಯನ ಮನೆಗೆ ನುಗ್ಗಿ ೭೦೦೦ ರೂಪಾಯಿಗಳ ಒಡವೆಗಳನ್ನೂ ಕೊಂಡುಹೋಗಿರುವರು. ಟಾರಕ್ ಸರ್ದಾರ ಎಂಬವನ ಮನೆಗೆ ನುಗ್ಗಿ ಮನೆಯವರಿಗೂ ದಕಾಯಿತರಿಗೂ ಜಟಾಪಟಿಯಾಗಿ ಟಾರಕನ ಮಗಳು ಹತಳಾಗಿರುವಳು.

~~~~~

ಮುಂಬಾಯಿಯ ತಾನ್ಸವೈನಿಗೆ ನೀರಿನ ಸರಬರಾಯಿಯನ್ನು ಒದಗಿಸಿಕೊಡುವ ಕೆಲಸದ ಏರ್ಪಾಡು ಕೆಲವು ತಿಂಗಳಿಂದ ನಡೆಯುತ್ತಲಿದೆ. ಜೂನ್ ತಿಂಗಳೊಳಗೆ ಈ ಕೆಲಸವು ತೀರುವದು. ಈ ಕೆಲಸವು ತೀರಿದರೆ ಮುಂಬಾಯಿಗೆ ೧೮ ವರುಷಗಳ ವರೆಗೆ ಯಥೇಷ್ಟ ನೀರು ದೊರಕುವ ಅವಕಾಶ ಉಂಟಾಗಿ ಈ ತನಕ ನೀರಿನ ಸರಬರಾಯಿ ಸಂಬಂಧ ಇದ್ದ ದೂರಾಟವು ಇಲ್ಲದೆ ಹೋಗುವದು. ಈ ನೀರಿನ ಸರಬರಾಯಿ ಕೆಲಸಕ್ಕೆ ೭೨ ಲಕ್ಷ ರೂಪಾಯಿ ಖರ್ಚಾಗುವದು. ಇದರಿಂದ ಈಗ ಮುಂಬಾಯಿ ಪಟ್ಟಣಕ್ಕೆ ದೊರಕುವ ನೀರಿಗಿಂತ ದಿವಸಕ್ಕೆ ೧೮ ಮಿಲಿಯ ಗಲನ್ ನೀರು ಹೆಚ್ಚಿಗೆ ಸಿಕ್ಕಿದಂತಾಗುವದು.

~~~~~

ಪೂನ ಪಟ್ಟಣದ ಯಹೂದಿ ಹೆಡ್‌ಕನ್‌ಸ್ಟೇಬಲ್ ಡಾನಿಯೇಲ್ ಸಲಮೋನನೆಂಬವನೂ, ಸಜಾನಸೈದು ಮತ್ತು ಮೊಕಾನ್ ಬಾಲಕೃಷ್ಣ ಎಂಬ ಇಬ್ಬರೂ ಕೂಡಿ ವಿಶ್ರಾಮ ಎಂಬ ಕೂಲಿಯವನನ್ನು ಕೊಂದಿದ್ದಾರೆಂಬದಾಗಿ ಆಪಾದಿಸಲ್ಪಟ್ಟಿರುವರು. ಈ ಮೊಕದ್ದಮೆಯು ಈ ರೀತಿಯಾಗಿರುವದು. ದಶಂಬರ ತಾ ೨೬ರಲ್ಲಿ ಮೃತ ಕೂಲಿಯು ಇತರರೊಡನೆ ಸಲಮೋನನ ತೋಟದಲ್ಲಿ ಅಗೆಯುತ್ತಿರುವಾಗ ಒಂದು ಮಣ್ಣಿನ ಗಡಿಗೆ ಸಿಕ್ಕಿತು. ಇದನ್ನು ಮೃತ ಕೂಲಿಯೂ ಗೋವಿಂದ ಯೆಸ್ಸು ಎಂಬ ಮತ್ತೊಬ್ಬ ಕೂಲಿಯೂ ಕೂಡಿ ತಕ್ಕೊಂಡು ಹೋದರೆಂತಲೂ ಈ ಗಡಿಗೆಯಲ್ಲಿ ಹಣವಿತ್ತೆಂದೂ ಸಲಮೋನನು ಭಾವಿಸಿ ಆ ಕೂಲಿಯವರನ್ನು ತನ್ನ ಮನೆಗೆ ಕರೆಯಿಸಿ ಇತರ ಎರಡು ಆಪಾದಿತರ ಸಹಾಯದಿಂದ ಅವರ ಬಾಯಿ ಬಿಡಿಸಲು ಗೋವಿಂದಯೆಸ್ಸುವನ್ನೂ, ವಿಶ್ರಾಮನನ್ನೂ ಹಿಂಸಿಸಿದರು. ಈ ಪೈಕಿ ವಿಶ್ರಾಮನು ಸತ್ತುಹೋದನು. ಗೋವಿಂದಯೆಸ್ಸುವು ಬದುಕಿಕೊಂಡನು. ಆಪಾದಿತರು ಪೀಡಿಸಿದ ವಿಧಾನದ ಕುರಿತು ಗೋವಿಂದಯೆಸ್ಸುವು ವಾಗ್ಮೂಲ ಕೊಟ್ಟರುವನಲ್ಲದೆ ವಿಶ್ರಾಮನು ಸಾಯುವಾಗ ತಾನು ೧ನೇ ಆಪಾದಿತ ಸಲಮೋನನ ಕೋಣೆಯಲ್ಲಿ ಬಚ್ಚಿಡಲ್ಪಟ್ಟಿದ್ದನೆಂದೂ ಮರುದಿನ ಸಲಮೋನನ ಹೆಂಡತಿ ತನ್ನನ್ನು ಬಿಟ್ಟಳೆಂದೂ ಹೇಳಿರುವನು.

~~~~~

"ಡಕ್ಕ ಹೆರಾಲ್ಡ್" ಎಂಬ ಪತ್ರಿಕೆಯಲ್ಲಿ ಈ ಕೆಳಗಿನ ವೃತ್ತಾಂತವು ಪ್ರಕಟವಾಗಿರುವದು. ಕೆಲವು ದಿವಸಗಳ ಹಿಂದೆ ಒಬ್ಬ ಮನುಷ್ಯನು ತನ್ನ ಚಿಕ್ಕ ಮಗನೊಂದಿಗೆ ನರಸಿಂದ ಎಂಬಲ್ಲಿಗೆ ರೈಲ್ವೇ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದನು. ಇವನೊಡನೆ ಸ್ವಲ್ಪ ಹಣವೂ ಇದ್ದಿತು. ಇವರು ಕೂತುಕೊಂಡಿದ್ದ ಗಾಡಿಯೊಳಗೆ ಇತರ ಇಬ್ಬರು ಕಾಬೂಲಿಗಳೂ ಇದ್ದರು. ತಂದೆಗೆ ಬಾಯಾರಿಕೆಯಾದುದರಿಂದ ಒಂದು ಸ್ಟೇಶನಿನಲ್ಲಿ ತಂದೆಯು ಇಳಿದು ನೀರು ಕುಡಿಯ ಹೋದನು. ಆದರೆ ದೈವವಶಾತ್ ಆಗ್ಗಾಡಿಯು ಹೋಗಿಬಿಟ್ಟಿತು. ತಂದೆಯು ಕೂಡಲೇ ಸ್ಟೇಶನ್ ಮಾಸ್ತರರಲ್ಲಿ ಹೋಗಿ ತನ್ನ ಮಗನ ವಿಷಯ ಹೇಳಿಕೊಂಡನು. ಆಗ್ಗಾಡಿಯು ನರಸಿಂಧಿಗೆ ತಲುಪುತ್ತಲೇ ಅಲ್ಲಿಯ ಸ್ಟೇಶನ್ ಮಾಸ್ತರರು ತನಕಿ ನಡಿಸಲು ಹುಡುಗನ ಪತ್ತೆಯಾಗಲಿಲ್ಲ. ಸ್ಟೇಶನ್ ಮಾಸ್ತರಿಗೆ ಕಾಬೂಲಿಗಳ ಮೇಲೆ ಅನುಮಾನ ಹುಟ್ಟಿ ಅವರನ್ನು ಗಾಡಿಯಿಂದ ಕೆಳಗೆ [illegible]
~~~~~

ಸ್ಟೇಶನ್ ಮಾಸ್ತರರಿಗೂ ಕಾಬೂಲಿಗಳಿಗೂ ಜಗಳವಾಗುತ್ತಿರುವಾಗ ಕೆಲವು ಜನರು ಸ್ಟೇಶನ್ ಮಾಸ್ತರರ ಸಹಾಯಕ್ಕೆ ಬಂದು ಈ ಕಾಬೂಲಿಗಳನ್ನು ಗಾಡಿಯಿಂದ ಕೆಳಗೆ ಎಳದು ಹಾಕಿ, ಅವರ ಗಂಟುಮೂಟೆಗಳನ್ನು ಶೋಧಿಸಲು ಒಂದು ಗಂಟಿನೊಳಗೆ ಈ ಹುಡುಗನ ಹೆಣವು ದೊರಕಿತು ಹಣಕ್ಕೋಸ್ಕರ ಈ ಕಾಬೂಲಿಗಳು ಹುಡುಗನ ಕುತ್ತಿಗೆ ಹಿಸುಕಿ ಕೊಂದಿದ್ದರು ರೈಲ್ವೇ ಪೋಲಿಸರು ಇಬ್ಬರು ಕಾಬೂಲಿಗಳನ್ನೂ ಚಾರ್ಜು ಮಾಡಿರುವರು

~~~~~

ಲಾಹೋರಿನಲ್ಲಿ ಹೊಸತಾಗಿ ಪ್ರಕಟವಾಗುತ್ತಿರುವ "ಬಲಿಟಿನ್" ಎಂಬ ಪತ್ರಿಕೆಯಲ್ಲಿ ಈ ಕೆಳಗಿನ ವಾರ್ತೆಯು ಪ್ರಕಟವಾಗಿರುವದ ಲೈಲಾಪುರ ಡಿಸ್ಟ್ರಿಕ್ಟಿನ ಪಾಪಸಿಂಗ್ ಎಂಬವನು ತನ್ನ ವಿಧವೆ ಚಿಕ್ಕತಾಯಿ ಶಾಂತಿಯನ್ನು ಅವಳ ಆಸ್ತಿಯನ್ನು ಸ್ವಾಧೀನ ಮಾಡಿಕೊಳ್ಳುವ ಉದ್ದೇಶದಿಂದ ಕೊಂದಿದನೆಂದು ಅಪಾದಿಸಲ್ಪಟ್ಟಿದ್ದನು ಶಾಂತಿಯ ಮಗಳ ತನ್ನ ಮಾವನ ಮನೆಯಿಂದ ಬರುವಾಗ ತಾಯಿಯು ಮನೆಯಲ್ಲಿರಲಿಲ್ಲವೆಂದು ವರದಿ ಮಾಡಿದಳು ಒಬ್ಬ ಪೋಲಿಸ್ ಇನ್ಸ್‌ಪೆಕ್ಟರನೂ ಇಬ್ಬರು ಸಬ್ ಇನ್ಸ್‌ಪೆಕ್ಟರರೂ ತನಿಕೆ ನಡಿಸಿ, ಜರನವಾಲ ಎಂಬ ಕಾಲುವೆಯ ಸಮೀಪ ಹೆಣವನ್ನು ಕಂಡಕೊಂಡರು ಶಿರವು ಮಾತ್ರ ಸಿಕ್ಕಲಿಲ್ಲ ಅದು ಶಾಂತಿಯ ಹೆಣವೆಂದು ಎದೆಯ ಮೇಲಿದ್ದ ಒಂದು ಗುರುತಿನಿಂದ ಮಗಳು ಹೇಳಿದಳು ಈ ವಿಷಯ ಹಲವು ಸಾಕ್ಷಿಗಾರರ ತನಕಿಯಾಗಿ, ಅಪಾದಿತನೂ ತಾನೂ ಕೊಲೆ ಮಾಡಿದ್ದು ಹೌದೆಂದು ೧ನೇ ಕ್ಲಾಸ್ ಮೇಜಿಸ್ಟ್ರೇಟರ ಮುಂದೆ ಒಪ್ಪಿಕೊಂಡನು ಅಪಾದಿತನು ಒಂದು ತಿಂಗಳ ವರೆಗೆ ರಿಮಾಂಡಿನಲ್ಲಿದ್ದನು ಹೀಗಿರುವಾಗ ನಾಗಿನಸಿಂಗನೆಂಬ ಒಬ್ಬನು ಲೈಲಾಪುರದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಲ್ಲಿ ಒಬ್ಬಳನ್ನು ಹಾಜರುಪಡಿಸಿ, ಇವಳೇ ನಿಜವಾದ ಶಾಂತಿಯೆಂದು ರುಜುವಾತು ಪಡಿಸಿದನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಅಪಾದಿತನನ್ನು ಖುಲಾಸು ಪಡಿಸಿ, ತಕ್ಕ ತನಖಿ ನಡಿಸಲು ಹುಕುಂ ಮಾಡಿರುವರು

~~~~~

ಕಲ್ಕತ್ತೆಯ ಒಂದು ಸಣಬಿನ ಕಾರ್ಖಾನೆಗೆ ಬೆಂಕಿ ಬಿದ್ದು ಸುಮಾರು ೫ ಲಕ್ಷ ರೂಪಾಯಿಗಳ ನಷ್ಟವಾಯಿತು

~~~~~

ದಕ್ಷಿಣ ಹಿಂದುಸ್ಥಾನ.

ಮೈಸೂರು ಸಂಸ್ಥಾನದ ದಿವಾನರವರು ದಕ್ಷಿಣಕನ್ನಡ ಜಿಲ್ಲೆಯ ಬೈಂದೂರಿಗೆ ಸಂದರ್ಶಿಸಿದ ಸಂದರ್ಭದಲ್ಲಿ 'ಕರ್ಣಾಟಕ ಬಂಧು" ಎಂಬ ಲೇಖಕರು ಬೆಂಗಳೂರಲ್ಲಿ ಪ್ರಕಟವಾಗುವ "ಒಕ್ಕಲಿಗರ ಪತ್ರಿಕೆಗೆ" ಬರೆದ ಲೇಖನದ ಒಂದಂಶವು ಈ ರೀತಿಯಾಗಿರುವುದು —

"ನಮ್ಮ ಬೈಂದೂರಿಗೆ ಮೈಸೂರು ಸಂಸ್ಥಾನದ ಮಂತ್ರಿಗಳ ಆಗಮನವಾದುದೆಂದರೆ ಇದೇ ಪ್ರಥಮ, ನಾವು ಮೈಸೂರಿನ ತೀರಾ ನೆರೆಹೊರೆಯವರಾಗಿ ಒಂದಾನೊಂದು ಕಾಲದಲ್ಲಿ ಆ ಸಂಸ್ಥಾನದ ಪ್ರಜಾಜನರೇ ಆಗಿದ್ದರೂ ಈಗ ಅನೇಕ ವರ್ಷಗಳಿಂದ ರಾಜ್ಯಾಧಿಕಾರ ವಿಭಾಗದಿಂದ ಬ್ರಿಟಿಷ್ ಸಾರ್ವಭೌಮರ ಪ್ರಜೆಗಳಾಗಿದ್ದರೂ ಆ ಮಹೀಶೂರಾಧಿಶ್ವರರಲ್ಲಿ ನೆಲಸಿರುವ ನಮ್ಮಗಳ ಅಖಂಡ ರಾಜಭಕ್ತಿಯು ಅದ್ಯಾಪಿ ಅತ್ಯುಜ್ವಲಸ್ಥಿತಿಯಲ್ಲಿದೆ ಹೀಗಿರಲು ಬಹುಕಾಲಾನಂತರ ಲಭಿಸಿದ ದಿವಾನರವರ ಆಗಮನವು ನಮ್ಮ ಆನಂದವನ್ನು ಇಮ್ಮಡಿಗೊಳಿಸಿತು ಇದೇ ದಿವಸ ಶ್ರೀಮನ್ಮಹಾರಾಜರವರ ಆಗಮನವಾದರೂ ಅವಶ್ಯ ಲಭಿಸುವುದೆಂಬ ಕಿಂವದಂತಿ ಇದ್ದು ಅದಕ್ಕಾಗಿ ಅಪಾರವಾದ ಆನಂದವಿದ್ದಿತ್ತಾದರೂ ಕಾರಣಾಂತರದಿಂದ ಅವರು ಬರಲಾಗಲಿಲ್ಲೆಂಬದನ್ನು ತಿಳಿದನಂತರ ಕಿಂಚಿತ್ ವಿಷಾದವಾಯಿತು ಹೀಗಿದ್ದರೂ ಶ್ರೀಮಂತರವರ ಶುಭಾಗಮನ ನಿರೀಕ್ಷಣೆಯಿಂದ ಶಾಂತಚಿತ್ತರಾದೆವು ಮೈಸೂರು ದೇಶವು ಮಾದರಿ ಸಂಸ್ಥಾನಗಳಲ್ಲಿ ಒಂದಾಗಿದ್ದು ವಿಸ್ತಾರವಾದ ರಾಷ್ಟ್ರವಾಗಿದ್ದರೂ ಈ ಸಂಸ್ಥಾನವು ಕೇವಲ ಪ್ರಸ್ತಭೂಮಿಯಲ್ಲಿದ್ದು, ಇದಕ್ಕೆ ಅತಿ ಸಮೀಪದಲ್ಲಿರುವ ಪಶ್ಚಿಮ ಕರಾವಳಿಯಲ್ಲಿ ಒಂದೇ ಒಂದು ಬಂದರಾದರೂ ಇರದಿರುವುದು ಬಹು ವಿಚಾರಗಳಲ್ಲಿ ಪ್ರಧಾನಕೊರತೆಯಾಗಿದೆ ನಮ್ಮ ಸನ್ಮಾನ್ಯ ಬ್ರಿಟಿಷ್ ಸರಕಾರವು ಮೈಸೂರು ಸಂಸ್ಥಾನದ ಮೇಲೆ ತುಂಬಾ ಅಭಿಮಾನ ಹಾಗೂ ವಾತ್ಸಲ್ಯವಿಟ್ಟಿರುವುದರಿಂದ ಉಭಯ ರಾಷ್ಟ್ರಗಳ ಸರಕಾರವೂ ಈ ವಿಚಾರವನ್ನು ಲಕ್ಷ್ಯಕ್ಕೆ ತಂದು ಬೇರೆ ಯಾವದಾದರೂ ರಾಷ್ಟ್ರದ ಬದಲಾವಣೆಯಿಂದ ನಮ್ಮ ದಕ್ಷಿಣ ಮತ್ತು ಉತ್ತರ ಎರಡು ಕನ್ನಡ ಜಿಲ್ಲೆಗಳನ್ನು ಮೈಸೂರಿಗೆ ಕೂಡಿಸಿದರೆ ಕನ್ನಡ ಭಾಷಾ ಮಾತೆಗೊಂದು ಭೂಷಣವೂ ಮೈಸೂರಿನ ಸಂಪತ್ತಿನ ವೃದ್ಧಿಗೊಂದು ಪ್ರಧಾನ ಸಹಾಯವೂ ಉಭಯ ದೇಶ ಪ್ರಜೆಗಳಿಗೆ ನಿರಂತರಾನಂದವೂ ಉಂಟಾಗುವುದರಲ್ಲಿ ಸಂದೇಹವಿಲ್ಲ. ಇದು ಅಸಾಧ್ಯವಾದರೆ ಕುಂದಾಪುರ ಡಿವಿಜನ್ (ಕುಂದಾಪುರ, ಉಡ್ಪಿ, ಕಾರ್ಕಳ ತಾಲೂಕುಗಳು) ಹೊನ್ನಾವರ, ಕುಮಟಾ, ಕೂಡಾ ೫ ತಾಲ್ಲೂಕುಗಳನ್ನು ಕೂಡಿಸಿ ಜಿಲ್ಲೆಯಾಗಿ ಮೈಸೂರಿಗೆ ಕೂಡಿಸಿದರೂ ಆಗಬಹುದು ಅದೂ ಅಸಾಧ್ಯವಾದರೆ ಅಖೈರಿಗೆ ಕುಂದಾಪುರ ತಾಲ್ಲೂಕಿನ ಪೈಕಿ ಬೈಂದೂರು ರೆವಿನ್ಯು ಇನ್ಸ್‌ಪೆಕ್ಟರ್ ಡಿವಿಜನ್ ಮತ್ತು ಭಟ್ಕಳ ಡಿವಿಜನ್ ಕೂಡಾ ೨ ಡಿವಿಜನುಗಳನ್ನಾದರೂ ಕೂಡಿಸಿ ಚಿಕ್ಕದೊಂದು ತಾಲೂಕೆಂತ ಮಾಡಿ ಸಾಗರ ಜಿಲ್ಲೆಗೆ ಸೇರಿಸಿಕೊಂಡಾದರೂ ಹೇಗೂ ಮೈಸೂರು ಸರಕಾರದವರು ಕರಾವಳಿಯ ಒಂದು ಬಂದರನ್ನಾದರೂ ಸಂಪಾದಿಸಿಕೊಂಡರೆ ಅದು ಮೈಸೂರು ದೇಶಕ್ಕೆ ತುಂಬಾ ಅನುಕೂಲವೂ ಸಂಪತ್ಕರವೂ ಆಗುವುದರಿಂದ ಈ ಬಾಬಿನಲ್ಲಿ ಮೈಸೂರ ಗವರ್ನಮೆಂಟಿನವರೂ ಅವರ ಯೋಗಕ್ಷೇಮನಿರ್ವಾಹಕ ಬಂಧುಗಳಾದ, ಬ್ರಿಟಿಷ್ ಗವರ್ನಮೆಂಟಿನವರೂ ಪರಿಪೂರ್ಣ ಲಕ್ಷ್ಯಗೊಟ್ಟು ಅದರಲ್ಲಿ ಯಾವದಾದರೊಂದು ರೀತಿಯಲ್ಲಿ ವ್ಯವಸ್ಥೆಗೊಳಿಸಬೇಕೆಂದೂ ನಮ್ಮ ಸೂಚನೆಯು ಶೀಘ್ರ ಫಲಕಾರಿಯಾಗಬೇಕೆಂದೂ ಅಘಟನಾಘಟನ ಸಾಮರ್ಥ್ಯವುಳ್ಳ ಭಗವಂತನನ್ನು ಅನನ್ಯ ಮನಸ್ಸಿನಿಂದ ಪ್ರಾರ್ಥಿಸುವೆವು "

ಇತಿ ಕರ್ಣಾಟಕಬಂಧು.

[ನಮ್ಮ ಪ್ರಿಯ ಬಂಧುಗಳಾದ ಈ ಲೇಖಕರು ಸೂಚಿಸಿರುವಂತೆ ದಕ್ಷಿಣ ಕನ್ನಡಾ ಜಿಲ್ಲೆಯ ಕೆಲವು ಭಾಗಗಳನ್ನು ಮೈಸೂರು ದೇಶಕ್ಕೆ ಕೊಡುವುದು ಬ್ರಿಟಿಷ್‌ನವರ ಕರ್ತವ್ಯವಾಗಿದೆಯೆಂದೂ ಅವುಗಳನ್ನು ಪಡೆವುದಕ್ಕೆ ಮೈಸೂರು ಸರ್ಕಾರವು ಸರಿಯಾದ ಪಾತ್ರವಾಗಿದೆಯೆಂದೂ ಧಾರಾಳವಾಗಿ ಹೇಳವೆವು ಪ್ರಕೃತ ಪ್ರಾಪ್ತವಾಗಿರುವ ಯುದ್ಧದಲ್ಲಿ ಮೈಸೂರು ಸರ್ಕಾರವು ಮಾಡಿರುವ ಸಹಾಯವನ್ನು ಪರ್ಯಾಲೋಚಿಸಿದರೆ ಬ್ರಿಟಿಷ್‌ನವರು ಯಾವುದಾದರೊಂದು ವಿಧದಲ್ಲಿ ಮೈಸೂರಿಗೆ ಉಪಕಾರವನ್ನು ಮಾಡದೆ ಇರಲಾರರು — [ಸಂ ಸ್ವ ಒ]

~~~~~

ಮದ್ರಾಸ್ ಹ್ಯಾಕೋರ್ಟಿನಲ್ಲಿ ಡ್ಯಪಿಟಿ ರಿಜಿಸ್ಟ್ರಾರರಾಗಿದ್ದ ರಾ| ಎಸ್ ತ್ಯಾಗರಾಜ ಐಯ್ಯರರವರು ಕೆಲಸದಿಂದ ನಿವೃತರಾದರು ಇವರು ಬಹು ಜನಪ್ರೀತರಾಗಿದ್ದುದರಿಂದ ೧೯೦೫ರಲ್ಲು ಆರ್ಬಟ್‌ನಟ್ ಕಂಪೆನಿಯ ಸಾಲಿಗರು ಇವರನ್ನು ತಮ್ಮ ಪ್ರತಿನಿದಿಯಾಗಿ ನೇಮಿಸಿದ್ದರು ಅನಂತರ ಒರಿಜಿನಲ್ ಸೈಡಿನ ಆಕ್ಟಿಂಗ್ ಅಸಿಸ್ಟಾಂಟ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟರು ಭಾರತೀಯರಲ್ಲಿ ಈ ಹುದ್ದೆ ದೊರಕಿದವರಲ್ಲಿ ಇವರೇ ಮೊದಲನೇಯವರು ೧೯೧೧ರಲ್ಲು ಅಪೆಲೆಟ್ ಸೈಡಿನ ಡ್ಯಪಿಟಿ ರಿಜಿಸ್ಟ್ರಾರರಾಗಿ ನೇಮಿಸಲ್ಪಟ್ಟು ಹೈಕೋರ್ಟು ಜಡ್ಜರುಗಳಿಂದಲೂ ವಕೀಲರಿಂದಲೂ ಮಾನಿತರಾಗಿದ್ದರು

~~~~~

ಮದ್ರಾಸ್ ಹ್ಯಾಕೋರ್ಟಿನ ಸೂಚನೆಯ ಮೇರೆಗೆ ಹ್ಯಾಕೋರ್ಟಿನಲ್ಲಿ ಅಫೀಸಿಯಲ್ ರಿಪ್ರೆ ಎಂಬ ಒಂದು ಹೊಸ ನೇಮಕವಾಗಿರುವರು ಈ ಕೆಲಸಕ್ಕೆ ಹ್ಯಾಕೋರ್ಟು ವಕೀಲರಾದ ರಾ| ವಿ ಎಮ್ ಪಿಳ್ಳೆಯವರು ನೇಮಿಸಲ್ಪಟ್ಟಿರುವರು

~~~~~

ಬೆಂಗಳೂರು ಮತ್ತು ಮೈಸೂರಿನ ಮಧ್ಯೆ ರೈಲ್ವೆ ಬಂಡಿಯಿಂದ ೮೦೦೦ ರೂಪಾಯಿ ಇದ್ದ ಖಜಾನೆ ಪೆಟ್ಟಿಗೆಯನ್ನು ಕಳ್ಳರು ಜಾರಿಸಿ ೨ ತಿಂಗಳು ಆಗುವಷ್ಟರೊಳಗೆ ಪುನಃ ಎಸ್ ಐ ರೈಲ್ವೆಯಲ್ಲಿ ಮೆಟುಪಾಳೆಯಂ ಮತ್ತು ಕರಮಡಾಯಿ ಮಧ್ಯ ಓಡುತ್ತಿದ್ದ ಟ್ರೇನಿನಿಂದ ೩,೦೩೭ ರೂಪಾಯಿ ಕಳವಾಗಿರುವದು. ಕಳ್ಳರು ಪತ್ತೆಯಾಗಲಿಲ್ಲ

~~~~~

ದಕ್ಷಿಣ ಕನ್ನಡ

ಪರಸ್ಪರ ಸಹಾಯ.

ಸರ್ಕ್ಯುಲಾರು ನಂಬ್ರ ೩.

ಸಂಘದಲ್ಲಿ ನಿಲ್ಲುವ ಶಿಲ್ಕು ಹಣ.

೧ ಸಂಘಗಳಿಂದ ಮೆಂಬರರಿಗೆ ಕೊಡುವ ಸಾಲಗಳು ಹೆಚ್ಚಾಗಿ ತಿಂಗಳುಗಳಲ್ಲಿಯ ಕಂತುಗಳಿಂದ ಮರುಪಾವತಿಯಾಗುವಂತವುಗಳಾದುದರಿಂದ ಸಂಘಗಳಲ್ಲಿ ಸಾಧಾರಣವಾಗಿ ದಿನಂಪ್ರತಿಯೂ ಹಣವು ವಸೂಲಾಗುತ್ತಲೇ ಇದೆ. ಆದರೆ ಪಂಚಾಯಿತ ಸಭೆಗಳು ಹೆಚ್ಚಾದರೆ ವಾರಕ್ಕೊಂದಾವರ್ತಿ ಮಾತ್ರ ಕೂಡುವುದರಿಂದ ದಿನಂಪ್ರತಿ ವಸೂಲಾದ ಹಣವು ಪುನಹ ಸಾಲಗಳಾಗಿ ಹೊರಗೆ ಕೊಡುವುದಕ್ಕೆ ಸ್ವಲ್ಪ ವಿಳಂಬವಾಗುವುದರಿಂದ ಸಂಘದಲ್ಲಿ ಆಗಾಗ್ಯೆ ಹೆಚ್ಚಿನ ಶಿಲ್ಕು ನಿಲ್ಲುವುದುಂಟು ಕೆಲವು ಸಂಘಗಳಲ್ಲಿ ಪಂಚಾಯಿತ ಸಭೆಗಳು ವಾರಕ್ಕೊಮ್ಮೆಗಿಂತ ಹೆಚ್ಚಾವರ್ತಿ ಕೂಡುವುದಿಲ್ಲವೆಂದು ತಿಳಿದುಬರುತ್ತದೆ ಅಂತಹ ಕಡೆಗಳಲ್ಲಿ ಸಾಧಾರಣವಾಗಿ ಶಿಲ್ಕು ಇನ್ನಷ್ಟು ಹೆಚ್ಚಾಗಿಯೇ ಇರುವುದು

೨ ಇಂತಹ ಸಂದರ್ಭಗಳಲ್ಲಿ ಹಾಗೆ ನಿತ್ತ ಶಿಲ್ಕು ಹಣವನ್ನು ಸಂಘದ ಅಧ್ಯಕ್ಷರು ಇಟ್ಟುಕೊಳ್ಳುವುದರ ಬದಲಾಗಿ ಸಮೀಪವಿದ್ದರೆ ಜಿಲ್ಲೆಯ ಸೆಂಟ್ರಲ್ ಬೇಂಕಿನಲ್ಲಿ ಚಾಲ್ತಿ ಠೇವಣಾತಿಯಾಗಿ ಜಮೆಯಾದ ಹಾಗೆ ಇಡುವುದು ಬಹಳ ಒಳ್ಳೇದಾಗಿರುತ್ತದೆ.

೩ ಪುತ್ತೂರಿಗೆ ಹತ್ತರವಿಲ್ಲದ ಸಂಘಗಳು ತಮ್ಮ ಶಿಲ್ಕನ್ನು ತಮಗೆ ಹತ್ತರವಿರುವ ಟಪ್ಪಾಲು ಕಟ್ಟೆಗಳಲ್ಲಿಯೇ ಸೇವಿಂಗ್ಸ್ ಬೇಂಕ್ ಠೇವಣಾತಿಗಳಾಗಿಡಬಹುದು ಇದಕ್ಕೋಸ್ಕರವಾಗಿಯೇ ಸರಕಾರದವರ ' ಪಬ್ಲಿಕ್ ಎಕೌಂಟ್ಸ್" (ಸರಕಾರಿ ಲೆಖ್ಖ)ಗಳಿಗಿರುವ ಕ್ರಮಗಳನ್ನೆಲ್ಲಾ ಪರಸ್ಪರ ಸಹಾಯಕ ಸಂಘಗಳಿಗೂ ಲಗಾವಾಗುವಂತೆ ಏರ್ಪಾಡಿಸಿದ್ದಾರೆ ಆದುದರಿಂದ ಸಂಘಗಳ ಅಧ್ಯಕ್ಷಸ್ಥಾನದ ಹೆಸರಲ್ಲೇ ಸೇವಿಂಗ್ಸ್ ಲೆಖ್ಖಗಳನ್ನು ಇಡಬಹುದು ಹಾಗೆ ಮಾಡಿದರೆ ಅಧ್ಯಕ್ಷಸ್ಥಾನದಲ್ಲಿ ಒಬ್ಬರು ಹೋಗಿ ಇನ್ನೊಬ್ಬರು ಬಂದಾಗ್ಯೂ ಸಂಘದ ಲೆಖ್ಖಕ್ಕೆ ತೊಂದರೆಯಾಗದೆ ಸರಾಗವಾಗಿ ನಡೆಸಲು ಸಾಧ್ಯವಾಗುತ್ತದ

೪ ಈ ಪ್ರಕಾರ ಠೇವಣಾತಿಗಳನ್ನು ಇಟ್ಟರೆ ಅಂತೆಯೇ ಉಳಿಯುವ ಹಣಕ್ಕೆ ಸ್ವಲ್ಪ ಬಡ್ಡಿ ಸಿಕ್ಕಿದ ಹಾಗಿ ಸಂಘಗಳಿಗೆ ಲಾಭಕ್ಕೆ ಕಾರಣವಾಗುವುದು ಆದುದರಿಂದ ಎಲ್ಲಾ ಸಂಘದವರೂ ಈ ಕುರಿತು ಕೂಡಲೇ ಪುತ್ತೂರು ಸೆಂಟ್ರಲ್ ಬೇಂಕಿನಲ್ಲಾಗಲಿ ಆಯಾ ಸಂಘಗಳಿಗೆ ಹತ್ತರವಿರುವ ಟಪ್ಪಾಲುಕಟ್ಟೆಗಳಲ್ಲಾಗಲೀ ಶಿಲ್ಕಿನ ಹಣವನ್ನು ವಿಲೇವಾರಿ ಮಾಡಬೇಕೆಂತ ಈ ಮೂಲಕ ಸೂಚಿಸೋಣಾಗುತ್ತದೆ

ದಕ್ಷಿಣಕನ್ನಡಾ ಸೆಂಟ್ರಲ್ ಕೋಆಪರೇಟಿವ್ ಬೇಂಕ್ ಲಿಮಿಟೆಡ್,
ಪುತ್ತೂರು ತಾ 1-2-1915

ಎಮ್ ಅನಂತರಾವ್
ಕಾರ್ಯದರ್ಶಿ

~~~~~

ಪೆರ್ಡಾಲ —ಮದ್ರಾಸ್‌ಸಂಸ್ಥಾನ ಸಂಸ್ಕೃತ ಶಾಲಾ ಸುಪರಿಂಡೆಂಟರಾದ ವಿದ್ಯಾನಿಧಿ ಮ| ರಾ| ರಾ| ಕೃಷ್ಣಮಾಚಾರ್ಯರ್ ಎಮ್. ಎ ಅವರ್ಗಳು ಈ ಪೆರಡಾಲ ಮಹಾಜನ ಸಂಸ್ಕೃತ ಪಾಠಶಾಲೆಯನ್ನು ತಾ ೧೮-೧-೧೫ರಿಂದ ಪರೀಕ್ಷಿಸಿ ಬಹು ಸಂತುಷ್ಟರಾಗಿ ಶ್ರೀ ಆದಿ ಶಂಕರಾಚಾರ್ಯರ ಕೃತಿಗಳಾದ ಈಗ ೨೦೦ ರೂಪಾಯಿಗಳಿಗಿಂತಲೂ ಹೆಚ್ಚು ಬೆಲೆಯುಳ್ಳ ೨೦ ವಾಲ್ಯುಂಗಳಾದ ಅಮೋಘ ಶ್ರೀ ಶಂಕರ ಗ್ರಂಥ ರತ್ನಗಳನ್ನು ಶಾಲಾ ಲೈಬ್ರರಿಗೆ ದಯಪಾಲಿಸಿದ್ದಾರೆಂದು ತಿಳಿಸಲು ಬಹು ಸಂತೋಷಪಡುತ್ತೇವೆ. ಅವುಗಳನ್ನು ಶಾಲಾಧಿಕಾರಿಗಳು (ಮೆನೇಜಿಂಗ್ ಕಮಿಟಿಯವರು) ಬಹು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿ ವಿದ್ಯಾ ಇಲಾಖೆ ಡಿರೆಕ್ಟರ್ ದೊರೆಗಳವರಿಗೆ ಕೃತಜ್ಞತೆಯನ್ನು ತಿಳಿಸಲು ಬೇಗನೇ ಒಂದು ಸಭೆಯನ್ನು ನೆರವೇರಿಸುವರೆ ಆಲೋಚಿಸಿರುವರು

ಪುತ್ತೂರು ತಾಲೂಕುಬೋರ್ಡು ಮೆಂಬರರಾದ ಮ| ರಾ| ಮಂಗಲ್ಪಾಡಿ ಕೃಷ್ಣಯ್ಯನವರು ತಾ ೨೪-೧-೧೫ರಿಂದ ಈ ಮಹಾಜನ ಸಂಸ್ಕೃತ ಪಾಠಶಾಲೆಯನ್ನು ಸಂದರ್ಶಿಸಿ ಈ ಊರ ಹವ್ಯಕ ದ್ರಾವಿಡ ಬ್ರಾಹ್ಮಣರ ಉತ್ಸಾಹದ ಫಲವನ್ನಾಗಿ ಈ ಶಾಲೆಯನ್ನು ಕುರಿತು ಅಭಿಪ್ರಾಯ ಹೇಳಿದರು. ಈ ಮೆಂಬರರು ಸಹ ಸದರಿ ಜಾತಿಯವರಾಗಿದ್ದದರಿಂದ ಈ ಶಾಲೆಯನ್ನು ಅಭಿವೃದ್ಧಿಗೊಳಿಸುವರೆ ಹೆಚ್ಚಿನ ಪ್ರಯತ್ನವನ್ನು ತಕ್ಕೊಳ್ಳುತ್ತಾರೆಂದು ಕೇಳಿ ಬಹು ಸಂತೋಷಪಡುತ್ತೇವೆ

~~~~~

ಉಡುಪಿ: — ವಾಡಿಕೆಯಂತೆ ಈ ಉಡ್ಪಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಕಳೆದ ಜನವರಿ ತಾ. ೩೦ನೇ ಮಧ್ಯಾಹ್ನ ೩ ಘಂಟೆಯ ಸಮಯಕ್ಕೆ ಉಪಾಧ್ಯಾಯರ ಸಭೆಯು ಕೂಡಿತು. ಈ ಸಭೆಯ ಅಧ್ಯಕ್ಷಸ್ಥಾನವನ್ನು ಸರ್ಕಲ್ ಶಾಲೆಗಳ ಇನ್ಸ್‌ಪೆಕ್ಟರ್ ದೊರೆಗಳವರು [illegible] ರಿಸಿದ್ದರು. ಪ್ರಥಮತಃ ಸಭೆಯು [illegible]
~~~~~

...ಂಬಿನ ಶಾಲಾ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರವರಾದ ಮ। ರಾ। ರಾ। ಉಳ್ಳಾಲ ಮಂಗೇಶರಾವ ಬಿ. ಎ. ಎಲ್. ಟಿ. ಯವರು ಎದ್ದು ನಿಂತು ಪ್ರತಿ ಒಂದು ಶಾಲೆಯಲ್ಲಿಯೂ ಕಪ್ಪು ಹಲಗೆಯ ಒಂದು ಬದಿಯಲ್ಲಿ ೩ ಇಂಚು ಉದ್ದಗಲದ ಚೌಕದ ಗೀಟುಗಳನ್ನು ಹಾಕಿಡಬೇಕೆಂತ ಹೇಳಿ, ಅವುಗಳ ಆಧಾರದಿಂದ ಒಂದೇ ಆಳತೆಯ ಸಚೌಕ, ಆಯತ ಮುಂತಾದ ಬೇರೆ ಬೇರೆ ಆಕಾರಗಳನ್ನು ಮಾಡಿ ತೋರಿಸಿದ್ದಲ್ಲದೆ ಹಿಂದಿನ ಸಭೆಯಲ್ಲಿ ವಿವರಿಸಿದ ಭಿನ್ನರಾಶಿಗಳ ಕಲಿಸುವಿಕೆಯ ಸಾರವನ್ನೇ ಮುಂದರಿಸಿ ½ ಮತ್ತು ¼ ಎಂಬ ಭಿನ್ನರಾಶಿಗಳು ಒಂದೇ ಪರಿಮಾಣದವುಗಳೆಂಬದನ್ನು ಸದರಿ ಚೌಕದ ರೇಖೆಗಳ ಪರಿಮುಖವಾಗಿ ಹೇಗೆ ಕಲಿಸಬಹುದೆಂಬ ವಿಷಯವನ್ನು ಬಣ್ಣದ ಕಡ್ಡಿಗಳಿಂದ ಬರೆದು ಬಹು ಸ್ಪಷ್ಟವಾಗಿ ತಿಳಿಯುವಂತೆ ವಿವರಿಸಿದರು. ಮತ್ತು ಇದೇ ಚೌಕದ ರೇಖೆಗಳ ಆಧಾರದಿಂದ ಸೂರ್ಯನ ಉದಯಾಸ್ತಮಯದ ಬೇರೆ ಬೇರೆ ಕಾಲಗಳನ್ನೂ ಆಯನಗಳ ದಿವಾ ಪ್ರಮಾಣದ ಭೇದಗಳನ್ನೂ ತೋರಿಸಬಹುದೆಂಬ ವಿಧಾನವನ್ನು ಸಹ ಚನ್ನಾಗಿ ಮನಂಬ್ಬಾಗುವಂತೆ ಮಾಡಿದರು. ಅಧ್ಯಕ್ಷರವರು ಇವರ ಕಲಿಸುವಿಕೆಯ ಮಾದರಿಯನ್ನು ನೋಡಿ ಬಹಳ ಸಂತೋಷಪಟ್ಟರು.

ಅನಂತರ ಶಾಲಾ ಅಸಿಸ್ಟಾಂಟ ಇನ್ಸ್‌ಪೆಕ್ಟರಾದ ರಾವ ಬಹದ್ದೂರ್ ಮ। ರಘು ನಾಥರಾಯರು ಈ ಚೌಕದ ಕೋಣಗಳ ಸಹಾಯದಿಂದ ರಂಗವಲ್ಲಿ ಮುಂತಾದ ಚಿತ್ರಲೇಖನಗಳನ್ನು ಕೂಡಾ ಸುಲಭವಾಗಿ ಮಾಡಬಹುದೆಂಬ ಅಂಶವನ್ನು ತೋರಿಸಿಕೊಟ್ಟರು. ಮತ್ತು ವಿವಿಧ ಪರಿಮಾಣಗಳುಳ್ಳ ಕಡ್ಡಿಗಳ ಮುಖಾಂತರವೂ ಭಿನ್ನರಾಶಿಗಳ ಕಲಿಸುವಿಕೆಯನ್ನು ತೋರಿಸಿ ಬಹು ಚೆನ್ನಾಗಿ ವಿವರಿಸಿದರು.

ಕೊನೆಯಲ್ಲಿ ಅಧ್ಯಕ್ಷರವರು ಸಭೆಯ ಹಿಂದಿನ ಪ್ರೊಸಿಡಿಂಗ್ಸ್ ಪರಾಂಬರಿಸಿ, ಈ ಸಭೆಯ ಕೆಲಸಗಳು ಸುವ್ಯವಸ್ಥೆಯಿಂದ ನಡಿಯುತ್ತಿರುವುದನ್ನು ನೋಡಿ ತನಗೆ ಬಹಳ ಆನಂದವಾಯಿತೆಂದು ಅಪ್ಪಣೆ ಕೊಡಿಸಿದರು. ತರುವಾಯ ಅಧ್ಯಕ್ಷರನ್ನು ಪುಷ್ಪಹಾರಾದಿಗಳಿಂದ ಉಪಚರಿಸಿದ ಮೇಲೆ ಆ ದಿನದ ಸಭೆಯು ಅಂತ್ಯವಾಯಿತು.

~~~

ಪುತ್ತೂರು:— ಇಲ್ಲಿಯ ಶ್ರೀ ಮ್ಹಾಂಡೆದೇವುಸ್ ಅಮ್ಮನವರ ಇಗರ್ಜಿಯ ವರುಷಾವಧಿ ತಿಥಿವಾರ ಹಬ್ಬವು ಇದೇ ತಾ ೨೭ರಲ್ಲು ಬಹು ವಿಜೃಂಭಣೆಯಿಂದ ಜರಗಿತ್ತು.

ಇಲ್ಲಿಯ ಸಾವುಕಾರ ರಾ। ನಂದಾವರ ವಾಸ್ತೇವ ಮಲ್ಯ ಮತ್ತು ಕುಂಬಳೆ ರಾಮಪ್ರಭುಗಳು ಕೂಡಿ ಬಹು ಸಾಹಸಪಟ್ಟು ಕಟ್ಟಿಸಿದ ಗೌಡಸಾರಸ್ವತ ಬ್ರಾಹ್ಮಣರ ಹೊಸ ದೇವಸ್ಥಾನವು ಶ್ರೀ ಮಹಾಮ್ಮಾಯಿ ಅಮ್ಮನವರ ಹೆಸರಿನ ಶಿಲಾಮೂರ್ತಿಯಿಂದ ಇದೇ ತಾ ೩೦ರಲ್ಲು ಪ್ರತಿಷ್ಠೆ ಮಾಡಲ್ಪಟ್ಟಿತು. ಈ ಉತ್ಸವವು ಬಹು ವಿಜೃಂಭಣೆಯಿಂದ ಜರಗಿತು. ಈ ಉತ್ಸವಕ್ಕೆ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರೂ ಕೋರ್ಟು ವಕೀಲರೂ ಮುಂತಾದ ಹತ್ತು ಸಮಸ್ತರು ಬಂದಿದ್ದರು.

ಇದೇ ತಾ. ೧ರಲ್ಲು ಇಲ್ಲಿಯ ಶರಾಬ ಗುತ್ತೆಗಳ ಟೋಲ್‌ಗೇಟುಗಳು ಇಲ್ಲಿಯ ಡಿವಿಜನ ಆಫೀಸರರಿಂದ ಏಲಂ ಮಾಡಲ್ಪಟ್ಟವು. ಶರಾಬ ಗುತ್ತೆಗಳು ಕಳೆದ ವರುಷಕ್ಕಿಂತಲೂ ದುಬಾರಿ ಏರಿಯದೆ, ಇಲ್ಲಿಯ ಬ್ರಾಂದಿ ಸೋಪನ್ನು ಬರುವ ವರುಷಕ್ಕೆ ಮನ್ನಾ ಮಾಡಿದ್ದಾಗಿಯೂ ಪೇಟೆ ಸ್ಥಳದಲ್ಲಿ ರಸ್ತೆಯ ೨೦ ಗಜದ ಒಳಗೆ ಶರಾಬು ಅಂಗಡಿಗಳು ಕಟ್ಟಕೂಡದಾಗಿಯೂ. ಶರಾಬು ಅಂಗಡಿಗಳನ್ನು ಬೆಳಿಗ್ಗೆ ೯ ಘಂಟೆಗೆ ತೆರಿಯಬೇಕೆಂಬ ರೂಲುಗಳನ್ನು ಏಲಂವಿನ ಮುಂಚೆ ಓದಿಹೇಳಿದರು. ಡಿವಿಜನಲ್ ಆಫೀಸರರೂ ತಹಶೀಲದಾರರೂ ಬೆಳ್ತಂಗಡಿ ಮೊಕ್ಕಾಂಮಿನ ಗುತ್ತೆ ಏಲಮಿನ ಬಗ್ಗೆ ಹೋಗಿರುವರು.

~~~

ಮಂಗಳೂರು.

~~~

ಇಲ್ಲಿಯ ಮ। ಕಾವಿಲ್ ಸಲ್ದಾಂಞಾರ ಮನೆಯಲ್ಲಿ ಸುಮಾರು ೭೦೦೦ ರೂಪಾಯಿ ಕ್ರಯಬಾಳುವ ಸೊತ್ತುಗಳು ಕಳವಾಗಿತ್ತೆಂದು ತಿಳಿಸಿತ್ತಷ್ಟೆ. ಕಳವಾದ ಸೊತ್ತುಗಳ ಪೈಕಿ ಒಂದು ಚಿನ್ನದ ಬಳೆಯೂ, ಒಂದು ವಾಚೂ ಸಿಕ್ಕಿರುವದೆಂದೂ, ಬಾವಿಯೊಂದರಲ್ಲಿ ಒಂದ ಪೆಟ್ಟಿಗೆಯು ಸಿಕ್ಕಿರವದೆಂದೂ ಆ ಮನೆಯ ಮೂರು ಜನ ಕೆಲಸಗಾರರನ್ನು ಪೋಲೀಸಿನವರು ಕೈದುಮಾಡಿರುವರೆಂದೂ ತಿಳಿಯುತ್ತೇವೆ.

ಮದ್ರಾಸಿನಲ್ಲಿ ಪಟ್ಟಣರಚನೆ ಮತ್ತು ಆರೋಗ್ಯ ಸಂಬಂಧವಾದ ಭಾಷಣಗಳನ್ನು ಕೊಡುತ್ತಿರುವ ಪ್ರೊಫೆಸರ್ ಗಡ್ಡಿಸರವರ ಭಾಷಣಗಳನ್ನು ಕೇಳಲು ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡಿನವರಾಗಿ ಮದ್ರಾಸಿಗೆ ಹೋದ ಪ್ರತಿನಿಧಿಗಳು ತಾ ೩ಕ್ಕೆ ಹಿಂದೆರಳಿ ಬಂದರು.

ಇಲ್ಲಿ ಕಳೆದ ಕೆಲ ದಿವಸಗಳಿಂದ ಇಂಪೀರಿಯಲ್ ಸಿನೆಮೊಟೊಗ್ರಾಫ್ ಕಂಪೆನಿ, ಮತ್ತು ಓರಿಯಂಟಲ್ ಬಯಸ್ಕೋಪು ಕಂಪೆನಿಯವರು ದೇಖಾವೆಗಳನ್ನು ತೋರಿಸುತ್ತಿರುವರು.

ಗದ್ದೆಕೇರಿ ರಾ। ನರ್ಸಯ್ಯ ಶ್ಯಾನಭಾಗರ ಮನೆಯಲ್ಲಿ ಇದೇ ತಾ ೨೯ನೇ ರಾತ್ರಿ ಕನ್ನಕಳವು ನಡೆದು ಕೆಲವು ತಾಂಬ್ರದ ಪಾತ್ರೆಗಳು ಕಳವಾಗಿರುವವು. ಸೇಡಿಗುಡ್ಡೆ, ಕೊಡಿಯಾಲಬೈಲು ಪ್ರಾಂತ್ಯದಲ್ಲಿಯೂ ಸಣ್ಣ ಚಿಕ್ಕ ಕಳವುಗಳು ಆಗುತ್ತಲೇ ಇವೆ. ಕೆಲ ಗಂಟೆ ರಾತ್ರಿಗೆ ದಾರಿಯಲ್ಲಿ ಹೋಗುತ್ತಿರುವವರ ಮೈಮೇಲೆ ಬಿದ್ದು ಯಾ ಕಣ್ಣಿಗೆ ಹೊಗೆ ಪಿಸಾಡಿ ಸುಳಿಗೆಮಾಡುವ ಹೊಸಪದ್ಧತಿಯು ಕಳೆದವಾರ ಡೊಂಗರಕೇರಿಯಲ್ಲಿ ಇಬ್ಬರು ಮಾಪಿಳ್ಳೆಯವರಿಂದ ನಡಿಸಲ್ಪಟ್ಟಿರುವದೆಂಬ ವಾರ್ತೆ ಇದೆ.

ದಿಗ್ರೇಟ್ ಇಂಟರ್‌ನೇಶನಲ್ ಸರ್ಕಸ್ ಎಂಬ ಕಂಪೆನಿಯವರು ಬೇಗನೇ ಇಲ್ಲಿಗೆ ಬಂದು ತಮ್ಮ ಸರ್ಕಸುಗಳನ್ನು ಪ್ರದರ್ಶಿಸಲಿಕ್ಕಿರುವರು.

ಈಗ ಉಡುಪಿಗೆ ಬಂದು ತನ್ನ ಪರಾಕ್ರಮವನ್ನು ಪ್ರದರ್ಶಿಸುತ್ತಲಿರುವ ಭಾರತೀಯ ಲೇಡಿ ಸೇಂಡೋ ಎಂದು ಕರೆಯಲ್ಪಡುವ ಮಿಸ್ ತಾರಾಬಾಯಿಯವರು ಇಲ್ಲಿಗೆ ಬರುವ ಸಂಭವವಿದೆ ಎಂತ ಕೇಳುತ್ತೇವೆ.

ಇದೇ ತಿಂಗಳ ತಾ. ೪ನೇ ಬ್ರಹಸ್ಪತಿವಾರ ಹೊಮಾರ್ಕೆಟ್ ಎದುರು ಹಿಂದಿನ ಮನೆಯಲ್ಲಿ ಕೆಲವರು ಜುಗಾರಾಟ ಆಡುತ್ತಿರುವಾಗ ಸಬ್ ಇನ್ಸ್‌ಪೆಕ್ಟರ್ ರಾ। ಡೊಂಗರಕೇರಿ ವೆಂಕಟೇಶಪೈಯವರೂ ಸಬ್ ಇನ್ಸ್‌ಪೆಕ್ಟರ್ ಚಮ್ಮಾಡರವರೂ ೧೪ ಮಂದಿ ಜುಗಾರುಕೋರರನ್ನು ಕೈದುಮಾಡಿರುವರು. ಆದರೆ ಪಣಂಬೂರು ಜಾತ್ರೆ ಸಂಬಂಧ ಹೆಚ್ಚಿನವರು ಆತ್ತಕಡೆ ಹೋಗಿದ್ದದ್ದರಿಂದ ಈ ಪಂಗಡದ ಇತರರು ತಪ್ಪಿಸಿಕೊಳ್ಳುವ ಹಾಗಾಯಿತು ಎಂತ ಜನರು ಆಡಿಕೊಳ್ಳುತ್ತಿದ್ದಾರೆ.

ಇಲ್ಲಿಯ ಕೆನರಾ ಹ್ಯಾಸ್ಕೂಲಿನ ವಾರ್ಷಿಕ ವರ್ಧಂತಿಯನ್ನು ಪ್ರತಿ ವರುಷದಲ್ಲಿಯೂ ಈ ಶಾಲೆಯಲ್ಲಿ ವಿದ್ಯಾಲಾಭವನ್ನು ಪಡೆದಿರುವ ಹಳೆ ವಿದ್ಯಾರ್ಥಿಗಳೂ ಇತರರೂ ಕೂಡಿಕೊಂಡು ಹೇಗೆ ಸಾಂಗವಾಗಿ ಆಚರಿಸಬಹುದೆಂಬ ವಿಷಯವನ್ನು ಪರ್ಯಾಲೋಚಿಸುವರೆ ಇದೇ ತಿಂಗಳ ತಾ ೧೪ನೇ ಪ್ರಾತಃಕಾಲ ಘಂಟೆ ೮ಕ್ಕೆ ಕೆನರಾ ಹ್ಯಾಸ್ಕೂಲಿನಲ್ಲಿ ಒಂದು ಸಭೆಯು ಕೂಡುವುದು. ಈ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಹೊಂದಿದ ಗ್ರಹಸ್ಥರೆಲ್ಲರೂ ಈ ಸಭೆಗೆ ದಯಮಾಡಿ ಬರಬೇಕೆಂಬ ವಿಜ್ಞಾಪನೆ ಇದೆ.

~~~

ನೋಟೀಸು.

~~~

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಓ ಪಿ ನಂಬ್ರು 15 / 1915

ಮಣೆಲು ರಾವ ಕೃಷ್ಣ ಶ್ಯಾನಭಾಗ ಕೂಡಾ } ಅರ್ಜಿದಾರರು.

ಮಂಗಳೂರು ಕ್ಯಾಹಾರಿನಲ್ಲಿ ಮೃತಪಟ್ಟ ಯಮುನೆ ಯಾನೆ ಪದ್ಮಾವತಿ ಅಮ್ಮನ ಸಾಲಗಳನ್ನು ವಸೂಲು ಮಾಡುವರೆ ಮೇಲಿನ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಅರ್ಜಿಯು ತಾ 18-2-15ಕ್ಕೆ ತನಿಕೆಗೆ ಇಟ್ಟಿರುತ್ತದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಗಳನ್ನು ಸದರಿ ತಾರೀಕಿಗೆ ಸದರಿ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Mangalore
4th February 15 } **A Varada Rau**
Vakil for Petitioner

~~~

ಜೀನಸು ಧಾರಣೆ. (ರೂ೦)

ಹೊಸ ಮಸ್ಕತಿ ಅಕ್ಕಿ	5— 2—0	5—10—0
ಹೊಸ ಗಾಡಿ ರಾಶಿ ,,	4— 5—0	4— 8—0
ಹೊಸ ಗುಡ್ಡು ,,	4—12—0	5— 2—0
ಅವ್ವಲ್ ಬೆಳ್ತಿಗೆ ,,	5— 8—0	5—11—0
ಗುಡ್ಡು ಬೆಳ್ತಿಗೆ ,,	. . .	5— 3—0
ರಂಗೂನು ಬೆಳ್ತಿಗೆ ಗೋಣಿ ೧ರ		9— 6—0
ಗೋಧಿ ಗೋಣಿ ೧ರ	13— 4—0	14— 4—0
ಹುರುಳಿ ಗೋಣಿ ೧ರ ..	6— 8—0	7— 0—0
ಕಡಲೆ ಗೋಣಿ ೧ರ	. . .	11—12—0
ತೊಗರಿ ಗೋಣಿ ೧ರ ..	10—12—0	12— 0—0
ತೊಗರಿ ಬೇಳೆ ಗೋಣಿ ೧ರ.	12— 8—0	16— 0—0
ಉದ್ದು ಗೋಣಿ ೧ರ ...	.	10— 8—0
ಊರು ಬೆಲ್ಲ ಖಂಡಿ ೧ರ .	. ...	50— 0—0
ಉಪ್ಪು ಗೋಣಿ ೧ರ . . .	.	3— 7—0
ಕೊಬ್ರಿ ಖಂಡಿ ೧ರ .	80— 0—0	84— 0—0
ಕೊಬ್ರಿ ಹಿಂಡಿ ಖಂಡಿ ೧ರ	20— 0—0	23— 0—0
ಎಳ್ಪಿಂಡಿ ಖಂಡಿ ೧ರ .	30— 0—0	36— 0—0
ಕೊಬ್ರಿ ಎಣ್ಣೆ ಮಣ ೧ರ	6— 0—0	6— 2—0
ಎಳ್ಳೆಣ್ಣೆ ಮಣ ೧ರ (ಕುಂದಾಪುರ)	3—14—0	4— 0—0
ಚಿಪುಣಿ ಎಣ್ಣೆ ಪೆಟ್ಟಿಗೆ ೧ರ	. . . .	5— 0—0
ಮೋರಿಸ್ ಸಕ್ಕರೆ ಮಣ ೧ರ	. . . .	4— 6—0
ಕಾಫಿ ಖಂಡಿ ೧ರ.	220—0—0.	225— 0—0
ಬೀಗೋಟು ಖಂಡಿ ೧ರ.	115—0—0	118— 0—0
ಹೊಸ ಬೀಗೋಟು ಖಂಡಿ ೧ರ	85— 0—0	87— 0—0
ಗೇರು ಬೀಜ ಮುಡಿ ೧ರ	. . . .	1— 2—0
ಕಬ್ಬಿಣ ಖಂಡಿ ೧ರ.	42—0—0	44—0—0
ತಾಂಬ್ರ ತಗಡುಮಣ ೧ರ	16— 8—0	16—10—0
ತಾಂಬ್ರ ಪಾತ್ರೆಗಳು ಮಣ ೧ರ	.	32— 0—0
[illegible]	.	18—12—0

BOX LOCKS.



PADLOCKS



೩! ಅಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಬಾಳಿಕೆಯಾಗಿಯೂ ಇರುವುದು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವ ದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳು

ನಂಬ್ರ 1 2 3 4 5

0-12-0 0-15-0 1-4-0 1-10-0

ಆರು ಚಕ್ರಗಳಿರುವ ಬೀಗಗಳು

1-2-0 1-8-0 2-4-0 3-0-0 3-8-0

ಪಿಲ್ಲರ್ ಬೀಗಗಳು

0-4-0 0-5-0 0-6-0 0-8-0 0-10-0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ 0-13-0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ೧ಕ್ಕೆ 1-8-0, 1-12-0

ವಿಳಾಸ— ಎಚ್ ಎನ್ ರಾವ್ ಅಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ಪುಸ್ತಕ, ಹೊಸತರಹ, ಅಂದವಾದ ಅಚ್ಚು, ಐದು ಭಾಗ ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ಇದು ಒಂದನೇ ಪುಸ್ತಕ ಬೆಲೆ ರೂ 1 ದೇಶಬಾಂಧವರಿಗೆ ಬೆಲೆ ಕಮ್ಮಿ ಮಾಡಿದೆ ಇದನ್ನು ಗುರುವಿನಂತೆ ಭಾವಿಸಿ ತಪಾಲು ಖರ್ಚು 0-2-0

ಅಪೂರ್ವ ಪುಸ್ತಕಗಳು

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ ರೂ. 3

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ ಬೆಲೆ 1-4-0.

ರಾವ್‌ಬಹದ್ದೂರ್ ವೀರೇಶಲಿಂಗಂ ಪನ್ತುಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಶನ್ ಬೆಲೆ ರೂಪಾಯಿ 1-0-0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗ, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ

	ರೂ ಆ.		ರೂ. ಆ.		ರೂ ಆ.
ಜಮಾ ಖರ್ಚಿನ ಪದ್ಧತಿ	0--12	ಆರ್ಯಕೀರ್ತಿ	0 10	ಕುಣಿಗಲು ರಾಮಾಶಾಸ್ತ್ರಿ	
ಇಂಡ್ಯನ್ ಪೆನಲ್ ಕೋಡ	2-0	ಶಾಕುಂತಲ ನಾಟಕ	0-8	ಗಳವರ ಚರಿತ್ರೆ	1-0
ಅರೆಬಿಯನ್ ನೈಟ್ಸ್	2-4	ಸ್ತ್ರೀ ಧರ್ಮನೀತಿ	0-8	ಸುಮತಿ ಮದನಕುಮಾರರ	
ಸುರಸ .	0-4	ಶೋಭನೆ	0-8	ಚರಿತ್ರೆ I	0-8
ಶ್ಯಾಮು . .	0-1	ಚಂದ್ರಕಳಾ .	0-4	,, II	0-7
ಇಂದ್ರ ವಜ್ರ . .	0-4	ಕಲಾನಾಥ .	0-6	ಶಿವಗೀತೆ .	0-6
ಚಿಕ್ಕೋಜ . .	0-8	ಪ್ರ. ಲೇಖ್ಯಬೋಧಿನಿ	1-4	ಪಾಕಶಾಸ್ತ್ರ .	0-8
ಧನಕಾಲುಕ. .	0-6	ವಿಷವೃಕ್ಷ .	1-4	ಸನಾತನಧರ್ಮ ದೀಪಿಕೆ	1-0
ಹನುಮದ್ವಿಲಾಸ .	0-8	ಮುದ್ರಾಮಂಜೂಷ	1-8	ಬಾಲರಾಮಾಯಣ .	0-4
ಶಿವಾನಂದಲಹರಿ .	0-6	ಶುಕಸಪ್ತತಿ	2-0	ಕಥಾ ಮಂಜರಿ .	0-6

ಪ್ರಸಿದ್ಧ ಶಸ್ತ್ರೀದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮುಹೂರ್ತ, ಮಾಯಾವಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರ ರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಅಣೆ,

ವಿಳಾಸ— ವಿದ್ಯಾಸಾಗರ ಬುಕ್ ಡಿಪೋ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿನಿಂದ ತೆಗೆಯಲ್ಪಟ್ಟದ್ದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಆಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ತೆಗೆಯಲ್ಪಟ್ಟ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಶಕ್ತರುಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಆರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆ ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ ಈ ಮಿಶ್ರಣವು ಸುಲಭವಾಗಿರುತ್ತದೆ ಇದು ಎಲ್ಲಾ ಕಡೆಗಳಲ್ಲಿ ದೊರಕಲ್ಪಡುವದು ಮತ್ತು ಕನ್ನಡ ಜಿಲ್ಲೆಯವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ಬಾಟ್ಲಿ 1ಕ್ಕೆ 3-4-0. ಅರ್ಧ ಬಾಟ್ಲಿಗೆ 1-1-0

ದಿ ಊಲನ್ ವರ್ಕ್ಸ್. ಮಂಗಳೂರು,

ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರಿಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8-0-0

೨ ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ನಿತ್ರಾಣಿಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ ಬಾಟ್ಲ 1ಕ್ಕೆ 1-0-0

೩ ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ ಬಾಟ್ಲಿ 1ಕ್ಕೆ 0-12-0

೪ ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ ಬಾಟ್ಲ 1ಕ್ಕೆ 1-0-0

೫ ಸುದರ್ಶನಮಾರ್ಶಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು ಕ್ರಯ 4-0-0

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2-0-0

೭. ಆನಂದವನವಿಲಾಸ—ಡಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5-0-0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಷ್ಟರ ಮಾತ್ರೆಗಳು, ಲೋಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ ಏಜಂಟರು ಬೇಕು. ಹೆಚ್ಚು ಡಿಸ್ಕೌಂಟ್ ಕೊಡುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

---

150 ಪುಟಗಳ ಪುಸ್ತಕವು

ಉಚಿತವು

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ, ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರೆಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ್

ಕನ್ನಡ ಏಜಂಟರು:— 1. ಮೆಸ್ಸರ್ಸ್ ರಘಯಲ್ ಎಂಡ್ ಕೊ, [illegible]
2. [illegible]

ಬಹುಮಾನ! ಬಹುಮಾನ!!

25 ಸಾವಿರ ರೂಪಾಯಿಗಳು ಹಂಚಲ್ಪಡುವವು.

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ, ಇವರ ನಾರಸಿಂಹಚೂರ್ಣವು.

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವು ವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರೆ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವು ವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರೂ ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವದಕ್ಕಾಗಿ "ನಾರಸಿಂಹಚೂರ್ಣವು" ಎಂಬ ಒಂದಾನೊಂದು ಸಶಾಸ್ತ್ರೀಯ ವಾದ ಚೂರ್ಣವನ್ನು ನಿರ್ಮಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕ ತರಹೆಯ ಮೇಹ ರೋಗಗಳು, ಪಾಂಡುರೋಗ, ಪೀನಸ, ಹವಿನೆಂಟು ಬಗೆಯ ಕಷ್ಟಗಳು, ಎಂಟು ವಿಧ ಉದರ ರೋಗಗಳು, ಬಂದವಾದ ಮೂತ್ರಕೃಚ್ಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು, ಮಹಾತ್ಯಾಸಗಳು, ದಾರುಣವಾದ ಐದು ಬಗೆಯ ಕಾಸಗಳು, ಎಂಬತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯ ಪಿತ್ತಗಳು, ಇಪ್ಪತ್ತು ಬಗೆಯ ಶ್ಲೇಷ್ಮರೋಗಗಳು, ದ್ವಂದ್ವಜವಾತ ರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಶೀಘ್ರದಿಂದ ಗರುಡನು ನಾಗವಾಗ ನಾಶಮಾಡುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯೂ, ಸಿಂಹದಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಪಕ್ಷಿಗಳ ದೃಷ್ಟಿಯಂತೆ ದೃಷ್ಟಿಯು ಉಂಟಾಗುವದು. ಇದರಲ್ಲಿ ಯಾವ ವಿಧವಾದ ರಸಗಳಾಗಲಿ ಮಿಶ್ರವಾಗಿ ಇಲ್ಲ. ಇನ್ಯಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು. ಕೇವಲ ವನಸ್ಪತಿಗಳಿಂದಲೇ ಸಿದ್ಧವಾದ ದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

14 ದಿನ ಉಪಯೋಗಕ್ಕೆ ಬರುವ ಡಬ್ಬಿ ಒಂದಕ್ಕೆ ಬೆಲೆ ರೂಪಾಯಿ 1—0—0

ಬಹುಮಾನಗಳನ್ನು ಹಂಚುವ ನಿಧಾನ.

1 ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 10000. 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 5000. 3 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 4000. 2 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 3000. 1 ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ರೂ 2000.

1914ನೇ ಜುಲೈ 1ನೇ ತೇದಿ ಮೊದಲು 1915ನೇ ಜುಲೈ 1ನೇ ತೇದಿವರೆಗೆ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದ ಕೂಡಲೇ ಈ ಲಕ್ಷವನ್ನು ಅಲ್ಲಿಗೆ ಸಂಕ್ಷೇಪವಾದ ಬಹುಮಾನಗಳನ್ನು ಹಂಚುತ್ತೇವೆ. ಒಂದು ಪಕ್ಷದಲ್ಲಿ ಮೇಲ್ಕಾಣಿಸಿದ ನಿಯಮಿತ ದಿನಕ್ಕೆ ಒಂದು ಲಕ್ಷ ಡಬ್ಬಿಗಳು ಖರ್ಚಾದಿದ್ದರೆ ಮತ್ತು ಮಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರೂ ಸಂಶಯವಿಲ್ಲ. ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಬಂದೋಬಸ್ತಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಜೂಜುತನವೂ ಇಲ್ಲ. ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾಕೊಡಲಾಗದು. ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಔಷಧಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದರ ಅನುಪಾನಪತ್ರಿಕೆಯನ್ನೂ ಬಹುಮಾನದ ಟಿಕೀಟನ್ನೂ ಡಬ್ಬಿಯ ಸಂಗಡ ಕಳುಹಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು:

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಯಗ್ಸಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕವಾದ ಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯಾವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ.

ಊದಬತ್ತಿಗಳು 4 ರೂ ತೂಕದ ಸೇರು 1ಕ್ಕೆ ರೂ, 12—0—0, 5—0—0, 3—0—0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸುಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬಹು ಬೆಲೆಯುಳ್ಳ ಪದಾರ್ಥಗಳ ಸೇರ್ಪಡೆಯಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೆ ಶೂಲೆ, ಕಂಬುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸಂಶಯಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುಕುಶೂಲೆ, ಮಕ್ಕಳ ಎಳವು, ಜ್ವರ, ಸಚ್ಚಿಜ್ವರ, ಕ್ಷಯಶ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.— 220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ. 6 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.



ಎ. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ಕ್ರಮೂರಿಕಂದು ಕೊಂಡಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಪೇಟಾದಲೇಡಿ! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿದ್ದರೆ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ತಮ್ಮ ವಿಳಾಸ:— ಶ್ರೀ ಸೀತಾರಾಮರ ವೈದ್ಯಶಾಲಾ,

ಮೈಸೂರು.

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨ ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೪ ಸೂಲನಾಶಕ ಲೇಹ. ರಕ್ತ ಅಥವಾ ನೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಮಾಡುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಅಗ್ನಿಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

ನಮ್ಮ ವಿಳಾಸ.—ಬಿ ಎಮ್. ನಾಥ್ ಮತ್ತು ಕಂಪೆನಿ,

ವೇಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಕಾಲ್ಯಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ತುಳುಕಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪವದೊಳಗಾಗಿ ಗೆಲ್ಲುವದು. ಉರಿಯೂ ಇರಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸಪ್ತೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M. Nath & Co, *Ayurvedic Chemists*,

Vepery Post, MADRAS.

ಓದಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಹಾರ ಮಿಶ್ಯನ್ ಚೇಕುಗಳೂ, ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಕೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಒಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ.

ಕಂಟನ್‌ಮೆಂಟ್ - ಬೆಂಗಳೂರು

ದಿ ಕೆನರಾ ಸ್ಯಾಕಲ್ ಮಾರ್ಟ, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬಿಸ್ಸನ್, ರೋಯಲ್, ಮಿನೋರಾ, ಸ್ಪಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಸನ್, ಬ್ರೂಕ್ಸ, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*

THE CANARA CYCLE MART.

Udipi, S. Canara.

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು.

ಏಜಂಟರು:—ಅಂತೋನಿ ಎಲ್ ರೇಗೊ. ಸ್ಟ್ರೀಟ್‌ವಾರ್ಟ್ ಬಜಾರ್, ಕಲ್ಲಿಕೋಟೆ
ಸ್ವದೇಶಿ ಎಂಪೋರಿಯಮ್, ಸೇಲಂ.
ಕಣಕಾಸಬಾ ಚೆಟ್ಟಿಯರ್, ಲಾಲ್‌ಗುಡಿ, ಪುವಲೂರ್, ತಿರುಚಿನಾಪಳ್ಳಿ
ಎಮ್ ಪ್ಯಾಸ್ ಶೋಪ್, ಮಡಿಕೇರಿ
ವಿ ಬಾಲಕೃಷ್ಣ ನ್ಯಾಯು, ಬಿಗ ಬಜಾರ್ ಸ್ಟ್ರೀಟ್, ಕೊಯಂಬುತ್ತೂರು
ಅರ್ಹನ್ ಎಂಡ್ ಐರುಸ್ ಶೋಪ್, ಉಡ್ಪಿ.

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ ಇಲ್ಲವಾದರೆ ನಮಗೆ ತಿಳಿಸಿದರೆ ನಿಮ್ಮನ್ನು ತೃಪ್ತಿಪಡಿಸುತ್ತೇವೆ.

ವಿಳಾಸ:— ಸ್ಟೀವನ್ ಎಂಡ್ ಸನ್ಸ್, ಮಂಗಳೂರು.

S. U. N. & CO.,

BENARES CITY, U. P.

ದೊಡ್ಡ ಕಂಪೆನಿ ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮವಾಗಿ ಕಳುಹಿಸಲಾದೀತು.

ತಮ್ಮ ವಿಳಾಸ — ಯಸ್ ಯು. ಯನ್. ಮತ್ತು ಕಂಪೆನಿ, ಕಾಶಿ

ಉತ್ಕೃಷ್ಟವಾದ ಮೂರು ಔಷಧಗಳು.

ಗ್ರೆಂಟ್ ಮೆಡಿಕಲ್ ಕೊಲೆಜಿನಲ್ಲಿ ಸೂಲಗಿತ್ತಿತನ ಕಲಿತು ಸರ್ಟಿಫಿಕೇಟ್ ಪಡೆದ ಕಮಲಾ ಬಾಯಿ, ತುಲಸೀ ಬಾಯಿ ಎಂಬ ಸೂಲಗಿತ್ತಿಯರಿಂದ ತಯಾರಿಸಲ್ಪಟ್ಟವುಗಳು.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1.

(ಆರ್ತವ ಶೂಲೆ ಹೋಗಲಾಡಿಸುವ ಬಗ್ಗೆ.)

ಅಬಲಾಸಂಜೀವನಿ ಗುಳಿಗೆಗಳು ಎಲ್ಲಾ ಬಗೆಯ ಆರ್ತವ ಶೂಲೆಯನ್ನು ಹೋಗಲಾಡಿಸುವುದಕ್ಕೆ ಏಕರೀತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆಗೆ ಯೋಗ್ಯವಾದ ಮಾತ್ರೆಗಳಾಗಿರುವವು ಅನೇಕ ಕಾಲದವರೆಗೆ ಪುಷ್ಪವತಿಯಾಗದೆ ಇದ್ದುದು ಕೂಡ ಇವುಗಳಿಂದ ಸರಿಯಾಗುವುದು. ಅಂತರೌಷಧಿಗಳಿಂದ ಗುಣವಾಗಬಹುದಾದ ಎಲ್ಲಾ ಗರ್ಭಕೋಶದ ಶೂಲೆಗಳು ಇವುಗಳಿಂದ ಗುಣವಾಗಿ, ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು ಒಂದು ಶೀಸೆಯ ಕ್ರಯ ರೂ. 1 ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 2.

(ಬಿಳೀ ಸ್ರಾವದ ಬಗ್ಗೆ.)

ಈ ಬಾಧೆಯಿಂದ ವಿರಹಿತರಾದ ಸ್ತ್ರೀಯರು ಬಹಳ ವಿರಳ. ಈ ಸ್ರಾವದಿಂದ ಹೆಚ್ಚಿನ ನಿರ್ಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವುವು ಈ ಸ್ರಾವವು ರಕ್ತಸ್ರಾವದಂತೆ ಬಲಹೀನಕರ. ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರುವುದು, ಆಗಾಗ್ಗೆ ಕಟಿಭಾಗದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗುವುದು, ಮಲವಿಸರ್ಜನೆ ಸರಿಯಾಗದಿರುವುದು. ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು — ಒಂದೇ ಪೊಟ್ಟಣವನ್ನು ಪರೀಕ್ಷೆಗಾಗಿ ತರಿಸಿದರೆ ಆಶ್ಚರ್ಯಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು. ಒಂದು ಶೀಸೆಯ ಕ್ರಯ 1 ರೂಪಾಯಿ. ಅಂಚೆ ಹಾಸಲು 4 ಆಣೆ.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 3.

(ಕೆಂಪು ಸ್ರಾವದ ಬಗ್ಗೆ.)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದುವುಗಳು ಉಂಟಾಗಿ, ಗರ್ಭಕೋಶದ ಶೂಲೆ, ನಿರ್ಬಲತೆ ತಲೆದೋರುವುವು ಈ ಸ್ರಾವವು ಗರ್ಭಕೋಶದಿಂದ ಸ್ರವಿಸುವ ರಕ್ತವೇ ಸರಿ ಈ ಗುಳಿಗೆಗಳನ್ನು ಕೂಡಲೇ ಸೇವಿಸುವುದಕ್ಕೆ ಅಸಡ್ಡೆ ಮಾಡಿದರೆ, ಈ ಪೀಡೆಯು ಅತಿಶಯಿಸಿ, ಬೇಗನೇ ಗುಣ ಹೊಂದಲಿಕ್ಕಿಲ್ಲ. ಒಂದು ಶೀಸೆಯ ಕ್ರಯ 1 ರೂಪಾಯಿ. ಅಂಚೆ ಹಾಸಲು 4 ಆಣೆ ಏಜೆಂಟರು —

ದಿ ಊಲನ್ ಮಾರ್ಟ್, ಹಂಪನ್‌ಕಟ್ಟೆ, ಮಂಗಳೂರು. ದಕ್ಷಿಣ ಕನ್ನಡ.

Dr. Nava Ratna & Sons, 253 Kalbadevi Road, BOMBAY.

Estd. 1888. ಸ್ಥಾಪನೆ 1888.

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿಗಕ್ಕೆ ೪ ಆಣೆ ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾಸಾರ್ಸಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾಸಾರ್ಸಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಡೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಚರ್ಮವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾಸಾರ್ಸಪರಿಲ್ಲೆಯು. ಕ್ರಯ ಬಾಟ್ಲಿ ಗಕ್ಕೆ ರೂ. ೧—೪—೦ ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್

ಕೆ. ಬಿ. ರೇಳೆ ಸನ್ಸ ಕಂಪನಿ ಗಿರಗಾಂವ ನಂ. ೪ ಮುಂಬಯಿ.

ಸ್ತ್ರೀಚತುರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುವಂತೆ ಮಾಡಿ ಮಾಡೆಸಿಕೊಳ್ಳೇ, ಹಾಗೆಯೇ ಬುದ್ಧಿ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂದುಗಳು, ಬಸವನಗಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವುದು

ಸೀಸೆಯೊಂದರ ಕ್ರಯ ರೂ. 1-0-0, ಅ ವೆ. 0-4-0 ಬೇರೆ, 3 ಸೀಸೆಗಳ ಕ್ರಯ ರೂ. 2 10-0, ಅ. ವೆ. 0-7-0 ಬೇರೆ.

ಸೂಚನೆ — ಅನೇಕ ದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಹೆಸರಿಯಿಂದ ತಮಗೆ ಅತ್ಯಲ್ಪ ಸಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕುವ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುಹರುಬಾನ್ ರೂಮಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವೆಂದು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾದುದು. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಸರ್ಗವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಬಿಂದುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪಿಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ವಟೌಕ್ತಿಕಗಳು

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ

ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತು ದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ, ಕಲಿಯುವದಕ್ಕೆ ಅಥವಾ ಕಾರ್ಯ ಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಷಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವ್ಯಸನದಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ದಮೋಪದೇಶಕರಿಗೂ ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಪಾರರಿಗೂ ಕ್ರಿಯಾಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಆವಶ್ಯಕವಾಗಿರುತ್ತವೆ

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ಥಾವನ್ನು ಗುಣಮಾಡಿ, ರೋಗದಿಂದ ಆಳಿದ ದೇಹಭಾಗಗಳನ್ನು ಇವು ಮರಳಿ ಚೇತನಗೊಳಿಸುತ್ತವೆ. ರೋಗದಿಂದ ಮುರಿದು ಹೋದ ಅದನಾ ಒಸವರಿದ್ದು ಕುಂದಿದ ಅವಯವಗಳಿಗೆ ಇವು ಘನ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೋತು ದೇಹದಲ್ಲಿ ಧೈರ್ಯ, ಓಲ, ಸುಖ, ಇವುಗಳ ಸಂಚಾರವಾಗುತ್ತದೆ ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಾಗ್ನಿ"ಯು ಕ್ರಮವನ್ನು ಅನುಸರಿಸುತ್ತದೆ, ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ, ಗತಿಯು ದೃಢವಾಗುತ್ತದೆ ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

ದಿವಾಕರ ಕೃಷ್ಣಾಜಿ ದಾಹರೀ, ರಾ. ಪೊರಸಾವನೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ"

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೀಲ್, ಸನವೇಲ್—"ತಾವು ಕಳುಹಿಸಿದ ಪ್ರೊ ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ"

4 ಐ. ಆರ್. ಚಾಕ್ಕೋ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಾಯಮ್, ತ್ರಾವಣಕೋರ್ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹುವುದು.

5 ಮೂನಾಜೀ ನರಸಿಂಗರಾವ್, ಸಂಸ್ಥಾನ ಕುರುಂದ—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಒಳ್ಳೆ ಗುಣವನ್ನು ಹೊಂದಿರುವದರಿಂದ, ಅವುಗಳ ಎರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ವಾರ್ಟ್ಸ್, ಮಂಗಳೂರು ದ. ಕನ್ನಡಾ.**

ತ್ವರೆಮಾಡಿರಿ!

1915ನೇ ಇಸವಿಯ ಸುಂದರವಾದ ಕೆಲೆಂಡರುಗಳು.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ ಚಾರ್ಜು ಸೇರಿ ೧ಕ್ಕೆ ಆಣೆ ೩, ೭ಕ್ಕೆ ಆಣೆ ೧೩, ೧೨ಕ್ಕೆ ರೂ. ೧--೧೦--೦ ಇವು ಜನವರಿ ಆಖೈರ್ ವರೆಗೆ ಮಾತ್ರ ಸಿಕ್ಕುವವು ನಂತರ ಖರ್ಚಾಗುವವು. ಆದುದರಿಂದ ತ್ವರೆಮಾಡಿರಿ!

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲ ದಿವ್ಯ ಔಷದವಾಗಿರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಪಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ 5-4-0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ —ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್‌ಮಾರ್ಕ್. 0—6—0 12 ಡಬ್ಬಿಗಳಿಗೆ 3—8—0. ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮುನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0. ಡಜನ್ 1ಕ್ಕೆ 1—2—0. ವಿ ಪಿ ಪ್ರತ್ಯೇಕ

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ದರ ರೂ 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಶಿಯಲ್ ರಿಫ್ಹೊರ್ಮರ್:— ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷದ.

ಡಬ್ಲ್ಯು ಮೆಕ್ಸವೆಲ್, ಮೈಸೂರು:— ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್ ಆರ್ ಗಂಗೋಲಿ:— ಅಮೃತಾಂಜನ ವಾತ, ತಲೆ ನೋವುಗಳ ಮೇಲ ದಿವ್ಯ ಔಷದ

ಡಾಕ್ಟರ್ ದಾಂಡೇಕರ್, ಎಲ್. ಎಮ್. ಎಂಡ್ ಎಸ್:— ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೇನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ — ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್‌ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ ಬೆಲೆ 1—8—0 ವಿ ಪಿ 1—12—0

ಲಾಯರ್ ಯಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಶೇರಿ 15 0—0 ಆಗುತ್ತೆ.

ಅಚ್ಚಾಗುತ್ತಲಿದೆ! ಪುರಾತನ ಸಂಗ್ರಹ!! ನವೀನ ಗ್ರಂಥ!!!

ಭೂತಾಳಪಾಂಡ್ಯರಾಯನ

ಸಂಪೂರ್ಣ ಕಟ್ಟುಗಳು ಇರುವ

ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ.

ಈ ಪುಸ್ತಕದಲ್ಲಿ ಪರಶುರಾಮಾವತಾರದ ಕಥೆಯೂ, ಭರತಖಂಡದ ಕ್ಷತ್ರಿಯರಾಜರ ವಂಶಾವಳಿಯೂ, ಧರ್ಮರಾಯನ ನಂತರ ಆಳಿದ ಅರಸರ ಹೆಸರುಗಳೂ, ವರ್ಷಗಳೂ, ಪರಶುರಾಮ ಸೃಷ್ಟಿಯ ಭೂಮಿ ವಿವರಗಳೂ, ಅದಕ್ಕೆ ಶೇರಿದ ೭೭ ದ್ವೀಪಗಳೂ, ಕನ್ನಡಾ ಜಿಲ್ಲೆಯ ಪೂರ್ವ ರಾಜರ ಸಂತತಿಯೂ, ಆಳಿದ ವರ್ಷಗಳೂ, ಕನಕವರ್ಮ ವೀರವರ್ಮ ಚರಿತ್ರೆಯೂ, ವೀರವರ್ಮನು ಮಯೂರವರ್ಮನಾಗಿ ಬಂಟರ ಯಾ ನಾಡವರ ಮತಸ್ಥಾಪನೆ ಕಥೆಗಳೂ, ಜೈನರಿಗೂ ಬ್ರಾಹ್ಮಣರಿಗೂ ದ್ವೇಷವಾದ ಕಾರಣಗಳೂ, ಭೂತಾಳ ಪಾಂಡ್ಯನ ಪೂರ್ವಜರ ಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ, ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ, ಅಳಿಯಕಟ್ಟು ಆದ ಕಾರಣವೂ, ಅದರ ೧೪ ಕಟ್ಟು ೧೬ ಕಟ್ಟಳೆಗಳ ಪೂರ್ಣಾಭಿಪ್ರಾಯವೂ, ಭೂತಾಳಪಾಂಡ್ಯನ ವಿವಾಹವೂ, ಆತನು ಮಕ್ಕಳಿಗೆ ಅನ್ಯತವಾಗಿ ಕೊಟ್ಟ ಸ್ಥಳಮಾನಗಳೂ, ಅವನ ಅಳಿಯ ರಿದ್ಧಿಕಮ್ಮ ಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿ ಕೊಟ್ಟ ಸ್ಥಳ ಮಾನಗಳೂ, ಟುಂಗಡಿ ಅರಸರ ಮಾನಮರ್ಯಾದೆಗಳ ವಿಷಯ ಬರಸಿದ ಶಾಸನವೂ, ಅಳಿಯಕಟ್ಟಿಗೆ ಶೇರಿದ ೪೩ ಜಾತಿಗಳೂ, ಮತ್ತು ಅವರ ಗೋತ್ರಗಳು ತೆಗೆದು ಮಾಡಿದ ೬೦, ಬಳಿಗಳೂ, ತನೇ ಭೂತಪಾಂಡ್ಯನ ಚರಿತ್ರೆಯೂ, ಚೌಟ ಬಂಗರೇ ಮೊದಲಾದ ಸಂಸ್ಥಾನಾಧಿಪರ ಸೀಮೆ, ಮಾಗಣೆ, ವತನ ಮರ್ಯಾದೆಗಳೂ, ಜೈನ, ಬಂಟರ ೬೦ ಜನನ, (ಕೀರ್ತಿನಾಮಗಳೂ) ಕೇರಳದ ೪೩ ಜಾತಿಗಳೂ, ಸ್ಥಳನಾಮಾವಳಿಗಳೂ, ಏಳು ಮಂದಿ ರಾಜಂದ್ಯವಗಳ ಚರಿತ್ರೆಯೂ, ಇಕ್ಕೇರಿ, ಆನೆಗುಂದಿ ವಿಜಯ ನಗರದ ರಾಜರುಗಳ ಚರಿತ್ರೆಯೂ, ಆ ಕಾಲದ ಕಂದಾಯ ಕ್ರಮಗಳೂ, ಶಿಲಾ ಶಾಸನ, ತಾಮ್ರ ಶಾಸನಗಳ ಯಥಾ ನಕಲುಗಳೂ, ಅದರ ಅಭಿಪ್ರಾಯಗಳೂ, ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳೂ, ಅವುಗಳ ಉತ್ಸವಾದಿ ವಿವರಗಳೂ, ಮೊಗಲ್ ರಾಜರ ವಂಶಾವಳಿಯೂ, ಭರತಖಂಡಕ್ಕೆ ಅನ್ಯ ರಾಜರ ಪ್ರವೇಶ ಕಾಲಗಳೂ, ಶ್ರೀಮನ್ 5ನೇ ಜಾರ್ಜಸಾರ್ವಭೌಮರ ಚರಿತ್ರೆಯೂ ವಗೈರೆ ಅನೇಕ ವಿಧವಾದ ಪೂರ್ವ ಪುರಾಣಗಳ ಅನುಭವಗಳಿಂದ ಭರಿತವಾದ ಪುರಾತನ ಸಂಗ್ರಹಗಳು ಇದರಲ್ಲಿ ಅಡಗಿರುತ್ತವೆ. ಅಳಿಯ ಸಂತಾನದವರಿಗೂ, ಶಾಲಾ ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ಓದು ಬರಹ ಬಲ್ಲ ಸರ್ವರೂ ನೋಡತಕ್ಕ ಪುಸ್ತಕ.

ಅಪೇಕ್ಷಕರು ಆದಷ್ಟು ಬೇಗನೆ ಪತ್ರ ಬರೆದು ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳಬಹುದು. ಅಂಥವರಿಗೆ ಪುಸ್ತಕ ಒಂದರಲ್ಲಿ ೩ ಆಣೆ ಕಡಿಮೆ ದರದಲ್ಲಿ ಕೊಡಲಾದೀತು. ಪುಸ್ತಕವು ತಯಾರಾಗುತ್ತಾ ಬರುತ್ತದೆ. ಪುಸ್ತಕದ ಬೆಲೆ ಸಿದ್ಧವಾದ ಕೂಡಲೇ ತಿಳಿಸಲಾದೀತು. ಅಪೇಕ್ಷಕರು ಈ ಕೆಳಗಿನ ವಿಳಾಸಕೆ ಬರೆಯಬೇಕು

ವಿಳಾಸ:—

"ಕುಶಲಮಂದಿರ"
ಶ್ರೀ ... ದೇವಸ್ಥಾನ,
...

ಎನ್. ಎ. ಶೀನಪ್ಪ ಹೆಗಡೆ
ಅಮ್ಮುಂಜೆ ಗುತ್ತು,
ಪೋಸ್ಟು, ಗುರ್ಪುರ, ದ. ಕನ್ನಡ

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು

ಮಕರಧ್ವಜ:— ನಮ್ಮ ಮಕರಧ್ವಜಕ್ಕೆ ಸಮಾನವಾದ ತಯಾರಿಯು ಮತ್ತಾವ ಬಗೆ ವೈದ್ಯಶಾಸ್ತ್ರದಲ್ಲಿಯೂ ಇಲ್ಲವೇ ಇಲ್ಲ. ಈ ನಮ್ಮ ಮಕರಧ್ವಜಕ್ಕೆ ಬಗ್ಗದ ವ್ಯಾಧಿಯು ಭೂಲೋಕದಲ್ಲಿ ಇಲ್ಲವೇ ಇಲ್ಲ ಅನೇಕ ರೋಗಗಳು ಇದರ ಸೇವನೆಯಿಂದ ಸಂಪೂರ್ಣವಾಗಿ ಮಾಯುತ್ತವೆ ಎಂತಹ ಕಠಿಣ ವ್ಯಾಧಿಯಾದರೂ ಕಡಮೆಯಾಗಿಯೇ ತೀರಬೇಕು ಯಾವ ಕಾರಣದಿಂದಲಾಗಲಿ ಹುಟ್ಟುವ ಶರೀರ ದುರ್ಬಲತೆ, ವಿಷಮ ಶೀತಜ್ವರ ಹೊಟ್ಟೆಯೊಳಗಣ ಗೆಡ್ಡೆ ಮತ್ತು ಮುಖ್ಯವಾಗಿ ತಮ್ಮ ವ್ಯಾಧಿಗೆ ತಕ್ಕ ಶಾಂತಿಯಾದ ಮದ್ದೇ ನಾಸ್ತಿಯೆಂದು ಚಿಂತಿಸುವ ಎಲ್ಲಾ ನಾಸ್ತಿಕರ ಪ್ರಮೇಹ ಸಂಬಂಧವೂ ಉರಿಮೂತ್ರ ಪ್ರಸವಿಸಿದೊಡನೆಯೇ ಹೆಂಗಸರಿಗುಂಟಾಗತಕ್ಕ ಸಕಲ ಬಾಧೆಗಳೂ, ಕೆಮ್ಮು, ಶೀತ, ಉಬ್ಬಸ, ಗೂರಲು, ನಾನಾ ತರವಾದ ಜ್ವರಗಳು, ಮಹಾಮಾರಿಯುಪದ್ರ (ಪ್ಲೇಗ್) ಚುರುಕಿಲ್ಲದ ಮಿದುಡು, ಮಹೋದರರೋಗ, ಕಾಲರಾ, ಅತಿಸಾರ, ಹೊಟ್ಟೆ ಜಾಡಿಸುವಿಕೆಯು, ಅಗ್ನಿ ಮಾಂದ್ಯದಿಂದುಂಟಾಗತಕ್ಕ ಅಜೀರ್ಣ ರೋಗಗಳು, ಮಿತಿ ಮೀರಿ ಸಂಭೋಗ ಮಾಡೋಣದರಿಂದ ಉಂಟಾಗತಕ್ಕ ನಪುಂಸಕತ್ವ, ನರಗಳದಾರ್ಢ್ಯ ಕಡಮೆಯಾಗೋಣ, ತಲೆತಿರುಗುವಿಕೆ ಇವೇ ಮೊದಲಾದ ಅನೇಕ ವ್ಯಾಧಿಗಳಿಗೆ ಇದು ಖಂಡಿತವಾದ ರಾಮಬಾಣವಾಗಿದೆ ಇದರ ಉತ್ಕೃಷ್ಟತೆಯನ್ನು ಅಷ್ಟಿಷ್ಟೆಂದು ಹೇಳು ವುದಕ್ಕಾಗುವುದಿಲ್ಲ ಇದರ ಕ್ರಯ. ತೊಲಾ 1ಕ್ಕೆ 24 ರೂಪಾಯಿ. ಒಂದು ವಾರದ ಉಪಯೋಗಕ್ಕೆ ಸಾಕಾದಷ್ಟು ಔಷದಕ್ಕೆ 1ರೂಪಾಯಿ ವಿ. ಪಿ ಚಾರ್ಜು 5ಆಣೆ. ಅವಶ್ಯ ಇದನ್ನು ಸರ್ವರೂ ತರಿಸಿಕೊಳ್ಳಬೇಕು.

ರಕ್ತಶುದ್ಧಿ:— ರಕ್ತವೇ ಮನುಷ್ಯನಿಗೆ ಮುಖ್ಯ ಪ್ರಾಣಾಧಾರ ಭೂತವೆಂದು ಎಲ್ಲರೂ ಬಲ್ಲರು ರಕ್ತವು ಕೆಟ್ಟು ಹೋದ ಪಕ್ಷದಲ್ಲಿ ಬಾಯಿಯಲ್ಲಿ ಹುಣ್ಣು ಪಣ್ಣುಗಳಲ್ಲಿ ಹುಣ್ಣು, ಕಣ್ಣುನೋವು, ಮೂಗಿನಲ್ಲಿ ಕ್ರಿಮಿ ಸೇರುವಿಕೆ, ಹಲ್ಲಿನಲ್ಲಿ ರಕ್ತ, ಕೀವುಸೋರುವುದು, ತುಟಿಗಳು ಹುಣ್ಣಾಗೋಣ, ಮುಖದ ಮೇಲೆ ಬೊಕ್ಕೆಗಳು, ದೇಹಾದ್ಯಂತವೂ ಗಜ್ಜಿ, ತುರಿ ಮುಂತಾದವು, ವ್ರಣಗಳು, ಚರ್ಮದ ಬಣ್ಣ ಕೆಡೋಣ, ಕೀಲುಗಳು ಸ್ವಾಧೀನವಿಲ್ಲದಿರೋಣ, ಮೇಲೆಲ್ಲಾ ವಿಕಾರವಾಗಿ ಕಪ್ಪು ಚುಕ್ಕೆಗಳುಂಟಾಗುವಿಕೆ, ಚರ್ಮದ ಕಿವಿಗಳು, ಮೂಗು ಪೊದಿರುವಿಕೆ, ಮೈ ಅಶಕ್ತಿಹೊಂದಿ ಬೆಳ್ಳಗಾಗಿರುವಿಕೆ, ಮಹೋದರರೋಗ, ತೊನ್ನು, ಪರೆಯೆದ್ದಿರುವುದು, ಕುಷ್ಟರೋಗ, ಪಡ, ಕಂಕಳು ಮತ್ತು ಮೈಯೆಲ್ಲಾ ದುರ್ವಾಸನೆಯಾಗಿರುವಿಕೆ, ವೀರ್ಯಗುಂದಿರೋಣ, ಉತ್ಸಾಹವಿಲ್ಲದಿರೋಣ ಹಗಲು ರಾತ್ರಿ ಕೆರೆದುಕೊಳ್ಳುವಂತೆ ನವೆಯಾಗುತ್ತಿರೋಣ ಇತ್ಯಾದಿ ನಾನಾ ವಿಧ ಬಾಧೆಗಳು ಜನಿಸುತ್ತವೆ ಇಂಥಾ ಕೆಟ್ಟ ವಿಷವನ್ನು ರಕ್ತದೊಳಗಿನಿಂದ ನಿವಾರಿಸುವುದಕ್ಕೆ ಬಲವತ್ತರವಾದ ಅಮೃತ ಸಂಜೀವಿನಿಯು ನಮ್ಮ ರಕ್ತಶುದ್ಧಿಯೇ ಸರಿಯೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. 20 ದಿವಸಗಳ ಉಪಯೋಗಕ್ಕೆ, ಸಾಕಾಗುವಂತಹ ಪೆಟ್ಟಿಗೆ 1ಕ್ಕೆ 2ರೂಪಾಯಿ. 1ರಿಂದ 2ಪೆಟ್ಟಿಗೆಗಳ ವರೆಗೂ ವಿ. ಪಿ ಚಾರ್ಜು 5ಆಣೆ.

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBAROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ
ಆಯುರ್ವೇದ ಔಷಧಶಾಲೆ,
...

ಲೋಕಪ್ರಸಿದ್ಧವಾದ-ಪಂಜಾ ಸಾಲಾಮಿಸ್ರಿ ಮುರಬ್ಬಾ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ಕ್ರಯವನ್ನು ಮುಟ್ಟದೆ ತಯಾರು ಮಾಡಲ್ಪಟ್ಟಿರುವದು.

- ಪಂಜಾ ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವದರಿಂದ ಪೂರ್ಣ ಗುಣಕೊಡುತ್ತೆ. ೨—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಖಾಯಮ್ಮಾಗಿ ಗುಣಕೊಡುತ್ತೆ.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ ಆಣೆ 6.

ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮುನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣುತ್ತಿರಿ. ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಕೆಗೆ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು; ಹಚ್ಚಿದಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂ. 1; ಅಂಚೆ ಹಾಸಲು 4 ಆಣೆ.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ,
ನಂಬ್ರ 3 ಕರುಕಷ್ಣ ದಿದಿ, ಮಜಾಸು.

ಸನ್ 1915 ಇಸವಿಯ

ಪಾಕೆಟ್ ಡೈರಿ.

ಶ್ರೀ ಸೀತಾ ರಾಘವ

ಪಾಕೆಟ್ ಡೈರಿಗಳು.

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ, ಅನೇಕ ಹೊಸ ಸಂಗತಿಗಳಿವೆ.

ನಂಬ್ರ ೧. ಸಣ್ಣ ಸೈಜು ಸಾದಾ 0—4—0.
,, ೨. ಪೆನ್ಸಿಲ್ ಮುಚ್ಚಳವುಳ್ಳದ್ದು 0—6—0.

ಕೆಲವು ಪ್ರತಿಗಳು ಮಾತ್ರ ಉಳಿದಿವೆ. ಜಾಗ್ರತೆ ಬರದು ತರಿಸಿಕೊಳ್ಳಿ. ನಂ 1 ಮತ್ತು ನಂಬ್ರ 2ನೇ ಡೈರಿಗಳು ಮಾತ್ರವೇ ಇವೆ.

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ.

ಹೆಚ್ಚಾಗಿ ತರಿಸುವವರಿಗೆ ರೂ. ೧ಕ್ಕೆ ೨ ಆಣೆ ಕಮಿಷನ್ ದೊರೆಯುವುದು.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:— ಶ್ರೀ ಸೀತಾರಾಘವ ಕೃಷ್ಣಶಾಲಾ, ಮೈಸೂರು

Printed & Published by V. S. Kamath at the Mangalore Trading Association's Sharada Press, Mangalore

Registered No 498 M

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0

ಪುಸ್ತಕ IX | ಮಂಗಳೂರು, ತಾ 12 ನೇ ಫೆಬ್ರುವರಿ ಶುಕ್ರವಾರ 1915. | ಸಂಚಿಕೆ 7

FOR SALE.

1. A Weaving Industry in a substantial tiled building in complete working order with all appliances, where cotton piece goods of all kinds are made. It is situated in a healthy suburb of Mangalore Town within a mile from the Railway Station. Very suitable for cloth merchants who wish to have their own weaving factory or those who desire to have a Cottage Industry on factory lines.

2. Also a large garden adjoining it with a spacious tiled house and out-houses complete and fully planted with all kinds of fruit trees.

Further particulars may be obtained from the Manager of this paper.

NOTICE.

Notice is hereby given that the receiver appointed by the High Court of Bombay to collect the debts due to the estate of the late Thaker Vallabji Shivji who was carrying on business at Mangalore intends to sell the right of collecting such debts. The debts amount to about Rs 4000 of which over Rs 2000 are in decrees of the Sub Court and District Munsif Court of Mangalore. The decrees and books of account and other papers are open for inspection at the office of Mr. M. N. Prabhu B. A., B. L. Vakil Mangalore. Tenders will be open till the 20th of February after which date no offers will be considered.

Lowji Bhagwan.
Agent of the Receiver Kalyanji Damodar,
NIRESHWALEYA, MANGALORE.

ನೋಟೀಸು.

ಮಂಗಳೂರು ಶಹರು ಬಾದಾದುಖಾನ ದಸ್ತೆಯಲ್ಲಿ ಟೌನು ಪೋಲೀಸ್ ಸ್ಟೇಶನಿನ ಹತ್ತರ ಜವುಳಿ ವ್ಯಾಪಾರ ಮಾಡುತ್ತಿದ್ದ ಇತ್ತಲಾಗಿ ಮೃತಪಟ್ಟ ಬೊಂಬಾಯಿ ಠಾಕರ ವಲ್ಲಭಜೀ ಶಿವಜೀ ಯವರ ಆಸ್ತಿಗೆ ನೇಮಕ ಪಟ್ಟ ರಿಶೀವರ ಕಲ್ಯಾಣಜೀ ದಾಮೋದರರವರ ಪವರ್ ಒಫ್ ಎಟರ್ನಿ ಹೊಂದಿದ ಲವಜೀ ಭಗವಾನನು ತಿಳಿಯಪಡಿಸುವದೇನಂದರೆ:—

ಸದ್ರಿ ಮೃತನ ಆಸ್ತಿಗೆ ಹೊರಗಿನಿಂದ ಒರತಕ್ಕ ಸುಮಾರು 4000 ರೂಪಾಯಿಗಳ ಸಾಲವನ್ನು ಏಲಂ ದ್ವಾರಾ ಮಾರೋಣಾಗುವ್ರದು. ಈ ಸಾಲಗಳ ಪೈಕಿ ಸುಮಾರು 2000 ರೂಪಾಯಿ ಮಟ್ಟಿಗೆ ಡಿಕ್ರಿಗಳು ಇರುತವೆ. ಏಲಮಿಗೆ ನಿಲ್ಲಬೇಕೆಂದು ಅಪೇಕ್ಷೆಯುಳ್ಳವರು ಇದೇ ತಿಂಗಳ ತಾ 20ರ ಒಳಗೆ ಬಂದ ಪಕ್ಷದಲ್ಲಿ ಈ ಸಾಲಗಳ ಲೆಖ್ಖದ ಬೂಕುಗಳನ್ನಾಗಲಿ ವ ಡಿಕ್ರಿಗಳನ್ನಾಗಲಿ ಮಂಗಳೂರು ಶಹರಿನಲ್ಲಿರುವ ವಕೀಲ ಮ. ರಾ. ರಾ. ಎಮ್ ಎನ್. ಪ್ರಭುಗಳವರ ಆಫೀಸಿನಲ್ಲಿ ತೋರಿಸಲಾದೀತು.

ಲವಜಿ ಭಗವಾನ್.
ರಿಸೀವರ ಕಲ್ಯಾಣಜೀ ದಾಮೋದರ ಇವರ ಏಜಂಟ್,
ನಿರೇಶ್ವಾಲ್ಯ, ಮಂಗಳೂರು.

ನೋಟೀಸು.

ಅರಳ ಗ್ರಾಮದ ಮೂಲರಪಟ್ಣ ಹಾಯರ್ ಎಲಿಮೆಂಟರಿ ಶಾಲೆಗೆ ಮೆಟ್ರಿಕ ಟ್ರೈನ್ ಆದ ಒಬ್ಬ ಉಪಾಧ್ಯಾಯನು ಬೇಕಾಗಿರುವನು. ಸಂಬಳವು ಅವರ ಯೋಗ್ಯತೆ ಮೇಲೆ ದರ ತಿಂಗಳಿಗೆ 20ರಿಂದ 25ರ ಮಟ್ಟಿಗೆ ನಿರ್ಣಯಿಸಲಾದೀತು. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು. ಹೆಚ್ಚಿನ ಮಾಹೀತಿ ಮುಖತಾ ವಿವರವಾದೀತು.

ಅರಳ. } ಅರಳ ಶಾಂತಿರಾಜ [illegible]
ತಾ. 8—2—1915 } [illegible]
ಹಾಯರ್ ಎಲಿಮೆಂಟರಿ ಸ್ಕೂಲ್
ಅರಳ, ಬಂಟ್ವಾಳ ಪೋಸ್ಟು.

ನೀಲಿ ಕಪ್ಪು ಶಾಯಿ ಪುಡಿಯು

1 ಪೊಟ್ಣದಲ್ಲಿ 1 ಮಶಿ ಕುಡಿಕೆ ಶಾಯಿಯಾಗುವುದು. ವ್ಯಾಪಾರಿಗಳು ವಿ. ಪಿ. ಮೂಲಕ ತರಿಸಿ ಮಾರುವುದು ವಿಶೇಷ ಲಾಭಕರ! ಸುಲಭ ದರ! 100 ಪೊಟ್ಣಗಳಿಗೆ 6 ಆಣೆ, 300ಕ್ಕೆ 1—0—0, 500ಕ್ಕೆ 1—9—0, 1000ಕ್ಕೆ 2—8—0, 2000ಕ್ಕೆ 4—0—0. ಅಂಚೆ ವೆಚ್ಚ ಮತ್ತು ಪ್ಯಾಕಿಂಗ್ ಬೇರೆ.

ನಮ್ಮ ವಿಳಾಸ:— ವಿ. ಪಿ. ಡಿಪ್ಪೋ,
ಕೋಲಾರ್.

ನೋಟೀಸು.

ಮಂಗಳೂರು ಶಹಾರ ಚುಡ್ಯೆಗಲ್ಲಿಯಲ್ಲಿರುವ ಅಮ್ಮೆಂಬಳ ಮುತ್ತು ಹೆಂಗಸಳಾದ ನಾನು ಈ ಮೂಲಕ ತಿಳಿಯಪಡಿಸುವದೇನಂದರೆ:—

ನನ್ನ ಮಗ ಸುಮಾರು 4½ ವರ್ಷ ಪ್ರಾಯದ ನಾರಾಯಣನು ನನ್ನ ಬಾಬ್ತು ಮನೆ ಒಳಗೆ ಇಟ್ಟ ತೀರ್ವೆ ಪಾವತಿ ವ ಮೂಲಗೇಣಿ ಪಾವತಿ, ಬಾಡಿಗೆ ರಶೀದಿಗಳು, ನನಗೆ ಬರಕೊಟ್ಟ ಬಾಡಿಗೆ ಚೀಟು ವ ಮೂಲಗೇಣಿ ಚೀಟುಗಳು, ನಾನು ದೊರೆಯುವರಿಗೆ ಬರಕೊಟ್ಟ ರಶೀದಿ ಸಮೇತ ಪಡಕೊಂಡ ಡಿಮಾಂಡು ಪ್ರೊ. ನೋಟುಗಳು ವಗೈರೆ ಕೆಲವು ರಿಕಾರ್ಡು ಇರುವ ಕಟ್ಟನ್ನು ನಾನು ಹಾಜರು ಇಲ್ಲದ ಸಮಯ [illegible] ಕೊಂಡುಹೋಗಿ ಬಿಸಾಡಿರುತ್ತಾನೆ. ಅದನ್ನು ಶಿಕ್ಕಿದವರು ತಂದು [illegible] ರೂಪಾಯಿ 4 ಇನಾಮು ಕೊಡುತ್ತೇನೆ.

ತಾ. 4—1—1915. ||| ಈ ಮೂರು ಗೆರೆ ಮುತ್ತು ಹೆಂಗಸಿನ ರುಜು

ಲೋಕಪ್ರಸಿದ್ಧವಾದ ಪಂಜಾ ಸಾಲಾಮಿಸ್ರಿ ಮುರಬ್ಬಾ

ಅರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡೆ, ಶಾಮುಗಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರಿ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ
ಕ್ರಮದಿಂದ ಮುಖ್ಯ ಜನರು ಮಾಡಲ್ಪಟ್ಟಿರುವದು

ಪಂಜಾ ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವದರಿಂದ ಸ್ಪಷ್ಟ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಶಾಶ್ವತವಾದ ಸರಿಯಾದ ಗುಣಕೊಡುತ್ತೆ.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ ಆಣೆ 6.

ಏಜಂಟರು— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮುನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣು

ತ್ತಿರಿ ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ ಈಗ ಮಾರಕೆಗೆ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು, ಹಚ್ಚಿದಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ ಕ್ರಯ ಬುರುಸು ಸಮೇತ ಬಾಟ್ಲಿ ಒಂದಕ್ಕೆ ರೂ. 1; ಅಂಚೆ ಹಾಸಲು 4 ಆಣೆ.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ.
ನಂಬ್ರ 3. ಅರುಕಪ್ಪನ್ ಬೀದಿ, ಮದರಾಸು.

ಸನ್ 1915 ಇಸವಿಯ

ಪಾಕೆಟ್ ಡೈರಿ.

ಶ್ರೀ ಸೀತಾ ರಾಘುವ

ಪಾಕೆಟ್ ಡೈರಿಗಳು.

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ, ಅನೇಕ ಹೊಸ ಸಂಗತಿಗಳಿವೆ.

ನಂಬ್ರ ೧. ಸಣ್ಣ ಸೈಜು ಸಾದಾ 0—4—0.
„ ೨. ಪೆನ್ಸಿಲ್ ಮುಚ್ಚಳವುಳ್ಳದ್ದು 0—6—0.

ಕೆಲವು ಪ್ರತಿಗಳು ಮಾತ್ರ ಉಳಿದಿವೆ. ಜಾಗ್ರತೆ ಬರದು ತರಿಸಿಕೊಳ್ಳಿ. ನಂಬ್ರ 1 ಮತ್ತು ನಂಬ್ರ 2ನೇ ಡೈರಿಗಳು ಮಾತ್ರವೇ ಇವೆ.

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ.

ಹೆಚ್ಚಾಗಿ ತರಿಸುವವರಿಗೆ ರೂ. ೧ಕ್ಕೆ ೨ ಆಣೆ ಕಮಿಷನ್ ದೊರೆಯುವುದು.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:— [illegible]

Printed & Published by V. S. Kamath, at the Mangalore Trading Association's Sharada Press, Mangalore.

Registered No 498 M

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ —ವರುಷ ಒಂದಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0

ಪುಸ್ತಕ IX | ಮಂಗಳೂರು ತಾ. 12 ನೇ ಫೆಬ್ರುವರಿ ಶುಕ್ರವಾರ 191[illegible] | ಸಂಚಿಕೆ 7

FOR SALE.

1. A Weaving Industry in a substantial tiled building in complete working order with all appliances, where cotton piece goods of all kinds are made. It is situated in a healthy suburb of Mangalore Town within a mile from the Railway Station. Very suitable for cloth merchants who wish to have their own weaving factory or those who desire to have a Cottage Industry on factory lines.

2. Also a large garden adjoining it with a spacious tiled house and out houses complete and fully planted with all kinds of fruit trees.

Further particulars may be obtained from the Manager of this paper.

NOTICE.

Notice is hereby given that the receiver appointed by the High Court of Bombay to collect the debts due to the estate of the late Thaker Vallabji Shivji who was carrying on business at Mangalore intends to sell the right of collecting such debts. The debts amount to about Rs 4000 of which over Rs 2000 are in decrees of the Sub Court and District Munsif Court of Mangalore. The decrees and books of account and other papers are open for inspection at the office of Mr. M. N. Prabhu B. A., B. L. Vakil Mangalore. Tenders will be open till the 20th of February after which date no offers will be considered.

Lowji Bhagwan
Agent of the Receiver Kalyanji Damodar,
NIRESHWALEYA, MANGALORE.

ನೋಟೀಸು.

ಮಂಗಳೂರು ಶಹರು ಬಾವಾಬುಡಾನ ರಸ್ತೆಯಲ್ಲಿ ಟಿವನು ಪೋಲೀಸ್ ಸ್ಟೇಶನಿನ ಹತ್ತರ ಜವುಳಿ ವ್ಯಾಪಾರ ಮಾಡುತ್ತಿದ್ದು ಇತ್ತಲಾಗಿ ಮೃತಪಟ್ಟ ಬೊಂಬಾಯಿ ಠಾಕರ ವಲ್ಲಬಜೀ ಶಿವಜೀ ಯವರ ಆಸ್ತಿಗೆ ನೇಮಕ ಪಟ್ಟ ರಿಸೀವರ ಕಲ್ಯಾಣಜೀ ದಾಮೋದರರವರ ಪವರ್ ಒವ್ ಎಟರ್ನಿ ಹೊಂದಿದ ಲವಜೀ ಭಗವಾನನು ತಿಳಿಯಪಡಿಸುವದೇನಂದರೆ —

ಸದ್ರಿ ಮೃತನ ಆಸ್ತಿಗೆ ಹೊರಗಿನಿಂದ ಬರತಕ್ಕ ಸುಮಾರು 4000 ರೂಪಾಯಿಗಳ ಸಾಲವನ್ನು ಏಲಂ ದ್ವಾರಾ ಮಾರೋಣಾಗುವದು. ಈ ಸಾಲಗಳ ಪೈಕಿ ಸುಮಾರು 2000 ರೂಪಾಯಿ ಮಟ್ಟಿಗೆ ಡಿಕ್ರಿಗಳು ಇರುತವೆ. ಏಲಮಿಗೆ ನಿಲ್ಲಬೇಕೆಂದು ಅಪೇಕ್ಷೆಯುಳ್ಳವರು ಇದೇ ತಿಂಗಳ ತಾ 20ರ ಒಳಗೆ ಬಂದ ಪಕ್ಷದಲ್ಲಿ ಈ ಸಾಲಗಳ ಲೆಕ್ಕದ ಬೂಕುಗಳನ್ನಾಗಲಿ ವ ಡಿಕ್ರಿಗಳನ್ನಾಗಲಿ ಮಂಗಳೂರು ಶಹಾರಿನಲ್ಲಿರುವ ವಕೀಲು ಮ ರಾ ರಾ ಎಮ್ ಎನ್ ಪ್ರಭುಗಳವರ ಆಫೀಸಿನಲ್ಲಿ ತೋರಿಸಲಾದೀತು.

ಲವಜಿ ಭಗವಾನ್.
ರಿಸೀವರ ಕಲ್ಯಾಣಜೀ ದಾಮೋದರ ಇವರ ಏಜಂಟ್,
ನಿರೇಶ್ವಾಲ್ಯ, ಮಂಗಳೂರು

ನೋಟೀಸು.

ಅರಳ ಗ್ರಾಮದ ಮೂಲರಪಟ್ಣ ಹಾಯರ್ ಎಲಿಮೆಂಟರಿ ಶಾಲೆಗೆ ಮೆಟ್ರಿಕ್ ಟ್ರೈನ್ ಆದ ಒಬ್ಬ ಉಪಾಧ್ಯಾಯನು ಬೇಕಾಗಿರುವನು. ಸಂಬಳವು ಅವರ ಯೋಗ್ಯತೆ ಮೇಲೆ ದರ ತಿಂಗಳಿಗೆ 20ರಿಂದ 25ರ ಮಟ್ಟಿಗೆ ನಿರ್ಣಯಿಸಲಾದೀತು. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು. ಹೆಚ್ಚಿನ ಮಾಹೀತಿ ಮುಖತಾ ವಿವರವಾದೀತು.

ಅರಳ.
ತಾ 8—2—191[illegible]

ಅರಳ ಶಾಂತಿರಾಜ[illegible]
ಹಾಯರ್ ಎಲಿ[illegible]ಸ್ಕೂಲ್
ಅರಳ, [illegible] ಪೋಸು.

ನೋಟೀಸು.

ಮಂಗಳೂರು ಶಹಾರ ಚುಡ್ಸೆಗಲ್ಲಿಯಲ್ಲಿರುವ ಅಮ್ಮುಂಬಳ ಮುತ್ತು ಹೆಂಗಸಳಾದ ನಾನು ಈ ಮೂಲಕ ತಿಳಿಯಪಡಿಸುವದೇನಂದರೆ:—

ನನ್ನ ಮಗ ಸುಮಾರು 4½ ವರ್ಷ ಪ್ರಾಯದ ನಾರಾಯಣನು ನನ್ನ ಬಾಬ್ತು ಮನೆ ಒಳಗೆ ಇಟ್ಟ ತೀರ್ವೆ ಪಾವತಿ ವ ಮೂಲಗೇಣಿ ಪಾವತಿ, ಬಾಡಿಗೆ ರಶೀದಿಗಳು, ನನಗೆ ಬರಕೊಟ್ಟ ಬಾಡಿಗೆ ಚೀಟು ವ ಚಾಲಗೇಣಿ ಚೀಟುಗಳು, ನಾನು ಬೇರೆಯವರಿಗೆ ಬರಕೊಟ್ಟ ರಶೀದಿ ಸಮೇತ ಪಡಕೊಂಡ ಡಿಮಾಂಡು ಪ್ರೊ. ನೋಟುಗಳು ಮತ್ತೆ ಕೆಲವು ರಿಕಾರ್ಡು ಇರುವ ಕಟ್ಟು 1ನ್ನು ನಾನು ಹಾಜರು ಇಲ್ಲದ ಸಮಯ [illegible] ಕೊಂಡುಹೋಗಿ ಬಿಸಾಡಿರುತ್ತಾನೆ. ಅದನ್ನು ಸಿಕ್ಕಿದವರು ತಂದು [illegible] 4 [illegible] ಕೊಡುತ್ತೇನೆ.

ತಾ 4—1—1915. [illegible]

ನೀಲಿ ಕಪ್ಪು ಶಾಯಿ ಪುಡಿಯು

1 ಪೊಟ್ಟಣದಲ್ಲಿ 1 ಮಶಿ ಕುಡಿಕೆ ಶಾಯಿಯಾಗುವುದು. ವ್ಯಾಪಾರಿಗಳು ವಿ. ಪಿ. ಮೂಲಕ ತರಿಸಿ ಮಾರುವುದು ವಿಶೇಷ ಲಾಭಕರ! ಸುಲಭ ದರ! 100 ಪೊಟ್ಟಣಗಳಿಗೆ 6 ಆಣೆ, 300ಕ್ಕೆ 1—0—0, 500ಕ್ಕೆ 1—9—0, 1000ಕ್ಕೆ 2—8—0, 2000ಕ್ಕೆ 4—0—0. ಅಂಚೆ ವೆಚ್ಚ ಮತ್ತು ಪ್ಯಾಕಿಂಗ್ ಬೇರೆ.

ನಮ್ಮ ವಿಳಾಸ:— ಪಿ. ಪಿ. ಡಿಸೋ;
ಕೋಲಾರ್,

NOTICE.

Stany Brothers,

Candle Garden, Mangalore,

ಬೆಸ್ಮರ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಆಗಸ್ಟ್ ತಿಂಗಳಿನಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ.

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ.

ಕಾಫಿ ಪುಡಿಯು ರಾತ್ತು ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ.

ಇತರ ಅನುಭವಗಳಿಗೆ ನಮ್ಮ ಮೆನೇಜರರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

Piedade Pinto,

Manager.

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯ ಪುಸ್ತಕವು

ಜೀವಿತಕಾಲದ ವರೆಗೂ ನಮ್ಮ ಶರೀರವನ್ನು ರೋಗಗಳು ಹತ್ತರ ಬಾರದೆ ಮಾಡಿಕೊಳ್ಳುವದೇ ನಮ್ಮ ಮೊಟ್ಟಮೊದಲು ಕರ್ತವ್ಯವು. ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನು ಪುನಹ ಹೇಗೆ ಪಡೆಯುವದು ಎಂಬ ವಿಷಯಗಳಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ. ಈ ಗ್ರಂಥವನ್ನು ಪ್ರಜೆಗಳ ಕ್ಷೇಮಾರ್ಥವಾಗಿ ಕೋರಿದವರಿಗೆ ಕ್ರಯವೂ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವದು. ಈ ಪುಸ್ತಕವು ಒಂಭತ್ತು ಭಾಷೆಗಳಲ್ಲಿ ಛಾಪಿಸಲ್ಪಟ್ಟು ಇದುವರೆಗೆ ನಾಲ್ಕು ಲಕ್ಷ ಪ್ರತಿಗಳು ಕಳುಹಿಸಲ್ಪಟ್ಟಿರುವದೇ ಇದು ಎಷ್ಟು ಉಪಯೋಗಕರವಾದದ್ದು ಎಂಬುವದಕ್ಕೆ ಸಾಕ್ಷಿಯಾಗಿರುತ್ತದೆ.

ಕಲಿಯುಗದ ಕಾಮಧೇನು.

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಿಮಾಡಿ ಹೆಚ್ಚಿಮಾಡುತ್ತದೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ ಜೀರ್ಣಶಕ್ತಿಯನ್ನು ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗುವಂತೆ ಮಾಡುವದು. ಅಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1 – 0 – 0.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191. ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಶೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬುದನ್ನು ನೀವು ಅರಿತಿರುವಿರೋ?

ಇನ್ಶೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

			ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	...	ರೂ.	13,329—0—0	22,549—0—0
,, (ವಿವಾಹ)	...	,,	25,670—0—0	38,933—0—0
ಜುಮ್ಲಾ ಕೇಸುಗಳು	..	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	..	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	..	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	...	,,	10,000—0—0	50,000—0—0
(ಜನರಲ್) ರಕ್ಷಿತ ಧನ	.	,,	37,220—0—0	23,778—3—2

ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ. ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಪ್ ಎಶ್ಶೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3. ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ. 3,00,000ಗಿಂತಲೂ ಹೆಚ್ಚಿಗೆ ಭಾದ್ಯತೆಗಳನ್ನು ಕೊಟ್ಟಿದೆ 5. ಫಂಡು 3,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು — ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

"ಬಂಗಾಳೀ" — 14ನೇ ಜನವರಿ 1914 — ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು. ಸುಮಾರು 3 ಲಕ್ಷ ಭಾದ್ಯತ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟುಗಳು ಬೇಕಾಗಿವೆ. ಎಲ್ಲಾ ವಿಧದ ಏಜಂನ್ಸಿ ಶರ್ತಗಳಿಗೆ—

ವಿಳಾಸ:— **ಲಕ್ಷ್ಮಣ ರಾವ್ ಬ್ರದರ್ಸ್,**

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು, ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಕನ್ನಡ ಲಿಪಿಯ ಪುಸ್ತಕಗಳು

ರಾಕ್ಷಸ ಸಂ॥ದ ಉಡುಪಿ ಪಂಚಾಂಗವು.

ಈ ಆರ್ಯಸಿದ್ಧಾಂತ ಪಂಚಾಂಗದಲ್ಲಿ ವಿವಾಹೋಪನಯನಾದಿ ಮುಹೂರ್ತಗಳೇ ಮೊದಲಾದ ಅನೇಕ ಉಪಯುಕ್ತ ವಿಷಯಗಳಿರುವದಲ್ಲದೆ ಸೂರ್ಯಸಿದ್ಧಾಂತ ಪ್ರಕಾರ ತಿಥಿ ನಕ್ಷತ್ರಗಳನ್ನೂ ಕೊಟ್ಟಿದೆ. ಪಂಚಾಂಗವು 60 ಪುಟಗಳಿಂದ ಕೂಡಿರುವದು. ಬೆಲೆ 0—2—6 ಮಾತ್ರ. ವ್ಯಾಪಾರಿಗಳಿಗೆ ಡಿಸ್ಕೌಂಟು ಕೊಡಲಾಗುವದು.

ಋ. ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ. ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಆಶ್ವಲಾಯನ ಸಂಧ್ಯಾವಂದನ (ಮರತ್ರಯದವರಿಗೆ) 3ಆಣೆ; ಯಜುರ್ವೇದ ಸಂಧ್ಯಾವಂದನ (ಮರತ್ರಯದವರಿಗೆ) 2 ಆಣೆ; ಋ. ಬ್ರಹ್ಮಯಜ್ಞ ವೈಶ್ವದೇವ ಔಪಾಸನ 3 ಆಣೆ; ಪ್ರಾತರಾಹ್ನಿಕ ಪದ್ಧತಿ 3 ಆಣೆ; ದೇವಪೂಜಾ ಪದ್ಧತಿ 3 ಆಣೆ; ವಾಯುಸ್ತುತಿ 2 ಆಣೆ; ದ್ವಾದಶಸ್ತೋತ್ರ 2 ಆಣೆ; ವಿಷ್ಣುಸಹಸ್ರನಾಮ ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ; ವಿ. ಸಹಸ್ರಕೃಷ್ಣಾಷ್ಟೋತ್ತರನಾಮಾವಳಿ 0-2-6; ಅಭಿಷೇಕ ಸೂಕ್ತಗಳು 0-2-0; ಶ್ರೀಸೂಕ್ತ ಪುರುಷಸೂಕ್ತ 0-1-0; ಸುಂದರ ಕಾಂಡ ಕಥಾಸಾರಸಂಗ್ರಹ ವಗೈರೆ 0-2-0; ಗಜೇಂದ್ರ ಮೋಕ್ಷ 0-1-6; ಗೋಪಿಕಾಗೀತೆ ವಗೈರೆ 0-1-0; ಪಾಂಡವಗೀತೆ ವಗೈರೆ 0-1-6; ಅಣುಭಾಷ್ಯ ವಗೈರೆ 0-0-9; ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0-2-0; ಪುರಂದರದಾಸರ ಕೀರ್ತನೆಗಳು 0-6-0; ಉದಯರಾಗ 0-4-0; ಹರಿಭಕ್ತಿಸಾರ 0-1-0; ಸ್ವಪ್ನಪದ ಮಧ್ವನಾಮ 0-1-6; ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0. ಉಡುಪಿ ಶ್ರೀ ಕೃಷ್ಣ ಚರಿತ್ರೆ 0-3-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ.

ಪಾವಂಜೆ ಗುರುರಾವ್

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,

ಉಡುಪಿ. ದ. ಕ.

ಅಚ್ಚಿನಲ್ಲಿರುವುದು!　ಅಚ್ಚಿನಲ್ಲಿರುವುದು!

ವೆಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು ಕಾವ್ಯರಚನೆಯು ಬಹು ಮೃದುರವೂ ಶುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪರಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಠಗಳಿಂದ ಕೂಡಿರುವುದು ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ　ಕವಿ ಎಂಡ್ ಸನ್ಸ್,

ಮಂಗಳೂರು

ವಿನೋದ!　ಮಾಸಪತ್ರಿಕೆ!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಪತ್ತೇದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯ, ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳು, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧ ರೂಪಾಯಿ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ.

ವಿಳಾಸ —ಮ್ಯಾನೇಜರ್ "ಚಾತುರ್ಯ"

ಬೆಂಗಳೂರು, ಸಿಟಿ.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಬಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಪುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ ೨—೪—೦ ಆಗಿರುತ್ತದೆ, ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು

ಮ್ಯಾನೇಜರ್,　ಕರ್ನಾಟಕ ವೃತ್ತ ಮತ್ತು ಧನಂಜಯ,

ಮಂಗಳವಾರ ಪೇಟೆ, ಧಾರವಾಡ

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road BOMBAY

ಏಜಂಟರು —ದಿ. ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ನರಳುವದೇತಕ್ಕೆ?

ಮನೆಯಲ್ಲಿಯೇ ವೈದ್ಯನಂತಿರುವ

ಇಕ್ಲಿಪ್ಸ್ ಬಾಮ್ ಎಂಬ ಔಷಧವಿರುವಾಗ?

ಇದು ತಲೆನೋವು, ಸೊಂಟದ ನೋವು, ಉಳುಕು, ಸಂಧಿದೌರ್ಬಲ್ಯ, ವಾತ, ಮೇಹ ವಾತ, ನೆಗಡಿ, ಶ್ಲೇಷ್ಮ, ಗಂಟಲು ನೋವು, ವಾತಶೂಲೆ, ಹಲ್ಲು ನೋವು, ಎದೆನೋವು ಇತ್ಯಾದಿ ನೋವುಗಳನ್ನು ಗುಣಪಡಿಸುವದು! ಚೇಳು, ಜಾಡರ ಹುಳ, ನಾಯಿ ಮೊದಲಾದವುಗಳ ಕಡಿತ ಇದರಿಂದ ಖಂಡಿತವಾಗಿ ಪರಿಹಾರ! ಕುರು, ರಾಜಕುರು, ಹುಣ್ಣು, ದದ್ದು, ಘಾಯ, ಬೆಂಕಿ ತಾಗಿದ ಸುಟ್ಟ ಘಾಯ, ಬಾಬಂತಿಗಳ ಮೊಲೆ ಒಡೆಯುವದು, ಮೊಡವೆ, ಕಾಲು ಒಡೆಯುವದು, ಇತ್ಯಾದಿ ವ್ಯಾಧಿಗಳಿಗೆ ಸಿದ್ಧೌಷಧ!!

ಕ್ರಯ ಕರಡಿಗೆ 1ಕ್ಕೆ 8 ಆಣೆ. ವಿ. ಪಿ. ಬೇರೆ. ಡಜನ್ ಕರಡಿಗೆಗೆ 4—12—0, ವಿ. ಪಿ. ಬೇರೆ.

ಸಿಫಾರಸು ಪತ್ರ:—ಬಿ. ಸಿ ಎಸ್. ಹೆಬ್ರಿ—ನನ್ನ ಸ್ನೇಹಿತರೊಬ್ಬರಿಗೆ ಸೊಂಟ ತೊಡೆ ಕೆಳಕು ಹುಣ್ಣುಗಳಿದ್ದವು ಎಂಥೆಂಥಾ ಔಷಧಿಗಳನ್ನು ಮಾಡಿದರೂ ನಾಲ್ಕು ವರ್ಷಗಳಿಂದಲೂ ಈ ಹುಣ್ಣು ಗುಣವಾಗಲೇ ಇಲ್ಲ. ನಿಮ್ಮಿಂದ ತರಿಸಿ ಒಂದು ಕರಡಿಗೆ ಬಾಮನ್ನು ನಾನು ಪರೀಕ್ಷೆ ಬಗ್ಗೆ ಅವರಿಗೆ ಕೊಟ್ಟಲ್ಲಿ ಆ ಹುಣ್ಣು ಒಂದೇ ಡಬ್ಬಿಯಲ್ಲಿ ಮಾಯವಾಗಿರುವದು. [illegible] ವಿ. ಪಿ ಮೂಲಕ ಕಳುಹಿಸಿರಿ.

☞ ಹೆಚ್ಚಿನ ಔಷಧಿ ಮಾಹಿತಿಗೆ ಅರ್ಧಾಣೆ ಟೀಟು ಇಟ್ಟು ಬರಕೊಳುವದು

ವಿಳಾಸ:—　ಏಜಂಟರು:—

ದಿ ಇಕ್ಲಿಪ್ಸ್ ಏಜನ್ಸಿ,　ಸುಗಂಧವಿಲಾಸ
ಕೊಡಿಯಾಲಬೈಲ್, ಮಂಗಳೂರು.　[illegible]

ಅರ್ಧ ಬೆಲೆ!

ಒಂದು ತಿಂಗಳ ತನಕ ಮಾತ್ರ



ನಮ್ಮ ಸೆಟಿಸ್‌ಫೇಕ್ಷನ್ ಫ್ಲೂಟ್ ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತದಲ್ಲದೆ ಎಲ್ಲಾ ವಾಯುಗುಣಗಳಲ್ಲಿಯೂ ಬಾಳುವಂಥಾದ್ದಾಗಿದೆ ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ ಗಾಳಿ ಬರುವ ಪೆಟ್ಟಿಗೆಯು ಎಂಥಾ ಶೆಖೆಯನ್ನೂ ತಡೆಯುವದು. ಖಾಯಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು

ಕ್ರಯ ಸಿಂಗಲ್ ರೀಡ್ ರೂ 38, 44, 50, ಈಗ ರೂ. 19, 22, 25ಕ್ಕೆ ಕೊಡಲ್ಪಡುವದು ಡಬ್ಬಲ್ ರೀಡ್ ರೂ 60, 70, 80; ಈಗ ರೂ. 30, 35, 40ಕ್ಕೆ ಕೊಡೋಣಾಗುವದು ಆರ್ಡರಿನೊಂದಿಗೆ ರೂ 5 ಅಡ್ವಾನ್ಸ್ ಕಳುಹಿಸಬೇಕಾಗಿದೆ

ವಿಳಾಸ:— ನೇಶನಲ್ ಹಾರ್ಮೋನಿಯಮ್ ಕೊ,
ಸಿಮ್ಲ ಪೋಸ್ಟು (ಬಿ) ಕಲ್ಕತ್ತಾ.

National Harmonium Co,
Simla P. O. (B) CALCUTTA.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ”	225,000—0—0
Subscribed Capital	217,400—0—0	ಪ್ರತಿಜ್ಞಾತ ಮೂಲ ಧನವು ”	217,400—0—0
Paid up Capital	192,400—0—0	ಸಂಗತ ಮೂಲ ಧನವು ”	192,400—0—0
Deposits	455,326—7—10	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	455,326—7—10
Reserve Fund	27,590—12—0	ರಕ್ಷಿತ ಧನವು	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs 21,685/ have been invested in Government Paper of the face value of Rs.22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%

Loans granted on proper securities and pledges

Sealed Parcels for safe custody received on a moderate charge

Canara Bank Ltd.,
Mangalore, 1st. December 1914

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯು ಸೇಕಡಾ 25ಕ್ಕೆ ಸಮಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳ ಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರ ಭದ್ರತಾಪತ್ರಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಸೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮ ವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬ ಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾ ದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂ ಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳ ಲಾದಾವು

"ಕರೆಂಟ್ ಎಕೌಂಟ್" ಎಂಬ ಚಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂ ಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋ ಣಾದೀತು. ಆ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯು ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುತ್ತವೆ ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆ ದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋ ಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ, ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿ ಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂ ದ್ರಮೋಕ್ಷ, ಶ್ರೀಹರಿಯ ಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಕಾರ್ತ್ಯವೀರ್ಯಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿ ದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೆ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸ ಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದು, ನಾರ ದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂ ವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇ ಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆ ಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ಪತ್ರ ವಿಳಾಸ:— ಎಂ. ದೇಶಾಯಿ ಕಂಪೆನಿ.
ಕರ್ನಾಟಕ ಬುಕ್ ಡಿಪೋ, ಬಳ್ಳಾರಿ.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 12ನೇ ಫೆಬ್ರುವರಿ 1915.

ಯುದ್ಧದ ಸ್ಥಿತಿಗತಿ

ಯುದ್ಧವು ಬೇಗನೆ ಮುಗಿಯಬಹುದೆಂಬ ಕೋರಿಕೆಯು ಯುದ್ಧವು ಪ್ರಾರಂಭವಾದೊಡನೆ ತಲೆದೋರಿತ್ತು ಆದರೆ ದಿನೆ ದಿನೆ ಬರುತ್ತಿರುವ ಯುದ್ಧ ಸುದ್ದಿಗಳನ್ನೂ ಕಾಳಗಗಳ ವೃತ್ತಾಂತಗಳನ್ನೂ ಅವುಗಳು ನಡೆಯುವ ವಿಧಾನಗಳನ್ನೂ ಸಂಪೂರ್ಣವಾಗಿ ತಿಳಿದರೆ ಶಾಂತತೆಯು ಎಂದು ನೆಲೆಗೊಳ್ಳಬಹುದೆಂಬುದನ್ನು ಯಾರಿಂದಲೂ ಹೇಳಲು ಸಾಧ್ಯವಿಲ್ಲ ಯುದ್ಧಪ್ರಾರಂಭವಾಗಿ ಈಗ ಆರು ತಿಂಗಳುಗಳ ಕಾಲವು ಕಳೆದು ಹೋಯಿತು ಜಯಾಪಜಯಗಳು ಹೇಗೆಂದು ಇನ್ನೂ ನಿರ್ಣಯಿಸಲಾಗ ವದಿಲ್ಲ ಪೂರ್ವ ಮತ್ತು ಪಶ್ಚಿಮ ರಣರಂಗಗಳಲ್ಲಿ ಮಂಜು ಮತ್ತು ಮಳೆಯು ವಿಶೇಷವಾಗಿ ಬೀಳುತ್ತಿರುವ್ರದರಿಂದ ಕದನಗಳು ಜೋರಿನಲ್ಲಿ ನಡೆಯುವ್ರ ಇನ್ನು ಸ್ವಲ್ಪಕಾಲದಲ್ಲಿ ಬರುವ ಬೇಸಿಗೆಯಲ್ಲಿ ಎರಡು ರಣಾಂಗಣಗಳಲ್ಲಿಯೂ ಯುದ್ಧವು ಬಹಳ ಭೀಕರವಾಗಿ ನಡೆಯುವ ಸಂಭವಗಳು ತೋರುತ್ತಿವೆ ಪಶ್ಚಿಮ ರಣರಂಗಕ್ಕೆ ಬೇಸಿಗೆಯಲ್ಲಿ ನಡೆಯಬಹುದಾದ ಕಾಳಗದ ಬಗ್ಗೆ ಮಿತ್ರಮಂಡಳಿಯವರಲ್ಲಿ ಫ್ರೆಂಚರ ೧೨ ಲಕ್ಷ್ಯ ಸೈನ್ಯವನ್ನೂ ಬ್ರಿಟಿಷರು ೮ ಲಕ್ಷ್ಯ ಸೈನ್ಯವನ್ನೂ ಬೆಲ್ಜಿಯಮ್ಮಿನವರು ೩೦೦ ಸಾವಿರ ಸೇನಿಕರನ್ನೂ ಸಿದ್ಧಗೊಳಿಸಿರುವರೆಂಬುದಾಗಿ ತೋರಿಬರುತ್ತದೆ ಜರ್ಮನರು ೨೦ ಲಕ್ಷ್ಯ ಸೇನೆಯನ್ನು ಪಶ್ಚಿಮ ರಣರಂಗದ ಬಗ್ಗೆ ತಯ್ಯಾರಿಸಿರುವರು ಪ್ರಕೃತ ಬ್ರಿಟಿಷರ ಕಡೆಯಿಂದ ೩ ಲಕ್ಷ್ಯ, ಫ್ರೆಂಚರ ಕಡೆಯಿಂದ ೧೨ ಲಕ್ಷ್ಯವೂ ವೈರಿಗಳ ೧೫ ಲಕ್ಷ್ಯ ಸೇನೆಯೊಂದಿಗೆ ಪಶ್ಚಿಮ ರಣರಂಗದಲ್ಲಿ ಕಾದಾಡುತ್ತಿರುವುದು ಮಿತ್ರರ ಹೊಸ ಸೇನೆಯು ಬಂದು ರಣಾಂಗಣವನ್ನು ಸೇರುವಷ್ಟರಲ್ಲಿ ಅವರ ಸೇನೆಗಳ ಅಧಿಕಾಂಶವನ್ನು ನಾಶಪಡಿಸಿ ಬಿಡಬೇಕೆಂದು ಜರ್ಮನರು ಪ್ರಯತ್ನಿಸುತ್ತಿರುವರು ಆದರೆ ವೈರಿಗಳ ಈ ಸಾಹಸವನ್ನು ಮಿತ್ರಮಂಡಳಿಯವರು ಮುಂಚಿತವಾಗಿಯೇ ತಿಳಕೊಂಡಿರುವುದರಿಂದ ಜರ್ಮನರ ಈ ಉದ್ದೇಶವು ನೆರವೇರುವಂತಿಲ್ಲ

ಬೇಸಿಗೆ ಕಾಲದ ಯುದ್ಧದ ಬಗ್ಗೆ ಪೂರ್ವ ರಣರಂಗದಲ್ಲಿ ಬೇಕಾದ ತಯ್ಯಾರಿಯು ನಡಿಯುತ್ತಿರುವುದು ರುಶ್ಯನರು ೭೫ ಲಕ್ಷ್ಯ ಸೈನ್ಯವನ್ನು ಸಿದ್ಧಪಡಿಸಿರುವರೆಂಬ ವರ್ತಮಾನವಿರುವುದು ಜರ್ಮನರು ಮತ್ತು ಒಸ್ಟ್ರಿಯನರು ಒಟ್ಟು ಕೂಡಿ ೧೨ ಲಕ್ಷ್ಯ ಸೇನಿಕರ ನೂತನ ಸೇನೆಯನ್ನು ತಯಾರಿಸಿರುತ್ತಾರೆ ಪ್ರಕೃತ ಈ ರಣರಂಗದಲ್ಲಿ ಜರ್ಮನ್ ಮತ್ತು ಒಸ್ಟ್ರಿಯನರ ೨೦ ಲಕ್ಷ ಸೇನಿಕರು ರುಶ್ಯಯನರ ೨೫ ಲಕ್ಷ್ಯ ಸೇನಿಕರೊಡನೆ ಕಾದಾಡುತ್ತಿರುವವು ಲಕ್ಷ ಕಟ್ಟಳೆಯ ಪ್ರಾಣಹಾನಿಯು ಇಷ್ಟರಲ್ಲಿಯೇ ನಡೆದಿರುವುದು ಇನ್ನು ಬೇಸಿಗೆಯಲ್ಲಿ ಕೂಡುವ ಕೋಟಿ ಕಟ್ಟಳೆಯ ಸೇನೆಗಳಲ್ಲಿ ಉಂಟಾಗುವ ಪ್ರಾಣಹಾನಿಯು ಅತಿ ಭಯಂಕರವಾಗಿ ಪರಿಣಮಿಸುವುದು

ಸರ್ವಿಯ ಮತ್ತು ತುರ್ಕಿ ಇವುಗಳ ಪ್ರಸ್ತಾಪವೇನು? ಸರ್ವಿಯನರು ಶತ್ರುಗಳನ್ನು ತಮ್ಮ ಪ್ರಧಾನ ಪಟ್ಟಣದಿಂದ ಓಡಿಸಿದ ಬಳಿಕ ಸರ್ವಿಯನರ ಪರಾಕ್ರಮದ ವೃತ್ತಾಂತವೇನೂ ಕೇಳಬರುವದಿಲ್ಲ ರುಶ್ಯಯನರ ಕೂಡೆ ಆಸ್ಟ್ರೀಯನರಿಗೆ ಕಾದಾಡಲು ಇರುವುದರಿಂದ ಸರ್ವಿಯದಲ್ಲಿ ತುಸ ಶಾಂತತೆಯು ಇರುವುದು ತುರ್ಕಿಯ ಅಪಜಯವೆಂತೂ ನಿಶ್ಚಿತವಾಗಿ ಹೋಗಿದೆ, ರುಶ್ಯಯನರು ಇವರನ್ನು ನುಜ್ಜುಗುಜ್ಜಾಗಿ ಮಾಡಿರುವರು ಐಗುಪ್ತವು ಆಂಗ್ಲ ಸೇನಿಕರ ರಕ್ಷೆಯಲ್ಲಿರುವುದರಿಂದ ಐಗುಪ್ತ ಪ್ರಾಂತ್ಯಗಳಲ್ಲಿ ತುರ್ಕರ ಯಾವ ಸಾಹಸವೂ ನಡೆಯುವಂತಿಲ್ಲ. ಸುವೇಜ ಕಾಲುವೆಯ ಕಿನಾರೆಯ ಕೆಲವು ಗ್ರಾಮಗಳಲ್ಲಿ ತುರ್ಕರ ಸೇನೆಯು ನಡೆಸಿದ ಕೆಲವು ನಿಷ್ಪ್ರಯೋಜಕ ಪ್ರಯತ್ನಗಳ ಹೊರತು ತುರ್ಕರ ಸಂಗ್ರಾಮದ ಇತರ ವಾರ್ತೆಯೇನೂ ಇರದು. ನೌಕಾವಳಿ ಕಾಳಗಗಳಲ್ಲಿ ಜರ್ಮನರು ಸೋತುಹೋದ ವೃತ್ತಾಂತವನ್ನು ಇಲ್ಲಿ ಪ್ರತ್ಯೇಕ ಹೇಳಬೇಕೆಂತಿಲ್ಲ ಯುದ್ಧದ ಸ್ಥಿತಿಗತಿಯು ಇನ್ನು ಬೇಗನೆ ಭಯಂಕರವಾಗಿ ಪರಿಣಮಿಸುವ ಸಂಭವಗಳು ಈ ರೀತಿ ಕಾಣಿಸುತ್ತವೆ.

ಸರ್ ನಾರಾಯಣ ಗಣೇಶ ಚಂದಾವರಕಾರರವರು.

ನಿನ್ನೆ ಸಾಯಂಕಾಲದ ಮೈಲ್‌ಭಂಡಿಯಲ್ಲಿ ಇಲ್ಲಿಗೆ ಬಂದು ತಲ್ಪಿರುವ ಸರ್ ನಾರಾಯಣ ಗಣೇಶ ಚಂದಾವರಕಾರರವರ ಪರಿಚಿತಿಯನ್ನು ವಾಚಕರಿಗೆ ಹೇಳಬೇಕೆಂತಿಲ್ಲ. ಕಳೆದ ದಶಂಬರ ತಿಂಗಳಲ್ಲಿ ಮದ್ರಾಸಿನಲ್ಲಿ ಕೂಡಿದ ರಾಷ್ಟ್ರೀಯ ಸಭೆ, ಸಾಮಾಜಿಕ ಪರಿಷದ, ನಿರಾಶ್ರಿತ ಜನಸಹಾಯಕ ಸಂಘದವರ ಸಭೆ, ಮೊದಲಾದ ಸಭೆಗಳ ಕಾರ್ಯಗಳನ್ನು ಪೂರ್ಣಗೊಳಿಸುವದರಲ್ಲಿ ಈ ಮಹನೀಯರು ಭಾಗಿಗಳಾಗಿದ್ದು ನಡಸಿದ ವೃತ್ತಾಂತವನ್ನು ವಾಚಕರು ಈ ಮೊದಲೇ ತಿಳಿದಿರುವರು ನಂತರ ಮಲೆಬಾರಿನ ಕಲ್ಲಿಕೋಟೆ ತಲಚೇರಿಯ ಪ್ರಾಂತ್ಯಗಳಲ್ಲಿ ಪ್ರವಾಸವನ್ನು ಬೆಳಸಿ ಅಲ್ಲಿಯ ವಿದ್ಯಾರ್ಥಿ ವರ್ಗಕ್ಕೂ ಇತರ ದೇಶಬಾಂದವರಿಗೂ ಭಾಷಣಗಳ ಮೂಲಕ ಈಗಿನ ಕಾಲದ ಹಲವು ವಿಷಯಗಳಲ್ಲಿ ಬೇಕಾದ ಅನುಭವವನ್ನೂ ಬುದ್ಧಿವಾದವನ್ನೂ ಹೇಳಿ ಇಲ್ಲಿಗ ಚಿತ್ತೈಸಿರುತ್ತಾರೆ

ಕನ್ನಡ ನಾಡಿನಲ್ಲಿ ಹುಟ್ಟಿ ಬೆಳದು ದೇಶದಲ್ಲೆಲ್ಲಾ ಪ್ರಸಿದ್ಧರಾದ ಈ ಮಹನೀಯರ ಆಗಮನವು ಕನ್ನಡ ನಾಡಿನ ದಕ್ಷಿಣ ಪ್ರಾಂತ್ಯದವರಾದ ನಮ ಗೆಲ್ಲವರಿಗೂ ಗೌರವಾಸ್ಪದವೂ ಸಂತೋಷಕರವೂ ಆಗಿರುವುದು ಉತ್ತರ ಕನ್ನಡದಲ್ಲಿ ಜನಿಸಿ ಮುಂಬಯಿಯಲ್ಲಿ ಹ್ಯಾಕೋರ್ಟ ವಕೀಲರಾಗಿ ವೃತ್ತಿಯನ್ನು ನಡಿಸಿ, ಮುಂಬಯಿ ಸಂಸ್ಥಾನದ ನ್ಯಾಯನಿರ್ಮಾಣ ಸಭೆಯ ಮೆಂಬರರಾದ ಬಳಿಕ ಇವರಿಗೆ ಹ್ಯಾಕೋರ್ಟ ಜಡ್ಜರ ಪದವಿಯು ದೊರಕಿತು ಹ್ಯಾಕೋರ್ಟ ಜಡ್ಜರಾಗಿರುವಾಗಲೇ ಇವರಿಗೆ ಸರ್ ಎಂಬ ಬಿರುದು ಸರಕಾರದವರಿಂದ ಕೊಡೋಣಾಯಿತು ಈ ಹುದ್ದೆಯಿಂದ ನಿವೃತ್ತರಾದ ಬಳಿಕ ತುಸಕಾಲ ಇಂಡೋರು ಸಂಸ್ಥಾನದ ದಿವಾನರಾಗಿದ್ದರು ಮಂಗಳೂರಿಗೆ ಇವರು ಹಿಂದೊಮ್ಮೆ ಗಲ್ಲೀನಲ್ಲಿ ಬಂದಿದ್ದರು ಈ ಪಟ್ಟಣದ ಆಗಿನ ಮತ್ತು ಈಗಿನ ಸ್ಥಿತಿಗಳನ್ನು ಪರ್ಯಾಲೋಚಿಸಿಕೊಂಡು ಮುಂದಿನ ವೃದ್ಧಿಯ ಬಗ್ಗೆ ಬೇಕಾದ ಸೂಚನೆಗಳನ್ನು ಇಲ್ಲಿ ಕೊಡೋಣಾಗುವ ಭಾಷಣಗಳ ಮೂಲಕ ಸರ್ ನಾರಾಯಣ ಚಂದಾವರಕಾರರವರು ಅಪ್ಪಣೆ ಕೊಡಿಸುವರಾಗಿ ಕೋರುತ್ತೇವೆ ವೃದ್ಧಾಪ್ಯದಲ್ಲಿ ಅಧಿಕಾರ ನಿವೃತ್ತರಾದರೂ ಪ್ರಜಾಮನ್ನಣೆಗೆ ಪಾತ್ರರಾಗಿ ದೇಶಸೇವೆಗೆ ಬೇಕಾದಷ್ಟು ಸಮಯವನ್ನೂ ಆರೋಗ್ಯವನ್ನೂ ಸಂಪಾದಿಸಿಕೊಳ್ಳುವ ಸುಕೃತವು ಈಗಿನ ವಿದ್ಯಾವಾನಗಳಲ್ಲಿ ಭಾರತೀಯರಿಗೆ ಪ್ರಾಪ್ತವಾಗ ವಂಥಾದ್ದು ಅಪರೂಪ ಇಂಥಾ ಅಪರೂಪ ಭಾಗ್ಯಶಾಲಿಗಳೂ ಸಾರಸ್ವತ ಯಾ ಗೌಡಸಾರಸ್ವತರಲ್ಲಿ ಪ್ರಸಿದ್ಧ ಸಮಾಜ ಸುದಾರಕರೂ ಆದ ಸರ್ ನಾರಾಯಣ ಗಣೇಶ ಚಂದಾವರಕಾರರವರು ಇನ್ನೂ ಬಹಳ ಕಾಲ ದೇಶಸೇವೆಯನ್ನು ಮಾಡುವಂತೆ ದೀರ್ಘಾಯುಷ್ಯವೂ, ಆರೋಗ್ಯವೂ ಇವರಿಗೆ ಪ್ರಾಪ್ತವಾಗಲೆಂದು ಪ್ರೇಮಪೂರ್ವಕ ಅಪೇಕ್ಷಿಸುತ್ತೇವೆ

ಮುಂಬಯಿಯ ಸೇವಾಸದನ

ಸ್ವದೇಶಾಭಿಮಾನಿಯ ಕಳೆದ ತಿಂಗಳ ತಾ ೩೧ನೆಯ ಸಂಚಿಕೆಯೊಂದರಲ್ಲಿ ಪ್ರಕಟವಾದ 'ವಿವಾಹವಲ್ಲದೆ ಸದ್ಗತಿಗೆ ಬೇರೆ ಯಾವ ಉಪಾಯವೂ ಇರದೇ' ಎಂಬ ಅತ್ರಿಗೋತ್ರಜರ ಲೇಖನದ ತಾತ್ಪರ್ಯವೇನೆಂಬುದನ್ನು ವಾಚಕರು ತಿಳಿದಿರಲು ಸಾಕು ಅತ್ರಿಗೋತ್ರಜರ ಸೂಚನೆಗಳಿಗೆ ತಕ್ಕದಾದಂಥಾ ದೃಷ್ಟಾಂತವೇನೆಂಬುದು ವಾಚಕರಿಗೆ ಮುಂಬಯಿಯ ಸೇವಾಸದನದ ವೃತ್ತಾಂತದಲ್ಲಿ ದೊರಕಬಹುದು ಪಾರ್ಸಿ, ಹಿಂದೂ ಮತ್ತು ಮಹಮ್ಮದೀಯ ಸ್ತ್ರೀಯರಲ್ಲಿ ಕೆಲವರು ಸೇರಿಕೊಂಡು ಈ ಸಂಸ್ಥೆಯ ಮೂಲಕ ತಮ್ಮ ಜೀವಿತವನ್ನು ಗತಿವಿಹೀನರ ಮತ್ತು ಸಂಕಷ್ಟದಲ್ಲಿರುವ ದೇಶಬಂಧುಗಳ ಸೇವೆಯ ಬಗ್ಗೆ ಅರ್ಪಿಸಿರುತ್ತಾರೆ ಇಂಥಾ ಸೇವೆಯನ್ನು ಇವರು ಯಾವ ವಿಧಾನಗಳಲ್ಲಿ ಮಾಡುತ್ತಿರುವರೆಂಬುದನ್ನು ಹಿಂದೆ ಒಂದೆರಡು ಸಲ ವಾಚಕರಿಗೆ ತಿಳಿಯಹೇಳಿರುವೆವು ಕಳೆದ ವರುಷದ ವೃತ್ತಾಂತದಿಂದ ಈ ಸದನದ ಎಲ್ಲಾ ಕೆಲಸಗಳನ್ನು ಸ್ತ್ರೀಯರುಗಳೇ ನಡೆಸುತ್ತಿರುವರೆಂತ ತಿಳಿದುಬರುತ್ತದೆ ಬೆಂಗಳೂರಲ್ಲಿ ಸೇವಾಸದನದ ಶಾಖೆಯೊಂದೂ ಸ್ಥಾಪಿಸೋಣಾಗಿರುವುದು ಸದನದ ಖಜನಾಚೀಯರಾದ ಮಂಗಳೂರಿನ ಸುಶಿಲಾಬಾಯಿಯವರ ಹೊರತು ಮಂಗಳೂರಿನ ಪಾರ್ವತಿಬಾಯಿಯವರು ಈ ಸದನವನ್ನು ಸೇರಿರುವರು ಸದನದ ಪರವಾಗಿ ಸ್ಥಾಪಿಸಲ್ಪಟ್ಟ ಅನಾಥಾಲಯವು, ಮುಂಬಯಿ ಗವರ್ನರರ ಪತ್ನಿಗಳಾದ ಲೇಡಿ ವೆಲ್ಲಿಂಗ್‌ಡನ್‌ರವರಿಂದ ಸಂದರ್ಶಿಸಲ್ಪಟ್ಟಿತು. ಸದನದವರ ಆಸ್ಪತ್ರೆಯೂ ಕೈಗಾರಿಕೆಗಳ ಶಾಲೆಯೂ ವಾಚನ ಮಂದಿರಗಳೂ ಪುಸ್ತಕಾಲಯಗಳೂ ಸದನದಿಂದ ಪ್ರಯೋಜನವನ್ನು ಹೊಂದುವವರಿಂದ ವಿಶೇಷವಾಗಿ ಉಪಯೋಗಿಸಲ್ಪಡುತ್ತಿರುವವು. ಸೇವಾಸದನದ ಸ್ಥಾಪಕರೂ ಪೋಷಕರೂ ಆದ ಬಿ ಎಮ್. ಮಲಬಾರಿಗಳು ಗತಿಸಿಹೋದರೂ ದಯಾರಾಮ ಗಿಡುಮಲ್‌ರವರು ಈ ಸಂಸ್ಥೆಯನ್ನು ಬಿಟ್ಟು ಬಿಟ್ಟರೂ ಸೇವಾಸದನವು ಎಂದಿನಂತೆ ತೃಪ್ತಿಕರವಾದ ರೀತಿಯಲ್ಲಿ ನಡಿಸೋಣಾಗುತ್ತಿರುವದೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ಆದರೆ ದೇಶದ ಆಯಾ ಪ್ರಾಂತ್ಯಗಳ ಜನಸಾಮಾನ್ಯರಲ್ಲಿ ಈ ಸಂಸ್ಥೆಯ ಪರಿಚಿತಿಯು ಇನ್ನೂ ಉಂಟಾಗಿರದು. ಜನಸಾಮಾನ್ಯರಿಂದ ಈ ಸಂಸ್ಥೆಗೆ ದೊರಕಬೇಕಾದ ಪ್ರೋತ್ಸಾಹದ ಪ್ರಸ್ತಾಪವು ಸದನದ ವೃತ್ತಾಂತದಿಂದ ತೋರಿಬರುವದಿಲ್ಲ. ಜನರ ಸಂಕಷ್ಟಗಳನ್ನೂ ಗತಿವಿಹೀನತೆಯನ್ನೂ ನೀಗಲು ಪ್ರಯತ್ನಪಡುವ ಇಂಥಾ ಸಂಸ್ಥೆಗಳ ಪರಿಚಿತಿಯನ್ನು [illegible] ಜನರ ಲಕ್ಷ್ಯಕ್ಕೆ ತರುವುದು ಅಗತ್ಯವಾಗಿದೆ.

ಬುದ್ಧನ ಭೂತದಯೆ.

ಪ್ರಪಂಚದಲ್ಲಿನ ಯಾವುದೊಂದು ಉತ್ಕೃಷ್ಟ ಮತದೊಳಗೂ ಭೂತದಯೆಯೆಂಬುದು ಉತ್ತಮ ಧರ್ಮವಾಗಿ ನಿರೂಪಿಸಲ್ಪಡದೆ ಇಲ್ಲ. ಅಂಥ ಭೂತದಯೆಯ ಪ್ರಭಾವವನ್ನು ಜಗತ್ತಿಗೆಲ್ಲಾ ಮೆರೆಯಿಸಿ ಪ್ರಖ್ಯಾತಿಯನ್ನು ಪಡೆದವರಲ್ಲಿ ಗೌತಮಬುದ್ಧನು ಮೊದಲನೆಯವನೆಂದು ಹೇಳಬಹುದು ಅತನಲ್ಲಿ ಮೂರ್ತಿಮತ್ತಾಗಿದ್ದ ಭೂತದಯೆಯ ಘನತೆಯನ್ನು ವ್ಯಕ್ತಪಡಿಸುವ ವಿಷಯಗಳು ಅವನ ಜೀವಿತ ಚರಿತ್ರದಲ್ಲಿ ಅನಂತವಾಗಿರುವುವು. ಅದರಲ್ಲಿ ಒಂದಾನೊಂದು ಸಂಗತಿಯನ್ನು ಇಲ್ಲಿ ನಿರೂಪಿಸುವೆವು:—ಬುದ್ಧನು ರತ್ನಗಿರಿಯ ಗುಹೆಗಳಲ್ಲಿ ವಾಸಮಾಡಿಕೊಂಡಿದ್ದಾಗ ಒಂದಾನೊಂದು ದಿವಸ ಒಬ್ಬ ಗೊಲ್ಲರ ಹುಡುಗನು ಮೇಕೆಗಳನ್ನು ಅಟ್ಟಿಕೊಂಡು ಆ ಬೆಟ್ಟದ ಪಕ್ಕದಲ್ಲಿ ಹೋಗುತ್ತಿದ್ದನು. ಆ ಮೇಕೆಗಳಲ್ಲಿ ಒಂದು ಮರಿಯ ಕಾಲಿಗೆ ಗಾಯವಾಗಿದ್ದುದರಿಂದ ಅದು ನಡೆಯಲಾರದೆ ಕುಂಟಿಕೊಂಡು ಮೆಲ್ಲಮೆಲ್ಲನೆ ನಡೆಯುತ್ತಿದ್ದಿತು. ಬುದ್ಧನು ಈ ಮರಿಯನ್ನು ನೋಡಿದ ಕೂಡಲೇ ಅವನ ಎದೆಯು ಕರಗಿಹೋಯಿತು. ಕೂಡಲೇ ಅದರ ಹತ್ತಿರಕ್ಕೆ ಹೋಗಿ ಅದನ್ನೆತ್ತಿ ತನ್ನ ಹೆಗಲಮೇಲೇರಿಸಿಕೊಂಡು, ಮುಂದೆ ಸಾಗಿ ಹೋಗಿದ್ದ ಮೇಕೆಗಳ ಮಂದೆಯ ಬಳಿಗೆ ಸೇರಿಕೊಳ್ಳುವುದಕ್ಕಾಗಿ ಬೇಗಬೇಗನೆ ಹೋಗುತ್ತ, ಆ ಗೊಲ್ಲರ ಹುಡುಗನನ್ನು ಕೂಗಿದನು. ಈ ಕೂಗನ್ನು ಕೇಳಿ ಹುಡುಗನು ಹಿಂದಿರುಗಲಾಗಿ, "ಎಲೋ ಹುಡುಗಾ! ಈ ದಿನ ನೀನು ಹೊತ್ತುಮುಳುಗುವುದಕ್ಕೆ ಮೊದಲೇ ಮೇಕೆಗಳ ಮಂದೆಯನ್ನು ಅಟ್ಟಿಕೊಂಡು ಹೋಗುತ್ತೀಯಲ್ಲಾ, ಇದೇಕೆ?" ಎಂದು ಬುದ್ಧನು ಪ್ರಶ್ನೆಮಾಡಲು, ಹುಡುಗನು—"ಅಯ್ಯಾ! ಈ ದಿನ ಮಹಾರಾಜರು ಯಜ್ಞವನ್ನು ಮಾಡುತ್ತಾರೆ; ಅವರಿಗೆ ಒಂದುನೂರು ಮೇಕೆಗಳು ಬೇಕಾಗಿವೆಯಂತೆ; ಅದಕ್ಕಾಗಿ ಬೇಗನೆ ಹೋಗುತ್ತಿದ್ದೇನೆ" ಎಂದು ಉತ್ತರವನ್ನಿತ್ತನು. "ಓಹೋ! ಹಾಗಾದರೆ, ನಾನೂ ಕೂಡ ನಿನ್ನೊಡನೇ ಬರುತ್ತೇನೆ" ಎಂದು ಬುದ್ಧನು ಹೇಳಿ, ಆ ಕುಂಟು ಮರಿಯನ್ನು ತನ್ನ ಹೆಗಲಮೇಲೆ ಹೊತ್ತುಕೊಂಡೇ ಆ ಗೊಲ್ಲನ ಜತೆಯಲ್ಲಿ ತಾನೂ ಹೋಗುತ್ತಿದ್ದನು. ಊರನ್ನು ಪ್ರವೇಶಿಸಿದ ಕೂಡಲೇ ಪ್ರಜೆಗಳು ಗುಂಪುಗುಂಪಾಗಿ ಬಂದು ಬುದ್ಧನನ್ನು ನೋಡುತ್ತಿದ್ದರು. ಮನೋಹರವಾದ ಆಕಾರವನ್ನು ಹೊಂದಿ, ಕಾಷಾಯವಸ್ತ್ರಗಳನ್ನು ಧರಿಸಿರುವ ಆ ಯತಿಯು ಹೆಗಲಮೇಲೆ ಮೇಕೆಯ ಮರಿಯನ್ನು ಹೊತ್ತು ಹೋಗುತ್ತಿರುವುದು ನೋಡುವ ಜನರಿಗೆ ಪರಮಾಶ್ಚರ್ಯಕರವಾಗಿದ್ದಿತು. ಆ ಜನರು ಗುಂಪುಗುಂಪಾಗಿ ತನ್ನ ಹಿಂದೆ ಬರುತ್ತಿದ್ದರೂ ಬುದ್ಧನು ಅದೊಂದನ್ನೂ ಲೆಕ್ಕಿಸದೆ ತನ್ನಪಾಡಿಗೆ ತಾನು ಯಜ್ಞಶಾಲೆಗೆ ಪ್ರವೇಶಿಸಿದನು. ಅಲ್ಲಿ ಬ್ರಾಹ್ಮಣರುಗಳು ವೇದಘೋಷವನ್ನು ಮಾಡುತ್ತಿದ್ದರು ಸೋಮಯಾಜಿಗಳು ಸ್ವಸ್ತಿಗಳನ್ನು ಪಾಡುತ್ತಿದ್ದರು. ಯಜ್ಞಶಾಲೆಯ ಮಧ್ಯಾಂಗಣದಲ್ಲಿದ್ದ ಹೋಮಕುಂಡದಿಂದ ಅಗ್ನಿಜ್ವಾಲೆಗಳು ಪ್ರಸ್ಫುರಿಸುತ್ತಿದ್ದುವು. ಒಬ್ಬ ಋತ್ವಿಕನು ದಪ್ಪನಾದ ಕೊಂಬುಗಳುಳ್ಳ ಬಿಳಿ ಟೊಣ್ಣೆಯಾದ ಹೋತವೊಂದನ್ನು ಹಗ್ಗದಿಂದ ಯೂಪಸ್ತಂಭಕ್ಕೆ ಕಟ್ಟಹಾಕುತ್ತಿದ್ದನು. ಕಟ್ಟಿದ ಬಳಿಕ, "ಇದು ಬಿಂಬಸಾರ ರಾಜನ ಯಜ್ಞದಲ್ಲಿ ಮುಖ್ಯವಾದುದು, ಇದರ ರಕ್ತವು ಹೋಮಕುಂಡದಲ್ಲಿ ಹೋಮ ಮಾಡಲ್ಪಡುವುದು. ಮಹಾರಾಜನು ಮಾಡಿದ ಪಾಪವನ್ನೆಲ್ಲಾ ಈ ಹೋತಿನ ಮೇಲೆ ಆವಾಹಿಸಿರುವೆವು. ಅಗ್ನಿಯಲ್ಲಿ ಪಕ್ವವಾದ ಇದರ ಮಾಂಸದ ಸುವಾಸನೆಯನ್ನು ನೀವು ಆಘ್ರಾಣಿಸಿ ತೃಪ್ತಿಗೊಳ್ಳಿರಿ" ಎಂದು ದೇವತೆಗಳನ್ನು ಆಹ್ವಾನಿಸಿ ಹೇಳಿ, ತನ್ನ ಕೈಗೆ ಕತ್ತಿಯನ್ನು ತೆಗೆದುಕೊಂಡು ಆ ಪಶುವನ್ನು ಕೊಲ್ಲುವುದಕ್ಕೆ ಯತ್ನಿಸಿದನು. ಆಗ ದಯಾರ್ದ್ರಹೃದಯನಾದ ಆ ಬುದ್ಧನ ಮನಸ್ಸು ಹೇಗಿರಬಹುದು! ಅವನು ಪಟಪಟನೆ ಕಣ್ಣೀರು ಸುರಿಸುತ್ತ, "ಅಯ್ಯಾ! ಅದನ್ನು ಕೊಲ್ಲಬೇಡ" ಎಂದು ಕೂಗಿಕೊಳ್ಳುತ್ತ, ಬಿಂಬಸಾರನ ಕಡೆಗೆ ತಿರುಗಿ, "ಪ್ರಭುವೇ, ಅದನ್ನು ಕೊಲ್ಲಿಸಬೇಡ, ಕೊಲ್ಲಿಸಬೇಡ" ಎಂದು ಗಟ್ಟಿಯಾಗಿ ಕೂಗಿ, ಬೇಡಿಕೊಂಡನು. ಪಶುವಿನ ಕಡೆಗೇ ಇದ್ದ ಋತ್ವಿಕ್ಕರದೃಷ್ಟಿಯೆಲ್ಲಾ ಈ ಸದ್ದನ್ನು ಕೇಳಿದ ಕೂಡಲೇ ಬೇರೆಗಾಗಿ ಸುತ್ತ ಪ್ರಸರಿಸಿತು. ಆಗ ಬುದ್ಧನು ತನ್ನ ಸ್ವಭಾವಸಿದ್ಧವಾದ ಮೃದುವಚನದಿಂದಲೂ ಶಾಂತಗಂಭೀರ ದಯಾಮಯಮುಖಭಾವದಿಂದಲೂ ಅವರೆಲ್ಲರನ್ನೂ ಕುರಿತು ಹೀಗೆ ಉಪದೇಶಮಾಡಿದನು—

ಪ್ರಾಣಮಂ ಹತಿಸುವುದು ಬಹುಸುಲಭಮೆಲ್ಲರ್ಗೆ ।
ಪ್ರಾಣಮಂ ಕುಡುವುದೊಂದು ಮಸಾಧ್ಯಮೆಮಗೆ ॥
ಪ್ರಾಣರಕ್ಷಣೆಕಾಗಿ ಪಾಟುಪಡದಿರ್ಪವರು ।
ಪ್ರಾಣಿಗಳಮೇಲೆ ದಯೆಯುಳ್ಳರಕಲೆ ॥

ಗೌತಮಬುದ್ಧನು ಸೂತ್ರರೂಪವಾಗಿ ಮಾಡಿದ ಈ ಹಿತೋಪದೇಶದಿಂದ ಋತ್ವಿಕ್ಕುಗಳ ಮನಸ್ಸೆಲ್ಲಾ ತಿರುಗಿ ಹೋಯಿತು (ಏಕೆಂದರೆ—"ತಿಳಿದಜನವನರಿತು ಬುದಿಂದಂ ತಿಳಿಯಿಸಲಳವೇ") ಎಂದು ನೀತಿಯಿರುವುದಿಲ್ಲವೆ? ಅದರಿಂದ ಅವರು ಈ ಹಿತೋಪದೇಶದಿಂದ ಥಟ್ಟನೆ ಎಚ್ಚತ್ತರು. ಬಿಂಬಸಾರನೃಪನಾದರೊ ಕರುಣಾರ್ದ್ರಹೃದಯನಾಗಿ ಹೋದನು. ಆ ಕೂಡಲೇ ತಾನು ಮಾಡಬೇಕೆಂದಿದ್ದ ಯಜ್ಞವನ್ನು ಅಲ್ಲಿಗೇ ನಿಲ್ಲಿಸಿಬಿಟ್ಟು, ಗೌತಮಬುದ್ಧನಿಂದ ಇನ್ನೂ ಘನತರವಾದ ಉಪದೇಶವನ್ನು ಪಡೆದು, ಇನ್ನು ಮುಂದೆ ತನ್ನ ದೇಶದಲ್ಲಿನ ಪ್ರಜೆಗಳಾರೂ ಪ್ರಾಣಿಹಿಂಸೆಯನ್ನು ಮಾಡಕೂಡದೆಂದೂ ಮಾಂಸವನ್ನು ತಿನ್ನ ಕೂಡದೆಂದೂ, ಭೂತದಯೆಯು ಪ್ರತಿಯೊಬ್ಬರಿಗೂ ಮುಖ್ಯವಾಗಿ ಆಚರಿಸಲ್ಪಡತಕ್ಕ ಧರ್ಮವೆಂದೂ ಶಾಸನವನ್ನು ಪ್ರಕಟಿಸಿದನು. ಆ ವಾಕ್ಯಗಳನ್ನು ಶಿಲೆಗಳಮೇಲೆ ಕೆತ್ತಿಸಿ ದೇಶದಲ್ಲಿ ಅಲ್ಲಲ್ಲಿಗೆ ಸ್ಥಾಪಿಸಿದನು. ಕಾಲುಗಾಯಗೊಂಡ ಮೇಕೆಮರಿಯಮೇಲೆ ದಯೆಯನ್ನು ತೋರಿಸುವುದಕ್ಕೆ ಪ್ರವೃತ್ತನಾದ ಗೌತಮಬುದ್ಧನು ಕಡೆಗೆ ಹೀಗೆ ಬಿಂಬಸಾರನ ರಾಜ್ಯದಲ್ಲೆಲ್ಲಾ ಪ್ರಾಣಿಹಿಂಸೆಯನ್ನು ತಪ್ಪಿಸಿ ಭೂತದಯೆಯು ತಾನೇತಾನಾಗಿ ಮೆರೆಯುವಂತೆ ಮಾಡಲು ಕಾರಣಭೂತನಾದನು. ಆ ಬುದ್ಧ ಮಹನೀಯನು ಎಂತಹ ಧನ್ಯನು!!

ವೈ. ಸ್ವಾ.

ಜಪಾನರು ಜರ್ಮನರಿಗೆ ಹಾಕಿಕೊಟ್ಟ ಮೇಲ್ಪಂಕ್ತಿ.

ಜರ್ಮನರು ಪಶ್ಚಿಮ ರಣರಂಗದಲ್ಲಿ ಅಂದರೆ ಬೆಲ್ಜಿಯಮಿನಲ್ಲಿ ಬೆಲ್ಜಿಯನರನ್ನು ನಡಿಸುತ್ತಿರುವ ರೀತಿಯನ್ನೂ ಜಪಾನರು ತಮ್ಮ ದೇಶದಲ್ಲಿ ಮತ್ತು ತಿಂಗ್ಸ್‌ಟಾವೋದಲ್ಲಿ ಜರ್ಮನರನ್ನು ನಡಿಸಿದ ರೀತಿಯನ್ನೂ ಹೋಲಿಸಿ "ಡೈಲಿ ನ್ಯೂಸ್" ಎಂಬ ಪತ್ರಿಕೆಗೆ ಒಬ್ಬ ಬಾತ್ಮಿದಾರರು ಬರೆದ ಲೇಖನದಿಂದ ಜಪಾನರ ಸದ್ಗುಣಗಳು ತೋರಿ ಬರುವವು. ಜರ್ಮನರು ಯುದ್ಧ ಪ್ರಾರಂಭಿಸಿದಂದಿನಿಂದ ಬೆಲ್ಜಿಯನರನ್ನು ನಡಿಸುತ್ತಿರುವ ಅಮಾನುಷ ರೀತಿಯು ವಾಚಕರೆಲ್ಲರಿಗೆ ಗೊತ್ತೇ ಇರುವದರಿಂದ ಇಲ್ಲಿ ಪ್ರತ್ಯೇಕ ಪುನಃ ಅವನ್ನು ಬರೆಯುವದು ಅವಶ್ಯವಿರದು.

ಜಪಾನಿಯು ಜರ್ಮನಿಗೆ ತನ್ನ ಕಡೆಯ ಪತ್ರವನ್ನು ಕಳುಹಿಸಿದ ಕೂಡಲೇ ಜಪಾನ್ ವಿದೇಶಿ ಮಂತ್ರಿಯಾದ ಬೆರನ್ ಕಾಟೋರವರು ಬಹಿರಂಗವಾಗಿ ಜಪಾನಿನಲ್ಲಿ ವ್ಯಾಪಾರ ಮಾಡುತ್ತಿದ್ದ ಜರ್ಮನರನ್ನು ತನ್ನಲ್ಲಿಗೆ ಕರೆಯಿಸಿ ಹಿಂದಿನಂತೆಯೇ ತಮ್ಮ ಕೆಲಸಗಳನ್ನು ಸಾಗಿಸಿಕೊಂಡಿರ ಬಹುದೆಂತ ತಿಳಿಸಿದರು. ಜರ್ಮನ್ ಪ್ರಜೆಗಳಿಗೆ ಶತ್ರು ಭಾವವನ್ನು ತೋರಿಸಕೂಡದೆಂದು ಅದೇ ಸಮಯ ಪ್ರತಿ ಒಬ್ಬ ಜಪಾನನಿಗೂ ತಿಳಿಸಿದರು. ಮಂತ್ರಿ ಒಜಾಕಿಯವರು ಜಾಪಾನಿನಲ್ಲಿರುವ ಜರ್ಮನರ ದೇಹಕ್ಕಾಗಲೀ ಆಸ್ತಿಗಾಗಲೀ ಯಾವದೊಂದು ನಷ್ಟ ಕಷ್ಟ ಬಾರದಂತೆ ಪೂರ್ಣ ಜಾಗ್ರತೆ ತಕೊಳ್ಳಲ್ಪಡುವದೆಂದು ತಿಳಿಸಿದರು. ಪೋಲೀಸ್ ಮೇಲಾಧಿಕಾರಿಗಳು ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲಿ ಜರ್ಮನರು ಏನೊಂದು ತಡೆಬಡೆಯಿಲ್ಲದೆ ನಡೆಯುವಂತೆ ಏರ್ಪಾಡು ಮಾಡಿದರು. ಪ್ರಧಾನ ಮಂತ್ರಿಯಾಗಿರುವ ಒಕೂಮರವರು ಸಹಾ ಪ್ರತಿ ಒಂದು ಸಂಸ್ಥಾನದ ಗವರ್ನರರಿಗೆ ಸಂದೇಶವನ್ನು ಕಳುಹಿಸಿ ಜರ್ಮನ ಪ್ರಜೆಗಳು ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕೆಂದು ಅಪ್ಪಣೆ ಮಾಡಿದರು. ಜಪಾನನ್ನು ಬಿಟ್ಟು ಹೋಗಲು ಮನಸ್ಸುಳ್ಳವರು ಹೋಗ ಬಹುದೆಂದೂ ಜಪಾನಿಗೆ ಬರಲಿಚ್ಛಿಸುವವರು ಬರಬಹುದೆಂದೂ ಆಜ್ಞೆ ಮಾಡಿದರು. ಮಿಲಿಟರಿ ಮತ್ತು ನೌಕಾವಳಿ ಸಂಬಂಧವಾಗಿ ಕೆಲವು ಜರ್ಮನರಿಗೆ ಮಾತ್ರ ಸ್ವತಂತ್ರವು ಕೊಡೋಣಾಗಲಿಲ್ಲ.

ಕಾನೂನಿಗೆ ವಿರೋಧವಾಗಿ ನಡೆಯದ ಪ್ರತಿ ಒಬ್ಬ ಜರ್ಮನನು ಸ್ವತಂತ್ರನಾಗಿರುವಂತೆ ಸರಕಾರದವರು ಆದಷ್ಟು ಪ್ರಯತ್ನ ತಕೊಳ್ಳಬೇಕು ಎಂಬದಾಗಿ ಪ್ರಧಾನ ಮಂತ್ರಿವರು ಕಟ್ಟುಮಾಡಿ ಪ್ರತಿ ಒಬ್ಬ ಜಪಾನನು ಈ ಆಜ್ಞೆಯನ್ನು ಮನದಲ್ಲಿಟ್ಟು ಜಾಪಾನಿನಲ್ಲಿರುವ ಜರ್ಮನರು ಸ್ವತಂತ್ರರಾಗಿ ನಡೆಯುವಂತೆ ನೋಡಿಕೊಳ್ಳಬೇಕೆಂದು ಜನಸಮುದಾಯವನ್ನು ಕೇಳಿಕೊಂಡರು.

ವಿದ್ಯಾಖಾತೆಯ ಮಂತ್ರಿಯವರೂ ಕಾಲೇಜುಗಳ ಅಧಿಕಾರಿಗಳಿಗೆ ಒಂದು ಸರ್ಕಲಾರನ್ನು ಕಳುಹಿಸಿ ಜರ್ಮನರಿಗೆ ವಿರೋಧವಾಗಿ ನಡೆಯದ ಹಾಗೆ ವಿದ್ಯಾರ್ಥಿಗಳನ್ನು ಎಚ್ಚರಿಸಬೇಕೆಂದು ಆಜ್ಞಾಪಿಸಿದರು.

ಆಯಾ ಇಲಾಖಾ ಮೇಲಾಧಿಕಾರಿಗಳು ಕಳುಹಿಸಿದ ಆಜ್ಞೆಗಳನ್ನು ನೋಡುವಾಗ್ಗೆ ಬೆರನ್ ಕಾಟೋರವರು ಪ್ರಾರಂಭದಲ್ಲಿ ಜರ್ಮನರಿಗೆ ಕೊಟ್ಟ ಮಾತು ಬಿದ್ದುಹೋಗಲಿಲ್ಲ ಎಂಬದು ತಿಳಿದು ಬರುತ್ತದೆ. ಜಪಾನಿನಲ್ಲಿರುವ ಜರ್ಮನರು ಇಂಗ್ಲಾಂಡಿನಲ್ಲಿರುವ ಜರ್ಮನರಂತಿರದೆ ಆಯಾ ರಾಷ್ಟ್ರೀಯರುಗಳು ಒಟ್ಟು ಕೂಡಿ ಉಂಟಾದ ಜರ್ಮನರಾಗಿರುವರು. ಜಪಾನ್ ಅಧಿಕಾರಿಗಳಿಂದ ಈ ಜರ್ಮನರಿಗೆ ಕೊಡೋಣಾದ ಅಭಯ ಮಾತುಗಳಲ್ಲಿ ಪ್ರತಿಯೊಂದೂ ಈಡೇರಿದವು. ಆದರೆ ಯೊಕೊಹಾಮದಲ್ಲಿ ಇಂಗ್ಲಿಷ್ ಭಾಷಾ ವರ್ತಮಾನ ಪತ್ರಿಕೆಯ ಸಂಪಾದಕನಾದ ಒಬ್ಬ ಜರ್ಮನನು ತನ್ನ ಪತ್ರಿಕೆಯಲ್ಲಿ

..ಪಾನರಿಗೆ ವಿರೋಧವಾದ ಲೇಖನವನ್ನು ಬರೆದದ್ದರಿಂದ ಅವನನ್ನು ಮಾತ್ರ ನಿರ್ವಾಹ ವಿಲ್ಲದೆ ದೇಶದಿಂದ ಹೊರಡಿಸಬೇಕಾಯಿತು

ಜಪಾನಿನ ಟೋಕಿಯೋ ಮತ್ತು ಬಂದರಗಳಲ್ಲಿರುವ ಜರ್ಮನ ಕಂಪೆನಿಗಳು ಹಿಂದಿನಂತೆಯೇ ಸರಾಗವಾಗಿ ವ್ಯಾಪಾರ ನಡಿಸುತ್ತಲಿವೆ. ಕೋರ್ಟು ಕಚೇರಿಗಳಲ್ಲಿಯೂ ಜರ್ಮನರ ದಾವೆಗಳು ಇತ್ಯರ್ಥವಾಗುತ್ತಿವೆ ಈಚೆಗೆ ಒಂದು ಜರ್ಮನ್ ಕಂಪೆನಿಯು ಜಾಪಾನ್ ಕಂಪೆನಿಯ ಮೇಲೆ ತಂದ ದಾವೆಯು ಜರ್ಮನ ಕಂಪೆನಿಗೆ ಗುಣವಾಗಿಯೇ ತೀರಿತು. ಬೇಂಕಿನಲ್ಲಿ ಕೂಡಾ ಜರ್ಮನರ ಲೇವಾದೇವಿ ನಡೆಯುತ್ತಿದೆ

ಸರಕಾರ ಕೆಲಸದಲ್ಲಿರುವ ಜರ್ಮನರೂ, ಜರ್ಮನ ಪ್ರೊಫೆಸರರೂ, ಉಪಾಧ್ಯಾಯರೂ, ಹಿಂದಿನಂತೆಯೇ ಕೆಲಸದಲ್ಲಿರ ವರು. ಆಯಾ ಇಲಾಖೆಯ, ಕೊಲೇಜುಗಳ ಅಧಿಕಾರಿಗಳೂ,, ವಿದ್ಯಾರ್ಥಿಗಳೂ, ಸಹಉದ್ಯೋಗಿಗಳೂ ಹಿಂದಿನಂತೆಯೇ ಈ ಜರ್ಮನರನ್ನು ಮಾನಿಸುತ್ತಿರುವರು. ಪೋಲೀಸಿನವರಿಗೆ ತಮ್ಮನ್ನು ತೋರಿಸಿಕೊಳ್ಳುವ, ಮನೆಯಾ ಊರು ಬಿಟ್ಟು ಹೋಗಲು ಅಪ್ಪಣೆಕೇಳುವ ಅಗತ್ಯವೇ ಈ ಜರ್ಮನರಿಗಿರದು

ಯುದ್ಧ ಶೆರೆಯಾಗಿ ಹಿಡಿಯಲ್ಪಟ್ಟ ಜರ್ಮನರನ್ನು ಕೂಡಾ ಜಪಾನರು ಬಹು ಮನ್ನಣೆಯಿಂದ ಕಾಣುತ್ತಿರುವರು ಬುದ್ಧ ಮತಸ್ಥರ ದೇವಸ್ಥಾನಗಳಲ್ಲಿ ಇವರಿಗೆ ಸ್ಥಳವನ್ನು ಒದಗಿಸಿಕೊಟ್ಟಿರುವರು. ಆಪೀಸರರಿಗೆ ಹೊರಗೆ ಹೋಗಿ ತಿರುಗಾಡಲು ಅಪ್ಪಣೆ ಇದೆ. ಇವರು ಕಾವಲು ಇಲ್ಲದೆಯೇ ತಮ್ಮ ಸ್ನೇಹಿತರನ್ನು ನೋಡಬಹುದಾಗಿದೆ. ವಿದೇಶಿ ಆಹಾರಗಳು ಅವರಿಗೆ ಒದಗಿಸಲ್ಪಡುತ್ತಿವೆ

ತಿಂಗ್ಸ್‌ಟಾವೋ ಜಪಾನರ ವಶವಾದಾಗ ಅಲ್ಲಿಯ ಜರ್ಮನ ಗವರ್ನರರಾದ ಮೆಯರ್ ವಾಲ್ಡೆಕರ ಮತ್ತು ಅವರ ಪರಿವಾರದ ಖಡ್ಗಗಳನ್ನು ಜಪಾನರು ತೆಗೆದುಕೊಳ್ಳಲಿಲ್ಲ ಜಪಾನ್ ಸೇನೆಯು ತ್ಸಿಂಗ್‌ಟಾವೋಕ್ಕೆ ಪ್ರಥಮ ಸಾರಿ ಪ್ರವೇಶಿಸುವಾಗ ಅದರ ಗವರ್ನರರು ತಾವು ವಶವಾಗಿದ್ದೇವೆಂಬದಾಗಿ ತಿಳಿಸುವ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಲು ತಯಾರಿಸಿದ್ದರು. ಆದರೆ ಜಪಾನ್ ಜನರಲ್ ಕಾಮಿಯೋರವರು ಇದು ಅನಾವಶ್ಯವಾದುದರಿಂದ ಬೇಡವೆಂದು ಹೇಳಿದರು. ಜರ್ಮನ ಆಸ್ಪತ್ರಿಗೆ ಜಪಾನರ ಒಂದು ಗುಂಡು ಬಿದ್ದಾಗ ಜರ್ಮನರು ಜಪಾನ್ ನೌಕಾವಳಿ ಎಡ್ಮಿರಲರಿಗೆ ಇದನ್ನು ತಿಳಿಸಿದಾಕ್ಷಣ ಜಪಾನರು ಗುಂಡು ಹೊಡೆಯುವುದನ್ನು ನಿಲ್ಲಿಸಿದರು.

ತಿಂಗ್ಸ್‌ಟಾವೋ ಜಪಾನರ ಕೈವಶವಾದ ಸಂತೋಷಸೂಚಕ ಉತ್ಸವವು ಜಪಾನಿನಲ್ಲಿ ನಡೆದಾಗ ಜರ್ಮನರು ವಾಸವಾಗಿದ್ದ ದಾರಿಗಳಲ್ಲಿ ಜಪಾನರು ದೀಪಾವಳಿ ಮೆರವಣಿಗೆಯನ್ನು ಮಾಡಿದರೆ ಜರ್ಮನರ ಮನಸ್ಸಿಗೆ ನೋವಾದೀತೆಂತ ಭಾವಿಸಿ ಅಂಥಾ ಸ್ಥಳಗಳಲ್ಲಿ ಮೆರವಣಿಗೆ ಮಾಡಲಿಲ್ಲ

ಜರ್ಮನಿಯು ಬೆಲ್ಜಿಯಮಿನಲ್ಲಿ ನಡಿಸುತ್ತಿರುವ ಕ್ರೂರಕೃತ್ಯಗಳು ಜಪಾನ್ ಸರಕಾರಕ್ಕೂ ಜನರಿಗೂ ಚೆನ್ನಾಗಿ ಗೊತ್ತಿದ್ದರೂ ಮುಯ್ಯಿಗೆ ಮುಯ್ಯಿ ಕೊಡುವ ಆಲೋಚನೆಯು ಜಪಾನರಲ್ಲಿ ಇಲ್ಲದೆ ಇದ್ದುದ್ದರಿಂದ ಜಪಾನರು ಸರ್ವ ಜನಾಂಗಗಳ ಹೊಗಳಿಕೆಗೆ ಪಾತ್ರರಾಗಿರುವರು

ವಿವಾಹವೂ ಇದರಿಂದ ಸಮಾಜಕ್ಕುಂಟಾಗುವ ಸಾಧಕಬಾಧಕಗಳೂ.

ಮನೆ ಮನೆಗಳು ಸೇರಿ ಗ್ರಾಮ, ಗ್ರಾಮ ಗ್ರಾಮಗಳು ಸೇರಿ ಪಟ್ಟಣ, ಪಟ್ಟಣಗಳು ಸೇರಿ ಹೇಗೆ ಊರುಗಳಾಗುತ್ತವೋ ಹಾಗೆಯೇ ವ್ಯಕ್ತಿ ವ್ಯಕ್ತಿಗಳು ಸೇರಿ ಕುಟುಂಬ, ಕುಟುಂಬ ಕುಟುಂಬಗಳು ಸೇರಿ ಸಮಾಜಗಳಾಗುತ್ತವೆ. ಒಂದು ಗ್ರಾಮದಲ್ಲಿರುವ ಮನೆಗಳು ಒಳ್ಳೇ ಸ್ಥಿತಿಯಲ್ಲಿಲ್ಲದಿದ್ದರೆ ಆ ಗ್ರಾಮವು ಉತ್ತಮ ಗ್ರಾಮವೆಂದೆಣಿಸಲ್ಪಡದು ಹ್ಯಾಗೋ ಹಾಗೆ ಗಂಡಸಿಗೆ ಅರ್ಧಾಂಗದಂತಿರುವ ಹೆಂಗಸು ಒಳ್ಳೇಯವಳಾಗಿರದಿದ್ದರೆ ಆ ಕುಟುಂಬವು ಉತ್ತಮ ಕುಟುಂಬವೆಂದೆಣಿಸಲ್ಪಡದು. ಉತ್ತಮ ಕುಟುಂಬವಿಲ್ಲದಿದ್ದರೆ ಉತ್ತಮ ಸಮಾಜವು ಇರಲಾರದು. ಆದುದರಿಂದ ಪ್ರತಿ ಒಬ್ಬನು ತನ್ನ ಅರ್ಧಾಂಗಿಯನ್ನು ಆರಿಸುವಾಗ ಬಹು ಹೆಚ್ಚಿನ ಜಾಗ್ರತೆ ತಕ್ಕೊಳ್ಳುವದು ಅತ್ಯಗತ್ಯವಾಗಿದೆ. ಅದೇ ರೀತಿ ಹುಡುಗಿಗೆ ಹುಡುಗನನ್ನು ಆರಿಸುವಾಗ ಹುಡುಗಿಯ ಹೆತ್ತವರೂ ಬಹು ಹೆಚ್ಚಿನ ಮುಂಜಾಗ್ರತೆಯುಳ್ಳವರಾಗಿರಬೇಕಾಗಿದೆ. ಆದರೆ ಇಂಥಾ ವಿವಾಹ ಸಂಬಂಧದಿಂದ ಕುಟುಂಬಗಳುಂಟಾಗಿ, ಸಮಾಜದ ಏಳಿಗೆಯು ಇಂಥಾ ಕುಟುಂಬಗಳ ಮೇಲೆ ಹೊಂದಿಕೊಂಡಿರುತ್ತದೆಂಬ ಭಾವನೆಯು ನಮ್ಮ ಜನರಲ್ಲಿ ಕಡಿಮೆಯಾಗುತ್ತಾ ಬಂದಿರುವದರಿಂದ ಹುಡುಗನಿಗೆ ಹುಡುಗಿಯನ್ನು ಯಾ ಹುಡುಗಿಗೆ ಹುಡುಗನನ್ನು ಆರಿಸುವಾಗ ಮುನ್ನೋಡದೆ ಹುಡುಗನಿಗೆ ಒಂದು ಹುಡುಗಿ ಸಿಕ್ಕ

ನಾಗಲೀ, ರೋಗಿಯಾಗಲೀ, ವ್ಯಭಿಚಾರಿಯಾಗಲೀ ಚಿಂತಿಲ್ಲ; ಹಣವಿದ್ದರೆ ಸಾಕು; ಭಾವಿಸುವರು. ಹುಡುಗನ ಕಡೆಯಲ್ಲಿ ಯಾ ಹುಡುಗಿಯ ಕಡೆಯಲ್ಲಿ ಹಣವಿದ್ದರೆ ಸಾಕೆಂತ ಭಾವಿಸಿ ಹುಡುಗನ ಕುತ್ತಿಗೆಗೆ ಹುಡುಗಿಯನ್ನೂ, ಹುಡುಗಿಯ ಕುತ್ತಿಗೆಗೆ ಹುಡುಗನನ್ನೂ ಹೆತ್ತವರು ಕಟ್ಟಿಕೊಡುವದರಿಂದ ಉಂಟಾಗುವ ಬಾಧಕವು ಅಷ್ಟಿಷ್ಟೆಂದೇ ಹೇಳಲು ಅಸಾಧ್ಯ. ವಿವಾಹವೆಂಬದು ಪರಮಾತ್ಮನಿಂದ ನಿರ್ಮಿತವಾದಂಥಾ ಒಂದು ಮಹಾ ಕಾರ್ಯವಾಗಿರುವದು. ಆದರೆ ಈ ವಿವಾಹ ಕಾರ್ಯವನ್ನು ಮಹತ್ವನೆಂದೆಣಿಸದೆ ಇರುವದರಿಂದ ಉಂಟಾಗುವ ಅನರ್ಥಗಳಿಂದ ಸಮಾಜವೇ ಅಧೋಗತಿಗಿಳಿಯುತ್ತಿದೆ. ಗಂಡಸಿಗೆ ಸರಿಯಾದ ಅರ್ಧಾಂಗಿಯು ಸಿಗದೆ ಹೋದರೆ ಅವರು ತಮ್ಮ ಜೀವಕಾಲವೆಲ್ಲಾ ಕೃಪಣಾವಸ್ಥೆಯಲ್ಲಿರಬೇಕಾಗುವದು. ಗಂಡನ ರೀತಿನೀತಿಗಳೂ ಹೆಂಡತಿಯ ರೀತಿನೀತಿಗಳೂ ಪರಸ್ಪರ ಹೋಲಿಕೆಯಾಗಿದ್ದರೆ ಇಂಥಾ ಗಂಡ ಹೆಂಡರಿಂದ ಕೂಡಿದ ಕುಟುಂಬವು ಆನಂದವನ್ನುಂಟುಮಾಡುವದಾಗಿದ್ದು ಆ ಕುಟುಂಬದಿಂದ ಹುಟ್ಟಿಬಂದ ಮಕ್ಕಳುಮರಿಗಳು ಸನ್ಮಾರ್ಗದಲ್ಲಿ ನಡೆದು ಉಚ್ಚಸ್ಥಿತಿಯ ಸಮಾಜವುಂಟಾಗುವದು. ಪರಂತು, ವಿವಾಹವು ಮಹತ್ವವಾದ ಕಾರ್ಯವೆಂದೆಣಿಸದೆ, ಅರ್ಧಾಂಗಿಯನ್ನು ಆರಿಸಿಕೊಳ್ಳುವಾಗ ಹಿಂದೆಮುಂದೆ ನೋಡದೆ ಮಾಡಿಕೊಂಡ ವಿವಾಹದಿಂದ ಈ ಲೋಕವು ಅರೆಗಳಿಗೆಯ ಸಂತೋಷವನ್ನು ಹುಟ್ಟಿಸುವ ಒಂದು ಮಾಯಾಮಯಂತಿದೆಂದು ಅರಿತುಕೊಳ್ಳುವಂತಾಗುವದು. ಇಂಥಾ ಕುಟುಂಬದಲ್ಲಿ ಸಂತೋಷವಿರದು ವಿವಾಹವು ಒಂದು ಮಹಾ ಪೀಡೆಯಂತಾಗುವದು. ಇಂಥಾ ಹೆತ್ತವರಿಂದ ಹುಟ್ಟಿದ ಮಕ್ಕಳಿಗೂ ಅದೇ ಸ್ವಾಭಾವವು ಬರುವದು. ತಂದೆತಾಯಿಗಳಲ್ಲಿದ್ದ ಕೆಟ್ಟ ಸ್ವಭಾವಗಳು ಈ ಮಕ್ಕಳಲ್ಲಿ ಸ್ವಭಾವಿಕವಾಗಿ ಬರುವವು ತಂದೆತಾಯಿಗಳಿಂದ ಸ್ವಾಭಾವಿಕವಾಗಿ ಹುಟ್ಟಿದ ಕೆಟ್ಟ ಸ್ವಭಾವಕ್ಕೆ ದೊಡ್ಡವರಾಗುತ್ತಾ ಇನ್ನು ಅನೇಕ ದುಶ್ಚಾಳಿಗಳು ಅಂಟಿಕೊಳ್ಳುವವು ಇಂಥಾ ಹೆತ್ತವರಿಂದ ಹುಟ್ಟಿದ ಮಕ್ಕಳಿಂದ ಒಂದು ಸಮಾಜವು ಏನನ್ನು ಆಶಿಸಬಹುದು? ಬಡತನ ಮತ್ತು ಹೊಲಸಾದ ಕೃತ್ಯಗಳನ್ನಲ್ಲವೇ? ಇಂಥಾ ಮಕ್ಕಳು ದೊಡ್ಡವರಾಗುತ್ತಾ ವಿವಾಹ ಮಾಡಿಕೊಂಡು ಹುಟ್ಟುವ ಮಕ್ಕಳು ಎಂಥವರಾಗುವರು? ವರ್ಷದಿಂದ ವರ್ಷಕ್ಕೆ ಇಂಥವರಿಂದ ಸಮಾಜವು ಅಧೋಗತಿಗಿಳಿದು ದೇಶದ ಉನ್ನತಿಯೇ ಅಳಿದುಹೋಗುವುದರಲ್ಲಿ ಅನುಮಾನ ಉಂಟೇ?

ವಿವಾಹವೆಂಬದು ಕ್ಷಣಮಾತ್ರದ ಸಂತೋಷವನ್ನು ಕೊಡುವ ಕಾರ್ಯವಾಗಿದೆಂತ ಯಾರು ಭಾವಿಸುವನೋ ಅಂಥವನು ಯಾ ಅಂಥವಳು ವಿವಾಹ ಮಾಡಿಕೊಳ್ಳದಿರುವದು ವಿಹಿತವಾಗಿದೆ. ವಿವಾಹವೆಂಬದು ಒಂದು ಕುಟುಂಬ, ಸಮಾಜ, ದೇಶದ ಏಳಿಗೆಯ ಮೂಲಸ್ತಂಭದಂತಿದೆ ಇಂಥಾ ಸ್ತಂಭದ ಅಡಿಗೆನೇ ಗೆದ್ದಲು ಹುಳ ತಾಗಿದರೆ ಮನೆಯ ಮಾಡು ಬೀಳದೆ ಇದ್ದೀತೇ? ಉಣ್ಣುವದು, ತಿನ್ನುವದು, ಕುಡಿಯುವದು, ಅನುಕಾಲಿಕವಾದ ಇಂದ್ರಿಯ ಕಾಂಕ್ಷೆಗಳನ್ನು ತೀರಿಸಿಕೊಳ್ಳುವದು—ಇವು ವಿವಾಹದ ತತ್ವವಲ್ಲ ವಿವಾಹದಿಂದ ತಾವು (ಪತಿಪತ್ನಿಯುವರು) ಒಂದಾಗಿ ನಡೆದು ಮುಂದಿನ ಜನಾಂಗದ ಏಳಿಗೆಯ ಮುಖ್ಯಕರಣರಾಗಿರುವೆವು, ತಮ್ಮಿಂದಲೇ ಒಂದು ಸಮಾಜವು ಉಚ್ಚಸ್ಥಿತಿಗೆ ಬರುವದು, ತಮ್ಮಿಂದ ಹುಟ್ಟುವ ಮಕ್ಕಳು ಸನ್ಮಾರ್ಗವರ್ತಿಗಳಾಗಿರದಿದ್ದರೆ ಯಾ ಆರೋಗ್ಯಶಾಲಿಗಳಾಗಿರದಿದ್ದರೆ ಸಮಾಜವು ಉನ್ನತಿಯನ್ನು ಹೊಂದಲಾರದು ಎಂಬದಾಗಿ ಭಾವಿಸಿರುವದೇ ವಿವಾಹದ ತತ್ವವಾಗಿದೆ ಈ ತತ್ವವನರಿಯದೆ ವಿವಾಹವಾದರೆ ಇಂಥವರಿಂದ ಹುಟ್ಟಿದ್ದ ಮಕ್ಕಳು ದುರ್ಮಾರ್ಗಿಗಳೂ ದೇವರನ್ನರಿಯದವರೂ, ತಂದೆತಾಯಿಗಳ ಭಯಭೀತಿ ಇಲ್ಲದವರೂ ಆಗಿ ಬದುಕಿ, ಸಮಾಜಕ್ಕೂ, ದೇಶಕ್ಕೂ ಅವಮಾನವನ್ನು ತರುವರು. ಆದುದರಿಂದ ವಿವಾಹ ಮಾಡಿಕೊಡುವಾಗ ಚೆನ್ನಾಗಿ ಆಲೋಚಿಸಿ, ಹುಡುಗನಿಗೆ ತಕ್ಕ ಹುಡುಗಿಯನ್ನು, ಹುಡುಗಿಗೆ ತಕ್ಕ ಹುಡುಗನನ್ನು ಹುಡುಕಿ ಸಂಸಾರ ಸಾಗರವು ಸರಾಗವಾಗಿ ಸಾಗಿ ವಿವಾಹವು ಸಮಾಜದ ಏಳಿಗೆಗೆ ಮೂಲಸ್ತಂಭದಂತಿರುವಂತೆ ವರ್ತಿಸುವದು ವಿಹಿತವಾಗಿದೆ.

ಪತ್ರವ್ಯವಹಾರ.

ಗಾಡಿಗಳ ಯೆಲದದೆ ಗಲಾಟೆ.

ರಸ್ತೆಗಳಲ್ಲಿ ಚಡಾವು, ಉತಾರು ಏರಿಳಿವುಗಳಿರುವಲ್ಲಿ [illegible] ಗಾಡಿ ಹಿಂದೆ ಜಾರದಂತೆ ಯೆಲೆದಡೆಯ ಸಹಾಯವೇ ಅಗತ್ಯ [illegible] ದೀರಿ ಎಂಬದರ ಸಹಾಯವೇ ಅಗತ್ಯ. [illegible]

ಬುದ್ಧನ ಭೂತದಯೆ

ಪ್ರಪಂಚದಲ್ಲಿನ ಯಾವುದೊಂದು ಉತ್ಕೃಷ್ಟ ಮತದೊಳಗೂ ಭೂತದಯೆಯೇ ಬುದು ಉತ್ತಮ ಧರ್ಮವಾಗಿ ನಿರೂಪಿಸಲ್ಪಡದೆ ಇಲ್ಲ. ಅಂಥ ಭೂತದಯೆಯ ಪ್ರಭಾವವನ್ನು ಜಗತ್ತಿಗೆಲ್ಲಾ ಮೆರೆಯಿಸಿ ಪ್ರಖ್ಯಾತಿಯನ್ನು ಪಡೆದವರಲ್ಲಿ ಗೌತಮಬುದ್ಧನು ಮೊದಲನೆಯವನೆಂದು ಹೇಳಬಹುದು. ಆತನಲ್ಲಿ ಮೂರ್ತಿಮತ್ತಾಗಿದ್ದ ಭೂತದಯೆಯ ಘನತೆಯನ್ನು ವ್ಯಕ್ತಪಡಿಸುವ ವಿಷಯಗಳು ಅವನ ಜೀವಿತ ಚರಿತ್ರದಲ್ಲಿ ಅನಂತವಾಗಿ ರುವುವು. ಅದರಲ್ಲಿ ಒಂದಾನೊಂದು ಸಂಗತಿಯನ್ನು ಇಲ್ಲಿ ನಿರೂಪಿಸುವೆವು —ಬುದ್ಧನು ರತ್ನಗಿರಿಯ ಗುಹೆಗಳಲ್ಲಿ ವಾಸಮಾಡಿಕೊಂಡಿದ್ದಾಗ ಒಂದಾನೊಂದು ದಿವಸ ಒಬ್ಬ ಗೊಲ್ಲರ ಹುಡುಗನು ಮೇಕೆಗಳನ್ನು ಅಟ್ಟಿಕೊಂಡು ಆ ಬೆಟ್ಟದ ಪಕ್ಕದಲ್ಲಿ ಹೋಗುತ್ತಿದ್ದನು. ಆ ಮೇಕೆಗಳಲ್ಲಿ ಒಂದು ಮರಿಯು ಕಾಲಿಗೆ ಗಾಯವಾಗಿದ್ದುದರಿಂದ ಅದು ನಡೆಯಲಾರದೆ ಕುಂಟಿಕೊಂಡು ಮೆಲ್ಲಮೆಲ್ಲನೆ ನಡೆಯುತ್ತಿದ್ದಿತು. ಬುದ್ಧನು ಈ ಮರಿಯನ್ನು ನೋಡಿದ ಕೂಡಲೇ ಅವನ ಎದೆಯು ಕರಗಿಹೋಯಿತು. ಕೂಡಲೇ ಅದರ ಹತ್ತಿರಕ್ಕೆ ಹೋಗಿ ಅದನ್ನೆತ್ತಿ ತನ್ನ ಹೆಗಲಮೇಲೇರಿಸಿಕೊಂಡ. ಮುಂದೆ ಸಾಗಿ ಹೋಗಿದ್ದ ಮೇಕೆಗಳ ಮಂದೆಯೊಳಗೆ ಸೇರಿಕೊಳ್ಳುವುದಕ್ಕಾಗಿ ಬೇಗಬೇಗನೆ ಹೋಗುತ್ತ, ಆ ಗೊಲ್ಲರ ಹುಡುಗನನ್ನು ಕೂಗಿದನು. ಆ ಕೂಗನ್ನು ಕೇಳಿ ಹುಡುಗನು ಹಿಂದಿರುಗಲಾಗಿ, "ಎಲೋ ಹುಡುಗಾ! ಈ ದಿನ ನೀನು ಹೊತ್ತುಮುಳುಗುವುದಕ್ಕೆ ಮೊದಲೇ ಮೇಕೆಗಳ ಮಂದೆಯನ್ನು ಅಟ್ಟಿಕೊಂಡು ಹೋಗುತ್ತೀಯಲ್ಲಾ, ಇದೇಕೆ?" ಎಂದು ಬುದ್ಧನು ಪ್ರಶ್ನೆಮಾಡಲು, ಹುಡುಗನು—"ಅಯ್ಯಾ! ಈ ದಿನ ಮಹಾರಾಜರು ಯಜ್ಞವನ್ನು ಮಾಡುತ್ತಾರೆ, ಅವರಿಗೆ ಒಂದುನೂರು ಮೇಕೆಗಳು ಬೇಕಾಗಿವೆಯಂತೆ, ಅದಕ್ಕಾಗಿ ಬೇಗನೆ ಹೋಗುತ್ತಿದ್ದೇನೆ" ಎಂದು ಉತ್ತರವನ್ನಿತ್ತನು. "ಓಹೋ! ಹಾಗಾದರೆ, ನಾನೂ ಕೂಡ ನಿನ್ನೊಡನೇ ಬರುತ್ತೇನೆ" ಎಂದು ಬುದ್ಧನು ಹೇಳಿ, ಆ ಕುಂಟು ಮರಿಯನ್ನು ತನ್ನ ಹೆಗಲಮೇಲೆ ಹೊತ್ತುಕೊಂಡೇ ಆ ಗೊಲ್ಲನ ಜತೆಯಲ್ಲಿ ತಾನೂ ಹೋಗುತ್ತಿದ್ದನು. ಊರನ್ನು ಪ್ರವೇಶಿಸಿದ ಕೂಡಲೇ ಪ್ರಜೆಗಳು ಗುಂಪುಗುಂಪಾಗಿ ಬಂದು ಬುದ್ಧನನ್ನು ನೋಡುತ್ತಿದ್ದರು. ಮನೋಹರವಾದ ಆಕಾರವನ್ನು ಹೊಂದಿ, ಕಾಷಾಯವಸ್ತ್ರಗಳನ್ನು ಧರಿಸಿರುವ ಆ ಯತಿಯು ಹೆಗಲಮೇಲ ಮೇಕೆಯ ಮರಿಯನ್ನು ಹೊತ್ತು ಹೋಗುತ್ತಿರುವುದು ನೋಡುವ ಜನರಿಗೆ ಪರಮಾಶ್ಚರ್ಯಕರವಾಗಿದ್ದಿತು. ಆ ಜನರು ಗುಂಪುಗುಂಪಾಗಿ ತನ್ನ ಹಿಂದೆ ಬರುತ್ತಿದ್ದರೂ ಬುದ್ಧನು ಅದೊಂದನ್ನೂ ಲೆಕ್ಕಿಸದೆ ತನ್ನಪಾಡಿಗೆ ತಾನು ಯಜ್ಞಶಾಲೆಗೆ ಪ್ರವೇಶಿಸಿದನು. ಅಲ್ಲಿ ಬ್ರಾಹ್ಮಣರುಗಳು ವೇದಘೋಷವನ್ನು ಮಾಡುತ್ತಿದ್ದರು. ಸೋಮಯಾಜಿಗಳು ಸ್ವಸ್ತಿಗಳನ್ನು ಹಾಡುತ್ತಿದ್ದರು. ಯಜ್ಞಶಾಲೆಯ ಮಧ್ಯಾಂಗಣದಲ್ಲಿದ್ದ ಹೋಮಕುಂಡದಿಂದ ಅಗ್ನಿಜ್ವಾಲೆಗಳು ಪ್ರಜ್ವರಿಸುತ್ತಿದ್ದುವು. ಒಬ್ಬ ಋತ್ವಿಕನು ದಪ್ಪನಾದ ಕೊಂಬುಗಳುಳ್ಳ ಬೊಲ್ಲೆಯಾದ ಹೋತವೊಂದನ್ನು ಹಗ್ಗದಿಂದ ಯೂಪಸ್ತಂಬಕ್ಕೆ ಕಟ್ಟಿಹಾಕುತ್ತಿದ್ದನು. ಇದರ ಕಟ್ಟಿದ ಬಳಿಕ, "ಇದು ಬಿಂಬಸಾರ ರಾಜನ ಯಜ್ಞದಲ್ಲಿ ಮುಖ್ಯವಾದುದು, ಇದರ ರಕ್ತವು ಹೋಮಕುಂಡದಲ್ಲಿ ಹೋಮ ಮಾಡಲ್ಪಡುವುದು. ಮಹಾರಾಜನು ಮಾಡಿದ ಪಾಪವನ್ನೆಲ್ಲಾ ಈ ಹೋತಿನ ಮೇಲೆ ಆವಾಹಿಸಿರುವೆವು. ಅಗ್ನಿಯಲ್ಲಿ ಪಕ್ವವಾದ ಇದರ ಮಾಂಸದ ಸುವಾಸನೆಯನ್ನು ನೀವು ಆಘ್ರಾಣಿಸಿ ತೃಪ್ತಿಗೊಳ್ಳಿರಿ" ಎಂದು ದೇವತೆಗಳನ್ನು ಆಹ್ವಾನಿಸಿ ಹೇಳಿ, ತನ್ನ ಕೈಗೆ ಕತ್ತಿಯನ್ನು ತೆಗೆದುಕೊಂಡು ಆ ಪಶುವನ್ನು ಕೊಲ್ಲುವುದಕ್ಕೆ ಯತ್ನಿಸಿದನು. ಆಗ ದಯಾರ್ದ್ರಹೃದಯನಾದ ಆ ಬುದ್ಧನ ಮನಸ್ಸು ಹೇಗಿರಬಹುದು! ಅವನು ಪಟಪಟನೆ ಕಣ್ಣೀರು ಸುರಿಸುತ್ತ, "ಅಯ್ಯಾ! ಅದನ್ನು ಕೊಲ್ಲಬೇಡ" ಎಂದು ಕೂಗಿಕೊಳ್ಳುತ್ತ, ಬಿಂಬಸಾರನ ಕಡೆಗೆ ತಿರುಗಿ "ಪ್ರಭುವೇ, ಅದನ್ನು ಕೊಲ್ಲಿಸಬೇಡ, ಕೊಲ್ಲಿಸಬೇಡ" ಎಂದು ಗಟ್ಟಿಯಾಗಿ ಕೂಗಿ, ಬೇಡಿಕೊಂಡನು. ಪಶುವಿನ ಕಡೆಗೇ ಇದ್ದ ಋತ್ವಿಕ್ಕರದೃಷ್ಟಿಯೆಲ್ಲಾ ಈ ಸದ್ದನ್ನು ಕೇಳಿದ ಕೂಡಲೇ ಬೆರಗಾಗಿ ಇತ್ತ ಪ್ರಸರಿಸಿತು. ಆಗ ಬುದ್ಧನು ತನ್ನ ಸ್ವಭಾವಸಿದ್ಧವಾದ ಮೃದುವಚನದಿಂದಲೂ ಶಾಂತಗಂಬೀರ ದಯಾಮಯಮುಖಭಾವದಿಂದಲೂ ಅವರೆಲ್ಲರನ್ನೂ ಕುರಿತು ಹೀಗೆ ಉಪದೇಶಮಾಡಿದನು—

೧ ಪ್ರಾಣಮಂ ಹಳಿಸುವುದು ಬಹುಸುಲಭಮೆಲ್ಲರ್ಗೆ ।
೨ ಪ್ರಾಣಮಂ ಕುಡುವುದೊಂದು ಮಸಾಧ್ಯಮೆಮಗೆ ॥
೩ ಪ್ರಾಣರಕ್ಷಣಕಾಗಿ ಪಾಟುಪಡದಿರ್ಪವರು ।
೪ ಪ್ರಾಣಿಗಳಮೇಲೆ ದಯೆಯುಳ್ಳರಹರೆ? ॥

೫ ಗೌತಮಬುದ್ಧನು ಸೂತ್ರರೂಪವಾಗಿ ಮಾಡಿದ ಈ ಹಿತೋಪದೇಶದಿಂದ ಋತ್ವಿಕ್ಕುಗಳ ಮನಸ್ಸೆಲ್ಲಾ ತಿರುಗಿ ಹೋಯಿತು (ಏಕೆಂದರೆ—"ತೀಕ್ಷ್ಣವಚನವನತಿಸುಖದಿಂದ ... ಮನಸ್ಸಿಗೆ ... ") ಎಂದು ನೀತಿಯಿರುವುದಿಲ್ಲವೆ? ಆದರಿಂದ ಅವರು ಈ ಹಿತೋಪದೇಶದಿಂದ ಥಟ್ಟನೆ ಎಚ್ಚತ್ತರು. ಬಿಂಬಸಾರನೃಪನಾದರೊ ಕರುಣಾರ್ದ್ರಹೃದಯನಾಗಿ ಹೋದನು. ಆ ಕೂಡಲೇ ತಾನು ಮಾಡಬೇಕೆಂದಿದ್ದ ಯಜ್ಞವನ್ನು ಅಲ್ಲಿಗೇ ನಿಲ್ಲಿಸಿಬಿಟ್ಟು, ಗೌತಮಬುದ್ಧನಿಂದ ಇನ್ನೂ ಘನತರವಾದ ಉಪದೇಶವನ್ನು ಪಡೆದು, ಇನ್ನು ಮುಂದೆ ತನ್ನ ದೇಶದಲ್ಲಿನ ಪ್ರಜೆಗಳಾರೂ ಪ್ರಾಣಿಹಿಂಸೆಯನ್ನು ಮಾಡಕೂಡದೆಂದೂ ಮಾಂಸವನ್ನು ತಿನ್ನ ಕೂಡದೆಂದೂ, ಭೂತದಯೆಯು ಪ್ರತಿಯೊಬ್ಬರಿಗೂ ಮುಖ್ಯವಾಗಿ ಆಚರಿಸಲ್ಪಡತಕ್ಕ ಧರ್ಮವೆಂದೂ ಶಾಸನವನ್ನು ಪ್ರಕಟಿಸಿದನು. ಆ ವಾಕ್ಯಗಳನ್ನು ಶಿಲೆಗಳಮೇಲೆ ಕೆತ್ತಿಸಿ ದೇಶದಲ್ಲಿ ಅಲ್ಲಲ್ಲಿಗೆ ಸ್ಥಾಪಿಸಿದನು. ಕಾಲುಗಾಯಗೊಂಡ ಮೇಕಮರಿಯಮೇಲೆ ದಯೆಯನ್ನು ತೋರಿಸುವುದಕ್ಕೆ ಪ್ರವೃತ್ತನಾದ ಗೌತಮಬುದ್ಧನು ಕಡೆಗೆ ಹೀಗೆ ಬಿಂಬಸಾರನ ರಾಜ್ಯದಲ್ಲೆಲ್ಲಾ ಪ್ರಾಣಿಹಿಂಸೆಯನ್ನು ತಪ್ಪಿಸಿ ಭೂತದಯೆಯು ತಾನೇತಾನಾಗಿ ಮೆರೆಯುವಂತೆ ಮಾಡಲು ಕಾರಣಭೂತನಾದನು. ಆ ಬುದ್ಧ ಮಹನೀಯನು ಎಂತಹ ಧನ್ಯನು!!

ವೈ. ಸ್ವಾ

ಜಪಾನರು ಜರ್ಮನರಿಗೆ ಹಾಕಿಕೊಟ್ಟ ಮೇಲ್ಪಂಕ್ತಿ

ಜರ್ಮನರು ಪಶ್ಚಿಮ ರಣರಂಗದಲ್ಲಿ ಅಂದರೆ ಬೆಲ್ಜಿಯಮಿನಲ್ಲಿ ಬೆಲ್ಜಿಯನರನ್ನು ನಡಿಸುತ್ತಿರುವ ರೀತಿಯನ್ನೂ ಜಪಾನರು ತಮ್ಮ ದೇಶದಲ್ಲಿ ಮತ್ತು ಸಿಂಗ್ಟಾವೋದಲ್ಲಿ ಜರ್ಮನರನ್ನು ನಡಿಸಿದ ರೀತಿಯನ್ನೂ ಹೋಲಿಸಿ "ಡೈಲಿ ನ್ಯೂಸ್" ಎಂಬ ಪತ್ರಿಕೆಗೆ ಒಬ್ಬ ಬಾತ್ಮಿದಾರರು ಬರೆದ ಲೇಖನದಿಂದ ಜಪಾನರ ಸದ್ಗುಣಗಳು ತೋರಿ ಬರುವವು. ಜರ್ಮನರು ಯುದ್ಧ ಪ್ರಾರಂಭಿಸಿದಂದಿನಿಂದ ಬೆಲ್ಜಿಯನರನ್ನು ನಡಿಸುತ್ತಿರುವ ಅಮಾನುಷ ರೀತಿಯು ವಾಚಕರೆಲ್ಲರಿಗೆ ಗೊತ್ತೇ ಇರುವದರಿಂದ ಇಲ್ಲಿ ಪ್ರತ್ಯೇಕ ಪುನಃ ಅವನ್ನು ಬರೆಯುವದು ಅವಶ್ಯವಿರದು.

ಜಪಾನಿಯು ಜರ್ಮನಿಗೆ ತನ್ನ ಕಡೆಯ ಪತ್ರವನ್ನು ಕಳುಹಿಸಿದ ಕೂಡಲೇ ಜಪಾನ್ ವಿದೇಶಿ ಮಂತ್ರಿಯಾದ ಬೆರನ್ ಕಾಟೋರವರು ಬಹಿರಂಗವಾಗಿ ಜಪಾನಿನಲ್ಲಿ ವ್ಯಾಪಾರ ಮಾಡುತ್ತಿದ್ದ ಜರ್ಮನರನ್ನು ತನ್ನಲ್ಲಿಗೆ ಕರೆಯಿಸಿ ಹಿಂದಿನಂತೆಯೇ ತಮ್ಮ ಕೆಲಸಗಳನ್ನು ಸಾಗಿಸಿಕೊಂಡಿರ ಬಹುದೆಂತ ತಿಳಿಸಿದರು. ಜರ್ಮನ್ ಪ್ರಜೆಗಳಿಗೆ ಶತ್ರು ಭಾವವನ್ನು ತೋರಿಸಕೂಡದೆಂದು ಅದೇ ಸಮಯ ಪ್ರತಿ ಒಬ್ಬ ಜಪಾನನಿಗೂ ತಿಳಿಸಿದರು. ಮಂತ್ರಿ ಒಜಾಕಿಯವರು ಜಪಾನಿನಲ್ಲಿರುವ ಜರ್ಮನರ ದೇಹಕ್ಕಾಗಲೀ ಆಸ್ತಿಗಾಗಲೀ ಯಾವದೊಂದು ನಷ್ಟ ಕಷ್ಟ ಬಾರದಂತೆ ಪೂರ್ಣ ಜಾಗ್ರತೆ ತಕೊಳ್ಳಲ್ಪಡುವದೆಂದು ತಿಳಿಸಿದರು. ಪೋಲೀಸ್ ಮೇಲಾಧಿಕಾರಿಗಳು ಪ್ರತಿ ಒಂದು ಡಿಸ್ಟ್ರಿಕ್ಟಿನಲ್ಲಿ ಜರ್ಮನರು ಏನೊಂದು ತದೆಬಡೆಯಿಲ್ಲದೆ ನಡೆಯುವಂತೆ ಏರ್ಪಾಡು ಮಾಡಿದರು. ಪ್ರಧಾನ ಮಂತ್ರಿಯಾಗಿರುವ ಒಕೂಮರವರು ಸಹಾ ಪ್ರತಿ ಒಂದು ಸಂಸ್ಥಾನದ ಗವರ್ನರರಿಗೆ ಸಂದೇಶವನ್ನು ಕಳುಹಿಸಿ ಜರ್ಮನ ಪ್ರಜೆಗಳು ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕೆಂದು ಅಪ್ಪಣೆ ಮಾಡಿದರು. ~~ಜಪಾನನ್ನು~~ ಬಿಟ್ಟು ಹೋಗಲು ಮನಸ್ಸುಳ್ಳವರು ಹೋಗ ಬಹುದೆಂದೂ ಜಪಾನಿಗೆ ಬರಲಿಚ್ಛಿಸುವವರು ಬರಬಹುದೆಂದೂ ಆಜ್ಞೆ ಮಾಡಿದರು. ಮಿಲಿಟರಿ ಮತ್ತು ನೌಕಾವಳಿ ಸಂಬಂಧವಾಗಿ ಕೆಲವು ಜರ್ಮನರಿಗೆ ಮಾತ್ರ ಸ್ವತಂತ್ರವು ಕೊಡೋಣಾಗಲಿಲ್ಲ.

ಕಾನೂನಿಗೆ ವಿರೋಧವಾಗಿ ನಡೆಯದ ಪ್ರತಿ ಒಬ್ಬ ಜರ್ಮನನು ಸ್ವತಂತ್ರನಾಗಿರುವಂತೆ ಸರಕಾರದವರು ಆದಷ್ಟು ಪ್ರಯತ್ನ ತಕೊಳ್ಳಬೇಕು ಎಂಬದಾಗಿ ಪ್ರಧಾನ ಮಂತ್ರಿವರು ಕಟ್ಟುಮಾಡಿ ಪ್ರತಿ ಒಬ್ಬ ಜಪಾನನು ಈ ಆಜ್ಞೆಯನ್ನು ಮನದಲ್ಲಿಟ್ಟು ಜಾಪಾನಿನಲ್ಲಿರುವ ಜರ್ಮನರು ಸ್ವತಂತ್ರರಾಗಿ ನಡೆಯುವಂತೆ ನೋಡಿಕೊಳ್ಳಬೇಕೆಂದು ಜನಸಮುದಾಯವನ್ನು ಕೇಳಿಕೊಂಡರು.

ವಿದ್ಯಾಖಾತೆಯ ಮಂತ್ರಿಯವರೂ ಕಾಲೇಜುಗಳ ಅಧಿಕಾರಿಗಳಿಗೆ ಒಂದು ಸರ್ಕ್ಯುಲಾರನ್ನು ಕಳುಹಿಸಿ ಜರ್ಮನರಿಗೆ ವಿರೋಧವಾಗಿ ನಡೆಯದ ಹಾಗೆ ವಿದ್ಯಾರ್ಥಿಗಳನ್ನು ಎಚ್ಚರಿಸಬೇಕೆಂದು ಆಜ್ಞಾಪಿಸಿದರು.

ಆಯಾ ಇಲಾಖಾ ಮೇಲಾಧಿಕಾರಿಗಳು ಕಳುಹಿಸಿದ ಆಜ್ಞೆಗಳನ್ನು ನೋಡುವಾಗ್ಗೆ ಬೆರನ್ ಕಾಟೋರವರು ಪ್ರಾರಂಭದಲ್ಲಿ ಜರ್ಮನರಿಗೆ ಕೊಟ್ಟ ಮಾತು ಬಿದ್ದುಹೋಗಿಲ್ಲ ಎಂಬುದು ತಿಳಿದು ಬರುತ್ತದೆ. ಜಪಾನಿನಲ್ಲಿರುವ ಜರ್ಮನರು ಇಂಗ್ಲಾಂಡಿನಲ್ಲಿರುವ ಜರ್ಮನರಂತಿದ್ದರೆ ಆಯಾ ರಾಷ್ಟ್ರೀಯರುಗಳು ಒಟ್ಟು ಕೂಡಿ ಉಂಟಾದ ಜರ್ಮನರಾಗಿರುವರು. ಜಪಾನ್ ಅಧಿಕಾರಿಗಳಿಂದ ಈ ಜರ್ಮನರಿಗೆ ಕೊಡೋಣಾದ ಅಭಯ ... ಆದರೆ ಯೋಕೋಹಾಮದಲ್ಲಿ ಇಂಗ್ಲಿಷ್ ಮಾತುಗಳಲ್ಲಿ ಪ್ರತಿಯೊಂದೂ ಈಡೇರಿದವು. ... ಭಾಷಾ ವರ್ತಮಾನ ಪತ್ರಿಕೆಯ ಸಂಪಾದಕನಾದ ...

ಜಪಾನರಿಗೆ ವಿರೋಧವಾದ ಲೇಖನವನ್ನು ಬರೆದದ್ದರಿಂದ ಅವನನ್ನು ಮಾತ್ರ ನಿರ್ವಾಹವಿಲ್ಲದೆ ದೇಶದಿಂದ ಹೊರಡಿಸಬೇಕಾಯಿತು.

ಜಪಾನಿನ ಟೋಕಿಯೋ ಮತ್ತು ಬಂದರಗಳಲ್ಲಿರುವ ಜರ್ಮನ ಕಂಪನಿಗಳು ಹಿಂದಿನಂತೆಯೇ ಸರಾಗವಾಗಿ ವ್ಯಾಪಾರ ನಡಿಸುತ್ತಲಿವೆ. ಕೋರ್ಟು ಕಚೇರಿಗಳಲ್ಲಿಯೂ ಜರ್ಮನರ ದಾವೆಗಳು ಇತ್ಯರ್ಥವಾಗುತ್ತಿವೆ. ಈಚೆಗೆ ಒಂದು ಜರ್ಮನ್ ಕಂಪನಿಯು ಜಾಪಾನ್ ಕಂಪನಿಯ ಮೇಲೆ ತಂದ ದಾವೆಯು ಜರ್ಮನ ಕಂಪನಿಗೆ ಗುಣವಾಗಿಯೇ ತೀರಿತು. ಬೇಂಕಿನಲ್ಲಿ ಕೂಡಾ ಜರ್ಮನರ ಲೇವಾದೇವಿ ನಡೆಯುತ್ತಿದೆ

ಸರಕಾರ ಕೆಲಸದಲ್ಲಿರುವ ಜರ್ಮನರೂ, ಜರ್ಮನ ಪ್ರೊಫೆಸರರೂ, ಉಪಾಧ್ಯಾಯರೂ, ಹಿಂದಿನಂತೆಯೇ ಕೆಲಸದಲ್ಲಿರುವರು. ಆಯಾ ಇಲಾಖೆಯು, ಕೊಲೇಜುಗಳ ಅಧಿಕಾರಿಗಳೂ, ವಿದ್ಯಾರ್ಥಿಗಳೂ, ಸಹಉದ್ಯೋಗಿಗಳೂ ಹಿಂದಿನಂತೆಯೇ ಈ ಜರ್ಮನರನ್ನು ಮಾನಿಸುತ್ತಿರುವರು. ಪೋಲೀಸಿನವರಿಗೆ ತಮ್ಮನ್ನು ತೋರಿಸಿಕೊಳ್ಳುವ, ಮನೆಯಾ ಊರು ಬಿಟ್ಟು ಹೋಗಲು ಅಪ್ಪಣೆಕೇಳುವ ಅಗತ್ಯವೇ ಈ ಜರ್ಮನರಿಗಿರದು

ಯುದ್ಧ ಸೆರೆಯಾಗಿ ಹಿಡಿಯಲ್ಪಟ್ಟ ಜರ್ಮನರನ್ನು ಕೂಡಾ ಜಪಾನರು ಬಹು ಮನ್ನಣೆಯಿಂದ ಕಾಣುತ್ತಿರುವರು ಬುದ್ಧ ಮತಸ್ಥರ ದೇವಸ್ಥಾನಗಳಲ್ಲಿ ಇವರಿಗೆ ಸ್ಥಳವನ್ನು ಒದಗಿಸಿಕೊಟ್ಟಿರುವರು. ಆಫೀಸರರಿಗೆ ಹೊರಗೆ ಹೋಗಿ ತಿರುಗಾಡಲು ಅಪ್ಪಣೆ ಇದೆ. ಇವರು ಕಾವಲು ಇಲ್ಲದೆಯೇ ತಮ್ಮ ಸ್ನೇಹಿತರನ್ನು ನೋಡಬಹುದಾಗಿದೆ. ವಿದೇಶಿ ಆಹಾರಗಳು ಅವರಿಗೆ ಒದಗಿಸಲ್ಪಡುತ್ತಿವೆ

ತಿಂಗ್ಸ್ಟಾವೊ ಜಪಾನರ ವಶವಾದಾಗ ಅಲ್ಲಿಯ ಜರ್ಮನ ಗವರ್ನರರಾದ ಮೆಯರ್ ವಾಲ್ಡೆಕರ ಮತ್ತು ಅವರ ಪರಿವಾರದ ಖಡ್ಗಗಳನ್ನು ಜಪಾನರು ತೆಗೆದುಕೊಳ್ಳಲಿಲ್ಲ. ಜಪಾನ್ ಸೇನೆಯು ತ್ಸಿಂಗ್‌ಟಾವೊಕ್ಕೆ ಪ್ರಥಮ ಸಾರಿ ಪ್ರವೇಶಿಸುವಾಗ ಅದರ ಗವರ್ನರರು ತಾವು ವಶವಾಗಿದ್ದೇವೆಂಬದಾಗಿ ತಿಳಿಸುವ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಲು ತಯಾರಿಸಿದ್ದರು. ಆದರೆ ಜಪಾನ್ ಜನರಲ್ ಕಾಮಿಯೋರವರು ಇದು ಅನಾವಶ್ಯವಾದುದರಿಂದ ಬೇಡವೆಂದು ಹೇಳಿದರು. ಜರ್ಮನ ಆಸ್ಪತ್ರಿಗೆ ಜಪಾನರ ಒಂದು ಗುಂಡು ಬಿದ್ದಾಗ ಜರ್ಮನರು ಜಪಾನ್ ನೌಕಾವಳಿ ಎಡ್ಮಿರಲರಿಗೆ ಇದನ್ನು ತಿಳಿಸಿದಾಕ್ಷಣ ಜಪಾನರು ಗುಂಡು ಹೊಡೆಯುವುದನ್ನು ನಿಲ್ಲಿಸಿದರು.

ತಿಂಗ್ಸ್ಟಾವೋ ಜಪಾನರ ಕೈವಶವಾದ ಸಂತೋಷಸೂಚಕ ಉತ್ಸವವು ಜಪಾನಿನಲ್ಲಿ ನಡೆದಾಗ ಜರ್ಮನರು ವಾಸವಾಗಿದ್ದ ದಾರಿಗಳಲ್ಲಿ ಜಪಾನರು ದೀಪಾವಳಿ ಮೆರವಣಿಗೆಯನ್ನು ಮಾಡಿದರೆ ಜರ್ಮನರ ಮನಸ್ಸಿಗೆ ನೋವಾದೀತೆಂತ ಭಾವಿಸಿ ಅಂಥಾ ಸ್ಥಳಗಳಲ್ಲಿ ಮೆರವಣಿಗೆ ಮಾಡಲಿಲ್ಲ

ಜರ್ಮನಿಯು ಬೆಲ್ಜಿಯಮಿನಲ್ಲಿ ನಡಿಸುತ್ತಿರುವ ಕ್ರೂರಕೃತ್ಯಗಳು ಜಪಾನ್ ಸರಕಾರಕ್ಕೂ ಜನರಿಗೂ ಚೆನ್ನಾಗಿ ಗೊತ್ತಿದ್ದರೂ ಮುಯ್ಯಿಗೆ ಮುಯ್ಯಿ ಕೊಡುವ ಆಲೋಚನೆಯು ಜಪಾನರಲ್ಲಿ ಇಲ್ಲದೆ ಇದ್ದುದ್ದರಿಂದ ಜಪಾನರು ಸರ್ವ ಜನಾಂಗಗಳ ಹೊಗಳಿಕೆಗೆ ಪಾತ್ರರಾಗಿರುವರು

ವಿವಾಹವೂ ಇದರಿಂದ ಸಮಾಜಕ್ಕುಂಟಾಗುವ ಸಾಧಕಬಾಧಕಗಳೂ.

ಮನೆ ಮನೆಗಳು ಸೇರಿ ಗ್ರಾಮ, ಗ್ರಾಮ ಗ್ರಾಮಗಳು ಸೇರಿ ಪಟ್ಟಣ, ಪಟ್ಟಣಗಳು ಸೇರಿ ಹೇಗೆ ಊರುಗಳಾಗುತ್ತವೋ ಹಾಗೆಯೇ ವ್ಯಕ್ತಿ ವ್ಯಕ್ತಿಗಳು ಸೇರಿ ಕುಟುಂಬ, ಕುಟುಂಬ ಕುಟುಂಬಗಳು ಸೇರಿ ಸಮಾಜಗಳಾಗುತ್ತವೆ. ಒಂದು ಗ್ರಾಮದಲ್ಲಿರುವ ಮನೆಗಳು ಒಳ್ಳೇ ಸ್ಥಿತಿಯಲ್ಲಿಲ್ಲದಿದ್ದರೆ ಆ ಗ್ರಾಮವು ಉತ್ತಮ ಗ್ರಾಮವೆಂದೆಣಿಸಲ್ಪಡದು. ಹ್ಯಾಗೋ ಹಾಗೆ ಗಂಡಸಿಗೆ ಅರ್ಧಾಂಗದಂತಿರುವ ಹೆಂಗಸು ಒಳ್ಳೇಯವಳಾಗಿರದಿದ್ದರೆ ಆ ಕುಟುಂಬವು ಉತ್ತಮ ಕುಟುಂಬವೆಂದೆಣಿಸಲ್ಪಡದು. ಉತ್ತಮ ಕುಟುಂಬವಿಲ್ಲದಿದ್ದರೆ ಉತ್ತಮ ಸಮಾಜವು ಇರಲಾರದು. ಆದುದರಿಂದ ಪ್ರತಿ ಒಬ್ಬನು ತನ್ನ ಅರ್ಧಾಂಗಿಯನ್ನು ಆರಿಸುವಾಗ ಬಹು ಹೆಚ್ಚಿನ ಜಾಗ್ರತೆ ತಕ್ಕೊಳ್ಳುವದು ಅತ್ಯಗತ್ಯವಾಗಿದೆ. ಅದೇ ರೀತಿ ಹುಡುಗಿಗೆ ಹುಡುಗನನ್ನು ಆರಿಸುವಾಗ ಹುಡುಗಿಯ ಹೆತ್ತವರೂ ಬಹು ಹೆಚ್ಚಿನ ಮುಂಜಾಗ್ರತೆಯುಳ್ಳವರಾಗಿರಬೇಕಾಗಿದೆ. ಆದರೆ ಇಂಥಾ ವಿವಾಹ ಸಂಬಂಧದಿಂದ ಕುಟುಂಬಗಳುಂಟಾಗಿ, ಸಮಾಜದ ಏಳಿಗೆಯು ಇಂಥಾ ಕುಟುಂಬಗಳ ಮೇಲೆ ಹೊಂದಿಕೊಂಡಿರುತ್ತದೆಂಬ ಭಾವನೆಯು ನಮ್ಮ ಜನರಲ್ಲಿ ಕಡಿಮೆಯಾಗುತ್ತಾ ಬಂದಿರುವದರಿಂದ ಹುಡುಗನಿಗೆ ಹುಡುಗಿಯನ್ನು ಯಾ ಹುಡುಗಿಗೆ ಹುಡುಗನನ್ನು ಆರಿಸುವಾಗ ಮುನ್ನೋಡದೆ ಹುಡುಗನಿಗೆ ಒಂದು ಹುಡುಗಿ ಸಿಕ್ಕಿ[illegible] ಹುಡುಗಿಗೆ ಒಬ್ಬ ಹುಡುಗ ಸಿಕ್ಕಿದರೆ ಸಾಕು; ಕುರುಡನಾಗಲೀ, ಕುಂಟನಾಗಲೀ, ರೋಗಿಯಾಗಲೀ, ವ್ಯಭಿಚಾರಿಯಾಗಲೀ ಚಿಂತಿಲ್ಲ; ಹಣವಿದ್ದರೆ ಸಾಕು ಎಂತ ಭಾವಿಸುವರು. ಹುಡುಗನ ಕಡೆಯಲ್ಲಿ ಯಾ ಹುಡುಗಿಯ ಕಡೆಯಲ್ಲಿ ಹಣವಿದ್ದರೆ ಸಾಕೆಂತ ಭಾವಿಸಿ ಹುಡುಗನ ಕುತ್ತಿಗೆಗೆ ಹುಡುಗಿಯನ್ನೂ, ಹುಡುಗಿಯ ಕುತ್ತಿಗೆಗೆ ಹುಡುಗನನ್ನೂ ಹೆತ್ತವರು ಕಟ್ಟಿಕೊಡುವದರಿಂದ ಉಂಟಾಗುವ ಬಾಧಕವು ಅಷ್ಟಿಷ್ಟೆಂದೇ ಹೇಳಲು ಅಸಾಧ್ಯ. ವಿವಾಹವೆಂಬದು ಪರಮಾತ್ಮನಿಂದ ನಿರ್ಮಿತವಾದಂಥಾ ಒಂದು ಮಹಾ ಕಾರ್ಯವಾಗಿರುವದು. ಆದರೆ ಈ ವಿವಾಹ ಕಾರ್ಯವನ್ನು ಮಹತ್ವವೆಂದೆಣಿಸದೆ ಇರುವದರಿಂದ ಉಂಟಾಗುವ ಅನರ್ಥಗಳಿಂದ ಸಮಾಜವೇ ಅಧೋಗತಿಗಿಳಿಯುತ್ತಿದೆ. ಗಂಡಸಿಗೆ ಸರಿಯಾದ ಅರ್ಧಾಂಗಿಯು ಸಿಗದೆ ಹೋದರೆ ಅವರು ತಮ್ಮ ಜೀವಕಾಲವೆಲ್ಲಾ ಕೃಪಣಾವಸ್ಥೆಯಲ್ಲಿರಬೇಕಾಗುವದು. ಗಂಡನ ರೀತಿನೀತಿಗಳೂ ಹೆಂಡತಿಯ ರೀತಿನೀತಿಗಳೂ ಪರಸ್ಪರ ಹೋಲಿಕೆಯಾಗಿದ್ದರೆ ಇಂಥಾ ಗಂಡ ಹೆಂಡರಿಂದ ಕೂಡಿದ ಕುಟುಂಬವು ಆನಂದವನ್ನುಂಟುಮಾಡುವದಾಗಿದ್ದು ಆ ಕುಟುಂಬದಿಂದ ಹುಟ್ಟಿಬಂದ ಮಕ್ಕಳುಮರಿಗಳು ಸನ್ಮಾರ್ಗದಲ್ಲಿ ನಡೆದು ಉಚ್ಚಸ್ಥಿತಿಯ ಸಮಾಜವುಂಟಾಗುವದು. ಪರಂತು, ವಿವಾಹವು ಮಹತ್ವವಾದ ಕಾರ್ಯವೆಂದೆಣಿಸದೆ, ಅರ್ಧಾಂಗಿಯನ್ನು ಆರಿಸಿಕೊಳ್ಳುವಾಗ ಹಿಂದೆಮುಂದೆ ನೋಡದೆ ಮಾಡಿಕೊಂಡ ವಿವಾಹದಿಂದ ಈ ಲೋಕವು ಅವೆಗಳಿಗೆಯ ಸಂತೋಷವನ್ನು ಹುಟ್ಟಿಸುವ ಒಂದು ಮಾಯಾವಿಯಂತಿದೆಂದು ಅರಿತುಕೊಳ್ಳುವಂತಾಗುವದು. ಇಂಥಾ ಕುಟುಂಬದಲ್ಲಿ ಸಂತೋಷವಿರದು. ವಿವಾಹವು ಒಂದು ಮಹಾ ಪೀಡೆಯಂತಾಗುವದು. ಇಂಥಾ ಹೆತ್ತವರಿಂದ ಹುಟ್ಟಿದ ಮಕ್ಕಳಿಗೂ ಅದೇ ಸ್ವಾಭಾವವು ಬರುವದು. ತಂದೆತಾಯಿಗಳಲ್ಲಿದ್ದ ಕೆಟ್ಟ ಸ್ವಭಾವಗಳು ಈ ಮಕ್ಕಳಲ್ಲಿ ಸ್ವಭಾವಿಕವಾಗಿ ಬರುವವು. ತಂದೆತಾಯಿಗಳಿಂದ ಸ್ವಾಭಾವಿಕವಾಗಿ ಹುಟ್ಟಿದ ಕೆಟ್ಟ ಸ್ವಭಾವಕ್ಕೆ ದೊಡ್ಡವರಾಗುತ್ತಾ ಇನ್ನು ಅನೇಕ ದುಶ್ಚಾಳಿಗಳು ಅಂಟಿಕೊಳ್ಳುವವು ಇಂಥಾ ಹೆತ್ತವರಿಂದ ಹುಟ್ಟಿದ ಮಕ್ಕಳಿಂದ ಒಂದು ಸಮಾಜವು ಏನನ್ನು ಆಶಿಸಬಹುದು? ಬಡತನ ಮತ್ತು ಹೊಲಸಾದ ಕೃತ್ಯಗಳನ್ನಲ್ಲವೇ? ಇಂಥಾ ಮಕ್ಕಳು ದೊಡ್ಡವರಾಗುತ್ತಾ ವಿವಾಹ ಮಾಡಿಕೊಂಡು ಹುಟ್ಟುವ ಮಕ್ಕಳು ಎಂಥವರಾಗುವರು? ವರ್ಷದಿಂದ ವರ್ಷಕ್ಕೆ ಇಂಥವರಿಂದ ಸಮಾಜವು ಅಧೋಗತಿಗಿಳಿದು ದೇಶದ ಉನ್ನತಿಯೇ ಅಳಿದುಹೋಗುವುದರಲ್ಲಿ ಅನುಮಾನ ಉಂಟೇ?

ವಿವಾಹವೆಂಬದು ಕ್ಷಣಮಾತ್ರದ ಸಂತೋಷವನ್ನು ಕೊಡುವ ಕಾರ್ಯವಾಗಿದೆಂತ ಯಾರು ಭಾವಿಸುವನೋ ಅಂಥವನು ಯಾ ಅಂಥವಳು ವಿವಾಹ ಮಾಡಿಕೊಳ್ಳದಿರುವದು ವಿಹಿತವಾಗಿದೆ. ವಿವಾಹವೆಂಬದು ಒಂದು ಕುಟುಂಬ, ಸಮಾಜ, ದೇಶದ ಏಳಿಗೆಯ ಮೂಲಸ್ತಂಭದಂತಿದೆ ಇಂಥಾ ಸ್ತಂಭದ ಅಡಿಗೆನೇ ಗೆದ್ದಲು ಹುಳ ತಾಗಿದರೆ ಮನೆಯ ಮಾಡು ಬೀಳದೆ ಇದ್ದೀತೇ? ಉಣ್ಣುವದು, ತಿನ್ನುವದು, ಕುಡಿಯುವದು, ಅನುಕಾಲಿಕವಾದ ಇಂದ್ರಿಯ ಕಾಂಕ್ಷೆಗಳನ್ನು ತೀರಿಸಿಕೊಳ್ಳುವದು—ಇವು ವಿವಾಹದ ತತ್ವವಲ್ಲ. ವಿವಾಹದಿಂದ ತಾವು (ಪತಿಪತ್ನಿಯವರು) ಒಂದಾಗಿ ನಡೆದು ಮುಂದಿನ ಜನಾಂಗದ ಏಳಿಗೆಯ ಮುಖ್ಯಕರಣರಾಗಿರುವೆವು, ತಮ್ಮಿಂದಲೇ ಒಂದು ಸಮಾಜವು ಉಚ್ಚಸ್ಥಿತಿಗೆ ಬರುವದು, ತಮ್ಮಿಂದ ಹುಟ್ಟಿದ ಮಕ್ಕಳು ಸನ್ಮಾರ್ಗವರ್ತಿಗಳಾಗಿರದಿದ್ದರೆ ಯಾ ಆರೋಗ್ಯಶಾಲಿಗಳಾಗಿರದಿದ್ದರೆ ಸಮಾಜವು ಉನ್ನತಿಯನ್ನು ಹೊಂದಲಾರದು ಎಂಬದಾಗಿ ಭಾವಿಸಿರುವದೇ ವಿವಾಹದ ತತ್ವವಾಗಿದೆ ಈ ತತ್ವವನರಿಯದೆ ವಿವಾಹವಾದರೆ ಇಂಥವರಿಂದ ಹುಟ್ಟಿದ ಮಕ್ಕಳು ದುರ್ಮಾರ್ಗಿಗಳೂ ದೇವರನ್ನರಿಯದವರೂ, ತಂದೆತಾಯಿಗಳ ಭಯಭೀತಿ ಇಲ್ಲದವರೂ ಆಗಿ ಬದುಕಿ, ಸಮಾಜಕ್ಕೂ, ದೇಶಕ್ಕೂ ಅವಮಾನವನ್ನು ತರುವರು. ಆದುದರಿಂದ ವಿವಾಹ ಮಾಡಿಕೊಡುವಾಗ ಚೆನ್ನಾಗಿ ಆಲೋಚಿಸಿ, ಹುಡುಗನಿಗೆ ತಕ್ಕ ಹುಡುಗಿಯನ್ನು, ಹುಡುಗಿಗೆ ತಕ್ಕ ಹುಡುಗನನ್ನು ಹುಡುಕಿ ಸಂಸಾರ ಸಾಗರವು ಸರಾಗವಾಗಿ ಸಾಗಿ ವಿವಾಹವು ಸಮಾಜದ ಏಳಿಗೆಗೆ ಮೂಲಸ್ತಂಭದಂತಿರುವಂತೆ ವರ್ತಿಸುವದು ವಿಹಿತವಾಗಿದೆ.

ಪತ್ರವ್ಯವಹಾರ.

ಗಾಡಿಗಳ ಯೆಲದದೆ ಗಲಾಟೆ

ರಸ್ತೆಗಳಲ್ಲಿ ಚಡಾವು, ಉತಾರು ಎಂಬವುಗಳಿರುವವು. ಚಡಾವಿನ ಸ್ಥಳಗಳಲ್ಲಿ ಗಾಡಿ ಹಿಂದೆ ಜಾರದಂತೆ ಯೆಲದದೆಯ ಸಹಾಯವೇ [illegible] ಬೇರೆ ಎಂಬದರ ಸಹಾಯವೇ ಅಗತ್ಯ. ಸಮಮಟ್ಟು ರಸ್ತೆಗಳಲ್ಲಿ [illegible] ಗಳಾಗಲಿ ಬೇರೆಯಾಗಲಿ ಅಗತ್ಯವಿಲ್ಲ. [illegible]

ಚಡಾವುಗಳು, ಉತಾರುಗಳು, ಇರುವದೆಂಬದು ಜನಜನಿತವಾದುದು ಅದರಂತೆ ಈ ತಾಲೂಕಿನ ಹಳ್ಳಿ ರಸ್ತೆಗಳಲ್ಲಿ ಉತಾರು ಚಡಾವಿನ ಸ್ಥಳಗಳು ಅಧಿಕವಾಗಿರುವವು. ಟೌನಿನಲ್ಲಿಯಾದರೆ ಒಂದೆರಡು ರಸ್ತೆಗಳಲ್ಲಿ ಚಡಾವೂ ಉತಾರೂ ಇರುತ್ತವೆ. ಇಂಥಾ ಸ್ಥಳಗಳಲ್ಲಿ ಯೆಲದಡೆ ಅತೀ ಅಗತ್ಯ ಸಮತಟ್ಟುಗಳ ರಸ್ತೆಯಲ್ಲಿ ಯೆಲದಡೆ ಅಗತ್ಯವಿಲ್ಲವೆಂತ ಗಾಡಿಗಳಿಗೆ ಇರುವ ಯೆಲದಡೆಗಳನ್ನು ಕತದರೆ ಫಲವೇನು? ಇತ್ತಲಾಗೆ ಪೋಲೀಸಿನವರು ಗಾಡಿಗಳಿಗೆ ಯೆಲದಡೆಗಳನ್ನು ಇಡಕೂಡದೆಂಬ ಕಾಯಿದೆ ಜ್ಯಾರಿಗೆ ತಂದದ್ದರಿಂದ ಹೆಚ್ಚಿನ ಸಂಕಷ್ಟಕ್ಕೆ ಕಾರಣವಾಗಿದೆ. ಯೆಲದಡೆಗಳು ಗಾಡಿಗಳಿಗೆ ಇಡಲೇ ಕೂಡದೆಂಬದರ ಬದಲಿಗೆ ಗಾಡಿಗಳಿಗೆ ಯೆಲದಡೆಗಳು ಇದ್ದಾಗ್ಯೂ ಸಮ ರಸ್ತೆಯಲ್ಲಿ ಬಿಡುವವರಿಗೆ ಶಿಕ್ಷೆಗೆ ಗುರಿಪಡಿಸಲಾದೀತೆಂಬದಾಗಿ ಹುಕುಂ ಕೊಡುವರೆ ಮೇಲಾಧಿಕಾರಿಗಳು ತಕ್ಕ ಏರ್ಪಾಡು ಮಾಡುವರೆಂದು ಕೋರುತ್ತೇವೆ

ಪುತ್ತೂರು)
ತಾ. 9 – 2 – 15) ಗಾಡಿಗಾರರು.

~~~~~~~~

ಅಯ್ಯಾ ಪತ್ರಕರ್ತರೇ,

ಇಲ್ಲಿಯ ವೆಬಸ್ಟರ್ ಮಾರ್ಕೆಟಿನಲ್ಲಿ ಪಟ್ಟಣಿಗರಿಗೆ ಬೇಕಾದ ಕಾಯಿಪಲ್ಯಗಳೂ, ಮೀನೂ, ಮಾಂಸವೂ ಬೇಕಾದುದೆಲ್ಲಾ ದೊರಕುತ್ತದೆ ಕೈಯಲ್ಲಿ ಹಣ ಒಂದಿದ್ದರೆ ಮಾರ್ಕೆಟಿನಲ್ಲಿ ಸಿಕ್ಕದ ಆಹಾರ ಜೀನಸುಗಳು ಯಾವುದೂ ಇಲ್ಲ ಒಟ್ಟಾರೆ ಪಟ್ಟಣಿಗರ ಆರೋಗ್ಯವು ಈ ಮಾರ್ಕೆಟಿನಲ್ಲಿ ದೊರೆಯುವ ಆಹಾರ ಜೀನಸುಗಳ ಮೇಲೆ ಹೊಂದಿಕೊಂಡಿರುತ್ತದೆಂತ ಹೇಳಿದರೆ ಹೆಚ್ಚಾಗದು ಈ ಮಾರ್ಕೆಟಿನಲ್ಲಿ ಕೊಳೆತ ಕಾಯಿಪಲ್ಯ, ಕೊಳಕು ಮೀನು, ಮಾಂಸ ಇತ್ಯಾದಿಗಳು ಮಾರಲ್ಪಟ್ಟರೆ ಜನರ ಆರೋಗ್ಯವೂ ಕೆಡುವದರಲ್ಲಿ ಅನುಮಾನವಿರದು ಹೀಗಿರುವಲ್ಲಿ ಪಟ್ಟಣದ ಜನರ ಆರೋಗ್ಯವು ಕೆಡದಂತೆ ಒಳ್ಳೇ ಆಹಾರ ಜೀನಸುಗಳು ಮಾರ್ಕೆಟಿನಲ್ಲಿ ಮಾರೋಣಾಗುವಂತೆ ಏನಾದರೂ ಏರ್ಪಾಡು ಇದೆಯೋ? ಇದ್ದರೆ ಎಂಥಾ ಏರ್ಪಾಡು ಇದೆ? ಈ ಏರ್ಪಾಡು ಸರಿಯಾಗಿ ನಡೆಯುತ್ತದೋ ಎಂಬದು ಪ್ರಶ್ನಾಸ್ಪದವಾಗಿದೆ ಯಾಕಂದರೆ ಇತ್ತಿತ್ತಲಾಗೆ ಮಾರ್ಕೆಟಿನಲ್ಲಿ ದೊರೆಯುವ ಕೆಲವು ಆಹಾರ ಜೀನಸುಗಳು, ಕಾಯಿಪಲ್ಯ, ಮೀನು, ಮಾಂಸ ಇತ್ಯಾದಿಗಳು ಸರಿಯಾದವುಗಳಲ್ಲವೆಂತ ಪಟ್ಟಣದ ಜನರು ಆಡಿಕೊಳ್ಳುತ್ತಿರುವರು ಆದುದರಿಂದ ಮಾರ್ಕೆಟಿನಲ್ಲಿ ಈ ವಸುಗಳನ್ನು ಮಾರುವವರ ಯಾ ವಸ್ತುಗಳ ತನಕಿ ನಡಿಸುವರೆ ತಕ್ಕ ಸಿಬಂದಿಯು ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ಪಟ್ಟಣದ ಜನರ ಆರೋಗ್ಯವನ್ನು ಲಕ್ಷಿಸಿ, ಮಾರ್ಕೆಟಿನಲ್ಲಿ ಜವಾಬ್ದಾರಿಯುಳ್ಳ ಒಬ್ಬ ಆಫೀಸರನನ್ನು ನೇಮಿಸಬೇಕೆಂದು ಹಾರೈಸುತ್ತೇನೆ.

ಪಟ್ಟಣಿಗ.

——— o ———

ಮಂಗಳೂರಿನಲ್ಲಿ ಅಗತ್ಯವಾಗಿ ಬೇಕಾಗಿರುವ ಒಂದು ಸಂಸ್ಥೆಯು.

——— o ———

ಪತ್ರಾಧಿಪರೇ,

ಮಂಗಳೂರಿನ ಒಟ್ಟಾರೆ ಸ್ಥಿತಿಯನ್ನು ನೋಡಿದರೆ ಹಲವು ತರದ ವಿಷಾದಗಳು ಮನಸ್ಸಿನಲ್ಲಿ ಉಂಟಾಗುತ್ತವೆ ಇಂಥಾ ವಿಷಾದಗಳ ನಿವಾರಣೆಗೆ ನಿರಾಶ್ರಿತ ಜನಸಹಾಯಕ ಸಂಘಗಳು, ಪರಸ್ಪರ ಸಹಾಯಕ ಸಂಘಗಳು, ನವೀನ ಸುಧಾರಣೆಯ ಮುಂದಾಳುಗಳು, ದೇವಸ್ಥಾನಗಳ ಉದ್ಧಾರಕರು, ಕ್ಲಬ್ಬುಗಳು, ಬ್ರಹ್ಮಜ್ಞಾನ ಸಂಘಗಳು, ಇನ್ನೂ ಹಲವು ವಿದ್ಯಾಶಾಲೆಗಳೂ ಕೊಲೇಜುಗಳೂ ಇರುವವು ಒಂದೇ ಒಂದು ಮಾತಿನಲ್ಲಿ ಹೇಳುವದಾದರೆ "ಪರರಿಗೆ" ಬೋಧೆಯನ್ನು ಕೊಡುವ ಸಂಸ್ಥೆಗಳೂ ಮತ್ತು ಜನರೂ ಇಲ್ಲಿ ಸಾಕಷ್ಟು ಇರುವರು ಪರಬೋಧೆಯ ಸಂಸ್ಥೆಗಳ ಮೂಲಕ ದೊರಕುವ ಜ್ಞಾನವಿವೇಕ ಇತ್ಯಾದಿಗಳು ಸ್ವಲ್ಪ ಕಾಲ ತಲೆಯನ್ನು ಸುತ್ತಿಕೊಂಡಿರುವವು ಒಂದೆರಡು ತಾಸುಗಳ ನಂತರ ಇಂಥಾ ಬೋಧೆಯು ವಾಯುಮಂಡಲಕ್ಕೆ ಉಗಿಯ ರೂಪವಾಗಿ ಸೇರಿ ಹೋಗುವದು. ಇಂಥಾ ಸಂಸ್ಥೆಗಳ ಬೋಧೆಯು ಮೆದುಳಿಗೆ ಹತ್ತಿ ಹೃದಯಕ್ಕೆ ದ್ರವಿಸುವದಿಲ್ಲ. ಆದ್ದರಿಂದ ಪರ ಬೋಧೆಯಿಂದ ಕಾರ್ಯ ಸಾಧನೆಯಾಗುವದಿಲ್ಲ. ಇದೊಂದು ಬಹಳ ದೊಡ್ಡ ವಿಷಾದ ಇಂಥಾ ವಿಷಾದ ನಿವಾರಣೆಗೆ ಇಲ್ಲಿ ಒಂದು ಸಂಸ್ಥೆಯಾದರೂ ಇರದು. ಬೋಧೆಯು ಪರರಿಗಲ್ಲ, ತನಗೂ ಸಹ ಅಗತ್ಯವಿರುವುದೆಂತ ಭಾವಿಸಿ ತನ್ನನ್ನು ತಾನು ಚೆನ್ನಾಗಿ ಅರಿತುಕೊಳ್ಳುವಂತೆ ಮಾಡುವ ಮತ್ತು ಜ್ಞಾನ ಶೂನ್ಯ ಕೋತಿಗಳಂತೆ ಮನುಷ್ಯರನ್ನು ವರ್ತಿಸಲು ಬಿಡದಂತೆ ಪ್ರಯತ್ನಿಸುವ ಒಂದು ಸಂಸ್ಥೆಯು ಇಲ್ಲಿ ಅಗತ್ಯವಾಗಿ ಬೇಕಾಗಿರುವದು. ಇದನ್ನು ಹ್ಯಾಗೆ ಸ್ಥಾಪಿಸಬಹುದೆಂಬದನು ತಮ ವಾಚಕರಲ್ಲಿ ಯಾರಾದ್ದರೂ ಸೂಚಿಸಿದರೆ ಉಪಕಾರವಾಗುತ್ತಿತ್ತು

ರಾಮು.

~~~~~~~~

ಕಳವುಗಳ ಗೋಳಾಟ.

~~~~~~~~

ಅಯ್ಯಾ ಪತ್ರಿಕಾಕರ್ತರೇ,

ಕಳವುಗಳ ಗೋಳಾಟಗಳು ಅಲ್ಲಲ್ಲ ಕೇಳಿಸುತ್ತಿವೆ. ಗೋಡೆಯ ಮೇಲಿರುವ ಒಂದು ಬೆಕ್ಕನ್ನು ಕಂಡು ಸಾವಿರ ಬೆಕ್ಕುಗಳು ಗೋಡೆಯ ಮೇಲಿವೆ ಎಂತ ಬೆಕ್ಕುಗಳ ಅಸಂಖ್ಯಾತ ಸಂಖ್ಯೆಯನ್ನು ತಾಯಿಗೆ ಹೇಳಿದ ಮಗುವಿನ ಮಾತು ಕಳವುಗಳ ವೃತ್ತಾಂತವನ್ನು ಜನರೆಲ್ಲರೂ ಆಡಿಕೊಳ್ಳುತ್ತಿರುವಾಗ ನೆನಪಿಗೆ ಬರುವದು. ಜನರಲ್ಲಿ ದಿಗಿಲನ್ನುಂಟುಮಾಡುವಷ್ಟು ಕಳವುಗಳು ಸಂಭವಿಸಲಿಲ್ಲವಾದರೂ ಚಿಲ್ಲರೆ ಕಳವುಗಳು, ಮನೆಗಳಿಗೆ ಕನ್ನಕೊರೆಯುವ ಪ್ರಯತ್ನ ಇತ್ಯಾದಿಗಳು ಹೆಚ್ಚಿವೆ ಎಂತ ಹೇಳಬಹುದು.

ಸಾಮಾನ್ಯವಾಗಿ ಕಳವುಗಳು ಹೆಚ್ಚಲು ಹಲವು ಕಾರಣಗಳಿವೆ. ನಿರುದ್ಯೋಗ, ಜುಗಾರಾಟಗಳು ಹೆಚ್ಚಾಗಿ ನಡೆಯುವುದು, ದವಸಧಾನ್ಯಗಳ ವಿಪರೀತ ಬೆಲೆ, ಆಗಿಂದಾಗ್ಯೆ ಆದ ಕಳವುಗಳು ಪತ್ತೆಯಾಗದೆ ಇರುವುದು, ಪೋಲೀಸು ಜವಾನರುಗಳ ಅಭಾವ ಇವೇ ಮೊದಲಾದವುಗಳು ಕಳವುಗಳು ಹೆಚ್ಚಿರುವ ಕಾರಣಗಳಲ್ಲಿ ಮುಖ್ಯವಾದವುಗಳಾಗಿರುವವು ಮಂಗಳೂರಲ್ಲಿ ಕಳವುಗಳು ಹೆಚ್ಚಲು ಈ ಕಾರಣಗಳಲ್ಲಿ ಯಾವದುವವೆಂಬುದನ್ನು ನೋಡಿಕೊಂಡು ಪ್ರಜಾ ಜನರೂ ಅಧಿಕಾರಿಗಳೂ ಒಟ್ಟುಕೂಡಿ ಬೇಕಾದ ನಿವೃತ್ತಿಯನ್ನುಂಟುಮಾಡಲು ತಕ್ಕ ಸಾಧನೆ ನಡೆಸುವದು ಉಚಿತವಾಗಿರುವದು ಕಳವುಗಳ ಗೋಳಾಟವು ನಂತರ ಕಡಮೆಯಾಗುವದೆಂಬುವದರಲ್ಲಿ ಸಂಶಯವಿರದು

ನಿಧಾನಿ.

~~~~~~~~

ಲಂಚ.

ಸ್ವಾಮಿ,

ಲಂಚವೆಂದರೇನು? ಅದು ಯಾರಿಗೆ ಯಾರು ಕೊಟ್ಟರಲ್ಲಿ ಲಂಚವೆಂತೆನಿಸಲ್ಪಡದು? ಲಂಚದಿಂದ ಕೇಡೇನು? ಇನಾಮು ಮತ್ತು ಲಂಚ ಇವೆರಡರ ಮಧ್ಯವಿರುವ ಅಂತರ ಯಾವದು? ಉಪಕಾರ ಸ್ಮರಣೆಯನ್ನು ಚನ್ನಾಗಿ ಮಾಡಿಕೊಂಡು ಪ್ರೀತಿಯ ಭಾವನೆಯನ್ನು ಮನಸ್ಸಿಗೆ ತಂದುಕೊಂಡು ಕಾರ್ಯವನ್ನು ನೆರವೇರಿಸಿ ಕೊಟ್ಟಂಥವರಿಗೆ ವೇತನವನ್ನು ಪ್ರತ್ಯೇಕವಾಗಿ ಇಂದವರು ಪಡದರೂ ಆತ್ಮ ಸಂತೋಷದಿಂದ ಕೊಡುವಂಥಾ ಹಣವು ಲಂಚವೆಂತ ಎಣಿಸಲ್ಪಡುವದೋ? ಲಂಚವನ್ನು ಪಡಕೊಳ್ಳುವದರಲ್ಲಿ ಇರುವ ದೋಷಗಳು ಯಾವವು? ದ್ರವ್ಯರೂಪದಿಂದಲ್ಲದೆ ಪದಾರ್ಥಗಳ ರೂಪದಲ್ಲಿ ಕೊಡೋಣಾಗುವಂಥಾದ್ದು ಲಂಚವೋ? ಕೆಳಗಿನ ತರಗತಿಯವರು ಪಡದರೆ ಲಂಚವೆಂತ ಎಣಿಸಲ್ಪಡುವಂಥಾದ್ದು ಮೇಲಣ ತರಗತಿಯವರು ಪಡದರೆ ಲಂಚವೆಂತಾಗುವದೋ? ಲಂಚದ ವಿಷಯ ಬೇಕಾದ ಮಾಹಿತಿಯನ್ನು ತಮ್ಮ ವಾಚಕರಲ್ಲಿ ಬಲ್ಲವರು ಯಾರಾದರೂ ಒರೆದು ತಮ್ಮ ಪತ್ರ ಮೂಲಕ ಪ್ರಕಟಿಸುತ್ತಿದ್ದರೆ ಉಪಕಾರವಾಗಬಹುದು.

ಸಿ. ಸಿ. ರಾವ್.

~~~~~~~~

ಅಯ್ಯಾ,

ಎರಡು ಬಾಯಸ್ಕೋಪುಗಳ ಗದ್ದಲವು ಮುಗಿಯಲೇ ಇಲ್ಲ. ಒರುತ್ತದೆ, ಭರುತ್ತದೆ, ಎಂತ ಎರಡು ಸರ್ಕಸ್ ಕಂಪೆನಿಗಳ ಜಾಹಿರಾತುಗಳು ಹೊರ ಬಿದ್ದಿವೆ. ಮಂಗಳೂರಿಗೆ ಇಂಥಾ ಕಂಪೆನಿಗಳು ಒಂದೊಂದಾಗಿ ಬರುವ ಬದಲಿಗೆ ಜೋಡಿನಲ್ಲಿ ಇವುಗಳು ಬರಹತ್ತಿವೆ. ಮನೆಗೆ ಬೆಂಕಿ ಬಿದ್ದು ಮನೆಯು ಪೂರ್ಣ ಬೂದಿಯಾಗಿ ಹೋದರೂ ಏನೂ ನಾಶವಾಗದು, ನಷ್ಟವಾಗದು, ಹ್ಯಾಗೆಂಬದನ್ನು ರಸಾಯನ ಶಾಸ್ತ್ರಜ್ಞರು ವಿವರಿಸಿ ಹೇಳುವರು. ಆದ್ದರಿಂದ ಚೆನ್ನಾಗಿ ಆಲೋಚನೆ ಮಾಡಿ ನೋಡಿದರೆ ಇಂಥಾ ಕಂಪೆನಿಗಳಿಂದ ಏನೂ ನಷ್ಟವಿಲ್ಲ. ಇಷ್ಟೇ ಅಲ್ಲ! ಇಂಥಾ ಕಂಪೆನಿಗಳಿಂದ ಒಂದು ಬಗೆಯ ಶಿಕ್ಷಣವು ಸಹ ದೊರಕುತ್ತದೆ. ಶಿಕ್ಷಣವೆಂದ ಕೂಡಲೇ ವಿದ್ಯಾರ್ಥಿಗಳ ನೆನವು ಹುಟ್ಟಿತು. ಮೇಲೆ ಪ್ರಸ್ತಾಪಿಸಿರುವ ರಸಾಯನ ಶಾಸ್ತ್ರವನ್ನು ವಿದ್ಯಾರ್ಥಿಗಳು ಶಾಲಾ ಕೊಲೇಜುಗಳಲ್ಲಿ ಕಲಿಯುತ್ತಿರುವಾಗ ಇನ್ನೊಂದು ಬಗೆಯ ಶಿಕ್ಷಣವನ್ನು ಸರ್ಕಸ್ ನಾಟಕ ಕಂಪೆನಿಗಳ ಮೂಲಕ ಪಡಿಯುವದು ಶಿಕ್ಷಣ ಸಂಪೂರ್ಣವಾಗಬೇಕಾದರೆ ಅಗತ್ಯ. ಆದ್ದರಿಂದ ಈ ಕಾಲದಲ್ಲಿ ಶಾಲಾ ಮತ್ತು ಕೊಲೇಜು ವಿದ್ಯಾರ್ಥಿಗಳು ಇನ್ನು ಮೇ ತಿಂಗಳ ವರೆಗೆ ನಾಲ್ಕಾರು ರೂಪಾಯಿ ಹೆಚ್ಚಿಗೆ ಕಳುಹಿಸಿಕೊಡಬೇಕೆಂತ ಹಳ್ಳಿ ಪಳ್ಳಿಗಳಲ್ಲಿರುವ ತಮ್ಮ ಹೆತ್ತವರಿಗೆ ಬರಕೊಂಡರೆ ಏನೂ ಮನ ಮರುಗದೆ ರೂಪಾಯಿ ಹಾಜರಿನಲ್ಲಿಲ್ಲವಾದರೂ ಕೈಕಡವಾಗಿ ಬೇರೆಯವರ ಹತ್ತರವಾದರೂ ಪಡಕೊಂಡು ಕೂಡಲೇ ಕಳುಹಿಸಿಕೊಡಬೇಕೆಂತ ಪ್ರಾರ್ಥನೆ.

ವಿದ್ಯಾರ್ಥಿಗಳ ಹಿತಚಿಂತಕ
~~~~~~~~

ಯುದ್ಧ ಸಮಾಚಾರ.

—— ೦ ——

ಫೆಬ್ರುವರಿ ತಾ. ೨.

ನ್ಯೂಜಿಲೇಂಡಿನಿಂದ ನಿರ್ಗತಿಕರಾದ ಬೆಲ್ಜಿಯನರಿಗೆ ೯೭,೦೦೦ ಕುರಿಗಳ ಹಸಿಮಾಂಸ ಮತ್ತು ವಸ್ತ್ರ ಇತ್ಯಾದಿಗಳನ್ನು ಸಾಗಿಸಿಕೊಂಡು ಬರುತ್ತಿದ್ದ "ಟೊಕೊಮೊರೋ" ಎಂಬ ಹಡಗವನ್ನು ಜರ್ಮನರು ಏನೊಂದು ಸೂಚನೆ ಕೊಡದೆ ಟೋರ್ಪೆಡೋ ಮೂಲಕ ಮುಣುಗಿಸಿದರು. ಹೀಗೆ ಜರ್ಮನರು ದಿನೇ ದಿನೇ ಇಂಟರ್‌ನೇಶನಲ್ ಕಾನೂನಿಗೆ ವಿರೋಧವಾಗಿ ನಡೆಯುತ್ತಲಿದ್ದಾರೆ. ಈ ಹಡಗದಲ್ಲಿದ್ದ ನಾವಿಕರ ಪೈಕಿ ೫೭ ಮಂದಿಯನ್ನು ಫ್ರೆಂಚರ ಒಂದು ನಾವೆಯು ರಕ್ಷಿಸಿರುವದು.

ಐರ್ಲಾಂಡಿನ ಕರಾವಳಿಯಲ್ಲಿ ಜರ್ಮನರ ಜಲಂತರ್ಗಾಮಿ ನಾವೆಗಳು ಪುನಃ ಒಂದೆರಡು ವ್ಯಾಪಾರದ ಹಡಗಗಳನ್ನು ಮುಣುಗಿಸಿರುವವು.

ಪಶ್ಚಿಮ ರಣರಂಗದಲ್ಲಿ ಗ್ರೇಂಡ್ ಡ್ಯೂನ್ ಎಂಬ ಸ್ಥಳದ ಮೇಲ್ಹಾಯುವ ಕೆಲಸವು ಅಲ್ಜೀರಿಯ ಮತ್ತು ಮೊರೊಕ್ಕೊ ಸೈನಿಕರಿಂದ ನಡಿಸಲ್ಪಟ್ಟಿರುವದೆಂತ ಬೆರ್ಲಿನಿನಲ್ಲಿ ಪ್ರಕಟವಾಗಿದೆ.

ಪಶ್ಚಿಮ ರಣರಂಗದಿಂದ ಕೈಸರರು ಬೆರ್ಲಿನಿಗೆ ಹಿಂದೆರಳಿ ಬಂದಿರುವರು. ಗಂಟ್ಲುನೋವಿನ ಸಂಬಂಧ ಕೈಸರರು ಬೆರ್ಲಿನಿಗೆ ಹಿಂದೆರಳಿದರು ಎಂತ ವಾರ್ತೆ ಇದೆ.

ರುಶ್ಯನರು ಪೂರ್ವ ಪ್ರಶ್ಯದ ಗುಂಬಿನೆನ್ ಮತ್ತು ಪಿಲ್ಕಲೆನ್ ಎಂಬಲ್ಲಿ ನಡೆಯುತ್ತಿರುವ ಕದನಗಳಲ್ಲಿ ಏಳಿಗೆಯನ್ನು ಹೊಂದುತ್ತಿದ್ದಾರೆ. ಪೋಲೇಂಡಿನ ಬೊರ್ಜಿಮೊಫ್ ಎಂಬ ಸ್ಥಳದಲ್ಲಿ ರುಶ್ಯನರು ಸಣೀನು ಕಾಳಗ ಮಾಡಿ ಜರ್ಮನರನ್ನು ಕಂದಕದೊಳಗಿಂದ ಹೊರಗೆ ಓಡಿಸಿರುವರು.

ರುಶ್ಯನರ ಟೋರ್ಪೆಡೋ ದೋಣಿಗಳು ತುರ್ಕರಿಗೆ ಸೇರಿದ ಟೆಬ್ರಿಜೊಂಡ್ ಎಂಬ ಸ್ಥಳದ ಮೇಲ್ಹಾಯಿದಿರುವದು. ಅಲ್ಲಿದ್ದ ತುರ್ಕಿ ಸೇನಿಕರು ಓಡಿರುವರು.

ಪೂರ್ವ ಆಫ್ರೀಕದಲ್ಲಿ ನಡೆದ ಯುದ್ಧದಲ್ಲಿ ಸಿಂಧ್ ಇಂಪೀರಿಯಲ್ ಸರ್ವಿಸ್ ಸೇನೆಯ ಮೆಜರ್ ಜನರಲ್ ನಾಥ ಸಿಂಗರೆಂಬವರು ಘಾಯ ಒಡೆದಿರುವರು.

ತಾ. ೩ನೇ ಫೆಬ್ರುವರಿ.

ಲಾಬಾಸ್ಸೆ ಬೆತ್ಯೂನ್ ದಾರಿಯಲ್ಲಿದ್ದ ಕಂದಕಗಳ ಮೇಲೆ ಜರ್ಮನರು ಹಲ್ಲಾ ಮಾಡಿದರು. ಆದರೆ ಅನೇಕ ಹೆಣಗಳನ್ನು ಬಿಟ್ಟು ಹಿಂದೆ ಹೋದರು. ಇತರ ಕೆಲವು ಕಂದಕಗಳನ್ನು ಸ್ವಾಧೀನ ಮಾಡಿಕೊಳ್ಳಲು ಯತ್ನಿಸಿದ ಜರ್ಮನರು ಹಿಂದಕ್ಕೆ ಅಟ್ಟಲ್ಪಟ್ಟಿರುವರು. ವೊಸೆಜೆಸ್ ಮತ್ತು ಅಲ್ಸೆಸಿನಲ್ಲಿ ವಿಶೇಷ ಹಿಮ ಬಿದ್ದಿರುವದರಿಂದ ಕದನಗಳು ನಡಿಯಲಿಲ್ಲ.

ಉತ್ತರ ಫ್ರಾನ್ಸಿನಲ್ಲಿ ಜರ್ಮನರಲ್ಲಿ ಈಚೆಗೆ ಆದ ನಷ್ಟವು ಬಹು ಹೆಚ್ಚಿನದಾಗಿರುವದು. ೨೧ ಆಸ್ಪತ್ರೆ ಅಗ್ಗಾಡಿಗಳಲ್ಲಿ ಘಾಯ ಒಡೆದ ಸೈನಿಕರನ್ನು ಜರ್ಮನರು ಎಕ್ಲಾಚಪೆಲ್ಲಿಗೆ ಶನಿವಾರ ಒಂದೇ ದಿನ ಕೊಂಡುಹೋಗಿರುವರು.

ಜರ್ಮನಿಯಲ್ಲಿ ದವಸಧಾನ್ಯಗಳ ಬೆಲೆಯು ಬಹಳ ಚಡಾವಾಗಿರುತ್ತದೆ. ಇದರಿಂದ ಜನರು "ಯುದ್ಧವನ್ನು ನಿಲ್ಲಿಸಿರಿ" ಎಂಬ ದೊಡ್ಡಕ್ಷರಗಳಿಂದ ಬರೆದ ನೋಟೀಸುಗಳನ್ನು ಹಚ್ಚುತ್ತಿದ್ದಾರೆ. ಯುದ್ಧಕ್ಕೆ ವಿರೋಧವಾಗಿ ಕೆಲವು ಕಡೆಗಳಲ್ಲಿ ಸಭೆ ಕೂಡುತ್ತಿದೆ. ಇಂಥಾ ಸಭೆಗೆ ಹೋದ ಕೆಲವರು ಕೈದು ಮಾಡಲ್ಪಟ್ಟಿರುವರೆಂಬ ವಾರ್ತೆ ಇದೆ.

ಪೋಲೆಂಡಿನ ಲಿಪ್ನೊ ಮತ್ತು ಡೊಬ್ರಿಜನ್ ಎಂಬಲ್ಲಿ ಜರ್ಮನರು ಕದನಕ್ಕೆ ನಿಂತು ಬಹಳ ನಷ್ಟಹೊಂದಿ ಹಿಮ್ಮೆಟ್ಟಿದರಲ್ಲದೆ ಮಾಕೋವಿ ಎಂಬ ಗ್ರಾಮವನ್ನು ಬಿಟ್ಟು ಹೋದರು

ಬೊಲಿಮೊಫ್ ಪ್ರಾಂತ್ಯದಲ್ಲಿ ಜರ್ಮನರಲ್ಲಿ ಜನವರಿ ತಾ. ೨೩ರಿಂದ ತಾ. ೩೦ರ ವರೆಗೆ ೬,೦೦೦ ಮಂದಿ ಹತರಾದರು. ಕಾರ್ಪಥೇನಿಯದಲ್ಲಿ ರುಶ್ಯನರು ಜನವರಿ ತಾ. ೨೬—೨೯ರ ಒಳಗೆ ೬೮ ಆಫೀಸರರನ್ನೂ ೪,೦೭೫ ಮಂದಿ ಸೇನಿಕರನ್ನೂ ಹಿಡಿದರು.

ಜನವರಿ ತಾ. ೩೧ನೇ ಬೆಳಗ್ಗೆ ಸುಮಾರು ೩೦೦ ತುರ್ಕರು ಟೈಗ್ರಿಸ್ ನದಿಯ ಬಲಪಾರ್ಶ್ವದಲ್ಲಿದ್ದ ಮೊಜಾರ ಎಂಬಲ್ಲಿ ಬ್ರಿಟಿಷರ ಮೇಲ್ಹಾಯಿದರು, ಆದರೆ ತುರ್ಕರು ಸೋತು ಹೋಗಿ ಹಿಂದೆ ಓಡಿದರು. ಶತ್ರುಗಳಲ್ಲಿ ೬ ಮಂದಿ ಹತರಾದರು. ೪೯ ಮಂದಿ [illegible] ಸೇನೆಯಲ್ಲಿ [illegible] ಆಫೀಸರರೂ

ಭಾರತೀಯ ಸೈನಿಕರಿಗೆ ಉಪಯೋಗದ ಬಗ್ಗೆ ಸಿಮೂರಿನ ರಾಜಕುಮಾರ್ ಲೆಫ್ಟನೆಂಟ್ ಕರ್ನಲ್ ಸರ್‌ಬಿಕಾರಾಮ್ ಸಿಂಗ್ ರವರು ೩೦೦ ಸಾವಿರ ಸಿಗರೇಟುಗಳನ್ನು ಕಳುಹಿಸಿ ಕೊಟ್ಟಿರುವರು.

ತಾ. ೪ನೇ ಫೆಬ್ರುವರಿ.

ಫ್ರೆಂಚರು ಪರ್ತೆಸ್ ಪ್ರಾಂತ್ಯದಲ್ಲಿ ಮುಂದರಿಸುತ್ತಲಿದ್ದಾರೆ. ಮಿತ್ರರು ತೋಪು ಕಾಳಗದಲ್ಲಿ ವಿಶೇಷ ಜಯವನ್ನು ಹೊಂದುತ್ತಿದ್ದು ತಂತಮ್ಮ ನೆಲೆಗಳನ್ನು ಭದ್ರವಾಗಿ ಕಾಪಾಡಿಕೊಂಡಿರುವರು. ಜರ್ಮನರು ಅಲ್ಸೆಸಿನ ಸೆರ್ನೆಯಲ್ಲಿ ಫ್ರೆಂಚರ ಕಂದಕಗಳ ತೋಪಿನ ಎದುರಿಗೆ ನಿಲ್ಲಲಾರದೆ ಸೆರ್ನೆಯನ್ನು ಬಿಟ್ಟು ಹೋಗಿರುವರು. ಜರ್ಮನರ ಜನರಲ್ ವನ್‌ಕ್ಲಕ್ಕರ ಮಗ ಡ್ಯೂನ್ಸಿನಲ್ಲಿ ನಡೆದ ಕದನದಲ್ಲಿ ಮಡಿದು ಹೋದನು.

ಜರ್ಮನರ ವಾಯು ನಾವಿಕರು ಡನ್‌ಕರ್ಕಿನ ಮೇಲೆ ಆದಿತ್ಯವಾರ ಗುಂಡುಗಳನ್ನು ಬಿಸಾಡಿದರು. ಮಿತ್ರರ ವಾಯುನಾವೆಗಳು ಅವರನ್ನು ಓಡಿಸಿದವು.

ಪೋಲೇಂಡಿನಲ್ಲಿ ರುಶ್ಯನರು ಜರ್ಮನರನ್ನು ಹಿಂದಟ್ಟುತ್ತಿದ್ದಾರೆ.

ಸೂವೆಜ್ ಕಾಲಿವೆಯು ಮುಚ್ಚಲ್ಪಟ್ಟಿದೆಂಬ ವಾರ್ತೆಯು ಸುಳ್ಳಾಗಿದೆಂತ ಪ್ರಕಟವಾಗಿದೆ. ಆಸ್ಟ್ರೇಲಿಯದ ಇನ್ನೊಂದು ಸೇನೆಯು ರಣರಂಗಕ್ಕೆ ಹೊರಟಿರುವದು.

ತಾ. ೫ನೇ ಫೆಬ್ರುವರಿ.

"ಅಸ್ಟೂರಿಯಸ್" ಎಂಬ ಆಸ್ಪತ್ರೆ ಹಡಗಕ್ಕೆ ಜರ್ಮನರು ಯುದ್ಧ ಕಾನೂನಿಗೆ ವಿರೋಧವಾಗಿ ಗುಂಡು ಹಾರಿಸಿರುವರು. ಆದರೆ ಈ ಹಡಗವು ತಪ್ಪಿಸಿಕೊಂಡು ಬಂದಿರುವದು.

ಆಸ್ಟ್ರೇಲಿಯ" ಎಂಬ ಪೆಟಗೋನಿಯಾದ ಯುದ್ಧನಾವೆಯು ಜರ್ಮನರ ಒಂದು ಕ್ರೂಜರ್ ನಾವೆಯನ್ನು ಮುಣುಗಿಸಿರುವದು.

ಜರ್ಮನರ ಒಂದು ಡಿಸ್ಟ್ರೋಯರ್ ಯುದ್ಧನಾವೆಯನ್ನು ರುಶ್ಯನರ ಜಲಂತರ್ಗಾಮಿ ನಾವೆಯು ಮುಣುಗಿಸಿರುವದು.

ಪೋಲೇಂಡಿನಲ್ಲಿ ರುಶ್ಯನರು ಕೆಂಪೆ ಎಂಬ ಪಟ್ಟಣವನ್ನು ಸ್ವಾಧೀನ ಮಾಡಿಕೊಂಡಿರುವರು. ಇತರ ರಣರಂಗದಲ್ಲಿ ಕದನಗಳು ನಡೆಯುತ್ತಿವೆ. ಕಾರ್ಪಥೇನಿಯದಲ್ಲಿ ಕಠಿಣ ಕಾಳಗವು ನಡೆಯುತ್ತಿರುವದು. ರುಶ್ಯನರ ವಿಮಾನ ಗಾಡಿಗಳು ಜರ್ಮನರ ರಿಜರ್ವ್ ಸೇನಿಕರಿದ್ದ ಟ್ರೇನಿನ ಮೇಲೆ ಸಿಡಿಮದ್ದು ಬಿಸಾಡಿ ಹಾನಿ ಪಡಿಸಿರುವರು.

ರುಶ್ಯನರು ಕಾರ್ಪಥೇನಿಯವನ್ನು ದಾಟಿ ಹಂಗೇರಿಯದ ಮೈದಾನಿನಲ್ಲಿ ಮುಂದರಿಸುತ್ತಲಿರುವರೆಂಬ ವಾರ್ತೆ ಬಂದದೆ.

ತುರ್ಕರು ಟೆಬ್ರಿಜನಲ್ಲಿ ಪೂರ್ಣವಾಗಿ ಸೋಲಿಸಲ್ಪಟ್ಟಿರುವರು. ರುಶ್ಯನರು ಟೆಬ್ರಿಜನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಕಾಕಾಸಸಿನಲ್ಲಿ ನಡೆದ ಯುದ್ಧದಲ್ಲಿ ತುರ್ಕರ ೩ನೇ ಸೇನೆಯ ಅಧಿಪತಿಯಾದ ಮಹಮ್ಮದ್ ಪೆಟ್ನಿ ಬೇರವರು ಪರಿವಾರ ಸಹಿತ ಶೆರೆಬಿದ್ದರುವರು. ಒಟ್ಟಿಯ ಸಮಾಸ ೩೫೦ ತುರ್ಕಿ ಸೈನಿಕರು ರುಶ್ಯನರ ಶೆರೆಬಿದ್ದಿರುತ್ತಾರೆ.

ಆಸ್ಟ್ರೇಲಿಯನರ ೨ನೇ ಸಾರಿ ಕಳುಹಿಸಲ್ಪಟ್ಟ ಸೇನೆಯು ಈಜಿಪ್ತಿನಲ್ಲಿ ಇಳಿದಿರುವದು.

ದಕ್ಷಿಣ ಆಫ್ರೀಕದ ದಂಗೆಗಾರ ಮೆರಿಟ್ಜನ ಸೇನೆಯ ಒಂದಂಶವು ಯೂನ್ಯನ್ ಸರಕಾರ ಸೇನೆಗೆ ಶರಣಾಗತವಾಗಿರುವದು. ಕೆಂಪನ ಕೂಡೆ ೫೦೦ ಮಂದಿ ಶರಣಾಗತರಾಗಿರುವರು.

ತಾ. ೬ನೇ ಫೆಬ್ರುವರಿ.

ಲಾಬಸ್ಸೆ, ಬೆಥ್ಯೂನ್, ಅರ್‍ರಾಸ್ ಮತ್ತು ಅಲ್ಬರ್ಟ್ ಮತ್ತು ಐನೆಯಲ್ಲಿ ತೋಪು ಕಾಳಗ ನಡೆಯುತ್ತಿದೆ. ಕದನವು ಮಿತ್ರರಿಗೆ ಗುಣವಾಗಿ ನಡೆದಿರುವದು. ಅರ್‍ರಾಸಿನ ದಾರಿಯಲ್ಲಿ ಮಿತ್ರರು ೨೦೦—೩೦೦ ಯಾರ್ಡುಗಳ ಕಂದಕಗಳನ್ನು ಹಿಡಿದಿರುವರು. ಮಿತ್ರರ ತೋಪುಗಳು ಐನೆಯಲ್ಲಿ ಜರ್ಮನರ ಬತ್ತೇರಿಗಳ ಮೇಲೆ ಗುಂಡು ಹಾರಿಸಿ ಹಾನಿ ಮಾಡಿರುವದು. ವೆರ್ಡನಿನಲ್ಲಿ ಫ್ರೆಂಚರು ಜರ್ಮನರ ವಾಯುನಾವೆಗೆ ಗುಂಡು ಹಾರಿಸಿ, ಅದನ್ನು ಕೆಳಕ್ಕೆ

ಜನವರಿ ತಾ. ೧೮ರಿಂದ ಫ್ರಾನ್ಸಿನಲ್ಲಿ ಆಸ್ಟ್ರಿಯದ ೧೧೫೦ ತೋಪು ಸೇನಿಕರು ಹತರಾದರು. ಬೆಲ್ಜಿಯದಿನಲ್ಲಿ ಹಂಗೇರಿಯ ಅಶ್ವ ಪಡೆಯವರಲ್ಲಿ ೪೫೦ ಮಂದಿ ಪ್ರಾಣಾಪಾಯ ಹೊಂದಿದರು. ಹಂಗೇರಿಯ ಕಾಲಾಳು ಸೇನಿಕರಲ್ಲಿ ೬೧೦೦ ಮಂದಿ ಪ್ರಾಣಾಪಾಯ ಹೊಂದಿದರೆಂತ ಪೆಟ್ರೋಗ್ರೇಡಿನಲ್ಲಿ ಪ್ರಕಟವಾಗಿದೆ.

ಪೋಲೇಂಡಿನ ಸೈರ್‌ಪೆ ಎಂಬಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಜರ್ಮನರು ಲಿಪ್ನೊ ಎಂಬಲ್ಲಿಗೆ ಸರಿದಿರುವರು. ರುಶ್ಯನರು ಯುದ್ಧ ಸಾಧನಕ್ಕೆ ತಕ್ಕದಾದ ಒಂದು ಮುಖ್ಯ ಸ್ಥಳವನ್ನು ಪಡಕೊಂಡಿರುವರು.

ತುರ್ಕರು ಸೂವೆಜ್ ಕಾಲಿವೆಯನ್ನು ದಾಟಲು ಮಾಡಿದ ಪ್ರಯತ್ನವನ್ನು ಬ್ರಿಟಿಷರು ಹಾಳು ಮಾಡಿರುವರು. ಬ್ರಿಟಿಷರು ಮೊದಲಾಗಿ ತುರ್ಕರನ್ನು ಸೇತುವೆ ಕಟ್ಟುವ ಸಾಹಿತ್ಯಗಳ ಸಹಿತ ಹತ್ತಿರಕ್ಕೆ ಬರಮಾಡಿ ಸಂತಪ ತುರ್ಕರ ಮೇಲ್ಹಾಯಿದರು. ತುರ್ಕರು ತಮ್ಮ ಎಲ್ಲಾ ಸಾಹಿತ್ಯಗಳನ್ನು ಬಿಟ್ಟು ಓಡಿಹೋದರು. ಶತ್ರುಗಳಲ್ಲಿ ಕೆಲವರು ನೀರಲ್ಲಿ ಮುಣುಗಿಸತ್ತರು. ಕಾಂತಾರದಲ್ಲಿ ಮೇಲ್ಹಾಯಿದ ತುರ್ಕರೂ ಹಿಂದೆ ಸರಿದಿರುವರು. ಇಲ್ಲಿ ತುರ್ಕರಲ್ಲಿ ೧೬ ಮಂದಿ ಪ್ರಾಣಾಪಾಯ ಹೊಂದಿದರು. ೪೦ ಮಂದಿ ಶೆರೆಬಿದ್ದರು ಬ್ರಿಟಿಷರಲ್ಲಿ ೩ ಮಂದಿ ಅಪಾಯ ಹೊಂದಿದರು.

ವೈಸರಾಯ ಪ್ರಭುಗಳವರು ಬಸ್ರಾಕ್ಕೆ ಹೋಗಿರುವರು. ಹಿಂದೂಸ್ಥಾನದ ವೈಸರಾಯರಲ್ಲಿ ಬಸ್ರಾವನ್ನು ಸಂದರ್ಶಿಸಿದವರು ಇವರೇ.

ತಾ. ೮ನೇ ಫೆಬ್ರುವರಿ.

ಗ್ರೇಟ್‌ಬ್ರಿಟನಿನ ಸುತ್ತಲಿರುವ ಸಮುದ್ರ, ಐರ್ಲಾಂಡಿನ ಸುತ್ತಲಿನ ಸಮುದ್ರ, ಮತ್ತು ಇಂಗ್ಲಿಷ್ ಕಾಲಿವೆಗಳು ಯುದ್ಧಕ್ಕೆ ಸಂಬಂಧಪಟ್ಟ ಸ್ಥಳವಾಗಿದೆಂದೂ, ಫೆಬ್ರುವರಿ ತಾ ೧೮ರಿಂದ ಶತ್ರುಗಳ ಪ್ರತಿ ಒಂದು ವ್ಯಾಪಾರ ಹಡಗವು ವಿನಾಶ ಮಾಡಲ್ಪಡುವದೆಂದೂ ಜರ್ಮನರು ಪ್ರಕಟಿಸಿರುವದಲ್ಲದೆ ಈ ಸ್ಥಳಗಳಲ್ಲಿ ಬರುವ ತಟಸ್ಥ ರಾಜ್ಯಗಳ ಹಡಗಗಳಿಗೂ ಕೇಡು ಸಂಭವಿಸಬಹುದೆಂತ ತಿಳಿಸಿರುವರು. "ನೋರ್ತ್ ಸೀ"ಯ ಪೂರ್ವದಲ್ಲಿ ಶೆಟ್‌ಲೇಂಡಿನ ಸುತ್ತಲು ೩೦ ಮೈಲು ಅಗಲದಲ್ಲಿ ಮಾತ್ರ ಹಡಗಗಳಿಗೆ ಕೇಡು ಸಂಭವಿಸಲಿಕ್ಕಿಲ್ಲವೆಂತಲೂ ತಿಳಿಸಿರುತ್ತಾರೆ. ಈ ಪ್ರಕಟಣೆಯಿಂದ ತಟಸ್ಥ ರಾಜ್ಯಗಳೆಲ್ಲವೂ ಜರ್ಮನಿಯ ಮೇಲೆ ರೇಗಿರುವದು. ಮುಖ್ಯವಾಗಿ ಅಮೇರಿಕದಲ್ಲಿ ಈ ಸಂಬಂಧ ವಿಶೇಷ ಚಳವಳ ಉಂಟಾಗಿರುವದು.

ಸೂವೆಜ್ ಕಾಲಿವೆಯಲ್ಲಿ ಬ್ರಿಟಿಷರು ೬೦೦ ತುರ್ಕಿ ಸೈನಿಕರನ್ನೂ ೩ ಫಿರಂಗಿಗಳನ್ನೂ ಯುದ್ಧ ಸಾಮಾಗ್ರಿಗಳನ್ನು ಸಾಗಿಸುತ್ತಿದ್ದ ೯೦ ಒಂಟೆಗಳನ್ನೂ ಶೆರೆಹಿಡಿದಿರುವರು. ೪೦೦ ಮಂದಿ ತುರ್ಕಿ ಸೈನಿಕರು ಹತರಾದರು. ೨೪೦೦ ಮಂದಿ ಪ್ರಾಣಾಪಾಯ ಹೊಂದಿದರು. ಹತರಾದವರಲ್ಲಿ ಒಬ್ಬ ಜರ್ಮನ್ ಆಫೀಸರನೂ ಇದ್ದನು.

ಶತ್ರುಗಳು ತೌಸೂಮವಿನ ಮೇಲೆ ಹಲ್ಲಾ ಮಾಡಲು ಯತ್ನಿಸಿ ಗುಂಡು ಹಾರಿಸಿದರು. ಆದರೆ ಬ್ರಿಟಿಷರ ಯುದ್ಧನಾವೆಗಳು ಹಿಂದೆ ಗುಂಡು ಹಾರಿಸಿದವು. ತುರ್ಕರು ತೆಪ್ಪಗಳಲ್ಲಿ ಕಾಲಿವೆಯನ್ನು ದಾಟಲು ಯತ್ನಿಸಿದರು. ಆದರೆ ೮ ಆಫೀಸರರನ್ನೂ ೨೫೦ ಸೈನಿಕರನ್ನೂ ಕಳಕೊಂಡು ಹಿಂದೆರಳಿದರು. ಬ್ರಿಟಿಷರಲ್ಲಿ ೨ ಆಫೀಸರರೂ ೧೩ ಸೈನಿಕರೂ ಹತರಾದರು. ೫೦ ಸೈನಿಕರು ಘಾಯ ಒಡೆದರು.

ಕಾಂತಾರದ ಮೇಲ್ಹಾಯಿದ ತುರ್ಕರು ಹಿಂದಕ್ಕೆ ಓಡಿಸಲ್ಪಟ್ಟರು. ಇಲ್ಲಿ ಶತ್ರುಗಳಲ್ಲಿ ೨೧ ಮಂದಿ ಹತರಾದರು. ೨೧ ಮಂದಿ ಘಾಯ ಒಡೆದರು. ಘಾಯ ಒಡೆಯದ ೨೧ ಮಂದಿ ಬ್ರಿಟಿಷರ ಶೆರೆಬಿದ್ದರು. ಶತ್ರುಗಳ ಸೇನಾ ಬಲವು ೬ ಬತ್ತೇರಿಗಳ ಸಹಿತ ೧೨೦೦೦ ಆಗಿರುವದಂತೆ.

ಉತ್ತರ ಹಿಂದೂಸ್ಥಾನ.

ಮಕ್ಕಾ ಯಾತ್ರೆಗೆ ಹೋದ ಮಹಮ್ಮದೀ ಯಾತ್ರಿಕರಲ್ಲಿ ೧೨೦೦ ಯಾತ್ರಿಕರು "ಅಕ್ಬರ್" ಎಂಬ ಹಡಗದಲ್ಲಿ ಮುಂಬಾಯಿಗೆ ಬಂದಿಳಿದಿರುವರು. ಪ್ರಯಾಣದಲ್ಲಿ ೧೭ ಮಂದಿ ಸತ್ತಿದ್ದರು. ಈ ವರೆಗೆ ೧೩,೦೭೩ ಯಾತ್ರಿಕರು ಹಿಂದೂಸ್ಥಾನಕ್ಕೆ ಹಿಂತಿರುಗಿದ ಹಾಗಾಯಿತು. ಬಹ ಯಾತ್ರಿಕರು ಮುಸಾಫಿರಖಾನೆಯಲ್ಲಿರುವರು.

ಭರತಪುರದ ಮಹಾರಾಜರವರು ಶೀಮೆಯಿಂದ ಹಿಂದಿರುಗಿ ಬಂದಿರುವರು.

ಪೂನೆಯ ಹೆಡ್‌ಕನ್‌ಸ್ಟೇಬಲ್ ಸಲಮೋನನೆಂಬವನು ಮತ್ತು ಇತರ ಇಬ್ಬರು ಗೋಲಿಯವರು ವಿಶ್ವನು ಎಂಬ ಕೂಲಿಯವನನ್ನು ಕೊಂದಿದ್ದಾರೆಂದು ಆಪಾದಿಸಲ್ಪಟ್ಟಿದ್ದರೆಂದು ತಿಳಿಸಿತ್ತಷ್ಟೆ. ಈ ಮೊಕದ್ದಮೆ ತನಿಖೆಯಾಗಿ ಆಪಾದಿತರು ತಪ್ಪಿತಸ್ಥರೆಂದು ಜೂರಿಯರು ಅಭಿಪ್ರಾಯಪಟ್ಟದ್ದರಿಂದ ಜಡ್ಜರು ಹೆಡ್‌ಕನ್‌ಸ್ಟೇಬಲ್ ಸಲಮೋನನಿಗೆ ೯ ವರ್ಷಗಳ ಕಠಿಣ ಸಜೆಯನ್ನೂ ಉಳಿದ ಆಪಾದಿತರಲ್ಲಿ ಒಬ್ಬೊಬ್ಬನಿಗೆ ಎರಡೆರಡು ವರ್ಷಗಳ ಕಠಿಣ ಸಜೆಯನ್ನೂ ವಿಧಿಸಿದರು.

ಫಿರೋಜಪುರದ ಖೂನಿ ಮೊಕದ್ದಮೆಯಲ್ಲಿ ಸೆಶನ್ಸ್ ಜಡ್ಜರು ೭ ಮಂದಿ ಆಪಾದಿತರಿಗೂ ಮರಣ ಶಿಕ್ಷೆಯನ್ನು ವಿಧಿಸಿದರು.

ಬ್ರಿಟಿಷ ಹಿಂದೂಸ್ಥಾನಕ್ಕೆ ೧೯೧೪ನೇ ಇಸವಿ ಎಪ್ರಿಲ್ ತಿಂಗಳಿಂದ ಒಕ್ಟೋಬರ ತಿಂಗಳ ವರೆಗೆ ಹಿಂದೂಸ್ಥಾನದ ಸರಹದ್ದು ಪ್ರದೇಶಗಳಿಂದ ಭೂಮಾರ್ಗವಾಗಿ ೫೪೩ ಲಕ್ಷ ರೂಪಾಯಿಗಳ ಸರಕು ಬಂದಿರುವದು. ಹಿಂದಿನ ವರ್ಷ ಅದೇ ಕಾಲದಲ್ಲಿ ೫೪೧ ಲಕ್ಷ ರೂಪಾಯಿಗಳ ಸರಕು ಬಂದಿತ್ತು. ಹಿಂದೂಸ್ಥಾನದಿಂದ ಸರಹದ್ದು ಪ್ರದೇಶಗಳಿಗೆ ೫೧೦ ಲಕ್ಷ ರೂಪಾಯಿಗಳ ಸರಕು ಹೋಗಿರುವದು. ಹಿಂದಿನ ವರ್ಷ ಅದೇ ಕಾಲ ೫೦೩ ಲಕ್ಷ ರೂಪಾಯಿ ಬೆಲೆಬಾಳುವ ಸರಕು ಮಾತ್ರ ಹೋಗಿತ್ತು.

ಪ್ರೆಸ್ ಆಕ್ಟ ಸಂಬಂಧವಾದ ಒಂದು ಮೊಕದ್ದಮೆಯು ಮುಂಬಾಯಿಯ ಸೆಕೆಂಡ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಲ್ಲಿ ತನಿಖೆಗೆ ಬಂದಿರುವದು. ಸ್ವಾಮಿ ಗುರು ಮದನಮೋಹನಲಾಲರ ಮನೆಯಲ್ಲಿ ಕಳವಾದ ಸಂಬಂಧ ಪೋಲಿಸ ಆಫೀಸರರು ಮನೆ ಜಡ್ತಿಮಾಡಿದಾಗ ಒಂದು ದೊಡ್ಡ ವಿಗ್ರಹದ ಹಿಂದುಗಡೆ ಅಡಗಿಸಿಟ್ಟಿದ್ದ ೩ ಪೆಟ್ಟಿಗೆ ಪ್ರಿಂಟಿಂಗ್ ಟೈಪುಗಳೂ ಕಂಪೋಸ್ ಮಾಡಿದ ಟೈಪುಗಳೂ, ಶಾಯಿಯ ಖಾಲಿ ಟಿನ್ನುಗಳೂ ದೊರಕಿದವು. ಈ ಕಾರಣದಿಂದ ಸ್ವಾಮಿಯ ಮೇಲೆ ಪ್ರೆಸ್ ಆಕ್ಟಿನ ಪ್ರಕಾರ ಮೊಕದ್ದಮೆ ನಡೆಯಿತು. ಸ್ವಾಮಿಯು ಪ್ರಿಂಟಿಂಗ್ ಸಾಮಾನುಗಳನ್ನು ಮಾತ್ರ ಕೊಂಡುಕೊಂಡಿದ್ದನೆಂದೂ ಆ ಪ್ರೆಸ್ ಕೊಂಡುಕೊಂಡನಂತರ ಡಿಕ್ಲರೇಶನ್ ಕೊಡಬೇಕೆಂದಿದ್ದರೆಂತಲೂ ಆಪಾದಿತರ ಕಡೆಯ ವಾದವಾಗಿತ್ತು. ಆದರೆ ಕೋರ್ಟಿನಲ್ಲಿ ಹಾಜರುಪಡಿಸಿದ ವಹಿಗಳು ಕಂಪೋಸು ಮಾಡಿದ ವಿಷಯದ ಮೇಲೆ ಕಾಗದಗಳನ್ನು ಒತ್ತಿ ತೆಗೆದದ್ದಾಗಿತ್ತು. ಈ ವಹಿಗಳು ಆಪಾದಿತನ ಸ್ವಾಧೀನ ಇದ್ದವು. ಪ್ರೆಸ್ ಆಕ್ಟಿನ ಪ್ರಕಾರ ಪ್ರೆಸ್ ಸಂಬಂಧವಾದ ಎಲ್ಲಾ ಸಾಮಾನುಗಳು ಇರಬೇಕೆಂದಿದ್ದರೂ ಆಪಾದಿತನ ಕೂಡೆ ಸಿಕ್ಕಿದ ವಹಿಗಳು ಒತ್ತಿ ತೆಗೆಯಲ್ಪಟ್ಟದ್ದರಿಂದ ಡಿಕ್ಲರೇಶನನ್ನು ತಪ್ಪಿಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿದ್ದಾಗಿದೆ ಎಂದು ತೋರಿಬರುತ್ತದೆ. ಆಪಾದಿತನ ಸ್ವಾಧೀನವಿದ್ದ ವಹಿಗಳು ಆಕ್ಷೇಪಕರವಲ್ಲವಾದರೂ ಇನ್ನು ಮುಂದಕ್ಕೆ ಆಕ್ಷೇಪಕರವಾದ ವಹಿಗಳನ್ನು ಕಂಪೋಸು ಮಾಡಿ, ಪ್ರಿಂಟ್ ಮಾಡಬಹುದ್ದಾಗಿದೆ ಎಂದು ನಂಬಬಹುದಾಗಿದೆ ಎಂಬದಾಗಿ ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟು ಆಪಾದಿತನಿಗೆ ೨೦೦ ರೂಪಾಯಿ ಜುಲುಮಾನೆ ತಪ್ಪಿದರೆ ೬ ವಾರಗಳ ಸಾಧಾರಣ ಸಜಾ ವಿಧಿಸಿದರು.

ಡಿಲ್ಲಿಯಲ್ಲಿ ತಾ. ೩ರಲ್ಲು ಸಿಡಿಲು ಮಳೆ ಬಂದು ೩ ಗಂಟೆಯಿಂದ ೯|| ಗಂಟೆಯ ವರೆಗೆ ಕಠಿಣ ಮಳೆ ಸುರಿಯಿತು. ಈ ಕಾಲದಲ್ಲಿ ಇಂಥಾ ಗಾಳಿಮಳೆಯು ಹಿಂದೆ ಬಂದದ್ದಿಲ್ಲ. ಸೇನೆಗಳು ತಂಗಿದ್ದ ತಗ್ಗು ಪ್ರದೇಶದಲ್ಲಿ ನೆರೆಯಾಗುವ ಸಂಭವವಿತ್ತು. ಆದರೆ ಆಳವಾದ ಕಂದಕಗಳಿದ್ದುದರಿಂದ [illegible] ನೆರೆಯಿಂದ ತಪ್ಪಿಸಿಕೊಂಡರು.

[illegible] ಪಾಲಸಿಂಗನೆಂಬವನು ಕೊಲೆಮಾಡಿದ್ದನೆಂತ ಆಪಾದಿಸಲ್ಪಟ್ಟಿದ್ದನೆಂದೂ ಕೊಲೆಮಾಡಿದ್ದು [illegible] ಆಪಾದಿತನು [illegible] ಅನಂತರ ಶಾಂತಿಯು [illegible]ತಳಾಗಿ ಹಾಜರುಪಡಿಸಲ್ಪಟ್ಟಿದ್ದಳೆಂದೂ ಹಿಂದೆ ತಿಳಿಸಿತ್ತಷ್ಟೆ. ಈ ವಿಷಯ ಬುಲಿಟಿನ್ ಪತ್ರಿಕೆಯಲ್ಲಿ ಈ ರೀತಿ ಪ್ರಕಟವಾಗಿರುವದು. ಶಾಂತಿಯು ತನ್ನ ಮನೆಯಿಂದ ಕಾಣೆಯಾಗಿರುವಳೆಂಬ ವರದಿಯು ಪೋಲಿಸಿಗೆ ತಿಳಿದಾಕ್ಷಣ ಸಬ್ ಇನ್ಸ್‌ಪೆಕ್ಟರನು ತನಿಖೆಗೆ ಪ್ರಾರಂಭಿಸಿದನು. ಪಾಲಸಿಂಗನ ಗೈರ್ಹಾಜರಿಯಲ್ಲಿ ಜರನ್‌ವಾಲದ ಸಬ್ ಇನ್ಸ್‌ಪೆಕ್ಟರನು ತಕ್ಕ ತನಿಖೆ ನಡಿಸಿ ಕಾಣೆಯಾದ ಶಾಂತಿಯು ಲಕ್ನೋ ಎಂಬಲ್ಲಿಗೆ ಬಂದಿದ್ದಾಳೆಂದು ತಿಳಿದು ಬಂದುದರಿಂದ ಅಲ್ಲಿಗೆ ಬಂದರು. ತನ್ನಷ್ಟೆ ಪಾಲಸಿಂಗನು ಅಲ್ಲಿಗೆ ಬಂದು ಪೋಲಿಸಿನವರು ಪತ್ತೆ ಮಾಡದನ್ನು ಕಂಡು ಅವರ ಬಳಿಗೆ ಹೋಗಿ ತಾನೇ ಕೊಲೆಪಾತಕನೆಂದು ಅರಿಕೆ ಮಾಡಿದನು. ಆದರೆ ನಂತರ ಪಾಲಸಿಂಗನು ಹೇಳಿದನ್ನು ಅಲ್ಲಗಳೆದುದರಿಂದ ಪೋಲಿಸಿನವರು ಅವನನ್ನು ಖುಲಾಸುಪಡಿಸಿದರು. ಬಳಿಕ ಶಾಂತಿಯು ಮನೆಗೆ ಬಂದಳು. ಪಾಲಸಿಂಗನ ತನ್ನನ್ನು ತಕ್ಕೊಂಡು ಹೋಗಿದನೆಂದು ಅವಳ ಹೇಳಿಕೆಯಾಗಿದೆ.

ವಿಕ್ಟರಿ ಬೇಂಕಿನ ಪ್ಯಾದೆಯಾಗಿದ್ದ ವಲಿ ಮಹಮ್ಮದ್ ಎಂಬವನು ಅರ್ಧಲಕ್ಷ ರೂಪಾಯಿಗಳ ನೋಟನ್ನು ಬೇಂಕಿನಿಂದ ಪೋಸ್ಟಾಫೀಸಿಗೆ ಕೊಂಡ ಹೋಗುವಾಗ ಅಪಹರಿಸಿದನೆಂದು ಆಪಾದಿಸಲ್ಪಟ್ಟಿದ್ದನು. ಇವನಿಗೆ ಮೆಜಿಸ್ಟ್ರೇಟರು ೪ ವರ್ಷಗಳ ಕಠಿಣ ಸಜಾ ಮತ್ತು ೨೦೦೦ ರೂಪಾಯಿಗಳ ಜುಲುಮಾನೆ ಜುಲುಮಾನೆ ಕೊಡ ತಪ್ಪಿದರೆ ಒಂದು ವರ್ಷ ಹೆಚ್ಚಿಗೆ ಸಜಾ ವಿಧಿಸಿದರು. ಉಳಿದ ಆಪಾದಿತರಿಗೂ ಎರಡೆರಡು ವರ್ಷಗಳ ಸಜಾ ೫೦೦ ರೂಪಾಯಿಗಳ ಜುಲುಮಾನೆ ವಿಧಿಸಿದರು. ಇವರಿಗೆ ವಿಧಿಸಲ್ಪಟ್ಟ ಸಜೆಯಲ್ಲಿ ಇವರು ಮೂರು ತಿಂಗಳ ಏಕಾಂತ ಸಜೆಯನ್ನು ಭವಿಸಬೇಕಾಗುವದು.

ಪ್ರೆಸ್ ಆಕ್ಟಿನ ಪ್ರಕಾರ ಡಿಕ್ಲರೇಶನ್ ಮಾಡಿಸದೆ ಪ್ರೆಸ್ ಸಂಬಂಧವಾದ ಸಾಮಾಗ್ರಿಗಳನ್ನು ಇಟ್ಟುಕೊಂಡದ್ದಕ್ಕಾಗಿ ೨೦೦ ರೂಪಾಯಿಗಳ ಜುಲುಮಾನೆ ವಿಧಿಸಲ್ಪಟ್ಟ ಸ್ವಾಮಿ ಗುರು ಮದನಮೋಹನಲಾಲರವರು ಲೈಸನ್ಸ್ ಇಲ್ಲದೆ ಖಡ್ಗ ಇದ್ದ ಒಂದು ಬೆತ್ತವನ್ನು ಇಟ್ಟುಕೊಂಡಿದ್ದಾರೆಂದು ಆಪಾದಿಸಲ್ಪಟ್ಟಿದ್ದರು. ಇವರಿಗೆ ಮೆಜಿಸ್ಟ್ರೇಟರು ೨೫ ರೂಪಾಯಿಗಳ ಜುಲುಮಾನೆ ವಿಧಿಸಿದರು.

ಅಮೃತಸರಿಗೆ ೭ ಮೈಲು ದಕ್ಷಿಣದಲ್ಲಿ ಕಳೆದ ಮಂಗಳವಾರ ಒಂದು ದಕಾಯಿತಿಯು ನಡೆದಿರುವದು. ೨೫ ಮಂದಿ ಆಯುಧಗಳ ಸಹಿತ ಒಬ್ಬ ಸಾವುಕಾರರ ಮನೆಗೆ ನುಗ್ಗಿದರು. ಈ ಮನೆಯಿಂದ ಎಷ್ಟು ಕಳವಾಗಿರುವದೆಂಬ ಸಂಗತಿ ಇನ್ನೂ ಗೊತ್ತಾಗಲಿಲ್ಲ. ಆದರೆ ಗ್ರಾಮಸ್ಥರಿಗೂ ಈ ದಕಾಯಿತರಿಗೂ ಜಟಾಪಟಿಯಾಗಿ ಒಬ್ಬ ಗ್ರಾಮಸ್ಥನ ಹತನಾದನು. ನಾಲ್ಕು ಮಂದಿ ಘಾಯ ಒಡೆದರು. ದಕಾಯಿತರಲ್ಲಿ ಒಬ್ಬನು ಹತನಾಗಿರುವನು.

ಮುಂಬಾಯಿ ಅಧಿಪತ್ಯದಲ್ಲಿ ೧೯೧೩ನೇಯ ವರ್ಷಕ್ಕಿಂತಲೂ ೧೪ನೇಯ ವರ್ಷದಲ್ಲಿ ಪಾಠಶಾಲೆಗಳು ೭೯೪ ಹೆಚ್ಚಿದವು. ೧೯೧೩ರಲ್ಲು ೧೭,೧೨೦ ಪಾಠಶಾಲೆಗಳಿದ್ದವು. ವಿದ್ಯಾರ್ಥಿಗಳ ಸಂಖ್ಯೆಯು ೯,೮೭,೮೫೦ರಿಂದ ೧೦,೨೯,೦೨೭ಕ್ಕೆ ಹೆಚ್ಚಿತು. ಪ್ರಾರಂಭ ವಿದ್ಯಾಶಾಲೆಗಳ ಸಂಖ್ಯೆಯು ೧೦,೭೦೦ರಿಂದ ೧೧,೫೮೧ಕ್ಕೆ ಹೆಚ್ಚಿತು. ಎಲ್ಲಾ ತರದ ಶಾಲೆಗಳಿಗೂ ವರ್ಷ ೧ಕ್ಕೆ ೭೦|| ಲಕ್ಷ ರೂಪಾಯಿಗಳು ವೆಚ್ಚವಾಗುತ್ತಿವೆ. ಬಾಲವಿದ್ಯಾಶಾಲೆಗಳಿಗೆ ೩|| ಲಕ್ಷ ರೂಪಾಯಿಗಳ ವೆಚ್ಚವಾಗುತ್ತಿವೆ.

ಮುಂಬಾಯಿ ವಿದ್ಯಾಸಂಘವು ಸ್ಥಾಪಿತವಾಗಿ ಇಂದಿಗೆ ನೂರು ವರುಷವಾದುದರಿಂದ ಅದರ ಸಾಂವತ್ಸರಿಕೋತ್ಸವವನ್ನು ಕಳೆದ ವಾರ ನೆರವೇರಿಸಿದರು. ಈ ಸಂಘದವರು ಚಂದಾಮೂಲವಾಗಿ ಹಣವನ್ನು ಶೇಖರಿಸಿ ಮಿಶನರಿಗಳಂತೆ ಮಾಡುವದಕ್ಕೆ ಆರಂಭಿಸಿ ಕಳೆದ ನೂರು ವರುಷಗಳಿಂದಲೂ ಈ ಕಾರ್ಯವನ್ನು ಶ್ಲಾಘನೀಯವಾಗಿ ಸಾಗಿಸಿಕೊಂಡು ಬಂದಿದ್ದಾರೆ. ಮಿಶನರಿಗಳನ್ನು ಬಿಟ್ಟರೆ ನಮ್ಮ ದೇಶದಲ್ಲಿ ವಿದ್ಯಾ ಪ್ರಸಾರಕ್ಕಾಗಿ ಯತ್ನಿಸಿದ ಪ್ರಜಾ ಸಂಘಗಳಲ್ಲಿ ಮುಟ್ಟ ಮೊದಲನೇಯದು ಇದೇ ಆಗಿರುತ್ತದೆ.

ಮುಂಬಾಯಿ ಪಟ್ಟಣವನ್ನು ಶುಚೀಕರಿಸುವದಕ್ಕೂ ಹೊಸ ಹೊಸ ಕಟ್ಟಡಗಳನ್ನು ನಿರ್ಮಿಸುವದಕ್ಕೂ ಸಂದಿಗಳನ್ನು ವಿಸ್ತರಿಸುವದಕ್ಕೂ ಸಹಾ ಅಲ್ಲಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಎಂಬ ಹೆಸರಿನಿಂದ ಒಂದು ಸಂಘವು ಏರ್ಪಟ್ಟಿದೆ. ಈ ಸಂಘದವರು ಈ ವರ್ಷದಲ್ಲಿ ಮಾಡಬೇಕಾದ ವ್ಯಯಗಳ ಪಟ್ಟಿಯು ಈ ರೀತಿಯಾಗಿರುವದು. ಪಟ್ಟಣವನ್ನು ಸೌಂದರ್ಯಗೊಳಿಸುವದಕ್ಕಾಗಿ [illegible] ಲಕ್ಷ ರೂಪಾಯಿಗಳೂ, ಸಂದಿಗಳು [illegible] ಕೋಟಿ ೬೨ ಲಕ್ಷ ರೂಪಾಯಿಗಳೂ, ಕಟ್ಟಡಗಳ ಕಟ್ಟಿಸುವ ವರೆ ೨೯ ಲಕ್ಷ ರೂಪಾಯಿಗಳೂ ವಿನಿಯೋಗಿಸಲ್ಪಡುವವು.

ದಕ್ಷಿಣ ಹಿಂದುಸ್ಥಾನ

ಇದೇ ತಾ ೨ರಲ್ಲು ಮದ್ರಾಸ್ ನ್ಯಾಯವಿಧಾಯಕ ಸಭೆಯು ಮದ್ರಾಸ್ ಗವರ್ನರ ಪ್ರಭುಗಳವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಈ ಸಭೆಯಲ್ಲಿ ಬಹುಮಾನಪಟ್ಟ ಎ ಎಸ್ ಕೃಷ್ಣರಾವ್‌ರವರು ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಆಫೀಸರರನ್ನು ಚುನಾವಣೆಯಿಂದ ಮೆಂಬರನ್ನಾಗಿ ಸೇರಿಸದ ಹಾಗೆ ಕಟ್ಟು ಮಾಡಬೇಕೆಂಬ ಮಸೂದೆಯನ್ನು ಸಭೆಯ ಮುಂದೆ ತಂದರು. ಬಹುಮಾನಪಟ್ಟ ಪೊಲ್ಲಾವರದ ಜಮೀನ್ದಾರ ಮೊದಲಾದವರು ಈ ಮಸೂದೆಯನ್ನು ಅನುಮೋದಿಸಿದರು. ಆದರೆ ಗವರ್ನರ ಪ್ರಭುಗಳವರು ಈ ವಿಷಯಕ್ಕೆ ಅಭಯಕೊಟ್ಟದ್ದರಿಂದ ಬಹುಮಾನಪಟ್ಟ ಕೃಷ್ಣರಾವ್‌ರವರೆ ತನ್ನ ಮಸೂದೆಯನ್ನು ಹಿಂತೆಗೆದರು. ಅನಂತರ ಬಹುಮಾನಪಟ್ಟ ಎ ಎಸ್ ಕೃಷ್ಣರಾವ್‌ರವರಿಂದ ಸಭಾ ಮುಂದಿಡಲ್ಪಟ್ಟ ಮಸೂದೆಗಳಲ್ಲಿ ಮಧ್ಯದ ಅಂಗಡಿಗಳನ್ನು ಏಲಂ ಮಾಡುವ ಪದ್ಧತಿಯನ್ನು ನಿಲ್ಲಿಸಿ, ಅಂಗಡಿಗಳಿಗೆ ಸರಕಾರದವರೇ ನಿಯಮಿತ ಫೀಸನ್ನು ಇಡುವ ಏರ್ಪಾಡನ್ನು ಜಾರಿಗೆ ತರಬೇಕೆಂಬದೇ ಮುಖ್ಯವಾಗಿತ್ತು. ಮುಂಬಾಯಿಯಲ್ಲಿ ಪರೀಕ್ಷಾರ್ಥವಾಗಿ ಈ ಏರ್ಪಾಡನ್ನು ಮಾಡಿ ತಕ್ಕ ಫಲ ಕಂಡು ಬಂದದೆ. ಈ ಕ್ರಮವನ್ನು ಜಾರಿಗೆ ತಂದರೆ ಕುಡಿಯುವವರ ಸಂಖ್ಯೆಯು ಕಡಿಮೆಯಾದೀತು. ಈ ಆಲೋಚನೆಯು ಸರಕಾರದವರಿಗೆ ಹಿಂದೆಯೇ ಇತ್ತು. ೧೯೧೪ನೇ ಇಸವಿ ಮೇ ತಾ ೨೯ರಲ್ಲಿ ಈ ಸಂಬಂಧ ಸ್ಟೇಟ್ ಸೆಕ್ರೆಟರಿಗಳಲ್ಲಿ ಮುಂಬಾಯಿಂದ ಹೋದ ಪ್ರತಿನಿಧಿಗಳು ಮಾಡಿಕೊಂಡ ಮನವಿ ಪ್ರಕಾರ ಮುಂಬಾಯಿಯಲ್ಲಿ ಈ ಕ್ರಮವನ್ನು ಪರೀಕ್ಷಾರ್ಥವಾಗಿ ಜಾರಿಗೆ ತಂದಿರುತ್ತದ. ಇಲ್ಲಿಯೂ ಇದೇ ಕ್ರಮವನ್ನು ಪರೀಕ್ಷಾರ್ಥವಾಗಿ ಜಾರಿಗೆ ತರುವದು ವಿಹಿತ. ಕುಡಿಯುವ ಪದ್ಧತಿಗೆ ಎಡೆತಡೆ ಮಾಡಿ ಈ ಸಂಬಂಧವಾಗಿ ಬರುವ ತೆರಿಗೆಯನ್ನು ನಿಯಮಿತ ರೀತಿಯಿಂದ ಎತ್ತಬೇಕೆಂಬದು ಸರ್ವ ಸಮ್ಮತವಾಗಿದೆ. ಈಗ ಈ ಸಂಬಂಧವಾದ ರೆವಿನ್ಯೂ ಬಹಳ ಹೆಚ್ಚಿದೆ. ಟೀಕಾ ಸಹಾ ಹೆಚ್ಚಿದೆ. ಕುಡಿಯುವವರ ಸಂಖ್ಯೆಯೂ ಅಧಿಕವಾಗಿರುವದು ಎಂಬಿತ್ಯಾದಿ ಮಾತುಗಳಿಂದ ತನ್ನ ಮಸೂದೆಯನ್ನು ಸಭಾ ಮುಂದಿಟ್ಟರು. ರೆವರೆಂಡ್ ಜಿ ಪಿಟ್ಟೆಂಡ್ರಿಗರವರೂ ಮೆ॥ ಜಿ ಒ ರೊಬಿನ್ಸನರೂ, ಪೊಲ್ಲಾವರದ ಜಮೀನ್ದಾರರು ಮೊದಲಾದವರು ಈ ಮಸೂದೆಯನ್ನು ಆದರಿಸಿ ಮಾತನ್ನಾಡಿದರು. ಆದರೆ ಮೆ॥ ಪಿ ಎಸ್. ಶಿವಸ್ವಾಮಿ ಅಯ್ಯರ್, ಮೆ॥ ಎ ಜಿ ಕಾರ್ಡ್ಯೂ, ಮೊದಲಾದವರು ವಿರೋಧಿಸಿ ಮಾತನ್ನಾಡಿದರು. ಕಡೆಗೆ ಓಟಿಗೆ ಹಾಕಿದ್ದಲ್ಲಿ ವಿರೋಧಪಕ್ಷದ ಮತವು ಹೆಚ್ಚಾಗಿ ಈ ಮಸೂದೆಯು ಬಿದ್ದು ಹೋಯಿತು. ತಾ ೩ರಲ್ಲು ಸಹಾ ಈ ಸಭೆಯು ಕೂಡಿ ಬಂದು ವಿವಿಧ ವಿಷಯಗಳು ಚರ್ಚಿಸಲಾದವು.

ಮದ್ರಾಸ್ ಸಂಸ್ಥಾನದ ೨೨ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಮತ್ತು ಮುನ್ಸಿಪಾಲ್ ಕೌನ್ಸಿಲುಗಳಿಗೆ ಅರ್ಧ ಕೆಲಸದಲ್ಲಿರುವ ಎಲಿಮೆಂಟರಿ ಶಾಲಾ ಕಟ್ಟೋಣಗಳನ್ನು ಕಟ್ಟಿಸಿ ತೀರಿಸುವ ಬಗ್ಗೆ ಮದ್ರಾಸ್ ಸರಕಾರದವರು ೪,೨೩,೯೯೭ ರೂಪಾಯಿ ಸೇಂಕ್ಷನ್ ಮಾಡಿರುವರು. ಹೊಸ ಶಾಲಾ ಕಟ್ಟೋಣಗಳನ್ನು ಕಟ್ಟಿಸುವರೆ ಈಗ ಸದ್ಯಾ ಹಣ ಸಹಾಯಮಾಡೋಣಾಗಲಿಕ್ಕಿಲ್ಲವೆಂದು ಸರಕಾರದವರು ತಿಳಿಸಿರುವರು.

ಭರತಖಂಡದ ಪೂರ್ವ ಸಮುದ್ರದಲ್ಲಿ ಎಮ್ಡೆನ್ ಹಡಗು ಮಾಡಿದ ಹಾವಳಿಯಿಂದ ಕೆಲವು ಕಾಲ ಭರತಖಂಡಕ್ಕೂ ಬರ್ಮಕ್ಕೂ ಜನಸಂಚಾರವೂ ಸರಕುಗಳ ಗಮನಾಗಮನವೂ ಸಹ ನಿಂತು ಬಹಳ ತೊಂದರೆಯಾಯಿತು. ಆದಕಾರಣ, ಇವೆರಡು ಪ್ರದೇಶಗಳಿಗೂ ಅಖಂಡವಾದ ಭೂಸಂಬಂಧವಿದ್ದರೂ ಲೋಹಮಾರ್ಗ ನಿರ್ಮಾಣವಿಲ್ಲದೆ ಜಲಮಾರ್ಗ ಸಂಚಾರ ಒಂದನ್ನೇ ನಂಬಿಕೊಂಡಿರಬೇಕಾದುದರಿಂದ ಇಂಥಾ ತೊಂದರೆಯು ಪ್ರಾಪ್ತವಾಯಿತೆಂಬ ಸಂಗತಿಯು ಪ್ರಜೆಗಳಿಗೂ ಪ್ರಭುತ್ವದವರಿಗೂ ಸಹ ವ್ಯಕ್ತವಾಯಿತು. ಅದರ ಮೇಲೆ ಈಗ ಇವೆರಡು ದೇಶಗಳ ಮಧ್ಯದಲ್ಲಿ ಲೋಹಮಾರ್ಗವನ್ನೇರ್ಪಡಿಸುವ ಪ್ರಯತ್ನವನ್ನು ಪ್ರಭುತ್ವದವರು ಮಾಡಿದ್ದಾರೆ. ಈ ಮಾರ್ಗವು ಮೂರು ಭಾಗವಾಗಿ, ೧ನೇಯದು ಅಸ್ಸಾಂ-ಬಂಗಾಳ ಲೋಹಮಾರ್ಗದ ಕೊನೆಯ ನಿಲ್ದಾಣವಾದ ಚಿತ್ತಗಂಗಾದಿಂದ ಹೊರಟು ಆ ಜಿಲ್ಲೆಯ ದಕ್ಷಿಣದಲ್ಲಿರುವ ಪ್ರದೇಶಗಳ ಮೇಲೆ ತೀರದಲ್ಲೇ ನಡೆದು ೯೪ ಮೈಲುಗಳ ದೂರದಲ್ಲಿರುವ [illegible] ಎಂಬ [illegible] ಆರಕಾನ್ ಗಡಿಯ [illegible]

೨೬೦ ಮೈಲುಗಳ ದೂರ ಹೋಗಿ, ಅಕಿಯಾಬ್ ಡೆಲ್ಟಾದಲ್ಲಿರುವ ದೊಡ್ಡ ದೊಡ್ಡ ಹೊಳೆಗಳನ್ನೆಲ್ಲಾ ದಾಟಿ, ಕಾಕ್ಸ್‌ಬಜಾರಿನ ಹತ್ತಿರ ಸೇರುವುದು. ಈ ಮಾರ್ಗವು ಚಿತ್ತಗಂಗಾದಕ್ಕೆ ೨೬೦ ಮೈಲುಗಳ ಹತ್ತಿರವಾಗುವುದು. ಈ ಮಾರ್ಗದಲ್ಲಿ ಮಧ್ಯೆ ೪ ಸಾವಿರ ಅಡಿಗಳೆತ್ತರದ ಕೆಲವು ಪರ್ವತಗಳನ್ನು ದಾಟಬೇಕಾಗುವುದು. ಈ ಮಾರ್ಗ ನಿರ್ಮಾಣಕ್ಕೆ ೧೦॥ ಕೋಟಿ ರೂಪಾಯಿಗಳ ವೆಚ್ಚವು ತಗಲುವುದು. ಇದರ ಶಾಖಾಮಾರ್ಗಗಳಿಗೆ ಇನ್ನೂ ೧೦॥ ಕೋಟಿ ರೂಪಾಯಿಗಳು ಮುಟ್ಟುವವು. ೨ನೇ ಭಾಗವು ಮಣಿಪುರದ ದಾರಿಯು. ಇದಕ್ಕೆ ೭॥ ಕೋಟಿ ರೂಪಾಯಿಗಳು ತಗಲುವವು. ಈ ಮಾರ್ಗದಲ್ಲಿ ಮುಂದೆ ದೊಡ್ಡ ದೊಡ್ಡ ಬೆಟ್ಟಗಳಿವೆ. ಅವು ೨॥ ಸಾವಿರದಿಂದ ೯ ಸಾವಿರ ಅಡಿಯ ಉನ್ನತಿಯ ವರೆಗೂ ಇರುವವು. ಅವುಗಳಲ್ಲಿ ೮ ಸಾವಿರ ೫ ಸಾವಿರ ೪ ನೂರು ಅಡಿಗಳುದ್ದದ ಸುರಂಗಗಳನ್ನು ಕೊರೆಯಬೇಕಾಗುತ್ತದೆ. ೩ನೇಯ ದು-ಹೂಕಾಂಗ್ ಕಣಿವೆಯ ಮಾರ್ಗವು, ಇದು ಮೇಲೆ ಸೂಚಿಸಿದ ೨ ಭಾಗಗಳಿಗಿಂತಲೂ ಕಡಿಮೆಯಾದ ವೆಚ್ಚದಿಂದ ಸಾಧ್ಯವಾಗುವುದು. ಎಂದರೆ ಒಟ್ಟು ೫॥ ಕೋಟಿ ರೂಪಾಯಿಗಳ ವೆಚ್ಚದಿಂದಲೇ ಮುಗಿದು ಹೋಗುವುದು. ಈ ಮೂರು ಭಾಗದ ಕೆಲಸಗಳೂ ಕ್ರಮವಾಗಿ ಆರಂಭಿಸಲ್ಪಡುವವು. ಈ ವರ್ಷದಲ್ಲಿ ಸಮುದ್ರದ ದಡದಲ್ಲಿ ಹಾಕಲ್ಪಡುವ ಮಾರ್ಗವೂ, ೧೯೫-೧೬ರಲ್ಲಿ ಮಣಿಪುರದ ದಾರಿಯೂ, ೧೯೧೬-೧೭ರಲ್ಲಿ ಹೂಕಾಂಗ್ ಕಣಿವೆಯ ದಾರಿಯೂ ಮುಗಿದುಹೋಗುವವು.

ದಕ್ಷಿಣ ಕನ್ನಡ

ಪರಸ್ಪರ ಸಹಾಯ.

ಸರ್ಕಲಾರು ನಂಬ್ರ ೩.

ಸಂಘದಲ್ಲಿ ನಿಲ್ಲುವ ಶಿಲ್ಕು ಹಣ

ಸಂಘಗಳಿಂದ ಮೆಂಬರರಿಗೆ ಕೊಡುವ ಸಾಲಗಳು ಹೆಚ್ಚಾಗಿ ತಿಂಗಳುಗಟ್ಟಲೆಯ ಕಂತುಗಳಿಂದ ಮರುಪಾವತಿಯಾಗುವಂಥವುಗಳಾದುದರಿಂದ ಸಂಘಗಳಲ್ಲಿ ಸಾಧಾರಣವಾಗಿ ದಿನಂಪ್ರತಿಯೂ ಹಣವು ವಸೂಲಾಗುತ್ತಲೇ ಇದೆ. ಆದರೆ ಪಂಚಾಯತ ಸಭೆಗಳು ಹೆಚ್ಚಾದರೆ ವಾರಕ್ಕೆರಡಾವರ್ತಿ ಮಾತ್ರ ಕೂಡುವುದರಿಂದ ದಿನಂಪ್ರತಿ ವಸೂಲಾದ ಹಣವು ಪುನಹ ಸಾಲಗಳಾಗಿ ಹೊರಗೆ ಕೊಡುವುದಕ್ಕೆ ಸ್ವಲ್ಪ ವಿಳಂಬವಾಗುವುದು. ದ ಸಂಘದಲ್ಲಿ ಆಗಾಗ್ಯೆ ಹೆಚ್ಚಿನ ಶಿಲ್ಕು ನಿಲ್ಲುವುದುಂಟು. ಕೆಲವು ಸಂಘಗಳಲ್ಲಿ ಪಂಚಾಯತ ಸಭೆಗಳು ವಾರಕ್ಕೊಮ್ಮೆಗಿಂತ ಹೆಚ್ಚಾವರ್ತಿ ಕೂಡುವುದಿಲ್ಲವೆಂದು ತಿಳಿದುಬರುತ್ತದೆ. ಅಂತಹ ಕಡೆಗಳಲ್ಲಿ ಸಾಧಾರಣವಾಗಿ ಶಿಲ್ಕು ಇನ್ನಷ್ಟು ಹೆಚ್ಚಾಗಿಯೇ ಇರುವುದು.

೨ ಇಂತಹ ಸಂದರ್ಭಗಳಲ್ಲಿ ಹಾಗೆ ನಿತ್ಯ ಶಿಲ್ಕು ಹಣವನ್ನು ಸಂಘದ ಅಧ್ಯಕ್ಷರು ಇಟ್ಟುಕೊಳ್ಳುವುದರ ಬದಲಾಗಿ ಸಮೀಪವಿದ್ದರೆ ಜಿಲ್ಲೆಯ ಸೆಂಟ್ರಲ್ ಬೇಂಕಿನಲ್ಲಿ ಚಾಲ್ತಿ ಠೇವಣಾತಿಯಾಗಿ ಜಮೆಯಾದ ಹಾಗೆ ಇಡುವುದು ಬಹಳ ಒಳ್ಳೇದಾಗಿರುತ್ತದೆ.

೩ ಪುತ್ತೂರಿಗೆ ಹತ್ತಿರವಿಲ್ಲದ ಸಂಘಗಳು ತಮ್ಮ ಶಿಲ್ಕನ್ನು ತಮಗೆ ಹತ್ತಿರವಿರುವ ಟಪ್ಪಾಲು ಕಟ್ಟೆಗಳಲ್ಲಿಯೇ ಸೇವಿಂಗ್ಸ್ ಬೇಂಕ್ ಠೇವಣಾತಿಗಳಾಗಿಡಬಹುದು. ಇದಕ್ಕೋಸ್ಕರವಾಗಿಯೇ ಸರಕಾರದವರು "ಪಬ್ಲಿಕ್ ಎಕೌಂಟ್ಸ್" (ಸರಕಾರಿ ಲೆಖ್ಖ)ಗಳಿಗಿರುವ ಕ್ರಮಗಳನ್ನೆಲ್ಲಾ ಪರಸ್ಪರ ಸಹಾಯಕ ಸಂಘಗಳಿಗೂ ಲಗಾವಾಗುವಂತೆ ಏರ್ಪಾಡಿಸಿದ್ದಾರೆ. ಆದುದರಿಂದ ಸಂಘಗಳ ಅಧ್ಯಕ್ಷಸ್ಥಾನದ ಹೆಸರಲ್ಲೇ ಸೇವಿಂಗ್ಸ್ ಲೆಖ್ಖಗಳನ್ನು ಇಡಬಹುದು. ಹಾಗೆ ಮಾಡಿದರೆ ಅಧ್ಯಕ್ಷಸ್ಥಾನದಲ್ಲಿ ಒಬ್ಬರು ಹೋಗಿ ಇನ್ನೊಬ್ಬರು ಬಂದಾಗ್ಯೂ ಸಂಘದ ಲೆಖ್ಖಕ್ಕೆ ತೊಂದರೆಯಾಗದೆ ಸರಾಗವಾಗಿ ನಡೆಸಲು ಸಾಧ್ಯವಾಗುತ್ತದೆ.

೪ ಈ ಪ್ರಕಾರ ಠೇವಣಾತಿಗಳನ್ನು ಇಟ್ಟರೆ ಅಂತೆಯೇ ಉಳಿಯುವ ಹಣಕ್ಕೆ ಸ್ವಲ್ಪ ಬಡ್ಡಿ ಸಿಕ್ಕುದಂತಾಗಿ ಸಂಘಗಳಿಗೆ ಲಾಭಕ್ಕೆ ಕಾರಣವಾಗುವುದು. ಆದುದರಿಂದ ಎಲ್ಲಾ ಸಂಘದವರೂ ಈ ಕುರಿತು ಕೂಡಲೇ ಪುತ್ತೂರು ಸೆಂಟ್ರಲ್ ಬೇಂಕಿನಲ್ಲಾಗಲಿ ಆಯಾ ಸಂಘಗಳಿಗೆ ಹತ್ತಿರವಿರುವ ಟಪ್ಪಾಲು ಕಟ್ಟೆಗಳಲ್ಲಾಗಲೀ ಶಿಲ್ಕಿನ ಹಣವನ್ನು ವಿಲೇವಾರಿ ಮಾಡಬೇಕೆಂತ ಈ ಮೂಲಕ ಸೂಚಿಸೋಣಾಗುತ್ತದೆ.

ದಕ್ಷಿಣಕನ್ನಡಾ ಸೆಂಟ್ರಲ್ ಕೋ-ಆಪರೇಟಿವ್ ಬ್ಯೇಂಕ್ ಲಿಮಿಟೆಡ್, ಪುತ್ತೂರು. ತಾ. 1-2-1915.	ಎಮ್. ಅನಂತರಾವ್. ಕಾರ್ಯದರ್ಶಿ.

ಪುತ್ತೂರು.

ಇದೇ ಫೆಬ್ರವರಿ ತಾ ೯ನೇ ಬೆಳಿಗ್ಯೆ ಇಲ್ಲಿ ಪಂಚಮರ ಶಾಲೆಯು ಆರಂಭಿಸಲಾಯಿತು. ೧೫ ಹುಡುಗರು ಹಾಜರಿದ್ದರು.

ಶಹರುಗಳಿಗೆ ಸುರಕ್ಷಿತ ಪಡಿಸಿದ ಸ್ಥಳಗಳಿಂದ ತರೋಣಾಗುವ ಕಟ್ಟಿಗೆ ಮೇಲಣ ಸುಂಕ ವಸೂಲುಮಾಡುವ ಹಕ್ಕನ್ನು ಫೆಬ್ರವರಿ ತಾ ೨೫ ಮಂಜೇಶ್ವರ, ಮಾರ್ಚಿ ೨ರಲ್ಲು ಕಾಸರಗೋಡು, ತಾ ೩ರಲ್ಲು ಪುತ್ತೂರು, ತಾ ೬ರಲ್ಲು ಹೊಸದುರ್ಗ, ತಾ ೮ರಲ್ಲು ಮಂಗಳೂರು, ತಾ ೯ರಲ್ಲು ಉಳ್ಳಾಲ, ತಾ ೧೦ರಲ್ಲು ಉಡ್ಪಿ, ತಾ ೧೧ರಲ್ಲು ಮುಲ್ಕಿ, ತಾ ೧೫ರಲ್ಲು ಕುಂದಾಪುರ, ಮತ್ತು ಕಾರ್ಕಳ, ತಾ ೧೭ರಲ್ಲು ಬಂಟ್ವಾಳದಲ್ಲಿ ಆಯಾಯ ಡಿಪ್ಯುಟಿ ತಹಶೀಲದಾರರಿಂದಲೂ, ತಹಶೀಲದಾರರಿಂದಲೂ ಏಲಂ ಮಾಡುವರೆ ನಿಶ್ಚೈಸಿರುವರು.

ಇಲ್ಲಿಯ ಸಾವಕಾರ ಬೆಳ್ಳಾರೆ ನರಸಿಂಹಮಲ್ಯರಲ್ಲಿ ಒಂದು ದನವು ೨ ಹೆಣ್ಣು ಕರು ಹಾಕಿರುವುದು. ವರು ಸಂಪ್ರತಿಯೂ ಜಾನುವಾರುಗಳಿಗೆ ರಸ್ತೆ ಕಿನಾರೆ ನೀರು ಇಡುವ ಪದ್ಧತಿಯನ್ನು ಇಲ್ಲಿ ಮೊದಲು ಜಾರಿಗೆ ತಂದದ್ದು ಇವರೇ. ಈ ವರುಷ ಸಾವಕಾರ ವ ತಾಲೂಕು ಬೋರ್ಡು ಮೆಂಬರರಾದ ಮಂಜೇಶ್ವರ ಜನಾರ್ಧನಭಟ್ಟರು ಮರಿಗಯಲ್ಲಿ ಅವರ ಅಂಗಡಿ ಒಳಿ ನೀರು ಇಡುವರೆ ಆರಂಬಿಸಿದ್ದಾರೆ. ಅವರಂತೆ ಡಿಪ್ಯುಟಿ ಕಲೆಕ್ಟರ ಬಂಗ್ಲೆ ಒಳಿ ಇರುವ ಮರಿಗೆಯಲ್ಲಿ ನೀರು ಹಾಕಲಿಕ್ಕೆ ತೊಡಗಿದರೆ ಜಾನುವಾರುಗಳು ಬೇಸಿಗೆ ಕಾಲದಲ್ಲಿ ನೀರಿಗಾಗಿ ಪಡುವ ಸಂಕಷ್ಟ ನಿವಾರಣೆಯಾಗುತ್ತಿತ್ತು.

ಮಂಗಳೂರು.

ಬರೋಡೆಯ ೭೫ನೇ ಕರ್ನಾಟಕ ಇನ್‌ಫೇಂಟರಿ ಎಂಬ ಕಾಲಾಳು ಸೇನೆಯ ಹವಾಲದಾರರೊಬ್ಬರು ಸದರಿ ಸೇನೆಗೆ ಮಂಗಳೂರಿಂದ ಜನರನ್ನು ಕೂಡಿಸುವರೆ ಇಲ್ಲಿಗೆ ಬಂದಿರುವರು. ಇವರು ಇಲ್ಲಿಯ ೪ ಮಂದಿ ಪ್ರೊಟೆಸ್ಟಾಂಟ ಕ್ರೈಸ್ತ ಯುವಕರನ್ನು ಆರಿಸಿರುವರು. ಇದೇ ತಾ ೧೫ರಲ್ಲು ಮಲ್ಲಪುರದಿಂದ ಕೆಪ್ಟನ್ ಟಿ ಬಿ ಸ್ಕಿನ್ನರವರು ಇಲ್ಲಿಗೆ ಬಂದು ಹವಾಲ್ದಾರರು ಆರಿಸಿದ ನಾಲ್ಕು ಮಂದಿಯನ್ನು ಡಿಸ್ಟ್ರಿಕ್ಟ್ ಸರ್ಜನರ ಸಹಾಯದಿಂದ ಪರೀಕ್ಷಿಸಿ ಯೋಗ್ಯರೆಂದು ಕಂಡರೆ ತನ್ನೊಡನೆ ಕರಕೊಂಡು ಹೋಗುವರೆಂದು ಕೇಳುತ್ತೇವೆ.

ಮುನಿಸಿಪಾಲಿಟಿ ಗಡಿಯೊಳಗೆ ಕೆಲವು ತೋಟಗಳಲ್ಲಿ ಆವರಣವಿಲ್ಲದ ನೀರಿಲ್ಲದ ಬಾವಿಗಳು ಇರುವದರಿಂದ ಇವುಗಳಲ್ಲಿ ದನಕರಗಳು ಬಿದ್ದು ಕೈಕಾಲು ಮುರಿದುಕೊಳ್ಳುತ್ತವೆಂತಲೂ ಈ ವಿಷಯ ಸಂಬಂಧಪಟ್ಟ ಅಧಿಕಾರಿಗಳು ನಿಗಾಕೊಟ್ಟು ಮುನ್ಸಿಪಾಲಿಟಿಯೊಳಗಿನ ಪ್ರತಿ ತೋಟವನ್ನು ಸಂದರ್ಶಿಸಿ ಅಂಥಾ ಬಾವಿಗಳ ಸಂಖ್ಯೆಯನ್ನು ಗೊತ್ತುಮಾಡಿ ತೋಟ ಮಾಲಿಕರಿಂದ ಅಂಥಾ ಬಾವಿಗಳನ್ನು ಮುಚ್ಚಿಸಿದರೆ ಯಾ ಆವರಣ ಹಾಕಿಸಿದರೆ ಮೂಗ ಪಶುಪ್ರಾಣಿಗಳಿಗೆ ಉಪಕಾರ ಮಾಡಿದಂತಾಗುವದೆಂತ ಕೊಡಿಯಾಲ್‌ಬೈಲು ಪ್ರಾಂತ್ಯದ ಒಬ್ಬ ಬಾತ್ಮಿದಾರರು ಬರೆಯುವರು.

ಕೂಳೂರು ಕಡವಿನಿಂದ ಆಮದು ರಫ್ತಾಗುವ ಗಾಡಿಯುವರಿಗೆ ಕೂಳೂರು ಕಡವಿನ ಬಡಪಾರ್ಶ್ವದಲ್ಲಿರುವ ಧಕ್ಕೆ ಕಂಟ್ರಾಕ್ಟದಾರ ವ ಅವರ ಕಡೆಯ ಜವಾನರಿಂದ ಹೆಚ್ಚಿನ ಉಪದ್ರ ಕೊಡೋಣಾಗುವದಲ್ಲದೆ ಬಡ ಗಾಡಿಯುವರ ಮೇಲೆ ಅನ್ಯಾಯವಾಗಿ ಜುಲುಂ ನಡಿಸೋಣಾಗುತ್ತದೆ. ಈ ಸಮ್ಮಂಧ ಮಾನ್ಯ ಸರಕಾರದವರು ತಕ್ಕ ಬಂದೋಬಸ್ತು ಇಡಿಸಿ ಬಡವರಿಗೆ ಉಪಕಾರ ಮಾಡಬೇಕಾಗಿ ಒಬ್ಬ ಪ್ರಯಾಣಸ್ಥರು ವಿಜ್ಞಾಪಿಸಿಕೊಂಡಿರುವರು.

ಉಳ್ಳಾಲ ಕಡವಿನಲ್ಲಿ ಕಡವು ಕಂಟ್ರಾಕ್ಟದಾರನಿಗೆ ನಿಯಮಿತ ಕಾಸು ಕೊಟ್ಟು ಕಂಟ್ರಾಕ್ಟರನಿಂದ ತೋರಿಸಲ್ಪಟ್ಟ ದೋಣಿಯಲ್ಲಿ ಕೂತು, ನದಿ ದಾಟಿದ ನಂತರ ಅರ್ಧ ದೋಣಿಯಿಂದು ದೋಣಿಗಾರನು ಬಲತ್ಕರಿಸಿದ್ದರಿಂದ ಉಭಯತರಿಗೂ ಕಾಸುಕೊಟ್ಟು ನಷ್ಟಕಷ್ಟಕ್ಕೊಳಗಾದ ಒಬ್ಬ ಬಾತ್ಮಿದಾರರು ಉಳ್ಳಾಲ ಕಡವಿಗೆ ಕಡವು ದೋಣಿಗಳು ಇನ್ನೆಯೋ ಏನೋ ಎಂಬ ಅನುಮಾನವಿದೆಂತ ಬರೆಯುವರು.

ಮಿ. ಕಾಮಿಲ್ ಸಾಲ್ಡಾಂಝರಲ್ಲಿ ಕಳವಾದ ಸುಮಾರು ೧೫೦೦ ರೂಪಾಯಿಯ ಚಿನ್ನಾಭರಣಗಳನ್ನು ಸಬ್ ಇನ್ಸ್‌ಪೆಕ್ಟರ್ ಮಿ ಲೋಬರವರು ಫರಾರ್ ಗ್ರಾಮದಲ್ಲಿ ಹಿಡಿದಿರುವರು. ಈ ಕಳವು ಮತ್ತು ಪತ್ತೆಯ ವೃತ್ತಾಂತವು ಈ ರೀತಿಯದಾಗಿರುವದು:—

ಮಿ। ಕಾಮಿಲ್ ಸಾಲ್ಡಾಂಝರಲ್ಲಿ ಕೆಲಸಕ್ಕಿದ್ದ ಜಾಕಿ ಎಂಬವನು ಸಾಲ್ಡಾಂಝರಲ್ಲಿ ತನ್ನ ಸಂಬಳ ಕೊಡಲಿಲ್ಲ ಎಂಬ ವೈರದಿಂದ ಮತ್ತೊಬ್ಬ ಸ್ವಜಾತಿ ಗೃಹಸ್ಥರಲ್ಲಿ ಕೆಲಸಕ್ಕೆ ನಿಂತನು. ಈ ಮನೆಯಲ್ಲಿ ಈ ಮೊದಲೇ ಕೆಲಸಕ್ಕಿದ್ದ ಸಾಂತನ್ ಎಂಬ ಹುಡುಗನು ಜಾಕಿಗೆ ಸಂಬಳ ಸಿಕ್ಕಲಿಲ್ಲ ಎಂಬ ಸಂಗತಿಯನ್ನು ಜಾಕಿಯಿಂದ ತಿಳಕೊಂಡು ಇದಕ್ಕೆ ತಕ್ಕ ಉಪಾಯವು ಸಾಲ್ಡಾಂಝರ ಮನೆಯ ಕೆಲವು ಒಡವೆಗಳನ್ನು ಜಾರಿಸುವದೇ ಆಗಿರುವದು ಎಂಬ ನಿರ್ಣಯವನ್ನು ಮಾಡಿ ಇಬ್ಬರೂ ಒಟ್ಟು ಕೂಡಿ ಸಾಲ್ಡಾಂಝರ ಮನೆಗೆ ಬಂದು ಚಿನ್ನಾಭರಣದ ಪೆಟ್ಟಿಗೆಯನ್ನೇ ಜಾರಿಸಿ, ತಾವು ಕೆಲಸಕ್ಕಿದ್ದ ಮನೆಯ ಅಟ್ಟದ ಮೇಲೆ ಪೆಟ್ಟಿಗೆಯನ್ನು ಇಟ್ಟುಬಿಟ್ಟರು. ತನ್ಮಧ್ಯೆ ಜಾಕಿಯು ಜ್ವರದಲ್ಲಿ ಬಿದ್ದು ಆಸ್ಪತ್ರಿಗೆ ಹೋದನು. ಆಸ್ಪತ್ರಿಯಿಂದ ಹಿಂದೆರಳಿದ ನಂತರ ಕದ್ದ ಆಭರಣಗಳನ್ನು ಪಾಲುಮಾಡಿಕೊಳ್ಳುವ ಎಂಬ ಶರ್ತದ ಮೇಲೆ ಜಾಕಿಯು ಆಸ್ಪತ್ರಿಗೆ ಸೇರಿದನು. ಪರಂತು, ಸಾಂತಾನನು ಒಂದು ವಾಚನ್ನೂ ಚಿನ್ನದ ಬಳೆಯನ್ನೂ ಪೆಟ್ಟಿಗೆಯಿಂದ ಜಾರಿಸಿದನು. ತಾನು ಕಳ್ಳತನ ಮಾಡಿದ್ದರಿಂದ ಭೂತವು ತನ್ನನ್ನು ಹಿಡಿದಿರಬೇಕೆಂಬ ಭ್ರಮೆಯು ಅಸ್ವಸ್ಥ ಕಾಲ ಜಾಕಿಯಲ್ಲಿ ಮೂಡಿ ಆ ಭ್ರಮೆಯು ಬಲಗೊಳ್ಳುತ್ತಾ ಬಂತು. ಹ್ಯಾಗೂ ಅಸ್ವಸ್ಥ ಗುಣವಾಗಿ ಪೆಟ್ಟಿಗೆಯನ್ನು ಹೋಗಿ ನೋಡಲು ಅದರಲ್ಲಿ ಒಂದು ಚಿನ್ನದ ಬಳೆಯೂ ವಾಚೂ ಇರದ್ದನ್ನು ಕಂಡು, ಸಾಂತಾನನನ್ನು ಕೇಳಲು ಅವನು ತಾನ ಒಂದು ರೂಪಾಯಿ ಮಾತ್ರ ತೆಗೆದಿರುವೆನೆಂದು ಆಣೆ ಇಟ್ಟು ಹೇಳಿದನು. ಇದರಿಂದ ಜಾಕಿಯಲ್ಲಿ ಮತ್ತಷ್ಟು ಭಯಕ್ಕೆ ಕಾರಣವಾಗಿ ಅತ್ತಿತ್ತ ಅಲೆದಾಡಿ ಅಂತೋನಿ ಎಂಬ ಬಟ್ಲರನಲ್ಲಿಗೆ ಹೋದನು. ಅಂತೋನಿಯು ಇವನ ಚಿತ್ತಭ್ರಮೆಯನ್ನು ಕಂಡು, ಈ ಮೊದಲೇ ಇವನ ಮೇಲೆ ಕಳವಿನ ಸಂಶಯ ಇದ್ದವನಾದ ಕಾರಣ ಕಾಮಿಲ್ ಸಾಲ್ಡಾಂಝರು ಕಳವು ಮಾಡಿದವರ ಮೇಲೆ ಭೂತ ಬಿಟ್ಟಿರುತ್ತಾರೆಂತ ಹೇಳಿದನು. ಇದನ್ನು ಕೇಳಿದಾಕ್ಷಣ ಜಾಕಿಯ ಭಯವು ಎರಡಷ್ಟಾಯಿತು. ಅಂತೋನಿಗೆ ಸಂಶಯ ಉಂಟಾಗಿ ನೀನ "ಕಳವು ಮಾಡಿದ್ದನ್ನೆಲ್ಲಾ ತಂದು ಕೊಟ್ಟರೆ ಭೂತವನ್ನು ಕುಪ್ಪಿಯಲ್ಲಿ ಹಾಕಿ ಮುಚ್ಚಿಡುವೆನು" ಎಂದು ಮಾತುಕೊಟ್ಟದ್ದರಿಂದ ಜಾಕಿಯು ಕದ್ದುಕೊಂಡ ಆಭರಣಗಳನ್ನೆಲ್ಲಾ ಅಂತೋನಿಗೆ ಕೊಟ್ಟುಬಿಟ್ಟನು. ಒಂದು ವಾಚು ಮತ್ತು ಬಳೆಯನ್ನು ಸಾಂತಾನನು ತೆಗೆದಿರಬೇಕೆಂತಲೂ ಹೇಳಿದನು. ಅಂತೋನಿಯು ಚಿನ್ನಾಭರಣವನ್ನು ತೆಗೆದುಕೊಂಡು, ಪೆಟ್ಟಿಗೆಯನ್ನು ಭಾವಿಯಲ್ಲಿ ಹಾಕಿ, ಆಭರಣಗಳನ್ನೆಲ್ಲಾ ಫರಾರಿನಲ್ಲಿರುವ ತನ್ನ ತಂದೆಯ ಮನೆಯಲ್ಲಿಟ್ಟು ಹಿಂದೆ ಬಂದು ಸಾಂತಾನನ ಕೈಯಲ್ಲಿದ್ದ ಬಳೆ ಮತ್ತು ವಾಚನ್ನು ತನ್ನ ಸ್ವಾಧೀನಮಾಡಿಕೊಳ್ಳುವ ಉದ್ದೇಶದಿಂದ ಮಾರ್ಕೆಟಿನಲ್ಲಿ ಸಾಂತಾನನ್ನು ಪುಸುಕಿ ತೆಗೆದು, ಅವನಿಗೂ ಭೂತದ ಭ್ರಮೆಯನ್ನು ಹುಟ್ಟಿಸಿದಲ್ಲಿ ಆತನು ತಾನು ಬಳೆಯನ್ನಾಗಲೀ ವಾಚನ್ನಾಗಲೀ ತೆಗೆಯಲೇ ಇಲ್ಲವೆಂದೂ ಒಂದು ರೂಪಾಯಿ ಮಾತ್ರ ತೆಗೆದಿರುವೆನೆಂದೂ ಹೇಳಿದನು. ಇವರೊಳಗೆ ನಡೆದ ಸಂಭಾಷಣೆಯನ್ನು ಹಿಂದಿನಿಂದ ಕೇಳಿದ ಕೆಲವರ ಬಾಯಿಂದ ಹೊರಟ ಜಾಕಿ, ಬಳೆ, ವಾಚು ಎಂಬಿತ್ಯಾದಿ ಮಾತುಗಳು ಸಬ್ ಇನ್ಸ್‌ಪೆಕ್ಟರ್ ಮಿ। ಲೋಬರವರ ಕಿವಿಗೆ ಬೀಳುತ್ತಲೇ ಇವರಿಗೆ ಅನುಮಾನವಾಗಿ ಜಾಕಿಯನ್ನು ಹುಡುಕ್ಯಾಡಿದರು. ಜಾಕಿಯು ಮಂಗಳೂರಲ್ಲಿರಲಿಲ್ಲ. ಅಂತೋನಿಯನ್ನು ವಿಚಾರಿಸಲು ಅಲ್ಲಗಳೆದನು. ಸಾಂತಾನನನ್ನು ಬೆದರಿಸಲು ಚಿನ್ನದ ಬಳೆ ಮತ್ತು ವಾಚು ಸಿಕ್ಕಿತು. ಕೂಡಲೇ ಅಂತೋನಿಯನ್ನು ರಿಮಾಂಡಿನಲ್ಲಿರಿಸಿ ಮಿ। ಲೋಬರವರು ಜಾಕಿಯ ಊರ ಮನೆಯಾದ ಉಡ್ಪಿಗೆ ಹೋಗಿ ಜಾಕಿಯನ್ನು ಹಿಡಿದು ವಿಚಾರಿಸಲು ಮೊದಲು ಆತನು ಅಲ್ಲಗಳೆದರೂ ನಂತರ ಮೇಲಿನ ಎಲ್ಲಾ ಸಂಗತಿಯನ್ನು ಹೇಳಿದನು. ಸಬ್. ಇನ್ಸ್‌ಪೆಕ್ಟರ್ ಲೋಬರವರು ಅವನ ಸಹಿತ ಇಲ್ಲಿಗೆ ಬಂದು ಅಂತೋನಿಯನ್ನು ವಿಚಾರಿಸಲು ಅಂತೋನಿಯು ಪೂರಾ ಅಲ್ಲಗಳೆದನು. ತನ್ಮಧ್ಯೆ ಅಂತೋನಿಯ ಹೆಂಡತಿಯು ಅಂತೋನಿಯನ್ನು ಸಬ್ ಜೈಲಿನಲ್ಲಿ ಕಂಡು ಮಾತನಾಡಿದ್ದಾಳೆಂಬ ವಾರ್ತೆಯು ಸಬ್ ಇನ್ಸ್‌ಪೆಕ್ಟರ್ ಲೋಬರವರಿಗೆ ಸಿಕ್ಕಿದ್ದರಿಂದ ಕೂಡಲೇ ಅವರು ಅಂತೋನಿ ಹೆಂಡತಿಯು ಬಳಿ ಹೋಗಿ ವಿಚಾರಿಸಲು ಅವಳೂ ಏನೇನೂ ಅರಿಯೆನೆಂದಳು. ಕಡೆಗೆ ಸಬ್ ಇನ್ಸ್‌ಪೆಕ್ಟರ್ ಲೋಬರವರು ಆಕೆಯನ್ನು [illegible] ಗಳಿಂದ ಬಾಯಿ ಬಿಡಿಸಿ, ಫರಾರಿನಲ್ಲಿ [illegible] ತಂದು ಕೊಟ್ಟರು ಕೂಡಲೇ [illegible] ತಂದೆಯ ಮನೆಗೆ ಹೋಗಿ [illegible]

ಮನೆಯಲ್ಲಿದ್ದುದನ್ನು ಕಂಡು ಚಿನ್ನವು ಕರಗಿ ಹೋಯಿತೆಂತ ಭಾವಿಸಿದರು. ಅಂತೋನಿಯ ತಂದೆಯನ್ನು ವಿಚಾರಿಸಲು ತಾನೇನೂ ಅರಿಯೆನೆಂದನು. ಕಡೆಗೆ ಸಬ್ ಇನ್ಸ್‌ಪೆಕ್ಟರ್ ಲೋಬರವರು ಅಲ್ಲಿಯ ಸ್ವಜಾತಿ ಗೃಹಸ್ಥರ ಸಹಾಯದಿಂದ ಅವನಿಗೆ ಮಾಡಿದ ಹಿತೋಪದೇಶಗಳಿಂದ ಅವನು ಬಾಯಿ ಬಿಟ್ಟು ಕರಗಿಸಲಿಕ್ಕೆ ಗುಡ್ಡೆಗೆ ಕೊಂಡುಹೋಗಿದ್ದ ಚಿನ್ನಾಭರಣಗಳನ್ನೆಲ್ಲಾ ಸಬ್ ಇನ್ಸ್‌ಪೆಕ್ಟರರ ವಶ ಕೊಟ್ಟನು ಸಬ್ ಇನ್ಸ್‌ಪೆಕ್ಟರ್ ಲೋಬರವರು ಈ ಚಿನ್ನಾಭರಣಗಳನ್ನು ಹಿಡಕೊಂಡು ಬಂದು ಅಂತೋನಿಯನ್ನು ಸತ್ಯ ಅರಿಕೆಮಾಡಬೇಕೆಂದು ಹೇಳಿದಕ್ಕೆ "ಮಗುವಿನ ಆಣೆ ಇದೆ ನನ್ನ ಕೂಡೆ ಕಳವು ಮ್ಹಾಲುಗಳಿದ್ದರೆ ನನ್ನ ಮಗು ನನಗೆ ಸಿಕ್ಕದೆ ಹೋಗಲಿ" ಎಂದು ಹೇಳಲು ಸಬ್ ಇನ್ಸ್‌ಪೆಕ್ಟರ್ ಲೋಬರವರು ಪೆರಾರಿನಿಂದ ತಂದಿದ್ದ ಚಿನ್ನಾಭರಣಗಳನ್ನು ಆತನ ಎದುರಿಗೆ ಬಿಸಾಡಿದರು ಕೂಡಲೇ ಅಂತೋನಿಯು ಕಣ್ಣೀರು ಸುರಿಸಿ ಇಷ್ಟ ಸತ್ಯಾರ್ಥವನ್ನೆಲ್ಲಾ ಅರಿಕೆ ಮಾಡಿದನೆಂತ ಕೇಳುತ್ತೇವೆ

ಬೆಳ್ಳಾರೆಯಲ್ಲಿ ಒಬ್ಬ ಗೌಡನು ಮತ್ತೊಬ್ಬನನ್ನು ಗುಂಡು ಹೊಡೆದು ಕೊಂದಿದ್ದಾನೆಂಬ ವಾರ್ತೆ ಬಂದಿರುವದರಿಂದ ಡೆಪ್ಯುಟಿ ಪೋಲಿಸ್ ಸುಪರಿಂಟೆಂಡೆಂಟರವರು ತನಿಕೆ ಬಗ್ಗೆ ಬೆಳ್ಳಾರೆಗೆ ಹೋಗಿರುವರು

ರೋಮನ್ ಕೆಥೋಲಿಕರು ವೇದಿಯಲ್ಲಿ ರಾತ್ರಿಕಾಲ ಮೇಣದ ಬತ್ತಿಯನ್ನು ಉರಿಸುವ ರೂಢಿ ಇದೆ ಈ ಮಾಮೂಲು ಪ್ರಕಾರ ಮಡಿಕೇರಿ ಗುಡ್ಡೆಯ ಕೆಥೋಲಿಕರೊಬ್ಬರು ತನ್ನ ಅಂಗಡಿಯಲ್ಲಿರುವ ವೇದಿಯಲ್ಲಿ ಮೇಣದ ಬತ್ತಿಯನ್ನು ಉರಿಸಿ, ರಾತ್ರಿ ಬೀಗ ಹಾಕಿ ಮನೆಗೆ ಹೋಗಿದ್ದರು ರಾತ್ರಿಕಾಲ ಇಲಿಯಾ ಇತರ ಜಂತುಗಳು ಆ ಮೇಣದ ಬತ್ತಿಯನ್ನು ಕೆಳಗೆ ಹಾಕಿದ್ದರಿಂದ ಬೆಂಕಿಯು ಒಳಗಿಂದೊಳಗೆ ತಾಗಿ, ಒಳಗಿದ್ದ ಸಾಮಾನುಗಳೂ, ದವಸಧಾನ್ಯಗಳೂ ಸುಟ್ಟು ಹೋಗಿರುವವು ಬೆಳಿಗ್ಗೆ ಸುಮಾರು ೫ ಗಂಟೆಗೆ ಆ ದಾರಿಯಲ್ಲಿ ಹೋಗುತ್ತಿದ್ದ ಒಬ್ಬನು ಅಂಗಡಿಯ ಒಳಗೆ ಜ್ವಾಲೆ ಕಾಣುತ್ತಿದ್ದದ್ದನ್ನು ಕಂಡು "ಬೆಂಕಿ ಬೆಂಕಿ" ಎಂದು ಕೂಗಿದ್ದರಿಂದ ಆಜುಬಾಜಿನ ಜನರು ಓಡಿ ಬಂದು ಸದರಿ ಅಂಗಡಿ ಮ್ಹಾಲೀಕರನ್ನು ಮನೆಯಿಂದ ಕರೆತರಿಸಿ, ಬಾಗಲು ತೆರಿಸಿ, ಒಳ ಹೋಗಿ ಬೆಂಕಿ ನೊಂದಿಸಿದರು ಸ್ವಲ್ಪ ಹೆಚ್ಚು ತಡಮೆಯಾಗುತ್ತಿದ್ದರೆ ಆಜುಬಾಜಿನ ೪ ೫ ಅಂಗಡಿ ಮನೆಗಳು ಬಸ್ಮವಾಗುವ ಸಂಭವವಿತ್ತು ಬೆಂಕಿಯು ಹ್ಯಾಗೂ ರಾತ್ರಿ ೧೨ ಗಂಟೆ ಒಳಗೆ ವೇದಿಗೆ ತಾಗಿ ನಂತರ ಮೆಲ್ಲನೆ ಹಬ್ಬಿಕೊಂಡಿರಬೇಕೆಂತ ೫ ಗಂಟೆಗೆ ಬೆಂಕಿ ಹಬ್ಬಿದ್ದ ಸ್ಥಿತಿಯನ್ನು ನೋಡಿದವರು ಹೇಳುತ್ತಿರುವರು ಹೀಗೆ ಸುಮಾರು ೧೨ ಗಂಟೆಯಿಂದ ೫ ಗಂಟೆಯ ವರೆಗೆ ಉರಿಯುತ್ತಿದ್ದ ಬೆಂಕಿಯನ್ನು ಆ ಬೀದಿಯಲ್ಲಿ ತಿರುಗಾಡುತ್ತಿರುವ ಬೀಟಿನ ಇಬ್ಬರು ಪೋಲಿಸರಲ್ಲಿ ಒಬ್ಬನಾದರೂ ಕಾಣದೆ ಹೋದದ್ದು ಆಶ್ಚರ್ಯವಾಗಿದೆ ರಾತ್ರಿ ಕಾಲ ವೇದಿಯಲ್ಲಿ ಬೆಂಕಿ ಉರಿಸಿ ಮನೆಗೆ ಹಿಂತೆರಳುವ ರೋಮನ್ ಕೆಥೋಲಿಕ ಅಂಗಡಿಗಾರರು ಈ ಬೆಂಕಿ ಅನಾಹುತದಿಂದ ಎಚ್ಚರಿಗೆ ತಕ್ಕೊಳ್ಳಬೇಕಾಗಿದೆ

ಇಲ್ಲಿಗೆ ಬಂದಿರುವ ವೆಟರಿನರಿ ಇನ್ಸ್‌ಪೆಕ್ಟರರು ಹೆಕ್ನಿ ಕೆರೇಜು ಆಕ್ಟಿಗನುಸಾರವಾಗಿ ಹೆಕ್ನಿ ಕೆರೇಜು ಕುದುರೆಗಳನ್ನು ಪರೀಕ್ಷಿಸಿ ಕೆಲವು ಕುದುರೆಗಳನ್ನು ಗಾಡಿಗೆ ಕಟ್ಟಕೂಡದೆಂಬ ಹುಕುಂ ಮಾಡಿರುವರು. ಕೆಲವು ಗಾಡಿಗಾರರ ಮೇಲೆ ಘಾಯವಾದ ಕುದುರೆಗಳನ್ನು ಕಟ್ಟಿದ ತಕ್ಷೀರಿಗಾಗಿ ಚಾರ್ಜು ಮಾಡಿಸಿರುವರು

ಫೆಬ್ರವರಿ ತಾ ೧ರಿಂದ ೩ರ ವರೆಗೆ ಇಲ್ಲಿಯ ಸೆಶನ್ಸ್ ಕೋರ್ಟಿನಲ್ಲಿ ೧. ಮನ್ನ, ಅವಳ ಮಗಳು ೨. ನಾಗಿ, ೩ ಮುತ್ತಮ್ಮ, ೪ ಪರಮೇಶ್ವರಿ, ಇವಳ ಅಳಿಯ ೫. ಬೊಗ್ರಸೆಟ್ಟಿ, ೬ ಚೆಂದುಸೆಟ್ಟಿ, ೭ ಇಂದುಸೆಟ್ಟಿ ಎಂಬವರ ಮೇಲಿನ ಮೊಕದಮೆಯ ತನಿಕೆ ಆಯಿತು ೧ನೇ ಆಪಾದಿತಳ ಸೋದರಿಯ ಮಗ ಸೇಸುಸೆಟ್ಟಿ ಎಂಬವನನ್ನು ಮೂಲಗೇಣಿ ಆಸ್ತಿ ಸಂಬಂಧ ತಮ್ಮೊಳಗಿದ್ದ ಹಳೇ ವೈರವನ್ನು ತೀರಿಸಿಕೊಳ್ಳುವ ಉದ್ದೇಶದಿಂದ ತಾ. ೨. ೧೧ ೧೪ರಲ್ಲು ದೊಣ್ಣೆ ಇತ್ಯಾದಿಗಳಿಂದ ಹೊಡೆದು ಕೊಂದರೆಂಬದಾಗಿ ಈ ಏಳ್ವರು ಆಪಾದಿಸಲ್ಪಟ್ಟಿದ್ದರು. ಸೇಸುಸೆಟ್ಟಿಗೆ ಬೆಳಿಗ್ಗೆ ಆಪಾದಿತರು ಹೊಡೆದ ಹರೆಂಕಲೂ ಸಾಯಂಕಾಲ ಅವನು ಮೃತಪಟ್ಟನೆಂದೂ ಸರಕಾರದ ಕಡೆಯ ವಾದವಾಗಿತ್ತು. ೬-೭ನೇ ಆಪಾದಿತರ ಮೇಲೆ ತಕ್ಕ ರುಜುವಾತಿಲ್ಲದ್ದರಿಂದ ಅವರ ಮೇಲಿನ ತಕ್ಷೀರು ಮೊಕದಮೆ ತನಿಕೆ ಪ್ರಾರಂಭವಾಗುವ ಮೊದಲೇ ಹಿಂದಗೆಯಲ್ಪಟ್ಟಿತು. ಎಸ್ಸೆಸ್ಸರುಗಳು ೧. ೨. ೩ನೇ ಆಪಾದಿತರು ಕಠಿಣ ಹಿಂಸೆಪಡಿಸಿದರೆಂಬ ತಕ್ಷೀರಿನ ಮೇಲೆ ತಪ್ಪಿತಸ್ಥರಾಗುತ್ತಾರೆಂದೂ ೪-೫ನೇ ಆಪಾದಿತರು ತಪ್ಪಿತಸ್ಥರಲ್ಲವೆಂದೂ ಅಭಿಪ್ರಾಯಪಟ್ಟದ್ದರಿಂದ ಜಡ್ಜರು ೧ನೇ ಆಪಾದಿತಳಿಗೆ ೪ ವರ್ಷಗಳ ಕಠಿಣ ಸಜಾ, ೨-೩ನೇ ಆಪಾದಿತರಿಗೆ ಮೂರು ಮೂರು ವರ್ಷಗಳ ಸಜಾ ವಿಧಿಸಿ ೪-೫ನೇ ಆಪಾದಿತರನ್ನು ಖುಲಾಸೆಮಾಡಿದರು. ಆಪಾದಿತರ ಕಡೆಯಲ್ಲಿ ರಾ| ಎಮ್. ಎನ್. ಬಂಗೇರ ಬಿ. ಎ. ಬಿ. ಎಲ್‌ರವರು ವ್ಯವಹರಿಸಿದರು.

ಇದೇ ತಾ ೭ನೇ ಆದಿತ್ಯವಾರ ಸಾಯಂಕಾಲ ೪ ಗಂಟೆಗೆ ಬಸವನಗುಡಿ ರಸ್ತೆಯಲ್ಲಿರುವ ಹೆಡ್‌ಕನ್‌ಸ್ಟೇಬಲ್ ಮೋನಪ್ಪ ಎಂಬವರ ಮನೆಗೆ ಬೆಂಕಿ ಬಿದ್ದು ಮನೆ ಸುಟ್ಟು ಬಸ್ಮವಾಯಿತು. ಪೋಲಿಸ ಜವಾನರು ಓಡಿಬಂದಿದ್ದರೂ ಬೆಂಕಿಯನ್ನು ನೊಂದಿಸುವರೆ ವಿಶೇಷ ಪ್ರಯತ್ನ ನಡಿಸಿದ್ದೇನೂ ತೋರಿಬರಲಿಲ್ಲವಂತೆ. ಆದರೆ ಉರಿಯುತ್ತಿದ್ದ ಎರಡು ತೆಂಗಿನ ಮರಗಳ ಬೆಂಕಿ ಆರಿಸುವ ಧೈರ್ಯವು ಯಾರಿಗೆ ಬಾರದೆ ಹೋದರೂ ಅಲ್ಲಿಗೆ ಬಂದಿದ್ದ ಪೋಲಿಸರ ಪೈಕಿ ಐತಪ್ಪ ಎಂಬವನು ಮರಕ್ಕೆ ಹತ್ತಿ ಬೆಂಕಿ ಆರಿಸಿದ ಕೆಲಸವನ್ನು ನೋಡಿದವರೆಲ್ಲರೂ ಐತಪ್ಪನ ಧೈರ್ಯ ಸಾಹಸಗಳನ್ನು ಶ್ಲಾಘಿಸಿಕೊಂಡು ಹೋದರು ಬೆಂಕಿ ಆರಿಸುವ ಯಂತ್ರಗಳಿರುತ್ತಾ ಇಂಥಾ ಬೆಂಕಿ ಅನಾಹುತಗಳ ನಡೆಯುವಲ್ಲಿ ಇದರಿಂದ ಹೆಚ್ಚಿನ ಸಹಾಯವು ದೊರಕದಿರಲು ಕಾರಣವೇನೊ ತಿಳಿಯೆವು

ತಾ. ೯ನೇ ಮಂಗಳವಾರ ಪಟ್ಟಣದ ಬೀದಿಗಳೊಂದರಲ್ಲಿ ಹೋಗುತ್ತಿದ್ದ ಹೆಂಗಸಿನ ಕಿವಿಯಿಂದ ಬೆಂಡೋಲೆಯನ್ನು ಯಾರೋ ದಾರಿ ಹೋಕರು ಎಳಕೊಂಡು ಹೋಗಿರುವರೆಂಬದಾಗಿಯೂ ವಿಕ್ಟೋರಿಯ ಗರ್ಲ್ಸ್‌ಸ್ಕೂಲ್ ರಸ್ತೆ ಕೊಡಿಯಾಲಬೈಲ ಪ್ರೆಸ್ ಮತ್ತು ಡಿಸ್ಟ್ರಿಕ್ಟ್ ಕೋರ್ಟಿಗೆ ಹೋಗುವ ರಸ್ತೆಯ ನಡುವೆ ಇರುವ ದಾರಿ, ಜಿಲ್ಲಾ ಸರ್ಜನರ ಬಂಗ್ಲೆಗೆ ಹೋಗುವ ಸನ್ಯಾಸಿ ಗುಡ್ಡೆಯ ಸಂತ ದಾರಿ ಮೊದಲಾದ ದಾರಿಗಳಲ್ಲಿ ಮುನ್ಸಿಪಾಲ್ ಲಾಂದರುಗಳನ್ನು ಹತ್ತಿರ ಹತ್ತಿರವಾಗಿರಿಸುವದೂ ಈ ದಾರಿಗಳಲ್ಲಿ ಬೀಟಿನ ಪೋಲಿಸರ ಸಂಖ್ಯೆಯನ್ನು ಹೆಚ್ಚಿಸುವದೂ ಪ್ರಕೃತ ಸ್ಥಿತಿಯಲ್ಲಿ ಅಗತ್ಯವಾಗಿರುವದೆಂತ ಒಬ್ಬ ವಾರ್ತಿದಾರರು ಬರೆಯುವರು

ಇಲ್ಲಿಯ ಡಿಸ್ಟ್ರಿಕ್ಟ್‌ಕೋರ್ಟು ಮತ್ತು ಸಬ್‌ಕೋರ್ಟುಗಳಿಗೆ ಶಿಕೆ ಕಾಲದ ರಜೆಯು ಈ ವರ್ಷ ಮಾರ್ಚಿ ತಿಂಗಳ ತಾ. ೨೨ರಲ್ಲಿ ಕೊಡೋಣಾಗುವದೆಂದೂ ಡಿಸ್ಟ್ರಿಕ್ಟ್ ಮುನ್ಸಿಫ್‌ಕೋರ್ಟಿಗೆ ಎಪ್ರಿಲ್ ತಿಂಗಳ ಪ್ರಥಮ ವಾರದಲ್ಲಿ ರಜೆಯು ಕೊಡೋಣಾಗುವದೆಂದೂ ಕೇಳುತ್ತೇವೆ

ಇದೇ ತಾ. ೧೨ರಲ್ಲು ಸೈಂಟ್ ಅಲೋಷಿಯಸ್ ಕಾಲೇಜಿಯಲ್ಲಿ ವಿದ್ಯಾರ್ಥಿಗಳಿಗೆ ಅವರವರ ಸಾಮರ್ಥ್ಯಕ್ಕನುಸಾರವಾಗಿ ಬಹುಮಾನಗಳನ್ನು ಹಂಚುವ ಸಮಾರಂಭವು ನಡೆಯುವದು ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಸೆಶನ್ಸ್ ಜಡ್ಜರಾದ ಮೆ। ಇ ಎಲ್ ಫೊಂಟರ್ನ್ ದೊರೆಯವರು ಅಧ್ಯಕ್ಷರಾಗಿರುವರು

ತಾ ೧೪ರಲ್ಲಿ ಇಲ್ಲಿಯ ಸ್ಟುಡೆಂಟ್ಸ್ ಬ್ರದರ್ಸ್ ಹೂಡ್ ಎಂಬ ವಿದ್ಯಾರ್ಥಿಗಳು ಭ್ರಾತೃ ಸಂಘದ ೨ನೆ ವಾರ್ಷಿಕೋತ್ಸವವು ನಡೆಯುವದು. ಈ ಸಂದರ್ಭದಲ್ಲಿ ಸರ್, ನಾರಾಯಣ ಚಂದಾವರಕಾರರವರು ಅಧ್ಯಕ್ಷರಾಗಿರುವರು.

ಮಲಬಾರ್ ಮತ್ತು ದಕ್ಷಿಣಕನ್ನಡಾ ಜಿಲ್ಲೆಗಳ ಪರವಾಗಿ ನ್ಯಾಯವಿಧಾಯಕ ಸಭೆಯಲ್ಲಿ ಖಾಲಿ ಬಿದ್ದ ಮೆಂಬರುತನದ ಚುನಾವಣೆಯು ನಡೆದು ಮ| ರಾ| ಕಾವಲಪುರ ಮೋಪಿಲ್ ನಾಯರಿಗೆ ೧೬೫ ಓಟುಗಳೂ, ರಾವ್ ಸಾಹೇಬ್ ಎನ್ ಸುಬ್ಬರಾಯರವರಿಗೆ ೫೦ ಓಟುಗಳೂ, ಮ| ರಾ| ಕೆ, ಮೆನೋನರಿಗೆ ೧೩ ಓಟುಗಳೂ ದೊರಕಿದವು. ಹೀಗೆ ಕಾವಲಪುರ ಮೋಪಿಲ್ ನಾಯರರು ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟರು.

ಇಲ್ಲಿಯ ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ರಿಜಿಸ್ಟ್ರಾರರಾಗಿರುವ ಮ| ರಾ| ಪಿ. ರಾಮಕೃಷ್ಣಯ್ಯರವರು ೨|| ತಿಂಗಳ ಪ್ರಿವಿಲೆಜ್ ರಜೆ ಪಡಕೊಂಡಿರುವರು

ನಿನ್ನೆ ಸಾಯಂಕಾಲದ ಮೈಲ್ ಬಂಡಿಯಲ್ಲಿ ಸರ್ ನಾರಾಯಣ ಚಂದಾವರ್‌ಕಾರರವರು ಇಲ್ಲಿಗೆ ಬಂದು ತಲ್ಪಿರುತ್ತಾರೆ. ಇವರನ್ನು ಸನ್ಮಾನಪೂರ್ವಕ ಎದುಗೊಳ್ಳಲು ರೈಲ್ವೆ ಸ್ಟೇಶನಿನಲ್ಲಿ ಇಲ್ಲಿಯ ಆಯಾ ಜಾತಿಗಳ ಮುಂದಾಳುಗಳಲ್ಲಿ ಹಲವರು ನೆರದಿದ್ದರು ಇವರೆಲ್ಲರ ಪರಿಚಿತಿಯನ್ನು ಮಾಡಿಕೊಂಡು ಸುಕ್ಷೇಮಗಳನ್ನು ವಿಚಾರಿಸಿದ ಒಳಿಕ ರಾ| ಕೆ. ರಂಗರಾಯರೊಡನೆ ಸರ್ ನಾರಾಯಣರವರು ಮಡಿಕೇರಿ ಗುಡ್ಡೆಯ ಬಂಗ್ಲೆಗೆ ತೆರಳಿದರು. ಚಂದಾವರಕಾರರವರು ಇಲ್ಲಿ ರಾ| ಕೆ. ರಂಗರಾಯರ ಅತಿಥಿಗಳಾಗಿರುವರು.

ಸರ್. ಎನ್. ಜಿ. ಚಂದಾವರಕಾರರವರು ಇದೇ ತಾ. ೧೩ನೇ ಶನಿವಾರ ೬ ಗಂಟೆಗೆ ಕೆನರಾಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ "ಆಗ್ಗೆ, ಈಗ ಮತ್ತು ನಂತರ" ಎಂಬ ವಿಷಯದ ಮೇಲೆ ಇಂಗ್ಲಿಷಿನಲ್ಲಿ ಭಾಷಣವನ್ನು ಕೊಡುವರು.

ಮಂಗಳೂರಿನಿಂದ ಪಾಣೆಮಂಗಳೂರಿಗೆ ರೈಲ್ವೆ ಮಾರ್ಗವನ್ನು ಹಾಕಿಸುವ ವಿಷಯವು ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡಿನವರಿಂದ ಪರ್ಯಾಲೋಚಿಸಲ್ಪಡುವದಾಗಿ ಕೇಳುತ್ತೇವೆ.

ಇಲ್ಲಿಯ ಡಿಸ್ಟ್ರಿಕ್ ಮುನ್ಸೀಫರವರು ಇನ್ನು ಸದ್ಯದಲ್ಲಿ ಮೂರು ವಾರಗಳ ರಜೆಯನ್ನು ಪಡಕೊಳ್ಳುವರು.

ಕಳೆದ ವರ್ಷ ಕೊಯಂಬುತ್ತೂರ್ ಸರ್ಕಲಿನ ಕೊಒಪರೇಟಿವ್ ಕನ್ಫರೆನ್ಸ್ ಕಲಿಕೋಟೆಯಲ್ಲಿ ನಡೆಯಿತು. ಈ ವರ್ಷ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಭೆಯನ್ನು ನಡಿಸುವುದೆಂತ ಅಂದು ನಿರ್ಣಯವಾದುದರಿಂದ ಈ ಸಂಬಂಧ ತಕ್ಕ ಏರ್ಪಾಡು ನಡಿಸುವರೆ ಇದೇ ತಿಂಗಳ ತಾ. ೧೪ನೇ ಆದಿತ್ಯವಾರ ಸಾಯಂಕಾಲ ೩ ಗಂಟೆಗೆ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಒಂದು ಸಭೆಯು ಕೂಡುವುದಾಗಿ ದಕ್ಷಿಣಕನ್ನಡ ಜಿಲ್ಲಾ ಸೆಂಟ್ರಲ್ ಕೊಒಪರೇಟಿವ್‌ಬೇಂಕಿನ ಸೆಕ್ರೆಟರಿಗಳು ಪ್ರಕಟಿಸಿರುವರು.

ಈ ಸಂಚಿಕೆಯ ಪ್ರಕಟಣಾ ಪಾನಿನಲ್ಲಿ ಇಂಗ್ಲಿಷಿನಲ್ಲಿ ಪ್ರಕಟಿಸೋಣಾದ ನೇಯಿಗೆ ಕಾರಖಾನೆ ಮತ್ತು ಅದರ ಸಮೀಪವೇ ಇರುವ ಮನೆ ಹಿತ್ತಲುಗಳು ಮನೆಯಲ್ಲಿಯೇ ಕೂತು ಕೈಗಾರಿಕೆಗಳನ್ನು ಮಾಡಿಸಲಿಚ್ಛಿಸುವವರಿಗೆ ಯೋಗ್ಯವಾದ ಸ್ಥಳವಾದುದರಿಂದ ವಾಚಕರು ಆ ಪ್ರಕಟಣೆಯನ್ನು ಓದಿಕೊಳ್ಳಬೇಕಾಗಿ ಅಪೇಕ್ಷಿಸುವೆವು

ಬಂಟರ ಯಾನೆ ನಾಡವರ ಸಂಘ.

ನಡುವಡಿ ಕುಂಞಣ್ಣನ ವಿವಾಹದ ಸಂಬಂದ ರಾ| ಶಿರುಬಾಗಿಲ್ ಪರೆಲ ತಿಮ್ಮಪ್ಪ ಆಳ್ವರ ಮು ಖಾಂತರ ವಸೂಲಾದ್ದು.	2—0—0
ರಾ| ತಿಮ್ಮಪ್ಪಪೂಂಜರ ಪಕ್ಕಿಗೆ ಕೊಲ್ನಾಡಿನಲ್ಲಿ ಆದ ಸೀಮಂತದ ಸಂಬಂದ ವಸೂಲಾದ್ದು	5—0—0
	7—0—0

ತಾ 5—2—1915.

A B. Shetty.
(ಕೋಶಾಧಿಕಾರಿ)

ಜೀನಸು ಧಾರಣೆ. (ರಖಂ)

ಹೊಸ ಮುಸ್ಕತಿ ಅಕ್ಕಿ	5— 2—0	5—10—0
ಹೊಸ ಗಾಡಿ ರಾಶಿ ,,	4— 5—0	4— 8—0
ಹೊಸ ಗುಡ್ಡು ,,	4—12—0	5— 2—0
ಅವ್ವಲ್ ಬೆಳ್ತಿಗೆ ,,	5— 8—0	5—11—0
ಗುಡ್ಡು ಬೆಳ್ತಿಗೆ ,,	. . . . .	5— 3—0
ರಂಗೂನು ಬೆಳ್ತಿಗೆ ಗೋಣಿ ೧ರ	. . . .	9— 6—0
ಗೋದಿ ಗೋಣಿ ೧ರ ...	13— 4—0	14— 4—0
ಹುರುಳಿ ಗೋಣಿ ೧ರ ...	6— 8—0	7— 0—0
ಕಡಲೆ ಗೋಣಿ ೧ರ. ...	. . . .	11—12—0
ತೊಗರಿ ಗೋಣಿ ೧ರ ...	10—12—0	12— 0—0
ತೊಗರಿ ಬೇಳೆ ಗೋಣಿ ೧ರ.	12— 8—0	16— 0—0
ಉದ್ದು ಗೋಣಿ ೧ರ	...	10— 8—0
ಊರು ಬೆಲ್ಲ ಖಂಡಿ ೧ರ	...	50— 0—0
ಉಪ್ಪು ಗೋಣಿ ೧ರ	. .	3— 7—0
ಕೊಬ್ರಿ ಖಂಡಿ ೧ರ .	80— 0—0	84— 0—0
ಕೊಬ್ರಿ ಹಿಂಡಿ ಖಂಡಿ ೧ರ	20— 0—0	23— 0—0
ಎಳ್ಹಿಂಡಿ ಖಂಡಿ ೧ರ	. 30— 0—0	36— 0—0
ಕೊಬ್ರಿ ಎಣ್ಣೆ ಮುಡ ೧ರ .	6— 0—0	6— 2—0
ಎಳ್ಳೆಣ್ಣೆ ಮುಡ ೧ರ (ಕುರಾಸನ)	3—14—0	4— 0—0
ಚಿವುಣಿ ಎಣ್ಣೆ ಪೆಟ್ಟಿಗೆ ೧ರ	. . . .	5— 0—0
ಮೋರಿಸ್ ಸಕ್ಕರೆ ಮುಡ ೧ರ	. . . .	4— 6—0
ಕಾಫಿ ಖಂಡಿ ೧ರ.	220—0—0.	225— 0—0
ಬೀಗೋಟು ಖಂಡಿ ೧ರ .	115—0—0	118— 0—0
ಹೊಸ ಬೀಗೋಟು ಖಂಡಿ ೧ರ	85— 0—0	87— 0—0
ಗೇರು ಬೀಜ ಮುಡಿ ೧ರ . . .	. .	1— 2—0
ಕಳ್ಪಿಣ ಖಂಡಿ ೧ರ.	. 42—0—0	44— 0—0
ತಾಂಬ್ರ ತಗಡು ಮಣ ೧ರ.	16— 8—0	16—10—0
ತಾಂಬ್ರ ಪಾತ್ರೆಗಳು ಮಣ ೧ರ . .	.	22— 0—0
[illegible] ಸೇರು ೧:		. 18—12—0

Box Locks.



Padlocks.



ಧಾರಣೆ ಸುಲಭ! ಅಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ್ರ	1	2	3	4	5
	0—12—0	0—15—0	1—4—0	1—10—0	.....

ಆರು ಚಕ್ರಗಳಿರುವ ಬೀಗಗಳು.

1—2—0 1—8—0 2—4—0 3—0—0 3—8—0

ವಿಲ್ಲರ್ ಬೀಗಗಳು.

0—4—0 0—5—0 0—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ೧ಕ್ಕೆ 0—13—0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ.

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ೧ಕ್ಕೆ 1—8—0, 1—12—0.

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಚಿತ್ರ ಆಂಗ್ಲಭಾಷಾ ಪ್ರಕಾಶಿಕಾ.

ಇದು ಹೊಸ ಪುಸ್ತಕ, ಹೊಸತರಹ, ಅಂದವಾದ ಅಚ್ಚು, ಐದು ಭಾಗ ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ಇದು ಒಂದನೇ ಪುಸ್ತಕ. ಬೆಲೆ ರೂ. 1. ದೇಶಬಾಂಧವರಿಗೆ ಬೆಲೆ ಕಮ್ಮಿ ಮಾಡಿದೆ. ಇದನ್ನು ಗುರುವಿನಂತೆ ಭಾವಿಸಿ. ತಪಾಲು ಖರ್ಚು 0—2—0.

ಅಪೂರ್ವ ಪುಸ್ತಕಗಳು.

ವೈದ್ಯಸಾರ ಸಂಗ್ರಹ. ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3.

ರೆವಿನ್ಯು ಸರ್ವೆ ಮೋಜಣಿ ಕ್ಲಾಸಿಫಿಕೇಷನ್ ಕಲಿಯತಕ್ಕ ಬುಕ್ಕು. ಇದು ಮೋಜಣಿದಾರರಿಗೂ, ಪಟೇಲರಿಗೂ, ಶ್ಯಾನುಭೋಗರಿಗೂ ಅಗತ್ಯವಾಗಿ ಬೇಕಾದ ಪುಸ್ತಕ. ಬೆಲೆ 1—4—0.

ರಾವ್‌ಬಹದೂರ್ ವೀರೇಶಲಿಂಗಂ ಪನ್ತುಲು ಅವರ ರಾಜಶೇಖರ ಚರಿತ್ರೆ ಕನ್ನಡ ಎಡಿಶನ್. ಬೆಲೆ ರೂಪಾಯಿ 1—0—0.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆ ಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

	ರೂ. ಆ.		ರೂ. ಆ.		ರೂ. ಆ.
ಜಮಾ ಖರ್ಚಿನ ಪದ್ಧತಿ	0--12	ಆರ್ಯಕೀರ್ತಿ .	0-10	ಕುಣಿಗಲು ರಾಮಾಶಾಸ್ತ್ರಿ	
ಇಂಡ್ಯನ್‌ಪೆನಲ್‌ಕೋಡ	2—0	ಶಾಕುಂತಲ ನಾಟಕ	0—8	ಗಳವರ ಚರಿತ್ರೆ	1—0
ಅರೆಬಿಯನ್ ನೈಟ್ಸ್	2—4	ಸ್ತ್ರೀ ಧರ್ಮನೀತಿ	0—8	ಸುಮತಿ ಮದನಕುಮಾರರ	
ಸುರಸ . .	0—4	ಶೋಭನೆ. .	0—8	ಚರಿತ್ರೆ I	0—8
ಶ್ಯಾಮು . .	0—1	ಚಂದ್ರಕಳಾ .	0—4	,, II	0—7
ಇಂದ್ರ ವಜ್ರ. .	0—4	ಕಲಾನಾಥ .	0—6	ಶಿವಗೀತೆ . .	0—6
ಚೆಕ್ಕೋಜ . .	0—3	ಪ್ರ. ಲೇಖ್ಯಬೋಧಿನಿ	1—4	ಪಾಕಶಾಸ್ತ್ರ . .	0—8
ಕನಕಾಲುಕ. .	0—6	ವಿಷವೃಕ್ಷ .	1—4	ಸನಾತನಧರ್ಮ ದೀಪಿಕೆ	1—0
ಹನುಮದ್‌ವಿಲಾಸ .	0—8	ಮುದ್ರಾಮಂಜೂಷ	1—8	ಬಾಲರಾಮಾಯಣ .	0—4
ಶಿವಾನಂದಲಹರಿ ..	0—6	ಕುಳಸಪ್ತತಿ .	2—0	ಕಥಾ ಮಂಜರಿ. .	0—6

ಪ್ರಸಿದ್ಧ ಪತ್ತೇದಾರಿ ಕಥೆಗಳು, ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ, ವಿಷಮುಹೂರ್ತ, ಮಾಯಾವಿನಯ, ಅತ್ಯಾಚಾರ, ಚೋರ ಚಕ್ರವರ್ತಿ, ನರ ರಾಕ್ಷಸಿ, ಪ್ರತಿಯೊಂದು ಪ್ರತಿಯೂ 2 ಆಣೆ.

ವಿಳಾಸ:— ವಿದ್ಯಾಸಾಗರ ಬುಕ್ ಡಿಪ್ಪೋ,
ಚಿಕ್ಕಪೇಟೆ. ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಅತ್ಯುತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲಿಯ ಎಣ್ಣೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಲ್ಲ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಕೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಕ್ಲೇಶವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಕ್ಷಾರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಯೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ. ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ನಿಶ್ಶಾಣಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ.—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ, ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳ, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ಡ್ಯಾಬಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತವೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಷರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜೆಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

---

150 ಪುಟಗಳ ಪುಸ್ತಕವು.

ಉಚಿತವು

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಸಿ. ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರೆಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 92, ಬ್ರಾಡ್ವೇ, ಮದ್ರಾಸ.
ಕಮ್ನು ಏಜಂಟರು:— 1. ಮೆಸ್ಸರ್ಸ್. ರಘಯಿಲ್ ಎಂಡ್ ಕೊ., [illegible]
2. [illegible]

ಬಹುಮಾನ! ಬಹುಮಾನ!!

2½ ಸಾವಿರ ರೂಪಾಯಿಗಳು ಹಂಚಲ್ಪಡುವವು.

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ, ಇವರ ನಾರಸಿಂಹಚೂರ್ಣವು.

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವು ವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರೆ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವು ವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರೂ ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು. ವಿಷಾದಕರವಾಗಿರುವ ಈ ಲೋಪವನ್ನು ಹೋಗಲಾಡಿಸುವದಕ್ಕಾಗಿ "ನಾರಸಿಂಹಚೂರ್ಣವು" ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕ ತರಹೆಯ ಮೇಹ ರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯ ಕುಷ್ಠಗಳು, ಎಂಟು ವಿಧ ಉದರ ರೋಗಗಳು, ಭಗಂದರವು, ಮೂತ್ರಕೃಚ್ಛ್ರವು, ಗೃಧ್ರಸೀವಾತವು, ಕಾಮಿಲೆ ಕ್ಷಯವು, ಮಹಾಶ್ವಾಸಗಳು, ದಾರುಣವಾದ ಐದು ಬಗೆಯ ಕಾಸಗಳು, ಎಂಬತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯ ಪಿತ್ತಗಳು, ಇಪ್ಪತ್ತು ಬಗೆಯ ಶ್ಲೇಷ್ಮರೋಗಗಳು, ದ್ವಂದ್ವಸನ್ನಿ ವಾತ ರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಂಹದಂತೆ ಪರಾಕ್ರಮವು ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯುಳ್ಳವರಾಗುವರು ಇದರಲ್ಲಿ ಯಾವ ವಿಷವಾದ ರಸಗಳಾಗಲಿ ಮಿಶ್ರವಾಗಿ ಇಲ್ಲ. ಇನ್ಯಾವ ದೋಷಗಳೂ ಇಲ್ಲ ನಿರ್ದುಷ್ಟವಾದ ಪ್ರಶಸ್ತ ವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ ಅನೇಕ ಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು

14 ದಿನ ಉಪಯೋಗಕ್ಕೆ ಬರುವ ಡಬ್ಬಿ ಒಂದಕ್ಕೆ ಬೆಲೆ ರೂಪಾಯಿ 1—0—0

ಬಹುಮಾನಗಳನ್ನು ಹಂಚುವ ವಿಧಾನ.

1 ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 10000 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 6000 3 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 4000. 2 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ. 3000 1 ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ರೂ 2000.

1914ನೇ ಜುಲೈ 1ನೇ ತೇದಿ ಮೊದಲು 1915ನೇ ಜುಲೈ 1ನೇ ತೇದಿವರೆಗೆ ಈ ಔಷದವು ಒಂದು ಲಕ್ಷ ಡಬ್ಬಿಗಳು ಖರ್ಚಾದ ಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತ ಅವಧಿಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅದಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ ಈ ವಿಷಯದಲ್ಲಿ ತಿಲ ಮಾತ್ರವಾದರೂ ಸಂಶಯವಿಲ್ಲ ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಒಂದೇಸಮವಾಗಿ ಹಂಚಲ್ಪಡುವವು ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವೂ ಇಲ್ಲ. ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ ಅಸೂಯಾಂಧರ ಮಾತುಗಳಿಗೆ ನಗಾಕೊಡಲಾಗದು. ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಔಷಧಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ

ಇದರ ಅನುಪಾನಪತ್ರಿಕೆಯನ್ನೂ ಬಹುಮಾನದ ಟಿಕೀಟನ್ನೂ ಡಬ್ಬಿಯ ಸಂಗಡ ಕಳುಹಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು:—

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 4 ರೂ ತೂಕದ ಸೇರು 1ಕ್ಕೆ ರೂ, 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0 0, 1—0—0, 0—12—0, 0—6—0

ರಾಯಲ್ ಸುಗಂಧಿ ಸೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಸೀಸೆ 1ಕ್ಕೆ 0-4-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಶೋಕಾಮಯಹರ ಕಸ್ತೂರಿ ಮಾತ್ರೆ.—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಕೊಬ್ಬು ಸುವಾಸನೆಯೂಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸಂಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನಿಯಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಬೇಕಾದಿತೇ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನು. ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ,

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:— "ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು

ಅನುಭವಸಿದ್ಧವಾದ ವನೌಷಧಗಳು

೧. ಕುಂತಳಕಾಂತಿ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಿಂದ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಕೀಳಿಲಿ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನವು. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಮ್ಮ ವಿಳಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ರೋಗ ಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ತುಳುಕಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯೂ ಇಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸುವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಬ್ರಾಹ್ಮೀ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M. Nath & Co, *Ayurvedic Chemists*

Vepery Post. MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಹಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೀಕುಗಳೂ, ಬೇರೆ ಅನೇಕ ತರದ ಸ್ವದೇಶಿ ಚೀಟಿ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ, ಪೆಬ್ಬ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೀಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original BABA BUDAN-GHIRY ... PROPRIETORS L. R. SOUZA & Co ...

ಸ್ವತಃ ಒಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನಕಟ್ಟೆ ಮಂಗಳೂರು.

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರ್ಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್ವರ್ತ ಅಲ್ಲದೆ ಸುಲಭ ದರದ ಬಿನ್ಸನ್, ರೋಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ್, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಖರ್ಚಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ.

K. K. Shanbhog, Propr.

THE CANARA CYCLE MART,

Udipi, S. Canara.

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು-ಬಹುಮಾನವಾಗಿ ಪಡೆದ

ಸ್ಟೀವನ ಎಂಡ್ ಸನ್

ಬಿಸ್ಕುಟು ವ ಕೇಕುಗಳನ್ನು ತಯಾರಿಸುವವರು, ಮಂಗಳೂರು

ಏಜಂಟರು:—ಅಂತೋನಿ ಎಲ್ ರೇಗೊ, ಸ್ವೀಟ್‌ಮಾಟ್ ಬಜಾರ್, ಕಲ್ಲಿಕೋಟೆ
ಸ್ವದೇಶಿ ಎಂಪೋರಿಯಮ್, ಸೇಲಂ.
ಕಣಕಾಸವಾ ಚೆಟ್ಟಿಯರ್, ಲಾಲ್‌ಗುಡಿ, ಪುವಲೂರ್, ತಿರುಚನಾಪಳ್ಳಿ
ಎನ್ ಪ್ಯಾಸ್ ಶೋಪ್, ಮಡಿಕೇರಿ
ಏ ಬಾಲಕೃಷ್ಣ ನ್ಯಾಡು ಬಿಗ್ ಬಜಾರ್ ಸ್ಟ್ರೀಟ್, ಕೊಯಂಬುತ್ತೂರು
ಅರ್ನೋನ್ ಎಂಡ್ ಐಮುಕ್ ಶೋಪ್, ಉಡ್ಪಿ

ನೀವು ನಮ್ಮ ಬಿಸ್ಕುಟು ಇತ್ಯಾದಿಗಳಿಂದ ತೃಪ್ತಿಹೊಂದಿದರೆ ಇತರರಿಗೆ ಹೇಳಿರಿ ಇಲ್ಲವಾದರೆ ನಮಗೆ ತಿಳಿಸಿದರೆ ನಮ್ಮನ್ನ ತೃಪ್ತಿಪಡಿಸುವೆವು

ವಿಳಾಸ.— ಸ್ಟೀವನ್ ಎಂಡ್ ಸನ್ಸ್, ಮಂಗಳೂರು.

S. U. N. & CO.,

BENARES CITY, U P

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗನ್ನು ಇನಾಮಾಗಿ ಕಳುಹಿಸಲಾದೀತು

ತಮ್ಮ ವಿಳಾಸ.— ಯಸ್ ಯು. ಯನ್. ಮತ್ತು ಕಂಪೆನಿ, ಕಾಶಿ

ಉತ್ಕೃಷ್ಟವಾದ ಮೂರು ಔಷಧಗಳು.

ಗ್ರೆಂಟ್ ಮೆಡಿಕಲ್ ಕೊಲೆಜಿನಲ್ಲಿ ಸೂಲಗಿತ್ತಿತನ ಕಲಿತು ಸರ್ಟಿಫಿಕೇಟ್ ಪಡೆದ ಕಮಲಾ ಬಾಯಿ, ತುಲಸೀ ಬಾಯಿ ಎಂಬ ಸೂಲಗಿತ್ತಿಯರಿಂದ ತಯಾರಿಸಲ್ಪಟ್ಟವುಗಳು.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1

(ಆರ್ತವ ಶೂಲೆ ಹೋಗಲಾಡಿಸುವ ಬಗ್ಗೆ.)

ಅಬಲಾಸಂಜೀವನಿ ಗುಳಿಗೆಗಳು ಎಲ್ಲಾ ಬಗೆಯ ಆರ್ತವ ಶೂಲೆಯನ್ನು ಹೋಗಲಾಡಿಸುವುದಕ್ಕೆ ಏಕರೀತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆಗೆ ಯೋಗ್ಯವಾದ ಮಾತ್ರೆಗಳಾಗಿರುವವು ಅನೇಕ ಕಾಲದವರೆಗೆ ಪುಷ್ಪವತಿಯಾಗದೆ ಇದ್ದುದು ಕೂಡ ಇವುಗಳಿಂದ ಸರಿಯಾಗುವುದು ಅಂತರೌಷಧಿಗಳಿಂದ ಗುಣವಾಗಬಹುದಾದ ಎಲ್ಲಾ ಗರ್ಭಕೋಶದ ಶೂಲೆಗಳು ಇವುಗಳಿಂದ ಗುಣವಾಗಿ, ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು ಒಂದು ಶೀಸೆಯ ಕ್ರಯ ರೂ. 1 ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 2.

(ಬಿಳೀ ಸ್ರಾವದ ಬಗ್ಗೆ.)

ಈ ಬಾಧೆಯಿಂದ ವಿರಹಿತರಾದ ಸ್ತ್ರೀಯರು ಬಹಳ ವಿರಳ ಈ ಸ್ರಾವದಿಂದ ಹೆಚ್ಚಿನ ನಿರ್ಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವುವು ಈ ಸ್ರಾವವು ರಕ್ತಸ್ರಾವದಂತೆ ಬಲಹೀನಕರ ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರುವುದು, ಆಗಾಗ್ಗೆ ಕಟಿಭಾಗದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗುವುದು, ಮಲವಿಸರ್ಜನೆ ಸರಿಯಾಗದಿರುವುದು ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು —ಒಂದೇ ಪೊಟ್ಟಣವನ್ನು ಪರೀಕ್ಷೆಗಾಗಿ ತರಿಸಿದರೆ ತ್ವರ್ಯಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು. ಒಂದು ಶೀಸೆಯ ಕ್ರಯ 1 ರೂಪಾಯಿ ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 3.

(ಕೆಂಪು ಸ್ರಾವದ ಬಗ್ಗೆ)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದುವುಗಳು ಉಂಟಾಗಿ, ಗರ್ಭಕೋಶದ ಶೂಲೆ, ನಿರ್ಬಲತೆ ತಲೆದೋರುವುವು ಈ ಸ್ರಾವವು ಗರ್ಭಕೋಶದಿಂದ ಸ್ರವಿಸುವ ರಕ್ತವೇ ಸರಿ ಈ ಗುಳಿಗೆಗಳನ್ನು ಕೂಡಲೇ ಸೇವಿಸುವುದಕ್ಕೆ ಅಸಡ್ಡೆ ಮಾಡಿದರೆ, ಈ ಪೀಡೆಯು ಅತಿಶಯಿಸಿ, ಬೇಗನೇ ಗುಣ ಹೊಂದಲಿಕ್ಕಿಲ್ಲ. ಒಂದು ಶೀಸೆಯ ಕ್ರಯ 1 ರೂಪಾಯಿ ಅಂಚೆ ಹಾಸಲು 4 ಆಣೆ ಏಜೆಂಟರು —

ದಿ ಊಲನ್ ಮಾರ್ಟ್, ಹಂಪನ್‌ಕಟ್ಟೆ, ಮಂಗಳೂರು ದಕ್ಷಿಣ ಕನ್ನಡ

Dr Nava Ratna & Sons, 253 Kalhadevi Road, BOMBAY 2.

Estd 1888 ಸ್ಥಾಪನೆ 1888

K. B. RELE & Cos.,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ ೨೦-೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ದರ ಬಾಟ್ಲಿಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿಗಕ್ಕೆ ರೂ. ೧—೪—೦. ಅಂಚೆ ವೆಚ್ಚ ... ಆಣೆ

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ ಬಿ ರೇಳೆ ಸನ್ಸ ಕಂಪೆನಿ ಗಿರಗಾಂವ ನಂ ೪ ಮುಂಬಯಿ

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ಬಾಂಛಿಸಲೊಲ್ಲಳು? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು ಗೆಯಾಗಿ ಮಾಡಿಸುತ್ತದೋ, ಹಾಗೆಯೇ ಬುದ್ಧಿ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿ

ಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧ ವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪ ಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋ ಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಆಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತ ಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲಿ. ಬೆಳಗಾಂವ—ನಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇವೆ

ಸೀಸೆಯೊಂದರ ಕ್ರಯ ರೂ. 1 0-0, ಅ. ವೆ 0-4-0 ಬೇರೆ, 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0-7-0 ಬೇರೆ.

ಸೂಚನೆ — ಅನೇಕ ದುರ್ನೀತಿಕರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಮಾರಾಟದಿಂದ ತಮಗೆ ಅತ್ಯಲ್ಪ ಸಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದಾಯಕವಾದ ಕಳ್ಳ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ. ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಎಚ್ಚರಿಕೆ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾಗದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀವ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಆಕರ್ಷಕವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮು ಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗು ವದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊ ಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ" ಅಥವಾ ವಿದ್ಯುಚ್ಛಕ್ತಿಯ ವಜೀಕರಣ ಮೌಕ್ತಿಕಗಳು

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ

ಪಕ್ಷವಾತಗಳನ್ನೂ, ವಾತೋನ್ಮಾದ ವನ್ನೂ, ಅಪಸ್ಮಾರವನ್ನೂ (ಧಾತು ದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯ ನ್ನು ಉದ್ದೀಪಿಸುತ್ತವೆ ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವ ದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ ಸರ್ವಾಂಗದಲ್ಲಿ ತೋರಿಬರುವ ಕ್ಲಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳಯಿಸಿ ವೃದ್ಧಿಗೊಳಿಸುವ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ದಪ್ತರದಾರರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ವಿಶೇಷವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿ ರುವ ಎಲ್ಲರಿಗೂ ಅಗತ್ಯವಾಗಿವೆ ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗ ಗಳನ್ನು ಇವು ಮರಳಿ ರಚನೆಗೈಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಒಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವ ದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ನಾಡಿ"ಯು ಕ್ರಮವನ್ನು ಅನುಸರಿಸುತ್ತದೆ, ಮುಖವು ಶುಭ್ರ ವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢ ವಾಗುತ್ತದೆ ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗು ತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾಂಸಾವಣೀ, ತಾ, ರಾಮಟೇಕ, ಜಿ. ನಾಗಪುರ.—"ನಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿ ದೆನು. ಅವುಗಳಿಂದ ನಾನು ವಿಶೇಷವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಖಾಜಾ ಇಬ್ರಾಹಿಮ್ ಪಾಟೀಲ್, ತನ್ನೇರ್—"ನಾವು ಕಳು ಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅನೇಕ ಧನ್ಯವಾದಗಳು."

4 ಎ. ಆರ್. ಚಾಕ್ಕೋ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟೈಯಮ್, ತ್ರಾವಣಕೋರ್ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನು. ಅವುಗಳನ್ನು ಉಪಯೋ ಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮೂನಾಜೀ ಪರಾಂಗಾಬಾದ್, ಸಂಸ್ಥಾನ ...—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ... ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ಕಳುಹಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ. ಊಲನ್ ಮಾರ್ಟ್, ಮಂಗಳೂರು ದ. ಕನಡಾ.**

ತ್ವರೆಮಾಡಿರಿ!

1915ನೇ ಇಸವಿಯ ಸುಂದರವಾದ ಕೆಲಂಡರುಗಳು.

ಇದು ನಮ್ಮ ಕಂಪೆನಿಯ ಎರಡು ರೂಪಾಯಿಗಳ ಸಾಮಾನನ್ನು ಕೊಂಡುಕೊಳ್ಳುವವರಿಗೆ ಉಚಿತವಾಗಿ ಕೊಡಲ್ಪಡುವದು. ಟಪ್ಪಾಲು ಹಾಸಲು ಸಹ ಮಾಫಿ. ಇತರರಿಗೆ ವಿ. ಪಿ. ಚಾರ್ಜು ಸೇರಿ ೧ಕ್ಕೆ ಆಣೆ ೩; ೬ಕ್ಕೆ ಆಣೆ ೧೩; ೧೨ಕ್ಕೆ ರೂ. ೧--೧೦--೦. ಇವು ಜನವರಿ ಅಖೈರ ವರೆಗೆ ಮಾತ್ರ ಸಿಕ್ಕುವವು. ನಂತರ ಖರ್ಚಾಗುವವು. ಆದುದರಿಂದ ತ್ವರೆಮಾಡಿರಿ!

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು.

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ ಸಾವಿರಾರು ಡಾಕ್ಟರರು ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ವರುಷ ... ಬಾಟ್ಲಿಗಳು ... ಗಳಲ್ಲೂ 25,000 ... ಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತ್ತು ಆಣೆ 8. ಡಜನ್ 1ಕ್ಕೆ ರೂ. 5-4-0 ವಿ. ಪಿ ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್‌ಮಾರ್ಕ್. 0—6—0. 12 ಡಬ್ಬಿಗಳಿಗೆ 3—8—0. ವಿ. ಪಿ. ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ್.

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲು ನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮುನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ಡಜನ್ 1ಕ್ಕೆ 1—2—0. ವಿ. ಪಿ. ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ. 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫೊರ್ಮರ್:— ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸವೆಲ್, ವ್ಯೆನಾಡ:— ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ.

ಆರ್. ಆರ್. ಗಂಗೋಲಿ:— ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ

ಡಾಕ್ಟರ್ ದಾಂಡೇಕರ್, ಎಲ್. ಎಮ್. ಎಂಡ್. ಎಸ್:— ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ಸ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಡ್ತಿಕರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೋ.

7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್‌ಟೌನ್. ಮದ್ರಾಸು.

109 ಫ್ರೇಯರ್ ರೋಡ, ಮುಂಬಯಿ.

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾಧ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾಗಗಿಗಲ ...ಶಕವಾಗಿ ಇರುತ್ತೆ. ಬೆಲೆ 1—8—0 ವಿ ಪಿ 1—12—0

ಲ್...ಗುಗ್ ಯಂ ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15 0-0 ಆಗುತ್ತೆ

ಅಚ್ಚಾಗುತ್ತಲಿದೆ! ಪುರಾತನ ಸಂಗ್ರಹ!! ನವೀನ ಗ್ರಂಥ!!

ಭೂತಾಳಪಾಂಡ್ಯರಾಯನ

ಸಂಪೂರ್ಣ ಕಟ್ಟುಗಳು ಇರುವ

ದಕ್ಷಿಣಕನ್ನಡ ಜಿಲ್ಲೆಯ ಚರಿತ್ರೆ.

ಈ ಪುಸ್ತಕವು ಮಕ್ಕಳ ಕಟ್ಟಿನ ಬ್ರಾಹ್ಮಣರ ಮನೆತನ ಮರ್ಯಾದೆಗಳ ಮೂಲ, ಅಳಿಯ ಕಟ್ಟಿನವರ ಆದಿ, ಪೂರ್ವದ ಎಲ್ಲಾ ಜಾತಿಗಳ ಮತ್ತು ರಾಜರುಗಳ ಚರಿತ್ರೆ ಸಹಿತವಿರುವ ಹೊಸ ಪುಸ್ತಕ.

(ಎಲ್ಲಾ ವಿವರಗಳು ಜನವರಿಯ ಸ್ವದೇಶಾಭಿಮಾನಿಯಲ್ಲಿರುವದು).

ಪ್ರತಿ 1ಕ್ಕೆ 1 4 0

ಸ್ವದೇಶಾಭಿಮಾನಿ ಚಂದಾದಾರರಿಗೂ, ಉಪಾಧ್ಯಾಯರುಗಳಿಗೂ ವಿದ್ಯಾರ್ಥಿಗಳಿಗೂ, ಮುಂದಾಗಿ ತಿಳಿಸಿದವರಿಗೂ 1—2—0 ಟಪ್ಪಾಲು ಹಾಸಲು ಪ್ರತ್ಯೇಕ ಚಂದಾದಾರರು ನಂಬ್ರ ತಿಳಿಸಬೇಕು.

ವಿಳಾಸ:—

"ಕುಶಲಮಂದಿರ" ಶ್ರೀ ರಾಜರಾಜೇಶ್ವರಿ ದೇವಸ್ಥಾನ, ಪೊಳಲಿ

ಎನ್ ಎ ಶೀನಪ್ಪ ಹೆಗಡೆ
ಅಮುಣಂಜೆ ಗುತ್ತು,
ಪೋಸ್ಟು ಗುರುಪುರ, ದ ಕನ್ನಡ

ರೂ 501 ಉಚಿತ!

ಒಲೂನ್ ಬ್ರೇಂಡ್ ಸಾಬೂನ್.

5 ನಿಮಿಷದೊಳಗೆ ಕೂದಲನ್ನು ಉದುರಿಸಿಬಿಡುವದಿಲ್ಲವೆಂಬದನ್ನು ಖಚಿತಪಡಿಸುವವರಿಗೆ ರೂ 501 ಉಚಿತವಾಗಿ ಕೊಡೋಣಾಗುವದು ಇದರಿಂದ ಚರ್ಮವು ಕೆಡದು 3 ಸಾಬೂನುಗಳುಳ್ಳ ಪೆಟ್ಟಿಗೆ 1ಕ್ಕೆ 0—12—0, 2 ಪೆಟ್ಟಿಗೆಗಳ ವರೆಗೆ ವಿ. ಪಿ ಚಾರ್ಜು 0—5—0.

ರೂ. 2500 ಉಚಿತ!

ಸಿರಾಜಿ ಹೇರ್ ಡೈ ಎಂಬ ಕೇಶತೈಲವು ಬಿಳೀ ಮತ್ತು ನರೆತ ಕೂದಲನ್ನು ಕಪ್ಪು ಮಾಡುವದಿಲ್ಲವೆಂದು ತೋರಿಸುವವರಿಗೆ ರೂ. 2500 ಉಚಿತ.

ಈ ತೈಲವನ್ನು ಏನೊಂದು ಬಾಧಕಬಾರದಂತೆ ಅತಿ ನಿಪುಣತೆಯಿಂದ ತಯಾರು ಮಾಡಿರುತ್ತದೆ. ಇದರಿಂದ ಚರ್ಮದಲ್ಲಿ ಕಲೆಯಾಗದು. ಪೆಟ್ಟಿಗೆ 1ಕ್ಕೆ ರೂಪಾಯಿ 1—0—0; ವಿ. ಪಿ. ಬೇರೆ

ವಿಳಾಸ:— ಎಫ್. ಎಲ್. ಡವವಾಲ,
ಮಿರ್ಜ ಸ್ಟ್ರೀಟ್, ಮುಂಬಾಯಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡಿಸಬೇಕಾಗಿದೆ.

F. L. Davawala,
Mirza Street, BOMBAY.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ವಸಂತ ಕುಸುಮಾಕರ:— ನಮ್ಮ ವಸಂತ ಕುಸುಮಾಕರವು ಉರಿಮೂತ್ರ ನರಗಳ ದುರ್ಬಲತೆ, ವಿಶೇಷ ನೀರಡಿಕೆ, ನಾಲಿಗೆ ಒಣಗಿ ರಸವಿಲ್ಲದಿರುವುದು, ಕೈ ಕಾಲುಗಳು ಉರಿಯೋಣ, ಆಯಾಸ, ಮೂರ್ಛೆ ಬೀಳುವಿಕೆ, ಬಿಳುಪು ಮೊದಲಾದ ಮೇಹ ಜಾಡ್ಯಗಳು, ಮೂತ್ರ ವಿಸರ್ಜನೆಯು ಬಹು ಕಷ್ಟದಿಂದಾಗೋಣ, ಇಂದ್ರಿಯಸ್ಖಲನ, ಮೊದಲಾದ ವ್ಯಾಧಿಗಳನ್ನು ಖಂಡಿತವಾಗಿ ನೀಗುವವೆಂದು ನಾವು ಭರವಸೆ ಕೊಡುವೆವು ಒಂದು ವಾರದ ಮಟ್ಟಿಗೆ ಸಾಕಾಗುವಷ್ಟು ಔಷಧದ ಕ್ರಯ 5 ರೂಪಾಯಿ, ವಿ ಪಿ ಚಾರ್ಜು 5 ಆಣೆ

ಸಿದ್ಧ ಮಕರಧ್ವಜ:— ಇದು ಹಿಂದು ವೈದ್ಯ ಶಾಸ್ತ್ರದಲ್ಲೆಲ್ಲಾ ಅತಿ ಬಲವತ್ತರವಾದದ್ದು ನಮ್ಮ ಸಿದ್ಧಮಕರಧ್ವಜವು ಎಲ್ಲಾ ವಿಧ ಜ್ವರಗಳನ್ನೂ, ಅಗ್ನಿಮಾಂದ್ಯದಿಂದುಂಟಾಗತಕ್ಕ ಅಜೀರ್ಣ ಮುಂತಾದ ರೋಗಗಳನ್ನೂ, ನರಗಳ ದುರ್ಬಲತೆಗೆ ಸಂಬಂಧಪಟ್ಟ ಪರಿವಾತಗಳನ್ನೂ ಗುಣಪಡಿಸುತ್ತದೆ ಇದಲ್ಲದೆ ಶ್ವಾಸಕೋಶಗಳಲ್ಲುಂಟಾಗತಕ್ಕ ಬಾಧೆಗಳನ್ನು ನಿವೃತ್ತಿಮಾಡಿ, ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ ವಿಶೇಷ ಹೇಳಿ ಪ್ರಯೋಜನವೇನು? ಮೊತ್ತಕ್ಕೆ ನಮ್ಮ ಮಕರಧ್ವಜವೆಂಬ ವಜ್ರಾಯುದಕ್ಕೆ ಬಗ್ಗದ ವ್ಯಾಧಿಯು ಪ್ರಪಂಚದಲ್ಲಿಯೇ ಇಲ್ಲ ನೋಡಿರಿ, ಎಣೆಯಿಲ್ಲದ ಈ ಸಿದ್ಧಮಕರಧ್ವಜವನ್ನು ಉಪಯೋಗಿಸಿದುದೇ ಆದರೆ ನಿಮ್ಮ ಶತಮಾನಪೂರ್ತಿ ಶಾಂತಿ ಸೇಚನ ಮಹೋತ್ಸವದಲ್ಲಿ (ನೂರು ವರ್ಷಕ್ಕೆ ಮಾಡಿಕೊಳ್ಳುವ ಶಾಂತಿಯಲ್ಲಿ) ಕೂಡ ನಿಮ್ಮ ಪುರುಷಶಕ್ತಿಯೂ, ಪ್ರಾಯದ ಉನ್ಮತ್ತವೂ ಕೆಡುವುದಿಲ್ಲ ಇದರ ಬೆಲೆ ತೊಲೆ 1 ಕ್ಕೆ ೮೦ ರೂಪಾಯಿ ಒಂದು ವಾರಕ್ಕೆ ಸಾಕಾಗುವ ಔಷದಕ್ಕೆ 3 ರೂಪಾಯಿ. ವಿ ಪಿ ಚಾರ್ಜು ಪ್ರತ್ಯೇಕವು.

ವಾಯು ಸಂಹಾರಿ:— ಈ ಔಷಧದಿಂದ ದೇಹದಲ್ಲಿ ಉಂಟಾಗತಕ್ಕ ಕಾಲು ಕೈ ಕೀಲುಹಿಡಿತ, ಪಕ್ಷವಾತ, ಶೂಲ, ತಿಮಿರ್‌ವಾತ, ತಲೆನೋವು, ಪಾರ್ಶ್ವವಾತವು, ಸಕಲ ವಿಧ ವಾತಗಳು, ಮಲಜಲಕಟ್ಟಿರವಿಕೆ ಗುಣವಾಗುವದು ಡಬ್ಬಿ 1 ಕ್ಕೆ 1 ರೂಪಾಯಿ, 1ರಿಂದ 3 ಡಬ್ಬಿಗಳ ವರೆಗೂ ವಿ ಪಿ ಚಾರ್ಜು 5 ಆಣೆ

ಕಲರಾವಿಧ್ವಂಸಿನಿ:— ಈ ಭಯಂಕರವಾದ ಕಲರಾ ರೋಗವನ್ನು ಖಂಡಿತವಾಗಿಯೂ ಸಂಪೂರ್ಣ ಗುಣಪಡಿಸುವ ಖಾತ್ರಿಯಾದ ಮದ್ದು ಡಬ್ಬಿ 1-ಕ್ಕೆ 1 ರೂಪಾಯಿ ವಿ ಪಿ ಚಾರ್ಜು 1ರಿಂದ 6 ಡಬ್ಬಿಗಳ ವರೆಗೂ 5 ಆಣೆ.

ಮಲಬಂಧ ಭಂಜನಿ:— ಆಗಿಂದಾಗ್ಗೆ ಉಂಟಾಗತಕ್ಕ ಮತ್ತು ಬಹಳ ದಿವಸಗಳಿಂದ ವಾಡಿಕೆಯಲ್ಲಿರುವ ಮಲಬದ್ಧತೆಯನ್ನು ಸಂಪೂರ್ಣ ಗುಣಪಡಿಸುವುದರಲ್ಲಿ ಇದು ಸರ್ವೋತ್ಕೃಷ್ಟವಾದ ಔಷದವು ಅಚೇತನವಾದ ಕಾಳಜವನ್ನು (ಲಿವರ್) ಬಲಪಡಿಸಿ, ಸ್ವಭಾವವಾಗಿ ಎಷ್ಟಾಗಬೇಕೋ ಅಷ್ಟು ಸ್ವಚ್ಛ ಪಿತ್ತನೀರನ್ನು ವಿಸರ್ಜನೆ ಮಾಡಿಸಿ, ಹೊಟ್ಟೆಯ ಭಾರವನ್ನು ನೀಗಿ ಹಗುರುಮಾಡುತ್ತದೆ. ಮತ್ತು ಅಗ್ನಿಮಂದ್ಯದಿಂದುಂಟಾಗತಕ್ಕ ಎಲ್ಲಾ ರೋಗಗಳನ್ನು ನಾಶಮಾಡಿ ಕರುಳುಗಳನ್ನು ಸಹಜ ಸ್ಥಿತಿಗೆ ತಂದು, ದೇಹವು ಬಹು ಆರೋಗ್ಯಸ್ಥಿತಿಯಲ್ಲಿರುವಂತೆ ಮಾಡುತ್ತದೆ. ಕ್ರಯ ಡಬ್ಬಿ 1 ಕ್ಕೆ 10 ಆಣೆ ಪಿ ಪಿ. ಚಾರ್ಜು 1ರಿಂದ 2 ಡಬ್ಬಿಗಳ ವರೆಗೂ 5 ಆಣೆ

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವರಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.
"SUBBAROY,
Ayurvedic Pharmacy,
Sri Perumalkoil.
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷದಶಾಲೆ,
ಶ್ರೀ ಪೆರುಮಾಳ್ ಕೋಯಿಲ್ ಸನ್ನದಿ, ತಂಜಾವೂರು

ಲೋಕಪ್ರಸಿದ್ಧವಾದ ಪಂಜಾ ಸಾಲಾಮಿಸ್ರಿ ಮುರಬ್ಬಾ

ದುರ್ಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳುಗಡೆ, ಶಾಮುಗಡೆ ಇವುಗಳನ್ನು ಪಪ್ಪ ಮಾಡಿಟ್ಟುಕೊಂಡು ಸಾಲ್ಲಾಮಿಸ್ರೀ ಎಂದು ಹೇಳಿ ಮೋಸವಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾ ಸಾಲಾಮಿಸ್ರಿಯೇ ಅಥವಾ ಬೇರೆ ತರಹದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸಬೇಕು. ಹೈರಾಣ ಮುತ್ತಿನ ರಸದಿಂದ ಮಾಡಲ್ಪಟ್ಟಿರುವದು

- ಪಂಜಾ ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸಿದರೆ ಗುಣವಾದ ಫಲ ಸಿಗುವದು, 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಖಂಡಿತವಾದ ಸಂಪೂರ್ಣ ಗುಣ ಸಿಗುವದು.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿ ವರೆಗೆ ಆಣೆ 6.

ಏಜಂಟರು — ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ
ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಕಾನ ಅವೆನ್ಯು ರೋಡ್, ಬೆಂಗಳೂರು ಸಿಟಿ.

ನರೆಕೂದಲಿಟ್ಟುಕೊಂಡು
ಮುದುಕರಾಗಿ ಕಾಣುವುದೇಕೆ?

ದರ್ಬಾರ್ ಕೂದಲು ರಂಗು

ಒಂದು ಸಲ ಹಚ್ಚಿದರೆ 20 ವರುಷ ಪ್ರಾಯದ ಸಮರ್ಥರಂತೆ ಕಾಣು

ತ್ವರಿ ಈ ರಂಗು ಹಚ್ಚಿಕೊಂಡರೇ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಿಕೆಗ ಬಂದಿರುವ ಅಲ್ಪತರದ ಕೂದಲಿಗೆಹಚ್ಚುವ ಬಣ್ಣಗಳೂ ರಂಗುಗಳೂ ತುಂಬ ಕೀಳು ಜಾತಿಯವು, ಹಚ್ಚಿದಮೇಲೆ ಕೂದಲು ಕೆಂಚು ತಿರುಗಿ ಅಸಹ್ಯವಾಗಿ ಕಾಣುತ್ತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ, ಬಹು ಮೇಲಾದ್ದು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ. ಕ್ರಯ ಬಾರುಸು ಸಮೇತ ಬಾಟ್ಳಿ ಒಂದಕ್ಕೆ ರೂ 1; ಅಂಚೆ ಹಾಸಲು 4 ಆಣೆ.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ.
ನಂಬ್ರ 3 ಆರುಳಪ್ಪನ್ ಬೀದಿ, ಮದರಾಸು.

ಸನ್ 1915 ಇಸವಿಯ

ಪಾಕೆಟ್ ಡೈರಿ.

ಶ್ರೀ ಸೀತಾ ರಾಘವ

ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಕಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ, ಅನೇಕ ಹೊಸ ಸಂಗತಿಗಳಿವೆ.

ನಂಬ್ರ ೧. ಸಣ್ಣ ಸೈಜು ಸಾದಾ 0—4—0.

„ ೨. ಪೆನ್ಸಿಲ್ ಮುಚ್ಚಳವುಳ್ಳದ್ದು 0—6—0.

ಕೆಲವು ಪ್ರತಿಗಳು ಮಾತ್ರ ಉಳಿದಿವೆ ಜಾಗ್ರತೆ ಬರೆದು ತರಿಸಿಕೊಳ್ಳಿ. ನಂಬ್ರ 1 ಮತ್ತು ನಂಬ್ರ 2ನೇ ಡೈರಿಗಳು ಮಾತ್ರವೇ ಇವೆ.

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ. ಮಾರಾಟಕ್ಕಾಗಿ ತರಿಸುವವರಿಗೆ ರೂ. ೧ಕ್ಕೆ ೩ ಆಣೆ ಕಮಿಷನ್ ದೊರೆಯುವುದು.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ಮುದ್ರಣಾಲಯ.

Registered No. 498 M

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ —ವರುಷ ಒಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ IX ಮಂಗಳೂರು ತಾ 19ನೇ ಫೆಬ್ರುವರಿ ಶುಕ್ರವಾರ 1915. ಸಂಚಿಕೆ 8

The Universal Assurance Co., Ltd

Head Office 191, Bow Bazar Street, CALCUTTA

NOTICE.

It is hereby informed to all the Agents the subscribers of the Company and the public in general that the existing Provident scheme having been declared unsound by the actuary to the Government of India for its various inconveniences, the company has decided not to accept any proposal under the said scheme, and the same has been abolished since 1st January 1915 All the old members are hereby requested to continue their policies and diplomas which will be governed by the old rules and the bonus be distributed according to the dividing system hence they need not be frightened

For the convenience of the intending subscribers and the public in general a new scheme called "Cheap Insurance" under the scientific principles of the Ordinary Insurance scheme has been introduced For further particulars please see the Company's seperate advertisement

(*Sd*) **J Sarker.**

Secretary

M. Laxmon Rao Brothers,

Chief Agents,

Udipi, S..C.

ದಿ ಯುನಿವರ್ಸಲ್ ಎಸ್ಸ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಹೆಡ್ ಆಫೀಸು 191 ಬೊ ಬಜಾರ್ ಸ್ಟ್ರೀಟ್, ಕಲ್ಕತ್ತಾ.

ನೋಟೀಸು.

ಈ ಮೂಲಕ ಕಂಪೆನಿಯ ಮೆಂಬರರಿಗೂ ಸರ್ವ ಜನರಿಗೂ ತಿಳಿಯಪಡಿಸುವದೇನಂದರೆ:—ಈ ಕಂಪೆನಿಯ ಪ್ರೊವಿಡೆಂಟ ಫಂಡಿನ ಏರ್ಪಾಡದನ್ನು ಅದರ ಬಗೆ ಬಗೆಯ ಅನಾನುಕೂಲತೆಯ ಕಾರಣದಿಂದ ಸರಕಾರದವರು ಈ ಏರ್ಪಾಡನ್ನು ಭದ್ರ ಇಲ್ಲದ್ದು ಎಂಬದಾಗಿ ತೀರ್ಮಾನಿಸಿರುವದರಿಂದ ಕಂಪೆನಿಯವರು ಪ್ರೊವಿಡೆಂಟ ಏರ್ಪಾಡು ಕ್ರಮದ ಮೇಲೆ ವಿಮೇದಾರರನು ಕಂಪೆನಿಗೆ ಸೇರಿಸುವದಿಲ್ಲ, ಮತ್ತು ಈ ಕ್ರಮವ 1915ನೇ ಇಸವಿ ಜನವರಿ ತಾ 1ರಿಂದ ಕಂಪೆನಿಯಿಂದ ತೆಗೆದು ಹಾಕೋಣಾಗಿರುವದು. ಹಳೇ ಮೆಂಬರರ ತಮ್ಮ ಪೋಲಿಸಿ ಮತ್ತು ಡಿಪ್ಲೋಮಗಳು ಹಳೇ ರೂಲಿನ ಪ್ರಕಾರ ಅಧಿಕರಿಸಲ್ಪಟ್ಟು "ಬೋನಸ್" ಎಂಬ ಲಾಭೋಚಿತವು ಕ್ರಮ ಪ್ರಕಾರ ಹಂಚಲ್ಪಡುವದರಿಂದ ಹಳೇ ಮೆಂಬರರು ಭಯಪಡಲು ಕಾರಣವಿಲ್ಲವೆಂಬದಾಗಿ ಈ ಮೂಲಕ ವಿಜ್ಞಾಪಿಸೋಣಾಗಿದೆ

ಕಂಪೆನಿಯ ಮೆಂಬರರಾಗಲು ಯೋಚಿಸಿರುವವರಿಗೂ ಜನಸಾಮಾನ್ಯರ ಬಗ್ಗೆಯೂ "ಚೀಪ್ ಇನ್ಸ್ಯೂರೆನ್ಸ್" ಎಂಬ ಒಂದು ಹೊಸ ಕ್ರಮವು ಸರ್ವಸಾಧಾರಣವಾಗಿರುವ ಇನ್ಸ್ಯೂರೆನ್ಸ್ ಕ್ರಮದ ಮೂಲಸೂತ್ರದ ಪ್ರಕಾರ ತೆರೆಯೋಣಾಗಿರುವದು. ಹೆಚ್ಚಿನ ಮಾಹಿತಿಯನ್ನು ಈ ಪತ್ರಿಕೆಯಲ್ಲಿ ಕಾಣುವ ಕಂಪೆನಿಯ ಪ್ರಕಟಣೆಯನ್ನು ಓದಿಕೊಂಡರೆ ತಿಳಿಯುವದು.

(*Sd*) ಜೆ ಸರ್ಕಾರ,

ಸೆಕ್ರೆಟರಿ

ಎಮ್. ಲಕ್ಷ್ಮಣರಾವ್ ಬ್ರದರ್ಸ್,

ಚೀಫ್ ಏಜಂಟ್,

ಉಡುಪಿ, ದ. ಕ.

ನೀಲಿ ಕಪ್ಪು ಶಾಯಿ ಪುಡಿಯು

1 ಪೊಟ್ಟಣದಲ್ಲಿ 1 ಮಶಿ ಕುಡಿಕೆ ಶಾಯಿಯಾಗುವುದು ವ್ಯಾಪಾರಿಗಳು ವಿ. ಪಿ. ಮೂಲಕ ತರಿಸಿ ಮಾರುವುದು ವಿಶೇಷ ಲಾಭಕರ! ಸುಲಭ ದರ! 100 ಪೊಟ್ಟಣಗಳಿಗೆ 6 ಆಣೆ, 300ಕ್ಕೆ 1—0—0, 500ಕ್ಕೆ 1—9—0, 1000ಕ್ಕೆ 2—8—0, 2000ಕ್ಕೆ 4—0—0. ಅಂಚೆ ವೆಚ್ಚ ಮತ್ತು ಪ್ಯಾಕಿಂಗ್ ಬೇರೆ.

ನಮ್ಮ ವಿಳಾಸ:— ವಿ ಪಿ ಡಿಪ್ಪೋ,

ಕೋಲಾರ್,

ನೋಟೀಸು.

ಆರಳ ಗ್ರಾಮದ ಮೂಲರಪಟ್ಣ ಹಾಯರ್ ಎಲಿಮೆಂಟರಿ ಶಾಲೆಗೆ ಮೆಟ್ರಿಕ್ ಟ್ರೈನ್ ಆದ ಒಬ್ಬ ಉಪಾಧ್ಯಾಯನು ಬೇಕಾಗಿರುವನು. ಸಂಬಳವು ಅವರ ಯೋಗ್ಯತೆ ಮೇಲೆ ದರ ತಿಂಗಳಿಗೆ 20ರಿಂದ 25ರ ಮಟ್ಟಿಗೆ ನಿರ್ಣಯಿಸಲಾದೀತು. ಅಪೇಕ್ಷೆಯುಳ್ಳವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು. ಹೆಚ್ಚಿನ ಮಾಹಿತಿ ಮುಖತಾ ವಿವರವಾದೀತು

ಆರಳ ಶಾಂತಿರಾಜಸೆಟ್ಟಿ

ಮೆನೆಜರ್,

ಹಾಯರ್ [illegible]

[illegible]

ಆರಳ.

ತಾ, 8—2—1915.

ಬಹುಮಾನ!! ಬಹುಮಾನ!!

25 ಸಾವಿರ ರೂಪಾಯಿಗಳು ಹಂಚಲ್ಪಡುವವು.

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ, ಇವರ ನಾರಸಿಂಹಚೂರ್ಣವು.

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ? ಆದರೆ ಅನೇಕ ದುರ್ವರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವು ವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರೆ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವು ವಿಧ ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರೂ ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವದಕ್ಕಾಗಿ "ನಾರಸಿಂಹಚೂರ್ಣವು" ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕ ತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯ ಕುಷ್ಠಗಳು, ಎಂಟು ವಿಧ ಉದರ ರೋಗಗಳು, ಭಗಂದರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ಐದು ಬಗೆಯ ಕಾಸಗಳು, ಎಂಬತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯ ಪಿತ್ತಗಳು, ಇಪ್ಪತ್ತು ಬಗೆಯ ಶ್ಲೇಷ್ಮರೋಗಗಳು, ದ್ವಂದ್ವಸನ್ನಿ ವಾತ ರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗ ವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಂಹದಂತೆ ಪರಾಕ್ರಮವು ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯುಳ್ಳವರಾಗುವರು. ಇದರಲ್ಲಿ ಯಾವ ವಿಷವಾದ ರಸಗಳಾಗಲಿ ಮಿಶ್ರವಾಗಿ ಇಲ್ಲ. ಇನ್ನಾವ ದೋಷಗಳೂ ಇಲ್ಲ ನಿರ್ದುಷ್ಟವಾದದ್ದು. ಫಲ್ತಾ ವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ ಅನೇಕ ಪಂಡಿತರು. ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು

14 ದಿನ ಉಪಯೋಗಕ್ಕೆ ಬರುವ ಡಬ್ಬಿ ಒಂದಕ್ಕೆ ಬೆಲೆ ರೂಪಾಯಿ 1—0—0

ಬಹುಮಾನಗಳನ್ನು ಹಂಚುವ ವಿಧಾನ.

1 ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ. 10000. 6 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ 6000. 3 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ. 4000. 2 ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ರೂ. 3000 1 ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ರೂ 2000.

1914ನೇ ಜುಲೈ 1ನೇ ತೇದಿ ಮೊದಲು 1915ನೇ ಜುಲೈ 1ನೇ ತೇದಿವರೆಗೆ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದ ಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ ಒಂದುಪಕ್ಷದಲ್ಲಿ ಮೇಲಿನ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತು ಮಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾ ಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ ಈ ವಿಷಯದಲ್ಲಿ ತಿಲಮಾತ್ರವಾದರೂ ಸಂಶಯವಿಲ್ಲ. ಬಹುಮಾನದ ಮೊತ್ತವನ್ನು ನಿಷ್ಪಕ್ಷಪಾತವಾಗಿ ಒಂದೇಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವೂ ಇಲ್ಲ. ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾಕೊಡಲಾಗದು. ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಔಷಧಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದರ ಅನುಪಾನಪತ್ರಿಕೆಯನ್ನೂ ಬಹುಮಾನದ ಟಿಕೀಟನ್ನೂ ಡಬ್ಬಿಯ ಸಂಗಡ ಕಳುಹಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು:—

ಸರ್ವಜನ ಮನೋಲ್ಲಾಸಿನಿ ಅಂಡ್ ಕೋ.

ಬಳ್ಳಾರಿ

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಸಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 4 ರೂ ತೂಕದ ಶೇರು 1ಕ್ಕೆ ರೂ, 12-0-0, 5-0-0, 3-0-0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0-0, 1—0—0, 0—12—0, 0—6—0

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0-4-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ

ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತ



ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ಬಿಕ್ಕಳಿಕೆ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಕೆಂಪಾಗುತ್ತ ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹೆರಿಗೆ ಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೈಶತ್ಯಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.

ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವಿನಿಯಾಗಿದೆ. ಕೈಬಿಟ್ಟಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲೇ ವಾಸಿಯಾಗುವದಲ್ಲದೆ, ಗುಣವು ತೋರುತ್ತದೆ. ಸಮಯದಲ್ಲಿ ಬೇಕಾದೀತು! ಒಂದೇ ಒಂದು ಕುಪ್ಪಿಯು ನಿಮ್ಮಲ್ಲಿರಲಿ! [illegible] ಅನೇಕ [illegible] ಮಾಡುವ ಸಿದ್ಧಾಮೃತ [illegible].

ಅನುಪಾನ ಪತ್ರವು [illegible] ಇರುವುದು. [illegible] 1. [illegible]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು.

Box Locks. Padlocks.





ಧಾರಣೆ ಸುಲಭ! **ಅಲಿಗರ್ ಬೀಗಗಳು.** ಧಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವದಕ್ಕೆ ಅಂದವಾಗಿಯೂ ಇರುವದು. ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಆಫೀಸುಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈ ಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳ

ನಂಬ	1	2	3	4	[illegible]
	0-12-0	0-15-0	1-4-0	1-10-0	

ಆರು ಚಕ್ರಗಳಿರುವ ಬೀಗಗಳ

1-2-0 1-8-0 2-4-0 3-0-0 3-8-0

ಪಿಲ್ಲರ್ ಬೀಗಗಳು

0-4-0 0-5-0 0-6-0 0-8-0 0-10-0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗಕ್ಕೆ 0-13-0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ.

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೮ ಚಕ್ರಗಳಿರುವ ಬೀಗಗಳು ೧ಕ್ಕೆ 1-8-0, 1-12-0

ವಿಳಾಸ — ಎಚ್ ಎನ್ ರಾವ್ ಆಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯಪುಸ್ತಕವು

ಜೀವಿತಕಾಲದವರೆಗೂ ನಮ್ಮ ಶರೀರವನ್ನು ರೋಗಗಳು ಹತ್ತಿರ ಬಾರದೆ ಮಾಡಿಕೊಳ್ಳುವದೇ ನಮ್ಮ ಮೊಟ್ಟಮೊದಲು ಕರ್ತವ್ಯವು. ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನು ಪುನಹ ಹೇಗೆ ಪಡೆಯುವದು ಎಂಬ ವಿಷಯಗಳಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ. ಈ ಗ್ರಂಥವನ್ನು ಪ್ರಜೆಗಳ ಕ್ಷೇಮಾರ್ಥವಾಗಿ ಕೋರಿದವರಿಗೆ ಕ್ರಯವೂ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವದು. ಈ ಪುಸ್ತಕವು ಒಂಭತ್ತು ಭಾಷೆಗಳಲ್ಲಿ ಛಾಪಿಸಲ್ಪಟ್ಟು ಇದುವರೆಗೆ ನಾಲ್ಕು ಲಕ್ಷ ಪ್ರತಿಗಳು ಕಳುಹಿಸಲ್ಪಟ್ಟಿರುವದೇ ಇದು ಎಷ್ಟು ಉಪಯೋಗಕರವಾದದ್ದು ಎಂಬುವದಕ್ಕೆ ಸಾಕ್ಷಿಯಾಗಿರುತ್ತದೆ.

ಕಲಿಯುಗದ ಕಾಮಧೇನು

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ. ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಿಮಾಡಿ ಹೆಚ್ಚುಮಾಡುತ್ತದೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ. ಜೀರ್ಣಶಕ್ತಿಯನ್ನು ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗುವಂತೆ ಮಾಡುವದು. ಅಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1-0-0.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಣ್ಣೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಶ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಿರುವದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಕಾರ್ಯಗಳಾವದು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ತಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3-4-0. ಅರ್ಧ ಬಾಟ್ಲಿಗೆ 1-12-0

ದಿ ಊಲನ್ ಮಾರ್ಟ್. ಮಂಗಳೂರು,

ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರಿತವಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8-0-0

೨ ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ನಿಶ್ಶಕ್ತರಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1-0-0

೩ ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0-12-0

೪ ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1-0-0

೫ ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4-0-0

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2-0-0

೭ ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5-0-0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಷ್ಠಿಕ ಮಾತ್ರೆಗಳು, ಲೋಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

150 ಪುಟಗಳ ಪುಸ್ತಕವು.

ಉಚಿತವು

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನು ತಿಳುಹಿಸಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುಷ್ಯವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು. ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 92, ಬ್ರಾಡ್ವೇ, ಮದ್ರಾಸ್.

ಸ್ಥಳೀಯ ಏಜಂಟರು:— 1. ಮಸ್ಸರ್ಸ್ ರಫಯಲ್ ಎಂಡ್ ಕೊ., [illegible] ಬಿದಿರಿ ಕೇಳ್ ಬಜಾರ್. ಬೆಂಗಳೂರು. [illegible]

ESTABLISHED JULY 1906.

THE CANARA-BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	217,400—0—0
Paid up Capital	192,400—0—0
Deposits	455,326—7-10
Reserve Fund	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs.22,500/-

Dividends of not less than 6% paid during the past years and a bonus of 1% to 3% paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one week's notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	217,400—0—0
ಬಂದ ಮೂಲ ಧನವು „	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	455,326—7-10
ರಕ್ಷಿತ ಧನವು	27,590-12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 3ರ ವರೆಗಿನ "ಬೋನಸ" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾಗುತ್ತದೆ. ಆ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಪ್ಪಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. December 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿಚ್ಛಾಪ, ಯೋಗೀಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯವಾಮನಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ತಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಗಳಿಗೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ತಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೊ ಇತ್ಯಾದಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 19ನೇ ಫೆಬ್ರುವರಿ 1915

ಸರ್ ನಾರಾಯಣ ಗಣೇಶ ಚಂದಾವರಕಾರರವರ ಭಾಷಣಗಳು.

ಕಳೆದ ಶನಿವಾರದಿಂದ ಬುಧವಾರದ ವರೆಗೂ ಇಲ್ಲಿ ಆಯಾ ಕಡೆಗಳಲ್ಲಿ ಸರ್ ನಾರಾಯಣ ಗಣೇಶ ಚಂದಾವರಕಾರರವರ ಭಾಷಣಗಳು ಪ್ರತಿನಿತ್ಯವೆಂಬಂತಿದ್ದವು ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಸದಾಸದನದಲ್ಲಿ, ಮಹಿಳಾ ಸಭೆಯಲ್ಲಿ, ಗಣಪತಿ ಸೆಕೆಂಡರಿ ಶಾಲೆಯಲ್ಲಿ, ಗವರ್ನವೆಂಟ ಕೊಲೇಜಿನಲ್ಲಿ, ಸೈಂಟ್ ಅಲ್ಲೊಸಿಯಸ್ ಕೊಲೇಜಿನಲ್ಲಿ, ಇಲ್ಲಿಯ ವಿದ್ಯಾವಂತ ಮಹಾಜನರಿಗೂ ವಿದ್ಯಾರ್ಥಿಗಳಿಗೂ ತಮ್ಮ ಭಾಷಣಗಳ ಮೂಲಕ ಕಾಲೋಚಿತ ಹಿತೋಪದೇಶವನ್ನು ಸೂಚಿಸಿರುತ್ತಾರೆ. ಚಂದಾವರಕಾರರವರು ಅಲ್ಲಲ್ಲಿ ಅಪ್ಪಣೆ ಕೊಡಿಸಿದ ಭಾಷಣಗಳ ವಿಷಯಗಳು ಅವುಗಳ ಹೆಸರುಗಳಿಂದ ವಿಂಗಡ ವಿಂಗಡವಾಗಿವೆ ಎಂತ ತೋರಿಬಂದರೂ ಇವುಗಳ ಮೂಲಕ ಈ ಮಹನೀಯರು ವ್ಯಕ್ತಗೊಳಿಸಿದ ಬೋಧೆಯು ಸುಧಾರಕರು ಕೈಕೊಂಡಿರುವ ಒಂದೇ ಒಂದು ಮಾರ್ಗವನ್ನು ತೋರಿಸುವಂಥಾದ್ದಾಗಿದೆ. ಸರ್ವರೂ ಒಬ್ಬ ವಿಶ್ವಕರ್ತನ ಮಕ್ಕಳು, ವಿಶ್ವಭ್ರಾತೃಭಾವವು ಸರ್ವತ್ರ ನೆಲಸಿರಬೇಕು—ಈ ತತ್ವಕ್ಕನುಸಾರವಾದ ಸುಧಾರಣೆಯಿಂದ ಸಮಾಜವನ್ನು ತಿದ್ದಿ ದೇಶೋದ್ಧರಣೆಯ ಸಾಧನೆಯನ್ನು ನಡೆಸಬೇಕೆಂದು ಪದೇ ಪದೇ ಹೇಳಿರುವರು. ಇಂಥಾ ಉದಾತ್ತ ಕಲ್ಪನೆಯನ್ನು ಕಾರ್ಯಾಂತರಗೊಳಿಸುವುದು ಹೇಗೆಂಬುದನ್ನು ಸಹ ಸರ್ ಚಂದಾವರಕಾರರವರು ಸಂಕ್ಷೇಪವಾಗಿ ವಿವರಿಸಿ ಹೇಳಿರುತ್ತಾರೆ ಹಿಂದೂ ಧರ್ಮಶಾಸ್ತ್ರ ಕರ್ತೃಗಳಾದ ಪ್ರಾಚೀನ ಕಾಲದ ಋಷಿ ವಚನಗಳಲ್ಲಿಯೂ, ವೇದ ಉಪನಿಷತ್ತು ಪುರಾಣಗಳಲ್ಲಿಯೂ, ಭಗವದ್ಗೀತೆಯಲ್ಲಿಯೂ ವಿಕಸಿತವಾಗಿರುವ ಯಥಾರ್ಥವಾದ ಧರ್ಮದೃಷ್ಟಿಯಿಂದ ಈಗಿನ ಕಾಲಾವಸ್ಥೆಯನ್ನು ಅವಲೋಕಿಸಿ ಸಮಾಜವನ್ನು ತಿದ್ದಬೇಕು ಪ್ರಾಚೀನ ಕಾಲಗಳಲ್ಲಿಲ್ಲದ ಜಾತಿಭೇದದ ದುರವಸ್ಥೆಯನ್ನು ಹೋಗಗೊಳಿಸಬೇಕು, ಸ್ತ್ರೀಯರ ದೀನಸ್ಥಿತಿಯನ್ನು ಒಳ್ಳಿತ್ತಾಗಿ ಮಾಡಬೇಕು ಸಮಾಜ ನಾಶಕ್ಕೆ ಹೇತುವಾಗಿರುವ ಮತ್ಸರಕ್ಕೆ ಸರ್ವಥಾ ಎಡೆಕೊಡಕೂಡದು, ಎಂಬಿತ್ಯಾದಿ ಬುದ್ಧಿವಾದವು ಸರ್ವರಲ್ಲಿಯೂ ನಾಟುವಂತೆ ಅದನ್ನು ನಾನಾ ರೂಪಗಳಲ್ಲಿ ವಿವರಿಸಿ ಹೇಳಿರುವರು. ಸಮಾಜ ಸುಧಾರಣೆಯ ಸಾಧನಗಳಲ್ಲಿ ಮಂಗಳೂರಿನವರು ಮುಂದುವರಿದಿರುವರು ೧೫ ವರುಷಗಳ ಹಿಂದೆ ತಾನು ಮಂಗಳೂರಿಗೆ ಒಂದಾಗ ಕಂಡು ಬಂದ ಕೊರತೆಗಳು ಈಗ ನೆಟ್ಟಗಾಗಿ ಬಂದಿವೆ ಎಂತ ಮಂಗಳೂರಿನವರನ್ನು ಸರ್ ಚಂದಾವರಕಾರರವರು ಶ್ಲಾಘಿಸಿರುತ್ತಾರೆ ಇಲ್ಲಿಯ ಸುಧಾರಣೆಯ ಯಥಾರ್ಥ ಸ್ಥಿತಿಯನ್ನು ನಾವೆಲ್ಲರೂ ಅನುಭವಿಸಿ ಒಳ್ಳೆವಾದ್ದರಿಂದ ಚಂದಾವರಕಾರರವರ ಶ್ಲಾಘನೆಗೆ ನಾವು ಎಷ್ಟರ ಮಟ್ಟಿಗೆ ಪಾತ್ರರಾಗಿರುವೆವೆಂಬ ವಿಚಾರವನ್ನು ಇಲ್ಲಿ ಪ್ರತ್ಯೇಕವಾಗಿ ಮಾಡುವುದು ಅಗತ್ಯ ಕಾಣದು ಭಾಷಣಗಳಲ್ಲಿ ವೇದ, ಪುರಾಣ, ಗೀತೆಗಳ ಪ್ರಸ್ತಾಪವು ಜನರ ಮನಸ್ಸನ್ನು ಬಹಳವಾಗಿ ಆಕರ್ಷಿಸುವಂಥಾದ್ದಾಗಿದೆ ಆದರೆ ಇವುಗಳ ಪ್ರಸ್ತಾಪವು ಭಾಷಣಗಳಲ್ಲಿ ಮಾತ್ರ ಮುಗಿದುಹೋಗದಂತೆ ಇಲ್ಲಿಯ ಸುಧಾರಕ ಮುಂದಾಳುಗಳು ಪ್ರಯತ್ನಪಡುವುದು ಅಗತ್ಯ. ಹಿಂದುಗಳ ಇತಿಹಾಸವೂ ಪ್ರಾಚೀನ ಧರ್ಮಶಾಸ್ತ್ರಗಳೂ ಸಂಸ್ಕೃತ ಭಾಷೆಯಲ್ಲಿರುವವು. ಈ ಭಾಷಾಪರಿಚಿತಿಯು ಸಾಮಾನ್ಯರಲ್ಲಿ ಹೇಗೂ ಇರದು ವಿದ್ಯಾವಂತರಲ್ಲಿಸಹ ಈ ಭಾಷೆಯ ಪರಿಚಿತಿಯನ್ನು ಮಾಡಿಕೊಂಡವರು ಬಹಳ ಕಡಮೆಯಾಗಿರುವರು. ಇಂಥಾ ಸಂದರ್ಭದಲ್ಲಿ ಸಂಸ್ಕೃತ ಭಾಷಾ ಜ್ಞಾನವನ್ನು ಬೇಕಾದಂತೆ ಸರ್ವರಲ್ಲಿಯೂ ಪ್ರಸರಿಸುವುದು ತತ್ಕಾಲಕ್ಕೆ ಸಾಧ್ಯವಲ್ಲದಿದ್ದರೂ ಪ್ರಾಚೀನ ಕಾಲದಲ್ಲಿ ಹಿಂದೂ ಸಮಾಜವು ಉಚ್ಚಸ್ಥಿತಿಯಲ್ಲಿದ್ದಾಗ ನಮ್ಮ ಆಚಾರಪದ್ಧತಿಗಳು ಯಾವವಿದ್ದವು, ಋಷಿಗಳಿಂದ ಬೋಧಿತವಾದ ಧರ್ಮವು ಯಾವುದೆಂಬುವ ವಿಚಾರವು ಜನರಲ್ಲಿ ಸರಿಯಾಗಿ ಉಂಟಾಗುವಂತೆ ದೇಶಭಾಷೆಗಳಲ್ಲಿ ಜನಸಾಮಾನ್ಯರಿಗೆ ತಿಳಿಯಹೇಳುವ ಪ್ರಯತ್ನಗಳನ್ನು ಆಗಿಂದಾಗ್ಯೆ ಮಾಡಿದರೆ ಲೇಸುಂಟಾಗದಿರದು. ಸುಧಾರಕರ ಪ್ರಯತ್ನಗಳ ಯಥಾರ್ಥವಾದ ಇಂಗಿತವನ್ನು ಜನರು ಹೀಗೆ ತಿಳಕೊಳ್ಳುವದರಿಂದ ಇವರ ಉದ್ದೇಶವು ಸಹ ಸುಲಭಸಾಧ್ಯವಾಗುವದು. ಆದ್ದರಿಂದ ಸರ್ ನಾರಾಯಣ ಗಣೇಶ ಚಂದಾವರಕಾರರವರು ತಮ್ಮ ಭಾಷಣ ಮೂಲಕ ಸೂಚಿಸಿರುವ ಋಷಿ ವಚನಗಳ ಪ್ರಸ್ತಾಪವನ್ನು ವಿವರವಾಗಿ ಜನರಿಗೆ ತಿಳಿಯಹೇಳುವ ಭಾರವನ್ನು ಇಲ್ಲಿಯ ಸುಧಾರಕರು ಕೈಕೊಂಡರೆ ಉಪಕಾರವಾಗುತ್ತಿತ್ತು.

ಈ ಪ್ರಾಂತ್ಯದವರು ಅಗತ್ಯವಾಗಿ ತಿಳಕೊಳ್ಳಬೇಕಾದ ಚಂದಾವರಕಾರರವರು ಹೇಳಿದ ಹಿತವಾದವನ್ನು ಈ ಸಂದರ್ಭದಲ್ಲಿ ವಾಚಕರ ಲಕ್ಷ್ಯಕ್ಕೆ ತರುವುದುಚಿತ. ಆಯಾ ಜಾತಿಗಳು ಮತ್ತು ಈ ಜಾತಿಗಳು ತಮ್ಮವರ ಏಳಿಗೆಗಾಗಿ ಮಾಡುವ ಪ್ರಯತ್ನಗಳು, ಈ ವಿಷಯ ಸರ್ ಚಂದಾವರಕಾರರವರು ಹೇಳಿದ ಮಾತುಗಳೇನು? ಒಂದಕ್ಕೊಂದು ಪರಸ್ಪರ ಸಮ್ಮಂಧವಿಲ್ಲದ ಜಾತಿ ಸಂಸ್ಥೆಗಳ ಹೊರತು ಮಿಕ್ಕ ಯಾವ ಸಂಸ್ಥೆಗಳೂ ಇರದ ಈ ಪ್ರಾಂತ್ಯಗಳಲ್ಲಿ ಇದೇನೆಂಬುವದನ್ನು ತಿಳಿಯುವ. ಒಂದು ಜಾತಿಯು ತನ್ನವರ ಮೇಲ್ಮೆಯನ್ನು ಸಾಧಿಸುತ್ತಿರುವಾಗ ಅಂಥಾ ಮೇಲ್ಮೆಯಿಂದ ಮತ್ತೊಂದು ಜಾತಿಗೆ ಹಾನಿಯಾಗದಂತೆ ನೋಡಿಕೊಳ್ಳಬೇಕು. ಏಕೆಂದರೆ ಪರರ ಕೇಡು ಎಂದೆಂದಿಗೂ ತನ್ನ ಕೇಡೇ ಆಗುವುದು. ಇಲ್ಲಿಯ ಜಾತಿ ಸಂಸ್ಥೆಗಳು ಪರರ ಕೇಡಿನಿಂದ ತಮ್ಮ ಉನ್ನತಿಯನ್ನು ಸಾಧಿಸರೆಂಬುವುದರಲ್ಲಿ ಅನುಮಾನವಿರದು ಆದರೆ ತಂತಮ್ಮ ವೃದ್ಧಿಯ ಪ್ರಯತ್ನಗಳನ್ನು ಮುಂದೊತ್ತುತ್ತಿರುವಾಗ ಅಂಥಾ ಪ್ರಯತ್ನಗಳು ಇಂದಲ್ಲ, ಮುಂದಕ್ಕಾದರೂ ಇತರರ ಕೇಡಿಗೆ ಅವಕಾಶವನ್ನು ಕೊಡುವಂಥವುಗಳೋ ಎಂತ ಆಗಿಂದಾಗ್ಯೆ ನೋಡಿಕೊಳ್ಳುವುದು ಇಂಥಾ ಸಂಸ್ಥಾಧಿಕಾರಿಗಳ ಕರ್ತವ್ಯವಾಗಿದೆ ತರುಣ ವಿದ್ಯಾರ್ಥಿ ವರ್ಗದವರೂ ವಿದ್ಯಾವಂತ ವಯೋವೃದ್ಧರೂ, ಈ ಎರಡು ವರ್ಗಗಳೊಳಗೆ ಇರಬೇಕಾದ ಪರಸ್ಪರ ಸಮ್ಮಂಧದ ವಿಷಯ ಸರ್ ಚಂದಾವರಕಾರರವರು ಕೊಟ್ಟ ಬೋಧೆಯು ಸರ್ವರಿಂದಲೂ ಮನ್ನಿಸತಕ್ಕಂಥಾದ್ದಾಗಿದೆ. ಯುವಕರಲ್ಲಿ ಉತ್ಸಾಹ ಹೆಚ್ಚು. ಇಂಥಾ ಉತ್ಸಾಹವನ್ನು ಆಟೋಪಿಸಿ, ಇದನ್ನು ಸತ್ಸಾಧನೆಗಳಲ್ಲಿ ವಿನಿಯೋಗಿಸುವಂತೆ ಮಾಡುವ ಭಾರವನ್ನು ವಯೋವೃದ್ಧರು ವಹಿಸಿಕೊಳ್ಳಬೇಕು. ಈ ಸಾಧನೆಯಿಂದ ಉಭಯತರಿಗೂ ಕ್ಷೇಮವುಂಟಾಗುವುದು. ಜೀವಿತದ ಸುಖದುಃಖಗಳನ್ನು ಅನುಭವಿಸಿ ನೀರಸರಾದ ವೃದ್ಧರಲ್ಲಿ ಯುವಕರ ಸಮ್ಮೇಳನದಿಂದ ಆಹ್ಲಾದವೂ ವೃದ್ಧರ ಅನುಭವದಿಂದ ತರುಣರಲ್ಲಿ ವಿವೇಕವೂ ಜನಿಸುವುದು ವಯೋವೃದ್ಧರು ಮತ್ತು ತರುಣರೊಳಗೆ ಇರಬೇಕಾದ ಇಂಥಾ ಸಮ್ಮಂಧಕ್ಕೆ ಒಹಳ ಆಸ್ಪದವನ್ನು ಕೊಡುವ ಸಂಘವೊಂದು ಇಲ್ಲಿ ಇದೆ ಸ್ಟುಡೆಂಟ್ಸ್ ಬ್ರದರ್‌ಹೂಡ್, ವಿದ್ಯಾರ್ಥಿ ಭ್ರಾತೃಗಳ ಸಂಘವು ಕಳೆದ ಒಂದೆರಡು ವರುಷಗಳಿಂದ ಸಮಾಜಕ್ಕೆ ಉಪಯೋಗಕರವಾದ ಸಂಸ್ಥೆಯಾಗಬೇಕೆಂದು ಪ್ರಯತ್ನಿಸುತ್ತಿರುವುದು. ವಿದ್ಯಾವಂತ ವಯೋವೃದ್ಧರೂ ಪೆನ್ಶನುದಾರರೂ ಇಲ್ಲಿ ಹಲವರಿರುವರು. ಇಂಥವರು ಚಂದಾವರಕಾರರವರ ಸೂಚನೆಯು ಇಲ್ಲಿ ಸಾಧ್ಯವೋ ಎಂತ ಯೋಚಿಸಿ ಪರೀಕ್ಷಿಸಿ ನೋಡಬಹುದು

ಬ್ರಹ್ಮಸಮಾಜದ ಮುಂದಾಳುಗಳಲ್ಲಿ ಸರ್ ನಾರಾಯಣ ಗಣೇಶ ಚಂದಾವರಕಾರರವರು ಒಬ್ಬರಾಗಿರುವುದರಿಂದ ಇಲ್ಲಿಯ ಈ ಸಮಾಜದವರು ಕಳೆದ ಬುಧವಾರ ಸಾಯಂಕಾಲ ಇವರನ್ನೂ ಪಟ್ಟಣದ ಇತರ ಗೃಹಸ್ಥರನ್ನೂ ಒಟಮಾಡಿಸಿ ಉಪಚರಿಸಿದರು ಮಂಗಳೂರಿನಿಂದ ಕಲ್ಲಿಕೋಟೆಗೆ ಹೋಗಿ ಚಂದಾವರಕಾರರವರು ಕೊಯಂಬುತ್ತೂರಿಗೆ ತೆರಳುವರಾಗಿ ತಿಳಿಯುತ್ತೇವೆ. ಚಂದಾವರಕಾರರವರು ಕನ್ನಡ ನಾಡಿನವರು, 'ನಮ್ಮವ'ರೆಂಬುದಾಗಿ ಈ ಮೊದಲೇ ಸೂಚಿಸಿರುತ್ತೇವೆ ಭರತಖಂಡದ ಏಳಿಗೆಯನ್ನು ಕಾರ್ಯತಃ ಸಾಧಿಸುತ್ತಿರುವ ಮುಂಬಾಯಿ ಶಹರಿನ ಮುಂದಾಳುಗಳಲ್ಲೊಬ್ಬರೂ ಆ ಸಂಸ್ಥಾನದ ಯುನಿವರ್ಸಿಟಿಯ ವ್ಹೈಸ್ ಚಾನ್ಸಲರ್ ಪದವಿಯನ್ನು ಒಹಳ ಕಾಲ ನೋಡಿದವರೂ ಆದ ಈ ಮಹನೀಯರು ತನ್ನ ನಾಡಿನವರ ಉಪಯೋಗಾರ್ಥವಾಗಿ ತಮ್ಮ ಹೆಚ್ಚಿನ ಸಮಯವನ್ನು ವಿನಿಯೋಗಿಸಬೇಕೆಂಬ ಅಭಿಲಾಷೆಯು ನಮ್ಮಲ್ಲಿರುವುದು ಇಂಥಾ ಅಭಿಲಾಷೆಯನ್ನು ಪೂರೈಸುವರೆ ಈ ಪ್ರಾಂತ್ಯಗಳಲ್ಲಿ ಪ್ರಸಿದ್ಧವಾದ ಈ ಪಟ್ಟಣಕ್ಕೆ ಆಗಿಂದಾಗ್ಯೆ ಇವರು ಚಿತ್ತೈಸುವರಾಗಿ ಕೋರುತ್ತೇವೆ.

ಮಂಗಳೂರಿನಲ್ಲಿ ಸಂಭವಿಸುವ ಕಳವುಗಳ ಗೋಳಾಟ

ಈ ಶಹರಿನಲ್ಲಿ ಸಂಭವಿಸುತ್ತಿರುವ ಕಳವುಗಳ ವೃತ್ತಾಂತಗಳನ್ನು ಪದೇ ಪದೇ ಬರದರೂ ಅದಿಕಾರಿಗಳು ಜನರ ಗೋಳಾಟವನ್ನು ಇನ್ನೂ ಸರಿಯಾಗಿ ತಿಳಿಯದೆ ಅಗತ್ಯವಿರುವ ನಿವೃತ್ತಿಯನ್ನು ಈ ಪಟ್ಟಣದ ಜನರಿಗೆ ಕಲ್ಪಿಸಿಕೊಡದೆ ಇದ್ದದ್ದು ಅತಿ ವಿಷಾದಕರ ವಿಷಯವಾಗಿದೆ ಕಳವುಗಳು ಹೆಚ್ಚಿವೆ ಎಂತ ಬರದರೆ ಸಮ್ಮಂಧಪಟ್ಟ ಸ್ಥಳೀಯ ಅಧಿಕಾರಿಗಳ ಮನಸ್ಸು ನೊಂದುವುದು, ಹೇಗೆ ಹೆಚ್ಚಿವೆ ಎಂಬುದನ್ನು ರುಜುಪಡಿಸುವ ಭಾರವನ್ನು ಅಧಿಕಾರಿಗಳು ಪತ್ರಕರ್ತರ ತಲೆ ಮೇಲೆಯೇ ಹಾಕುವರು. ಹೇಗೂ ಈ ಮಾತನ್ನು ರುಜುಪಡಿಸುವ ನಮ್ಮ ಮೇಲಿರುವ ಭಾರವು ಮೊನ್ನೆಯಿಂದ ಸ್ವಲ್ಪ ತಗ್ಗಿರುವುದು. ಪೋಲಿಸು ಜವಾನರಲ್ಲಿ ಯಾರಾದರೂ ದಯಮಾಡಿ ಡೊಂಗರಕೇರಿ, ರಥವೀದಿ ಕಡೆಗಳಲ್ಲಿರುವ ಬಾಲಕರ ಶಾಲೆಗಳಿಗೆ ಹೋಗಬೇಕು. ಬಾಲಕರಲ್ಲಿ ಅನೇಕರು ಕಿವಿಯ ಒಂಟೆಗಳನ್ನು ಯಾಕೆ ತೆಗದಿರುವರೆಂತ ಕೇಳಬೇಕು ಆಗ್ಯೆ ಕಳವುಗಳ ಗೋಳಾಟವು ಏನೆಂಬುವುದು ಸ್ಪಷ್ಟವಾಗಿ ತಿಳಿದು ಬರುವದು.

ಸಾಯಂಕಾಲ ಘಂಟೆ ೭ರಿಂದ ರಾತ್ರೆ ಘಂಟೆ ೧೧ರ ತನಕ ಈಗ ಕೆಲವು ದಿವಸಗಳಿಂದ ಹಾದಿಯಲ್ಲಿ ಹೋಗುತ್ತಿರುವವರನ್ನು ಅಲ್ಲಲ್ಲಿ ಕಳ್ಳರು ತಡದು ಸುಲಿಕೊಂಡ ವರ್ತಮಾನಗಳು ನಮ್ಮ ಆಫೀಸಿಗೆ ಬಹಳ ಬರುತ್ತಿವೆ. ಗಾಣಿಗರ ಶಾಲಾ ಹುಡುಗನೊಬ್ಬನನ್ನು ಕಳ್ಳರು ಹಿಡಿದು ಒಂಟೆಗಳಿರುವ ಆತನ ಕಿವಿಗಳನ್ನು [illegible] ವೃತ್ತಾಂತವು ಇಷ್ಟರಲ್ಲಿ ಅಧಿಕಾರಿಗಳಿಗೆ ತಪ್ಪಿರಬಹುದು. [illegible] ಗುಡ್ಡೆ. ಅತ್ತಾವರ, ಮಾರ್ಕೆಟು ಟೈಲ್ಸ್ ಕುತ್ತು [illegible]

([illegible])

ಅನಂತನ ಅನಂತತೆ.

ಅನಂತ ನೀಲನಭದ ಸೊಬಗು ।
ಅನಂತ ಉಡುಗಣಗಳ ಮಿನುಗು ।
ಅನಂತ ರವಿ ಶಶಿಗಳ ಸಳವು ।
ಅನಂತನನು ಕೀರ್ತಿಸುತಿಹವು ॥ ೧ ॥

ಅನಂತ ವಾರುಧಿ ಘೋರ್ಗರೆದು ।
ಅನಂತ ತೆರೆಗಳು ಕುಣಿಕುಣಿದು ।
ಅನಂತ ಗಾನದಿ ಪಾಡುವವು ।
ಅನಂತನನು ಕೀರ್ತಿಸುತಿಹವು ॥ ೨ ॥

ಅನಂತ ಅಣು ರವೆಯೊಂದರಲಿ ।
ಅನಂತ ರವೆ ಭೂಲೋಕದಲಿ ।
ಅನಂತ ಲೋಕಗಳನುದಿನವೂ ।
ಅನಂತನನು ಕೀರ್ತಿಸುತಿಹವು ॥ ೩ ॥

ಅನಂತ ನರ, ಮೃಗ ಖಗಕುಲವು ।
ಅನಂತ ತರು, ಲತೆ, ಭೂಜಲವು ।
ಅನಂತ ಪ್ರಕೃತೀ ಬಲ, ತಿಳಿವು ।
ಅನಂತನನು ಕೀರ್ತಿಸುತಿಹವು ॥ ೪ ॥

ಅನಂತ ಸರ್ವತ್ರಮನಂತ ।
ಅನಂತ ನವೆಲ್ಲರ ತಾತ
ಅನಂತ ಪುತ್ರರು ನಾವಿಹೆವು ।
ಅನಂತನನು ಕೀರ್ತಿಸುತಿಹವು ॥ ೫ ॥

L

ವಿದ್ಯಾರ್ಥಿಗಳಿಗೆ ಕೊಡುವ ಇನಾಮು ಮತ್ತು ವೇತನವು.

ಶಾಲಾ ಮಕ್ಕಳಿಗೆ ಕೊಡೋಣಾಗುವ ಬಹುಮಾನ ಮತ್ತು ವೇತನ ಸಂಬಂಧವಾಗಿ ಮೆ॥ ಆರ್. ಸಿ ರೆನ್ನಾಯಿ ಎಂಬವರು "ಇಂಡಿಯನ್ ಎಡ್ಯುಕೇಶನ್" ಎಂಬ ಪತ್ರಿಕೆಗೆ ಬರೆದ ಲೇಖನದ ಸಾರಾಂಶವು ಉಪಾಧ್ಯಾಯರೆಲ್ಲರೂ ತಿಳಕೊಳ್ಳಬೇಕಾದ ವಿಷಯವಾಗಿರುವದು.

ಬುದ್ಧಿವಂತರಾದ ಮತ್ತು ಸರಿಯಾಗಿ ಕೆಲಸ ಮಾಡಿದ ಹುಡುಗರು ಮಾತ್ರ ಇನಾಮಿಗೆ ಅರ್ಹರಾಗುತ್ತಾರೆಂಬ ಮಾತು ಇದೆ ಆದರೆ ಇದು ನಿಜವಲ್ಲ. "ದರ್ಜೆಯಲ್ಲಿ ಹುಡುಗರೊಳಗಿನ ಮೇಲಾಟವೂ ಉಪಾಧ್ಯಾಯರಿಗೆ ಇಂಥವನ ಮೇಲಿರುವ ಒಲುಮೆಯೂ" ಒಬ್ಬ ಹುಡುಗನು ಇನಾಮಿಗೆ ಅರ್ಹನಾಗಲು ಒಂದು ಕಾರಣವಾಗಿರುತ್ತದೆ ವಾರ ವಾರ ನಡೆಯುವ ಪರೀಕ್ಷೆಗಳಲ್ಲಿ, ತಿಂಗಳಿನ ಪರೀಕ್ಷೆಗಳಲ್ಲಿ ಒಬ್ಬ ಹುಡುಗನು ಒಮ್ಮೆ ಪ್ರಥಮ ಸ್ಥಾನವನ್ನು ಪಡದರೆ ಸಹಜವಾಗಿ ಅಂಥವನ ಮೇಲೆ ಉಪಾಧ್ಯಾಯನು ಸದಾ ಪ್ರೀತಿಯನ್ನು ತೋರಿಸುವನು ಇಂಥಾ ಹುಡುಗನು ಉಪಾಧ್ಯಾಯನ ಪೂಜಾವಿಗ್ರಹದಂತಿರುವನು ಉಳಿದ ಹುಡುಗರಿಗೆ ಉಪಾಧ್ಯಾಯನಿಂದ ಉತ್ತೇಜನವು ದೊರಕುವದಿಲ್ಲವಾದುದರಿಂದ ಇಂಥವರು ಅನೇಕಾವರ್ತಿ ಹಿಂದೆಯೇ ಬೀಳುವರು

ಹೀಗೆ ಇನಾಮು ಮತ್ತು ವೇತನಗಳನ್ನು ಕೊಡುವ ಈಗಿನ ಪದ್ಧತಿಯಿಂದ ಇನಾಮು ಮತ್ತು ವೇತನಗಳನ್ನು ಕೊಡುವದರ ಉದ್ದೇಶವು ಕೆಟ್ಟುಹೋಗಿರುವದು ಈಗಿನ ಪದ್ಧತಿಯಿಂದ ಇನಾಮುಗಳನ್ನು ಪಡೆಯುವವನಿಗೆ ಬಾಧಕವಿದೆ, ಇನಾಮುಗಳನ್ನು ಪಡೆಯದವನಿಗೂ ಬಾಧಕವಿದೆ. ಈಗಿನ ಪದ್ಧತಿಯು ಅಯೋಗ್ಯ ರೀತಿಯಿಂದ ಕೆಲವರನ್ನು ಮೇಲಕೆತ್ತುತ್ತದೆ. ಅನೇಕರನ್ನು ಕೆಳದೊಬ್ಬುತ್ತದೆ. ಇದು ಇನಾಮಿಗೆ ಅರ್ಹನಾದವನಲ್ಲಿ ಅಹಂಕಾರವನ್ನುಂಟುಮಾಡಿ ಬೇಕಾದಷ್ಟು ಕಷ್ಟಪಡುವ ಗುಣವನ್ನು ಅವನಲ್ಲಿ ಹುಟ್ಟಿಸಿ, ಮುಂದೆ ಚೆನ್ನಾಗಿ ಕೆಲಸ ಮಾಡದ ಹಾಗೆ ಮಾಡುತ್ತದೆ. ಅತ್ತಕಡೆಯಲ್ಲಿ ಇನಾಮಿಗೆ ಅರ್ಹನಾಗದವರಲ್ಲಿ ವಿದ್ಯೆಯ ಕಡೆಗೆ ಅರುಚಿಯನ್ನು ಹುಟ್ಟಿಸುತ್ತದೆ.

ಇನಾಮು ಕೊಡುವ ಪದ್ಧತಿಯ ಉದ್ದೇಶವು ತಕ್ಕ ರೀತಿಯಲ್ಲಿ ಈಡೇರುವಂತೆ ಕೈಕೊಳ್ಳಬೇಕಾದ ಕೆಲವು ಸೂಚನೆಗಳನ್ನು ಮೆ॥ ರೆನ್ನಾಯಿರವರು ಕೊಟ್ಟಿರುವರು. ಉಪಾಧ್ಯಾಯರು ತನ್ನ ಮನಸ್ಸಿಗೆ ಬಂದ ಕೆಲವರ ಮೇಲೆ ಮಾತ್ರ ತನ್ನ ದೃಷ್ಟಿಯನ್ನಿಡಬಾರದು. , ತರಗತಿಯ ಪ್ರತಿ ಒಬ್ಬ ಹುಡುಗನಲ್ಲಿ ಕಡೆಯ ಹುಡುಗನಲ್ಲಿ ಕೂಡಾ ಇರಬಹುದಾದ ಒಳ್ಳೇ ಗುಣಗಳನ್ನು ಕಂಡುಹಿಡಿಯಬೇಕು. ಉಪಾಧ್ಯಾಯನು ಒಬ್ಬ ಹುಡುಗನನ್ನು ಒಳ್ಳೇ ಬರಹ ಬರಿಯುವುದಕ್ಕಾಗಿ ಹೊಗಳಬೇಕು. ಮತ್ತೊಬ್ಬನನ್ನು ಬಾಯಿಪಾಠದಲ್ಲಿ, ಇನ್ನೊಬ್ಬನನ್ನು ಇಂಗ್ಲಿಷಿನಲ್ಲಿ, ಗಣಿತದಲ್ಲಿ ಹೊಗಳಬೇಕು. ಇತರ ಪಾಠಗಳಲ್ಲಿ ಎಷ್ಟು ಹಿಂದೆ ಇದ್ದರೂ ಚಿಂತಿಲ್ಲ. ಒಬ್ಬನು ಯಾವದರಲ್ಲಿ ಒಳ್ಳೇ ಕೆಲಸಮಾಡುತ್ತಾನೋ ಇದರಲ್ಲಿ ಉತ್ತೇಜನ ಕೊಡಲೇಬೇಕು. ಹೀಗೆ ಒಂದರಲ್ಲಿ ಹೊಗಳುವದರಿಂದ ಮತ್ತೊಂದು ವಿಷಯದಲ್ಲಿ ಕೂಡಾ ಪ್ರಯತ್ನಪಡುವ ಗುಣವು ತನ್ನಷ್ಟಕ್ಕೆ ಹುಡುಗನಲ್ಲಿ ಮೂಡುವದು ಎಂಬದಾಗಿ ಮೆ॥ ಆರ್ ಸಿ. ರೆನ್ನಾಯಿರವರು ಬರದಿರುವರು

ಪೂರ್ವ ಬಂಗಾಳದ ಜನರ ದುರವಸ್ಥೆ.

ಯೂರೋಪು ಖಂಡದಲ್ಲಿ ನಡೆಯುವ ಘೋರ ಯುದ್ಧದ ರವಿಯು ಹಿಂದೂಸ್ಥಾನಕ್ಕೂ ತಾಗಿರುವದೆಂಬ ವಿಷಯವು ಮೆ॥ ಡಬ್ಯ್ಯ ಪಿಯರ್ಸನರವರು ಆಯಾ ವರ್ತಮಾನ ಪತ್ರಿಕೆಗಳಿಗೆ ಬರೆದ ಪತ್ರದಿಂದ ವ್ಯಕ್ತವಾಗುವದು

ಡಕ್ಕಾ ಡಿಸ್ಟ್ರಿಕ್ಟಿನ ವಾಂಚಡೋನ ಎಂಬ ಗ್ರಾಮದಲ್ಲಿ ಹೊಟ್ಟೆಗಿಲ್ಲದೆ ಬಳಲುವ ಗ್ರಾಮಸ್ಥರಿಗೆ ರೂ ೫೫೫ ಸಹಾಯವಾಗಿ ಕೊಡೋಣಾಗಿರುವದು ಆದರೆ ಇದು ಸಾಲದೆ ಗ್ರಾಮ ಪಂಚಾಯತ ಸಭಾ ಪ್ರೆಸಿಡಂಟರ ಕೈಯ ಸರಕಾರದವರು ರೂ ೧೫೧ ಸಹಾಯಾರ್ಥವಾಗಿ ಹಂಚುವರೆ ಕೊಟ್ಟಿರುವದರಿಂದ ಅಲ್ಲಿಯ ಪರಿತಾಪವು ಅಧಿಕಾರಿಗಳಿಗೂ ವ್ಯಕ್ತವಾಗಿರುವದೆಂತ ತಿಳಿಯಬೇಕಾಗಿದೆ

ಆ ಗ್ರಾಮದ ಒಬ್ಬ ಸ್ನೇಹಿತನಿಂದ ಬಂದ ಪತ್ರವು ಈ ರೀತಿಯಾಗಿರುವದು — ವಾಂಚಡೋನ ಗ್ರಾಮದ ಸ್ಥಿತಿಯು ಬೀಕರವಾಗಿರುವದು ನೈಕಾಡಿಯ ಶೇಕ್ ಒಕಹಾರ್ ಎಂಬ ಒಬ್ಬ ಮಹಮ್ಮದೀಯನು ಹೊಟ್ಟೆಗಿಲ್ಲದೆ ಸತ್ತನು ಸಾಯುವ ಮೊದಲು ಒಂದೆರಡು ದಿನ ಅವನಿಗೆ ಸ್ವಲ್ಪ ಜ್ವರ ಬಂದಿದ್ದಿತು ಆದರೆ ಆತನು ಆಹಾರಕ್ಕಿಲ್ಲದೆ ಉಪವಾಸ ಬಿದ್ದು ಸತ್ತನೆಂದು ಆತನ ನೆರೆಹೊರೆಯವರ ಮಾತಿನಿಂದ ದೃಢವಾಗುತ್ತದೆ ಒಕಹಾರನ ಹೆಂಡತಿಗೂ ಮಕ್ಕಳಿಗೂ ಆಹಾರವಿಲ್ಲ ದಯಾಳುಹೃದಯನಾದ ಗ್ರಾಮ ಪಂಚಾಯತ ಸಭೆಯ ಪ್ರೆಸಿಡಂಟರು ನಿರ್ಗತಿಕರಾದ ಈ ಕುಟುಂಬದ ದುರವಸ್ಥೆಯನ್ನು ತಿಳಿದು ಅವರ ಜೀವ ಉಳಿಸಲು ಆದಷ್ಟು ಪ್ರಯತ್ನಿಸಿದರು. ಆದರೆ ಚಿಕ್ಕ ಮಗುವು ಬದುಕುವಹಾಗಿಲ್ಲ ಇನ್ನೂ ಅನೇಕ ಕುಟುಂಬಗಳು ಆಹಾರವಿಲ್ಲದೆ ಬಳಲುತ್ತಿವೆ ಬಕೆಹಾರನ ಅವಸ್ಥೆಯನ್ನು ಹೊಂದಿದ ಇನ್ನು ಅನೇಕರ ವಾರ್ತೆಗಳೂ ಕೇಳಸಿಗುತ್ತವೆ ಅನೇಕ ಕುಟುಂಬಗಳಿಗೆ ೨-೩ ದಿವಸಗಳಿಗೆ ಒಂದಾವರ್ತಿ ಮಾತ್ರ ಆಹಾರ ಸಿಗುತ್ತದೆ ತಾಲೂಕುಗಳಲ್ಲಿಯೂ ಹಣದ ಅವಶ್ಯವಿರುವುದರಿಂದ ತಾಲೂಕಿನವರು ಈ ಬಡ ಗ್ರಾಮಸ್ಥರಿಗೆ ಸಹಾಯ ಮಾಡಲು ಅಶಕ್ತರಾಗಿರುವರ ಕೂಲಿ ಕೆಲಸಗಳನ್ನು ಮಾಡಿ ದಿನಕರಣೆ ಮಾಡುವವರಿಗೆ ಕೆಲಸವಿಲ್ಲದಿರುವದರಿಂದ ಇವರ ಸಂಕಷ್ಟವನ್ನು ಹೇಳಿ ತೀರದು ಇವರಿಗೆ ಕೆಲಸ ಕೊಡಲು ಶಕ್ತರಾದವರು ಯಾರೂ ಇರರು ಕಾರ್ತಿಕ ಬತ್ತ ಪೈರು ಮಳೆ ಇಲ್ಲದೆ ಹಾಳಾಗಿರುವದು ಎಂತ ಪಂಚಾಯತ ಪ್ರೆಸಿಡೆಂಟರು ಬರಿಯುವರು ಮುಂದಿನ ತಿಂಗಳಲ್ಲಿ ಈ ಜನರ ಗತಿ ಏನು ಎಂಬದನ್ನು ಆಲೋಚಿಸಿದರೆ ಮನಸ್ಸಿನಲ್ಲಿ ಬಹು ದುಃಖವಾಗುತ್ತದೆ ಮಧ್ಯಮ ತರಗತಿಯ ಜನರ ಸ್ಥಿತಿಯೂ ಭೀಕರವಾಗಿದೆ ಇವರು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಮುಂದರಿಸಲು ಅಶಕ್ತರಾಗಿರುವರು. ಸರಕಾರದ ಸಹಾಯವಿಲ್ಲದೆ ಹೋದರೆ ಇಂಥವರಿಗೆ ಕೂಡಾ ತಮ್ಮ ಮಕ್ಕಳುಮರಿಗಳನ್ನು ಸಾಕಲು ಕಷ್ಟ ಸಾಧ್ಯವಾಗುವದು

ಬತ್ತದ ಬೆಳೆಯು ಮಳೆಯ ಕೊರತೆಯಿಂದ ಅರ್ಧ ಕೆಟ್ಟು ಹೋದದ್ದು ಜನರ ಸ್ಥಿತಿಯು ಮತ್ತಷ್ಟು ಭೀಕರವಾಗಲು ಕಾರಣವಾಯಿತು. ನಿರಾಶ್ರಿತ ಜನಸಹಾಯ ಸಂಘದ ವ್ಯವಸ್ಥಾಪಕರಾದ ಬಾಬು ಹೇಮೇಂದ್ರ ದತ್ತರವರು ಈ ರೀತಿ ತಂತೀ ಬಿಟ್ಟಿರುವರು. "ಶಾಲಾ ಸಬ್ ಇನ್ಸ್‌ಪೆಕ್ಟರರು ನಮ್ಮ ದಿಗಿರಿಪಾರ ಮುಕ್ಕೆ ಶಾಲೆಯನ್ನು ಸಂದರ್ಶಿಸಿ; ೨-೩ ದಿವಸಗಳಿಂದ ಹೊಟ್ಟೆಗಿಲ್ಲದೆ ಬಳಲಿರುವ ಶಾಲಾ ಮಕ್ಕಳನು ಕಂಡು ಅವರನ್ನು ಪರೀಕ್ಷಿಸಲಿಲ್ಲ. ಆದುದರಿಂದ ಕೂಡಲೇ ೫೦ ರೂಪಾಯಿ ಕಳುಹಿಸಬೇಕೆಂದು ಬೇಡುತ್ತೇನೆ."

ಯೂರೋಪ ಖಂಡದ ಯುದ್ಧವು ಬೆಲ್ಜಿಯಮ್ ಮತ್ತು ಫ್ರಾನ್ಸ್ ದೇಶದ ಜನರನ್ನು ಮಾತ್ರವೇ ಆಹುತಿಗೊಳ್ಳದೆ. ಹಿಂದೂಸ್ಥಾನದ ಆಯಾ ಪ್ರಾಂತ್ಯದ ಜನರನ್ನು

ಆಹುತಿಗೊಳ್ಳುತ್ತಿರುವದರಿಂದ ಕಷ್ಟದಲ್ಲಿರುವ ಭ್ರಾತೃಗಳಿಗೆ ಸಹಾಯ ಮಾಡಬೇಕೆಂದು ಮೆ|| ಪಿಯರ್ಸನರವರು ವಿಜ್ಞಾಪಿಸಿಕೊಂಡಿರುವರು ಸಹಾಯಮಾಡಲಿಚ್ಛಿಸುವವರು ಮೆ|| ಡಬ್ಲ್ಯು ಡಬ್ಲ್ಯು. ಪಿಯರ್ಸನ್ ಶಾಂತಿನಿಕೇತನ್, ಬೋಳಾಪುರ. ಈ ವಿಳಾಸಕ್ಕೆ ತಮ್ಮ ದಾನವನ್ನು ಕಳುಹಿಸಿ ಕೊಡಬಹುದು.

~~~~~~~~

ಚೀನಾ ದೇಶದ ಪ್ರಕೃತ ಸ್ಥಿತಿ.

~~~~~~~~

ಭರತಖಂಡದ ಪೂರ್ವದಿಕ್ಕಿನಲ್ಲಿ ಚೀನ ಸಾಮ್ರಾಜ್ಯವಿದೆ ಈ ದೇಶದಲ್ಲಿ ಸಾಧಾರಣ ೪೦ ಕೋಟಿ ಜನಗಳು ವಾಸವಾಗಿದ್ದಾರೆ ಜನಸಂಖ್ಯೆಯಲ್ಲಿ ಇಷ್ಟು ಘನವಾದ ದೇಶವು ಪ್ರಪಂಚದಲ್ಲಿಯೇ ಇಲ್ಲವು ಸ್ಪೇನ್ ದೇಶದ ವಿನಾ ಯುರೋಪ್ ಖಂಡದಷ್ಟು ಜನಸಂಖ್ಯೆಯು ಇದೊಂದು ದೇಶದಲ್ಲಿಯೇ ಇದೆ ಈ ಜನಗಳು ಬೌದ್ಧ ಮತೀಯರು ಈ ದೇಶದಲ್ಲಿ ಕಳೆದ ೧೯೧೧ನೇಯ ಸಂವತ್ಸರದಲ್ಲಿ ರಾಜ್ಯಕ್ರಾಂತಿಯಾಗಿ ಕೇವಲ ಪ್ರಜಾಪ್ರಭುತ್ವವು ಸ್ಥಾಪನೆಯಾಯಿತು ಇಂತಹ ವಿಸ್ತಾರವಾದ ರಾಜ್ಯವು ಕಳೆದ ೩೦—೪೦ ವರ್ಷಗಳಲ್ಲಿಯೇ ಎಷ್ಟು ಉನ್ನತಾವಸ್ಥೆಗೆ ಒಂದಿತೆಂಬುದನ್ನು ನೋಡಿದರೆ ತುಂಬಾ ಆಶ್ಚರ್ಯವಾಗದಿರಲಾರದು ಈ ದೇಶದವರಿಗೆ ಆರಂಭದಲ್ಲಿಯೇ ಪಾಶ್ಚಾತ್ಯರಾದ ಪೋರ್ಚುಗೀಸ್, ಫ್ರೆಂಚ್, ಇಂಗ್ಲಿಷ್ ಜನಗಳ ನಡತೆಗಳು ವಿರೋಧವಾಗಿ ತೋರಿದ್ದರಿಂದ ಆ ಜನಗಳ ವಿಷಯದಲ್ಲಿ ಇವರ ಅಭಿಪ್ರಾಯಗಳು ಈ ವರೆವಿಗೂ ಬೇರೆಯಾಗಲಿಲ್ಲ ಒಬ್ಬ ಅಮೇರಿಕನ್ ಪಾದ್ರಿಯು ಪಾಶ್ಚಾತ್ಯರ ವಿಷಯದಲ್ಲಿ ಚೀನ ಜನಗಳು ಯಾವ ಅಭಿಪ್ರಾಯವುಳ್ಳವರಾಗಿರುತ್ತಾರೆಂಬುದನ್ನು ಬರೆದಿರುತ್ತಾನೆ ಈ ಪಾದ್ರಿಯು ಹೇಳುವುದೇನಂದರೆ —

"ಪಾಶ್ಚಾತ್ಯ ಜನಗಳ ಬಲಾತ್ಕಾರವನ್ನು ಇನ್ನು ಮೇಲೆ ಪೂರ್ವ ದೇಶದವರು ಸಹಿಸಲಾರರು. ಪಾಶ್ಚಾತ್ಯ ಜನಗಳು ತಮ್ಮನ್ನು ಸಮಭಾವದಿಂದಲೇ ಕಾಣಬೇಕೆಂದು ಆ ಜನಗಳು ಅಪೇಕ್ಷಿಸುತ್ತಾರೆ ಪಾಶ್ಚಾತ್ಯ ಜನಗಳು ಅವರ ಸಂಗಡ ಸಮಭಾವನೆಯಿಂದ ನಡೆಯದಿದ್ದರೆ ಈ ಉಭಯ ಜನಾಂಗಗಳಲ್ಲಿ ಘನ ಘೋರ ಯುದ್ಧ ಪ್ರಾರಂಭವಾಗದಿರಲಾರದು"

ಯಾವ ಚೀನ ದೇಶದಲ್ಲಿ ಕಳೆದ ೩೫ ವರ್ಷಗಳ ಪೂರ್ವದಲ್ಲಿ ಒಂದು ಮೈಲು ದೂರವಾದರೂ ರೈಲ್ವೇ ದಾರಿಯಿರಲಿಲ್ಲವೋ ಅಂತಹ ಚೀನ ರಾಜ್ಯದಲ್ಲಿಯೇ ಪ್ರಕೃತ ಸಾಧಾರಣ ೬೦೦೦ ಮೈಲು ವಿಸ್ತಾರವಾಗಿ ರೈಲ್ವೇ ಮಾರ್ಗಗಳಿವೆ "ಶಾಂಶಿವ್ಯಾಂಗೋಲಿಯಾ" ಎಂಬ ರೈಲ್ವೇ ಮಾರ್ಗವನ್ನು ಯಾವ ಪರದೇಶದವರ ಸಹಾಯವಿಲ್ಲದೆ ಒಬ್ಬ ಚೀನಿ ಇಂಜಿನಿಯರನೇ ಸಿದ್ಧಗೊಳಿಸಿರುತ್ತಾನೆ ಈ ರೈಲ್ವೇ ಮಾರ್ಗಕ್ಕೆ ಟ್ರಾನ್ಸ್ ಸೈಬೇರಿಯಾ ಮಾರ್ಗವನ್ನು ಕೂಡಿಸಿದರೆ ಪೇಕಿನ್ ಪಟ್ಟಣದಿಂದ ಪ್ಯಾರಿಸ್ ಪಟ್ಟಣಕ್ಕೆ ಹತ್ತು ದಿವಸಗಳಲ್ಲಿ ಸೇರಬಹುದು! ಈ ದೇಶದಲ್ಲಿ ರೈಲ್ವೇ ಮಾರ್ಗಗಳು ಹೆಚ್ಚಾಗುತ್ತಲಿವೆ

ಚೀನ ದೇಶದಲ್ಲಿ ಹತ್ತಿಯ ಬೆಳೆಯು ವಿಶೇಷವಾಗಿ ಆಗುತ್ತದೆ ಆ ದೇಶಕ್ಕೆ ಬೇಕಾಗುವ ಬಟ್ಟೆಯ ೫ ಬಾಗಗಳಲ್ಲಿ ೪ ಭಾಗದಷ್ಟು ಬಟ್ಟೆಯು ಆ ದೇಶದಲ್ಲಿಯೇ ಕೇವಲ ಕೈಮಗ್ಗಗಳಿಂದ ಸಿದ್ಧವಾಗುತ್ತದೆ ಆ ಬಟ್ಟೆಯು ಬಹು ಗಟ್ಟಿಯಾಗಿಯೂ ಇರುತ್ತದೆ. ಯಾಂತ್ರಿಕ ಕಾರ್ಖಾನೆಗಳೂ ದಿನೇ ದಿನೇ ಹೆಚ್ಚುತ್ತಲಿವೆ. ರೇಶ್ಮೆಯು ಈ ದೇಶದಲ್ಲಿ ಹೇರಳವಾಗಿ ಬೆಳೆಯುತ್ತಿದೆ ಗಾಜು, ಸೋಪ್, ಕಾಗದ ಮುಂತಾದ ಪದಾರ್ಥಗಳನ್ನು ಈ ದೇಶದಲ್ಲಿಯೇ ಯಂತ್ರಗಳ ಸಹಾಯದಿಂದ ಮಾಡುತ್ತಿರುವರು ಕಬ್ಬಿಣ, ಕಲ್ಲಿದ್ದಲು, ತಾಂಬ್ರ ಮೊದಲಾದವುಗಳ ಗಣಿಗಳೂ ಈ ದೇಶದಲ್ಲಿವೆ. ಈ ಎಲ್ಲ ಸೌಲಭ್ಯಗಳಿಂದ ಸ್ವಲ್ಪ ಕಾಲದಲ್ಲಿಯೇ ಕೈಗಾರಿಕೆಗಳಲ್ಲಿಯೂ ಚೀನದೇಶವು ಪಾಶ್ಚಾತ್ಯ ದೇಶಗಳಿಗಿಂತ ಮುಂದಾಗುವದೆಂದು ಊಹಿಸಿದರೆ ಅನುಚಿತವಾಗಲಾರದು.

ವಿದ್ಯಾಪ್ರಸಾರವನ್ನಾದರೋ ವಿಶೇಷವಾಗಿ ಮಾಡುತ್ತಿರುವರು ತಂತೀ, ಟಪ್ಪಾಲ್ ಕಚೇರಿಗಳು, ದೇಶದ ಸಕಲ ಭಾಗಗಳಲ್ಲಿಯೂ ವ್ಯಾಪಿಸಿರುತ್ತವೆ. ಅಫೀಮು ತಿನ್ನುವ ದುರಭ್ಯಾಸವನ್ನು ಸಂಪೂರ್ಣವಾಗಿ ಬಿಡಿಸಿದರು. ಸ್ತ್ರೀ ವಿದ್ಯಾಭ್ಯಾಸವಾದರೋ ವಿಶೇಷವಾಗಿ ಹೆಚ್ಚುತ್ತಿರುವುದು, ರಾಜ್ಯಕ್ರಾಂತಿಯ ಕಾಲದಲ್ಲಿ ಸ್ತ್ರೀಯರೂ ಒಂದು ಸೈನ್ಯ ಬಲವನ್ನು ಸಿದ್ಧಗೊಳಿಸಿದ್ದರು ಸ್ತ್ರೀಯರು ಬಹಿರಂಗವಾದ ಉಪನ್ಯಾಸಗಳನ್ನು ಮಾಡುತ್ತಿರುವರು. ಪೇಕಿನ್ ಪಟ್ಟಣದ ಒಂದು ದೈನಿಕ ಪತ್ರಿಕೆಯನ್ನು ಒಬ್ಬ ಸ್ತ್ರೀಯಳು ನಡೆಸುತ್ತಿರುವಳು. ಪೇಕಿನ್ ಪಟ್ಟಣದಲ್ಲಿ ಒಂದು ವಿಶ್ವ ವಿದ್ಯಾಲಯವಿದೆ. ದೇಶದ ಸಕಲ ಭಾಗದಲ್ಲಿಯೂ ಪ್ರಾಥಮಿಕ ಶಾಲೆಗಳಿವೆ. ವಿದ್ಯಾಭಿವೃದ್ಧಿಗಾಗಿ ಪಾಠಶಾಲೆಗಳು ಹೆಚ್ಚಾಗುತ್ತಲಿವೆ. ಸ್ವಲ್ಪ ಕಾಲದಲ್ಲಿಯೇ ಇಂಗ್ಲಿಷ್, ಫ್ರೆಂಚ್, ಜರ್ಮನ್, ಭಾಷೆಗಳ ಅಧ್ಯಯನವನ್ನು ಮಾಡಿ ಪಾಶ್ಚಾತ್ಯ ವಿಷಯಕ ವಿದ್ಯೆಯನ್ನು ಕಲಿಯುತ್ತಿರುವರು. ವಿದ್ಯಾಧ್ಯಯನಕ್ಕಾಗಿ ಪರದೇಶಕ್ಕೆ ಬಹು ಜನ ವಿದ್ಯಾರ್ಥಿಗಳು ಹೋಗುತ್ತಿರುವರು ಕೇವಲ ಯುನೈಟೆಡ್ ಸ್ಟೇಟ್ಸಿನಲ್ಲಿಯೇ ೮೦೦ ಚೀನಿ ವಿದ್ಯಾರ್ಥಿಗಳಿರುತ್ತಾರೆ

ಚೀನದೇಶದಲ್ಲಿ ಪತ್ರಿಕೆಗಳ ಪ್ರಾಮುಖ್ಯತೆಯೂ ವಿಶೇಷವಾಗಲುಪಕ್ರಮಿಸಿರುತ್ತದೆ. "ಪೆಕಿಂಗ್ ಗಜೆಟ್" ಎಂಬ ಪತ್ರಿಕೆಯು ಪ್ರಪಂಚದಲ್ಲಿಯೇ ಮೊದಲು ಪ್ರಕಟವಾದ ಪತ್ರಿಕೆಯು! ಈ ದೇಶದಲ್ಲಿ ಸಾಧಾರಣ ೨೦೦ ಪತ್ರಿಕೆಗಳು ಪ್ರಕಟವಾಗುತ್ತವೆ. ನಾವು ಒಂದೇ ರಕ್ತದ ೪೦ ಕೋಟಿ ಜನಗಳಿದ್ದೇವೆ, ನಮ್ಮ ಕರ್ತವ್ಯದಿಂದ ಪ್ರಪಂಚವೇ ಚಕಿತವಾಗುವಂತೆ ಮಾಡಬಹುದೆಂದು ಈ ಜನಗಳು ತಮ್ಮ ಹಿಂದಣ ಆಲಸ್ಯವನ್ನು ಬಿಟ್ಟು ಉತ್ಸಾಹದಿಂದ ಪ್ರಯತ್ನಮಾಡಲುಪಕ್ರಮಿಸಿರುತ್ತಾರೆ ಈ ವರೆವಿಗೂ ಕನ್ ಫ್ಯೂಶಸ್, ಬೌಧ ಈ ಉಭಯ ಮತಗಳಿಂದ ಕೂಡಿದ ಒಂದೇ ಧರ್ಮವಿತ್ತು. ಪ್ರಕೃತದ ಜನಗಳಲ್ಲಿ ಈ ಧರ್ಮಾಭಿಪ್ರಾಯಗಳು ಲೋಪವಾಗುತ್ತ ಡಾರ್ವಿನ್, ಸ್ಪೆನ್ಸರ್, ಹಕ್ಸಲೆಯವರ ಅಭಿಪ್ರಾಯಗಳು ಪ್ರಸಾರವಾಗುತ್ತಿರುವವು. ಅಜ್ಞೇಯವಾದವು ಪ್ರಬಲವಾಗಿ ಹೆಚ್ಚುತ್ತಿರುವುದು. ಯಾವ ಜನಗಳು ಮುದ್ರಣ ಕಲೆಯನ್ನು ಪ್ರಪಂಚದಲ್ಲಿ ತಂದರೋ, ಯಾವ ಜನಗಳು ಬಂದೂಕಿನ ಮದ್ದನ್ನು ಕಂಡುಹಿಡಿದರೋ ಅಂತಹ ಚೀನಿ ಜನಗಳು ತಮ್ಮ ಸಾಧಾರಣ ೧೩ ನೂರು ವರ್ಷಗಳ ಗಾಢನಿದ್ರೆಯಿಂದ ಎಚ್ಚೆತ್ತು ಸ್ವಲ್ಪ ಕಾಲದಲ್ಲಿಯೇ ಇಷ್ಟು ಸುಧಾರಿಸಿಕೊಂಡು ಪ್ರಪಂಚವೇ ತಮ್ಮ ಕಡೆಗೆ ನೋಡುವಂತೆ ಮಾಡಿದುದು ಆಶ್ಚರ್ಯವೇ ಸರಿ

ಧ.

~~~~~~~~

ಭತ್ತದ ಪೈರಿಗೆ ರಂಜಕ ಧಾತು ಸಂಬಂಧದ ಗೊಬ್ಬರಗಳು.

~~~~~~~~

ಬತ್ತದ ಬೆಳೆಗೆ ಫಾಸ್ಫಾರಿಕ್ ಆಸಿಡ್ ಎಂಬ ರಂಜಕ ಧಾತುವಿನ ಪದಾರ್ಥವು ಬಹಳ ಮಟ್ಟಿಗೆ ಅವಶ್ಯಕ ಪೈರಿಗೆ ಒದಗುವಷ್ಟು ಭೂಮಿಯಲ್ಲಿ ಇದು ಸಿಕ್ಕದೆ ಇರುವ ಪಕ್ಷದಲ್ಲಿ ಈ ಪದಾರ್ಥವನ್ನು ಒಳಕೊಂಡಿರುವ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಅನುಕೂಲಗಳುಂಟು ಸಾಧಾರಣವಾಗಿ ಮದ್ರಾಸ್ ಪ್ರೆಸಿಡೆನ್ಸಿಯ ಜಮೀನುಗಳಲ್ಲಿ ಈ ಪದಾರ್ಥವು ಕಮ್ಮಿಯಾಗಿರುತ್ತದೆ. ಆದ್ದರಿಂದ ಈ ಗೊಬ್ಬರವನ್ನು ಉಪಯೋಗಿಸುವುದರಿಂದ ಬಹಳ ಮಟ್ಟಿಗೆ ಪ್ರಯೋಜನವಾಗುತ್ತೆಂಬ ವಿಚಾರವು ಪ್ರತಿಯೊಬ್ಬ ರೈತನಿಗೂ ತಿಳಿಯಬೇಕಾಗಿರುತ್ತೆ

ಸಾಧಾರಣವಾಗಿ ರೂಢಿಯಲ್ಲಿರತಕ್ಕ ಗೊಬ್ಬರಗಳ ಸ್ವಭಾವವನ್ನು ತಿಳಿದುಕೊಳ್ಳೋಣ ಇವುಗಳು ಯಾವವಂದರೆ:—ಮೂಳೆ ಗೊಬ್ಬರ, ಮೀನು ಗೊಬ್ಬರ ಮತ್ತು ಸೂಪರ್‌ಫಾಸ್ಫೇಟ್. ಮೊದಲನೆ ಎರಡು ಗೊಬ್ಬರಗಳು ಸ್ವಭಾವವಾಗಿ ಸಿಕ್ಕತಕ್ಕವು. ಕೊನೆಯದು ತಯಾರಿಸಿದ ಗೊಬ್ಬರ. ಮೀನು ಗೊಬ್ಬರದಲ್ಲಿ ಶೇಕಡ ೮ರಷ್ಟು ನೈಟ್ರೋಜನ್ ಎಂಬ ಯವಕ್ಷಾರವಾಯುವು ೯ರಷ್ಟು ಫಾಸ್ಫಾರಿಕ್ ಆಸಿಡ್ ಎಂಬ ರಂಜಕ ಧಾತುವು ಇರುತ್ತೆ. ಇದು ಭತ್ತದ ಪೈರಿಗೆ ಬಹಳ ಉತ್ಕೃಷ್ಟವಾದ ಗೊಬ್ಬರ. ಕೊಯಂಬತ್ತೂರು ಫಾರಂನಲ್ಲಿ ಅಜಮಾಯಿಷಿಮಾಡಿದ್ದರಲ್ಲಿ ಎಕರೆಗೆ ೧೦೫ ರೂಪಾಯಿಗಳು ಗಿಟ್ಟಿರುತ್ತೆ ಮೂಳೆ ಗೊಬ್ಬರದಲ್ಲಿ ಶೇಕಡಾ ೪ರಷ್ಟು ಯವಕ್ಷಾರಜನಕವಾಯುವು, ೩೦ರಷ್ಟು ಫಾಸ್ಫಾರಿಕ್ ಆಸಿಡ್ ಇರುತ್ತೆ. ಎಕರೆಗೆ ೫೦೦ ಪೌಂಡಿನಷ್ಟು ಉಪಯೋಗಿಸಿದ್ದರಿಂದ ೧೧೧ ರೂ. ಲಾಭವು ಗಿಟ್ಟಿರುತ್ತೆ.

ಮೇಲೆ ಹೇಳಿದ ಎರಡು ತರಹೆ ಗೊಬ್ಬರಗಳು ಭತ್ತದ ಪೈರಿಗೆ ಬಹಳ ಉಪಯೋಗವಾದವುಗಳಾಗಿರುತ್ತವೆ. ಇವುಗಳಲ್ಲಿ ಸೇರಿರುವ ಫಾಸ್ಫಾರಿಕ್ ಆಸಿಡ್ ಎಂಬ ರಂಜಕ ಧಾತು ಪದಾರ್ಥವು ಪೈರಿಗೆ ಜಾಗ್ರತೆಯಲ್ಲಿ ಒದಗುವದಿಲ್ಲ. ಭೂಮಿಯಲ್ಲಿರತಕ್ಕ ಪದಾರ್ಥಗಳೊಂದಿಗೆ ಸೇರಿ ನಿಧಾನದಿಂದ ಬಿಡುಗಡೆಯಾಗಿ ಪೈರಿಗೆ ಆಹಾರಪದಾರ್ಥವಾಗಿ ಒದಗುತ್ತೆ. ಈ ಗೊಬ್ಬರಗಳ ಪ್ರಯೋಜನವು ಸುಮಾರು ೨-೩ ಸಂವತ್ಸರಗಳವರೆಗೂ ಇರುತ್ತೆ. ಖುಷ್ಕಿ ಜಮೀನುಗಳಿಗಿಂತ ತರೀ ಜಮೀನುಗಳಲ್ಲಿ ಈ ಗೊಬ್ಬರಗಳು ಜಾಗ್ರತೆ ಉಪಯೋಗಕ್ಕೆ ಬರುತ್ತವೆ.

ಈ ಗೊಬ್ಬರಗಳನ್ನು ಜಮೀನುಗಳಿಗೆ ವರ್ಷ ವರ್ಷ ಜಾಸ್ತಿಯಾಗಿ ಹಾಕುವದು ವಾಡಿಕೆ. ಹೀಗೆ ಮಾಡುವದರಿಂದ ಆಹಾರಪದಾರ್ಥವು ಹೆಚ್ಚಾಗಿ ಒದಗಿ ಫಸಲುತ್ತಿಯು ಹೆಚ್ಚುತ್ತೆ. ಕೊಯಂಬತ್ತೂರಿನಲ್ಲಿ ಜಮೀನುಗಳಿಗೆ ಈ ಗೊಬ್ಬರಗಳನ್ನು ಎಕರೆಗೆ ೫೦೦ ಪೌಂಡಿನಷ್ಟು ಹಾಕಿದ್ದರಿಂದ ಫಸಲುತ್ತಿಯು [illegible] ೩೦೦೦ ಪೌಂಡುಗಳ ವರೆಗೆ ಹೆಚ್ಚಿತು.

ಸೂಪರ್‌ಫಾಸ್ಫೇಟ್ ಎಂಬ ಗೊಬ್ಬರವನ್ನು ಮೂಳೆಯಿಂದ ತಯಾರಿಸುತ್ತಾರೆ ಇದರಲ್ಲಿ ಶೇಕಡ ೧೫ರಷ್ಟು ಫಾಸ್ಫಾರಿಕ್ ಆಸಿಡ್ ಕೊಂಚಮಟ್ಟಿಗೆ ನೈಟ್ರೋಜನ್ ಎಂಬ ಯವಕ್ಷಾರವು ಇರುತ್ತೆ, ಇದರಲ್ಲಿರತಕ್ಕ ಫಾಸ್ಫಾರಿಕ್ ಆಸಿಡ್ ಎಂಬ ರಂಜಕ ಧಾತುವು ನೀರಿನಲ್ಲಿ ಸುಲಭವಾಗಿ ಮಿಶ್ರಣವಾಗುವದರಿಂದ ಪೈರಿಗೆ ಒಡನೆ ಒದಗಿ ಫಸಲು ಉತ್ಪತ್ತಿಯನ್ನು ಹೆಚ್ಚಿಸುತ್ತೆ ಆದ್ದರಿಂದ ಈ ತರಹೆ ಗೊಬ್ಬರವನ್ನು ಹೇರಳವಾಗಿ ಉಪಯೋಗಿಸುವುದಿಲ್ಲ. ಯಾಕಂದರೆ ಉಪಯೋಗಿಸತಕ್ಕ ಗೊಬ್ಬರವು ಆ ಸಾಲಿನ ಫಸಲಿಗೆ ಒದಗಿ ಫಸಲುತ್ಪತ್ತಿಯನ್ನು ಹೆಚ್ಚಿಸುತ್ತೆ ಸಾಧಾರಣವಾಗಿ ಎಕರೆ ಒಂದಕ್ಕೆ ೩ ರೂ ಬೆಲೆ ಬಾಳತಕ್ಕ ಗೊಬ್ಬರವನ್ನು ಉಪಯೋಗಿಸಬೇಕು ಕೊಯಂಬತ್ತೂರಿನಲ್ಲಿ ಗೊಬ್ಬರವನ್ನು ಉಪಯೋಗಿಸಿದ್ದ ತಾಕಿನಲ್ಲಿ ಫಸಲುತ್ಪತ್ತಿಯು ೩,೭೩೪ ಪೌಂಡು ಅಷ್ಟು ಗೊಬ್ಬರ ಹಾಕದೆ ಇದ್ದ ತಾಕಿನಲ್ಲಿ ೨,೭೧೪ ಪೌಂಡು ಆಯಿತು

ಈಚಿಗೆ ಟ್ರೈಚಿ ಫಾಸ್ಫೇಟೆಂಬ ಗೊಬ್ಬರವು ತಿರುಚನಾಪಳ್ಳಿ ಡಿಸ್ಟ್ರಿಕ್ಟಿನ ಒಂದು ಕಡೆಯಲ್ಲಿ ಸಿಗುತ್ತಾ ಇದೆ. ಇದರಲ್ಲಿರುವ ಫಾಸ್ಫಾರಿಕ್ ಆಸಿಡ್ ಎಂಬ ಧಾತುರಂಜಕ ಪದಾರ್ಥವು ನೀರಿನಲ್ಲಿ ಮಿಶ್ರವಾಗದೆ ಪರಿವರ್ತನೆ ಇರುವದರಿಂದ ಇದರ ಉಪಯೋಗವು ಬಹಳ ಕಮ್ಮಿಯಾಗಿರುತ್ತೆ ಇದನ್ನು ಪುಡಿಮಾಡಿ ಉಪಯೋಗಿಸುವುದರಿಂದ ಕೊಂಚ ಮಟ್ಟಿಗೆ ಅನುಕೂಲವುಂಟು ಮತ್ತು ಸೊಪ್ಪಿನ ಗೊಬ್ಬರವನ್ನೂ ಹಾಕುವದರಿಂದ ಅನುಕೂಲತೆಯು ಹೆಚ್ಚುತ್ತೆ

ಆದ್ದರಿಂದ ರೈತನು ಅವನ ಜಮಾನಿಗೆ ಅನುಗುಣವಾಗಿ ಮೂಳೆ ಗೊಬ್ಬರವನ್ನಾಗಲಿ ಅಥವಾ ಸೂಪರ್‌ಫಾಸ್ಫೇಟ್ ಗೊಬ್ಬರವನ್ನಾಗಲಿ ಉಪಯೋಗಿಸಬೇಕು ಮೂಳೆ ಗೊಬ್ಬರವನ್ನು ಉಪಯೋಗಿಸುವುದರಿಂದ ಜಮೀನಿನಲ್ಲಿ ಸಾರವು ಹೆಚ್ಚಿ ಫಸಲುತ್ಪತ್ತಿಯು ವರ್ಷ ವರ್ಷ ಹೆಚ್ಚುತ್ತೆ ಸೂಪರ್ ಗೊಬ್ಬರವನ್ನು ಉಪಯೋಗಿಸುವದರಿಂದ ಸದ್ಯ ಫಲ ಉಂಟಾಗುತ್ತೆ ಈ ಗೊಬ್ಬರವನ್ನು ಸುಣ್ಣವಿರುವ ಜಮೀನುಗಳಿಗೆ ಉಪಯೋಗಿಸುವದರಿಂದ ಗುಣವು ಬಹಳ ಮಟ್ಟಿಗೆ ಕಡಿಮೆ

ರೆ ಗೆ

ಪತ್ರವ್ಯವಹಾರ

ಅಯ್ಯಾ ಪತ್ರಕರ್ತರೇ,

ಊರ ಜನರು ದುಷ್ಟ ಜನರನ್ನು ಶಿಕ್ಷೆಗೆ ಒಳಪಡಿಸುವದಕ್ಕಾಗಿ ಸರಕಾರದವರಿಗೆ ಸಹಾಯ ಮಾಡಬೇಕು, ಊರ ಜನರ ಸಹಾಯವಿಲ್ಲದಿದ್ದರೆ ದುಷ್ಟ ಜನರನ್ನು ಹಿಡಿದು ಶಿಕ್ಷಿಸುವದು ಸರಕಾರದವರಿಗೆ ಅಸಾಧ್ಯವೆಂಬದಾಗಿಯೂ, ಈಗ ಇಲ್ಲಿ ನಡೆಯುತ್ತಿರುವ ಕಳವು ಸುಲಿಗೆ ಇತ್ಯಾದಿಗಳಲ್ಲಿ ಊರ ಜನರ ಸಹಾಯವು ಸರಕಾರದವರಿಗಿಲ್ಲವೆಂಬದಾಗಿಯೂ ಕೆಲವು ಪೋಲೀಸ್ ಆಫೀಸರರ ವಾದವಾಗಿರುವದಂತೆ!

ದುಷ್ಟ ಜನರನ್ನು ಶಿಕ್ಷೆಗೆ ಗುರಿಪಡಿಸುವ ಪೋಲೀಸ್ ಪೌಜಿನವರಿಗೆ ಊರ ಜನರ ಸಹಾಯವು ಅಗತ್ಯವೇನೋ ನಿಜ ಇದು ಊರ ಜನರ ಕರ್ತವ್ಯವೂ ಆಗಿದೆ ಆದರೆ ಈ ಪೌಜಿನವರಿಗೆ ಸಹಾಯಮಾಡಿ, ದುಷ್ಟ ಜನರಿಗೆ ವಿರೋಧವಾಗಿ ಸಾಕ್ಷಿ ಹೇಳಿದವರಿಗೆ ಸಿಕ್ಕುವ ಫಲವೇನು? ಹೊಟ್ಟೆ ಹೊರಕೊಳ್ಳುವ ಒಗ್ಗೆ ಮಾಡುವ ದಿವಸದ ೬—೮ ಆಣೆ ಸಂಪಾದನೆಯನ್ನು ಬಿಟ್ಟು, ಕೆಲವು ದಿವಸ ಪೋಲೀಸ್ ಸ್ಟೇಶನಿಗೂ, ಮತ್ತೆ ಕೆಲವು ದಿವಸ ತನಕಿ ಆಫೀಸರರ ಕಚೇರಿ ನಡೆಯುವ ಊರಿಗೂ ನಡೆಯಬೇಕು. ಪೋಲೀಸ್ ಸ್ಟೇಶನಿಗೆ ನಡೆದು ಸಬ್ ಇನ್ಸ್‌ಪೆಕ್ಟರರನ್ನೋ, ಸರ್ಕಲ್ ಇನ್ಸ್‌ಪೆಕ್ಟರರನ್ನೋ, ಪ್ರೋಸಿಕ್ಯೂಶನ್ ಇನ್ಸ್‌ಪೆಕ್ಟರರನ್ನೋ ಕಾದು ನಿಲ್ಲುವ ದಿವಸಗಳಲ್ಲಿ ಬತ್ತೆ ಸಿಗದು ತನಕಿ ಆಫೀಸರರ ಕಚೇರಿಗೆ ನಡೆಯುವ ದಿವಸ ಊರಲ್ಲಿಯಾದರೆ ನಾಲ್ಕಾಣೆ ಬತ್ತೆ ಸಿಗುವದು ಪರಊರಲ್ಲಿಯಾದರೆ ಮೈಲಿಗೆ ಒಂದು ದುಡ್ಡು ಪ್ರಕಾರ ಬತ್ತೆ ಸಿಕ್ಕುವದು. ತನಕಿ ಆಫೀಸರರು ಮುಲ್ಕಿಗೆ ಸರ್ಕಿಟು ಹೋಗಿದ್ದರೆ ಅಲ್ಲಿಗೆ ಸಾಕ್ಷಿಗಾರರು ಹೋಗಲೇಬೇಕು. ಮೈಲಿಗೆ ೧ ದುಡ್ಡು ಪ್ರಕಾರ ೬ ಆಣೆ ದಾರಿ ಖರ್ಚು. ಅಲ್ಲಿ ಸಾಕ್ಷಿ ಹೇಳಿದ ದಿವಸದಲ್ಲಿ ದಿವಸಕ್ಕೆ ೪ ಆಣೆಯಂತೆಯೂ ಬತ್ತೆ ಸಿಕ್ಕುವದು ಈಗಿನ ಕಾಲದಲ್ಲಿ ಒಬ್ಬ ಕೂಲಿಯವನಿಗಾದರೂ ೬—೭ ಆಣೆ ಕೂಲಿ ಸಿಗುವದು ಆದರೆ ಸಾಕ್ಷಿ ಹೇಳಲಿಕ್ಕೆ ಹೋದರೆ ಸಿಕ್ಕುವ ಹಣದಿಂದ ತನ್ನ ಹೊಟ್ಟೆ ಹೊರಕೊಳ್ಳುವದೇ ಕಷ್ಟವಾಗುವದರಿಂದ ಹೆಂಡತಿ ಮಕ್ಕಳನ್ನು ಉಪವಾಸ ಹಾಕಬೇಕಾಗುವದು ಸಿಕ್ಕುವ ಬತ್ತೆಯು ಅತೀ ಅಲ್ಪವಾಗಿರುವದರಿಂದಲೂ ಕೋರ್ಟು ಕಚೇರಿಗಳಿಗೆ ನಡೆದು ನಡೆದು ಬೇಸತ್ತು ಹೋಗುವದರಿಂದಲೂ ಪೋಲಿಸರಿಗೆ ಊರ ಜನರ ಸಹಾಯವು ದೊರಕುವದು ಕಷ್ಟವಾಗಿದೆಂದು ಹೇಳಬಹುದೋ? ಸಾಕ್ಷಿ ಹೇಳಲಿಕ್ಕೆ ಹೋಗಿ ಸಿಕ್ಕುವ ಭತ್ತೆಯನ್ನೂ, ಮಾಡುವ ಸಮಯ ವೆಚ್ಚವನ್ನೂ ತಿಳಿದವರು ಮೇಲಿನ ಪ್ರಶ್ನೆಗೆ ಒಪ್ಪದಿರಲಾರರು ಇದೊಂದು ಕಷ್ಟ. ಮತ್ತೊಂದು ಕಡೆಯಲ್ಲಿ ಇನ್ನೊಂದು ವಿಧದ ಕಷ್ಟವೂ ಇದೆ ದುಷ್ಟ ಜನರ ಪತ್ತೆ ಮಾಡಿ ಕೊಟ್ಟವರಮೇಲೆ-ಅವರ ಪತ್ತೆಯನ್ನು ಪೋಲಿಸರಿಗೆ ಹೇಳಿ ಕೊಟ್ಟವರ ಮೇಲೆಯೇ ಅನೇಕಾವರ್ತಿ ಪೋಲಿಸರು ಮಾರ್ಮಲೆತು ಬೀಳುವ ಸಂಭವವೂ ನಡೆಯುತ್ತಿದೆ. ಸುಳ್ಳು ರಿಪೋರ್ಟು ಮಾಡಿದ್ದಾನೆ ಎಂಬ ದೂರೂ ಅನೇಕಾವರ್ತಿ ಸಾಕ್ಷಿಗಾರರ ಮೇಲೆ ಹೊರಿಸುವ ಸಂಭವವೂ ಇದೆ. ಸಾಕ್ಷಿ ಹೇಳುವಾಗ ಪೋಲಿಸರ ದಾರಿಗೆ ಸರಿಯಾಗಿ ನಡೆಯದಿದ್ದರೆ ಮತ್ತೊಂದು ವಿಧದ ಕಷ್ಟವು ಈ ಸಾಕ್ಷಿಗಾರನಿಗೆ ಬಂದೊದಗುವದು. ಸಾಕ್ಷಿ ಹೇಳುವದರಿಂದ, ಪೋಲಿಸರಿಗೆ ರಿಪೋರ್ಟು ಮಾಡುವದರಿಂದ ಉಂಟಾಗುವ ಕಷ್ಟಗಳು ಅಪಾರವಾಗಿರುವದರಿಂದಲೇ ಊರ ಜನರ ಸಹಾಯವು ಈ ಪೌಜಿನವರಿಗೆ ದೊರಕುವದು ಕಷ್ಟಸಾಧ್ಯವಾಗಿದೆ "ನಮಗೇನು? ಬೇಕಾದರೆ ಮಾಡಿಕೊಳ್ಳಲಿ" ಎಂಬದಾಗಿ ಊರ ಜನರಲ್ಲಿರುವ ವಾಡಿಕೆ ಮಾತುಗಳು. ಇಂಥಾ ಮಾತುಗಳು ದೂರವಾಗಿ ಊರ ಜನರೂ ಪೋಲಿಸ್ ಪೌಜಿನವರೂ ಪರಸ್ಪರ ಒಂದಾದರೇನೇ ದುಷ್ಟ ಜನರ ಪತ್ತೆಯಾಗುವದು ಊರಲ್ಲಿ ಕಳವು ಸುಲಿಗೆಗಳು ಕಡಿಮೆಯಾಗುವವು ಈ ವಿಷಯಕ್ಕೆ ಮೇಲಾಫಿಸರರು ನಿಗಾಕೊಟ್ಟು ಸಾಕ್ಷಿಗೆ ಹೋಗುವದರಿಂದ ಉಂಟಾಗುವ ಪೋಲೀಸರಿಗೆ ರಿಪೋರ್ಟು ಮಾಡುವದರಿಂದುಂಟಾಗುವ ಕಷ್ಟನಷ್ಟಗಳನ್ನು ಪರಿಹರಿಸಿದರೆ ಊರ ಜನರ ಸಹಾಯವು ಪೋಲಿಸರಿಗೆ ಸಿಗುವದರಲ್ಲಿ ಅನುಮಾನವಿರದು.

ಬೇಸತ್ತ ಸಾಕ್ಷಿಗಾರ.

ಸ್ವಾಮೀ ಪತ್ರಕರ್ತರೇ,

ವೆಬ್ಸ್ಟರ್ ಮಾರ್ಕೆಟಿನಲ್ಲಿ ಸರಿಯಾದ, ಜನರ ಆರೋಗ್ಯಕ್ಕೆ ತಕ್ಕದಾದ, ಆಹಾರ ಜಿನಸುಗಳು ಮಾರಲ್ಪಡುತ್ತವೋ ಏನೆಂಬ ವಿಚಾರ ಮಾಡಿಕೊಳ್ಳಲು ಮಾರ್ಕೆಟಿನಲ್ಲಿ ಜವಾಬ್ದಾರಿಯುಳ್ಳ ಒಬ್ಬ ಆಫೀಸರನನ್ನು ನೇಮಿಸಬೇಕೆಂತ ಪಟ್ಟಣಿಗ ರೆಂಟುದಾರರು ಕಳೆದ ಸಂಚಿಕೆಯಲ್ಲಿ ವಿಜ್ಞಾಪಿಸಿಕೊಂಡಿದ್ದರಷ್ಟೆ. ವೆಬ್ಸರ್ ಮಾರ್ಕೆಟಿನಲ್ಲಿ ಆರೋಗ್ಯ ಸಂಬಂಧ ತರ್ಬಿತು ಪಡೆದ ಒಬ್ಬ ಸನಿಟರಿ ಆಫೀಸರನನ್ನು ನೇಮಿಸಬೇಕೆಂದು ಮುನ್ಸಿಪಾಲ್ ಕೌನ್ಸಿಲಿನಲ್ಲಿ ನಿರ್ಣಯಿಸೋಣಾಗಿರುವದಂತೆ! ಸ್ವಾಮೀ, ಈ ವಾರ್ತೆ ಹೌದೋ? ಹೌದಾದರೆ ಯಾರು ನೇಮಿಸಲ್ಪಟ್ಟಿರುವರು? ಸನಿಟರಿ ತರ್ಬಿತು ಪಡೆದವರೋ? ಇಂಥಾ ಆಫೀಸರರು ಮಾರ್ಕೆಟಿನಲ್ಲಿ ಎಷ್ಟು ಗಂಟೆಯ ಕಾಲವಿರಬೇಕೆಂಬ ನಿಯಮವಿದೆ? ಮಧ್ಯಾಹ್ನದ ನಂತರ, ೧೦, ೧೧ ಗಂಟೆಯ ನಂತರ ಇವರು ಮಾರ್ಕೆಟಿನಲ್ಲಿರಬೇಕೆಂಬ ನಿಯಮವಿಲ್ಲವೋ? ಮಧ್ಯಾಹ್ನದನಂತರ ಮೀನು ಇತ್ಯಾದಿ ಮಾರುವಲ್ಲಿ ತಂಟೆತಕರಾರು ನಡೆಯದಂತೆ ನೋಡಿಕೊಳ್ಳಲಿಕ್ಕೂ, ಕೊಳಕು ಮೀನು ಮಾರದಂತೆ ಜಾಗರೂಕತೆ ನೋಡಿಕೊಳ್ಳಲಿಕ್ಕೂ ಪ್ರತ್ಯೇಕ ಇನ್ನೊಬ್ಬ ಆಫೀಸರರು ಇರುವರೋ? ಯಾ ಬೆಳಗಿನ ಆಫೀಸರೆಯೋ? ಏನೆಂಬ ವಿಚಾರವು ನನಗೆ ಅಗತ್ಯವಾಗಿ ಬೇಕಾಗಿರುವದರಿಂದ ಈ ಪ್ರಶ್ನೆಗೆ ತಕ್ಕ ಉತ್ತರವನ್ನು ಯಾರಾದರೂ ಕೊಡುತ್ತಿದ್ದರೆ ತುಂಬಾ ಉಪಕಾರವಾಗುತ್ತಿತ್ತು

ಇತಿ, ವಿಚಾರಿ.

ಇಂಥಾ ಸುಲಿಗೆಗಳು ಸಂಭವಿಸಿರುವುದೆಂದು ಅಲ್ಲಲ್ಲಿ ಆಡಿಕೊಳ್ಳುವರು ಕಳ್ಳರು ಕಲವು ಕಡೆಗಳಲ್ಲಿ ಹಗಲಲ್ಲಿಯೂ ಮತ್ತೆ ಕೆಲವು ಕಡೆಗಳಲ್ಲಿ ಸಾಯಂಕಾಲದಲ್ಲಿಯೂ, ಇನ್ನು ಕೆಲವು ಕಡೆಗಳಲ್ಲಿ ರಾತ್ರೆ ಕಾಲದಲ್ಲಿಯೂ ಮನೆಗಳನ್ನು ಒಳನುಗ್ಗಿದರೆಂತ ಕೇಳಿಸುತ್ತಿರುವುದು ಇದೆಲ್ಲವೂ ನಿಜವೋ ಸುಳ್ಳೋ ಎಂತ ಬೇಕಾದ ರೀತಿ ಶೋಧನ ನಡಿಸಿ ಜನರಲ್ಲಿ ಗದರಿಕೆಯು ಉಂಟಾಗದಂತೆ ನೋಡಿಕೊಳ್ಳಬೇಕಾದದ್ದು ಯಾರು? ಇಂಥಾ ಸುಲಿಗೆಗಳಿಗೆ ಒಳಬೀಳುವ ವಾಪಿಷ್ಟರು ಬೀದಿಗಳಲ್ಲಿ ಪೋಲೀಸು ಸಹಾಯದ ಒಗ್ಗೆ ಎಷ್ಟು ಕೂಗಿದರೂ, ಹತ್ತರವಿರುವ ಜನರು ಪೋಲೀಸು ಪೋಲೀಸು ಎಂತ ಎಷ್ಟು ಕರದರೂ ಸಾಧಾರಣ ೯ ಯಾ ೧೦ ಗಂಟೆ ರಾತ್ರೆಯ ತನಕ ಬೀದಿಗಳಲ್ಲಿ ಒಬ್ಬ ಪೋಲೀಸು ಜವಾನನಾದರೂ ನೋಡಸಿಕ್ಕನು. ಇದರ ಕಾರಣವೇನು? ನಿನ್ನೆ ರಾತ್ರೆ ಮಾರ್ಕೆಟಿನ ಒಳಗೆ ಇಂಥಾ ಸುಲಿಗೆ ಪ್ರಯತ್ನಗಳನ್ನು ಮಾಡುತ್ತಿರುವಾಗ ಜನರಿಂದ ಹಿಡಿಯಲ್ಪಟ್ಟ ಇಬ್ಬರು ಕಳ್ಳರು ಮಲೆಬಾರಿನವರೆಂತ ತಿಳಿಯುತ್ತೇವೆ ಕಳ್ಳರ ಸುಳಿದಾಟವನ್ನು ನೋಡಿದವರಲ್ಲಿ ಕೆಲವರು ಕಳ್ಳರು ಮಲೆಬಾರಿನವರೇ ಎಂತ ಹೇಳುವರು ಸುಲಿಗೆಯು ಕಾಲವು ಇಷ್ಟರವರೆಗೆ ಸಾಧಾರಣವಾಗಿ ಸಾಯಂಕಾಲ ೭ ಗಂಟೆಯಿಂದ ೧೦ರ ತನಕವಾಗಿದೆ ಆದ್ದರಿಂದ ಕಳ್ಳರು ಸಾಯಂಕಾಲದ ಮೈಲ್ ಬಂಡಿಯಲ್ಲಿ ಒಂದು ಇಲ್ಲಿ ಬೇಕಾದಂತೆ ವಿಹರಿಸಿ ಬೆಳಗ್ಗಿನ ಮೈಲ್ ಬಂಡಿಯನ್ನು ಬಿಟ್ಟು ಹೋಗುವರೆಂತ ಊಹಿಸಬಹುದು ಇಂಥಾ ಊಹನೆಗಳ ಮತ್ತು ಶೋಧನೆಗಳ ಕರ್ತವ್ಯವು ಪೋಲೀಸಿನವರದ್ದಾಗಿದೆ. ಇತ್ತಲಾಗೆ ಒಂದೆರಡು ವರುಷಗಳಿಂದ ಸಂಭವಿಸಿದ ಕೆಲವು ಚಿಕ್ಕ ದೊಡ್ಡ ಕಳವುಗಳು ಪತ್ತೆಯಾಗದೆ ಹೋದ್ದರಿಂದ ಕಳ್ಳರು ಪ್ರಕೃತ ತಮ್ಮ ಕಾರ್ಯಸಾಧನೆಯಲ್ಲಿ ಧೈರ್ಯಗೊಂಡು ಈಗ ಭಯಂಕರವಾದ ರೀತಿಯಲ್ಲಿ ವರ್ತಿಸಿ ಜನರನ್ನು ತಲ್ಲಣಗೊಳಿಸುತ್ತಿರುವರು ಪೋಲಿಸು ಸಿಬಂದಿಯು ಸಮರ್ಪಕವಾದ ರೀತಿಯಲ್ಲಿದ್ದು ಜನರಿಗೆ ಇವರ ಮೂಲಕ ದೊರಕುವ ಪ್ರಯೋಜನವು ಹೆಚ್ಚುವಂತೆ ಪ್ರಜೆಗಳ ಮೇಲಣ ಪ್ರೀತಿಯಿಂದ ಸಬ್ ಇನ್ಸಪೆಕ್ಟರರ ಸಂಖ್ಯೆಯನ್ನು ಸರಕಾರದವರು ಹೆಚ್ಚಿಸಿದರು. ಇವರ ಕೆಲಸದ ಮೇಲ್ವಿಚಾರಕ್ಕಾಗಿ ಒಳ್ಳೇ ಯೋಗ್ಯತೆಯುಳ್ಳ ಸರ್ಕಲ್ ಇನ್ಸಪೆಕ್ಟರರು ನೇಮಕವಾಗುವಂತೆ ಈ ಹುದ್ದೆಯ ಸಂಬಳವನ್ನು ಹೆಚ್ಚಿಸಿದರು. ಇಷ್ಟರಲ್ಲಿ ತೃಪ್ತಿ ಹೊಂದದೆ ಇತ್ತಲಾಗೆ ಒಬ್ಬೊಬ್ಬ ಅಸಿಸ್ಟಾಂಟ್ ಸುಪರಿಂಟೆಂಡೆಂಟರ ನೇಮಕವನ್ನು ಮಾಡಿರುತ್ತಾರೆ. ನಮ್ಮಲ್ಲಿಯ ಪೋಲಿಸು ಸಿಬಂದಿಯು ಈ ರೀತಿ ಪೂರ್ಣವಾಗಿರುವುದು. ಹೀಗಿದ್ದರೂ ಇತ್ತಲಾಗೆ ಕೆಲವು ಸಮಯದಿಂದ ಮಂಗಳೂರಲ್ಲಿ ಪ್ರಜಾಜನರು ಕಳ್ಳರ ಬಾಧೆಗೆ ನಿರಂತರ ಗುರಿಯಾಗಲು ಕಾರಣವೇನು? ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಈ ವಿಷಯ ಬೇಕಾದ ವಿಚಾರ ನಡಿಸಿ, ಈ ಪಟ್ಟಣದಲ್ಲಿ ಜನರು ಕಳ್ಳರ ಅಂಜಿಕೆಯಿಲ್ಲದೆ ನಿರ್ಭೀತರಾಗಿರುವಂತೆ ತಕ್ಕ ಏರ್ಪಾಡು ಮಾಡಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

ಯುದ್ಧ ಸಮಾಚಾರ.

ತಾ. ೯ನೇ ಫೆಬ್ರುವರಿ.

ನ್ಯೂಪೋರ್ಟಿನಲ್ಲಿ ತೋಪು ಕಾಳಗ ನಡೆಯುತ್ತಿದೆ ಬ್ರಿಟಿಷ ಸೇನೆಯಲ್ಲಿ ಫೆಬ್ರವರಿ ತಾ ೪ರ ವರೆಗೆ ೧೦೪,೦೦೦ ಮಂದಿ ಪ್ರಾಣಾಪಾಯಪಟ್ಟಿರುವರೆಂತ ಬ್ರಿಟಿಷ ಪ್ರಧಾನ ಮಂತ್ರಿಯಾಗಿರುವ ಮಿ। ಅಸ್ಕ್ವಿತರವರು ಹೇಳಿರುವರು

'ಉತ್ತರ ಕಡಲಲ್ಲಿ ನಡೆದ ನೌಕಾವಳಿ ಸಂಗ್ರಾಮದಲ್ಲಿ ನಷ್ಟಪಟ್ಟ ಜರ್ಮನರ "ಬ್ಲುಚರ್" ನಾವೆಯಲ್ಲಿ ಪ್ರಾಣಾಪಾಯ ಹೊಂದಿದವರ ಸಂಖ್ಯೆಯನ್ನು ಬಿಟ್ಟು ಈ ವರೆಗೆ ಜರ್ಮನ ನೌಕಾವಳಿಯಲ್ಲಿ ೧೫,೦೦೦ ಮಂದಿ ನಷ್ಟವಾದರೆಂತ ಅಮ್ಸ್ಟರ್‌ಡಮಿನಲ್ಲಿ ಪ್ರಕಟವಾಗಿದೆ ಜರ್ಮನರ ನಷ್ಟವಾದ ಹಡಗಗಳ ಪಟ್ಟಿಯಲ್ಲಿ ೮ ಡಿಸ್ಟ್ರಾಯರ್ ಮತ್ತು ೨ ಜಲಾಂತರ್ಗಾಮಿ ನಾವೆಗಳ ಹೊಸ ಸಂಖ್ಯೆಯು ಈಗ ತಾನೇ ಸೇರಿಸಲ್ಪಟ್ಟಿರುವದು

ಕೈಸರರು ಪೂರ್ವ ರಣರಂಗಕ್ಕೆ ಹೋಗಿರುವರು. ವಿಸ್ಚುಲ ಮತ್ತು ಬೂರ ನದಿಗಳ ಎಡದಡಗಳಲ್ಲಿ ತೋಪು ಕಾಳಗವು ನಡೆಯುತ್ತಿದೆ ಆದರೆ ಶತ್ರುಗಳು ಮುಂದಕ್ಕೆ ಬಂದು ಯುದ್ಧ ಮಾಡದೆ ಬಲಕಾಯಿಸುವ ಕೆಲಸದಲ್ಲಿರುವರು ಬಕೋವಿನದ ಯುದ್ಧ ಸ್ಥಳಗಳಲ್ಲಿ ಶತ್ರುಗಳ ವಿಪರೀತ ಸೇನೆಯು ರುಶ್ಯರ ಮೇಲೆ ಹಲ್ಲಾ ಮಾಡಿದ್ದುದರಿಂದ ರುಶ್ಯನರು ಹಿಂದಕ್ಕೆ ಸರಿದಿರುವರು ಆದರೆ ಕಾರ್ಪಥೇನಿಯ ಮತ್ತು ಬಕೋವಿನದ ದಕ್ಷಿಣದಲ್ಲಿ ನಡೆಯುವ ಕದನಗಳು ರುಶ್ಯರ ಗುಣಕ್ಕಾಗಿಯೇ ಇವೆ.

ತಾ. ೧೦ನೇ ಫೆಬ್ರುವರಿ.

ಜರ್ಮನರು ಎಪ್ರೆ ಮತ್ತು ಫರ್ನೆಸಿಗೆ ಗುಂಡು ಹಾರಿಸಿರುವರು ಮಿತ್ರರು ತಮ್ಮ ನೆಲೆಗಳನ್ನು ಕಾಪಾಡಿಕೊಂಡಿದ್ದಾರೆ

ವಿಸ್ಚುಲದ ಬಲಪಾರ್ಶ್ವದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ ರುಶ್ಯನರು ವಿಸ್ಚುಲದ ಎಡಪಾರ್ಶ್ವದಲ್ಲಿ ಮುಂದರಿಯುತ್ತಲಿರುವರು ಕಾರ್ಪಥೇನಿಯದಲ್ಲಿ ೩೫೦೦ ಶತ್ರುಗಳು ರುಶ್ಯನರ ಸೆರೆಬಿದ್ದಿರುವರು

ಸೂವೆಜ್ ಕಾಲುವೆಯಲ್ಲಿ ಅನಂತರ ಕದನಗಳು ನಡೆಯಲಿಲ್ಲ ಅರಬಿಯರೂ ಅನಟೋಲಿಯನ್ ಮತ್ತು ತುರ್ಕಿ ಸೈನಿಕರು ಬ್ರಿಟಿಷರಿಗೆ ಶರಣಾಗತರಾಗುತ್ತಿರುವರು ಇವರು ತುರ್ಕಿ ಸೇನೆಗೆ ಹೋಗಿ ಸೇರಲು ಪ್ರಯತ್ನಿಸಿದರೆಂತಲೂ ಆದರೆ ಜರ್ಮನ್ ಮತ್ತು ತುರ್ಕಿ ಸೇನಿಕರು ಗುಂಡು ಹಾರಿಸುವದನ್ನು ಕಂಡು ಬ್ರಿಟಿಷರಿಗೆ ಶರಣಾಗತರಾದರೆಂದೂ ಕೆಲವರು ಹೇಳುವರು ಸೂವೆಜಿನಲ್ಲಿ ನಡೆದ ಇತ್ತಲಾಗಿನ ಕದನದಲ್ಲಿ ಶತ್ರುಗಳಲ್ಲಿ ಸೆರೆ ಬಿದ್ದವರ ಮತ್ತು ತಪ್ಪಿಸಿಕೊಂಡ ೪ ಸೈನಿಕರು ವಿನಹಾ ಯಾರೂ ಸೂವೆಜ್ ಕಾಲುವೆಯ ಪಶ್ಚಿಮ ದಡಕ್ಕೆ ತಲಪಲಿಲ್ಲ ಇಸ್ಮಾಲ್ಯದ ಯಾವ ಕಟ್ಟಡಕ್ಕೂ ಶತ್ರುಗಳ ಗುಂಡು ಬೀಳಲಿಲ್ಲ ಪಟ್ಟಣದ ಒಳಗೆ ಗುಂಡುಗಳು ಪ್ರವೇಶಿಸಿದ್ದೂ ಇಲ್ಲ ಶತ್ರುಗಳ ಹೆಚ್ಚಿನ ಗುಂಡುಗಳು ಟಿಮ್ಸಾ ಸರೋವರಕ್ಕೆ ಬಿದ್ದಿರುವದು

ತಾ. ೧೧ನೇ ಫೆಬ್ರುವರಿ.

ಬ್ರಿಟಿಷ ಕರಾವಳಿಯನ್ನು ಮುಚ್ಚಿ ಬಿಡುವ ಸಂಬಂಧ ಜರ್ಮನರು ತಟಸ್ಥ ರಾಜ್ಯಗಳಿಗೆ ಕೊಟ್ಟ ಪ್ರಕಟನೆಯಲ್ಲಿ ಬ್ರಿಟಿಷ ನೌಕಾವಳಿಯ ಉದ್ದೇಶವು ಜರ್ಮನ ಸೇನಾ ಬಲವನ್ನು ಮುರಿಯುವದು ಮಾತ್ರವೇ ಅಲ್ಲ, ಜರ್ಮನ ದೇಶದ ಜನರೆಲ್ಲಾ ಹೊಟ್ಟೆಗಿಲ್ಲದೆ ಬಳಲುವ ಹಾಗೆ ಮಾಡಿ ಅವರನ್ನು ವಿನಾಶ ಮಾಡುವ ಹಾಗೆ ಪ್ರಯತ್ನಿಸುವದಾಗಿದೆ. ತಟಸ್ಥ ರಾಜ್ಯಗಳು ಬ್ರಿಟಿಷರ ಈ ಆಲೋಚನೆಗೆ ಅನುಮತಿಸಿದ್ದು ಮಾತ್ರವಲ್ಲ, ಜರ್ಮನಿಗೆ ದವಸಧಾನ್ಯಗಳು ಹೋಗದ ಹಾಗೆ ತಡೆ ಕಟ್ಟುವದಕ್ಕೆ ಅವರಿಗೆ ಸಹಾಯ ಮಾಡಿರುವರು ತಟಸ್ಥ ರಾಜ್ಯಗಳ ಪ್ರಯೋಜನದ ಬಗ್ಗೆ ಈ ಯುದ್ಧವು ಬೇಗನೇ ಮುಗಿಯುವದು ಒಳ್ಳೇದು. ಆದುದರಿಂದ ಯುದ್ಧ ಪ್ರಾಂತ್ಯದಿಂದ ಬೇಗನೇ ತಮ್ಮ ಹಡಗಗಳನ್ನು ತೆಗೆಯುವ ಹಾಗೆ ತಟಸ್ಥ ರಾಜ್ಯಗಳಿಗೆ ತಕ್ಕ ಸಮಯವು ಕೊಡೋಣಾಗಿದೆಂತ ಸೂಚಿಸೋಣಾಗಿಯದೆ.

ಪಶ್ಚಿಮ ರಣರಂಗದಲ್ಲಿ ವಿಶೇಷ ಕದನಗಳೇನೂ ನಡೆಯಲಿಲ್ಲ.

ಕೈಸರರು ಐರ್‌ಹೆಲ್ಸಿಕವರಿಗೆ ಹೋಗಿರುವರೆಂತ ಬರ್ಲಿನಿನಿಂದ ತಂತಿ ಬಂದಿರುವದು."

ಪೂರ್ವ ಪ್ರಶ್ಯದಲ್ಲಿ ಜರ್ಮನರು ದೊಡ್ಡ ಸೇನೆಯನ್ನು ತಂದೊಡ್ಡಿ ಕದನಕ್ಕೆ ಮುಂದೊತ್ತಿರುವರು. ಪೋಲೆಂಡಿನ ಕದನದಲ್ಲಿ ಜರ್ಮನರು ವಿಶೇಷ ನಷ್ಟಪಟ್ಟಿರುವರು ಕಾರ್ಪಥೇನಿಯದಲ್ಲಿ ಹಲ್ಲಾ ಮಾಡಿದ ಜರ್ಮನರು ಹಿಮ್ಮೆಟ್ಟಿರುವರು. ರುಶ್ಯನರು ಪುನಃ ೧೫೩೪ ಶತ್ರುಗಳನ್ನು ಸೆರೆಹಿಡಿದಿರುವರು

"ಬ್ರೆಸ್‌ಲೋ" ಎಂಬ ಶತ್ರುಗಳ ಯುದ್ಧ ನಾವೆಯು ಕ್ರಿಮಿಯಾದಲ್ಲಿರುವ ಯಾಲ್ಟ ಎಂಬ ಸ್ಥಳಕ್ಕೆ ಗುಂಡು ಹಾರಿಸಿರುವದು ಇದರಿಂದ ನಾಲ್ಕು ಅಂಗಡಿಗಳಿಗೆ ಹಾನಿಯಾಗಿರುವದು ರುಶ್ಯನರ ನೌಕಾವಳಿಯು ತುರ್ಕರ ಮೂರು ಹಡಗಗಳನ್ನು ಮುಣುಗಿಸಿರುವದು

ಸೋಮಾಲಿಲೆಂಡಿನಲ್ಲಿ ಬ್ರಿಟಿಷರಿಗೆ ಎದುರುಬಿದ್ದ ದರ್ವಿಶರ ಕೋಟೆಗಳನ್ನು ಹಿಂದೂಸ್ಥಾನದಿಂದ ಕಳುಹಿಸಲ್ಪಟ್ಟ ಸೇನಿಕರು ಕೆಡವಿ ಅವರನ್ನು ಸೋಲಿಸಿದರು

ದಕ್ಷಿಣ ಆಫ್ರಿಕದಲ್ಲಿ ಯೂನ್ಯನ್ ಸರಕಾರಕ್ಕೆ ವಿರೋಧವಾಗಿ ದಂಗೆ ಎದ್ದು ಜರ್ಮನರಿಗೆ ಕೂಡಿಕೊಂಡ ಮೆರಿಟ್ಜನು ಜರ್ಮನರಿಗೆನೇ ವಿಶ್ವಾಸಘಾತಕ ಮಾಡಿದ್ದನೆಂದು ಜರ್ಮನರಿಗೆ ತಿಳಿದು ಬಂದುದರಿಂದ ಜರ್ಮನರು ಮೆರಿಟ್ಜನನ್ನು ಕೊಂದು ಬಿಟ್ಟರು ಎಂತ 'ಪ್ರಿಟೋರಿಯಾ ನ್ಯೂಸ್' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ

ತಾ. ೧೨ನೇ ಫೆಬ್ರುವರಿ.

ಯುದ್ಧ ಪ್ರಾರಂಭವಾಗುವ ಕಾಲದಲ್ಲಿ ಜರ್ಮನರಿಗೆ ೨೮ ಜಲಾಂತರ್ಗಾಮಿ ನಾವೆಗಳು ಇದ್ದವೆಂದೂ ೧೬ ಜಲಾಂತರ್ಗಾಮಿ ಕಟ್ಟಲ್ಪಡುತ್ತಿದ್ದವೆಂದೂ ಮಿ। ಚರ್ಚಿಲರವರು ಬ್ರಿಟಿಷ ಕಾಮನ್ಸ್ ಸಭೆಯಲ್ಲಿ ಹೇಳಿರುವರು

ಕಪ್ಪು ಸಮುದ್ರದಲ್ಲಿ ರುಶ್ಯನರ ಡಿಸ್ಟ್ರಾಯರ್ ಎಂಬ ಯುದ್ಧ ನಾವೆಯು ಟ್ರಿಬಿಜೊಂಡಿನಲ್ಲಿ ಶತ್ರುಗಳ ಬತ್ತೇರಿಗಳಿಗೆ ಗುಂಡು ಹಾರಿಸಿ, ಮೂರು ಬತ್ತೇರಿಗಳಿಗೆ ಹಾನಿಮಾಡಿರುವದು. ಪ್ಲಾಟಾನ ಮತ್ತು ಪ್ಲೈಜ್ ಎಂಬಲ್ಲಿಯ ಸಂಕಗಳನ್ನು ಹಾಳುಮಾಡಿರುವವು ಅದಲ್ಲದೆ ೫೦ ಹಡಗಗಳನ್ನು ಮುಣುಗಿಸಿರುವದು

ರುಶ್ಯನರಿಗೆ ದಿನ ಒಂದಕ್ಕೆ ಯುದ್ಧದ ಬಗ್ಗೆ ೧,೪೦೦,೦೦೦ ಪವನುಗಳ ಖರ್ಚಾಗುತ್ತಿದೆ

ತಾ. ೧೩ನೇ ಫೆಬ್ರುವರಿ.

ಬ್ರಿಟಿಷರ ೩೪ ವಾಯುನಾವೆಗಳೂ ಸಮುದ್ರ ನಾವೆಗಳೂ ಬ್ರುಗೆಸ್, ಜೆಬ್ರುಗೆ, ಬ್ಲೆಂಕೆನ್‌ಬರ್ಗ ಮತ್ತು ಒಸ್ಟೆಂಡಿನ ಮೇಲೆ ೨೪ ತಾಸುಗಳ ಕಾಲ ಹಲ್ಲಾ ಮಾಡಿದವು. ಒಸ್ಟೆಂಡಿನಲ್ಲಿ ವಿಶೇಷ ಹಾನಿಯಾಗಿರುವದು ಇಲ್ಲಿಯ ರೈಲ್ವೆ ಸ್ಟೇಶನ್ ಬಹುಶ್ಯಾ ಪೂರ್ಣ ಸುಟ್ಟುಹೋಗಿರಬಹುದು ಬ್ಲೆಂಕೆನ್‌ಬರ್ಗ ಸ್ಟೇಶನಿಗೆ ಅಪಾಯ ಸಂಭವಿಸಿರುವದು. ರೈಲ್ವೇ ಸ್ಟೇಶನ್ ಹಾಳಾಗಿರುವದು. ಜಿಬ್ರುಗೆ ಕರ್ಕೆಯಲ್ಲಿ ಜರ್ಮನರ ಫಿರಂಗಿಗಳ ನೆಲೆಗೆ ಬೊಂಬುಗಳು ಬಿಸಾಡಲ್ಪಟ್ಟಿರುವವು ಇಲ್ಲಿ ಆದ ನಷ್ಟ ಗೊತ್ತಾಗಲಿಲ್ಲ, ಜರ್ಮನರ ಜಲಾಂತರ್ಗಾಮಿ ನಾವೆಗಳು ಗೋಚರಿಸಲಿಲ್ಲ ಜರ್ಮನರು ವಿಶೇಷವಾದ ಗುಂಡುಗಳ ಮಳೆಗರೆದರೂ ಬ್ರಿಟಿಷ ನಾವೆಗಳೊಂದಕ್ಕಾದರೂ ಹಾನಿಯಾಗಲಿಲ್ಲ ಎರಡು ಯಂತ್ರಗಳಿಗೆ ಮಾತ್ರ ಸ್ವಲ್ಪ ಅಕಂ ಆಗಿದೆ. ಎಂಬದಾಗಿ ಲಂಡನ್ ವರ್ತಮಾನಸಂಗ್ರಹ ಆಫೀಸಿನವರು ಪ್ರಕಟಿಸಿರುವರು.

ಘಾಯ ಒಡೆದ ಬ್ರಿಟಿಷ ಸೇನಿಕರಲ್ಲಿ ಶೇಕಡಾ ೬೦ರಂತೆ ಗುಣಹೊಂದಿ ಪುನಃ ಸೇನೆಗೆ ಸೇರಲು ಸಿದ್ಧವಿರುವರೆಂತ ಮಿ। ಅಸ್ಕ್ವಿತರವರು ಬ್ರಿಟಿಷ ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿರುವರು.

ಪೂರ್ವ ಪ್ರಶ್ಯದಲ್ಲಿ ಜರ್ಮನರ ಮಹಾ ಸೇನೆಯು ಮುಂದಕ್ಕೆ ಬಂದು ಯುದ್ಧ ಮಾಡಲು ಪ್ರಯತ್ನಿಸಿರುವರು. ರುಶ್ಯನರು ಮೆಸ್ಸೂರಿಯನ್ ಸರೋವರ ಪ್ರಾಂತ್ಯದಿಂದ ಸರಹದ್ದಿಗೆ ಸರಿದಿರುವರು. ಆದರೆ ಶತ್ರುಗಳನ್ನು ಎದುರಿಸಲು ಶಕ್ತರಾಗಿರುವರು. ರುಶ್ಯನರಿಗೆ ಕಾರ್ಪಥೇನಿಯದಲ್ಲಿ ಜಯವಾಗಿರುವದು.

ಜರ್ಮನರು ಪಶ್ಚಿಮ ರಣರಂಗದಿಂದಲೂ ಜರ್ಮನಿಯಿಂದಲೂ ಹೊಸ ಸೇನೆಯನ್ನು ಪೂರ್ವ ಪ್ರಶ್ಯಕ್ಕೆ ತಂದು ಒಟ್ಟಿದ್ದರಿಂದ ರುಶ್ಯನರು ತಮ್ಮ ಸೇನೆಯನ್ನು ಬಲಗೊಳಿಸುವ ಬಗ್ಗೆ ಸ್ವಲ್ಪ ಹಿಂದೆ ಸರಿಯ ಬೇಕಾಯಿತು ಎಂತ ಪೆಟ್ರೊಗ್ರೇಡಿನಲ್ಲಿ ಪ್ರಕಟವಾಗಿದೆ. ಪೋಲೆಂಡಿನಲ್ಲಿ ಜರ್ಮನರ ಸೇನಿಕರಲ್ಲಿ ಹತರಾದವರ ಸಂಖ್ಯೆಯು ೪೦ ಸಾವಿರಕ್ಕೆ ಮಿಕ್ಕಿರುವದೆಂತ ವಾರ್ಸಾದಲ್ಲಿ ಪ್ರಕಟವಾಗಿದೆ.

ಕೈಸರರು ಗುಪ್ತವಾಗಿ ಬರ್ಲಿನಿಗೆ ಹಿಂತಿರುಗಿ ಪೂರ್ವ ರಣರಂಗದ ಸಂಬಂಧ ಮಂತ್ರಿಗಳೊಡನೆ ಆಲೋಚಿಸಿ ಪುನಃ ಹಿಂತಿರುಗಿರುವರೆಂತ ಅಮ್ಸ್ಟರ್‌ಡಮಿನಲ್ಲಿ ಪ್ರಕಟವಾಗಿದೆ.

ಮಿತ್ರರ ಯುದ್ಧ ನಾವೆಗಳು ಡರ್ಡನೆಲ್ಸಿಗೆ ಹೋಗಿ ೧೭೪ ಸಿಡಿಮದ್ದುಗಳನ್ನು ಡರ್ಡನೆಲ್ಸಿಗೆ ಬಿಸಾಡಿರುವದೆಂತಲೂ ೪ ಬಂಡಸಾಲೆಗಳು ಹಾಳಾಗಿರುವದೆಂತಲೂ ವಾರ್ತೆ ಬಂದಿದೆ.

ತಾ. ೧೫ನೇ ಫೆಬ್ರುವರಿ.

ಬ್ರಿಟಿಷ ಕರಾವಳಿಯನ್ನು ಅಡ್ಡ ಕಟ್ಟುವ ಸಂಬಂಧ ತಟಸ್ಥ ರಾಜ್ಯಗಳಿಗೆ ಕೊಟ್ಟ ಪ್ರಕಟಣೆಗೆ ಜರ್ಮನರು ಹೊಸ ವಿಷಯವನ್ನು ಸೇರಿಸಿರುವರು — ತಟಸ್ಥ ರಾಜ್ಯಗಳ ಧ್ವಜವನ್ನು ಬ್ರಿಟಿಷರ ಹಡಗಗಳಲ್ಲಿ ಏರಿಸುವದು ನ್ಯಾಯವೆಂದು ಬ್ರಿಟಿಷರು ಹೇಳುವದರಿಂದಲೂ ಜರ್ಮನರ ಜಲಾಂತರ್ಗಾಮಿ ನಾವೆಗಳನ್ನು ನಾಶಪಡಿಸುವ ಉದ್ದೇಶದಿಂದ ಬ್ರಿಟಿಷ ವ್ಯಾಪಾರ ಹಡಗಗಳಲ್ಲಿ ಯುದ್ಧ ಸಾಮಗ್ರಿಗಳು ಇಡಲ್ಪಟ್ಟಿರುವದೆಂಬ ವಿಷಯವು ತಮಗೆ ತಿಳಿದುಬಂದಿರುವದರಿಂದಲೂ ಈ ಹಡಗಗಳು ಯುದ್ಧಹಡಗಗಳೆಂದು ಎಣಿಸಲ್ಪಟ್ಟವೆ ಇಂಥಾ ಹಡಗಗಳನ್ನು ಜರ್ಮನರು ನಾಶಮಾಡಲು ನಿಶ್ಚಯಿಸಿರುವದರಿಂದ ಜರ್ಮನಿಯು ಮತ್ತು ಇಂಗ್ಲಾಂಡಿಗೆ ತೊಡಗುವ ಈ ಕಾಳಗದಲ್ಲಿ ಬ್ರಿಟಿಷ ಕರಾವಳಿಗೆ ಹೋಗುವ ತಟಸ್ಥ ರಾಜ್ಯಗಳ ಹಡಗಗಳಿಗೂ ನಷ್ಟಸಂಭವಿಸಬಹುದಾದ್ದರಿಂದ ಜರ್ಮನರು ಈ ಮೂಲಕ ಎಲ್ಲಾ ತಟಸ್ಥ ರಾಜ್ಯಗಳನ್ನೂ ಎಚ್ಚರಿಸಿರುವರು ಎಂಬದಾಗಿ ಪ್ರಕಟಿಸಿರುವರು

ಬ್ರಿಟಿಷರ ವಾಯುನಾವೆಗಳು ಬೆಲ್ಜಿಯಮ್ ಕರಾವಳಿಯಲ್ಲಿ ಜರ್ಮನರ ನೆಲೆಗಳಿಗೆ ಗುಂಡು ಹಾರಿಸಿ ವಿಶೇಷ ಜೀವ ಮತ್ತು ಆಸ್ತಿ ನಷ್ಟಪಡಿಸಿರುವರೆಂತಲೂ ಪಶ್ಚಿಮ ರಣರಂಗದಲ್ಲಿ ಕಂಡುಕೊಂಡ ಬ್ರಿಟಿಷರ ಗುಂಡುಗಳು ಅಮೇರಿಕಾದಲ್ಲಿ ಮಾಡಲ್ಪಟ್ಟವುಗಳೆಂಬದಾಗಿಯೂ ಬರ್ಲಿನಿನಲ್ಲಿ ಪ್ರಕಟವಾಗಿದೆ

ಬ್ರಿಟಿಷರು ವಾಯುನಾವೆಯ ಮೂಲಕ ಹಲ್ಲಾ ಮಾಡಿ ಜಯಪ್ರದರಾದುದರಿಂದ ಬ್ರಿಟಿಷರ ವಾಯುಮಂಡಲದ ಬಲವು ಖಾತ್ರಿಯಾದಂತಾಯಿತು ಎಂತ ಪ್ರಕಟವಾಗಿದೆ ಒಬ್ಬ ಫ್ರೆಂಚ ವಾಯು ನಾವಿಕನು ಜರ್ಮನರ ೩ ವಾಯುನಾವೆಗಳೊಡನೆ ಕಾದಾಡಿ ಮೂರನ್ನೂ ಕೆಡವಿದನೆಂಬದಾಗಿ ಪ್ರಕಟವಾಗಿದೆ

ಡನ್‌ಕರ್ಕಿನಲ್ಲಿದ್ದ ಫ್ರೆಂಚ ನಾವೆಗಳು ಜಬ್ರುಗೆ ಮತ್ತು ಒಸ್ಟೆಂಡಿನ ಮೇಲೆ ಬೊಂಬುಗಳನ್ನು ಬಿಸಾಡಿರುವವು.

ಬೆಲ್ಜಿಯಮ್ ಮತ್ತು ಶೆಂಪಾಗ್ನೆಯಲ್ಲಿ ಕಠಿಣ ತೋಪು ಕಾಳಗ ನಡೆದಿರುವವು ಅರ್ಗೋನ್ನೆಯಲ್ಲಿ ಶತ್ರುಗಳು ಸಿಡಿಮದ್ದುಗಳನ್ನು ಹಾರಿಸುವ ಕೆಲಸದಲ್ಲಿ ನಿರತರಾಗಿರುವರು ಜರ್ಮನರ ಕಾಲಾಳು ಸೈನಿಕರು ಕಂದಕಗಳನ್ನು ಬಿಟ್ಟು ಮೇಲೆ ಬರಲಿಲ್ಲ

ಲೊರೈನಿನಲ್ಲಿ ಮೋಲ್ಡಾಯದ ಜರ್ಮನರು ಹಿಮ್ಮೆಟ್ಟಿರುವರು ಜರ್ಮನರು ನ್ಯೂಪೋರ್ಟ, ಡ್ಯೂನ್ ಪ್ರಾಂತ್ಯದಲ್ಲಿ ಮತ್ತು ಎಪ್ರೆಯಲ್ಲಿ ಗುಂಡು ಹಾರಿಸಿರುವರು, ಆದರೆ ಮಿತ್ರರು ಎದುರಾಗಿ ಗುಂಡು ಹಾರಿಸಿರುವರು. ಅರ್ರಾಸ್ ಡಿಸ್ಟ್ರಿಕ್ಟಿನಲ್ಲಿ ಜರ್ಮನರ ಎರಡು ಸಿಡಿಮದ್ದುಗಳ ಗಣಿಗಳನ್ನು ಮಿತ್ರರು ಹಾರಿಸಿರುವರು.

ಆಲ್ಸೇಸಿನಲ್ಲಿ ಜರ್ಮನರು ಕಂದಕಗಳನ್ನು ಬಿಟ್ಟು ಮುಂದರಿಯಲು ಪ್ರಾರಂಭಿಸಿರುವರು. ಆದರೆ ಫ್ರೆಂಚರಿಗೆ ಇದು ತಿಳಿದು ಬಂದ ಕೂಡ್ಲೇ ಅವರ ಮುಂದರಿಯುವಿಕೆಗೆ ತಡೆ ಕಟ್ಟಿರುವರು ಎಂತ ಪಾರಿಸ್ ನಗರದಲ್ಲಿ ಪ್ರಕಟವಾಗಿದೆ.

ಪ್ರೆಸಿಡೆಂಟ ಪೊಯಿನಕಾರರವರು ಆಲ್ಸೇಸನ್ನು ಸಂದರ್ಶಿಸಿ ಹೋಗಿರುವರು. ಅಲ್ಲಿ ೨೪ ಗ್ರಾಮಗಳನ್ನು ದಾಟಿಹೋದರು. ಅಲ್ಲಿಯ ನಿವಾಸಿಕರು ಸಂತೋಷದಿಂದ ಪ್ರೆಸಿಡೆಂಟರಿಗೆ ಧನ್ಯವಾದ ವನ್ನಿತ್ತರು.

ನಿಮೆನ್ ಮತ್ತು ವಿಸ್ಚುಲದ ಮಧ್ಯೆ ರುಶ್ಯನರಿಗೂ ಜರ್ಮನರಿಗೂ ಒಂದು ಸಣ್ಣ ಕದನವು ನಡೆದಿರುವದು.

ಬಕೋವಿನದಲ್ಲಿ ಜರ್ಮನರು ವಿಶೇಷ ನಷ್ಟಪಟ್ಟಿರುವರು. ರುಶ್ಯನರು ಇಲ್ಲಿ ಜರ್ಮನರ ಕೆಲವು ಕಂದಕಗಳನ್ನು ಸ್ವಾಧೀನ ಮಾಡಿಕೊಂಡರು. ೫೦೦ ಸೈನಿಕರು ರುಶ್ಯನರ ಸೆರೆಬಿದ್ದಿರುವರು.

ಪ್ರಶ್ಯನಲ್ಲಿಯೂ ಜರ್ಮನರು [illegible] ಕಾರ್ಪಥೇನಿಯದಲ್ಲಿ ರುಶ್ಯನರು [illegible] [illegible]

ಕೈಸರರು ಪೂರ್ವಪ್ರಶ್ಯದ ಇನ್‌ಸ್ಟರ್‌ಬರ್ಗನಲ್ಲಿರುವರು. ಅಲ್ಲಿದ್ದ ಜರ್ಮನ್ ಜನರಲ್ ಇಚ್‌ಚೋರ್ನರವರಿಗೆ ವಿಷಜ್ವರ ಸೊಂಕಿದ್ದರಿಂದ ಕೈಸರರೂ ಜನರಲ್ ಹಿಂಡೆನ್‌ಬರ್ಗರೂ ಸೇನೆಯಲ್ಲಿ ತಕ್ಕ ಏರ್ಪಾಡು ಮಾಡುತ್ತಿದ್ದಾರೆ.

ಕಪ್ಪು ಸಮುದ್ರದಲ್ಲಿ ತುರ್ಕರಿಗೆ ೧೦೦ ಟನ್ ಆಹಾರ ಸಾಮಗ್ರಿಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದ ಒಂದು ಹಡಗವನ್ನು ರುಶ್ಯನರು ಮುಣುಗಿಸಿದರು.

ತಾ. ೧೬ನೇ ಫೆಬ್ರುವರಿ.

ಬೆಥ್ಯೂನ್ ಮತ್ತು ಲಾಬಸ್ಸೆಯಲ್ಲಿ ಮಿತ್ರರು ೨೫೦ ವಿಟರ್ ಕಂದಕಗಳನ್ನು ಸ್ವಾಧೀನಮಾಡಿರುವರು. ತೋಪು ಕಾಳಗವು ನಡೆಯುತ್ತಿದೆ. ಕಂದಕದಿಂದ ಕಂದಕಕ್ಕೆ ಬಗಟೆಲ್ಲೆ ಮತ್ತು ಮೇರಿ ತೆರೆಸ್ಸೆ ಎಂಬಲ್ಲಿ ಕಠಿಣ ಕಾಳಗವು ನಡಿಯುತ್ತಿರುವದು.

ವಿಸ್ತುಲದ ಬಲಪಾರ್ಶ್ವದಲ್ಲಿ ರುಶ್ಯನರಿಗೂ ಜರ್ಮನರಿಗೂ ನಡೆಯುತ್ತಿರುವ ಕದನವು ಮೆಲ್ಲನೆ ಮೊಕ್ಲೊ, ಮಿಶ್ಲನ್ಸೆಂಚ್ ಸರಹದ್ದಿಗೆ ಮುಂದರಿಯುತ್ತಲಿದೆ. ಜರ್ಮನರ ವಿಶೇಷ ಸೇನೆಯು ಮುಂದೆ ಬಂದಿರುವದರಿಂದ ರುಶ್ಯನರು ನೀಮೆನಿನ ಕೋಟೆಕೊತ್ತಲುಗಳ ಸ್ಥಳಕ್ಕೆ ಸೇರಿ ಬಲಕಾಯಿಸಿಕೊಂಡಿರುವರು, ಕಾರ್ಪಥೇನಿಯದಲ್ಲಿ ರುಶ್ಯನರು ೧,೦೧೮ ಮಂದಿಯನ್ನು ಸೆರೆಹಿಡಿದಿರುವರು

ಬ್ರಿಟಿಷರ ಒಂದು ಸಣ್ಣ ಸೇನೆಯು ಸೀನಾಯಿ ಅರ್ಧದ್ವೀಪದಲ್ಲಿ ಇಳಿದು, ಟೂರಿನ ಮೇಲೆ ಹಲ್ಲಾ ಮಾಡಲು ಯತ್ನಿಸುತ್ತಿದ್ದ ತುರ್ಕರ ಮೇಲೆ ಬಿದ್ದು ಅವರನ್ನು ನಿರ್ನಾಮಮಾಡಿದರು. ರಣರಂಗದಲ್ಲಿ ತುರ್ಕರ ೬೦ ಮಂದಿ ಸತ್ತುಬಿದ್ದರು. ಬ್ರಿಟಿಷ ಸೇನೆಯಲ್ಲಿ ಒಬ್ಬ ಗುರ್ಕ ಸಿಪಾಯಿಯು ಹತನಾದನು. ಮತ್ತೊಬ್ಬನು ಘಾಯ ಪಡೆದನು.

ತುರ್ಕಿ ಮತ್ತು ಗ್ರೀಕರೊಳಗೆ ಉಂಟಾದ ವೈಮನಸ್ಸು ಸದ್ಯಾನಿವಾರಣೆಯಾಗಿರುವದು. ಕನ್‌ಸ್ಟಂಟಿನೋಪಲಿನಲ್ಲಿರುವ ಗ್ರೀಕ ಮಂತ್ರಿಯು ೨೪ ತಾಸಿನೊಳಗೆ ತಕ್ಕ ಉತ್ತರವು ಕೊಡಲ್ಪಡದಿದ್ದರೆ ಕನ್‌ಸ್ಟಂಟಿನೋಪಲನ್ನು ಬಿಟ್ಟು ಹೋಗುತ್ತೇನೆಂದು ಹೇಳಿದ್ದರಿಂದ ಗ್ರೇಂಡ್ ವಜೀರರು ಗ್ರೀಕ್ ಮಂತ್ರಿಯರು ಕೇಳಿಕೊಂಡ ಶರ್ತಕ್ಕೆ ಒಪ್ಪಿರುವರು.

ಆಸ್ಟ್ರಿಯನರ ಎರಡು ವಾಯುವಿಮಾನಗಳು ಮೊಂಟಿನಿಗ್ರೊದ ಅರಸರು ಇದ್ದ ಅರಮನೆಗೆ ಹೋಗಿ ಬೊಂಬುಗಳನ್ನು ಹಾಕಿರುವದೆಂತಲೂ ಯಾರಿಗೂ ಅಪಾಯ ಸಂಭವಿಸಲಿಲ್ಲವೆಂತಲೂ ವಾರ್ತೆ ಬಂದದೆ.

ವಿದೇಶ ವೃತ್ತಾಂತ.

[illegible] ಜರ್ಮನ್ ಕಮೋಂಡರನಾಗಿದ್ದ ಮೆಜರ್ ಗೆಸ್ಟನ್‌ಕರಿ ಎಂಬವನು ೧೧—೧೬ ವರ್ಷ ಪ್ರಾಯದ ೭ ಮಂದಿ ರಶ್ಯನರ ಹುಡುಗರನ್ನು ಗುಂಡು ಹೊಡೆಸಿ ಕೊಂದನು.

ರುಮೇನ್ಯದವರು ಸೇನೆಯನ್ನು ಸಿದ್ಧಗೊಳಿಸುತ್ತಿರುವರು. ಒಟ್ಟಿಗೆ ಇವರಿಗೆ ೪೫೦,೦೦೦ ಸೇನಿಕರಾಗುವರು.

ವೆಲೆನ್ಸಿಯನ್ನೆಸ್ ಎಂಬ ಪಟ್ಟಣಗಳಲ್ಲಿ ಕೆಲವರ ಕೂಡೆ 'ವಿಲಿಯಮನ, ಲ್' ಎಂಬ ಒಂದು ಪದ್ಯವು ಸಿಕ್ಕಿದುದರಿಂದ, ಜರ್ಮನರು ಆ ಪಟ್ಟಣಕ್ಕೆ ೮೦,೦೦೦ ಪವನುಗಳ ಜುಲುಮಾನೆ ವಿಧಿಸಿರುವರು.

ಸಿರಿಯದ ಕಥೋಲಿಕ ಬಿಶೋಪರು ಮಿತ್ರರ ಪಕ್ಷವಾಗಿ ಮಾತನ್ನಾಡಿದ್ದರಿಂದ ಅವರಿಗೆ ಮರಣ ದಂಡನೆಯು ವಿಧಿಸೋಣಾಗಿರುವದು.

ಇಟಲಿಯಲ್ಲಿ ಆದ ಭೂಕಂಪದಲ್ಲಿ ಅವಜಾನೋ ಪಟ್ಟಣದ ೮೦೦೦ ಮಂದಿಯಲ್ಲಿ ೧೦೦ ಮಂದಿ ಮಾತ್ರ ಉಳಿದಿರುವರು. ಇವರು ಸಹಾ ಮತಿ ಇಲ್ಲದಂತಿದ್ದಾರೆ. ಒಂದು ಕಾಲೇಜಿಯ ಅಡಿಯಿಂದ ಯೌವ್ವನ ಪ್ರಾಯದ ಹುಡುಗಿಯರ ಸ್ವರವು ಕೇಳಿಸುತ್ತಿತ್ತು. "೪೦ ಮಂದಿ ಇನ್ನೂ ಬದುಕಿರುತ್ತೇವೆ, ನಮಗೆ ಸಹಾಯ ಮಾಡಿರಿ" ಎಂತ ಆ ಹುಡುಗಿಯರು ಕೂಗಿದರು. ಇವರನ್ನು ಬದುಕಿಸಲು ಸೈನಿಕರು ಬಹಳ ಯತ್ನ ನಡಿಸಿದರು. ಆದ ಆ ಸ್ವರವು ನಿಂತುಹೋಯಿತು. ಇನ್ನೂ ಕೆಲವರು ಬದುಕಿರ್ವರು ಎಂಬದರಲ್ಲಿ ಅನುಮಾನವಿಲ್ಲ. ಈ ಭೂಕಂಪದಲ್ಲಿ ನೆಲದ ಅಡಿಗೆ ಬಿದ್ದವರನ್ನು ರಕ್ಷಿಸುವದು ಬಹಳ ಕಷ್ಟಸಾಧ್ಯವಾಗಿರುವದು. ಕಲ್ಲಿನ ಮೇಲೆ ಕಲ್ಲು ಬಿದ್ದು ಗುಪ್ಪೆಯಾಗಿರುವದು. ಹಾಳಾದ ಪಟ್ಟಣದ ಅಡಿಯಿಂದ ಬೊಬ್ಬೆ ಕೇಳಿಸುತ್ತದೆ. ಈ ಭೂಕಂಪದಲ್ಲಿ ಅಬ್ರುಜಿ ಪ್ರೊವಿನ್ಸಿನಲ್ಲಿ ೩೦,೦೦೦ ಮಂದಿ ನಾಶವಾದರು. ಪೆಷ್ರೋನೋ ಡಿಸ್ಟ್ರಿಕ್ಟಿನಲ್ಲಿ ೧೦,೦೦೦ ಮಂದಿ ನಾಶವಾದರು. ಒಟ್ಟಾರೆ ಅಲ್ಲಿಯ ಜನಸಂಖ್ಯೆಯಲ್ಲಿ ಸೇಕಡಾ ೨-೩ರಂತೆ ಮಾತ್ರ ಉಳಿದರು ಎಂತ ತಿಳಿದು ಬಂದದೆ.

ಉತ್ತರ ಹಿಂದೂಸ್ಥಾನ.

ಪೂರ್ವ ಬಂಗಾಳದಲ್ಲಿ ದಕಾಯಿತಿಗಳು ನಡೆಯುತ್ತಲೇ ಇವೆ. ಬಕರ್‌ಗಂಜ್ ಡಿಸ್ಟ್ರಿಕ್ಟಿನ ರಾಮಕೃಷ್ಣ ದಾಸ್‌ರವರ ಮನೆಗೆ ಆಯುಧಪಾಣಿಗಳಾದ ೮೦ ದಕಾಯಿತರು ನುಗ್ಗಿ ಮನೆಯಲ್ಲಿದ್ದವರಿಗೆ ಚೆನ್ನಾಗಿ ಹೊಡೆದು ೮ ಸಾವಿರ ರೂಪಾಯಿ ಕ್ರಯಬಾಳುವ ಒಡವೆಗಳನ್ನು ಕೊಂಡುಹೋಗಿರುವರು. ದಕಾಯಿತರಿಂದ ಪೆಟ್ಟು ತಿಂದವರು ಆಸ್ಪತ್ರೆಯಲ್ಲಿ ಶೈತೋಪಚಾರ ಹೊಂದುತ್ತಿದ್ದಾರೆ. ಬರಾಯ ಗ್ರಾಮದಲ್ಲಿ ಕೆಲವು ಡಜನ್ ಮಹಮ್ಮದೀ ದಕಾಯಿತರು ಒಬ್ಬ ಮಹಮ್ಮದೀಯನ ಮನೆಗೆ ನುಗ್ಗಿ ಮನೆಯಲ್ಲಿದ್ದವರಲ್ಲಿ ಒಬ್ಬನನ್ನು ಗುಂಡು ಹೊಡೆದು ಕೊಂದು ೭ ಸಾವಿರ ರೂಪಾಯಿ ಕ್ರಯಬಾಳುವ ಚಿನ್ನಾಭರಣಗಳನ್ನು ಸುಳಿಗೆ ಮಾಡಿರುವರು. ಮತ್ತೊಂದು ಕಡೆಯಲ್ಲಿ ಸುಮಾರು ೫೦ ಮಂದಿ ಬಿ. ದತ್ತ ಎಂಬವರ ಮನೆಗೆ ನುಗ್ಗಿ ಮನೆಯವರನ್ನು ಹಿಂಸಿಸಿ ೫೦೦೦ ರೂಪಾಯಿಯ ಚಿನ್ನಾಭರಣಗಳನ್ನು ಕೊಂಡುಹೋಗಿರುವರು. ಬಾಬುಗಿರಿಸ್ ಚಂದ್ರರೋಯಿಯವರ ಮನೆಗೆ ಕೆಲವು ಬಂಗಾಳಿ ಯುವಕರ ತಂಡವು ಆಯುಧ ಸಹಿತ ಬೈಸಿಕಲಿನಲ್ಲಿ ಹೋಗಿ ಅವರ ಮನೆ ಸುಳಿಗೆ ಮಾಡಿ ೧೦,೦೦೧ ರೂಪಾಯಿಯನ್ನೂ ಕರೆನ್ಸಿ ನೋಟುಗಳನ್ನೂ ಕೊಂಡುಹೋಗಿರುವರು.

ಅಲ್ಲಹಾಬಾದಿನ ಮುಕುಂದರಾಮ, ಅವನ ಸೋದರ ಬಂಕಿಲಾಲ ಮತ್ತು ಇನ್ಶೂರೆನ್ಸ್ ಏಜಂಟ್ ಲಕ್ಷ್ಮಿ ನರಸಿಂಹ ಎಂಬ ಮೂರು ಜನರು ಕೂಡಿ ಬಲದೇವ ಪ್ರಸಾದ ಎಂಬವನ ಬದಲಿಗೆ ಬಂಕಿಲಾಲ ಎಂಬವನನ್ನು ಡಾಕ್ಟರರಿಂದ ಪರೀಕ್ಷಿಸಿ, ಎರಡು ಇನ್ಶೂರು ಕಂಪೆನಿಗಳಲ್ಲಿ ಬಲದೇವ ಪ್ರಸಾದ ಹೆಸರಲ್ಲಿ ಇನ್ಶೂರು ಮಾಡಿ ಕೆಲವು ಕಂತುಗಳ ಹಣಕೊಟ್ಟು ನಂತರ ಬಲದೇವನು ಸತ್ತು ಹೋಗಿದ್ದಾನೆಂತ ಕಂಪೆನಿಗಳಿಗೆ ತಿಳಿಸಿ, ಕಂಪೆನಿ ಹಣ ತಿಂದು ಹಾಕಲು ಪ್ರಯತ್ನಿಸಿದ್ದಾರೆಂಬದಾಗಿ ಆಪಾದಿಸಲ್ಪಟ್ಟಿದ್ದರು. ಜಡ್ಜರು ಈ ಮೊಕದಮೆ ತನಿಕೆ ನಡಿಸಿ, ಒಬ್ಬೊಬ್ಬರಿಗೆ ೫—೭ ವರುಷಗಳ ಕಠಿಣ ಸಜಾ ವಿಧಿಸಿದರು.

ತಾ. ೧೦ನೇ ಸಾಯಂಕಾಲ ೭॥। ಗಂಟೆಗೆ ಡಿಲ್ಲಿಯ ಕಬ್ಬಿನ ವಠಾರವಲ್ಲಿ ಒಂದು ಸಿಡಿಮದ್ದು ಬಿಸಾಡಲ್ಪಟ್ಟಿತು. ಕ್ಲಬ್ಬಿಗೆ ಬಂದಿದ್ದ ಹೆಚ್ಚಿನ ಮೆಂಬರರು ಈ ಮೊದಲೇ ಹಿಂತಿರುಗಿದ್ದರು. ಕೆಲವು ಮೋಟರ್ ಬಂಡಿಗಳು ಮಾತ್ರ ಇದ್ದವು. ಬೊಂಬು ಅಲ್ಲಿ ಬೆಳದಿದ್ದ ಹುಲ್ಲುಗಾವಲಿನ ಮಧ್ಯದಿಂದ ಬಿಸಾಡಲ್ಪಟ್ಟಿತು, ಅದು ಹುಲ್ಲುಗಾವಲಿನ ಸುತ್ತಲು ಇದ್ದ ಸರಿಗೆಯ ಬೇಲಿಗೆ ತಗಲಿ ಒಡೆದು ದೊಡ್ಡ ಶಬ್ದವಾಯಿತು. ಯಾರಿಗೂ ಅಪಾಯ ಸಂಭವಿಸಲಿಲ್ಲ. ಈ ಸಿಡಿಮದ್ದನ್ನು ಪರೀಕ್ಷಿಸಿದ್ದಲ್ಲಿ ಅದರೊಳಗೆ ಬರೇ ಕೋವಿ ಮದ್ದು ತುಂಬಿತ್ತಲ್ಲದೆ ಅಪಾಯಕರವಾದ ಇತರ ವಸ್ತುಗಳು ಅದರೊಳಗೆ ಇರಲಿಲ್ಲ.

ಡಿಲ್ಲಿ ರಾಜದ್ರೋಹ ಮೊಕದಮೆಯಲ್ಲಿ ಆಪಾದಿಸಲ್ಪಟ್ಟ ಆವಾದ್ ಬಿಹಾರಿ, ಅಮೀರ ಚಂದ ಮತ್ತು ಬಾಲ ಮುಕುಂದ ಇವರಿಗೆ ವಿಧಿಸಲ್ಪಟ್ಟ ಶಿಕ್ಷೆಯು ಪಂಜಾಬು ಚೀಫ್ ಕೋರ್ಟಿನಲ್ಲಿ ಕಾಯಮ ಆಯಿತು. ಭರಣದಾಸನು ಮಾಡಿಕೊಂಡ ಅಪೀಲು ತನಿಕೆಯಾಗಿ ಅವನಿಗೆ ದೇಹಾಂತ ಬಂಕೋಲಿ ಶಿಕ್ಷೆಯೂ ವಸಂತಕುಮಾರನಿಗೆ ಮರಣ ದಂಡನೆಯೂ, ಬಲರಾಜ ಮತ್ತು ಹನವಂತ ಸಹಾಯಿಗೆ ಏಳೇಳು ವರ್ಷಗಳ ಕಠಿಣ ಸಜೆಯೂ ವಿಧಿಸೋಣಾಯಿತು.

ಕಲ್ಕತ್ತೆಗೆ ೨ ಮೈಲು ದೂರದಲ್ಲಿರುವ ಗಾರ್ಡನ್ ಬೀಚ್ ಎಂಬಲ್ಲಿ ಒಂದು ಕೌತುಕವಾದ ದಕಾಯತಿಯು ನಡೆದಿರುವದು. ಮೆಸ್ಸರ್ಸ್ ಬರ್ಡ್ ಎಂಡ್ ಕಂಪೆನಿಯ ಕೆಲಸಗಾರರ ಸಂಬಳವಾದ ಸುಮಾರು ೧೮,೦೦೦ ರೂಪಾಯಿ ಸಹಿತ ಒಬ್ಬ ಸರ್ದಾರನೂ ಸಂಗಡಿಗರಿಬ್ಬರೂ ಒಂದು ಗಾಡಿಯಲ್ಲಿ ಕುಳಿತು ಹೋಗುತ್ತಿರುವಾಗ ದಕಾಯಿತರು ಗಾಡಿಯನ್ನು ನಿಲ್ಲಿಸಿ, ಹಣವನ್ನೆಲ್ಲಾ ಸುಲಿ ಕೊಂಡು ಹೋಗಿರುವರು. ದಕಾಯಿತರು ಆಯುಧಪಾಣಿಗಳಾಗಿದ್ದರಿಂದಲೂ ಗಾಡಿಯನ್ನು ನಿಲ್ಲಿಸಿದಾಗ ಸುತ್ತು ಕೂಡಿದ ಜನರನ್ನೆಲ್ಲಾ ಹೆದರಿಸಿ ಹಣವನ್ನು ಸುಲಕೊಂಡು ಹೋದರೆಂತಲೂ ವಾರ್ತೆ ಬಂದಿರುವದು. ದಕಾಯಿತರು ಹಣ ಸುಲಕೊಂಡು ಹೋದ ಕೂಡ್ಲೇ ಟೆಲಫೋನು ಮೂಲಕ ಸರ್ದಾರನು ಪೋಲಿಸಿಗೆ ತಿಳಿಸಿದನು ಆದರೆ ದಕಾಯಿತರು ಹೋದ ಗಾಡಿಯು ಪತ್ತೆಯಾಗಲಿಲ್ಲ. ಅವರ ಗಾಡಿಯ ನಂಬ್ರವು ಮಾತ್ರ ಸರ್ದಾರನು ತೆಗೆದುಕೊಂಡಿರುವನು.

ಮುಂಬಾಯಿಗೆ ಹೈಡ್ರೊಪ್ಲೇನ್ ಎಂಬ ವಾಯುನಾವೆಯು ಬಂದಿರುವದು. ಇದನ್ನು ಕೂಡಿಸಿ ತಾ. ೧೨ರಲ್ಲು ಅಲೆಕ್ಸಂಡ್ರಿಯಾ ಬಂದರದಲ್ಲಿ ಮೇಲಕ್ಕೆ ಹಾರಿಸಿದರು. ಸಾವಿರಾರು ಜನರು ಕೂಡಿ ಬಹು ಆತುರತೆಯಿಂದ ಈ ನಾವೆ ಹಾರುವದನ್ನು ನೋಡಿ, ಆಶ್ಚರ್ಯಪಟ್ಟರು.

ಕರಾಚಿಯ ಪ್ರಖ್ಯಾತ ಸಕ್ಕರೆ ಸಾಹುಕಾರರಾದ ಮೆ॥ ಟೆವಾಲ್ರಾಮ ತಹಿಲ್ರಾಮರವರು ದಿವಾಳಿಯಾದರು. ಇವರ ಸಾಲವು ೧ ಲಕ್ಷ ರೂಪಾಯಿದ್ದಾಗಿರುವದೆಂತ ಅಂದಾಜಾಗಿಯದೆ.

ಮಾನ್ಯಗಂಧಿಯವರು ಪತ್ನಿ ಸಹಿತ ತಾ. ೪ರಲ್ಲು ಪೂನೆಗೆ ಚಿತ್ತೈಸಿದರು. ಪೂನೆಯ ಮುನಿಸಿಪಾಲಿಟಿಯವರು ಉಭಯತರನ್ನು ಬಹು ಮನ್ನಣೆಯಿಂದ ಸ್ವಾಗತಮಾಡಿಕೊಂಡು ಜನರ ಪರವಾಗಿ ಮುನ್ಸಿಪಾಲ್ ಅಧ್ಯಕ್ಷರವರು ಬಹುಮಾನಪತ್ರವನ್ನೋದಿದರು.

ಆಗ್ರಾ ಎಂಬಲ್ಲಿಯ ದೇವಸ್ಥಾನದಲ್ಲಿ ನಡೆದ ಕೊಲೆಮೊಕದ್ದಮೆಯಲ್ಲಿ ಆಪಾದಿಸಲ್ಪಟ್ಟು ಮರಣದಂಡನೆಯ ಶಿಕ್ಷೆಯನ್ನು ಹೊಂದಿದ ಮೋತಿಚಂದಪಡಾವ್ ಚಂದನಿಗೆ ದಯೆತೋರಿಸಬೇಕೆಂಬದಾಗಿ ಬಂಗಾಳ, ಬಿಹಾರ್ ಮತ್ತು ಒರಿಸ್ಸದ ೧೦೦೦ಕ್ಕಿಂತಲೂ ಹೆಚ್ಚಿಗೆ ಜನರು ಸಹಿಹಾಕಿದ ಒಂದು ಮನವಿಯು ಒರಿಸ್ಸ ಮತ್ತು ಬಿಹಾರಿನ ಲೆಪ್ಟನೆಂಟ ಗವರ್ನರರಿಗೆ ಕಳುಹಿಸಲ್ಪಟ್ಟಿರುವದು. ಇದೇ ವಿಜ್ಞಾಪನೆಯು ವೈಸರಾಯ ಪ್ರಭುಗಳವರಿಗೂ ಕಳುಹಿಸಲ್ಪಟ್ಟದ್ದಲ್ಲದೆ ಪ್ರೀವಿಕೌನ್ಸಿಲಿಗೆ ಅಪೀಲು ಮಾಡಬೇಕೆಂದಿರುವದರಿಂದ ಶಿಕ್ಷೆಯನ್ನು ಜಾರಿಗೆ ತರಬಾರದೆಂತ ಬಿಹಾರ್ ಸರಕಾರದ ಸೆಕ್ರೆಟರಿಗಳವರಿಗೂ ನೋಟೀಸು ಕೊಡೋಣಾಗಿದೆ. ಈ ಅಪೀಲು ಬಗ್ಗೆ ತಕ್ಕ ಏರ್ಪಾಡು ನಡಿಸುವರೆ ಶೀಮೆಗೆ ತಂತೀಮೂಲಕ ಹಣ ಕೂಡಾ ಕಳುಹಿಸಿ ಕೊಡೋಣಾಗಿದೆ.

ಭಾರತೀಯ ಹೆಂಗಸರಲ್ಲಿ ಕವಿಶ್ರೇಷ್ಠಳೆಂದು ಹೆಸರು ಪಡೆದ ಮಿಸೆಸ್ ಸರೋಜಿನಿ ನ್ಯಾಡುರವರು ತನ್ನ ತಂದೆಯ ಶ್ರಾದ್ಧ ಸಂಬಂಧ ಕಲ್ಕತ್ತೆಗೆ ಬಂದಿರುವರು.

ಕಲ್ಕತ್ತೆಯ ಗಾರ್ಡನ್ ಬೀಚಿನಲ್ಲಿ ನಡೆದ ದಕಾಯತಿ ಸಂಬಂಧ ೫ ಮಂದಿ ಯುವಕರು ಕೈದುಮಾಡಲ್ಪಟ್ಟಿರುವರು. ದಕಾಯಿತರು ಉಪಯೋಗಿಸಿದ ಬಂಡಿಯು ದಕಾಯತಿ ನಡೆದ ಸ್ಥಳಕ್ಕೆ ಸುಮಾರು ೧೨ ಮೈಲು ದೂರದಲ್ಲಿ ಚಕ್ರ ಕಳಚಿದ್ದಾಗಿ ಬಿದ್ದಿರುವದು. ಬಂಡಿಯನ್ನು ಹೊಡೆಯುತ್ತಿದ್ದವನು ಬಂಡಿ ಹೊಡೆಯಲು ನಿರಾಕರಿಸಿದ್ದರಿಂದ ದಕಾಯಿತರೇ ಬಂಡಿ ಹೊಡೆದುಕೊಂಡು ಹೋದರು. ಸುಳಿಗೆ ಮಾಡಿದ ೧೮ ಸಾವಿರ ರೂಪಾಯಿಯು ಪತ್ತೆ ಸಿಕ್ಕಲಿಲ್ಲ. ದಕಾಯಿತರು ಬಾರ್ಕಿಪುರ ಎಂಬಲ್ಲಿ ಬಂಡಿಯಿಂದ ಇಳಿದು ಎರಡು ಪೆಟ್ಟಿಗೆಗಳನ್ನು ಕ್ರಯಕ್ಕೆ ಪಡೆದು ಅದರಲ್ಲಿ ೩೫ ಚೀಲ ಹಣವನ್ನು ತುಂಬಿಸಿ, ಅಲ್ಲಿದ್ದ ಕಡವಿಗೆ ಹೋಗಿ ದೋಣಿ ಮೂಲಕ ಪಾರಾದರು ಎಂಬ ವಾರ್ತೆ ಇದೆ.

ಡಾಕ್‌ಸಿಂಘ ಮತ್ತು ಸೈಲಸ್ ಎಂಬ ಇಬ್ಬರು ಕೂಡಿ ತಮ್ಮನ್ನು ರಾಜರೆಂದು ಹೇಳಿಕೊಂಡು [illegible] ಸಾಹುಕಾರರನ್ನು ಮೋಸಗೊಳಿಸಿದರೆಂಬದಾಗಿ ಆಪಾದಿಸಲ್ಪಟ್ಟಿದ್ದರು. ಈ ನೋ[illegible]

ದವು ತನಕೆಯಾಗಿ ಆಲಿಪುರ ಸೆಶ್ಶನ್ಸ್ ಜಡ್ಜರು ಪೈಲಸನಿಗೆ ೪ ವರ್ಷಗಳ ಕಠಿಣ ಸಜೆ ೫೭೫೦ ರೂಪಾಯಿ ಜುಲುಮಾನೆ. ಸಿಂಗನಿಗೆ ೨ ವರ್ಷಗಳ ಸಜೆ, ೧೦೦೦ ರೂಪಾಯಿ ಜುಲುಮಾನೆ ವಿಧಿಸಿದರು ಅದಲ್ಲದೆ ಇವರು ಒಟ್ಟುಕೂಡಿ ಪಿತೂರಿ ನಡಿಸಿದ ತಕ್ಷೀರಿನ ಮೇಲೆ ಎರಡೆರಡು ವರ್ಷಗಳ ಸಜಾ ಮತ್ತು ಸಾವಿರ ಸಾವಿರ ರೂಪಾಯಿಗಳ ಜುಲುಮಾನೆ ವಿಧಿಸಿದರು ಜುಲುಮಾನೆ ವಸೂಲಾದರೆ ಇವರ ಮೋಸಕ್ಕೆ ಸಿಕ್ಕಿಬಿದ್ದ ಜಿತೇಂದ್ರನಾಥ ಚಟರ್ಜಗೆ ರೂ ೭೦೦೦, ಚಂದಿಚರಣ ಘೋಸರಿಗೆ ರೂ. ೩೨೫೦, ಕಾಲಿಚರಣದತ್ತರಿಗೆ ರೂ ೨೦೦೦ ಕೊಡಬೇಕೆಂಬದಾಗಿ ತೀರ್ಮಾನಿಸಿದರು

~~~~~

ಡಿಲ್ಲಿ ಕ್ಲಬ್ ವಠಾರದಲ್ಲಿ ಸಿಡಿದ ಬೊಂಬು ಸಂಬಂಧ ಒಬ್ಬನನ್ನು ಪೋಲಿಸರು ಕೈದುಮಾಡಿರುವರು

~~~~~

ದಕ್ಷಿಣ ಹಿಂದೂಸ್ಥಾನ.

ಪ್ರೊಫೆಸರ್ ಗೆಡ್ಡಿಸರವರು ಪಟ್ಟಣ ರಚನಾ ಸಂಬಂಧವಾಗಿ ಮದ್ರಾಸಿನಲ್ಲಿ ಭಾಷಣ ಕೊಡುವಾಗ ಹಿಂದೂಸ್ಥಾನದ ಕಟ್ಟಡಗಳ ರಚನಾ ಸ್ಥಿತಿಯು ತನಗೆ ಒಪ್ಪಿರುವದೆಂದೂ, ಹಿಂದೂಸ್ಥಾನದ ಕಟ್ಟಡಗಳು ಹಿಂದಿನ ಇತಿಹಾಸದ ಸ್ಮರಣೆಯನ್ನು ಜಾಗ್ರತವಾಗಿಟ್ಟವೆಂದೂ ಒಬ್ಬ ಸಾಧಾರಣ ಹಿಂದೀ ಮೇಸ್ತ್ರಿಯು ತನ್ನ ಹಳೇ ಪದ್ಧತಿಯ ಜ್ಞಾನದಿಂದ ಒಂದು ಅರಮನೆಯನ್ನು ಸಹಾ ಕಟ್ಟಬಲ್ಲನೆಂದೂ ಇಂಥಾ ಜನರಿಗೆ ಉತ್ತೇಜನ ಕೊಡುವದು ಶ್ರೇಯಸ್ಕರವೆಂದೂ ಹೇಳುವರಲ್ಲದೆ ಶ್ರೀರಂಗಪಟ್ಟಣದ ರಚನೆಯು ಬಹಳ ಚಂದವಾಗಿದ್ದು ಅನುಕರಣೀಯವಾಗಿರುವದೆಂತ ಹೇಳಿರುತ್ತಾರೆ ಪ್ರೊಫೆಸರ್ ಗೆಡ್ಡಿಸರವರು ಕಳೆದ ಶನಿವಾರ ಮದ್ರಾಸನ್ನು ಬಿಟ್ಟು ಬೆಂಗಳೂರಿಗೆ ತೆರಳಿದರು.

~~~~~

ಗೂಟಿಯಲ್ಲಿ ೧೬ ವರ್ಷ ವಯಸ್ಸಿನ ಒಬ್ಬ ಯುವತಿಯು ಸ್ವಘಾತ ಮಾಡಿಕೊಂಡಳೆಂಬ ವಾರ್ತೆ ಬಂದಿರುವದು ಇವಳು ಒಬ್ಬ ಮಾಧವ ಬ್ರಾಹ್ಮಣನ ಹೆಂಡತಿಯಾಗಿದ್ದಳು ದಿವಸವೆಲ್ಲಾ ಕೆಲಸಮಾಡಿ ತನ್ನ ತಾಯಿಂದ ತನಗೆ ಕೊಡೋಣಾದ ಆಭರಣಗಳನ್ನು ತೆಗೆದುಕೊಂಡು ವಸ್ತ್ರದಲ್ಲಿ ಕಟ್ಟಿ ಸಬ್ ಮುನ್ಸಿಫ್ ಕೋರ್ಟಿನ ಸಮೀಪದ ಬಾವಿಯಲ್ಲಿ ದುಮುಕಿ ಆತ್ಮಹತ್ಯ ಮಾಡಿಕೊಂಡಳು,—ಇವಳನ್ನು ಅತಿ ಕ್ರೂರತನದಿಂದ ನಡಿಸಿದುದೇ ಇವಳ ಆತ್ಮಹತ್ಯಕ್ಕೆ ಕಾರಣವಾಯಿತೆಂತ ವಾರ್ತೆ ಬಂದದೆ

~~~~~

ಮೈಸೂರಿನ ಕಣ್ಣೆಗಾಲ ಮೊಕದಮೆಯಲ್ಲಿ ಆಪಾದಿಸಲ್ಪಟ್ಟ ೯೯ ದಂಗೆಗಾರರ ಮೊಕದಮೆಯಲ್ಲಿ ಮೈಸೂರು ಸರಕಾರದವರಿಗೆ ೨೧,೯೯೦ ರೂಪಾಯಿ ಖರ್ಚಾಗಿರುವದು. ಈ ಮೊಕದಮೆಯಲ್ಲಿ ಒಬ್ಬ ಆಫೀಸರನ ಬಡ್ತಿಯು ನಿಲ್ಲಿಸಲ್ಪಟ್ಟದೆ ಎಂಬದಾಗಿ ಮೈಸೂರಲ್ಲಿ ಕೂಡಿದ ನ್ಯಾಯವಿಧಾಯಕ ಸಭೆಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವದು ಅದಲ್ಲದೆ ಮೈಸೂರು ಸರಕಾರದವರು ೧೦,೦೨೬,೦೪೪ ರೂಪಾಯಿ ಖರ್ಚು ಮಾಡಿಸಿ ೨೩೭ ಮೈಲುಗಳ ರೈಲ್ವೆ ಪ್ಲ್ಯಾನು ಮಾಡಿಸುತ್ತಲಿದ್ದಾರೆ ಎಂಬದಾಗಿ ತಿಳಿದು ಬಂತು.

~~~~~

ದಕ್ಷಿಣ ಕನ್ನಡ

~~~~~

ಪರಸ್ಪರ ಸಹಾಯ.

ಪಂಚಾಯತ ನಿರ್ಣಯಗಳ ಸರಿನಕಲುಗಳು.

ಸರ್ಕಿಲಾರು ನಂಬ್ರ ೪.

ನಂಬ್ರ ೨ನೇ ಸರ್ಕಿಲಾರಿನಲ್ಲಿ ನಿರ್ಣಯಗಳ ಸರಿನಕಲುಗಳ ಕುರಿತು ಕೆಲವು ಸೂಚನೆಗಳು ಕೊಡೋಣಾಗಿದ್ದುವು. ಆದರೆ ಇನ್ನೂ ಕೆಲವು ಸೂಚನೆಗಳು ಅಗತ್ಯವೆಂದು ತೋರುವುದರಿಂದ ಈ ಸರ್ಕಿಲಾರನ್ನು ಪ್ರಕಟಿಸಿಯದೆ.

೧ ನಿರ್ಣಯಗಳನ್ನು ಮಾಡುವಾಗ ಸಂಘಕ್ಕೆ ಬೇಕಾದ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಎಷ್ಟು ವಾಯಿದೆಬೇಕೆಂಬುದನ್ನು ಸೂಚಿಸಬೇಕು. ಸಂಘದಲ್ಲಿ ಆಗಾಗ್ಗೆ ಜಮೆಯಾಗಬಹುದಾದ ಹಣದ ವಿಷಯವೂ ಜಮೆಯಾದಂತೆ ಹಣವು ಸರಿಯಾಗಿ ಸಂಘದ ಮೆಂಬರರಿಗೆ ಸಾಲಗಳಾಗಿ ಹೊರಗೆ ಹೋಗುವ ರೀತಿಯು ವಿಷಯವೂ ಪಂಚಾಯತ ಮೆಂಬರರಿಗೆ ಚೆನ್ನಾಗಿ ಗೊತ್ತಿರುವುದರಿಂದ ಬೇಂಕಿನಿಂದ ಪಡೆದ ಹಣವನ್ನು ಎಷ್ಟು ಸಮಯದಲ್ಲಿ ವಾಪಾಸು ಮಾಡಲಾಗುವುದೆಂಬುದು ಮೊದಲೇ ಆಲೋಚಿಸಿ ಅದನ್ನು ನಿರ್ಣಯದಲ್ಲಿ ಕೂಡಿಸಬೇಕು

ಸಂಘಗಳು ಅಪೇಕ್ಷಿಸಿದ ಸಾಲವನ್ನು ಸೇಂಕ್ಷನ್ ಮಾಡಬೇಕಾದರೆ ಬೇಂಕಿನ ಆಡಳಿತೆ ಸಭೆಯವರಿಗೆ ಸಂಘದ ಕುರಿತು ಹಲವು ತರದ ಮಾಹಿತಿಯು ಅವಶ್ಯವಿರುತ್ತದೆ ಈ ಪೈಕಿ ಕೆಲವು ಮಾಹಿತಿಯು ಸಾಲದ ಅರ್ಜಿಯಲ್ಲಿಯೇ ಸಿಕ್ಕುವಂತೆ ರಿಜಾನೆಗಳನು ಮಾಡಿಯದೆ ಹಾಗಾಗಿ ಸಂಘವು ಹೊರಗಿನಿಂದ ಪಡಕೊಳ್ಳಬಹುದಾದ ಸಾಲದ ಮಿತಿ ಸಂಘದಲ್ಲಿರುವ ಠೇವಣಾತಿಗಳ ಮೊದಲು ವಗೈರೆ ತಪಸೀಲು ಸಾಲದ ಅರ್ಜಿಯಲ್ಲಿಯೇ ಸಿಕ್ಕುತ್ತದೆ ಆದರೆ ಸಾಲದ ಅರ್ಜಿಯನ್ನು ಬರಕೊಳ್ಳುವಾಗ ಸಂಘದಲ್ಲಿರುವ ಶಿಲ್ಕು ಮತ್ತು ಸಂಘದಲ್ಲಿ ಮೆಂಬರರು ಬರಕೊಂಡಿರುವ ಸಾಲದ ಅರ್ಜಿಗಳ ಒಟ್ಟು ಮೌಲ್ಯವೂ ಅಗತ್ಯವಿರುವುದರಿಂದ ಆ ವಿಷಯಗಳನ್ನೂ ನಿರ್ಣಯದಲ್ಲಿ ಸೇರಿಸುವುದು ಯುಕ್ತವಾಗಿರುತ್ತದೆ

ಸಂಘಗಳ ಅನುಭವದ ಬಗ್ಗೆ ಈ ಎಲ್ಲಾ ವಿಷಯಗಳನ್ನೊಳಕೊಳ್ಳುವಂತೆ ಒಂದು ನಿರ್ಣಯದ ಮಾದರಿಯನ್ನು ಈ ಕೆಳಗೆ ಕೊಟ್ಟಿದೆ

"ಸಂಘದಲ್ಲಿ ಪ್ರಕೃತ ರೂ ಮಾತ್ರ ಶಿಲ್ಕು ನಿಂತಿರುವುದರಿಂದಲೂ ಮೆಂಬರರಿಗೆ ಒಟ್ಟು ರೂ ರ ಸಾಲಗಳು ಸೇಂಕ್ಷನ್ ಆಗಿರುವುದರಿಂದಲೂ ಸಂಘದ ಬಗ್ಗೆ ದಕ್ಷಿಣ ಕನ್ನಡಾ ಸೆಂಟ್ರಲ್ ಕೋಆಪರೇಟಿವ್ ಬೇಂಕಿನಿಂದ ವರ್ಷದ (ಯಾ ತಿಂಗಳ) ವಾಯಿದೆಯಿಂದ ರೂ ನ್ನು ಶೇಕಡಾ ೭॥ ದರದ ಬಡ್ಡಿಯಲ್ಲಿ ಸಾಲವಾಗಿ ತರಿಸುವರೆ ನಿರ್ಣಯಿಸಲಾಯಿತು"

ಇನ್ನು ಮುಂದೆ ಸಾಲಕ್ಕೆ ಬರಕೊಳ್ಳುವ ಸಂಘಗಳ ಕಾರ್ಯದರ್ಶಿಗಳು ಪಂಚಾಯತ ನಿರ್ಣಯಗಳನ್ನು ಈ ರೀತಿಯಲ್ಲೇ ಮಾಡಿಸಬೇಕಾಗಿ ಈ ಮೂಲಕ ಸೂಚಿಸೋಣಾಗುತ್ತದೆ.

ಬೇಂಕಿನ ಆಫೀಸು, ಪುತ್ತೂರು ದಕ್ಷಿಣಕನ್ನಡಾ ತಾ 16 2—1—915	ಎಮ್ ಅನಂತರಾವ್ ಕಾರ್ಯದರ್ಶಿ

—— o ——

ಮಂಗಳೂರು.

~~~~~

ಬರೋಡೆಯ ೭೫ನೇ ಕರ್ನಾಟಕ ಇನ್‌ಫೆಂಟರಿ ಎಂಬ ಕಾಲಾಳು ಸೇನೆಗೆ ಸೈನಿಕರನ್ನು ಕೂಡಿಸುವರೆ ಹವಾಲ್ದಾರರು ಬಂದು ಇಲ್ಲಿಯ ಪ್ರೊಟೆಸ್ಟಾಂಟಕ್ರೈಸ್ತರಲ್ಲಿ ೪ ಮಂದಿಯನ್ನು ಆರಿಸಿರುವರೆಂದೂ ಈ ಸಂಬಂಧ ಕೆಪ್ಟನ್ ಟಿ ಬಿ. ಸ್ಕಿನ್ನರರವರು ತಾ ೧೫ಕ್ಕೆ ಇಲ್ಲಿಗೆ ಬರುವರೆಂದೂ ತಿಳಿಸಿತಷ್ಟೆ ಆದರೆ ಕೆಲವು ಅನಾನುಕೂಲತೆಯ ದೆಶೆಯಿಂದ ಕೆಪ್ಟನ್ ಸ್ಕಿನ್ನರರವರಿಗೆ ತಾ ೧೫ಕ್ಕೆ ಇಲ್ಲಿಗೆ ಬರಲು ಅಸಂದರ್ಭವಾಯಿತೆಂಬದಾಗಿಯೂ ಈ ವಾರದಂತ್ಯದೊಳಗೆ ಇಲ್ಲಿಗೆ ಬರುವರಾಗಿಯೂ ತಿಳಿಯುತ್ತೇವೆ ತನ್ಮಧ್ಯೆ ಹವಾಲ್ದಾರರು ಪ್ರೊಟೆಸ್ಟಾಂಟ ಕ್ರೈಸ್ತರಲ್ಲಿ ಪುನಃ ಮೂರು ಜನರನ್ನು ಅಂದರೆ ಒಟ್ಟಿಗೆ ೭ ಮಂದಿಯನ್ನು ಆರಿಸಿರುವರು ಪ್ರೊಟೆಸ್ಟಾಂಟಕ್ರೈಸ್ತರಲ್ಲಿ ಈ ಸೇನೆಗೆ ಸೇರಲಿಚ್ಛಿಸುವವರೆಲ್ಲರನ್ನು ಸೇರಿಸಿಕೊಳ್ಳಲು ಹವಾಲ್ದಾರರು ಮನಸ್ಸುಳ್ಳವರಾಗಿರುವರು ದಾನು, ಪ್ರಸಾದ, ಸದಾನಂದ, ಸುಭದ್ರ, ಬೆನ್ನಿ, ಲಾಜರ್, ಅಪೆಲ್ಲೊಸ್ ಎಂಬ ಹೆಸರಿನ ೭ ಮಂದಿ ಹವಾಲ್ದಾರರ ರಿಜಿಸ್ತ್ರಿ ಪುಸ್ತಕಕ್ಕೆ ಸಹಿಮಾಡಿರುವರು. ರಿಜಿಸ್ತ್ರಿ ಪುಸ್ತಕಕ್ಕೆ ಸಹಿಮಾಡಿದವರನ್ನು ಕೆಪ್ಟನ್ ಸ್ಕಿನ್ನರರವರು ವೈದ್ಯ ಆಫೀಸರರ ಮೂಲಕ ಪರೀಕ್ಷಿಸಿ, ಅಯೋಗ್ಯರೆಂದು ಕಂಡವರನ್ನು ಬಿಟ್ಟುಬಿಡುವರಲ್ಲದೆ ಸಹಿಮಾಡಿದವರು ತಾವಾಗಿ ಹಿಂದೆ ಸರಿಯಲು ಯಾವ ಉಪಾಯವೂ ಇರದು. ಕೆಪ್ಟನ್ ಸ್ಕಿನ್ನರರವರು ಯೋಗ್ಯರೆಂದು ತೀರ್ಮಾನಿಸಿದವರು ಬರೋಡೆಗೆ ಹೋಗುವದಿಲ್ಲವೆಂದು ಹೇಳಿದರೆ ಬಂದಿಗಳಾಗಿ ಮಾಡಲ್ಪಡುವರು. ಪ್ರೊಟೆಸ್ಟಾಂಟಕ್ರೈಸ್ತ ಯುವಕರು ಸೇನೆಗೆ ಸೇರಿಕೊಳ್ಳಬಹುದಾದ ಈ ಒಳ್ಳೇ ಸಂದರ್ಭವನ್ನು ಕಳಕೊಳ್ಳದೆ ಇರುವುದು ಹಿತವಾಗಿದೆ.

ಯುದ್ಧದ ದೆಶೆಯಿಂದ ಆಮದುರಪ್ತುಗಳು ಕಮ್ಮಿಯಾಗಿ ಈಗ ಇಲ್ಲಿ ವಾರಕ್ಕೆ ಒಂದೇಹಡಗ ಬರುತ್ತಿರುವದರಿಂದ ಬಂದರದಲ್ಲಿ ಸಾಮಾನುಗಳನ್ನು ಹಡಗಕ್ಕೆ ಸಾಗಿಸಿ, ಇಳಿಸಿ ಜೀವನ ಮಾಡುತ್ತಿದ್ದ ಸುಮಾರು ೨೦೦-೩೦೦ ಮಂದಿಗೆ ಜೀವನಕ್ಕೆ ಕಷ್ಟಸಾಧ್ಯವಾಗಿದೆಂತಲೂ ಪಟ್ಟಣದಲ್ಲಿ ಕಳ್ಳರ ಸಂಖ್ಯೆಯು ಹೆಚ್ಚಲು ಇದೇ ಕಾರಣವಾಗಿರಬಹುದೆಂತಲೂ ಒಬ್ಬ ಜಾತ್ಮೀದಾರರು ತಿಳಿಸಿರುವರು.

ಮನೆ ಮನೆಗೆ ಹೋಗಿ ಸಭ್ಯ ಮನುಷ್ಯನಂತೆ ವರ್ತಿಸಿ, ಕೊಡೆ, ಅಂಗಿ, ತಾಂಬ್ರದ ಸಾಮಾನುಗಳನ್ನು ಜಾರಿಸುತ್ತಿದ್ದ ರಿಚಾರ್ಡ್ಸ್ ವಿಲಿಯಮ್ಸನೆಂಬವನ ಪರಿಚಿತಿ ವಾಚಕರಲ್ಲನೇಕರಿಗೆ ಇರಬಹುದು ಈಚೆಗೆ ಇಲ್ಲಿಯ ಕುಂಬಳೆ ನರಸಿಂಹ ಪ್ರಭುಗಳಲ್ಲಿ ಹಗಲು ೯ ಗಂಟೆಗೆ ಒಂದು ಕೊಡಪಾನ ಕಳವಾದುದರಿಂದ ಟೌನ್ ಪೋಲಿಸ್ ಹೆಡ್ ಕನಿಸ್ಟೇಬಲ್ ರಾ। ರಾಮಕೃಷ್ಣಯ್ಯನವರು ರಿಚ್ಚಾರ್ಡ್ಸನ ಮೇಲೆ ಅನುಮಾನಪಟ್ಟು ಅವನನ್ನು ಹುಡುಕ್ಕಾಡುವಲ್ಲಿ ಸದರಿ ರಿಚ್ಚಾರ್ಡ್ಸನು ಕೊಡಪಾನವನ್ನು ಜಟ್ಕಾದಲ್ಲಿಟ್ಟುಕೊಂಡು ಮಾರಲಿಕ್ಕೆ ಹೋಗಿದ್ದನೆಂದೂ ಪೇಟೆಯಲ್ಲಿ ಯಾರೂ ಅದನ್ನು ಕೊಂಡುಕೊಳ್ಳದ್ದರಿಂದ ಸೇಡಿಗುಡ್ಡೆಯ ಕೊರಗಸೆಟ್ಟಿಯ ಮಗ ಕೃಷ್ಣಸೆಟ್ಟಿ ಎಂಬವರಿಗೆ ಮಾರಿದ್ದಾನೆಂಬದಾಗಿ ತಿಳಿದುಬಂದು ಅಲ್ಲಿಗೆ ಹೋದಲ್ಲಿ ಕೊಡಪಾನವು ದೊರಕಿತು. ಅಷ್ಟರಲ್ಲಿ ರಿಚ್ಚಾರ್ಡನು ಉಡ್ಪಿಗೆ ಹೋಗಿ ಅಲ್ಲಿಯ ಮನೆಯೊಂದರಲ್ಲಿ ಒಂದು ಕೊಡಪಾನವನ್ನು ಕದ್ದು ಪೋಲಿಸರ ಕೈಗೆ ಸಿಕ್ಕಿ ವಿಚಾರಣೆಗೆ ಗುರಿಮಾಡಲ್ಪಟ್ಟನು ಉಡ್ಪಿ ಸ್ಟೇಶನರಿ ಸಬ್ ಮೇಜಿಸ್ಟ್ರೇಟರು ಅವನಿಗೆ ೪ ತಿಂಗಳ ಕಠಿಣ ಸಜಾ ವಿಧಿಸಿರುವರು. ವಾರಸುದಾರರಿಲ್ಲದ ಕಳವು ಮಾಡಿದ ಒಂದು ತಂಬಿಗೆಯೂ ಸದರಿ ರಿಚ್ಚಾರ್ಡ್ಸ್ ವಿಲಿಯಮ್ಸನಲ್ಲಿ ಇರುವದು ಎಂಬ ವಾರ್ತೆ ಬಂದಿರುವದು ಇಲ್ಲಿ ಕೊಡಪಾನ ಕದ್ದ ಅವನ ಮೇಲಿನ ಆಪಾದನೆಯ ತನಕಿ ಬಾಕಿಯಲ್ಲಿದ್ದೆ. ರಾ। ರಾಮಕೃಷ್ಣಯ್ಯನವರು ರಿಚ್ಚಾರ್ಡ್ಸನನ್ನು ಬಯಲಿಗೆ ತರುವರೆ ಮಾಡಿದ ಪ್ರಯತ್ನವು ಶ್ಲಾಘನೀಯವಾದುದಾಗಿದೆ.

ಇಲ್ಲಿಯ ರೈಲ್ವೆ ಸ್ಟೇಶನಿನ ಲಾಂದರನ್ನು ಕದ್ದುಕೊಂಡರೆಂಬದಾಗಿ ಆಪಾದಿಸಲ್ಪಟ್ಟ ಮಾನುವೇಲ್ ಗಿಡಿಯೋನನಿಗೆ ೨ ತಿಂಗಳ ಕಠಿಣ ಸಜೆಯೂ ಸೀಯಾಳಿಬ್ಬಾರಿಗೆ ೧ ತಿಂಗಳ ಕಠಿಣ ಸಜವೂ ವಿಧಿಸೋಣಾಯಿತು.

ಮುನ್ಸಿಪಾಲಿಟಿಯ ಮುಖ್ಯ ಮುಖ್ಯ ದಾರಿಗಳಲ್ಲಿ ಅಲ್ಲದೆ ಅಡ್ಡ ದಾರಿಗಳಲ್ಲಿರುವ ಲಾಂದರು ಕಂಭಗಳನ್ನು ಹಚ್ಚಿಸುವ ರೂಢಿಯು ಕಮ್ಮಿಯಾಗುತ್ತಿದೆಂತಲೂ ದಾರಿ ಕಳ್ಳರು ಹೆಚ್ಚಿರುವ ಇಂಥಾ ಸಮಯದಲ್ಲಿ ಲಾಂದರುಗಳಿಲ್ಲದ ದಾರಿಗಳಲ್ಲಿ ಮನುಷ್ಯರು ಹೋಗುತ್ತಾರೋ ಹಂದಿಗಳು ಹೋಗುತ್ತವೋ ಎಂಬದಾಗಿ ಗೊತ್ತು ಹಚ್ಚುವದು [illegible] ನರಿಗೆ ಕಷ್ಟಸಾಧ್ಯವಾಗಿದೆಂದೂ ಲಾಂದರುಗಳು ಹಚ್ಚಿರುವ ಕೆಲವು ದಾರಿಗಳ ಸಂಬಂಧ [illegible] ರಿಪೋರ್ಟುಮಾಡಿರುವರೆಂದೂ ಕೇಳುತ್ತೇವೆ.

ಕೊಲ್ಲೂರು ದಾಸಪ್ಪಶೆಟ್ಟಿ ಹೋಟೇಲಿನ ಸಮೀಪ ದಾರಿಯಲ್ಲಿ ತಾ. ೧೧ನೇ ರಾತ್ರಿ ಗಂ [illegible] ಹೋಗುತ್ತಿರುವಾಗ [illegible] ಆಭರಣಗಳನ್ನು [illegible]
~~~~~

ಮೇಲೆ ಹಾರಿದನು ಅವಳು ಚೆನ್ನಾಗಿ ಬೊಬ್ಬೆ ಹಾಕಿದ್ದರಿಂದ ಜನರು ಸಹಾಯಕ್ಕೆ ಓಡಿ ಒಂದು ಅಲ್ಲಿ ಬೀಟಿನ ಪೋಲಿಸರ ಸಹಾಯದಿಂದ ಸದರಿ ಮಾಪಿಳ್ಳೆಯನ್ನು ಕೈದು ಮಾಡಿರುವರು. ಕೈದುಮಾಡಲ್ಪಟ್ಟ ಮಾಪಿಳ್ಳೆಯು ಪಾವೂರು ಗ್ರಾಮದವನೆಂತಲೂ ಹೆಸರು ಹಮ್ಮದೆಬ್ಯಾರಿ ಎಂದೂ ತಿಳಿಯುತ್ತೇವೆ.

ಇಲ್ಲಿಯ ವೆಬ್‌ಸ್ಟರ್ ಮಾರ್ಕೆಟಿನಲ್ಲಿ ಮಾಂಸ ರಾತಲು ೧ಕ್ಕೆ ೪ ಆಣೆ-೫ಆಣೆಗಿಂತ ಹೆಚ್ಚಿನ ದರದಲ್ಲಿ ಮಾರಕೂಡದೆಂಬದಾಗಿ ಜಿಲ್ಲಾ ಕಲೆಕ್ಟರ್ ದೊರೆಗಳವರು ಕೊಟ್ಟ ಹುಕುಮಿನ ಜಾರಿಯು ಕೆಲವು ಕಾಲ ಮಾತ್ರ ನಡೆಯಿತ್ತೆಂದೂ ಈಗ ಪುನಃ ಒಡ ಜನರಿಗೆ ರಾತಲು ೧ಕ್ಕೆ ೬ ಆಣೆಗಿಂತ ಕಮ್ಮಿ ದರದಲ್ಲಿ ಮಾಂಸ ಸಿಕ್ಕುವದಿಲ್ಲವೆಂದೂ ಒಬ್ಬ ಬಾತ್ಮೀದಾರರು ತಿಳಿಸುವರು. ಈ ವಿಷಯ ಮೇಲ್ಪಟ್ಟ ಆಪೀಸರರು ನಿಗಾಕೊಡಬೇಕಾಗಿದೆ.

ಹಿಂದೆ ತಿಳಿಸಿದಂತೆ ಇಲ್ಲಿಯ ಮುನ್ಸಿಪಾಲ್ ವೈಸ್ ಪ್ರೆಸಿಡೆಂಟರ ಚುನಾವಣೆಯು ಇದೇ ತಾ. ೧೩ರಲ್ಲು ನಡೆದು ಡಾಕ್ಟರ್ ಎಲ್. ಪಿ. ಫೆರ್ನಾಂದಿಸರವರು ವೈಸ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು.

ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ಕೂಡಲಿಕ್ಕಿರುವ ಪರಸ್ಪರ ಸಹಾಯಕ ಸಂಘಗಳ ಸಭೆಗೆ ಅಧ್ಯಕ್ಷರಾಗಲು ಬಹುಮಾನಪಟ್ಟ ಕಾಡ್ಯ್ಯಾರವರು ಸಮ್ಮತ ಕೊಟ್ಟಿರುವರಲ್ಲದೆ ಏಪ್ರಿಲ್ ೬-೭ನೇ ತಾರೀಕುಗಳು ಅವರಿಗೆ ಅನುಕೂಲವಾದ ದಿವಸಗಳಾಗಿರುವದೆಂದೂ ತಿಳಿಸಿರುವದರಿಂದ ಎಪ್ರಿಲ್ ತಾ. ೩ ೪ರಲ್ಲಿ ಈ ಸಭೆಯು ಕೂಡಿಬರುವದು.

ಇಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾಗಿದ್ದ ಐಕೋನ್ಸರವರಿಗೆ ಬೆಳ್ಳಾರೆಗೆ ವರ್ಗವಾಗಿಯದೆ ಇವರ ವರ್ಗವು ಸದ್ಯಾ ನಿಕ್ಷೇಪಿಸಲ್ಪಟ್ಟದೆಂದು ನಿನ್ನೆಯ ದಿನ ತಂತೀ ಬಂದಿರುವದೆಂದು ಕೇಳುತ್ತೇವೆ.

ಜಿಲ್ಲಾ ಕಲೆಕ್ಟರ ದೊರೆಗಳವರು ಮಾರ್ಚಿ ತಿಂಗಳ ತಾ ೫ ಕಿರಿಮಂಜೇಶ್ವರ, ತಾ ೬ ಕುಂದಾಪುರ; ತಾ. ೭ ಕುಡ್ಪಿ, ತಾ. ೮ ಉಡ್ಪಿ, ತಾ ೯ ಕಾಪು, ತಾ. ೧೦ ಮುಲ್ಕಿ, ತಾ. ೧೧—೧೨ ಮುಲ್ಕಿ ತಾ ೧೩ ಮಂಗಳೂರು, ಈ ರೀತಿ ಸರ್ಕೀಟು ಬೆಳಸುವರು.

ಮೊಗೇಯರರ ಶ್ರೀ ಜ್ಞಾನೋದಯ ಸಮಾಜ ಮಂದಿರ ನಿರ್ಮಾಣದ ಸಹಾಯಾರ್ಥವಾಗಿ ಮುಂಬಯಿಯಲ್ಲಿರುವ ರಾ| ಕೆ. ಎಸ್ ಐಯ್ಯರ್ ರೂ. ೫; ರಾ' ಮಗನಲಾಲ ಪಿದಲಾಲ ರೂ. ೩, ರಾ ವಿಟ್ಟಲ್‌ರಾವ್ ಪುರೋಬ ರೂ ೧; ರಾ| ಕೊಲ್ನಾಡು ಒಳಿಕೆ ಮನೆ ಕೃಷ್ಣಶೆಟ್ಟಿ ರೂ. ೧; ರಾ| ಪೊಲಿಪು ಬಡ್ಡಿ ಮನೆ ಗುರುವ ರೂ ೧; ರಾ| ಪುಂಡಲೀಕಬಾಳ್ಗಿ ಮ್ಯೋತಿ ರೂ. ೧, ರಾ| ಆರ್. ಎಮ್. ಹಕೀಮ್ ಆಣೆ ೮; ರಾ| ಜಗಮನ್ದಾಸ ಎನ್ ಮೊರೆಲ್ ಆಣೆ ೮; ರಾ| ಆತ್ಮರಾವ್ ಗೋವಿಂದ ಆಣೆ ೮, ರಾ| ಶಂಕರ ಹರಿ ಆಣೆ ೪, ರಾ| ಅನಂತ ಪರ್ದೇಸಿ ಆಣೆ ೪, ರಾ| ಗಣಪತಿ ಬಾಳ್ಗಿ ಆಣೆ ೪ನ್ನು ರಾ| ಬಿ. ತಿಮ್ಮಪ್ಪ ಕರಿಯ ಮದಣ್ಣಾಯರ ಮುಖಾಂತರ ಜ್ಞಾನೋದಯ ಸಮಾಜದ ಸೆಕ್ರೆಟರಿಯವರಾದ ರಾ| ಬಿ. ಎಮ್. ತಿಂಗಳಾಯರವರಿಗೆ ಕಳುಹಿಸಿಕೊಟ್ಟಿರುವ ದಾನಕ್ಕಾಗಿ ಸಮಾಜದವರು ದಾತರನ್ನು ಈ ಮೂಲಕ ವಂದಿಸುವರು.

ಸರ್. ನಾರಾಯಣ ಚಂದಾವರಕಾರರವರು ತಾ. ೧೭ರಲ್ಲು ಜಪ್ಪಿನಲ್ಲಿರುವ ರೋಮನ್ ಕೆಥೋಲಿಕರ ಕೆಲವು ಸಂಸ್ಥೆಗಳನ್ನು ಸಂದರ್ಶಿಸಿ ಬಹು ಸಂತೋಷಪಟ್ಟರು. ಸರ್. ಚಂದಾವರಕಾರರವರು ಮೊದಲಾಗಿ ಸೈಂಟ್ ಜೋಸೆಫ್ ಹ್ಯಾಯರ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ, ಶಾಲಾ ಅಭಿವೃದ್ಧಿಯನ್ನು ನೋಡಿ ಸಂತುಷ್ಟರಾದರು. ಅಲ್ಲಿಂದ ಸೆಂಟ್ ಆನ್ಸ್ ಮೆಖಾನಿಕಲ್ ವರ್ಕ್ ಶೋಪಿಗೆ ಹೋದರು. ಅಲ್ಲಿ ಸುಮಾರು ೬೦೦ ಶಾಲಾ ಬಾಲಕರು ತಮ್ಮ ಉಪಾಧ್ಯಾಯರ ಸಂಗಡ ಸರ್. ಚಂದಾವರಕಾರರನ್ನು ಕಾದಿದ್ದು ವಂದಿಸಿದರು. ಸೈಂಟ್ ಕ್ಸಾವಿಯರ್ಸ್ ಶಾಲಾ ಮಕ್ಕಳು ಸ್ವಾಗತ ಹಾಡನ್ನು ಹಾಡಿದನಂತರ ವರ್ಕ್ ಶೋಪಿನ ಒಳಗೆ ಹೋಗಿ ಎಲ್ಲಾ ಕೆಲಸಗಳನ್ನು ನೋಡಿ ಸಂತೋಷಪಟ್ಟರು. ಕಡೆಗೆ ಅಲ್ಲಿ ಕೂಡಿದ್ದ ಮಕ್ಕಳು ಉಪಾಧ್ಯಾಯರ ಸಂಗಡ ಸರ್ ಚಂದಾವರಕಾರರ ಗ್ರೂಪ್ ಫೋಟೋ ತೆಗೆಯಿಸಲಾಯಿತು.

ತಾ. ೧೭ರಲ್ಲು ಸರ್. ಚಂದಾವರಕಾರರವರು ಸೈಂಟ್ ಕ್ಸಾವಿಯರ್ಸ್ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ತೆರೆಯೋಣಾದ ಮರದ ಕೆಲಸದ ತರಗತಿಯನ್ನು ನೋಡಿ ಕಾಲೋಚಿತ ಬುದ್ಧಿವಾದವನ್ನಿತ್ತರು. ಸಾಯಂಕಾಲ ಬ್ರಹ್ಮಸಮಾಜದವರು ಗಣಪತಿ ಸೆಕಂಡರಿ ಶಾಲೆಯಲ್ಲಿ ಏರ್ಪಡಿಸಿದ ಆತಿಥ್ಯ ಉಪಚಾರವನ್ನು ಸ್ವೀಕರಿಸಿದರು. ಈ ಆತಿಥ್ಯ ಉಪಚಾರಕ್ಕೆ ಪಟ್ಟಣದ ಅನೇಕ ಗೃಹಸ್ಥರೂ, ಗೃಹಸ್ಥೆಯರೂ ಹಾಜರಿದ್ದು ಸರ್. ಚಂದಾವರಕಾರರೊಡನೆ ಆ ದಿವದ ಸಂತೋಷದಲ್ಲಿ ಭಾಗಿಗಳಾದರು. ಮಹಾಲಕ್ಷ್ಮೀ ಹೊಟೇಲಿನವರು ಭಕ್ಷ್ಯಾದಿಗಳನ್ನು ಸಂತುಷ್ಟಿಕರವಾಗಿ ಮಾಡಿ ಅತಿಥಿಗಳನ್ನು ತೃಪ್ತಿಗೊಳಿಸಿದರು

ತಾ ೧೮ನೇ ಬೆಳಿಗ್ಯೆ ಸರ್. ಚಂದಾವರಕಾರರವರು ಮೈಲ್ ಬಂಡಿಯಲ್ಲಿ ಕಲಿಕೋಟೆಗೆ ಹಿಂತೆರಳಿದರು.

ಈ ತಿಂಗಳಲ್ಲಿ ಕಡೆಗೆ ತನಕಿಯಾದ ಸೆಶ್ಶನ್ಸ್ ಮೊಕದಮೆಯು ಕಾರ್ಕಳ ಸಬ್ ಮೆಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟದ್ದಾಗಿತ್ತು ಈ ಮೊಕದ್ದಮೆಯಲ್ಲಿ ಜಾಕಿಕಸ್ತಲಿನೋ ಮತ್ತು ಇತರ ೩ ಮಂದಿ ಕೂಡಿ ನವಂಬರ ತಾ ೧೩ರಲ್ಲು ಕಡ್ತಲ ಗ್ರಾಮದ ಜನಾರ್ಧನ ಬಲಿರಾಯರ ಮನೆಗೆ ನುಗ್ಗಿ ೧೩೦೦ ರೂಪಾಯಿ ಕ್ರಯ ಬಾಳುವ ರೂಪಾಯಿ, ಕರೆನ್ಸಿ ನೋಟು, ಆಭರಣ ಇತ್ಯಾದಿಗಳನ್ನು ಜಾರಿಸಿಕೊಂಡು ಹೋದರೆಂಬದಾಗಿ ಆಪಾದಿಸಲ್ಪಟ್ಟಿದ್ದರು ೩ನೇ ಆಪಾದಿತ ದಾವಿದ್ ಲೋಬನು ತನ್ನ ಅಪರಾಧವನ್ನು ಒಪ್ಪಿದ್ದರಿಂದ ಅವನಿಗೆ ಅವನ ಸ್ವಂತ ಒಪ್ಪಿಗೆಯ ಮೇಲೆ ಶಿಕ್ಷೆ ವಿಧಿಸಲಾಯಿತು. ಉಳಿದವರು ಅಪರಾಧಿಗಳಲ್ಲವೆಂತ ಸಾಧಿಸಿದರು ಜೂರಿಯವರು ೧ನೇ ಮತ್ತು ೪ನೇ ಆಪಾದಿತರು ತಪ್ಪಿತಸ್ಥರೆಂದೂ ೨ನೇ ಆಪಾದಿತ ಲಿಂಗು ಪೂಜಾರಿ ಅಪರಾಧಿಯಲ್ಲವೆಂದೂ ಅಭಿಪ್ರಾಯಪಟ್ಟರು ಜಡ್ಜರು ೧ ೩ ಮತ್ತು ೪ನೇ ಆಪಾದಿತರಿಗೆ ಮೂರು ಮೂರು ವರ್ಷಗಳ ಕಠಿಣ ಸಜಾ ವಿಧಿಸಿ ೨ನೇ ಆಪಾದಿತನನ್ನು ಖುಲಾಸು ಪಡಿಸಿದರು.

ತಾ. ೧೭ನೇ ರಾತ್ರಿ ಮ. ರಾ. ಬೊಳಾರ್ ಬ್ಯಾಬುರಾಯರ ಮನೆಯಲ್ಲಿ ಕೆಲವು ಚಿಲ್ಲರೆ ಕಳವುಗಳು ನಡೆದಿರುವವು.

ರಾತ್ರಿ ಬೀಟಿನ ಪೋಲೀಸಿನವರು ಬೊಕ್ಕಪಟ್ಟಣದಲ್ಲಿ ಒಬ್ಬನನ್ನು ನ್ಯೂಸೆನ್ಸ್ ಆಕ್ಟಿನ ಪ್ರಕಾರ ಕೈದು ಮಾಡಲು ಕೈದು ಮಾಡಲ್ಪಟ್ಟವನ ಪಕ್ಷದವರಿಗೂ ಪೋಲೀಸರಿಗೂ ಜಟಾಪಟಿಯಾಗಿ ಕೈದು ಮಾಡಲ್ಪಟ್ಟವನನ್ನು ಅವನ ಪಕ್ಷದವರು ಪೋಲಿಸರಿಂದ ಎಳಕೊಂಡು ಹೋಗಿಬಿಟ್ಟರೆಂದೂ ಈ ವಿಷಯ ಉಭಯ ಕಡೆಯ ಫಿರ್ಯಾದಿ ಆಗಿರುವದೆಂದೂ ಕೇಳುತ್ತೇವೆ

ಮದ್ಯಪಾನ ಮಾಡಿ ಮತ್ತನಾಗಿ ದಿನಾಲೂ ಸಂಕಟಕರವಾದ ಕಷ್ಟವನ್ನು ಕೊಟ್ಟು ಪೀಡಿಸುತ್ತಿದ್ದ ತನ್ನ ಗಂಡನನ್ನು ಶ್ರೀ ಜ್ಞಾನೋದಯ ಸಮಾಜದ ಮೂಲಕ ಸಂಪೂರ್ಣ ಮದ್ಯಪಾನ ನಿಷೇಧಕನಾಗುವಂತೆ ಮಾಡಿಸಿ ಸುಮಾರು ನಾಲ್ಕು ವರುಷಗಳ ಮೊದಲು ಆತಗೆ ಸಭೆಯಲ್ಲಿ ಚಿನ್ನದ ಬಳೆಯನ್ನು ತೊಡಿಸಿದ ತನಿಯರು ಎಂಬವಳನ್ನೂ ಅವಳ ಗಂಡ ಕರ್ಗುಡ ಎಂಬವನನ್ನೂ ಇಲ್ಲಿಗೆ ಬಂದಿದ್ದ ಸರ್ ನಾರಾಯಣ ಗಣೇಶ ಚಂದಾವರ್ಕಾರರವರು ಕಳದ ಶುಕ್ರವಾರ ಮಡಿಕೇರಿಗುಡ್ಡೆ ಬಂಗಲೆಗೆ ಬರಮಾಡಿಸಿ, ಮದ್ಯಪಾನಾಸಕ್ತನಾಗಿದ್ದ ಮನಸ್ಸನ್ನು ಹ್ಯಾಗೆ ನಿಗ್ರಹಿಸಿಕೊಂಡರೆಂಬ ವೃತ್ತಾಂತವನ್ನೂ ಅವರ ಮೊದಲಿನ ಮತ್ತು ಈಗಿನ ಜೀವನ ಚರಿತ್ರೆಯನ್ನೂ ಅನುಕೂಲಾಗ್ರವಾಗಿ ವಿಚಾರಿಸಿ ಬರಕೊಂಡರಲ್ಲದೆ, ಸ್ತ್ರೀಯರಿಂದ ಎಷ್ಟು ದೊಡ್ಡ ಕಾರ್ಯವಾಗುವದೆಂದೂ, ಮಂಗಳೂರಲ್ಲಿ ಇದು ತನಗೆ ಸಿಕ್ಕಿದ ಒಂದು ವಿಶೇಷ ವಾರ್ತೆ ಎಂದೂ ಅಭಿಪ್ರಾಯಪಟ್ಟು ಗಂಡ ಹೆಂಡರಿಬ್ಬರಿಗೂ ಧನ್ಯವಾದವನ್ನು ಕೊಟ್ಟು ಸಂತೋಷದಿಂದ ಇನಾಮುಗಳನ್ನು ಕೊಟ್ಟು ಕಳುಹಿಸಿದರು.

ಲುವಿಸ್ ಕ್ರೈಲೋ ಎಂಬ ಜಟ್ಕಾ ಡ್ರೈವರನು ವೆಟರಿನರಿ ಆಸಿಸ್ಟಾಂಟರು ಅಯೋಗ್ಯವೆಂದು ತೀರ್ಮಾನಿಸಿದ ಕುದುರೆಯನ್ನು ಗಾಡಿಗೆ ಕಟ್ಟಿದ್ದರಿಂದ ಹೆಕ್ನಿ ಕರೇಜು ಆಫೀಸರರಾದ ಮೆ| ಪಿ. ದೇಸರವರು ಅವನ| ಮೇಲೆ ಮೊಕದಮೆ ನಡಿಸಿದಲ್ಲಿ ಟೌನ್ ಮೇಜಿಸ್ಟ್ರೇಟರು ಲುವಿಸ್ ಕ್ರೈಲೋನಿಗೆ ೧೦ ರೂಪಾಯಿ ಜುಲ್ಮಾನೆ ವಿಧಿಸಿದರು.

ಇದೇ ತಾ. ೧೪ನೇ ರಾತ್ರಿ ೯॥ ಘಂಟೆಗೆ ಫಳನೀರಿನಲ್ಲಿ ವಾಸಿಸುವ ಮೇಳದ ರಾಧ ಎಂಬ ಹೆಸರಿನ ಒಬ ಹೆಂಗಸು ಬಾವಿಗೆ ಬಿದ್ದು ಆತ್ಮಹತ್ಯ ಮಾಡಿಕೊಂಡಿರುವಳು.

ತಾ. ೧೧ನೇ ರಾತ್ರಿ ೮ ಗಂಟೆಗೆ ಹಾಜಬ್ಯಾರಿ ಎಂಬವನು ಬಂದರದಲ್ಲಿ ಮರದ ಕೊರಡುಗಳನ್ನು ಕದ್ದುಕೊಂಡು ಹೋಗುವಾಗ ಮುಲ್ಕಿ ಕನ್‌ಸ್ಟೇಬಲ್ ಜಾಕ್ರಿಖಾನರು ಅವನನ್ನು ಕೈದು ಮಾಡಿರುತ್ತಾರೆ.

ತಾ. ೧೬ನೇ ರಾತ್ರಿ ಮಂಗಳಾದೇವಿ ರಸ್ತೆಯಲ್ಲಿರುವ ರೈಲ್ವೇ ಗೇಟಿನ ಸಮೀಪ ರಾತ್ರಿ ೮॥ ಗಂಟೆಗ ಇಬ್ಬರು ಹೊಲ್ತಿ ಹೆಂಗಸರು ಹೋಗುತ್ತಿರುವಾಗ ಗೇಟಿನ ಸಮೀಪ ಒಬ್ಬನು ಕಳ್ಳನು ಅವರ ಮೇಲೆ ಹಾರಿ ಕಿವಿಗೆ ಕೈಹಾಕುತ್ತಿರುವಷ್ಟರಲ್ಲಿ ಅವರು ಕೂಗಿಕೊಂಡದ್ದರಿಂದ ಕಳ್ಳನು ಓಡಿ ರಿಟಾಯರ್ಡ್ ಹೆಡ್‌ಕನ್‌ಸ್ಟೇಬಲ ಪುಟ್ಟ ಎಂಬವರು ಬಾಡಿಗೆಗೆ ಕೊಟ್ಟಿರುವ ಆ ದಾರಿಯ ಆಜುಬಾಜಿನಲ್ಲಿರುವ ಮನೆಯೊಂದಕ್ಕೆ ನುಗ್ಗಿಕೊಂಡನೆಂತ ಕೇಳುತ್ತೇವೆ.

ಇದೇ ತಾ ೧೩ನೇ ರಾತ್ರಿ ಮಡಿಕೇರಿಗುಡ್ಡೆಯಲ್ಲಿ ವಾಸಿಸುವ ಮೆ| ಆನಂದನ್‌ರವರ ಮನೆಯಲ್ಲಿ ಕಟ್ಟಿದ್ದ ಅವರ ಒಂದು ಆಡು ಕಳವಾಗಿರುವುದು

ಮುನ್ಸಿಪಾಲ್ ವಾರ್ಡ ನಂಬ್ರ IV ೧೪೯ನೇ ಮನೆಯಲ್ಲಿ ಇದೇ ತಾ. ೧೫ರಲ್ಲು ಒಬ್ಬ ಕಳ್ಳನು ಅವಿತುಕೊಂಡಿದ್ದನು ಸದರಿ ಮನೆಯ ಹೆಂಗಸು ಸುಮಾರು ೯ ಗಂಟೆಗೆ ಮಲಗಲಿಕ್ಕೆ ಹೋಗುವಾಗ ಬಾಗಲುಗಳ ಚಿಲುಕು ಹಾಕಿದೆಯೋ ಎಂದು ನೋಡಲು ಕೈಯಲ್ಲಿ ದೀಪ ಹಿಡಕೊಂಡು ಹೆಬ್ಬಾಗಲಿನ ಸಮೀಪ ಬಂದು ಮಾಳಿಗೆಯ ಮೆಟ್ಲಿನ ಹತ್ತಿರ ನಿಲ್ಲಲು ಅವಿತುಕೊಂಡಿದ್ದ ಕಳ್ಳನು ಫಕ್ಕನೆ ಎದ್ದು ಹೆಂಗಸಿನ ಕೈಯೆಲ್ಲಿದ್ದ ದೀಪವನ್ನು ಕೆಳಕ್ಕೆ ಹಾರಿಸಿ ಬಾಗಲಿನ ಚಿಲುಕು ತೆಗೆದು ಓಡಿ ಹೋದನಂತೆ. ಹೆಂಗಸು ಕೂಗಿಕೊಂಡದ್ದರಿಂದ ದಾರಿಯಲ್ಲಿ ಹೋಗುವ ಜನರು ಓಡಿ ಬಂದು ಹಿತ್ತಲನ್ನೆಲ್ಲಾ ಹುಡುಕ್ಯಾಡಿದರೂ ಕಳ್ಳನ ಪತ್ತೆಯಾಗಲಿಲ್ಲ. ಮರುದಿನ ಪುನಃ ಆ ಮನೆಯ ವಿದ್ಯಾರ್ಥಿಗಳಿಬ್ಬರು ರಾತ್ರಿ ದೀಪ ಹಿಡಕೊಂಡು ಹೊರ ಬಂದಾಗ ಮನೆಯ ಹಿಂದುಕಡೆಯಲ್ಲಿ ಅವಿತುಕೊಂಡಿದ್ದ ಇಬ್ಬರು ಕಳ್ಳರು ಧರೆ ಹಾರಿ ಓಡಿಹೋಗಿರುವರೆಂತ ಕೇಳುತ್ತೇವೆ.

ಮ ರಾ. ಬಿ ಬಾಬುರಾಯರೂ ಮೆ. ಎಸ್. ಅಲ್ವಾರಿಸರೂ ಮಂಗಳೂರು ಶಹರಿನ ಸ್ಪೆಶಿಯಲ್ ಮೇಜಿಸ್ಟ್ರೇಟರಾಗಿ ನೇಮಕವಾಗಿದ್ದಾರೆ.

ಈ ಕೆಳಗೆ ಕಾಣಿಸಿದವರು ಮಂಗಳೂರು ಶಹರಿನ ೩ನೇ ಕ್ಲಾಸು ಸ್ಪೆಶಿಯಲ್ ಮೇಜಿಸ್ಟ್ರೇಟರಾಗಿರುವರು ರಾ ಎಸ್. ನಾಗಪ್ಪನಾಯಕ್, ಮೆ ಎಮ್ ಎ ಸಿಕೇರ, ಮೆ ಜೆ ಜೆ ಫೆರ್ನಾಂದಿಸ್, ರಾ ಕೆ ಕೃಷ್ಣಸೂಲಯ, ರಾ. ಬಾಲಕೃಷ್ಣ ಶೆಟ್ಟಿ, ರಾ. ಎಸ್ ವೆಂಕಟರಾವ್, ರಾ ಎಚ್ ಕೊರಗಪ್ಪ, ಮೆ ಮುಹಮ್ಮದ್ ಖಾನ್ ಸಾಹೆಬ್ ಬಹದ್ದೂರ್, ಮೆ ಹಗಲ್ವಾಡಿ ಮುಹಮ್ಮದ್, ಪುತ್ತೂರ್ ಸಾಹೆಬ್ ಇವರೇ

ತಾ. ೧೪ನೇ ಆದಿತ್ಯವಾರ ಕೆನರಾ ಹೈಸ್ಕೂಲಿನಲ್ಲಿ ಕೊಯಂಬುತ್ತೂರು ಕೊಒಪರೇಟಿವ್ ಕನ್ಪರೆನ್ಸ್ ಸಂಬಂಧ ಕೂಡಿದ ಸಭೆಗೆ ಮ| ರಾ| ಎಸ್. ರಘುನಾಥಯ್ಯನವರು ಅಧ್ಯಕ್ಷರಾಗಿದ್ದರು. ಈ ಸಭೆಯಲ್ಲಿ ಆಮಂತ್ರಣ ಕಮಿಟಿಯು ಏರ್ಪಡಿಸಲ್ಪಟ್ಟು ಈ ಕಮಿಟಿಗೆ ಉಡ್ಪಿ ಖಾನ್ ಸಾಹೇಬ್ ಹಾಜಿ ಖಾಸೀಮ್ ಸಾಹೇಬ ಬಹದ್ದೂರರವರು ಅಧ್ಯಕ್ಷರಾಗಿಯೂ ರಾ| ಎಮ್. ಶಿವರಾವ್, ರಾ| ಯು. ಸಿ ಕೃಷ್ಣ ಭಟ್ಟ, ರಾ| ಎ. ಬಾಲಕೃಷ್ಣ ಸೆಟ್ಟಿ, ಮೆ| ಎಸ್. ಅಲ್ವಾರಿಸ, ಮೆ| ವಿ. ಎಮ್. ಪಿಂಟೋ, ರಾ| ವಿ ಎಸ್ ಕಾಮತರು ಕಾರ್ಯದರ್ಶಿಯರಾಗಿಯೂ ಆರಿಸಲ್ಪಟ್ಟಿರುವರು. ಆಮಂತ್ರಣ ಕಮಿಟಿಯ ಸಭೆಯು ಇದೇ ತಾ. ೨೦ನೇ ಶನಿವಾರ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಕೂಡಿಬರುವದು

ವಿಕ್ಟೋರಿಯ ಗರ್ಲ್ಸ್‌ಸ್ಕೂಲಿನ ದಾರಿಯಲ್ಲಿ ತಾ. ೧೭ನೇ ರಾತ್ರಿ ಒಬ್ಬ ಗಾಣಿಗ ಹುಡುಗನ ಕಿವಿಯಿಂದ ಕಳ್ಳರು ಒಂಟಿಯನ್ನು ಜಾರಿಸಿಕೊಂಡು ಹೋಗಿರುವರು.

ಮಾರಾಟಕ್ಕೆ ಸಿದ್ಧವಾಗಿದೆ.

ಪಂಡಿತ ಮಂಗಳೂರು ನಾರಾಯಣಾಚಾರ್ಯರಿಂದ ಗುಣಿಸಿ ಪ್ರಕಟಿಸಲ್ಪಟ್ಟ, ರಾಕ್ಷಸ ಸಂವತ್ಸರದ ಪಂಚಾಂಗವು ಮಾರಾಟಕ್ಕೆ ಸಿದ್ಧವಾಗಿರುತ್ತದೆ.

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೆಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು.

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಟಗಳಿಂದ ಕೂಡಿರುವುದು. ಕ್ರಯ ಪ್ರತಿಯೊಂದಕ್ಕೆ ರೂ. 1—8—0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್,
ಮಂಗಳೂರು

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road BOMBAY.

ಏಜೆಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಅರ್ಧ ಬೆಲೆ!

ಒಂದು ತಿಂಗಳ ಕನಕ ಮಾತ್ರ



ನಮ್ಮ ಸೆಟಿಸ್‌ಫೇಕ್ಷನ್ ಫ್ಲೂಟ್ ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತದಲ್ಲದೆ ಎಲ್ಲಾ ವಾಯುಗುಣಗಳಲ್ಲಿಯೂ ಬಾಳುವಂಥಾದ್ದಾಗಿದೆ. ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ. ಗಾಳಿ ಬರುವ ಪೆಟ್ಟಿಗೆಯು ಎಂಥಾ ಶಿಖೆಯನ್ನೂ ತಡೆಯುವದು. ಖಾಯುಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು.

ಕ್ರಯ ಸಿಂಗಲ್ ರೀಡ್ ರೂ. 38, 44, 50; ಈಗ ರೂ. 19, 22, 25ಕ್ಕೆ ಕೊಡಲ್ಪಡುವದು. ಡಬ್ಬಲ್ ರೀಡ್ ರೂ. 60, 70, 80; ಈಗ ರೂ. 30, 35, 40ಕ್ಕೆ ಕೊಡೋಣಾಗುವದು. ಆರ್ಡರಿನೊಂದಿಗೆ ರೂ. 5 ಅಡ್ವಾನ್ಸ್ ಕಳುಹಿಸಬೇಕಾಗಿದೆ.

ವಿಳಾಸ:— ನೇಶನಲ್ ಹಾರ್ಮೋನಿಯಮ್ ಕೊ.,
ಸಿಮ್ಲಾ ಪೋಸ್ಟು (ಬಿ) ಕಲ್ಕತ್ತ.

National Harmonium Co.,
Simla P. O. (B) CALCUTTA.

ವಿನೋದ! ಮಾಸಪತ್ರಿಕೆ!

"ಚಾತುರ್ಯ"

ಈ ಮಾಸಪತ್ರಿಕೆಯಲ್ಲಿ ಪತ್ತೇದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯ-ವಿನೋದ, ನೀತಿಸಂಬಂಧ ಲೇಖನಗಳೂ, ಕಥೆಗಳು, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧ ರೂಪಾಯಿ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ.

ವಿಳಾಸ:—ಮ್ಯಾನೇಜರ್ "ಚಾತುರ್ಯ"
ಬೆಂಗಳೂರು, ಸಿಟಿ.

ಈ ಮಹನೀಯರು ೧೮೬೬ರಲ್ಲಿ ಕೊಲ್ಹಾಪುರದಲ್ಲಿ ಜನಿಸಿ ತನಗೆ ೧೮ ವರುಷಗಳ ಪ್ರಾಯವಾಗುವಷ್ಟರಲ್ಲಿ ಮುಂಬಯಿಯ ಎಲ್ಫಿನ್ಸ್ಟನ್ ಕೋಲೇಜಿನಲ್ಲಿ ಮತ್ತು ಪುನೆಯ ಡೆಕ್ಕನ್ ಕೋಲೇಜಿನಲ್ಲಿ ಕಲಿತು ಬಿ. ಎ. ಪರೀಕ್ಷೆ ಪಾಸಾದರು. ಚಿಕ್ಕತನದಿಂದಲೇ ಇವರಲ್ಲಿದ್ದ ಕಾರ್ಯಾಸಕ್ತಿಯೂ ಬುದ್ಧಿಚಾತುರ್ಯವೂ ತ್ಯಾಗಶೀಲತೆಯೂ ಸಂದರ್ಭಾನುಸಾರ ವ್ಯಕ್ತವಾಗುತ್ತಿತ್ತು. ಬಿ. ಎ. ಪರೀಕ್ಷೆ ತೇರಿ ಒಂದೊಡನೆ ಇವರು ಆದೇ ಸಮಯದಲ್ಲಿ ಆಪ್ಟೆ, ಆಗರಕಾರ್ ಮತ್ತು ತಿಲಕರವರಿಂದ ಸ್ಥಾಪಿಸಲ್ಪಟ್ಟ ದಕ್ಷಿಣ ಪ್ರಾಂತ್ಯಗಳ ವಿದ್ಯಾಭಿವೃದ್ಧಿ ಸಂಘದ ಮೆಂಬರರಾಗಿ ಸೇರಿಕೊಂಡು ತ್ಯಾಗಶಾಲಿಗಳಾದ ಪ್ರಸಿದ್ಧ ಅಧ್ಯಾಪಕರ ಸೇವೆಯಿಂದ ಲೋಕದಲ್ಲಿ ಮೆರೆಯುತ್ತಿರುವ ಪುನೆಯ ಫರ್ಗುಸನ್ ಕೋಲೇಜಿನ ಶಿಕ್ಷಕವೃತ್ತಿಯನ್ನು ವಹಿಸಿಕೊಂಡರು. ಫರ್ಗುಸನ್ ಕೋಲೇಜಿನ ಸ್ಥಾಪಕರು ಇವರು ಅಲ್ಲದಿದ್ದರೂ ಆ ವಿದ್ಯಾಸಂಸ್ಥೆಯು ಶಾಶ್ವತವಾಗಿ ಬಾಳುವಂತೆ ಇದಕ್ಕೆ ಬೇಕಾದ ದ್ರವ್ಯಸಂಗ್ರಹವು ಇವರಿಂದ ಸಂಗ್ರಹಿಸಲ್ಪಟ್ಟಿತು. ಫರ್ಗುಸನ್ ಕೋಲೇಜಿನಲ್ಲಿ ಇಂಗ್ಲೀಷು, ಗಣಿತ ಮತ್ತು ಅರ್ಥಶಾಸ್ತ್ರಗಳ ಬೋಧಕರಾಗಿ ೧೮ ವರುಷಗಳ ಕಾಲವನ್ನು ಈ ವಿದ್ಯಾಸಂಸ್ಥೆಯ ಸೇವೆಯಲ್ಲಿ ಇವರು ಕಳೆದರು. ಈ ಮಹಾನುಭಾವರು ಬೋಧಕರಾಗಿದ್ದಾಗಲೆ ದೇಶಮಾತೆಯ ಸೇವೆಗೆ ಬೇಕಾದ ಅನುಭವವನ್ನೂ ಶಿಕ್ಷಣವನ್ನೂ ಸಂಪಾದಿಸಿಕೊಂಡರು. ಲೋಕಮಾನ್ಯರಾದ ಕೀರ್ತಿಶೇಷ ಮಹದೇವ ಗೋವಿಂದ ರಾನಡೆಯವರ ಅನುಗ್ರಹವು ಇವರ ಮೇಲೆ ಸಂಪೂರ್ಣವಾಗಿತ್ತು. ರಾನಡೆಯವರಿಂದ ಲೋಕಸೇವೆಗೆ ಬೇಕಾದ ತತ್ವಬೋಧವನ್ನು ಪಡೆದು ರಾನಡೆಯವರ ಸಜೀವ ಸಂಸ್ಮಾರಕವು ಗೋಖಲೆಯಾಗಿರುವರೆಂಬ ಪ್ರಸಿದ್ಧಿಯನ್ನು ಪಡೆದುಕೊಂಡರು. ಫರ್ಗೂಸನ್ ಕೋಲೇಜಿನಲ್ಲಿ ತಿಂಗಳಿಗೆ ರೂ. ೭೫ರ ಸಂಬಳದ ಮೇಲೆ ೨೦ ವರುಷಗಳ ಕಾಲದಲ್ಲಿ ಅಧ್ಯಾಪಕ ವೃತ್ತಿಯನ್ನು ನಡಿಸಿ ನಂತರ ಆ ಸಂಸ್ಥೆಯ ಸೇವೆಯಿಂದ ನಿವೃತ್ತರಾದರು. ಈ ಕೆಲಸದಿಂದ ನಿವೃತ್ತರಾದ ಮೇಲೆ ತಿಂಗಳು ಒಂದಕ್ಕೆ ರೂ. ೩೦ರಂತೆ ಪೆನ್ಶನು ಪಡೆದು ನಂತರ ಕಳೆದ ಶುಕ್ರವಾರದ ರಾತ್ರೆಯ ವರೇಗಿನ ಇವರ ಜೀವನವೃತ್ತಾಂತವನ್ನು ವಿವರಿಸಿ ಹೇಳುವರೆ ಈ ಸಂದರ್ಭವು ಸಾಲದು.

ಪುನೆಯಲ್ಲಿ ಬಹಳ ವರ್ಚಸ್ಸಿನಿಂದ ಮೆರೆಯುತ್ತಿದ್ದ ಸಾರ್ವಜನಿಕ ಸಭೆಯ ಕಾರ್ಯದರ್ಶಿಗಳಾಗಿ ಪ್ರಜಾಸೇವೆಯಲ್ಲಿ ನಿರತರಾದ ವೃತ್ತಾಂತವನ್ನು ವಿವರಿಸಲೋ ಅಥವಾ ತನ್ನ ೨೧ನೇ ವಯಸ್ಸಿನಲ್ಲಿ ಈ ಸಂಘದ ಪರವಾಗಿ ಪ್ರಕಟವಾಗುತ್ತಿದ್ದ ಪತ್ರದ ಸಂಪಾದಕರ ಪದವಿಯನ್ನು ಅಲಂಕರಿಸಿದ ಬಗೆಯನ್ನು ಹೇಳಲೋ? ಇದರ ನಂತರ ಅಂಗ್ಲ ಮತ್ತು ಮರಾಠಿ ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದ 'ಸುಧಾರಕ'ವೆಂಬ ಪತ್ರದ ಸಂಪಾದಕರಾಗಿ ೪ ವರುಷಗಳ ವರೆಗೆ ಮೆರದ ವಿವರದ ವೃತ್ತಾಂತವಿದೆ. ಹಿಂದೂಸ್ಥಾನದ ಸರಕಾರದವರ ಖರ್ಚಿನ ವಿಷಯವನ್ನು ಪರ್ಯಾಲೋಚಿಸುವುದಕ್ಕೆ ವೆಲ್ಬಿ ಪ್ರಭುಗಳ ಅಧ್ಯಕ್ಷತೆಯಲ್ಲಿ ಸೇರಿಸಲ್ಪಟ್ಟ ಕಮ್ಮಿಶನಿನ ಮುಂದೆ ಅಂಗ್ಲಾಂಡದಲ್ಲಿ ಗೋಖಲೆಯವರು ತೋರಿಸಿದ ಪಾಂಡಿತ್ಯದಿಂದ ಇವರ ಖ್ಯಾತಿಯು ಆ ಪ್ರಾಂತ್ಯಗಳಲ್ಲಿ ಸಹ ಬೀರಿದ್ದ ವಿಷಯವು ಮರೆಯದಿರುವದು. ಪ್ಲೇಗು ರೋಗವು ಉಲ್ಬಣವಾದಾಗ ಅದರ ನಿವೃತ್ತಿ ಬಗ್ಗೆ ಇವರು ಪಟ್ಟ ಸಾಹಸವನ್ನು ಮುಂಬಾಯಿ ಪ್ರಾಂತ್ಯದವರು ಇನ್ನೂ ಕೊಂಡಾಡುತ್ತಿರುವರು. ಮುಂಬಯಿ ಸಂಸ್ಥಾನದ ನ್ಯಾಯನಿರ್ಮಾಣ ಸಭೆಯಲ್ಲಿ ೧೮೯೯—೧೯೦೧ ವರುಷಗಳಲ್ಲಿ ಪ್ರಜಾಕಡೆಯಿಂದ ಆರಿಸಲ್ಪಟ್ಟ ಮೆಂಬರರಾಗಿದ್ದರು. ೧೯೦೨ನೆಯಿಂದ ಮರಣಾಂತ್ಯದ ವರೆಗೂ ಇಂಡಿಯಾ ಸರಕಾರದ ನ್ಯಾಯನಿರ್ಮಾಣ ಸಭೆಯಲ್ಲಿ ಸಕಲ ಭಾರತೀಯರ ಕಲ್ಯಾಣಕ್ಕಾಗಿ ಜೀವದಾಸೆಯನ್ನು ಸಹ ಬಿಟ್ಟು ಇವರು ನಡೆಸಿದ ಕಾರ್ಯವೃತ್ತಾಂತದ ಫಲವು ಈಗ ಸರ್ವತ್ರವೂ ಪ್ರತ್ಯಕ್ಷವಾಗಿದೆ. ಕರ್ಜನ್ ಪ್ರಭು, ಮಿಂಟೋಪ್ರಭು ಮತ್ತು ಹಾರ್ಡಿಂಗ್ ಪ್ರಭು—ವ್ಯಾಸರಾಯಿ ಪ್ರಭುಗಳಾದ ಈ ಮೂವರ ಆಡಳಿತೆ ಕಾಲದಲ್ಲಿ ಸರಕಾರಕ್ಕೂ ಪ್ರಜಾವರ್ಗಕ್ಕೂ ಮಾಡಿದ ಉಪಕಾರಕ್ಕೆ ಈ ಪ್ರಭುಗಳೆಲ್ಲರ ಸ್ತುತಿವಚನಗಳೇ ಸಾಕ್ಷ್ಯಗಳಾಗಿರುವವು. ಉಪ್ಪಿನ ತೆರಿಗೆಯನ್ನು ಕಡಿಮೆ ಮಾಡಿಸಿದ ಪುಣ್ಯವೂ, ದೇಶೀಯರಿಗೆ ಸರಕಾರದ ಶ್ರೇಷ್ಠ ಹುದ್ದೆಗಳು ಹೆಚ್ಚೆಚ್ಚಾಗಿ ದೊರಕುವಂತೆ ನಡಿಸಿದ ಸಾಹಸವೂ, ಪ್ರಜಾಹಕ್ಕುಗಳನ್ನು ಮನ್ನಿಸಿ ಮಿಂಟೊ ಮೋರ್ಲೆ ಪ್ರಭುಗಳು ಕೌನ್ಸಿಲಿನ ಏರ್ಪಾಡುಗಳನ್ನು ದಯಪಾಲಿಸುವಂತೆ ಮಾಡಿದ ಪ್ರಯತ್ನಗಳೂ ಇವೆಲ್ಲವೂ ಮುಖ್ಯವಾಗಿ ಈ ಮಹನೀಯರದ್ದಾಗಿರುವವು. ನ್ಯಾಯವಿಧಾಯಕ ಸಭೆಯಲ್ಲಿ ಪ್ರಜಾಧ್ವನಿಯು ಸರಿಯಾಗಿ ಕೇಳಿಸಬೇಕಾದರೆ, ದೇಶದಲ್ಲಿ ನೆಲೆಗೊಂಡಿರುವ ಮೂಢಿದಾರಿದ್ರ್ಯಗಳು ತೊಲಗಿ ಹೋಗಬೇಕಾದರೆ, ಸಾಮಾನ್ಯ ಶಿಕ್ಷಣ ಪ್ರಸರಣೆಯೇ ಉಗತ್ಯವಾದದೆಂದು ತಿಳಿದು ಈ ಶಿಕ್ಷಣಪ್ರಸರಣೆಯ ಅವಶ್ಯಕತೆಯನ್ನು ಸರಕಾರದ ಮತ್ತು ಪ್ರಜಾಜನರ ಮುಂದೊತ್ತಿ ಸರಕಾರದವರು ಈ ಬಗ್ಯೆ ವಿಶೇಷವಾದ ದ್ರವ್ಯ ವಿನಿಯೋಗವನ್ನು ಮಾಡುವಂತೆ ಈ ಪುಣ್ಯಾತ್ಮರು ಬಹಳ ಹೋರಾಡಿಕೊಂಡು ಸಾಧಿಸಿದರು. ಈ ವಿದ್ಯಾದಾನದ ಉಪಕಾರ ಸ್ಮರಣೆಯನ್ನು ಎಷ್ಟು ಮಾಡಿದರೂ ತೀರದು. ದಕ್ಷಿಣ ಆಫ್ರೀಕದ ಭಾರತೀಯರ ಪರವಾಗಿ ಇವರ ಸಾಹಸದಿಂದ ಎಂಥೆಂಥಾ ಕಾರ್ಯಗಳು ಸಾಧ್ಯವಾದವೆಂಬುದು ವಾಚಕರು ತಿಳಿದಿರುವರು. ಕೊಂಗ್ರಸು ಸಭೆ ಮೂಲಕ ಇವರು ರಾಷ್ಟ್ರೀಯ ಐಕ್ಯವನ್ನು ಒಲಪಡಿಸಿದ ವೃತ್ತಾಂತವನ್ನು ನಾವು ಇಲ್ಲಿ ವಿವರಿಸಬೇಕೆಂತಿಲ್ಲ.

ಇವರಿಗೆ ಗಂಡುಮಕ್ಕಳಿಲ್ಲ. ಇವರ ಪತ್ನಿಯರು ಮೊದಲೇ ಮೃತಪಟ್ಟಿರುವರು. ವಿವಾಹವಾಗದ ಇಬ್ಬರು ಬಾಲಿಕೆಯರು ಮಾತ್ರ ಇವರಿಗಿದ್ದಾರೆ. ಸಹಸಂತಾಪ! ಯಾರೊಡನೆ? ನಮ್ಮೆಲ್ಲರ ದೇಶಮಾತೆಗೆ ಈ ವಿಯೋಗ ದುಃಖವು ಪ್ರಾಪ್ತವಾಗಿ ಸರ್ವರೂ ರೋಧಿಸುತ್ತಿರುವಾಗ ಸಹಸಂತಾಪವು ಯಾರೊಡನೆ? ವಿಧಿಯೇ, ಗೋಖಲೆಯ ಪ್ರತ್ಯಕ್ಷ ದರುಶನದಿಂದ ಉಂಟಾಗುತ್ತಿದ್ದ ಹೃದಯಾನಂದವು ಆನಂದ ಸಂವತ್ಸರವು ಮುಗಿಯುತ್ತಿದ್ದಾಗಲೇ ಮುಗಿದು ಹೋಯಿತು. ಗೋಖಲೆ! ಸ್ವದೇಶಾಭಿಮಾನದ ಸಜೀವ ಅಖಂಡ ಮೂರ್ತಿಯಾದ ನಿನ್ನ ಜೀವಿತವು ಧನ್ಯ! ಧನ್ಯ! ನೀನು ಇಹಲೋಕದಲ್ಲಿ ನಡೆಸಿದ ಕಾರ್ಯವೃತ್ತಾಂತದ ಪ್ರಶಂಸೆಗೆ ಇನ್ನೂ ಹಲವು ಸಂದರ್ಭಗಳಿರುವವು. ಮೃತ್ಯುಲೋಕದಿಂದ ತೆರಳಿದ ನಿನ್ನ ಪವಿತ್ರವಾದ ಆತ್ಮಸ್ಮರಣೆಯನ್ನು ಮಾಡುತ್ತ ಪ್ರಕೃತಕ್ಕೆ ತೃಪ್ತಿಗೊಳ್ಳುವೆವು.

ಗೋಪಾಲಕೃಷ್ಣ ಗೋಖಲೆ

ವರಗುಣ ಭೂಷಿತ ನೀಂ
ಪರಹಿತದೊಳೆ ತನ್ನ ಹಿತವ ಕಂಡವ ನೀಂ
ಗುರುವೀತಂ ನಮಗೆಂಬುದ
ಮರೆವುದೆ? ಹಾ! ವಿಧಿಯೆ ನೀನದೇಂ ನಿರ್ದಯನೈ.
ದೀನಾಗ್ರಣಿಯುಹ ಸುತನಂ
ಬೇರೊಂದಂ ಬೇಡದಿರ್ದ ಭಕ್ತಾಗ್ರಣಿಯಂ
ಕ್ರೂರಜವಂ ಕರೆದೊಯ್ದಿರೆ
ಭಾರತ ಭೂಮಾತೆಯೆಂತು ಸೈಸುವಳಕಟಾ!
ಮನ್ನಣೆಯಂ ಸ್ವಾತಂತ್ರ್ಯಮ
ನುನ್ನತಿಯಂ ಭಾತೃಭಾವಮಂ ವಿದ್ಯೆಯುಮಂ
ತನ್ನವರೊಳ್ ನೆಲೆಗೊಳಿಪಾ
ಜನ್ಮದ ದೀಕ್ಷೆಯನು ಬಿಟ್ಟು ಪೋದೆಯ ಸಖನೇ!
ತ್ಯಜಿಸಿದೊಡಂ ನಿಜತನುವಂ
ಸುಜನರ್ ಸತ್ಕೀರ್ತಿಕಾಯರಾಗಿರ್ಪುದರಿಂ
ನಿಜರೂಪಮದಿಲ್ಲದೊಡಂ
ನಿಜಯಶದಿಂ ಬಾಳ್ವನಲ್ತೆ "ಗೋಖಲೆ" ಯೆಂದುಂ?
ದಿನಮಣಿ ಯಸ್ತಮಿಸಿದೊಡಂ
ಪುನರುದಯಮನೊಂದಿ ಲೋಕಮಂ ಬೆಳಗುವವೋಲ್
ಘನನಹ ಗೋಖಲೆಯುಂ ತಾಂ
ಪುನರುದಯಮನೊಂದಿ ಬಾರದಿರನೆ ನಮೊಳ್!

ಕೌಶಿಕ

ಸ್ಟೈಂಟ್ ಆಲ್ಲೋಸಿಯಸ್ ಕೊಲೇಜು ಮಂಗಳೂರು.

ಜೆಜುಯಿಟ್ ಗುರುಗಳು ಈ ಕೊಲೇಜು ಮೂಲಕ ನಡೆಸುವ ವಿದ್ಯಾಭಿವೃದ್ಧಿಯ ಪ್ರಯತ್ನಗಳು ಬಹಳ ತೃಪ್ತಿಕರವಾದ ರೀತಿಯಲ್ಲಿ ನಡೆಯುತ್ತಿವೆ ಎಂತ ಈ ಕೊಲೇಜಿನ ಕಳೆದ ವರುಷದ ವೃತ್ತಾಂತದಿಂದ ತಿಳಿಸಲು ಸಂತೋಷಪಡುತ್ತೇವೆ. ಕೊಲೇಜಿನಲ್ಲಿ ವಿದ್ಯಾರ್ಥಿಗಳ ಒಟ್ಟಿನ ಸಂಖ್ಯೆಯು ೧೩೯೭ ಆಗಿತ್ತು. ವಿದ್ಯಾರ್ಥಿಗಳ ಸಂಖ್ಯೆಯು ಇದರ ಮೊದಲಿನ ವರುಷದಲ್ಲಿ ೧೨೯೯ ಇದ್ದದ್ದರಿಂದ ಗತವರುಷದಲ್ಲಿ ಸುಮಾರು ೧೦೦ ಹುಡುಗರು ಹೆಚ್ಚಿರುವರು. ಕೊಲೇಜಿನ ಮಾಸಪತ್ರಿಕೆಯ ಸಂಪಾದಕರೂ ಹೆಚ್ಚಿನ ಉತ್ಸಾಹದಿಂದ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದ ಫಾದರ್ ಡೆನಿಸ್ ಫೆರ್ನಾಂಡೀಸ್ ಎಸ್ ಜೆ ಮತ್ತು ಫಾದರ್ ಗ್ಸೆಜಿ. ಯಸ್ ಜೆ — ಈ ಎರಡು ಪಂಡಿತರ ಶ್ರಮವನ್ನು ಕೊಲೇಜಿನ ಅಧಿಕಾರಿಗಳು ಶ್ಲಾಘಿಸಿರುತ್ತಾರೆ. ಅವರು ಅನಾರೋಗ್ಯದ ದೆಸೆಯಿಂದ ಕೊಲೇಜನ್ನು ಬಿಟ್ಟು ಹೋಗಬೇಕಾದ್ದರಿಂದ ಇವರ ಬದಲಿಗೆ ಫಾದರ್ ಎಸ್. ಕೊಹಿಲೊ ಎಸ್ ಜೆ ಮಾರ್ಟಿನ್ ಕೊಹಿಲೊ ಎಸ್. ಜೆ. ಮಿ| ಸಿ ಜೆ ವಾರ್ಕ್ ಬಿ. ಎ ಎಂಬವರನ್ನು ಕೊಲೇಜಿನ ಪಂಡಿತರನ್ನಾಗಿ ನೇಮಿಸಿರುವರು. ಇನ್ನೂ ಬಿ ಎ. ಮತ್ತು ಎಲ್ ಟಿ. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದ ಕೆಲವು ಶಿಕ್ಷಕರನ್ನು ಕಳೆದ ವರುಷದಲ್ಲಿ ನೇಮಿಸಿರುವರು. ಒಳ್ಳೇ ತರಬೇತು ಹೊಂದಿದ ಶಿಕ್ಷಕರ ಮತ್ತು ಪಂಡಿತರ ಸಾಹಸದಿಂದ ವಿದ್ಯಾರ್ಥಿಗಳ ಪರೀಕ್ಷೆಯ ಫಲವು ತೃಪ್ತಿಕರವಾಗಿರುವುದು. ಕೊಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿದಂತೆ ಈ ಕೊಲೇಜಿನ ವಿದ್ಯಾರ್ಥಿಭವನದಲ್ಲಿ ಈ ಸಂಖ್ಯೆಯು ಅಧಿಕವಾಗಿರುವುದು. ೧೨೨ ಮಂದಿ ಹುಡುಗರು ವಿದ್ಯಾರ್ಥಿಭವನದಲ್ಲಿರುವರು. ಕಳೆದ ವರುಷ ವಿದ್ಯಾರ್ಥಿಭವನದಲ್ಲಿ ಪ್ರವೇಶ ದೊರಕಿಸಿ ಕೊಡಬೇಕೆಂದು ಬಂದ ೧೨೮ ಮನವಿಗಳಲ್ಲಿ ೭೬ ತಿರಸ್ಕರಿಸಲಾದವು. ಸ್ಥಳದ ಅಡಚಣೆಯು ವಿಶೇಷವಾದ್ದರಿಂದ ಈ ರೀತಿ ವಿದ್ಯಾರ್ಥಿಭವನದಲ್ಲಿ ಹೆಚ್ಚಿನವರನ್ನು ದಾಖಲುಮಾಡಿಕೊಳ್ಳಲಾಗಲಿಲ್ಲವೆಂತ ತಿಳಿಯುತ್ತೇವೆ. ಸದ್ಯದಲ್ಲಿ ಈ ಕೊರತೆಯನ್ನು ಕೊಲೇಜು ಅಧಿಕಾರಿಗಳು ಹೋಗಗೊಳಿಸದೆ ಇರಲಾರರು. ಪಂದ್ಯದಾಟಗಳಲ್ಲಿ ಕೊಲೇಜಿನ ವಿದ್ಯಾರ್ಥಿಗಳು ಕಳೆದ ವರುಷದಲ್ಲಿ ವಿಶೇಷ ಬಹುಮಾನವನ್ನು ಪಡೆದಿರುತ್ತಾರೆ. ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚುವ ಬಗ್ಗೆ ಹಲವು ಗೃಹಸ್ಥರು ಕೊಲೇಜು ಅಧಿಕಾರಿಗಳಿಗೆ ಚಂದಾ ಮೊಬಲಗುಗಳನ್ನೂ ಪುಸ್ತಕಗಳನ್ನೂ ಕೊಟ್ಟಿರುವರು. ಇಂಥವರಲ್ಲಿ ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರಾದ ಮಿ| ಇ ಎಲ್. ಥೋರ್ನ್‌ಟನ್‌ರವರ ಹೆಸರಿರುವದು. ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಏರ್ಪಡಿಸಿದ ಫಂಡಿಗೆ ಮಾನಕ್‌ಜಿ ನವರೋಜಿಯವರು ರೂ ೩,೦೦೦ನ್ನು ಸಹಾಯ ದ್ರವ್ಯವಾಗಿ ಕೊಟ್ಟಿರುವರು. ಗತವರುಷದಲ್ಲಿ ಈ ಸಂಸ್ಥಾನದ ಗವರ್ನರ ದೊರೆಗಳವರು ಕೊಲೇಜಿನಲ್ಲಿ ಸಂದರ್ಶಿಸಿದ ಪ್ರಸ್ತಾಪವು ಕೊಲೇಜು ವೃತ್ತಾಂತದಲ್ಲಿದೆ. ವಿದ್ಯಾ ಪ್ರಸರಣೆಯ ಸಲುವಾಗಿ ತಮ್ಮ ಜೀವಿತವನ್ನೇ ಅರ್ಪಿಸಿರುವ ಜೆಜುಯಿಟರ ಲಾಲನೆಪಾಲನೆಯಲ್ಲಿ ಈ ಕೊಲೇಜಿನ ಅಭಿವೃದ್ಧಿ ಮುಂದಕ್ಕೆ ಸಹ ಇದೇ ರೀತಿ ನಡೆಯಲೆಂಬುದಾಗಿ ಕೋರುತ್ತೇವೆ.

ಯುದ್ಧದಿಂದಾಗುವ ಅನರ್ಥ ಪರಂಪರೆ.

"ಯುದ್ಧಸ್ಯ ಕಥಾರಮ್ಯಾ" ಎಂಬ ಆಭಿಯೋಕ್ತಿಯಂತೆ ಯುದ್ಧದ ವಿಷಯ ಕೇಳುವುದಕ್ಕೂ, ಓದುವುದಕ್ಕೂ ಬಹು ಮನೋಹರವಾಗಿರುತ್ತದೆ. ಆದ್ದರಿಂದ ಇಂತಹ ವಿಷಯದಲ್ಲಿ ಸಂತೋಷ ಪಡುವವರೇ ಅಧಿಕ. ಆದರೆ ಯುದ್ಧದಿಂದಾಗುವ ಅನರ್ಥ ಪರಂಪರೆಗಳನ್ನರಿತು ಇದಕ್ಕಾಗಿ ದುಃಖಿಸುವವರು ಮಾತ್ರ ಅಪರೂಪ. ಈ ವಿಷಯದಲ್ಲಿ, ಸರ್ ಜಾನ್ ಲಬಕ್‌ರವರು ಹೇಳಿರುವುದೇನಂದರೆ "ಐರೋಪ್ಯ ಖಂಡದಲ್ಲಿ ಯುದ್ಧಶಾಖೆಗಾಗಿ ಪ್ರತಿವರ್ಷ ೪೫ ಕೋಟಿ ಪೌಂಡುಗಳು ವ್ಯಯವಾಗುತ್ತವೆ. ಎಂದಿನವರಿವಿಗೆ ಯುದ್ಧಶಾಖೆಯಲ್ಲಿ ಈ ಪ್ರಕಾರ ವ್ಯಯವಾಗುತ್ತಿರುವುದೋ ಅಂದಿನ ವರೆವಿಗೂ ಈ ಖಂಡದವರು ಜ್ವಾಲಾಮುಖಿಯ ಮೇಲಿನ ವಾತಾವರಣದಲ್ಲಿರುತ್ತಾರೆಂದು ತಿಳಿಯಿರಿ. ಆ ಉರಿಯುವ ಬೆಟ್ಟವು ಎಂದು ಜ್ವಾಲೆಯನ್ನು ಹೊರಗೆಸೆಯುವುದೋ ನಿಯಮವಿಲ್ಲ." ಮಾರ್ಕಿಸ್ ಆಫ್ ಸಾಲಿಸ್‌ಬರಿ ಎಂಬವರು "ಐರೋಪ್ಯ ಖಂಡದಲ್ಲಿ ಸೈನ್ಯವನ್ನು ಹೆಚ್ಚಿಸುತ್ತಿರುವ ಪ್ರಕೃತಸ್ಥಿತಿಯು ಕೊನೆಗೆ ಭಯಂಕರವಾದ ಅನರ್ಥದಲ್ಲಿ ಪರಿಸಮಾಪ್ತಿಯಾಗುವುದು." ಎಂಬುದಾಗಿ ಹೇಳಿದ್ದರು. ಈ ಪಂಡಿತೋತ್ತಮರ ಭವಿಷ್ಯವು ಪ್ರಕೃತ ನಿಜವಾಗಿಯೇ ಪರಿಣಮಿಸಿರುವುದಷ್ಟೆ?

The Economy of Human Life ಎಂಬ ಗ್ರಂಥದಲ್ಲಿ "ಸೈನ್ಯವು ಅಧಿಕವಾಗಿಯೂ, ದ್ರವ್ಯವು ವಿಪುಲವಾಗಿಯೂ ಇದ್ದರೆ, ರಾಜನಿಗೆ ರಾಜ್ಯಲೋಭ ಉಂಟಾಗುತ್ತದೆ. ಆಗ್ಗೆ ಅವನು ನಿರ್ಬಲರಮೇಲೆಯೂ; ನಿರಪರಾಧಿಗಳ ಮೇಲೆಯೂ, ಏನಾದರೊಂದು ನಿಮಿತ್ತದಿಂದ ದಂಡೆತ್ತಿ ಹೋಗುತ್ತಾನೆ. ತನ್ನ ಲೋಭಕ್ಕಾಗಿ ನಿರಪರಾಧಿಗಳಾದ ಸಹಸ್ರಾವಧಿ ಜನಗಳನ್ನು ಕೊಲ್ಲಿಸಲು ಈತನು ಸಿದ್ಧನಾಗುವನು. ಇದು ಭಯಂಕರವಾದ ಕೊಲೆಯಲ್ಲವೆ?" ಎಂಬುದಾಗಿ ಹೇಳಲ್ಪಟ್ಟಿದೆ. ಈ ವಿಷಯದ ಗುಣದೋಷಗಳನ್ನು ಅನೇಕರು ಅರಿಯರು. ಆದ್ದರಿಂದ ನಾನಾ ಮೋಸಗಳಿಂದಲೂ, ಯುಕ್ತಿಗಳಿಂದಲೂ, ಆಯುಧಗಳಿಂದಲೂ, ಜನಸಂಹಾರ ಮಾಡುವವರನ್ನು ಕೊಂಡಾಡುತ್ತಾರೆ! ಅವರು ಮಹಾ ಬುದ್ಧಿವಂತರೆಂತಲೂ, ಪರಾಕ್ರಮಿಗಳೆಂತಲೂ, ತಿಳಿಯುತ್ತಾರೆ!! ಈ ವಿಷಯವಾಗಿ ಮೇಲಣ ಗ್ರಂಥದಲ್ಲಿ ಹೇಳಿರುವುದೇನಂದರೆ:—

ಒಬ್ಬನು ಇನ್ನೊಬ್ಬನನ್ನು ಕೊಂದರೆ ಜನಗಳು ಅವನಿಗೆ ಕೊಲೆ ಮಾಡುವನೆಂದು ನಿಂದಿಸುತ್ತಾರೆ. ಆದರೆ ಸಹಸ್ರಾವಧಿ ಜನಗಳನ್ನು ಕೊಂದವನಿಗೆ ವೀರನೆಂದು ಸ್ತುತಿ ಮಾಡುತ್ತಾರೆ! ಇದು ತಪ್ಪು ತಿಳುವಳಿಕೆಯು. ಇಂತಹ ರೂಢಿಯಿಂದ ಸತ್ಯದ ಧರ್ಮವು ವ್ಯತ್ಯಾಸವಾಗುವುದಿಲ್ಲ. ಆದರೆ ಗುಣದೋಷಗಳ ಭಾವನೆಯು ಮಾತ್ರ ಬೇರೆಯಾಗುತ್ತದೆ.

ಜಪಾನದೇಶದ ಒಬ್ಬ ಪಂಡಿತರು ಈ ವಿಷಯವಾಗಿ ಹೇಳಿರುವುದೇನಂದರೆ:— "ಜಪಾನವು ಎಂದಿನವರೆವಿಗೆ ಕೇವಲ ಕೈಗಾರಿಕೆಯ ಪದಾರ್ಥಗಳನ್ನು ಐರೋಪ್ಯಕ್ಕೆ ಕಳುಹಿಸುತ್ತಿದ್ದಿತೋ ಅಲ್ಲಿಯ ವರೆವಿಗೂ ನಮಗೆ ಅಶಿಕ್ಷಿತರೆಂಬುದಾಗಿಯೇ ತಿಳಿಯುತ್ತಿದ್ದರು. ಆದರೆ ಎಂದು ಜಪಾನವು ಸಹಸ್ರಾವಧಿ ರಶಿಯನ್ನರನ್ನು ಯಮನಗರಕ್ಕೆ ಕಳುಹಿಸಿತೋ ಅಂದಿನಿಂದ ಅದು ಸುಧಾರಿಸಿದ ದೇಶಗಳಲ್ಲಿ ಸೇರಿತು! ನ್ಯಾಯವನ್ನು ನೋಡಿ!"

ಪ್ರಾನ್ಸಿಸ್ ಮೆರಿ ಅರೋಯಥ್ ಎಂಬವರು "ಯುದ್ಧವನ್ನು ಕೆಲವರು ವಿದ್ಯೆಯಲ್ಲಿ ಸೇರಿಸುತ್ತಾರೆ. ಇದೆಂತಹ ಪ್ರಯೋಜನವಾದ ವಿದ್ಯೆಯೋ! ಇದರಿಂದ ಸಹಸ್ರಾವಧಿ ಜನಗಳು ಮೃತಪಡುತ್ತಾರೆ. ಈ ನಿರಪರಾಧಿಗಳು ನಿಷ್ಪ್ರಯೋಜನದಿಂದ ಒಬ್ಬರನ್ನೊಬ್ಬರು ಕೊಲ್ಲಲು ಸಿದ್ಧರಾಗುವರು. ಆಗ್ಗೆ ಆ ದೇಶವು ಶೋಚನೀಯ ಸ್ಥಿತಿಗೀಡಾಗುವದು. ಈ ರಾಕ್ಷಸೀಕೃತ್ಯದಲ್ಲಿ ಆಶ್ಚರ್ಯವೇನಂದರೆ ಜನಸಂಹಾರಕ್ಕೆ ಹೋಗುವ ಪೂರ್ವದಲ್ಲಿ ದೇವರನ್ನು ತನ್ನ ಕಡೆಗೆ ಮಾಡಿಕೊಳ್ಳುವುದಕ್ಕಾಗಿ ಮಾಡುವ ಪ್ರಾರ್ಥನೆ' ಮತ್ತು ಸಹಸ್ರಾವಧಿ ಜನಗಳನ್ನು ಕೊಂದು ಪಟ್ಟಣಗಳನ್ನು ನಾಶಮಾಡಿದಾಗ್ಯೆ ದೇವರನ್ನು ಸ್ತುತಿಸುವುದು!!" ಎಂಬುದಾಗಿ ಹೇಳಿದ್ದಾರೆ.

ಬೆಂಜಮಿನ್ ಫ್ರಾಂಕ್‌ಲಿನ್ ಎಂಬ ಪಂಡಿತರು "ಯುದ್ಧದಿಂದಾದ ದುಷ್ಫಲವು ಯುದ್ಧವು ನಡೆಯುತ್ತಿರುವಾಗ ತೋರುವುದಿಲ್ಲ. ಆದರೆ ಆ ಯುದ್ಧವು ಪೂರೈಸಿದ ನಂತರ ಗೊತ್ತಾಗುವುದು." ಎಂಬುದಾಗಿ ಹೇಳಿರುವರು. ಈ ವಿಷಯವನ್ನು ಕುರಿತು ಮ್ಯಾಂಚೆಸ್ಟರ್ ಎಂಬ ಪಟ್ಟಣದಲ್ಲಿ ಡಾಕ್ಟರ್ ಸಾಲಿಪಿ ಎಂಬವರು ಒಂದು ಉಪನ್ಯಾಸವನ್ನು ಮಾಡಿದರು. ಆಗ್ಗೆ ಇವರು ಹೇಳಿದ್ದೇನಂದರೆ—ಯುದ್ಧವು ಪ್ರಾರಂಭವಾದೊಡನೆ ಆ ದೇಶದ ದೃಢಕಾಯರೂ, ತರುಣರೂ, ಪರಲೋಕ ಯಾತ್ರೆಗೆ ಸಿದ್ಧರಾಗುತ್ತಾರೆ. ಆಗ್ಗೆ ಅಂಗವಿಹೀನರೂ, ವೃದ್ಧರೂ ಅಶಕ್ತರೂ, ಮುಂದಣ ವಂಶದ ಪಿತೃಸ್ಥಾನವನ್ನು ವಹಿಸಬೇಕಾಗುತ್ತದೆ! ಹೀಗಾಗಿ ಮನುಷ್ಯ ಜನಾಂಗವೇ ಹೀನಸ್ಥಿತಿಗೀಡಾಗುತ್ತದೆ!!

ಇಂತಹ ಅಪಾಯಕರವಾದ ಯುದ್ಧವನ್ನಾದರೂ ಶಿಷ್ಟಪರಿಪಾಲನೆಗೂ, ದುಷ್ಟನಿಗ್ರಹಕ್ಕೂ, ಮಾಡುವುದು ನ್ಯಾಯವಾಗಿದೆ. ಆದರೆ ಯಾರು ಯುದ್ಧಕ್ಕೆ ಕಾರಣರಾಗುತ್ತಾರೆಯೋ ಅವರು ಘೋರವಾದ ಅಪರಾಧವನ್ನು ಮಾಡಿದಂತೆಯೇ ಸರಿ. ಅವರ ವಿಷಯವು ಚರಿತ್ರೆಯಲ್ಲಿ ರಕ್ತದಿಂದ ಬರೆಯಲ್ಪಡುವುದು.

ಧ.

ಸ್ಟೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲೆಯ, ನೂತನ ಶಾಲಾ ಪ್ರವೇಶೋತ್ಸವ ಮತ್ತು ವರ್ಷೋತ್ಸವಗಳು.

ಕಳೆದ ತಾ ೧೮ನೇ ಬ್ರುಹಸ್ಪತಿವಾರ ದಿನ ಸ್ಟೈಂಟ್ ಜೋನ್ಸ್ ಹಾಯರ್ ಎಲಿಮೆಂಟರಿ ಶಾಲೆಯ ನೂತನ ಶಾಲಾ ಪ್ರವೇಶೋತ್ಸವ ಮತ್ತು ವರ್ಷೋತ್ಸವಗಳು ಬಹು ವಿಜೃಂಭಣೆಯಿಂದ ಜರಗಿದವು. ಬ್ರುಹಸ್ಪತಿವಾರ ಪೂರ್ವಾಹ್ನ ೧೦ ಗಂಟೆ ಸಮಯಕ್ಕೆ ನೂತನ ಶಾಲಾ ಪ್ರವೇಶೋತ್ಸವವು ಜರುಗಲಾಯಿತು. ರುಜಾರಿಯೋ ಕೆತ್ರಿಡ್ರಲಿನ ಪಾದ್ರಿ ಸಾಹೇಬರೂ, ಗ್ರಾಮದ ಅನೇಕ ಮಹನೀಯರೂ ನೆರೆದಿದ್ದರು. ೧೦-೩೦ಕ್ಕೆ ನೆರೆದ ಮಹನೀಯರನ್ನೂ, ವಿದ್ಯಾರ್ಥಿಗಳನ್ನೂ ಮಿಠಾಯಿ, ಬಾಳೆಹಣ್ಣು, ಬಿಸ್ಕುಟ್, ಲಿಮನೇಡ್ ಮೊದಲಾದವುಗಳಿಂದ ಉಪಚರಿಸಿದರು. ೧೧ ಗಂಟೆಯಿಂದ ೧೨ ಗಂಟೆಯವರೆಗೂ ಫೊನೊಗ್ರಾಫನ್ನು ಬಾರಿಸಿ ಎಲ್ಲರನ್ನೂ ಹರ್ಷಗೊಳಿಸಿ ನೆರೆದಿದ್ದ ಗೃಹಸ್ಥರನ್ನು ತಾಂಬೂಲಾದಿಗಳಿಂದುಪಚರಿಸಿ ಪ್ರತಿಯೊಬ್ಬ ವಿದ್ಯಾರ್ಥಿಗೂ ಒಂದೊಂದು ಕೋಲು

ಕಲ್ಲನ್ನು ಕೊಟ್ಟರು. ಹೀಗೆ ಪೂರ್ವಾಹ್ನದಲ್ಲಿ ನೂತನ ಶಾಲಾ ಪ್ರವೇಶೋತ್ಸವವು ಬಹು ಆಡಂಬರದಿಂದ ನೆರವೇರಿತು

ಅದೇ ದಿನ ಸಾಯಂಕಾಲ ೫ ಘಂಟೆಗೆ ಶಾಲೆಯ ವರ್ಷೋತ್ಸವವು ಜರಗಿತು ಶಾಲಾ ಹಿತಚಿಂತಕರಾದ ಪಟ್ಟಣದ ಪ್ರಮುಖ ಗೃಹಸ್ಥರೆಲ್ಲಾ ನೆರೆದಿದ್ದರು ಒಂಬತ್ತನೇ ಸರ್ಕಲ್ ಶಾಲಾ ಇನ್ಸ್‌ಪೆಕ್ಟರರಾದ ಮ ಟಿ ಒ ಹೊಜ್ಜೆಸ್ ದೊರೆಗಳವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು ಸ್ವಾಗತ ಹಾಡನ್ನು ವಿದ್ಯಾರ್ಥಿಗಳು ಹಾಡಿದ ಕೂಡಲೇ ಹೆಡ್ಮಾಸ್ಟರರಾದ ಮ ರಾ ರಾ ಅರಿಕೆರೆ ವೆಂಕಟ್ರಾಯರವರು ವರ್ಷಾವಧಿ ರಿಪೋರ್ಟನ್ನು ಓದಿದರು ರಿಪೋರ್ಟಿನಲ್ಲಿ ಈ ನೂತನ ಶಾಲಾ ಕಟ್ಟಲು ಸಹಾಯ ಮಾಡಿದ ಸರಕಾರಕ್ಕೂ, ವಂತಿಗೆಯನ್ನು ಕೊಟ್ಟ ಮಹನೀಯರಿಗೂ ತಮ್ಮ ಪೂರ್ಣ ಕೃತಜ್ಞತೆಯನ್ನು ತೋರಿಸಿದಲ್ಲದೆ ಅಸಿಸ್ಟಾಂಟ್ ಮತ್ತು ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರುಗಳು ಶಾಲಾ ಶಿಕ್ಷಣದ ವಿಷಯದಲ್ಲಿ ಬರೆದ ಒಳ್ಳೆಯ ರಿಮಾರ್ಕುಗಳನ್ನೂ ಕಳೆದ ದಶಂಬರ ತಾ ೧೫ರಲ್ಲು ನಡೆದ ಎಲಿಮೆಂಟರಿ ಶಾಲಾ ಪಂದ್ಯಾಟಗಳಲ್ಲಿ ಗೆದ್ದು ಪಡೆದಿರುವ ಕಪ್ಪನ್ನೂ ಎಲ್ಲರಿಗೂ ಶ್ರುತಪಡಿಸಿದರು

ತದನಂತರ ಅಧ್ಯಕ್ಷರಾದ ಇನ್ಸ್‌ಪೆಕ್ಟರ್ ದೊರೆಗಳವರಿಂದ ಇನಾಮ ಹಂಚೋಣವಾಯಿತು ಅನಂತರ "ಕೇಡುಕಿಗೆ ಪ್ರತಿಯಾಗಿ ಒಳ್ಳೇದನ್ನೇ ಮಾಡುವದು" ಎಂಬ ಒಂದು ಚಿಕ್ಕ ಇಂಗ್ಲಿಷ್ ನಾಟಕವನ್ನು ಚಲೋದಾದ ರೀತಿಯಲ್ಲಿ ವಿದ್ಯಾರ್ಥಿಗಳು ಆಡಿ ತೋರಿಸಿದರು ಬಳಿಕ ಇನ್ಸ್‌ಪೆಕ್ಟರರು ಎದ್ದು ನಿಂತು ಕಟ್ಟೋಣ ಕಟ್ಟಲು ಸಹಾಯ ಮಾಡಿದ ಮಹನೀಯರನ್ನೂ, ಇನಾಮು ಹಂಚೋಣಕ್ಕೆ ಸಹಾಯ ಮಾಡಿದ ಗೃಹಸ್ಥರನ್ನೂ ವಂದಿಸಿ, ತಾನು ಹಿಂದೊಮ್ಮೆ ಶಾಲೆಯನ್ನು ಸಂದರ್ಶಿಸಿದಾಗ ಶಾಲೆಯ ಪರೀಕ್ಷಣವನ್ನು ನೋಡಿ ತುಂಬಾ ಸಂತೋಷಪಟ್ಟೆನೆಂದಾಗಿಯೂ, ವಿದ್ಯಾರ್ಥಿಗಳು ಆಡಿ ತೋರಿಸಿದ ಇಂಗ್ಲಿಷ್ ನಾಟಕವು ಆಂಗ್ಲೇಯ ಹುಡುಗರು ಆಡುವಂತೆಯೇ ಯೋಗ್ಯವಾಗಿದೆಂಬದಾಗಿಯೂ ತಮಗೆ ಈ ದಿನ ಅಧ್ಯಕ್ಷಸ್ಥಾನವನ್ನು ಕೊಟ್ಟದಕ್ಕೆ ತುಂಬಾ ಸಂತೋಷಿತನಾದೆನೆಂಬದಾಗಿಯೂ ಶಾಲೆಯು ಇನ್ನು ಹೆಚ್ಚಿನ ಅಭಿವೃದ್ಧಿಯನ್ನು ಹೊಂದಬೇಕಾಗಿ ತನ್ನ ಮುಖ್ಯ ಕೋರಿಕೆಯೆಂಬದಾಗಿಯೂ ನೆರೆದ ಮಹನೀಯರಿಗೆಲ್ಲಾ ಸ್ಪಷ್ಟಪಡಿಸಿದರು

ಅನಂತರ "ಸತ್ಯಮೇವ ಜಯತೇ" ಎಂಬ ಕರ್ನಾಟಕ ನಾಟಕವನ್ನು ಶಾಲಾ ಉಪಾಧ್ಯಾಯರೂ, ವಿದ್ಯಾರ್ಥಿಗಳೂ ಆಡಿ ತೋರಿಸಿದರು ಈ ನಾಟಕದಲ್ಲಿ ಹುಡುಗರೊಂದಿಗೆ ಉಪಾಧ್ಯಾಯರು ಬೆರತು ಆಡಿ ತೋರಿಸಿದ್ದು ತುಂಬಾ ಸಂತೋಷಕರವಾದದ್ದೇ, ಏಕೆಂದರೆ ಉಪಾಧ್ಯಾಯರು ಈ ಹುಡುಗರ ವಿಷಯದಲ್ಲಿ ಎಷ್ಟು ನಿಗಾ ಕೊಡುತ್ತಾರೆಂಬದು ಇದರಿಂದ ಸ್ಪಷ್ಟವಾಗುತ್ತದೆ ತದನಂತರ "ಗೋಡ್ ಸೇವ್ ದಿ ಕಿಂಗ್" ಎಂಬ ರಾಜಗೀತವನ್ನು ಹಾಡಿ ಉತ್ಸವವನ್ನು ಪೂರೈಸಿದರು

ಶಾಲಾ ಹಿತಚಿಂತಕ

———o———

ಶಾಲಾ ಕಟ್ಟೋಣಗಳು

———o———

ಶಾಲೆಗಳೊಳಗೆ, ಊರ ನಿವಾಸಿಗಳ ಏಳಿಗೆಗೆ ಅಸ್ತಿವಾರ ಸ್ವರೂಪವಾಗಿಯೂ ಸಹಜವಾಗಿ ವಿದ್ಯಾವಿಹೀನರಾಗಿರುವ ದೆಶೆಯಿಂದ ಕುರುಡರಂತಿರುವ ಬಡವರ ಮಕ್ಕಳಿಗೆ ದೃಷ್ಟಿ ಸ್ವರೂಪವಾದ ಓದುಬರಹವನ್ನು ಕಲಿಸುವವುಗಳಾಗಿಯೂ, ನಿವಾಸಿಗಳಲ್ಲಿ ಹೆಚ್ಚಿನವರಿಗೆ ಉಪಯೋಗವಾದವುಗಳಾಗಿಯೂ, ಇರುವವುಗಳು ಎಲಿಮೆಂಟರಿ ಶಾಲೆಗಳು ಈ ಎಲಿಮೆಂಟರಿ ಶಾಲೆಗಳಿಗೆ ಅವಶ್ಯವಿರುವ ಯೋಗ್ಯರಾದ ಉಪಾಧ್ಯಾಯರುಗಳ ಸಂಖ್ಯೆಯು ಕಡಿಮೆಯಾಗದ ಹಾಗೆಯೂ, ಶಾಲೆ ಬಿಡುವ ಕಾಲದಲ್ಲಿ ಲೋಕ ವ್ಯವಹಾರ ಜ್ಞಾನವನ್ನು ಪೂರ್ಣವಾಗಿ ಹೊಂದಿ ವಿದ್ಯೆಯ ಮಹತ್ವನ್ನು ನೆರೆಹೊರೆಯ ಬೆಳ್ಳಕ್ಕಿಗರಿಗೆ ಪ್ರತ್ಯಕ್ಷವಾಗಿ ತೋರಿಸುವಂತಿರುವ ಯುವಕರನ್ನು ತರಬೇತು ಮಾಡುವ ಹಾಗೆಯೂ ಅಪರೂಪವಾಗಿ ಒಂದೊಂದು ಹಾಯರ್ ಎಲಿಮೆಂಟರಿ ಶಾಲೆಗಳು ಕಾಣಬರುವವು.

ಎರಡನೇ ತರದ ಶಾಲೆಗಳಲ್ಲಿ ಮಂಗಳೂರು ತಾಲೂಕು ಬೋರ್ಡಿನವರಿಂದ ನಡಿಸಲ್ಪಡುವ ಕಿನ್ನಿಕಂಬ್ಳ ಹಾಯರ್ ಎಲಿಮೆಂಟರಿ ಶಾಲೆಯು ಒಂದಾಗಿದೆ ಆ ಶಾಲೆಯ ಹೆಸರನ್ನು ಕೇಳಿ, ಕಣ್ಣಾರೆ ನೋಡಿಬಿಡಬೇಕೆಂಬ ಕುತೂಹಲದಿಂದ ಅಲ್ಲಿಗೆ ಹೋದೆವು.

ಸುಮಾರು ೨೦೦ ಹುಡುಗರಿಗೆ ಸಾಕಾಗಬಹುದಾದ ಕಟ್ಟೋಣದ ಮುಂದುಗಡೆಯಲ್ಲಿ ತಾತ್ಕಾಲಿಕ ಚಪ್ಪರಗಳನ್ನು ಹಾಕಿ, ಸ್ವಲ್ಪ ಕಡಿಮೆ ೨೦೦ ಹುಡುಗರನ್ನು ಕಟ್ಟೋಣದ ಒಳಗೂ ಹೊರಗಿನ ಚಪ್ಪರದಲ್ಲೂ ಒಟ್ಟೊಟ್ಟಾಗಿ ಕುಳ್ಳಿರಿಸಿ, ಕಲಿಸುವ ಸಂಕಷ್ಟವನ್ನು ನಾವು ಕಣ್ಣಾರೆ ಕಂಡು ಬಹು ದುಃಖಿತರಾದೆವು ಎಡೆಬಿಡದೆ ಗಾಳಿ ಬೀಸುತ್ತಿರುವ ಮೈದಾನಿನ ಮಧ್ಯದಲ್ಲಿ ಕಟ್ಟಲ್ಪಟ್ಟಿರುವ ಕಾರಣದಿಂದ, ಹುಡುಗರ ಕಾಲಿನ ತಿಕ್ಕಾಟದಿಂದ ಏಳುವ ಧೂಳನ್ನು ಸದಾ ಕಣ್ಣಿಗೆ ಎರಚಿಸಿಕೊಂಡು ತಿಕ್ಕುತ್ತಾ ಇರುವ ಉಪಾಧ್ಯಾಯರುಗಳನ್ನೂ ಮಕ್ಕಳನ್ನೂ ಕಂಡು ಎಂಥವನ ಕಲ್ಲೆದೆಯಾದರೂ ಕರಗದಿಂದು ಈಗ ಛಳಿ ಹೋಗಿ ಸೆಕೆ ಬರುವ ಕಾಲವಾಯಿತು. ಉರಿಯುತ್ತಿರುವ ಬಿಸಿಲ ಬೇಗೆಯಲ್ಲಿ ಆ ಚಪ್ಪರದಲ್ಲಿ ಇರಬೇಕಾಗುವವರ ಸ್ಥಿತಿ ಹೇಗಾಗುವದೋ ಭಗವಂತನೇ ಬಲ್ಲ

ಇತರ ಶಾಲೆಗಳಿಗೆಲ್ಲಾ ಮೇಲುಪಂಕ್ತಿ ಎಂದನ್ನಿಸಿಕೊಳ್ಳುವ ಹಾಯರ್ ಎಲಿಮೆಂಟರಿ ಶಾಲೆಗೆ ಇಷ್ಟು ಸ್ಥಳ ಸಂಕೋಚವಿದ್ದರೂ ಯೋಗ್ಯವಾದ ಕಟ್ಟೋಣವು ಏಕೆ ಒದಗಿಸಲ್ಪಡಲಿಲ್ಲ ಎಂಬದನ್ನು ವಿಚಾರಿಸಿದಾಗ ಆ ಶಾಲೆಯು—ಮಹಾರಾಜ ಸಾರ್ವಭೌಮರವರು ಎಲಿಮೆಂಟರಿ ವಿದ್ಯಾಭಿವೃದ್ಧಿಗಾಗಿ ದಯಪಾಲಿಸಿದ ಹಣದಿಂದ ಸ್ವೀಕರಿಸಲ್ಪಟ್ಟದ್ದಾದಕಾರಣ, ಅದಕ್ಕೆ ಬೇಕಾಗುವ ಕಟ್ಟೋಣ ವಗೈರೆ ಖರ್ಚುಗಳು ಸಹಾ, ಪ್ರೊವಿನ್ಸಿಯಲ್ ಫಂಡಿನಿಂದಲೇ ದೊರೆಯಬೇಕಾಗಿವೆಯೆಂತಲೂ, ಆ ಬಗ್ಯೆ ತಾಲೂಕು ಬೋರ್ಡಿನವರ ಮದ್ರಾಸು ಸಂಸ್ಥಾನದ ವಿದ್ಯಾ ಇಲಾಖೆಯ ಡಿರೆಕ್ಟರ್ ದೊರೆಗಳವರ ಸನ್ನಿಧಿಗೆ ಬರಕೊಂಡು ಅವರ ಹುಕುಮಿನ ನಿರೀಕ್ಷಣೆಯಲ್ಲಿ ಇರುತ್ತಾರೆಂತಲೂ, ಸದ್ಯದಲ್ಲಿ ಯೋಗ್ಯವಾದ ಕಟ್ಟೋಣವು ಆಗದಿರದೆಂತಲೂ ತಿಳಿದೆವು

ಆದರೆ ಸೂರ್ಯನು ಕುಂಭಪ್ರವೇಶ ಮಾಡಿಯಾಯಿತು ದಯಾಳು ಸರಕಾರದವರು ಹಣವನ್ನು ದಯಪಾಲಿಸಿದರೂ ಸೂರ್ಯನು ಮೃಗಪ್ರವೇಶವಾಗುವ ಮುಂಚೆ ಇಮಾರತ್ತು ಆಗುವ ಬಗೆ ಹೇಗೆ? ಇದು ಕೇವಲ ಅಸಾಧ್ಯವೇ ಸರಿ ಕಳೆದ ವರ್ಷ ಹೆಡ್‌ಮಾಸ್ಟರರ ಸ್ವಂತ ಖರ್ಚಿನಿಂದ ಮುಖಶಾಲೆಯನ್ನು ಕಟ್ಟಿಸಿ ಕೊಟ್ಟಿರುವರಂತೆ, ಶಾಲಾ ಕಟ್ಟೋಣವೂ ಸಹ ಅವರು ತಾಲೂಕು ಬೋರ್ಡಿಗೆ ಉಚಿತವಾಗಿ ಒಪ್ಪಿಸಿದು ಎಂದು ಕೇಳುತ್ತೇವೆ ಮಕ್ಕಳೆಲ್ಲಾ ಕಳೆದ ವರ್ಷದಂತೆ ಈ ವರುಷವೂ ಹೆಡ್‌ಮಾಸ್ಟರರು ಏನಾದರೂ ಹಂಚಿಕೆಯನ್ನು ಮಾಡಿ ಕಲಿಸುವಿಕೆಗೆ ಅಡ್ಡಿಯಾಗದಂತೆ ಮಾಡುವರು ಎಂದು ಅಭಿಪ್ರಾಯಪಡುತ್ತಾರೆ

ತಾಲೂಕು ಬೋರ್ಡಿನವರು ತಾತ್ಕಾಲಿಕ ಕಟ್ಟೋಣಕ್ಕೆ ಏನಾದರೊಂದು ವಿಲೆವಾರು ಮಾಡದೆ ಇರಲಿಕ್ಕಿಲ್ಲ, ಆದರೆ ವಿಡದಾಳಿಯಾದ ಆ ದೊಡ್ಡ ಮೈದಾನಿನಲ್ಲಿ ಸಾಧಾರಣ ತರದ, ಅಬಲವಾದ ಕಟ್ಟಡವು ಒಂದೇವೊಂದು ದಿನದ ಗಾಳಿಯನ್ನು ಎದುರಿಸಿ ನಿಲ್ಲಲಾರದು ನಾಲ್ಕು ಕಡೆಯಿಂದಲೂ ಬೀಸಿ ಸುತ್ತಿ ಸುಳಿದು ಬಡೆಯುವ ಗಾಳಿ ಮಳೆಯ ದೆಶೆಯಿಂದ ಸೀರ್ಪನಿಗಳು ಒಳಸೇರದಂತೆ ಮಾಡಬೇಕಾದರೆ, ಇಮ್ಮಡಿ ತಡಿಕೆಯಲ್ಲದೆ ಸಾಧ್ಯವಾಗದು ಸರಕಾರದಿಂದ ಲಭಿಸೀತೆಂದು ನಿರೀಕ್ಷಿಸೋಣಾಗುವ ಸಬ್‌ಸಿಡೀ ಹಣವು ಜರ್ಮನಿಯ ಯುದ್ಧದ ಸಮ್ಮಂಧ ಈ ವರುಷ ಸಿಕ್ಕದೆ ಹೋದರೆ, ಈ ವರುಷ ಕಟ್ಟುವ ತಾತ್ಕಾಲಿಕ ಕಟ್ಟೋಣದಲ್ಲೇ ಅನೇಕ ವರುಷಗಳ ವರೆಗೆ ಕಾಲಕ್ಷೇಪ ಮಾಡಬೇಕಾದೀತು ಹೀಗಿರುವಲ್ಲಿ ಶಾಲೆಯ ಬಾವಿಯ ಸಮೀಪದಲ್ಲೇ ಒಂದು ಕಟ್ಟೋಣವನ್ನು ಮಣ್ಣು ಗೋಡೆ ಇಡಿಸಿ ಕಟ್ಟಿಸುವದು ಯೋಗ್ಯವಾಗಿ ಕಾಣುತ್ತದೆ ಮಳೆಕಾಲಕ್ಕೆ ಬೇರೆ, ಬೇಸಿಗೆಕಾಲಕ್ಕೆ ಬೇರೆ, ತಟ್ಟಿಗಳನ್ನು ಕಟ್ಟುವ ಒಟ್ಟು ಖರ್ಚು ಯೋಚಿಸಿ ನೋಡಿದರೆ ಮಣ್ಣು ಗೋಡೆ ಇಡುವ ಖರ್ಚಿಗಿಂತ ಮಿಗುವುದು

ಸುಮಾರು ೨೦೦ ಮಕ್ಕಳು ಈ ತರದ ಸಂಕಷ್ಟಕ್ಕೊಳಗಾಗಿ ಕಳೆಯುತ್ತಿರುವದನ್ನು ಕಂಡು ಬೆಳಿಗ್ಯೆ ೭ರಿಂದ ೯|| ವರೆಗೂ, ಸಾಯಂಕಾಲ ೩ರಿಂದ ೫|| ವರೆಗೂ ಶಾಲೆ ನಡಿಸುವದು ಉತ್ತಮವಲ್ಲವೇ ಎಂದು ಪ್ರಶ್ನಿಸಿದ್ದಾಗ—ಆರೇಳು ಮೈಲು ದೂರದಿಂದ ಬರುವ ಮಕ್ಕಳಿರುತ್ತಾ ಅದು ಸಾಧ್ಯವಾಗದು ಎಂಬ ಉತ್ತರವು ಲಭಿಸಿತು

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡಿನವರಿಂದ ತಾತ್ಕಾಲಿಕ ಧನಸಹಾಯವನ್ನಾದರೂ ಪಡೆದು ತಾಲೂಕು ಬೋರ್ಡಿನವರು ಯೋಗ್ಯ ಕಟ್ಟೋಣವನ್ನು ಅದಷ್ಟು ತ್ವರೆಯಲ್ಲಿ ಮಾಡಿಸುವ ವಿಚಾರಕ್ಕೆ ಮನಸ್ಸು ಕೊಡುವರೆಂದು ನಮ್ಮ ಕೋರಿಕೆಯಾಗಿದೆ.

ಪಥಿಕ

ಪತ್ರವ್ಯವಹಾರ.

———o———

ಅಯ್ಯಾ,

ಒಂಭತ್ತನೇ ಸರ್ಕಲಿನ ಶಾಲಾ ಇನ್ಸ್‌ಪೆಕ್ಟರರವರು ದಕ್ಷಿಣ ಕನ್ನಡಾ ಜಿಲ್ಲೆಯ ಶಾಲಾ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ರಾಯ್ ಬಹದ್ದೂರ್ ಮ ರಘುನಾಥರಾವ್ ಅವರ್ಗಳ್, ಸಮೇತ ಇದ್ದೇ ಫಬ್ರುವರಿ ತಿಂಗಳ ತಾರೀಕು ೨೦ನೇ ಶನಿವಾರ ಪೂರ್ವಾಹ್ನದಲ್ಲಿ ಕಿನ್ನಿ ಕಂಬಳ ಹಾಯರ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿ ಶಾಲಾ ತೋಟವನ್ನೆಲ್ಲಾ ಸುತ್ತಾಡಿ ಶಾಲೆಯ ಸ್ಥಿತಿಗತಿಗಳನ್ನು ನೋಡಿ, ಬಹು ಸಂತೋಷಪಟ್ಟರು. ಇವರು ಆ ಶಾಲೆಗಿರುವ ಒಂದೇ ಕೊರತೆಯಾದ ಯೋಗ್ಯ ಕಟ್ಟೋಣದ ಅಭಾವವನ್ನು ಸೂಚಿಸಿ ಬರದಿರುತ್ತಾರಾಗಿ ವರ್ತಮಾನ ಕೇಳುತ್ತೇವೆ. ಈ ಮಹಾತ್ಮರ ಸಿಫಾರಸಿನ ಮೂಲಕವಾದರೂ ಈ ಕುಂದು ಬೇಗನೇ ಪರಿಹಾರವಾಗಲೆಂದು ನಮ್ಮ ಪ್ರಾರ್ಥನೆ. ಇನ್ಸ್‌ಪೆಕ್ಟರ್ ದೊರೆಗಳವರ ಸೌಜನ್ಯವೂ, ಮಂಜುಳ ದಾಷಣವೂ ಪ್ರೀತಿಪುರಸ್ಸರವಾದ ಮಾತುಗಳೂ, ಶಾಲಾ ಮಕ್ಕಳ ಹೃದಯದಲ್ಲಿ ಚಿರಸ್ಮರಣೀಯವಾಗಿರುವವು ಎಂಬುದನ್ನು ತಿಳಿಸಲು ತುಂಬಾ ಸಂತೋಷವುಳ್ಳವರಾಗಿದ್ದೇವೆ.

Y. A

~~~~~~

ಅಯ್ಯಾ ಪತ್ರಕರ್ತರೇ,

ಈಗ ಕೆಲವು ಸಮಯದಿಂದ ಮಂಗಳೂರಲ್ಲಿ ಕಿವಿಗಳಲ್ಲಿದ್ದ ಆಭರಣ ಇತ್ಯಾದಿಗಳನ್ನು ಕಳವು ಮಾಡಿಕೊಂಡು ಹೋಗುತ್ತಾರೆ ಎಂಬ ಬೊಬ್ಬೆ ಎಲ್ಲೆಲ್ಲಿಯೂ ಕೇಳುತ್ತವೆ. ಇವುಗಳಲ್ಲಿ ಎಷ್ಟರ ಮಟ್ಟಿಗೆ ಸತ್ಯವೆಂಬದಾಗಿ ಕೂಲಂಕಷ ವಿಚಾರಿಸುವದಾದರೆ ಹೆಚ್ಚಿನ ಮಟ್ಟಿಗೆ ಅತಿಶಯೋಕ್ತಿ ಎಂಬುದಕ್ಕೆ ಸಂಶಯವಿಲ್ಲವೆಂಬದಾಗಿ ಈ ಕೆಳಗಿನ ಸಂಗತಿಗಳಿಂದ ತಿಳಿಯುವುದು.

ಕೆಲವು ದಿವಸಗಳ ಮುಂಚೆ ಘೋಷಾ ಸ್ತ್ರೀ ಕಣ್ಣಿಗೆ ಮಣ್ಣು ಹಾಕಿ ಆಕೆಯು ಧರಿಸಿದ್ದ ಆಭರಣಗಳನ್ನು ಕಸಕೊಂಡು ಹೋದರು ಎಂಬದಾಗಿ ಮಂಗಳೂರು ಶಹರಿನಲ್ಲಿ ಬೊಬ್ಬೆ ಎದ್ದಿತ್ತು. ಇದರ ಕುರಿತ [illegible] ವಾರ್ತೆ ಎಂಬದಾಗಿ ತಿಳಿದು ಬಂತು.

ಒಂದು ಹೆಂಗಸಿನ ಆಭರಣಗಳನ್ನು ಪದವಿನಲ್ಲಿ ಕಳ್ಳರು ಸುಳಕೊಂಡರು ಎಂಬ ವಾರ್ತೆ ಎಲ್ಲೆಲ್ಲಿಯೂ ಇತ್ತು. [illegible] ಸ್ಥಳಕ್ಕೆ ಹೋಗಿ ವಿಚಾರಿಸಲು ಆ ವಾರ್ತೆಯೂ ಸುಳ್ಳೆಂಬದಾಗಿ ಕಂಡುಬಂತು.

ಕೆಲವು ದಿವಸದ ಮುಂಚೆ ಒಬ್ಬ ಮಾಪಿಳ್ಳೆಯು ವಕೀಲ್ ನರಸಿಂಗರಾಯರ ಮನೆಯ ಹತ್ತಿರದಿಂದ ಸ್ವಲ್ಪ ಹಣ ಹಿಡಕೊಂಡು ಹೋಗುವಾಗ ಕೆಲವು ಕೊಂಕಣಿಗರು ಅವನು ಕಳ್ಳನೆಂದು ಭಾವಿಸಿ ಅವನನ್ನು ಅಟ್ಟಿಕೊಂಡು ಹೋದರು. ಮಾಪಿಳ್ಳೆಯು ಕಳ್ಳರ ಗೌಜಿ ಶಹರಿನಲ್ಲೆಲ್ಲಾ ಇದ್ದದರಿಂದ ತನ್ನನ್ನು ಅಟ್ಟಿಕೊಂಡು ಬರುವವರು ತನ್ನ ಹಣವನ್ನು ಸುಲಿಯಲಿಕ್ಕಾಗಿ ಬರುವ ಕಳ್ಳರಾಗಿರಬಹುದೆಂದು ನೆನಸಿ ತನ್ನ ಹಣವನ್ನು ಳಿಸಲಿಕ್ಕೆ ಓಟವೇ ಲೇಸೆಂದು ಪಲಾಯನಗೈದನು. ಪೇಟೆಯಲ್ಲೆಲ್ಲಾ ಮಾಪಿಳ್ಳೆ ಕಳ್ಳ ಓಡಿದನು ಎಂಬದಾಗಿ ವಾರ್ತೆ ಹಬ್ಬಿತು.

ಕೆಲವು ಪೋಕ್ರಿ ಹೌವನಸ್ಥರು ಪ್ರಕಾರ ಎಬ್ಬಿಸಲಿಕ್ಕೆ ಕತ್ತಲೆ ಸಮಯದಲ್ಲಿ ಹಾದು ಹೋಗುವ ಹೆಂಗಸರ ಕಿವಿಯನ್ನು ಮುಟ್ಟಿ ಓಡಿಹಿಡುತ್ತಾರೆ ಇದರಿಂದಲೂ ಹೆಚ್ಚಿನ ಪ್ರಕಾರವಾಗುವದ ಉಂಟು.

ಇತ್ತಲಾಗೆ ಒಬ್ಬ ಮಾಪಿಳ್ಳೆಯು ಕತ್ತಲೆಯ ಸಮಯ ತನ್ನ ಕೆಲಸ ತೀರಿಸಿ ಹೋಗುವ ವೇಳೆ ಒಬ್ಬ ಕ್ರಿಸ್ತಾನನವನು ಸುಮ್ಮನೆ ಕಳ್ಳ ಎಂಬದಾಗಿ ಬೊಬ್ಬೆ ಹಾಕಿದನು. ಆಗ್ಯೆ ಆಸ್‌ಪಾಸಿನವರು ಸದರಿ ಮಾಪಿಳ್ಳೆ ನಿಜವಾಗಿ ಕಳ್ಳನೆಂತ ಭಾವಿಸಿ ಅವನಿಗೆ ಚನ್ನಾಗಿ ಹೊಡೆದರು. ಸದರಿ ಕ್ರಿಸ್ತಾನಿನವನಿಗೆ ಪೋಲೀಸಿನವರು ಕೈದುಮಾಡಿದ್ದಾರೆ.

ಕೆಲವು ಸಾರಿ ಈ ಶಹರಿನಲ್ಲಿ ಈಗ ಇರುವ "ಕಳ್ಳ" ಎಂಬ ಬೊಬ್ಬೆಯನ್ನು ಸೂಳೆಯರು ತಮ್ಮ ಸ್ವಂತ ಪ್ರಯೋಜನಕ್ಕೆ ಉಪಯೋಗಿಸುವರು. ತಾವು ಒಲಿಯದ ವಿಟಪುರುಷರು ತಮ್ಮಲ್ಲಿ ಬಂದರೆ "ಕಳ್ಳ" ಎಂಬದಾಗಿ ಕೂಗುವರು. ಆಗ್ಯೆ ಆಸ್‌ಪಾಸಿನವರು ಬಂದು ಆತನಿಗೆ ಚನ್ನಾಗಿ ಗುದಿಗೆ ಶಾಸ್ತ್ರವನ್ನು ಪ್ರಯೋಗಿಸುವರು. ಒಟ್ಟಾರೆ ನಿಜವಾಗಿ ನಡದ್ದ ಕಳವುಗಳು ಒಂದೆರಡೇ ಆಗಿರುವವು

"ಕಳ್ಳ" "ಕಳ್ಳ" ಎಂಬ ಬೊಬ್ಬೆಯ ಅರ್ಥವು ಈ ರೀತಿ ಆಗಿರುವಾಗ ಪೋಲೀಸ ಇಲಾಖೆಯವರು ಮಾಡುವದೇನು? ಆದರೂ ಪೋಲೀಸ ಇಲಾಖೆಯವರು ಸ್ವಲ್ಪ ಕಾಲಹರಣ ಮಾಡದೆ ಕಳ್ಳರ ಕಾಟವು ಹೆಚ್ಚದಂತೆ ವಿಶೇಷ ಪ್ರಯತ್ನ ತೆಗದುಕೊಳ್ಳುತ್ತಿರುವರು. ಬೀಟು ಜವಾನರ ಸಂಖ್ಯೆಯನ್ನು ಏರಿಸಿಯದೆ. ಅನೇಕ ಸ್ಪೆಶಿಯಲ್ ಪೆಟ್ರೋಲ್‌ಗಳನ್ನು ವಿಲೆವಾರಿ ಮಾಡಿಯದೆ ಅನೇಕ ಪೋಲೀಸಿನವರು ದುಸ್ತು ಇಲ್ಲದೆ ಗಲ್ಲಿಗಲ್ಲಿಗಳಲ್ಲಿ ತಿರುಗುತ್ತಿರುವರು. ಡಿಪ್ಯುಟಿ ಸುಪರಿಂಟೆಂಡೆಂಟರೂ, ಸರ್ಕಲ್ ಇನ್ಸ್‌ಪೆಕ್ಟರೂ ಕತ್ತಲೆ ಸಮಯ ಬೀಟುಗಳಲ್ಲಿ ಪೋಲೀಸಿನವರು ಕೆಲಸಮಾಡುತ್ತಾರೋ ಇಲ್ಲವೋ ಎಂಬದಾಗಿ ತಾವೇ ಖುದ್ದಾಗಿ ಬೀಟು ಸಂಚರಿಸುವರು. ಮತ್ತು ಕಳವಿನ ಬೊಬ್ಬೆಯ ನಿಜಸ್ಥಿತಿಯನ್ನು ಜನರಿಗೆ ವಿವರಿಸಿ ಅವರಿಗೆ ಭಯಪಡಲು ಅವಶ್ಯವಿಲ್ಲ ಎಂಬದಾಗಿ ಅವರನ್ನು ಸಮಾಧಾನಪಡಿಸುವರು. ಸಬ್ ಇನ್ಸ್‌ಪೆಕ್ಟರರು ಕೂಡಾ ರಾತ್ರಿ ಹಗಲ ನಿದ್ದೆಗೆಟ್ಟು ಬೀಟುಗಳನ್ನು ಸಂಚರಿಸಿ ಕಳ್ಳರ ಕಾಟವು ಆದಷ್ಟು ಕಮ್ಮಿ ಆಗುವ ಹಾಗೆ ಪ್ರಯತ್ನ ಮಾಡುತ್ತಾರೆ. ಹೀಗಿರುವದರಿಂದ ಪಟ್ಟಣಿಗರು ಹೆಚ್ಚಿನ ಭಯಪಡಲು ಅವಶ್ಯವಿಲ್ಲ.

ವಿಚಾರಿ.

~~~~~~

ಅಯ್ಯಾ ಪತ್ರಕರ್ತರೇ,

ಆಡು, ಕುರಿ, ದನ ಇತ್ಯಾದಿಗಳನ್ನು ಕೊಂದು ಅವುಗಳ ಮಾಂಸವನ್ನು ಮಾರಬೇಕಾದರೆ ಕಟುಕರು ಮುನ್ಸಿಪಾಲಿಟಿಗೆ ಪ್ರತ್ಯೇಕ ಹಣಕೊಟ್ಟು ಲೈಸನ್ಸು ಪಡಕೊಳ್ಳಬೇಕೆಂಬ ಕ್ರಮವು ಜಾರಿಯಲ್ಲಿದೆಂತ ಕೇಳಿಬಲ್ಲೆನು. ಆದರೆ ಹಂದಿಗಳನ್ನು ಕೊಂದು ಇವುಗಳ ಮಾಂಸವನ್ನು ಮಾರಬೇಕಾದರೆ ಹಣಕೊಟ್ಟು ಲೈಸನ್ಸು ಪಡಕೊಳ್ಳಬೇಕೆಂಬ ಕ್ರಮವು ಜಾರಿಯಲ್ಲಿ ಉಂಟೋ ಏನೆಂಬದು ಮಾತ್ರ ನನಗೆ ತಿಳಿದ್ದಿಲ್ಲ. ಆದುದರಿಂದ ಹಂದಿಗಳನ್ನು ಕೊಲ್ಲುವರೆ ಪ್ರತ್ಯೇಕ ಫೀಸು ಕೊಟ್ಟು ಲೈಸನ್ಸು ಪಡಕೊಳ್ಳಬೇಕೆಂಬ ಕ್ರಮವಿದೆಯೋ? ಈ ಕ್ರಮವಿದ್ದರೆ ಲೈಸನ್ಸು ಕೊಡುವವರು ಯಾರು? ಹಣ ವಸೂಲುಮಾಡುವವರು ಯಾರು? ಎರಡು ಹಂದಿಗಳನ್ನು ಕೊಲ್ಲಲು ಒಂದೇ ಲೈಸನ್ಸು ಕೊಟ್ಟು ಎರಡರ ಹಣವನ್ನು ವಸೂಲುಮಾಡಿ ಒಂದರ ಹಣವನ್ನು ಜೇಬಿನೊಳಗೆ ಹಾಕಿದರೆ ಮುನ್ಸಿಪಾಲಿಟಿಗೆ ತಿಳಿಯುವ ಉಪಾಯವು ಈ ಏರ್ಪಾಡಿನಲ್ಲಿದೆಯೋ? ಆಡು, ಕುರಿ, ದನಗಳ ಕಟುಕರಿಂದ ಸುಂಕ ವಸೂಲುಮಾಡುವ ಕ್ರಮಕ್ಕೂ ಹಂದಿಗಳನ್ನು ಕೊಲ್ಲುವವರಿಂದ ಸುಂಕ ವಸೂಲು ಮಾಡುವ ಕ್ರಮಕ್ಕೂ ಭೇದವಿದೆಯೋ? ಭೇದವಿದ್ದರೆ ಯಾಕೆ ಮುನ್ಸಿಪಾಲಿಟಿಯವರು ಎರಡಕ್ಕೂ ಒಂದೇ ಕ್ರಮವನ್ನು ಜಾರಿಗೆ ತರಕೂಡದು ಎಂಬಿತ್ಯಾದಿ ವಿಷಯಗಳನ್ನು ತಿಳಿಯ ಬೇಕೆಂದಿರುವದರಿಂದ [illegible] ಈ ಪತ್ರದ ಮೂಲಕ ತಿಳಿಸಬೇಕಾಗಿ ಹಾರೈಸುವ,

ಅರಿಯದವ.

~~~~~~

ಅಯ್ಯಾ ಪತ್ರಕರ್ತರೇ,

ಪಶು ಪಾಲನೆ ಮತ್ತು ಆರೋಗ್ಯಸಂಬಂಧವಾಗಿ ಪ್ರೊಫೆಸರ್ ಗೆಡ್ಡಿಸರವರಿಂದ ಮದ್ರಾಸಿನಲ್ಲಿ ಕೊಡೋಣಾಗುವ ಭಾಷಣಗಳನ್ನು ಕೇಳುವರೆ ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಬೋರ್ಡು ಪರವಾಗಿ ಕೆಲವು ಮೆಂಬರರು ಮದ್ರಾಸಿಗೆ ಹೋಗಿದ್ದರೆಂದು ತಮ್ಮ ಪತ್ರಮೂಲಕ ತಿಳಕೊಂಡಿದ್ದೆನು. ಪ್ರೊಫೆಸರ್ ಗೆಡ್ಡಿಸರವರು ಮದ್ರಾಸಿನಲ್ಲಿ ತನ್ನ ಕೆಲಸ ತೀರಿಸಿ, ಬೆಂಗಳೂರಿಗೆ ಹೋಗಿರುತ್ತಾರೆಂಬ ವಾರ್ತೆಯು ತಮ್ಮ ಕಳೆದ ಸಂಚಿಕೆಯಿಂದ ತಿಳಿದುಬಂದುದರಿಂದ ನಮ್ಮ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೂ ಹಿಂದೆರಳಿರಬೇಕೆಂಬ ಊಹೆಯಾಗುತ್ತದೆ ಸ್ವಾಮಿ, ಆದುದರಿಂದ ಈ ಮೆಂಬರರು ಮದ್ರಾಸಿನಲ್ಲಿ ಪ್ರೊಫೆಸರ್ ಗೆಡ್ಡಿಸರ ಭಾಷಣದಿಂದ ಕಲಿತುಕೊಂಡ ನೂತನ ವಿಷಯಗಳ್ಯಾವವು? ಪಡಕೊಂಡ ಹೊಸ ಅನುಭವವೇನು? ಈ ಭಾಷಣದಿಂದ ಕಲಿತುಕೊಂಡ ವಿಷಯಗಳಲ್ಲಿ ಯಾವವನ್ನು ನಮ್ಮ ಜಿಲ್ಲೆಯಲ್ಲಿ ಜ್ಯಾರಿಗೆ ತರಬಹುದು? ಹ್ಯಾಗೆ? ಇಂಥಾ ನೂತನ ವಿಷಯಗಳು ಬೋರ್ಡಿನವರಿಂದ ಮಾತ್ರ ಜಾರಿಗೆ ತರಲು ಸಾಧ್ಯವಾದವುಗಳೋ, ಹಳ್ಳಿಪಳ್ಳಿ ಜನರಿಗೂ ಇಂಥಾ ನೂತನ ವಿಷಯಗಳ ಜಾರಿನಡಿಸಬಹುದೋ ಎಂಬಿತ್ಯಾದಿ ವಿಷಯಗಳನ್ನು ತಿಳಕೊಳ್ಳಲು ಬಹು ಕುತೂಹಲ ಪಡುತ್ತೇನಾದ್ದರಿಂದ ನಮ್ಮ ಡಿಸ್ಟ್ರಿಕ್ಟ್ ಬೋರ್ಡು ಪರವಾಗಿ ಭಾಷಣಗಳನ್ನು ಕೇಳಲು ಮದ್ರಾಸಿಗೆ ಹೋದ ಮೆಂಬರರಲ್ಲಿ ಯಾರಾದರೂ **ತಾವು ಪಡಕೊಂಡ ಅನುಭವವನ್ನು ಈ ಪತ್ರಮೂಲಕ ಹೊರಪಡಿಸಿ, ಮದ್ರಾಸಿಗೆ ಹೋಗಲು ಕೇವಲ ಅಯೋಗ್ಯರಾದ, ಇಂಗ್ಲಿಷ್ ಭಾಷೆ ಅರಿಯದ ಹಳ್ಳಿಪಳ್ಳಿ ಜನರಾದ ನಾವು ಕೂಡಾ ಈ ಅನುಭವಗಳ ಕೊಂಚಂಟ ಸಾರವನ್ನಾದರೂ ತಿಳಿಯುವಂತೆ ಮಾಡ ಬೇಕಾಗಿ ವಿಜ್ಞಾಪಿಸಿಕೊಳ್ಳುವ,**

ಹಳ್ಳಿ-ನಿವಾಸಿ.

~~~~~~

ಯುದ್ಧ ಸಮಾಚಾರ.

ತಾ. ೧೭ನೇ ಫೆಬ್ರುವರಿ

ಬ್ರಿಟಿಷರು ಜರ್ಮನ ಪ್ರಜಾ ಜನರಿಗೆ ಆಹಾರ ಜೀನಸಿಗಳು ಸರಾಗವಾಗಿ ಸಾಗಲು ಅಪ್ಪಿ ಮಾಡುವದಿಲ್ಲವಾದರೆ ಇಂಗ್ಲಿಷ್ ಕಡಲನ್ನು ಅಡ್ಡ ಕಟ್ಟುವ ಆಲೋಚನೆಯನ್ನು ಜರ್ಮನರು ನಿಲ್ಲಿಸುವರು ಎಂಬದಾಗಿ ಕೌಂಟ್ ಬರ್ನಸ್ಟೋರ್ಫ್ ಎಂಬವರು ವಾಶಿಂಗ್ಟನಿನಲ್ಲಿ ಹೇಳಿರುವರು

೪೦ ವಾಯುನಾವೆಗಳು ಒಸ್ಟೆಂಡ್, ಮಿಡ್ಲಕರ್ಕ, ಜೆಬ್ರುಗ್ಗೆಯ ಮೇಲೆ ಹಲ್ಲಾ ಮಾಡಿರುವವು ಒಸ್ಟೆಂಡ್ ಬಂದರಿನ ಎರಡು ಕಡೆಗಳಲ್ಲಿ ಇದ್ದ ಒತ್ತೇರಿಗಳ ಮೇಲೆಯೂ ಬೊಂಬುಗಳು ಬಿಸಾಡಲ್ಪಟ್ಟಿರುವವು ಮಿಡ್ಲಕರ್ಕ ಯಲ್ಲಿ ಫಿರಂಗಿಗಳ ನೆಲೆಗಳಿಗೂ, ಜೆಬ್ರುಗ್ಗೆಯಲ್ಲಿ ಎಂಡೆಯ ಮೇಲೂ ಹಿಂದಿನ ಸಾರಿ ಹಲ್ಲಾ ಮಾಡಿದಾಗ ಉಂಟಾದ ಒತಕನ್ನು ದೊಡ್ಡದು ಮಾಡುವ ಉದ್ದೇಶದಿಂದ ಬೊಂಬುಗಳು ಬಿಸಾಡಲ್ಪಟ್ಟಿರುವವು ಈ ಸಂದರ್ಭದಲ್ಲಿ ಬ್ರಿಟಿಷರಿಗೆ ೮ ಫ್ರೆಂಚ ವಾಯುನಾವೆಗಳು ಸಹಾಯ ಮಾಡಿದವು ಸೇನೆ ಸಂಬಂಧವಾದ ಸ್ಥಳಗಳಿಗೆ ಮಾತ್ರ ಬೊಂಬು ಬಿಸಾಡುವಂತೆ ವಾಯುನಾವಿಕರಿಗೆ ಈ ಮೊದಲೇ ಸಲಹೆ ಕೊಡಲ್ಪಟ್ಟಿರುವದು

ಸ್ಯಾಂಟ್ ಎಲಿಮೋಯಿ ಮತ್ತು ಎಪ್ರೆಸ್ ಕಾಲಿವೆಯ ಬಳಿ ಬ್ರಿಟಿಷರು ಕಳಕೊಂಡ ಕಂದಕಗಳನ್ನು ಪುನಃ ಹಿಂದೆ ಪಡದಿರುವರು ಈ ದಿನ ಫ್ರೆಂಚ ರಣರಂಗದಲ್ಲಿ ಕಾಲಾಳು ಸೇನಾ ಕದನಗಳೇನೂ ನಡೆಯಲಿಲ್ಲ ಆದರೆ ಕಠಿಣ ತೋಪು ಕಾಳಗಗಳು ನಡೆದು ಮಿತ್ರರಿಗೆ ಜಯಕರವಾಗಿ ಪರಿಣಮಿಸಿರುವದು ಫ್ರೆಂಚ ರಣರಂಗದಲ್ಲಿ ನಡೆದ ಕದನಗಳೆಲ್ಲಾ ಫ್ರೆಂಚರಿಗೆ ಗುಣವಾಗಿಯೇ ನಡದಿರುವವು. ಬೆಲ್ಜಿಯಮಿನಲ್ಲಿ ಕೂಡಾ ಎಪ್ರೆಯ ದಕ್ಷಿಣದಲ್ಲಿ ಬ್ರಿಟಿಷರು ಕೆಲವು ಕಂದಕಗಳನ್ನು ಪಡದಿರುವರು ಲ್ಯಾವ್ರೆಯಲ್ಲಿ ಮಿತ್ರರು ಕೆಲವು ಕಂದಕಗಳನ್ನೂ ಕೆಲವು ನೂರು ಸೈನಿಕರನ್ನೂ ಸೆರೆಹಿಡಿದಿರುವರು

೫೯ ವರ್ಷ ವಯಸ್ಸಿನ ಮೇಲಿನ ಬ್ರಿಟಿಷ ಮತ್ತು ಜರ್ಮನ್ ಪ್ರಜಾ ಜನರನ್ನು ಬದಲಾಯಿಸಿಕೊಳ್ಳುವ ವಿಚಾರತು ಬ್ರಿಟಿಷ ಮತ್ತು ಜರ್ಮನರೊಳಗೆ ನಡೆದಿರುವದು.

ನೀಮೆನ್ ಮತ್ತು ವಿಸ್ಟುಲ ರಣರಂಗದಲ್ಲಿ ರುಷ್ಯ ಮತ್ತು ಜರ್ಮನಿಯರಿಗೆ ಕದನವು ನಡೆಯುತ್ತಿದೆ ಕರ್ಪಥೇನಿಯದಲ್ಲಿ ರುಶ್ಯರು ಸ್ವಲ್ಪ ಯಶಪ್ರದರಾಗಿ ೧೦೦೦ ಶತ್ರುಗಳ ಸೇನಿಕರನ್ನು ಶೆರೆಹಿಡಿದಿರುವರು. ಜರ್ಮನರು ಬಸ್ಕಿಡ್ ಮತ್ತು ವೆಸ್ಟಿಕೋ ಕಣಿವೆಗಳನ್ನು ಹಿಡಿಯಲು ಪ್ರಯತ್ನಿಸಿ ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು ಆಸ್ಟ್ರಿಯನರ ದೊಡ್ಡ ಸೇನೆಯು ಬಕೋವಿನದಲ್ಲಿ ಮುಂದರಿಯುತ್ತಲಿರುವರು

ಆಸ್ಟ್ರಿಯನರ ನೌಕಾವಳಿಯು ಕೆಟ್ಟಾರೊದಿಂದ ಹೊರಬಂದು ಅಂಟಿವಾರಿಯ ಮೇಲೆ ಗುಂಡುಹಾರಿಸ ಪ್ರಾರಂಭಿಸಿರುವದು

ತಾ. ೧೮ನೇ ಫೆಬ್ರುವರಿ.

ಬ್ರಿಟಿಷ ಫೀಲ್ಡ್ ಮಾರ್ಶಲ್ ಸರ್ ಜೋನ್ ಫ್ರೆಂಚರ [illegible]ಂದ ಫೆಬ್ರುವರಿ ತಾ. ೨ರಲ್ಲು ಕಳುಹಿಸಲ್ಪಟ್ಟ ಕದನಗಳ ಪ್ರಸ್ತಾಪ [illegible]ತ್ರವು ಪ್ರಕಟಿಸಲ್ಪಟ್ಟಿರುವದು ಇದರಲ್ಲಿ ಸರ್ [illegible] ಫ್ರೆಂಚರು ಆಯಾ ದಿನಗಳಲ್ಲಿ ನಡೆದ ಯುದ್ಧಗಳ [illegible]ಯನ್ನೂ ಬ್ರಿಟಿಷ[illegible]ದ ಜಯಗಳನ್ನೂ ಹೊರಪಡಿಸಿ, ಇಂಥಾ ಜಯಕ್ಕೆ [illegible]ದ ಅಧಿಕಾರಿಗೂ, [illegible]ಗೂ ಅ[illegible]ಮಾನಗಳನ್ನು ಕೊಡಲು ಶಿಫಾರಸು ಮಾಡಿರುವರು. ಇಂಥಾ ಶಿಫಾರಸು ಹೊಂದಿದ ೩೦೦೦ ಮಂದಿಯ ಹೆಸರುಗಳು ಇವರು ಕಳುಹಿಸಿದ ಪಟ್ಟಿಯಲ್ಲಿರುವದು.

ಅಂಟಿವಾರ್ ಭೂಶಿರದಲ್ಲಿ ಬ್ರಿಟಿಷರ "ಡಲ್‌ವಿಕ್" ಎಂಬ ನಾವೆಯು ಸಿಡಿದು ಹೋಯಿತು. ಫ್ರೆಂಚರ "ವಿಲ್ಲೆ ಡಿ ಲಿಲ್ಲೆ" ಎಂಬ ಹಡಗವನ್ನು ಜರ್ಮನರ ಜಲಂತರ್ಗಾಮಿ ನಾವೆಯು ಡನ್‌ಕರ್ಕ ಮತ್ತು ಚೆರ್‌ಬರ್ಗಿನ ನಡುವೆ ಮುಣುಗಿಸಿರುವದು

ಕೆನಡಾ ದೇಶದಿಂದ ಕಳುಹಿಸಲ್ಪಟ್ಟ ಸೇನೆಯು ಸುರಕ್ಷಿತವಾಗಿ ಫ್ರಾನ್ಸಿನಲ್ಲಿ ಇಳಿದಿರುವದು.

ಪೂರ್ವ ಪ್ರುಶ್ಯದ ಆಗಸ್ಟಾವೋದ ಆಜುಬಾಜಿನಲ್ಲಿರುವ ರುಶ್ಯನರು ಮುತ್ತಲು ನೋಡಿದ ಜರ್ಮನರ ದೊಡ್ಡ ಸೇನೆಯೊಡನೆ ರುಶ್ಯನರು ಕಾದಾಡಿದರು ಶತ್ರುಗಳು ಪ್ಲೋಕ್ ವಿಸ್ಟುಲ ಮತ್ತು ಸಾವ ನದಿಯ ಮಧ್ಯದಲ್ಲಿರುವ ಸ್ಥಳಕ್ಕೆ ತಲಪಿರುವರು

ಕರ್ಪಥೇನಿಯದ ಸ್ಥಿತಿಯು ಬದಲಾಗಲಿಲ್ಲ ಕೊಜಮಾಕ ಮತ್ತು ಸ್ಟೈಸ್ಕಿಕೋದಲ್ಲಿ ಹಲ್ಲಾ ಮಾಡಲು ನಿಶ್ಚಯಿಸಿದ್ದ ಜರ್ಮನರನ್ನು ರುಶ್ಯನರು ಓಡಿಸಿದರು.

ತಾ ೧೯ನೇ ಫೆಬ್ರುವರಿ.

ಜರ್ಮನರು ಇಂಗ್ಲಿಷ್ ಕಡಲಲ್ಲಿ ವ್ಯಾಪಾರ ಹಡಗಗಳು ನಡಿಸಕೂಡದೆಂದು ಕೊಟ್ಟ ಪ್ರಕಟಣೆಗೆ ವ್ಯಾಪಾರ ಹಡಗ ಮ್ಹಾಲಿಕರು ಹೆದರದೆ ಹಿಂದಿನಂತೆಯೇ ಹಡಗ ನಡಿಸುತ್ತಲಿದ್ದಾರೆ

ಫ್ರಾನ್ಸಿನ ಪಶ್ಚಿಮದಲ್ಲಿ ಜರ್ಮನರ ಎರಡು ಜೆಫಲಿನ್ ವಾಯುನಾವೆಗಳು ಉತ್ತರಾಭಿಮುಖವಾಗಿ ಹಾರಿ ಹೋಗಿದ್ದವು ಮೊದಲನೇಯದು ಒಂದು ಪಂಬೆಗೂ ೨ನೇದು ೫ ಗಂಬೆಗೂ ಡೆನ್‌ಮಾರ್ಕಿಗೆ ಹಿಂದೆರಳಿರುವದು. ೨ನೇದು ಸಮುದ್ರ ಕರಾವಳಿಯಲ್ಲಿ ಬೆಂಕಿ ಹಿಡಿದದ್ದಾಗಿ ಇಳಿಯಿತು ಇದರಲ್ಲಿದ್ದ ೧೪ ಮಂದಿ ನಾವಿಕರನ್ನು ಹಿಡಿದು ಆಯುಧ ಕಳಚಿರುವದು ಎಂತ ಕೊಪನ್‌ಹೇಗೆನಿನಲ್ಲಿ ಪ್ರಕಟವಾಗಿದೆ ನಾಶವಾದ ಜೆಫಲಿನ್ ನಾವೆಯು ಹೊಸ ನಮೂನೆದ್ದಾಗಿದ್ದು ಬಹಳ ದೊಡ್ಡದಾದದ್ದಾಗಿದೆ

ಒಸ್ಟೆಂಡಿನ ಮೇಲ್ಭಾಯಿದ ಬ್ರಿಟಿಷ ಮತ್ತು ಫ್ರೆಂಚ ವಾಯುನಾವೆಗಳಿಗೆ ಜರ್ಮನರು ಎಡೆಬಿಡದೆ ಗುಂಡು ಹಾರಿಸಿದರೂ ಅವುಗಳು ಅಪಾಯ ಹೊಂದದೆ ಹಿಂತಿರುಗಿರುವವು

ವಿಸ್ಟುಲದ ಬಲಗಡದಲ್ಲಿ ಕಠಿಣ ಕಾಳಗ ನಡೆಯುತ್ತಿದೆ ಕೆಲವು ಪ್ರಾಂತ್ಯದಲ್ಲಿ ಈ ಕದನಗಳು ಬಹು ಕಠಿಣವಾಗಿ ನಡೆಯುತ್ತಿರುವವು. ವಿಸ್ಟುಲದ ಎಡಪಾರ್ಶ್ವದಲ್ಲಿ ಬದಲಾವಣೆ ತೋರುವದಿಲ್ಲ. ಗೆಲೀಸಿಯದಲ್ಲಿ ರುಶ್ಯನರು ಶತ್ರುಗಳಲ್ಲಿ ವಿಶೇಷ ನಷ್ಟಪಡಿಸಿ ೧೪೧೦ ಮಂದಿಯನ್ನು ಶೆರೆಹಿಡಿದರು.

ಆಲ್ಬಾನಿಯರು ಸರ್ವಿಯದ ಒಳನುಗ್ಗಿ ಪ್ರಿಜರಾಂಡಿನಲ್ಲಿ ಸರ್ವಿಯನರೊಡನೆ ಕಠಿಣ ಕಾಳಗಮಾಡಿದರು. ಸರ್ವಿಯರು ಹಿಂದೆ ಸರಿದರು. ಸರ್ವಿಯನರಲ್ಲಿ ೪೦೦ ಮಂದಿ ಹತರಾಗಿರುವರೆಂತ ವಾರ್ತೆ ಬಂದದೆ.

ಆಸ್ಟ್ರಿಯನರ ೨ ಟೊರ್ಪೆಡೋ ದೋಣಿಗಳೂ ಒಂದು ಡಿಸ್ಟ್ರೋಯರ್ ನಾವೆಯೂ ಅಂಟಿವಾರಿಗೆ ಗುಂಡು ಹಾರಿಸಿರುವವು.

ತಾ. ೨೦ನೇ ಫೆಬ್ರುವರಿ.

ಕೈಸರರೂ ಜರ್ಮನ್ ಎಡ್ಮಿರಲ್ ವನ್‌ಟಿರ್‌ಪಿಟ್ಜರವರೂ ವಿಲ್‌ಹೆಲ್ಮ್‌ಶೇವೆನ್ ಮತ್ತು ಹೆಲಿಗೋಲೇಂಡಿಗೆ ಹೋಗಿ ನೌಕಾವಳಿಗಳನು ಸಂದರ್ಶಿಸಿ ಬಂದಿರುವರೆಂಟ ವಾರ್ತೆ ಇದೆ

ಜರ್ಮನರ ಒಂದು ಜಲಂತರ್ಗಾಮಿ ನಾವೆಯು ಇಂಗ್ಲಿಷ್ ಕಾಲಿವೆಯಲ್ಲಿ ಫ್ರೆಂಚರ "ಡಿನ್‌ಬರ" ಎಂಬ ಹಡಗವನ್ನು ಮುಣುಗಿಸಲು ಪ್ರಯತ್ನಪಟ್ಟಿತು. ಆದರೆ ಫ್ರೆಂಚ ನಾವೆಯು ತಪ್ಪಿಸಿಕೊಂಡು ದಡಸೇರಿತು.

ಫ್ರೆಂಚರಿಗೆ ಆರ್ರಾಸಿನಲ್ಲಿ ಜರ್ಮನರ ಎರಡು ಸಾಲು ಕಂದಕಗಳು ದೊರಕಿರುವವು. ಜರ್ಮನರಲ್ಲಿ ವಿಶೇಷ ನಷ್ಟವಾಗಿರುವದು. ಫ್ರೆಂಚರಿಗೆ ಜರ್ಮನರ ಕೆಲವು ನೂರು ಬೊಂಬುಗಳು ಸಿಕ್ಕಿರುವವು. ಇತರ ರಣರಂಗದಲ್ಲಿಯೂ ಫ್ರೆಂಚರು ತಮ್ಮ ನೆಲೆಗಳನ್ನು ಕಾಪಾಡಿಕೊಂಡಿರುವರು.

ಜರ್ಮನರು ತಮ್ಮ ಹಾಳಾದ ಕೆಲವು ಫಿರಂಗಿಗಳನ್ನು ದುರುಸ್ತಿ ಬಗ್ಗೆ ಕಳುಹಿಸಿಕೊಟ್ಟಿರುವರು ಎಂತ ವಾರ್ತೆ ಇದೆ.

ಜರ್ಮನರ ಇನ್ನೊಂದು ಜೆಫಲಿನ್ ನಾವೆಯು ಜಟ್ಲೆಂಡಿನ ಪಶ್ಚಿಮದಲ್ಲಿ ಅಪಾಯಹೊಂದಿತು ಎಂತಲೂ ನಾವಿಕರಲ್ಲಿ ೪ ಮಂದಿ ಮುಣುಗಿದರೆಂತಲೂ ಕೊಪನ್‌ಹೇಗೆನಿನಲ್ಲಿ ಪ್ರಕಟವಾಗಿದೆ

ಬರ್ಲಿನಿನ ಆಜುಬಾಜಿನಲ್ಲಿರುವ ಸ್ಕೋಹೆನ್‌ಬರ್ಗನಲ್ಲಿ ರೊಟ್ಟಿ ಮಾರುವದಕ್ಕೆ ಸುಂಕ ಕೊಡಬೇಕೆಂದು ಅಧಿಕಾರಿಗಳು ಕೇಳಿಕೊಂಡದ್ದರಿಂದ ಅಧಿಕಾರಿಗಳಿಗೂ ಜನರಿಗೂ ಜಟಾಪಟಿ ನಡೆದು ಜನರು ಪಟ್ಟಣ ಸಭಾಸದನಕ್ಕೆ ಕಲ್ಲುಗಳನ್ನು ಬಿಸಾಡಿ ದಂಗೆ ಮಾಡಿದರೆಂಬ ವಾರ್ತೆ ಇದೆ

ಅಗಸ್ಟೋವ ಪ್ರಾಂತ್ಯದಲ್ಲಿ ರುಶ್ಯನರಿಗೂ ಜರ್ಮನರಿಗೂ ಕಠಿಣ ಕಾಳಗ ನಡೆಯುತ್ತಿದೆ.

ಆಸ್ಟ್ರಿಯನರು ಸರ್ವಿಯನರ ಬಲ್ಗ್ರೇಡಾ ಪಟ್ಟಣಕ್ಕೆ ಗುಂಡು ಹಾರಿಸಿ ಕೆಲವು ಮನೆಗಳನ್ನು ಕೆಡವಿದರು. ಅನೇಕ ಮಂದಿ ಹತರಾದರು ಸರ್ವಿಯನರು ಸೆಮ್ಲಿನಿಗೆ ಗುಂಡು ಹಾರಿಸಿರುವರು

ತಾ. ೨೧ನೇ ಫೆಬ್ರುವರಿ.

"ಬೆಲ್‌ರಿಜ್" ಎಂಬ ನೊರ್ವೆ ಹಡಗವನ್ನು ಜರ್ಮನರ ಜಲಂತರ್ಗಾಮಿ ನಾವೆಯು ಟೊರ್ಪೆಡೊ ಮೂಲಕ ಹಾನಿಪಡಿಸಿತು. ಇದರಿಂದ ನೊರ್ವೆದೇಶದವರು ಜರ್ಮನರ ಮೇಲೆ ಸಿಟ್ಟುಗೊಂಡಿರುವರು. ಜರ್ಮನರ ಜಲಂತರ್ಗಾಮಿ ನಾವೆಯು "ಕೇಮ್ಬೆಂಕ್" ಎಂಬ ಕಾರ್ಡಿಫಿನ ಹಡಗವನ್ನು ಮುಣುಗಿಸಿರುವುದು ಮುಣುಗಿಸುವ ಮೊದಲು ಸೂಚನೆ ಕೊಡದ್ದರಿಂದ ಹಡಗದ ೪ ಮಂದಿ ಹತರಾದರು. ಉಳಿದವರು ರಕ್ಷಿಸಲ್ಪಟ್ಟರು.

ಯುದ್ಧ ಭೂಮಿಯ ಸುತ್ತಲಿರುವ ಪ್ರತಿ ಒಂದು ಹಡಗವನ್ನು ಶತ್ರುಗಳ ಹಡಗವೆಂದೇ ಭಾವಿಸಿ, ಸೂಚನೆಗಳೇನೂ ಕೊಡದೆ ಮುಣುಗಿಸಿ ಬಿಡಬೇಕೆಂದು ಜರ್ಮನ ಜಲಂತರ್ಗಾಮಿ ನಾವಿಕರಿಗೆ ಆಜ್ಞೆಯಾಗಿ[illegible] ಕೊಪನ್ ಹೇಗೆನಿನಿಂದ ವಾರ್ತೆ ಬಂದದೆ.

ಬ್ರಿಟಿಷ ಕರಾವಳಿಯಲ್ಲಿ ಸಂಚರಿಸುತ್ತಿದ್ದ "[illegible]ಶಯರ್" ಎಂಬ ನಾವೆಯನ್ನು ಜರ್ಮನ ಜಲಂತರ್ಗಾಮಿ ನಾವೆಯು ಮುಣುಗಿಸಿತು.

ಜರ್ಮನರ "ಕಾರ್ಲ್ಸ್‌ರೂ" ಎಂಬ ಕ್ರೂಸರ್ ನಾವೆಯು ಅಟ್ಲಾಂಟಿಕ ಸಾಗರದಲ್ಲಿ ೫ ವ್ಯಾಪಾರ ಹಡಗಗಳನು ಮುಣುಗಿಸಿತು ಈ ಹಡಗಗಳ ೧೬೨ ನಾವಿಕರು [illegible] ಇಳಿಸಲ್ಪಟ್ಟರು. ಮುಣುಗಿಸಲ್ಪಟ್ಟ ಹಡಗಗಳು "ಕ್ರೌನ್ ಪ್ರಿನ್ಸ್ ವಿಲ್‌ಹೆಲ್ಮ್" ಎಂಬ ಕ್ರೂಸರ್ [illegible] ಮುಣುಗಿಸಲ್ಪಟ್ಟವು [illegible] ಬಂದ [illegible] ಬರುತ್ತದೆ.

ಭೊರ್ನ್ಮಿಯಿನ ಉತ್ತರದಲ್ಲಿ ಬರುತ್ತಿದ್ದ ಅಮೇರಿಕದ "ಎವಲಿನ್" ನಾವೆಯು ಸಿಡಿಮದ್ದಿನ ಗಣಿಗೆ ತಾಗಿ ಮುಣುಗಿಹೋಯಿತು. ನಾವಿಕರನ್ನು ಜರ್ಮನರ ನಾವೆಯು ರಕ್ಷಿಸಿರುವದು.

ಪಶ್ಚಿಮ ರಣರಂಗದಲ್ಲಿ ಫ್ರೆಂಚರು ಮೇಲ್ಬಾಯಿಂದ ಜರ್ಮನರನ್ನು ಹಿಂದಟ್ಟಿ ತಮ್ಮ ನೆಲೆಗಳನ್ನು ಕಾಪಾಡಿಕೊಂಡಿರುವರು. ನ್ಯೂಪೋರ್ಟಿನಲ್ಲಿ ಜರ್ಮನರು ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿದರು. ಎಪ್ರೆಯಲ್ಲಿಯೂ ಜರ್ಮನರಿಗೆ ಹೆಚ್ಚಿನ ನಷ್ಟವಾಗಿರುವದು. ಡನ್‌ಕರ್ಕಿನ ಸಮೀಪದಲ್ಲಿ ಹಾರುತ್ತಿದ್ದ ಜರ್ಮನರ ನಾವೆಗೆ ಮಿತ್ರರು ಸಿರಂಗಿ ಹೊಡೆದು ಕೆಳದೊಬ್ಬಿರುವರು. ಇದರ ನಾವಿಕರಲ್ಲಿ ಇಬ್ಬರು ಹತರಾದರು.

ಕಾರ್ಪಥೇನಿಯದಲ್ಲಿ ಕಠಿಣ ಕಾಳಗವು ನಡೆಯುತ್ತಿದೆ. ಕಳೆದ ಎರಡು ದಿವಸಗಳಲ್ಲಿ ರುಶ್ಯನರು ೧೦೦೦೦ ಜರ್ಮನರನ್ನು ಸೆರೆಹಿಡಿದರು.

ಮಿತ್ರರ ನೌಕಾಪಡೆಯು ದರ್ಡನೆಲ್ಲಿಗೆ ಎರಡು ದಿವಸಗಳಲ್ಲಿ ಸಿರಂಗಿ ಹಾರಿಸಿ ನಷ್ಟಪಡಿಸಿರುವರು. ಮಿತ್ರರ ಯಾವ ನಾವೆಗೂ ನಷ್ಟವಾಗಿಲ್ಲ.

ಉತ್ತರ ಹಿಂದೂಸ್ಥಾನ

ಸುಕ್ಕೂರಿನ ಸಿಂಧು ನದಿಯಲ್ಲಿ ನೆರೆ ಬಂದಿರುವದು. ಪಂಜಾಬಿನಲ್ಲಿ ವಿಶೇಷ ಮಳೆ ಬಂದದರಿಂದ ಸಿಂಧೂ ನದಿಗೆ ಬಂದು ಬೀಳುವ ಇತರ ಎಲ್ಲಾ ನದಿಗಳಲ್ಲಿ ನೆರೆಯುಂಟಾಗಿ ಸಿಂಧೂನದಿಯ ನೀರು ಮೇಲೆ ಬಂದು ಬಿದ್ದಿರುವದು. ಇದರಿಂದ ಪೈರು ಹಾಳಾಗುವ ಹಾಗಾಯಿತು. ಗೋಧಿಯ ಬೆಲೆಯು ಏರಿರುವದು. ಈಗ ಮಣಕ್ಕೆ ರೂ ೬-೧೩-೦ ಇದೆ. ಪರ ದೇಶಗಳಿಗೆ ಗೋಧಿಗಳನ್ನು ರವಾನಿಸಿಕೊಡುವ ಕಂಪೆನಿಗಳೊಳಗಿನ ಮೇಲಾಟವೇ ಗೋಧಿಯ ಕ್ರಯ ಹೆಚ್ಚಲು ಕಾರಣವಾಗಿರುವದು.

~~~~

ವೈಸರಾಯ ಪ್ರಭುಗಳವರು ತಾ ೧೬ರಲ್ಲು ಪಾರ್ಶಿಕೊಲ್ಲಿಯಿಂದ ಹಿಂತಿರುಗಿ ಡಿಲ್ಲಿಗೆ ಬಂದು ತಲಪಿರುವರು. ವೈಸರಾಯ ಪ್ರಭುಗಳವರು ಪಾರ್ಶಿಕೊಲ್ಲಿಗೆ ಹೋಗಿ ಅಲ್ಲಿಯ ಪ್ರಮುಖರೊಡನೆ ಮಾತನ್ನಾಡಿ ಅಲ್ಲಿಯ ಸ್ಥಿತಿಗತಿಯನ್ನು ಖುದ್ದಾಗಿ ತಿಳಕೊಂಡು ಬಂದಿರುವರು.

~~~~

ರಾವಲಪಿಂಡಿಯಲ್ಲಿ ಪೋಲಿಸರು ಆಯುಧಪಾಣಿಗಳಾದ ದಕಾಯಿತರನ್ನು ಹಿಡಿದಿರುವರು. ಈ ದಕಾಯಿತರು ಈಚೆಗೆ ಡೆರಬಕ್ಷಿಯಾನ್ ಗ್ರಾಮದಲ್ಲಿ ದಕಾಯಿತಿ ನಡೆಸಿ ೫ ಮಂದಿಯನ್ನು ಗಾಯಪಡಿಸಿ ಒಬ್ಬ ಅಕ್ಕಸಾಲಿಗನ ಚಿನ್ನಾಭರಣಗಳನ್ನೆಲ್ಲಾ ಸುಲಕೊಂಡು ಹೋಗಿದ್ದರು.

~~~~

ಸೀಮೆಗೆ ಹೋಗಿದ್ದ ಬಿಕಾನಿರ್ ಮಹಾರಾಜರೂ ಕೃಷ್ಣಘರ್ ಮಹಾರಾಜರೂ ಕೂಡಾ ಮುಂಬಾಯನ್ನು ಬಂದು ಸೇರಿದರು. ಈಜಿಪ್ಟಿನಲ್ಲಿ ಇಸ್ಮಾಯಿಲ್ ಹತ್ತಿರ ತುರ್ಕಿಯವರ ಮೇಲೆ ಯುದ್ಧವಾದಾಗ ಬಿಕಾನಿರ್ ಮಹಾರಾಜರು ಯುದ್ಧರಂಗದಲ್ಲೇ ಇದ್ದರು.

~~~~

ಬಂಗಾಳದಲ್ಲಿ ಅಡ್ವೊಕೇಟಾಗಿದ್ದ ಬೆಲಾಯ್ಟ್ ಹುಸೇನ್ ಎಂಬಾತನಿಗೆ ದಗಾ ಮಾಡಿದ ಅಪರಾಧಕ್ಕಾಗಿ ಗಯಾದ ಸೆಶ್ಶನ್ಸ್ ಜಡ್ಜರಿಂದ ೩ ವರ್ಷ ಕಾರಾಗೃಹವಾಸ ಶಿಕ್ಷೆಯು ವಿಧಿಸಲ್ಪಟ್ಟಿತು. ಅಪರಾಧಿಯು ಹೈಕೋರ್ಟಿಗೆ ಮಾಡಿಕೊಂಡಿದ್ದ ಅಪೀಲಿನಿಂದ ಶಿಕ್ಷೆಯಲ್ಲಿ ೯ ತಿಂಗಳು ಕಡಿಮೆ ಆಯಿತು. ನ್ಯಾಯವಾದಿಯಾದ ಈತನು ಹೀಗೆ ಶಿಕ್ಷಿತನಾದ ಕಾರಣದಿಂದ ಅವನು ವಕೀಲತನದಲ್ಲಿರುವದಕ್ಕೆ ಅರ್ಹನಲ್ಲವೆಂದು ಹೇಳಿ ಕಲ್ಕತ್ತಾ ಹೈಕೋರ್ಟಿನವರು ಅವನನ್ನು ವಕೀಲರ ಪಟ್ಟಿಯಿಂದ ತೊಲಗಿಸಿ ಬಿಟ್ಟರು.

~~~~

ಸಂಯುಕ್ತ ಸಂಸ್ಥಾನದ ಪೋಲಿಸ್ ಫೌಜಿನವರು ಇಂಪೀರಿಯಲ್ ರಿಲೀಫ್ ಫಂಡಿಗೆ ರೂ ೨೫,೭೧೭ ಕೂಡಿಸಿ ಕೊಟ್ಟಿರುವರು.

~~~~

ಜನವರಿ ತಿಂಗಳಾಂತ್ಯದ ವರೆಗೆ ಇಂಪೀರಿಯಲ್ ರಿಲೀಫ್ ಫಂಡಿಗೆ ರೂ ೭೦ ಲಕ್ಷ ಕೂಡಿರುವದಲ್ಲದೆ ಆಯಾ ಸಂಸ್ಥಾನದಲ್ಲಿ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವದಕ್ಕಾಗಿ ೧೪ ಲಕ್ಷ ರೂಪಾಯಿ ತೆಗೆದಿಡಲ್ಪಟ್ಟಿರುವದು. ಒಟ್ಟಿಗೆ ೮೪ ಲಕ್ಷ ರೂಪಾಯಿ ಕೂಡಿದಂತಾಯಿತು. ಆಯಾ ಸಂಸ್ಥಾನಗಳಿಂದಲೂ, ದೇಶಿಯ ರಾಜಗಳಿಂದಲೂ ಒಟ್ಟು ೧ ಕೋಟಿ ಮತ್ತು ೪೦ ಲಕ್ಷ ರೂಪಾಯಿ ಕೂಡಿರುವದು. ಈ ಪೈಕಿ ಸುಮಾರು ೩ ಲಕ್ಷ ಮತ್ತು ೧೧॥ ಲಕ್ಷ ಮದ್ರಾಸಿನಿಂದಲೂ ಇತರ ದೇಶೀಯ ಸಂಸ್ಥಾನಗಳಿಂದಲೂ ಸೀದಾ ಸೆಂಟ್ರಲ್ ಫಂಡಿಗೆ ಕಳುಹಿಸಿ ಕೊಡೋಣಾಗಿರುವದು. ಆಯಾ ಸಂಸ್ಥಾನಿಕ ಮತ್ತು ದೇಶಿಯ ರಾಜಗಳ ಕಮಿಟಿಗಳಿಂದ ಇಟ್ಟುಕೊಳ್ಳೋಣಾದ ೧೪ ಲಕ್ಷ ರೂಪಾಯಲ್ಲಿ ೪೦ ಸಾವಿರ ಖರ್ಚಾಗಿರುವದು. ಸೆಂಟ್ರಲ್ ಫಂಡಿನಲ್ಲಿ ಈ ವರೆಗೆ ಸುಮಾರು ೬ ಲಕ್ಷ ರೂಪಾಯಿ ಖರ್ಚಾಗಿರುವದು. ಈ ಪೈಕಿ ಒಂದೂವರೆ ಲಕ್ಷ ಗಾಯ ಒಡೆದ ಸೈನಿಕರಿಗೆ ಹೆಚ್ಚಿನ ಸಹಾಯ ಮಾಡುವ ಬಗೆ ಸರ್ಜನ್ ಜನರಲ್ ಬಳಿಯವರ ವಶ ಕೊಡೋಣಾಗಿರುವದು. ಯುದ್ಧದಲ್ಲಿ ಹತರಾದವರ ವಿಧವೆಯರಿಗೂ ಅವರ ಪಕ್ಷದವರಿಗೂ ಸದಾ ಊನಹೊಂದಿದವರಿಗೂ ಹೆಚ್ಚಿನ ಸಹಾಯ ಮಾಡಬೇಕಾದುದರಿಂದ ಹಣ ಸಹಾಯವು ಇನ್ನೂ ಬೇಕಾಗಿದೆ.

~~~~

ಈ ಯುದ್ಧದಲ್ಲಿ ಸಾಮ್ರಾಜ್ಯಕ್ಕಾಗಿ ಕಾದಾಡಿ ಸಾಯಬೇಕೆಂದು ಹಿಂದೂಸ್ಥಾನದ ಪ್ರಜೆಗಳು ಮಾಡಿಕೊಂಡಷ್ಟು ದೃಢ ಸಂಕಲ್ಪವನ್ನು ಬ್ರಿಟಿಷ ಸಾಮ್ರಾಜ್ಯದ ಇತರ ಯಾವ ಪ್ರದೇಶದ ಪ್ರಜೆಗಳೂ ಮಾಡಲಿಲ್ಲ. ಮಿತ್ರರಿಗೆ ಜಯವಾಗಲೆಂದು ಹಿಂದೂಸ್ಥಾನದಲ್ಲಿ ಪ್ರಾರ್ಥನೆಗಳು ನಡೆದವು. ಇತರ ಯಾವ ಪ್ರದೇಶದಲ್ಲಿಯೂ ನಡೆಯಲಿಲ್ಲ ಎಂಬದಾಗಿ ಸರ್ ಚಾರ್ಲ್ಸ್ ಜೇಲಿಯವರು ಡಾಲೋಂಗಜಿಯಲ್ಲಿ ಕೊಟ್ಟ ಭಾಷಣದಲ್ಲಿ ಹೇಳಿರುವರು.

~~~~

ಗಾಯ ಒಡೆದ ಮತ್ತು ಅಸ್ವಸ್ಥರಾಗಿರುವ ೧೧೯ ಸೈನಿಕರು ಫ್ರಾನ್ಸಿನಿಂದ ಲಕ್ನೋಗೆ ಬಂದು ತಲಪಿರುವರು.

~~~~

ವಾನ್‌ಕವರಿನಿಂದ ಹಿಂದರಳಿದ ಕೊಮಗಾಟಮಾರು ಎಂಬ ಹಡಗದಲ್ಲಿದ್ದ ಪ್ರೀತಿಸಿಂಘನೆಂಬವನೂ ಖಾನ್ ಸಿಂಘನೆಂಬವನೂ ಇನ್ಸ್‌ಪೆಕ್ಟರ್ ಅಮರ್ ಸಿಂಘನೆಂಬವನಿಗೆ ಸಾಯುವ ವರೆಗೆ ಹೊಡೆದರೆಂಬದಾಗಿ ಅಪಾದಿಸಲ್ಪಟ್ಟಿದ್ದರು. ಈ ಮೊಕದ್ದಮೆಯು ಅಂಬಾಲ ಸೆಶ್ಶನ್ಸ್ ಜಡ್ಜರಲ್ಲಿ ತನಿಕೆಯಾಗಿ ಎಸೆಸ್ಸರುಗಳು ಅಪಾದಿತರು ತಪ್ಪಿತಸ್ಥರಲ್ಲವೆಂದು ಅಭಿಪ್ರಾಯ ಪಟ್ಟರು. ಸೆಶ್ಶನ್ಸ್ ಜಡ್ಜರು ಎಸೆಸ್ಸರಗಳ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಪ್ರೀತಿಸಿಂಘನಿಗೆ ೧೦ ವರ್ಷಗಳ ಕಠಿಣ ಸಜೆಯನ್ನೂ ಖಾನ್ ಸಿಂಗನಿಗೆ ೧೪ ತಿಂಗಳ ಕಠಿಣ ಸಜೆಯನ್ನೂ ವಿಧಿಸಿದರು.

~~~~

ಆದಿತ್ಯವಾರ ಸಾಯಂಕಾಲ ಅಮೃತಸಾರ್ ಕ್ಲಬ್ಬಿನ ಒಳಗೆ ಹೋಗುತ್ತಿದ್ದ ಇಬ್ಬರು ಸಿಕ್ಕರು ಅನುಮಾನದ ಮೇಲೆ ಕೈದ ಮಾಡಲ್ಪಟ್ಟಿರುವರೆಂದೂ ಈ ಪೈಕಿ ಒಬ್ಬನು ಕುಡಿದು ಮತ್ತನಾಗಿದ್ದನೆಂದೂ ಮತ್ತೊಬ್ಬನ ಕೂಡೆ ರಿವೊಲ್ವರ್ ಇತ್ತೆಂದೂ ಲಾಹೋರಿನ 'ಬುಲಿಟಿನ್' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~~

ಸುಕೇಟಿನ ರಾಜರವರು ಯುದ್ಧದ ಖರ್ಚಿನ ಬಗ್ಗೆ ೧೩,೦೦೦ ರೂಪಾಯಿಗಳನ್ನು ಎರಡು ವರ್ಷಗಳ ಕಾಲ ಕೊಡುವರೆ ಮಾತು ಕೊಟ್ಟಿರುವರು. ಬರ್ದವಾನ ಮಹಾರಾಜರವರು ಯುದ್ಧ ಮುಗಿಯುವ ವರೆಗೆ ಘಾಯ ಒಡೆದ ಸೇನಿಕರ ಖರ್ಚಿಗಾಗಿ ತಿಂಗಳಿಗೆ ೧೦೦೦ ರೂಪಾಯಿ ಕೊಡುವರೆ ಒಪ್ಪಿರುವರು. ಮಹಾರಾಣಿ ಅಧಿರಾಣಿಯವರು ಘಾಯ ಒಡೆದ ಸೇನಿಕರ ವಿಧವೆಯರಿಗೂ ಸಂಬಂಧಿಕರಿಗೂ ಸಹಾಯ ಮಾಡುವ ಬಗ್ಗೆ ತಿಂಗಳಿಗೆ ರೂ ೫೦೦ ಕೊಡುವರೆ ಒಪ್ಪಿರುವರು. ಮಹಾರಾಜಾಧಿರಾಜ ಕುಮಾರ ಉದಯ ಚಂದರವರು ಯುದ್ಧದಲ್ಲಿ ಘಾಯ ಒಡೆದವರ ಅನಾಥ ಮಕ್ಕಳ ಸಹಾಯದ ಬಗ್ಗೆ ತಿಂಗಳಿಗೆ ರೂ ೨೦೦ ಕೊಡಲು ಒಪ್ಪಿರುವರು.

~~~~

ಈಜಿಪ್ಟಿನಿಂದ ಹಿಂದೂಸ್ಥಾನಕ್ಕೆ ಸಕ್ಕರೆ ಬರಲು ಪ್ರಾರಂಭವಾಗಿರುವದು.

— o —

ಕಲ್ಕತ್ತೆಯ ದಾನಪುರದ ಎಡಿಸನಲ್ ಪೋಲಿಸ್ ಸುಪರಿಂಟೆಂಡೆಂಟರಾದ ರಾಯ ಸಾಹೇಬ್ ನಂದಲಾಲ್ ಬೋಸರನ್ನು ಕೊಲ್ಲಲು ತಾ ೧೭ನೇ ರಾತ್ರಿ ಪ್ರಯತ್ನ ನಡೆದಿರುವದೆಂಬ ವಾರ್ತೆ ಬಂದಿರುವದು. ಸಾಯಂಕಾಲವಾಗುತ್ತಲೇ ಘಾತುಕನು ಬೋಸರವರ ಕೋಟೆದೊಳಗೆ ನುಗ್ಗಿಕೊಂಡು, ಬೋಸರವರಿಗೆ ಗುರಿ ಇಟ್ಟು ಹೊಡೆದನು. ಆದರೆ ಇವನ ಗುರಿ ತಪ್ಪಿ ಒಬ್ಬ ಕನ್‌ಸ್ಟೇಬಲನಿಗೆ ತಾಗಿ ಅವನಿಗೆ ಕಠಿಣ ಘಾಯವಾಯಿತು. ಮೆ। ಬೋಸರನ್ನು ರಾತ್ರಿಗೆ ಇಬ್ಬರು ಕರೆದರು. ಮೆ। ಬೋಸರು ಅವರಿಗೆ ಏನುಬೇಕೆಂದು ಕೇಳಲು ಅವರು ರಿವೊಲ್ವರ್ ತೆಗೆದು ಹಾರಿಸಿದರು. ಆದರೆ ಮೆ। ಬೋಸರವರು ಮತ್ತೊಂದು ಕೋಣೆಗೆ ಹೋಗಿಬಿಟ್ಟದ್ದರಿಂದ ಬೋಸರಿಗೆ ಗುರಿ ತಪ್ಪಿತು. ಒಬ್ಬ ಆರ್ಡರ್ಲಿ ಮತ್ತು ಕನ್‌ಸ್ಟೇಬಲನು ಘಾತುಕರನ್ನು ಹಿಡಿಯಲು ಯತ್ನಿಸಿದರು. ಆ ಘಾತುಕರು ಪುನಃ ಗುಂಡು ಹಾರಿಸಿದ್ದರಿಂದ ಆರ್ಡರ್ಲಿಗೆ ಘಾಯವಾಯಿತು. ಘಾತುಕರು ತಪ್ಪಿಸಿಕೊಂಡರು ಎಂದು ಕಡೆಗೆ ಬಂದ ವಾರ್ತೆಯಿಂದ ತಿಳಿಯುವದು.

ಈ ಘೋರಕೃತ್ಯ ಸಂಬಂಧವಾಗಿ ೬ ಜನ ಬಂಗಾಳಿಯವರು ಕೈದುಮಾಡಲ್ಪಟ್ಟಿರುವರು. ಈ ಪೈಕಿ ಒಬ್ಬನು ಸ್ಥಳಿಕ ವಕೀಲನಾಗಿರುವನು. ಆರ್ಡರ್ಲಿಗೆ ಸಹಾಯ ಮಾಡಲು ಹೋದ ಮೆ। ಬೋಸರವರ ಕೆಲಸದವನಿಗೂ ಘಾಯವಾಗಿರುವದು. ಆರ್ಡರ್ಲಿಯು ಮೋದಂಡ ಸ್ಥಿತಿಯಲ್ಲಿದ್ದಾನೆ.

~~~~

ಪ್ಲೇಗು ಸೋಂಕಿಕೊಳ್ಳದ ಹಾಗೆ ಡಾಕು ಹಾಕಿಸಿದ್ದರಿಂದ ಉಂಟಾದ ಪ್ರಯೋಜನಗಳನ್ನು ಕುರಿತು ಮುಂಬಾಯಿ ಸರಕಾರದವರು ಒಂದು ಪಟ್ಟಿಯನ್ನು ಪ್ರಕಟಿಸಿರುವರು.

~~~~

ಮುಂಬಾಯಿ ಮನ್ಸಿಪಾಲ್ ಲಾಯಗಳಲ್ಲಿ ಬೆಂಕಿಯುಂಟಾಗಿ ೩೦ ಗುಡಿಸಲುಗಳು ಸುಟ್ಟು ಭಸ್ಮವಾದವು. ೪ ವರ್ಷ ವಯಸ್ಸಿನ ಹುಡುಗಿಯೊಬ್ಬಳು ಈ ಬೆಂಕಿಗೆ ಆಹುತಿಯಾಗಿರುವಳು.

~~~~

ಮುಂಬಾಯಲ್ಲಿ ಈಚೆಗೆ ನಡೆದ ಮುನ್ಸಿಪಾಲ್ ಇಲೆಕ್ಷನಿನಲ್ಲಿ ಅಹಮ್ಮದ್ ಮಹಮ್ಮದನೆಂಬವನು ಅನ್ಯಾಯವಾಗಿ ನಡೆದನೆಂದು ಅಪಾದಿಸಲ್ಪಟ್ಟಿದನು. ಇಂಥಾ ಮೊಕದ್ದಮೆಯು ತನಿಕೆಗೆ ಬಂದದ್ದು ಇದೇ ಮೊದಲನೇ ಸಾರಿಯಾದದರಿಂದ ಮೇಜಿಸ್ಟ್ರೇಟರು ಅಪಾದಿತನಿಗೆ ರಿಯಾಯಿತಿ ತೋರಿಸಿ ಒಂದು ದಿನದ ಸಾಧಾರಣ ಸಜೆ ಮತ್ತು ೨೦ ರೂಪಾಯಿ ಜುಲುಮಾನೆ ವಿಧಿಸಿದರು.

~~~~

ಪೋಲಿಸ ಸುಪರಿಂಟೆಂಡೆಂಟ ರಾಯಸಾಹೇಬ ಬೋಸರವರನ್ನು ಕೊಲ್ಲಬೆತ್ನಿಸಿದ ಘಾತಕರನ್ನು ಹಿಡಿದುಕೊಟ್ಟವರಿಗೆ ೫೦೦೦ ರೂಪಾಯಿಗಳ ಬಹುಮಾನ ಕೊಡಲಾಗುವದೆಂದು ಪ್ರಕಟವಾಗಿದೆ.

~~~~

ಬಹುಮಾನಪಟ್ಟ ಗೋಖಲೆಯವರು ಇದೇ ತಾ ೧೯ರಲ್ಲು ಸ್ವರ್ಗಾರೋಹಣವಾದರು ಎಂದು ತಿಳಿಸಲು ವಿಷಾದವಾಗುತ್ತದೆ. ಮೊನ್ನೆ ಗಂಧಿಯವರನ್ನು ಸನ್ಮಾನಿಸುವ ಬಗ್ಗೆ ಕೂಡಿದ್ದ ಸಭೆಗೆ ಇದೇ ತಾ ೧೩ಲ್ಲು ಬಹುಮಾನಪಟ್ಟ ಗೋಖಲೆಯವರು ಹಾಜರಾಗಿದ್ದರು. ಅಲ್ಲಿಂದ ಬಂದವರಿಗೆ ಉಬ್ಬಸ ಪ್ರಾರಂಭವಾಗಿ ಕಠಿಣವಾಯಿತು. ಆದರೂ ಬುಧವಾರ ದಿನ ಬೆಳಿಗ್ಗೆ ೪ ತಾಸು ಕೆಲಸಮಾಡಿದರು. ಅವರಿಗೆ ಶೈತ್ಯೋಪಚಾರ ನಡಿಸುತ್ತಿದ್ದ ದಾಕ್ತ್ರರು ಬಹು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಕಡೆಗೆ ತಾ ೧೯ನೇ ಸಾಯಂಕಾಲ ಗೋಖಲೆಯರಿಗೆನೇ ತನ್ನ ಗಳಿಗೆಯು ಸಮೀಪಿಸಿತೆಂದು ತಿಳಿದ ಬಂದುದರಿಂದ ರೋಯಿಲ್ಸ್ ಕಮಿಶನ್ ಮತ್ತು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ವಿಷಯ ಮಾತನ್ನಾಡಿದರು. ಸಾಯುವ ೧೫ ನಿಮಿಷಗಳ ಮೊದಲು ತನ್ನ ಎಲ್ಲಾ ಸ್ನೇಹಿತರನ್ನು ನೋಡಿ ಬೀಳ್ಕೊಂಡರು. ರಾತ್ರಿ ೧೦ ಗಂಟೆ ೨೫ ನಿಮಿಷಕ್ಕೆ ಮಾನ್ಯ ಗೋಖಲೆಯರು ದೈವಾಧೀನವಾದರು. ಇವರ ಮರಣವಾರ್ತೆಯಾಗುತ್ತಲೇ ಸಾವಿರಾರು ಜನರು ಅವರ ಕಳೇಬರವನ್ನು ನೋಡಬಂದರು. ಡಾಕ್ಟರ್ ರಾಮಕೃಷ್ಣ ಬಂಡಾರಕರ, ಬಹುಮಾನಪಟ್ಟ ಚೌಬಾಲ್, ಸರ್ದಾರ್, ನೌರೋಜಿ ಪುದ್ಮುಜಿ, ಮಿಸೆಸ್ ರಾಮ ಬಾಯಿ ರನಾಡೆ, ಬಹುಮಾನಪಟ್ಟ ಪ್ರಿನ್ಸಿಪಾಲ್ ಪರಂಜಪೆ, ಮೆ। ಬಾಲಕ್‌ರಾಮ ಐ.ಸಿ.ಎಸ್. ಮೊದಲಾದವರೇ ಈ ಗುಂಪಿನಲ್ಲಿ ಇದ್ದರು. ಎಲ್ಲಾ ಕಾಲೇಜುಗಳ ಮತ್ತು ಶಾಲೆಗಳ ಮಕ್ಕಳು ಗಂಪು ಗುಂಪಾಗಿ ಈ ಮಹಾಪುರುಷರ ದೇಹವನ್ನು ನೋಡಿ ಹೋದರು. ಮ್ಯಾ [illegible]ವರು [illegible]ಯಿಂದ ಸ್ವಲ್ಪ ದೂರ ಗ್ರಾಮವಾದ [illegible]ಗೆ ಹೋಗಿದ್ದರೂ ಈ ವಾರ್ತೆಯಾಗುತ್ತಲೇ ಅಲ್ಲಿಂದ ಹಿಂದೆ ಬಂದು ಶವಸಂಸ್ಕಾರದಲ್ಲಿ ಭಾಗಿಗಳಾದರು. ಬೆಳಿಗ್ಗೆ ೩ ಗಂಟೆಗೆ ಶವಸಂಸ್ಕಾರವು ನೆರವೇರಿತು. ಸೂರ್ಯಗ್ರಹಣವಾಗಿದ್ದರೂ ಮಧ್ಯಾಹ್ನ ೧೨ ಗಂಟೆಯು
~~~~

ವರೆಗೆ ಶವಸಂಸ್ಕಾರವನ್ನು ನಡಿಸಲು ಆಗಲಿಲ್ಲ ೨೦ ಸಾವಿರಕ್ಕಿಂತಲೂ ಹೆಚ್ಚು ಜನ ಗೋಖಲೆಯವರ ಶವಸಂಸ್ಕಾರಕ್ಕೆ ಬಂದುದರಿಂದ ದಹನದ ಸ್ಥಳಕ್ಕೆ ತಲಪುವರೆ ೪ ತಾಸ ಹಿಡಿಯಿತು ರಾ ದೇವಧಾರ್, ಡಾಕ್ಟರ್ ಭಂಡಾರಕರ್ ಮತ್ತು ರಾ। ತಿಲಕರವರು ಇವರ ವಿಷಯವಾಗಿ ಭಾಷಣಗಳನ್ನು ಕೊಟ್ಟರು ಎಲ್ಲಾ ಶಾಲೆಗಳೂ, ಕಾಲೇಜುಗಳೂ, ಮುನ್ಸಿಪಾಲ್ ಆಫೀಸೂ, ಸರಕಾರ ಆಫೀಸಗಳೂ, ಖಾಸಗಿ ಕಂಪೆನಿಗಳೂ ಇವರ ಮರಣದ ಶೋಕಾರ್ಥವಾಗಿ ಮುಚ್ಚಲ್ಪಟ್ಟವು ಮಾನ್ಯ ಗೋಖಲೆಯವರ ಕುಟುಂಬದವರಿಗೂ, ಸರ್ವೆಂಟ್ಸ್ ಆಫ್ ಸೊಸೈಟಿಯವರಿಗೂ ಶೋಕಾರ್ಥ ೨೦ ಪತ್ರಗಳು ತಂತಿಗಳು ಬರುತ್ತಲಿವೆ ಹಿಂದೂಸ್ಥಾನದ ಪ್ರತಿ ಒಂದು ಪ್ರಾಂತ್ಯದಲ್ಲಿಯೂ ಸಭೆಗಳು ಕೂಡಿ ಇವರ ಮರಣದಿಂದ ಲೋಕಕ್ಕುಂಟಾದ ನಷ್ಟವನ್ನು ಹೊರಪಡಿಸಿ ಶೋಕವನ್ನು ತೋರ್ಪಡಿಸುತ್ತಿವೆ

~~~~~

ಪೋಲಿಸ್ ಸುಪರಿಂಟೆಂಡೆಂಟ ರಾಯಿಸಾಹೇಬ್ ಬೋಸರವರಿಗೆ ನಡೆದ ಘಾತುಕ ಕೃತದಲ್ಲಿ ಗುಂಡು ಬಿದ್ದು ಮೊಂದುಸ್ಥಿತಿಯಲ್ಲಿದ್ದ ಪೋಲಿಸಿನವನು ಆಸ್ಪತ್ರಿಯಲ್ಲಿ ಮೃತನಾದನು

~~~~~

ಮಾನ್ಯ ಗೋಖಲೆಯವರು ವಿಧಿವಶವಾದ ಶೋಕಾರ್ಥವನ್ನು ತೋರಿಸುವರೆ ಲಂಡನಿನಲ್ಲಿ ಮಿ। ಅಮೀರ್ ಅಲಿ, ಸರ್ ಕೃಷ್ಣ ಗುಪ್ತರು ಮೊದಲಾದವರು ಸಭೆ ಕೂಡಿಸಿರುವರು

~~~~~

ಇಂಡಿಯಾ ಕೌನ್ಸಿಲ ಮೆಂಬರರಾಗಿರುವ ಸರ್ ಕೃಷ್ಣ ಗುಪ್ತರವರ ಕೆಲಸದ ಅವಧಿಯು ತೀರಿರುವದರಿಂದ ಇವರ ಬದಲಿಗೆ ಸರ್ದಾರ್ ದಲ್ಜಿತ್ ಸಿಂಗರವರು ಇಂಡಿಯಾ ಕೌನ್ಸಿಲ್ ಮೆಂಬರರಾಗಿ ನೇಮಿಸಲ್ಪಟ್ಟಿರುವರು

~~~~~

ಇಂಡಿಯದಲ್ಲಿ ೫ ವರುಷದ ಒಳಗಿನ ಪ್ರಾಯದ ವಿಧವೆಯರು ೧೭೭೦೦೦, ಮತ್ತು ೧೫ ವರುಷದ ಒಳಗಿನ ಪ್ರಾಯದ ವಿಧವೆಯರು ೩೫೦೦೦೦ ಇರುತ್ತಾರೆ. ೧೯೦೧ನೇ ಇಸವಿಯ ಖಾನೆಸುಮಾರಿಯಲ್ಲಿ ೫ ವರುಷದ ಒಳಗಿನವರು ೧೯೬೭೭ ಮತ್ತು ೧೫ ವರುಷದ ಒಳಗಿನವರು ೩೯೧೦೦೦ ಇದ್ದರು.

~~~~~

ದಕ್ಷಿಣ ಹಿಂದೂಸ್ಥಾನ

ಮದ್ರಾಸ ಗವರ್ನರರಾದ ಪೆಂಟಲೆಂಡ ಪ್ರಭುಗಳವರು ಕಡಲೂರನ್ನು ಸಂದರ್ಶಿಸುತ್ತಿರುವರು

~~~~~

'ಮದ್ರಾಸ್' ಆಸ್ಪತ್ರಿ ಹಡಗದಲ್ಲಿದ್ದ ಲೆಫ್ಟನೆಂಟ್ ಡಾಕ್ಟರ್ ನಾಯರ್ ಐ ಎಮ್ ಎಸ್‌ರವರು ಅಗತ್ಯ ಖಾಸಗಿ ಜಂಬರದ ಮೇಲೆ ಒಂದು ತಿಂಗಳ ರಜೆ ಪಡಕೊಂಡಿರುವರೆಂತ ಕರ್ನೆಲ್ ಗಿಫ್ಫರ್ಡರವರು ಮದ್ರಾಸ್ ಗವರ್ನರ ಪ್ರಭುಗಳವರಿಗೆ ತಿಳಿಸಿರುವರು

~~~~~

'ಮದ್ರಾಸ್' ಆಸ್ಪತ್ರಿ ಹಡಗದ ಖರ್ಚಿನ ಬಗ್ಗೆ ರಾಮನಾಡ ಮಹಾರಾಜರವರು ಪ್ರತಿ ತಿಂಗಳಿಗೆ ರೂ ೨೫೦೦ ಕೊಡುವರೆ ಸಮ್ಮತಿಸಿರುವರು

~~~~~

ಮೈಸೂರು ಬ್ರಿಟಿಷ ರೆಸಿಡೆಂಟರಾದ ಕರ್ನೆಲ್ ಹ್ಯೂ ಡಾಲೆಯವರ ಅಧಿಕಾರದ ಅವಧಿಯು ಒಂದು ವರ್ಷಕ್ಕೆ ಹೆಚ್ಚಿಸಲ್ಪಟ್ಟಿರುವದು

~~~~~

ಕಳೆದ ದಸಂಬರ ತಿಂಗಳಲ್ಲಿ ಕೆಸ್ಲೀಸ್ ಪೇಟೆಗೂ ಬಿಡದಿಗೂ ಮಧ್ಯ ದಾರಿಯಲ್ಲಿ ರೈಲ್ವೇ ಗಾರ್ಡ ಬಂಡಿಯಲ್ಲಿದ್ದ ಹಣದ ಪೆಟ್ಟಿಗೆ ಮುರಿಯಲ್ಪಟ್ಟು ಹಣವು ಅಪಹರಿಸಲ್ಪಟ್ಟಿದ್ದಿತ್ತಷ್ಟೆ ಈಗ ಪೋಲಿಸಿನವರು ಕಳವಾಗಿದ್ದ ೩೦೦೦ ರೂಪಾಯಿಗಳಲ್ಲಿ ೨೦೦೦ ವರೆಗಿನ ನೋಟುಗಳನ್ನೂ ಹಣವನ್ನೂ ಕಂಡು ಹಿಡಿದು ಬಿಡದಿಯಲ್ಲಿ ಹಿಂದೆ ಪೋರ್ಟರಾಗಿದ್ದ ಸುಬ್ಬನೆಂಬವನನ್ನು ಹಿಡಿದು ಸೆರೆಯಲ್ಲಿಟ್ಟಿರುತ್ತಾರೆ

~~~~~

ಬೆಂಗಳೂರಲ್ಲಿರುವ ಶ್ರೀ ಉತ್ತರಾದಿ ಮಠದ ಸ್ವಾಮಿಗಳು ಶ್ರೀ ವ್ಯಾಸರಾಯ ಮಠದವರಿಂದ ಬಹಿಷ್ಕೃತರಾಗಿದ್ದ ಕೆಲ ಶಿಷ್ಯವರ್ಗದವರನ್ನು ತಮ್ಮ ಮಠಕ್ಕೆ ಸೇರಿಸಿಕೊಂಡರೆಂದು ಬಹಳ ಗದ್ದಲವೆದ್ದಿರುವದಲ್ಲದೆ, ಆ ವಿಚಾರವನ್ನು ಚರ್ಚಿಸಿ ಪರ್ಯಾಲೋಚಿಸುವ ಬಗ್ಗೆ ವ್ಯಾಸರಾಯ ಮಠದ ಶಿಷ್ಯರು ಬೆಂಗಳೂರಲ್ಲಿ ಅಕ್ಟೋ

ಕಂಟ್ರೋಲರಾದ ಮ ರಾ ಟಿ. ಲಕ್ಷ್ಮೀನರಸಿಂಹರಾವ್ ಬಿ. ಎ ಬಿ ಎಲ್‌ರವರ ಅಧ್ಯಕ್ಷತೆಯಲ್ಲಿ ತಾ ೨೧ರಲ್ಲು ಸಭೆ ಕೂಡಿದರು

~~~~~

ಮದ್ರಾಸು ಸಂಸ್ಥಾನದಲ್ಲಿ ಎಡ್ವಕೇಟರು ೧೨೫, ಹೈಕೋರ್ಟ ವಕೀಲರು ೧೧೦೦, ಎಟ್ಟೋರ್ನಿಗಳು ೪೩೪, ಒಂದನೇ ಗ್ರೇಡ್ ಯಾನೆ ಡಿಸ್ಟ್ರಿಕ್ಟ್ ತಾಲೂಕು ವಕೀಲರು ೧೨೭೨, ಎರಡನೇ ಗ್ರೇಡ್ ಯಾನೆ ಮುನ್ಸಿಫ ತಾಲೂಕು ವಕೀಲರು ೧೮೯೩, ಜಮ್ಲಾ ೪೧೧೫ ಇರುತ್ತಾರೆ

~~~~~

ಕಳೆದ ಇಡೀ ವರುಷದಲ್ಲಿ ಮದ್ರಾಸು ಸಂಸ್ಥಾನದಲ್ಲಿ ೪೮೨೯೪೦ ಸಿವಿಲ್ ವ್ಯಾಜ್ಯಗಳಿದ್ದವು. ಒಂದು ವ್ಯಾಜ್ಯದಲ್ಲಿ ವಾದಿ ಮತ್ತು ಪ್ರತಿವಾದಿ ಎಂತ ಎರಡು ಪಕ್ಷದವರೂ ಇರುವದರಿಂದ ಸರಾಸರಿ ಮೇಲೆ ಒಬ್ಬ ವಕೀಲಗೆ ೨೩೪ ವ್ಯವಹಾರಗಳು ಸಿಕ್ಕವವು ವರುಷಂಪ್ರತಿ ವಕೀಲರ ಸಂಖ್ಯೆ ಏರುತ್ತಲೇ ಬರುತ್ತದೆ ವ್ಯವಹಾರಗಳ ಸಂಖ್ಯೆ ಕಡಿಮೆಯಾಗುತ್ತಲೆ ಬರತ್ತದೆ.

~~~~~

ದಕ್ಷಿಣ ಕನ್ನಡ

ಪರಸ್ಪರ ಸಹಾಯ

ಪಂಚಾಯತ ನಿರ್ಣಯಗಳ ಸರಿನಕಲುಗಳು.

ಸರ್ಕಲಾರು ನಂಬ್ರ ೪

ನಂಬ್ರ ೨ನೆ ಸರ್ಕಲರಿನಲ್ಲಿ ನಿರ್ಣಯಗಳ ಸರಿನಕಲುಗಳ ಕುರಿತು ಕೆಲವು ಸೂಚನೆಗಳು ಕೊಡೋಣಾಗಿದ್ದುವು ಆದರೆ ಇನ್ನೂ ಕೆಲವು ಸೂಚನೆಗಳು ಅಗತ್ಯವೆಂದು ತೋರುವುದರಿಂದ ಈ ಸರ್ಕಲರನ್ನು ಪ್ರಕಟಿಸಿಯದೆ

ನಿರ್ಣಯಗಳನ್ನು ಮಾಡುವಾಗ ಸಂಘಕ್ಕೆ ಬೇಕಾದ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಎಷ್ಟು ಮಾಯಿದೆ ಬೇಕೆಂಬುದನ್ನು ಸೂಚಿಸಬೇಕು ಸಂಘದಲ್ಲಿ ಆಗಾಗೆ ಜಮೆಯಾಗಬಹುದಾದ ಹಣದ ವಿಷಯವೂ ಜಮೆಯಾದ ಕೆ ಹಣವು ಸಾಯೊಸಿಯೇಷನ ಮೆಂಬರರಿಗೆ ಸಾಲಗಳಾಗಿ ಹೊರಗೆ ಹೋಗುವ ರೀತಿಯ ವಿಷಯವೂ ಪಂಚಾಯತ ಮೆಂಬರರಿಗೆ ಚೆನ್ನಾಗಿ ಗೊತ್ತಿರುವುದರಿಂದ ಬೇಂಕಿನಿಂದ ಪಡದ ಹಣವನ್ನು ಎಷ್ಟು ಸಮಯದಲ್ಲಿ ವಾಪಾಸು ಮಾಡಲಾಗುವುದೆಂಬುದು ಮೊದಲೇ ಆಲೋಚಿಸಿ ಅದನ್ನು ನಿರ್ಣಯದಲ್ಲಿ ಕೂಡಿಸಬೇಕು.

ಸಂಘಗಳು ಅಪೇಕ್ಷಿಸಿದ ಸಾಲವನ್ನು ಸೇಂಕ್ಷನ್ ಮಾಡಬೇಕಾದರೆ ಬೇಂಕಿನ ಆಡಳಿತೆ ಸಭೆಯವರಿಗೆ ಸಂಘದ ಕುರಿತು ಹಲವು ತರದ ಮಾಹಿತಿಯು ಅವಶ್ಯವಿರುತ್ತದೆ ಈ ಪೈಕಿ ಕೆಲವು ಮಾಹಿತಿಯು ಸಾಲದ ಅರ್ಜಿಯಲ್ಲಿಯೇ ಸಿಕ್ಕುವಂತೆ ರಿವಾಜಿನೆಗಳನ್ನು ಮಾಡಿಯದೆ ಹಾಗಾಗಿ ಸಂಘವು ಹೊರಗಿನಿಂದ ಪಡಕೊಳ್ಳಬಹುದಾದ ಸಾಲದ ಮಿತಿ ಸಂಘದಲ್ಲಿರುವ ಠೇವಣಾತಿಗಳ ಐವಜು ವಗೈರೆ ತಪಸೀಲು ಸಾಲದ ಅರ್ಜಿಯಲ್ಲಿಯೇ ಸಿಕ್ಕುತ್ತದೆ. ಆದರೆ ಸಾಲದ ಅರ್ಜಿಯನ್ನು ಬರಕೊಳ್ಳುವಾಗ ಸಂಘದಲ್ಲಿರುವ ಶಿಲ್ಕು ಮತ್ತು ಸಂಘದಲ್ಲಿ ಮೆಂಬರರು ಬರಕೊಂಡಿರುವ ಸಾಲದ ಅರ್ಜಿಗಳ ಒಟ್ಟು ಮೌಲ್ಯವೂ ಅಗತ್ಯವಿರುವುದರಿಂದ ಆ ವಿಷಯಗಳನ್ನೂ ನಿರ್ಣಯದಲ್ಲಿ ಸೇರಿಸುವುದು ಯುಕ್ತವಾಗಿರುತ್ತದೆ.

ಸಂಘಗಳ ಅನುಭವದ ಬಗ್ಗೆ ಈ ಎಲ್ಲಾ ವಿಷಯಗಳನ್ನೊಳಕೊಳ್ಳುವಂತೆ ಒಂದು ನಿರ್ಣಯದ ಮಾದರಿಯನ್ನು ಈ ಕೆಳಗೆ ಕೊಟ್ಟದೆ —

"ಸಂಘದಲ್ಲಿ ಪ್ರಕೃತ ರೂ. ಮಾತ್ರ ಶಿಲ್ಕು ನಿಂತಿರುವುದರಿಂದಲೂ ಮೆಂಬರರಿಗೆ ಒಟ್ಟು ರೂ. ರ ಸಾಲಗಳು ಸೇಂಕ್ಷನ್ ಆಗಿರುವುದರಿಂದಲೂ ಸಂಘದ ಬಗ್ಗೆ ದಕ್ಷಿಣ ಕನ್ನಡಾ ಸೆಂಟ್ರಲ್ ಕೋಆಪರೇಟಿವ್ ಬೇಂಕಿನಿಂದ ವರ್ಷದ (ಯಾ ತಿಂಗಳ) ಮಾಯಿದೆಯಿಂದ ರೂ. ನ್ನು ಶೇಕಡಾ ೭॥ ದರದ ಬಡ್ಡಿಯಲ್ಲಿ ಸಾಲವಾಗಿ ತರಿಸುವರೆ ನಿರ್ಣಯಿಸಲಾಯಿತು."

ಇನ್ನು ಮುಂದೆ ಸಾಲಕ್ಕೆ ಬರಕೊಳ್ಳುವ ಸಂಘಗಳ ಕಾರ್ಯದರ್ಶಿಗಳು ಪಂಚಾಯತ ನಿರ್ಣಯಗಳನ್ನು ಈ ರೀತಿಯಲ್ಲೇ ಮಾಡಿಸಬೇಕಾಗಿ ಈ ಮೂಲಕ ಸೂಚಿಸೋಣಾಗುತ್ತದೆ.

ಬೇಂಕಿನ ಆಫೀಸು, ಪುತ್ತೂರು
ದಕ್ಷಿಣ ಕನ್ನಡಾ
ತಾ. 16—2—1915.

ಎಮ್. ಅನಂತರಾವ್.
ಕಾರ್ಯದರ್ಶಿ.

ಪುತ್ತೂರು:—ಜಗತ್ಪ್ರಸಿದ್ಧರಾದ ಬಹುಮಾನ ಪಟ್ಟ ಗೋಪಾಲಕೃಷ್ಣ ಗೋಖಲೆಯವರು ಸ್ವರ್ಗಾರೋಹಣವನ್ನು ಮಾಡಿದ ವದಂತಿಯನ್ನು ವರ್ತಮಾನ ಪತ್ರಿಕೆಯಲ್ಲಿ ತಾ. ೨೨ರಲ್ಲಿ ನೋಡಿದ ಕೂಡಲೇ ಇಡೀ ಪಟ್ಟಣವೇ ದುಃಖದಿಂದ ಅಂಧಕಾರಮಯವಾದಂತೆ ತೋರಿತು ಮುನಸಿಫ ಕೋರ್ಟಿನಲ್ಲಿ ವಕೀಲರೆಲ್ಲರೂ ಏಕಕಾಲದಲ್ಲೆದ್ದು ನಿಂತು ಸ್ವರ್ಗೀಯ ಮಹಾ ಪುರುಷರ ಸತ್ಕಾರ್ಯಗಳನ್ನು ಸಂಕ್ಷೇಪವಾಗಿ ಕೊಂಡಾಡಿ ಅವರ ಅಕಾಲ ಮರಣದಿಂದ ಇಡೀ ಹಿಂದೂಸ್ಥಾನಕ್ಕೆ ಉಂಟಾದ ನಷ್ಟವನ್ನು ಸಾಕಲ್ಯವಾಗಿ ಹೇಳಿ ತಮ್ಮ ದುಃಖವನ್ನು ಮುನಸೀಫರೊಡನೆ ಬಿನ್ನಯಿಸಿದರು ಮುನಸೀಫರೂ ಕೂಡ ಈ ಅಕಸ್ಮಾತ್ತಾದ ದುಃಖವಾರ್ತೆಯನ್ನು ಕೇಳಿದೊಡನೆ ತುಸ ಹೊತ್ತು ಅವಾಕ್ಕಾಗಿ ನಿಂತರು ಮತ್ತೆ ಸ್ವರ್ಗಸ್ಥರ ಸದ್ಗುಣಗಳನ್ನು ಪುನಃ ಸ್ಮರಣೆಮಾಡಿದ್ದಲ್ಲದೆ ಅವರ ಜ್ಞಾಪಕಾರ್ಥವಾಗಿ ಯೋಗ್ಯವಾದ ಒಂದು ಸ್ಮಾರಕವನ್ನು ಏರ್ಪಡಿಸುವಂತೆ ಸೂಚಿಸಿದರು ಮತ್ತು ಅತ್ಯಗತ್ಯವಾದ ಕೆಲಸವನ್ನು ತ್ವರ್ಯದಲ್ಲಿ ಪೂರೈಸಿ ಸ್ವರ್ಗಸ್ಥರ ಬಹುಮಾನಾರ್ಥವಾಗಿ ಕೋರ್ಟಿಗೆ ರಜಾ ಕೊಟ್ಟರು ಹಾಗೆಯೇ ಎಲ್ಲಾ ವಕೀಲರು ಕೂಡಿ ತಮ್ಮ ದುಃಖದ ಮತ್ತು ಲೋಕಕ್ಕುಂಟಾದ ಮೇಲ್ಕಂಡ ಆಪತ್ತಿನ ಕುರಿತು ಪೂನೆಯಲ್ಲಿನ 'ಸರ್ವೆಂಟ್ಸ್ ಒಫ್ ಇಂಡಿಯಾ' ಸಂಘದವರಿಗೆ ತಂತಿ ದ್ವಾರಾ ತಿಳಿಸಿರುವರು

ಇಲ್ಲಿಯ ಯೂನಿಯನ್ ಕ್ಲಬ್ಬಿಗೆ ಒಂದು ಟೆನಿಸ್ ಕೋರ್ಟು ಮೊದಲಿನಿಂದಲೇ ಇರುವುದಲ್ಲದೆ ಶಾರದಾ ವಾಚಕ ಮಂದಿರದ ಮೆಂಬರರುಗಳಿಗೋಸ್ಕರ ಕೋರ್ಟಿನಲ್ಲಿ ಎರಡು ಬೆಡ್ಮಿಂಟನ್ ಕೋರ್ಟುಗಳನ್ನು ತಯ್ಯಾರು ಮಾಡಿರುತ್ತಾರೆ. ಹೀಗಾಗಿ ಇಲ್ಲಿ ವಾಚಕ ಮಂದಿರಗಳ ಚಟುವಟಿಕೆಯು ಬಹಳವಾಗಿ ಏರುತ್ತಿದೆ

ಇಲ್ಲಿ ಪರಸ್ಪರ ಸಹಾಯಕ ಸಂಘದವರೂ ಕೂಡ ತಮ್ಮ ಆಫೀಸಿನ ಬಗ್ಗೆ ಪ್ರತ್ಯೇಕ ಒಂದು ಕಟ್ಟೋಣ ಮತ್ತು ಹಿತ್ತಲನ್ನು ಪಡಕೊಂಡು ಅಲ್ಲಿ ಮೆಂಬರುಗಳಿಗೋಸ್ಕರ ಒಂದು ಪುಸ್ತಕಾಲಯವನ್ನೂ ವಾಚಕ ಮಂದಿರವನ್ನೂ ಏರ್ಪಡಿಸ ಪುದಲ್ಲದೆ ಆಡುವಕೋರ್ಸು ಒಡ್ಡಿ ಟೆನ್ ಕೋರ್ಟನ್ನಾಗಲೀ ಮಾಡಿದರೆ ಬಹಳ ಒಳ್ಳೆಯದಾದೀತ

ಬರುವ ಎಪ್ರಿಲ್ ತಿಂಗಳಲ್ಲಿ ಮಂಗಳೂರಲ್ಲಿ ಜರಗುವ ಪರಸ್ಪರ ಸಹಾಯಕ ಮಹಾಸಭೆಯುತ್ಸವ ಕಾಲದಲ್ಲಿ ಪರಸ್ಪರ ಸಹಾಯದ ವಿಷಯದಲ್ಲಿ ನಮಗಿರುವ ಜ್ಞಾನವನ್ನು ಇನ್ನೂ ಹೆಚ್ಚಿಸುವ ಉದ್ದೇಶವಾಗಿ ಅನೇಕ ವಿಷಯಗಳಲ್ಲಿ ಭಾಷಣಗಳನ್ನೂ ಉಪನ್ಯಾಸಗಳನ್ನೂ ಕೊಡುವಂತೆ ನಮ್ಮ ಜಿಲ್ಲೆಯಲ್ಲಿ ಪರಸ್ಪರ ಸಹಾಯದ ಏರ್ಪಾಡಿಗೆ ಮೂಲಪುರುಷರಾದ ಮ. ರಾ. ರಾ ಮೊಳಹಳ್ಳಿ ಶಿವರಾಯರು ಅನೇಕ್ಕ ಲೇಖಕರಿಗೆ ಪತ್ರಮುಖೇನ ಮನವಿಮಾಡಿಕೊಂಡಿದ್ದಾರೆಂದು ಕೇಳಿ ಎಲ್ಲರೂ ಸಂತೋಷಪಡುತ್ತಾರೆ

~~~~~

ಮಂಜೇಶ್ವರ: — ಇಲ್ಲಿಯ ಸಾಹುಕಾರ ಮ। ರಾ। ರಾ। ನನ್ನೈಯ್ಯ ಶ್ಯಾನುಭಾಗ ವಗೈರೆರ ಮೇಲೆ ಆದ ಫೋರ್ಜರೀ ಮೊಕದ್ದಮೆಯ ರಿವಿಜನ್ ಇದೇ ತಿಂಗಳ ತಾ ೧೮ಕ್ಕೆ ಮದ್ರಾಸು ಹೈಕೋರ್ಟಿನಲ್ಲಿ ಸದ್ರಿಯವರ ಗುಣಾಂಶಕ್ಕೆ ತೀರ್ಮಾನವಾಗಿಯದೆಂತ ತಿಳಿದು ಸಂತೋಷ ಪಡುತ್ತೇವೆ

ಇಲ್ಲಿಯ ವರ್ಷಾವಧಿ ಜಮಾಬಂದಿಯು ಈ ವರ್ಷ ಮಾನ್ಯ ಡಿಪ್ಯುಟಿಕಲೆಕ್ಟರರವರಿಂದ ಇದೇ ತಿಂಗಳ ತಾ. ೧೯ರಿಂದ ಪ್ರಾರಂಭಿಸಲ್ಪಟ್ಟಿರುತ್ತದೆ

ಇಲ್ಲಿಯ ಸಾಹುಕಾರ ಮ। ರಾ। ರಾ। ವೈಕುಂಟಭಕ್ತರು ತನ್ನಲ್ಲಿ ಒಂದೇ ದಿನ ಒಂದೇ ಗಳಿಗೆಯಲ್ಲಿ ಆದ ತನ್ನ ಮಗಳ ಮತ್ತು ತನ್ನ ತಮ್ಮನ ಮಗಳ ಮದುವೆಗಳ ಉದ್ದಿಶ್ಯ ಇದೇ ಫೆಬ್ರವರಿ ತಾ ೨೦ರಲ್ಲು ಪುತ್ತೂರ ತಾಲೂಕುಬೋರ್ಡ ಸಭೆಗೆ ಇಲ್ಲಿ ಬಂದಿದ್ದ ಎಲ್ಲಾ ಮೆಂಬರರೂ ಪ್ರೆಸಿಡೆಂಟರಿಗೂ ಶ್ಯಾಮ ೫ ಗಂಟೆಗೆ ಒಂದು ಟಿಪಾರ್ಟಿ ಕೊಟ್ಟರು ಅದಲ್ಲದೆ ಆ ದಿನ ನಡೆದ ತಾಲೂಕ ಬೋರ್ಡ ಮೀಟಿಂಗಿನಲ್ಲಿ ಸದರಿ ಭಕ್ತರು [illegible] **ಟರರಾಗಿ ಚುನಾಯಿಸಲ್ಪಟ್ಟರು ಎಂತ ಸೂಚಿಸುವರೆ ಬಹಳ ಸಂತೋಷ ಪಡುತ್ತೇವೆ.**

~~~~~

ಕುಂಬಳೆ: — ಪರಸ್ಪರ ಸಹಾಯಕ [illegible] **ಕೃರಾದ ಮ। ರಾ। ಎಮ್. ಗಿರಿ**[illegible] **ಬೇಂಕಿನ ಡಿರೆಕ್ಟರಾದ ಮ। ರಾ।** [illegible] **ರವರು** [illegible] **ಸಹಾಯಕ ಸಂಘವನ್ನು** [illegible]
~~~~~

ನಾಯ್ಕರವರು ಅಧ್ಯಕ್ಷರಾಗಿಯೂ ರಾ। ಪಿ. ಪಾಂಡುರಂಗನಾಯಕರವರು ಕಾರ್ಯದರ್ಶಿಯಾಗಿಯೂ ಚುನಾಯಿಸಲ್ಪಟ್ಟಿರುವರು.

ಇಲ್ಲಿಯ ಶಹರು ರಸ್ತೆಗಳಿಗೆ ವರ್ಷಪ್ರತಿ ಲೋಕಲ್ ಫಂಡಿನಿಂದ ಸೆಂಕ್ಷನ್ ಆಗುವ ೩೦ ರೂಪಾಯಿಗಳಿಂದ ನ್ಯಾಕರ ಭಂಡಸಾಲೆಯಿಂದ ಮಹಾಮಾಯಿ ದೇವಸ್ಥಾನಕ್ಕಾಗಿ ಹೊಳೆ ಕಿನಾರೆಯಿಂದ ವಿಟ್ಲ ದೇವಸ್ಥಾನ ವರೇಗಿನ ರಸ್ತೆಗಳು ದುರಸ್ತಿಯಾಗುವದೇ ಇಲ್ಲ. ಅದಲ್ಲದೆ ಶಹಾರಿನಲ್ಲಿ ಎರಡು ಹೊಸ ರಸ್ತೆಗಳನ್ನು ಮಾಡಿಸಿರುವದರಿಂದ ಜಾಸ್ತಿ ಹಣ ಸೆಂಕ್ಷನ್ ಮಾಡಿ ಶಹರಿನ ಪೂರಾ ರಸ್ತೆಗಳೂ ವರ್ಷಂಪ್ರತಿ ದುರುಸ್ತಿಯಲ್ಲಿಡುವದ ಅಗತ್ಯವಾಗಿದೆ

ಮಂಗಳೂರು.

ಇದೇ ತಿಂಗಳ ತಾ ೧೭ರಲ್ಲು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಜರಗಿತು. ಡಿಸ್ಟ್ರಿಕ್ಟ್ ಬೋರ್ಡಿನ ಖರ್ಚಿಯಿಂದ ಪಾಣೆಮಂಗಳೂರಿಂದ ಮಂಗಳೂರಿಗೆ ರೈಲ್ವೇ ಲೈನು ತೆರೆಯುವ ಪ್ರಸ್ತಾಪವೇ ಈ ಮೀಟಿಂಗಿನಲ್ಲಿ ಮುಖ್ಯ ವಿಷಯವಾಗಿತ್ತು. ಪಾಣೆಮಂಗಳೂರಿಂದ ಮಂಗಳೂರಿಗೆ ೨ ೬ ಗೇಜ್ ರೈಲ್ವೆ ಲ್ಯಾನನ್ನು ತೆರೆಯುವರೆ ಗವರ್ನಮೆಂಟಿನ ಮಂಜೂರಾತಿಗೆ ಬ ಕೊಳ್ಳಬೇಕೆಂಬ ನಿರ್ಣಯವು ಸಭೆಯಲ್ಲಿ ಆಯಿತು. ಈ ಬಗ್ಗೆ ಸರ್ವೆ ಮಾಡುವರೆ [illegible] ಎಸ್ ೯ ರೈಲ್ವೆಯವರಿಗೆ ಕೊಡಬೇಕಾಗುವದು

ಇದೇ ತಾ. ೧೭ರಲ್ಲಿ ಸರ್ ಚಂದಾವರಕಾರರವರು ಇಲ್ಲಿಯ ನಿರಾಶ್ರಿತ ಜನಸಹಾಯಕ ಸಂಘವನ್ನೂ, ಈ ಸಂಘದ ಆಯಾ ಸಂಸ್ಥೆಗಳನ್ನೂ ಸಂದರ್ಶಿಸಿ, ಬಹು ಸಂತೋಷಪಟ್ಟರು. ಆ ದಿನ ನಿರಾಶ್ರಿತ ಜನಸಹಾಯಕ ಶಾಲಾ ಮಕ್ಕಳಿಗೆ ಊಟ ಫಲಾಹಾರಗಳೂ ಹಂಚೋಣಾಯಿತು

ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರಾದ ಮ। ರಾ। ವೆಂಕಟಸುಬ್ಬರಾವ್‌ರವರು ಮಾರ್ಚ್ ತಿಂಗಳ ತಾ ೩ರಿಂದ ಮೂರು ವಾರಗಳ ರಜೆ ಪಡೆಯುವದರಿಂದ ಇವರ ಸ್ಥಳದಲ್ಲಿಗೆ ಮದ್ರಾಸ್ ಹೈಕೋರ್ಟಿನ ಬೆಂಚ್‌ಕ್ಲಾರ್ಕರಾದ ಮ। ರಾ। ವಿ ಕೆ ರಂಗಾಚಾರ್ಯರು ಇಲ್ಲಿಯ ಮುನ್ಸಿಫರಾಗಿ ನೇಮಿಸಲ್ಪಟ್ಟಿರುವರು

ಹೆಕ್ನಿ ಕೆರೇಜು ಆಕ್ಟು ಪ್ರಕಾರ ಜಟ್ಕಾಗಳನ್ನು ಕೇಳಿದಾಕ್ಷಣ ಜಟ್ಕಾ ಡ್ರೈವರರ ತಕ್ಕೊಂಡು ಬರಬೇಕಾಗಿರುವದು. ಆದರೆ ಈ ಕ್ರಮವು ಪಟ್ಟಣದ ಅನೇಕರಿಗೆ ಗೊತ್ತಿಲ್ಲದಿರುವದರಿಂದ ಜಟ್ಕಾ ಡ್ರೈವರರು ಅನೇಕಾವರ್ತಿ ನಿಯಮಿತ ದರಕ್ಕಿಂತಲೂ ಹೆಚ್ಚಿಗೆ ಬಾಡಿಗೆಗಳನ್ನು ಹೇಳಿಯೂ ಇತರ ಕಾರಣಗಳಿಂದ ತಮ್ಮ ಗಾಡಿಗಳನ್ನು ಬೇಕಾದವರಿಗೆ ಬಾಡಿಗೆಗೆ ಕೊಡದೆ ತೊಂದರೆಗಳನ್ನು ಮಾಡುತ್ತಿರುವ ಪದ್ಧತಿಯು ಇಲ್ಲಿ ರೂಢಿಗೆ ಬಂದಿರುವದು. ಈಚೆಗೆ ಟೌನ್ ಮೆಜಿಸ್ಟ್ರೇಟರ ಮನೆಗೆ ಸೂಲಗಿತ್ತಿಯನ್ನು ಕರಕೊಂಡು ಹೋಗಲು ಸೇದೆ ತಿನ್ನಯನು ಕಂಕನಾಡಿ ಜಟ್ಕಾ ಡ್ರೈವರ ಅಣ್ಣಪ್ಪನ ಬಂಡಿಯನ್ನು ಕೇಳಲು ಆತನು ನಿರಾಕರಿಸಿದನೆಂಬ ವಾರ್ತೆಯು ಸಿಕ್ಕಿದ್ದರಿಂದ ಹೆಕ್ನಿ ಕೆರೇಜು ಆಫೀಸರ ಮ। ಪಿ. ದೇಸರು ಅವನ ಮೇಲೆ ಚಾರ್ಜು ಮಾಡಿದ್ದರಿಂದ II ಕ್ಲಾಸ್ ಬೆಂಚ್ ಮೆಜಿಸ್ಟ್ರೇಟರು ಸದರಿ ಅಣ್ಣಪ್ಪನಿಗೆ ೫ ರೂಪಾಯಿ ಜುಲುಮಾನೆ ವಿಧಿಸಿದರು. ಹೆಕ್ನಿ ಕೆರೇಜು ಆಫೀಸರರಾದ ಮ। ಪಿ. ದೇಸರವರು ಹೆಕ್ನಿ ಕೆರೇಜು ಡ್ರೈವರರಿಂದ ಪಟ್ಟಣದ ಮಧ್ಯಮ ತರಗತಿಯ ಜನರಿಗೂ ಉಂಟಾಗುವ ತೊಂದರೆಗಳನ್ನು ಕಂಡು ಹಿಡಿದು, ಗಾಡಿಗಾರರಲ್ಲಿ ಕೆಲವರನ್ನು ನ್ಯಾಯವಾದ ಶಿಕ್ಷೆಗೆ ಒಳಪಡಿಸಿದರೆ, ಮ। ದೇಸರವರು ಈಗ ಮಾಡುತ್ತಲಿರುವ ಪ್ರಯತ್ನವು ಸಾರ್ಥಕವಾದಂತಾಗುವದು

ಮ। ಕಾವಿಲ್ ಸಲ್ದಾಂಛರಲ್ಲಿ ಸುಮಾರು ೨೦೦೦ ರೂಪಾಯಿಗಳ ಚಿನ್ನಾಭರಣ ಇತ್ಯಾದಿಗಳನ್ನು ಕಳವು ಮಾಡಿದ್ದರೆಂಬದಾಗಿ ಆಪಾದಿಸಲ್ಪಟ್ಟು ಜಾಕಿ ನೊರೆಂಞನಿಗೆ ೪ ತಿಂಗಳ ಕಠಿಣ ಸಜೆ ವಿಧಿಸೋಣಾಯಿತು. ಸಾಂತಾನ ರುದ್ರಿಕನಿಗೆ ೮ ಛಡಿ ಕೊಡೋಣಾಯಿತು. ೩ನೇ ಆಪಾದಿತ ಅಂತೋನಿ ಲೋಬನ ಮೇಲಿನ ತನಿಕಿಯು ಬಾಕಿಯುಳಿದೆ.

ಕೇಡಿ ದೇವಣ್ಣ ಎಂಬವನು ಈಚೆಗೆ ನಡೆದ ಪಣಂಬೂರು ಜಾತ್ರೆಯಲ್ಲಿ ಕಿಸೆ ಕಳವು ಮಾಡಿದ್ದನೆಂಬದಾಗಿ ಆಪಾದಿಸಲ್ಪಟ್ಟದ್ದನು ಇವನಿಗೆ ೬ ತಿಂಗಳ ಕಠಿಣ ಸಜಾ ವಿಧಿಸೋಣಾಯಿತು.

ಬಿಜೆಯ ರಾ। ಪಡಿವಾಳರಲ್ಲಿ ೮ ವರ್ಷಗಳ ಹಿಂದೆ ನಡೆದ ದರೋಡೆ ಮೊಕದ್ದಮೆಯಲ್ಲಿ ಆಪಾದಿಸಲ್ಪಟ್ಟಿದ್ದ ಗಾಡಿ ಚೆನ್ನಪ್ಪನ ತಮ್ಮ ಗುರುವಪ್ಪನಿಗೆ ೨೫ ವರ್ಷಗಳ ಕಠಿಣ ಸಜೆ ಮತ್ತು ೩೦೦ ರೂಪಾಯಿ ಜುಲುಮಾನೆ ವಿಧಿಸಲ್ಪಟ್ಟಿತ್ತು. ಸದರಿ ಗುರುವಪ್ಪನು ಬಂದಿಖಾನೆಯಲ್ಲಿ ತೋರಿಸಿದ ಸದ್ವರ್ತನೆಯ ಬಗ್ಗೆ ಅಧಿಕಾರಿಗಳು ಅವನ ಶಿಕ್ಷೆಯನ್ನು ಕಡಿಮೆ ಮಾಡಿರುವದರಿಂದ ಗುರುವಪ್ಪನು ೨೫ ವರ್ಷಗಳಲ್ಲಿ ೮ ವರ್ಷದ ಸಜಾ ಅನುಭವಿಸಿ ಇಲ್ಲಿಗೆ ಹಿಂದೆ ಬಂದಿರುವನು

ಕುಂಜತ್ತಬೈಲಿನಲ್ಲಿ ಲೋರೆನ್ಸ್ ಸ್ವರೆಂಜಸ್ ಎಂಬವನು ದಾರಿಯಲ್ಲಿ ಹೋಗುತ್ತಿದ್ದ ಒಬ್ಬನನ್ನು ಹಿಡಿದು ನಿಲ್ಲಿಸಿ, ಅವನ ಕೈಯಲ್ಲಿದ್ದ ಚಿನ್ನದ ಬಳೆಯನ್ನು ಅಪಹರಿಸಿದನು. ಆದರೆ ಸದರಿ ಆಸಾಮಿಯು ಬಲಾಢ್ಯನಾಗಿದ್ದುದರಿಂದ ಲೋರೆನ್ಸನಿಗೆ ಬಿಟ್ಟುಕೊಡದೆ, ಇತರ ಜನರ ಸಹಾಯದಿಂದ ಲೋರೆನ್ಸ ಸ್ವರೆಂಜಸನನ್ನು ಪೋಲೀಸಿಗೆ ಒಪ್ಪಿಸಿದರು. ಸದರಿ ಮನುಷ್ಯನು [illegible] ಲೋಕಪ್ಪಿನಲ್ಲಿ ಈಗ ಹುಚ್ಚನಂತೆ ನಟಿಸುತ್ತಿರುವನೆಂದಾಗಿ ಕೇಳುತ್ತೇವೆ

ಮುನಿಸಿಪಾಲಿಟಿಯ ಗಡಿಗೆ ಸೇರಿದ [illegible] ಬಳಿ, ಕೊಡಿಯಾಲಬೈಲು, ಸೇಡಿಗುಡ್ಡೆ, ಈ ಮೊದಲಾದ ಕೆಲವು ಪ್ರಾಂತ್ಯಗಳಲ್ಲಿ ಆವರಣ ಇಲ್ಲದ ಬಾವಿ ಮತ್ತು ಕಳು ಭೂಮಿಗಳು ಇರುವದರಿಂದ ಮೃಗಪಶ್ವಾದಿಗಳು ಆವರಣ ಇಲ್ಲದ ಈ ಬಾವಿ, ಭೂಮಿಗಳಿಗೆ ಬಿದ್ದು ಅನೇಕಾವರ್ತಿ ಅಂಗಹೀನವಾಗತಕ್ಕದ್ದಾದುದರಿಂದ ಸಂಬಂಧಪಟ್ಟ ಆಫೀಸರರ ಮೂಕಪ್ರಾಣಿಗಳ ಮೇಲಾದರೂ ಕರುಣೆಪಟ್ಟು ಈ ಕಾರ್ಯದಲ್ಲಿ ತಕ್ಕ ಏರ್ಪಾಡು ಮಾಡಬೇಕಾಗಿ ಒಬ್ಬ ಬಾತ್ಮಿದಾರರು ವಿಜ್ಞಾಪಿಸಿಕೊಂಡಿರುವರು

ಬಹುಮಾನಪಟ್ಟ ಗೋಪಾಲಕೃಷ್ಣ ಗೋಖಲೆಯವರು ಮೃತರಾದ ಕಾರಣ ಮಂಗಳೂರ ನಿರಾಶ್ರಿತ ಜನಸಹಾಯಕ ಸಂಘದವರ ಶಾಲೆಗಳಿಗೂ ನೇಯಿಗೆ ಕಾರ್ಖಾನೆಗೂ ರಜಾ ಕೊಟ್ಟು ಗೋಖಲೆಯವರ ಮರಣವು ಇಂಡಿಯದ ಜನಾಂಗಕ್ಕೆ ಸಂಭವಿಸಿದ ದೊಡ್ಡ ಕಷ್ಟವೆಂತಲೂ ಈ ಕಾರಣ ಶಾಪ ಪಡುವ ಅನುತಾಪವನ್ನು ಅವರ ಕುಟುಂಬಕ್ಕೆ ತಿಳಿಸಬೇಕೆಂತಲೂ ನಿರ್ಣಯಿಸಿದರು

ಸರ್ ನಾರಾಯಣ ಚಂದಾವರಕಾರರು ಕೊಂಬತ್ತೂರ ಬ್ರಹ್ಮಸಮಾಜದವರ ಆಮಂತ್ರಣ ಸ್ವೀಕರಿಸಿ ಕೊಯಂಬುತ್ತೂರಿಗೆ ಹೋಗಿರುತ್ತಾರೆ.

ಮುನ್ಸಿಪಾಲ್ ಚೇಯರ್‌ಮೇನರಾದ ದಿವಾನ್ ಬಹದ್ದೂರ್ ಎಮ್. ಮುಂಡಪ್ಪ ಬಂಗೇರ ಅವರ್ಗಳರವರ ಕೆಲಸದ ಅವಧಿಯು ತೀರುವದರಿಂದ ಇದೇ ಬರುವ ಮಾರ್ಚಿ ತಾ ೧೮ಕ್ಕೆ ಚೇಯರ್‌ಮೇನರ ಚುನಾವಣೆಯು ನಡೆಯುವದು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕಲೆಕ್ಟರವರ ತಿದ್ದುಪಡಿ ಪಡಿಸಿದ ಸರ್ಕೀಟು ಕ್ರಮಪಟ್ಟಿ — ೪ನೇ ಮಾರ್ಚಿ ಶಿರಿವಂಜೇಶ್ವರ, ತಾ. ೫ ಕುಂದಾಪುರ ತಾ. ೬ ೭ ಉಡುಪಿ, ತಾ ೮ ಕಾಪು, ತಾ. ೯ ೧೦ ಮುಲ್ಕಿ, ತಾ ೧೧ ಮಂಗಳೂರು.

ಮಂಗಳೂರು ತಾಲೂಕಿನ ಸ್ಪೆಶ್ಯಲ್ ಲೇಂಡ್ ರಿಕಾರ್ಡ್ಸ್ ಇನ್ಸ್‌ಪೆಕ್ಟರರಾದ ರಾ। ಟಿ. ನರಸಿಂಗರಾಯರಿಗೆ ೬ ವಾರಗಳ ಪ್ರಿವಲೆಜ್ ರಜೆ ಕೊಡೋಣಾಗಿರುವದರಿಂದ, ಮಂಗಳೂರು ಫಿರ್ಕಾ ಆಕ್ಟಿಂಗ್ ರೆವಿನ್ಯೂ ಇನ್ಸಪೆಕ್ಟರರಾದ ರಾ। ಕೆ. ಕೇಶವರಾವ್ ರವರು ಸ್ಪೆಶ್ಯಲ್ ಲೇಂಡ್ ರಿಕಾರ್ಡ್ಸ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು.

IIಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ। ಎಸ್. ಗೋಪಾಲರಾಯರು ಮಂಗಳೂರು ಫಿರ್ಕಾ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ ಇವರು ಕೂಡಲೇ ಕೆಲಸಕ್ಕೆ ಹಾಜರಾಗಬೇಕಾಗುವದು.

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಕಳೆದ ವಾರ ೨ ಪ್ಲೇಗು ಮರಣಗಳಿದ್ದವು

ಭಾರತಮಾತೆಯು ಬಹುಮಾನಪಟ್ಟ ಗೋಪಾಲಕೃಷ್ಣ ಗೋಖಲೆ ಸಿ. ಐ. ಈ. ಎಂಬ ಪುತ್ರ ರತ್ನವನ್ನು ಕಳೆದುಕೊಂಡಳೆಂಬ ವಿಷಾದಕರವಾದ ವರ್ತಮಾನವನ್ನು ಕೇಳಿದೊಡನೆ ಕಳೆದ ಸೋಮವಾರ ದಿನ ಇಲ್ಲಿನ ಗಣಪತಿ ಸೆಕೆಂಡರಿ ಶಾಲೆಯ ಅಧಿಕಾರಿಗಳು ಮಕ್ಕಳನ್ನೆಲ್ಲಾ ಪ್ರಾರ್ಥನಾ ಮಂದಿರದೊಳಗೆ ನೆರೆಯಿಸಿದರು. ಕೂಡಲೇ ಸಹಾಯಕೋಪಾಧ್ಯಾಯರೊಬ್ಬರು ಗೋಖಲೆಯವರ ಜೀವನ ಚರಿತ್ರೆಯನ್ನು ತಿಳಿಗನ್ನಡದಲ್ಲಿ ವಿವರಿಸಿದರು. ಅವರ ರಾಜನಿಷ್ಠೆಯನ್ನೂ, ದೇಶಾಭಿಮಾನವನ್ನೂ, ಸ್ವಾರ್ಥತ್ಯಾಗವನ್ನೂ ಕೇಳಿದೊಡನೆಯೇ ಬಾಲಕರು ಅವರಿಗೋಸ್ಕರ ತುಂಬಾ ಮರುಕಗೊಂಡು ಅವರ ಆತ್ಮಕ್ಕೆ ಶಾಂತತೆಯುಂಟಾಗುವಂತೆ ಭಗವಂತನ ಪ್ರಾರ್ಥನೆಯನ್ನು ಮಾಡಿದರು. ಅನಂತರ ಆ ದಿನ ಬಹುಮಾನಾರ್ಥವಾಗಿ ಶಾಲೆಯು ಮುಚ್ಚಲ್ಪಟ್ಟಿತು. ಸೈಂಟ್ ಅಲೋಸಿಯಸ್ ಕಾಲೇಜು, ಮತ್ತು ಕೆನರಾ ಹೈಸ್ಕೂಲಿನಲ್ಲಿಯೂ ಈ ವಿಷಾದಕರವಾದ ವಾರ್ತೆಯಾಗುತ್ತಲೇ ದುಃಖ ಸೂಚನಾರ್ಥವಾಗಿ ಶಾಲೆ ಕಾಲೇಜುಗಳು ಮುಚ್ಚಲ್ಪಟ್ಟವು

ಮಾರಾಟಕ್ಕೆ ಸಿದ್ಧವಾಗಿದೆ.

ಪಂಡಿತ ಮಂಗಳೂರು ನಾರಾಯಣಾಚಾರ್ಯರಿಂದ ಗುಣಿಸಿ ಪ್ರಕಟಿಸಲ್ಪಟ್ಟ, ರಾಕ್ಷಸ ಸಂವತ್ಸರದ ಪಂಚಾಗವು ಮಾರಾಟಕ್ಕೆ ಸಿದ್ಧವಾಗಿರುತ್ತದೆ. ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಕೊಡೋಣಾಗುವದು ನೂರಕ್ಕೆ ೧೨॥ ರೂಪಾಯಿ.

ವಿಳಾಸ:—

ಪುರುಷೋತ್ತಮ ನಾರಾಯಣಾಚಾರ್ಯ,
ರಥಬೀದಿ, ಮಂಗಳೂರು.

ಜೀನಸು ಧಾರಣೆ. (ರಖಂ)

ಹೊಸ ಮಸ್ಕತಿ ಅಕ್ಕಿ	5— 2—0	5—10—0
ಹೊಸ ಗಾಡಿ ರಾಶಿ ,,	4— 5—0	4— 0—8
ಹೊಸ ಗುಡ್ಡು ,,	4—12—0	5— 2—0
ಅವ್ವಲ್ ಬೆಳ್ತಿಗೆ ,,	5— 8—0	5—11—0
ಗುಡ್ಡು ಬೆಳ್ತಿಗೆ ,,	. . . .	5— 3—0
ರಂಗೂನು ಬೆಳ್ತಿಗೆ ಗೋಣಿ ೧ರ	. . . .	9— 6—0
ಗೋಧಿ ಗೋಣಿ ೧ರ ...	13— 4—0	14— 4—0
ಹುರುಳಿ ಗೋಣಿ ೧ರ ...	6— 8—0	7— 0—0
ಕಡಲೆ ಗೋಣಿ ೧ರ. ...	. . . .	11—12—0
ತೊಗರಿ ಗೋಣಿ ೧ರ ...	10—12—0	12— 0—0
ತೊಗರಿ ಬೇಳೆ ಗೋಣಿ ೧ರ.	12— 8—0	16— 0—0
ಉದ್ದು ಗೋಣಿ ೧ರ ...	... ...	10— 8—0
ಊರು ಬೆಲ್ಲ ಖಂಡಿ ೧ರ .	. ...	50— 0—0
ಉಪ್ಪು ಗೋಣಿ ೧ರ	. . . .	3— 7—0
ಕೊಬ್ರಿ ಖಂಡಿ ೧ರ .	80— 0—0	84— 0—0
ಕೊಬ್ರಿ ಹಿಂಡಿ ಖಂಡಿ ೧ರ	20— 0—0	23— 0—0
ಎಳ್ಳಿಂಡಿ ಖಂಡಿ ೧ರ	30— 0—0	36— 0—0
ಕೊಬ್ರಿ ಎಣ್ಣೆ ಮುಡಿ ೧ರ	6— 0—0	6— 2—0
ಎಳ್ಳೆಣ್ಣೆ ಮುಡಿ ೧ರ(ಕುರುಪನ)	3—14—0	4— 0—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	. . . .	5— 0—0
ಮೋರಿಸ್ ಸಕ್ಕರೆ ಮುಡಿ ೧ರ	. . . .	4— 6—0
ಕಾಫಿ ಖಂಡಿ ೧ರ.	220—0—0.	225— 0—0
ಬೀಳೆಗೋಟು ಖಂಡಿ ೧ರ .	115—0—0	118— 0—0
ಹೊಸ ಬೀಳೆಗೋಟು ಖಂಡಿ ೧ರ	85— 0—0	87— 0—0
ಗೇರು ಬೀಜ ಮುಡಿ ೧ರ	. . . .	1— 2—0
ಕಚ್ಚಿನ ಖಂಡಿ ೧ರ.	42—0—0	44— 0—0
ಹೊಂಬ್ರ ತಗಡುಮುಡಿ ೧ರ .	16— 8—0	16—10—0
ಹೊಂಬ್ರ ಪಾತ್ರಗಳು ಮುಡಿ ೧ರ	. . . .	22— 0—0
[illegible] ೧ರ .		15—12—0

ಮಾರಾಟಕ್ಕೆ ಸಿದ್ಧವಿರುವುದು! ಮಾರಾಟಕ್ಕೆ ಸಿದ್ಧವಿರುವುದು!

ವೆಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಬಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು.

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯಾಗ್ರಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಘುಡೋಚಿತ ಚಿತ್ರಪಟಗಳಿಂದ ಕೂಡಿರುವುದು. ಕ್ರಯ ಪ್ರತಿಯೊಂದಕ್ಕೆ ರೂ 1—8—0 ಟಪ್ಪಾಲು ಹಾಸಲು ಬೇರೆ

ಕವಿ ಎಂಡ್ ಸನ್ಸ್,
ಮಂಗಳೂರು

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಬೇರೆ ಒಂದು ಇಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕಪ್ಪು ಬಣ್ಣ, ಒಳ್ಳೆ ಅಂ... ಕಪ್ ಮತ್ತು ಬ್ರಶ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಹಾಸಲು 0—4—0

Dr. Navaratna & Sons,
Kalbadevi Road BOMBAY
ಏಜಂಟರು—ದಿ ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಅರ್ಧ ಬೆಲೆ!

ಒಂದು ತಿಂಗಳ ವರೆಗೆ ಮಾತ್ರ



ನಮ್ಮ ಸೆಟಿಸ್‌ಫೇಕ್ಷನ್ ಫ್ಲೂಟ್ ಹಾರ್ಮೋನಿಯಮ್ ಎಂಬ ರಾಗದ ಪೆಟ್ಟಿಗೆಯಿಂದ ಸರ್ವ ಗಾಯನಗಳನ್ನು ಹಾಡಲಿಕ್ಕಾಗುತ್ತಲ್ಲದೆ ಎಲ್ಲಾ ವಾದ್ಯಗಳ ಕೆಲಸವನ್ನು ಮಾಡುವಂಥಾದ್ದಾಗಿದೆ. ಇದರ ಪೆಟ್ಟಿಗೆಯು ಸಾಗುವಾನಿ ಮರದಿಂದ ಮಾಡಿದ್ದಾಗಿದೆ. ಗಾಳಿ ಬರುವ ಪೆಟ್ಟಿಗೆಯು ಎಂಥಾ ಬೇಗೆಯನ್ನೂ ತಡೆಯುವದು. ಖಾಯುಸಾಗದಿದ್ದರೆ 7 ದಿವಸಗಳೊಳಗೆ ಹಿಂದಕ್ಕೆ ಕಳುಹಿಸಿದರೆ ಹಣ ಹಿಂದಕ್ಕೆ ಕೊಡೋಣಾಗುವದು.

ಕ್ರಯ ಸಿಂಗಲ್ ರೀಡ್ ರೂ 38, 44, 50, ಈಗ ರೂ. 19, 22, 25ಕ್ಕೆ ಕೊಡಲ್ಪಡುವದು. ಡಬ್ಬಲ್ ರೀಡ್ ರೂ 60, 70, 80, ಈಗ ರೂ 30, 35, 40ಕ್ಕೆ ಕೊಡೋಣಾಗುವದು. ಆರ್ಡರಿನೊಂದಿಗೆ ರೂ 5 ಅಡ್ವಾನ್ಸ್ ಕಳುಹಿಸಬೇಕಾಗಿದೆ.

ವಿಳಾಸ:— ನೇಶನಲ್ ಹಾರ್ಮೋನಿಯಮ್ ಕೊ,
ಸಿಮ್ಲಾ ಪೋಸ್ಟು (ಬಿ) ಕಲ್ಕತ್ತ.

National Harmonium Co,
Simla P. O. (B) CALCUTTA.

ವಿನೋದ! ಮಾಸಪತ್ರಿಕೆ!

"ಚಾತುರ್ಯ."

ಈ ಮಾಸಪತ್ರಿಕೆಯಲ್ಲಿ ಪತ್ತೇದಾರಿ ಕಥೆಗಳು, ಹಾಸ್ಯಲಹರಿಯು, ಹಾಸ್ಯವಿನೋದ, ನೀತಿಸಂಬಂಧದ ಲೇಖನಗಳೂ, ಕಥೆಗಳು, ಕಾದಂಬರಿಗಳೂ ಪ್ರಕಟಿಸಲ್ಪಡುತ್ತೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ೧ ರೂಪಾಯಿ. ಮಾದರಿ ಸಂಚಿಕೆ ೧ ಅಣೆ ಸ್ಟಾಂಪು ಕಳುಹಿಸಿರಿ

ವಿಳಾಸ—ಮ್ಯಾನೇಜರ್ "ಚಾತುರ್ಯ"
ಬೆಂಗಳೂರು, ಸಿಟಿ.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗುತ್ತದೆ. ಚಂದಾದಾರರಾಗಿ ಸೇರ ಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ

ನರಳುವದೇತಕ್ಕೆ?

ಮನೆಯಲ್ಲಿಯೇ ವೈದ್ಯನಂತಿರುವ

ಇಕ್ಲಿಪ್ಸ್ ಬಾಮ್ ಎಂಬ ಔಷಧವಿರುವಾಗ?

ಇಂಗ್ಲಾಂಡ್, ಫ್ರಾನ್ಸ್ ರುಶ್ಯ ರಾಜ್ಯಗಳಿಗೆ ಒಟ್ಟಿಗೆ ದಿವಸ ೧ಕ್ಕೆ ಸುಮಾರು ೪೬೦೦,೦೦೦ ಪವನುಗಳ ಖರ್ಚು ತಗಲುತ್ತದೆ ಈ ಮೂರು ರಾಜ್ಯಗಳಿಗೆ ೧೦½ ಮಿಲಿಯ ಸೇನಿಕರಿಗಿಂತ ಹೆಚ್ಚು ಮಂದಿ ಇರರು ಪ್ರತಿ ಒಬ್ಬ ಸೇನಿಕನಿಗೆ ದಿವಸಕ್ಕೆ ಸುಮಾರು ೮ ಶಿಲ್ಲಿಂಗ್ ೪ ಪೆನ್ಸು ಖರ್ಚಾಗುವದು ಎಂಬದಾಗಿ ಆ ಪತ್ರಿಕೆಯು ಹೇಳುವದು ಜರ್ಮನ್ ಮತ್ತು ಆಸ್ಟ್ರಿಯಕ್ಕೂ ಸುಮಾರು ೧೦ ಮಿಲಿಯ ಸೇನಿಕರಿರುವದರಿಂದ ಸುಮಾರು ೪ ೨೦೦,೦೦೦ ಪವನುಗಳು ಖರ್ಚಿಗೆ ಬೇಕಾಗುವವು ಬೆಲ್ಜಿಯಮ್ ಸರ್ವಿಯ, ತುರ್ಕಿ, ಮತ್ತು ಜಾಪಾನ್ ಸೇನೆಗಳಿಗೆ ಒಟ್ಟಿಗೆ ದಿವಸಕ್ಕೆ ೪೦೦,೦೦೦ ಪವನುಗಳು ಬೇಕಾಗುವವು. ಹೀಗೆ ಯುದ್ಧಕ್ಕೆ ಸೇರಿದ ಎಲ್ಲಾ ರಾಜ್ಯಗಳ ಒಂದು ದಿವಸದ ಖರ್ಚು ಸುಮಾರು ೯,೨೦೦ ೦೦೦ ಪವನುಗಳಾಗುವದು ಯುದ್ಧ ತೊಡಗಿ ಮೊದಲನೇ ೫ ತಿಂಗಳಲ್ಲಿ ಕೈಗಾರಿಕೆ ಮೊದಲಾದವುಗಳಿಗೆ ಉಂಟಾದ ನಷ್ಟವನ್ನು ಬಿಟ್ಟು ಒರೇ ಸೇನೆಗಾದ ಖರ್ಚು ೫೦೦,೦೦೦,೦೦೦ ಪವನುಗಳಾಗುವವು ಸೇನೆಗೆ ಉಂಟಾದ ಖರ್ಚಿನಿಂದ ಉಂಟಾದ ನಷ್ಟಕ್ಕಿಂತಲೂ ಈ ಯುದ್ಧದಲ್ಲಿ ಕೈಗಾರಿಕೆಯು ನಿಲ್ಲಿಸಲ್ಪಟ್ಟದ್ದರಿಂದ ಉಂಟಾದ ನಷ್ಟವು ಅತಿ ವಿಶೇಷವಾದದ್ದಾಗಿರುವದು ಬೆಲ್ಜಿಯಮಿನ ಆಯಾ ಪಟ್ಟಣಗಳಿಗಾದ ಹಾನಿಯ ನಷ್ಟವು ೨೬,೦೦೦,೦೦೦ ಪವನುಗಳದ್ದಾಗಿದೆ ಎಂತ ಅಂದಾಜು ಗಿರುವದು ಪೂರ್ವ ಪ್ರುಶ್ಯದಲ್ಲಿ ೩,೦೦೦,೦೦೦ ಪವನುಗಳ ಆಸ್ತಿ ನಷ್ಟವಾಗಿದೆ. ಪೋಲೇಂಡ್, ಗೇಲಿಸಿಯ, ಫ್ರಾನ್ಸಿನಲ್ಲಿ ಆದ ಆಸ್ತಿನಷ್ಟದ ಅಂದಾಜು ಈ ವರೆಗೆ ಆಗಲಿಲ್ಲ.

ಇವೆಲ್ಲಾ ದ್ರವ್ಯನಷ್ಟವನ್ನು ಆಲೋಚಿಸುವಾಗ ಉಂಟಾದ ಹಡಗ ನಷ್ಟ, ಸರಕುಗಳ ನಷ್ಟವನ್ನೂ ಮರೆಯಲಾಗದು. ಈ ನಷ್ಟವು ಒಟ್ಟಿಗೆ ೩೨೦೦ ರಿಂದ ೨೫೦೦ ಮಿಲಿಯ ಪವನುಗಳದ್ದಾಗಿದೆಂತ ಅಂದಾಜಾಗಿರುವದು. ಹೀಗೆ ಈ ಯುದ್ಧದಿಂದ ಯುದ್ಧಕ್ಕೆ ಸೇರಿದ ಎಲ್ಲಾ ರಾಜ್ಯಗಳಿಗೆ ಯೂರೋಪುಖಂಡದ ರೈಲ್ವೆ ಲೈನುಗಳ ಮೇಲಿರುವ ಚಾಸ್ತಿಧನದ ಮೌಲ್ಯದಷ್ಟು ಅಂದರೆ ಸುಮಾರು ೪೦೦೦ ಮಿಲಿಯ ಪವನುಗಳ ನಷ್ಟವಾಗಿದೆ. ದಶಂಬರ ತಿಂಗಳ ಅಂತ್ಯದ ವರೆಗಿನ ಖರ್ಚಿನ ಪಟ್ಟಿಯು ಈ ರೀತಿಯಾಗಿರುವದು. ಸೇನೆಗಳಿಗಾದ ಖರ್ಚು ೧,೫೦೦,೦೦೦,೦೦೦, ಬೆಲ್ಜಿಯುಮಿನಲ್ಲಿ ಆದ ಹಾನಿ ೨೬೬,೦೦೦,೦೦೦, ಪೂರ್ವ ಪ್ರುಶ್ಯದಲ್ಲಾದ ಹಾನಿ ೨,೦೦೦,೦೦೦, ಹಡಗಗಳಿಗಾದ ನಷ್ಟ ೨,೨೦೦,೦೦೦,೦೦೦, ಪವನುಗಳು ಒಟ್ಟಿಗೆ ೫ ತಿಂಗಳಲ್ಲಿ ೩,೯೬೮,೦೦೦,೦೦೦, ಪವನುಗಳ ದ್ರವ್ಯ ನಷ್ಟವಾಗಿರುವದು

ಬೋಳಾಪುರ ಶಾಲಾ ವಿದ್ಯಾರ್ಥಿಗಳ ಮೇಲುಪಂಕ್ತಿ.

ಭಾರತೀಯ ಕವಿಶ್ರೇಷ್ಠರೆಂದು ಹೆಸರು ಪಡೆದ ಬಾಬು ರವೀಂದ್ರನಾಥ ಟಾಗೂರರವರು ಬೋಳಾಪುರದಲ್ಲಿ ಒಂದು ಶಾಲೆಯನ್ನು ತೆರೆದಿರುವ ವೃತ್ತಾಂತವು ಸರ್ವರಿಗೂ ತಿಳಿದ ವಿಷಯವಾಗಿರುವದು. ಈ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಒಂದು ಸಾಹಾಯ್ಯ ಫಂಡು ತೆರೆಯೋಣಾಗಿರುವದು. ಈ ಫಂಡಿಗೆ ಸಾಹಾಯ್ಯ ಮಾಡಲಿಚ್ಛಿಸುವವರು ಮಿ| ಡಬ್ಲ್ಯು ಡಬ್ಲ್ಯು ಪಿಯರ್ಸನ್ ಶಾಂತಿನಿಕೇತನ ಪೋಸ್ಟು, ಎಂಬ ವಿಳಾಸಕ್ಕೆ ತಮ್ಮ ಧನಸಹಾಯವನ್ನು ಕಳುಹಿಸಿಕೊಡಬೇಕಾಗಿದೆ. ಇದಲ್ಲದೆ ಈ ಶಾಲಾ ಹುಡುಗರೇ ಈ ಫಂಡಿಗೆ ಸಾಹಾಯ್ಯ ಮಾಡುವ ವೃತ್ತಾಂತವು ಇತರ ಶಾಲಾ ಮಕ್ಕಳಿಂದಲೂ ಅನುಸರಿಸುವಂಥಾದ್ದಾಗಿರುವದು. ಈ ಶಾಲಾ ಮಕ್ಕಳು ಒಂದು ತಿಂಗಳು ಸಕ್ಕರೆ ಉಪಯೋಗಿಸುವದನ್ನು ಬಿಟ್ಟುಬಿಡುವರು. ಇದರಿಂದ ತಿಂಗಳಿಗೆ ಉಳಿದ ರೂ ೪೦ನ್ನು ಸಾಹಾಯ್ಯ ಫಂಡಿಗೆ ದಯಪಾಲಿಸುವರು. ಮತ್ತೊಂದು ತಿಂಗಳಲ್ಲಿ ತುಪ್ಪ ತಿನ್ನುವದನ್ನು ಬಿಡುವರು. ಹೀಗೆ ಮೂರು ತಿಂಗಳು ತುಪ್ಪದ ಪ್ರಯೋಗವನ್ನು ಬಿಟ್ಟರೆ ವಿದ್ಯಾರ್ಥಿಗಳು ರೂ ೫೦ನ್ನು ಸಾಹಾಯ್ಯ ಫಂಡಿಗೆ ಕೊಟ್ಟಂಥಾಗುವದು. ಈ ರೀತಿ ಆ ಶಾಲಾ ಮಕ್ಕಳು ಪ್ರತಿ ತಿಂಗಳಲ್ಲಿ ಅವಶ್ಯವಿಲ್ಲವೆಂದು ತೋರುವ ದಿನನಿತ್ಯದ ಆಹಾರ ಪದಾರ್ಥಗಳಲ್ಲಿ ಒಂದೊಂದನ್ನು ಬಿಟ್ಟು ಸಾಹಾಯ್ಯ ಫಂಡಿಗೆ ದ್ರವ್ಯ ಸಾಹಾಯ್ಯ ಮಾಡುತ್ತಲಿದ್ದಾರೆ

ಈ ವಿದ್ಯಾರ್ಥಿಗಳ ಮಹತ್ವವಾದ ಮೇಲುಪಂಕ್ತಿಯು ಇತರ ಶಾಲಾ ವಿದ್ಯಾರ್ಥಿಗಳನ್ನೂ ಪ್ರೋತ್ಸಾಹಿಸುವಂಥಾದಲ್ಲವೇ? ಬಡವರಿಗೆ, ಕಷ್ಟದಲ್ಲಿರುವವರಿಗೆ, ಸಾಹಾಯ್ಯ ಮಾಡುವ ವಿದ್ಯಾರ್ಥಿಗಳ ಇಂಥಾ ಯತ್ನಕ್ಕೆ ಮಕ್ಕಳ ರಕ್ಷಕರು ಸ್ವಲ್ಪ ಉತ್ತೇಜನ ಕೊಟ್ಟರೆ ಇದರಿಂದ ಮಹತ್ವವಾದ ಫಲವು ಉಂಟಾಗುವದು.

ಯೂರೋಪ ಖಂಡದ ಮಹಾ ಯುದ್ಧದ ದೆಸೆಯಿಂದ ಬಂಗಾಳದಲ್ಲಿ ಬಡಜನರಿಗೆ ಹೆಚ್ಚಿನ ಕಷ್ಟ ಬಂದಿರುವದು. ಕಷ್ಟದಲ್ಲಿರುವ ಇಂಥಾ ಜನರಿಗೆ ಸಹಾಯ ಮಾಡುವ ಬಗ್ಗೆ ಬೋಳಾಪುರದ ಶಾಲೆಯಲ್ಲಿ ಇಂಥಾ ಸಾಹಾಯ್ಯ ಫಂಡು ತೆರೆಯೋಣಾಗಿದೆ. ನಮ್ಮ ಪ್ರಾಂತ್ಯದಲ್ಲಿಯೂ ದವಸಧಾನ್ಯಗಳ ಕ್ರಯ ಚಡವಾಗುತ್ತಾ ಬರುತ್ತಿದೆ. ಆಮದು ರಫ್ತುಗಳು ಕಡಿಮೆಯಾಗಿ ಅನೇಕರು ಕೆಲಸವಿಲ್ಲದೆ ಕಷ್ಟಕ್ಕೊಳಗಾದ ಸಂಭವವು ಇಲ್ಲಿ ಇಲ್ಲವೆಂತಿಲ್ಲ. ಇಂಥಾ ಕಷ್ಟದ ಸಂಭವವು ಒಂದು ವೇಳೆ ಬಂಗಾಳದಷ್ಟು ಇಲ್ಲಿ ಇಲ್ಲವೆಂದು ಭಾವಿಸಿದರೂ ಸಾಹಾಯ್ಯವು ಅತ್ಯಗತ್ಯವಾದ ಅನೇಕ ಧರ್ಮ ಸಂಸ್ಥೆಗಳು ಇಲ್ಲಿ ಇವೆ. ಹೀಗಿರುವದರಿಂದ ಶಾಲಾ ವಿದ್ಯಾರ್ಥಿಗಳು ವೃಥಾ ಕಾಪಿ ಹೊಟೇಲಿನ ತಿಂಡಿಗಳಿಗೆ, ಬೀಡಿ ಸಿಗರೇಟುಗಳಿಗೆ ಖರ್ಚು ಮಾಡುವ ಹಣದ ಒಂದಂಶವನ್ನು ಧರ್ಮ ಸಂಸ್ಥೆಗಳ ಸಾಹಾಯ್ಯ ಫಂಡುಗಳಿಗೆ ಬಿಟ್ಟರೆ ಬೋಳಾಪುರ ಶಾಲಾ ಮಕ್ಕಳು ಪಡಕೊಂಡ ಮಹತ್ವವಾದ ಯಶಸ್ಸಿಗೆ ಭಾಗಿಗಳಾಗುವದಲ್ಲದೆ ಅದರೊಡನೆ ತಮ್ಮ ಆರೋಗ್ಯರಕ್ಷಣೆಯನ್ನೂ ಮಾಡಿಕೊಂಡಂತಾಗುವದು.

ಯಿಲ್ಲಿರುವ ಘಾಯ ಒಡೆದ ಸೇನಿಕರ ಆಸ್ಪತ್ರಿ.

ಯುದ್ಧದಲ್ಲಿ ಘಾಯ ಒಡೆದ ಬ್ರಿಟಿಷ ಸೇನಿಕರ ಬಗ್ಗೆ ನೆಟ್ಲೆಯಲ್ಲಿ ಏರ್ಪಡಿಸೋಣಾದ ಆಸ್ಪತ್ರಿಯ ಗುಡಿಸಲುಗಳಲ್ಲಿ ಘಾಯ ಒಡೆದವರ ಪರಾಂಬರಿಕೆಯು ಬಹು ಜಾಗರೂಕತೆಯಿಂದ ನಡೆಯುತ್ತಿದೆ. ಈ ಆಸ್ಪತ್ರಿ ವಾರ್ಡಿನ ಉಪಚಾರಕಳಾದ ನರ್ಸ್ ಎಥೆಲ್‌ನಾಬರ್ ಎಂಬವಳು ಒಬ್ಬ ಕುರುಡ ಗುರ್ಕ ಸಿಪಾಯಿಯು ಈ ಗುಡಿಸಲಿನ ಒಂದರಲ್ಲಿ ಜೀವಕಳೆಯನ್ನು ಹುಟ್ಟಿಸುವವನಾಗಿದ್ದಾನೆಂದು ಹೇಳುವಳು.

ಅವಳ ಆರೈಕೆಯಲ್ಲಿರುವ ೨೦ ಮಂಚಗಳಲ್ಲಿ, ಸಿಖ್ಖ, ಗುರ್ಕ ಮತ್ತು ಗಾರಿವಾಲ್ ಜಾತಿಯ ಹಿಂದೂ ಸೇನಿಕರಿರುವರು. ಕೆಲವರಿಗೆ ೬–೮ ಘಾಯಗಳಿವೆ. ನಜ್ಜುಗುಜ್ಜಾದ, ಅಂಗವಿಹೀನರಾದ ಇವರನ್ನು ನೋಡುವದು ತುಂಬಾ ಭೀಕರವಾಗಿದೆ. ಅವರು ರಣರಂಗದಿಂದ ತಲಪುವಾಗ ಘಾಯಗಳೆಲ್ಲಾ ಕೊಳೆತುಹೋಗಿತ್ತು. ಆದರೆ ಅವುಗಳೆಲ್ಲಾ ಆಶ್ಚರ್ಯಕರವಾಗಿ ಗುಣಹೊಂದಿ, ಈಗ ನಿರ್ಮಲವಾಗಿರುವವು.

ಈ ಉಪಚಾರಕಳ ಆರೈಕೆಯಲ್ಲಿ ರಣರಂಗದಲ್ಲಿ ಎರಡು ಕಣ್ಣುಗಳನ್ನೂ ಕಳಕೊಂಡ ಒಬ್ಬ ಗುರ್ಕ ಸಿಪಾಯಿ ಇದ್ದಾನೆ. ಇವನು ಕುರುಡನಾಗಿದ್ದರೂ ವಾರ್ಡಿನಲ್ಲಿ ಜೀವಕಳೆಯನ್ನು ಹುಟ್ಟಿಸುವವನಾಗಿರುವನು. ಕೆಲವು ಸಾರಿ ಇವನು ಘಾಯ ಒಡೆದ ಜರ್ಮನರನ್ನು ಅನುವರ್ತಿಸಿ ವಾರ್ಡಿನಲ್ಲಿದ್ದವರನ್ನೆಲ್ಲಾ ನಗಾಡಿಸುವನು. ಕೆಲವು ಸಾರಿ ಕಂದಕಗಳಿಗೆ ನುಗ್ಗುವ ತಮಾಶೆಯನ್ನು ತೋರಿಸುವನು. ಶತ್ರುಗಳನ್ನು ನಾಶಮಾಡಲು ಗುರ್ಕ ಸಿಪಾಯರು ಅಂಬೆ ಕಾಲಿನಲ್ಲಿ ಹೋಗುವ ವಿಧಾನವು ಕುರುಡ ಗುರ್ಕನು ತೋರಿಸುವ ತಮಾಶೆಯಿಂದ ಚೆನ್ನಾಗಿ ಖಾತ್ರಿಯಾಗುವದು. ಒಂದು ದಿನ ಸಾಯಂಕಾಲ ಉಪಚಾರಕಳು ವಾರ್ಡಿನೊಳಗೆ ಹೋಗುವಾಗ ಈ ಕುರುಡ ಗುರ್ಕ ಸಿಪಾಯಿಯು ಹಾಸಿಗೆಯಿಂದ ಕೆಳಗಿಳಿದು "ಸಂಬಳದ ದಿವಸ"ದ ತಮಾಶೆಯನ್ನು ಪ್ರದರ್ಶಿಸುತ್ತಿದ್ದನು. ಉಪಚಾರಕಳು ಇದನ್ನು ನೋಡಿ "ಹಾಸಿಗೆಗೆ ಹೋಗು" ಎಂದು ಗದರಿಸಿದಳು. ಕುರುಡ ಸಿಪಾಯಿಯು ಥಕ್ಕನೇ ಎದ್ದು ನಿಂತು ಸೆಲ್ಯೂಟ ಮಾಡಿ "ಸಲಾಂ ಸಾಹೇಬಿನಿ, ಸಾಹೇಬಿನಿಗ ೫೦೦ ರೂಪಾಯಿ ಸಂಬಳ ನಮ್ಮ ಸಾಹೇಬಿನಿಯು ಬಹಳ ಒಳ್ಳೇಯವರು!" ಎಂದು ಹೇಳಿದನು. ಉಪಚಾರಕಳು ಸಿಟ್ಟು ಮಾಡುವದು ಹೇಗೆ? ಇತರರೊಡನೆ ಅವಳೂ ನಗಾಡಿದಳು

ಗುರ್ಕ ಮತ್ತು ಗಾರಿವಾಲ ಸೇನಿಕರು ಎಲ್ಲರ ಪ್ರೀತಿಗೆ ಪಾತ್ರರಾಗಿರುವರು. ಅವರಿಂದ ಯಾವ ರೂರಾಟವಾಗಲೀ ಗುಣಗಟ್ಟುವಿಕೆಯಾಗಲೀ ಇಲ್ಲವೇ ಇಲ್ಲ. ಅವರಿಗೆ ದಾಕ್ತರರ ಮತ್ತು ಉಪಚಾರಕರ ಮೇಲಿರುವ ನಂಬಿಕೆಯನ್ನು ಹೇಳಲಸಾಧ್ಯ. ಮೊದಲಾಗಿ ವಾರ್ಡಿನಲ್ಲಿ ಕ್ರಮವನ್ನು ಕಾಪಾಡುವದು ಕಷ್ಟವಾಗಿತ್ತು. ಮುಖ್ಯವಾಗಿ ಮಹಮ್ಮದೀ ಸೇನಿಕರನ್ನು ಅಂಕೆಯಲ್ಲಿಡುವದು ಕಷ್ಟವಾಗಿ ಕಂಡರೂ ನಂತರ ಬೇಗನೇ ಅವರ ಉಪಚಾರಕರು ಹೇಳುವಂತೆ ನಡೆಯ ಪ್ರಾರಂಭಿಸಿದರು. ಈ ಸೇನಿಕರೆಲ್ಲಾ ಮಕ್ಕಳಂತೆ ಮಿಠಾಯಿ, ಸಿಗರೇಟುಗಳನ್ನು ಬಹು ಪ್ರೀತಿ ಮಾಡುವರು. ಒಬ್ಬನಿಗೆ ಮತ್ತೊಬ್ಬನಿಗಿಂತ ಹೆಚ್ಚಿಗೆ ಸಿಕ್ಕಿತೆಂದರೆ ಬಹು ಸಿಟ್ಟು ಮಾಡುವರು. ಒಬ್ಬ ರೋಗಿಗೆ ಔಷಧಿ ಕೊಟ್ಟರೆ ಮತ್ತೊಬ್ಬನಿಗೂ ಕೊಡಲೇ ಬೇಕು. ಕೊಡದಿದ್ದರೆ ಎಲ್ಲಿಯಾದರೂ ನೋವು ಉಂಟುಮಾಡಿಕೊಳ್ಳುವರು. ಗುರ್ಕರು ಬಹಳ ಶಾಂತ ಸ್ವಭಾವದ ಕುಳ್ಳ ಮನುಷ್ಯರು. ಜಪಾನರಂತೆ ತೋರುತ್ತಾರೆ. ಬಹಳ ಒಳ್ಳೇಯವರು. ಭಾರತೀಯ ಸೇನಿಕರೆಲ್ಲರಿಗೂ ಚಲೋ ಹಲ್ಲುಗಳಿವೆ. ಏನಾದರೂ ತಿಂದ ಕೂಡಲೇ ಬಿಡದೆ ಹಲ್ಲನ್ನು ತೊಳಕೊಳ್ಳುವರು. ನಿರ್ಮಲತ್ವದಲ್ಲಿ ಇವರು ಇಂಗ್ಲಿಷ ಮಧ್ಯಮ ತರಗತಿಯ ಜನರಿಗಿಂತ ಎಷ್ಟೋ ಮೇಲಾಗಿರುವರು. ಸ್ನಾನ ಮಾಡದೆ ಊಟ ಮಾಡರು ಎಂಬದಾಗಿ ಈ ಉಪಚಾರಕಳು ಆಸ್ಪತ್ರಿಯಲ್ಲಿರುವ ಭಾರತೀಯ ಸೇನಿಕರನ್ನು ಕುರಿತು ಬರದಿರುವಳು

ಶಾಲೆಗಳಲ್ಲಿ ಮಕ್ಕಳ ಕ್ಷೇಮರಕ್ಷಣೆ ಬಗ್ಗೆ ಅನುಸರಿಸಬೇಕಾದ ಕೆಲವು ಸೂಚನೆಗಳು.

ಶಾಲೆಗಳಲ್ಲಿ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಶಾಲಾ ಉಪಾಧ್ಯಾಯರು ಎಷ್ಟು ಹೆಚ್ಚಿನ ಲಕ್ಷ್ಯವನ್ನು ಕೊಡುವರೋ ಅದಕ್ಕಿಂತಲೂ ಹೆಚ್ಚಿನ ಜಾಗ್ರತೆಯನ್ನು ಮಕ್ಕಳ ಕ್ಷೇಮರಕ್ಷಣೆ ಸಂಬಂದವಾಗಿ ತಕೊಳ್ಳುವದು ಅಗತ್ಯವಿದೆ ಎಂಬ ಮಾತನ್ನು ಯಾರೂ ಅಲ್ಲಗಳೆಯರು. ಶಾಲೆಗೆ ಮಕ್ಕಳು ಒಂದೇ ಪ್ರಾಂತ್ಯದಿಂದ ಬರುವದಿಲ್ಲ; ಪಟ್ಟಣದ ಸಂದುಗೊಂದುಗಳಿಂದ, ಆಯಾ ಪ್ರಾಂತ್ಯಗಳಿಂದ ಬರುತ್ತಿರುವರು. ಐಶ್ವರ್ಯವಂತರ ಮಕ್ಕಳೂ ಬಡವರ ಮಕ್ಕಳೂ ಏನೂ ಭೇದವಿಲ್ಲದೆ ಒಂದೇ ಶಾಲೆಯಲ್ಲಿ ಓದುವರು. ಬಡವ ದೊಡ್ಡವ ಎಂಬ ಭೇದವಿಲ್ಲದೆ ಒಬ್ಬರೊಡನೆ ಒಬ್ಬರು ಬೆರಕೆಯಾಗಿ ಆಟಪಾಠ ಮಾಡುವರು. ಆಯಾ ಸ್ಥಳದ, ಆಯಾ ಸ್ಥಿತಿಗತಿಯ ಮಕ್ಕಳು ಒಟ್ಟಾಗುವ ಕಟ್ಟಡವು ಮಕ್ಕಳ ಕ್ಷೇಮರಕ್ಷಣೆಗೆ ಸರಿಯಾಗಿರದಿದ್ದರೆ ಇದರಿಂದ ಹೆಚ್ಚಿನ ಕೆಡಕಾಗುವದು. ಪಟ್ಟಣದ ಆಯಾ ಪ್ರಾಂತ್ಯದ ಮಕ್ಕಳು ಶಾಲಾ ಕಟ್ಟಡದಲ್ಲಿ ಬಂದು ಸೇರುವದರಿಂದ ಆಯಾ ಪ್ರಾಂತ್ಯದ ರೋಗಾಣುಗಳನ್ನು ಶಾಲೆಯು ಸ್ವಭಾವಿಕವಾಗಿ ಎಳಕೊಂಡು ವಿದ್ಯಾರ್ಥಿಗಳ ಕ್ಷೇಮವನ್ನು ಕೆಡಿಸುವದು. ಹೀಗಿರುವದರಿಂದ ಶಾಲಾ ಕಟ್ಟೋಣವು ಆದಷ್ಟು ನಿರ್ಮಲವಾಗಿರುವಂತೆ ಶಾಲಾ ಅಧಿಕಾರಿಗಳು ಈ ಕೆಳಗಿನ ಸೂಚನೆಗಳನ್ನು ಅನುಸರಿಸುವದು ಪ್ರಕೃತ ಅವಶ್ಯವಾಗಿದೆ.

೧. ಶಾಲಾ ಕಟ್ಟಡವನ್ನು ಕಟ್ಟಿಸುವ ಸ್ಥಳವು ಸೇನಿಟರಿ ಇಂಜಿನಿಯರ್ ಯಾ ಡಿಸ್ಟ್ರಿಕ್ಟ್ ವೈದ್ಯ ಆಫೀಸರರಿಂದ ಮಂಜೂರಾತಿಯನ್ನು ಪಡೆಯಬೇಕು

೨ ಶಾಲಾ ಕಟ್ಟಡದ ಆಕಾರ ಪರಿಮಾಣವು ಶುದ್ಧವಾದ ವಾಯು ಸಂಚಾರಕ್ಕೆ ಭಂಗವನ್ನುಂಟು ಮಾಡದ್ದಾಗ್ಗಿರಬೇಕು

೩ ಶಾಲಾ ಉಪಾಧ್ಯಾಯರಲ್ಲಿ ಒಬ್ಬಿಬ್ಬರು ವೈದ್ಯ ಮಾಹಿತಿಯುಳ್ಳವರಾಗಿದ್ದು ಆರೋಗ್ಯ ಸಂಬಂಧ ಮಕ್ಕಳಿಗೆ ಪಾಠವನ್ನು ಕೊಟ್ಟು, ಮೆಜಿಕ್ ಲಾಂದರಿನ ಮೂಲಕ ಮನುಷ್ಯರ ಅವಯವಗಳ ರಚನೆ ಇತ್ಯಾದಿಗಳನ್ನು ತೋರಿಸಿಕೊಟ್ಟು, ಇದರ ದುರುಪಯೋಗದಿಂದ ಆರೋಗ್ಯಕ್ಕೆ ಉಂಟಾಗುವ ಕೆಡಕನ್ನು ತೋರಿಸಬೇಕು

೪ ವೈದ್ಯ ಆಫೀಸರರು ಆಗ್ಗಾಗ್ಗೆ ಶಾಲೆಯನ್ನು ಸಂದರ್ಶಿಸಿ ಮಕ್ಕಳ ದೃಷ್ಟಿ, ಹೊಟ್ಟೆ, ಎದೆ, ಶ್ವಾಸಕೋಶ, ಹಲ್ಲು ಇತ್ಯಾದಿಗಳ ಪರಿಶೋಧನೆ ನಡಿಸಬೇಕು.

೫ ಶಾಲೆಯ ಬಾಗಲು, ಕಿಡಿಕಿ, ಮೇಜು, ಕರ್ಸಿ, ಬೆಂಚು, ಕರೀಹಲಿಗೆ ಇತ್ಯಾದಿಗಳನ್ನು ಆಗಾಗ್ಗೆ ಬಿಸಿ ನೀರಿನಿಂದ ತೊಳೆಯಿಸಿ ಶುದ್ಧ ಮಾಡಬೇಕು.

೬ ಮಕ್ಕಳು ಕೈಕಾಲುಗಳನ್ನು ಆಗಾಗ್ಗೆ ತೊಳಕೊಳ್ಳುವ ಬಗ್ಗೆ ಹುಡುಗರ ಸಂಖ್ಯೆಗನುಸಾರವಾಗಿ ಶುದ್ಧ ನೀರು ತುಂಬಿಸಿದ ಹಲವು ಪಾತ್ರೆಗಳು ಶಾಲೆಯಲ್ಲಿ ಇರಬೇಕು ದಿವಸಕ್ಕೆ ಎರಡಾವರ್ತಿಯಾದರೂ ಮಕ್ಕಳು ಕೈಕಾಲು ಮುಖ ತೊಳಕೊಳ್ಳುವದು ಅವಶ್ಯವಿದೆ ಶುದ್ಧವಾದ ನಿರ್ಮಲ ಪಾಯಖಾನೆಯು ಪ್ರತಿ ಒಂದು ಶಾಲೆಯಲ್ಲಿ ಇರಬೇಕು

೭ ಶಾಲೆಯ ಸಮೀಪ ಇರುವ ಮಿಠಾಯಿ ಅಂಗಡಿಗಳು ಮಕ್ಕಳನ್ನು ಆಕರ್ಷಿಸುವದರಿಂದ ಅಂಥಾ ಮಿಠಾಯಿ ಅಂಗಡಿಗಳ ಭಕ್ಷ್ಯಗಳನ್ನು ಆಗ್ಗಾಗ್ಗ ವೈದ್ಯ ಆಫೀಸರರಿಂದ ಪರೀಕ್ಷಿಸುವ ಏರ್ಪಾಡು ಮಾಡುವದು ಆಗತ್ಯ ಬೀದಿಯ ದೂಳು ಇತ್ಯಾದಿ ತುಂಬಿದ ಈ ಮಿಠಾಯಿಗಳನ್ನು ಮಕ್ಕಳು ತಿಂದು ಆರೋಗ್ಯ ಕೆಡಿಸಿಕೊಳ್ಳುತ್ತಾರಾದ್ದರಿಂದ ಇಂಥಾ ಏರ್ಪಾಡಿನಿಂದ ಹೆಚ್ಚಿನ ಹಿತವಾಗುವದು.

೮ ಶಾಲೆಗಳಲ್ಲಿ ಸ್ಲೇಟುಗಳ ಪ್ರಯೋಗವನ್ನು ನಿಲ್ಲಿಸಬೇಕು ಸ್ಲೇಟುಗಳನ್ನು ನಾಲಿಗೆಯಿಂದ ನೆಕ್ಕುವದು ಅವನ್ನು ಮಕ್ಕಳು ತಮ್ಮ ಅಂಗಿಯಿಂದ ಒರಸುವದು, ಈ ಮೊದಲಾದ ಪದ್ಧತಿಗಳಿಂದ ಮಕ್ಕಳಲ್ಲಿ ವಿವಿದ ರೋಗಗಳು ಹುಟ್ಟುತ್ತವೆ ಹೀಗೆ ಇವುಗಳು ರೋಗಗಳನ್ನು ಹುಟ್ಟಿಸುವ ಕಾರಣಗಳಾಗುವದರಿಂದ ಸ್ಲೇಟುಗಳಲ್ಲಿ ಬರೆಯುವ ಪದ್ಧತಿಯನ್ನೇ ನಿಲ್ಲಿಸುವದು ಒಳ್ಳೇದು

~~~~~~

ಪತ್ರವ್ಯವಹಾರ

~~~~~~

ಮಂಗಳೂರಲ್ಲಿ ಕಳವುಗಳ ಗೋಳಾಟ

(ವಿಚಾರಿಯ ಮಾತುಗಳ ವಿಮರ್ಶೆ)

~~~~~~

ಅಯ್ಯಾ ಪತ್ರಕರ್ತರೇ,

ತಮ್ಮ ಅಮೂಲ್ಯ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ 'ವಿಚಾರಿ" ಎಂಬ ಲೇಖಕರು "ಮಂಗಳೂರಲ್ಲಿ ನಡೆದ ಕಳವುಗಳಲ್ಲಿ ಎಷ್ಟರಮಟ್ಟಿಗೆ ಸತ್ಯವೆಂಬದಾಗಿ ಕೂಲಂಕುಶ ವಿಚಾರಿಸುವದಾದರೆ ಹೆಚ್ಚಿನಮಟ್ಟಿಗೆ ಅತಿಶಯೋಕ್ತಿ ಎಂಬದಕ್ಕೆ ಸಂಶಯವಿಲ್ಲ" ಎಂಬದಾಗಿ ಬರೆದು ಇವರ ಮಾತನ್ನು ಬಲಪಡಿಸುವ ಬಗ್ಗೆ ಕೆಲವು ದೃಷ್ಟಾಂತಗಳನ್ನು ಕೊಟ್ಟಿರುವರು ಸ್ವಾಮಿ, "ವಿಚಾರಿ"ಯು ಬರೆದ ದೃಷ್ಟಾಂತಗಳೇನೋ ನಿಜವಾಗಿಯೂ "ಅತಿಶಯೋಕ್ತಿ"ಯಾಗಿರಬಹುದು ಇವುಗಳು "ಅತಿಶಯೋಕ್ತಿ"ಯಲ್ಲವೆಂದು ದೃಢೀಕರಿಸುವಷ್ಟು ಸಾಮರ್ಥ್ಯವು ನನ್ನಲ್ಲಿರದು ಯಾಕಂದರೆ, "ವಿಚಾರಿಯ" ಲೇಖನವನ್ನು ನೋಡುವಾಗ ಈ "ವಿಚಾರಿ"ಯು ಪೋಲೀಸ ಇಲಾಖೆಗೆ ಸಂಬಂದಪಟ್ಟವನು, ಯಾ ಇಲಾಖೆಗೆ ಸಂಬಂಧಪಟ್ಟವರೊಬ್ಬರ ಮಿತ್ರನಾಗಿರಬೇಕೆಂಬ ಅನುಮಾನವು ನನ್ನಲ್ಲಿ ಹುಟ್ಟಿದ್ದರಿಂದ, ಒಂದು ವೇಳೆ ಇವರ ಲೇಖನವನ್ನು ವಿಮರ್ಶಿಸುವುದರಿಂದ ಕಳ್ಳತನವು ನಡೆದದ್ದು ಹೌದೋ ಎಂಬ ವಿಚಾರವು ಮೂಲೆಗೆ ಸೇರಿ "ವಿಚಾರಿ"ಯ ಲೇಖನವನ್ನು ವಿಮರ್ಶಿಸಿದವನ್ಯಾರೆಂಬ ಹೊಸ ವಿಚಾರವು ಹುಟ್ಟಲೂಬಹುದಾದ್ದರಿಂದ ಭಯಪಡುತ್ತೇನೆ ಆದರೂ "ವಿಚಾರಿ"ಯಿಂದ ಇನ್ನೊಂದೆರಡು ವಿಚಾರಗಳನ್ನು ತಿಳಕೊಳ್ಳಲು ಪತ್ರಕರ್ತರು ಅಪ್ಪಣೆಕೊಡಬೇಕೆಂದು ವಿಜ್ಞಾಪನೆ ಇದೆ

ಸ್ವಾಮಿ, "ವಿಚಾರಿ"ಯು ಹೇಳುವಂಥಾ "ಅತಿಶಯೋಕ್ತಿ"ಗಳ ಕಳವುಗಳು ಮಂಗಳೂರಲ್ಲಿ ಹಿಂದೆ ಯಾಕೆ ಹುಟ್ಟಿರಲಿಲ್ಲ? ಪೋಲಿಸ ಇಲಾಖೆಯವರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿದ್ದರೆ—"ವಿಚಾರಿ"ಯು ಹೇಳುವಂತೆ, "ಪೋಲೀಸ ಇಲಾಖೆಯವರು ವೃಥಾ ಕಾಲಹರಣೆ ಮಾಡದೆ ಕಳ್ಳರ ಕಾಟವು ಹೆಚ್ಚದಂತೆ ವಿಶೇಷ ಪ್ರಯತ್ನ ಮಾಡುತ್ತಿರುವರು, ಡ್ಯುಪಿಟಿ ಸುಪರಿಂಟೆಂಡೆಂಟರು, ಸರ್ಕಲ್ ಇನ್ಸ್ಪೆಕ್ಟರರು ಖುದ್ದಾಗಿ ಬೀಟು ತಿರುಗುತ್ತಿರುವರು; ಸಬ್ ಇನ್ಸ್ಪೆಕ್ಟರರು ರಾತ್ರಿ ಹಗಲು ನಿದ್ದೆ ಕೆಟ್ಟು ಬೀಟುಗಳನ್ನು ಸಂಚರಿಸಿ ಕಳ್ಳರ ಕಾಟವು ಕಮ್ಮಿಯಾಗುವಂತೆ ಪ್ರಯತ್ನಮಾಡುತ್ತಾರೆ". ಇಂಥಾ ಪ್ರಯತ್ನಗಳನ್ನು ಅಧಿಕಾರಿಗಳು "ಅತಿಶಯೋಕ್ತಿ"ಗಳ ಕಾಲದಲ್ಲಿ ಮಾತ್ರವಲ್ಲ; ತಮ್ಮ ಕರ್ತವ್ಯವೆಂದೆಣಿಸಿ ಹಿಂದೆಯೂ ತಿಂಗಳಿಗೊಂದಾವರ್ತಿಯಾದರೂ ಮಾಡುತ್ತಿದ್ದರೆ ಇಂಥಾ ಅತಿಶಯೋಕ್ತಿಗಳಿಗೆ ಆಸ್ಪದವಿತ್ತೇ? "ಅತಿಶಯೋಕ್ತಿ"ಗಳು ಹುಟ್ಟುವ ಮೊದಲು ಈ ಇಲಾಖೆಯವರು ಧರ್ಮಾರ್ಥವಾಗಿ ಕೆಲಸಮಾಡುತ್ತಿದ್ದರೋ? ಈಗ ರಾತ್ರಿಹಗಲು ನಿದ್ದೆಕೆಡುವ ಸಬ್ ಇನ್ಸ್ಪೆಕ್ಟರರು ಆಗ ರಾತ್ರಿಹಗಲೂ ನಿದ್ದೆಮಾಡುತ್ತಿದ್ದರೋ? "ವಿಚಾರಿ"ಯೇ ಇದಕ್ಕೆ ಉತ್ತರ ಕೊಡಲಿ

"ಒಟ್ಟಾರೆ ನಿಜವಾಗಿ ನಡದ ಕಳವುಗಳು ಒಂದೆರಡೇ ಆಗಿರುವವು" ಎಂಬದಾಗಿ "ವಿಚಾರಿ"ಯ ವಾದ. ಈ ವಾದವೂ ಸರಿಯಾಗಿರಬಹುದು. ಆದರೆ, ಪದವಿನಲ್ಲಿ ಹೋಗುತ್ತಿದ್ದ ಎಲ್ವಾದನೆಂಬವನ ಮೇಲೆ ಒಬ್ಬ ಮಾಪ್ಳಿಳ್ಳೆಯು ಬಿದ್ದು ಹಲ್ಲು ಉದುರಿಸಿ ೨ ರೂಪಾಯಿ ಸುಲಕೊಂಡು ಹೋದದ್ದು ಹೌದೋ? ಪೋಲೀಸ್ ಸುಪರಿಂಟೆಂಡೆಂಟ್ ದೊರೆಗಳವರು ಎಲ್ವಾದನ ಬಿದ್ದುಹೋದ ಹಲ್ಲನ್ನು ನೋಡಿದ್ದು ಉಂಟೋ? ಗಾಣಿಗ ಹುಡುಗನ ಬಂಟಿ ಎಳದು ತೆಗೆದದ್ದು ಹೌದೋ? ಚಂದುಮಲ್ಯರ ಹಣವನ್ನು ಕಳ್ಳರು ದೋಚಿಕೊಂಡು ಹೋದದ್ದುಂಟೋ? ರಾ। ಎಮ್ ಶ್ರೀನಿವಾಸರಾಯರ ವಾಚು, ಜೇಸುದಾಸ ಬಂಗೇರರ ಮನೆಯಿಂದ ಅಂಗಿ, ಟೋಪಿ ಇತ್ಯಾದಿಗಳು, ಕೊತ್ರುಬಾಯಿ ಮನೆಯಲ್ಲಿ ತಾಂಬ್ರದ ಪಾತ್ರೆಗಳು, ಬರ್ನಬಾಸ್ ಕೋಡೋಟರ ವಾಚು, ಮಿ। ಎಫ್ ಮತಾಯಸರ ಮನೆಯಲ್ಲಿ ಚಿಲ್ಲರೆ ಕಳವುಗಳು ರಾ। ಅಡಿಗೆ ಪದ್ಮನಾಭಯ್ಯನವರಲ್ಲಿ ಕಳವು ಮಾಡುವ ಪ್ರಯತ್ನ ಮಿ। ಕಾಮಿಲ್ ಸಾಲ್ಡಾಂಞ್ಞಾರಲ್ಲಿ ಸುಮಾರು ೨೦೦೦ ರೂಪಾಯಿ ಕ್ರಯಬಾಳುವ ಸೊತ್ತುಗಳು, ಮಣೇಲ್ ಅನಂತ ಶ್ಯಾನುಭಾಗರ ಹಿತ್ತಲಲ್ಲಿರುವ ಮನೆಯಲ್ಲಾದ ಕಳವು, ಡೊಂಗರಕೇರಿಯ ಕೆಲವು ಮನೆಗಳಲ್ಲಿ ನಡೆದ ಚಿಲ್ಲರೆ ಕಳವುಗಳು ಕರಂಗಲಪಾಡಿ ಮಠಾರದ ಹೊಟೇಲಿನವನು ಹೋಗುವಾಗ ಕಳ್ಳರು ತಡೆದು ಹಣ ಕಾಸುಗಳನ್ನು ಸೆಳಕೊಳ್ಳಲು ಮಾಡಿದ ಪ್ರಯತ್ನ, ಗದ್ದೆಕೇರಿ ನರ್ಸಯ್ಯ ಶ್ಯಾನುಭಾಗರ ಮನೆಯಲ್ಲಾದ ಕಳವು, ಮಿ। ಆನಂದನ್‌ರವರ ಮನೆಯ ಆಡು ಕಳವು, ಇತ್ಯಾದಿ ಕಳವುಗಳೂ ದಾರಿಸುಲಿಗೆಗಳೂ ನಡೆದದ್ದು ನಿಜವೋ? ಈ ಕಳವುಗಳಲ್ಲಿ ಇಲಾಖೆಯವರು ಎಷ್ಟನ್ನು ಪತ್ತೆಮಾಡಿದರು? ಇವುಗಳು ಕೂಡಾ "ಅತಿಶಯೋಕ್ತಿ" ಎಂದು ಇಲಾಖೆಯವರು ಸುಮ್ಮನಿದ್ದರೋ? ಈ ಕಳವುಗಳು "ಅತಿಶಯೋಕ್ತಿ"ಯಲ್ಲವೆಂದು ಇಲಾಖೆಯವರಿಗೆ ತಿಳಿದ ಬಂದದುಂಟೋ? ತಿಳಿದುಬಂದಿದ್ದರೆ ಈ ವಿಷಯ ಕೂಡಲೇ ಮುಂಜಾಗ್ರತೆ ತಕ್ಕೊಂಡದ್ದುಂಟೋ? ಯಾವ ತರದ ಮುಂಜಾಗ್ರತೆಯು ತಕ್ಕೊಳ್ಳಲಾಯಿತು? "ಪೋಲಿಸ ಇಲಾಖೆಯವರು ವೃಥಾ ಕಾಲಹರಣೆ ಮಾಡದೆ ಕಳ್ಳರ ಕಾಟವು ಹೆಚ್ಚದಂತೆ ವಿಶೇಷ ಪ್ರಯತ್ನ ಮಾಡಲು ಪ್ರಾರಂಭಿಸಿದ್ದು ಯಾವಾಗ? ಡ್ಯುಪಿಟಿ ಪೋಲಿಸು ಸುಪರಿಂಟೆಂಡೆಂಟರೂ ಸರ್ಕಲ್ ಇನ್ಸ್ಪೆಕ್ಟರರೂ "ಅತಿಶಯೋಕ್ತಿ" ಕಳವುಗಳ ಸಂಖ್ಯೆಯು ಹೆಚ್ಚಿದನಂತರ ರಾತ್ರಿ ಬೀಟು ಸಂಚರಿಸಲು ಪ್ರಾರಂಭಿಸಿದ್ದೋ? ಹಿಂದೆಯೂ ರಾತ್ರಿ ಬೀಟು ಸಂಚರಿಸುವ ವಾಡಿಕೆಯು ಇವರಿಗಿತ್ತೋ? ಇದ್ದಿಲ್ಲವಾದರೆ ಯಾಕೆ? ಸಬ್ ಇನ್ಸ್ಪೆಕ್ಟರರು ರಾತ್ರಿ ಮತ್ತು ಹಗಲು ನಿದ್ದೆ ಕೆಡಲು ಪ್ರಾರಂಭಿಸಿದ್ದು ಯಾವಾಗ? "ಅತಿಶಯೋಕ್ತಿ"ಗಳ ಮೊದಲು ಇವರಿಗೆ ಎಂಥಾ ಕೆಲಸವಿತ್ತು? ರಾತ್ರಿ ಏನು ಮಾಡುತ್ತಿದ್ದರು? ಹಗಲು ಏನು ಮಾಡುತ್ತಿದ್ದರು? ಕಳವುಗಳ "ಅತಿಶಯೋಕ್ತಿ" ಸಂಖ್ಯೆಯು ಕಮ್ಮಿಯಾದನಂತರವೂ ಇಲಾಖೆಯವರು ರಾತ್ರಿ ಬೀಟು ಸಂಚರಿಸಿ ನಿದ್ದೆ ಕೆಡುವದು ಉಂಟೋ? ಇಲ್ಲವೆ ಹಿಂದಿನಂತೆಯೋ? ಎಂಬ ಪ್ರಶ್ನೆಗಳಿಗೆ "ವಿಚಾರಿ"ಯ ಉತ್ತರ ಆಗತ್ಯವಿದೆ

ಸ್ವಾಮಿ, ಪತ್ರವು ಬೆಳೆಯಿತು, ಪತ್ರವಿಸ್ತಾರಕ್ಕೆ ಮನ್ನಿಸಿ, "ವಿಚಾರಿ"ಯು ಕೊಟ್ಟ "ಅತಿಶಯೋಕ್ತಿ" ಕಳವುಗಳ ಉದಾಹರಣೆಗಳು "ಅತಿಶಯೋಕ್ತಿ"ಗಳೆಂದು ವಿಚಾರಿಗೆ ಕಂಡುಬಂದದ್ದು ಹ್ಯಾಗೆ? ಪೋಕ್ರಿ ಯುವಕರು ಪುಕಾರೆ ಎಬ್ಬಿಸಲಿಕ್ಕೆ ಕತ್ತಲೆ ಸಮಯದಲ್ಲಿ ಹಾದುಹೋಗುವ ಹೆಂಗಸರ ಕಿವಿ ಮುಟ್ಟಿ ಓಡಿಹೋದದ್ದನ್ನು "ವಿಚಾರಿ"ಯು ನೋಡಿದ್ದು ಎಲ್ಲಿ? ಸೂಳೆಯರ ಹೊಸ ವರ್ತನೆದ ಅನುಭವವು "ವಿಚಾರಿ"ಗೆ ಬಂದದ್ದು ಯಾವಾಗ? ಇಂಥಾ ಸಂಭವಗಳು ಹಿಂದೆ ಯಾಕೆ ಪಟ್ಟಣದಲ್ಲಿ ಸಂಭವಿಸಲಿಲ್ಲ? ಈಗ ಮಾತ್ರ ಇಂಥಾ ಪುಕಾರೆಗಳು ಸಂಭವಿಸಲು ಕಾರಣವೇನು? ಎಂಬಿತ್ಯಾದಿ ಪ್ರಸ್ತಾಪಗಳ ಉತ್ತರಕ್ಕೆ "ವಿಚಾರಿ"ಗೆ ತಮ್ಮ ಇನ್ನೊಂದು ಸಂಚಿಕೆಯಲ್ಲಿ ಸ್ಥಳ ಕೊಡಬೇಕಾಗಿ ವಿಜ್ಞಾಪಿಸಿಕೊಳ್ಳುವ,

ವಿಮರ್ಶಿ.

~~~~~~

ಅಯ್ಯಾ ಪತ್ರಕರ್ತರೇ,

ಮಂಗಳೂರು ಮುನ್ಸಿಪಾಲಿಟಿಗೆ ಸೇರಿದ ಅನೇಕ ಹಿತ್ತುಗಳಲ್ಲಿ ಆವರಣವಿಲದ ಹಾಳು ಭಾವಿಗಳು ಇರುತ್ತವಾದ್ದರಿಂದ ಪಶು ಪ್ರಾಣಿ ಇತ್ಯಾದಿಗಳು ಬಿದ್ದು ಅನೇಕಾವರ್ತಿ ಕೈಕಾಲು ಮುರಿದುಕೊಂಡು ಅಂಗಹೀನವಾಗಿ ಸಂಕಷ್ಟಗೊಳಗಾಗುತ್ತದೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯ ನಿಗಾಕೊಟ್ಟು ತಕ್ಕ ಏರ್ಪಾಡು ಮಾಡಬೇಕಾಗಿ ತಮ್ಮ ಪತ್ರಿಕೆಯಲಿ ಹಲವು ಸಾರಿ ಸೂಚಿಸಲಾಗಿದ್ದರೂ ಈ ವಿಷಯ ಈ ವರೆಗೆ ಪಟ್ಟಣದ ಅಧಿಕಾರಿಗಳು ನಿಗಾ ಕೊಡದಿರಲು ಕಾರಣವೇನೋ ತಿಳಿಯದು. ಅಧಿಕಾರಿಗಳು ಆವರಣವಿಲ್ಲದ ಇಂಥಾ ಬಾವಿಗಳಿಂದ [illegible] ಮೂಗ ಪ್ರಾಣಿಗಳಿಗೂ ಉಂಟಾಗುವ ನಷ್ಟಕಷ್ಟಗಳನ್ನು [illegible] ಮಾಡುವದಿಲವೋ? ಹಾಳು ಬಾವಿಗಳನ್ನು [illegible]

ಅವನ್ನು ಮುಚ್ಚಿಸತಕ್ಕ ಸಿಬಂದಿಯು ಪಟ್ಟಣದಲ್ಲಿಲ್ಲವೋ? ಯಾ ಹಾಳು ಬಾವಿಗಳು ಇಂಥಾ ಅಧಿಕಾರಿಗಳ ಕಣ್ಣಿಗೆ ಗೋಚರಿಸುವದಿಲ್ಲವೋ ಎಂಬ ಅನುಮಾನ ಪಡುತ್ತೇನಾದ್ದರಿಂದ ಈ ಬಾವಿಗಳಿಂದ ಉಂಟಾಗುವ ಅನಾಹುತಗಳ ಕುರಿತು ತಮ್ಮ ಪತ್ರ ಮೂಲಕ ಒಂದೆರಡು ದೃಷ್ಟಾಂತಗಳನ್ನು ಕೊಟ್ಟು ಅಧಿಕಾರಿಗಳ ದೃಷ್ಟಿಯನ್ನು ಅತ್ತಕಡೆ ಎಳೆಯಬೇಕೆಂದಿರುವೆನು. ಸ್ವಾಮಿ, ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಸ್ಥಳಕೊಡಬೇಕಾಗಿ ವಿಜ್ಞಾಪಿಸುತ್ತೇನೆ.

ಮಂಗಳೂರು ಶಹರ ಬೋಳೂರು ರಸ್ತೆಯ ರಹಿತ್ತಿಗೆ ಮೂಡು ದಿಕ್ಕಿನಲ್ಲಿ ರಸ್ತೆ ಹೊದ್ದು ಬೈಲಿನ ಬಾಯಿ ಹತ್ತಲ್ಲಿ ಆವರಣ ಇಲ್ಲದ ಸುಮಾರು ೫—೬ ಮಂಡು ಆಳದ ನೀರಿಲ್ಲದ ಒಂದು ಹಾಳು ಬಾವಿಗೆ ಇದೇ ಕಳೆದ ಫೆಬ್ರವರಿ ತಾ ೨೫ನೇ ಬೃಹಸ್ಪತಿವಾರ ೫ ಗಂಟೆಗೆ ೧೧ ಗೋಣಿ ಗೇರುಬೀಜ ಹೇರಿಸಿಕೊಂಡು ಹೋಗುತ್ತಿದ್ದ ಸುಮಾರು ೨೦೦ ರೂಪಾಯಿ ಕ್ರಯಬಾಳುವ ಎತ್ತು ಗಾಡಿ ಸಮೇತ ಬಿದ್ದು ನುಚ್ಚುನೂರಾಗಿ ಹೋಗಿರುವದು. ಗಾಡಿಯವನು ಮಾತ್ರ ಥಕ್ಕನೇ ಗಾಡಿಯಿಂದ ಹಾರಿ ದೈವಯೋಗದಿಂದ ಉಳಿದರೂ ತನ್ನ ಎತ್ತು ಗಾಡಿಗೆ ಉಂಟಾದ ಅವಸ್ಥೆಯನ್ನು ಕಂಡು ತಾಳಲಾರದೆ ಹುಚ್ಚನಂತೆ ದಾರಿಯಲ್ಲಿ ಬಿದ್ದು ಎದೆಗೆ ಬಡಕೊಳ್ಳುತ್ತಿದ್ದನಂತೆ! ಸ್ವಾಮಿ, ತಮ್ಮ ಪತ್ರಿಕೆಯಲ್ಲಿ ಆವರಣವಿಲ್ಲದ ಬಾವಿಗಳು ಪಟ್ಟಣದಲ್ಲಿ ಹೆಚ್ಚಿವೆ ಎಂಬದಾಗಿ ಬರೆಯುವ ಮಾತುಗಳು ಅಬದ್ಧವಾಗಿರುವವೆಂದಾಗಿ ಅಧಿಕಾರಿಗಳು ಭಾವಿಸುವರೋ? ಅಬದ್ಧವೆಂದು ಎಂದೂ ಭಾವಿಸದಿರಿ! ಇದೇ ರಸ್ತೆಯ ಕಿ ದಾಸಪ್ಪಾಚಾರಿ ಹತ್ತಿರ ಇನ್ನೊಂದು ಆವರಣವಿಲ್ಲದ ಬಾವಿ ಇದೆ. ಇದರಲ್ಲಿ ಈಚೆಗೆ ಒಂದು ಕ್ಷಣ ಹೆಚ್ಚು ತಡವಾಗುತ್ತಿದ್ದರೆ ಒಂದು ಮಗು ಬಿದ್ದುಹೋಗುವ ಸಂಭವವಿತ್ತು. ಸಂಬಂಧಪಟ್ಟ ಅಧಿಕಾರಿಗಳು "ಸ್ವದೇಶಾಭಿಮಾನಿಯವರಿಗೆ ಏನು? ಯಾರೋ ಹೇಳಿದ್ದು ಬರೆದುಬಿಡುತ್ತಾರೆ. ಪಟ್ಟಣದಲ್ಲಿ ಹಾಳು ಬಾವಿಗಳಿಲ್ಲ, ಆವರಣ ಇದೆ" ಎಂದು ಭಾವಿಸುವರೋ? ಹೀಗೆ ಬಾವಿಯದೆ ಸ್ವಲ್ಪ ವಿಚಾರಿಸಿದರೆ ಈ ಪ್ರಾಂತ್ಯದಲ್ಲಿ ಇನ್ನೆಷ್ಟೋ ಹಾಳು ಬಾವಿಗಳು ತೋರಿಬರುವವು.

ಬೆಂದೂರು ರಸ್ತೆಯಲ್ಲಿ ಗುಸ್ತಾವ್ ಮಸ್ಕರೇನ್ಹಸರವರ ಗುತ್ತಿನಲ್ಲಿ ಮನೆ। ದಾರಿ ಕೆಳಗಿನ ಮನೆ ಬಡಗು ದಿಕ್ಕಿನಲ್ಲಿ ಭಯಂಕರವಾದ ಇಂಥಾ ಒಂದು ಬಾವಿ ಇದೆ. ಇತ್ತಲಾಗ್ಗೆ ಇದರಲ್ಲಿ ಒಂದು ಹಂದಿ ಬಿದ್ದು ಪಟ್ಟಂಥಾ ಕಷ್ಟವನ್ನು ಇಲ್ಲಿ ವಿವರಿಸಲಸಾಧ್ಯ!

ಕೋಡಿಗಡ್ಡೆಯಲ್ಲಿ ಸೆರ್ಪಿನಬಾಯಿ ಹತ್ತಿರ ಇರುವ ಆವರಣ ಇಲ್ಲದ ಒಂದು ಹಾಳು ಬಾವಿಗೆ ಈಚೆಗೆ ಒಬ್ಬರ ಒಂದು ಚಲೋ ನಾಯಿ ಬಿದ್ದು ಕಾಲು ಮುರಕೊಂಡಿರುವದು. ವಿಚಾರಿಸಿದರೆ ಇನ್ನೂ ಅನೇಕ ಇಂಥಾ ದೃಷ್ಟಾಂತಗಳು ತೋರಿಬರುವವು. ಸ್ವಾಮಿ, ಇದರ ವಿಚಾರಣೆ ಯಾರದ್ದು? ಎಂಥಾ ವಿಚಾರ? ಈ ಲೇಖನದಲ್ಲಿ ಬೋಳೂರು, ಬೆಂದೂರು ಕೋಡಿಗಡ್ಡೆ ಪ್ರಾಂತ್ಯದ ಹೆಸರುಗಳಿವೆ. ಈ ಪ್ರಾಂತ್ಯದಲ್ಲಿ ಬರುವವನು ಯಾರು? ಇದು ಅಧಿಕಾರಿಗಳ ವಿಚಾರ! ಈ ವಿಚಾರದಿಂದ ಮನಸ್ಸಿಗೆ ತೃಪ್ತಿಯಾಗದಿದ್ದರೆ ಸ್ವದೇಶಾಭಿಮಾನಿಗಳ ಆಫೀಸಿನವರಲ್ಲಿ ಕೇಳುವ ವಿಚಾರ! ಇದೂ ಸರಿಯಾಗದಿದ್ದರೆ 'ಸುಮ್ಮನೆ ಕೂತುಕೊಳ್ಳುವ ವಿಚಾರ! ಇದು ವಿಚಾರವೋ? ವಿಚಾರವು ಈ ರೀತಿಯಾದರೆ ಪಟ್ಟಣದ ಕುಂದು ಕೊರತೆಗಳು ಸರಿಯಾಗುವ ಬಗೆ ಹೇಗೆ? ಇಂಥಾ ಲೇಖನಗಳು ಪತ್ರಿಕೆಯಲ್ಲಿ ಪ್ರಕಟವಾದ ಕೂಡಲೇ ಅಧಿಕಾರಿಗಳು ಪಟ್ಟಣದ ಪ್ರತಿ ಒಂದು ಪ್ರಾಂತ್ಯಕ್ಕೆ ಹೋಗಿ ಇಂಥಾ ಬಾಧಕವಾದ ಹಾಳು ಬಾವಿಗಳು ಇರುವದು ಹೌದೋ? ಯಾವ್ಯಾವ ತೋಟಗಳಲ್ಲಿ ಆವರಣ ಇಲ್ಲದ ಬಾವಿಗಳು ಇವೆ ಎಂಬದನ್ನು ಕಂಡು ಹಿಡಿದು, ಕೂಡಲೇ ಅವನ್ನು ಮುಚ್ಚಿಸುವ ಏರ್ಪಾಡು ಮಾಡಿಸುವದೇ ತಕ್ಕ ವಿಚಾರ. ಅಧಿಕಾರಿಗಳು ಈ ನನ್ನ ಬಿನ್ನಹವನ್ನು ಮನಗೊಳ್ಳುತ್ತ ಮೇಲೆ ಹೆಸರು ಕಾಣಿಸಿದ ೩—೪ ಬಾವಿಗಳನ್ನು ಮಾತ್ರವಲ್ಲ, ಪಟ್ಟಣದ ಸಂದುಗೊಂದುಗಳಲ್ಲಿರುವ ಆವರಣ ಇಲ್ಲದ ಬಾವಿಗಳನ್ನೆಲ್ಲಾ ಮುಚ್ಚಿಸಿ, ಮೂಗ ಪ್ರಾಣಿಗಳೂ ಮಕ್ಕಳು ಮರಿಗಳೂ ಇಂಥಾ ಬಾವಿಗಳಿಗೆ ಆಹುತಿಯಾಗದ ಹಾಗೆ ಮಾಡಬೇಕೆಂದು ಹಾರೈಸುವ,

ಪರಾಮರ್ಶಿ

ನನ್ನದೊಂದು ಸೂಚನೆ.

ಸ್ವಾಮಿ,

ಈಗ ವಿಲಾಯತಿಯಲ್ಲಿ ನಡಿಯುವ ಮಹಾ ಯುದ್ಧವು ಇಡೀ ಮನುಷ್ಯ ಜಾತಿಗೆನೆ ಸಂಭವಿಸಿದ ಕಷ್ಟವೆಂತ ತಿಳಕೊಳ್ಳಬೇಕಾಗಿದೆ. ಫ್ರಾನ್ಸ್, ಬ್ರಿಟನ್, ಜರ್ಮನಿ, ಬೆಲ್ಜಿಯಮ್, ಆಸ್ಟ್ರಿಯಾ, ರುಷ್ಯಾ, ತುರ್ಕಿ ಮೊದಲಾದ ದೇಶಗಳಲ್ಲಿ ಅಂತೂ ಇರುವ ಗೋಳಾಟವು ಅಷ್ಟಿಷ್ಟೆಂತ ಹೇಳುವಂಥಾದ್ದಲ್ಲ.

ಇಂಥಹ ಕಷ್ಟದಲ್ಲಿ ನಮ್ಮನ್ನು ಆಳುವವರಾದ ಬ್ರಿಟನಮೊಡನೆ ನಾವು ಸಹಭಾಗಿಗಳಾಗಿ ನಮ್ಮಿಂದ ಆಗುವಷ್ಟು ಸಹಾಯವನ್ನು ನಾವು ಅವರಿಗೆ ಕೊಡುವದು ನಮ್ಮ ಅಗತ್ಯ ಕರ್ತವ್ಯವಾಗಿರುತ್ತದೆ.

ಯುದ್ಧದ ಸಂಬಂಧ ಏರ್ಪಡಿಸಲ್ಪಟ್ಟ ಮದ್ರಾಸು ಹೊಸ್ಪಿಟಲ್ ನಾವೆಗೋಸ್ಕರ ತಿಂಗಳಿಗೆ ೧॥ ಲಕ್ಷ ರೂಪಾಯಿ ಮೇರೆಗೆ ಖರ್ಚು ಉಂಟೆಂತಲೂ, ಇನ್ನು ಮುಂದೆ ೬ ತಿಂಗಳ ವರೆಗೆ ಇಷ್ಟು ದರದಲ್ಲಿ ಹಣ ಸಹಾಯ ಅಗತ್ಯವಿರಬಹುದೆಂತಲೂ ಜಿಲ್ಲೆ ಜಿಲ್ಲೆಗಳಲ್ಲಿ ಕಮಿಟಿಗಳು ಮಾಡಿ ಅಲ್ಪಸ್ವಲ್ಪ ತಿಂಗಳು ವಂತಿಗೆ ಅನುಕೂಲವಿದ್ದವರಿಂದ ಜಮೆ ಮಾಡಬೇಕೆಂತಲೂ ಯುದ್ಧ ಫಂಡಿನ ಅಗ್ರಸ್ತರಾದ ಚೀಫ್ ಜಸ್ಟಿಸ್ ವಲ್ಲಿಸ ದೊರೆಗಳ ಅನುಜ್ಞೆ ಒಂದಿರುತ್ತದೆ.

ಯುದ್ಧದ ಫಂಡಿನ ಒಗ್ಗೆ ತಿಂಗಳು ವಂತಿಗೆಯನ್ನು ನಮ್ಮ ಯಥಾನುಶಕ್ತಿ ಕೊಡುವದು ಅಗತ್ಯವಾದ ಧರ್ಮಕಾರ್ಯವು. ಈ ಕಾರಣದಿಂದಾಗಲೀ ದವಸಧಾನ್ಯಕ್ಕೆ ಕ್ರಯ ಏರಿದೆ ಎಂಬ ಕಾರಣದಿಂದಾಗಲೀ ಸ್ಥಳೀಯ ಧರ್ಮಸಂಸ್ಥೆಗಳಿಗೆ ಸ್ವಲ್ಪವಾದರೂ ಬಾಧಕ ಬಾರದಂತೆ ನಾವು ವರ್ತಿಸುವದೂ ನಮ್ಮ ಅಗತ್ಯ ಕರ್ತವ್ಯವು.

ಇಂತಹ ಸಂದರ್ಭದಲ್ಲಿ ಬಾಯಸ್ಕೋಪ್, ಸರ್ಕಸ್, ಕುಸ್ತ್ಯಾಟ, ನಾಟಕ ಮೊದಲಾದ, ಮನಸ್ಸನ್ನು ವಿನೋದಪಡಿಸಿ ಬಡ್ಡಿಕೀನ ಜನರಿಂದ ಹಣ ಎಳಕೊಳ್ಳುವ, ಈ ಮೂಲಕ ಊರಲ್ಲಿ ದರಿದ್ರ ಹೆಚ್ಚಿಸುವ ಕೂಟಗಳು ನಮ್ಮ ಪಟ್ಟಣಕ್ಕೆ ಒಂದು ಪ್ರದರ್ಶನಗಳನ್ನು ಕೊಡುವುದು ಕೇವಲ ಅನುಚಿತವು

ಆದುದರಿಂದ ಯುದ್ಧ ಅಂತ್ಯವಾಗುವ ವರೆಗೆ ನಮ್ಮ ಊರಲ್ಲಿ ಇಂತಹ ಪ್ರದರ್ಶನಗಳು ನಡೆಯದಂತೆ ಸರಕಾರದವರು ಅಥವಾ ಮುನಿಸಿಪಾಲಿಟಿಯವರು ಏಕೆ ನಿಬಂಧನೆ ಮಾಡಕೂಡದು? ಮುನ್ಸಿಪಲಿನವರು ಲೈಸನ್ಸು ತಿರಸ್ಕರಿಸಿದರೆ ಅಥವಾ ಲೈಸನ್ಸು ಫೀಸು ನೂರು ರೂಪಾಯಿ ಏರಿಸಿದರೆ ಮಂಗಳೂರು ಪಟ್ಟಣದ ಮತ್ತು ಸಮೀಪದ ಹಳ್ಳಿಗಳ ಜನಪದಕ್ಕೆ ಮಹದುಪಕಾರವಾಗುವದು

ತಾ 2—3—1915 ಪಟ್ಟಣಿಗ

ಮಹಾರಾಜಶ್ರೀ ಸ್ವದೇಶಾಭಿಮಾನಿ ಪತ್ರಸಂಪಾದಕರಿಗೆ

ಸ್ವಾಮಿ,

ಜೆಸ್ಸು ಮದ್ಯಪಾನ ನಿವಾರಕ ಸಂಘದವರು ನಿನ್ನೆ ದಿನ ಅವರ ಎಂಟನೇ ವಾರ್ಷಿಕೋತ್ಸವವನ್ನು ಆಚರಿಸಿದರು. ಸಂಘದವರು ಪ್ರೀತಿಪುರಸ್ಸರ ಕೊಟ್ಟ ಆಮಂತ್ರಣವನ್ನು ಮನ್ನಿಸಿ ಬಹುಮಂದಿ ಹಿಂದುಗಳು ಅತಿಥಿಗಳಾಗಿ ಹೋಗಿದ್ದರು

ಅಗ್ರಾಸನ ಘನ ಡಬ್ಲ್ಯು ಮ್ಯಾಕಾರವರು ಪ್ರಾರ್ಥನೆಯಿಂದ ಕಾರ್ಯ ಪ್ರಾರಂಭಿಸಿ ಪ್ರೀತಿ ಉತ್ಪಾದಿಸುವ ಭಾಷಣವನ್ನು ಮಾಡಿದರು. ಸಂಘದ ಕರಣೀಕರಾದ ರಾಜಶ್ರೀ ಐರಣ್ಣರು ವಾರ್ಷಿಕ ವರದಿಯನ್ನು ಓದಿದರು. ತದನಂತರ ಘನ ಲೂಥಿ ದೊರೆಗಳು ಒಂದು ಸುಮಾರು ಮುಕ್ಕಾಲು ತಾಸಿನ ವರೆಗೆ ಭಾಷಣಮಾಡಿದರು. ಮದ್ಯಪಾನದ ವ್ಯಸನಕ್ಕೆ ಸಂಬಂಧವಿಲ್ಲದ ಅನೇಕ ಸಂಗತಿಗಳನ್ನು ಹೇಳಿ ಕೊನೆಯಲ್ಲಿ ಕ್ರೈಸ್ತಮತವನ್ನು ಬೋಧಿಸಿದರು. ಸರ್ವರೂ ಕ್ರಿಸ್ತನನ್ನು ಒಪ್ಪಬೇಕು. ಕ್ರೈಸ್ತರಿಗೆ ಇಹದಲ್ಲಿ ಸುಖವೂ ಸಂಪತ್ತೂ ಪರದಲ್ಲಿ ನಿತ್ಯಜೀವವೂ ಸಿಕ್ಕುವುದು ಎಂತಲೂ ಕ್ರೈಸ್ತರಲ್ಲದವರಿಗೆ ಮರಣವೂ ಎಂತ ಹೇಳಿದರು. ತಮ್ಮ ಮತವನ್ನು ಹೊಗಳುವಾಗ ಪರಮತದವರನ್ನು ದೂಷಿಸುವದೂ ಪರರಿಗೆ ಮನೋವ್ಯಥೆಯುಂಟು ಮಾಡುವದೂ ಸುಮಾರು ೩೫ ವರ್ಷಗಳಿಂದ ನಮ್ಮ ಊರಲ್ಲಿ ಕಡಿಮೆಯಾಗುತ್ತಾ ಬಂದಿತ್ತು. ಕ್ರೈಸ್ತರು ತಮ್ಮ ಸ್ವಮತವನ್ನು ಹೊಗಳುವುದೂ, ಒಂದುವೇಳೆ ಪರಮತಗಳನ್ನು ದೂಷಿಸುವದೂ ಸಹ ನ್ಯಾಯವೆಂತಲೇ ಹೇಳುವದಾದರೂ ಮದ್ಯಪಾನ ನಿವಾರಕ ಸಂಘದ ವರ್ಷೋತ್ಸಹದ ಸಮಯವು ಕ್ರೈಸ್ತಮತ ಪ್ರಚಾರದ ಕಾರ್ಯ ನಿರ್ವಹಿಸುವುದಕ್ಕೆ ಉಪಯುಕ್ತ ಸಮಯವೋ?

ಮದ್ಯಪಾನ ನಿವಾರಕ ಸಂಘಗಳಿಗೆ ಕೂಡುವ ಹಿಂದುಗಳು ಕುಡಿಯುವದಿಲ್ಲವೆಂತ ದೇವರ ಮುಂದೆ ಪ್ರಮಾಣಮಾಡಿದರೆ ಅವಸಾನದ ವರೆಗೂ ಪ್ರತಿಜ್ಞೆ ಪ್ರಕಾರ ನಡಕೊಳ್ಳುವುದಕ್ಕೆ ಅವರಿಗೆ ಸಾಧ್ಯವುಂಟು. ಕ್ರೈಸ್ತರು ಕುಡಿಯುವದಿಲ್ಲೆಂತ ಪ್ರಮಾಣಮಾಡಿದರೆ ಕೊಮ್ಯೂನಿಯನ್ ವೇಳೆಯಲ್ಲಿ ವೈನನ್ನು ಯೇಸುವಿನ ರಕ್ತವೆಂತ ಗುರುಗಳೇ ಕ್ರೈಸ್ತರಿಗೆ ಕುಡಿಸುವದುಂಟಲ್ಲವೇ? ಯೇಸು ನೀರನ್ನು ವೈನು ಮಾಡಿದನೆಂತ ಹೊಸ ಒಡಂಬಡಿಕೆಯಲ್ಲಿ ಉಂಟಲ್ಲವೇ? ಇಂತಹ ಸ್ಥಿತಿಯಲ್ಲಿ ಸಂಘದ ಕೆಲವರು ಸಂಘದ ಹೆಸರಿನಲ್ಲಿ ಕ್ರೈಸ್ತರಲ್ಲದವರಿಗೆ ಕರೆಸಿ ಪ್ರೀತಿಯಿಂದ ಆತಿಥ್ಯಮಾಡುವಾಗ ಕೆಲವರು ವರ್ಷೋತ್ಸಹದ ಉದ್ದೇಶಕ್ಕೆ ಸಂಬಂಧವಿಲ್ಲದ ಮಾತುಗಳನ್ನಾಡಿ ಅತಿಥಿಗಳ ಮನಸ್ಸನ್ನು ನೋಯಿಸಿದರೆ ಅವರು ನರಕಪಾತ್ರರಾದ ಹಿಂದುಗಳಾದಾಗ್ಯೂ ಒಮ್ಮೆ ವರ್ಷೋತ್ಸಹಕ್ಕೆ ಬಂದವರು ಇನ್ನೊಮ್ಮೆ ಬರುವುದಕ್ಕೆ ಸಂತೋಷಪಡುವರೇ?

ನನ್ನ ಅಭಿಪ್ರಾಯ ತಪ್ಪೆಂತ ಘನ ಲೂಥಿ ದೊರೆಗಳು ತಿಳಕೊಳ್ಳುತ್ತಾರಾದರೆ ಮದ್ಯಪಾನ ವ್ಯಸನಲಂಪಟನಾದ ಒಬ್ಬ ಕ್ರೈಸ್ತನಿಗೆ ನಿತ್ಯಜೀವ ಸಿಕ್ಕುವದೋ ಅಥವಾ ಹಿಂದುಗಳಂತೆ ಅವನಿಗೆ ಮರಣವೇ ಗತಿಯೋ ಎಂಬದನ್ನು ದೊರೆಗಳು ದಯಮಾಡಿ ವಿವರಿಸಿದರೆ ಉಪಕಾರವಾಗುವುದು.

ಇಂತಿ ತಮ್ಮ ವಿಧೇಯ

ತಾ—1—3—1915 ನರಕನಿವಾಸಿ ಹಿಂದು

ಯುದ್ಧ ಸಮಾಚಾರ.

ತಾ. ೨೪ನೇ ಫೆಬ್ರುವರಿ.

ಬೋರ್ಡೆಗೆ ಹೋಗುತ್ತಿದ್ದ ನೋರ್ವೆ ದೇಶದ ಒಂದು ಹಡಗವನ್ನು ಜರ್ಮನರ ಜಲಾಂತರ್ಗಾಮಿ ನಾವೆಯು ಡೋವರ್ ಜಲಸಂಧಿನಲ್ಲಿ ಮುಣಗಿಸಿರುವದು. ನಾವಿಕರು ರಕ್ಷಿಸಲ್ಪಟ್ಟಿರುವರು. ಬುಲೋನಿನಿಂದ ಫ್ಲೂಕ್‌ಸ್ಟನಿಗೆ ಟಪ್ಪಾಲು ಕೊಂಡುಹೋಗುತ್ತಿದ್ದ ಒಂದು ದೋಣಿಗೆ ಜರ್ಮನರ ಟೋರ್ಪೆಡೋ ಹಾಯಿಸಿದರೂ ಅದು ತಪ್ಪಿಸಿಕೊಂಡಿತು.

ಜರ್ಮನರು ರೈಮ್ಸಿನಲ್ಲಿ ಪುನಃ ಗುಂಡು ಹಾರಿಸ ಪ್ರಾರಂಭಿಸಿರುವರು. ಮೊದಲನೇ ಸಾರಿ ೬ ತಾಸುಗಳ ವರೆಗೆ ಗುಂಡು ಹಾರಿಸಿದರು. ನಂತರ ಪುನಃ ೫ ತಾಸುಗಳಲ್ಲಿ ೧೫೦೦ ಗುಂಡು ಹಾರಿಸಿದರು. ಪಟ್ಟಣದ ಎಲ್ಲಾ ಭಾಗಕ್ಕೂ ಗುಂಡುಗಳು ಬಿದ್ದಿರುವವು. ದೇವಾಲಯಕ್ಕೆ ಹೆಚ್ಚಿನ ಹಾನಿಯಾಗಿಯದೆ. ೨೦ ಮನೆಗಳು ಸುಟ್ಟುಹೋದವು. ೨೦ ಪಟ್ಟಣಿಗರು ಹತರಾದರು. ವ್ಯೂಸ್ ಮತ್ತು ಮಿಲನ್‌ಕೋರ್ಟಿನಲ್ಲಿ ಮಿತ್ರರ ತೋಪು ಸೇನಾಂಗವು ಜರ್ಮನರ ಒತ್ತೇರಿಗಳನ್ನು ಧ್ವಂಸ ಮಾಡಿರುವವು.

ತುರ್ಕರಿಗೂ ರುಶ್ಯನರಿಗೂ ಕೌಕಾಸಸಿನಲ್ಲಿ ನಡೆಯುವ ಕದನದಲ್ಲಿ ತುರ್ಕರು ಇಚಕ್ಲಾಸು ನದಿಯನ್ನು ದಾಟಿ ಹಿಂದೆ ಸರಿದಿರುವರು.

ತಾ. ೨೫ನೇ ಫೆಬ್ರುವರಿ.

ಫ್ರೆಂಚರ ಡಿಸ್ಟ್ರೋಯರ್ ನಾವೆಯು ಜರ್ಮನರ ಒಂದು ಜಲಾಂತರ್ಗಾಮಿ ನಾವೆಯನ್ನು ಕಂಡು ಬುಲೋನಿನ ಸಮೀಪ ಅದಕ್ಕೆ ಗುಂಡು ಹಾರಿಸಿರುವದು. ಜಲಾಂತರ್ಗಾಮಿ ಮುಣಗುವ ಮೊದಲು ಕೆಲವು ಗುಂಡುಗಳು ಅದಕ್ಕೆ ತಾಗಿರುವವು. "ಬ್ರೆಂಕ್‌ಸಮ್ ಚೈನ್" ಎಂಬ ಬ್ರಿಟಿಷರ ಒಂದು ಹಡಗವನ್ನು ಜಲಾಂತರ್ಗಾಮಿ ನಾವೆಯು ಮುಣಗಿಸಿರುವದು. ನಾವಿಕರು ನ್ಯೂಕೆಸಲಿನಲ್ಲಿ ಇಳಿದಿರುವರು. "ಓಕ್ಬೆ" ಎಂಬ ಲಂಡನಿನಿಂದ ಕಾರ್ಡಿಫಿಗೆ ಹೋಗುವ ಹಡಗವೂ ಮುಣಗಿಸಲ್ಪಟ್ಟಿರುವದು.

ಅರ್ಗೋನ್ನೆಯಲ್ಲಿ ಫ್ರೆಂಚರಿಗೆ ಜಯವಾಗಿರುವದು. ಇತರ ರಣರಂಗದಲ್ಲಿ ವಿಶೇಷ ಸಂಭವಗಳು ನಡೆಯಲಿಲ್ಲ. ಜರ್ಮನರ ಒಂದು ಜೆಪೆಲಿನ್ ನಾವೆಯು ಕೆಲ್ನೆಯ ಮೇಲೆ ಗುಂಡು ಬಿಸಾಡಿರುವದು. ೫ ಮಂದಿ ಹತರಾದರು. ಇಂಗ್ಲಾಂಡಿನ ಕಡೆಗೆ ಜರ್ಮನರ ೭ ವಾಯುನಾವೆಗಳು ಹಾರುತ್ತಿರುವದನ್ನು ಕಂಡಿರುವರೆಂಬ ವಾರ್ತೆ ಇದೆ.

ಜನವರಿ ತಾ.೩೧ರಿಂದ ಫೆಬ್ರುವರಿ ತಾ.೨೦ರ ವರೆಗೆ ರುಶ್ಯನರು ಕರ್‌ಪಥೇನಿಯದಲ್ಲಿ ೪೮,೩೫೧ ಆಸ್ಟ್ರಿಯನರನ್ನು ಸೆರೆಹಿಡಿದರು. ೪೭ ಫಿರಂಗಿಗಳು ೧೨೮ ಇತರ ಯುದ್ಧ ಸಾಹಿತ್ಯಗಳು ರುಶ್ಯನರ ಕೈಸೇರಿದವು ಎಂತ ಪ್ರಕಟವಾಗಿದೆ.

ಬಕೋವಿನದಲ್ಲಿ ಕಠಿಣ ಕಾಳಗ ನಡೆಯುತ್ತಿದೆ.

ಮೆಸೂರಿಯನ್ ಸರೋವರ ಪ್ರಾಂತ್ಯದಿಂದ ರುಶ್ಯನರನ್ನು ಅಟ್ಟುತ್ತಿರುವ ಕೆಲಸವು ನಿಲಿಸಲ್ಪಟ್ಟಿರುವದೆಂತ ಬರ್ಲಿನಿನಲ್ಲಿ ಪ್ರಕಟವಾಗಿದೆ.

ಪೂರ್ವ ಪ್ರಶ್ಯದಲ್ಲಿ ಜರ್ಮನರಿಂದ ಮುತ್ತಲ್ಪಟ್ಟ ರುಶ್ಯನರ ಸೇನೆಯು ಸೈನಿಕರು ಕಡೆಯ ಗುಂಡು ಇರುವ ತನಕ ಶತ್ರುಗಳೊಡನೆ ಶೂರತನದಿಂದ ಕಾದಾಡಿ ಅವರಲ್ಲಿ ವಿಶೇಷ ನಷ್ಟಪಡಿಸಿದರೆಂತ ತಪ್ಪಿಸಿಕೊಂಡು ಬಂದ ರುಶ್ಯ ಸೇನಿಕರು ಹೇಳುವರು.

ತಾ. ೨೬ನೇ ಫೆಬ್ರುವರಿ.

ಜರ್ಮನ್ ಕರಾವಳಿಯಲ್ಲಿ ಅಮೇರಿಕದ "ಕೆರಿಬ್" ಎಂಬ ನಾವೆಯು ಮುಣುಗಿಹೋದಾಗಿರುವದು. ಇದರಲ್ಲಿ ೪೮೦೦ ಬೇಲ್ ಹತ್ತಿ ಇತ್ತು. ಇದು ಸರಕಾರ ಬ್ಯುರೋದಲ್ಲಿ ೨೩೫,೮೫೦ ಡೊಲ್ಲರಿಗೆ ಇನ್ಶೂರು ಮಾಡಲ್ಪಟ್ಟಿತ್ತು. ಬರ್ರ್ಲಿಗೆ ಈಚೆಗೆ ಒಟ್ಟಿಗೆ ೬೫೯,೦೦೦ ಡೊಲ್ಲರುಗಳು ನಷ್ಟವಾಯಿತು. ಜರ್ಮನರಿಂದ ಮುಣಗಿಸಲ್ಪಟ್ಟ ಅಮೇರಿಕದ "ಎವಲಿನ್" ನಾವೆಯಲ್ಲಿ ಬರ್ಲಿನಿಗೆ ಹೋಗುತ್ತಿದ್ದ ಅಮೇರಿಕ ರಾಜಭಾರಿಯು ಇದ್ದರೆಂತಲೂ ಅವರು ಹತರಾದರೆಂತಲೂ ವಾರ್ತೆ ಇದೆ.

ಲಂಡನಿನ "ಡೆವ್ನ್ ಪೋರ್ಟ್" ನಾವೆಯು ಸ್ಕಾರ್‌ಬರೋದ ಹತ್ತಿರ ಮುಣಗಿಸಲ್ಪಟ್ಟಿರುವದು. ಒಬ್ಬನು ಕಾಣೆಯಾಗಿರುವನು. ಉಳಿದವರು ಇತರ ದೋಣಿಗಳ ಸಹಾಯದಿಂದ ಒದಗಿಕೊಂಡರು.

ಫ್ರಾನ್ಸ ರಣರಂಗದಲ್ಲಿ ಮಿತ್ರರು ದಿನೇ ದಿನೇ ಮುಂದರಿಯುತ್ತಲಿದ್ದಾರೆ.

ಪೂರ್ವ ಪ್ರಶ್ಯದಲ್ಲಿ ರುಶ್ಯನರು ಗೊರ್ಡೆವೊದಿಂದ ಜರ್ಮನರ ಮೇಲ್ಬಾಯುತ್ತಿರುವರು. ಅಗೂಸ್ಟೊವೋದ ದಕ್ಷಿಣ ಪಶ್ಚಿಮದಲ್ಲಿ ರುಶ್ಯನರು ಬೊಬ್ರ್ ನದಿಯನ್ನು ದಾಟಿ ಮುಂದರಿಯುತ್ತಲಿದ್ದಾರೆಂತ ಬರ್ಲಿನಿನಲ್ಲಿ ಪ್ರಕಟವಾಗಿದೆ. ಒಸೋವಿಸೆಸ್ ಎಂಬಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಎವಮೋಸವನ್ನು ರುಶ್ಯನರಿಂದ ಹಿಂದ ಪಡಕೊಳ್ಳಲು ಜರ್ಮನರು ಪುನಃ ಮೇಲ್ಬಾಯಿದಿರುವರು ಎಂತ ಪೆಟ್ರೋಗ್ರೇಡಿನಲ್ಲಿ ಪ್ರಕಟವಾಗಿದೆ.

ಲೊವಿಚ್ ಎಂಬಲ್ಲಿ ಜರ್ಮನ ಸೇನಿಕರ ಅಗ್ಗಾಡಿಯು ಕಂಬಿ ತಪ್ಪಿ ಬಿದ್ದು ಅನೇಕ ಸೈನಿಕರು ಹತರಾದರು. ಇದರಿಂದ ಜರ್ಮನರು ಸಿಟ್ಟುಗೊಂಡು ಆ ಗ್ರಾಮದ ೩೦೦ ಬೇಸಾಯಗಾರರನ್ನು ಕೊಂದರು. ಇನ್ನು ಅನೇಕರಿಗೆ ಭಯಂಕರ ರೀತಿಯಲ್ಲಿ ಹಿಂಸೆ ಪಡಿಸಿದರು.

ದಕ್ಷಿಣ ಅಫ್ರೀಕದ ಯೂನ್ಯನ್ ಸೇನೆಯು ಜರ್ಮನರ ಗಾರಿಸ್ ಎಂಬ ಪಟ್ಟಣವನ್ನು ಸ್ವಾಧೀನ ಮಾಡಿಕೊಂಡಿರುವದು.

ತಾ. ೧ನೇ ಮಾರ್ಚಿ.

ಮಿತ್ರರ ನೌಕಾವಳಿಯು ಡರ್ಡನೆಲ್ಸಿಗೆ ಗುಂಡು ಹಾರಿಸಿ ನಾಲ್ಕು ಕೋಟೆಗಳನ್ನು ಪೂರ್ಣವಾಗಿ ಹಾಳು ಮಾಡಿರುವವು. ಹಾಳು ಮಾಡಲ್ಪಟ್ಟ ಕೋಟೆಗಳಲ್ಲಿ ಒಂದು ಪೂರಾ ಜರ್ಮನರ ಅಧೀನದಲ್ಲಿತ್ತು. ಈ ಜಲಸಂಧಿನಲ್ಲಿ ಹಾಕಿದ ಸಿಡಿಮದ್ದಿನ ಗಣಿಗಳನ್ನು ಹುಡುಕಿ ತೆಗೆಯುವ ಕೆಲಸ ನಡೆಯುತ್ತಿದೆ ಎಂತ ಪಾರಿಸಿನಿಂದ ವಾರ್ತೆ ಬಂದದೆ. ನಾಲ್ಕು ಕೋಟೆಗಳು ಹಾಳಾದ ನಂತರ ಮಿತ್ರರ ಕ್ರೂಜರ್ ನಾವೆಯು ಡರ್ಡನೆಲ್ಸಿನ ಒಳಹೋಗಿ ಒಂದು ತಾಸು ಒಳಕೋಟೆಗೆ ಗುಂಡು ಹಾರಿಸಿ ಸುರಕ್ಷಿತವಾಗಿ ಹಿಂತಿರಳಿರುವದು. ೪೦ ನಾವೆಗಳು ಜಲಸಂಧಿಗೆ ಮುಂದರಿದ್ದು ತುರ್ಕರ ಹಂದರಕ್ಕೆ ಗುಂಡು ಹಾರಿಸುತ್ತ [illegible]ಗಳು ಇಂಟಿಪೆ ಕೋಟೆಯನ್ನು ಹಾಳು ಬಿಟ್ಟು ದಾ[illegible] ಕೋಟೆಗೆ ತಲಪಿರುವವು. ಬ್ರಿಟಿಷ ನೌಕಾವಳಿಯು ೧೧ ಮೈಲು ದೂರದಿಂದ ಈ ಕೆಲಸವನ್ನು ಮಾಡುತ್ತಿವೆಂತ ಎಥೆನ್ಸಿನಲ್ಲಿ ಪ್ರಕಟವಾಗಿದೆ.

ಡರ್ಡನೆಲ್ಸಿನ ಬಾಗಿಲಲ್ಲಿದ್ದ ತುರ್ಕರ ಕೋಟೆಗಳನ್ನು ಬ್ರಿಟಿಷರ ಮತ್ತು ಫ್ರೆಂಚರ ಯುದ್ಧ ನಾವೆಗಳು ಗುಂಡು ಹಾರಿಸಿ ಕೆಡವಿರುವದು. ತುರ್ಕರ ಗುಂಡು ತಾಗಿ [illegible]ಮೊನ್" ಎಂಬ ಮಿತ್ರರ ನಾವೆಗೆ ತಗಲಿ ೩ ಮಂದಿ ಹತರಾಗಿರುವರು ೫ ಮಂದಿ ಗಾಯ ಒಡೆದಿರುವರು.

ಫೆಬ್ರುವರಿ ತಾ. ೨೬ರಲ್ಲು ಜಲಸಂಧಿನಲ್ಲಿ ೪ ಮೈಲುಗಳ ವರೆಗೆ ಸಿಡಿಮದ್ದು ಗಣಿಗಳು ತೆಗೆಯೋಣಾಗಿರುವವು. ಜಲಸಂಧಿನ ಒಳಗಿಂದ ಗುಂಡು ಹಾರಿಸಿದ ನಂತರ ಶತ್ರುಗಳು ಕೋಟೆಗಳಿಂದ ಹಿಂದೆ ಸರಿದಿರುವರು. ಬ್ರಿಟಿಷರಲ್ಲಿ ಒಬ್ಬನು ಹತನಾಗಿರುವನು. ೩ ಮಂದಿ ಗಾಯ ಒಡೆದಿರುವರು ಎಂತ ಪ್ರಕಟವಾಗಿದೆ.

ಮೊಂಟೆನಿಗ್ರೊಯಕ್ಕೆ ಆಹಾರ ಕೊಂಡುಹೋಗುತ್ತಿದ್ದ ನಾವೆಯೊಡನೆ ಇದ್ದ ಫ್ರೆಂಚರ "ಡೇಗು" ಎಂಬ ಡಿಸ್ಟ್ರೊಯರ್ ನಾವೆಯು ಅಂಟಿವಾರಿಯ ಹತ್ತಿರ ಆಸ್ಟ್ರಿಯನರ ಸಿಡಿಮದ್ದು ಗಣಿಗೆ ತಾಗಿ ಮುಣಗಿ ಹೋಯಿತು. ೩೮ ನಾವಿಕರು ರಕ್ಷಿಸಲ್ಪಟ್ಟರು. ಆದರೆ ಆಹಾರ ಸಾಮಾಗ್ರಿಗಳ ನಾವೆಯು ಸುರಕ್ಷಿತವಾಗಿರುವದು. ಸ್ವೀಡನ್ ದೇಶದ ಒಂದು ನಾವೆಗೆ ಟೊರ್ಪೆಡೋ ನಾವೆಯ ಸಿಡಿಮದ್ದಿನ ಗಣಿ ತಗಲಿ ಹಾನಿಯಾಗಿರುವದು.

ಜರ್ಮನ್ ಪೂರ್ವ ಆಫ್ರೀಕ ಕರಾವಳಿಯನ್ನು ಫೆಬ್ರುವರಿ ತಾ ೨೭ರಿಂದ ಮುಚ್ಚಲು ಬ್ರಿಟಿಷ ಸರಕಾರದವರು ನಿರ್ಣಯಿಸಿರುವರು.

ಲಾಬಾಸ್ಸೆ, ಚೆಂಪಾಗ್ನೆ, ಪರ್ತೆಸ್ ಮೊದಲಾದ ಸ್ಥಳಗಳಲ್ಲಿ ಮಿತ್ರರಿಗೆ ಜಯವಾಗಿರುವದು. ಅನೇಕ ಕಂದಕಗಳು ಮಿತ್ರರ ಕೈಸೇರಿರುವವು. ಚೆಂಪಾಗ್ನೆಯಲ್ಲಿ ಮಿತ್ರರಿಗೆ ಅತಿ ವಿಶೇಷವಾದ ನೆಲೆಯು ದೊರಕಿರುವದು.

ಗಾಯ ಒಡೆದ ೩೦೦ ಭಾರತೀಯ ಸೇನಿಕರು ಲೇಡಿ ಹಾರ್ಡಿಂಜ ಆಸ್ಪತ್ರಿಯಲ್ಲಿ ಶೈತ್ಯೋಪಚಾರ ಹೊಂದುತ್ತಿರುವರು. ೧೦ ರಿಟಾಯರ್ಡ್ ಇಂಡಿಯನ್ ಮೆಡಿಕಲ್ ಆಫೀಸರರು ಇವರ ಮೇಲಾಪ್ತೆಕೆ ನಡಿಸುತ್ತಲಿದ್ದಾರೆ. ಮಿಂಟೋ ಪ್ರಭುಗಳವರ ಪತ್ನಿ, ಸರ್ ಕ್ಲೌಡೆ ಮೆಕ್‌ಡೊನಾಲ್ಡ್ ಮೊದಲಾದವರು ಈ ಆಸ್ಪತ್ರಿಯನ್ನು ಸಂದರ್ಶಿಸಿ ಬಂದಿರುವರು.

ಜರ್ಮನರ ಸಮುದ್ರ ವಾಯುನಾವೆಯ ಇಬ್ಬರು ನಾವಿಕರು ಉತ್ತರ ಸಮುದ್ರದಲ್ಲಿ ಹಿಡಿಯಲ್ಪಟ್ಟಿದ್ದಾರೆ. ಅವರು ಆದಿತ್ಯವಾರ ಒಸ್ಟೆಂಡಿನಿಂದ ಹೊರಟಿದ್ದರು. ಆದರೆ ಮರುದಿನ ಬೆಳಗ್ಗೆ ಯಂತ್ರವು ಮುರಿದುಹೋದದ್ದರಿಂದ ಅವರಿಗೆ ಈ ಅವಸ್ಥೆಯುಂಟಾಯಿತು. ಲುನವಿಲ್ಲೆಯಲ್ಲಿ ಮತ್ತು ಲಾರ್ಬಿಟ್ಜನಿನಲ್ಲಿ ಫ್ರೆಂಚರು ಜರ್ಮನರ ಎರಡು ನಾವೆಗಳನ್ನು ಕೆಳಕ್ಕೊಬ್ಬಿರುವರು. ಪೋಲದಿಂದ ಹಾರಿದ ಜರ್ಮನರ ಎರಡು ಜೆಪೆಲಿನ್ ನಾವೆಯು ಅಡ್ರಿಯಾಟಿಕಿನಲ್ಲಿ ಬಿರುಗಾಳಿಗೆ ಸಿಕ್ಕಿ ನಾವಿಕರು ಮುಣಗಿ ಹೋದರೆಂತ ರೋಮ ನಗರದಲ್ಲಿ ಪ್ರಕಟವಾಗಿದೆ.

ನಿಮೆನ್, ಬೊಬ್ರ್, ನರ್ಯ್ಯೂ, ವಿಸ್ಟುಲ ರಣರಂಗದ ಕದನಗಳು ದೊಡ್ಡ ಸಮರವಾಗಿ ಪರಿಣಮಿಸುರುವದು. ಜರ್ಮನರ ಬೆಂಬಲ ಸೇನೆಯು ಬಹಳವಾಗಿ ಬರುತ್ತಿರುವದು. ಪ್ರಾಶ್ನಿಶ್ಕಿನಲ್ಲಿ ಬಹು ಶೂರತನದ ಕಾಳಗವು ನಡದಿರುವದು. ರುಶ್ಯನರು ಪ್ರಾಸ್ನಿಶನ್ನು ಪುನಃ ಹಿಂದಕ್ಕೆ ಪಡಕೊಂಡಿರುವರು. ರುಶ್ಯನ ಜನರಲ್ ಬ್ರುಸಿಲೊವರ ಸೇನೆಯು ಯುದ್ಧ ಪ್ರಾರಂಭವಾದಂದಿನಿಂದ ಶತ್ರುಗಳ ೧೪೦ [illegible] ಅಧಿಕಾರಿಗಳನ್ನು ೧೭,೦೦೦ [illegible] ಹಿಡಿದಿರುವರು.

ಜರ್ಮನರು ಒಸ್‌ವಿಸೆಸ್ ಕೋಟೆಗೆ ಗುಂಡು ಹಾರಿಸಲು ಪ್ರಾರಂಭಿಸಿರುವರು. ನಿಮೆನ್ ನದಿಯನ್ನು ದಾಟಿದ ಜರ್ಮನರು ಹಿಂದಕ್ಕೆ ಅಟ್ಟಲ್ಪಟ್ಟಿರುವರು. ಗೊಡೋರ್ನೆಕ್ಕೆ ಉತ್ತರದಲ್ಲಿ ಕಾಳಗವು ನಡಿಯುತ್ತಿದೆ. ವಿಸ್ಚುಲದ ಎಡಪಾರ್ಶ್ವದಲ್ಲಿ ಮೇಲ್ಬಾಯಿದ ಜರ್ಮನರು ಹಿಮ್ಮೆಟ್ಟಿರುವರು.

ತುರ್ಕಿ ಮಂತ್ರಿ ಟಲತ್ ಬೇರವರು ಕನಸ್ತಂತಿನೋಪಲ್ ಬೀದಿಯಲ್ಲಿ ಹೋಗುತ್ತಿರುವಾಗ ಯಾರೋ ಒಬ್ಬನು ಇವರಿಗೆ ಗುಂಡು ಹೊಡೆದನು, ಅದು ಅವರಿಗೆ ತಪ್ಪಿ ಇವರ ಸಂಗಡವಿದ್ದ ಒಬ್ಬ ಪೋಲಿಸಿನವನಿಗೆ ತಗಲಿರುವದು. ಪ್ರಧಾನ ಮಂತ್ರಿಯವರ ಮೇಲೆ ಬೀಳಲಿಕ್ಕಿದ್ದ ಒಬ್ಬನು ಅವರ ಮನೆಯಲ್ಲಿ ಹಿಡಿಯಲ್ಪಟ್ಟಿರುವನು ಎಂಬ ವಾರ್ತೆಯು ಇದೆ.

~~~~~

ಉತ್ತರ ಹಿಂದೂಸ್ಥಾನ

~~~~~

ಝೀಲಮ್‌ಗೆ ೧೨ ಮೈಲು ದೂರದಲ್ಲಿರುವ ಪಿಂಡೋರಿ ಎಂಬ ಗ್ರಾಮದಲ್ಲಿ ದರೋಡೆಕಾರರು ಒಬ್ಬ ಸಾಹುಕಾರನ ಮನೆಗೆ ನುಗ್ಗಿ ಕೆಲವು ಸಾವಿರ ರೂಪಾಯಿಗಳ ಕ್ರಯ ಬಾಳುವ ಚಿನ್ನಾಭರಣಗಳನ್ನು ಕೊಂಡುಹೋಗಿರುವರು. ಅನಂತರ ದರೋಡೆಕಾರರು ಒಬ್ಬ ಹಣ ಸಾಲಕೊಡುವವನ ಮನೆಗೆ ಸಾಯಂಕಾಲ ಬಂದು ದನಗಳ ಹಟ್ಟಿಯಲ್ಲಿ ಅಡಗಿ ಕುಳಿತು ರಾತ್ರಿಗೆ ಮನೆ ನುಗ್ಗಿ ಸುಲಿಗೆ ಮಾಡಿ ಹಿಂದೆರಳುವಾಗ ಮನೆ ಯಜಮಾನನ ಅತ್ತೆಯು "ನಿಮ್ಮೆಲ್ಲರ ಗುರುತು ನನಗೆ ತಿಳಿಯಿತು" ಎಂದು ಕೂಗಿದಳು. ಇದನ್ನು ಕೇಳುತ್ತಲೇ ದರೋಡೆಕಾರರು ಹಿಂತಿರುಗಿ ಆ ಹೆಂಗಸಿಗೆ ಚೆನ್ನಾಗಿ ಹೊಡೆದರು. ಹೆಂಗಸು ಸತ್ತು ಹೋದಳು.

~~~~~

ಗತಿಸಿದ ಮಾನ್ಯ ಗೋಖಲೆಯವರ ಬೂದಿಯನ್ನು ಅಲ್ಲಹಾಬಾದಿಗೆ ಕೊಂಡುಹೋಗಿರುವರು. ಈ ಬೂದಿ ಸಹಿತ ನದಿ ವರೆಗೆ ಮೆರವಣಿಗೆ ಹೋಗಬೇಕೆಂಬ ಆಲೋಚನೆಯು ನಡದಿರುವದು.

~~~~~

ಹಿಂದೆ ಕಳೆದ ತಾ ೨೩ರಲ್ಲು ಡಿಲ್ಲಿಯಲ್ಲಿ ಶ್ರೇಷ್ಠ ನ್ಯಾಯ ವಿಧಾಯಕ ಸಭೆಯು ಕೂಡಿತು. ಮಾನ್ಯಗೋಖಲೆಯವರ ಮರಣದಿಂದುಂಟಾದ ಶೋಕದಿಂದ ಸಭಿಕರೆಲ್ಲರೂ ಮಗ್ನರಾಗಿ ಹೋಗಿದ್ದರು. ಸಭಾ ಮೆಂಬರರೆಲ್ಲರೂ ಹಾಜರಿದ್ದರಲ್ಲದೆ ಗೋಖಲೆಯವರ ಮರಣದಿಂದುಂಟಾದ ಶೋಕವನ್ನು ತೋರ್ಪಡಿಸುವ ಬಗ್ಗೆ ಇನ್ನು ಅನೇಕ ಮಹನೀಯರು ಸಭೆಗೆ ಹಾಜರಿದ್ದರು. ವೈಸರಾಯ ಪ್ರಭುಗಳವರು ಗೋಖಲೆಯವರ ಜೀವಚರಿತ್ರೆಯ ಸಾರಾಂಶವನ್ನು ಸಭಿಕರಿಗೆ ತಿಳಿಯ ಹೇಳಿ ಮಾನ್ಯಗೋಖಲೆಯರಲ್ಲಿದ್ದ ವಿಶೇಷ ಗುಣಗಳನ್ನು ಶ್ಲಾಘಿಸಿದರು. ಅನಂತರ ಸರ್ ಸಿ ಎಮ್ ಚಿಟ್ನಿಸರವರು ವೈಸರಾಯರ ಮಾತುಗಳನ್ನು ಅನುಮೋದಿಸಿ, ಇವರ ಮರಣದಿಂದ ದೇಶಕ್ಕೂ ಕೌನ್ಸಿಲಿಗೂ ಉಂಟಾದ ನಷ್ಟವನ್ನು ಪ್ರಶಂಸಿಸಿದರು. ಕಡೆಗೆ ಇವರ ಮರಣದ ಶೋಕಾರ್ಥವನ್ನು ಸೂಚಿಸುವ ಬಗ್ಗೆ ಕೌನ್ಸಿಲ ಸಭೆಯು ಒಂದು ದಿನ ಹಿಂದಕ್ಕೆ ಇಡೋಣಾಯಿತು.

ಮಾನ್ಯಗೋಖಲೆಯವರನ್ನು ಕುರಿತು ವೈಸರಾಯ ಪ್ರಭುಗಳವರು ಹೇಳಿದ ಮಾತುಗಳಲ್ಲಿ ಮುಖ್ಯವಾದವುಗಳು ಇವೇ — ಮಾನ್ಯ ಗೋಖಲೆಯವರು ಬ್ರಿಟಿಷ ಇಂಡಿಯ ಆಳ್ಕೆಯನ್ನು ರಾಜನಿಷ್ಠೆಯಿಂದ ಆದರಿಸುವವರಾಗಿದ್ದರು. ಆದರೆ ಅನೇಕಾವರ್ತಿ ಸರಕಾರದವರ ಆಡಳಿತೆಯಲ್ಲಿದ್ದ ಕುಂದುಕೊರತೆಗಳನ್ನು ಏನೊಂದೂ ಭಯವಿಲ್ಲದೆ ನ್ಯಾಯ ಹಿಡಿದು ವಿಮರ್ಶಿಸುವವರಾಗಿದ್ದರು. ರಾಜದ ಆಡಳಿತಾ ಖರ್ಚು ಮತ್ತು ವಿದ್ಯಾಭ್ಯಾಸಸಂಬಂಧವಾಗಿ ಇವರ ವಿಮರ್ಶನೆಯು ಯಾವಾಗಲೂ ವಿಶೇಷ ಮಹತ್ವವುಳ್ಳದ್ದಾಗಿತ್ತು. ಇವರ ವಿರೋಧ ಪಕ್ಷದವರಿಗೆ ಅನೇಕಾವರ್ತಿ ಇವರ ತರ್ಕಕ್ಕೆ ಎದುರು ನಿಲ್ಲಲು ಅಸಾಧ್ಯವಾಗುತ್ತಿತ್ತು. ಮಿ। ಗೋಖಲೆಯವರು ತನ್ನ ಕೌನ್ಸಿಲಿನ ಮುಖ್ಯ ಮೆಂಬರರು ಮಾತ್ರವೇ ಅಲ್ಲ; ತನ್ನ ಸ್ನೇಹಿತರೂ ಆಗಿದ್ದರು. ದಕ್ಷಿಣ ಆಫ್ರೀಕದ ಭಾರತೀಯರ ಸಂಬಂಧವಾದ ವಿಷಯದಲ್ಲಿ ಇವರು ತನಗೆ ಕೊಟ್ಟ ಆಲೋಚನೆಯೂ ಸಹಾಯವೂ ಬಹು ಮಹತ್ವವುಳ್ಳದ್ದಾಗಿದೆ. ಆರು ತಿಂಗಳ ಹಿಂದೆ ಅವರಿಗೆ ಕೆ. ಸಿ. ಐ. ಇ. ಎಂಬ ಬಹುಮಾನವನ್ನು ಕೊಡಲು ಚಕ್ರವರ್ತಿಯವರಿಗೆ ಶಿಫಾರಸ್ ಮಾಡಿದ್ದೆನು. ಆದರೆ ಗೋಖಲೆಯವರು ತಾವು ಇದ್ದಹಾಗೆಯೇ ಉಳಿಯುವೆನು ಎಂದು ಹೇಳಿ ನಿರಾಕರಿಸಿದರು ಎಂಬಿತ್ಯಾದಿ ಮಾತುಗಳಿಂದ ಅವರ ಗುಣಶ್ಲಾಘನೆಯನ್ನು ಮಾಡಿದರು.

~~~~~

ಮುಂಬಾಯಿಯ ವಿದ್ಯಾರ್ಥಿ ಭ್ರಾತೃಸಂಘದವರು ಈ ಸಂಘದ ಸ್ಥಾಪಕರಾದ ಪ್ರೊಫೆಸರ್ ಎನ್ ಜಿ ವೆಲಿನ್‌ಕಾರರವರ ಭಾವಚಿತ್ರವನ್ನು ಪ್ರಕಟಿಸಿದರು.

~~~~~

ಬೆಲಿಗಟ್ಟ ಸ್ಟೇಷನಲ್ಲಿ ಗಾಡಿಯನ್ನು ನಿಲ್ಲಿಸಿ ಹಣ ಸುಲಿಗೆ ಮಾಡಿದ ದರೋಡೆಕಾರರ ಮುಂದಾಳು ಬಹು ಎತ್ತರವಾದ ಒಬ್ಬ ಬಂಗಾಳಿಯವನಾಗಿರುತ್ತಾನೆ. ಇವನು ರಿವಾಲ್ವರ್ ಹಿಡಕೊಂಡು ಬಾಬು ಲಲಿತ ಮೋಹನ್ ಮತ್ತು ವೃಂದಾವನಚಂದ್ರಶಾಹರವರನ್ನು ಕೊಲ್ಲುತ್ತೇನೆಂದು ಹೆದರಿಸಿರುವನೆಂತ ತಿಳಿದು ಬಂದದೆ. ಈ ಗುಂಪಿನ ಉಳಿದ ದರೋಡೆಕಾರರು ಸುತ್ತಿಗೆ ಇತ್ಯಾದಿ ಸಾಹಿತ್ಯಗಳನ್ನು ಹಿಡಕೊಂಡಿದ್ದರು. ಇವರು ಒಂದು ಮನೆಗೆ ನುಗ್ಗಿ ಸುಲಿಗೆಮಾಡಿ ಹೋದರು. ಗಾಡಿ ಹೊಡೆಯುತ್ತಿದ್ದವನ ಶವವು ಈ ಮನೆಗೆ ಸುಮಾರು ೧೦೦೦ ಗಜ ದೂರದಲ್ಲಿ ಕಾಣಸಿಕ್ಕಿರುವದು. ಇವನ ಮೈಮೇಲೆ ಗುಂಡಿನ ಗಾಯಗಳಿದ್ದವು. ಕಳವು ಮಾಡಿದ ಹಣವು ಸುಮಾರು ೨೦,೦೦೦ ರೂಪಾಯಿಯಾಗಿರುವದು. ಘಾಯ ಒಡೆದ ಖಜಾನ್ಚಿಯು ಆಸ್ಪತ್ರೆಯಲ್ಲಿ ಶೈತ್ಯೋಪಚಾರ ಹೊಂದುತ್ತಿರುವನು. ಈ ದರೋಡೆಯಿಂದ ಬೆಲ್ಲಿಗಟ್ಟದಲ್ಲೆಲ್ಲಾ ವಿಶೇಷ ಭಯಉಂಟಾಗಿರುವದು.

~~~~~

ಮೈಸೂರಿನ ಯುವರಾಜರವರು ಮುಂಬಾಯಿಗೆ ಹೋಗಿ ಲೇಡಿ ಹಾರ್ಡಿಂಜ ಯುದ್ಧದ ಆಸ್ಪತ್ರೆಯನ್ನು ಲೇಡಿ ವಿಲ್ಲಿಂಗ್ಡನರವರೊಡನೆ ಸಂದರ್ಶಿಸಿದರು.

~~~~~

ಕುಷ್ಠರೋಗಿಗಳ ಬಗ್ಗೆ ಮುಂಬಾಯಿ ಸಂಸ್ಥಾನದ ಆಯಾ ಮುಖ್ಯ ಸ್ಥಳಗಳಲ್ಲಿ ಆಸ್ಪತ್ರೆಗಳನ್ನು ಕಟ್ಟಿಸುವ ಮತ್ತು ಕೆಲವು ಆಸ್ಪತ್ರೆಗಳಲ್ಲಿ ಈ ಬಗ್ಗೆ ಪ್ರತ್ಯೇಕ ವಾರ್ಡುಗಳನ್ನು ಕಟ್ಟಿಸಬೇಕೆಂಬುವ ಸರ್ಜನ್ ಜನರಲರವರ ಅಭಿಪ್ರಾಯಕ್ಕೆ ಮುಂಬಾಯಿ ಸರಕಾರದವರು ಒಪ್ಪಿಗೆ ಕೊಟ್ಟಿರುವರು.

~~~~~

ಸುಕ್ಕೂರಿನ ಅಂಗಡಿ ಸಾಲಿಗೆ ಬೆಂಕಿಬಿದ್ದು ಸುಮಾರು ೧೫ ಅಂಗಡಿಗಳು ಸುಟ್ಟು ಬಸ್ಮವಾದವು.

~~~~~

ಪೋಲೀಸಿನವರ ಲಾಹೋರಿನ ಕೆಲವು ಮನೆಗಳನ್ನು ಜಪ್ತಿ ಮಾಡಿದ್ದಲ್ಲಿ ಬೊಂಬು ಇತ್ಯಾದಿಗಳು ದೊರಕಿರುವವು.

~~~~~

ಇಂಡಿಯಾ ಕೌನ್ಸಿಲಿನ ಮೆಂಬರರಾಗಿ ನೇಮಿಸಲ್ಪಟ್ಟ ಮಾನ್ಯ ಸರ್ದಾರ್ ದಲಿತಸಿಂಘರವರು ಎಪ್ರೀಲ್ ತಿಂಗಳ ಅಂತ್ಯವಾರದಲ್ಲಿ ಸೀಮೆಗೆ ತೆರಳುವರೆಂತ ತಿಳಿದು ಬರುತ್ತದೆ. ಇವರೊಡನೆ ಇವರ ಹಿರೇಮಗನೂ ಸೀಮೆಗೆ ಹೋಗಿರುವರು. ಸರ್ದಾರ್ ದಲ್ಜಿತ ಸಿಂಘರ ತಂದೆ ಕಪುರ್ತಾಲ ಮಹಾರಾಜರವರ ದೊಡ್ಡಪ್ಪನಾಗಿರುವರು. ಸರ್ದಾರ್ ದಲ್ಜಿತ ಸಿಂಘರವರ ರಾಜಭಕ್ತಿಯು ಎಲ್ಲರೂ ತಿಳಿದ ವಿಷಯವಾಗಿದೆ. ಇವರು ಬ್ರಿಟಿಷ ಸರಕಾರದ ಕಡೆಗೆ ವಿಶೇಷ ರಾಜಭಕ್ತಿಯುವರಾಗಿರುತ್ತಾರೆ.

~~~~~

ಕಲ್ಕತ್ತೆಯ ಜೊರಬಾಗನ್ ಡಿಸ್ಟ್ರಿಕ್ಟನಲ್ಲಿ ತಾ. ೨೪ನೇ ಬೆಳಗ್ಗೆ ಒಂದು ಘೋರ ಕೃತ್ಯವು ನಡೆದಿರುವದು. ಬಂಗಾಳಿ ದರ್ಜಿಗಳಿಗೆ ಕೆಲಸಗಳನ್ನು ಒದಗಿಸಿ ಕೊಡುವ ಏಜಂಟರಾಗಿದ್ದ ನರೇಂದ್ರಪ್ರಸಾದ ಹಾಲ್ದರ್ ಎಂಬವನಿಗೆ ಯಾರೋ ಗುಂಡು ಹೊಡೆದು ಘಾಯಪಡಿಸಿದರು. ದತ್ತ ಎಂಬವನನ್ನು ಹುಡುಕಿಕೊಂಡು ಅವನ ಮನೆಗೆ ಹೋಗಲು ಆ ಮನೆಯೊಳಗೆ ತನ್ನನ್ನು ಅರಿತವನಾದ ಒಬ್ಬ ಮನುಷ್ಯನು ಇದ್ದನು. ಅವನು ತನ್ನನ್ನು ನೋಡುತ್ತಲೇ ರಿವಾಲ್ವರ್ ತೆಗೆದು ಹಾರಿಸಿ, ಓಡಿಹೋದನು ಎಂಬದಾಗಿ ಘಾಯ ಒಡೆದ ಹಾಲ್ದರನು ಹೇಳಿರುವನು. ಘಾತುಕನು ಹಾಲ್ದರನನ್ನು ಪೊಲಿಸ ಆಫೀಸರನೆಂದು ಭಾವಿಸಿ ಗುಂಡು ಹಾರಿಸಿದ್ದಾಗಿದೆಂತ ಪೋಲಿಸ ಇಲಾಖೆಯವರ ಊಹೆನೆಯಾಗಿರುವದು. ಈ ಸಂಬಂಧ ಸರ್ ಫ್ರೆಡರಿಕ್ ಹಲಿಡೇರವರು ಈ ರೀತಿ ಪ್ರಕಟಿಸಿರುವರು:— ಘಾನಿ ಭೂಷಣರಾಯ ಎಂಬ ಹೆಸರಿನ ಒಬ್ಬ ಯುವಕನು ತಾ. ೧೯ರಲ್ಲು ಪಾತುರಿಗಾಟದಲ್ಲಿಯ ಒಬ್ಬ ಏಜಂಟನ ಮೂಲಕ ಒಂದು ಮನೆಯು ತನ್ನ ಕುಟುಂಬಕ್ಕೆ ಬಾಡಿಗೆಗೆ ಬೇಕೆಂದು ಹೇಳಿ ನಂಬ್ರ ೭೩ನೇ ಮನೆಯನ್ನು ಬಾಡಿಗೆಗೆ ಮಾಡಿಕೊಂಡನು. ತಾ. ೨೪ನೇ ಬೆಳಗ್ಗೆ ನರೊಡಪ್ರಸಾದ ಹಾಲ್ದರನು ಪಾತುರಿಗಾಟ ದಾರಿಗೆ ಬಂದು ನಾಗೆನ್ ದತ್ತ ಎಂಬ ತನ್ನ ಕೆಲಸದವನನ್ನು ಹುಡುಕುತ್ತಿದ್ದನು. ಈ ಹೆಸರು ಆ ದಾರಿಯಲ್ಲಿ ವಾಸಿಸುವವರಿಗೆ ಗೊತ್ತಿಲ್ಲದ್ದರಿಂದ ಹೊಸತಾಗಿ ಬಂದು ನಂಬ್ರ ೭೩ನೇ ಮನೆಯಲ್ಲಿ ಉಳಕೊಂಡವರನ್ನು ಆ ದಾರಿಯಲ್ಲಿದ್ದವರು ತೋರಿಸಿದರು. ಹಾಲ್ದರನು ಸಣ್ಣ ಓಣಿಯಿಂದ ಆ ಮನೆಗೆ ಹೋಗಿ ನಾಗೆನ್ ದತ್ತನನ್ನು ಕರೆದನು. ಆದರೆ ಉತ್ತರ ಸಿಕ್ಕದ್ದರಿಂದ ಮಾಳಿಗೆಗೆ ಹತ್ತಿ ಒಂದು ಕೋಣೆಯೊಳಗೆ ಹೋಗಲು ೭—೮ ಯುವಕರು ಕುಳಿತ್ತಿದ್ದರು. ಆ ಸ್ಥಳದಲ್ಲಿ ಜೋತಿಂದ್ರನಾಥ ಮುಖರ್ಜಿ ಎಂಬವನ ಗುರುತು ಹಾಲ್ದರನಿಗೆ ಇದ್ದದರಿಂದ "ಯಾಕೆ ಜೋತಿನ್, ನೀನು ಇಲ್ಲಿ ಏನುಮಾಡುತ್ತೀ" ಎಂದು ಕೇಳಿದನು. ಕೂಡಲೇ ಹಾಲ್ದರನನ್ನು ೨—೩ ಯುವಕರು ಹಿಡಿದರು. ಜೋತಿಂದ್ರನಾಥ ಮುಖರ್ಜಿಯು ರಿವಾಲ್ವರ್ ಹಾರಿಸಿದನು. ಹಾಲ್ದರನು ಕೂಡಲೇ ಕೆಳಬಿದ್ದನು. ಗುಂಡಿನ ಶಬ್ದವಾಗುತ್ತಲೇ ೫—೬ ಮಂದಿ ಯುವಕರು ಮನೆಯ ಹೊರಗೆ ಬಂದು ಬೈಸಿಕಲಿನಲ್ಲಿ ಓಡಿಹೋದರೆಂತ ನೆರೆಹೊರೆಯವರು ಹೇಳುತ್ತಾರೆ.

~~~~~

ನಟ್ಟೂರಿನಲ್ಲಿ ನಡೆದ ದರೋಡೆ ಸಂಬಂಧ ೬—೭ ಮಂದಿ ಕೈದು ಮಾಡಲ್ಪಟ್ಟಿರುವರು. ಕೈದು ಮಾಡಲ್ಪಟ್ಟವರಲ್ಲಿ ಇಬ್ಬರು ಬಾಜಶಾಯಿ ಶಾಲೆಯ ವಿದ್ಯಾರ್ಥಿಗಳು, ಇಬ್ಬರು ಕೂಚಬಿಹಾರ್ ಶಾಲೆಯವರು, ಇಬ್ಬರು ತಮ್ಮ ವಿದ್ಯಾಭ್ಯಾಸವನ್ನು ತೀರಿಸಿದವರು.

~~~~~

ಮಾನ್ಯ ಗಂಧಿಯವರು ರಂಗೂನಿಗೆ ಹೋಗಿರುವರು.

~~~~~

ತಾರೀಕು ೨೫ನೇ ರಾತ್ರಿ ಕಲ್ಕತ್ತೆಯ ಫಕೀರ ಚಂದಮಿತ್ರ ಬೀದಿಯಲ್ಲಿ ನಾಲ್ಕುಮಂದಿ ಬಂಗಾಳಿ ಯುವಕರು ಕೈದು ಮಾಡಲ್ಪಟ್ಟಿರುವರು. ಇವರು ಹಾಲ್ದರನಿಗೆ ರಿವಾಲ್ವರಿನಿಂದ ಹೊಡೆದ ಜೋತೀಂದ್ರನಾಥ ಮುಖರ್ಜಿಯ ಪಂಗಡಕ್ಕೆ ಸೇರಿದವರಾಗಿರುವರು. ಹಾಲ್ದರನು ಮೋದಂಡ ಸ್ಥಿತಿಯಲ್ಲಿದ್ದಾನೆಂತ ವಾರ್ತೆ ಬಂದದೆ. ಜೋತೀಂದ್ರನಾಥ ಮುಖರ್ಜಿಯ ಪತ್ತೆ ಹಿಡಿದುಕೊಟ್ಟವರಿಗೆ ೨೫೦೦ ರೂಪಾಯಿ ಕೊಡೋಣಾಗುವದೆಂದು ಪ್ರಕಟವಾಗಿದೆ.

ಕಲ್ಕತ್ತೆಯ ಇತರ ಕೆಲವು ಸ್ಥಳಗಳಲ್ಲಿ ದರೋಡೆಕಾರರು ಮನೆ ನುಗ್ಗಿ ಸುಲಿಗೆ ಮಾಡಿದ ವೃತ್ತಾಂತವೂ ಬಂದಿರುವದು.

~~~~~

ಬಂಗಾಳದಲ್ಲಿ ಈ ವರ್ಷ ಒಟ್ಟು ೩೪೧೧,೦೦ ಬೇಲುಗಳ ಹತ್ತಿಯು ಬೆಳೆಯುವದೆಂದು ನಿರೀಕ್ಷಿಸಲ್ಪಟ್ಟದೆ. ಕಳೆದ ವರ್ಷ ೩೩೧೧೦೦ ಬೇಲುಗಳ ಉತ್ಪತ್ತಿಯಾಗಿತ್ತು.

~~~~~

ಹುಚ್ಚುನಾಯಿಂದ ಕಡಿಯಲ್ಪಟ್ಟವರಿಗೆ ಚಿಕಿತ್ಸೆಯನ್ನು ನಡೆಯಿಸುವದಕ್ಕಾಗಿ ಮುಂಬಾಯಿ ಮುನಿಸಿಪಾಲಿಟಿಯವರು ತಮ್ಮಲ್ಲಿ ಒಂದು ವೈದ್ಯಶಾಲೆಯನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸಿದ್ದಾರೆ. ಈ ವಿಷಯವಾಗಿ ಅಲ್ಲಿನ ಪತ್ರಿಕೆಗಳಲ್ಲಿ ಚರ್ಚೆಯು ನಡೆಯುವ ಸಂದರ್ಭದಲ್ಲಿ ಮುಂಬಾಯಿ ಡಾಕ್ಟರರಾದ ಹಾರಿ. ಎ. ಡಿರವರು ಒಂದು ಲೇಖನವನ್ನು ಬರೆದು ಅದರಲ್ಲಿ ಪಾಶ್ಚಾತ್ಯರ ಪದ್ಧತಿಯ ಚಿಕಿತ್ಸೆಯು ಇದಕ್ಕೆ ಶಾಸ್ತ್ರೀಯವಲ್ಲವೆಂತಲೂ ಈ ಚಿಕಿತ್ಸೆಯಿಂದ ಕಡೆಗೆ ಅನೇಕ ನಷ್ಟಗಳು ಸಂಭವಿಸುವವೆಂತಲೂ ತಿಳಿಸಿದ್ದಾರೆ. ಈಗ ಕೂನೂರಿನಲ್ಲೂ ಕಾಸೋಲಿಯಲ್ಲೂ ನಡೆಯುತ್ತಿರುವ ಚಿಕಿತ್ಸೆಯೆಲ್ಲಾ ಪಾಶ್ಚಾತ್ಯರ ವಿಧಾನವೇ ಆಗಿದೆ.

~~~~~

ವೈದ್ಯ ವೃತ್ತಿಯನ್ನವಲಂಬಿಸಿರುವ ಯೂರೋಪಿಯನರೇ ಆಗಲೀ ಭಾರತೀಯರೇ ಆಗಲೀ ರಣರಂಗಕ್ಕೆ ಹೋಗಿ ಸೇನೆಯೊಡನೆ ಈಗ ಇರುತ್ತಿರುವ ವರೆಗೂ ಮುಂದೆ ಹೋಗಿ ಇರುವ ವರೆಗೂ ಸಹ ಕೊಡುವ ವೇತನಗಳ ವಿಷಯವು ಸ್ಟೇಟ್ ಸೆಕ್ರೆಟರಿಯವರ ಅನುಮತಿ ಪ್ರಕಾರ ಈ ಕೆಳಗೆ ಕಂಡ ಮೇರೆಗೆಂದು ನಿರ್ಧರಿಸಲ್ಪಟ್ಟದೆ. ಅಂಥಾ ಡಾಕ್ಟರುಗಳ ಉದ್ಯೋಗದ ಪರಮಾವಧಿಯು ಒಂದು ವರ್ಷವು. ಇವರಿಗೆ ದಿನ ೧ಕ್ಕೆ ೧ ಪವನು ೮ ಶಿಲ್ಲಿಂಗ್ ಸಂಬಳವಾಗಿ ಕೊಡಲ್ಪಡುವದು. ಆಹಾರವು ಉಚಿತವಾಗಿ ಕೊಡಲ್ಪಡುವದು. ವಸತಿಯು ಸ್ಥಳವು ದೊರಕಿದ ಪಕ್ಷದಲ್ಲಿ ಉಚಿತವಾಗಿಯೇ ಕೊಡಲ್ಪಡುವದು. ಇಲ್ಲದ ಪಕ್ಷದಲ್ಲಿ ಅವಕ್ಕಾಗಿ ಬೇರೆ ಹಣವು ಕೊಡಲ್ಪಡುವದು. ಬರತಕ್ಕಂಥವರಿಗೆ ೬೦ ಪವನುಗಳು ಸಾಮಾಗ್ರಿಯನು ಅವರಿಗೆ ತಗದುಕೊಡುವದು [illegible]

ಸಾಲೆಯಲ್ಲಿ ಲೆಫ್ಟನೆಂಟ ಪದವಿಯಲ್ಲಿ ಅವರು ತಾತ್ಕಾಲಿಕವಾಗಿ ಕೆಲಸ ಮಾಡಬೇಕು. ಕೆಲಸವು ಮುಗಿದ ಬಳಿಕ ಅವರಿಗೆ ೬೦ ಪವನುಗಳು ಒಂದೇ ಸಲ ಉಪಕಾರ ಧನವಾಗಿ ಕೊಡಲ್ಪಡುವದು.

~~~~

ಮಾನ್ಯ ಗೋಖಲೆಯವರು ಮೃತಪಟ್ಟ ಸಹಸಂತಾಪ ಸೂಚಕವನ್ನು ತೋರಿಸುವ ತಂತಿಯು ಚಕ್ರವರ್ತಿಯವರಿಂದ ವೈಸರಾಯಿ ಪ್ರಭುಗಳ ಮೂಲಕ ಮಾನ್ಯಗೋಖಲೆಯವರ ಕುಟುಂಬಕ್ಕೆ ಕಳುಹಿಸಲ್ಪಟ್ಟಿರುವದು.

ಮೆ। ದಾದಭಾಯಿ ನಾವೋಜಿಯವರು ವರ್ತಮಾನ ಪತ್ರಿಕೆಗೆ ಈ ಕೆಳಗಿನ ಪತ್ರವನ್ನು ಕಳುಹಿಸಿಕೊಟ್ಟಿರುವರು. "ಗೋಖಲೆಯವರು ಮೃತರಾದರು" ಎಂಬ ಮಾತನ್ನು ನಾನು ಒಬ್ಬ ಸ್ನೇಹಿತನಿಂದ ಕೇಳಿ ಬಹಳ ದುಃಖಿತನಾದೆನು. "ಹಿಂದೂಸ್ಥಾನಕ್ಕೆ ಇದು ಎಂಥಾ ಆಪತ್ತು ಎಂಥಾ ನಷ್ಟ" ನಾನು ಹೆಚ್ಚಿಗೆ ಏನ ಹೇಳಲಿ. ಗೋಖಲೆಯವರಿಂದ ಉಂಟಾಗಬಹುದೆಂದು ನಾನು ಆಲೋಚಿಸಿದ ಒಳ್ಳೇ ಕಾರ್ಯಗಳು ಮುರಿದುಹೋದವು. ಆದರೆ ನನಗೆ ಸ್ವಲ್ಪ ಸಮಾಧಾನವಿದೆ. ಗೋಖಲೆಯವರ ಮರಣದಿಂದ ಏಕಮನಸ್ಕರಾಗಿ ಸರ್ವರೂ ಪಟ್ಟ ಶೋಕವನ್ನು ನೋಡಿದ್ದರಿಂದ ಹಿಂದೂಸ್ಥಾನದವರು ಗೋಖಲೆಯವರ ಮಹತ್ತಾದ ಕಾರ್ಯಗಳನ್ನು ಮಾನ್ಯ ಮಾಡಿದರೆಂದು ತಿಳಿಯುವದೇ ನನಗೆ ಆದ ಸಮಾಧಾನ. ಇದರಿಂದ ಗೋಖಲೆಯವರು ಮಾಡಬೇಕೆಂದಿದ್ದ ಉಂತಕಾರ್ಯಗಳನ್ನು ಇತರ ಯುವಕರು ಅವರ ಹೆಜ್ಜೆಜಾಡೆಯಲ್ಲಿ ನಡೆದು ಹಿಂಬಾಲಿಸುವರೆಂಬ ಧೈರ್ಯವು ತನಗಿದೆ. ಆದರೆ ಅವರ ಮರಣದಿಂದ ನಾನು ಬಹು ದುಃಖಿತನಾಗಿದ್ದೇನೆ."

~~~~

ತಾ ೨೪ರಲ್ಲಿ ಕಲ್ಕತ್ತೆಯಲ್ಲಿ ಇನ್ನೊಂದು ಘೋರಕೃತ್ಯವು ನಡೆದಿರುವದು. ಗುಪ್ತಪೋಲಿಸ್ ಇಲಾಖೆಯ ಇನ್ಸ್ಪೆಕ್ಟರ್ ಸುರೇಶಚಂದ್ರ ಚಟರ್ಜಿಯವರು ಒಬ್ಬ ಕನ್‌ಸ್ಟೇಬಲನೊಡನೆ ಕೋರ್ನವಾಲಿಸ್ ದಾರಿಯಲ್ಲಿ ಬೆಳಿಗ್ಗೆ ಬೀಟ್ ಡ್ಯೂಟಿಯಮೇಲಿರುವಾಗ ರಿವೋಲ್ವರುಗಳನ್ನು ಹಿಡಕೊಂಡಿದ್ದ ನಾಲ್ಕು ಯುವಕರು ಇವರ ಎದುರಿಗೆ ಬಂದರು. ಮುಖರ್ಜಿಯವರು ಅವರ ಕಡೆಗೆ ನೋಡುತ್ತಲೇ ಒಬ್ಬನು ರಿವೋಲ್ವರ್ ತೆಗೆದು ಅವರ ಎದೆಗೆ ಗುಂಡು ಹಾರಿಸಿದನು. ಇನ್ಸ್ಪೆಕ್ಟರರು ಕೂಡಲೇ ನೆಲಕ್ಕೆ ಬಿದ್ದರು. ಅನಂತರ ಪೋಲಿಸಿನವನಿಗೂ ಅವರು ಗುಂಡು ಹಾರಿಸಿದರು. ಪೋಲಿಸಿನವನು ಕೆಳಬಿದನು. ದಾರಿಗರು ಅವರನ್ನು ಹಿಡಿಯಲು ಪ್ರಯತ್ನಿಸಿದ್ದಲ್ಲಿ ರಿವೋಲ್ವರಿನಿಂದ ಹೆದರಿಸಿ ಅವರು ಓಡಿಹೋದರು. ಘಾಯ ಒಡೆದ ಪೋಲಿಸಿನವನು ಆಸ್ಪತ್ರೆಯಲ್ಲಿ ಶೈತೋಪಚಾರ ಹೊಂದುತ್ತಿದ್ದಾನೆ. ಘಾಯ ಒಡೆದ ಕನ್‌ಸ್ಟೇಬಲನು ಘಾತುಕರು ಬಂಗಾಳಿ ವಿದ್ಯಾರ್ಥಿಗಳಾಗಿರುವರೆಂದು ಹೇಳುತ್ತಾನೆ. ಪೋಲಿಸಿನವರು ತನಿಕಿ ನಡಿಸುತ್ತಲಿದ್ದಾರೆ.

~~~~

ಸರ್ವೆಂಟ್ಸ್ ಆಫ್ ಇಂಡಿಯದ ಪ್ರೆಸಿಡೆಂಟರಾದ ಮಾನ್ಯ ಗೋಖಲೆಯವರ ಬದಲಿಗೆ ಬಹುಮಾನಪಟ್ಟ ಮೆ। ಎಸ್ ಶ್ರೀನಿವಾಸ ಶಾಸ್ತ್ರಿಯವರು ಮೂರು ವರ್ಷದ ಅವಧಿಗೆ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರೆಂಬ ವಾರ್ತೆ ಬಂದಿರುವದು.

~~~~

ದಕ್ಷಿಣ ಹಿಂದೂಸ್ಥಾನ

ಕಳೆದ ಫೆಬ್ರವರಿ ೨೪ನೇ ತಾರೀಕಿನ ದಿನ ನೆರೆದ ತ್ರಾವಣಕೂರ ಸಂಸ್ಥಾನದ ರಾಜಸಭೆಯಲ್ಲಿ ಪಂಚಮರ ಬಗ್ಗೆ ಹೆಚ್ಚು ರಾತ್ರಿಶಾಲೆಗಳನ್ನು ಸರಕಾರದವರು ಸ್ಥಾಪಿಸಬೇಕೆಂತಲೂ ಶಾಲಾಪುಸ್ತಕಗಳನ್ನು ಪಂಚಮರಿಗೆ ಕ್ರಯ ಪಡಕೊಳ್ಳದೆನೆ ಉಪಕಾರವಾಗಿ ಕೊಡಬೇಕೆಂತಲೂ ಮೆ. ಪಿ ಕೆ. ಗೋವಿಂದ ಪಿಳ್ಳೆ ಎಂಬವರು ಅರಿಕೆಮಾಡಿದರು. ಮೆ। ಕಂಡನ್ ಕುಮಾರನ್ ಎಂಬವರು ಒಬ್ಬ ಪಂಚಮರ ಪ್ರತಿನಿಧಿಯನ್ನು ರಾಜಸಭೆಗೆ ಮೆಂಬರನಾಗಿ ಸೇರಿಸಿ ತ್ರಾವಣಕೂರು ಸಂಸ್ಥಾನದ ದಿವಾನರನ್ನು ಸ್ತುತಿಸಿ ಈಮೊದಲೆ ಅಪ್ಪಣೆ ಕೊಟ್ಟದರ ವಿನಹ ಇನ್ನು ಹೆಚ್ಚು ಶಾಲೆಗಳಲ್ಲಿ ಪಂಚಮರ ಮಕ್ಕಳನ್ನು ಸೇರಿಸಿಕೊಳ್ಳುವ ಬಗ್ಗೆ ಹುಕುಂ ಆಗಬೇಕಾಗಿ ಅರಿಕೆ ಮಾಡಿದರು. ಮೆ। ಎಮ್ ಕೆ. ಗೋವಿಂದ ಪಿಳ್ಳೆ ಎಂಬವರು ಸರಕಾರ ಆಫೀಸುಗಳಲ್ಲಿ ಕೇಳುತರದ ಉದ್ಯೋಗಗಳಿಗೆಲ್ಲ ಎಜವಾ ಜಾತಿಯವರನ್ನು ಸ್ವೀಕರಿಸಿಕೊಳ್ಳಬೇಕೆಂತ ಅರಿಕೆಮಾಡಿದರು.

ಈ ಅರಿಕೆಗಳನ್ನೆಲ್ಲಾ ಸರಕಾರದವರು ಆಲೋಚಿಸಿ ಅಪ್ಪಣೆ ಕೊಡುವರೆಂತ ಸರಕಾರ ಕಡೆಯಿಂದ ದಿವಾನರು ಅಭಯಕೊಟ್ಟರು. ತ್ರಾವಣಕೂರ ಸಂಸ್ಥಾನದಲ್ಲಿ ಮಾಜಿ ದಿವಾನ ರಾಜಗೋಪಾಲಾಚಾರ್ಯರವರ ಕಾಲದಿಂದ ಪಂಚಮ ಕುಲದವರ ಅಭಿವೃದ್ಧಿ ತ್ವರೆಯಿಂದ ಆಗುತ್ತದೆ.

~~~~

ದಕ್ಷಿಣಕನ್ನಡ

ಪರಸ್ಪರ ಸಹಾಯ

ಸರ್ಕಿಲಾರು ನಂಬ್ರ ೫

ಕೊಯಂಬುತ್ತೂರು ಸರ್ಕಲ್ ಪರಸ್ಪರ

ಸಹಾಯಕ ಪರಿಷದ

ನಮ್ಮ ದಕ್ಷಿಣಕನ್ನಡಾ ಸೆಂಟ್ರಲ್ ಕೋ ಆಪರೇಟಿವ್ ಬೇಂಕ್ ಎಂಬ ಸಂಸ್ಥೆಯು ಏರ್ಪಡುವದಕ್ಕೆ ಮೊದಲು ನಮ್ಮ ಜಿಲ್ಲೆಯಲ್ಲಿನ ಕೆಲವು ಸಂಘಗಳು ತಂತಮ್ಮ ದ್ರವ್ಯ ವಶ್ಯಕತೆಯನ್ನು ಪೂರೈಸುವುದಕ್ಕೋಸ್ಕರ ಆಗಾಗ್ಯೆ ಕೊಯಂಬತ್ತೂರಿನಲ್ಲಿ ಸ್ಥಾಪಿತವಾಗಿದ್ದ ಸೆಂಟ್ರಲ್ ಬೇಂಕಿಗೆ ಅರ್ಜಿಗಳನ್ನು ಬರಕೊಂಡು ಅಲ್ಲಿಂದ ಸಾಲಗಳನ್ನು ಪಡಕೊಳ್ಳುತ್ತಿದ್ದರಷ್ಟೇ. ಈ ಕಾರಣದಿಂದ ಮೊದಲಿನಿಂದ ಆ ರೀತಿ ದ್ರವ್ಯ ಸುಕೂಲತೆಯನ್ನು ಹೊಂದುತ್ತಿದ್ದ ಕೊಯಂಬತ್ತೂರು ಜಿಲ್ಲೆ, ನೀಲಗಿರಿ ಮತ್ತು ಮಲಬಾರ ಜಿಲ್ಲೆಗಳ ಸಂಘಗಳೊ ದಿಗೆ ನಮ್ಮ ಜಿಲ್ಲೆಯ ಸಂಘಗಳು ಸಹ ಕೆಲವು ಮಟ್ಟಿಗೆ ಕೊಯಂಬತ್ತೂರು ಬೇಂಕಿನ ಹಂಗಿಗೆ ಒಳಪಟ್ಟು ಕ್ರಮೇಣವಾಗಿ ಆ ನಾಲ್ಕು ಜಿಲ್ಲೆಗಳ ಸಂಘಗಳೊಳಗೂ ಒಂದು ತರದ ಐಕ್ಯಭಾವವು ಪ್ರಾಪ್ತವಾದ ಪರಿಂದ ಕೊನೆಗೆ ಕೊಯಂಬತ್ತೂರು ಸರ್ಕಲ್ ಎಂಬ ಒಂದು ಪ್ರತ್ಯೇಕ ಭಾಗವು ತನ್ನಂತೆ ಸೃಷ್ಟಿಯಾಯಿತು.

ಈ ಭಾಗದೊಳಗಣ ಸಂಘಗಳ ಬೆಳವಣಿಗೆಗೋಸ್ಕರ ಬೇರೆ ಕಡೆಗಳಲ್ಲಿ ಜರಗುವಂತೆ ಇಲ್ಲಿಯೂ ವರ್ಷಕ್ಕೊಮ್ಮೆ ಒಂದು ಪರಿಷದವು ನೆರೆಯುವದು ಬಹು ಪ್ರಯೋಜನಕರವೆಂದು ತೋರಿಬಂದು ೧೯೧೩ನೇ ಇಸವಿಯ ಜೂನ್ ತಿಂಗಳಲ್ಲಿ ಕೊಯಂಬತ್ತೂರು ಪಟ್ಟಣದಲ್ಲೇ ಪ್ರಥಮ ಪರಿಷದವಾಯಿತು. ಅದು ಮುಗಿದೊಡನೆ ಮಲಬಾರು ಜಿಲ್ಲೆಯಿಂದ ಬಂದವರ ಪೈಕಿ ಪ್ರಮುಖರಾಗಿದ್ದವರ ಮಾರು ವರ್ಷಕ್ಕೆ ಮಲಬಾರು ಜಿಲ್ಲೆಯಲ್ಲಿ ಕೂಡಬೇಕೆಂದು ಹೇಳಿಕೊಂಡಂತೆ ೧೯೧೪ನೇ ಇಸವಿಯ ಮೇ ತಿಂಗಳಲ್ಲಿ ಕಲ್ಲಿಕೋಟೆಯಲ್ಲಿ ದ್ವಿತೀಯ ಪರಿಷದವಾಯಿತು. ಅಷ್ಟರೊಳಗೆ ನಮ್ಮ ಜಿಲ್ಲೆಯಲ್ಲಿ ಏರ್ಪಾಡಾಗಿ ನಡೆಯುತ್ತಿದ್ದ ಈ ಸೆಂಟ್ರಲ್ ಬೇಂಕಿನ ಅಧ್ಯಕ್ಷರು ನಮ್ಮ ಜಿಲ್ಲೆಯವರ ಕಡೆಯಿಂದ ಅಪೇಕ್ಷಿಸಿದ ಪ್ರಕಾರ ಆ ಪರಿಷದದ ತೃತೀಯ ಸಭೆಯು ಇಂದು ಮಂಗಳೂರಲ್ಲಿ ಜರಗುವದೆಂತ ನಿರ್ಣಯಿಸಿಯದೆ.

ಇಂತಹ ಪರಿಷದಗಳಿಂದ ನಮ್ಮ ಸಂಘಗಳಿಗೆಲ್ಲಾ ಅನೇಕ ತರದ ಉಪಯೋಗಗಳಿರುವದರಿಂದಲೂ ನಮ್ಮ ಜಿಲ್ಲೆಗೆ ಆಮಂತ್ರಿತವಾದ ಸಭೆಯನ್ನು ನಿರ್ವಿಘ್ನವಾಗಿ ಸಾಂಗ್ಯವಾಗಿ ನಡೆಯಿಸುವುದು ನಮ್ಮಗಳೆಲ್ಲ ಪ್ರಥಮ ಕರ್ತವ್ಯವಾಗಿರುವದರಿಂದಲೂ ನಮ್ಮ ಜಿಲ್ಲೆಯ ಸಂಘದವರು ಈ ಕೆಳಗಿನ ವಿಷಯಗಳಿಗೆ ತಪ್ಪದೆ ತ್ವರ್ಯದಲ್ಲಿ ಗಮನ ಕೊಡಬೇಕಾಗಿ ಈ ಮೂಲಕ ಸೂಚಿಸೋಣಾಗುತ್ತದೆ.

೧ ಸದರಿ ಪರಿಷದದ ಖರ್ಚಿಗೋಸ್ಕರ ಪ್ರತೀ ಸಂಘದವರೂ (ಪಂಚಾಯತ ಸಭೆಯಲ್ಲಾಗಲಿ, ಮಹಾ ಸಭೆಯಲ್ಲಾಗಲಿ) ಕೊಡತಕ್ಕ ವಂತಿಗೆಯ ಕುರಿತು ನಿರ್ಣಯಗಳನ್ನು ಮಾಡಿ ಆ ಪ್ರಕಾರದ ವಂತಿಗೆಯ ಹಣವನ್ನು ಬರುವ ೧೦ನೇ ತಾರೀಕಿನ ಒಳಗೆ ಪುತ್ತೂರಿನಲ್ಲಿರುವ ಸದರಿ ಪರಿಷದದ ಕಾರ್ಯದರ್ಶಿಗಳಿಗೆ ತಲಪುವಂತೆ ಕಳುಹಿಸುವದಲ್ಲದೆ ಸಂಘಗಳಿದ್ದ ಕಡೆಯಲ್ಲಿ ಪರಸ್ಪರ ಸಹಾಯದಲ್ಲಿ ಉತ್ಸಾಹವನ್ನು ತೋರಿಸುವವರಿದ್ದರೆ ಅವರಿಗೂ ಪರಿಷದದ ಉದ್ದೇಶಗಳನ್ನು ವಿವರಿಸಿ ಅವರು ಸ್ವೇಚ್ಛೆಯಿಂದ ಕೊಡಬಹುದಾದ ಯಥಾಸುಶಕ್ತಿ ವಂತಿಗೆಯ ಹಣವನ್ನು ಸಹಾ ರವಾನಿಸುವದು.

೨ ಸದರಿ ಪರಿಷದಕ್ಕೆ ಸಂಘದ ಕಡೆಯಿಂದ ಪ್ರತಿನಿಧಿಗಳಾಗಿ ಯಾರನ್ನು ಕಳುಹಿಸಲಿಂಬದನ್ನು ಸಹ ಬೇಗನೆ ನಿಶ್ಚಯಿಸಿ ಅವರ ಹೆಸರು ಮ ವಿಳಾಸಗಳನ್ನು ಮೇಲಿನ ತಾರೀಕಿನೊಳಗೆ ತಲಪುವಂತೆ ಕಳುಹಿಸುವದು.

೩. ಸಂಘಗಳ ಅಭಿವೃದ್ಧಿಗೋಸ್ಕರ ಪರಿಷದದಲ್ಲಿ ಯಾವ ವಿಷಯದಲ್ಲಾದರೂ ನಿರ್ಣಯಗಳಾಗಿ ಮಾಡಬಹುದೆಂದು ತೋರಿದರೆ ಆ ವಿಷಯಗಳಲ್ಲಿ ಆಗತಕ್ಕ ನಿರ್ಣಯಗಳ ಮಸೂದೆಗಳನ್ನು ಸಹ ಮೇಲಿನ ತಾರೀಕಿನೊಳಗೆ ತಲಪುವಂತೆ ಕಳುಹಿಸುವದು.

೪ ಪರಿಷದವು ಏಪ್ರಿಲ್ ೩ನೇ ಮತ್ತು ೪ನೇ ತಾರೀಕುಗಳಲ್ಲಿ ಕೂಡುವುದೆಂದು ನಿಶ್ಚಯವಾದುದರಿಂದ ಮೇಲಿನ ಎಲ್ಲಾ ವಿಷಯಗಳ ಕುರಿತು ಏನೂ ವಿಳಂಬ ಮಾಡದೆ ನಡೆಯಬೇಕೆಂದು ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ದಕ್ಷಿಣಕನ್ನಡಾ ಸೆಂಟ್ರಲ್ ಕೋ-ಆಪರೇಟಿವ್ ಬೇಂಕ್, ಲಿಮಿಟೆಡ್ ತಾ, 1-3-1915	ಎಮ್ ಅನಂತರಾವ್. ಕಾರ್ಯದರ್ಶಿ.

ವಿಟ್ಲ.—ಇಲ್ಲಿಯ ಮುಡ್ನೂರುಗ್ರಾಮ ಕಂಬಳಬೆಟ್ಟು ಎಂಬಲ್ಲಿ ಮೆ। ರಾ। ರಾ। ಕಬ್ಬಿನ ಹಿತ್ಲು ಈಶ್ವರಭಟ್ಟರವರು ಬಡ ಹುಡುಗರ ಉಪಯೋಗಾರ್ಥವಾಗಿ ಸುಮಾರು ೧॥ ಸಾವಿರ ರೂಪಾಯಿ ವರೆಗೆ ವೆಚ್ಚಮಾಡಿ ಒಂದು ಶಾಲೆಯನ್ನು ಕಟ್ಟಿಸಿರುತ್ತಾರೆ. ಸದರಿ ಶಾಲೆಯ ಹುಡುಗರನ್ನು ತಳ್ವಾರು ನರಸಿಂಗರಾಯರು ಬಹಳ ಪ್ರೀತಿಯಿಂದ ನಡಿಸಿ ಚಲೋದಾಗಿ ಕಲಿಸುತ್ತಾರೆಂಬದಾಗಿ ತಿಳಿಸುವದೆ ಬಹಳ ಸಂತೋಷಪಡುತ್ತೇವೆ.

ಕಡಬ —ಉಪ್ಪಿನಂಗಡಿ ತಾಲೂಕಿನ ಪಟ್ಟಣಗಳಲ್ಲಿ ಒಂದಾದ ಕಡಬ ಪಟ್ಟಣವು ಹೆಚ್ಚು ಅಂಗಡಿ ಭಂಡಸಾಲೆಗಳಿದ್ದ ದಿನಂಪ್ರತಿ ೧೦-೨೦ ಗಾಡಿಗಳಿಂದ ಆಮದು ರಫ್ತಾಗುತ್ತಿರುತ್ತವೆ ಅಲ್ಲದೆ ಅನೇಕ ಜನಸ್ತೋಮವು ನೆರೆದುಬರುವ ಸ್ಥಳವಾಗಿರುತ್ತಿದ್ದು ಕಡಬ ಕೋಡಿಂಬಾಳ ಬಂಟ್ರ, ನೆಕ್ಕಿಲಾಡಿ, ಐತ್ತೂರು, ಮರಿಕ್ಕ, ಕೊಂಬಾರ ಬಿಳಿನೆಲೆ, ರೆಂಜಾಡಿ, ನೂಜಿ, ಬಾಳ್ತಿಲ, ಕುಟ್ರುಪಾಡಿ, ಬಲ್ಯಪಡ್ನೂರು ವಗೈರೆ ಗ್ರಾಮಗಳು ಇದಕ್ಕೆ ಲಗ್ತಿಯಾಗಿದ್ದು ವ್ಯಾಪಾರ ವ್ಯವಹಾರವು ಹೆಚ್ಚಿನ ಅಭಿವೃದ್ಧಿಯಲ್ಲಿರುತ್ತದೆ. ಇದಕ್ಕೆ ಲಗ್ತಿ ಇರುವ ಗ್ರಾಮಸ್ಥರಿಗೆ ಹತ್ತಿರವಾಗಿ ಪೋಸ್ಟಾಫೀಸು ಇಲ್ಲದೆ ಬಹು ತೊಂದರೆಯಾಗುತ್ತದೆ. ಆದ್ದರಿಂದ ದಯಾಳು ಸರಕಾರದವರು ಇಲ್ಲಿ ಒಂದು ಪೋಸ್ಟಾಫೀಸು ಇಡುವರೆ ತಕ್ಕ ನಿಗಾ ಕೊಡಬೇಕಾಗಿ ಪ್ರಾರ್ಥಿಸುತ್ತೇನೆ. ಇಲ್ಲಿ ಆಫೀಸು ತೆರದ ಪಕ್ಷಕ್ಕೆ ಸರಕಾರಕ್ಕೆ ಏನ್ ಖರ್ಚು ಹೋಗಲಾಗಿ ಮುನಾಫೆ ಉಳಿಯುವುದಕ್ಕೆ ಸಂದೇಹವಿಲ್ಲ.

~~~~

ಮಂಗಳೂರು

ಹೊಸ ಗದ್ದೆಕೇರಿ ರಸ್ತೆಯಲ್ಲಿ ರಾತ್ರಿಕಾಲ ಒಬ್ಬ ಹೆಂಗಸಿನ ಕಿವಿಯಾಭರಣಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸುವಾಗಲೇ ಜನರಿಂದ ಹಿಡಿಯಲ್ಪಟ್ಟು ವಿಚಾರಣೆಗೆ ಗುರಿಯಾದ ಪಾವೂರು ಗ್ರಾಮದ ಹಮ್ಮದಬ್ಯಾರಿಗೆ ಟೌನ್ ಮೇಜಿಸ್ಟ್ರೇಟರು ೩ ತಿಂಗಳ ಕಠಿಣ ಸಜಾ ವಿಧಿಸಿರುವರು.

ಇದೇ ಕಳೆದ ೨೭ನೇ ರಾತ್ರಿ ಕೊಡಿಯಾಲಬೈಲು ಗ್ರಾಮದ ಕೇಶಿ ಮಹಂದಪ್ಪ ಕೊಟ್ಯಾರಿ ಎಂಬವನು ಕೊಡಿಯಾಲಬೈಲು ಗ್ರಾಮ ಪಟೇಲರ ಮನೆಯ ಸಮೀಪದಲ್ಲಿರುವ ಸೋಮಯ್ಯ ಪೂಜಾರಿ ಮನೆಗೆ ಕನ್ನಹಾಕುತ್ತಿರುವ ಉದ್ದೇಶದಿಂದ ಅಡಗಿಕೊಂಡಿದ್ದವನನ್ನು ಆಜುಬಾಜಿನ ಜನರು ಹಿಡಿದು ಬೀಟಿನ ಪೋಲಿಸಿನವರಿಗೆ ಒಪ್ಪಿಸಿರುವರು. ಅವನೊಡನೆ ಇದ್ದ ಕನ್ನ ಹಾಕುವ ಒಂದು ಖುರ್ಪ್ಯಾ ದೊರಕಿರುವದು.

ಕಳೆದ ತಿಂಗಳಲ್ಲಿ ಪುತ್ತೂರಲ್ಲಿ ಒಂದು ಖೂನಿ ನಡೆದಿರುವದು. ಕುಂಬಾರ ಜಾತಿಯ ಅಣ್ಣತಮ್ಮಂದಿಯರಿಬ್ಬರು ಒಂದೇ ಮನೆಯಲ್ಲಿ ವಾಸಮಾಡುತ್ತಿದ್ದರು. ಇವರೊಳಗೆ ಏನೋ ಕಾರಣದಿಂದ ವೈಮನಸ್ಸು ಹುಟ್ಟಿ ತಮ್ಮನು ಮನೆ ಬಿಟ್ಟು ಹೋದನು. ಮನೆ ಬಿಟ್ಟುಹೋಗಿ ಕೆಲವು ದಿವಸದನಂತರ ತಮ್ಮನು ಸೇಂದಿ ಅಂಗಡಿಯಲ್ಲಿ ಕುಡಿಯುತ್ತಿರುವಾಗ ಅಣ್ಣನೂ ಅಲ್ಲಿಗೆ ಬಂದನು. ಇಬ್ಬರೂ ಕುಡಿದು ಸೇಂದಿ ಅಂಗಡಿಯಿಂದ ಹೋಗುವಾಗ ದಾರಿಯ ಒಂದು ಕಡೆಯಲ್ಲಿ ಅಣ್ಣನಿಗೆ ತಮ್ಮನು [illegible] ಅಣ್ಣನಿಗೂ ಮಾತಿಗೆ ಮಾತು ಹುಟ್ಟಿ [illegible] ಅಷ್ಟರೊಳಗೆ ತಮ್ಮನು ತನ್ನ ಸೋಟೆಯಿಂದ [illegible] ನೋಡಿ ಅಣ್ಣನು ತಪ್ಪಿಸಿಕೊಂಡು ಓಡಿಹೋಗಿ, [illegible] ತನ್ನ ಒಬ್ಬ ಸಂಬಂಧಿಯವನಿಗೆ ಈ ವಿಷಯವನ್ನು [illegible] ಲ್ಲಿಗೆ ಪುನಃ ಬಂದರು. ತಮ್ಮನು [illegible] ತೆಗೆದು ಅಣ್ಣನೊಡನೆ ಬಂದಿದ್ದದಾಗ್ಗೆ [illegible] ಯಿಂದ [illegible]

ಆಸ್ಪತ್ರೆಗೆ ಒಯ್ದರು. ಆಸ್ಪತ್ರೆಯಲ್ಲಿ ಅವನು ಮೃತಪಟ್ಟನು. ಕೊಲೆಪಾತಕಿಯನ್ನು ಪೋಲಿಸಿನವರು ಕೈದುಮಾಡಿರುವರು.

ಬೆಳ್ಳಾರೆಯಲ್ಲಿ ಒಬ್ಬ ಗೌಡನು ಕೋವಿ ಹೊಡೆದು ಖೂನಿ ಮಾಡಿರುತ್ತಾನಾದ್ದರಿಂದ ಡೆಪ್ಯುಟಿ ಪೋಲಿಸ್ ಸುಪರಿಂಟೆಂಡೆಂಟರು ಅಲ್ಲಿಗೆ ತನಿಖೆ ಬಗ್ಗೆ ಹೋಗಿದ್ದರೆಂದು ತಿಳಿಸಿತ್ತಷ್ಟೆ. ಈ ಖೂನಿ ಮೊಕದ್ದಮೆಯ ವೃತ್ತಾಂತವು ಈ ರೀತಿಯಾಗಿರುವದು. ಅಪಾದಿತ ಲಿಂಗಗೌಡ ಎಂಬವನ ದೇವಮ್ಮ ಎಂಬ ಮಗಳನ್ನು ಚೆನ್ನಪ್ಪಗೌಡ ಎಂಬವನಿಗೆ ಮದುವೆಮಾಡಿಕೊಟ್ಟಿತ್ತು. ಕಳೆದ ನವೆಂಬರ ತಾ ೧೪ರಲ್ಲಿ ಬೆಳಗ್ಗೆ ದೇವಮ್ಮಳು ಉರುಳು ಹಾಕಿ ನೇತಾಡಿ ಸತ್ತಳು. ಈ ವಿಷಯ ಪೋಲಿಸಿನವರು ತನಿಖೆ ನಡಿಸಿ ಮೃತಳು ಆತ್ಮಹತ್ಯಮಾಡಿಕೊಂಡಳೆಂದು ನಿರ್ಣಯಿಸಿದರು. ಆದರೆ ಲಿಂಗಗೌಡನು ತನ್ನ ಅಳಿಯ ಮತ್ತು ಅಳಿಯನ ತಾಯಿ ಜಾಕು ಕೂಡಿ ತನ್ನ ಮಗಳನ್ನು ಕೊಂದರೆಂದು ಅನುಮಾನಪಟ್ಟು, ಡೆಪ್ಯುಟಿ ಸುಪರಿಂಟೆಂಡೆಂಟ ದೊರೆಗಳವರಿಗೆ ಒಂದು ಮನವಿ ಮಾಡಿ ತನ್ನ ಮಗಳನ್ನು ಚೆನ್ನಪ್ಪಗೌಡನೂ, ಅವನ ತಾಯಿಯೂ, ಕೊಂದಿದ್ದಾರೆಂದೂ ಕೆಲವು ದೊಡ್ಡ ಮನುಷ್ಯರು ಕೂಡಿ ಇದನ್ನು ಮರೆಮಾಡಿಸಿರುವರೆಂದೂ, ತನಿಖೆ ನಡೆಯಬೇಕೆಂದೂ ತಿಳಿಸಿದನು. ತನ್ಮಧ್ಯೆ ಲಿಂಗಗೌಡನು ತನ್ನ ಸೋದರಳಿಯನ ಬಳಿಗೆ ಹೋಗಿ ದೇವಮ್ಮಳನ್ನು ಅವರೇ ಕೊಂದಿದ್ದಾರೆಂಬದಾಗಿ ಸಾಕ್ಷಿ ಹೇಳಬೇಕೆಂದನು. ಆದರೆ ಅವನು ನಿರಾಕರಿಸಿದನು. ಪೋಲಿಸ್ ಸುಪರಿಂಟೆಂಡೆಂಟ ದೊರೆಗಳವರು ಲಿಂಗಗೌಡನ ಮನವಿಯನ್ನು ಸರ್ಕಲ್ ಇನ್ಸ್‌ಪೆಕ್ಟರರಲ್ಲಿಗೆ ತನಿಖೆ ಬಗ್ಗೆ ಕಳುಹಿಸಿಕೊಟ್ಟರು. ಸರ್ಕಲ್ ಇನ್ಸ್‌ಪೆಕ್ಟರರು ತನಿಖೆ ನಡಿಸಿ ಅದು ಸ್ವಘಾತವೆಂದೇ ನಿರ್ಣಯಿಸಿದರು. ಇದರಿಂದ ಲಿಂಗಗೌಡನು ಬಹಳ ಸಿಟ್ಟುಗೊಂಡು ಜನವರಿ ತಾ ೨೦ನೇ ರಾತ್ರಿ ಕೋವಿ ಮತ್ತು ದೀವಟಿಗೆಯನ್ನು ಹಿಡಕೊಂಡು ದೇವಮ್ಮಳ ಅತ್ತೆ ಮನೆಗೆ ಹೋದನು. ದೇವಮ್ಮಳ ಅತ್ತೆ ಮತ್ತು ಅವಳ ಇಬ್ಬರು ಹೆಣ್ಮಕ್ಕಳೂ ಮಲಗಿದ್ದರು. ನಾಯಿ ಬೊಗಳಿದ್ದರಿಂದ ಅವರಿಗೆ ಎಚ್ಚರವಾಯಿತು. ಲಿಂಗಗೌಡನು ಮನೆಗೆ ಬೆಂಕಿಕೊಟ್ಟನು. ಜಾಕು ಮತ್ತು ಮಕ್ಕಳ ಆ ಬೆಂಕಿಯನ್ನು ನೊಂದಿಸುತ್ತಿರುವಾಗ ಲಿಂಗಗೌಡನು ಹೊರ ಚಾವಡಿಯ ಮಾಡಿಗೆ ಬೆಂಕಿಕೊಟ್ಟು, ಗುಡ್ಡದ ಕಡೆಗೆ ಓಡಿಹೋದನು. ಜಾಕು ಮತ್ತು ಮಕ್ಕಳ ಒಳ ಮಾಡಿನ ಬೆಂಕಿ ನೊಂದಿಸಿ ಹೊರಗೆ ಬಂದು ಬೆಂಕಿ ನೊಂದಿಸುತ್ತಿರುವಾಗ ಬೈಹುಲ್ಲು ಸುಡುವ ಬೆಳಕಿನಲ್ಲಿ ಲಿಂಗಗೌಡನು ಜಾಕು ಹೆಂಗಸನ್ನು ಕಂಡು ಅವಳಿಗೆ ಗುರಿ ಇಟ್ಟು ಹೊಡೆದ ಗುಂಡಿನಿಂದ ಜಾಕು ಮೃತಳಾದಳು. ಲಿಂಗಗೌಡನು ಅಲ್ಲಿಂದ ನೆಟ್ಟಗೆ ತನ್ನ ಸೋದರಳಿಯನ ಮನೆಗೆ ಹೋಗಿ ಅವನ ಮನೆಗೆ ಬೆಂಕಿಕೊಟ್ಟನು. ಮನೆಯು ಅರ್ಧ ಸುಡುವವರೆಗೆ ಮನೆಯವರಿಗೆ ಎಚ್ಚರವಾಗದ್ದರಿಂದ ಮನೆಯು ಸುಟ್ಟು ಬೂದಿಯಾಯಿತು. ಅಲ್ಲಿಂದ ಲಿಂಗಗೌಡನು ನೆಟ್ಟಗೆ ತನ್ನ ಮನೆಗೆ ಬಂದು ತೋಟದಲ್ಲಿದ್ದ ಒಂದು ತೆಂಗಿನ ಮರವನ್ನು ಏರಿ ಬೆಳಗ್ಗೆ ತನ್ನ ಹೆಂಡತಿ ಮಕ್ಕಳನ್ನು ನೋಡಿ ಸ್ವಘಾತಮಾಡಿಕೊಳ್ಳಲು ನಿಶ್ಚಯಿಸಿದನು. ಗ್ರಾಮಸ್ಥರು ಬೆಳಗ್ಗೆ ಮರದಲ್ಲಿ ಲಿಂಗಗೌಡನನ್ನು ನೋಡಿ, ಕೆಳಗೆ ಬರಹೇಳಲು ಅವನು ನಿರಾಕರಿಸಿದನಲ್ಲದೆ ತನ್ನ ಮಗಳ ಮರಣದ ಸಂಗತಿಯಲ್ಲಿ ಪೋಲಿಸಿನವರು ತನಗೆ ಸಹಾಯ ಮಾಡದ್ದರಿಂದ ನನ್ನನ್ನು ಹಿಡಿಯಲು ಬರುವ ಪೋಲಿಸಿನವರನ್ನು ಕೊಂದು ನಂತರ ಮರದಿಂದ ಹಾರಿ ಸ್ವಘಾತಮಾಡಿಕೊಳ್ಳುವೆನೆಂದು ತಾ. ೨೨ರ ವರೆಗೆ ಮರದ ಮೇಲೆಯೇ ಇದ್ದನು. ತನ್ಮಧ್ಯೆ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ರಾ। ಕೆ. ಬಾಬುರವರು ಆ ಸ್ಥಳಕ್ಕೆ ಬಂದು ಲಿಂಗಗೌಡನನ್ನು ಮರದಿಂದ ಇಳಿಯ ಹೇಳಲು ಅವನು ನಿರಾಕರಿಸಿ ಸಬ್ ಇನ್ಸ್‌ಪೆಕ್ಟರರಿಗೂ ಗದರಿಸಿದನು. ಕಡೆಗೆ ಸಬ್ ಇನ್ಸ್‌ಪೆಕ್ಟರರು ಲಿಂಗಗೌಡನ ಮಕ್ಕಳ ಸಹಾಯದಿಂದ ಅವನ ಮನಕರಗುವಂತೆ ಮಾಡಿ, ಅವನನ್ನು ಮರದಿಂದ ಇಳಿಸಿ ಕೈದುಮಾಡಿದರು.

ನೇಪಾಲಿನ ರಾಜಕುಮಾರರ ೬೦,೦೦೦ ರೂಪಾಯಿಯ ಚಿನ್ನಾಭರಣಗಳು ಕಳವಾಗಿ ಹೋಗಿದ್ದವು. ಈ ಪೈಕಿ ೨೦ ಸಾವಿರ ರೂಪಾಯಿ ಕ್ರಯ ಬಾಳುವ ಒಂದು ಕಂಠೀ ಸರವನ್ನು ಕುಂದಾಪುರದಲ್ಲಿ ಒಬ್ಬನು ಮಾರುತ್ತಿರುವಾಗ ಸರ್ಕಲ್ ಇನ್ಸ್‌ಪೆಕ್ಟರ್ ರಾ। ಕೆ. ಲಕ್ಷ್ಮಣರವರು ಅವನನ್ನು ಕೈದುಮಾಡಿ, ಪೋಲಿಸ್ ಪಹರೆಯಲ್ಲಿ ಅವನನ್ನು ನೇಪಾಲಿಗೆ ಕಳುಹಿಸಿಕೊಟ್ಟಿರುವರು.

ಇಲ್ಲಿಯ ಕಂಬ್ಳ ತೋಟದಲ್ಲಿ ರಾ। ಪಿ. ಭೋಜರಾಯರ ಮನೆಯತ್ತಕಡೆ ಹೋಗಲು ಮುನ್ಸಿಪಾಲಿಟಿಯವರು ಒಂದು ದಾರಿ ಕಡಿಸಿರುವರಷ್ಟೆ. ಈ ರಸ್ತೆಯನ್ನು ಜೋಡುಪಳ್ಳಿಯ ವರೆಗೆ ಮುಂದರಿಸಿದರೆ ಆ ಪ್ರಾಂತ್ಯದ ಜನರಿಗೆ ವಿಶೇಷ ಪ್ರಯೋಜನವುಂಟಾಗುವದು. ಜೋಡುಪಳ್ಳಿ ಕಡೆಗೆ ಹೋಗುವ ಜನಸಂಚಾರವು ಬಹಳ ಅಧಿಕವಾಗಿರುವದು. ಮಳೆಗಾಲದಲ್ಲಿ ನೀರು ತುಂಬುವದರಿಂದಲೂ ಸಕ್ಕ ದಾರಿ ಇಲ್ಲದ್ದರಿಂದಲೂ ಆ ಕಡೆಯ ಜನರಿಗೆ ಪೇಟೆಯಿಂದ ಹೋಗಲು ಅತಿ ಕಷ್ಟ. ಈಗ ಕಡಿಸಿರುವ ಕಂಬ್ಳ ಹೊಸ ರಸ್ತೆಗಿಂತಲೂ ಜೋಡುಪಳ್ಳಿ ರಸ್ತೆ ಕಡಿಸಿದರೆ ಜನರಿಗೆ ಹೆಚ್ಚಿನ ಪ್ರಯೋಜನವಾಗುವದು. ಈ ದಾರಿ ಕಡಿಸಿದರೆ ಒಂದಕ್ಕೊಂದು ತಾಗಿರುವ ಮನೆಗಳಲ್ಲಿ ಕೆಲವು ಹೋಗುವದರಿಂದ ಆ ಪ್ರಾಂತ್ಯದ ಆರೋಗ್ಯವೂ ಹೆಚ್ಚುವದು. ಈ ಮೊದಲಾದ ಪ್ರಯೋಜನಗಳನ್ನು ಮುನ್ಸಿಪಾಲಿಟಿಯವರು ಲಕ್ಷ್ಯಕ್ಕೆ ತಂದು ಈ ದಾರಿಯನ್ನು ಕಡಿಸುವ ಯೋಚನೆಮಾಡಬೇಕೆಂದು ಆ ಪ್ರಾಂತ್ಯದ ಒಬ್ಬ ಬಾತ್ಮೀದಾರರು ವಿಜ್ಞಾಪಿಸಿಕೊಂಡಿರುವರು.

ಇಲ್ಲಿಯ ಡಿಸ್ಟ್ರಿಕ್ಟ ಮುನ್ಸೀಫರಾದ ಮ। ರಾ। ವೆಂಕಟಸುಬ್ಬರಾಯರವರು ಮೂರು ವಾರಗಳ ರಜೆ ತಕ್ಕೊಂಡಿರುವದರಿಂದ ಇದೇ ಕೋರ್ಟಿನ ಶಿರಸ್ತೆದಾರರಾಗಿದ್ದ ರಾ। ಪಿ ಎನ್ ಭಂಡಾರಕಾರರವರು ಆಕ್ಟಿಂಗ್ ಮುನ್ಸೀಫರಾಗಿ ನೇಮಿಸಲ್ಪಟ್ಟಿದ್ದಾರೆ.

ತಹಸೀಲದಾರ ಮ। ಬಿ. ಎಸ್ ಅಲ್ಬುಕರ್ಕರವರ ರಜೆಯು ತೀರಿದನಂತರ ಇವರು ಕಾರ್ಕಳದ ತಹಸೀಲದಾರ ಮ। ರಾ। ರಾ। ಬಿ ಮಂಜನಾಥ ಬಾಳಿಗರಿಂದ ಚಾರ್ಜು ತಕ್ಕೊಳ್ಳಬೇಕಾಗುವದು.

ಮ। ರಾ। ಬಿ. ಮಂಜುನಾಥ ಬಾಳಿಗರು ಉಪ್ಪಿನಂಗಡಿ ತಾಲೂಕಿನ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು.

ಮ। ರಾ। ರಾ। ಡಿ ಆನಂದರಾಯರು ಮಂಗಳೂರು ತಾಲೂಕಿನ ಆಕ್ಟಿಂಗ್ ತಹಸೀಲದಾರರಾಗಿ ನೇಮಿಸಲ್ಪಟ್ಟಿದ್ದಾರೆ.

ಮ। ರಾ। ಎಮ್. ಅನಂತರಾಯರವರು ಕಾಸರಗೋಡು ತಾಲೂಕಿನ ಆಕ್ಟಿಂಗ್ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು.

ಕುಂದಾಪುರ ಡಿವಿಜನ್ ಆಫೀಸರರು ತಾ ೩ ಪೆರ್ಡೂರು, ತಾ ೪ ಬ್ರಹ್ಮಾವರ, ತಾ ೪–೬ ಬ್ರಹ್ಮಾವರ, ತಾ ೬ ಶಿರಿಯಾರ್, ತಾ ೭, ೮, ೯, ಶಿರಿಯಾರ್. ತಾ ೧೦ ಶಿರಿಯಾರಿಂದ ಬ್ರಹ್ಮಾವರ ತಾ ೧೧ ಬ್ರಹ್ಮಾವರದಿಂದ ಪೆರ್ಡೂರು, ತಾ ೧೨ ಪೆರ್ಡೂರು, ತಾ. ೧೩ ಪೆರ್ಡೂರಿಂದ ಬ್ರಹ್ಮಾವರ, ತಾ ೧೪ ಬ್ರಹ್ಮಾವರದಿಂದ ಕುಂದಾಪುರ, ಈ ರೀತಿ ಸರ್ಕೀಟು ಬೆಳಸುವರು.

ಮಂಗಳೂರು ತಾಲೂಕು ಸ್ಪೆಶಲ್ ಲೆಂಡ್‌ರಿಕೊರ್ಡ್ಸ ಇನ್ಸ್‌ಪೆಕ್ಟರ ರಾ। ಟಿ ನರಸಿಂಗರಾಯರು ೬ ವಾರಗಳ ಪ್ರಿವಿಲೆಜ್ ರಜೆ ಪಡಕೊಂಡಿರುವದರಿಂದ ಎನೆ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ। ಎಸ್. ಗೋಪಾಲರಾಯರು ಸ್ಪೆಶಲ್ ಲೆಂಡ್‌ರಿಕೊರ್ಡ್ಸ ಇನ್ಸ್‌ಪೆಕ್ಟರರಾಗಿಯೂ ರಾ। ಕೆ. ಕೇಶವರಾಯರು ಮಂಗಳೂರು ಫಿರ್ಕ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿಯೂ ನೇಮಿಸಲ್ಪಟ್ಟಿರುವರು.

ಇಲ್ಲಿಯ ರೋಮನ್ ಕೆಥೋಲಿಕ್ ಪ್ರೊವಿಡೆಂಟ್ ಫಂಡನ್ನು ಇನ್ಶೂರೆನ್ಸ್ ಕಂಪೆನಿಯಾಗಿ ಮಾರ್ಪಡಿಸುವರೆಂಬ ವರ್ತಮಾನವನ್ನು ಆ ಫಂಡಿನ ಮೆಂಬರರು ಕೇಳಿ ಇಂಥಾ ಮಾರ್ಪಾಟಿನಿಂದ ಮೆಂಬರರೆಲ್ಲರಿಗೂ ವಿಶೇಷ ನಷ್ಟ ಉಂಟಾಗುವದೆಂತಲೂ ಫಂಡನ್ನು ಈ ರೀತಿ ರೂಪಾಂತರಗೊಳಿಸುವದು ಅಗತ್ಯವಲ್ಲವೆಂಬದನ್ನೂ ಸೂಚಿಸಿ ಫಂಡಿನ ಮೆಂಬರರ ಕೆಲವು ಪತ್ರಗಳು ಪ್ರಕಟಣೆಯ ಬಗ್ಗೆ ಬಂದಿರುವವು. ಇಂಥವುಗಳಲ್ಲಿ ಮುಖ್ಯವಾದವುಗಳನ್ನು ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು. ತನ್ಮಧ್ಯೆ ಫಂಡಿನ ಅಧಿಕಾರಿಗಳಿಗೂ ಸರಕಾರದವರಿಗೂ ನಡದ ಪೂರ್ಣ ಪತ್ರವ್ಯವಹಾರವೆಲ್ಲವನ್ನು ಕೂಡಲೇ ಪ್ರಕಟಿಸಬೇಕೆಂಬ ವಿಜ್ಞಾಪನೆಯು ಈ ಮೆಂಬರರ ಪತ್ರಗಳಿಂದ ತೋರಿಬರುವದರಿಂದ ಇಂಥಾ ವಿಜ್ಞಾಪನೆಯನ್ನು ಮನ್ನಿಸಿ ಸಂಬಂಧಪಟ್ಟ ಪತ್ರವ್ಯವಹಾರವನ್ನು ಫಂಡಿನ ಅಧಿಕಾರಿಗಳು ಪ್ರಕಟಿಸುವರೆಂಬದಾಗಿ ಕೋರುತ್ತೇವೆ.

ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನ ಅಫೀಸರರ ಚುನಾವಣೆಯು ಕಳೆದ ಆದಿತ್ಯವಾರ ನಡೆಯಿತು. ಅಧ್ಯಕ್ಷಸ್ಥಾನಕ್ಕೆ ಉಮೇದ್ವಾರರಾಗಿದ್ದ ಮ। ರಾ। ದಿವಾನ್ ಬಹದ್ದೂರು ಎಮ್. ಮುಂಡಪ್ಪ ಬಂಗೇರರು ಮತ್ತು ಡಿಸ್ಟ್ರಿಕ್ಟ ಪೋಲಿಸ್ ಸುಪರಿಂಟೆಂಡೆಂಟ ಮ। ರಾ। ಆರ್ಣೆ ಸುಬ್ಬರಾಯರು ಇವರಲ್ಲಿ ಮ। ರಾ। ಆರ್ಣೆ ಸುಬ್ಬರಾಯರವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದ್ದಾರೆ. ಮ। ಸೈಮನ್ ಅಲ್ವಾರಿಸರವರು ಉಪಾಧ್ಯಕ್ಷರಾಗಿಯೂ ಮ। ರಾ। ರಾವ್ ಬಹದ್ದೂರ್ ಎನ್. ಸುಬ್ಬರಾವ್‌ರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುತ್ತಾರೆ.

ಕಳೆದ ಸೋಮವಾರ ಇಲ್ಲಿಯ ಕೊಸ್ಮೊಪೊಲಿಟನ್ ಕ್ಲಬ್ಬಿನಲ್ಲಿ ಮ। ರಾ। ದಿವಾನ್ ಬಹದ್ದೂರ್ ಎಮ್. ಮುಂಡಪ್ಪ ಬಂಗೇರರವರ ಅಧ್ಯಕ್ಷತೆಯಲ್ಲಿ ಸ್ವರ್ಗಸ್ಥರಾದ ಗೋಪಾಲಕೃಷ್ಣ ಗೋಖಲೆಯವರ ಮರಣದಿಂದುಂಟಾದ ಸಂತಾಪವನ್ನು ಸೂಚಿಸುವರೆ ಇಲ್ಲಿಯ ಪ್ರಜಾಜನರ ಸಭೆ ಕೂಡಿತು. ಪೂನೆಯ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಮೂಲಕ ಗೋಖಲೆಯವರ ಕುಟುಂಬದವರಿಗೆ ಇಲ್ಲಿಯವರು ಸಹ ಸಂತಾಪವನ್ನು ತಂತೀ ಮೂಲಕ ಸೂಚಿಸುವರೆ ನಿರ್ಣಯಿಸಲ್ಪಟ್ಟಿತು.

ಮೆಸ್ಸರ್ಸ್ ಕವಿ ಎಂಡ್ ಸನ್ಸ್‌ರವರು ಸ್ವದೇಶಾಭಿಮಾನಿಯ ಚಂದಾದಾರರೆಲ್ಲರಿಗೂ ಹಂಚುವರೆ ಸಿದ್ಧಗೊಳಿಸಿದ ೧೯೧೫ನೇ ವರ್ಷದ ಕೆಲಂಡರನ್ನು ಈ ಸಂಚಿಕೆಯೊಂದಿಗೆ ಕಳುಹಿಸಿರುವವು.

ಇಂಡಿಯನ್ ಲೇಡಿ ಸ್ಯಾಂಡೋ

ಮಿಸ್ ತಾರಾ.

ದೇಶದ ಅಯಾ ಪ್ರಾಂತ್ಯಗಳಲ್ಲಿ ತನ್ನ ಅತ್ಯದ್ಭುತವಾದ ಸಾಹಸಗಳನ್ನು ತೋರಿಸಿ ವಿಶೇಷ ಖ್ಯಾತಿಯನ್ನು ಪಡೆದ ಮಿಸ್ ತಾರಾರವರು ಒದುವ ಬೃಹಸ್ಪತಿವಾರದಿಂದ ಇಲ್ಲಿಯೂ ತನ್ನ ಸಾಹಸಗಳನ್ನು ಪೋಲಿಸ್ ಲೈನುಗಳ ಸಮೀಪವಿರುವ ಮೈದಾನಿನಲ್ಲಿ ತೋರಿಸ ಪ್ರಾರಂಭಿಸುವರು.

ಮಾರಾಟಕ್ಕೆ ಇದೆ.

ಬಲ್ಮಠ ಹೊಸರಸ್ತೆ ಡಾಕ್ಟರ್ ಪೀಟರ್ಸ್ಸನವರ ಮನೆಯ ಎದುರಿಗೆ, ಇಜಬೆಲ್ಲ ತೇರೇಸ ಡಿ. ಸಿಲ್ವಬಾಯಿಯ ಮನೆ, ಅನೇಕ ಫಲಮರಗಳು ಮತ್ತು ಬಾವಿ ಇರುವ ದೊಡ್ಡ ಹಿತ್ತಲು ಮಾರಲ್ಪಡುವದು. ಕ್ರಯ ೪೫೦೦ ರೂಪಾಯಿ. ಇಂಥಾ ಒಳ್ಳೆ ಭೂಮಿ ಇತ್ತಲಾಗೆ ಸಿಕ್ಕಲಿಕ್ಕಿಲ್ಲ. ಬೇಕಾದವರು ಒಂದು ನೋಡಬಹುದು.

ತಾ 3–3–1915. ಇಜಬೆಲ್ಲ ತೇರೇಸ ಡಿ. ಸಿಲ್ವಬಾಯಿ

ಜೀನಸು ಧಾರಣೆ. (ರಖಂ)

ಹೊಸ ಮಸ್ಕತಿ ಅಕ್ಕಿ	5–2–0	5–8–0
ಹೊಸ ಗಾಡಿ ರಾಶಿ ,,	4–5–0	4–8–0
ಹೊಸ ಗುಡ್ಡು ,,	4–12–0	5–0–0
ಅನ್ವಲ್ ಬೆಳ್ತಿಗೆ ,,	5–6–0	5–8–0
ಗುಡ್ಡು ಬೆಳ್ತಿಗೆ ,,	5–0–0	5–1–0
ರಂಗೂನು ಬೆಳ್ತಿಗೆ ಗೋಣಿ ೧ರ	8–12–0	9–0–0
ಗೋದಿ ಗೋಣಿ ೧ರ ...	13–4–0	14–4–0
ಹುರುಳಿ ಗೋಣಿ ೧ರ ...	6–4–0	7–4–0
ಕಡಲೆ ಗೋಣಿ ೧ರ. ...		11–12–0
ತೊಗರಿ ಗೋಣಿ ೧ರ ...	10–12–0	12–0–0
ತೊಗರಿ ಬೇಳೆ ಗೋಣಿ ೧ರ.	12–8–0	16–0–0
ಉದ್ದು ಗೋಣಿ ೧ರ ...		10–8–0
ಊರು ಬೆಲ್ಲ ಖಂಡಿ ೧ರ ..		55–0–0
ಉಪ್ಪು ಗೋಣಿ ೧ರ		3–7–0
ಕೊಬ್ರಿ ಖಂಡಿ ೧ರ	80–0–0	84–0–0
ಕೊಬ್ರಿ ಹಿಂಡಿ ಖಂಡಿ ೧ರ	20–0–0	23–0–0
ಎಳ್ಳಿಂಡಿ ಖಂಡಿ ೧ರ	30–0–0	36–0–0
ಕೊಬ್ರಿ ಎಣ್ಣೆ ಮುಡಿ ೧ರ	6–0–0	6–2–0
ಎಳ್ಳೆಣ್ಣೆ ಮುಡಿ ೧ರ ([illegible])	3–14–0	4–0–0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ		5–0–0
ಮೋರಿಸ್ ಸಕ್ಕರೆ ಮುಡಿ ೧ರ		4–6–2
ಕಾಫಿ ಖಂಡಿ ೧ರ.	210–0–0.	220–0–0
ಬಿಳೇಗೋಟು ಖಂಡಿ ೧ರ.	115–0–0	116–0–0
ಹೊಸ ಬಿಳೇಗೋಟು ಖಂಡಿ ೧ರ	83–0–0	85–0–0
ಗೇರು ಬೀಜ ಮುಡಿ ೧ರ		1–2–0
ಕಬ್ಬಿಣ ಖಂಡಿ ೧ರ		50–0–0
ತಾಂಬ್ರ ತಗಡುಮಣ ೧ರ		17–2–0
ತಾಂಬ್ರ ಪಾತ್ರೆಗಳು ಮಣ ೧ರ		22–0–0
[illegible] ೧ರ		18–12–0

Box Locks. **Padlocks.**





ಧಾರಣೆ ಸುಲಭ! ಅಲಿಗರ್ ಬೀಗಗಳು. ಧಾರಣೆ ಸುಲಭ!

ಭದ್ರವಾಗಿಯೂ, ಸ್ಥಿರವಾಗಿಯೂ ಇರುವದು ಒಂದರ ಬೀಗದಕೈ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವದು ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ ಬ್ಯಾಂಕುಗಳಿಗೂ, ಸರಕಾರ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳು

ನಂಬ್ರ	1	2	3	4	5
	0-12-0	0-15-0	1-4-0	1-10-0	..

ಆರು ಚಕ್ರಗಳಿರುವ ಬೀಗಗಳ

1-2-0	1-8-0	2-4-0	3-0-0	3-8-0

ಮಿಲ್ಲರ್ ಬೀಗಗಳು

0-4-0	0-5-0	0-6-0	0-8-0	0-10-0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ಒಂದಕ್ಕೆ 0-13-0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ಒಂದಕ್ಕೆ 1-8-0, 1-12-0.

ವಿಳಾಸ.— ಎಚ್. ಎನ್ ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯ ಪುಸ್ತಕವು

ಜೀವಿತಕಾಲದ ವರಿಗೂ ನಮ್ಮ ಶರೀರವನ್ನು ರೋಗಗಳು ಹತ್ತರ ಬಾರದೆ ಮಾಡಿಕೊಳ್ಳುವದೇ ನಮ್ಮ ಮೊಟ್ಟಮೊದಲು ಕರ್ತವ್ಯವು ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನು ಪುನಹ ಹೇಗೆ ಪಡೆಯುವದು ಎಂಬ ವಿಷಯಗಳಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ ಈ ಗ್ರಂಥವನ್ನು ಪ್ರಜೆಗಳ ಶ್ರೇಯಾರ್ಥವಾಗಿ ಕೋರಿದವರಿಗೆ ಕ್ರಯವೂ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವದು ಈ ಪುಸ್ತಕವು ಒಂಭತ್ತು ಭಾಷೆಗಳಲ್ಲಿ ಛಾಪಿಸಲ್ಪಟ್ಟು ಇದುವರಿಗೆ ನಾಲ್ಕು ಲಕ್ಷ ಪ್ರತಿಗಳು ಕಳುಹಿಸಲ್ಪಟ್ಟಿರುವದೇ ಇದು ಎಷ್ಟು ಉಪಯೋಗಕರವಾದದ್ದು ಎಂಬುವದಕ್ಕೆ ಸಾಕ್ಷಿಯಾಗಿರುತ್ತದೆ.

ಕಲಿಯುಗದ ಕಾಮಧೇನು.

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಿಮಾಡಿ ಹೆಚ್ಚುಮಾಡುತ್ತದೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ. ಜೀರ್ಣಶಕ್ತಿಯನ್ನು ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗುವಂತೆ ಮಾಡುವದು. ಅಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1-0-0.

ರಾಜವೈದ್ಯ ನಾರಾಯಣಜಿ ಕೇಶವಜಿ,
20 ಜೀನಾ ಬಜಾರ್ ರೋಡ್,
ಮದರಾಸು

ಕೊಡ್‌ಲಿವರ್ ಎಣ್ಣೆ.



ಮಂಗಳೂರು, ಶುಕ್ರವಾರ ತಾರೀಕು 12ನೇ ಮಾರ್ಚಿ 1915

ತಿರುವಾಂಕೋಡು ಸಂಸ್ಥಾನದ ನಿರಾಶ್ರಿತ ಜನರು

ಪಂಚಮರೇ ಮೊದಲಾದ ದೀನಸ್ಥಿತಿಯಲ್ಲಿರುವ ನಿರಾಶ್ರಿತರು ಬಹಳವಾಗಿರುವ ಈ ಪ್ರಾಂತ್ಯದಲ್ಲಿ ತಿರುವಾಂಕೋಡು ಸಂಸ್ಥಾನದ ನಿರಾಶ್ರಿತ ಜನರ ಉದ್ಧರಣೆಯು ಹೇಗೆ ಸಾಗುತ್ತಿರುವುದೆಂಬುದನ್ನು ತಿಳಿಯ ಹೇಳುವುದು ಅಗತ್ಯವಾಗಿದೆ ಇಲ್ಲಿ ನಿರಾಶ್ರಿತರ ಬಗ್ಗೆ ಹೋರಾಡುವಂಥವರು ಇನ್ನೂ ಜನಸಮುದಾಯದಲ್ಲಿ ಹಲವರ ನಿಂದೆಗೆ ಗುರಿಯಾಗುತ್ತಿರುವರು ನಿರಾಶ್ರಿತರ ಉದ್ಧರಣೆಯು ದೇಶೋದ್ಧರಣೆಗೆ ಅಗತ್ಯವೆಂತ ಆ ಸಂಸ್ಥಾನದ ಮಹಾ ಜನರು ತಿಳಕೊಂಡದ್ದರಿಂದ ತಿರುವಾಂಕೋಡು ಸಂಸ್ಥಾನದಲ್ಲಿ ಸರ್ವರೂ ಅಲ್ಲಿಯ ಸರಕಾರದವರೊಂದಿಗೆ ನಿರಾಶ್ರಿತರ ಉದ್ಧರಣೆ ಬಗ್ಗೆ ಮಾಡುವ ಪ್ರಯತ್ನಗಳು ನೆರವೇರುತ್ತ ಬರುತ್ತಿವೆ ದೀನರ ಏಳಿಗೆಯ ಪ್ರಯತ್ನಗಳು ತುಚ್ಛವಲ್ಲವೆಂತ ಅಲ್ಲಿಯವರು ತಿಳಕೊಂಡಿದ್ದಾರೆ ಸರಕಾರದವರ ಶಾಲೆಗಳಲ್ಲಿ 'ಪುಲಿಯಾ (ಇಲ್ಲಿಯ ಹೊಲೆಯರ ಜಾತಿಯು) ಮಕ್ಕಳಿಗೆ ಇತರ ಜಾತಿಯವರಿಗೆ ಪ್ರವೇಶ ದೊರಕುವ ರೀತಿಯಲ್ಲಿಯೇ ಪ್ರವೇಶವು ಸರಕಾರದವರಿಂದ ಇತ್ತಲಾಗೆ ಕೊಡೋಣಾಗಿರುವದು ಹೀಗೆ ಹೊಲೆಯರ ಮಕ್ಕಳಿಗೆ ಸಹ ಶಾಲೆಗಳಲ್ಲಿ ಎಲ್ಲರೊಂದಿಗೆ ಸೇರಿಸಿಕೊಳ್ಳುವುದು ಆಕ್ಷೇಪಕರವೆಂತ ಆ ಸಂಸ್ಥಾನದಲ್ಲಿ ಕೆಲವರು ಏನೋ ಗಲಭೆಯನ್ನು ಮಾಡಿದರ ಹೀಗೆ ಗಲಭೆ ಮಾಡಿದ್ದರಿಂದ ಸರಕಾರದವರು ಕೊಟ್ಟ ಅಪ್ಪಣೆಯು ಹಿಂತೆಗೆಯಲ್ಪಡುವುದೆಂಬ ಅಂಜಿಕೆಯು ಆ ಸಂಸ್ಥಾನದಲ್ಲಿ ಹಲವರಲ್ಲಿತ್ತು ಆದರೆ ಪ್ರಜಾಹಿತವನ್ನೂ ಪ್ರಜಾಜನರ ಅಭಿಪ್ರಾಯವನ್ನೂ ಅಲ್ಲಿಯ ಸರಕಾರದವರು ಸರಿಯಾಗಿ ತಿಳಕೊಂಡದ್ದರಿಂದ ದೀನರ ಒಳ್ಳಿತಕ್ಕಾಗಿ ಒಮ್ಮೆ ಕೊಡೋಣಾದ ಆಜ್ಞೆಯು ಹಿಂತೆಗಿಯೋಣಾಗಲಿಲ್ಲ ತಿರುವನಂತಪುರದಲ್ಲಿ ವಿಕ್ಟೋರಿಯಾ ಜುಬಿಲಿ ಸಭಾಮಂದಿರದಲ್ಲಿ ಹೊಲೆಯರ ಮಹಾಸಭೆಯೊಂದು ಜರಗಿತ್ತು ಸಂಸ್ಥಾನದ ಸರಕಾರದ ದಿವಾನರಾದ ಕೃಷ್ಣಸ್ವಾಮಿಯರರವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು ನಿರಾಶ್ರಿತರ ಉದ್ಧರಣೆಯನ್ನು ಕೈಕೊಂಡಿರುವ ಮೇಲು ಜಾತಿಯವರಲ್ಲಿ ಹಲವರು ಈ ಸಭೆಯಲ್ಲಿ ಸರಕಾರದವರ ಸಹಕಾರವನ್ನು ನಿರೀಕ್ಷಿಸಿ ಮಾತಾಡಿದರು ಹೊಲೆಯರ ಸ್ತ್ರೀಯರಲ್ಲೊಬ್ಬಳು ಸಭಿಕರೆಲ್ಲರಿಗೆ ಹೃದ್ಗತವಾಗುವಂತೆ ತಮ್ಮ ಕಷ್ಟಗಳನ್ನೆಲ್ಲ ವಿವರಿಸಿ ಹೇಳಿದಳು ದಿವಾನರವರು ಈ ಸಂಕಷ್ಟಗಳನ್ನೆಲ್ಲ ಕೇಳಿಕೊಂಡು ಇವಕ್ಕೆಲ್ಲಾ ಬೇಕಾದ ನಿವಾರಣೆಯನ್ನು ಕಲ್ಪಿಸಿಕೊಡುವೆನೆಂತ ಅಭಯವಿತ್ತರು ತಿರುವನಂತಪುರದ ಹೊಲತಿಯು ಸಭೆಯಲ್ಲಿ ಹೇಳಿದ ನಿರಾಶ್ರಿತರ ಸಂಕಷ್ಟಗಳನ್ನು ಇಲ್ಲಿ ವಿವರಿಸಬೇಕೆಂತಿಲ್ಲ ಈ ಸಂಸ್ಥಾನದ ಸಾಧಾರಣ ಎಲ್ಲಾ ಭಾಗಗಳಲ್ಲಿಯೂ ಇವು ಒಂದೇ ತರವಾಗಿವೆ ಹೊಲತಿಯ ರೋಧನೆಯು ತಿರುವಾಂಕೋಡು ಸಂಸ್ಥಾನದಲ್ಲಿ ಕೇಳಿಸಿತು ಸರಕಾರದವರೂ ಪ್ರಜಾಜನರೂ ಈ ರೋಧನೆಗೆ ಕಿವಿಕೊಟ್ಟರು ಆದರೆ ಈ ಪ್ರಾಂತ್ಯಗಳಲ್ಲಿ ಇಂಥಾ ರೋಧನೆಗೆ ಕಿವಿಕೊಟ್ಟು ಕೇಳುವ ಕಾಲವು ಇನ್ನೂ ಬಹಳ ದೂರವಿರುವುದೇ? ದೀನರ ಉದ್ಧರಣೆಯನ್ನು ಸಾಧಿಸಿದ್ದರಿಂದ ಅವರಿಗೆ ಒಳ್ಳಿತನ್ನು ಮಾಡಿದ್ದರಿಂದ ಮೇಲು ಜಾತಿಯವರು ತಮ್ಮ ಪದವಿಯನ್ನು ಎಂದೂ ಕಳಕೊಳರೆಂಬುದನು ಇಲ್ಲಿ ಮಾನೇಲು ಗೂ ಸಗ್ಗೇ ಪದೇ ತಿಳಕೊಳ್ಳಬೇಕಾಗಿದೆ.

ಬಂಟರ ವಿದ್ಯಾರ್ಥಿಗಳು

ಈ ವಿದ್ಯಾರ್ಥಿಗಳ ಸಂಘದ ಮತ್ತು ವಿದ್ಯಾರ್ಥಿ ಭವನದ ವಾರ್ಷಿಕ ಮಹೋತ್ಸವವು ಕಳೆದ ಆದಿತ್ಯವಾರ ದಿನ ಡಿಸ್ಟ್ರಿಕ್ಟ್ ಪೋಲಿಸು ಸುಪರಿಂಟೆಂಡೆಂಟರಾದ ಮ| ರ ರಾ| ಎ ಸುಬ್ಬರಾವ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಮಂಗಳೂರಲ್ಲಿ ವಿದ್ಯಾರ್ಥಿಗಳ ಹಲವು ಸಂಘಗಳು ಜನ್ಮವೆತ್ತಿದ ಕೆಲವು ಸಮಯದಲ್ಲಿಯೇ ಅಡಗಿಹೋಗುವುದು ಸಾಮಾನ್ಯವಾಗಿದ್ದರೂ ಬಂಟರ ವಿದ್ಯಾರ್ಥಿಗಳ ಸಂಘವು ದೀರ್ಘ ಕಾಲ ಬಾಳಿ ಬಂಟ ಜಾತಿಯ ಶ್ರೇಯೋಭಿವೃದ್ಧಿ ಪ್ರಯತ್ನಗಳನ್ನು ಮಾಡುತ್ತಿರುವುದು ಸಂತೋಷಕರ ವಿಷಯವಾಗಿದೆ ೧೯೦೬ರಲ್ಲಿ ಸ್ಥಾಪಿಸಲ್ಪಟ್ಟ ಈ ವಿದ್ಯಾರ್ಥಿ ಸಂಘದ ಮೂಲ ವಿದ್ಯಾರ್ಥಿ ಭವನವೂ, ನಾಡವರ ಸಂಘವೂ ಹೇಗೆ ತಲೆದೋರಿದವೆಂಬ ಪ್ರಸ್ತಾಪ ವಿದ್ಯಾರ್ಥಿಗಳ ಸಂಘದ ವಾರ್ಷಿಕ ವೃತ್ತಾಂತದ ಪ್ರಾರಂಭದಲ್ಲಿದೆ ಪ್ರಕೃತ ನಾಡವ ಸಂಘಕ್ಕೆ ತಮ್ಮ ವಿದ್ಯಾಭಿವೃದ್ಧಿಯ ಪ್ರಯತ್ನಗಳಲ್ಲಿ ಬೇಕಾದ ದ್ರವ್ಯ ಸಹಾಯವು ಸ್ವಜಾತಿಯವರಿಂದ ಸಾಕಾದ ರೀತಿ ದೊರಕುವದಿಲ್ಲವೆಂಬ ವ್ಯಸನಕರ ಪ್ರಸ್ತಾಪವು ಸಹ ವಾರ್ಷಿಕ ವೃತ್ತಾಂತದ ಆದಿಭಾಗದಲ್ಲಿಯೇ ಇರುವುದು ಬಂಟರಲ್ಲಿ ಹೀಗೆ ಉತ್ಸಾಹವು ಕುಂದಲು ಕಾರಣವೇನೆಂಬುದನ್ನು ಶೋಧಿಸಿಕೊಂಡು ಈ ಕೊರತೆಯ ನಿವಾರಣೋಪಾಯಗಳನ್ನು ತಕ್ಕ ಕಾಲದಲ್ಲಿಯೇ ಕಲ್ಪಿಸಿಕೊಳ್ಳುವುದು ಅಗತ್ಯವಾಗಿರುವುದು ಬಂಟ ಜಾತಿಯ ಪ್ರಮುಖ ಗೃಹಸ್ಥರೂ, ನಾಡವರ ಸಂಘದ ಅಧಿಕಾರಿಗಳೂ, ವಿದ್ಯಾ ಲಾಭವನ್ನು ಪಡೆದ ಇತರ ಬಂಟರ ಗೃಹಸ್ಥರೂ ಈ ವಿಷಯವನ್ನು ಶೀಘ್ರದಲ್ಲಿಯೇ ಲಕ್ಷ್ಯಕ್ಕೆ ತಂದುಕೊಳ್ಳುವರಾಗಿ ಕೋರುತ್ತೇವೆ

ಬಂಟರ ವಿದ್ಯಾರ್ಥಿ ಸಂಘದ ಮೆಂಬರರಲ್ಲಿ ರಾ| ಬಿ ದಾಸಶೆಟ್ಟಿಗಳವರು ಬಿ ಎ ಪರೀಕ್ಷೆಯಲ್ಲಿಯೂ ರಾ| ಬಿ ರಾಮಣ್ಣ ಶೆಟ್ಟಿಗಳವರು ಎಲ್ ಎಮ್ ಎಂಡ್ ಎಸ ಪರೀಕ್ಷೆಯಲ್ಲಿಯೂ ಪಾಸಾಗಿರುವರೆಂಬದಾಗಿ ತಿಳಿಯುತ್ತೇವೆ ಬಂಟರ ವಿದ್ಯಾರ್ಥಿಗಳ ಪ್ರಯೋಜನಾರ್ಥವಾಗಿ ಸಂಘದವರ ಶ್ರೀರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಹಲವು ಉಪಯುಕ್ತ ವಿಷಯಗಳ ಕುರಿತ ವಿದ್ವಾಂಸರ ಭಾಷಣಗಳೂ ವಾದಗಳೂ ಗತವರುಷದಲ್ಲಿ ಆಗಿಂದಾಗ್ಗೆ ನಡೆದಿದ್ದವು ಬಂಟ ವಿದ್ಯಾರ್ಥಿಗಳ ಉಪಯೋಗದ ಬಗ್ಗೆ ವಿದ್ಯಾರ್ಥಿ ಭವನದಲ್ಲಿ ೯೩೫ ಗ್ರಂಥಗಳುಳ್ಳ ಪುಸ್ತಕಾಲಯವು ಇರುವುದು ವಿದ್ಯಾರ್ಥಿ ಭವನದಲ್ಲಿ ಪ್ರಕೃತ ೩೫ ಜನ ವಿದ್ಯಾರ್ಥಿಗಳಿದ್ದಾರೆ ವಿದ್ಯಾರ್ಥಿಗಳ ಸಂಖ್ಯೆಯು ಭವನದಲ್ಲಿ ಇನ್ನೂ ಹೆಚ್ಚಬಹುದಿತ್ತು ಆದರೆ ಸ್ಥಳದ ಅಡಚಣೆಯಿಂದ ಹಲವು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗಲಿಲ್ಲವೆಂತ ತಿಳಕೊಳ್ಳುತ್ತೇವೆ ಮಂಗಳೂರಿಗೆ ಇತ್ತಲಾಗೆ ಬಂದಿದ್ದ ಸರ್ ನಾರಾಯಣಗಣೇಶ ಚಂದಾವರಕಾರರವರು ವಿದ್ಯಾರ್ಥಿ ಭವನವನ್ನು ಸಂದರ್ಶಿಸಿ ವಿದ್ಯಾರ್ಥಿಗಳಿಗೆ ಯಥೋಚಿತ ಬುದ್ಧಿವಾದವನ್ನು ಕೊಟ್ಟಿರುವರು ವಿದ್ಯಾರ್ಥಿ ಭವನದ ನಿವಾಸದಿಂದ ವಿದ್ಯಾರ್ಥಿಗಳಲ್ಲಿ ಬೆಳಿಯುವ ಐಕ್ಯವೂ, ಭ್ರಾತೃಭಾವವೂ ಕ್ರಮೇಣ ಈ ಜಿಲ್ಲೆಯ ಆಯಾ ಪ್ರಾಂತ್ಯಗಳಲ್ಲಿರುವ ಬಂಟ ಜಾತಿಯವರಲ್ಲಿ ಪ್ರಸರಿಸಲೆಂಬ ಕೋರಿಕೆಯನ್ನು ವ್ಯಕ್ತಗೊಳಿಸಿ ವಿದ್ಯಾರ್ಥಿ ಸಂಘದ ಗತವರುಷದ ವೃತ್ತಾಂತವನ್ನು ಮುಗಿಸಿರುವರು ಸಂಘದವರ ಈ ಕೋರಿಕೆಯು ನೆರವೇರಬೇಕೆಂಬುದಾಗಿ ಅಪೇಕ್ಷಿಸುತ್ತೇವೆ.

ವಾರ್ಷಿಕೋತ್ಸವ ಕಾಲದಲ್ಲಿ ಪ್ರತಿ ವರುಷದಲ್ಲಿಯೂ ಪಂಚಮರ ಶಾಲಾ ಹುಡುಗರಿಗೆ ತಿಂಡಿಯನ್ನೂ, ವಸ್ತ್ರಗಳನ್ನೂ ನಾಡವರ ವಿದ್ಯಾರ್ಥಿಗಳು ಹಂಚುತ್ತಿರುವ ಉದಾರ ಬುದ್ಧಿಯ ವರ್ತನೆಯು ಅನುಸರಣೀಯವಾಗಿರುವುದು ವಾರ್ಷಿಕೋತ್ಸವದ ಬಗ್ಗೆ ನೆರೆದ ಸಭೆಯ ವೃತ್ತಾಂತದಲ್ಲಿ ರಾ| ಅತ್ತಾವರ ಬಾಲಕೃಷ್ಣಶೆಟ್ಟಿಯವರು ಮಾಡಿದ ಸ್ವರ್ಗಸ್ಥ ಗೋಪಾಲಕೃಷ್ಣ ಗೋಖಲೆಯವರ ಗುಣನಿವೇದನೆಯು ಪ್ರಶಂಸನೀಯವಾಗಿದೆ ಸಭಾಧ್ಯಕ್ಷರು ವಿದ್ಯಾರ್ಥಿಗಳಿಗೆ ಕೊಟ್ಟ ಬುದ್ಧಿವಾದವು ಸಮಯೋಚಿತವಾಗಿತ್ತು ಜಾತಿ ವೈಷಮ್ಯದ ಕುರಿತು ಜಿಲ್ಲಾ ಪೋಲಿಸು ಸುಪರಿಂಟೆಂಡೆಂಟರು ಅಪ್ಪಣೆ ಕೊಡಿಸಿದ ಮಾತುಗಳನ್ನು ವಿದ್ಯಾರ್ಥಿಗಳು ಮಾತ್ರವಲ್ಲ; ಇತರರೂ ಸಹ ಮನಸ್ಸಮಾಡುತ್ತಿರುವುದುತ್ತಮ ಸಾಮಾನ್ಯವಾಗಿ ಹಿಂದೂಸ್ಥಾನದಲ್ಲೆಲ್ಲಾ ಜಾತಿ ವೈಷಮ್ಯವು ಇರುವುದು ಈ ಜಿಲ್ಲೆಯಲ್ಲಿ ಇದು ವಿಶೇಷವಾಗಿರುವದೆಂದು ಅಧ್ಯಕ್ಷರು ಹೇಳಿರುವರು. ಜಿಲ್ಲೆಯ ಶ್ರೇಷ್ಠ ಅಧಿಕಾರಿಗಳಲ್ಲೊಬ್ಬರಾದ ರಾ| ಸುಬ್ಬರಾವರವರ ಈ ಅಭಿಪ್ರಾಯವು ಅವರ ಈ ಜಿಲ್ಲೆಯ ಆಡಳಿತೆಯ ಅನುಭವದಿಂದ ಹೊರಟಿರಬಹುದ್ದಾಗಿದ್ದರಿಂದ ಅವು ನಮ್ಮೆಲ್ಲರ ಮನ್ನಣೆಗೆ ಪಾತ್ರವಾಗಿವೆ. ಆಯಾ ಜಾತಿ ಪ್ರಮುಖರು ಇಂಥಾ ಜಾತಿ ವೈಷಮ್ಯವನ್ನು ನಮ್ಮ ಜಿಲ್ಲೆಯಲ್ಲಿ ರಗಳೆಗೊಡಿಸದಂತೆ ಪ್ರಯತ್ನಿಸಬೇಕೆಂದು [illegible] ಕೊಳ್ಳುವೆವಲ್ಲದೆ ಈ ಜಿಲ್ಲೆಯಲ್ಲಿ ಸರಕಾರದ ಅಧಿಕಾರಿಗಳು ಜಾತಿ ವೈಷಮ್ಯದ ಮುಖ್ಯ ಉದ್ಭವ ಸ್ಥಳಗಳಾಗದಂತೆ ಸುಬ್ಬರಾವ್‌ರವರು [illegible] ಅಪೇಕ್ಷಿಸುತ್ತೇವೆ

"ಉತ್ಕೃಷ್ಟ ದಾನ."

"ಉತ್ಕೃಷ್ಟ ದಾನ" ಯಾವದು ಎಂಬದರ ವಿಷಯವಾಗಿ ಬುದ್ಧಮತಸ್ಥರಲ್ಲಿ ಒಂದು ಕಥೆ ಇರುವದು. ಬುದ್ಧನ ಶಿಷ್ಯರಲ್ಲಿ ಒಬ್ಬನಾದ ಅನಾಥಪಿಂಡಿಕ ಎಂಬವನು ಒಮ್ಮೆ ಸ್ರಾವಸ್ತಿಪುರದ ದಾರಿಯಲ್ಲಿ ಬೆಳಿಗ್ಗೆ ಭಿಕ್ಷೆ ಬೇಡುತ್ತಾ ಹೋದನು. ಒಬ್ಬ ಐಶ್ವರ್ಯವಂತ ಸಾಹುಕಾರನ ಹೆಂಡತಿಯು ಮುತ್ತು ರತ್ನಗಳನ್ನು ಅವನಿಗೆ ಬಿಸಾಡಿದಳು. ಕೆಲವರು ಕಂಠೀ ಸರಗಳನ್ನು ದಾನ ಮಾಡಿದರು. ಇನ್ನು ಕೆಲವರು ತಮ್ಮ ತಲೆಯ ಮೇಲೆ ಮಿಂಚಿನಂತೆ ಶೋಭಿಸುತ್ತಿದ್ದ ಚಿನ್ನಾಭರಣಗಳನ್ನು ಕೊಟ್ಟರು. ದೊಡ್ಡ ದೊಡ್ಡ ಮನುಷ್ಯರು ಹರಿವಾಣ ತುಂಬಾ ಚಿನ್ನದ ನಾಣ್ಯಗಳನ್ನು ದಾನ ಮಾಡಿದರು. ಆದರೆ ಭಿಕ್ಷುಕನು ಯಾರನ್ನೂ ಲಕ್ಷ್ಯಮಾಡದೆ ಹೀಗೆ ಹೇಳಿದನು.

"ಓ ಪಟ್ಟಣ ನಿವಾಸಿಕರೇ, ಇಲ್ಲಿ ಕೇಳಿರಿ! ನನ್ನ ಗುರು ಭಿಕ್ಷುಕರಲ್ಲಿ ಅತಿ ಶ್ರೇಷ್ಠನು. ಅವನಿಗೆ ಅತ್ಯುತ್ಕೃಷ್ಟವಾದುವನ್ನೇ ದಾನ ಮಾಡಿರಿ"

ಅರಸರೂ ಐಶ್ವರ್ಯವಂತರೂ, ಇದನ್ನು ಕೇಳಿ, ತಮ್ಮ ಗುರುವಿಗೆ ಕೊಡುವದೇನೆಂದು ತಿಳಿಯದೆ ವ್ಯಸನಾಕ್ರಾಂತರಾಗಿ ಹಿಂದೆ ಹೋದರು. ಈ ದೊಡ್ಡ ಪಟ್ಟಣವು ನಾಚಿಕೆಯಿಂದ ತಲೆ ಬಗ್ಗಿಸಿದಂತೆ ತೋರಿತು. ಅನಾಥಪಿಂಡಿಕನು ಹೀಗೆ ಪಟ್ಟಣವನ್ನು ದಾಟಿ ಹೊರಗೆ ಹೋಗುವಾಗ್ಗೆ ಅಲ್ಲಿ ಒಬ್ಬ ಬಡ ಹೆಂಗಸು ಇದ್ದಳು. ಅವಳ ಹಾಸಿಗೆಯು ಬರೇ ನೆಲವಾಗಿತ್ತು. ಆಹಾರವಾಗಲೀ ಚಿನ್ನಾಭರಣವಾಗಲೀ ಅವಳಿಗೆ ಇದ್ದಿಲ್ಲ. ಈ ಹೆಂಗಸು ಅನಾಥಪಿಂಡಿಕನನ್ನು ಕಂಡಾಕ್ಷಣ, ತಲೆಯನ್ನು ಬಗ್ಗಿಸಿ, ಭಿಕ್ಷುಕನ ಎದುರಿಗೆ ನೆಲದಲ್ಲಿ ಸಾಷ್ಟಾಂಗ ಬಿದ್ದು, ಹತ್ತಿರವಿದ್ದ ಪೊದೆಗಳಲ್ಲಿ ತನ್ನ ದೇಹವನ್ನು ಅಡಗಿಸಿ, ಮೈಮೇಲಿದ್ದ ಒಂದೇ ಚಿಂದಿ ವಸ್ತ್ರವನ್ನು ತೆಗೆದು ಭಿಕ್ಷುಕನಿಗೆ ದಾನ ಮಾಡಿದಳು. ಭಿಕ್ಷುಕನು ಬಹು ಸಂತೋಷಪಟ್ಟು ತನ್ನ ಕೈ ಎತ್ತಿ ಆಕೆಯನ್ನು ಆಶೀರ್ವದಿಸಿದನು—"ತಾಯಿಯೇ ನೀನು ಆಶೀರ್ವದಿಸಲ್ಪಟ್ಟಿದ್ದೀ, ನೀನು ಕ್ಷಣ ಮಾತ್ರದಲ್ಲಿ ಭಿಕ್ಷುಕನ ಹೃದಯದ ಆಕಾಂಕ್ಷೆಯನ್ನು ತೃಪ್ತಿಪಡಿಸಿದ್ದಿ" ಎಂದು ಹೇಳಿ, ಹೆಂಗಸು ಕೊಟ್ಟಂಥಾ ಚಿಂದಿವಸ್ತ್ರವನ್ನು ತಲೆ ಮೇಲೆ ಹಾಕಿಕೊಂಡು ತನ್ನ ಗುರುವಾದ ಬುದ್ಧನಿಗೆ ಅರ್ಪಿಸಲು ಕೊಂಡುಹೋದನು.

ಇದಲ್ಲವೇ ಉತ್ಕೃಷ್ಟ ದಾನ!

ಆಂಗ್ಲ ನೌಕಾದಳ ಸಾಮರ್ಥ್ಯ.

ಸೀಮೆಯಲ್ಲಿ ಈಗ ನಡೆಯುತ್ತಿರುವ ಪಾರ್ಲಿಮೆಂಟಿನಲ್ಲಿ ಕಳೆದ ತಾ| ೧೫ನೆಯ ರಾತ್ರಿ ಆಂಗ್ಲ ನೌಕಾದಳಾಂಗ ಮಂತ್ರಿಯವರಾದ ವಿನ್‌ಸ್ಟನ್ ಚರ್ಚಿಲ್‌ರವರು ತಮ್ಮ ನೌಕಾದಳದವರ ಸಾಮರ್ಥ್ಯವನ್ನೂ ಕರ್ತವ್ಯವನ್ನೂ ಕುರಿತು ಒಂದು ಘನತರವಾದ ಉಪನ್ಯಾಸವನ್ನು ಮಾಡಿದರು. ಅದರಲ್ಲಿನ ಕೆಲ ಮುಖ್ಯಭಾಗಗಳನ್ನು ಇಲ್ಲಿ ಕೊಟ್ಟಿರುತ್ತೇವೆ

ನಮ್ಮ ದೇಶರಕ್ಷಣೆಗೆ ನಾವು ನೌಕಾದಳವನ್ನೇ ನಂಬಿಕೊಂಡಿದ್ದೇವೆ. ಯುದ್ಧಾರಂಭ ಕಾಲದಲ್ಲಿದ್ದ ಸ್ಥಿತಿಗಿಂತಲೂ ಈಗಿನ ನಮ್ಮ ನೌಕಾದಳದ ಪರಿಸ್ಥಿತಿಯು ಬಹಳ ಸಮರ್ಪಕವಾಗಿಯೂ ಸಮೃದ್ಧವಾಗಿಯೂ ಇದೆ. ಮೂರು ತಿಂಗಳ ಹಿಂದೆ ನಮ್ಮಲ್ಲಿ ನೌಕಾವಿಮಾನಗಳಿರಲಿಲ್ಲ. ಈಗ ಅವು ಕೂಡ ಸಿದ್ಧವಾಗಿವೆ. ಈಗ ನೌಕಾವಿಮಾನ ಸೈನ್ಯವು ಪ್ರಬಲಿಸುತ್ತಿದೆ. ಹೊಸದಾಗಿ ಎಷ್ಟೋ ಯುದ್ಧದ ಹಡಗುಗಳು ಅಣಿಯಾಗಿವೆ. ಇನ್ನೂ ರಚಿಸಲ್ಪಡುತ್ತಲೂ ಇವೆ. ಇತರ ದೇಶಗಳ ಮೇಲೆ ಬಿದ್ದು ಯುದ್ಧಮಾಡುವುದಕ್ಕಾಗಿ ಜರ್ಮನರ ಸೇನೆಗಳು ಹೇಗೆ ಸಿದ್ಧವಾಗಿರುವುವೋ ಹಾಗೆ ನಮ್ಮ ದೇಶರಕ್ಷಣೆಗಾಗಿ ನಮ್ಮ ನೌಕಾಸೇನೆಯೂ ಸಿದ್ಧವಾಗಿದೆ.

ಇದುವರೆಗೆ ಜರ್ಮನರಿಗೂ ನಮಗೂ ೨ ಕಡೆಯಲ್ಲಿ ೨ ಆವರ್ತಿ ನಡೆದ ನೌಕಾಯುದ್ಧಗಳಲ್ಲಿ ನಮ್ಮ ನೌಕಾದಳವು ಪಡೆದಿರುವ ಜಯವು ಸಂತೋಷಪ್ರದವಾಗಿರುವುದು. ಮಾತ್ರವೇ ಅಲ್ಲದೆ ಮುಂದಣ ಮಹಾವಿಜಯಕ್ಕೆ ಸೂಚಕವಾಗಿದೆ. ಫಾಕ್‌ಲಾಂಡ್‌ದ್ವೀಪದ ಹತ್ತಿರ ಜರುಗಿದ ಯುದ್ಧದಲ್ಲಿ ನಾವು ಜಯಶೀಲರಾದುದರಿಂದ ಪ್ರಪಂಚದ ಮೇಲಿರುವ ಸಮುದ್ರತಳದಿಂದಲೇ ಜರ್ಮನಿಯ ಪತಾಕೆಯು ಮಾಯವಾಗಿ ಹೋಗುವಂತಾಯಿತು. ಶತ್ರುಗಳ ವ್ಯಾಪಾರದ ಹಡಗುಗಳು ಹೊರಕ್ಕೆ ತಲೆ ಇಕ್ಕದಂತೆ ಮಾಡಿರುವುದು. ಸಿಂಗ್‌ಟೋವುಕೋಪೆಯು ವಶವಾಗಿ ಹೋದುದು, ಕೋಯಿನ್‌ಸ್‌ಬರ್ಗ್ ಎಂಬ ಜರ್ಮನರ ಕ್ರೂಜರು ಬಂಧಿತವಾಗಿಹೋದುದು, ಎಮ್ಡೆನ್‌ಕ್ರೂಜರು ಧ್ವಂಸವಾದುದು,—ಈ ಕಾರ್ಯಗಳೆಲ್ಲವೂ ಕ್ರಮವಾಗಿ ಅಡ್ಮಿರಲ್‌ಸ್ಟರ್ಡಿಯವರು ಪಡೆದ ವಿಜಯಪಥದ ಸೋಪಾನಗಳಾದುವು.

ನಮ್ಮ ವ್ಯಾಪಾರದ ಹಡಗುಗಳ ಮೇಲೆ ಬಿದ್ದು ನಾಶಮಾಡಬೇಕೆಂದು ಜರ್ಮನರು ಮಾಡಿದ ವಿಶ್ವ ಪ್ರಯತ್ನಗಳೊಳಗೆಲ್ಲಾ ಅವರ ೨ ಸಣ್ಣ ಯುದ್ಧದ ಹಡಗುಗಳೂ ೨ ಆಯುಧ ಸಮೇತವಾದ ವ್ಯಾಪಾರದ ಹಡಗುಗಳೂ ಮಾತ್ರ ತಪ್ಪಿಸಿಕೊಂಡು ಇನ್ನೂ ಅಲೆದಾಡುತ್ತಿವೆ. ಅವು ಕೂಡ ಬಹಿರಂಗವಾಗಿ ಕಾಣಿಸಿಕೊಳ್ಳದೆ ಎಲ್ಲೋ ಅವಿತುಕೊಂಡಿವೆ. ಈಗ ಬಹುಶಃ ೮೦೦೦ ಇಂಗ್ಲೀಷ್ ಹಡಗುಗಳು ಸಮುದ್ರಗಳ ಮೇಲೆ ತಿರುಗಾಡುತ್ತಿವೆ. ಕಳೆದ ಮೂರು ತಿಂಗಳಿಂದಲೂ ಇಂಗ್ಲೀಷ್ ದ್ವೀಪಗಳಿಗೆ ೪೪೭೫ ಹಡಗುಗಳು ಹೊರಗಿನಿಂದ ಬಂದಿರುತ್ತವೆ. ಅಲ್ಲಿಂದ ೩೭೦೦ ಹಡಗುಗಳು ಇತರ ಸ್ಥಳಗಳಿಗೆ ಪ್ರಯಾಣಮಾಡಿ ಹೋಗಿರುತ್ತವೆ. ಇಷ್ಟಕ್ಕೆ ೧೯೯ ಹಡಗುಗಳು ಮಾತ್ರ ಶತ್ರುಗಳಿಂದ ಮುಳುಗಿಸಲ್ಪಟ್ಟಿವೆ. ೧೭೯೩ ನೆ ವರ್ಷದಿಂದ ೧೮೧೫ ನೆ ವರ್ಷದವರೆಗಿನ ಮಧ್ಯ ಕಾಲದಲ್ಲಿ ನಡೆದ ೩ ಯುದ್ಧಗಳಲ್ಲೂ ಇಂಗ್ಲೀಷರ ವ್ಯಾಪಾರದ ಹಡಗುಗಳು ೧೦೮೭೧ಕ್ಕೆ ಕಡಿಮೆಯಿಲ್ಲದೆ ಶತ್ರುಗಳಿಂದ ಹಿಡಿಯಲ್ಪಟ್ಟಿದ್ದುವು. ಆದಕ್ಕೆ ಈಗಿನ ಸ್ಥಿತಿಯನ್ನು ಹೋಲಿಸಿ ನೋಡಿದರೆ ಈ ಯುದ್ಧದಲ್ಲಿ ನಮಗೆ ಆಗಿರುವ ನಷ್ಟವು ನಷ್ಟವೇ ಅಲ್ಲ. ಟ್ರಫಾಲ್ಗರ್ ಯುದ್ಧವಾದ ಬಳಿಕವೂ ಕೂಡ ನಮಗೆ ವರ್ಷ ೧ಕ್ಕೆ ೫೦೦ ಹಡಗಿನಂತೆ ನಷ್ಟವಾಗುತ್ತಿದ್ದುವು. ಈಗಿನ ಯುದ್ಧದಲ್ಲಿ ಮೊದಲಿನ ೬ ತಿಂಗಳೊಳಗೆ ನಮಗೆ ೬೩ ಹಡಗಗಳು ಮಾತ್ರ ನಷ್ಟವಾಗಿವೆ. ಜರ್ಮನರ ಯುದ್ಧದ ಹಡಗುಗಳು ಸಮುದ್ರದಲ್ಲಿ ಜಯವನ್ನು ಪಡೆಯುವ ಸಂಭವವು ಗೋಚರಿಸುವಂತಿರದಿದ್ದರೂ ನಮ್ಮ ವ್ಯಾಪಾರದ ಮಾರ್ಗದ ಮೇಲೆ ಶತ್ರುಗಳು ಬೀಳದಂತೆ ಮಾಡುವುದಕ್ಕಾಗಿ ನಾವು ಕಾದಿರಬೇಕು. ಇಂಡ್ಯಾ, ದಕ್ಷಿಣಾಫ್ರಿಕಾ, ಈಜಿಪ್ಟ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡು, ಚೀನಾ ಮೊದಲಾದ ನಮ್ಮ ಸಾಮ್ರಾಜ್ಯಕ್ಕೊಳಪಟ್ಟ ದೇಶಾಂತರಗಳಿಂದೆಲ್ಲಾ ಬಹುಶಃ ೧೦ ಲಕ್ಷ ಸೈನ್ಯವನ್ನು ಅದರಲ್ಲಿ ಒಂದು ಪಿಳ್ಳೆಯಾದರೂ ನಷ್ಟವಾಗದಂತೆ ಈ ದೇಶಕ್ಕೆ ಸಾಗಿಸಿ ತಂದಿರುವುದು ಮಾತ್ರವಲ್ಲದೆ ಯುದ್ಧಕ್ಕೆ ಸ್ವಲ್ಪಮಾತ್ರವೇ ಕಾಲವಿಡುವುದೆಂದು ತಿಳಿದಿದ್ದರೂ ಶತ್ರುಗಳ ಸಬ್‌ಮೇರಿನುಗಳು ಸಮುದ್ರಗಳಲ್ಲಿ ತುಂಬಿದ್ದರೂ ಅವರ ಯುದ್ಧದ ಹಡಗುಗಳು ಬೆದರಿಸುತ್ತಿದ್ದರೂ ಕೂಡ ಇಂಗ್ಲೀಷ್ ಕಡಲು ಕಾಲುವೆಯಿಂದ ಫ್ರಾನ್ಸ್‌ದೇಶಕ್ಕೆ ಸೈನ್ಯಗಳನ್ನು ಸಾಗಿಸಿಕೊಂಡು ಹೋದುದು ಸಹ ನಮ್ಮ ನೌಕಾದಳ ಸಂಘದವರು ಮಾಡಿರುವ ಪ್ರಶಂಸನೀಯವಾದ ಕಾರ್ಯಗಳಾಗಿರುತ್ತವೆ.

ಇಂಗ್ಲೀಷ್ ವ್ಯಾಪಾರ ನೌಕಾಗಳಲ್ಲಿ ೫ನೆಯ ೧ ಭಾಗದಷ್ಟನ್ನು ನೌಕಾಸಂಘದವರು ಅಧೀನಪಡಿಸಿಕೊಂಡು ಅವುಗಳ ಸಹಾಯದಿಂದ ಸಾಮಗ್ರಿ ಮೊದಲಾದವುಗಳನ್ನು ಸಾಗಿಸುವ ಕೆಲಸವನ್ನು ಮಾಡಿಕೊಳ್ಳುತ್ತಿದ್ದಾರೆ. ಇವುಗಳ ಸಹಾಯದಿಂದಲೇ ಗಾಯವನ್ನು ಪಡೆದ ಸೈನಿಕರನ್ನು ಸಾಗಿಸುತ್ತಿರುವುದು, ಅವರ ಸ್ಥಾನಕ್ಕೆ ನೂತನ ಸೈನಿಕರನ್ನು ತೆಗೆದುಕೊಂಡುಹೋಗಿ ಸೇರಿಸುವುದು, ಮದ್ದು ಗುಂಡು ಮೊದಲಾದ ಸಾಮಾನುಗಳನ್ನು ಸಾಗಿಸುವುದು ಇವೇ ಮೊದಲಾದ ಕಾರ್ಯಗಳು ನೆರವೇರುತ್ತಲಿವೆ. ಜರ್ಮನಿಯವರಿಗಿರುವ ವಿಲ್‌ಹೇಮ್ಸ್ ಹಾವನ್ನಿಗೆ ಸದೃಶವಾದ ನೌಕಾಸ್ಥಾನದಲ್ಲಿ ಅಡಗಿಕೊಂಡು ನಾವು ಜೀವಿಸುತ್ತಿರುವುದಿಲ್ಲ. ಅದುಕಾರಣ ಯಾವಾಗ ಎಂಥ ಉಪದ್ರವು ತಟ್ಟಿದರೂ ಅದನ್ನು ಇದಿರಿಸಲು ಸಿದ್ಧರಾಗಿಯೇ ಇರಬೇಕಾಗಿದೆ. ನಮ್ಮ ನೌಕಾದಳ ಸಂಘದವರು ಅಸಮರ್ಥರೇನೂ ಅಲ್ಲ. ಅವರು ಸೋಮಾರಿಗಳೂ ಅಲ್ಲ; ಸಂಭವಿಸುವುದಕ್ಕಿರುವ ವಿಪತ್ತುಗಳನ್ನೆಲ್ಲಾ ಇದಿರಿಸುವುದಕ್ಕೆ ಆವಶ್ಯಕವಾದ ಜಾಗರೂಕ ಪದ್ಧತಿಗಳನ್ನು ಅವರು ಅವಲಂಬಿಸಿಯೇ ಇದ್ದಾರೆ. ಫಾಕ್‌ಲಾಂಡ್‌ದ್ವೀಪದ ಹತ್ತಿರ ನಮ್ಮ ನೌಕಾದಳದವರು ಪಡೆದ ಜಯವು ಎಷ್ಟು ಫಲಪ್ರದವಾದುದೆಂಬುದನ್ನು ಅದರ ಸ್ವರೂಪವನ್ನು ಬಲ್ಲವರು ಹೊರತು ಇತರರು ತಿಳಿಯಲಾರರು. ಡಾಗರ್ ಬ್ಯಾಂಕಿನ ಹತ್ತಿರವೂ ನಡೆದ ಕಾಳಗದಲ್ಲಿ ನಮ್ಮ ನೌಕಾನಿರ್ಮಾಣ ಪದ್ಧತಿಯೂ ನಮ್ಮ ಫಿರಂಗಿಗಳ ಏಟೂ ಬಹಳ ಪ್ರಶಂಸನೆಗೆ ಪಾತ್ರವಾದುವೆಂಬುದು ಆಗಿನ ಪರೀಕ್ಷಾ ಪರಿಣಾಮದಿಂದ ಸಿದ್ಧವಾಗಿರುವುದು. ಈ ಪರಿಣಾಮವು ಉತ್ತರೋತ್ತರ ಧೈರ್ಯವನ್ನು ನಮಗೆ ಮತ್ತಷ್ಟು ಹೆಚ್ಚಿಸಿದೆ. ನಮ್ಮ ಹಡಗಿನ ಫಿರಂಗಿಗಳು ಜರ್ಮನಿಯವರ ಫಿರಂಗಿ ಗುಂಡುಗಳಿಗಿಂತ ಹೆಚ್ಚು ದೂರ ಹೋಗುತ್ತಿವೆ. ಫಿರಂಗಿ ಏಟಿನಲ್ಲಿ ಜರ್ಮನ್ ಸೈನಿಕರು ಸಮರ್ಥರೆಂಬ ನಂಬಿಗೆ ಇದ್ದಿತು. ಆದರೆ ಆಂಗ್ಲ ಸೈನಿಕರ ಗುರಿಯೂ ಸಾಮರ್ಥ್ಯವೂ ಶತ್ರುಗಳಿಗಿಂತ ಕಡಿಮೆಯಾದುದಲ್ಲವೆಂಬುದು ನಿಸ್ಸಂಶಯವಾಯಿತು. ನಮ್ಮಲ್ಲಿರುವ ೧೩·೫ ಅಂಗುಲ ವ್ಯಾಸದ ಫಿರಂಗಿಗಳಿಗೆ ಸಮಾನವಾದ ಫಿರಂಗಿಗಳೂ ಕೂಡ ಜರ್ಮನರ ಯುದ್ಧ ನೌಕೆಗಳಲ್ಲಿರುವುದಿಲ್ಲ. ನಮ್ಮ ಹಡಗುಗಳಲ್ಲಾದರೊ ೧೫ ಅಂಗುಲ ವ್ಯಾಸದ ಫಿರಂಗಿಗಳು ಇರುತ್ತೆ. ಅವು ಬಹು ಬಲಾಢ್ಯವಾಗಿವೆ.

ಜರ್ಮನರ ಸಬ್‌ಮೇರಿನುಗಳಿಂದ ನಮ್ಮ ನಾವಿಕರಲ್ಲಿ ೫೫೦೦ ಮಂದಿಗಳು ಇದುವರೆಗೆ ಸತ್ತಿರುವರು. ಜರ್ಮನರಲ್ಲೂ ಬಹುಶಃ ಅಷ್ಟೇ ಮಂದಿ ಸತ್ತಿರಬೇಕು. ಅವರನ್ನು ನಮ್ಮ ಫಿರಂಗಿ ಗುಂಡಿನೇಟಿನಿಂದ ಕೊಂದಿರುತ್ತೇವೆ. ಎಂದರೆ ಅವರ ನೌಕಾ

ಸೇವೆಯಲ್ಲಿ ಬಹುಭಾಗವು ನಮ್ಮ ಫಿರಂಗಿಯೇಟಿನಿಂದ ಧ್ವಂಸವಾಗಿದೆ. ನಾವು ನೌಕಾಯುದ್ಧದಲ್ಲಿ ೮೨ ಮಂದಿ ಜರ್ಮನ್ ಅಧಿಕಾರಿಗಳನ್ನೂ ೯೩೪ ಮಂದಿ ನಾವಿಕರನ್ನೂ ಸೆರೆಯಾಗಿ ಹಿಡಿದಿದ್ದೇವೆ. ಆದರೆ ಜರ್ಮನರು ನೌಕಾಯುದ್ಧದಲ್ಲಿ ಒಬ್ಬ ಇಂಗ್ಲೀಷ್ ನಾವಿಕರನನ್ನು ಕೂಡ ಸೆರೆಯಾಳಾಗಿ ಹಿಡಿದಿರುವುದಿಲ್ಲ. ಆಂಗ್ಲನಾವಿಕರು ಅಮೌಲ್ಯವಾದ ತಮ್ಮ ಪ್ರಾಣಗಳನ್ನು ದೇಶರಕ್ಷಣೆಗಾಗಿ ಧಾರೆಯೆರೆಯುವವರಾದುದರಿಂದಲೇ ಯುದ್ಧಾರಂಭವಾಗಿ ೬ ತಿಂಗಳು ತುಂಬಿದ್ದರೂ ನಾವು ಕ್ಷೇಮವಾಗಿಯೂ ಸೌಖ್ಯವಾಗಿಯೂ ಬದುಕಿದ್ದೇವೆ. ನಾವು ಸಮುದ್ರದ ಮೇಲೆ ಇದುವರೆಗೆ ಯಾವಾಗಲೂ ಅನುಭವಿಸದೆ ಇದ್ದಂತಹ ಅಧಿಕಾರವನ್ನು ಪಡೆದಿದ್ದೇವೆ.

ನಮ್ಮ ನೌಕಾದಳವು ಮುಂದೆ ಮುಂದೆ ಭಯಂಕರವಾದ ಕಾರ್ಯಗಳನ್ನು ನೆರವೇರಿಸಬೇಕಾಗಿದೆ. ನಾಗರಿಕ ರಾಷ್ಟ್ರಗಳು ಇದುವರೆಗೆ ಯಾವಾಗಲೂ ಅರಿಯದಿದ್ದಂತಹ ನೌಕಾಯುದ್ಧಗಳಿಗೆ ನಾವು ಸಿದ್ಧವಾಗಿರಬೇಕಾಗಿದೆ. ವ್ಯಾಪಾರದ ಹಡಗುಗಳನ್ನು ಪರಿಶೋಧಿಸದೇನೆಯೇ ಸಬ್‌ಮೇರಿನುಗಳಿಂದ ಅವನ್ನು ಮುಳುಗಿಸಿಬಿಡುವುದು ಇದುವರೆಗೆ ಎಲ್ಲೂ ನಡೆಯದಿದ್ದಂತಹ ಸಂಗತಿಯಾಗಿದೆ. ಇಂಥ ಸಂಭವಗಳುಂಟಾಗುವುವೆಂದು ಯುದ್ಧಕ್ಕೆ ಮುಂಚೆ ಯಾರೂ ನೆನೆದಿರಲಿಲ್ಲ. ಈ ಸಂಗತಿಯು ಆಗಲೇ ತಿಳಿದಿದ್ದ ಪಕ್ಷದಲ್ಲಿ ಪ್ರಪಂಚವೆಲ್ಲವೂ ಇದನ್ನು ಖಂಡಿಸಿ ಅದನ್ನು ಅನುವತಿಸದ ಹೋಗುತ್ತಿದ್ದಿತು. ಆದರೆ ಈಗಲೂ ಭಯವೇನೂ ಇಲ್ಲ. ಯಾವಾಗಲೂ ಕಾಣದಿದ್ದಂಥ ನೂತನಪದ್ಧತಿಯನ್ನು ಶತ್ರುಗಳು ಅವಲಂಬಿಸಿದರೂ ಅದರ ಬಾಧೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಮಾರ್ಗ ಯಾವುದೂ ಇಲ್ಲವೆಂದು ತಿಳಿಯಬೇಕಾಗಿಲ್ಲ.

ಆಂಗ್ಲ ಯುದ್ಧನಾವೆಗಳು ಜರ್ಮನಿಗೆ ಕೆಲ ಸಾಮಗ್ರಿಗಳು ಸಾಗಿಹೋಗದಂತೆ ತಡೆ ಮಾಡಿರುವುದರಿಂದ ಜರ್ಮನಿಯು ಪಡಲಾಗದ ತೊಂದರೆಯನ್ನು ಅನುಭವಿಸುತ್ತಿದೆಯೆಂಬುದಕ್ಕೆ ಸಂದೇಹವಿಲ್ಲ. ಯುದ್ಧಸಾಮಗ್ರಿಗಳನ್ನು ಅಣಿಮಾಡುವುದಕ್ಕೆ ಬೇಕಾದ ತಾಮ್ರ, ಸೀಮೆಯೆಣ್ಣೆ, ರಬ್ಬರು, ನಿಕಲ್‌ಲೋಹ, ಮ್ಯಾಂಗನೀಸು, ಅಂಟಿಮನಿ ಇವು ಮೊದಲಾದ ಪದಾರ್ಥಗಳು ಜರ್ಮನಿಗೆ ಸಾಗಿಹೋಗದಂತೆ ಮಾಡುತ್ತಿದ್ದೇವೆ. ನಾವು ಉಂಟುಮಾಡುತ್ತಿರುವ ಈ ತೊಂದರೆಯಿಂದಲೇ ಜರ್ಮನಿಯು ಈಗ ನಮ್ಮ ಮೇಲೆ ಅತ್ಯಾಗ್ರಹವನ್ನು ತೋರಿಸುತ್ತಿದೆಯೆಂದು ಅರಿಯಬೇಕು. ಜರ್ಮನಿಗೆ ಮಿತಿಯಿಲ್ಲದಷ್ಟು ತೊಂದರೆಯನ್ನು ಉಂಟುಮಾಡುವುದಕ್ಕೆ ನಾವು ಇದಕ್ಕಿಂತಲೂ ಹೆಚ್ಚಾಗಿ ಪ್ರಯತ್ನಿಸಬೇಕು.

ವಕೀಲರು

ಎಲ್ಲಾ ಸಂಸ್ಥೆಗಳಲ್ಲಿಯೂ ವಕೀಲರು ಮುಂದಾಳುಗಳಾಗಿರುತ್ತಾರೆ. ರಾಜ್ಯಾಡಳಿತೆ ಸಂಬಂಧವಾದ ವಿದ್ಯಾ ಸಂಬಂಧವಾದ ಮತ್ತು ಸುಧಾರಣೆ ಸಂಬಂಧವಾದ ಸರ್ವ ಕಾರ್ಯಗಳಲ್ಲಿಯೂ ವಕೀಲರ ಚಟುವಟಿಕೆ ವಿಶೇಷವಾಗಿ ಕಾಣುವುದು. ಕೆಲವರು ವಿಶೇಷ ಹಣ ಸಂಪಾದಿಸುತ್ತಾರೆ. ಬಹು ಮಂದಿಗೆ ಜೀವನಕ್ಕೆ ಸಾಕಷ್ಟು ಸಿಕ್ಕುವುದು ಪ್ರಯಾಸವು. ಸರ್ವರ ಉದ್ದೇಶವು ಹಣ ಸಂಪಾದನೆ ಮಾಡುವುದೇ ಆಗಿರುವುದರಿಂದ ಯಾವುದಾದರೂ ಲೋಕೋಪಕಾರದ ಕಾರ್ಯ ಮಾಡುವುದಾದರೆ ಪೂರ್ಣ ಮನಸ್ಸುಕೊಟ್ಟು ಮಾಡುವುದಿಲ್ಲ. ಕೀರ್ತಿ ಸಿಕ್ಕಬೇಕೆಂಬ ಆಶೆಯಿಂದ ಅಥವಾ ಕುಶಾಲಿನ ಬಗ್ಗೆ ಮಾತ್ರ ಮಾಡುತ್ತಾರೆ. ಕಾರ್ಯಗಳಲ್ಲಿ ಶ್ರದ್ಧೆಯೂ ಅಸ್ವಾರ್ಥದ ಸಾಧನೆಯೂ ಇಲ್ಲದರಿಂದ ಲೋಕೋಪಕಾರದ ಯಾವ ಸಂಸ್ಥೆ ನಿರ್ಮಿಸಿದರೂ ಅದು ಪ್ರಬಲವಾಗಿ ಬೆಳೆಯುವುದಿಲ್ಲ. ಒಂದು ಸಂಸ್ಥೆ ಇಟ್ಟರೆ ಕಾರ್ಯಗಳಲ್ಲಿ ಮುಖ್ಯ ಮನುಷ್ಯನೊಡನೆ ಇತರರು ಸಹಭಾಗಿಗಳಾಗಿ ಕೂಡುವುದೂ, ಅಥವ ಆತನ ಒಳಗಾಗಿ ವಿಧೇಯತ್ವದಿಂದ ಕಾರ್ಯ ನಿರ್ವಹಿಸುವುದೂ ನಮ್ಮ ಜನರ ಸ್ವಭಾವದಲ್ಲೇ ಇಲ್ಲ. ಪ್ರತಿ ಒಬ್ಬನೂ ತಾನೇ ಮುಖ್ಯ ಮನುಷ್ಯನಾಗಬೇಕೆಂತ ಬಯಸುತ್ತಾನೆ. ಆದುದರಿಂದ ನಮ್ಮ ದೇಶದಲ್ಲಿ ಲೋಕೋಪಕಾರದ ಸಂಸ್ಥೆ ಇಟ್ಟರೂ ಪ್ರಬಲವಾಗಿ ಬೆಳೆಯದು. ರಜಾ ಕಾಲದಲ್ಲಿ ವಕೀಲರು ಸ್ವಲ್ಪ ಚಟುವಟಿಗೆ ತೋರಿಸುವುದುಂಟು. ರಜೆ ಮುಗಿಯುತ್ತಲೆ ಹಣ ಸಂಪಾದನೆಯ ಸಾಧನೆ ಪುನಹ ಶುರುವಾಗುತ್ತದೆ. ತನ್ನ ಜನ್ಮದ ಉದ್ದೇಶವೇನು, ಯಾವ ಉತ್ತಮ ಲಕ್ಷಣಗಳನ್ನು ತಾನು ತನ್ನಲ್ಲಿ ವೃದ್ಧಿಸಬೇಕು, ತನ್ನ ಆರೋಗ್ಯದ ಸ್ಥಿತಿ ಹೇಗುಂಟು ಎಂಬ ಯಾವ ಚಿಂತನೆಯೂ ಇಲ್ಲದೆ ದಿವಾರಾತ್ರಿ ಹಣ ಸಂಪಾದನೆ ಕಾರ್ಯಗಳಲ್ಲೇ ಪ್ರವೃತ್ತರಾಗಿ ಸರಕಾರ ನೌಕರರಂತೆ ೫೦ ವರುಷ ವಯಸ್ಸಾಗುವ ಮೊದಲೆ ಮುದುಕರಾಗಿ ತೋರುತ್ತಾರೆ. ಯಾವುದಾದರೂ ವ್ಯಾಧಿ ಹಿಡಿದು ಸಾಯುತ್ತಾರೆ. ಎಷ್ಟು ಹಣ ಸಂಪಾದಿಸಿದರೂ ಒಬ್ಬ ಹಿಂದು ಗೃಹಸ್ಥನಿಗೆ ಸುಖಜೀವನವೆಂಬುದು ಸಿಕ್ಕುವುದಿಲ್ಲ. ಶರೀರದಲ್ಲಿ ಆರೋಗ್ಯವಿಲ್ಲದಿದ್ದರೆ, ಅಂತರ್ಯದಲ್ಲಿ ಶಾಂತಿ ಇಲ್ಲದಿದ್ದರೆ, ಪರೋಪಕಾರ ಮತ್ತು ದೇಶ ಸೇವೆ ಮೊದಲಾದ ಉತ್ತಮ ಉದ್ದೇಶಗಳ ಕಡೆಗೆ ಮನಸ್ಸಿಗೆ ಆಕರ್ಷಣೆ ಇಲ್ಲದಿದ್ದರೆ, ಅಂಥವನಿಗೆ ಜೀವನದಲ್ಲಿ ಸುಖವೆಂಬುದು ಎಲ್ಲಿ? ಬಹು ಮಂದಿ, ವೃತ್ತಿ ಬಿಟ್ಟರೆ ಸಾಯುವೆವು ಎಂತ ಭಾವಿಸಿ ವೃತ್ತಿಯ ಕಾರ್ಯಗಳನ್ನು ಮಾಡುತ್ತಾ ಮಾಡುತ್ತಾ ವೃತ್ತಿಯ ಶ್ರಮದಿಂದಲೇ ಸಾಯುತ್ತಾರೆ ಎಂಬದಾಗಿ ಮೊಡರ್ನರಿವ್ಯೂ ಎಂಬ ಮಾಸಿಕ ಗ್ರಂಥದಲ್ಲಿ 'ಪಂಡಿತ ಲಾಲಾ ವೈಜ್ಯನಾಥ ಎಂಬವರು ಬರೆದಿರುವರು.

ಸ್ವದೇಶೀಯ ಸಕ್ಕರೆ.

ಕಳೆದ ೨೩ನೆಯ ತಾರೀಖಿನ 'ಕೇಸರೀ' ಪತ್ರಿಕೆಯಲ್ಲಿ ಈ ವಿಷಯವಾಗಿ ಒಂದು ಲೇಖನವು ಪ್ರಕಟವಾಗಿದೆ. ಅದರ ಮುಖ್ಯಾಂಶವೇನಂದರೆ —

"ಕಬ್ಬಿನಿಂದಾಗುವ ಸಕ್ಕರೆಗೆ ಭರತಖಂಡವೇ ಜನ್ಮ ಭೂಮಿಯಾಗಿದ್ದಿತು. ಅತಿ ಪ್ರಾಚೀನವಾದ ಅಥರ್ವಣವೇದದಲ್ಲಿ ಸಹ ಕಬ್ಬಿನ ವಿಷಯವಿದೆ. ಅಲೇಕ್‌ಝಾಂಡರ್‌ರವರು ಈ ದೇಶದಿಂದ ತೆಗೆದುಕೊಂಡು ಹೋದ ಅಮೌಲ್ಯ ಪದಾರ್ಥಗಳಲ್ಲಿ ಗಳಲ್ಲಿ ಕಬ್ಬೂ ಒಂದು ಪದಾರ್ಥವಾಗಿದ್ದಿತು. ಪ್ರಾಚೀನಕಾಲದ ಗ್ರೀಸ್, ರೋಮ್ ದೇಶಗಳು ಭರತಖಂಡದ ಔಷದೋಪಚಾರಕ್ಕಾಗಿ ಸಕ್ಕರೆಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಆ ಕಾಲಕ್ಕೆ ಅವರು ಸಕ್ಕರೆಗೆ (Indian Salt) ಹಿಂದೂಸ್ಥಾನದ ಉಪ್ಪು" ಎಂಬುದಾಗಿ ಹೇಳುತ್ತಿದ್ದರು.

ಇಂತಹ ವಿರಳವಾದ ಕಬ್ಬನ್ನು ದಿನೇ ದಿನೇ ಅನ್ಯ ದೇಶಗಳಲ್ಲಿ ಸಹ ಬೆಳೆಯಲಾರಂಭಿಸಿದರು. ವೆಸ್ಟ್ ಇಂಡೀಜ್ ಪ್ರಾಂತ್ಯದಲ್ಲಿ ಇಂಗ್ಲಿಷ್ ಉದ್ಯೋಗಿಗಳು ಬೆಳೆಯುತ್ತಿದ್ದ ಕಬ್ಬಿನಿಂದ ಸಕ್ಕರೆಯಾಗಲುಪಕ್ರಮಿಸಿತು. ಅವರ ಉದ್ಯೋಗಕ್ಕೆ ಪ್ರೋತ್ಸಾಹ ಕೊಡಬೇಕೆಂದು ಇಂಗ್ಲಾಂಡಿನವರು ಹಿಂದೂಸ್ಥಾನದಿಂದ ಹೋಗುತ್ತಿದ್ದ ಸಕ್ಕರೆಯ ಮೇಲೆ ೧೦೦ಕ್ಕೆ ೫೦ರಂತೆ ಜಕಾತಿಯನ್ನು ಹಾಕಿದರು. ಕೊನೆಗೆ ಇಸ್ಟ್ ಇಂಡಿಯಾ ಕಂಪೆನಿಯವರ ಪ್ರಯತ್ನದಿಂದ ಈ ಜಕಾತಿಯು ನಿವಾರಣೆಯಾಯಿತು. ಅಷ್ಟರಲ್ಲಿ ಅವರ ಉದ್ಯೋಗವೂ ಅಭಿವೃದ್ಧಿಯಾಗಿದ್ದಿತು.

ಪರದೇಶಗಳಿಗೆ ಹೋಗುತ್ತಿದ್ದ ಈ ದೇಶದ ಸಕ್ಕರೆಯು ನಿಂತಿತು. ಈ ದೇಶಕ್ಕೆನೇ ಪ್ರಕೃತ ಸಾಧಾರಣ ವರ್ಷಕ್ಕೆ ೬ ಲಕ್ಷ ಟನ್ ಸಕ್ಕರೆಯು ಬರುತ್ತದೆ. ಈ ದೇಶದಲ್ಲಿ ೧೯೧೨ ೧೩ನೆಯ ಸಂವತ್ಸರದಲ್ಲಿ ೨೪೫೫೬೦೦ ಟನ್ ಸಕ್ಕರೆಯಾಗಿದ್ದಿತು. ಈ ಸಂವತ್ಸರದಲ್ಲಿಯೇ ೨೫೨೬,೭೦೦ ಎಕರೆ ಭೂಮಿಗೆ ಕಬ್ಬನ್ನು ಹಾಕಿದ್ದರು. ಆದರೆ ಹೊಸಪದ್ಧತಿಯ ಸಕ್ಕರೆ ಮಿಲ್‌ಗಳನ್ನುಪಯೋಗಿಸಿದರೆ ಇದಕ್ಕಿಂತಲೂ ಅಧಿಕವಾದ ಸಕ್ಕರೆಯನ್ನುಂಟುಮಾಡಬಹುದು.

ಸಂಯುಕ್ತ ಪ್ರಾಂತ್ಯದಲ್ಲಿ ಹಿಂದಣ ಪದ್ಧತಿಯಂತೆ ಇರುವ ಗಾಣಗಳಲ್ಲಿ ೧೦೦ ಮಣ ಕಬ್ಬಿಗೆ ಸಾಧಾರಣ ೫೦ ೫೫ ಮಣ ಕಬ್ಬಿನ ಹಾಲು ಬರುತ್ತದೆ. ಆದರೆ ಅಷ್ಟೇ ಕಬ್ಬನ್ನು ನೂತನ ವಿಧವಾದ ಗಾಣಗಳಲ್ಲಿ ಹಾಕಿ ತಿರುವಿದರೆ ಸಾಧಾರಣ ೮೦ ಮಣ ಕಬ್ಬಿನ ಹಾಲು ಬರುತ್ತಿದೆ. ಹಿಂದಣ ಪದ್ಧತಿ ಪ್ರಕಾರ ಸಕ್ಕರೆಯನ್ನು ಮಾಡುವ ವಿಧಾನದಿಂದ ೧೦೦ ಮಣ ಬೆಲ್ಲವೇ ಸಾಧಾರಣ ೩೦ ಮಣ ಸಕ್ಕರೆಯಾಗುತ್ತದೆ. ಈ ಕಾಲದ ನೂತನ ತರಹದ ಸಕ್ಕರೆಮಿಲ್ಲುಗಳಲ್ಲಿ ಅಷ್ಟೇ ಬೆಲ್ಲಕ್ಕೆ ೪೫ ಮಣ ಸಕ್ಕರೆಯಾಗುತ್ತದೆ. ಆದಪ್ರಯುಕ್ತದ ಈ ಕಾಲದ ರೈತರು ನವನಾಗರಿಕ ಕಾಲದ ಯಂತ್ರಗಳನ್ನುಪಯೋಗಿಸಿ ತಮ್ಮ ಉದ್ಯೋಗದಿಂದ ವಿಶೇಷವಾದ ಪ್ರಯೋಜನವನ್ನು ಹೊಂದುವುದು ಯುಕ್ತವಲ್ಲವೇ? ಇಂತಹ ಸಕ್ಕರೆ ಮಿಲ್ಲುಗಳು ಕಾನಪುರ, ಮರಹೌರ, ಚಂಪಾರನ್ ಮೊದಲಾದ ಪಟ್ಟಣಗಳಲ್ಲಿ ಸ್ಥಾಪಿಸಲ್ಪಟ್ಟಿರುವವು.

ಉತ್ತರ ದೇಶದ ಸ್ವದೇಶಿ ಸಕ್ಕರೆಯ ಪ್ರಸಿದ್ಧ ವರ್ತಕರಾದ ಶಾ ಅಮೃತಲಾಲ ಕಾಸಿನಾಥರವರಿಂದ ಈ ಸಂಬಂಧವಾದ ಯಾವದ್ವಿಶಿಷ್ಟ ಸಂಗತಿಗಳನ್ನು ತಿಳಿದುಕೊಳ್ಳಬಹುದು.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ತಮ್ಮ ಪತ್ರದಲ್ಲಿ ಈ ಕೆಳಗಿನ ಕೆಲವು ವಿಷಯಗಳಿಗೆ ಕೊಂಚ ಎಡೆಕೊಡುವಿರಾಗಿ ನಂಬುತ್ತೇನೆ.

ಕಳೆದ ಫೆಬ್ರವರಿ ತಾರೀಕು ೫ನೇ ತಮ್ಮ ಪತ್ರದಲ್ಲಿ ಪ್ರಿಯ ಭಾರತೀಯರೂಬ್ಬರು ಮಕ್ಕಳ ಹೆತ್ತವರಿಗೆ ಅವರನ್ನು ಅಭಿವೃದ್ಧಿಗೆ ತರಲು ಅಗತ್ಯವಾದ ಕೆಲವು ಸೂಚನೆಗಳನ್ನು ಪ್ರಕಟಿಸಿರುವರಷ್ಟೆ. ಆ

ಹೆತ್ತವರ ಬಳಿಯಲ್ಲೇ ಇರುವ ಚಿಕ್ಕ ಮಕ್ಕಳ ವಿಷಯಕ್ಕೆ ಮಾತ್ರ ಉಪಯುಕ್ತವಾದವುಗಳಂತ ಕಾಣುವವಲ್ಲದೆ ವಿದ್ಯಾಭ್ಯಾಸದ ಸಲುವಾಗಿ ಪರ ಊರುಗಳಿಗೆ ತಮ್ಮ ಹೆತ್ತವರನ್ನು ಅಗಲಿ ಹೋಗಲುಳ್ಳ ಮಕ್ಕಳ ಪ್ರಯೋಜನಕ್ಕೆ ಅಗತ್ಯವುಳ್ಳ ವಿಷಯುಗಳನ್ನು ಪ್ರಶಂಸಿಸುವದಿಲ್ಲ. ಆದುದರಿಂದ ಅಂಥಾ ವಿಷಯಗಳನ್ನು ಇವುಗಳಿಗೆ ಸೇರಿಸಿದರೆ ಪ್ರಿಯ ಭಾರತೀಯರ ಈ ಪ್ರಯತ್ನವು ಮತ್ತಷ್ಟು ಸಫಲವಾಗುವದಲ್ಲವೇ? ಏತಕ್ಕೆಂದರೈ ಹೆತ್ತವರ ಬಳಿಯಲ್ಲೇ ಇರುವ ಮಕ್ಕಳ ವಿಷಯಕ್ಕಾದರೋ ಹೆತ್ತವರು ಪ್ರಿಯ ಭಾರತೀಯರ ಸೂಚನೆಗಳಂತೆ ನಡಿಸಲು ಅವಕಾಶವಿದೆ. ಆದರೆ ಪರಊರುಗಳಿಗೆ ಹೋಗಲುಳ್ಳ ಮಕ್ಕಳ ವಿಷಯಕ್ಕೆ ಹೆತ್ತವರಿಗೆ ಅಂಥಾ ಸಂದರ್ಭವೂ ಇಲ್ಲ; ಅವರ ವಿಷಯದಲ್ಲಿ ಹೆತ್ತವರು ತೆಗೆದುಕೊಳ್ಳುವಂಥಾ ಜಾಗ್ರತೆಗಳನ್ನು ತೆಗೆದುಕೊಳ್ಳುವ ಇತರರ್‍ಯಾರೂ ಇಲ್ಲ. ಹೀಗಾದುದರಿಂದ ಅಂಥವರ ಗತಿ ಏನಾಗಬಹುದೆಂದು ಪ್ರಿಯ ವಾಚಕರೇ ಊಹಿಸಬಹುದು. (Youth and white paper take all impressions) ಎಂಬ ಮಾತಿನಂತೆ ನಿರುಪಾಯವಾಗಿ ಹೋಟೇಲುಗಳಲ್ಲಿ ಇರಬೇಕಾಗುವ ಈ ಮಕ್ಕಳು ತಮ್ಮ ವಿಚಾರವನ್ನು ತೆಗದುಕೊಳ್ಳುವವರು ಯಾರೂ ಇಲ್ಲದೆ ನಿರಂಕುಶರಾಗಿ ತಾವು ಹೆತ್ತವರನ್ನಗಲಿ ಬಂದ ತಮ್ಮ ಉದ್ದೇಶವನ್ನು ಲಕ್ಷಿಸದೆ ಸ್ವೇಚ್ಛಾವಿಹಾರಿಗಳಾಗಿ ತಮ್ಮ ಅಮೂಲ್ಯವಾದ ವಯಸ್ಸನ್ನು ವೃಥಾ ಆಟಪಾಟಗಳಲ್ಲಿ ಕಳೆದು ಬಿಡುವರು. ಈ ಸಂದರ್ಭದಲ್ಲಿ ದೊಡ್ಡ ಶಹರುಗಳಲ್ಲಿ ತಮಗೆ ಗಂಟುಬೀಳುವ ದುರ್ವ್ಯಸನಿಗಳಾದ ಗೆಳೆಯರ ಸ್ನೇಹ ಉಂಟಾಗಿ ಚುಟ್ಟಾ, ಬೀಡಿ, ಸಿಗರೇಟ್ ಮೊದಲಾದ ಈಗಿನ ನಾಗರೀಕತೆಗೆ ಅಗತ್ಯವೆಂದು ಅನೇಕರು ಭಾವಿಸುವ ದುರ್ವ್ಯಸನಗಳಲ್ಲಿ ಪ್ರವರ್ತರಾಗುವದಲ್ಲದೆ ಬಹುಶ್ಯಾ ಇಂಥವರ ಸಲುವಾಗಿಯೇ ಎಂಬಂತೆ ಈಗೀಗ ವೃದ್ಧಿಸುತ್ತಾ ಬರುವ ಕಾಫಿ ಹೋಟೇಲುಗಳಲ್ಲಿ ಸೇರಿ ವಿತವ್ರಯವನ್ನು ಮರೆತು ಬಿಟ್ಟು ಯಥೇಷ್ಟ ಸಾಲಮಾಡುವ ಚಟವನ್ನು ಕೂಡಾ ಅಭ್ಯಾಸಿಸುವರು ಇಂಥ ಮಕ್ಕಳು ತಮ್ಮ ಹೆತ್ತವರಿಗೆ ತಮಗೆ ವೆಚ್ಚಕ್ಕೆ ಹಣಬೇಕೆಂದು ಬರದಲ್ಲಿ, ತಮ್ಮ ಮಕ್ಕಳ ಮೇಲಣ ಪ್ರೀತಿಯಿಂದಲೂ ಪರಊರಿನಲ್ಲಿರುವ ಅವರ ವಿದ್ಯಾಭ್ಯಾಸಕ್ಕೆ ಕೆಡಕುಂಟಾಗಬಹುದೆಂಬ ಭೀತಿಯಿಂದಲೂ ತಮ್ಮಲ್ಲಿ ಇದ್ದರೆ ಆಯಿತು, ಇಲ್ಲದಿದ್ದರೆ ಸಾಲ ಮಾಡಿಯಾದರೂ ಅವರ ವೆಚ್ಚಕ್ಕೆ ಬೇಕಾದ ಹಣವನ್ನು ಪೂರೈಸುವರು. ಈ ಮಕ್ಕಳಾದರೋ ಅದನ್ನೆಲ್ಲಾ ತಮ್ಮ ಉದ್ದೇಶವಾದ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸುವ ಬದಲಾಗಿ ತಾವು ಅಭ್ಯಾಸಿಸಿದ ದುರ್ವ್ಯಸನಗಳಿಗೆ ಖರ್ಚುಮಾಡಿ ಪೋಕುದಾರರಾಗಿ ಒಂದೆರಡು ವರುಷ ಅಲೆಯುತಿದ್ದು ನಂತರ ತಮ್ಮ ಊರಿಗೆ ಬಂದು ನಿಷ್ಪ್ರಯೋಜಕರಾಗಿ ಹೆತ್ತವರು ನಷ್ಟ, ಭ್ರಷ್ಟ, ಕಷ್ಟಗಳು ಪಡಿಯುವಂತೆ ಮಾಡಿ ಕಡೆಗೆ ತಾನೇ ದುಃಖ ಭಾಜನರಾಗಬೇಕಾಗುವದು. ಹೀಗಿನ ಸಂಗತಿಗಳನೇಕವನ್ನು ನಮ್ಮ ಪ್ರಿಯ ವಾಚಕರಲ್ಲಿ ಅನೇಕರು ನೋಡಿಯೂ ಕೇಳಿಯೂ ಅನುಭವಿಸಿಯೂ ಇರಬಹುದು. ವಿದ್ಯಾಭ್ಯಾಸವು ಸರ್ವರಿಗೂ ಅವರ ಅಭಿವೃದ್ಧಿಗೆ ಅಗತ್ಯವಾದದ್ದಾಗಿರುವದರಿಂದ, ಮಕ್ಕಳು ಇಂಥಾ ಅನಾಹುತಗಳಿಗೆ ಆಹುತಿಯಾಗದೆ ವೃದ್ಧಿಯನ್ನು ಹೊಂದಲು ಅವಶ್ಯವಿರುವ ಏರ್ಪಾಡುಗಳನ್ನು ಮಾಡುವದು ಪ್ರಿಯ ಹೆತ್ತವರ ಹಂಗು ಅಲ್ಲವೇ? ಇಂಥಾ ಏರ್ಪಾಡುಗಳನ್ನು ಏಕೆ ಮಾಡಲಾಗುವದಿಲ್ಲ, ಈ ತರದ ಉಪಾಯವನ್ನು ಮಾಡಲು ತಮಗೆನೇ ಸಾಧ್ಯವಿಲ್ಲದ ಸಂದರ್ಭದಲ್ಲಿ ಅದನ್ನು ಮಾಡಲುಳ್ಳ ಯಾರೊಬ್ಬರಿಗೂ ಅನುಮೋದನವನ್ನು ಕೊಟ್ಟು ತಕ್ಕಷ್ಟು ಸಹಾಯಮಾಡಿ ಏಕೆ ಪ್ರೋತ್ಸಾಹಗೊಳಿಸಲಾಗುವದಿಲ್ಲ, ಇದಕ್ಕೆ ತಕ್ಕಷ್ಟು ವೆಚ್ಚ ಮುಟ್ಟಬಹುದು ಆದರೂ ಮೇಲೆ ವಿವರಿಸಿದ ಕಾರಣಗಳಿಂದ ಅವರಿಗೆ ಆಗುವ ನಷ್ಟದ ಹಣದಲ್ಲಿ ಸೇಕಡಾ ೫೦ರಂತೆಯಾದರೂ ಇದಕ್ಕೆ ವೆಚ್ಚ ಮಾಡಿದರೆ ಅವರವರ ಮಕ್ಕಳ ಸ್ಥಿತಿಯು ಅಭಿವೃದ್ಧಿಗೆ ಬರುವದು ಮಾತ್ರವಲ್ಲದೆ ಅನೇಕರಿಗೆ ಉಪಯೋಗವಾಗುವದು. ತಾವು ಕೀರ್ತಿಪಡಿಯಬೇಕೆಂಬ ಇಚ್ಛೆಯಿಂದ ಇತರ ಅನೇಕ ಸಂಗತಿಗಳಲ್ಲಿ ಅವರು ವೆಚ್ಚಮಾಡುವದಿಲ್ಲವೇ? ಇದರಲ್ಲಿ ಕೂಡಾ ಅದೇ ರೀತಿ ಮಾಡಿದರೆ ಏಕೆ ಕೀರ್ತಿಗೊಳಲಾಗುವದಿಲ್ಲ? ಈ ವರೆಗೆ ಇಂಥಾ ಆಲೋಚನೆಗಳನ್ನು ಮಾಡಿ ತಕ್ಕ ಏರ್ಪಾಡು ಮಾಡುವದರಲ್ಲಿ ಯಾರೂ ಗಮನಕೊಡಲಿಲ್ಲವಾಗಿ ಕಾಣುವದು. ಇನ್ನಾದರೂ ಇದಕ್ಕೆ ಮನಸ್ಸುಕೊಟ್ಟು ಈ ವಿಷಯದಲ್ಲಿ ಪ್ರೋತ್ಸಾಹಗೊಳಿಸುವದಲ್ಲದೆ ಇನ್ನೂ ಅಗತ್ಯವೆಂದು ತಮತಮಗೆ ತೋರುವ ಸೂಚನೆಗಳನ್ನು [illegible] ಉಪಕಾರವಾಗುವದು.

ಇತಿ ಭಾರತೀಯ ಮಿತ್ರ.

ವಿಲಾಯತಿ ಶೆರಾಬ.

ಅಯ್ಯಾ,

ಇದೇ ೧೯೧೫ನೇ ಇಸವಿ ಎಪ್ರಿಲ್ ಲಾಗಾಯಿತು [illegible] ಅಂತ್ಯವಾಗುವ ವರುಷಕ್ಕೆ ವಿಲಾಯತಿ ಶೆರಾಬ ಮಾರಾಟದ ಅಂಗಡಿಯನ್ನು ರದ್ದು ಪಡಿಸಿದ್ದಾಗಿ ಕೇಳುತ್ತೇವೆ. ವಿಲಾಯತಿ ಶೆರಾಬ ರೋಗಿಷ್ಟರಿಗೆ ಆಪತ್ತು ಕಾಲದಲ್ಲಿಯೂ, ಗರ್ಭಿಣಿ ಹೆಂಗಸರಿಗೆ ಪ್ರಸೂತ ಕಾಲದಲ್ಲಿಯೂ ಮತ್ತು ಊರಲ್ಲಿ ಆಗ್ಯಾಗ್ಯೆ ತಲೆದೋರುವ ವಾಂತಿಭೇದಿಗೂ ಹೆಚ್ಚಾಗಿ ವಿಲಾಯತಿ ಶೆರಾಬನ್ನೇ ಉಪಯೋಗಿಸುವ ವಾಡಿಕೆ ಇರುವದು. ಊರ ಶೆರಾಬ ವಿಲಾಯತಿ ಶೆರಾಬಿನಷ್ಟೇ ತ್ರಾಣದ್ದಾಗಿದ್ದಾಗ್ಯೂ ಊರ ಶೆರಾಬನ್ನು ನೀರನ್ನೇ ಮಿಶ್ರಮಾಡಿ ತ್ರಾಣ ಸರಿಪಡಿಸುವದರಿಂದ ಅಂಥಾ ಶೆರಾಬ ರೋಗಾದಿಗಳಿಗೆ ಉಪಯೋಗಿಸುವದರಿಂದ ಕಾಹಿಲೆಯು ಹೆಚ್ಚುವದೆ ದೃಷ್ಟಾಂತವಾಗಿರುವದೆಂಬದಕ್ಕೆ ಸಂದೇಹವೇನು? ಹಲವರಿಗೆ ಊರ ಶೆರಾಬಿನ ಉಪಯೋಗದಿಂದ ಕೆಮ್ಮು ಮುಂತಾದ್ದು ಹೆಚ್ಚಾಗುವದೆಂದು ಥೋಗಿಷ್ಟರೇ ಹೇಳುವರು. ಆಸ್ಪತ್ರಿಗಳಲ್ಲಿ ಊರ ಶೆರಾಬ ಉಪಯೋಗಿಸದೇ ವಿಲಾಯತಿ ಶೆರಾಬನ್ನೇ ಉಪಯೋಗಿಸುತ್ತಾರೆಂಬದೇ ರುಜುವಾತಾಗಿ ಹೇಳೋಣಾಗಿಯದೆ. ಊರ ಶೆರಾಬನ್ನು ಉಪಯೋಗಿಸದ ಜನರಿಗೆ ವಿಲಾಯತಿ ಶೆರಾಬಿನ ಉಪಯೋಗವೇ ಮುಖ್ಯವಾದದ್ದು. ಈ ತಾಲೂಕಿನ ಹೆಚ್ಚಿನ ಪ್ರದೇಶಗಳು ಘಾಟಿ ಸರಹದ್ದಿನವುಗಳು ವ ಶೀತ ಮುಂತಾದರ ಬಾಧೆಗಳು ಹೆಚ್ಚಿರುವದೆಂಬದಕ್ಕೆ ಸಂದೇಹವೇನು? ವಿಲಾಯತಿ ಶೆರಾಬನ್ನು ಮದ್ದಿಗಾಗಿ ಹುಡುಕಾಡಿ ಬರುವ ಹಳ್ಳಿಪಳ್ಳಿಗಳ ಜನರಿಗೆ ಫಕ್ಕನೆ ಇಲ್ಲಿಂದ ಕೊಂಡುಕೊಳ್ಳಬಹುದೆಂಬ ಧೈರ್ಯ ಇತ್ತು. ೬೦ ಮೈಲು ದೂರ ಫಾಶಿಲೆ ಇರುವ ಮಂಗಳೂರಿಗೆ ಹೋಗಿ ಹಳ್ಳಿ ಊರು ಜನರು ಮಾರಾಟದ ಅಂಗಡಿಯನ್ನು ಹುಡುಕಾಡಲಿಕ್ಕೆ ಅರ್ಧ ದಿನದ ಸಮಯ ಸಾವಕಾಶವಾಗಲಿಕ್ಕಿಲ್ಲವೇ? ಬಡ್ಕಾ ಭಂಡಿಯ ಮೇಲೆ ತರಿಸಲಿಕ್ಕೂ ಏಜಂಟರಿಗೆ ದನ್ನೆಯ ಹಾಕಬೇಕು. ಪಾರ್ಶೆಲ್ ಫೀಸು, ಜಲಾಲಿ ಫೀಸು, ಮತ್ತು ಬಾಟ್ಲಿಗೆ ಅವರು ಹೇಳಿದ್ದೇ ಕ್ರಯ ತೇರಲಬೇಕು, ಹೀಗಾಗಿ ಅನೇಕ ತರದ ಶ್ರಮ ನಷ್ಟಪಡಲೇಬೇಕು. ಕಾಸರಗೋಡಿನ ಅಂಗಡಿಯನ್ನು ರದ್ದು ಮಾಡಿದರೂ ನೆನಸಿದ ಹಾಗೆ ಕಿಂಚಿತು ಖರ್ಚಿನ ಮೇಲೆ ತರಿಸಬಹುದು ಎಂಬ ಅಭಿಲಾಶೆಯಾದರೂ ಆ ಜನರಿಗೆ ಇರುವದು. ಇಲ್ಲಿಯ ಅಂಗಡಿಯನ್ನು ರದ್ದು ಮಾಡುವದರಿಂದ ಹೆಚ್ಚಿನ ಜನರಿಗೆ ನಷ್ಟವ ಸಂಕಷ್ಟಕ್ಕೆ ಕಾರಣವಾಗಿಯದೆ. ನಮ್ಮ ಇದೇ ತಾಲೂಕಿನಲ್ಲಿ ಬಂದಾಗಿದ್ದ ವಿಲಾಯತಿ ಶೆರಾಬಿನ ಅಂಗಡಿಯನ್ನು ಊರ್ಜಿತ ಇಡುವಂತೆ ಮೇಲಾಧಿಕಾರಿಗಳು ತಕ್ಕ ನಿಗಾ ಕೊಡಲೆಂದು ಕೋರುತ್ತೇವೆ.

ಪುತ್ತೂರು
ತಾ. 23 – 2 – 15 } ನಿವಾಸಿಕರಲ್ಲೊಬ್ಬ.

ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ನಡೆದ ಮಹಾ ಸಭೆ.

ಇದೇ ಕಳೆದ ಫೆಬ್ರವರಿ ತಾ. ೨೮ರಲ್ಲು ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ಕೂಡಿದ ಸಭೆಯಲ್ಲಿ ಅಧ್ಯಕ್ಷರೂ ಡಿರೆಕ್ಟರರೂ ೨೮ ಜನ ಸದಸ್ಯರು ಕೂಡಾ ಹಾಜರಿದ್ದರು. ಈ ಸಭೆಯಲ್ಲಿ ಶಿವರಾತ್ರಿ ಸಮಯದಲ್ಲಿ ಆದ ಖರ್ಚಿನ ವಿವರ, ಜಾತಿ ಗೃಹಸ್ಥರೂ, ಅನ್ಯ ಜಾತಿಯ ಮಹನೀಯರೂ ಕೊಟ್ಟ ಕಾಣಿಕೆ, ಮ. ರಾ. ಎಕ್ಕಾರು ಗುತ್ತಿನ ಅಣ್ಣಪ್ಪ ಹೆಗ್ಗಡೆಯವರು ತನ್ನ ಗ್ರಾಮದ ಜನರಿಗೆ ಉತ್ತೇಜನ ಕೊಟ್ಟು ಅವರಿಂದ ದೇವಸ್ಥಾನಕ್ಕೆ ಧನ ಸಹಾಯ ಮಾಡಲು ಕೊಟ್ಟ ಪ್ರೋತ್ಸಾಹ ಮತ್ತು ಏರ್ಪಾಡು, ದಶಂಬರ ತಾ. ೨೦ರಲ್ಲು ಜರಗಿದ ಮಹಾ ಸಭೆಯ ನಿರ್ಣಯ ಪ್ರಕಾರ ಶ್ರೀ ದೇವಸ್ಥಾನದೆಯತಕ್ಕ ವರ್ಷೋತ್ಸವದ ಬಗ್ಗೆ ಆಯಾ ಗ್ರಾಮಗಳಿಗೆ ಧನ ಸಂಗ್ರಹ ಬಗ್ಗೆ ಸಂಚಾರಕ್ಕೆ ಹೋದ ಸದ್ಗೃಹಸ್ಥರಿಂದ ಒಪ್ಪಿಸಲ್ಪಟ್ಟ ಕಾಣಿಕೆ, ಇದಕ್ಕಾಗಿ ಉಪಕಾರ ಸ್ಮರಣೆ ಮೊದಲಾದ ಪ್ರಸ್ತಾಪಗಳು ಸಭೆಯ ಮುಂದೆ ತರಲ್ಪಟ್ಟು ಆಲೋಚಿಸೋಣಾದವು.

ಕಡೆಗೆ ದೇವಸ್ಥಾನ ಸ್ಥಾಪನೆಗೆ ಆರಂಭಿಸಿದಂದಿನಿಂದ ಮುತ್ತಪ್ಪನವರು ಪ್ರತಿಫಲ ಪಡೆಯದೆ ದೇವಸ್ಥಾನದ ಲೆಕ್ಕಪತ್ರಗಳನ್ನು ಪರಿಷ್ಕಾರವಾಗಿ ಮಾಡಿ ಆಯಾ ಕಾಲಕ್ಕೆ ಸರಿಯಾಗಿ ಒಪ್ಪಿಸಿರುವದರಿಂದ ದೇವಸ್ಥಾನದ ಆಡಳಿತೆ ಮೊಕ್ತೇಸರರು ತೃಪ್ತಿಪಟ್ಟು ಸದರಿ ಮುತ್ತಪ್ಪನವರು ಆಡಳಿತೆ ಮೊಕ್ತೇಸರರಾದ ಸಭೆಯ. ಪೈಕಿ ಒಬ್ಬ ಡಿರೆಕ್ಟರರನ್ನಾಗಿ ನೇಮಿಸುವಂತೆ ಕೂಡಾ ಸರ್ವ ಸಮ್ಮತದಿಂದ ನಿಣ [illegible]

ಯುದ್ಧ ಸಮಾಚಾರ.

ಪ್ರಧಾನ ಮಂತ್ರಿಯರಾದ ಮಿ॥ ಅಸ್ಕ್ವಿತರವರು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಕೊಟ್ಟ ಭಾಷಣವು ಈ ದಿನದ ವಾರ್ತೆಯಲ್ಲಿ ವಿಶೇಷವಾದದ್ದಾಗಿರುವದು. ಯುದ್ಧ ತೊಡಗಿದಂದಿನಿಂದ ದಿನ ೧ಕ್ಕೆ ೧,೨೦೦,೦೦೦ ಪವನುಗಳಂತೆ ಬ್ರಿಟಿಷ ಸೇನಿಕರಿಗೆ ಖರ್ಚಾಗಿರುವದು. ಇನ್ನು ಎಪ್ರಿಲ್ ತಿಂಗಳಿಂದ ಭೂಸೈನ್ಯಕ್ಕೆ ದಿನ ೧ಕ್ಕೆ ೧॥ ಮಿಲಿಯ ಪವನುಗಳಂತೆಯೂ ನೌಕಾವಳಿಗೆ ದಿನ ೧ಕ್ಕೆ ೪೦೦,೦೦೦ ಪವನುಗಳಂತೆಯೂ ಖರ್ಚಾಗುವದು. ಒಟ್ಟಿಗೆ ದಿನ ೧ಕ್ಕೆ ೨ ಮಿಲಿಯ ಪವನುಗಳು ಖರ್ಚಿಗೆ ಬೇಕಾಗುವವು ಎಂತ ಮಿ॥ ಅಸ್ಕ್ವಿತರ ಭಾಷಣದಿಂದ ತಿಳಿದು ಬಂದಿರುವದು.

ಡರ್ಡನೆಲ್ಸಿನ ಒಳಕೋಟೆಗಳಲ್ಲಿ ಇಂಟಿಪೆ ಕೋಟೆಗೆ ಬ್ರಿಟಿಷ ಯುದ್ಧ ಹಡಗಗಳು ಗುಂಡು ಹಾರಿಸಿ ಅವನ್ನು ಕೆಡವಿರುವವು, ಬ್ರಿಟಿಷ ಯುದ್ಧನಾವೆಯು ಡರ್ಡನೆಲ್ಸಿನ ಒಳಗೆ ೫ ಮೈಲುಗಳ ವರೆಗೆ ಮುಂದರಿದಿರುವುದು. ಫ್ರೆಂಚನಾವೆಯು ಜಲಸಂಧಿನ ಬಾಗಲಿನಲ್ಲಿದ್ದ ಕೋಟೆಗಳನ್ನು ಕೆಡವಿ, ಶತ್ರುಗಳು ಅವನ್ನು ದುರುಸ್ತುಮಾಡದ ಹಾಗೆ ತಡೆಕಟ್ಟಿರುವದು. ಶನಿವಾರ ಮಧ್ಯಾಹ್ನಕ್ಕೆ ಒಳಕೋಟೆಗಳಿಗೆ ಗುಂಡು ಹಾರಿಸುವ ಕೆಲಸ ಪ್ರಾರಂಭಿಸಲ್ಪಟ್ಟಿರುವದು. ಮೆಸ್ಡೂರಿ ಕೋಟೆಯ ಗುಂಡುಮದ್ದಿನ ಕೊಠಡಿಯು ಸಿಡಿದು ಹೋಗಿರುವದು. ಸಾಯಂಕಾಲ ೫ ಗಂಟೆಗೆ ಮಿತ್ರರ ಯುದ್ಧನಾವೆಗಳು ಕಾರ್ಫೋನಿಯ ದೀಪಸ್ತಂಭದ ಬಳಿಗೆ ತಲಪಿ ಯೂರೋಪಿಯನ್ ಪಾರ್ಶ್ವದ ಕೋಟೆಗಳನ್ನು ಮೌನವಾಗ ಮಾಡಿರುವವು.

೫೦ ಸಾವಿರ ತುರ್ಕಿ ಸೇನಿಕರು ಯೂರೋಪಿಯನ್ ಪಾರ್ಶ್ವದಲ್ಲಿಯೂ ೧೧ ಸಾವಿರ ತುರ್ಕಸೇನಿಕರು ಆಸ್ಯಖಂಡದ ಪಾರ್ಶ್ವದಲ್ಲಿಯೂ ಇರುವರು. ಡರ್ಡನೆಲ್ಸಿನಲ್ಲಿ ಘಾಯ ಒಡೆದ ೬೦೦ ತುರ್ಕಸೇನಿಕರು ಕನ್‌ಸ್ತಂತಿನೋಪಲಿಗೆ ತಲಪಿರುವರು ಎಂತ ಸೊಫಿಯದಿಂದ ವಾರ್ತೆ ಬಂದದೆ.

ಜರ್ಮನರ ಒಂದು ಜಲಂತರ್ಗಾಮಿ ನಾವೆಯು ಮಿತ್ರರಿಂದ ಮುಣುಗಿಸಲ್ಪಟ್ಟಿರುವದು.

ಜರ್ಮನರು ಯುದ್ಧ ಕಾನೂನಿಗೆ ವಿರೋಧವಾಗಿ ನಡಿಯುತ್ತಿರುವದರಿಂದ ಜರ್ಮನಿಗೆ ತಲಪುವ ಯಾ ಅಲ್ಲಿಂದ ಹೊರಡುವ ಪ್ರತಿ ಒಂದು ವಸ್ತುಗಳನ್ನು ಹಿಡಿಯುವ ಅವಶ್ಯಕತೆಯು ಬ್ರಿಟಿಷರಿಗೆ ಬಿದ್ದಿರುವದೆಂದೂ ತಟಸ್ಥ ರಾಜ್ಯಗಳಿಗೆ ಬ್ರಿಟಿಷರ ಈ ವರ್ತನೆಯಿಂದ ಯಾವದೊಂದು ವಿಧದ ನಷ್ಟವಾಗದ ಹಾಗೆ ಜಾಗ್ರತೆ ತಕ್ಕೊಳ್ಳಲಾದೀತೆಂದೂ ಆದರೆ ಮಿತ್ರರು ಶತ್ರುಗಳ ದೇಶಕ್ಕೆ ಹೋಗುವ ಪ್ರತಿ ಒಂದು ಸಾಮಾನುಗಳನ್ನು ಹಿಡಿಯುವರೆಂದೂ ಮಿ॥ ಅಸ್ಕ್ವಿತ ಪ್ರಭುಗಳವರು ಹೇಳಿರುವರು.

ರುಶ್ಯನರಿಗೆ ಗ್ರೊಡೋನೋದಲ್ಲಿ ಜಯವಾಗಿರುವದು. ಇಲ್ಲಿ ರುಶ್ಯನರಿಗೆ ಸೆರೆಬಿದ್ದ ಜರ್ಮನರು ಉತ್ಕೃಷ್ಟ ಸೇನೆಗೆ ಸೇರಿದವರಾಗಿರುವರು. ಪ್ರಸ್‌ನ್ಯಜನಲ್ಲಿ ರುಶ್ಯರಿಗೆ ಆದ ಜಯವು ವಿಶೇಷವಾದದ್ದಾಗಿದೆ. ಇಲ್ಲಿ ರುಶ್ಯನರು ಒಂದು ಗ್ರಾಮದ ನಂತರ ಮತ್ತೊಂದು ಗ್ರಾಮವನ್ನು ಸ್ವಾಧೀನಮಾಡಿಕೊಂಡು ಪ್ರತಿ ಒಂದು ಗ್ರಾಮದಲ್ಲಿ ೫೦೦—೮೦೦ ಜರ್ಮನರನ್ನು ಸೆರೆಹಿಡಿದರು.

ಜಂದ್ ಮಹಾರಾಜರವರು ಬ್ರಿಟಿಷ ಸೇನೆಗೆ ಪುನಃ ೧೫ ಕುದುರೆಗಳನ್ನು ದಾನಮಾಡಿರುವರು. ಒಟ್ಟಿಗೆ ಇವರು ೨೧ ಕುದುರೆಗಳನ್ನು ಕೊಟ್ಟ ಹಾಗಾಯಿತು.

ತಾ. ೩ನೇ ಮಾರ್ಚಿ.

ಕಠಿಣ ಬಿರುಗಾಳಿಯ ದೆಸೆಯಿಂದ ಡರ್ಡನೆಲ್ಸಿನ ಕದನವು ನಿಲ್ಲಿಸಲ್ಪಟ್ಟದೆ ಎಂತ ಪ್ರಕಟವಾಗಿದೆ.

ತಮ್ಮ ಸ್ವಂತ ಸಾಮ್ರಾಜ್ಯವೂ, ಹಿಂದೂಸ್ಥಾನವೂ ತಮಗೆ ಬೇಕಾದಷ್ಟು ಜನರನ್ನು ಕಳುಹಿಸಿಕೊಟ್ಟಿರುವದು. ಈ ಪೈಕಿ ದೊಡ್ಡ ಸಂಖ್ಯೆಯು ರಣರಂಗದಲ್ಲಿ ಕಾದಾಡುತ್ತಿದೆ. ಉಳಿದವರು ರಣರಂಗಕ್ಕೆ ಹೋಗಲು ಬೇಗನೇ ಸಿದ್ಧರಾಗುವರು ಎಂಬದಾಗಿ ಮಿ॥ ಅಸ್ಕ್ವಿತರವರು ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿರುವರು.

ಫ್ರಾನ್ಸ್ ಮತ್ತು ಬೆಲ್ಜಿಯಮ್ ರಣರಂಗಗಳಲ್ಲಿ ಮಿತ್ರರು ದಿನೇ ದಿನೇ ಬಲಹೊಂದುತ್ತಿರುವರು.

ಪ್ರಸ್‌ನ್ಯಜನಲ್ಲಿ ರುಶ್ಯನರು ಜರ್ಮನರ ೨ ಸೇನಾಂಗಗಳನ್ನು ಸೋಲಿಸಿ ಅವರನ್ನು ಸರಹದ್ದಿಗೆ ಓಡಿಸಿರುವರು. ೧೧ ಸಾವಿರ ಜರ್ಮನರೂ ೩ ಕೋಟೆ ತೋಫೆಯೂ ರುಶ್ಯನರಿಗೆ ದೊರಕಿರುವವು. ಜರ್ಮನರು ಒಸ್ಸೊವಿಸ್ ಕೋಟೆಗೆ ೪೨ ಸೆಂಟಿಮೀಟರ್ ಫಿರಂಗಿಗಳಿಂದ ಗುಂಡು ಹಾರಿಸ ಪ್ರಾರಂಭಿಸಿದ್ದಾರೆ. ಆದರೆ ಫಲ ಕಂಡುಬರಲಿಲ್ಲ. ಕರ್‌ಪಥೇನಿಯದಲ್ಲಿ ಆಸ್ಟ್ರಿಯನರಿಗೆ ದೊಡ್ಡ ನಷ್ಟವಾಗಿರುವದು. ವಿಪೌನ್ ವಿಸ್ತುಲ ರಣರಂಗದಲ್ಲಿ ರುಶ್ಯನರು ಮುಂದಕ್ಕೆ ಹೋಗಿ ಯುದ್ಧ ಮಾಡತೊಡಗಿರುವರು. ಗೊರ್ಡೊನೊಗೆ ಉತ್ತರ ಪಶ್ಚಿಮದಲ್ಲಿ ರುಶ್ಯನರು ಮುಂದರಿದು ಜಯಪ್ರದರಾಗಿರುವರು. ರುಶ್ಯನರೊಡನೆ ಕಲೆತು ಕಾದಾಡಿದ ಶತ್ರು ಸೇನೆಯು ಹಿಂದರಿದಿರುವದು.

ತಾ. ೮ನೇ ಮಾರ್ಚಿ.

ಜರ್ಮನರು ಪುನಃ ಕೆಲ್ಲೆಗೆ ಮುಂದರಿಯುವ ಪ್ರಯತ್ನ ಮಾಡುವ ಆಲೋಚನೆಯಲ್ಲಿರುವರೆಂಬ ವಾರ್ತೆ ಇದೆ.

ರುಶ್ಯನರ ಸೇನಿಕರು ಕೋಪಬಂದರವನ್ನು ಸ್ವಾಧೀನ ಮಾಡಿಕೊಂಡಿರುವರು. ಇದು ತುರ್ಕಿಸೇನೆಯ ಮುಖ್ಯ ಸ್ಥಳವಾಗಿರುವದು. ರುಶ್ಯನರ ತೋಪು ಸೇನೆಯು ಸೆಜೆರ್ನೊವಿಟಿಗೆ ಗುಂಡು ಹಾರಿಸ ಪ್ರಾರಂಭಿಸಿರುವದು.

ತಾ. ೫ನೇ ಮಾರ್ಚಿ.

ಡರ್ಡನೆಲ್ಸಿನ ಮೇಲೆ ಹಲ್ಲಾ ಮಾಡುವ ಕೆಲಸವು ಪುನಃ ಪ್ರಾರಂಭವಾಗಿದೆ. "ಟ್ರಯಂಫ್" "ಓಶನ್" ಮತ್ತು ಅಲ್ಬಿಯನ್" ಎಂಬ ಯುದ್ಧನಾವೆಗಳು ಜಲಸಂಧಿನೊಳಗೆ ನುಗ್ಗಿ ೮ ಕೋಟೆಗಳ ಮೇಲ್ಹಾಯಿದಿರುವವು. ಕೋಟೆಗಳ ಫಿರಂಗಿಗಳು ಮರುಗುಂಡು ಹಾರಿಸಿರುವವು. ಸಿಡಿಮದ್ದಿನ ಗಣಿಗಳನ್ನು ಹುಡುಕಿ ತೆಗೆಯುವ ಕೆಲಸವು ನಡದದೆ. ತುರ್ಕರ ೬—೧೧ ಅಂಗುಲ ಬಾಯಿಯ ೧೧ ಫಿರಂಗಿಗಳನ್ನೂ ಇನ್ನು ಸಣ್ಣ ಸಣ್ಣ ಅನೇಕ ಫಿರಂಗಿಗಳನ್ನೂ ಈ ಯುದ್ಧನಾವೆಗಳು ನಾಶಮಾಡಿದವು. ಮಂಗಳವಾರ ದಿನ "ಕೆನೋಪಸ್" "ಸ್ವೀಟ್‌ಸೂರ್" ಮತ್ತು "ಕೊರ್ನ್‌ವಾಲಿಸ್" ಎಂಬ ಯುದ್ಧನಾವೆಗಳು ೯ ಕೋಟೆಗಳ ಮೇಲೆ ಹಲ್ಲಾ ಮಾಡಿದವು. ೯ ಕೋಟೆಗಳಿಂದಲೂ ಭಯಂಕರವಾದ ಗುಂಡುಗಳು ಈ ಹಡಗಗಳ ಮೇಲೆ ಹಾರಿಸಲ್ಪಟ್ಟವು. ಈ ಹಡಗಗಳಲ್ಲಿ ಒಬ್ಬನು ಪ್ರಾಣಾಘಾಯ ಹೊಂದಿರುವನು. ಮತ್ತೊಬ್ಬನಿಗೆ ಸಣ್ಣ ಗಾಯವಾಗಿದೆ. ರುಶ್ಯನರ "ಎಸ್ಕೊಲ್ಡ್" ಎಂಬ ನಾವೆಯು ಡರ್ಡನೆಲ್ಸಿನಲ್ಲಿರುವ ಮಿತ್ರರ ನಾವೆಗಳಿಗೆ ಸಹಾಯವಾಗಿ ಬಂದು ಕೂಡಿರುವವು.

ಸರೊಸ್ ಕೊಲ್ಲಿಯಲ್ಲಿ ಫ್ರೆಂಚರ ಯುದ್ಧ ಹಡಗಗಳು ಬುಲೆಯರ್ ಕೋಟೆಗಳಿಗೆ ಗುಂಡು ಹಾರಿಸಿ ಹಾನಿಪಡಿಸಿರುವವು.

ಡರ್ಡನೆಲ್ಸಿನ ಡಾರ್ಡನಸ್, ಹೆಮಿಡ, ಎಸ್ ಮೆಸ್‌ಲಿಕ್ ಕೋಟೆಗಳು ಮೌನವಾಗಿರುವವು. ಬಿಜೀಕದ ತಂತೀ ಇಲ್ಲದ ಟೆಲಗ್ರಾಮು ಆಫೀಸು ಹಾಳಾಗಿರುವದು. ೫೨ ಯುದ್ಧ ಹಡಗಗಳು ಜಲಸಂಧಿನೊಳಗಿವೆಂತ ಅಥೆನ್ಸಿನಲ್ಲಿ ಪ್ರಕಟವಾಗಿದೆ.

ಮಿತ್ರರ ಭೂಸೇನೆಯು ಡರ್ಡನೆಲ್ಸಿಗೆ ಬಂದು ತಲಪಿರುವದು ಎಂತ ಅಥೆನ್ಸಿನಲ್ಲಿ ಪ್ರಕಟವಾಗಿದೆ. ಗಲಿಪೋಲಿಯಲ್ಲಿ ೧೦೦,೦೦೦ ತುರ್ಕಿಸೇನಿಕರು ಇರುವರು ಎಂಬ ವಾರ್ತೆ ಇದೆ. ತುರ್ಕರಿಗೆ ಸಹಾಯವಾಗಿ ನೆಲಮಾರ್ಗದಿಂದ ಜರ್ಮನಿಯವರು ಮೂರು ಜಲಂತರ್ಗಾಮಿ ನಾವೆಗಳನ್ನು ಕಳುಹಿಸಿ ಕೊಟ್ಟಿರುವರು. ಆದರೆ ಅದನ್ನು ಇನ್ನೂ ಕೂಡಿಸಲಿಲ್ಲ.

ಬ್ರಿಟಿಷರ "ಟೋರ್ಡಿಟ್" ಎಂಬ ನಾವೆಯು ಜರ್ಮನರ ಜಲಂತರ್ಗಾಮಿ ನಾವೆಯನ್ನು ಬೀಚಿಹೆಡ್ ಎಂಬಲ್ಲಿ ಮುಣುಗಿಸಿರುವದು.

ನಿಮೆನ್ ಮತ್ತು ವಿಸ್ತುಲದಲ್ಲಿ ಜರ್ಮನರ ಮೇಲ್ಹಾಯುವ ಕೆಲಸವು ನಿಲ್ಲಿಸಲ್ಪಟ್ಟದೆ. ಒಸಿವಿಚಿನ ಮೇಲೆ ಮಾತ್ರ ಗುಂಡು ಹಾರಿಸುತ್ತಲಿರುವರು. ಗೆಲಿಸಿಯಾದಲ್ಲಿ ಆಸ್ಟ್ರಿಯನರು ಸೋಲಿಸಲ್ಪಟ್ಟು ಹೆಚ್ಚಿನ ನಷ್ಟಪಟ್ಟಿರುವರು. ೬೪ ಆಫೀಸರರೂ ೬೦೦೦ ಸೇನಿಕರೂ ೪ ಫಿರಂಗಿಗಳೂ ಇನ್ನು ಇತರ ಅನೇಕ ಯುದ್ಧ ಸಾಹಿತ್ಯಗಳೂ ರುಶ್ಯನರ ಸೆರೆಬಿದ್ದಿರುವವು.

ತಾ. ೬ನೇ ಮಾರ್ಚಿ

ಈ ದಿನ ೧೦ ದೊಡ್ಡ ಯುದ್ಧ ಹಡ...... ಮೇಲೆ ಹಲ್ಲಾ ಮಾಡಿರುವವು.

ರುಶ್ಯನರ ನೌಕಾವಳಿಯು ಬೊಸ್ಪರಸಿನ ಕಡೆಗೆ ಬರಲು ಹೊರಟಿರುವವು ಎಂಬ ವಾರ್ತೆ ಇದೆ. ಆಸ್ಟ್ರಿಯಾನರ ೫ ಯುದ್ಧನಾವೆಯುಗಳು ಅಂಟಿವಾರಿಯ ಮೇಲೆ ಗುಂಡು ಹಾರಿಸುತ್ತಲಿವೆ.

ಜರ್ಮನರ ಒಂದು ಜಲಂತರ್ಗಾಮಿ ನಾವೆಯ ಮೇಲೆ ಬ್ರಿಟಿಷರ ನಾವೆಯು ಸೆಂಟ್‌ಜೋನ್ ಕಾಲಿವೆಯಲ್ಲಿ ಗುಂಡು ಎಸೆದಿರುವದು ಎಂತ ಜರ್ಮನರು ಪ್ರಕಟಿಸಿರುವರು. ಫ್ರೆಂಚರ ಡಿಸ್ಕೊಯರ್ ನಾವೆಯು ಡೋವರಿನಲ್ಲಿ ಜರ್ಮನರ ಒಂದು ಜಲಂತರ್ಗಾಮಿ ನಾವೆಯನ್ನು ಮುಣುಗಿಸಿರುವದು. ನಾವಿಕರನ್ನು ಫ್ರೆಂಚರು ಸೆರೆಹಿಡಿದಿರುವರು.

"ಅಲಸ್ಕ್ವಿವ್" ಹಡಗವು ಜರ್ಮನರ ಒಂದು ಜಲಂತರ್ಗಾಮಿ ನಾವೆಯನ್ನು ಹಾರ್ಟ್‌ಲ್‌ಫೂಲಿಗೆ ಪಶ್ಚಿಮ ಕಡೆಯಲ್ಲಿ ಮುಣುಗಿಸಿರುವದು.

ಫ್ರಾನ್ಸಿನಲ್ಲಿ ಮಿತ್ರಸೇನಿಕರು ಮುಂದರಿಯುತ್ತಲಿದ್ದಾರೆ. ರೋಟ್‌ಮೈಲ್ ಮತ್ತು ಬ್ಲೇಕ್‌ಫೂರೆಸ್ಟಿನಲ್ಲಿ ಫ್ರೆಂಚರ ವಿಮಾನಗಾಮಿಯು ಜರ್ಮನರ ಮದ್ದು ಗುಂಡುಗಳ ಕೊಠಡಿಗೆ ಗುಂಡು ಹಾಕಿ ಕೊಠಡಿಯನ್ನು ಹಾರಿಸಿದನು.

ಕರ್‌ಪಥೇನಿಯ ಮತ್ತು ಗೆಲಿಸಿಯದಲ್ಲಿ ಈ ದಿನ ರುಶ್ಯನರು ಆಸ್ಟ್ರಿಯಾನರ ೪೭ ಆಫೀಸರರನ್ನೂ ೩೦೦೦ ಸೇನಿಕರನ್ನೂ ಇನ್ನೂ ಹಲವು ಫಿರಂಗಿಗಳನ್ನೂ ಸೆರೆಹಿಡಿದಿರುವರು.

ವಿಸ್ತುಲ ಮತ್ತು ನೀಮೆನಿನಲ್ಲಿ ಕದನ ನಡೆಯುತ್ತಿದೆ. ಗೊರ್ಡೊನೋ ಡಿಸ್ಟ್ರಿಕ್ಟಿನಲ್ಲಿ ರುಶ್ಯನರ ಸೇನೆಗೆ ಜಯವಾಗುತ್ತಿದೆ. ದಕ್ಷಿಣದಲ್ಲಿ ರುಶ್ಯನರು ಮುಂದರಿದು ಕೈದುಡುಕಿನ ಕಾಳಗ ಮಾಡಿ ೨೧ ಆಫೀಸರರನ್ನೂ ೬೦೦ ಸೇನಿಕರನ್ನೂ ಸೆರೆಹಿಡಿದರು. ಮಾಲ್ವ ಮತ್ತು ಹೊರೆಜೆಲೆಯಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಗೆಲಿಸಿಯದಲ್ಲಿ ೬॥ ಮಿಲಿಯ ಜನಸಂಖ್ಯೆ ಇರುವ ೩೭,೫೦೦ ಚಚಾಕ ಮೈಲುಗಳ ಸ್ಥಳವು ರುಶ್ಯನರ ಸ್ವಾಧೀನವಾಗಿರುವವು. ಇದು ಬೆಲ್ಜಿಯಮಿನ ಎರಡಷ್ಟು ವಿಸ್ತೀರ್ಣದಷ್ಟಾಯಿತು.

ತಾ. ೮ನೇ ಮಾರ್ಚಿ.

ಮಿತ್ರರ ನೌಕಾವಳಿಯು ಡರ್ಡನೆಲ್ಸಿನ ಮೆಡ್ಜಿಡ ಮತ್ತು ನಗರ ಎಂಬ ಕೋಟೆಗಳಿಗೆ ಗುಂಡು ಹಾರಿಸುತ್ತಲಿವೆ. ಆಸ್ಯಖಂಡದ ಕರಾವಳಿಯಲ್ಲಿ ತುರ್ಕ ಸೇನಿಕರು ಕಕ್ಕಾಬಿಕ್ಕಿಯಾಗಿ ಓಡಿಹೋಗಿರುವರು. ಸ್ಮಿರ್ನದ ಗುಡ್ಡದಲ್ಲಿರುವ ಕೋಟೆಗಳಿಗೆ ಮಿತ್ರರು ಗುಂಡು ಹಾರಿಸಿರುವದರಿಂದ ಅವು ಮೌನವಾಗಿರುವವು. ಬ್ರಿಟಿಷರ "ಕ್ವೀನ್ ಎಲಿಜಬೇತ್" ಎಂಬ ಯುದ್ಧನಾವೆಯು ಸಾರೋ ಕೊಲ್ಲಿಯಿಂದ ತುರ್ಕರ ಬತ್ತೇರಿಗಳಿಗೆ ಗುಂಡು ಹಾರಿಸಿ ಅವನ್ನು ಹಾಳು ಮಾಡಿರುವದು.

ಬೆಲ್ಜಿಯಮಿನಲ್ಲಿ ೧೨ ಸಾರಿ ಹಲ್ಲಾ ಮಾಡಿದ ಜರ್ಮನರು ಹಿಮ್ಮೆಟ್ಟಿದರು. ಅರ್‌ರಾಸಿನಲ್ಲಿ ಮಿತ್ರರು ಜರ್ಮನರನ್ನು ಹಿಂದಕ್ಕಟ್ಟಿ ಅನೇಕ ಜರ್ಮನರನ್ನು ಸೆರೆ ಹಿಡಿದರು. ರೈಮ್ಸಿಗೆ ಜರ್ಮನರು ದಿನವೆಲ್ಲಾ ಗುಂಡು ಹಾರಿಸಿದರು. ಕೆಂಪಾಗ್ನೆಯಲ್ಲಿಯೂ ಮಿತ್ರರು ಮುಂದರಿಯುತ್ತಲಿದ್ದಾರೆ. ಅಲ್ಸೆಸಿನಲ್ಲಿ ಜರ್ಮನರು ವಿಶೇಷ ನಷ್ಟ ಹೊಂದಿರುತ್ತಾರೆ.

ಜರ್ಮನ ಸೇನೆಯಲ್ಲಿ ಈ ವರೆಗೆ ೩ ಮಿಲಿಯ ಜನ ನಷ್ಟವಾಗಿರಬಹುದೆಂದು ಫ್ರೆಂಚರು ಜರ್ಮನರ ಮೃತಪಟ್ಟವರ ಲೆಕ್ಕಪಟ್ಟಿಯಿಂದ ಅಂದಾಜು ಮಾಡಿರುವರು.

ನಿಮೆನ್ ಮತ್ತು ವಿಸ್ತುಲದಲ್ಲಿ ಕಠಿಣ ಕಾಳಗ ನಡೆದಿರುವದು. ರುಶ್ಯನರ ಸೇನೆಯು ಮುಂದರಿಯುತ್ತಲಿದೆ. ಮೊಕರ್ಜೆಯಲ್ಲಿ ರುಶ್ಯನರು ಕೆಲವು ನೂರು ಶತ್ರುಸೇನಿಕರನ್ನು ಹಿಡಿದಿರುವರು. ಕರ್‌ಪಥೇನಿಯದಲ್ಲಿ ರುಶ್ಯನರು ಸ್ವೀನಿಸ್ಕೊ ಎಂಬ ಪಟ್ಟಣವನ್ನು ಪ್ರವೇಶಿಸಿ ಲುಕ್ವ ನದಿಯನ್ನು ದಾಟಿರುವರು. ನಿಮೆನಿನ ಎಡಪಾರ್ಶ್ವದಲ್ಲಿ ಜರ್ಮನರು ಹಿಂದಕ್ಕೆ ಅಟ್ಟಲ್ಪಟ್ಟು ರೆಲ್ವೆ ಸ್ಟೇಶನಿನ ಹಿಂದಕ್ಕೆ ಹೋಗಿರುವರು. ಮಾಲ್ವ ಪ್ರಾಂತ್ಯದಲ್ಲಿಯೂ ರುಶ್ಯನರು ಮುಂದರಿದು ೫೧೭ ಶತ್ರು ಸೇನಿಕರನ್ನು ಹಿಡಿದಿರುವರು. ಅಗೊಸ್ಟೊವು ಅರಣ್ಯದಲ್ಲಿ ರುಶ್ಯನರು ಮುಂದರಿಯುತ್ತಲಿದ್ದಾರೆ. ...ಟೆಗಳು ಎರಡಾವರ್ತಿ ಮೇಲ್ಹಾಯಿದ ಜರ್ಮನರನ್ನು ಹಿಂದಕ್ಕೆ ...ರುವವು. ಪಿಲಿಕ್ನ ನದಿಯ ಸಮೀಪ ದೊಡ್ಡ ಕದನ ನಡೆಯುವ ಸಂಭವವಿದೆ. ಫೆಬ್ರುವರಿ ತಾ. ೨೮ರಿಂದ ಮಾರ್ಚಿ ತಾ. ೩ರ ವರೆಗೆ ಸ್ಟಾನಿಸ್ಲೊ ಎಂಬಲ್ಲಿ ನಡೆದ ಕದನದಲ್ಲಿ ಆಸ್ಟ್ರಿಯನರ ... ಮಂದಿ ಸೆರೆ ಬಿದ್ದರು. ೫ ಫಿರಂಗಿಗಳೂ ಅನೇಕ ಯುದ್ಧ ಸಾಹಿತ್ಯಗಳೂ ರುಶ್ಯನರಿಗೆ ದೊರಕಿದವು.

ಉತ್ತರ ಹಿಂದೂಸ್ಥಾನ.

ಶ್ರೇಷ್ಠ ನ್ಯಾಯವಿಧಾಯಕ ಸಭೆಯ ಮೆಂಬರರಾದ ಮಾನ್ಯ ಗೋಖಲೆಯವರ ಸ್ಥಾನಕ್ಕೆ ೫ ಮಂದಿ ಉಮೇದ್ವಾರರಾಗಿ ನಿಲ್ಲಬೇಕೆಂದಿರುವದರಿಂದ ಈ ಚುನಾವಣೆಯಲ್ಲಿ ವಿಶೇಷ ಹೋರಾಟವಿದೆ.

ಡಿಲ್ಲಿ ರಾಜದ್ರೋಹ ಪಿತೂರಿ ಮೊಕದ್ದಮೆಯಲ್ಲಿ ಅಪಾದಿಸಲ್ಪಟ್ಟು ಫಾಶಿ ಶಿಕ್ಷೆ ಹೊಂದಿದವರು ಪ್ರೀವಿ ಕೌನ್ಸಿಲಿಗೆ ಅಪೀಲು ಮಾಡಬೇಕೆಂದಿರುವದರಿಂದ ಅವರ ಶಿಕ್ಷೆಯನ್ನು ಜಾರಿಗೆ ತರುವ ತಾರೀಕು ಗವರ್ನರ ಜನರಲರವರಿಂದ ಹಿಂದಕ್ಕೆ ಇಡೋಣಾಗಿರುವದೆಂತ ವಾರ್ತೆ ಇದೆ

ಗಾಡಿಯಲ್ಲಿ ಕೊಂಡುಹೋಗುತ್ತಿದ್ದ ಹಣವನ್ನು ಅಪಹರಿಸಿದ್ದರೆಂದು ಅಪಾದಿಸಲ್ಪಟ್ಟ ಮೆಟ್ರೊಪೊಲಿಟನ್ ಶಾಲೆಯ ಉಪಾಧ್ಯಾಯ ಸರೋಜ ಭೂಷಣ ದಾಸ, ಸೆಂಟ್ ಕ್ಸೆವಿಯರ್ಸ್ ಕಾಲೇಜಿಯ ವಿದ್ಯಾರ್ಥಿ ಬಿಮನ್ ಚಂದ್ರ ಘೋಸ್, ಮೆಟ್ರಿಕ್ಯುಲೇಶನ್ ಕ್ಲಾಸಿನ ವಿದ್ಯಾರ್ಥಿ ರಜನಿ ಕಾಂತೋ ಬೋಸ, ಒರಿಸ್ಸಾಪಾರದ ವಕೀಲರ ಮಗ ಪ್ರಕಾಶ ಚಂದ್ರ ಬಾಸು, ಬಂಗಾಳದ ಒಂದು ಕಾರ್ಖಾನೆಯಲ್ಲಿ ಕೆಲಸಕ್ಕಿದ್ದ ಬಿಜೋಯಿ ಕೃಷ್ಣಘೋಸ, ರಾಜಪುರದ ಗೋಪಾಲಚಂದ್ರದತ್ತ ಮತ್ತು ನರೇಂದ್ರದತ್ತಭಟ್ಟಾಚಾರ್ಯ ಇವರ ಮೇಲಿನ ಮೊಕದ್ದಮೆಯ ತನಿಕೆಗೆ ಪ್ರಾರಂಭಿಸಲ್ಪಟ್ಟಲ್ಲಿ ಅಪಾದಿತ ಸರೋಜ ಭೂಷಣದಾಸನು ಸಿಡುಬು ರೋಗದಿಂದ ಸತ್ತನೆಂದೂ ನರೇಂದ್ರನಾಥ ಬಟ್ಟಾಚಾರ್ಜಿಗೆ ಅದೇ ಸೋಂಕು ತಗಲಿರುವದೆಂದೂ ಹೇಳಿ ಮೊಕದ್ದಮೆಯ ತನಕಿಯನ್ನು ೧೫ ದಿವಸಕ್ಕೆ ಹಿಂದಕ್ಕಿಡಿಸಿದರು ಗೋಪಾಲ ಚಂದ್ರದತ್ತನನ್ನು ೧೦೦೦ ರೂಪಾಯಿ ಜಾಮೀನಿನ ಮೇಲೆ ಬಿಟ್ಟಿರುವರು.

ಜೆಡ್ಡಕ್ಕೆ ಹೋದ ಹಾಜಿ ಯಾತ್ರಿಕರಲ್ಲಿ ೭೦ ಮಂದಿ 'ಕೈತ್' ಎಂಬ ಹಡಗದಲ್ಲಿ ಹಿಂದಕ್ಕೆ ಬಂದಿರುವರು ಒಬ್ಬ ಯಾತ್ರಿಕನು ದಾರಿಯಲ್ಲಿ ಮೃತನಾಗಿರುವನು. ೩೭೦ ಬಡ ಯಾತ್ರಿಕರು ಜೆಡ್ಡದಲ್ಲಿ ಉಳಿದಿರುವರು. ಒಟ್ಟಿಗೆ ಹಿಂತೆರಳಿದ ಯಾತ್ರಿಕರ ಸಂಖ್ಯೆ ೧೪೧೬೭ ಟಿಕೇಟಿನ ದರ ೩೦ ರೂಪಾಯಿ.

ತಾ. ೩ರಲ್ಲು ಲಾಹೋರಿನಲ್ಲಿ ಭೂಕಂಪವಾಗಿರುವದು.

ವೈಸರಾಯ ಪ್ರಭುಗಳವರು ತಾ. ೪ರಲ್ಲು ಕಲ್ಕತ್ತೆಗೆ ಚಿತ್ತೈಸಿ ಮಿಂಟೋ ಪ್ರಭುಗಳವರ ಮತ್ತು ರಿಫನ್ ಪ್ರಭುಗಳವರ ಪ್ರತಿಮೆಗಳನ್ನು ಪ್ರತಿಷ್ಠೆ ಮಾಡಿದರು.

ಕಲ್ಕತ್ತೆಯಲ್ಲಿ ಈಚೆಗೆ ನಡೆದ ರಾಜದ್ರೋಹ ತಕ್ಷೀರುಗಳ ಸಂಬಂಧ ೧೮ ಯುವಕರು ಕೈದುಮಾಡಲ್ಪಟ್ಟಿರುವರು. ಈ ಪೈಕಿ ಕೆಲವರು ಶಾಲಾ ಉಪಾಧ್ಯಾಯರು, ಕೆಲವು ಮಂದಿ ವಿದ್ಯಾರ್ಥಿಗಳು ಮತ್ತೆ ಕೆಲವು ಮಂದಿ ಕೆಲಸವಿಲ್ಲದೆ ತಿರುಗಾಡುವ ಯುವಕರು.

ಕೂಮಿಲ್ಲದ ಜಿಲ್ಲಾ ಶಾಲೆಯ ಹೆಡ್‌ಮಾಸ್ತರರಾದ ಶರತ್ ಚಂದ್ರ ಬೋಸರವರು ಸಾಯಂಕಾಲ ರಾಜರಸ್ತೆಯಲ್ಲಿ ಹೋಗುತ್ತಿರುವಾಗ ಯಾರೋ ಅವರಿಗೆ ಗುಂಡು ಹಾರಿಸಿ ಕೊಂದರು. ಅವರ ಸೇವಕನೂ ಗಾಡಿಯವನೂ ಘಾತುಕರನ್ನು ಹಿಡಿಯಲು ಪ್ರಯತ್ನಿಸಿದಾಗ ಅವರಿಗೂ ಗುಂಡು ಹಾರಿಸಿ, ಘಾಯಪಡಿಸಿ ಘಾತುಕರು ಓಡಿಹೋಗಿರುವರು. ಘಾಯ ಒಡೆದವರು ಆಸ್ಪತ್ರೆಯಲ್ಲಿರುವರು. ಮೃತ ಹೆಡ್‌ಮಾಸ್ತರರಿಗೆ ವಿರೋಧವಾಗಿ ಹಿಂದೆ ಪತ್ರಗಳನ್ನು ಹಂಚಿದ್ದರೆಂದ ತಿಳಿದು ಬಂದ ಇಬ್ಬರನ್ನು ಪೋಲಿಸಿನವರು ಕೈದು ಮಾಡಿರುವರು

ಪಂಜಾಬಿನ ಜಾಂಗ್ ಡಿಸ್ಟ್ರಿಕ್ಟಿನಲ್ಲಿ ಒಂದು ದರೋಡೆಯು ನಡದಿರುವದು ಕೆಲವು ದರೋಡೆಗಾರರು ಒಬ್ಬರ ಮನೆಗೆ ನುಗ್ಗಿ ಬಲತ್ಕಾರದಿಂದ ೩೫,೦೦೦ ರೂಪಾಯಿಗಳ ಚಿನ್ನಾಭರಣಗಳನ್ನು ಕೊಂಡು ಹೋಗಿರುವರು

ಇಂಪೀರಿಯಲ್ ಗಜೇಟೀರ್ ಎಂಬ ಪುಸ್ತಕದಲ್ಲಿ ಇಂಡಿಯದ ಜನರ ಆರೋಗ್ಯ ಸಂಬಂಧವಾಗಿ ಬರೆದ ಅಭಿಪ್ರಾಯವು ನಾವು ವಿಶೇಷವಾಗಿ ವಿವೇಚಿಸತಕ್ಕ ವಿಷಯವಾಗಿದೆ. ಬಾಲ್ಯ ವಿವಾಹ ಪದ್ಧತಿಯ ಫಲವಾಗಿ ಹುಡುಗರೂ ಹುಡುಗಿಯರೂ ಪ್ರಾಯ ಪ್ರಬುದ್ಧರಾಗುವ ಮೊದಲೆ ಗೃಹಸ್ಥಾಶ್ರಮದಲ್ಲಿ ಪ್ರವೇಶರಾಗುತ್ತಾರಾದುದರಿಂದ ಇವರ ದೇಹ ಪ್ರಕೃತಿಯು ಕೆಟ್ಟುಹೋಗುತ್ತದೆ ಇವರಲ್ಲಿ ಆಗುವ ಸಂತತಿಯು ಬಲಿಷ್ಠರಾಗುವದಿಲ್ಲ ಶರೀರದಲ್ಲಿ ನಿತ್ರಾಣವೂ, ವಿವಿಧ ವ್ಯಾಧಿಗಳಿಗೆ ಆಸ್ಪದವೂ, ಅಕಾಲ ಮುಪ್ಪು ಅಕಾಲ ಮರಣವೂ ಜೀವನದಲ್ಲಿ ಸುಖನಷ್ಟವೂ ದುಃಖವೂ ಉಂಟಾಗುತ್ತವೆ. ಮಕ್ಕಳ ಮರಣವು ಅತಿ ಹೆಚ್ಚು ೫ ವರುಷ ವಯಸ್ಸಿನ ಮೊದಲ್ ಆಗುವ ಮರಣಗಳು ಗಂಡು ಮಕ್ಕಳಲ್ಲಿ ಇಂಗ್ಲಾಂಡಿನಲ್ಲಿ ೬೨ ಆಗುವಾಗ ಇಂಡಿಯಾದಲ್ಲಿ ೧೬೯, ಹೆಣ್ಣು ಮಕ್ಕಳಲ್ಲಿ ಇಂಗ್ಲಾಂಡಿನಲ್ಲಿ ೫೭ ಆಗುವಾಗ ಇಂಡಿಯಾದಲ್ಲಿ ೧೧೩ ಈ ದರದಲ್ಲಿ ಆಗುತ್ತವೆ

೧೯೧೧ನೇ ಇಸವಿಯ ಖಾನೇಸುಮಾರಿ ರಿಪೋರ್ಟಿನಲ್ಲಿಯೂ ಬಾಲ್ಯ ವಿವಾಹಗಳ ಫಲವು ವಿವರಿಸಿಯದೆ. ಇಂಡಿಯದಲ್ಲಿ ನಮ್ಮ ಜನರ ಮಧ್ಯ ಹೇಗೋ ಹಾಗೆಯೇ ಪಿಸ್ತ್ರಾಲ್ಯ ದೇಶದ ಕಾಡು ಜನರಲ್ಲಿ ಬಾಲ್ಯ ವಿವಾಹ ಪದ್ಧತಿಯುಂಟು ಹೆಣ್ಣು ಮಕ್ಕಳು ಬಾಲ್ಯದಲ್ಲೆ ಮಕ್ಕಳನ್ನು ಹೆರುತ್ತಾರಾದುದರಿಂದ ಹೆಂಗಸರ ಮರಣದ ಸಂಖ್ಯೆ ಬಹಳ ಹೆಚ್ಚು. ಬರೋಡೆ ರಾಜ್ಯದ ೧೯೦೧ನೇ ಇಸವಿಯ ಖಾನೇಶುಮಾರಿ ರಿಪೋರ್ಟಿನಲ್ಲಿ ಬಾಲ್ಯ ವಿವಾಹ ಪದ್ಧತಿಯ ಕಾರಣದಿಂದ ಹೆಂಗಸರು ತ್ವರ್ಯದಲ್ಲಿ ನಿತ್ರಾಣಿಗಳಾಗಿ ಕ್ಷಯ ಮೊದಲಾದ ವ್ಯಾಧಿಗಳಿಗೂ, ಗರ್ಭಕೋಶದ ವ್ಯಾಧಿಗಳಿಗೂ ಗುರಿಯಾಗಿ ಬಹು ಹೆಚ್ಚು ಮರಣಗಳಾಗುತ್ತವೆಂತ ತೋರುತ್ತದೆ

ಇಡೀ ಇಂಡಿಯದಲ್ಲಿ ೧೮೯೧ ನೆ ಇಸವಿಯಲ್ಲಿ ೧,೪೫೯೮೨೦೮ ಬ್ರಾಹ್ಮಣ ಜಾತಿಯವರಿದ್ದರೆಂತಲೂ ೧೯೦೧ನೆ ಇಸವಿಯಲ್ಲಿ ೧,೪೭೨೮೩೫೯ ಇದ್ದರೆಂತಲೂ, ಇಂಡ್ಯದಲ್ಲಿ ಸರಾಸರಿ ಮೇಲೆ ಶೇಕಡಾ ೧೦ರಂತೆ ಜನಸಂಖ್ಯೆ ಏರುತ್ತಾ ಬರುವಾಗ ಬ್ರಾಹ್ಮಣರಲ್ಲಿ ಶೇಕಡಾ ೨ರಂತೆ ಕಡಿಮೆಯಾದ್ದಾಗಿಯೂ ತೋರುತ್ತದೆ. ಹಾಗಾದರೆ ಬ್ರಾಹ್ಮಣರಲ್ಲಿ ಮರಣಗಳು ಹೆಚ್ಚೊ? ಕಾರಣವೇನು?

ದಕ್ಷಿಣ ಹಿಂದೂಸ್ಥಾನ.

ಮಲಬಾರಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾದ ಮಿ ಸಿ. ಎ. ಇನ್ಸ್. ಐ ಸಿ. ಎಸ್ ರವರನ್ನು ಕೊಲ್ಲುವರೆ ಮಲಬಾರಿನಲ್ಲಿ ಕೆಲವು ಮತಭ್ರಾಂತ ಮಾಪಿಳ್ಳೆಯವರು ಯತ್ನ ನಡಿಸಿದ್ದರೆಂಬದಾಗಿ ವಾರ್ತೆ ಇತ್ತು. ಈ ವಿಷಯ ವಿವರವಾದ ವಾರ್ತೆಯು ಈಗ ವಾರ್ತೆ ಪತ್ರಿಕೆಯದಾಗಿರುವದು. ತಾ ೨೫ ನೇ ರಾತ್ರಿ ಪಂಡಿಕ್ಕಾಡ್ ಎಂಬಲ್ಲಿ ಮತಭ್ರಾಂತ ಮಾಪಿಳ್ಳೆಯರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಮೇಲೆ ಬೀಳಲಿಕ್ಕಿದ್ದಾರೆಂಬ ವಾರ್ತೆಯು ಸಿಕ್ಕಿತು. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಕೂಡಲೇ ಕೆಲವು ಸ್ನೇಹಿತರಾದ ಮಾಪಿಳ್ಳೆಯರ ಸಹಾಯದಿಂದ ದಂಗೆ ಎದ್ದಿರುವ ಮಾಪಿಳ್ಳೆಯರನ್ನು ಹಿಡಿಯುವ ಪ್ರಯತ್ನ ನಡಿಸಿದರು. ಆದರೆ ದಂಗೆಗಾರರ ಪಂಗಡದವರು ಸಿಕ್ಕಲಿಲ್ಲ ತಾ. ೨೭ನೇ ಮಧ್ಯಾಹ್ನ ೧೨ ಗಂಟೆಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಪಂಡಿಕ್ಕಾಡಿನಿಂದ ಕರುವಾರಕುಂಡರ ಎಂಬಲ್ಲಿಗೆ ಹೋಗುತ್ತಿರುವಾಗ ಮಾಪಿಳ್ಳೆಯರ ಅವರಿಗೆ ಗುಂಡುಹಾರಿಸಿದರು ಮಾಪಿಳ್ಳೆಯರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೆ ೨೦ ಅಡಿ ದೂರದಲ್ಲಿ ಗುಂಡು ಹಾರಿಸಿದರೂ ದೈವವಶಾತ್ ಅದು ತಪ್ಪಿ ಹೋಯಿತು ೪-೫ ಮಾಪಿಳ್ಳೆಯರು ಈ ಕೃತ್ಯವನ್ನು ನಡಿಸಿದರು ಆದರೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರನ್ನು ಅಟ್ಟಿಕೊಂಡು ಬರಲಿಲ್ಲ. ಪೋಲಿಸಿನವರೂ, ಡಿಸ್ಟ್ರಿಕ್ಟ್ ಪೋಲಿಸ್ ಸುಪರಿಂಟೆಂಡೆಂಟರೂ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೂ ಕಾಲಿಕ್ಕೈಲು ಪ್ರಾಂತ್ಯದ ಗುಡ್ಡದಲ್ಲಿ ಈ ಮಾಪಿಳ್ಳೆಯರನ್ನು ಹುಡುಕ್ಯಾಡಿದರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಇತರ ಕೆಲವು ಪೋಲಿಸಿನವರೊಡನೆ ದಂಗೆಗಾರರನ್ನು ಹುಡುಕ ಪ್ರಾರಂಭಿಸಿದರು ಆದರೆ ೨ ತಾಸುಗಳ ಮೊದಲು ದಂಗೆಗಾರರು ಕರುವಾರಕುಂಡಿನ ದಾರಿಯ ಒಂದು ದೊಡ್ಡ ಅರಣ್ಯವನ್ನು ಪ್ರವೇಶಿಸಿ ತಪ್ಪಿಸಿಕೊಂಡರು. ತಾ. ೨೮ರ ವರೆಗೆ ದಂಗೆಗಾರರ ಸುಳುವೇ ಇರಲಿಲ್ಲ. ಅರಣ್ಯವನ್ನು ಹುಡುಕ್ಯಾಡಿದರೂ ವ್ಯರ್ಥವಾಯಿತು ದಂಗೆಗಾರರ ವಿಷಯ ಜಾಗ್ರತೆ ತಕ್ಕೊಳ್ಳಬೇಕೆಂದು ಎಲ್ಲಾ ಕಡೆಗೂ ತಿಳಿಸಲ್ಪಟ್ಟಿತಲ್ಲದೆ ಪೆರಿಂತಲಮನ್ನಾದ ಸಬ್ ಇನ್ಸ್‌ಪೆಕ್ಟರ್ ಅಮ್ಮುರವರು ತನಗೆ ಸಿಕ್ಕಿದಷ್ಟು ಮಂದಿ ಜನ ಸಹಾಯವನ್ನು ಹಿಡಕೊಂಡು ಎಡೆಂಟಕಾರ ಎಂಬಲ್ಲಿಗೆ ಹೋಗಿ ದಂಗೆಗಾರರನ್ನು ಹುಡುಕಬೇಕೆಂದು ಹುಕುಂ ಕಳುಹಿಸಲ್ಪಟ್ಟಿತು. ಮಾರ್ಚ ತಾ. ೧ರಲ್ಲು ದಂಗೆಗಾರರು ಕಲಿಕಾವು ಅರಣ್ಯವನ್ನು ಬಿಟ್ಟು ಎಡಂಟಕಾರಕ್ಕೆ ಹೋಗುವ ಅರಣ್ಯ ಮಾರ್ಗವನ್ನು ಹಿಡಿದರು ಇಲ್ಲಿ ಸಬ್ ಇನ್ಸ್‌ಪೆಕ್ಟರರು ಅವರನ್ನು ಕಲೆತು ಅವರನ್ನು ಹಿಂಬಾಲಿಸಿಕೊಂಡು ಹೋದರು ದಂಗೆಗಾರರು ಮಲತೂರು ಮಣ್ಣಾರಗಾಟ ದಾರಿಯಲ್ಲಿರುವ ಅಯ್ಯಪ್ಪನಕಾವು ದೇವಸ್ಥಾನದಲ್ಲಿ ಮರೆಹೊಕ್ಕೊಂಡರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಗೂ ಡಿಸ್ಟ್ರಿಕ್ಟ್ ಪೋಲಿಸ್ ಸುಪರಿಂಟೆಂಡೆಂಟರವರಿಗೂ ಸಾಯಂಕಾಲ ೬ ಗಂಟೆಗೆ ಈ ವಿಷಯ ಸಬ್‌ಇನ್ಸ್‌ಪೆಕ್ಟರ್ ಅಮ್ಮುರವರು ತಂತೀಬಿಟ್ಟರು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಕರುವಾರಕುಂಡಿಗೆ ೨ ಮೈಲು ದೂರದಲ್ಲಿದ್ದರು ಅವರು ಕೂಡಲೇ ಹೊರಟು ೧೦ ಕನ್‌ಸ್ಟೇಬಲರೊಡನೆ ರಾತ್ರಿ ೮ ಗಂಟೆಗೆ ಅಲ್ಲಿಗೆ ತಲಪಿದರು. ರಾತ್ರಿ ೮॥ ಗಂಟೆಗೆ ಮಿ॥ ಎವಿಯೊಟರವರು ಸ್ಪೆಶ್ಯಲ್ ಸೈನಿಕರೊಂದಿಗೆ ಅಲ್ಲಿಗೆ ಬಂದರು. ದಂಗೆಗಾರರು ಶರಣಾಗತರಾಗುವ ಹಾಗೆ ಸ್ಥಳಿಕ ಜನರಿಂದ ಪ್ರಯತ್ನ ಮಾಡಿಸೋಣಾಯಿತು. ಆದರೆ ಇದು ವ್ಯರ್ಥವಾಗಿ ದಂಗೆಗಾರರು ದೇವಸ್ಥಾನದ ಬಳಿ ಕಂಡವರಿಗೆಲ್ಲಾ ಗುಂಡು ಹಾರಿಸಲು ಪ್ರಾರಂಭಿಸಿದರು. ತಾ. ೨ನೇ ಬೆಳಗ್ಗೆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರೂ, ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರೂ ಬಲವಾದ ಸೇನೆ ಸಹಿತ ದೇವಸ್ಥಾನದ ಮೇಲೆ ಹಲ್ಲಾ ಮಾಡಿದರು. ದಂಗೇಗಾರರಲ್ಲಿ ೪ ಮಂದಿ ಹತರಾದರು. ಒಬ್ಬನಿಗೆ ಗಾಯವಾಯಿತು ಇವನನ್ನು ಜೀವಿತನಾಗಿ ಹಿಡಿದರು. ದಂಗೆಗಾರರೊಡನೆ ೩ ಕೋವಿಗಳಿದ್ದವು. ಖಡ್ಗಗಳನ್ನು ಧರಿಸಿದ್ದರು. ೨ ಕನ್‌ಸ್ಟೇಬಲರಿಗೆ ಆಕಸ್ಮಾತ್ತಾಗಿ ಗಾಯಗಳಾಗಿರುವವು. ದಾರಿಯಲ್ಲಿದ್ದ ಒಬ್ಬ ಮರದ ಕೆಲಸದವನಿಗೂ ಸ್ವಲ್ಪ ಗಾಯವಾಗಿರುವದು ಹೀಗೆ ಮಾಪಿಳ್ಳೆಯರ ಈ ದಂಗೆಯು ನಿಲ್ಲಿಸಲ್ಪಟ್ಟು ಈಗ ಮಲಬಾರಿನಲ್ಲಿ ಮತಭ್ರಾಂತ ಮಾಪಿಳ್ಳೆಯರ ರಗಳೆ ಇರದು.

ದಕ್ಷಿಣ ಕನ್ನಡ.

WANTED.

An English knowing trained for the post of Head master of the Court Hill Panchama Elementary School, Mangalore. Pay according to qualifications.

Apply to
Depressed Classes
Mission Mangalore.
8th March 1915.

K. Ranga Rao.
Secretary.

NOTICE.

"The First Canara High School day will be celebrated on the 5th April 1915. All 'Old Boys' of the school are requested to be present on the occasion, and to communicate their addresses to the Head Master of the school and President of the School Day Committee"

A. *Padmanabhaiya*,
President,
For the School day Committee

ನೋಟೀಸು.

ಮ. ರೊ. ಕ. ಪ್ರೊ ಫಂಡನ್ನು ಬೋನಸ್ ಕಡಿಮೆ ಮಾಡದೆ ಇದ್ದ ಹಾಗೆ ನಡಿಸುವ ವಿಷಯವನ್ನು ಆಲೋಚಿಸುವ ಬಗ್ಗೆ ಸದರಿ ಫಂಡಿನ ಮೆಂಬರುಗಳ ಒಂದು ಖಾಸಗಿ ಮೀಟಿಂಗ್ ಇದೇ ಮಾರ್ಚಿ ತಾ. ೧೪ರಲ್ಲು ಆದಿತ್ಯವಾರ ಪ್ರಾತಃಕಾಲ ೯ ಗಂಟೆಗೆ ಕದ್ರಿ ಶಾಲೆಯಲ್ಲಿ ನಡೆಯುವದು. ಸರ್ವ ಕುಟುಂಬಗಳ ರಕ್ಷಣೆ ಬಗ್ಗೆ ನಡಿಸುವ ನಮ್ಮ ಈ ಪ್ರಯತ್ನಗಳು ಸಫಲವಾಗುವ ಹಾಗೆ ಸರ್ವ ಮೆಂಬರರೂ ಬಂದು ಕೈಕೊಡಬೇಕಾಗಿ ಅಪೇಕ್ಷಿಸೋಣಾಗಿಯದೆ.

Kadri Mangalore March 8th 1915 } S D Pinto, and others Kadri

ಪರಸ್ಪರ ಸಹಾಯ.

ಸರ್ಕೂಲಾರು ನಂ. ೬.

ನಮ್ಮ ಜಿಲ್ಲೆಯಲ್ಲಿನ ಪರಸ್ಪರ ಸಹಾಯಕ ಪರಿಷದ.

ಕಳೆದ ಸಂಚಿಕೆಯಲ್ಲಿ ಈ ಪರಿಷದದ ಅವಶ್ಯಕತೆಯನ್ನೂ ಕೋಯಂಬುತ್ತೂರು ಸರ್ಕಲ್ ಪರಿಷದದ ಗತ ಚರಿತ್ರೆಯನ್ನೂ ವಿವರಿಸಿ ಆ ಪರಿಷದಕ್ಕೆ ನಮ್ಮ ಜಿಲ್ಲೆಯಲ್ಲಿನ ಸಂಘಗಳಿಂದ ಆಗಬೇಕಾದ ಧನಸಹಾಯ ವಗೈರೆಯ ಕುರಿತು ಒಂದು ಸರ್ಕೂಲಾರು ಪ್ರಕಟಿಸಿತ್ತು. ಆ ವಂತಿಗೆ ವಗೈರೆಯನ್ನು ಈ ತಿಂಗಳ ತಾ ೧೦ರ ಒಳಗೆ ಇಲ್ಲಿಗೆ ತಲಪುವಂತೆ ಕಳುಹಿಸಬೇಕಾಗಿ ಸ್ಪಷ್ಟವಾಗಿ ತಿಳಿಸಿದ್ದರೂ ಅನೇಕ ಸಂಘದವರು ಆ ಕುರಿತು ಇದು ವರೇಗೆ ಮನಸ್ಸು ಮಾಡದ ಕಾರಣ ಈ ಸರ್ಕೂಲಾರನ್ನು ಪ್ರಕಟಿಸಿಯದೆ. ಆದದರಿಂದ ಇನ್ನಾದರೂ ಸಂಘದ ವಂತಿಗೆಯ ಐವಜನ್ನು ನಿಶ್ಚೈಸಿ ಆ ಹಣವನ್ನು ಮತ್ತು ಪರಿಷದಕ್ಕೆ ಸಂಘದ ಕಡೆಯಿಂದ ಪ್ರತಿನಿಧಿಯಾಗಿ ಬರುವವರ ಹೆಸರು ವ ವಿಳಾಸವನ್ನೂ ನಿರ್ಣಯದ ಸರಿ ನಕಲಿನೊಂದಿಗೆ ಈ ತಿಂಗಳ ತಾ. ೧೮ರ ಒಳಗೆ ಇಲ್ಲಿಗೆ ಮುಟ್ಟುವಂತೆ ಎಲ್ಲಾ ಸಂಘಗಳೂ ಕಳುಹಿಸಬೇಕಾಗಿ ಈ ಮೂಲಕ ಸೂಚಿಸೋಣಾಗುತ್ತದೆ.

ವಂತಿಗೆಯ ಹಣವನ್ನು ಕಳುಹಿಸಿಕೊಡುವುದಕ್ಕೆ ಅಗತ್ಯವಿರುವ ರಿಜಸ್ಟ್ರಾರವರ ಅನುಮತಿಯನ್ನು ಎಲ್ಲಾ ಸಂಘಗಳಿಗೂ ಕಳುಹಿಸಿ ಕೊಡುವಂತೆ ವಿಲೆವಾರಿ ಮಾಡಿಯವೆ. ಆದರೆ ಅದು ಇದು ವರೇಗೆ ಬಾರದಿದ್ದ ಕಾರಣದಿಂದ ಹಣವನ್ನು ಕಳುಹಿಸಿಕೊಡಲಿಕ್ಕೆ ಬಾಕಿಮಾಡಿಕೊಳ್ಳಲಾಗದು. ಇಂತಹ ಪರಿಷದಗಳಿಗೆ ಸಂಘಗಳು ಮಾಡಬಹುದಾದ ಯಥಾನುಶಕ್ತಿ ಸಹಾಯವನ್ನು ರಿಜಸ್ಟ್ರಾರರವರು ಎಂದಿಗೂ ಮಂಜೂರು ಮಾಡದೆ ಇರಲಾರರು ಮತ್ತು ಅವರ ಮಂಜೂರಾತಿಯು ಬರುವದಕ್ಕೆ ಸ್ವಲ್ಪ ವಿಳಂಬವಾದರೂ ಬಂದೇ ಬರುವುದರಲ್ಲಿ ಸಂಶಯವಿಲ್ಲ. ಆದದರಿಂದ ಸಂಘಗಳು ಅದಕ್ಕೋಸ್ಕರ ಕಾದಿರುವದು ಅಗತ್ಯವಿಲ್ಲಾ.

ಕಳೆದ ಸಂಚಿಕೆಯಲ್ಲಿ ಪರಿಷದವು ಎಪ್ರಿಲ್ ೩ನೇ ೪ನೇ ತಾರೀಕುಗಳಲ್ಲಿ ಕೂಡುವುದೆಂದು ಹೇಳಿತ್ತು. ಆದರೆ ಈ ವಿಷಯವನ್ನು ಪುನರಾಲೋಚಿಸಿ ಬೇರೆ ವ ಕದವರಂತೆ ಕ್ರೈಸ್ತರಿಗೂ ಅನುಕೂಲವಾಗುವ ಹಾಗೆ ಪರಿಷದವನ್ನು ೫ನೇ ಮತ್ತು ೬ನೇ ತಾರೀಕುಗಳಲ್ಲಿ ಮಾಡುವದೆಂತ ನಿಶ್ಚಯಿಸಿಯದೆ. ಆ ಸಮಯವು ಸರ್ವರಿಗೂ ಅನುಕೂಲವೆಂದು ತೋರುತ್ತದೆ.

ದಕ್ಷಿಣಕನ್ನಡಾ ಸೆಂಟ್ರಲ್ ಕೊ-ಅಪರೇಟಿವ್ ಬೇಂಕ್, ಲಿಮಿಟೆಡ್ ತಾ. 1-3-1915 } ಎಮ್ ಅನಂತರಾವ್ ಕಾರ್ಯದರ್ಶಿ

ಹೊಸದುರ್ಗ —ಇಲ್ಲಿಯ ಡಿವಿಜನಿಗೆ ಸೇರಿದ ಮಡಿಕ್ಕೆ ಗ್ರಾಮ ಎಂಬಲ್ಲಿ ದೊಡ್ಡ ವರ್ಗದಾರರಾದ ಯೇತಿಕಾನ್ನದವರ ಕಡೆ ವಕ್ಲುಗಳಿಗೂ ಕೋಡೋತ್ರ ಕಡೆ ವಕ್ಲುಗಳಿಗೂ ತಮ್ಮೊಳಗೆ ಏನೋ ಒಂದು ಕಾರಣದಿಂದ ದೊಡ್ಡ ದೊಂಬಿ ನಡೆದ ಆ ಬಾಬಿನಲ್ಲಿ ಇಲ್ಲಿಯ ಮೇಜಿಸ್ಟ್ರೇಟ ಕೋರ್ಟಿನಲ್ಲಿ ಯೇಚಿಕಾನದವರ ವಕ್ಲುಗಳ ಮೇಲೆ ಫಿರ್ಯಾದಿ ದಾಕಲು ಮಾಡಿರುವದಾಗಿ ಕೇಳುತ್ತೇವೆ.

ನಿನ್ನೆ ಇಲ್ಲಿಯ ಟೌನ್ ಹತ್ತರ ಹಗಲು ಹೊತ್ತಿನಲ್ಲಿ ಅಮ್ಮು ಎಂಬ ಹೆಂಗಸಿನ ಮನೆಯಲ್ಲಿ ಹಾಕಿದ ಬಾಗಲು ಒಡೆದು ಸುಮಾರು ೩೦, ೪೦ ರೂಪಾಯಿ ಸೊತ್ತು ಕಳವು ಮಾಡೋಣಾಗಿಯದೆ. ಮನೆಯಲ್ಲಿದ್ದ ಹೆಂಗಸರಿಬ್ಬರೂ ಜೀವನ ವೃತ್ತಿ ಬಗ್ಗೆ ಕೆಲಸಕ್ಕೆ ಹೋದಾಗ್ಗೆ ಈ ತಕ್ಸೀರು ನಡೆದದ್ದು. ಪೋಲಿಸ ಇಲಾಖೆಯವರು ಈ ಬಾಬಿನಲ್ಲಿ ತನಕಿ ನಡಿಸುತ್ತಾರೆ. ಹಗಲು ಹೊತ್ತಿನಲ್ಲಿ ಈಗಲೇ ಈ ನಮೂನೆ ಆದರೆ ಇನ್ನು ಮುಂದೆ ಬರುವ ಸಂವತ್ಸರದಲ್ಲಿ ಏನೆಲ್ಲಾ ನಡಿಯುತ್ತದೋ ದೇವರೇ ಬಲ್ಲಾ.

ಈ ಡಿವಿಜನಿಗೆ ಸೇರಿದ ಪಣತ್ತಡಿ ಗ್ರಾಮದ ಕಳ್ಳರ ಎಂಬ ಮೂಡು ದಿಕ್ಕಿನಲ್ಲಿ ಇತ್ತಲಾಗೆ ಹೊಸ್ತಾಗಿ ಒಂದು ಪೋಲಿಸ ಸ್ಟೇಶನ್ ತೆರಿಯೋಣಾಗಿಯದೆ. ಇನ್ನು ಸದ್ಯಕ್ಕೆ ಬೇಗನೆ ಅಲ್ಲಿ ಒಂದು ಪೋಸ್ಟಾಫೀಸು ತೆರಿಯೋಣಾಗುವದು ಸಹಾ ಅತ್ಯಗತ್ಯ.

ನಮ್ಮ ಊರಲ್ಲಿ ಈ ಮೊದಲು ಇದ್ದ ಮಿಶ್ಯನ್ ಲವರ್ ಸೆಕೆಂಡರಿ ಶಾಲೆಯಲ್ಲಿ ಕಲಿತ ಪ್ರವೀಣರಾದರೊ ಈಗಲೂ ಅನೇಕ ಕಡೆಗಳಲ್ಲಿ ನಾನಾ ಡಿಪಾರ್ಟಮೆಂಟಿನಲ್ಲಿ ಉದ್ಯೋಗ ನಡಿಸುತ್ತಿದ್ದಾರೆ. ಅನಂತರ ಇಲ್ಲಿಯ ಸೆಕೆಂಡರಿ ಶಾಲೆಯನ್ನು ಕಾಸರಗೋಡಿಗೆ ವೈದನಂತರ ಇಲ್ಲಿಯ ಶಾಲೆಯನ್ನು ಎಲಿಮೆಂಟರಿಯಾಗಿ ಮಿಶ್ಯನ ಕಡೆಯಿಂದ ಮೊದಲಿನ ಸ್ಥಿತಿಯಲ್ಲಿಯೇ ನಡಿಸಿಬರುತ್ತಿದ್ದರು. ಎಲಿಮೆಂಟರಿ ಶಾಲೆಯಿಂದ ಬಡ ಮಕ್ಕಳಿಗೆ ಇದ್ದ ಪ್ರಯೋಜನ ನಾವು ಪ್ರತ್ಯೇಕವಾಗಿ ವಿವರಿಸ ಅಗತ್ಯವಿರುವದಿಲ್ಲವಷ್ಟೆ. ಆದರೆ ಈ ಶಾಲೆಗೆ ಮುಂಚೆ ಇದ್ದ ಯೋಗ್ಯರಾದ ಉಪಾಧ್ಯಾಯರನ್ನು ಇಲ್ಲಿಂದ ತೆಗೆದು ಇತ್ತಲಾಗೆ ಹೊಸತಾಗಿ ಬಂದ ಉಪಾಧ್ಯಾಯರು ಸಾಧ್ಯವಿರ ವ ಮಟ್ಟಿಗೆ ಪ್ರಯತ್ನವಿಟ್ಟು ಶಾಲೆಯ ಸ್ಥಿತಿ ಉನ್ನತ ಪದವಿಗೆ ತರುವರೆ ಕುತೂಹಲಪಡುವದರ ಬದಲಿಗೆ ಶಾಲೆಯು ವಿದ್ಯೆಯನ್ನು ದಿನಂಪ್ರತಿ ಕ್ಷಯಿಸುತ್ತಾ ಬರುತ್ತಲಿದ್ದಾರೆ. ಬರುವಂಥಾ ದುರವಸ್ಥೆ ಹೋಗಲಾಡಿಸುವ ವಿಷಯ ಮಾತನ್ನಾಡಿದರೆ ಬಹಳವಾಗಿ ರೇಗಿ ಮನಸಿದ್ದರೆ ಮಕ್ಕಳನ್ನು ಶಾಲೆಗೆ ಕಳುಹಿಸಿರಿ ಎಂತ ಉಢಾಪೆ ಮಾತುಗಳು ಕೇಳಬೇಕಾಗಿಯದೆ. ಶಾಲೆಯ ಮುಖ್ಯ ಉಪಾಧ್ಯಾಯರು ಯೋಗ್ಯರಾಗಿ ಸಾಧುವಾದರೂ ಸಹಾಯಕ ಉಪಾಧ್ಯಾಯರು ಅವರಕ್ಕಿಂತ ವಯಸ್ಸಿನಲ್ಲಿ ಹಿರೇಯವರಾದರೆ ಮುಖ್ಯ ಉಪಾಧ್ಯಾಯರು ಮಾಡುವದೇನು? ಆದ್ದರಿಂದ ಈಗಿನ ಮಿಶ್ಯನ್ ಶಾಲಾ ಮೆನೇಜರರು ಈ ವಿಶಯದಲ್ಲಿ ತಕ್ಕ ನಿಗಾಕೊಟ್ಟು ಈ ಕುಂದುಗಳನ್ನು ಹೋಗಲಾಡಿಸಿ ಊರ ನಿವಾಸಿಕರ ಬಡ ಮಕ್ಕಳಿಗೆ ಯೋಗ್ಯರೀತಿಯಲ್ಲಿ ಸಾಹಸಪಟ್ಟು ವಿದ್ಯೆ ಕಲಿಸುವ ಉಪಾಧ್ಯಾಯರನ್ನು ಚುನಾಯಿಸಿ ನೇಮಿಸಬೇಕಾಗಿ ನಾವು ಹಾರೈಸುವೆವು. ಶಾಲಾ ಮೆನೇಜರರ ಈ ಉಪಕಾರಾರ್ಥಕ್ಕೆ ಶಾಲೆಯಲ್ಲಿ ಕಲಿಯುವ ಬಡ ವಿದ್ಯಾರ್ಥಿಯರಾದ ನಾವು ಎಂದೆಂದಿಗೂ ಕೃತಜ್ಞತೆಯವರಾಗುವೆವು.

ಬೈಂದೂರು:—ಇಲ್ಲಿಯ ಸ್ಥಳೀಯ ನಿವಾಸಿಗಳಲ್ಲಿ ಒಬ್ಬ "ಬಂಕೇಶ್ವರ ರಾಮಭಟ್ಟ" ಎಂಬವನು ಸಂಶಯಾಸ್ಪದವಾದ ನಡತೆಯವನಿದ್ದು ಕಾರಣಾಂತರದಿಂದ ಈಗ ೧೦-೧೨ ವರ್ಷಗಳ ಮೊದಲು ದೇಶಾಂತರಕ್ಕೆ ಹೋದವನು ಇತ್ತಲಾಗಿ ೪-೫ ತಿಂಗಳ ಮುಂಚೆ "ಜೀವನಾಯಕಸ್ವಾನಿ" ಎಂಬ ಯುವತಿಯನ್ನು ಕರಕೊಂಡು ವೇಷಭೂಷಣಾಭರಣಗಳ ಅತಿರೇಕ ಶೋಕಿನಿಂದ ಆಗರ್ಭ ಶ್ರೀಮಂತರಿಗೂ ದುಸಾಧ್ಯವಾದ ರೀತಿಯ ದುಂದುಗಾರಿಕೆಯ ದರ್ಬಾರಿನಿಂದ—ರೂಪಾಯಿ-ಎಂದರೆ "ಚಿಕ್ಕಾಸಿಗಿಂತಲೂ" ಕಡೆಯಾಗಿ ವ್ಯಯಮಾಡುತ್ತಾ ಅತೀ ವೈಭವದಿಂದಲ್ಲಿನವರ ಮನಸ್ಸು ಚಕಿತವಾಗುವಂತೆ ಮೆರೆದಾಡುತ್ತಾ ಸಹಸ್ರಾರು ರೂಪಾಯಿಗಳನ್ನು ಹಣ ಬಡ್ಡಿಗೆ ಕೊಡುತ್ತಲೂ, ಸರ್ಕಸ್, ನಾಟಕ ಮೊದಲಾದವುಗಳಲ್ಲಿ ನೂರಾರು ರೂಪಾಯಿಗಳನ್ನು ತೃಣದಂತೆ ಖರ್ಚು ಮಾಡುತ್ತಲೂ ಇರತೊಡಗಿದ್ದರಿಂದ ಮತ್ತು ಈ ಹಣವು ಸಂಗ್ರಹವಾದ ರೀತಿಯನ್ನು ವಿಚಾರಿಸಿದವರಿಗೆ ಒಬ್ಬೊಬ್ಬನ ಕೂಡೆ ಒಂದೊಂದು ವಿಧವಾಗಿ ಹೇಳ ತೊಡಗಿದ್ದರಿಂದ ಜನರಲ್ಲಿ ಸ್ವಲ್ಪ ಅನುಮಾನವಾಗ ಹತ್ತಿತು. ಇವರ ಟ್ರಂಕಿನಲ್ಲಿದ್ದು ಇತ್ತಲಾಗಿ ಹೊರಬಿದ್ದ ಒಂದು ಮುತ್ತಿನ ಕಂಠಿಯು ಸಾಮಾನ್ಯ ೨೦,೦೦೦ ರೂಪಾಯಿ ಬೆಲೆ ಬಾಳತಕ್ಕದ್ದಾಗಿತ್ತಂತೆ. ಇದಲ್ಲದೆ ಪವನುಗಳೂ ಕರೆನ್ಸಿ ನೋಟುಗಳೂ ಹೇರಳ ಸಂಗ್ರಹದಲ್ಲಿದ್ದವಂತೆ. ಮೊದಲೇ ನಡತೆಯಲ್ಲಿ ಸಂಶಯಾಸ್ಪದ ಮನುಷ್ಯನಿದ್ದು ವಿಶೇಷ ದುಂದುಗಾರಿಕೆಯಲ್ಲಿ ಹಣವನ್ನು ವ್ಯಯಮಾಡುತ್ತಾ ಬರುವ ಇವನ ವಿಷಯ ಪೋಲಿಸರಿಗೆ ಅನುಮಾನ ಹುಟ್ಟಿ ನಮ್ಮ ಕುಂದಾಪುರ ತಾಲೂಕಿನ ಸರ್ಕಲ್ ಇನ್ಸ್‌ಪೆಕ್ಟರಾದ ಕೆ ಲಕ್ಷ್ಮಣರಾವರು ಅತ್ಯಂತ ಚತುರತೆಯಿಂದಲೂ, ಸಾಹಸದಿಂದಲೂ ತಾ ೮-೨-೧೫ರಲ್ಲಿ ಇವನನ್ನೂ ಇವನಲ್ಲಿದ್ದ ಮುತ್ತಿನ ಕಂಠಿ ಮುಂತಾದ ನಗನಾಣ್ಯ ಮತ್ತು 12 ತೊಲೆ ಅಫೀಮು ಸಹಿತ ಜಪ್ತಿಯಿಂದ ದಸ್ತಗಿರಿ ಮಾಡಿ ರಿಮಾಂಡಿನಲ್ಲಿಟ್ಟಿರುವರು. ಕೈದಿಯು ಸದರಿ ನಗನಾಣ್ಯಗಳನ್ನು ನೇಪಾಳದಲ್ಲೊಬ್ಬ ಸ್ತ್ರೀ ತನಗೆ ಉಚಿತವಾಗಿ ಕೊಟ್ಟು ಮೃತಿ ಹೊಂದಿದಳೆಂಬ ಹೇಳಿಕೆ ಕೊಟ್ಟದ್ದರಿಂದ ಕೂಡಲೇ ಅದರ ಪತ್ತೆಯ ಬಗ್ಗೆ ನೇಪಾಳ ಬನಾರಸು ಕಡೆಗೆ ಟೆಲಿಗ್ರಾಮ್ ಬಿಟ್ಟಲ್ಲಿ ನೇಪಾಳ ಮತ್ತು ಕಾಶಿಯಿಂದ ತಲ್ಪಿದ ಟೆಲಿಗ್ರಾಮು ಅಭಿಪ್ರಾಯ ಈ ಪ್ರಕಾರ ಇರುತ್ತದಂತೆ. "ಬಂಕೇಶ್ವರ ರಾಮರಾವ್ ಇಲ್ಲವೆ ಬಿ. ಆರ್ ರಾವ್" ಎಂಬವನೊಬ್ಬನು ನೇಪಾಳ ಮಹಾರಾಜರ ಪ್ರೈವೇಟ್ ಸಿಕ್ರಿಟರಿ ಆಫೀಸ್ ಕ್ಲಾರ್ಕನಾಗಿದ್ದು "ನರೇಂದ್ರನಾಥವೀರ ವಿಕ್ರಮಶಹಾಬಹದ್ದೂರ್" ಎಂಬವರ (ಇವರು ನೇಪಾಳರಾಜರ ತಮ್ಮನಂತೆ) ಮಗಳ ಬಾಬ್ತು ಸುಮಾರು ೪೦ ಸಾವಿರ ರೂಪಾಯಿ ಕ್ರಯಬಾಳುವ ನಗನಾಣ್ಯಗಳನ್ನು ಕಳವು ಮಾಡಿಕೊಂಡು ಹೋದ್ದಾಗಿಯೂ ಮಾಲು ಸಹಿತ ಕೈದಿಯನ್ನು ಅಲ್ಲಿಗೆ ಕಳತರಬೇಕಾಗಿಯೂ" ಇದೆ—ವಸ್ತುಸ್ಥಿತಿಯನ್ನು ಯೋಚಿಸಿದರೆ —ಇಂಥಾ ಭಾರೀ ಕಳವು ಪತ್ತೆಯಾದುದು ನಮ್ಮ ಪಟುವಿಚಾರಶೀಲರಾದ ಸರ್ಕಲ್ ಇನಸ್ಪೆಕ್ಟರವರ ಕಾರ್ಯದಕ್ಷತೆಯಿಂದಲ್ಲದೆ ಅನ್ಯಥಾ ಅಲ್ಲ. ಇದರಿಂದ ನಮ್ಮ ಸರ್ಕಲ್ ಇನ್ಸ್‌ಪೆಕ್ಟರಿಗೆ ಭಾರೀ ಸನ್ಮಾನವೂ ಯಶಸ್ಸೂ ಲಭ್ಯವಾಗುವಲ್ಲಿ ಅನುಮಾನವಿಲ್ಲ.

ಪೊಳಲಿ:—ಇಲ್ಲಿ ಇದೇ ಬರುವ ಮಾರ್ಚಿ ತಾ. ೨೪ಕ್ಕೆ ಪೊಳಲಿ ಶ್ರೀ ರಾಜರಾಜೇಶ್ವರಿ ದುರ್ಗಾಪರಮೇಶ್ವರೀ ದೇವಸ್ಥಾನದ ಕಾಲಾವಧಿ ಧ್ವಜಾರೋಹಣೋತ್ಸವಾದದ್ದರಿಂದ ಆ ದಿವಸ ಅನೇಕ ಜನಸಮೂಹ ಕೂಡುವ ಕಾರಣ ಈ ವರ್ಷ ಊರ ಕಳ್ಳರು ಬಹಳ ಜಾಸ್ತಿ ಇರುವದರಿಂದಲೂ ದಯಾಳು ಸರಕಾರದವರು ಆ ದಿವಸಕ್ಕೆ ಸರಿಯಾದ ಬಂದೋಬಸ್ತು ಇಡುವರೆಂದು ನಂಬಿರುತ್ತೇವೆ.

ಇಲ್ಲಿ ಕಳೆದ ನವಂಬರ ೧ನೇ ತಾರೀಕಿನಲ್ಲಿ ಖಾಸಗಿಯಿಂದ ತೆರೆದ ಪೋಸ್ಟಾಫೀಸು ಯಾವ ತೊಂದರೆಯೂ ಕೂಡಾ ಇಲ್ಲದೆ ದಿವಸಕ್ಕೆ ಸರಾಸರಿ ೧೨ಕ್ಕೆ ಕಡಿಮೆ ಇಲ್ಲದಷ್ಟು ಕಾಗದಗಳು ಹೋಗುತ್ತಾ ಬರುತ್ತಾ ಇರುವದರಿಂದ ಮೇಲಾಫೀಸರರು ತನಿಖೆಯಿಂದ ಪೊಳಲಿ ಪೋಸ್ಟಾಫೀಸನ್ನು ಕಾಯಂ ಮಾಡುವರಾಗಿ ನಂಬಿರುತ್ತೇವೆ.

ಇಲ್ಲಿ ಅಡ್ಡೂರು ಎಂಬಲ್ಲಿ ಕೆಲವರು ಕೆಲವುದಿವಸಗಳಿಂದ ಬಿಡದೆ ಜುಗಾರಿ ಆಡುತ್ತಿರುವರಂತೆ. ಇಲ್ಲಿ ರೂಪಾಯಿ ೧ಕ್ಕೆ ದಿವಸಕ್ಕೆ ೨ ಆಣೆ ಬಡ್ಡಿಯಲ್ಲ ಹಣ ಪಡಕೊಳ್ಳುತ್ತಾರೆ. ಈ ತರದಲ್ಲಿ ಬಡ್ಡಿ ಕೊಡುವುದು ಕೂಡಾ ಜುಗಾರಿಖೋರರಿಗೆ ಸಂತೋಷವೇ ಇರುವದು.

ಬಂಟವಾಳ:— ಮಿಸ್ ಹಾರಾಯವರ ಕುಸ್ತಿ ಆಟಗಳು ಮೊನ್ನೆಗೆ ಮುಗಿದುವು. ಕೊನೆಯ ದಿನ ಇಲ್ಲಿಯ ಯೂನಿಯನ್ ಕ್ಲಬ್ಬಿನ ಯುವಕರ ಕಡೆಯಿಂದ ಒಂದು ಚಿನ್ನದ ಪದಕವು ಆಕೆಗೆ, ಸರ್ಕಲ್ ಇನ್ಸಪೆಕ್ಟರರವರ ಮೂಲಕ, ಬಹುಮಾನವಾಗಿ ಕೊಡಲ್ಪಟ್ಟಿತು. ಅದನ್ನು ಸ್ವೀಕರಿಸಿ ಇನ್ನು ಮುಂದಕ್ಕೂ ಇಲ್ಲಿಗೆ ಬರುವ ಆಟವೇ ಮೊದಲಾದ ತಮಾಷೆಗಳನ್ನು ಪ್ರದರ್ಶಿಸುವ ಮಂಡಳಿಗಳಿಗೆ ಇಂತಹ ಪ್ರೋತ್ಸಾಹವನ್ನು ಕೊಡುತ್ತಿರಬೇಕೆಂದು ಸೂಚಿಸಿ ಮಿಸ್ ಹಾರಾಯವರು ಭಾಷಣಮಾಡಿ, ಎಂದಿಗೂ ಅದು ತನ್ನ ಹೃದಯವನ್ನಲಂಕರಿಸುವದೆಂದು ಬಹಳ ಇಷ್ಟು ದಣವಾದ ಹೇಳಿದರು.

ತೂಗುಸಂಕದ ಅಡಿಯಲ್ಲಿ ಹಾಕಿದ್ದ ಕೊಂಕ್ರೀಟಿನ ಕಂಭಗಳು ನೀರಿನ ಮೇಲೆ ತಲೆದೋರಿವೆ. ಇನ್ನು ನಮ್ಮ ತೂಗುಸಂಕವು ಲಾಗಹಾಕುವುದಾದರೂ ಬೆದರಿಕೆಯಿಲ್ಲ. ಆದರೆ, ಹೊಸ ಸಂಕವು ಹಾಕಲ್ಪಡುವ ಮೊದಲು ಇನ್ನೆಷ್ಟು ಕಾಲವಿದೆಯೋ! ಮೇರು ತೊಲೆಗಳು ತುಂಡಾಗಿ ತೂಗು ಸಂಕದ ಒಂದು ಪಾರ್ಶ್ವವನ್ನೇ ಆದರಿಸಿ, ನೂರಾರು ಮಕ್ಕಳೂ, ತೋಟಗಾರರೂ, ಕೂಲಿಯವರೂ, ಅನುನಿತ್ಯವೂ ಹೋಗುತ್ತಿರುವಾಗ, ಸಂಕವು ಸಂಕೋಲೆಗಳನ್ನೊಡೆದು ಜಾರಿದರೆ ಮತ್ತಾವಗತಿಯೂ ಇಲ್ಲವೆಂದು ಇಲ್ಲಿನ ಪ್ರಜೆಗಳು ದೊಂಟ್ಟು ಒಂದು ವ ನವಿಯ ನ್ನು ಸರಕಾರಕ್ಕೆ ಬರೆದುಕೊಂಡಿರುವರು. ಮನವಿಯ ತನಖೆಯನ್ನು ದೂರವಿಟ್ಟು ಮಾಡುವುದೊಳ್ಳೆಯದು. ಸಂಕದ ತನಖೆಯು ಸಂಕದ ಮೇಲೆಯೇ ನಡೆಸುತ್ತಿರುವಾಗ ಸಂಕವು ಮುರಿದರೆ ಮತ್ತೊಂದು ತನಖೆಗೆ ಅವಕಾಶಕೊಟ್ಟಂತಾಗುವುದೆಂಬ ಬೆದರಿಕೆಯನ್ನು ಈ ಮೂಲಕ ಸೂಚಿಸಿರುವೆನು.

ಬ್ರಹ್ಮಶ್ರೀ ನರಹರಿಶಾಸ್ತ್ರಿಗಳವರ ಎರಡು ಭಾಷಣಗಳು ಟೆಂಪಲ್ ಸೆಕೆಂಡರಿ ಶಾಲೆಯಲ್ಲಿ ನಡೆದುವು. ಮೊದಲು, ಬ್ರಹ್ಮಜ್ಞಾನದಿಂದ ಹಿಂದೂ ಮತಕ್ಕಾಗುವ ಉಪಕಾರ ಆ ಮೇಲೆ—'ಅಭಿನವ ಅವತಾರ' ಇದಲ್ಲದೆ ಕುಲೀನ ಸ್ತ್ರೀಯರಿಗೂ ಒಂದು ಉಪನ್ಯಾಸವು ಬೋಧಿಸಲ್ಪಟ್ಟಿದ್ದಿತು. ಇಂತಹ ಪ್ರಸಿದ್ಧ ಉಪನ್ಯಾಸಕರಿಗೂ ನಮ್ಮಲ್ಲಿ ಕೇಳಲು ಬಂದ ಜನರ ಕಡಮೆಯಾದರೂ, ಕೇಳಿದವರಿಗೆ ಹೆಚ್ಚಿನ ಉಪಕಾರವಿದ್ದಿತು. ಅವರು ಇಲ್ಲಿಂದ ಆ ಮೇಲೆ ಕಾರ್ಕಳಕ್ಕೆ ನಡೆದರು.

ಈ ಸಾರಿಯ ರಥೋತ್ಸವವು ಆನಂದಮಯ. ಯಾವ ಗಲಾಟೆಯೂ ಇಲ್ಲದೆ, ಎಲ್ಲವೂ ಕ್ಲಪ್ತಕಾಲದಲ್ಲಿ ಚೆನ್ನಾಗಿ ಸನ್ನಾಹಗೊಂಡಿದ್ದು ಕಳೆದೆರಡು ವರ್ಷಗಳಿಗಿಂತಲೂ ಮೀರಿದ ಜನ ಸಮುದಾಯಕ್ಕೂ ತೃಪ್ತಿಯುಂಟಾಯಿತು. ಕಡಮೆ ಖರ್ಚಿನಿಂದ ಹೆಚ್ಚಿನ ವಿನಿಯೋಗಗಳನ್ನು ತೃಪ್ತಿಕರವಾಗುವಂತೆ ಯಥಾ ಕಾಲದಲ್ಲಿ ನಡೆಸಿದ ಆಡಳಿತವು ಯೋಗ್ಯವೆಂದು ಪುನಃ ಬರೆಯಬೇಕಾಗಿಲ್ಲ.

ಮಂಗಳೂರು

ಇಲ್ಲಿಯ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜರಾಗಿರುವ ಮಾ। ಇ ಎಲ್ ಆರ್ ಥೋರ್ನಟನ್ ಐ ಸಿ ಎಸ್ ದೊರೆಗಳವರು ರಜೆಯ ಮೇಲೆ ಸೀಮೆಗೆ ತೆರಳ ವದರಿಂದ ಮಾ। ಬಿ ಸಿ ಸ್ಮಿತ್ ಐ ಸಿ ಎಸ್‌ರವರು ಇಲ್ಲಿಯ ಆಕ್ಟಿಂಗ್ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ಸ್ ಜಡ್ಜರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮಲ್ಪೆಗೆ ಹೋಗುತ್ತೇನೆಂದು ಪೋಲಿಸಿನವರಿಗೆ ತಿಳಿಸಿ ಮಂಗಳೂರಲ್ಲೇ ಇದ್ದು ಕಳವು ಇತ್ಯಾದಿಗಳನ್ನು ಮಾಡುತ್ತಿದ್ದ ಕೇಡಿ ಮುಂಡಪ್ಪ ಕೊಟ್ಯಾರಿಯು ಇದೇ ಕಳೆದ ತಾ. ೨೭ರಲ್ಲು ಕೊಡಿಯಾಲಬೈಲಿನಲ್ಲಿ ಕಳವು ಮಾಡುವ ಉದ್ದೇಶದಿಂದ ಪೋಲಿಸಿನವರು ಅಡಗಿ ಕೂತಿದ್ದವನನ್ನು ಡೆಪ್ಯುಟಿ ಕಲೆಕ್ಟರರಲ್ಲಿ ವಿಚಾರಣೆ ಬಗ್ಗೆ ಕಳುಹಿಸಿಕೊಟ್ಟಿದ್ದರು. ಡೆಪ್ಯುಟಿ ಕಲೆಕ್ಟರರವರು ಇವನ ವಿಚಾರಣೆ ನಡಿಸಿ ಇದೇ ತಾ ೮ರಲ್ಲು ಕೇಡಿ ಮುಂಡಪ್ಪ ಕೊಟ್ಯಾರಿಯನ್ನು ಖುಲಾಸು ಪಡಿಸಿರುವರೆಂತ ಕೇಳುತ್ತೇವೆ.

ಇದೇ ತಾ ೬ರಲ್ಲು ರಾ। ಪುರುಶೋತ್ತಮಶೆಟ್ಟರ ಭಂಡಸಾಲೆಯಿಂದ ತುಕ್ರ ಎಂಬ ಕೂಲಿಯವನು ಸಾಬೂನಿನ ಪೆಟ್ಟಿಗೆಗಳನ್ನು ಕದ್ದುಕೊಂಡಿರುತ್ತಾನಾಗಿ ಪೋಲೀಸಿನವರಿಂದ ಕೈದು ಮಾಡಲ್ಪಟ್ಟಿರುವನು.

ಇದೇ ತಾ ೫ರಲ್ಲು ಕೊಡಿಯಾಲಬೈಲಿನಲ್ಲಿ ಒಬ್ಬ ಬೆಲ್ಚಾಡನ ಮನೆಯಲ್ಲಿ ಇಟ್ಟಿದ್ದ ಅಂಗಿ ಇತ್ಯಾದಿಗಳು ಕಳವಾಗಿರುವವು.

೧೯೧೨ನೇ ಇಸವಿಯಲ್ಲಿ ಇಲ್ಲಿಯ ಸಿಂಗರ್ ಮೆನುಫೇಕ್ಚರಿಂಗ್ ಕಂಪೆನಿಯಿಂದ ಇಂತ್ರುವಾಸು ಎಂಬವನು ಒಂದು ಹೊಲಿಯುವ ಯಂತ್ರವನ್ನು ತಿಂಗಳು ಪ್ರಕಾರ ಹಣ ಸಲಾಯಿಸುವ ಶರ್ತದ ಮೇಲೆ ಕೊಂಡುಕೊಂಡು ನಂತರ ಈ ಶರ್ತದ ಪ್ರಕಾರ ನಡೆಯದೆ ಯಂತ್ರ ಸಹಿತ ಪರಾರಿಯಾಗಿದ್ದನು. ಕಂಪೆನಿಯವರು ಈ ವಿಷಯ ಫಿರ್ಯಾದು ದಾಖಲು ಮಾಡಿದ್ದಲ್ಲಿ ಇವನ ಪತ್ತೆಯೇ ದೊರಕಲಿಲ್ಲ. ಈಚೆಗೆ ಇವನು ಕಾರ್ಕಳ ತಾಲೂಕಿಗೆ ಸೇರಿದ ರಂಜಾಳ ಗ್ರಾಮದಲ್ಲಿದ್ದಾನೆಂದು ತಿಳಿದು ಬಂದದರಿಂದ ಸಿಂಗರ್ ಕಂಪೆನಿಯ ಕೆನ್ವಾಸರ್ ರಾ। ಬಿ. ಸೀನಪ್ಪ ಎಂಬವರು ಮೂಡಬಿದ್ರೆ ಹೆಡ್‌ಕನ್‌ಸ್ಟೇಬಲ್ ಕೆ. ಎಮ್. ಸೋಮಶೇಖರ ಸಹಾಯದಿಂದ ಅವನನ್ನು ಹಿಡಿದು ವಿಚಾರಣೆಗೆ ಗುರಿಮಾಡಿಸಿದ್ದಲ್ಲಿ ಮೇಜಿಸ್ಟ್ರೇಟರು ಅಪಾಧಿತನಿಗೆ ೩ ತಿಂಗಳ ಕಠಿಣ ಸಜಾ ವಿಧಿಸಿದರು.

ಕಳೆದ ಶನಿವಾರ ಇಲ್ಲಿಯ ಬಂದರದಲ್ಲಿ ಒಂದು ದೋಣಿಯಲ್ಲಿ ಕಳವು ಬಿದುರುಗಳನ್ನು ಕೊಂಡು ಹೋಗುತ್ತಿದ್ದ ಒಬ್ಬ ದೋಣಿಗಾರನನ್ನು ಪೋಲಿಸಿನವರು ಹಿಡಿಯ ಪ್ರಯತ್ನಿಸಲು ದೋಣಿಗಾರನು ನದಿಯಲ್ಲಿ ದೋಣಿಯನ್ನು ಬಿಟ್ಟು ಪರಾರಿಯಾಗಿರುವನು. ಪೋಲಿಸಿನವರು ದೋಣಿ ಮತ್ತು ಬಿದುರುಗಳನ್ನು ಕುದ್ರೋಳಿ ಸಮೀಪ ಹಿಡಿದು ದೋಣಿಯನ್ನೂ, ಬಿದುರುಗಳನ್ನೂ ಟೌನುಮೇಜಿಸ್ಟ್ರೇಟ್ ಕೋರ್ಟಿನಲ್ಲಿ ಹಾಜರು ಪಡಿಸಿರುವರು. ದೋಣಿಗಾರನ ಪತ್ತೆಯೂ ಗಲಿಲ್ಲ ಎಂಬದಾಗಿ ಕೇಳುತ್ತೇವೆ.

ದಕ್ಷಿಣ ಇಂಡಿಯಾ ರೈಲ್ವೆ ಲೈನನ್ನು ಮಂಗಳೂರಿಂದ ಉಡ್ಪಿ ವರೆಗೆ ಕೊಂಡುಹೋಗುವ ವಿಷಯವು ಮದ್ರಾಸ್ ಸರಕಾರದ ಆಲೋಚನೆಯಲ್ಲಿದೆಂತ ತಿಳಿದು ಬರುತ್ತದೆ.

ಇಲ್ಲಿಯ ಡಿಸ್ಟ್ರಿಕ್ಟ್ ಪೋಲಿಸ್ ಸುಪರಿಂಟೆಂಡೆಂಟರಾದ ರಾ। ಆರ್ಣೆಸುಬ್ಬರಾವರವರು ೬ ವಾರಗಳ ಪ್ರಿವಿಲೆಜ್ ರಜೆ ಪಡಕೊಂಡಿರುವರು.

ಕಾಸರಗೋಡು ತಹಸೀಲದಾರರಾಗಿರುವ ಮ ರಾ। ಆ ದೇವಪ್ಪ ಪೂಂಜರವರು ಇದೇ ತಾ. ೩ರಿಂದ ವೈದ್ಯ ಸರ್ಟಿಫಿಕೇಟಿನ ಮೇಲೆ ೨ ತಿಂಗಳ ರಜೆ ಪಡಕೊಂಡಿರುವರು.

ಇದೇ ತಾ ೨೯ರಲ್ಲು ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಜರಗುವದು.

ಇದೇ ತಾ ೭ರಲ್ಲು 'ಮನೋಹರವಿಲಾಸವಲ್ಲಿ' ದ್ರಾವಿಡ ಬ್ರಾಹ್ಮಣರ ಪ್ರತಿನಿಧಿಗಳ ಸಭೆಕೂಡಿತು. ಗೋಖಲೆಯವರ ಮರಣದಿಂದುಂಟಾದ ವಿಶಾದವನ್ನು ತೋರ್ಪಡಿಸ ವದೇ ಈ ಸಭೆಯ ಮುಖ್ಯ ಉದ್ದೇಶವಾಗಿತ್ತು. ಮಾ। ರಾ। ಶೇಷಭಟ್ಟಭಿಂಡೆ ಬಿ ಎ ಬಿ ಎಲ್ ರವರು ಈ ಸಭೆಯ ಲ್ಲಿ ಅಧ್ಯಕ್ಷರಾಗಿ ಆರಿಸಲ್ಪಟ್ಟು ಮಾನ್ಯ ಗೋಖಲೆಯವರ ಗುಣಶ್ಲಾಘನೆಯನ್ನು ಮಾಡಿ, ಅವರ ಮರಣದಿಂದ ದೇಶಕುಂಟಾದ ನಷ್ಟವನ್ನು ಸೂಚಿಸಿದರು. ಕಡೆಗೆ ಗೋಖಲೆಯರ ಮರಣದಿಂದುಂಟಾದ ಸಹಸಂತಾಪವನ್ನು ಸೂಚಿಸುವ ತಂತಿಯನ್ನು ಅವರ ಕುಟುಂಬದವರಿಗೆ "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ" ಮೂಲಕ ಕಳುಹಿಸುವದೆಂಬ ನಿರ್ಣಯವಾಯಿತು.

ಹಂಪನಕಟ್ಟೆಯ ಅಬ್ರೋಹೋರವರ ಶಾಪಿನಿಂದ ತಾ ೧ ರಲ್ಲು ಜೇಮ್ಸ್ ಫೆರ್ನಾಂಡಿಸ್ ಎಂಬವನು ಸುಮಾರು ೧೮ ರೂ ಪಾಯಿಕ್ಕೆಯಬಾಳುವ ಸ್ಟೇಶನರಿ ಸಾಮಾನುಗಳನ್ನು ಕದ್ದುಕೊಂಡಿರುವದರಿಂದ ಪೋಲಿಸಿನವರು ಅವನನ್ನು ಕೈದುಮಾಡಿರುವರು.

ಕಂಕನಾಡಿ ಕೊಸ್ಮವೇಗಸರವರ ಮನೆಯಿಂದ ಆಡುಗಳನ್ನು ಕಳವುಮಾಡಿದ್ದಾಗಿ ಅಪಾದಿಸಲ್ಪಟ್ಟ ಕಸಾಯಿ ಬಾಬುಸಾಹೇಬನಿಗೆ ಟೌನ್ ಮೇಜಿಸ್ಟ್ರೇಟರು ೨ ತಿಂಗಳ ಕಠಿಣ ಸಜಾ ವಿಧಿಸಿರುವರು.

ಇಂಡಿಯನ್ ಲೇಡಿ ಸೆಂಡೋ ಎಂದು ಹೆಸರು ಪಡೆದ ಮಿಸ್ ಕಾರಾಯರವರು ನಾಳೆಯಿಂದ ತನ್ನ ಸಾಹಸ ಕಾರ್ಯಗಳನ್ನು ಪ್ರದರ್ಶಿಸ ಪ್ರಾರಂಭಿಸುವರು.

ಕಳೆದ ವಾರ ಮಂಗಳೂರು ಮುನ್ಸಿಪಾಲಿಟಿಯಲ್ಲಿ ೧ ಪ್ಲೇಗು ಮರಣವಿತ್ತು.

ಕೊಯಮುತ್ತೂರು ಸರ್ಕಲ್ ಪರಸ್ಪರ ಸಹಾಯಕ ಸಂಘದ ಪರಿಷದವು ಬರುವ ತಿಂಗಳ ತಾ ೩-೪ರಲ್ಲು ನಡೆಯುವದೆಂತ ತಿಳಿಸೋಣಾಗಿತ್ತಷ್ಟೆ. ಆದರೆ ಬೇರೆ ಮತದವರಂತೆ ಕ್ರೈಸ್ತರಿಗೂ ಅನುಕೂಲವಾಗುವಂತೆ ಪರಿಷದವನ್ನು ತಾ ೫ ೬ರಲ್ಲು ಮಾಡುವದೆಂತ ನಿರ್ಣಯವಾಗಿರುವದು.

ವಿದ್ಯಾಖಾತೆಯ ಡಿರೆಕ್ಟರರಾದ ಬಹುಮಾನಪಟ್ಟ ಮಾ। ಎಚ್ ಸ್ಟೋನರವರು ರಜೆಯ ಮೇಲೆ ಸೀಮೆಗೆ ತೆರಳುವದರಿಂದ ಇವರ ಬದಲಿಗೆ ಸೈದಾಪೇಟೆ ಟೀಚರ್ಸ್ ಕಾಲೇಜಿಯ ಪ್ರಿನ್ಸಿಪಾಲರಾದ ಮಾ। ಹೆರ್ಬರ್ಟ್ ಸ್ಪೆನ್ಸರ್ ಡಂಕನರವರು ವಿದ್ಯಾಖಾತೆಯ ಡಿರೆಕ್ಟರರಾಗಿಯೂ ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಮಾ। ಸಿ ಡೇವಿಶರವರು ಮಂಗಳೂರು ಮುನ್ಸಿಪಾಲಿಟಿಯ ಕೌನ್ಸಿಲರರಾಗಿ ನೇಮಿಸಲ್ಪಟ್ಟಿರುವರು.

ಇದೇ ತಾ. ೬ನೇ ಶನಿವಾರ ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯಲ್ಲಿ ಸ್ಟೂಡೆಂಟ್ಸ್ ಬ್ರದರ್‌ಹೂಡ್ ಎಂಬ ವಿದ್ಯಾರ್ಥಿಗಳ ಬ್ರಾತೃ-ಸಂಘದ ಸಭೆಯು ಮಾ। ರಾ। ಎ. ಶ್ರೀನಿವಾಸಪೈ ಬಿ. ಎ. ಬಿ.-ಎಲ್‌ರವರ ಅಧ್ಯಕ್ಷತೆಯಲ್ಲಿ ಕೂಡಿ ಬಂದು ಮಾನ್ಯ ಗೋಖಲೆಯವರ ಮರಣದಿಂದುಂಟಾದ ದುಃಖವನ್ನು ಪ್ರದರ್ಶಿಸಿದರು.

ಶಾಲೆಗಳ ಇನ್ಸ್‌ಪೆಕ್ಟೆಸರಾಗಿದ್ದ ಮಿಸ್ ಅರ್ನೋಲ್ಡರವರು ಕೆಲಸದಿಂದ ನಿವೃತರಾಗಿರುವರು.

ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯ ಹಿಂದೆ ಮತ್ತು ಉಭಯ ಪಾರ್ಶ್ವಗಳಲ್ಲಿರುವ ಹಂಪನಕಟ್ಟೆಗೆ ಸೇರಿದ ವಠಾರವು ವಿಶೇಷ ಹೊಲಸಾಗಿರುವಂತೆ ತೋರುತ್ತದೆ. ಶಾಲಾ ಮಕ್ಕಳು ದಿನವೆಲ್ಲಾ ಈ ಪ್ರಾಂತ್ಯದಲ್ಲಿರಬೇಕಾದುದರಿಂದ ಹಂಪನಕಟ್ಟೆಯ ಈ ಗಲೀಜು ಪ್ರಾಂತ್ಯಗಳನ್ನು ಸೆನಿಟರಿ ಆಫೀಸರರು ಸಂದರ್ಶಿಸಿ, ಶುದ್ಧವಾಗಿಡಿಸುವ ಏರ್ಪಾಡು ಮಾಡಬೇಕಾಗಿ ಆ ಕಡೆಯ ಒಬ್ಬ ಬಾತ್ಮಿದಾರರು ವಿಜ್ಞಾಪಿಸಿಕೊಂಡಿರುವರು.

ಮಡಿಕೇರಿಗುಡ್ಡೆ ಪ್ರಾಂತ್ಯದಲ್ಲಿ ಹಿಂದೆ ಮನೆಗಳಿಗೆ ಕಲ್ಲುಗಳನ್ನು ಬಿಸಾಡಿ, ಹಂಚುಗಳನ್ನು ಒಡೆದು ಉಪದ್ರವಿಸುವ ವಾಡಿಕೆಯು ಇತ್ತು. ಆದರೆ ಈ ವಿಷಯವು ಆಗ್ಗಾಗ್ಗೆ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟವಾದುದರಿಂದ ಇಂಥಾ ಪುಂಡಾಟಿಕೆಯು ತುಸ ಕಮ್ಮಿಯಾಗಿತ್ತು. ಆದರೆ ಪುನಃ ಕಳೆದ ವಾರದಿಂದ ಸದರಿ ಪ್ರಾಂತ್ಯದಲ್ಲಿ ವಾಸಿಸುವ ಮಾ। ಇಮ್ಯಾನುವೇಲ್ ದೇವದತ್ತರ ಮತ್ತು ಒಬ್ಬ ಬಡ ಮುದಿ ವಿಧವೆ ಹೆಂಗಸಿನ ಮನೆಗೆ ಪುಂಡಾಟಿಗರು ಕಲ್ಲುಗಳನ್ನು ಬಿಸಾಡಿ ಉಪದ್ರವಿಸುತ್ತಾರೆಂಬ ವಾರ್ತೆಯು ಬಂದಿರುವದು. ಬೀಟಿನ ಪೋಲಿಸರು ಈ ಕಡೆ ಲಕ್ಷ್ಯ ಕೊಡಬೇಕಾಗಿದೆ.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಪೆಟ್ಟಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st March 1915.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ, ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ಸ್ವಾಯಂಭುವ ಮನುವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯ ಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಜನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಮುಖ್ಯವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪನಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಂದಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
[illegible]

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 19ನೇ ಮಾರ್ಚಿ 1915

ಮದ್ರಾಸು ಸಂಸ್ಥಾನದ ಆಯುವ್ಯಯಗಳ ಸ್ಥಿತಿಯು.

ಈ ಸಂಸ್ಥಾನದ ಸರಕಾರದ ಖಜಾನಾ ಮಂತ್ರಿಗಳಾದ ಬಹುಮಾನಪಟ್ಟ ಸರ್ ಎಚ್. ಸ್ಟುವರ್ಟರವರು ಸರಕಾರದ ಆಯು ವ್ಯಯಗಳ ಸ್ಥಿತಿಯನ್ನು ಸೂಚಿಸುವ ಲೆಕ್ಕದ ವೃತ್ತಾಂತವನ್ನು ಈ ತಿಂಗಳ ತಾ. ೧೩ರಲ್ಲಿ ನ್ಯಾಯವಿಧಾಯಕ ಸಭೆಯ ಮುಂದಿಟ್ಟರು. 1914-15ನೇ ವರುಷದ ಒಗ್ಯೆ ಮಾಡಿದ ಆಯ ವ್ಯಯಗಳ ಅಂದಾಜಿನ ಪರಿಣಾಮವೇನು, ಈ ಪರಿಣಾಮವನ್ನು ಅರಿತುಕೊಂಡು 1915 16ನೇ ವರುಷದ ಅಂದಾಜಿನ ಲೆಕ್ಕದ ಪಟ್ಟಿಯನ್ನು ಹೇಗೆ ಸಿದ್ಧಗೊಳಿಸಿರುವರು ಎಂಬ ವಿವರವೆಲ್ಲವೂ ಈ ವೃತ್ತಾಂತದಲ್ಲಿದೆ. ಯೂರೋಪಿಯ ಯುದ್ಧವು ಪ್ರಾಪ್ತವಾದ್ದರಿಂದಲೂ ಆದಾಯವು ಈ ಮೂಲಕ ಕಡಮೆಯಾಗುವವರಿಂದಲೂ ಸರಕಾರದವರು ಖರ್ಚನ್ನು ಸಾಧ್ಯವಾದ ರೀತಿಯಲ್ಲಿ ಮಿತಪಡಿಸಿರುತ್ತಾರೆ. ಜರ್ಮನಿ ಮತ್ತು ಒಸ್ಟ್ರಿಯಾ ದೇಶಗಳೊಡನೆ ವ್ಯಾಪಾರ ವೈವಾಟಗಳು ಅಸಾಧ್ಯವಾಗಿ ಹೋದ್ದರಿಂದಲೂ ಹಡಗಗಳ ಭಾಡಿಗೆ ಏರಿ ಹೋಗಿ ಫ್ರಾನ್ಸಿಗೆ ಈ ಪ್ರಾಂತ್ಯಗಳಿಂದ ಹೋಗತಕ್ಕ ಸಾಮಾಗ್ರಿಗಳು ಮುಂಚಿನಂತೆ ಒಯ್ಯಲು ಸಾಧ್ಯವಲ್ಲದ್ದರಿಂದಲೂ ಅರಳೆ, ನೆಲಕಡಲೆ, ಮತ್ತು ತೆಂಗಿನಕಾಯಿಯ ಕೊಬ್ಬರಿ ಇತ್ಯಾದಿಗಳ ಬೆಲೆಯು ಬಿದ್ದುಹೋಗಿ ವ್ಯಾಪಾರವು ಕೆಟ್ಟುಹೋಗಿದೆ. ದವಸುಗಳನ್ನು ಬೇಕಾದಂತೆ ಕೊಂಡುಕೊಳ್ಳುವವರು ಇಲ್ಲದ್ದರಿಂದ ಇವುಗಳ ಬೆಲೆಯು ತಗ್ಗಿ ವ್ಯವಸಾಯ ವೃತ್ತಿಯುವರಿಗೂ ನಷ್ಟ ಉಂಟಾಗಿದೆ. ಸರಿಯಾದ ಧಾರಣೆಯು ಪ್ರಕೃತ ಸಿಕ್ಕುವದಿಲ್ಲವಾದ್ದರಿಂದ ಕೃಷಿಕರಲ್ಲಿ ಹಲವರು ತಮ್ಮ ಜೀನಸುಗಳನ್ನು ಕ್ರಯವೇರಿದಾಗ ಮಾರಬಹುದೆಂಬ ಕೋರಿಕೆಯಿಂದ ದಾಸ್ತಾನು ಇಟ್ಟಿರುವರು. ಸರಕಾರದವರ ಆದಾಯವು ಈ ಕಾರಣಗಳಿಂದ ಕಡಮೆಯಾಗಿರುವುದು. ಇಷ್ಟೇ ಅಲ್ಲ; ಸರಾಫರು, ವ್ಯಾಪಾರಿಗಳು ತಮ್ಮ ಹಣ ಚಲಾವಣೆಯನ್ನು ಬಹಳ ನಿಕೃಷ್ಟವಾಗಿ ನಡಿಸುತ್ತಿದ್ದಾರೆ. ಇವರು ತಾವು ಸಾಲವಾಗಿ ಕೊಟ್ಟ ಹಣವನ್ನು ಕೂಡಿಸಿಕೊಂಡು ಹೊಸ ಸಾಲಗಳನ್ನು ಸಾಲಾಳವಾಗಿ ಕೊಡರು. ಕೃಷಿಕರಲ್ಲಿ ಈ ಮೊದಲು ಹೇಳಿದ ಕಾರಣಗಳಿಂದ ಹಣದ ತುಟ್ಟಿಯು ಬಹಳವಾಗಿ ಉಂಟಾಗಿದೆ. ಸೇವಿಂಗ್ಸ್ ಬ್ಯಾಂಕುಗಳಲ್ಲಿಯೂ ಬ್ಯಾಂಕುಗಳಲ್ಲಿಯೂ ಠೇವಣಾತಿಯಾಗಿದ್ದೋಣಾದ ಮೊಬಲಗುಗಳು ಹಣದ ಇಂಥಾ ಅಡಚಣೆಯ ನಿವಾರಣಾರ್ಥವಾಗಿ ಹಿಂತೆಗಿಯೋಣಾಗಿರುವವು. ಪ್ರೆಸಿಡೆನ್ಸಿ ಬ್ಯಾಂಕುಗಳೂ ಹಣ ಸಾಲಕೊಟ್ಟು ಈ ಅಡಚಣೆಯನ್ನು ನೀಗಲು ಪ್ರಯತ್ನಿಸುವವು. ಹೇಗೂ ಹಣದ ಅಡಚಣೆಯು ಇರುವುದು. ಭೂಕಂದಾಯವು ಮೊದಲಿನಷ್ಟು ತ್ವರಿತದಲ್ಲಿ ಪ್ರಕೃತ ವಸೂಲಾಗುವುದಿಲ್ಲವೆಂತ ಕೇಳಿಸುವುದರಿಂದ ಭೂಕಂದಾಯದ ಉತ್ಪತ್ತಿಯು ಈ ವರುಷದಲ್ಲಿ ಅಂದಾಜಿನಕ್ಕಿಂತ ೨೩ ಲಕ್ಷಕ್ಕೆ ಕಡಮೆಯಾಗಬಹುದೆಂತ ಬಹುಮಾನಪಟ್ಟ ಸ್ಟುವರ್ಟ್ ದೊರೆಗಳವರು ಅಪ್ಪಣೆ ಕೊಡಿಸಿರುವರು. ಬೆಳೆ ನಷ್ಟವಾಗಿ ಕಂದಾಯ ಮಾಫಿಯ ಮೊಬಲಗು ಈ ೨೩ ಲಕ್ಷ ರೂಪಾಯಿಗಳಲ್ಲಿ ಸೇರಿರುತ್ತದೆ. ಭೂಕಂದಾಯದ ಈ ವರುಷದ ಬಾಕಿಯನ್ನು 1915—16ನೇ ವರುಷದಲ್ಲಿ ಕೂಡಿಸಬಹುದೆಂತ ಸರಕಾರದವರು ನಿರೀಕ್ಷಿಸಿರುತ್ತಾರೆ. ಯುರೋಪಿಯ ಯುದ್ಧದಿಂದ ಈ ಸಂಸ್ಥಾನದ ಉತ್ಪತ್ತಿಯು ಈ ವರುಷದಲ್ಲಿ ಹೇಗೆ ತಗ್ಗಿತೆಂದು ಖಜಾನಾ ಅಧಿಕಾರಿಗಳು ಹೇಳಿದ ಮಾತುಗಳ ಮೇಲಣ ತಾತ್ಪರ್ಯದಿಂದ ಇಂಡಿಯಾ ಸರಕಾರದ ಮಾತ್ರವಲ್ಲ, ಸಂಸ್ಥಾನಿಕ ಸರಕಾರಗಳ ಖಜಾನಾ ಸ್ಥಿತಿಯು ಸಹ ಯುದ್ಧದಿಂದ ಅಲ್ಪಸ್ವಲ್ಪ ಮಾರ್ಪಡಲು ಕಾರಣವಾಯಿತೆಂತ ತಿಳಿಯಬಹುದು. ಒಟ್ಟಿನ ಮೇಲೆ ನಮ್ಮ ಸರಕಾರದವರಿಗೆ 1914—15ನೇ ವರುಷದ ಉತ್ಪತ್ತಿಯ ಅಂದಾಜಿನಲ್ಲಿ ಹೆಚ್ಚುಕಡಿಮೆ ೧೪ ಲಕ್ಷ ರೂಪಾಯಿಗಳು ಕಡಮೆಯಾಗಿವೆ. ಉತ್ಪತ್ತಿಯು ಹೀಗೆ ಕಡಮೆಯಾಗಿ ಹೋದರೂ ಹಲವು ಕಾರಣಗಳಿಂದ ಖರ್ಚನ್ನು ಅಂದಾಜಿನಗಿಂತ ಬಹಳವಾಗಿ ತಗ್ಗಿಸಲಾಗಲಿಲ್ಲ. ಸುಮಾರು ಒಂದೂಮುಕ್ಕಾಲು ಲಕ್ಷ ರೂಪಾಯಿ ಮಾತ್ರ ಖರ್ಚಿನ ಅಂದಾಜು ಮೊಬಲಗಿನಲ್ಲಿ ಕಡಮೆಯಾಗಿದೆ.

ಮುಂದಿನ ಅಂದರೆ ೧೯೧೫—೧೬ನೇ ವರುಷದ ಆಯುವ್ಯಯಗಳ ಅಂದಾಜು ಪಟ್ಟಿಯನ್ನು ಯುದ್ಧವು ಮುಂದರಿಸಿ ನಡೆಯುವುದೆಂಬ ನಿರೀಕ್ಷಣೆಯ ಮೇಲೆ ಸಿದ್ಧಪಡಿಸಿರುವರು. ಸರಕಾರದವರ ಒಟ್ಟಿನ ಉತ್ಪತ್ತಿಯು ಸುಮಾರು 765 ಲಕ್ಷ, ಖರ್ಚು ಸುಮಾರು 780 ಲಕ್ಷ ರೂಪಾಯಿಗಳಾಗಬಹುದೆಂತ ಅಂದಾಜು ಮಾಡಿರುತ್ತಾರೆ. 1914—15ನೇ ವರುಷದಲ್ಲಿ ವಸೂಲಾಗದೆ ಸಿಲುಕಿನಲ್ಲಿ ಉಳಿಯಬಹುದಾದ ಮೊಬಲಗನ್ನು ಕೂಡಿಸಿದರೆ 1915—16ನೇ ವರುಷದ ಭೂಕಂದಾಯ ಉತ್ಪತ್ತಿಯ ಮೂಲಕ ಮುಂದಿನ ವರುಷದಲ್ಲಿ ರೂ. 26½ ಲಕ್ಷ ಹೆಚ್ಚು ಸಿಕ್ಕಬಹುದೆಂದು ಅಂದಾಜು ಮಾಡಿರುವರು. ಇದರಲ್ಲಿ 13¼ ಲಕ್ಷ ಇಂಡಿಯಾ ಸರಕಾರದವರ ಲೆಕ್ಕಕ್ಕೆ ಜಮಾ ಮಾಡಲಾಗಿ ನಮ್ಮ ಸರಕಾರದವರಿಗೆ 13¼ ಲಕ್ಷ ರೂಪಾಯಿಗಳು ದೊರಕುವವು. ಸ್ಟಾಂಪು, ಅಬ್ಕಾರಿ ಇಲಾಖೆಗಳ ಉತ್ಪತ್ತಿಗಳ ಅಂದಾಜು ಚಾಲ್ತಿ ವರುಷದಲ್ಲಿ ಹುಟ್ಟಿಬಂದ ಈ ಬಾಬಿನ ಆದಾಯದ ಮೊಬಲಗುಗಳಿಗಿಂತ ಕಡಮೆಯಾಗಿರುವುದು. ಚಾಲ್ತಿ ವರುಷದಲ್ಲಿ ಇತರ ಎಲ್ಲಾ ಬಾಬುಗಳ ಉತ್ಪತ್ತಿಯು ಕಡಮೆಯಾದರೂ ಆದಾಯ ತೆರಿಗೆಯು ಕಡಮೆಯಾಗಿರದು. ಈ ತೆರಿಗೆಯು 1913—14ನೇ ವರುಷದಲ್ಲಿ ದೊರಕಿದ ಆದಾಯಗಳ ಮೇಲೆ ವಿಧಿಸೋಣಾಗುವದರಿಂದ ಯುದ್ಧದ ಬಾಧೆಯು ಇದಕ್ಕೆ ತಟ್ಟಲಿಲ್ಲ. 1915—16ನೇ ವರುಷದಲ್ಲಿ ಈ ತೆರಿಗೆಯು ಅಂದಾಜನ್ನು ಕಡಮೆ ಮಾಡಿರುತ್ತಾರೆ. 1915—16ನೇ ವರುಷದ ಉತ್ಪತ್ತಿಯನ್ನು ಅನುಸರಿಸಿ ಖರ್ಚನ್ನು ತಗ್ಗಿಸಿರುವರು. ಈಗಿನ ಸಂದರ್ಭದಲ್ಲಿ ಇಂಡಿಯಾ ಸರಕಾರದವರು ತಮ್ಮ ಖಜಾನೆ ಭರ್ತಿಗಾಗಿ ನಮ್ಮ ಸರಕಾರದವರಿಂದ ಸಹಾಯದ್ರವ್ಯವನ್ನು ಕೇಳಿರುವದಿಲ್ಲವಾದರೂ ಇಂಡಿಯಾ ಸರಕಾರದ ಲೆಕ್ಕದಲ್ಲಿರುವ ನಮ್ಮ ಸರಕಾರದ ಸಿಲುಕು ಮೊಬಲಗುಗಳಿಂದ ಈ ಸಂಸ್ಥಾನದ ಖರ್ಚಿನ ಒಗ್ಯೆ ಏನೂ ದೊರಕುವ ಸಂಭವಗಳಿರವು. ಈ ಕಾರಣದಿಂದಲೂ ಉತ್ಪತ್ತಿಯ ಅಂದಾಜು ಕಡಮೆಯಾಗಿರುವುದರಿಂದಲೂ ಖರ್ಚಿನ ಅಂದಾಜಿನಲ್ಲಿ 1915—16ನೇ ವರುಷದಲ್ಲಿ ರೂಪಾಯಿ 52 ಲಕ್ಷವನ್ನು ಕಡಮೆ ಮಾಡಬೇಕಾಗಿದೆ. ಲೋಕಲ್ ಬೋರ್ಡುಗಳಿಗೆ ರಸ್ತೆ, ಸಂಕ ಮೊದಲಾದ ಕಾಮಗಾರಿಗಳಿಗೆ ಕೊಡೋಣಾಗುವ ದ್ರವ್ಯಸಹಾಯವನ್ನು 1915 16ನೇ ವರುಷದಲ್ಲಿ ಬಹಳ ಕಡಮೆ ಮಾಡಿರುವರು. ಈ ಬಾಬಿನಲ್ಲಿಯೇ ಸರಕಾರದವರು ಚಾಲ್ತಿ ವರುಷದಕ್ಕಿಂತ ದ್ರವ್ಯಸಹಾಯವಾಗಿ ಕೊಡೋಣಾಗುವ ಮೊಬಲಗುಗಳಲ್ಲಿ ರೂಪಾಯಿ 44 ಲಕ್ಷವನ್ನು ಕಡಮೆ ಮಾಡಿರುತ್ತಾರೆ. ಲೋಕಲ್ ಬೋರ್ಡುಗಳಿಗೆ ಇತ್ತಲಾಗೆ ಒಂದೆರಡು ವರುಷಗಳಿಂದ ಕೊಡೋಣಾದ ದ್ರವ್ಯಸಹಾಯದ ಮೊಬಲಗುಗಳು ಈ ತನಕ ಪೂರ್ಣವಾಗಿ ಇವುಗಳಿಂದ ವಿನಿಯೋಗಿಸಲ್ಪಡದೆ ಬಾಕಿಯಲ್ಲಿರುವದರಿಂದ 1915—16ನೇ ವರುಷದಲ್ಲಿ ಇವುಗಳಿಗೆ ದ್ರವ್ಯಸಹಾಯವು ಇಲ್ಲದೆ ಹೋದರೂ ವಿಶೇಷ ಅಡಚಣೆಯುಂಟಾಗಲಿಕ್ಕಿಲ್ಲವೆಂತ ಸರ್ ಹೆರೋಲ್ಡ್ ಸ್ಟುವರ್ಟರವರು ತಿಳಿಯ ಹೇಳಿರುತ್ತಾರೆ. ವಿದ್ಯಾಖಾತೆಯಲ್ಲಿ ವರುಷಂಪ್ರತಿ ನಡೆಯುವ ಖರ್ಚಿನಲ್ಲಿ ಕಡಮೆ ಮಾಡಲಿಲ್ಲವಾದರೂ ಅಗಿಂದಾಗ್ಯೆ ಕೊಡೋಣಾಗುವ ದ್ರವ್ಯಸಹಾಯವು 1915—16ನೇ ವರುಷದಲ್ಲಿ ಕಡಮೆಯಾಗುವುದು. ಆಯುವ್ಯಯಗಳ ಲೆಕ್ಕ ವೃತ್ತಾಂತದಲ್ಲಿ ಬೇರೆ ವಿಶೇಷ ಪ್ರಸ್ತಾಪಗಳೇನೂ ಇರವು.

ಗತಿಸಿದ ಮಾನ್ಯ ಗೋಖಲೆಯವರ ಗುಣಾನುವಾದವು.

ನಮ್ಮ ಭರತಮಾತೆಯ ಸೇವೆಯಲ್ಲಿ ನಿರತರಾದ ಗೋಖಲೆಯವರ ನಿಧನ ವಾರ್ತೆಯನ್ನು ಸ್ವದೇಶಾಭಿಮಾನಿಯ ಹಿಂದಿನ ಸಂಚಿಕೆಯಲ್ಲಿ ವಾಚಕರು ಓದಿರಬಹುದು. ನಮ್ಮ ದೇಶಕ್ಕೆ ಪ್ರಾಪ್ತವಾದ ಮಹತ್ತರವಾದ ಈ ದುಃಖವು ಭಾರತೀಯರಲ್ಲೆಲ್ಲಾ ಬಹಳ ಸಂತಾಪವನ್ನುಂಟುಮಾಡಿರುವದು. ಈ ದುಃಖವಾರಿಧಿಯಲ್ಲಿ ಭಾರತೀಯರು ಮಾತ್ರವಲ್ಲ; ಈ ದೇಶದಲ್ಲಿರುವ ಅಂಗ್ಲೊ ಇಂಡಿಯನ್ ಪತ್ರಕರ್ತರು ಸಹ ಸಹಭಾಗಿಗಳಾದುದನ್ನು ಆಲೋಚಿಸಿದರೆ ಆ ಮಹನೀಯರಲ್ಲಿರುವ ವಿಶೇಷತ್ವವು ವ್ಯಕ್ತವಾಗುವದು. ದೇಶೋದ್ಧರಣೆಯ ಕಾರ್ಯದಲ್ಲಿ ಬದ್ಧಕಂಕಣರಾಗಿ ದೇಶಹಿತದಲ್ಲಿ ಅನುರಕ್ತರಾದವರಿಗೆ ಅವಶ್ಯ ಇರುವ ಹಲವು ಸದ್ಗುಣಗಳು ಯಾವ ಅಂತರ್ಗುಣದಿಂದ ಉದಯಿಸುವವೋ ಅಂಥಾ ನಿರ್ಲೋಭ ಅಂತಃಕರಣದಿಂದ ಸಕಾಲದಲ್ಲಿ ದೇಶಕಾರ್ಯಕ್ಕೆ ನೆರವಾಗಿ ಶ್ರಮಪಡುವ ಗೋಖಲೆಯವರ ಅಮೂಲ್ಯವಾದ ಗುಣವು ಶ್ರೇಷ್ಠತಮವಾಗಿರುವುದು. ನಮ್ಮ ದೇಶದಲ್ಲಿ ತೀಕ್ಷ್ಣಶಾಂತಗಳೆಂಬ ರಾಜಕೀಯ ಪಕ್ಷಗಳೆರಡು ಇರುವದಾದರೂ ಈ ಮಹನೀಯರು ಉಭಯ ಪಂಗಡಗಳಿಗೂ [illegible]

ಯಾಕಂದರೆ ಒಂದು ಪಕ್ಷದಲ್ಲಿರುವ ಅವಸರ, ಅತ್ಯಾಗ್ರಹ, ಕಠೋರತೆಗಳೂ ಮತ್ತೊಂದು ಪಕ್ಷದಲ್ಲಿರುವ ಉದಾಸೀನ, ಮತ್ತು ಭೀರುತನವೂ ಈ ಮಹನೀಯರ ಚರಿತ್ರೆಯಲ್ಲಿ ಪೂರ್ಣ ಮಾಯವಾಗಿರುವವು. ರಾಜಭಕ್ತಿ ಮತ್ತು ಸ್ವದೇಶಪ್ರೀತಿ ಎಂಬೆರಡು ಗಾಲಿಗಳ ಮೂಲಕ ದೇಶೋದ್ಧರಣೆಯ ಶಕಟವನ್ನು ಹೇಗೆ ನಡೆಯಿಸಬೇಕೆಂಬ ವಿಧಾನವನ್ನು ಗೋಖಲೆಯವರ ಚರಿತ್ರೆಯಿಂದಲೇ ನಾವು ಕಲಿಯಬೇಕಾಗುವದು. ಶಾಂತಗುಣದಿಂದಲೂ ಧೈರ್ಯದಿಂದಲೂ ಸಾಹಸದಿಂದಲೂ ನಿರಾಶೆಗೆ ಆಶ್ರಯಕೊಡದೆ ದೇಶಕಾರ್ಯವನ್ನು ಸಾಧಿಸುವ ಗೋಖಲೆಯವರ ಉದಾರವಾದ ಕಾರ್ಯಪದ್ಧತಿಯು ದೇಶಸೇವಾನಿರತರಿಗೆ ಆದರ್ಶದಂತಿರುವದು.

ಹಲವು ಕಾರ್ಯಗಳಲ್ಲಿ ಮಾಡಿದ ಪ್ರಯತ್ನಗಳು ನಿಷ್ಫಲವಾಗಿ ಹೋದರೂ ನಿರಾಶೆಪಡದೆ ಮತ್ತೂ ಉತ್ಸಾಹದಿಂದ ದೇಶಹಿತದ ಕಾರ್ಯವನ್ನು ಅನುಸರಿಸುವ ಗೋಖಲೆಯವರ ಗುಣವು ಪ್ರಶಂಸನೀಯವಾಗಿರುವದು. ಕೇವಲ ಕರ್ಮದಲ್ಲಿ ಮಾತ್ರ ತನಗೆ ಅಧಿಕಾರವಲ್ಲದೆ ಅದರ ಪರಿಣಾಮವಾದ ಫಲವು ದೈವಕಲ್ಪಿತವಾಗಿರುವದು. ಅದುದರಿಂದ ಕರ್ಮವು ಫಲಿಸದೆ ಹೋಯಿತೆಂಬ ಕಾರಣದಿಂದ ತನ್ನ ಕರ್ತವ್ಯ ಕರ್ಮವನ್ನು ಬಿಡದೆ ನಿಷ್ಕಾಮಮಾನಸದಿಂದ ಕರ್ಮದಲ್ಲಿ ಪ್ರವೃತ್ತಿಸಬೇಕೆಂಬ ಕರ್ಮಯೋಗದ ಮುಖ್ಯ ಸಿದ್ಧಾಂತವನ್ನು ಗೋಖಲೆಯವರು ತನ್ನ ಆಚರಣೆಯಲ್ಲಿ ಪೂರ್ಣವಾಗಿ ತೋರಿಸುವರು. ಈ ಶ್ರೇಷ್ಠತರವಾದ ಸಿದ್ಧಾಂತದಿಂದ ಆ ಮಹನೀಯರು ತನ್ನ ಚರಿತ್ರೆಯನ್ನು ಅಲಂಕರಿಸದಿದ್ದರೆ ಅದರಿಂದ ನಮ್ಮ ದೇಶಕ್ಕೆ ಆಗಿರುವ ಹಲವು ಬಗೆಯ ಲಾಭಗಳಿಗೆ ನಾವು ಎಂದೂ ಪಾತ್ರರಾಗುತ್ತಿದ್ದಿಲ್ಲ.

ತಾನು ಕೈಕೊಂಡ ಕಾರ್ಯವು ಪ್ರಯತ್ನಪಟ್ಟರೂ ಫಲಿಸದೆ ಹೋದರೆ ಆ ಕುರಿತು ಕ್ರೋಧವಶರಾಗಿ ಅನ್ಯ ಪಥವಿಡಿದು ಸ್ವಹಿತಕ್ಕೆ ಹೆಚ್ಚಾಗುವ ತನ್ನ ಅಮೂಲ್ಯವಾದ ಸಮಯವನ್ನೂ, ಶಕ್ತಿಯನ್ನೂ ವ್ಯರ್ಥ ಪ್ರಯಪಡಿಸದೆ ಕಾಲಪರಿಸ್ಥಿತಿಗಳ ವಿಧ್ಯಮಾನಗಳಿಗೆ ಅನುಗುಣವಾದ ಬೇರೊಂದು ಮಾರ್ಗದಿಂದ ದೇಶಹಿತವನ್ನು ಸಾಧಿಸಲು ಇವರು ಸಾಹಸಪಡುವರು. ಇದರಿಂದ ಗೋಖಲೆಯವರು ಪಟುಸಾಧಕರೆಂದೂ, ದೇಶದ ಹಿತಸಾಧಕರೆಂದೂ ತೋರಲು ಸಂತೋಷವಾಗುವದು.

ಸರಕಾರದವರು ಗೋಖಲೆಯವರ ಯೋಗ್ಯತೆಯನ್ನು ಮನ್ನಿಸಿ ಇವರಿಗೆ ಕೆ. ಸಿ. ಐ. ಇ. ಎಂಬ ಬಿರುದನ್ನು ಕೊಡಲು ಮನಸ್ಸು ಮಾಡಿದರೂ, ತಾನು ಜನಸಾಮಾನ್ಯರ ಕಡೆಯ ಪ್ರತಿನಿಧಿಯಾಗಿರುವದರಿಂದ ಅಂಥಾ ಬಿರುದನ್ನು ಸ್ವೀಕರಿಸಲು ತನ್ನ ಅಭಿಮತಿಯನ್ನು ಪ್ರಕಟಿಸಿ ಅಮೂಲ್ಯವಾದ ದೇಶಸೇವೆಯ ನಿಮಿತ್ತ ಬಂದ ಆತ್ಮಗೌರವಕ್ಕೆ ವಿಕ್ರಯಿಸಲು ಇವರು ಸಮ್ಮತಿಸಲಿಲ್ಲ. ಇವರು ಪೂನೆಯ ಫರ್ಗುಸನ್ ಕೋಲೇಜಿನಲ್ಲಿ ಬರೆ ಅಲ್ಪವೇತನದಿಂದ ಅಧ್ಯಾಪಕ ಕೆಲಸವನ್ನು ನಡಿಸಿದ ಸಂಗತಿಯು ಅವರಲ್ಲಿರುವ ಸ್ವಾರ್ಥತ್ಯಾಗವನ್ನು ಸೂಚಿಸುತ್ತದೆ. ಸರ್ಕಾರದ ಕೋರ್ಟಿಗಾಗಿ ಅವರು ೩ ಲಕ್ಷ ರೂಪಾಯಿಗಿಂತಲೂ ಹೆಚ್ಚಿನ ಹಣವನ್ನು ಕೊಡಲಿರುವ ವಿಷಯವು ಆಲೋಚಿಸಿದರೆ ಜನಸಮುದಾಯಕ್ಕೆ ಗೋಖಲೆಯವರ ಮೇಲೆ ಇರುವ ಆದರವೂ ವಿಶ್ವಾಸವೂ ನಮಗೆ ವ್ಯಕ್ತವಾಗುವದು. ಭರತಮಾತೆಯು ಇಂಥಾ ಪ್ರತಿಭಾಸಂಪನ್ನ ಪುತ್ರರತ್ನವನ್ನು ಕಳಕೊಂಡದ್ದರಿಂದ ದೇಶಬಾಂಧವರೊಳಗೆಲ್ಲಾ ಹಾಹಾಕಾರವು ಕೇಳಿಸುತ್ತಿರುವದು.

ಗೋಖಲೆಯಲ್ಲಿರುವ ಅನೇಕ ಸದ್ಗುಣಗಳ ಯಥಾರ್ಥವರ್ಣನೆಯನ್ನು ಮಾಡುವ ಚಾತುರ್ಯವು ಈ ಅಲ್ಪ ಲೇಖನಿಯ ಬಾಯಿಗಿಲ್ಲದಿದ್ದರೂ ಆದರೂ ಈ ಸಮಯ ಸಂದರ್ಭದಲ್ಲಿ ಆ ಮಹಾನೀಯರ ಗುಣಗಳನ್ನು ಚಿಂತಿಸಿ ಸಂತಾಪಪಡುವದು ಕರ್ತವ್ಯವೆಂದು ಭಾವಿಸಿ ಈ ಲೇಖನವನ್ನು ಬರೆಯಬೇಕಾಯಿತು. ಇನ್ನಿಹಾ ಭೂಲೋಕದಲ್ಲಿರುವ ಅಮೂಲ್ಯ ನರರತ್ನಗಳನ್ನು ಹೆಕ್ಕಿಕೊಂಡೊಯ್ಯಲು ಸನ್ನದ್ಧನಾದ ಮೃತ್ಯುವು ನಮ್ಮ ಈ ಆರ್ತಧ್ವನಿಯನ್ನು ಕೇಳಿ ಅಪಹರಿಸಿದ ಗೋಖಲೆಯವರನ್ನು ತಂದುಕೊಡುವನೆಂಬ ಭ್ರಾಂತಿಯಿಂದ ಬರೆದುದಲ್ಲ.

ಈ ಸಂದರ್ಭದಲ್ಲಿ ಪರವನ್ನೈದಿದ ಗೋಖಲೆಯ ಆತ್ಮಕ್ಕೆ ಶಾಂತಿಯು ಪ್ರಾಪ್ತವಾಗಲು ಆ ದಯಾಮಯನನ್ನು ಪ್ರಾರ್ಥಿಸಲಿಲ್ಲವಾಗಿ ವಾಚಕರು ನನ್ನ ಮೇಲೆ ಆರೋಪಣೆ ಮಾಡಲಾಗದು ಯಾಕಂದರೆ ಆ ಮಹಾತ್ಮರ ಆತ್ಮಕ್ಕೆ ಶಾಂತಿಯು ಪ್ರಾಪ್ತವಾಗಲಿಕ್ಕೆ ನಮ್ಮ ಪ್ರಾರ್ಥನೆಯು ಬೇಕೆಂತಿಲ್ಲ. ಶ್ರೇಯೋಹಿಜ್ಞಾನಮಭ್ಯಾಸಾ । ಜ್ಞಾನಾದ್ಧ್ಯಾನಂ ವಿಶಿಷ್ಯತೆ ॥ ಧ್ಯಾನಾತ್ ಕರ್ಮಫಲತ್ಯಾಗ । ಸ್ತ್ಯಾಗಾಚ್ಛಾಂತಿರನಂತರಮ್ ॥ ಅಂದರೆ—ಅಭ್ಯಾಸಕ್ಕಿಂತ ಜ್ಞಾನವೂ, ಜ್ಞಾನಕ್ಕಿಂತ ಧ್ಯಾನವೂ, ಶ್ರೇಷ್ಠವೆಂದೂ ಅಂಥಾ ಧ್ಯಾನಕ್ಕಿಂತಲೂ ಕರ್ಮಫಲತ್ಯಾಗವೇ ಶ್ರೇಷ್ಠವೆಂಬದಾಗಿಯೂ ಕರ್ಮಫಲತ್ಯಾಗ (ನಿಸ್ಕಾಮಕರ್ಮ)ದಿಂದಲೇ ತ್ವರ್ಯದಲ್ಲಿ ಶಾಂತಿಯು (ಸಮಾಧಾನಯಾ ತೃಪ್ತಿಕರವಾದ ಆನಂದ) ಪ್ರಾಪ್ತವಾಗುವದೆಂದು ಶ್ರೀಕೃಷ್ಣಸ್ವಾಮಿಯು ಅಪ್ಪಣೆಕೊಟ್ಟಿರುವನು. ಆದುದರಿಂದ ನಿಷ್ಕಾಮವ್ರತವನ್ನು ಕೈಕೊಂಡು ದೇಶಹಿತವನ್ನು ಸಾದಿಸುವ ಗೋಖಲೆಯರಂಥಾ ಮಹನೀಯರ ಆತ್ಮಕ್ಕೆ ಶಾಂತಿಯು ಸಹಜತವಾಗಿ ಲಭಿಸುವದು.

ಆದರೂ ಈ ಸಂದರ್ಭದಲ್ಲಿ ದೇಶಬಾಂಧವರೊಡನೆ ನನ್ನದೊಂದು ಪ್ರಾರ್ಥನೆ ಇರುವದು. ಬಾಂಧವರಿರಾ, ಕಷ್ಟಕಾಲದಲ್ಲಿ ವ್ಯಥೆಯಿಂದ ಕರಗುವದೂ ಸುಖಪ್ರಾಪ್ತಿಸಲು ಸಂತೋಷದಿಂದ ಉಬ್ಬುವದೂ ನೈಸರ್ಗಿಕ ಧರ್ಮಗಳಾಗಿರುವವು. ಆದರೆ ಇಷ್ಟರಿಂದಲೇ ನಮ್ಮ ಕರ್ತವ್ಯವು ತೀರದು. ಇಂಥಾ ಸುಖ, ಕಷ್ಟ ಸಂದರ್ಭಗಳಲ್ಲಿ ನಾವು ಕಲಿಯಬೇಕಾದ ಹಲವು ಪಾಠಗಳಿರುವವು. ಅಂಥಾ ಪಾಠಗಳನ್ನು ನಾವು ಮನನ ಮಾಡಿ ನಮ್ಮ ಭವಿಷ್ಯತ್ತನ್ನು ಒಳ್ಳಿತಾಗಿ ಮಾಡುವ ಕಾರ್ಯವನ್ನು ನಾವೇ ಕೈಕೊಳ್ಳಬೇಕಾಗುವದು. ನಮ್ಮ ಉನ್ನತಿಯನ್ನು ನಾವೇ ಸಾಧಿಸಬೇಕು. ನಮ್ಮ ಅವನತಿಯನ್ನು ನಾವೇ ಹೋಗಲಾಡಿಸಬೇಕು. ಯಾಕಂದರೆ ಮನುಷ್ಯನು ತನಗೆ ಮಿತ್ರನೂ ಶತ್ರುವೂ ತಾನೇ ಆಗಿರುವನೆಂದು ಗೀತೆಯು ನಮಗೆ ಬೋಧಿಸುವದು. ಬಾಂಧವರಿರಾ, ಗೋಖಲೆಯ ವರಿಗೋಸ್ಕರ ನಾವು ವ್ಯಸನಪಡುವದೇಕೆ? ಭಗವಂತನು ನಮಗ ಕಷ್ಟಪ್ರಾಪ್ತವಾಗಬೇಕೆಂದು ಗೋಖಲೆಯನ್ನು ತನ್ನ ಕಡೆಗೆ ಆಮಂತ್ರಿಸಿದ್ದಲ್ಲಿ ಪಾಲಿಬಿದ್ದಿರುವ ಗೋಖಲೆಯ ಪದವಿಯನ್ನು ಜೀರ್ಣಕಾಯರಾದ ಆ ಮಹನೀಯರ ಬದಲಾಗಿ ಕರುಣಾರಾದ ನಮ್ಮ ದೇಶಬಾಂಧವರು ಪಡದು ದೇಶಹಿತವನ್ನು ಇನ್ನೂ ಹೆಚ್ಚಾಗಿ ಸಾಧಿಸಿ ದೇಶಕಲ್ಯಾಣವನ್ನೂ ಕೀರ್ತಿ ಗೌರವಗಳನ್ನೂ ಸಂಪಾದಿಸಿ ಇರಬೇಕೆಂಬ ದಯಾಪೂರ್ವಕವಾದ ಇಷ್ಟೆಯಿಂದಲೇ ಮಾಡಿರುವನು. ಆದಕಾರಣ, ಆ ದಯಾಮಯನ ಉದ್ದೇಶವನ್ನು ನೆರವೇರಿಸಲು ಯತ್ನಿಸುವದು ನಮ್ಮ ಹಂಗಾಗಿರುವದು. ಆಹಾರ, ನಿದ್ರೆ ಮೈಥುನಾದಿಗಳು ಸಕಲ ಪ್ರಾಣಿಗಳಿಗೂ ಇರುವವು. ಆದರೆ ದೇವರು ಮನುಷ್ಯರಾದ ನಮಗೆ ವಿಶೇಷ ತರದ ಬುದ್ಧಿಚಾತುರ್ಯವನ್ನು ಯಾತಕ್ಕಾಗಿ ಕೊಟ್ಟಿರುವನು? ಆ ಬುದ್ಧಿ ಶಕ್ತಿಯಿಂದ ಸಾರಾಸಾರ ವಿಚಾರವನ್ನು ಮಾಡಿ ಕಾರ್ಯಾಕಾರ್ಯ ವಿವೇಕದಿಂದ ಆ ಭಗವಂತನ ಉದ್ದೇಶವನ್ನು ನೆರವೇರಿಸಿ ದೇಶಕ್ಕೂ ತನಗೂ ಶ್ರೇಯಸ್ಸನ್ನುಂಟುಮಾಡಬೇಕೆಂಬ ಕೃಪಾತಿಶಯದಿಂದಲೇ ಪಾಲಿಸಿರುವನು. ಆ ಭಗವಂತನ ಉದ್ದೇಶವನ್ನು ನೆರವೇರಿಸಲು ನಾವು ಅಸಮರ್ಥರಾದರೆ ಮನುಷ್ಯರೆಂಬ ಹೆಸರಿಗೆ ನಾವು ಹೇಗೆ ಪಾತ್ರರಾಗುವೆವು? ಹಣ, ಭೂಮಿ, ಭಂಗಾರ ಮೊದಲಾದ ಸ್ಥೂಲ ಸಂಪತ್ತುಗಳು ಸ್ಥೂಲ ದೇಹದ ಉಪಭೋಗಕ್ಕಾಗಿ ನಿರ್ಮಿಸಲ್ಪಟ್ಟವುಗಳು. ಸ್ಥೂಲ ದೇಹವನ್ನು ಅಗಲಿ ಹೋಗುವ ಸಮಯದಲ್ಲಿ ಇವನ್ನು ಕೊಂಡೊಯ್ಯಲು ಸಾಧ್ಯವಿಲ್ಲ. ಸೂಕ್ಷ್ಮ ಶರೀರದೊಡನೆ ಪರಲೋಕ ಯಾತ್ರೆಗೆ ಸನ್ನದ್ಧರಾದಾಗ ಸೂಕ್ಷ್ಮ ಸಂಪತ್ತಿಯು ಅವಶ್ಯವು ನಮಗೆ ತೋರುವದು. ಇಂಥಾ ಸೂಕ್ಷ್ಮ ಸಂಪತ್ತನ್ನು ನಾವು ಈ ಕರ್ಮಭೂಮಿಯಲ್ಲಿಯೇ ಸಂಪಾದಿಸಬೇಕಲ್ಲದೆ ಪರಲೋಕದಲ್ಲಿ ಸಂಪಾದಿಸಲು ಸಾಧ್ಯವಿಲ್ಲಾ. ಅಂಥಾ ಸೂಕ್ಷ್ಮ ಸಂಪತ್ತಿಯು ಯಾವುದು. ಅದನ್ನು ಹೇಗೆ ಸಾಧಿಸತಕ್ಕದ್ದು ಎಂಬ ವಿಷಯವನ್ನು ಶ್ರೀಕೃಷ್ಣನು ಗೀತೆಯಲ್ಲಿ ಈ ರೀತಿ ಹೇಳಿರುವನು—ಕರ್ಮಣ್ಯೈವ ಸಂಸಿದ್ಧಿಮಾಸ್ಥಿತಾಜನಕಾದಯ । ಲೋಕಸಂಗ್ರಹಮವಾಪಿ ಸಂಪಶ್ಯನ್ಕರ್ತುಮರ್ಹಸಿ । ಅಂದರೆ ಕರ್ಮಾಚರಣೆಯಿಂದಲೇ ಜನಕಾದಿಗಳು ಸಿದ್ಧಿಯನ್ನು ಹೊಂದಿದರು. ಆದಕಾರಣ ಲೋಕಸಂಗ್ರಹಾರ್ಥವಾಗಿ ಕರ್ಮವನ್ನಾಚರಿಸು" ಎಂದು ಸೂಕ್ತಿಸಿರುವನು. ದೇಹಕ್ಕೆ ಮಾಡುವ ಉಪಚಾರಗಳು ಅಂತರ್ಯದಲ್ಲಿರುವ ಆತ್ಮನನ್ನು ಸಂತೋಷಗೊಳಿಸುವಂತೆ ನಿಷ್ಕಾಮದಿಂದ ಮಾಡಿದ ಲೋಕಸೇವೆಯು ಲೋಕಾಂತರ್ಯಾಮಿಯಾದ ಪರಮಾತ್ಮನನ್ನು ಸಂತೋಷಗೊಳಿಸುವದು. ಆದುದರಿಂದ ದೇಶಹಿತಕ್ಕಾಗಿ ನಿಷ್ಕಾಮ ಮನಸ್ಸಿನಿಂದ ಕರ್ಮದಲ್ಲಿ ಪ್ರವರ್ತಿಸುವದರಿಂದಲೇ ಆ ಭಗವಂತನ ಉದ್ದೇಶವನ್ನು ನೆರವೇರಿಸಿದಂತಾಗಿ ದೇಶೋನ್ನತಿಯನ್ನೂ ಆತ್ಮೋನ್ನತಿಯನ್ನೂ ಸಾದಿಸಿದಂತಾಗುವದು.

ಆದುದರಿಂದ ಗೋಖಲೆಯವರ ವಿಯೋಗ ದುಃಖದಲ್ಲಿಯೇ ಮಗ್ನರಾಗಿ ದುಃಖಾಶ್ರುಗಳನ್ನು ಸುರಿಸುವ ಮಾತ್ರದಿಂದ ಆ ಮಹಾನೀಯರ ಕಡೆಗೆ ನಾವು ತೋರಿಸಬೇಕಾದ ಕೃತಜ್ಞತೆಯು ಪೂರ್ತಿಗೊಳ್ಳದು. ಆ ಮಹನೀಯರು ತೋರಿಸಿಕೊಟ್ಟ ಮಾರ್ಗದಿಂದ ದೇಶಹಿತವನ್ನು ಸಾಧಿಸಲು ಸಾಹಸಪಟ್ಟು ಅವರ ನಿಧನದಿಂದ ದೇಶಕ್ಕುಂಟಾದ ನಷ್ಟವನ್ನು ತುಂಬಿಸಲು ಶಕ್ತ್ಯಾನುಸಾರ ಪ್ರಯತ್ನಿಸುವದರಿಂದಲೇ ಆ ಮಹನೀಯರ ಕಡೆಗೆ ನಾವು ತೋರಿಸಬೇಕಾದ ಕೃತಜ್ಞತೆಯು ಪೂರ್ತಿಗೊಳ್ಳುವುದೆಂದು ಪೂನೆಯ ಪತ್ರಸಂಪಾದಕರೊಬ್ಬರು ಆರ್ತಧ್ವನಿಯಿಂದ ಸೂಚಿಸಿರುವರು.

Shenai.

ಗವರ್ನಮೆಂಟ್ ಹುಡಗಿಯರ ಟ್ರೈನಿಂಗ್ ಶಾಲೆಯಲಿ ನಡೆದ ಇನಾಮು ಹಂಚೋಣ

ಇದೇ ತಾ. ೧೬ನೇ ಮಂಗಳವಾರ ಸಾಯಂಕಾಲ ಇಲ್ಲಿಯ ಹುಡುಗಿಯರ ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಬಹುಮಾನ (prize distribution)

"ಇನಾಮು ಹಂಚೋಣ" ಎಂಬೀ ಉತ್ಸವವು ಜರಗಿತು ಸದರಿ ಶಾಲಾ ಉಪಾಧ್ಯಾಯ ವರ್ಗದವರೆಲ್ಲರ ಹೆಸರಲ್ಲಿ ಕಳುಹಿಸಿದ ಆಮಂತ್ರಣಕ್ಕನುಸಾರವಾಗಿ ಹುಡುಗರ ಟ್ರೈನಿಂಗ್ ಶಾಲಾ ಮಹೋಪಾಧ್ಯಾಯರುಗಳೆಲ್ಲರೂ ಪಟ್ಟಣದ ಅನೇಕ ಮಾನ್ಯ ಗೃಹಸ್ಥರೂ ನೆರೆದುಬಂದಿದ್ದರು ಈ ಸಮಾರಂಭಕ್ಕಾಗಿ ತರತರದ ಬಣ್ಣಗಳಿಂದ ಮಿನುಗುತ್ತಿರುವ ಕೃತ್ರಿಮ ಪುಷ್ಪ ಲತೆಗಳಿಂದಲೂ ಪುಷ್ಪ ಮಾಲಿಕೆಗಳಿಂದಲೂ ತಳಿರುತೋರಣ ಪತಾಕೆಗಳಿಂದಲೂ ಅತಿರಮಣೀಯವಾಗಿ ಅಲಂಕರಿಸಲ್ಪಟ್ಟ ಶಾಲಾ ಸಭಾಸದನದಲ್ಲಿ ದಕ್ಷಿಣಕನ್ನಡ ಜಿಲ್ಲಾ ಶಾಲೆಗಳ ಮಾಜಿಅಸಿಸ್ಟಾಂಟ್ ಇನ್ಸ್ಪೆಕ್ಟರರಾಗಿದ್ದ ಮ ರಾ ಯ. ರಘುನಾಥರಾಯರವರು ಅಗ್ರಾಸನರಾಗಿ ಪೀಠವನ್ನು ಅಲಂಕರಿಸಿದ್ದರು

ನಿಯಮಿತ ಕಾಲಕ್ಕೆ ಸರಿಯಾಗಿ ಬಂದ ಅತಿಥಿಗಳನ್ನು ಶಾಲಾ ಮಕ್ಕಳು ಸಹಾ ವಂದನಾಗೀತಗಳಿಂದ ವಂದಿಸಿ ಸತ್ಕರಿಸಿದ ಬಳಿಕ ತರತರದ ವಿನೋದವಾಟಗಳೂ, ಪತಾಕೆಯೊಡಗೂಡಿದ ಕವಾತುಗಳೂ ಕಥೆ ನಟನೆಗಳೂ ಇನ್ನೂ ನಾನಾ ಬಗೆಯ ಆಟ ತಮಾಷೆಗಳೂ ಮಕ್ಕಳಿಂದ ರಸಿಕರವುಳ್ಳದ್ದಾಗಿ ಮಾಡಿ ತೋರಿಸಲ್ಪಟ್ಟವು

ಸನ್ಯಾಸಿಯ ವೇಷವನ್ನು ಧರಿಸಿ ನಿಜ ಸನ್ಯಾಸಿಯೋ ಎಂಬಂತೆ ನಟಿಸಿದ ಚಿಕ್ಕ ಬಾಲಕಿಯ ಸಭಾ ಕಂಪನೇನಾದರೂ ಇಲ್ಲದ ವರ್ತನವೂ ನಟನೆಯೂ, ಹಾಗೆಯೇ "ತಪ್ಪಿ ಹೋದ ಮಗನು" ಎಂಬ ಕಥೆಯನ್ನು ನಟಿಸಿದ್ದರಲ್ಲಿ ಬಹು ವಿಶೇಷವಾಗಿ ತಂದೆಯ ವೇಷವನ್ನು ಎರಡನೇದಾಗಿ ಮಗನ ವೇಷವನ್ನು ಕೂಡಾ ಮಾಡಿ ನಟಿಸಿದ ಬಾಲಕಿಯರ ವಾಕ್ಚಾತುರ್ಯವೂ, ವರ್ತನವೂ, ಅಂಗನ್ಯಾಸವೂ, ಬಿಡನಯ ಗಳೂ ಆಯಾ ಸಂಗತಿಗಳಿಗನುಗುಣವಾದ ನಟನೆಗಳೂ ಕೂಡಿದ ಸಭಿಕರಲ್ಲಿ ಮಹದಾಶ್ಚರ್ಯವನ್ನೂ ಅತ್ಯಾನಂದವನ್ನೂ ಉಂಟುಮಾಡಿತು ಮಾತ್ರವಲ್ಲ ಚಿಕ್ಕ ಮಕ್ಕಳನ್ನು ಆಯಾ ಸಂದರ್ಭಗಳಿಗೆ ಸರಿಯಾಗಿ ನಡೆಯುವಂತೆಯೂ, ನುಡಿಯುವಂತೆಯೂ ತರಬೇತು ಮಾಡಿದ ಉಪಾಧ್ಯಾಯಿನಿಯರ ಭಗೀರಥ ಪ್ರಯತ್ನಗಳನ್ನೂ ಕುಶಲ ಚಮತ್ಕಾರಗಳನ್ನೂ ಆಲೋಚಿಸಿ ಶ್ಲಾಘಿಸುವಷ್ಟರ ಯೋಗ್ಯತೆಯುಳ್ಳದ್ದಾಗಿತ್ತು ಎಂದರೆ ಅತಿಶಯೋಕ್ತಿಯಾಗಲಾರದು ಮಾತ್ರವಲ್ಲ, ಸರಕಾರದವರು ಕೈಕೊಂಡ ಈ ಉದಾರ ಕಾರ್ಯವನ್ನು ಇನ್ನಷ್ಟು ಪೋಷಣದಿಂದ ಸ್ಥಿರ ಮಾಡಿದ್ದಂತಾಯಿತು ಮತ್ತು ಶ್ರೇಯಸ್ಸು ಕೂಡಾ ಆಯಿತೆನ್ನಲೇ ಬೇಕು. ಈ ದಿನದೋತ್ಸವಕ್ಕೆ ಸರಿಯಾಗಿ ಕಾರ್ಯ ಸಾರ್ಥಕವಾದ ಶ್ರಮೆಗಳನ್ನು ಪಟ್ಟಂಥಾ ಮಹೋಪಾಧ್ಯಾಯಿನಿಯರಾದ ಮಿಸ್ ಸಿ ಡಿ ಸೋಜ ಮತ್ತು ತಪ್ಪಿ ಹೋದ ಮಗನ ಕಥೆಯನ್ನು ಅಡಿ ನಟಿಸುವದರಲ್ಲಿ ಶಾಲಾ ಬಾಲಕಿಯರನ್ನು ತಾತ್ಕಾಲಿಕ ರೀತಿಯಲ್ಲಿ ತರಬೇತು ಮಾಡಿದ ಮಾದರಿ ಶಾಲಾ ಮುಖ್ಯೋಪಾಧ್ಯಾಯಿನಿ ಮಿಸ್ ಎ ಜೆ ಸಿಕೇರ ಮೊದಲಾದ ಉಪಾಧ್ಯಾಯರುಗಳ ಭಗೀರಥ ಪ್ರಯತ್ನಗಳೂ ಪ್ರಶಂಸನೀಯವಾದವುಗಳು ಎನ್ನುವದು ನಿಸ್ಸಂದೇಹವು

ಮಹೋಪಾಧ್ಯಾಯಿನಿಯರು ಓದಿದ ಶಾಲಾ ವರದಿಯಲ್ಲಿ ಶಾಲೆಯ ಬಿಡಿ ವರುಷಗಳ ತಗ್ಗಿಗೆ ನಿರ್ಮಿತವಾಗಿ ಸಾಕಷ್ಟು ಮಕ್ಕಳ ಸಂಖ್ಯೆ ಕೂಡಾ ಉಳ್ಳದ್ದು ಮಾತ್ರವಲ್ಲ ಶಾಲಾ ವ್ಯವಸ್ಥೆಯು ಬೇಕಾದ ಯೋಗ್ಯತೆಯುಳ್ಳ ಉಪಾಧ್ಯಾಯಿನಿಯರಿಂದ ಅನುಗೊಳಿಸಿ ಚೊಕ್ಕ ವ್ಯವಸ್ಥೆಯಲ್ಲಿದೆ ಮತ್ತು ಕಸೂತಿ ತೆಗೆಯುವ ವಗೈರೆ ಹೊಲಿಗೆ ಕಲಿಸಲಿಕ್ಕೆ ಪ್ರತ್ಯೇಕ ಉಪಾಧ್ಯಾಯಿನಿಯ ಏರ್ಪಾಡು ಕೂಡಾ ಇದೆ ಕಳೆದ ವರುಷದಲ್ಲಿ ಉಪಾಧ್ಯಾಯರ ಪರೀಕ್ಷೆಗೆ ಈ ಶಾಲೆಯಲ್ಲಿ ತರಬೇತು ಹೊಂದಿ ಪರೀಕ್ಷೆಗೆ ಹೋದ ಬಲ್ಲಳಾದ್ದರೂ ತೇರ್ಗಡೆ ಪಟ್ಟಿದ್ದಾಳೆ ಈ ವರ್ಷಕ್ಕೆ ಇನ್ನೂ ಕೆಲವು ಉಮೇದ್ವಾರರು ಇರುತ್ತಾರೆ ಇವರೆಲ್ಲರೂ ವೇತನವನ್ನು ಸರಕಾರದಿಂದ ಪಡೆಯುವಂಥವರು ಹಿಂದೂ ಸ್ತ್ರೀಯರಲ್ಲಾದರೂ ತರಬೇತಿಗೆ ಬಂದವರಿದ್ದಾರೆ ಇಂಥಾ ಹಿಂದೂ ಸ್ತ್ರೀಯರಲ್ಲಿ ಉಪಾಧ್ಯಾಯರಾಗ ಅಪೇಕ್ಷೆಯುಳ್ಳವರಿಗೆ ಸರಕಾರದವರು ನಿಯಮಿತ ವೇತನ ಕೊಡುವದರ ವಿನಹಾ ಮಂಗಳೂರಿನಿಂದ ಬರುವವರ ಹೊರತು ಬರುವ ಸರ್ವರಿಗೆ (ಹಿಂದುಗಳಿಗೆ ಮಾತ್ರ) ಪ್ರತ್ಯೇಕವಾಗಿ ರಕ್ಷಕ ಬತ್ತಾವನ್ನು (Gaudian allowance) ಕೂಡಾ ಕೊಡುತ್ತಾರೆಂಬೀ ಮಾತುಗಳಿಂದ ಸರಕಾರದವರು ಇಲ್ಲಿ ಇಂಥಾದ್ದೊಂದು ಶಾಲೆಯನ್ನು ನಿರ್ಮಿಸಿದ್ದರ ಉದ್ದೇಶವನ್ನು ಸೂಚಿಸಿ, ಪುರಜನರ ಅನುರಾಗವನ್ನು ಅಪೇಕ್ಷಿಸಿ ವಿನಂತಿಸಿದ ಬಳಿಕ ಅಗ್ರಸ್ಥರು ಹಿಂದೂ ಸ್ತ್ರೀಯರಿಗೋಸ್ಕರವಾಗಿಯೇ ಈ ಶಾಲೆಯು ಸರಕಾರದವರಿಂದ ಇಲ್ಲಿ ಸ್ಥಾಪಿಸಲ್ಪಟ್ಟರ ಬೇಕು ಎಂಬದನ್ನು ಸ್ಪಷ್ಟ ಪಡಿಸಿದ್ದಲ್ಲದೆ ಇಲ್ಲಿ ತರಬೇತು ಹೊಂದುವವರು ಎಷ್ಟರ ಮಟ್ಟಿನ ಯೋಗ್ಯತೆಯುಳ್ಳವರಾಗುವರು ಎಂಬೀ ಬಗ್ಗೆ ಈ ವರೆಗೆ ನಾವು ಇಲ್ಲಿ ಈಗ ನೋಡಿದ ಸರ್ವ ವಿಧವಾದ ವಿನೋದ ಮೊದಲಾದವುಗಳು ಪ್ರತ್ಯಕ್ಷ ಪ್ರಮಾಣವಾದ ಸಾಕ್ಷಿಗಳಾಗಿರುತ್ತವೆ ಎಂಬದಾಗಿ ಕಾಲೋಚಿತ ಭಾಷಣಗಳನ್ನು ಮಾಡಿ ನಮ್ಮ ಹಿಂದೂ ಸ್ತ್ರೀಯರು ಶೀಘ್ರವಾಗಿ ಇಂಥಾ ಸಮರ್ಥೆಯರಾದ ಉಪಾಧ್ಯಾಯಿನಿಯರಿರುವ ಶಾಲೆಯಲಿ ತರಬೇತು ಹೊಂದುವಂತೆ ಪ್ರೋತ್ಸಾಹಿಸ ಬೇಕೆಂಬದಾಗಿ ಸಭಿಕರನ್ನು ವಿಜ್ಞಾಪಿಸಿಕೊಂಡ ಬಳಿಕ ಆಯಾ ತರಗತಿಗಳ ಬಾಲಿಕೆಯರಿಗೆ ಅವರವರ ವಿದ್ಯಾಭ್ಯಾಸದ ಯೋಗ್ಯತೆಯೂ ಇತರ ಸಾಮಾನ್ಯ ವಿದ್ಯಮಾನಗಳಿಗನುಗುಣವಾಗಿಯೂ ನಾನಾ ಬಗೆಯ ಬೆಲೆಯುಳ್ಳ ಮಕ್ಕಳಿಗೆ ಉಪಯೋಗವುಳ್ಳ ಚಲೋ ಇನಾಮುಗಳನ್ನು ಹಂಚಿದ ಬಳಿಕ ನಮ್ಮ ಚಕ್ರವರ್ತಿಯವರಾದ ಜನೇ ಜೋರ್ಜ್ ಸಾರ್ವಭೌಮರವರಿಗೆ ಆಯುರಾರೋಗ್ಯವನ್ನು ಬಯಸಿ ರಾಜಗೀತವನ್ನು ಹಾಡಿ ಸಭೆಯು ಅಗಲಿತು

ಮಂಗಳೂರು }
ತಾ 17-3-1915 }

C E

ದಾಳಿಂಬಿ ಹಣ್ಣಿನ ವ್ಯವಸಾಯ

ಅಹಮದಾಬಾದ್ ಡಿಸ್ಟ್ರಿಕ್ಟ್ ಸಂಗಮನರ್ ಎಂಬ ಸ್ಥಳದಲ್ಲಿ ದಾಳಿಂಬಿ ಹಣ್ಣನ್ನು ವಿಶೇಷವಾಗಿ ಬೆಳೆಯುತ್ತಾರೆ ಇಲ್ಲಿನ ಹವಾ ಮತ್ತು ಭೋಗ ಣಗಳೂ ಮತ್ತು ನೀರಿನ ಅನುಕೂಲತೆಗಳೂ ಈ ವ್ಯವಸಾಯಕ್ಕೆ ಬಹಳ ಸಹಕಾರಿಗಳಾಗಿವೆ ಅಲ್ಲಿನ ವ್ಯವಸಾಯ ಕ್ರಮ ವು ಹ್ಯಾಗೆಂದರೆ —ದಾಳಿಂಬಿ ಹಣ್ಣಿನ ವ್ಯವಸಾಯಕ್ಕೆ ಹೆಚ್ಚಾಗಿ ಸುಣ್ಣವಿರತಕ್ಕ ಮತ್ತು ಸುಲಭವಾಗಿ ಪುಡಿಯಾಗತಕ್ಕ ಮಣ್ಣುಳ್ಳ ಜಮೀನು ಬಹಳ ಶ್ಲಾಘ್ಯವಾಗಿರುತ್ತದೆ ಆದ್ದರಿಂದ ಇಂಥಾ ಜಮೀನ ಗಳೇ ಪ್ರಾಯಕವಾಗಿ ಈ ವ್ಯವಸಾಯಕ್ಕೆ ಆರಿಸಲ್ಪಡುವವು

ದಪ್ಪನಾಗಿ ಹುಳುಕಿಲ್ಲದೆ ಚೆನ್ನಾಗಿ ಬೆಳೆದತಕ್ಕ ಹಣ್ಣುಗಳನ್ನೇ ಬಿತ್ತನೆ ಬೀಜಕ್ಕಾಗಿ ಆರಿಸಿಟ್ಟುಕೊಳ್ಳುವರು ಇವುಗಳನ್ನು ಕೀಳದೆ ಗಿಡದಮೇಲೆಯೇ ಬಿಟ್ಟಿದ್ದು ಅವು ಕೊಳೆಯಲು ಆರಂಭವಾದಾಗ್ಯೆ ಕಿತ್ತು ಪೂರ್ತಿಯಾಗಿ ಕೊಳೆಸಬೇಕು ನಂತರದಲ್ಲಿ ಬಿತ್ತಗಳೆಲ್ಲವನ್ನೂ ತೆಗೆದು ಬೂದಿಯಲ್ಲಿ ಕಲಸಿ ನೆರಳಿನಲ್ಲಿ ಒಣಗಿಸುವರು

ಯಾವುದಾದರೊಂದು ಬಾವಿ ಅಥವಾ ಕೊಳಕ್ಕೆ ಸಮೀಪದಲ್ಲಿರುವ ಸುಮಾರು ಎರಡು ಮೂರು ಗುಂಟ ವಿಸ್ತೀರ್ಣ ಜಮೀನನ್ನು ಮೊದಲ ಚನ್ನಾಗಿ ಉತ್ತು ನಂತರ ಆಗಮ ಸುಮಾರು ಒಂದು ಅಡಿ ಆಳ ಮಣ್ಣನ್ನು ಎತ್ತಿ ಹಾಕಬೇಕು ಮಣ್ಣಿನ ಹೆಂಟೆಗಳನ್ನೆಲ್ಲಾ ಒಡೆದು ಚೆನ್ನಾಗಿ ಪುಡಿಮಾಡಬೇಕು ಒಂದು ಗಾಡಿ ಕೊಟ್ಟಿಗೆ ಗೊಬ್ಬರ ಮತ್ತು ಒಲೆಯ ಬೂದಿಯನ್ನು ಹಾಕಿ ಮಣ್ಣಿನೊಡನೆ ಚನ್ನಾಗಿ ಮಿಶ್ರಮಾಡಬೇಕು ನಂತರ ಬಿತ್ತವನ್ನು ಎರಚಬೇಕು ಬೀಜಗಳು ಗುಪ್ಪೆಗುಪ್ಪೆಯಾಗಿ ಬೀಳದಂತ ನೋಡಿಕೊಳ್ಳಬೇಕು ಬಿತ್ತನೆಯಾದ ಕೂಡಲ ಮೇಲ ಮಣ್ಣನ್ನು ಎರಚಿ ನೀರನ್ನು ಹಾಕಬೇಕು ಆರು ದಿನಗಳ ತರುವಾಯ ಎರಡನೇ ಆವರ್ತಿಯೂ ಅಲ್ಲಿಂದಾಚೆಗೆ ಹತ್ತು ಹನ್ನೆರಡು ದಿನಗಳಿಗೆ ಒಂದಾವರ್ತಿಯಂತೆ ನೀರನ್ನು ಹಾಕುತ್ತಿರಬೇಕು. ಕಳೆಯು ಸ್ವಲ್ಪವೂ ಇರದಂತೆ ನೋಡಿಕೊಳ್ಳಬೇಕು ಸಸಿಗಳು ಸುಮಾರು ಒಂದು ವರುಷದವುಗಳಾಗಿರುವಾಗ್ಯೆ ಅವುಗಳನ್ನು ಕಿತ್ತು ಖಾಯಂ ಆಗಿ ಮಾಡಿರುವ ತೋಟಗಳಲ್ಲಿ ನೆಡುವರು ಮುಂಗಾರು ಮಳೆಯ ಪ್ರಾರಂಭದಲ್ಲಿ ಸಸಿಗಳನ್ನು ಕಿತ್ತು ನೆಡುವುದು ವಾಡಿಕೆಯಾಗಿದೆ

ಸಸಿಗಳನ್ನು ನೆಡುವುದಕ್ಕೆ ಮೊದಲು ಖಾಯಂ ತೋಟಗಳ ಜಮೀನನ್ನು ಎರಡಾವರ್ತಿ ಉತ್ತು ಕುಂಟೆ ಹೊಡೆಯುವರು ಹತ್ತು ಹನ್ನೆರಡು ಗಾಡಿ ಕೊಟ್ಟಿಗೆ ಗೊಬ್ಬರವನ್ನು ಹಾಕುವರು ಒಂದೂವರೆ ಅಡಿ ಉದ್ದಗಲ ಮತ್ತು ಎರಡು ಅಡಿ ಆಳವಾಗಿ ಹನ್ನೆರಡು ಅಡಿಗಳ ದೂರಕ್ಕೆ ಒಂದೊಂದರಂತೆ ಗುಳಿಗಳನ್ನು ಮಾಡುವರು. ಗುಳಿಗಳನ್ನು ತೋಡುವಾಗ್ಯೆ ಆಗಾಗ್ಯೆ ಮೇಲ್ಭಾಗದ ಮತ್ತು ಕೆಳಭಾಗದ ಮಣ್ಣನ್ನು ಬೇರೆಬೇರೆಯಾಗಿ ವಿಂಗಡಿಸಿ ಹಾಕಿ ಮೇಲ್ಭಾಗದ ಮಣ್ಣನ್ನು ಮೊದಲು ಗುಳಿಯೊಳಕ್ಕೆ ಹಾಕುವರು ಮೇಲ್ಭಾಗದ ಮಣ್ಣು ಗಾಳಿ ಬಿಸಲಿನಲ್ಲಿ ಚೆನ್ನಾಗಿ ಪಳಗಿರುವುದರಿಂದ ಅದರಲ್ಲಿರುವ ಸಸ್ಯಾಹಾರ ಪದಾರ್ಥಗಳು ಸುಲಭವಾಗಿ ದೊರೆಯುವುವೆಂಬುವುದೇ ಇದಕ್ಕೆ ಕಾರಣವಾಗಿದೆ ನಂತರದಲ್ಲಿ ಗುಳಿಯೊಂದಕ್ಕೆ ಒಂದೊಂದು ಕುಕ್ಕೆ ಕೊಟ್ಟಿಗೆ ಗೊಬ್ಬರವನ್ನು ಹಾಕಿ ಈ ಗೊಬ್ಬರದೊಳಗೆ ಗಿಡದ ಬೇರು ಬರುವಂತೆ ನೆಡುತ್ತಾರೆ. ಇದರ ಮೇಲೆ ಉಳಿದ ಮಣ್ಣಿಗೆ ಬೂದಿಯನ್ನು ಬೆರಸಿ ಗುಂಡಿಗೆ ಭರ್ತಿ ಮಾಡುತ್ತಾರೆ ಒಂದು ಎಕರೆಗೆ ಒಂದು ಬಂಡಿ ಬೂದಿ ಬೇಕಾಗುವದು.

ಪಾತಿಗಳ ಸುತ್ತಲೂ ಗುಂಡಿಗೆ ದಿಂಡನ್ನು ಕಟ್ಟುವರು ಸಸಿಗಳನ್ನು ನಟ್ಟ ಕೂಡಲೇ ನೀರನ್ನು ಈ ದಿಂಡುಗಳ ಮೇಲೆ ಹಾಕುತ್ತಾರೆ ತರುವಾಯ ವಾರಕ್ಕೆ ಒಂದಾವರ್ತಿ ನೀರನ್ನು ಹಾಕುತ್ತಿರುವರು. ನಂತರ ಸುಮಾರು ಎರಡು ಮೂರು ವರ್ಷಗಳ ಕಾಲ ದಾಳಿಂಬಿ ಸಸಿಗಳ ಮಧ್ಯದಲ್ಲಿ ಈರುಳ್ಳಿ ಮೆಣಸಿನಕಾಯಿ ಮೊದಲಾದುವುಗಳನ್ನು ಬೆಳೆದುಕೊಳ್ಳಬಹುದು.

ಸೊಸಿಗಳನ್ನು ನೆಟ್ಟ ವ್ಮೂರು ವರ್ಷಗಳ ಮೇಲೆ ಗಿಡಗಳಲ್ಲಿ ಹುವ್ವುಗಳು ಬಿಡುವವು. ಆದರೆ ಮೊದಲನೇ ಆವರ್ತಿ ಫಲವು ಬಹಳವಾಗಿ ಆಗುವುದಿಲ್ಲವಾದ್ದರಿಂದ ಆ ಸಾಲಿನಲ್ಲಿ ಹೆಚ್ಚು ಮುತವರ್ಜಿಯಿಂದ ವ್ಯವಸಾಯ ಮಾಡುವುದಿಲ್ಲ ನಾಲ್ಕನೆ ವರುಷದಿಂದ ಸೊಂಪಾಗಿ ಫಲಬಿಡುವುದು ಪ್ರತಿ ಸಾಲಿನಲ್ಲಿಯೂ ಹೇರಳವಾಗಿ ಕೊಟ್ಟಿಗೆ ಗೊಬ್ಬರ ಮತ್ತು ಸಾಧ್ಯವಾದರೆ ಮಿಾನಿನ ಗೊಬ್ಬರವನ್ನು ಹಾಕುತ್ತಿರಬೇಕು ಮೊದಲಿಂದಲೂ ಮೂರು ತಿಂಗಳಿಗೊಂದಾವರ್ತಿ ಪಾತಿಗಳನ್ನು ಅಗತೆಮಾಡಿ ಸುತ್ತಲೂ ಕಟ್ಟಿರುವ ದಿಂಡನ್ನು ದೂರದೂರವಾಗಿ ಕಟ್ಟುತ್ತಾ ಬರಬೇಕು

ದಾಳಿಂಬಿ ಗಿಡಗಳಲ್ಲಿ ವರುಷಕ್ಕೆ ಮೂರಾವರ್ತಿ ಅಂದರೆ ಮಾರ್ಚಿ, ಜೂನ್ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ಹುವ್ವು ಬಿಡುವುವು ಈ ಪೈಕಿ ಯಾವುದಾದರೊಂದಾವರ್ತಿ ಮಾತ್ರ ಫಲವನ್ನು ತೆಗೆದುಕೊಳ್ಳುವರು ಅಗ್ಗೆ ಮಾತ್ರ ಹೆಚ್ಚು ಮುತವರ್ಜಿಯಿಂದ ವ್ಯವಸಾಯ ಮಾಡುವರು ಸಾಮಾನ್ಯವಾಗಿ ಜೂನ್ ತಿಂಗಳಲ್ಲಿ ಬಿಟ್ಟ ಹುವ್ವುಗಳ ಫಲವು ನವಂಬರ್ ತಿಂಗಳಲ್ಲಿ ತೆಗೆದುಕೊಳ್ಳಲ್ಪಡುವದು ನಂತರದಲ್ಲಿ ಎಪ್ರಿಲ್ ತಿಂಗಳವರಿವಿಗೂ ತೋಟದ ವ್ಯವಸಾಯವೇ ನಡಿಯುವುದಿಲ್ಲ ನೀರನ್ನು ಕೂಡ ಹಾಕುವುದಿಲ್ಲ ಅಗ್ಗೆ ಗಿಡಗಳ ಎಲೆಗಳೆಲ್ಲಾ ಉದುರಿಹೋಗಿ ಬರೀ ಕಡ್ಡಿಗಳು ಮಾತ್ರ ಇರುವವು ಪಾತಿಯನ್ನೆಲ್ಲಾ ಅಗತೆಮಾಡಿ ಒಂದೆರಡು ವಾರಗಳ ಕಾಲ ಮೇಲ್ಭಾಗದ ಬೇರೆಲ್ಲವೂ ಗಾಳಿಗೆ ಬಿಡಲ್ಪಟ್ಟಿರುವವು ಅಲ್ಲಿಂದಾಚೆಗೆ ಮೇ ತಿಂಗಳಿಂದ ಮೊದಲು ಮಾಡಿ ಎರಡು ವಾರಗಳಿಗೊಂದಾವರ್ತಿಯಂತೆ ಕ್ರಮವಾಗಿ ನೀರನ್ನು ಹಾಕುತ್ತಿರುವರು ನೀರನ್ನು ಹಾಕಲು ಪ್ರಾರಂಭಿಸಿ ಒಂದು ತಿಂಗಳ ನಂತರ ಹುವ್ವು ಬಿಡುವುವು ಕಾಯಿ ಕಚ್ಚಿ ಕಾಯಿಗಳು ನಿಂಬೆ ಹಣ್ಣಿನ ಗಾತ್ರವಾಗಿರುವಾಗಿನಿಂದ ಮೊದಲು ಮಾಡಿ ಪ್ರತಿ ತಿಂಗಳಲ್ಲಿಯೂ ನೀರನ್ನು ಹಾಕುವುದಕ್ಕೆ ಮೊದಲು ಪಾತಿಯನ್ನು ಅಗತೆ ಮಾಡುವರು

ಪ್ರತಿ ಗಿಡದಲ್ಲಿಯೂ ಮೊದಲನೇ ವರುಷ ನಲವತ್ತು ಹಣ್ಣಿನಂತೆಯೂ ಅಲ್ಲಿಂದ ಮುಂದೆ ಬರಬರುತ್ತಾ ಹೆಚ್ಚಿ ಗಿಡವು ಪೂರ್ತಿಯಾಗಿ ಬೆಳೆದಾಗ್ಗೆ ನಾನೂರು ಹಣ್ಣುಗಳ ವರಿವಿಗೂ ಬಿಡುವುವು ಚೆನ್ನಾಗಿ ವ್ಯವಸಾಯ ಮಾಡಿದರೆ ಗಿಡಗಳಲ್ಲಿ ಹನ್ನೆರಡು ವರುಷಗಳ ಕಾಲ ಫಲಬಿಡುವುದು ಫಲಬಿಡುವುದು ಕಡಮೆಯಾದಾಗ್ಗೆ ಕೊನೆಗಳನ್ನೆಲ್ಲಾ ಸುಮಾರು ಅರು ಅಡಿ ಎತ್ತರಕ್ಕೆ ಕತ್ತರಿಸಿ ತುದಿಗೆ ಸಗಣಿಯನ್ನು ಮೆತ್ತಿ ಹೇರಳವಾಗಿ ಗೊಬ್ಬರವನ್ನು ಹಾಕಿ ವ್ಯವಸಾಯ ಮಾಡಿದರೆ ಹೊಸ ರೆಂಬೆಗಳು ಹೊರಟು ಅಲ್ಲಿಂದಾಚೆಗೆ ಹತ್ತು ವರುಷಗಳ ಕಾಲ ಫಲಬಿಡುವದು.

ಮೇಲೆ ಹೇಳಿದ ರೀತಿಯಲ್ಲಿ ವ್ಯವಸಾಯ ಮಾಡಿದರೆ ವರುಷಕ್ಕೆ ೬೦೦ ರೂಪಾಯಿ ಬೆಲೆಬಾಳುವ ಉತ್ಪತ್ತಿಯಾಗುವದೆಂದು ತಿಳಿಯಬರುತ್ತದೆ

ದಾಳಿಂಬಿ ಹಣ್ಣುಗಳಿಗೆ ಒಂದು ಮಾದರಿ ಹುಳುಗಳ ಕಾಟವಿರುವುದು ಈ ಹುಳುವು ತಗಲಿದ ಹಣ್ಣುಗಳು ತೂತುಗಳಾಗಿರುವುವು ಆದರೆ ನೀರನ್ನು ಹಾಕುವುದಕ್ಕಾಗಿ ಮಾಡಿರುವ ಕಾಲುವೆಗಳ ಮೊದಲಿನಲ್ಲಿ ಸುಮಾರು ಎರಡು ಸೇರು ಇಂಗನ್ನು ಇಟ್ಟು ನೀರನ್ನು ಹಾಕುತ್ತಿದ್ದರೆ ಇವುಗಳ ಕಾಟವು ತಪ್ಪುವುದೆಂದು ಹೇಳುವರು. ಇದಕ್ಕಿಂತಲೂ ಸುಲಭವಾಗಿ ಚಿಕಿತ್ಸೆಯು ಮತ್ಯಾವುದೂ ಇರುವುದಿಲ್ಲ

ರೆ. ಗೆ.

ಪತ್ರ ವ್ಯವಹಾರ.

ಅಯ್ಯಾ ಪತ್ರಕರ್ತರೇ,

ಸ್ವದೇಶಾಭಿಮಾನಿಯ ಹಿಂದಿನ ಕೆಲವು ಸಂಚಿಕೆಗಳಲ್ಲಿ "ವಿಚಾರಿ"ಯೂ "ವಿಮರ್ಶಿ"ಯೂ ಮಂಗಳೂರಿನಲ್ಲಿ ನಡಿಯುವ ಚಿಲ್ಲರೆ ಕಳವುಗಳ ವಿಷಯ ಚರ್ಚಿಸುವದನ್ನು ಕೇಳಿ ಒಂದೆರಡು ಮಾತುಗಳನ್ನು ವಾಚಕರ ಲಕ್ಷ್ಯಕ್ಕೆ ತರಬೇಕೆಂಬ ಕುತೂಹಲದಿಂದ ತಮ್ಮ ಅಮೂಲ್ಯ ಪತ್ರಿಕೆಯಲ್ಲಿ ಕೊಂಚ ಎಡೆಕೊಡಬೇಕೆಂದು ವಿಜ್ಞಾಪಿಸುವೆನು.

ಬೆಳ್ಳಾರೆ ಸ್ಟೇಶನ್ ಫಿರ್ಕಿಯ ಬಾಬತು ಸೆಶ್ಶನ್ಸಿಗೆ ಕಮಿಟಾದ ಒಂದರೆ ಖೂನಿ ಮೊಕದಮೆಯ ಪ್ರೋಶಿಕ್ಯೂಷನ್ ಕಡೆ ಸಾಕ್ಷಿಗಾರರು ಮಂಗಳೂರಲ್ಲಿ ರಥಬೀದಿಯ ಒಂದು ವಿಶ್ರಾಂತಿಭವನದಲ್ಲಿ ಉಳಕೊಂಡಿದ್ದರು. ಈ ತಿಂಗಳ ತಾ. ೩ನೆ ರಾತ್ರಿ ಬಹಳ ಸೆಕೆಯಿದ್ದದರಿಂದ ಸಾಕ್ಷಿಗಾರರಿಬ್ಬರು ತಮ್ಮ ಗಂಟುಗಳನ್ನು ತಲೆ ಅಡಿಗೆ ಇಟ್ಟುಕೊಂಡು ಆ ಭವನದ ಜಗಲಿಯಲ್ಲಿ ಮಲಗಿದರು. ಶುಮಾರು ೪ ಗಂಟೆ ರಾತ್ರಿಯಾಗುವಾಗ ಅವರಲ್ಲೊಬ್ಬನ ಗಂಟನ್ನು ಕಳ್ಳರು ಎಳದುಕೊಂಡು ಹೋದರು ಅವರಿಬ್ಬರೂ ಎದ್ದು "ಕಳ್ಳ ಕಳ್ಳ" ಎಂತ ಬೊಬ್ಬೆ ಮಾಡುತ್ತಾ ಬೀದಿಯಲ್ಲಿ ಕಳ್ಳನನ್ನು ಹಿಂಬಾಲಿಸಿ ಓಡುವಾಗ, ಎದುರಿಗೆ ಸಿಕ್ಕಿದ ಗಸ್ತಿ ಪೋಲಿಸಿನವರು "ಕಳ್ಳನನ್ನು ಹಿಡುಕೊಳ್ಳಲಿಲ್ಲವೇಕೆಂತ" ಅವರನ್ನೇ ಗದರಿಸಿ "ನಿಮ್ಮ ಫಿರ್ಯಾದಿ ಇದ್ದರೆ ಬರಕೊಂಡು ತಲಾಶಿ ಮಾಡುತ್ತೇವೆಂತ" ಸಮಾಧಾನ ಪಡಿಸಿದರು ಗಂಟು ಕಳಕೊಂಡವರಿಗೆ ತನ್ನಲ್ಲಿದ್ದ ಸರ್ವಸ್ವ ಅಂದರೆ ವಸ್ತ್ರ ಅಂಗಿ ನಗದಿ ಹಣ ಕೂಡಿ ಸುಮಾರು ಮುವ್ವತ್ತು ರೂಪಾಯಿ ಕಳಕೊಂಡ ವ್ಯಸನದಿಂದಲೂ 8-10 ಪೋಲಿಸಿನವರಿಗೆ ಒಮ್ಮೆಯೇ ನೋಡಿದ್ದರ ಗಾಬರಿಯಿಂದಲೂ ಬಾಯಿಂದ ಮಾತು ಹೊರಡಲಿಲ್ಲ ಅವರ ಜತೆಯಲ್ಲಿದ್ದ ಸ್ನೇಹಿತರು ಮಂಗಳೂರ ಚಿಲ್ಲರೆ ಕಳವುಗಳ ತಲಾಶಿಯಲ್ಲಿ ಪೋಲಿಸರು ಮಾಡುವ ಪ್ರಯತ್ನದ ರೀತಿಯನ್ನು ಅರಿತವರಾದ್ದರಿಂದಲೂ ತನ್ನ ಕೈಯ್ಯಲ್ಲಿದ್ದ ಸ್ವಲ್ಪ ಹಣವನ್ನು ಈ ಕಳವು ಪಿರ್ಯಾದಿಗೋಸ್ಕರ ಖರ್ಚು ಮಾಡಿದರೆ, ಮಾರಣೆ ದಿನ ಗಂಟು ಕಳಕೊಂಡ ಸಾಕ್ಷಿಗಾರರು ಕೋರ್ಟಿಗೆ ಹಾಜರು ಆಗುವ ಮೊದಲು ಅವರಿಗೆ ಅಂಗಿ ವಸ್ತ್ರಗಳನ್ನು ಒದಗಿಸಿ ಕೊಡಲಿಕ್ಕೆ ಅನುಕೂಲವಿಲ್ಲದೆ ಅವರು ಕೋರ್ಟಿನಲ್ಲಿ ಗೈರ್ಹಾಜರು ಆದಾರಾಗಿಯೂ ಕಷ್ಟನಷ್ಟಗಳಿಗೆ ಗುರಿಯಾದಾರೆಂಬದಾಗಿಯೂ ಎಣಿಸಿ ಫಿರ್ಯಾದಿ ಕೊಡಲಿಲ್ಲ

ನನ್ನ ಮಾತುಗಳು "ವಿಮರ್ಶಿ"ಯ ವಿಮರ್ಶೆಯನ್ನು ಬಲ ಪಡಿಸುತ್ತವೊ ಅಥವಾ "ವಿಚಾರಿ"ಯ ವಿಚಾರಕ್ಕೆ ದೃಷ್ಟಾಂತಗಳೊ? ನನಗೆ ತಿಳಿಯದು. ನನಗೆ ಪಕ್ಷಾಪಕ್ಷ ಬೇದವಿಲ್ಲ. ಆದರೆ ಇಂಥಾ ಕಳವುಗಳು ನಡಿಯದಂತೆ ಮಾನ್ಯ ಸರಕಾರದವರು ತಕ್ಕ ಒಂದೊಬಸ್ತು ನಡಿಸಿದರೆ ಮಂಗಳೂರಿಗೆ ಹೋಗಿ ಬರುವ ಹಳ್ಳಿ ನಿವಾಸಿಕರಿಗೊಂದು ಉಪಕಾರವೆಂತ ನನ್ನ ಗ್ರಹಿಕೆ

ಹಳ್ಳಿನಿವಾಸಿಕ.

ಸ್ವದೇಶಾಭಿಮಾನಿ ಕರ್ತರ ಸನ್ನಿಧಾನಕ್ಕೆ,

ಕನ್ನಡನಾಡಿನ ಶಕ್ತಿಸ್ಥಾನಗಳಲ್ಲಿ ಮುಖ್ಯವಾದ ಪೊಳಲಿ ಶ್ರೀ ರಾಜರಾಜೇಶ್ವರಿ (ಶ್ರೀ ಮೂಲದುರ್ಗಾಪರಮೇಶ್ವರಿ) ದೇವಿಯ ಸನ್ನಿಧಿಯಲ್ಲಿ ಕಟ್ಟಳೆ ಪ್ರಕಾರ ನಡೆದು ಬರತಕ್ಕ ಕಡೆ ಚೆಂಡು ಮಹೋತ್ಸವವು ಈ ವರ್ಷ ತಾ ೧೦—೪—೧೯೧೫ನೇಗೆ ಸರಿಯಾದ ಮಿಾನಮಾಸ ೭ನೇ ರಾಕ್ಷಸ ಸಂವತ್ಸರದ ಚೈತ್ರ ಬ. ೧೧ ಶನಿವಾರ ದಿವಸ ಜರಗುವುದು ಅಂದರೆ ಇಷ್ಟರ ವರೇಗೆ ಜಾತ್ರೆ ಸಮಯ ವ ಇತರ ಹೊತ್ತಿನಲ್ಲಿ ಇಲ್ಲಿಗೆ ಬರತಕ್ಕ ಬಜಕ ಸವ ದಾಯಕ್ಕಾಗಲಿ ಬೇರೆ ವ್ಯಾಪಾರಸ್ಥರಿಗಾಗಲಿ ಸದರಿ ಸ್ಥಳಕ್ಕೆ ಬರುವರೆ ರಾಜರಸ್ತೆ ಇಲ್ಲದ್ದರಿಂದ ಬಹು ಕಷ್ಟವಾಗುತ್ತಿತ್ತು ಅಂತಹ ತೊಂದರೆಯು ಸದ್ಯದಲ್ಲೇ ಪರಿಹಾರವಾಗುವಂತೆ ತೋರುವುದು ಹೇಗಂದರೆ ಬಂಟ್ವಾಳದಿಂದ ಪೊಳಲಿ ದೇವಸ್ಥಾನದ ಒಳಿಗಾಗಿ ಗುರುಪುರಕ್ಕೆ ರಾಜರಸ್ತೆಯನ್ನು ಮಾಡಿಸಿಕೊಡಬೇಕಾಗಿ ನಾವೆಲ್ಲರೂ ಕೂಡಿ ಬರಕೊಂಡ ಅರ್ಜಿಗಳಿಗೆ ದಯಾಳು ಸರಕಾರದವರು ಮನತಂದು ಬರುವ ವರ್ಷದೊಳಗೆ ಮಾರ್ಗಮಾಡಿಸಬೇಕೆಂತ ಬೋರ್ಡು ಮಿಾಟಿಂಗಿನಲ್ಲಿ ನಿಶ್ಚೈಸಿ ಖರ್ಚಿನ ಬಗ್ಗೆ ಶೆಕ್ಷನ್ ಮಾಡಿದ್ದಾಗಿ ಕೇಳಿ ಸಂತೋಷಪಡುತ್ತೇವೆ. ಈ ತನ್ಮಧ್ಯೆ ಎರಡು ಜಪೆ ವೋವರ್ಶಿಯರೂ, ಒಂದು ಸಾರಿ ಡಿ. ಇಂಜಿನೀಯರೂ ಬಂದು ದಾರಿಯನ್ನು ನೋಡಿಕೊಂಡು ಹೋಗಿರುತ್ತಾರೆ ಪ್ರಕೃತ ದೇವಸ್ಥಾನದ ಬಳಿಯ ಕರಿಯಂಗಳ ಗ್ರಾಮದಲ್ಲಿ ಒಂದು ದಾರಿಯನ್ನೂ ಸದರಿ ಸ್ಥಳಕ್ಕೆ ಶುಮಾರು ಒಂದು ಮೈಲು ದೂರದ ಅಮುಣಿಂಜೆ ಗ್ರಾಮದಲ್ಲಿ ಒಂದು ಲೈನನ್ನೂ ನೋಡಿಕೊಂಡು ಹೋಗಿರುತ್ತಾರೆ. ಈ ಪೈಕಿ ಉತ್ತಮ ದಾರಿಯಾವುದೆಂಬದನ್ನು ನೋಡಿ ನಿಶ್ಚೈಸುವ ಬಗ್ಗೆ ರಾಜಪ್ರತಿನಿಧಿಗಳಾದ ದ ಕ ಜಿಲ್ಲಾ ಕಲೆಕ್ಟರ್ ದೊರೆಗಳವರೇ ಮಹೋತ್ಸವ ಸಮಯ ದಯಮಾಡಿಸುತ್ತಾರಾಗಿ ವದಂತಿ ಇದೆ. ದೊರೆಗಳವರು ಬಂದು ಸಂದರ್ಶಿಸಿದಲ್ಲಿ ಈ ಮೊದಲು ಬಹು ದಫೆಯಿಂದ ಡಿಪ್ಯೂಟಿ ಕಲೆಕ್ಟರರೂ, ಜಿಲ್ಲಾ ಕಲೆಕ್ಟರರೂ, ಡಿಸ್ಟ್ರಿಕ್ಟ ಜಡ್ಜರೂ ಮತ್ತು ಇತರ ಶ್ರೀಯುತ ಮಾನ್ಯ ಗೃಹಸ್ಥರೂ ನೋಡಿ ಖುಶಿಪಟ್ಟಿರುವ ಪೊಳಲಿ ದೇವಸ್ಥಾನದ ಬಳಿ ಕರಿಯಂಗಳ ಗ್ರಾಮದ ಲೈನನ್ನೇ ಮಂಜೂರುಮಾಡುವರಾಗಿ ನಂಬಿಕೊಂಡಿರುವ ಹಲವು ಮಂದಿ ವರ್ಗದಾರರ ಪೈಕಿ ನಾನೊಬ್ಬ.

[illegible]

ಯುದ್ಧ ಸಮಾಚಾರ.

ತಾ. ೯ನೇ ಮಾರ್ಚಿ.

ಬ್ರಿಟಿಷ ಯುದ್ಧನಾವೆಗಳು ಸ್ಮಿರ್ನದ ಕಡೆಗೆ ಮುಂದರಿದು ತುರ್ಕರ ಕೆಲವು ಬತ್ತೇರಿಗಳನ್ನು ಮೌನಪಡಿಸಿರುವವು. ಸ್ಮಿರ್ನ ಆಖಾತದಲ್ಲಿ ಕೆಲವು ದೂರದ ವರೆಗೆ ಸಿಡಿಮದ್ದಿನ ಗಣಿಗಳು ತೆಗೆಯಲ್ಪಟ್ಟಿರುವವು.

"ಲಿಂಗ್‌ಚೋ" ಎಂಬ ಹಡಗವನ್ನು ಜರ್ಮನರ ಜಲಂತರ್ಗಾಮಿ ನಾವೆಯು ಹಿಂದಟ್ಟಿರುವದು ಆದರೆ ಈ "ಲಿಂಗ್‌ಚೋ" ನಾವೆಯು ತಪ್ಪಿಸಿಕೊಂಡಿತು

ಪಶ್ಚಿಮ ರಣರಂಗದಲ್ಲಿ ಮಿತ್ರರು ಮುಂದರಿಯುತ್ತಲಿರುವರು ಬೆಥ್ಯೂನ್ ಸಮೀಪ ಮಿತ್ರರ ವಾಯುನಾವೆಗಳು ಜರ್ಮನರ ಜೆಪಲಿನ್ ವಾಯುನಾವೆಯ ಮೇಲ್ಬಾಯಿದು ಅದನ್ನು ಕೆಡವಿರುವದು

ಸಿಂಗಾಪುರದಲ್ಲಿ ದಂಗೆ ಎದ್ದವರಲ್ಲಿ ಕೆಲವರು ಇನ್ನೂ ಅಡವಿಯಲ್ಲಿ ಅಡಗಿಕೊಂಡಿರುವರೆಂಬ ವಾರ್ತೆ ಬಂದದೆ ದಂಗೆಗಾರರಲ್ಲಿ ಹಿಡಿಯಲ್ಪಟ್ಟವರಿಗೆ ಶಿಕ್ಷೆ ವಿಧಿಸೋಣಾಗಿರುವದು

ತಾ. ೧೦ನೇ ಮಾರ್ಚಿ.

ಡರ್ಡನೆಲ್ಸಿನಲ್ಲಿ ಮಿತ್ರರ ಯುದ್ಧನಾವೆಗಳು ಹಲ್ಲಾ ಮಾಡುತ್ತಿರುವವು. ಸ್ಮಿರ್ನದಲ್ಲಿಯೂ ಯುದ್ಧನಾವೆಗಳು ಮಾಡುತ್ತಿರುವ ಕೆಲಸವು ಮಿತ್ರರಿಗೆ ಗುಣವಾಗಿ ನಡದಿರುವದು

ಜರ್ಮನರ ಜಲಂತರ್ಗಾಮಿ ನಾವೆಯೊಂದನ್ನು "ಗುರ್ಕ" ಮತ್ತು "ಮಾಪೂರಿ" ಎಂಬ ಡಿಸ್ಟ್ರಾಯರ್ ನಾವೆಗಳು ಪೂರ್ಣ ನಾಶಪಡಿಸಿರುವವು. ಇತರ ೧೦ ಡಿಸ್ಟ್ರಾಯರ್ ನಾವೆಗಳು ಈ ಜಲಂತರ್ಗಾಮಿ ನಾವೆಗಳನ್ನು ಹುಡುಕುವ ಕೆಲಸದಲ್ಲಿ ನಿರತವಾಗಿರುವವು ಎಂತ ಬ್ರಿಟಿಷ ನೌಕಾವಳಿ ಇಲಾಖೆಯಿಂದ ಪ್ರಕಟವಾಗಿದೆ. ಜರ್ಮನರ ಈ ಜಲಂತರ್ಗಾಮಿ ನಾವೆಗಳ ಬಾಧೆಯಿಂದ ಬ್ರಿಟಿಷರ ವ್ಯಾಪಾರಕ್ಕೆ ಈ ವರೆಗೆ ಭಂಗಉಂಟಾದಂತೆ ತೋರುವದಿಲ್ಲ. ವಾರಕ್ಕೆ ೧೫೦೦ ಹಡಗಗಳು ಹೋಗುತ್ತಾ ಬರುತ್ತಾ ಇವೆ ಎಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುವರು

ಫೆಬ್ರವರಿ ತಾ. ೧೮ರಿಂದ ಈ ವರೆಗೆ ಜರ್ಮನರ ೭ ಜಲಂತರ್ಗಾಮಿ ನಾವೆಗಳು ಮುಣುಗಿಸಲ್ಪಟ್ಟವು ಎಂತ ತಟಸ್ಥರಾಜ್ಯಗಳಿಂದ ಬಂದ ವಾರ್ತೆಯಿಂದ ತಿಳಿದುಬರುತ್ತದೆಂಬದಾಗಿ "ಬೆರ್ಲಿನರ್ ಟೇಗೆಬ್ಲಾಟ್" ಪತ್ರಿಕೆಯ ಬಾತ್ಮಿದಾರರು ಬರೆಯುವರು.

ಕೆಂಪಾಗ್ನೆಯಲ್ಲಿ ಫ್ರೆಂಚರು ಜಯಪ್ರದರಾಗುತ್ತಿರುವರು ನಿನ್ನೆಯ ದಿನ ಮಿತ್ರರ ೬ ವಾಯುನಾವೆಗಳು ಒಸ್ಟೆಂಡಿನ ಮೇಲೆ ಹಲ್ಲಾ ಮಾಡಿದವು. ಎರಡು ನಾವೆಗಳ ಪೆಟ್ರೋಲ್ ಗಟ್ಟಿಕಟ್ಟಿದ್ದರಿಂದ ಅವು ಹಿಂತೆರಳಿದವು. ಉಳಿದ ನಾವೆಗಳು ೧೧ ಬೊಂಬುಗಳನ್ನು ಒಸ್ಟೆಂಡಿನ ಜಲಂತರ್ಗಾಮಿ ನಾವೆಗಳ ದುರುಸ್ತಿ ಮಾಡುವ ಸ್ಥಳಕ್ಕೂ ೪ ಬೊಂಬುಗಳನ್ನು ಜರ್ಮನ ಸೇನೆಯ ಮುಖ್ಯ ಠಾಣ್ಯಕ್ಕೂ ಹಾಕಿ ಹಿಂದೆರಳಿರುವವು.

ಜರ್ಮನರ ಒಂದು ಜೆಪಲೀನ್ ನಾವೆಯು ಪೂರ್ಣವಾಗಿ ಹಾಳಾಗಿರುವದು. ಇದರ ೪೨ ನಾವಿಕರ ಪೈಕಿ ೧೭ ಮಂದಿ ಹತರಾಗಿರುವರು.

ಸುವಾಲ್ಕಿ ಪ್ರಾಂತ್ಯದಿಂದ ಜರ್ಮನರು ಹಿಂದರಿದಿರುವರು ರುಶ್ಯನರು ಮರಿಯಂಪೋಲ್; ಸಿಮ್ನೊ, ಅಗೊಸ್ಟೊವೊ ಪ್ರಾಂತ್ಯದಲ್ಲಿ ಕದನಕ್ಕೆ ಮುಂದೊತ್ತಿರುವರು. ಜರ್ಮನರ ಮುಂದೊತ್ತುವಿಕೆಯು ಪಿಲಿಟ್ಸ ನದಿಯ ಸಮೀಪ ರುಶ್ಯನರಿಂದ ತಡೆಯಲ್ಪಟ್ಟಿರುವದು. ಆಸ್ಟ್ರಿಯನರ ಒಂದು ಸೇನೆಯು ಕರ್‌ಪಥೇನಿಯದಲ್ಲಿ ರುಶ್ಯನರಿಗೆ ಶರಣಾಗತವಾಗಿದೆ. ರುಶ್ಯನರ "ಬ್ಲೆಕ್ ಸೀ" ಹಡಗುಪಡೆಯು ಜೆತೆಗ್ಯೂಲ್ಡಾಕ್, ಎರೆಗ್ಲಿ ಕಿಲಿವಿಲಿ, ಮತ್ತು ಕೊಜ್ಲಾನ್ ಎಂಬ ಸ್ಥಳಗಳಿಗೆ ಗುಂಡು ಹಾರಿಸಿ ಬತ್ತೇರಿಗಳನ್ನು ಮೌನ ಪಡಿಸಿ, ೮ ಹಡಗಗಳನ್ನು ಮುಣುಗಿಸಿರುವದು.

ಗೊರ್ಡನದಲ್ಲಿ ಜರ್ಮನರು ವಿಶೇಷ ನಷ್ಟಪಟ್ಟಿರುವರು. ರುಶ್ಯನರು ಜರ್ಮನರ ಫಿರಂಗಿ ಇತ್ಯಾದಿಗಳ ಸಹಿತ ಸಾವಿರಕ್ಕಿಂತಲೂ ಹೆಚ್ಚಿಗೆ ಸೇನಿಕರನ್ನು ಸೆರೆ ಹಿಡಿದಿರುವರು. ಗುಡ್ಡವನ್ನು ಕಾಪಾಡುವ ಕೆಲಸದಲ್ಲಿದ್ದ ಜರ್ಮನರ ೨೧ನೇ ಉತ್ಕೃಷ್ಟ ಸೇನೆಯಲ್ಲಿ ೧೨ ಸಾವಿರ ಮಂದಿ ನಷ್ಟವಾಗಿರುವರು. ರುಶ್ಯನರು ಈ ೨೦೦೩ ಜರ್ಮನರನ್ನು ಗ್ರಾಮದಿಂದ ಗ್ರಾಮಕ್ಕೆ ಓಡಿಸಿ [illegible] ಒಂದು ಕಡೆ

ಯಲ್ಲಿಯೂ ಜಯಪ್ರದರಾದರು. ಜರ್ಮನರು ಒಸಿವಿಟಸಲ್ಲಿದ್ದ ತಮ್ಮ ೧೨ ಅಂಗುಲ ಹೊವ್ವಿಜರ್ ಫಿರಂಗಿಯನ್ನು ರುಶ್ಯನರು ಸ್ವಾಧೀನ ಪಡಿಸಿಕೊಂಡಾರೆಂಬ ಭಯದಿಂದ ಅದನ್ನು ಹಿಂದಕ್ಕೆ ತೆಗೆದಿರುವರು ಎಂತ ಪ್ರಕಟವಾಗಿದೆ

ತಾ. ೧೧ನೇ ಮಾರ್ಚಿ.

ಮಾರ್ಚಿ ತಾ ೪ರಲ್ಲು ಡರ್ಡನೆಲ್ಸಿನಲ್ಲಿ ಬ್ರಿಟಿಷ ನೌಕಾವಳಿಯು ಮೇಲೆ ಹಲ್ಲಾ ಮಾಡಿದರು ಬ್ಲೂಜಕೆಟ್ ಸೇನಿಕರಲ್ಲಿ ೩ ಮಂದಿ ಹತರಾಗಿರುವರು, ೬ ಮಂದಿ ಗಾಯಬಡೆದಿರುವರು. ನೌಕಾವಳಿ ಸೇನಿಕರ ಪೈಕಿ ೨೨ ಮಂದಿ ಹತರಾಗಿರುವರು, ೨೨ ಮಂದಿ ಗಾಯಬಡೆದಿರುವರು, ೩ ಮಂದಿ ಕಾಣೆಯಾಗಿರುವರು.

ಜರ್ಮನರ ಜಲಂತರ್ಗಾಮಿ ನಾವೆಗಳು ೩ ವ್ಯಾಪಾರದ ಹಡಗುಗಳನ್ನು ಮುಣುಗಿಸಿದ ವಾರ್ತೆ ಬಂದಿರುವದು. "ಎಲಿನ್ ಮಕ್ರೆ" ಎಂಬ ಹಡಗವು ಜರ್ಮನರ ಜಲಂತರ್ಗಾಮಿ ನಾವೆಯ ಉಪಟಳದಿಂದ ತಪ್ಪಿಸಿಕೊಂಡು ಬಂದಿರುವದು

ಜರ್ಮನರ ಒಂದು ಜಲಂತರ್ಗಾಮಿ ನಾವೆಯು ಮುಣುಗಿಸಲ್ಪಟ್ಟಿರುವದು

ವಿಸ್ಟುಲ ಮತ್ತು ನಿಮೆನಿನಲ್ಲಿ ಕಠಿಣ ಕಾಳಗವು ನಡೆದಿರುವದು ಕೆಲ್ನೊ ಮತ್ತು ಲೋಮ್ಸದಾರಿಗಳಲ್ಲಿ ಮೇಲ್ಬಾಯಿದ ಜರ್ಮನರು ಹಿಮ್ಮೆಟ್ಟಿರುವರು

ತಾ. ೧೨ನೇ ಮಾರ್ಚಿ.

ಫೆಬ್ರವರಿ ತಾ. ೧೮ರಿಂದ ಈ ವರೆಗೆ ಜರ್ಮನರ ೧೧ ಜಲಂತರ್ಗಾಮಿ ನಾವೆಗಳು ನಾಶವಾದವೆಂತ ಜರ್ಮನ್ ನೌಕಾವಳಿ ಮಂಡಲಿಯಲ್ಲಿ ವಾರ್ತೆ ಇದೆ ಎಂತಲೂ ನಾಲ್ಕು ಜಲಂತರ್ಗಾಮಿ ನಾವೆಗಳು ನಾಶವಾದ ವಿಷಯವನ್ನು ಜರ್ಮನ ಸರಕಾರದವರು ಒಪ್ಪಿರುವರೆಂದೂ ಡೈಲಿ ಮೈಲ್ ಪತ್ರಿಕೆಗೆ ಕೊಪೆನ್‌ಹೇಗೆನಿಂದ ವಾರ್ತೆ ಬಂದದೆ

ಫ್ರೆಂಚರ ಒಂದು ಟ್ರವಲರ್ ದೋಣಿಯು ಜಲಂತರ್ಗಾಮಿ ನಾವೆಯಿಂದ ಮುಣುಗಿಸಲ್ಪಟ್ಟಿರುವದು.

ಬೆಲ್ಜಿಯಮಿನಲ್ಲಿ ನ್ಯೂಪೋರ್ಟಿನ ಮೇಲೆ ಜರ್ಮನರು ೪೨ ಸೆಂಟಿಮೀಟರ್ ಫಿರಂಗಿಯಿಂದ ಗುಂಡುಹಾರಿಸ ಪ್ರಾರಂಭಿಸಿದರು. ಬ್ರಿಟಿಷ ಸೇನೆಗೆ ಫ್ರೆಂಚರ ಫಿರಂಗಿಗಳು ಸಹಾಯವಾಗಿದ್ದು ಲೈಸ್ ಮತ್ತು ಲಾಬಸ್ಸೆ ಕಾಲುವೆಯ ಮಧ್ಯೆ ಹೆಚ್ಚಿನ ಜಯಪಡೆದರು ಬ್ರಿಟಿಷರು ನ್ಯೂವೆಚಪಲ್ಲೆ ಎಂಬ ಗ್ರಾಮವನ್ನು ಸ್ವಾಧೀನ ಮಾಡಿಕೊಂಡರು. ೨೫೦೦ ಮೀಟರ್ ಕಂದಕಗಳು ಬ್ರಿಟಿಷರ ಸ್ವಾಧೀನವಾದವು ಜರ್ಮನರು ಕೆಂಪಾಗ್ನೆಯಲ್ಲಿ ತಮಗಾದ ನಷ್ಟವು ಬಹು ವಿಶೇಷವಾದ್ದದಾಗಿರುವದೆಂಬದಾಗಿ ಒಪ್ಪಿಕೊಂಡಿರುವರು.

ಇಂಗ್ಲಾಂಡಿಗೆ ಕೆನಡಾ ಮತ್ತು ಆಸ್ಟ್ರೇಲಿಯ ದೇಶಗಳಿಂದ ಹೊಸ ಸೇನೆಗಳು ಬಂದು ತಲಪಿರುವವು

ತಾ. ೧೪ ಮಾರ್ಚಿ.

ಫ್ರೆಂಚರ ಅಲ್ಜೀರಿಯನ್ ಮತ್ತು ಫ್ರೆಂಚ ಸೇನೆಯು ಡರ್ಡನೆಲ್ಸಿಗೆ ಬರುತ್ತದೆಂಬದಾಗಿಯೂ ಈ ಸೇನೆಯ ಒಂದಂಶವು ದಾರಿಯಲ್ಲಿದೆಂದೂ ಪ್ರಕಟವಾಗಿರುವದು.

ಮಿತ್ರರ ನೌಕಾವಳಿಯು ಸ್ಮಿರ್ನದ ಮೇಲೆ ಹಲ್ಲಾ ಮಾಡುವದಾದರೆ ಪಟ್ಟಣವನ್ನು ಕಂದಕವಾಗಿ ಮಾರ್ಪಡಿಸಬೇಕಾದುದರಿಂದ ಪಟ್ಟಣ ನಿವಾಸಿಕರು ಪಟ್ಟಣವನ್ನು ಬಿಟ್ಟು ಒಳಪ್ರದೇಶಕ್ಕೆ ಹೋಗಬೇಕಾಗಿ ಸ್ಮಿರ್ನದ ವಾಲಿಯು ಪ್ರಕಟಿಸಿರುವನು ಆದರೆ ಪಟ್ಟಣದಲ್ಲಿ ಒಂದು ತಟಸ್ಥ ಪ್ರಾಂತ್ಯವನ್ನು ಏರ್ಪಡಿಸುವದು ವಿಹಿತವೆಂತ ಅಲ್ಲಿರುವ ಕೌನ್ಸೆಲ್ಲರುಗಳು ಆಲೋಚನೆ ಕೊಟ್ಟಿರುವರು.

ಜರ್ಮನರ ಪ್ರಿನ್ಸ್ ಇಟಿಲ್ ಕ್ರೂಜರ್ ನಾವೆಯು ಸುಮಾರು ೩೦೦ಕ್ಕಿಂತಲೂ ಹೆಚ್ಚಿನ ಪ್ರಯಾಣಿಕ ಮತ್ತು ನಾವಿಕರ ಕೂಡೆ ನ್ಯೂಪೋರ್ಟಿಗೆ ಬಂದು ತಲಪಿರುವದು. ಇದು ೮ ಹಡಗಗಳನ್ನು ಮುಣುಗಿಸಿರುವದು. ಈ ಪೈಕಿ ೩ ಬ್ರಿಟಿಷರದ್ದು, ೩ ಫ್ರೆಂಚರದ್ದು, ಒಂದು ಅಮೇರಿಕದ್ದು ಮತ್ತೊಂದು ರುಶ್ಯನರದ್ದು.

ಜರ್ಮನರ ಜಲಂತರ್ಗಾಮಿ ನಾವೆಯು ಬೆಯ್ಯಾನೋ ಎಂಬ ಕ್ರೂಜರ್ ನಾವೆಯನ್ನು ಮುಣುಗಿಸಿರುವದು.

ಭಾರತೀಯ ಸೇನೆಯು ನಿನ್ನೆಯ ದಿನ ಮುಕ್ಯಾಲು ಮೈಲು ರಣರಂಗದಲ್ಲಿ ಮುಂದರಿದು ಅಲ್ಲಿದ್ದ ಶತ್ರುಗಳ ಎಲ್ಲಾ ಕಂದಕಗಳನ್ನು ವಶಮಾಡಿಕೊಂಡಿರುವರು. ಅವರ ಬಲ ಮತ್ತು ಎಡಕಡೆ

ಯಲ್ಲಿದ್ದ ಸೇನೆಗಳೂ ಒತ್ತಾಸೆಯಾಗಿದ್ದು ಜರ್ಮನರ ೭೦೦ ಸೇನಿಕರನ್ನು ಸೆರೆಹಿಡಿದಿರುವರು. ಬ್ರಿಟಿಷರ ವಾಯುನಾವೆಯು ಕೋರ್ಟ್ರಾಯಿ ಮತ್ತು ಮೆನಿನ ರೈಲ್ವೇ ಜಂಕ್ಷನನ್ನು ಹಾಳುಮಾಡಿರುವರು.

ತಾ. ೧೫ ಮಾರ್ಚಿ.

ಬ್ರಿಟಿಷರ ಯುದ್ಧ ನಾವೆಗಳು ಬುಲೆರ್ ಮೇಲೆ ಹಲ್ಲಾ ಮಾಡಿರುವವು.

ಜರ್ಮನರ ಪ್ರಿನ್ಸ್‌ವಿಲ್‌ಹೆಲ್ಮ್ ಕ್ರೂಜರ್ ನಾವೆಯು ಫ್ರೆಂಚರ ಒಂದು ನಾವೆಯನ್ನು ಮುಣುಗಿಸಿರುವದು

ಜರ್ಮನರ "ಡ್ರೆಸ್‌ಡೆನ್" ಕ್ರೂಜರ್ ನಾವೆಯು ಬ್ರಿಟಿಷರ "ಕೌನ್‌ವೇ ಕೆಸ್ಲ್" ಎಂಬ ನಾವೆಯನ್ನು ಮುಣುಗಿಸಿರುವದು.

ಯುದ್ಧ ಪ್ರಾರಂಭವಾದಂದಿನಿಂದ ಬ್ರಿಟಿಷರ ೫೪ ವ್ಯಾಪಾರ ಹಡಗಗಳು ಜರ್ಮನರ ಕ್ರೂಜರ್ ನಾವೆಗಳಿಂದ ಹಿಡಿಯಲ್ಪಟ್ಟವು. ೧೨ ನಾವೆಗಳು ಸಿಡಿಮದ್ದಿನ ಗಣಿಗೆ ತಾಗಿ ನಾಶವಾದವು. ೨೨ ನಾವೆಗಳು ಜಲಂತರ್ಗಾಮಿ ನಾವೆಯಿಂದ ನಾಶಮಾಡಲ್ಪಟ್ಟವು. ಬ್ರಿಟಿಷರ ಯುದ್ಧನಾವೆಗಳಲ್ಲಿ ೪೭ ನಾಶವಾಗಿರುವವೆಂತ ಪ್ರಕಟವಾಗಿದೆ ಬ್ರಿಟಿಷ ಕರಾವಳಿಗೆ ಬಂದು ಹೋದ ಹಡಗಗಳ ಸಂಖ್ಯೆ ೪೦,೭೪೫೦, ಇವುಗಳಲ್ಲಿ ಎಲ್ಲಾ ದೇಶದವುಗಳೂ ಸೇರಿದ್ದವು.

ಜರ್ಮನರ ಜಲಂತರ್ಗಾಮಿ ನಾವೆಯು ಸ್ಕಾರ್‌ಬರೋ ಸಮೀಪ ಸ್ವಿಡನ್ ದೇಶದ ಒಂದು ನಾವೆಯ ಮೇಲೆ ಹಲ್ಲಾ ಮಾಡಿರುವದು. ೬ ಮಂದಿ ಮುಣುಗಿ ಸತ್ತರು. ಜಲಂತರ್ಗಾಮಿ ನಾವೆಗಳಿಂದ ಮುಣುಗಿಸಲ್ಪಟ್ಟ ೭ ನಾವೆಗಳ ಹೆಸರುಗಳು ಪ್ರಕಟವಾಗಿರುವದು.

ವಿಸ್ಟುಲ ಮತ್ತು ನಿಮೆನಿನಲ್ಲಿ ೩೦ ಮೈಲು ವಿಸ್ತೀರ್ಣದ ರಣರಂಗದಲ್ಲಿ ಕದನವು ನಡೆಯುತ್ತಿದೆ. ಮುಂದರಿಯಲು ಪ್ರಯತ್ನಿಸಿದ ಶತ್ರುಗಳು ಪ್ರತಿ ಒಂದು ಕಡೆಯಲ್ಲಿ ಅಟ್ಟಲ್ಪಟ್ಟಿರುವರು. ರುಶ್ಯನರು ಪ್ರಿಜೆಮ್ಮಿಸ್ಲಿನ ಒಂದು ಗ್ರಾಮದ ಮೇಲೆ ಪಕ್ಕನೇ ಬಿದ್ದುದರಿಂದ ಅಲ್ಲಿದ್ದ ಆಸ್ಟ್ರಿಯನರು ಶರಣಾಗತರಾಗಿರುವರು.

ಉತ್ತರ ಹಿಂದೂಸ್ಥಾನ.

ಆಗ್ರಾ ದೇವಸ್ಥಾನದ ಕೊಲೆ ಮೊಕದಮೆಯಲ್ಲಿ ಫಾಶಿಶಿಕ್ಷೆ ವಿಧಿಸಲ್ಪಟ್ಟ ಮೋತಿ ಚಂದನು ಮಾಡಿಕೊಂಡ ಕ್ಷಮಾಪಣೆ ಅರ್ಜಿಯು ತಳ್ಳಿ ಹಾಕಲ್ಪಟ್ಟಿರುವದು.

ಹೌರದ ಜನರಲ್ ಆಸ್ಪತ್ರಿಯಲ್ಲಿ ದಾದಿಗಳ ಬಗ್ಗೆ ವಸಾಹತಿಗಳನ್ನು ಕಟ್ಟುವರೆ ರಾಯಿಬಹದ್ದೂರ ಜೋತಿಕುಮಾರ ಮುಕರ್ಜಿಯವರು ೩೦ ಸಾವಿರ ರೂಪಾಯಿ ದಾನ ಮಾಡಿರುವರು.

ಕಲ್ಕತ್ತಾ ಯುನಿವರ್ಸಿಟಿ ಕನ್‌ವೋಕೇಶನ್ ದಿವಸ ವೈಸರಾಯಿ ಪ್ರಭುಗಳವರು ಮಾತನ್ನಾಡುವಾಗ ತಾನು ಯುನಿವರ್ಸಿಟಿ ಚಾನ್ಸಲ್ಲರಾಗಿ ಈ ಮಹತ್ವವಾದ ದಿವಸದಲ್ಲಿ ಅಧ್ಯಕ್ಷನಾಗಿರುವದು ಕಡೇ ಸಂದರ್ಭವಾಗಿದೆಂದು ಹೇಳಿರುವರು.

ಹಿಂದೂಸ್ಥಾನದ ಫಿನೇನ್ಸ ಇಲಾಖೆಯಲ್ಲಿ ಖಾಲಿ ಬಿದ್ದ ಹುದ್ದೆಗೆ ಈ ವರ್ಷ ಯುದ್ಧದ ದೆಸೆಯಿಂದ ಇಂಗ್ಲಾಂಡಿನಿಂದ ಹುದ್ದೆದಾರರನ್ನು ಕಳುಹಿಸುವದು ಸ್ಟೇಟ್ ಸೆಕ್ರಟರಿಯವರಿಗೆ ಅಸಾಧ್ಯವಾದುದರಿಂದ ವೈಸರಾಯ ಪ್ರಭುಗಳವರು ಈ ಇಲಾಖೆಯಲ್ಲಿ ಪ್ರಿ[illegible] ಬೇಶನರಿಯಾಗಿದ್ದ ರಾ। ಟಿ. ಆರ್. ಪಂಚಾಪೆಗಸನ್‌ರವರನ್ನು ಈ ಹುದ್ದೆಗೆ ಆರಿಸಿರುವರು.

ಮಾನ್ಯ ಗೋಖಲೆಯವರ ಮರಣದಿಂದ ವೈಸರಾಯ ಕೌನ್ಸಿಲಿನಲ್ಲಿ ಖಾಲಿ ಬಿದ್ದ ಸ್ಥಳಕ್ಕೆ ಮಿ। ಎಮ್. ಎ. ಜಿನ್ನರವರು ಉಮೇದ್ವಾರರಾಗಿ ನಿಂತಿರುವರೆಂಬ ವಾರ್ತೆ ಇತ್ತು. ಆದರೆ ತಾನು ಉಮೇದ್ವಾರನಲ್ಲವೆಂತ ಮಿ। ಜಿನ್ನರವರು ಪ್ರಕಟಿಸಿರುವರು.

ಫೆರೋಜಪುರದ ಚೇತ್‌ಸಿಂಗ್ ಎಂಬ ಒಬ್ಬ [illegible] ತನ್ನನ್ನು ರಣರಂಗಕ್ಕೆ ಕಳುಹಿಸುವರೆಂಬ ಭಯದಿಂದ ರೆಜಿಮೆಂಟಿನಿಂದ ತಪ್ಪಿಸಿಕೊಂಡದ್ದರಿಂದ ಇವನಿಗೆ ಯುದ್ಧ [illegible] [illegible] ೧೧ [illegible] ಬಂದೋ[illegible]ಯನ್ನು [illegible]

ಲುಧಿಯಾನದಲ್ಲಿ ಪೋಲಿಸರು ವಿಶೇಷ ಸಾಹಸಪಟ್ಟು ಕೊಮಗಾಟಮಾರು ಹಡಗದಲ್ಲಿ ಹಿಂದೆ ಬಂದವರಲ್ಲಿ ತಪ್ಪಿಸಿಕೊಂಡವರನ್ನು ಪತ್ತೆ ಮಾಡಿದರು. ಪೋಲಿಸರಿಗೆ ಅವರ ಕೂಡೆ ೬ ದೊಡ್ಡ ಬೋಂಬುಗಳೂ, ಒಡದು ಹೋದ ಸೋಡ ಬಾಟ್ಲಿಗಳ ತುಂಡುಗಳೂ ಸಿಕ್ಕಿದವು. ಪೋಲಿಸರು ಕೈಲವ ವಾಲ್‌ಸಿಂಪಸನೆಂಬವನನ್ನು ಕೈದ ಮಾಡಿರುವರು. ಈ ಪಿತೂರಿಯಲ್ಲಿ ಸೇರಿದ್ದನೆಂಬ ಅನುಮಾನದಿಂದ ವತ್ಸದಸ್ ಸಿಂಪಸನೆಂಬವನೂ ಕೈದು ಮಾಡಲ್ಪಟ್ಟಿರುತ್ತಾರೆ.

~~~~~

"ಕೊಮಗಾಟಮಾರು ಸಂಬಂಧದಲ್ಲಿ ಕೈದ ಮಾಡಲ್ಪಟ್ಟವರು ಸಿ ಥ್ ವಿದ್ಯಾರ್ಥಿಗಳಿಂದ ತಕ್ಕ ಬದ್ರತೆ ತಕೊಂಡು ಅವರನ್ನು ಮುಂಬಾಯಿ ಸರಕಾರದವರು ಬಿಟ್ಟರೆಂದು ಎಂದು ಕೈಸರೇ ಬಾದಿನ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~~~

ಮೆ! ಬೀಟ್‌ಕ್ರೋಪ್ಟ್ ಐ ಸಿ ಎಸ್‌ರವರ ಕಲ್ಕತ್ತಾ ಹೈಕೋರ್ಟಿನ ಜಡ್ಜರಾಗಿ ನೇಮಿಸಲ್ಪಟ್ಟಿದ್ದಾರೆ.

~~~~~

ಬಿಕಾನಿರ್ ಮಹಾರಾಜರವರು ವೈಸರಾಯರವರ ಅಥಿತಿಗಳಾಗಿದ್ದು ತಾ ೧೩ರಲ್ಲಿ [illegible] ರು.

~~~~~

ಮ ಸಲ್ಮಾನ್ ಕೊ [illegible] ಸ ಬಾಯಿಯ [illegible] ವಹಿಗೆ ಸರ್ [illegible] ಹಾಕಿರುವರು.

~~~~~

ಮ ಗ ಧಿಯವರು ಕ [illegible] ಸಹಿತ ಹೌರಕ್ಕೆ ಚಿತ್ತೈಸಿದರು. ಮೆ! ಭೂಪೆ [illegible] ಮೊದಲಾದವರು ಅವರನ್ನು ಸ್ವಾಗತ ಮಾಡಿಕೊ [illegible] ಅನೇಕ ಬ [illegible] ಯುವಕರ್ [illegible] ಗಾಂಧಿಯವರ [illegible] ಗಾಡಿಯಲ್ಲಿ ಕೂಳ್ಳಿರಿಸಿ ಗಾಡಿಯನ್ನು ತಾವೇ ಎಳಕೊಂಡು ಹೋಗಿ [illegible] ಸ ದರ್ಶನ ಮಾಡಿಸಿದರು. ಆದಿತ್ಯವಾರ ಮೆ! ಗಾಂಧಿಯವರು ಕಲ್ಕತ್ತೆಯಿಂದ ಬಮುಂಕ್ಕೆ ಹೊರಟು ಹೋದರು.

~~~~~

ಮ [illegible] ನಡೆದ [illegible] ಜನ ಸಹಾಯಕ ಸಂಘದ ಸಭೆಯಲ್ಲಿ ಮುಂಬಾಯಿ ಗವರ್ನರ ಪ್ರಭುಗಳಾದ ವಿಲಿಂಗ್ಡನವರು ಈ ರೀತಿ ಹೇಳಿದರು. [illegible] ನನ್ನ ಪ್ರದ [illegible] ಗಂಡಸಾಗಲೀ ಹೆಂಗಸಾಗಲೀ ಮುದುಕನಾಗಲೀ ಹುಡುಗಿಯಾಗಲೀ ಯಾವ ಜಾತಿ ಕುಲದವನಾದರೂ ತಿಳಿಲ್ಲ. ಅವನಿಗೆ [illegible] ಅವರಿಗೆ ಒಳ್ಳೇ ಜಾನ ಮತ್ತು ಬುದ್ಧಿ ಇದ್ದರೆ ಆ ಧವರನ್ನ ಮೇಲಕ್ಕೆ ಎತ್ತಿ ತನ್ನ ಸ್ವ ತ ದೇಶದ ಒಳ್ಳಿತಕ್ಕಾಗಿ ಕೆಲ [illegible] ತಕ್ಕ ಸಂದರ್ಭವನ್ನು ಕೊಡಲೇಬೇಕು. ಹೀಗೆ ಮ [illegible] ಒಂದು ಪ್ರಯತ್ನ ಮಾಡ [illegible] ಈ [illegible] ಸೊಸೈಟಿಯ.

~~~~~

ಕಲ್ಕತ್ತೆಯಲ್ಲಿ ಹೆಡ್‌ಮಾಸ್ತರರನ್ನು ಕೊಂದ [illegible] ಕೈದು ಮಾಡಲ್ಪಟ್ಟ ಇಬ್ಬರು ಯುವಕರನ್ನು ಒಬ್ಬೊಬ್ಬರಿಗೆ ೧೦ [illegible] ರೂಪಾಯಿ ಜಾಮೀನು ತಕೊಂಡು ಬಿಟ್ಟಿದ್ದಾರೆ. [illegible] ಒಡೆದ ಸೇವಕನು ಆಸ್ಪತ್ರಿಯಲ್ಲಿ ಮೃತನಾದನು.

~~~~~

ಮಧ್ಯಾಹ್ನ ೧॥ ಗಂಟೆಗೆ ಕಲ್ಕತ್ತೆಯ ಕ್ಲೈವ್ ಡಾ [illegible] ರಾಜೇಂದ್ರನಾಥ ಬೈಸ್‌ಕನೆಂಬ ಮಾರ್ವಾಡಿಯ [illegible] ಗೆ ಕೆಲವು ವಿದ್ಯಾರ್ಥಿಗಳು ನುಗ್ಗಿ ಬಲಾತ್ಕಾರದಿಂದ ಸುಮಾರು [illegible] ರೂಪಾಯಿ ಕ್ರಯ ಬಾಳುವ ಕರೆನ್ಸಿ ನೋಟುಗಳನ್ನು ಕೊಂಡು ಹೋಗಿರುವರು.

~~~~~

ಗೋವದಿಂದ ಕಳ್ಳತನವಾಗಿ ಕಳುಹಿಸಲ್ಪಟ್ಟ ಸುಮಾರು, ೧೩,೪೪೪ ರೂಪಾಯಿ ಕ್ರಯ ಬಾಳುವ ೩೫,೮೫೦ ಗ್ರೈನ್ ಕೊಕ್ಕೆನ್ ಎಂಬ ಅಫೀಮನ್ನು ಮುಂಬಾಯಿಯ ಕಸ್ಟಮ್ ಇಲಾಖೆಯವರು ಹಿಡಿದಿರುವರು.

~~~~~

ಬಂಗಾಳದಲ್ಲಿ ಸಂಸ್ಕೃತ ಪರೀಕ್ಷೆಯಲ್ಲಿ ಪಾಸಾದವರಿಗೆ ಬಿರುದುಗಳನ್ನು ಕೊಡುವ ಸಂದರ್ಭದಲ್ಲಿ ಕಾರ್ಮೈಖೇಲ್ ಪ್ರಭುಗಳವರು ಅಧ್ಯಕ್ಷರಾಗಿದ್ದು ಬಂಗಾಳಿ ಭಾಷೆಯಲ್ಲಿಯೇ ಭಾಷಣವನ್ನು ಕೊಟ್ಟರು. ಸಂಸ್ಕೃತ ಭಾಷೆಯು ಹಿಂದೂಸ್ಥಾನದ ವೈಭವವಾಗಿದೆ. ಕಲ್ಕತ್ತಾ ಸಂಸ್ಕೃತಾ ಬೋರ್ಡಿನಲ್ಲಿ ಪ್ರಾಚೀನ ಮತ್ತು ಬಹು ರಮ್ಯವಾದ ಈ ಭಾಷೆಯನ್ನು ಉನ್ನತಿಗೆ ತರಲು ಪ್ರಯತ್ನ ಪಡುವ ಈ ಮಾನ್ಯ ಉಪಾಧ್ಯಾಯರು ಸರಕಾರದಿಂದ ಮಾತ್ರವಲ್ಲ, ಹಿಂದೂಸ್ಥಾನದ ಎಲ್ಲಾ ಜನ ಸಮುದಾಯದಿಂದಲೂ ಮನ್ನಣೆಯನ್ನು ಹೊಂದಲು ಅರ್ಹರಾಗಿದ್ದಾರೆ. ನನ್ನ ಸರಕಾರವು ಈ ಬಗ್ಗೆ ೧೦,೦೦೦ ರೂಪಾಯಿ ಕೊಡಲು ನಿರ್ಣಯಿಸಿರುವದು ಎಂಬಿತ್ಯಾದಿ ಮಾತುಗಳನ್ನು ಕಾರ್ಮೈಖೇಲ್ ಪ್ರಭುಗಳವರು ಹೇಳಿದರು.

~~~~~

ಕಳ್ಳ ಮನೆಯವನು ಅವನು ತಾನೆಂದು ಕೊಂಡುಕೊಳ್ಳುವವನೆಂಬದಾಗಿ ಆಪಾದಿಸಲ್ಪಟ್ಟು [illegible] ಕಠಿಣ ಸಜಾ ವಿಧಿಸಲ್ಪಟ್ಟ ಪೂನೆಯ ವ [illegible] ಎಂಬವರನ್ನು ಪೂನೆಯ ಡಿಸ್ಟ್ರಿಕ್ಟ್ ಜಡ್ಜ [illegible] ವಿದ್ಯಾರ್ಥಿ ಓಕೆಯ [illegible] ನ್ಯಾಯ ಮಾಡಿದರು.

~~~~~

[illegible] ಶಾಸನ [illegible] ವತ್ತು [illegible] ವಿಧಾಯಕ ಸಭೆಯು ಆರಿಸಲ್ಪಟ್ಟ ಮೆಂಬರರಾಗಿದ್ದ ಬಹುಮಾನಪಟ್ಟ ಮೆ! ಚಿಮಾನ್‌ಲಾಲ ಹಿರಲಾಲ ಸೀತಲ್‌ವಾಡ ಬಿ ಎ ಎಲ್ ಎಲ್ ಬಿ ಯವರು ಗತಿಸಿದ ಮಾನ್ಯ ಗೋಖಲೆಯವರ ಬದಲಿ [illegible] ವಿಧಾಯಕ ಸಭೆಯ ಮೆಂಬರರಾಗಿ ಆರಿಸಲ್ಪಟ್ಟಿರುವರು.

~~~~~

ದಕ್ಷಿಣ ಹಿಂದೂಸ್ಥಾನ

~~~~~

ಇದೇ [illegible] ೧ನೇ [illegible] ಮದ್ರಾಸ್ ಸಂಸ್ಥಾನದ ಆಯವ್ಯಯಗಳ [illegible] ಪಟ್ಟಿ [illegible] ಆಲೋಚಿಸುವರೆ ಮದ್ರಾಸ್ ನ್ಯಾಯವಿಧಾಯಕ ಸಭೆಯು ಕೂಡಿಬ [illegible] ಈ ಸಭೆಯಲ್ಲಿ ಹೆಚ್ಚು ಕಡಿಮೆ ಎಲ್ಲಾ ಮೆಂಬರರು ಹಾಜರಿದ್ದರು. ದಕ್ಷಿಣ ಕನ್ನಡಾ ಮತ್ತು ಮಲಬಾರ್ ಜಿಲ್ಲೆಗಳ ಪರವಾಗಿ ಆರಿಸಲ್ಪಟ್ಟ ಹೊಸ ಮೆಂಬರ [illegible] ಕೆ [illegible] ರಾಮನ್ ಕವಲಪ್ಪಲ ಮ [illegible] ಬಹುಮಾನಪಟ್ಟ ಮೆ ಎಚ್ ಎಸ್ ದ [illegible] ಕ್ರಮ ಪ್ರಕಾರ ಆಸೀನರಾದರು.

ಮದ್ರಾಸ್ [illegible] ಆಫಿಸಲ್ಲಿ ೧೯೧೫ರಲ್ಲಿ ಮಾಡಿದ ಕಿವ [illegible] ವೈಸರಾಯ ಪ್ರಭುಗಳವರ ಅನುಮತಿ ದೊರಕಿರುವದೆಂಬದನ್ನು ಗವರ್ನರ ಪ್ರಭುಗಳವರು ತಿಳಿಯ ಹೇಳಿದರು. ಅನಂತರ ಬಹುಮಾನಪಟ್ಟ ಸರ್ ಹರೊಲ್ಡ ಸ್ಟೂವರ್ಟರವರ ೧೯೧೫-೧೬ನೆ ಇಸವಿಗಳ [illegible] ಆಯವ್ಯಯಗಳ ಪಟ್ಟಿಯನ್ನು ಸಭೆಯ ಮುಂದಿರಿಸಿದ. ಅನಂತರ ಬಹು ಮಾನಪಟ್ಟ ಮೆಂಬರುಗಳಿಂದ ಈ ವಿಷಯವಾದ ಚರ್ಚೆಯು ನಡಿಸಲ್ಪಟ್ಟಿತು.

~~~~~

ಮದ್ರಾಸ್ ಆಸ್ಪತ್ರಿ ಹಡಗವು ಇದೇ ತಾ ೧೮ರಲ್ಲು [illegible] ಹೊರಟು ಹೋಗಿರುವದು. ಈ ಹಡಗದಲ್ಲಿದ್ದ ಬಹುಮಾನಪಟ್ಟ ಡಾಕ [illegible] ನಾಯರವರು ಆಕ್ಷೇಪದ ಸಂಬಂಧ ರಾಜಿ ಕೊಟ್ಟರು.

ಮದ್ರಾಸಿ [illegible] ಮೆಜರ್ ಹಿಂಗ್‌ಸ್ಟನ್ ಮತ್ತು ಮಿಲಿಟರಿ ಸೆಕ್ರೆಟರಿಯಾದ ಕೆಪ್ಟನ್ ಎಲ್ಲಿನ್ಸ್‌ನ್‌ರವರು ಗವರ್ನರರ ಆಜ್ಞೆ ಪ್ರಕಾರ [illegible] ಗೆ ಹೋಗಿ "ಮದ್ರಾಸ್" ಆಸ್ಪತ್ರಿ ಹಡಗದ ಕನೆ [illegible] ಭೇಟಿಕೊಟ್ಟು, ಅಲ್ಲಿ ಮೂರು ದಿನಗಳನ್ನು ಕಳೆದ ಈ ಹಡಗವು ಮಾಡಿದ ಕೆಲಸಗಳ ಸವಿಸ್ತಾರವನ್ನು ಕೇಳಿಕೊಂಡು ಮದ್ರಾಸಿಗೆ ಹಿಂತಿರುಗಿರುವರು. ಗಾಯ ಒಡೆದವರಿಗೆ ಈ ಹಡಗದಲ್ಲಿ ತೃಪ್ತಿಕರವಾದ ಏರ್ಪಾಡ ನಡೆದಿರುವದೆಂತ ಇವರ ವಿಚಾರದಿಂದ ತಿಳಿದುಬರುತ್ತದೆ.

~~~~~

ದಕ್ಷಿಣ ಕನ್ನಡ.

~~~~~

ಮಾರಾಟಕ್ಕೆ ಇದೆ.

~~~~~

ಒಲ್ಮಾರ ಹೊಸರಸ್ತೆ ಡಾಕ್ಟರ್ ಪೀಟರ್ಸಿನವರ ಮನೆಯ ಎದುರಿಗೆ, ಇಜಬೆಲ್ಲ ತೇರೇಸ ಡಿ ಸಿಲ್ವಬಾಯಿಯ ಮನೆ, ಅನೇಕ ಫಲಮರಗಳು ಮತ್ತು ಬಾವಿ ಇರುವ ದೊಡ್ಡ ಹಿತ್ತಲು ಮಾರಲ್ಪಡುವದು. ಕ್ರಯ ೪೫೦೦ ರೂಪಾಯಿ. ಇಂಥಾ ಒಳ್ಳೆ ಭೂಮಿ ಇತ್ತಲಾಗೆ ಸಿಕ್ಕಲಿಕ್ಕಿಲ್ಲ. ಬೇಕಾದವರು ಒಂದು ನೋಡಬಹುದು.

ತಾ. 3—3—1915. } ಇಜಬೆಲ್ಲ ತೇರೇಸ ಡಿ ಸಿಲ್ವಬಾಯಿ.

~~~~~

NOTICE.

The First Canara High School Day will be celebrated on Saturday, the 3rd April 1915, instead of on Monday, the 5th April, owing to unavoidable circumstances.

M E Couchman Esquire, B. A I C S Collector of South Canara, has kindly consented to preside on the occasion.

All "OLD BOYS" of the School are requested to be present during the celebrations.

A Padmanabhaiya,

President,

School day Committee

——— o ———

ಮಂಜೇಶ್ವರ: — ಇಲ್ಲಿಯ ರಾಜರಸ್ತೆಯ ಕೆಲವು ಕಡೆಗಳಲ್ಲಿ ಸರಿಯಾಗಿ ಎದುರು ಎದುರಾಗಿ ಬರುವ ಜೋಡು ಗಾಡಿಗಳು ಒಂದಕ್ಕೊಂದು ಪಾರಾಗಲಿಕ್ಕೆ ಅಸಾಧ್ಯವಾಗುವಷ್ಟು ಬಹು ಇಕ್ಕಟ್ಟಾಗಿರುತ್ತಾ, ಈಗ ಇತ್ತಲಾಗ ಸದರಿ ರಾಜಮಾರ್ಗಗಳನ್ನು ಮಳೆಗಾಲದಲ್ಲಿ ದುರುಸ್ತಿಪಡಿಸಲಿಕ್ಕೆ ಲೋಕಲ್ ಫಂಡಿನವರು ಈಗಲೇ ತಯಾರಿಸುವ ಸಣ್ಣ ಸಣ್ಣ ಕಲ್ಲು ತುಂಡುಗಳ ರಾಶಿಗಳು ಅಲ್ಲಲ್ಲಿ ಮಾರ್ಗದ ಕಿನಾರೆಯಲ್ಲಿಯೇ ಇರಿಸುವದರಿಂದಲೂ ಇಂಥಾ ಕಲ್ಲುತುಂಡುಗಳ ರಾಶಿಗಳಿಲ್ಲದ ಇನ್ನು ಕೆಲವು ಸ್ಥಳಗಳಲ್ಲಿ ರಾಜರಸ್ತೆಯಲ್ಲಿಯೂ) ಗಾಡಿಗಳನ್ನು ಇಡಿಸುವದರಿಂದಲೂ ಈ ಕತ್ತಲೆ ಸಮಯ ರಾತ್ರಿಯಲ್ಲಿ ಆಮದು ರಪ್ತಾಗುವ ಜನರಿಗೆ ಬಹಳ ಸಂಕಷ್ಟವನ್ನುಂಟು ಮಾಡುತ್ತದೆ. ಗಾಡಿಗಳನ್ನು ಮಾರ್ಗದಲ್ಲಿಯೇ ಇರಗೊಡಿಸುವದು ನ್ಯೂಸೆನ್ಸ ಆಗುವದಿಲ್ಲವೇ? ಆದರೆ ಆಚೆಗೆ ಈಚೆಗೆ ಹೋಗುವ ಬರುವ ಪೋಲಿಸು ಡಿಪಾರ್ಟಮೆಂಟಿನವರು ಕಣ್ಣಾರೆ ಕಂಡು ಏನೊಂದು ಮಾಡದೆ ಯಾ ಗೌಜಿ ಕೂಡಾ ಮಾಡದೆ ಇರುವದು ನೋಡಿ ನ್ಯೂಸೆನ್ಸ ಆಗಲಿಕ್ಕಿಲ್ಲವೋ ಎಂತ ಸಂಶಯ ಹುಟ್ಟುತ್ತದೆ. ರಸ್ತೆಯಲ್ಲಿ ಬೆಳಕಿಗೆ ಒಂದು ಲಾಟಾನು ಸಹಾ ಇಲ್ಲದ ಈ ನಮ್ಮ ಮಂಜೇಶ್ವರದಲ್ಲಿ ಹೀಗೆ ಕಲ್ಲು ರಾಶಿಗಳನ್ನೂ, ಗಾಡಿಗಳನ್ನೂ ಇರಗೊಡಿಸುವದು ಆಮದು ರಪ್ತಾಗುವ ಜನರಿಗೆ ಬಹಳ ತೊಂದರೆಯನ್ನುಂಟುಮಾಡುತ್ತದೆ. ಆದ್ದರಿಂದ ಲೋಕಲ್ ಫಂಡಿನವರಾಗಲೀ ಪೋಲಿಸು ಮೇಲಾಧಿಕಾರಿಗಳಾಗಲೀ ನಮ್ಮಗಳಿಗೆ ಬಂದೊದಗಿದ ಈ ತೊಂದರೆಗಳಿಗೆ ತಕ್ಕ ನಿಗಾ ಇನ್ನಾದರೂ ಕೊಡದಿರಲಾರರೆಂದು ನಂಬುತ್ತೇವೆ.

ಇದೇ ಕಳೆದ ಜನವರಿ ತಿಂಗಳ ತಾ [illegible] ರಲ್ಲು [illegible] ರ್ಡ್ ಅಧಿಕಾರಕ್ಕೆ ಬಿಟ್ಟುಕೊಟ್ಟ ಶ್ರೀ ಸರಸ್ವತಿ [illegible] ಲಿಮೆಂಟರಿ ಬಾಲಿಕಾ [illegible]
~~~~~

ಟ್ರೇಂಡ ಸ್ಕೂಲ್ ಇನ್ಸ್‌ಪೆಕ್ಟೆಸರಾದ ಮಿಸ್. ಯು. ಎ. ಜೂಪೆ ದೊರೆಸಾನಿಗಳವರು ಇದೇ ಮ್ಹಾರ್ಜಿ ತಾ ೧೩ ರಲ್ಲು ಸದರಿ ಶಾಲೆಯನ್ನು ದಯಾಭಾವದಿಂದಲೂ ಪ್ರೀತಿಯಿಂದಲೂ ಸಂದರ್ಶಿಸಿ, ಸಂತೋಷಪಟ್ಟು ಇನ್ನು ಮುಂದೆ ಚಲೋ ರೀತಿಯೊಳ್ಳಿ ನಡೆಯುವ ಹಾಗೆ ಒಳ್ಳೇ ಬುದ್ಧಿವಾದಗಳನ್ನು ತಿಳಿಸಿ ಮರುದಿನ ಇಲ್ಲಿಯೇ ವಿಶ್ರಮಿಸಿ ತಾ. ೧೫ರಲ್ಲು ಲೋಕಲ್ ಟ್ರೈನಿನಲ್ಲಿ ನೀಲೇಶ್ವರಕ್ಕೆ ಚಿತ್ತೈಸಿದ ಸಂಗತಿ ತಿಳಿಸುವರೆ ಬಹಳ ಸಂತೋಷಪಡುತ್ತೇವೆ

ಇಲ್ಲಿಯ ಪಂಚಮರ ಶಾಲೆಯನ್ನು ಇದೇ ಕಳದ ಮಾರ್ಚಿ ೨ರ ಲಾಗಾಯಿತು ಬೋರ್ಡಿನವರು ತಮ್ಮ ಅಧಿಕಾರಕ್ಕೆ ಒಳಪಡಿಸಿರುತ್ತಾರೆಂತ ತಿಳಿಸುವರೆ ಕೂಡಾ ಸಂತೋಷ ಪಡುತ್ತೇವೆ

~~~~~~

ಬಂಟವಾಳ:—ನಂದಾವರದಲ್ಲಿರುವ ಪರೋಪಕಾರಿಯಾದ ತುಂಗನಾಯ್ಕರನ್ನು ಚೂರಿಯಿಂದ ತಿವಿದು ಕೊಂದ ಶವವು ೧೫ನೇ ದಿನ ಹೊಳೆಕರೆ ಹೊಗೆಯಲ್ಲಿ ಸಿಕ್ಕಿತು. ಈ ತಲಾಸಿಯನ್ನು ಒಂಟವಾಳ ಸಬ್ ಇನ್ಸ್‌ಪೆಕ್ಟರ್ ಮತ್ತು ಇತಪ್ಪ ಹೆಡ್ ಕನ್‌ಸ್ಟೇಬಲರು ಬಹು ಪ್ರಯತ್ನದಿಂದ ಮಾಡಿದರು. ಕೊಲೆಪಾತಕರು ತಲೆ ತಪ್ಪಿಸಿಕೊಂಡಿರುವರು. ಮೃತನು ಬಹು ಪುಣ್ಯಾತ್ಮರಾಗಿದ್ದರು

~~~~~~

ಪೊಳಲಿ.

ಇಲ್ಲಿ ಇದೇ ಕಳದ ತಾ. ೧೪ರಲ್ಲು ಶ್ರೀರಾಜರಾಜೇಶ್ವರಿ ದುರ್ಗಪರಮೇಶ್ವರಿ ದೇವಸ್ಥಾನದ ಕಾಲಾವಧಿ ಧ್ವಜಾರೋಹಣೋತ್ಸವವು ಕ್ರಮಪ್ರಕಾರ ನೆರವೇರಿತು. ಅನೇಕ ಸಾವಿರ ಜನರ ಸಮುದಾಯವಿದ್ದಾಗ್ಯೂ ಗ್ರಾಮಾಧಿಕಾರಿಗಳು ತಕ್ಕೆ ಬಂದೋಬಸ್ತು ಇಟ್ಟ ಕಾರಣ ಕಳವು ವಗೈರೆ ನಡೆಯಲಿಲ್ಲವೆಂದು ತಿಳಿಸುವರೆ ಸಂತೋಷಪಡುತ್ತೇವೆ.

~~~~~~

ಯಮ್ರಾಳ:—ಯಮ್ರಾಳ ತೆಂಕ ಗ್ರಾಮದ ವ್ಯಾಪಾರ ಅಂಗಡಿಯ ಹಾರೂನ್ ಸಹೇಬನ ಅಂಗಡಿಗೆ ಸುಮಾರು ೮ ಗಂಟೆ ರಾತ್ರಿಗೆ ಒಬ್ಬ ದಾರಿಗನು ಒಂದನು. ಸದರಿ ದಾರಿಗನನ್ನು ನೋಡುವಾಗ ಕೇಡಿಯ ನಮೂನೆ ಕಂಡ ಕಾರಣದಿಂದ ಅಂದರೆ ತಲೆಯಲ್ಲಿ ತೀರಾ ಜುಟ್ಟಿಲ್ಲದೆಯೂ, ಕಿವಿಯಲ್ಲಿ ಒಂಟ್ಟಿಲ್ಲದೆಯೂ ಸುಮಾರು ೨ ಗಂಟೆ ಸಮಯದ ವರೇಗೆ ಏನೊಂದೂ ಮಾತಾಡದೆಯೂ ಇದ್ದ ಕಾರಣದಿಂದ ಸದರಿ ಅಂಗಡಿ ಹಾರೂನ್ ಸಹೇಬನು ನಿನಗೆ ಎಲ್ಲಿ ಎಂತ ವಿಚಾರಿಸಿದನು. ಅದಕ್ಕೆ ಇವನು ತನಗೆ ಉದಿಯಾವರದಲ್ಲಿ ಎಂತ ಹೇಳಿದನು ಆಗ ಈ ಅಂಗಡಿಗಾರನು ಉದಿಯಾವರದ ಪರೇಲರ ಹೆಸರೇನು, ಮತ್ತು ಯಾರದು ಹೆಸರು ಗುರುತು ಉಂಟೋತ ಕೇಳಿದನು. ಅದಕ್ಕೆ ಅವನು ಒಂದು ಉತ್ತರವೂ ಕೊಡದೆ ಇದ್ದ ಕಾರಣದಿಂದ ಮತ್ತು ನನಗೆ ಉದಿಯಾವರದಲ್ಲಿಯೇ ಎಂತಲೂ ನನಗೆ ಮಲಗಲಿಕ್ಕೆ ಸ್ವಲ್ಪ ಸ್ಥಳ ಕೊಡಬೇಕೆಂತಲೂ ಕೇಳಿದ್ದರಿಂದ ಸದರಿ ಅಂಗಡಿಗಾರನು ಇವನು ನಿಜವಾದ ಕೇಡಿ ಎಂತ ತಿಳಿದು ಕೆಲವು ಜನರನ್ನು ಕರಿಸಿದನಂತರ ತೆಂಕ ಗ್ರಾಮದ ಪರೇಲರಲ್ಲಿ ಜನ ಕಳುಹಿಸಿದನು. ಸದರಿ ಪರೇಲರು ಕೂಡಲೇ ಜನಕಳುಹಿಸಿ ಕೇಡಿಯನ್ನು ಕರತರಿಸಿದರು. ಸದರಿ ಪರೇಲರು ವಿಚಾರಿಸಿದಲ್ಲಿಯೂ ನಿಜವಾದ ಸಂಗತಿ ಹೇಳಲೇ ಇಲ್ಲ, ಸ್ವಲ್ಪ ಬೆದರಿಸಿ ಕೇಳಿದರು. ಈಗ ಪೋಲಿಸರಿಗೆ ರಿಪೋರ್ಟು ಮಾಡುತ್ತೇನೆಂತ ಹೇಳಿದರು. ಅದಕ್ಕೆ ಉತ್ತರ ಕೊಡಲಿಲ್ಲ. ಕಡೆಗೆ ಪರೇಲರು ಈಗ ನಿನಗೆ ಮಾಫಿ ಬಿಡುತ್ತೇನೆ ನಿಜ ಹೇಳು ಎಂತ ಹೇಳಿದ ಕಾರಣದಿಂದ ಕೇಡಿಯು ನಿಜವೆಂದು ತಿಳಿದು ನನಗೆ ಮೂಲ್ಕಿಯಲ್ಲಿ ಎಂತ ಹೇಳಿದನು. ಸದರಿ ಪರೇಲರು ಮೂಲ್ಕಿಯಲ್ಲಿ ಎಲ್ಲಿ ಎಂತ ವಿಚಾರಿಸಿದರು ಅದಕ್ಕೆ ಕೇಡಿಯು ತಾನು ಬೇಲಾಡಿ ಗುತ್ತಿನ ತಿಮ್ಮಪ್ಪಸೆಟ್ರ ಮಗನಾದ ಗುರುವಪ್ಪಸೆಟ್ಟಿ ಎಂತ ಹೇಳಿದನು. ಇದಸ್ನೆಲ್ಲಾ ಮ ರಾ| ಪರೇಲ್ ಕುಮಾರರಾಯರವರು ತಿಳಿದು ಅವನನ್ನು ತನ್ನ ಮನೆಯಲ್ಲಿಯೇ ಕುಂಡ್ರಿಸಿ ಸದರಿಯವನು ದೊಡ್ಡ ಕೇಡಿ ಎಂತ ತಿಳಿದು ಕೂಡಲೇ ಪೋಲಿಸಿಗೆ ರಿಪೋರ್ಟು ಕೊಟ್ಟು ಮರುದಿವಸ ಪೋಲಿಸಿನವರು ೭ ಗಂಟೆ ಸಮಯಕ್ಕೆ ಅವನನ್ನು ಉಪ್ಪಿ ಸ್ಟೇಶನಿಗೆ ಕರಕೊಂಡು ಹೋಗಿರುತ್ತಾರೆ

~~~~~~

ಉಡುಪಿ:—ಈ ವರ್ಷ ಮಹಾಜನಗಳಲ್ಲ ಸೇರಿ ತಿರುಪತಿಯ ತಿರುಚಾನೂರಲ್ಲಿಯೂ, ರಾಘುವೇಂದ್ರ ಸ್ವಾಮಿಗಳ ಮಠದವರು ಮಂತ್ರಾಲಯದಲ್ಲಿಯೂ, ವ್ಯಾಸರಾಯ ಮಠದವರು ಸೋಶಲೆಯಲ್ಲಿಯೂ ಶ್ರೀ ಉತ್ತರಾದಿ ಮಠದವರು ಬೆಂಗಳೂರಲ್ಲಿಯೂ, ನಮ್ಮ ಜನ ಪಿ ಉಡುಪಿ ಅಷ್ಟ ಉಡುಪಿ ಸನ್ನಿಧಿಯೇ ಬೇಡಪ್ಪ ದ್ವೈತ ಮಹಾ ಸಭೆಗಳನ್ನು ನಡಿಸಿ ನೂರಾರು ಮಂದಿ ವಿದ್ಯಾರ್ಥಿಗಳಿಗೂ, ಬಹು ಮಂದಿ ವಿದ್ವಾಂಸರಿಗೂ, ಒಬ್ಬೊಬ್ಬರಿಗೂ ೨೦—೩೦—೪೦—೫೦ ರೂಪಾಯಿಗಳ ವರೆಗೂ ದಕ್ಷಿಣೆ ಸಂಭಾವನೆಗಳಗಳನ್ನು ಕೊಡಿಸಿ ಮಧ್ವ ಶಾಸ್ತ್ರ ಪ್ರವಚನಕ್ಕೆ ಪ್ರೋತ್ಸಾಹ ಕೊಡುವವರಾದರೂ ೮-೧೦ ಸಹಸ್ರ ಮಂದಿ ದೃಷ್ಟ ಜನಗಳೇ ಸೇರಿದ್ದರು. ಅನೇಕರು ನಾನಾ ರೂಪಗಳಿಂದ ಸಹಾಯ ಮಾಡಿ ಪಲಬಾಗಿಗಳಾದರು. ಮಠಾದಿಪತಿಗಳು ಸ್ವಾರ್ಥವಿಲ್ಲದೆ ಕೇವಲ ಸಾರಮಾರ್ಥಿಕ ದೃಷ್ಟಿಯಿಂದ ಸಚ್ಛಾಸ್ತ್ರ ವ್ಯಾಸಂಗಕ್ಕೆ ಈ ರೀತಿ ಪ್ರೋತ್ಸಾಹಿಸುವದು ಅತ್ಯಂತ ಶ್ಲಾಘನೀಯವಾಗಿದೆ. ಶ್ರೀ ಉತ್ತರಾದಿ ಮಠದವರು ಹಿಂದಕ್ಕೆ ಕಾಶಿಯಲ್ಲಿ ನಡಸಿದಂತೆ ತ್ರಿಮತಸ್ಥರಲ್ಲಿಯೂ ಇರತಕ್ಕ ವಿದ್ವಾಂಸರನ್ನೆಲ್ಲ ಕರಿಸಿ ಸಭಾ ನಡಿಸಿ ಬ್ರಹ್ಮಸೂತ್ರ ಗೀತಾ ಮೊದಲಾದವುಗಳಲ್ಲಿ ವಾಚ್ಯಾರ್ಥ ನಡಿಸಿ ದ್ವೈತ ವೇದಾಂತವೇ ಸರ್ವೋತ್ಕೃಷ್ಟ ವಾದದ್ದೂ ಸಯುಕ್ತಿಕವೂ ಸಪ್ರಮಾಣಿಕವೂ ಆಗಿರುವದಾಗಿ ಸ್ಥಾಪಿಸಿದರೆಂಬ ವಾರ್ತೆಯು ಸಂತೋಷಕರವಾಗಿಯದೆ ಆದರೆ ಈ ಉತ್ತರಾದಿ ಮಠದವರು ಈಗ ೬೫ ವರ್ಷಗಳಿಂದಲೂ ಯಾವದೊಂದು ತೊಂದರೆಯೂ ಇಲ್ಲದೆ ಸಾಂಗೋಪಾಂಗವಾಗಿ ನಡಿಯುತ್ತಿದ್ದ ತಿರುಪತಿ ಮಹಾಸಬೆಯಲ್ಲಿ ತೀರ್ಥದ ಚರ್ಚೆಯನ್ನು ಎಬ್ಬಿಸಿ ಅಂದರೆ ತೀರ್ಥವು ಪ್ರಥಮದಲ್ಲಿ ತಮ್ಮ ಮಠಕ್ಕೆ ಶಿಕ್ಕಲೇಬೇಕೆಂಬ ವಾದವನ್ನು ನಡಿಸಿ ಇವರ ಸಮಾನಸ್ಕರಾದ ಒಂದು ವಿದದಲ್ಲಿ ಪ್ರಥಮ ಹಕ್ಕಿನವರಾದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದವರಿಗೂ, ಪ್ರವೇಶವಿಲ್ಲದಂತೆ ಮಾಡಿದ್ದೂ, ಮಂತ್ರಾಲಯ ಸಭೆಗೆ ಹೋಗಿದ್ದ ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ತಾವು ಪ್ರವೇಶ ಕೊಡುವದಿಲ್ಲವೆಂಬ ಕಟ್ಟು ಮಾಡಿದ್ದೂ ದೊಡ್ಡ ಕೊರತೆಯಾಗಿದೆ ತಮ್ಮ ತಮ್ಮೊಳಗೆ ಏನಿದ್ದರೂ ವಿದ್ಯಾರ್ಥಿಗಳಲ್ಲಿ ಇದು ತೋರಿಸಿದ್ದು ನ್ಯಾಯ ವಿರುದ್ಧವಾಯಿತು. !ಮುಖ್ಯವಾಗಿ ಕಲಿಕಾಲ ಸಂಪೂರ್ಣವು ಫಲವು ಹ್ಯಾಗೆತಾನೆ ಸ್ರಾಪ್ತವಾದೀತು!

ಇಲ್ಲಿ ಇದೇ ಚೈತ್ರ ಶು, ೯ ಲಾಗ್ಯಾತು ೧೫ ಪರ್ಯಂತರ ಮದ್ರಾಸಿನ ಪೌಂಡರೀಕಯಾಗಿ ದೀಕ್ಷಿತ ಗೋಪಾಲಾಚಾರ್ಯರೆಂಬವರು ಒಂದು ಮುಹಾ ಯಾಗವನ್ನು ನಡಿಸುತ್ತಾರೆಂಗಿ ತಿಳಿದುಬರುತ್ತದೆ.

ಇದೇ ತಾ. ೧೨ರಲ್ಲು ಉಡ್ಪಿ ಕ್ರಿಶ್ಚಿಯನ್ ಹೈಸ್ಕೂಲಿನ ಹೊಸ ಕಟ್ಟೋಣದ ಪ್ರವೇಶ ಸಮಾರಂಭವು ಸಾಯಂ ಕಾಲ ೫|| ಗಂಟೆಗೆ ಬಹು ವಿಜೃಂಭಣೆಯಿಂದ ನಡೆಯಿತು. ೩೫,೦೦೦ ರೂಪಾಯಿ ಖರ್ಚು ತಗಲಿಸಿ ಕಟ್ಟಿಸಿದ ಈ ಕಟ್ಟೋಣದ ಭವ್ಯತೆಯನ್ನು ಇಲ್ಲಿ ಪ್ರತ್ಯೇಕ ಹೇಳಬೇಕೆಂತಿಲ್ಲ ಪ್ರವೇಶ ಸಮಾರಂಭವು ನಿಯಮಿತ ಕಾಲಕ್ಕೆ ಪ್ರಾರಂಭವಾಯಿತು ಶಾಲಾ ಹೆಡ್‌ಮಾಸ್ತರ ಜನಪ್ರೀತ ಮ| ಪಿ. ಶೇಷಾಚಲಯ್ಯನವರು ಯುನಿವರ್ಸಿಟಿ ಉಡುಪು ಹಾಕಿಕೊಂಡು ರೆ| ಸತ್ಯವ್ರತರೊಡನೆ ಕೂಡಿ ಬಂದಿದ್ದ ಕಟ್ಟಣದ ಮಾನ್ಯ ಗೃಹಸ್ಥರನ್ನು ಸ್ವಾಗತ ಮಾಡಿ ಅಬಿವಂದಿಸಿದರು ನಂತರ ಅಲ್ಲಿ ಕೂಡಿದ್ದವರೆಲ್ಲರ ಫೋಟೋ ತೆಗೆಯೋಣಾಯಿತು ಬಳಿಕ ಇಲ್ಲಿಯ ಮಾನ್ಯ ಡಿಸ್ಟ್ರಿಕ್ಟ್ ಮುನ್ಸಿಫರೊಡಗೂಡಿದ ಮೆರವಣಿಗೆಯು ಶಾಲಾ ಸಭಾಸದನಕ್ಕೆ ಮುಂದರಿದು, ಸಭಿಕರು ಆಸೀನರಾದ ಬಳಿಕ ಹೆಡ್ ಮಾಸ್ತರರು ವಿಜ್ಞಾಪಿಸಿಕೊಂಡ ಪ್ರಕಾರ ಡಿಸ್ಟ್ರಿಕ್ಟ್ ಮುನ್ಸಿಫರವರು ಸಭಾಧ್ಯಕ್ಷ ಸ್ಥಾನವನ್ನು ಅಂಗೀಕರಿಸಿದರು. ನಂತರ ಹೆಡ್ ಮಾಸ್ತರರು ಮಾತನ್ನಾಡಿ ಈ ಶಾಲಾ ಪ್ರೋತ್ಸಾಹಕರಾದ ಮಿತ್ರವರ್ಗಗಳು ಈ ಸಮಾರಂಭದಲ್ಲಿ ಗೈರ್ಹಾಜರಾದ ವಿಷಾದವನ್ನು ತೋರ್ಪಡಿಸಿ, ೧೮೯೮ನೇ ಇಸವಿಯಿಂದ ಈ ಶಾಲೆಯ ಗತ ಚರಿತ್ರೆಯನ್ನು ಸಭಿಕರಿಗೆ ತಿಳಿಯಹೇಳಿ ಈ ಹೈಸ್ಕೂಲು ಸ್ಥಾಪನೆಯಾಗಲು ಮೂಲಕಾರಣರಾಗಿದ್ದ ಈ ಶಾಲೆಯಲ್ಲಿಯೇ ತನ್ನ ಜೀವನವನ್ನು ಅರ್ಪಿಸುತ್ತಿರುವ ರೆವರೆಂಡ್ ಸ್ಟ್ರಾ ಪೆದೊರೆಗಳ ಪಾಂಡಿತ್ಯವನ್ನೂ ಈ ಶಾಲಾ ಹೊಸ ಕಟ್ಟೋಣವಾಗಲು ಕಾರಣಭೂತರಾದ ರೆವರೆಂಡ್ ಷ್ನೈದರರ್ ದೊರೆಗಳ ಪ್ರಯತ್ನಗಳನ್ನೂ ಕೊಂಡಾಡಿದರಲ್ಲದೆ ಮದ್ರಾಸ್ ಸರಕಾರದವರು ಈ ಕಟ್ಟೋಣಕ್ಕೆ ಮಾಡಿದ ಧನಸಹಾಯವನ್ನು ತಿಳಿಯಹೇಳಿ ಅದಕ್ಕಾಗಿ ಸರಕಾರದವರಿಗೆ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿ, ವಿದ್ಯಾರ್ಥಿಗಳಿಗೆ ಕಾಲೋಚಿತ ಬುದ್ಧಿವಾದವನ್ನಿತ್ತು ಭಾಷಣವನ್ನು ಮುಗಿಸಿದರು

ಬಳಿಕ ಈ ಹೈಸ್ಕೂಲಿನ ಪ್ರಥಮ ಹೆಡ್‌ಮಾಸ್ತರರಾಗಿದ್ದ ಮ| ರಾ ವೆಂಕಟೇಶ ಪ್ರಭುಗಳವರೂ ಶಾಲಾ ಹಳೇ ವಿದ್ಯಾರ್ಥಿಗಳಾದ ರಾ| ಪಾಂಡುರಂಗರಾಯಕರವರೂ ರೆವರೆಂಡ್ ಬ್ರಾಷೆ ದೊರೆಗಳು ಶಾಲೆಯ ಮೇಲ್ಮೆಗಾಗಿ ಮಾಡುತ್ತಿದ್ದ ಕೆಲಸವನ್ನು ಕುರಿತು ಬಹಳವಾಗಿ ಹೊಗಳಿ ಮಾತನ್ನಾಡಿದರು

ನಂತರ ರಾ ಕರೋಡಿ ಸುಬ್ಬರಾಯರವರು ಕನ್ನಡದಲ್ಲಿ ಭಾಷಣಕೊಟ್ಟು, ನಂತರ ಅಧ್ಯಕ್ಷರ ಭಾಷಣದೊಂದಿಗೆ ಆ ದಿನದ ಸಮಾರಂಭವು ಮುಗಿಯಿತು ಕಡೆಗೆ ಕ್ರೈಸ್ತ ವಿದ್ಯಾರ್ಥಿಗಳಿಂದ ರಾಜಗೀತವು ಹಾಡಲಾಯಿತು. ಹೆಡ್ ಮಾಸ್ತರರು ಅಲ್ಲಿದ್ದ ಮಾನ್ಯ ಗೃಹಸ್ಥರಿಗೆ ಪುಷ್ಪ ಮಾಲೆಯನ್ನು ಹಾಕಿ ಬಂದ ಗೃಹಸ್ಥರನ್ನು ಸಂತೋಷಪಡಿಸಿ, ಕಳುಹಿಸಿಕೊಟ್ಟರು

ನಮ್ಮ ಪ್ರಿಯ ಹೆಡ್‌ಮಾಸ್ತರ್ ಪಿಕ್ಸರ್ ಶೇಷಾಚಲಯ್ಯನವರಿಂದಲೂ ಒಳ್ಳೇ ಅನುಭವಸ್ಥರಾದ ಸಹಾಯಕ ಉಪಾಧ್ಯಾಯರಿಂದಲೂ ದಿನೇ ದಿನೇ ಅಭಿವೃದ್ಧಿಗೆ ಬರುತ್ತಿರುವ ಈ ಹೈಸ್ಕೂಲು ಕಾಲೇಜಿಯಾಗಿ ಮಾರ್ಪಡುವ ಕಾಲವು ಬೇಗನೇ ಬರಲೀಂದು ಹಾರೈಸುವವು.

~~~~~~

ಪುತ್ತೂರು:—ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರವರು ಇದೇ ತಿಂಗಳ ತಾ. ೧೭ ಪುತ್ತೂರಿಂದ ಮಂಗಳೂರು, ತಾ ೧೮ರಿಂದ ೨೭ರ ವರೆಗೆ ಕಾಸರಗೋಡು, ತಾ. ೨೮ರಿಂದ ೨೯ರ ವರೆಗೆ ಮಂಗಳೂರು, ತಾ. ೩೦ರಲ್ಲು ಮಂಗಳೂರಿಂದ ಪುತ್ತೂರು ಈ ರೀತಿ ಮೊಕಮ್ಮಂಗಳ ಮೇರೆಗೆ ಸರ್ಕಿಟು ಬೆಳಿಸುವರು.

ಪುತ್ತೂರು ತಾಲೂಕುಬೋರ್ಡಿನ ಮೀಟಿಂಗ್ ಇದೇ ತಾ ೨೭ರಲ್ಲು ಬೆಳಿಗ್ಯೆ ೮ ಗಂಟೆಗೆ ಕಾಸರಗೋಡಿನಲ್ಲಿ ಜರಗುವದು.

ಇಲ್ಲಿಗೆ ವರ್ಗಾಯಿಸಲ್ಪಟ್ಟ ತಹಶಿಲದಾರ ಮ| ರಾ| ರಾ| ಬಿ. ಮಂಜುನಾಥ ಬಾಳಿಗರು ತಹಶಿಲದಾರ ಮ| ರಾ| ಡಿ. ಆನಂದರಾಯರಿಂದ ಇದೇ ತಾ ೧೭ಕ್ಕು ಚಾರ್ಜು ವಹಿಸಿಕೊಂಡಿರುವರು.

ರಜೆ ಮೇಲೆ ಹೋದ ಇಲ್ಲಿಯ ಕಾಯಂ ಸ್ಟೇಶನರಿ ಮೇಜಿಸ್ಟ್ರೇಟ ಮ| ರಾ| ರಾ| ಟಿ. ಭವಾನಿ ಶಂಕರರಾಯರು ಹಾಜರಾಗಿ ಅಸಿಸ್ಟೆಂಟ ಮೇಜಿಸ್ಟ್ರೇಟರಾದ [illegible] ಯರಿಂದ ಛಾರ್ಜು ವಹಿಸಿಕೊಂಡಿರುವರು.
~~~~~~

ಇಲ್ಲಿಯ ಕಾಯಂ ಪೋಸ್ಟುಮಾಸ್ತರ ಮಿ. ಡೆನಿಸ್ ಲೋಬರು ಹಾಜರಾಗಿ ರಾ. ಡಿ. ಆನಂದರಾಯರಿಂದ ಚಾರ್ಜು ವಹಿಸಿಕೊಂಡಿರುವರು

ಇಲ್ಲಿಯ ಶ್ರೀಶಾರದಾ ವಾಚಕ ಮಂದಿರದ ಮೆಂಬರರ ಬಗ್ಗೆ ಸ್ಥಾಪಿಸಿದ ಕೊಂಬೆಟ್ಟು ಬೇಡ್‌ಮಿಂಟನ ಕ್ಲಬಿನಲ್ಲಿ ಇದೇ ತಾ. ೧೪ರಲ್ಲು ಮೆಂಬರ ಸಭೆ ಕೂಡಿತ್ತು. ಸಭೆಯಲ್ಲಿ ರಾ| ಗೋವಿಂದಶ್ಯಾನಭಾಗರ ಅಧ್ಯಕ್ಷತೆಯಲ್ಲಿ ಬೆಳ್ಳಾರೆ ರಾ| ನರಶಿಂಹಮಲ್ಯರು ಪ್ರೆಜರರಾಗಿಯೂ ರಾ| ಗುತ್ತೆದಾರ ಸೂರಕೆ ವಿಠಲಣ್ಣ ಪೂಜಾರಿಗಳು ಸೆಕ್ರೆಟರಿಯಾಗಿಯೂ, ಕೆ ಪುಂಡರೀಕ ಕುಡ್ವರನ್ನು ಫೀಲ್ಡ್ ಕೆಪ್ಟನರಾಗಿಯೂ ಆರಿಸಲ್ಪಟ್ಟರು. ಇದೇ ತಾ. ೧೫ರಲ್ಲು ಕ್ಲಬಿನ ಮೆಂಬರರಾಗಿ ಮ| ರಾ| ರಾ| ಅಪ್ಪಾಜಿರಾಯರು ಟೀಪಾರ್ಟಿ ಕೊಟ್ಟು ಸನ್ಮಾನಿಸಿದಕ್ಕೆ ರಾ| ಗೋವಿಂದಶ್ಯಾನಭಾಗರು ಅಭಿವಂದನೆ ಮಾಡಿದರು

ಬೆಳ್ಳಾರೆ ಕಸಬಾ ಗ್ರಾಮದ ಕಂಪಿನಮುಕ್ಕಿ ಬೂಮಿಯಲ್ಲಿ ಇಲ್ಲಿಯ ವಕೀಲ ರಾ ನೆಟ್ಟಾರ ನರಶಿಂಗರಾಯರವರು ಶುಮಾರು ೩ ಎಕ್ರೆ ಸ್ಥಳದಲ್ಲಿ ತಳಿಪರಂಬು ಫಾರ್ಮಿನ ಕೂಲಿಯವರನ್ನು ತರಿಸಿ ಮೋರಿಸ್ ಕಬ್ಬು ಸಾಗುವಳಿ ಮಾಡುತ್ತಿರುವ ಕೆಲಸ ಆರಂಭಿಸಿರುವರು. ಈ ಸಂಬಂಧ ತಳಿಪರಂಬು ಫಾರ್ಮಿನ ಅಸಿಸ್ಟಾಂಟ ಮೆನೇಜರ ಮ| ರಾ| ರಾ| ಕೆ ಟಿ ಆಳ್ವರವರು ಇಲ್ಲಿಗೆ ಬಂದಿರುವರ

~~~~~~

ಮಂಗಳೂರು

ಇದೇ ತಾ ೧೩ರಲ್ಲು ಕೊಡಿಯಾಲಬೈಲಿನಲ್ಲಿ ವಾಸಿಸುವ ತನಿಯ ಮತ್ತು ಅಂಗರ ಎಂಬ ಇಬ್ಬರ ಹೊಲೆಯರು ಬೊಗ್ಗ ಎಂಬ ಹೊಲೆಯನಿಗೆ ಗದ್ದೆಯಲ್ಲಿ ಹೊಡೆದರು ಮರುದಿನ ಈ ಪೆಟ್ಟಿನಿಂದ ಬೊಗ್ಗ ಹೊಲೆಯನು ಮೃತಪಟ್ಟುದರಿಂದ ಪೋಲಿಸಿನವರು ಅಂಗರ ಮತ್ತು ತನಿಯನನ್ನು ಕೈದುಮಾಡಿರುತ್ತಾರೆ

ಕುದುರೆಗಳನ್ನು ತರ್ಬೀತು ಮಾಡುವ ಉದ್ದೇಶದಿಂದ ಅವುಗಳಿಗೆ ಹಲಿಗೆ ಕಟ್ಟಿ, ಮಾರ್ಗದಲ್ಲಿ ನಾಗಾಲೋಟದಿಂದ ಓಡಿಸುವ ಪದ್ಧತಿಯು ಈ ಪಟ್ಟಣದಲ್ಲಿ ಈಚೀಚೆಗೆ ಹೆಚ್ಚುತ್ತಾ ಬಂದದರಿಂದ ಅದರಿಂದುಂಟಾಗುವ ಹಾನಿಯನ್ನು ಪೋಲಿಸ್ ಇಲಾಖೆಯವರು ಆತ ಕುದುರೆಯನ್ನು ಹಲಿಗೆಗೆ ಕಟ್ಟಿ ಹೀಗೆ ಓಡಿಸುತ್ತಿದ್ದ ಕುಂಡಪ್ಪ ಮತ್ತು ಸೋಮಪ್ಪ ಎಂಬ ಇಬ್ಬರನ್ನು ವಿಚಾರಣೆಗೆ ಗುರಿಪಡಿಸಿದ್ದರು ಮೆಜಿಸ್ಟ್ರೇಟರು ಒಬ್ಬೊಬ್ಬನಿಗೆ ಹತ್ತತ್ತು ರೂಪಾಯಿಗಳ ಜುಲ್ಮಾನೆ ವಿಧಿಸಿದರು. ದಿಕ್ಕು ತೋರದೆ ಬೈಸಿಕಲುಗಳನ್ನು ಶಾಲೆಗೆ ಹೋಗುವ ಮಕ್ಕಳ ಮಧ್ಯೆ ಓಡಿಸುವ ಬೈಸಿಕಲ್ ಸವಾರರ ಕಡೆಗೂ ಪೋಲಿಸಿನವರು ತುಸ ಲಕ್ಷ ಕೊಡಬೇಕಾಗಿರುವದು.

ಹಗಲು ೯ ಗಂಟೆಗೆ ಇಲ್ಲಿಯ ಕುಂಟಲೆ ನರಸಿಂಹ ಪ್ರಭುಗಳವರಲ್ಲಿ ಕಾಂಟ್ರದ ಕೊಡಪಾನ ಕದ್ದುಕೊಂಡು ಅದೇ ದಿನ ಇತರರಿಗೆ ಮಾರಿ, ಉಡ್ಪಿಗೆ ತಪ್ಪಿಸಿಕೊಂಡು ಹೋಗಿ ಅಲ್ಲಿಯೂ ಒಂದು ಕೊಡಪಾನ ಕದ್ದುಕೊಂಡು ಪೋಲಿಸಿನವರಿಂದ ಹಿಡಿಯಲ್ಪಟ್ಟು ೪ ತಿಂಗಳ ಶಿಕ್ಷೆ ವಿಧಿಸಲ್ಪಟ್ಟ ರಿಚ್ಚಾರ್ಡ ವಿಲಿಯಮ್ಸನಿಗೆ ಇಲ್ಲಿ ಕೊಡಪಾನ ಕದ್ದುಕೊಂಡ ತಕ್ಸೀರಿಗಾಗಿ ಮೂರು ತಿಂಗಳ ಕಠಿಣ ಸಜಾ ವಿಧಿಸಲ್ಪಟ್ಟಿರುವದು

ಮೆ| ಕಾಮಿಲ್ ಸಾಲ್ಡಾಂಞರಲ್ಲಿ ಕಳವಾದ ಚಿನ್ನಾಭರಣಗಳ ಮೊಕದ್ದಮೆಯಲ್ಲಿ ಆಪಾದಿಸಲ್ಪಟ್ಟ ಅಂತೋನಿಯನ್ನು ಮೆಜಿಸ್ಟ್ರೇಟರು ಖುಲಾಸು ಪಡಿಸಿರುವರು.

ಬಂದರದಲ್ಲಿ ರಾತ್ರಿ ೮ ಗಂಟೆಗೆ ಮರದ ತುಂಡುಗಳನ್ನು ಕದ್ದುಕೊಂಡು ಹೋಗುವಾಗ ಪೋಲಿಸಿನವರಿಂದ ಹಿಡಿಯಲ್ಪಟ್ಟು ವಿಚಾರಣೆಗೆ ಗುರಿಮಾಡಲ್ಪಟ್ಟ ಶಾಜಿ ಬ್ಯಾರಿಗೆ ೬ ವಾರಗಳ ಸಜಾ ವಿಧಿಸಲ್ಪಟ್ಟಿತು.

ರಾ| ವಾಮನ ಕಮ್ತಿಯರಲ್ಲಿ ರೂ. ೧-೧೦-೦ ಸಹಿತ ಒಂದು ಅಂಗಿಯನ್ನು ಕೇಡಿ ಹಮ್ಮರೆ ಎಂಬವನು ಕದ್ದುಕೊಂಡದ್ದಾಗಿ ಆಪಾದಿಸಲ್ಪಟ್ಟಿರುವನು.

ಪ್ರಥಮ ಸಾರಿಯ "ಕೆನರಾ ಹೈಸ್ಕೂಲ್ ಡೇ" ಎಂಬ ಸಮಾರಂಭವು ಇದೇ ಎಪ್ರಿಲ್ ತಿಂಗಳ ತಾ. ೫ನೇ ಸೋಮವಾರವಲ್ಲ, ತಾ. ೩ನೇ ಶನಿವಾರ ನಡೆಯುವದು. ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರರಾದ ಮೆ ಎಮ್. ಇ. ಕಾಚ್‌ಮನ್ ದೊರೆಗಳವರು ಈ ಸಂದರ್ಭದಲ್ಲಿ ಅಧ್ಯಕ್ಷರಾಗಿರುವರು. ಶಾಲೆಯ ಹಿಂದಿನ ವಿದ್ಯಾರ್ಥಿಗಳು ಈ ಸಮಾರಂಭಕ್ಕೆ ಚಿತ್ತೈಸಬೇಕಾಗಿ ವಿಜ್ಞಾಪಿಸೋಣಾಗಿರುವದು

ದಕ್ಷಿಣ ಕನ್ನಡ ಜಿಲ್ಲೆಯ ಜೋಗಿ ಮುಕಸ್ಥರು ತಮ್ಮ ಮಕ್ಕಳಿಗೆ ಎಲ್ಲಾ ಶಾಲೆಗಳಲ್ಲಿಯೂ ಕೋಲೇಜುಗಳಲ್ಲಿಯೂ ಅರ್ಧ ಸಂಬಳದಿಂದ ವಿದ್ಯೆ ದೊರಕಿಸುವದಕ್ಕೆ ಮದ್ರಾಸು ಗವರ್ನರ್ ದೊರೆಗಳವರ ಸನ್ನಿಧಾನಕ್ಕೆ ಕಳೆದ ವರುಷ ಜುಲೈ ತಿಂಗಳ ತಾ ೨೫ರಲ್ಲು ಒದಗಿಕೊಂಡ ಮನವಿಗೆ ದಯಾಳ ಸರಕಾರದವರ ಅನುಮತಿಸಿದ್ದಾರೆಂತ ಕಳೆದ ಡಿಸೆಂಬರ ತಿಂಗಳ ತಾ ೧೪ರ ನಂಬ್ರ ೧೪೨೧ನೇ ಗವರ್ನಮೆಂಟ್ ಹುಕುಮಿನಿಂದ ತಿಳಿದ ಬರುತ್ತದೆ

ಇಲ್ಲಿಯ ಮುನ್ಸಿಪಾಲ್ ಚೇರ್ಮೆನರ ಚುನಾವಣೆಯ ನಿಶ್ಚಯ ದಿನ ನಡೆದು ದಿವಾನ್ ಬಹದ್ದೂರ್ ಎಸ್ ಮಂಜಪ್ಪ ಬಂಗೇರರವರು ಚೇರ್ಮೆನರಾಗಿ ಆರಿಸಲ್ಪಟ್ಟರು.

ಕಲೆಕ್ಟರ್ ಆಫೀಸಿನ ಟ್ರೆಝರಿ ರಾ| ಎ ಸುಬ್ರಾಯ ಹೆಗ್ಡೆಯವರು ಕಲೆಕ್ಟರ್ ಆಫೀಸಿನ ೫ನೇ ಎಕೌಂಟೆಂಟರಾಗಿ ನೇಮಿಸಲ್ಪಟ್ಟಿರುವರು

ಕಲೆಕ್ಟರ ಆಫೀಸಿನ ೧೪ನೇ ಅಕೌಂಟೆಂಟ ರಾ ಮು. ಅಪ್ಪಯ್ಯರು ಎಸ್ ಐ ಸ್ಪೆಶಿಯಲ್ ಕಾಸರಗೋಡ ಮತ್ತು ಮಂಗಳೂರು ತಾಲೂಕುಗಳಲ್ಲಿ ವರ್ಜಿಸಲ್ಪಟ್ಟ ಸ್ಥಳಗಳ ಸಂಬಂಧ ಟೆಂಪರರಿ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ಆದರೆ ಇವರು ಹೊಸಂಗಡಿ ಫಿರ್ಕದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ ಕೆಲಸ ನೋಡಬೇಕಾಗುವದು

ಕಲೆಕ್ಟರ ಆಫೀಸಿನ ಆಕ್ಟಿಂಗ್ ೫ನೇ ಅಕೌಂಟಾಂಟ ರಾ| ಬಿ ವಾಮನ ಭಂಡಾರಿ ಕಾಸರಗೋಡು ತಾಲೂಕಿನ II ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು. ಇವರು ಕಾಸರಗೋಡ ಫಿರ್ಕದಲ್ಲಿ ಕೆಲಸ ಮಾಡಬೇಕಾಗುವದು.

ಶಂಕರನಾರಾಯಣ ಫಿರ್ಕದ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರ ಮೆ| ವಿಕ್ಟೋರ್ ಸಾಲ್ಡಾಂಞರು ಕಲೆಕ್ಟರ ಆಫೀಸಿನ ಆಕ್ಟಿಂಗ್ ೫ನೇ ಅಕೌಂಟಾಂಟರಾಗಿ ನೇಮಿಸಲ್ಪಟ್ಟಿದ್ದಾರೆ

ಈ ಎಣ್ಣೆಯು ಕಾಡ್ ಎಂಬ ಒಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿನಿಂದ ಪಡೆಯಲ್ಪಡುವುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಹಾತಃ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಅದರಿಂದ ಪಡೆಯಲ್ಪಟ್ಟ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವದೋ ಆಗ್ಗೆ ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುಂಸಹಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0, ಅರ್ಧ ಬಾಟ್ಲಿಗೆ 1—12—0.

ದಿ. ಊಲನ್ ಮಾರ್ಟ್. ಮಂಗಳೂರು,

ದಕ್ಷಿಣ ಕನ್ನಡಾ

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು. 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ಪ್ರಾಶಕವು ನಿತ್ರಾಣಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳ, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0.

೭. ಆನಂದವನವಿಲಾಸ—ಇದು ಡ್ಯಾಬಟೀಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕಾಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

150 ಪುಟಗಳ ಪುಸ್ತಕವು.

ಉಚಿತವು

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ

ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ನಮ್ಮ ಏಜಂಟರು:— 1. ಮೆಸ್ಸರ್ಸ್ ... ಅಂಡ್ ಕೊ., ...

2. ... ಬಜಾರ್, ಬೆಂಗಳೂರು, ...

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	300,000—0—0	ನಿರ್ಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ದನವು "	225,000—0—0
Subscribed Capital	217,400—0—0	ಪ್ರತಿಜ್ಞಾತ ಮೂಲ ಧನವು "	217,400—0—0
Paid up Capital	192,400—0—0	ಸಂದಾಯವಾದ ದನವು "	192,400—0—0
Deposits	447,559—6—11	ರೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	447,559—6—11
Reserve Fund	33,500—0—0	ರಕ್ಷಿತ ದನವು	33,500—0—0

Besides the uncalled capital of Rs. 25,000/ 5% of the net profits are added annually to the Reserve Fund. Rs 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively at the discretion of the managing committee

Short-notice Deposits requiring one week's notice of withdrawal after one month received @ 2½% per annum at the discretion of the managing committee

Current Deposit Account opened free of charge

Savings Bank Account opened for any sum not less than 4 As. and multiples thereof and interest paid @ 4%

Loans granted on proper securities and pledges.

Sealed Parcels for safe custody received on a moderate charge

Canara Bank Ltd.,
Mangalore, 1st. March 1915

ರಕ್ಷಿತ ದನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ [illegible] ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳ [illegible] 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ 21,685— — [illegible] ರೂ 22,500ರದ ಭದ್ರತಾಪತ್ರಗಳಲ್ಲಿ ರೇವಣಾತಿ ಮಾಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು [illegible] ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ರೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ರೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾಗುವವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ರೇವಣಾತಿಗಳು ರೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ತಿರೆಯೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ರೇವಣಾತಿ ಇಡೋಣಾಗುತ್ತೆ ಈ ರೇವಣಾತಿಗಳಿಗೆ ಸೇಕಡಾ 4ರ ದರ ಬಡ್ಡಿಯು ಕೊಡೋಣಾಗುವುದು.

ತಕ್ಕ ಜವಾಬ್ದಾರಿಯ ಮೇಲೆ ಮತ್ತು ಅಡವಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ತಪ್ಪಾಲು ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥ ದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ, ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ಸ್ವಾಯಂಭುವ ಮನುವಂಶಚರಿತೆ, ಪ್ರಾಚೀನಬರ್ಹಿಯ [illegible] ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯ ಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ, ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, [illegible] ಪರಶುರಾಮ ಚರಿತ್ರೆ, [illegible] ಚರಿತ್ರೆಗಳು, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, [illegible] ರುಕ್ಮಿಣೀಸತ್ಯಭಾಮಾ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವನಿಮಿತ್ತನಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪನಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. [illegible] ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—

ಶನು ವಿಳಾಸ:— ಎಂ. ದೇಶಾಯಿ ಕಂಪೆನಿ,
[illegible]

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 26ನೇ ಮಾರ್ಚಿ 1915

ಹಿಂದೂ "ಯೂನಿವರ್ಸಿಟಿ" ಮಸೂದೆಯು.

ಕಳೆದ ಸೋಮವಾರ ಡಿಲ್ಲಿಯಲ್ಲಿ ಕೂಡಿದ ಇಂಡಿಯಾ ಸರಕಾರದವರ ಶ್ರೇಷ್ಟ ನ್ಯಾಯನಿರ್ಮಾಣಸಭೆಯಲ್ಲಿ ವಿದ್ಯಾಖಾತೆಯ ಮಂತ್ರಿಗಳಾದ ಬಹುಮಾನಪಟ್ಟ ಸರ್. ಹರ್. ಬಟ್ಲರರವರು ಹಿಂದೂ ಯುನಿವರ್ಸಿಟಿಯ ಮಸೂದೆಯನ್ನು ಸಭೆಯ ಮುಂದಿಟ್ಟು ಸರಕಾರದ ಕಡೆಯಿಂದ ಸಭಿಕರ ಅಪ್ಪಣೆಯನ್ನು ಕೇಳಿದರು. ಸಭಿಕರೆಲ್ಲರೂ ಏಕೀಭಾವದಿಂದ ತಮ್ಮ ಸಮ್ಮತಿಯನ್ನು ಕೊಟ್ಟರೆಂಬುದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಈ ಮಸೂದೆಯು ಏನೆಂತ ಪ್ರಜಾವರ್ಗಗಳು ತಿಳಿದು ಅಗತ್ಯವುಳ್ಳ ತಿದ್ದುಪಡಿಯನ್ನು ಇದರಲ್ಲಿ ಸೂಚಿಸುವಂತೆ ಇದು ಸದ್ಯದಲ್ಲಿ ಪ್ರಕಟಿಸಲ್ಪಡುವುದು. ಮಸೂದೆಯು ಈ ರೀತಿ ಸರಿಯಾಗಿ ಪರ್ಯಾಲೋಚಿಸಲ್ಪಟ್ಟ ಮೇಲೆ ಬರುವ ಸಪ್ಟಂಬರ ತಿಂಗಳಲ್ಲಿ ಕೂಡುವ ಶ್ರೇಷ್ಟ ನ್ಯಾಯನಿರ್ಮಾಣ ಸಭೆಯಲ್ಲಿ ಇದು ಮಂಜೂರುಮಾಡಲ್ಪಡುವುದೆಂಬುದಾಗಿ ತಿಳಿಯುತ್ತೇವೆ. ಭಾರತೀಯರಲ್ಲಿ ವಿದ್ಯಾಪ್ರಸರಣೆಯು ಸಮಗ್ರವಾಗಿ ಸಾಗುವಂತೆ ವಿಶೇಷ ಶ್ರಮವನ್ನು ವಹಿಸಿ ಪ್ರಜಾವರ್ಗಗಳಲ್ಲಿರುವ ಸಂತಾಪಗಳನ್ನು ಹಲವು ಸಂದರ್ಭಗಳಲ್ಲಿ ತಣಿಸಿ ಇನ್ನೂ ನಾನಾ ಬಗೆಗಳಲ್ಲಿ ಪ್ರಜಾಭಿವೃದ್ಧಿಯನ್ನು ಸಾಧಿಸಿ ಹಿಂದೂ ದೇಶದ ಯಥಾರ್ಥ ಅಪ್ತರೆನ್ನಿಸಿಕೊಂಡ ಹಾರ್ಡಿಂಗ್ ಪ್ರಭುಗಳವರ ಆಡಳಿತೆಯು ಮುಗಿಯುವಷ್ಟರಲ್ಲಿಯೇ ಹಿಂದುಗಳ ಅಭಿವೃದ್ಧಿಯನ್ನು ಉದ್ದೇಶಿಸಿರುವ ಈ ಯುನಿವರ್ಸಿಟಿಯ ಮಸೂದೆಯು ಮಂಜೂರಾಗುವುದನ್ನು ತಿಳಿದು ಹಿಂದುಗಳೆಲ್ಲವರು ಸರಕಾರದ ಉಪಕಾರಸ್ಮರಣೆಯನ್ನು ಹೃತ್ಪೂರ್ವಕವಾಗಿ ಮಾಡದೆ ಇರಲಾರರು.

ಸರಕಾರದ ಮೇಲ್ವಿಚಾರಕ್ಕೆ ಒಳಪಟ್ಟಿರುವ ಯುನಿವರ್ಸಿಟಿಗಳೆಂಬ ವಿಶ್ವವಿದ್ಯಾನಿಲಯಗಳು ಹಿಂದೂಸ್ಥಾನದ ಮುಖ್ಯ ಸಂಸ್ಥಾನಗಳಲ್ಲಿರುವವು. ಆಯಾ ಸಂಸ್ಥಾನಗಳಲ್ಲಿಯ ಶಾಲಾ ಕೋಲೇಜುಗಳಲ್ಲಿ ವಿದ್ಯಾಭ್ಯಾಸವು ವ್ಯವಸ್ಥೆಯಿಂದ ಒಂದೇ ಸಮನಾಗಿ ನಡೆಯಲಾಗುವಂತೆ ವಿದ್ಯಾ ಪ್ರಸರಣೆಗೆ ಇವುಗಳು ಕೇಂದ್ರಸ್ಥಾನಗಳಾಗಿವೆ. ಪ್ರಾಚೀನ ಕಾಲಗಳಲ್ಲಿ ವಿದ್ಯಾಪ್ರಸರಣೆಯ ಈ ಕಾರ್ಯವು ಬಹಳಮಟ್ಟಿಗೆ ಋಷಿಗಳಿಂದ ತಮ್ಮ ಆಶ್ರಮಗಳಲ್ಲಿ ನೆರವೇರಿಸಲಾಗುತ್ತಿತ್ತು. ಪ್ರಕೃತ ಇದನ್ನು ಸರಕಾರದವರು ಯುನಿವರ್ಸಿಟಿಗಳ ಮೂಲಕ ಸಾಧಿಸುತ್ತಿರುವರು. ಆದರೆ ಸರಕಾರದ ಆಡಳಿತೆಯಲ್ಲಿರುವ ಇಂಥಾ ಸಂಸ್ಥೆಯಲ್ಲಿ ಯಾವುದಾದರೂ ಮತಬೋಧೆಯನ್ನು ಕೊಡುವುದು ಅನುಕೂಲವಲ್ಲವಾದ್ದರಿಂದ ಶಿಕ್ಷಣವು ಧರ್ಮಹೀನವಾಗುತ್ತಾ ಬಂತು. ಹಿಂದೂ ಸಮಾಜಕ್ಕೆ ಈ ಶಿಕ್ಷಣ ಕುಂದುಕದಿಂದ ವಿಶೇಷ ಹಾನಿಯುಂಟಾಗುವುದನ್ನು ಕಂಡು ಹಿಂದೂಗಳಲ್ಲಿ ಶಿಕ್ಷಣದೊಂದಿಗೆ ಧರ್ಮಬೋಧೆಯು ಉಂಟಾಗುವಂತೆ ಹಿಂದೂ ಸಮಾಜದ ನಾಯಕರು ವಿಶ್ವವಿದ್ಯಾನಿಲಯವನ್ನು ಏರ್ಪಡಿಸಲು ಪ್ರಯತ್ನಿಸಿದರು. ಈ ಪ್ರಯತ್ನಗಳ ವಿವರವನ್ನು ವಾಚಕರು ಹಿಂದೆ ಆಗಿಂದಾಗ್ಯೆ ಕೇಳಿ ತಿಳಿದಿರಬಹುದು. ಹಿಂದೂ ಸಮಾಜದ ಧರ್ಮಗುರುಗಳ ಮತಗಳು ಜೀರ್ಣವಾಗುತ್ತ ಬಂದಿರುವ ಈ ಕಾಲದಲ್ಲಿ ಧರ್ಮಗ್ಲಾನಿಯಿಂದ ಸಮಾಜರಚನೆಯು ಕುಸಿದು ಬಿದ್ದು ಹಾಳಾಗಿ ಹೋಗುವ ಈ ಸಂದರ್ಭದಲ್ಲಿ ಹಿಂದೂಗಳಿಗೆ ಧರ್ಮಬೋಧೆಯನ್ನು ಕಡ್ಡಾಯವಾಗಿ ಕೊಡಲುದ್ದೇಶಿಸಿರುವ ಈ ವಿಶ್ವವಿದ್ಯಾಲಯದ ಏರ್ಪಾಡು ಅತ್ಯಗತ್ಯವಾಗಿ ಬೇಕಾಗಿರುತ್ತದೆ. ಹಿಂದೂ ಮಹಾರಾಜರುಗಳೂ ಶ್ರೀಮಂತರೂ ವಕೀಲರೂ ಮೊದಲಾದ ಪ್ರಜಾ ಮುಂದಾಳುಗಳು ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸುವರೆ ವಿಶೇಷ ದ್ರವ್ಯಸಹಾಯವನ್ನು ಕೊಟ್ಟಿರುತ್ತಾರೆ. ನಷಿಪುರದ ಮಹಾರಾಜರು ೧॥ ಲಕ್ಷ, ಹೋಲ್ಕರ ಮಹಾರಾಜರವರು ೫ ಲಕ್ಷ, ಜೋಡ್ಪುರದ ಮಹಾರಾಜರವರು ೨ ಲಕ್ಷ ಮತ್ತು ತಿಂಗಳಿಗೆ ರೂ. ೨೦೦೦ದಂತೆ ಉತ್ಪತ್ತಿ ದೊರಕುವಷ್ಟು ದ್ರವ್ಯಸಹಾಯ, ಕೋಟಾ ಮಹಾರಾಜರವರು ೧ ಲಕ್ಷ, ಬಿಕಾನೀರಿನ ಮಹಾರಾಜರವರು ೧ ಲಕ್ಷ ಮತ್ತು ಶಾಶ್ವತವಾಗಿ ತಿಂಗಳಿಗೆ ರೂ. ೧೦೦೦ ಪ್ರಕಾರ ಕೊಡು [illegible] ಮಹಾರಾಜರವರು ತಿಂಗಳಿಗೆ ರೂ. ೨೦೦೦ ಪ್ರಕಾರ. ದರ್ಭಂಗದ ಮಹಾರಾಜರವರು ೫ ಲಕ್ಷಗಳಲ್ಲಿ ೩ ಲಕ್ಷವನ್ನು ಕೊಟ್ಟಿರುವರು, ಡಾಕ್ಟರ್ ರಾಷ್‌ಬಿಹಾರಿ ಘೋಷ್ ೧ ಲಕ್ಷ, ಡಾಕ್ಟರ್ ಸುಂದರಲಾಲ್ ೧ ಲಕ್ಷ, ಈ ರೀತಿ ಇನ್ನೂ ಹಲವರು ಲಕ್ಷಕಟ್ಟಳೆಯ ಹಣಸಹಾಯ ಮಾಡಿರುವರು. ಸರಕಾರದವರ ದ್ರವ್ಯಸಹಾಯವು ಸಹ ಈ ವಿದ್ಯಾನಿಲಯಕ್ಕೆ ದೊರಕುವುದು. ಹೀಗೆ ಬರುವ ಸಪ್ಟಂಬರ ತಿಂಗಳಲ್ಲಿ ಮಂಜೂರಾಗುವ ಹಿಂದೂ ವಿಶ್ವವಿದ್ಯಾನಿಲಯ ವಿಧಿಯ ಮೂಲಕ ಕಾಶೀಕ್ಷೇತ್ರದಲ್ಲಿ ಹಿಂದೂ ಜನಾಂಗದ ಮೇಲ್ಮೆಯನ್ನು ಸಾಧಿಸುವ ವಿದ್ಯಾಸಂಸ್ಥೆಯು ಸ್ಥಾಪಿಸಲ್ಪಡುವುದು.

ಪ್ರಕೃತ ಆಯಾ ಸಂಸ್ಥಾನಗಳಲ್ಲಿರುವ ಯುನಿವರ್ಸಿಟಿಗಳಿಗೂ, ಬೆನಾರಿಸಿನ ಹಿಂದೂ ಯುನಿವರ್ಸಿಟಿಗೂ ಕೆಲವು ಭೇದಗಳಿರುವವು. ಸಂಸ್ಥಾನಿಕ ಯುನಿವರ್ಸಿಟಿಗಳಿಗೆ ಸಮ್ಮಂಧಪಟ್ಟ ಶಾಲಾ ಕೋಲೇಜುಗಳು ಸಂಸ್ಥಾನಗಳ ಎಲ್ಲಾ ಕಡೆಗಳಲ್ಲಿಯೂ ಇರುವವು. ಹಿಂದೂ ಯುನಿವರ್ಸಿಟಿಗೆ ದೇಶದ ವಿವಿಧ ಭಾಗಗಳಲ್ಲಿ ಶಾಲಾ ಕೋಲೇಜುಗಳನ್ನು ತನ್ನ ವಿಚಾರದೊಳಗೆ ತರುವ ಅಧಿಕಾರವು ಇರದು. ಆದರೆ ಈ ವಿದ್ಯಾನಿಲಯವನ್ನು ಸೇರುವ ವಿದ್ಯಾರ್ಥಿಗಳು ಇತರ ವಿದ್ಯಾನಿಲಯಗಳ ವಿದ್ಯಾರ್ಥಿಗಳಿಗಿಂತ ಗುರುಕುಲವಾಸದ ಪ್ರಯೋಜನವನ್ನು ಪಡೆಯುವ ವಿಶೇಷ ಹಂಚಿಕೆಯು ಹಿಂದೂ ವಿಶ್ವ ವಿದ್ಯಾನಿಲಯದಲ್ಲಿದೆ. ಹಿಂದುಗಳಲ್ಲದ ವಿದ್ಯಾರ್ಥಿಗಳು ಈ ವಿದ್ಯಾನಿಲಯವನ್ನು ಸೇರಲು ಏನೂ ಆತಂಕವಿರದು. ವಿದ್ಯಾನಿಲಯದ ಆಡಳಿತೆಯು ಬಹಳ ಮಟ್ಟಿಗೆ ಸರಕಾರದ ಆಫೀಸರರಲ್ಲದ ಹಿಂದೂ ಪ್ರತಿನಿಧಿಗಳಿಗೆನೇ ಇಡಲಾಗಿರುವುದು. ವಿದ್ಯಾನಿಲಯಕ್ಕೆ ಬೇಕಾದ ಪಂಡಿತರನ್ನು ನೇಮಿಸುವುದು, ಶಿಕ್ಷಣ ಪದ್ಧತಿಯನ್ನು ಏರ್ಪಡಿಸುವುದು ಮೊದಲಾದ ಕಾರ್ಯವಿವರವನ್ನು ಪ್ರಜಾಪ್ರತಿನಿಧಿಗಳಿಂದಲೇ ವಹಿಸಿಕೊಳ್ಳಲಾಗುವುದು. ಕೆಲವು ವಿಶೇಷ ಅಧಿಕಾರಗಳನ್ನು ವಿದ್ಯಾಸಂಸ್ಥೆಯ ಹಿತಾರ್ಥವಾಗಿ ಸಂದರ್ಭಾನುಸಾರ ಉಪಯೋಗಿಸುವ ಸ್ವತಂತ್ರವು ಮಾತ್ರ ಸರಕಾರದವರಿಗಿರುತ್ತದೆ. ಈ ರೀತಿ ಕಳೆದ ಹತ್ತು ವರುಷಗಳಿಂದ ಹಿಂದೂಗಳು ಸ್ಥಾಪಿಸಲು ಪ್ರಯತ್ನಪಟ್ಟ ವಿದ್ಯಾನಿಲಯವು ಸರಕಾರದವರ ಸಹಕಾರದಿಂದಲೂ ಆಶ್ರಯದಿಂದಲೂ ಇನ್ನು ಬೇಗನೆ ನೆರವೇರುವುದೆಂಬುದನ್ನು ತಿಳಿದು ಬಹಳ ಸಂತೋಷಪಡುತ್ತೇವೆ.

ಮಂಗಳೂರಲ್ಲಿ 'ಕಾಣೆ'ಯಾಗಿ ಹೋದ ಇಬ್ಬರು ಚಿಕ್ಕ ಹುಡುಗರು ಸೋಮೇಶ್ವರದಲ್ಲಿ ಸಿಕ್ಕಿದರು. ಇದೇನು ಕಳ್ಳರ ಕಾಟವೋ?

ನಮ್ಮ ಪತ್ರದ ಪತ್ರವ್ಯವಹಾರ ಭಾಗದಲ್ಲಿ ವಿಚಾರಿ ಮತ್ತು ವಿಮರ್ಶಿಗಳು ಕಳ್ಳರ ಕಾಟವು ಹೆಚ್ಚಿದ ದೂರನ್ನು ಯಾರ ತಲೆ ಮೇಲೆ ಹೊತ್ತು ಹಾಕಬಹುದೆಂಬದಾಗಿ ನಡಿಸುತ್ತಿರುವ ವಾದವು ಮುಗಿಯುವಷ್ಟರಲ್ಲಿ ಇಬ್ಬರು ಚಿಕ್ಕ ಹುಡುಗರು ಕಾಣೆಯಾಗಿ ಹೋದ ವೃತ್ತಾಂತವನ್ನು ವಾಚಕರ ಮತ್ತು ಅಧಿಕಾರಿಗಳ ಲಕ್ಷ್ಯಕ್ಕೆ ಬಹಳ ವಿಷಾದದಿಂದ ತರಬೇಕಾಗಿದೆ. ಇಲ್ಲಿಯ ಹಂಪನಕಟ್ಟೆಯಲ್ಲಿ ರಾ॥ ಉಳ್ಳಾಲ ನರಸಿಂಗರಾಯರ ಮನೆಯಲ್ಲಿ ವಾಸಿಸಿರುವ ಗಣೇಶ ಎಂಬವರ ತಮ್ಮಂದಿಯರಾದ ೮ ವರುಷದ ಮತ್ತು ೬ ವರುಷ ಪ್ರಾಯದ ಹುಡುಗರಿಬ್ಬರು ಮಧ್ಯಾಹ್ನ ಊಟ ತೀರಿಸಿ ಶಾಲೆಗೆ ಹೋದವರು ಒಂದೂವರೆ ದಿವಸಗಳ ತನಕ ಮನೆಗೆ ಹಿಂತೆರಳಿ ಬರಲೇ ಇಲ್ಲ. ಮಕ್ಕಳು ಕಾಣೆಯಾಗಿ ಹೋಗಿವೆ ಎಂಬ ದೂರು ಪೋಲಿಸು ಸ್ಟೇಶನಿಗೆ ಕೊಡಲಾಯಿತು. ಎಲ್ಲಿ ಹುಡುಕಿದರೂ ಮಕ್ಕಳು ಸಿಕ್ಕಲೇ ಇಲ್ಲ. ಪೋಲಿಸಿನವರಿಂದ ಈ ಮಕ್ಕಳನ್ನು ಹುಡುಕಿ ತರಲು ಆಗಲಿಲ್ಲ. ಮಂಗಳೂರಿಂದ ನೇತ್ರಾವತಿ ಸಂಕದ ಆಚೆಗೆ ಇರುವ ಸೋಮೇಶ್ವರ ರೈಲ್ವೇ ಸ್ಟೇಶನಿನ ಸಮೀಪ ಈ ಮಕ್ಕಳು ಇರುವವೆಂಬ ವಾರ್ತೆಯು ಮಕ್ಕಳ ಮನೆಯವರಿಗೆ ಮಕ್ಕಳು ಕಾಣೆಯಾಗಿ ಹೋದ ಒಂದೂವರೆ ದಿವಸಗಳ ನಂತರ ದೊರಕಿತು. ಕೂಡಲೇ ಅಲ್ಲಿಗೆ ಹೋಗಿ ಮಕ್ಕಳ ಹಿರಿಯರು ಮಕ್ಕಳನ್ನು ಹಿಂದಕ್ಕೆ ತಂದರು. ಮಕ್ಕಳನ್ನು ವಿಚಾರಿಸಿ ಕೇಳಿದಲ್ಲಿ ಏನೋ ತಿಂಡಿ ಮೊದಲಾದವನ್ನು ಕೊಡುತ್ತೇವೆಂತ ಯಾರೋ ಪುಸಲಾಯಿಸಿ ತಮ್ಮನ್ನು ಕಾಲುದಾರಿಯಿಂದಲೇ ರೈಲ್ವೇ ಸಂಕದ ಮೇಲಿನಿಂದ ಒಯ್ದರೆಂತ ಹೇಳುವರು. ಮಕ್ಕಳ ಮಾತುಗಳು ನಾನಾ ವಿಧವಾಗಿದ್ದದ್ದರಿಂದ ಇವುಗಳು ನಂಬಲಿಕ್ಕೆ ಅಯೋಗ್ಯವಾದುವುಗಳೆಂತ ಹೇಳಬಹುದು. ಆದರೆ ಮಕ್ಕಳು ತಾವಾಗಿಯೇ ರೈಲ್ವೇ ಸಂಕವನ್ನು ದಾಟಿ ೩-೪ ಮೈಲುಗಳ ಮಾರ್ಗವನ್ನು ನಡೆದು ಹೋದರೆಂಬುದನ್ನು ಯಾರೂ ನಂಬರು. ಸೀಮಾಣೆಯಾದರೂ ಕ್ರಯಬಾಳುವ ಆಭರಣಗಳು ಮಕ್ಕಳ ಮೈಮೇಲೆ ಇಲ್ಲದ್ದರಿಂದ ಏನೋ ತಮ್ಮ ಹಿರಿಯರನ್ನು ಬಂದು ಸೇರುವ ಪುಣ್ಯವು ಈ ಮಕ್ಕಳಿಗೆ ಪ್ರಾಪ್ತವಾಯಿತು. ಪೋಲಿಸಿನವರಿಗೆ ಈ ವಿಷಯ ಎಚ್ಚರ ಹೇಳಬೇಕೆಂತ ಹಲವರು ಸೂಚಿಸುವರು. ಆದರೆ ಎಚ್ಚರ ಹೇಳಲು ಇದೇನು ಕಳ್ಳರ ಕಾಟವೋ? ಇದಕೆ ರುಜುವಾತು ಏನಿರುವುದು

ಅರ್ಥಸಾಧಕ ಪತ್ರಿಕೆ.

ಕಳೆದ ಜನವರಿ ತಿಂಗಳಿನಿಂದ ಮೈಸೂರು ಅರ್ಥಸಾಧಕ ಸಭೆಯ ಆಶ್ರಯದಿಂದ ಈ ಮಾಸ ಪತ್ರಿಕೆಯು ಪ್ರಕಟವಾಗುತ್ತಿರುವುದು. ಅರ್ಥಸಾಧಕ ಸಭೆಯ ಮೂಲಕ ಮೈಸೂರು ಸರಕಾರದವರು ಪ್ರಜಾ ವರ್ಗಗಳ ಅಭಿವೃದ್ಧಿಗಾಗಿ ತೋರಿಸುತ್ತಿರುವ ಇಂಥಾ ಉತ್ಸಾಹವನ್ನು ಕಂಡು ತುಂಬಾ ಸಂತೋಷಪಡುತ್ತೇವೆ. ಸಂಪದಭ್ಯುದಯಕ್ಕೆ ಸಾಧನಗಳಾದ ವ್ಯವಸಾಯ, ವಾಣಿಜ್ಯ, ವಿದ್ಯಾಭ್ಯಾಸ, ಸಹಕಾರ, ಆರೋಗ್ಯ ಮೊದಲಾದ ಈ ವಿಷಯಗಳಲ್ಲಿ ಜನಸಾಮಾನ್ಯರಿಗೆ ಅಗತ್ಯವಿರುವ ಮಾಹಿತಿಯು ನಾನಾ ರೂಪಗಳಲ್ಲಿ ಈ ಮಾಸಪತ್ರಿಕೆಯಲ್ಲಿ ಸಂಗ್ರಹಿಸಲ್ಪಟ್ಟು ಪ್ರಕಟಿಸಲ್ಪಡುವುದು. ಭಾಷಾ ಶೈಲಿಯು ಶುಲಭವಾಗಿರುವುದು. ಅರ್ಥಸಾಧಕ ಪತ್ರಿಕೆಯ ಲೇಖಗಳನ್ನು ಗ್ರಾಮ ನಿವಾಸಿಗಳು ಸಹ ಓದಿ ತಿಳಿಯುವಂತೆ ಶೈಲಿಯನ್ನು ಇನ್ನೂ ಶುಲಭ ಮಾಡುವ ಪ್ರಯತ್ನವು ಲೇಖಗಗಳಲ್ಲಿ ಕಂಡುಬರುತ್ತಿದೆ. ಈ ಪತ್ರಿಕೆಯು ಜನಸಾಮಾನ್ಯರಿಗೆ ಪ್ರಿಯಕರವಾಗುವಂತೆ ಅರ್ಥಸಾಧಕ ಸಭೆಯ ಡಿ| ಕಾರ್ಯ ಶಾಖೆಗಳ ವೃತ್ತಾಂತವು ಪ್ರಕಟಿಸೋಣಾಗುವ ಏರ್ಪಾಡು ಈ ಮಾಸಪತ್ರಿಕೆಯಲ್ಲಿರುವುದು. ಪ್ರಪಂಚದ ಎಲ್ಲಾ ಪ್ರಾಂತ್ಯಗಳ, ಮುಖ್ಯವಾಗಿ ಪಾಶ್ಚಾತ್ಯ ದೇಶಗಳ ಸಂಪದಭಿವೃದ್ಧಿಯ ಪ್ರಸ್ತಾಪಗಳನ್ನು ಲಕ್ಷ್ಯಕ್ಕೆ ತಂದುಕೊಂಡು ಅಲ್ಲಿಯ ಜನರ ಸುಸ್ಥಿತಿಯನ್ನು ಮೈಸೂರು ಸಂಸ್ಥಾನದ ಜನರ ಸ್ಥಿತಿಯೊಂದಿಗೆ ಸರಿಹೋಲಿಸಿ ಪ್ರಯತ್ನ ಶೂನ್ಯರಾದ ಜನರಾಶಿಯಲ್ಲಿ ಉತ್ಸಾಹವನ್ನುಂಟುಮಾಡುವ ವಿಷಯಗಳು ಇದರಲ್ಲಿ ತುಂಬಾ ಇರುವವು. ಮೈಸೂರನ್ನು ಉತ್ತಮ ಪದವಿಗೆ ತಂದಿರಿಸಬೇಕೆಂಬುವ ಕುತೂಹಲದಿಂದ ಇತ್ತಿತ್ತ ಭಗೀರಥ ಪ್ರಯತ್ನಗಳನ್ನು ನಡಿಸುತ್ತಿರುವ ಆ ಸಂಸ್ಥಾನದ ಮಹಾರಾಜರ ಮತ್ತು ದಿವಾನರವರ ಕಾರ್ಯಾಸಕ್ತಿಯು ರೂಪುಗೊಂಡ ಹಲವು ನಿದರ್ಶನಗಳಲ್ಲಿ ಈ ಮಾಸಪತ್ರಿಕೆಯ ಏರ್ಪಾಡು ಒಂದಾಗಿರುತ್ತದೆ. ನಮಗೆ ಬಂದು ತಲ್ಪಿರುವ ಈ ಮಾಸಪತ್ರಿಕೆಯ ಎರಡು ಸಂಚಿಕೆಗಳಿಂದ ಈ ಪತ್ರಿಕಾ ಕಾರ್ಯಾರಂಭವು ಸೊಗಸಾದ ರೀತಿಯಲ್ಲಿ ಮಾಡೋಣಾಗಿರುವುದೆಂದು ಹೇಳಬಹುದು. ಪತ್ರಿಕೆಯನ್ನು ನಡೆಸುವ ಕಾರ್ಯಭಾರವನ್ನು ಒಳ್ಳೇ ಅನುಭವಸ್ಥರು ವಹಿಸಿಕೊಂಡಿರುವದರಿಂದಲೂ ಸರಕಾರದವರ ಆಶ್ರಯವು ಪತ್ರಿಕೆಗಿರುವುದರಿಂದಲೂ ಅರ್ಥಸಾಧಕ ಪತ್ರಿಕೆಯು ದೀರ್ಘಕಾಲ ಬಾಳಿ ತನ್ನ ಜನ್ಮೋದ್ದೇಶವನ್ನು ಸಾರ್ಥಕವಾದ ರೀತಿ ನೆರವೇರಿಸುವದೆಂಬುದಾಗಿ ನೆರೆನಂಬಿರುವೆವು.

ಚಿತ್ರಗಳಿಂದ ಕೂಡಿರುವ ಈ ಮಾಸಪತ್ರಿಕೆಯ ವಾರ್ಷಿಕ ಚಂದಾ ಮೈಸೂರು ಸಂಸ್ಥಾನದಲ್ಲಿರುವವರಿಗೆ ರೂ ೨—೦—೦ ಸಂಸ್ಥಾನದ ಹೊರಗಿರುವವರಿಗೆ ರೂ ೩—೦—೦ ಆಗಿರುವುದು.

ರಣರಂಗದಲ್ಲಿರುವ ನಮ್ಮ ಸೈನೀಕರ ಆರೋಗ್ಯವು.

ರಣರಂಗದಲ್ಲಿರುವ ನಮ್ಮ ಸೈನಿಕರ ಆರೋಗ್ಯವು ಈ ವರೆಗೆ ಎಲ್ಲಾ ವಿಧದಲ್ಲಿಯೂ ನೆಟ್ಟಗಿದೆ. ಸೈನಿಕರನ್ನು ದುರ್ಬಲರನ್ನಾಗಿ ಮಾಡುವ ವ್ಯಾಧಿಗಳೇನೂ ಈ ವರೆಗೆ ಸೇನಾಪಾಳೆಯದೊಳಗೆ ಪ್ರವೇಶಿಸಿರದು. ಜರ್ಮನ ಸೇನಾಪಾಳೆಯದಲ್ಲಿ ವಿಷಮ ಜ್ವರವೂ, ಆಸ್ಟ್ರಿಯ ಸೇನಾಪಾಳೆಯದೊಳಗೆ ವಾಂತಿಭೇದಿಯೂ ಸೊಂಕಿಕೊಂಡು ಅನೇಕರು ಈ ರೋಗಗಳಿಗೆ ಆಹುತಿಯಾದರೂ ನಮ್ಮ ಸೇನಾಪಾಳೆಯದೊಳಗೆ ಇಂಥಾ ಸೊಂಕುರೋಗಗಳೇನೂ ಸೋಂಕಿಲ್ಲ. ನಮ್ಮ ಸೇನೆಯೊಳಗೆ ಮುಖ್ಯವಾಗಿ ಹರಡಿಕೊಂಡಿರುವ ವ್ಯಾಧಿಯು ವಾತರೋಗವಾಗಿರುವದು. ಇದು ಶೀತ ಮತ್ತು ಒದ್ದೆಯಾದ ಕಂದಕಗಳಲ್ಲಿ ಸೇನಿಕರು ಬಹುಕಾಲ ಇದ್ದುದರಿಂದ ಬಂದಿರುತ್ತದೆ. ರಕ್ತಾತಿಸಾರ ರೋಗಕ್ಕೂ ಕೆಲವು ತುತ್ತಾದರು. ಆದರೆ ಬಹು ಸ್ವಲ್ಪ ಮಂದಿಗೆ ಮಾತ್ರ ಇದು ತಗಲಿತು. ನಮ್ಮ ಸೈನಿಕರಿಗೆ ಬೇಕಾದಷ್ಟು ಆಹಾರ ಒದಗಿಸಿ ಕೊಡುವಷ್ಟು ಚೆನ್ನಾಗಿ ಯಾವ ಯುದ್ಧರಂಗದಲ್ಲಿಯೂ ಹಿಂದೆಯೂ ಈಗಲೂ ಆಹಾರವು ಒದಗಿಸಲ್ಪಡಲಿಲ್ಲ. ನಮ್ಮ ಸೇನಿಕರ ವ್ಯವಹಾರ ಮಾರ್ಗವು ಈ ವರೆಗೆ ಶತ್ರುಗಳ ಪಾಲಾಗಲಿಲ್ಲ. ಆದುದರಿಂದ ಬೇಕಾದಷ್ಟು ಆಹಾರವು ಅವರಿಗೆ ಒದಗಿಸಿಕೊಡಲು ಯಾವ ತಡೆಯೂ ಇರದು. ರಣರಂಗದಲ್ಲಿ ಮೋಟರ್ ಬಂಡಿಗಳ ಮೂಲಕ ಆಹಾರ ಒದಗಿಸುವ ಉತ್ತಮ ಏರ್ಪಾಡು ಕಲ್ಪಿಸಲ್ಪಟ್ಟಿರುವದು. ನಮ್ಮ ಸೇನಿಕರು ತಮಗೆ ಬೇಕಾದಷ್ಟು ಉಂಡು ಕುಡಿದು, ಶತ್ರುಗಳ ಭಾದೆಯಿಂದ ಪಟ್ಟಣಗ್ರಾಮಗಳನ್ನು ಬಿಟ್ಟು ಓಡಿಹೋಗಿರುವ ನಿರಾಧಾರಿಗಳಾದ ಬೆಲ್ಜಿಯನ್ ಮತ್ತು ಫ್ರೆಂಚ ನಿವಾಸಿಕರಿಗೆ ಸಹಾ ತಮ್ಮ ಆಹಾರವನ್ನು ಕೊಡುತ್ತಿದ್ದಾರೆ. ಚಳಿಗಾಲದಲ್ಲಿ ಹೆಂಗಸರು ಈ ಸೇನಿಕರಿಗೆ ಬೇಕಾದ ಉಣ್ಣೆಯ ವಸ್ತುಗಳನ್ನು ಒದಗಿಸಿಕೊಟ್ಟಿದ್ದರು. [illegible] ಗಿದ್ದುದರಿಂದ ತ್ವರ್ಯದಲ್ಲಿ ೩೦೦,೦೦೦ ಉಣ್ಣೆಯ ಮೇಜೋಡುಗಳು ಸೇನಿಕರಿಗೆ ದೊರೆತವು. ಈ ಎಲ್ಲಾ ಕಾರಣಗಳಿಂದ ರಣರಂಗದಲ್ಲಿರುವ ನಮ್ಮ ಸೇನಿಕರು ರೋಗ ಭಾಧೆಯ ಭಯವೇನೂ ಇಲ್ಲದೆ ಸುರಕ್ಷಿತವಾಗಿರುವರು.

ಸೃಷ್ಟಿ ಚಮತ್ಕಾರ

|| ಕಂ || ನಡುದಿನದ ಸುಡುವ ಬಿಸಿಲೊಳ್ |
ನಡೆದುಂ ತಾಂ ನಾಡೆ ಬಳಲ್ದ ದಾರಿಗನೋರ್ವಂ ||
ನಿಡುಸುಯ್ಯುತೆ ಆಲದಮರ |
ದೆಡೆಗೈತಂದೊರಗಿದಂ ಸೊಗದೆ ದಣಿಗಳೆಯಲ್ || ೧ ||

ತುಸಗಾಳಿಯು ನುಸುಳಲವಂ |
ಪೊಸಜೀವಮನಾಂತ ವೊಲ್ಕರಂ ತಿಳಿದಂ ಕ ||
ಣ್ಗೆಸವಾಲದ ಸೊಬಗಂ ಸಂ |
ತಸದಿಂ ನೋಡುತ್ತೆ ಮನದೊಳೀಪರಿ ನುಡಿದಂ || ೨ ||

"ಆಲದ ಮರವೇ! ಪಥಿಕರಿ— |
ಗಾಲಯಮಾಗಿರ್ಪೆ ನಿನ್ನ ನಲ್ನೆಳಲಿಂದಂ ||
ಸಾಲು ಮರಗಳೊಳ್ ನೀನೆ ವಿ— |
ಶಾಲವು ಪರಿಕಿಪೊಡೆ ನಿನಗೆ ಕುಂದೊಂದಿಹುದೈ || ೩ ||

ಪಿರಿದಿಹ ನಿನ್ನಯ ದೇಹಕೆ |
ಸರಿದೋರವು ಚಿಕ್ಕಪಣ್ಗಳಾರಯೆ ಲತೆಗೆ ||
ಪಿರಿದಾದ ಪಣ್ಗಳಿರ್ಪವು |
ಪರಿಭಾವಿಸದಿಂತು ಗೈದನೇತಕೋ ದೇವಂ" || ೪ ||

ನುಡಿದಿನಿತು ಸುಮ್ಮನಿರೆ ಮರ— |
ದಡಿಯಲ್ಲಿಯೆ ನಿದ್ದೆವತ್ತಿತಾತಂಗಂದುಂ ||
ಒಡನೊಂದು ಪಣ್ಣುರುಳ್ದುದು |
ಬಿಡದೊಳ್ಮಲಗಿರ್ದ ದಾರಿಗಾರನ ತಲೆಯೊಳ್ || ೫ ||

ಅಮಮಾ! ಇದೇನಿದೆಂದುಂ |
ಭ್ರಮೆಯಿಂದೆಚ್ಚೆತ್ತು ಪಣ್ಣನೀಕ್ಷಿಸಿ ನುಡಿದಂ ||
"ಕ್ಷಮಿಸೈ ದೇವಾ ನಿನ್ನ ಮ— |
ಹಿಮೆಯಂ ನಾಂ ತಿಳಿಯದಿಂತು ದೂಷಣೆ ಗೈದೆಂ || ೬ ||

ತಲೆಯುಳಿದುದು ನೀನಾಲಕೆ |
ತಿಳಿದುಂ ಕಿರಿದಾದ ಪಣ್ಣನಿತ್ತುದರಿಂದಂ ||
ವಿಲಸತ್ಸೃಷ್ಟಿಯೊಳೆಣಿಸಲ್ |
ಕಲೆಯಿಲ್ಲಂ ನಿನ್ನ ಮಹಿಮೆಪಿರಿದಾಗಿಹುದೈ || ೭ ||

ಉ. ಮ. ರಾ.

ಉಡುಪಿ ಫಲಿಮಾರು ಸ್ವಾಮಿಗಳವರ ನಿರ್ಯಾಣ.

ದ್ವೈತಮತಸ್ಥಾಪಕರಾದ ಶ್ರೀ ಮಧ್ವಾಚಾರ್ಯರ ಅಷ್ಟಮಠ ಶಿಷ್ಯರಲ್ಲಿ ಪ್ರಥಮ ಶಿಷ್ಯರಾದ ಹೃಷೀಕೇಶತೀರ್ಥ ಪರಂಪರಾ ಕ್ರಮದಲ್ಲಿ ಯುವರಾಗಿಯೂ, ಸೀತಾ ಲಕ್ಷ್ಮಣ ಸಮೇತ ಶ್ರೀ ರಾಮಚಂದ್ರ ದೇವರ ಪಾದಾರಾಧಕರಾಗಿಯೂ ಇರುತ್ತಿದ್ದ, ಉಡುಪಿ ಫಲಿಮಾರು ಮಠದ ರಘುಪ್ರಿಯ ತೀರ್ಥಶ್ರೀಪಾದಂಗಳವರು ಈ ದಿನ ಬೆಳಗಿನ ಝಾಮದಲ್ಲಿ ತಮ್ಮ ಫಲಿಮಾರು ಮಠದಲ್ಲಿ ದೇವರ ಯಾತ್ರೆಮಾಡಿದರು. ಅವರಿಗೆ ಸುಮಾರು ೫೦ ವರುಷ ಪ್ರಾಯವಿರಬಹುದು. ಇವರು ಶಾಂತಸ್ವಭಾವದವರಾಗಿಯೂ, ವಿಚಾರ ಶೀಲರಾಗಿಯೂ, ಉದಾರಿಗಳಾಗಿಯೂ ಇರುತ್ತಿದ್ದರು. ಬಹಳ ಬಡಸ್ಥಿತಿಯಲ್ಲಿದ್ದ ತಮ್ಮ ಮಠವನ್ನು ಸರ್ವ ಭಾಗದಲ್ಲಿಯೂ ಉಚಿತ ಸ್ಥಿತಿಯಲ್ಲಿ ತಂದಿಟ್ಟಿದ್ದರು. ತಮ್ಮ ಮಠಗಳಲ್ಲಿ ಬಹಳ ಶಿಥಿಲವಾಗಿದ್ದ ಫಲಿಮಾರು, ಉಡುಪಿ, ಕಾಂತಾವರ ಎಂಬಲ್ಲಿಯ ಮಠಗಳನು ಜೀರ್ಣೋದ್ಧಾರ ಮಾಡಿಸಿದರು. [illegible]

ತನ್ನು ನಡಿಸಿ ಶ್ರೀ ಕೃಷ್ಣಪೂಜೆಯನ್ನು ಸಾಂಗವಾಗಿ ಮಾಡಿದರು. ಇವರು ಪ್ರಥಮ ಪರ್ಯಾಯ ಕಾಲದಲ್ಲಿಯೇ ಅಂದರೆ ಕಳೆದ ಖರಸಂವತ್ಸರದಲ್ಲಿ ಶ್ರೀ ಕೃಷ್ಣಮಠದ ಜೀರ್ಣೋದ್ಧಾರ ಕಾರ್ಯವು ನಡೆದಿರುವದು. ಇವರು ಈಗ ಸುಮಾರು ಎರಡು ವರುಷಗಳಿಂದಲೂ ಅನಾರೋಗ್ಯದಲ್ಲಿದ್ದರೂ, ತಾವು ಆರೋಗ್ಯಸ್ಥಿತಿಗೆ ಬರುವದು ಸಂದೇಹವಾಗಿ ಚನ್ನಾಗಿ ತಿಳಿದಿದ್ದರೂ ತಮ್ಮ ಸಂಸ್ಥಾನಕ್ಕೆ ಉತ್ತರಾಧಿಕಾರಿಯನ್ನು ಏರ್ಪಡಿಸದೆ ಆ ಜವಾಬ್ದಾರಿಕೆ ಕೆಲಸವನ್ನು ತಮ್ಮ ದ್ವಂದ್ವಮಠವಾದ ಶ್ರೀ ಅದಮಾರು ಮಠ ಸ್ವಾಮಿಯವರ ಪಾಲಿಗೆ ಬಿಟ್ಟು ತಮ್ಮ ದೇವತಾರ್ಚನೆ ಮೊದಲಾದವನ್ನು ಅವರ ಸ್ವಾಧೀನ ಒಪ್ಪಿಸಿರುವರು. ಇವರ ನಿರ್ಯಾಣಕ್ಕಾಗಿ ಸರ್ವರೂ ವ್ಯಸನ ಪಡುತ್ತಿದ್ದಾರೆ.

ಈಗ ಫಲಿಮಾರು ಮಠಕ್ಕೆ ಆಶ್ರಮ ಕೊಡುವ ಭಾರವು ಶ್ರೀ ಅದಮಾರು ಶ್ರೀ ಪಾದಂಗಳವರಲ್ಲಿ ಬಂದು ನಿತ್ತದೆ. ವಟುವಿನ ಯೋಗ್ಯತೆಯು ಹ್ಯಾಗಿದ್ದಾಗ್ಯೂ ತಮ್ಮ ಪೂರ್ವಾಶ್ರಮದಲ್ಲಿ ಸಮೀಪದ ಬಂಧುವಾಗಿರುವವರಿಗೆ ಅಥವಾ ಆಶ್ರಿತರಿಗೆ ಆಶ್ರಮ ಕೊಡುವ ಕ್ರಮವು ಈಗ ಸರ್ವಸಾಧಾರಣವಾಗಿ ನಡೆದು ಬರುತ್ತದೆ. ಇದರ ಪರಿಣಾಮವು ಕೆಲವು ಸಂದರ್ಭದಲ್ಲಿ ಒಳ್ಳೇದಾದರೂ ಹೆಚ್ಚಾಗಿ ಅನರ್ಥಕಾರಿಯಾಗುತ್ತದೆಂಬದು ಸರ್ವರಿಗೂ ವಿದಿತವಾಗಿಯೇ ಇರುವದು. ಶ್ರೀ ಅದಮಾರು ಶ್ರೀ ಪಾದಂಗಳವರು ಈಗ ಅಷ್ಟಮಠಗಳಲ್ಲಿ ಸರ್ವ ಸತ್ಕಾರ್ಯಗಳಿಗೂ ಆದರ್ಶರೂಪರಾಗಿರುವರು. ಇವರು ಈ ವರೆಗೆ ಮಾಡಿಸಿದ ಕಾರ್ಯಗಳೆಲ್ಲವೂ ಸಾರ್ಥಕವಾಗಿಯೇ ಪರಿಣಮಿಸಿರುವವು. ಈ ಸಂದರ್ಭದಲ್ಲಿಯೂ ಕೂಡ ಗತಾನುಗತಿಕವಾದ ಕ್ರಮವೊಂದನ್ನೇ ನೋಡದೆ, ಕುಲೀನನಾಗಿಯೂ, ಆಚಾರಶೀಲರಾದ ದಂಪತಿಗಳಲ್ಲಿ ಜನಿಸಿದವನಾಗಿಯೂ, ವಿದ್ಯೆಯಲ್ಲಿಯೂ ಸದಾಚಾರದಲ್ಲಿಯೂ ಆಸಕ್ತಿಯುಳ್ಳವನಾಗಿಯೂ, ದೃಢಾಂಗನಾಗಿಯೂ, ಭವ್ಯನಾಗಿಯೂ, ಪಟುವಾಗಿಯೂ, ಸನ್ಯಾಸಯೋಗದಿಂದ ಕೂಡಿದವನಾಗಿಯೂ ಇರುವ ವಟುವನ್ನು ಆರಿಸಿಯೇ ಆಶ್ರಮವನ್ನು ಕೊಡುವರಾಗಿ ಮಹಾ ಜನಗಳ ಆಶಯವಿರುವದು. ಆಶ್ರಮ ಕೊಟ್ಟು ಅವರವರ ಪಾಡಿಗೆ ಬಿಟ್ಟುಬಿಡದೆ, ಸನ್ಯಾಸ ಹೊಂದಿದವರ ಮುಂದಿನ ವಿದ್ಯಾಭ್ಯಾಸದ ವಿಷಯದಲ್ಲಿಯೂ, ಅವರಲ್ಲಿ ಶಮ ದಮಾದಿಗುಣಗಳು ಸುಸ್ಥಿರವಾಗಿ ನೆಲೆಯಾಗುವಂತೆಯೂ, ಮಠದ ಆಡಳಿತೆ ವಿಷಯದಲ್ಲಿಯೂ ಚಳೋರೀತಿಯಲ್ಲಿ ತಕ್ಕ ವ್ಯವಸ್ಥೆ ಮಾಡಿ ಪುಣ್ಯಕೀರ್ತಿಗಳನ್ನು ಸಂಪಾದಿಸುವರಾಗಿ ಮಹಾಜನಗಳು ಎದುರನೋಡುತ್ತಿದ್ದಾರೆ.

ಉಡುಪಿ.
ತಾ. 21—3—1915. ಮರೀಯು.

ಮಾರ್ಜರೀನ್ ಎಂಬ ಬೆಣ್ಣೆ.

ಯಾವ ದೇಶ ಮುಂದಕ್ಕೆ ಬರಬೇಕಾದರೂ ಆ ದೇಶದ ಜನರು ನಾಗರಿಕರಾಗಿಯೂ ವಿದ್ಯಾವಂತರಾಗಿಯೂ ಮತ್ತು ಶಾಸ್ತ್ರಜ್ಞಾನದಲ್ಲಿ ಪಂಡಿತರಾಗಿಯೂ ಇರಬೇಕು. ಯಾವ ದೇಶದಲ್ಲಿ ಜನಗಳಿಗೆ ಅಲ್ಪವಾದ ತೊಂದರೆಗಳು ಮತ್ತು ಕಷ್ಟಗಳು ಇರುತ್ತವೆಯೋ ಮತ್ತು ಅತ್ಯಧಿಕವಾದ ಸೌಕರ್ಯಗಳು ಇರುತ್ತವೆಯೋ ಆ ದೇಶವೇ ಬಹಳ ಮುಂದಾದ ದೇಶವಾಗಿರುತ್ತೆ. ಜರ್ಮನಿ, ಇಂಗ್ಲೆಂಡ್, ಫ್ರಾನ್ಸ್, ಅಮೇರಿಕಾದ ಸಂಯುಕ್ತ ಸಂಸ್ಥಾನಗಳು ಮತ್ತು ಜಪಾನ್, ಈ ದೇಶಗಳು ಉದಾಹರಣೆಗಳಾಗಿರುತ್ತವೆ.

ಶಾಸ್ತ್ರ ಪರಿಶೋಧನೆಯಿಂದ ಮೇಲ್ಕಂಡ ದೇಶಗಳಲ್ಲಿ ಅದ್ಭುತವಾದ ಅನೇಕ ಕಾರ್ಯಗಳನ್ನು ಸಾಧಿಸಿರುತ್ತಾರೆ. ಯುದ್ಧದ ಹಡಗುಗಳನ್ನು ಕಟ್ಟುವದು, ಆಕಾಶದಲ್ಲಿ ಸಂಚರಿಸುವ ವಿಮಾನಗಳು ಕಲ್ಪಿಸುವದು, ಮುಂತಾದವುಗಳು ಬಹಳ ಜನರಿಗೆ ಗೊತ್ತಿರಬಹುದು. ಇವುಗಳಲ್ಲದೆ ಜನರಿಗೆ ಸಾಮಾನ್ಯವಾಗಿ ತಿಳಿಯದೇ ಇರುವ ಭಾಗಗಳಲ್ಲಿಯೂ ಸಾಹಸಪಟ್ಟು ಆಶ್ಚರ್ಯಕರವಾದ ಅನೇಕ ವಿಷಯಗಳನ್ನು ಸಾಧಿಸಿರುತ್ತಾರೆ. ಪ್ರಾಣಿ ಮತ್ತು ಸಸ್ಯಗಳಿಂದಲೇ ನಮಗೆ ದೊರಕುತ್ತಿದ್ದ ಅನೇಕ ವಸ್ತುಗಳನ್ನು ರಸಾಯನ ಶಾಸ್ತ್ರಸಹಾಯದಿಂದ ಪ್ರಾಣಿ ಸಸ್ಯಾಪೇಕ್ಷೆಯಿಲ್ಲದೇನೇ ತಯಾರು ಮಾಡುತ್ತಿದ್ದಾರೆ. "ಇಂಡಿಗೊ" ಎಂಬ ನೀಲಿಯು ಗಿಡಗಳಿಂದ ತೆಗೆಯಲ್ಪಟ್ಟು ಮಾರಾಟಕ್ಕೆ ಬರುತ್ತಿತ್ತು. ಈಗಲಾದರೋ ಜರ್ಮನೀ ದೇಶದವರು ಅದನ್ನು ಭೂಮಿಯಲ್ಲಿ ಬೆಳೆಯುವದನ್ನು ಬಿಟ್ಟು ಕಾರ್ಖಾನೆಗಳಲ್ಲಿ ವಸ್ತು ಸಂಯೋಜನ ಚಾತುರ್ಯದಿಂದ ಆ ನೀಲಿಯನ್ನು ಬಹಳ ಸುಲಭದಿಂದ ತಯಾರುಮಾಡುತ್ತಿದ್ದಾರೆ. ಅದರಂತೆಯೇ "ಮಾರ್ಜರೀನ್" ಎಂಬ ಬೆಣ್ಣೆಯನ್ನು ನಿರಾಯಾಸವಾಗಿ ತಯಾರುಮಾಡುತ್ತಿದ್ದಾರೆ. ಹಸು ಮತ್ತು ಎಮ್ಮೆ ಹಾಲಿನಿಂದ ತೆಗೆಯುವ ಬೆಣ್ಣೆಗೂ, ಮಾರ್ಜರೀನ್ ಬೆಣ್ಣೆಗೂ ಸ್ವಲ್ಪವೂ ಭೇದವಿರುವದಿಲ್ಲ. ನಮ್ಮ ದೇಶದಲ್ಲಿ ಅನೇಕರಿಗೆ ಈ ವಿಷಯ ತಿಳಿದಿರಲಾರದು.

ಪ್ರಥಮತಃ ರಸಾಯನ ಶಾಸ್ತ್ರಜ್ಞರು ಬೆಣ್ಣೆಯಲ್ಲಿ ಯಾವ ಯಾವ ವಸ್ತುಗಳು ಸಂಕಲಿತವಾಗಿವೆಯೋ ಅವುಗಳನ್ನು ಪರಿಶೋಧಿಸಿ ತಿಳಿದುಕೊಂಡರು. ಕೊಬ್ಬಿನ ಭಾಗ ಎಷ್ಟು? ನೀರಿನ ಭಾಗ ಎಷ್ಟು? ಸಾರಜನಕ (ನೈಟ್ರೋಜನ್ ಎಂಬ ವಸ್ತು) ಸಂಯುಕ್ತವಾದ ಭಾಗವೆಷ್ಟು? ಇದೇ ರೀತಿಯಲ್ಲಿ ಯಾವ ಯಾವ ವಸ್ತುವು ಎಷ್ಟೆಷ್ಟಿದೆಯೋ ಅವುಗಳ ಪರಿಮಾಣಗಳನ್ನು ಚಿಕ್ಕದ ರೀತಿ ಗೊತ್ತುಮಾಡಿಕೊಂಡರು. ಅನಂತರ ಆ ಪದಾರ್ಥಗಳನ್ನೆಲ್ಲಾ ಬೇರೆ ಬೇರೆಯಾಗಿ ತೆಗೆದುಕೊಂಡು ಬೆಣ್ಣೆಯಲ್ಲಿರುವಂತೆ ಸಮನಾದ ಭಾಗಗಳಲ್ಲಿ ಸೇರಿಸಿದರೆ ಬೆಣ್ಣೆಯಾಗುತ್ತದೆಯೇ ಎಂದು ನೋಡುವುದಕ್ಕೆ ಪ್ರಯತ್ನಪಟ್ಟಾಗ ಪ್ರಾರಂಭದಲ್ಲಿ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜನವಾದರೂ, ಧೈರ್ಯಗುಂದದೆ ಪುನಃ ಪುನಃ ಸಾಹಸಪಟ್ಟು ಕೊನೆಗೆ ಜಯಶೀಲರಾದರು. ಈಗಲಾದರೋ ಅಚ್ಚ ಹಸುವಿನ ಬೆಣ್ಣೆಯಂತೆ ಶುಭ್ರವಾಗಿಯೂ, ಪುಷ್ಟಿಕರವಾಗಿಯೂ; ಹಸುವಿನ ಬೆಣ್ಣೆಗೆ ಸ್ವಲ್ಪವೂ ಭೇದವಿಲ್ಲದೆಯೂ ಇರುವಂತೆ ಕಾರ್ಖಾನೆಗಳಲ್ಲಿ ಮಾರ್ಜರೀನ್ ಎಂಬ ಬೆಣ್ಣೆಯನ್ನು ತಯಾರುಮಾಡಿ ಮೇಲ್ಕಂಡ ದೇಶಗಳಲ್ಲೆಲ್ಲಾ ಜನರು ವಿಶೇಷವಾಗಿ ಉಪಯೋಗಿಸುತ್ತಲಿದ್ದಾರೆ.

ಒಹಳ ಜನಗಳಿಂದಲೂ ಈ ವಿಧವಾಗಿ ಬೆಣ್ಣೆಯನ್ನು ತಯಾರುಮಾಡಲು ಪ್ರಾರಂಭದಲ್ಲಿ ಪ್ರಾಣಿಗಳ ಕೊಬ್ಬನ್ನು ಉಪಯೋಗಿಸುತ್ತಿದ್ದರು. ಪ್ರಾಣಿಗಳ ಕೊಬ್ಬು ಅಂದರೆ ನಮ್ಮ ದೇಶದವರಿಗೆ ಸ್ವಲ್ಪ ಅಸಹ್ಯವುಂಟಾಗಬಹುದು. ಆದರೆ ಹಸುವಿನ ಹಾಲು ಮತ್ತು ಬೆಣ್ಣೆ, ತುಪ್ಪ ಮುಂತಾದವುಗಳೆಲ್ಲಾ ಪ್ರಾಣಿಸಂಬಂಧವಾದ ಕೊಬ್ಬುಗಳನ್ನು ಬೇರೆ ವಿಧವಾಗಿ ಉಪಯೋಗಿಸಲು ಅನುಕೂಲವಾಗಿ ಕಂಡು ಬಂದದ್ದರಿಂದ ಈಚೀಚೆಗೆ ಕೊಬರೀ ಎಣ್ಣೆ, ಹತ್ತೀ ತುಪ್ಪ ಮುಂತಾದವುಗಳನ್ನು ಉಪಯೋಗಿಸಿ ಬೆಣ್ಣೆಯನ್ನು ತಯಾರುಮಾಡುತ್ತಾರೆ. ಆದ್ದರಿಂದ ಕೇವಲ ಸಸ್ಯಗಳಿಂದ ಬಂದ ಪದಾರ್ಥಗಳನ್ನೇ ಉಪಯೋಗಿಸಿರುವುದರಿಂದ ಮತಸಂಬಂಧವಾದ ಕಳಂಕವುಳ್ಳವರೂ ಕೂಡ ನಿಷ್ಕಳಂಕದಿಂದ ಶಾಸ್ತ್ರವಿರುದ್ಧವಿಲ್ಲದೆ ಈ ಬೆಣ್ಣೆಯನ್ನು ಅವರವರಿಗೆ ಅಭಿರುಚಿಯಾದಲ್ಲಿ ಉಪಯೋಗಿಸಬಹುದು.

"ಒಂದು ಇಂಗ್ಲೀಷ ಕಾರ್ಖಾನೆಯವರು ಕೊಬ್ಬರೀ ಎಣ್ಣೆಯಿಂದ ಪ್ರಾರಂಭಿಸಿ ಬೆಣ್ಣೆಯನ್ನು ತಯಾರುಮಾಡುತ್ತಲಿದ್ದಾರೆ. ಈ ಒಂದು ಕಾರ್ಖಾನೆಯವರೇ ವರ್ಷಕ್ಕೆ ೧,೫೦,೦೦೦ ಟನ್ ಕೊಬ್ಬರಿಯನ್ನು ಉಪಯೋಗಿಸುವರು. ೧೯೧೩ ನೆಯ ಇಸವಿಯಲ್ಲಿ ತೆಂಗಿನ ಗಿಡದಿಂದ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಸೇರಿ ೭,೫೭,೦೦,೦೦೦ ಪೌಂಡು ಉತ್ಪತ್ತಿಯಾಯಿತು. ಆರು ವರ್ಷಗಳ ಕೆಳಗೆ ಅದೇ ಕಾರ್ಖಾನೆಯಲ್ಲಿ ಒಂದು ರೂಪಾಯಿ ತೂಕದ ಕೊಬ್ಬರಿಯನ್ನೂ ಉಪಯೋಗಿಸುತ್ತಿರಲಿಲ್ಲ; ಈಗ ವರ್ಷಕ್ಕೆ ೧,೫೦,೦೦೦ ಟನ್ ಕೊಬ್ಬರಿಯನ್ನು ಕೊಂಡು ಬೆಣ್ಣೆ ಮುಂತಾದದ್ದು ತಯಾರುಮಾಡುತ್ತಾರೆ. ಬೆಣ್ಣೆಯನ್ನು ತಯಾರುಮಾಡಲು ಒಂದು ಕಾರ್ಖಾನೆಯಲ್ಲಿಯೇ ೧,೫೦,೦೦೦ ಟನ್ ಕೊಬರಿಯಿಂದ ಬಂದ ಎಣ್ಣೆಯನ್ನು ಉಪಯೋಗಿಸಿದರೆ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಎಷ್ಟು ಉಪಯೋಗಿಸುತ್ತಾರೋ ವಾಚಕರೇ ಊಹಿಸಬಹುದು. ವಿಶೇಷವಾಗಿ ಮಾರ್ಜರೀನ್ ತಯಾರಾಗುವುದು ಇಂಗ್ಲೆಂಡು, ಫ್ರಾನ್ಸ್, ಜರ್ಮನಿ, ಆಸ್ಟ್ರಿಯಾ ಅಮೇರಿಕಾದ ಸಂಯುಕ್ತ ಸಂಸ್ಥಾನದ, ಈ ದೇಶಗಳಲ್ಲೇ.

ನೀರಿನಂತೆ ಇವರು ಕೊಬ್ಬರೀ ಎಣ್ಣೆಯಿಂದ ಘನೀಭೂತವಾಗಿರುವ ಬೆಣ್ಣೆಯನ್ನು ಹ್ಯಾಗೆ ತಯಾರುಮಾಡುತ್ತಾರೆಂದು ಶಂಕೆಯು ಹುಟ್ಟಬಹುದು. ಛಳಿಗಾಲದಲ್ಲಿಯೂ ಮತ್ತು ಛಳಿ ದೇಶಗಳಲ್ಲಿಯೂ ಕೊಬ್ಬರೀ ಎಣ್ಣೆಯೂ ಮತ್ತು ಹತ್ತೀ ಬೀಜದಿಂದ ಬಂದ ಎಣ್ಣೆಯೂ ಗಡ್ಡೆಕಟ್ಟಿಕೊಂಡು ಘನೀಭೂತವಾಗಿಯೇ ಇರುತ್ತವೆ. ಮೊದಲು ಈ ಎಣ್ಣೆಗಳನ್ನು ಕಶ್ಮಲರಹಿತವಾದವುಗಳನ್ನಾಗಿ ಮಾಡುವದಕ್ಕೋಸ್ಕರ ಪರಿಶೋಧಿಸುತ್ತಾರೆ. ಅನಂತ ಎರಡು ಮೂರು ತರಹಾ ಎಣ್ಣೆಗಳನ್ನು ಸರಿಯಾದ ಪರಿಮಾಣಗಳಲ್ಲಿ ಬೆರೆಸಿ ಮಿಶ್ರಿತವಾದ ಎಣ್ಣೆಯನ್ನು ಪುನಃ ಶೋಧಿಸುತ್ತಾರೆ.

ಹಾಲಿನಿಂದ ಬೆಣ್ಣೆಯನ್ನು ತೆಗೆದುಬಿಟ್ಟು ಹಿಂದೆ ನಿಂತಿರುವ ಹಾಲನ್ನು ಶೋಧಿಸಿ ಕ್ರಿಮಿ ಮುಂತಾದವುಗಳು ಸೇರದಂತೆ ಬಹಳ ಹುಷಾರಿನಿಂದ ನೋಡಿಕೊಂಡಿದ್ದು, ಹಿಂದೆ ಹೇಳಿದ ಮಿಶ್ರಿತವಾದ ಎಣ್ಣೆಗಳನ್ನು ಬೆಣ್ಣೆ ರಹಿತವಾದ ಈ ಹಾಲಿನೊಡನೆ ಸೇರಿ[illegible] ಯುತ್ತಾರೆ. ಹೀಗೆ ಕೆಲವು ಕಾಲ ಕಡೆದಲ್ಲಿ ಎಣ್ಣೆಯೂ ಹಾಲು ಒಂದರಲ್ಲೊಂದು ಹೊಂದಿಕೊಂಡು ಸೇರಿಕೊಂಡು ಕ್ರಮೇಣ ಗಟ್ಟಿಯಾಗುತ್ತಾ ಬಂದು ಸಣ್ಣ ಸಣ್ಣ [illegible] ಕಣಗಳು ಮೇಲಕ್ಕೆ ಬರುತ್ತಾ, ನೀರುಮಾತ್ರ ಬೇರೆಯಾಗುತ್ತಾ ಬರುತ್ತದೆ. [illegible] ಮೇಲೆ ಸ್ವಲ್ಪ ಹೊತ್ತು ಕಡೆಯುವದನ್ನು ನಿಲ್ಲಿಸಿ ನೀರಿನ ಭಾಗವನ್ನೂ ಮತ್ತು ಬೆಣ್ಣೆಯ ಭಾಗವನ್ನೂ ಬೇರೆ ಬೇರೆಯಾಗಿ ಮಾಡುತ್ತಾರೆ. ಅದಾಗ್ಯೂ [illegible] ವಿಶೇಷವಾಗಿರುವದರಿಂದ ಸಲ ಉಪ್ಪನ್ನು [illegible]

ದ ನೀರನ್ನು ಅದುಮಿ ಹಿಂಡಿ ತೆಗೆದುಬಿಡುತ್ತಾರೆ. ಹೀಗೆ ಗುಂಡುಗಳು ಬೆಣ್ಣೆಯ ಲ್ಲಿ ತಿರುಗಾಡುವುದರಿಂದ ಬೆಣ್ಣೆಯ ಕಣಗಳು ಅನ್ಯೋನ್ಯಮಿಳಿತವಾಗಿ ಒಂದರ ಲ್ಲೊಂದು ಸೇರಿಕೊಳ್ಳುತ್ತವೆ.

ಅನಂತರ ಈ ಬೆಣ್ಣೆಗೆ ಹಸುವಿನ ಬೆಣ್ಣೆಯ ರುಚಿಯನ್ನು ಕೊಡುವುದಕ್ಕೋಸ್ಕರ ಬೆಣ್ಣೆಯಲ್ಲಿ ದೊರಕುವ ಕೆಲವು ಪದಾರ್ಥಗಳನ್ನು ಸೇರಿಸುತ್ತಾರೆ. ಮತ್ತು ಹಸುವಿನ ಬೆಣ್ಣೆಯಂತೆ ಕಾಣುವುದಕ್ಕೋಸ್ಕರ ಸ್ವಲ್ಪ ಹಳದೀ ಬಣ್ಣವನ್ನೂ ಕೊಡುತ್ತಾರೆ. ಮತ್ತು ಬೆಣ್ಣೆಯಲ್ಲಿರುವಂತೆ ಕೆಲವು ಸಾರಜನಕ ಪದಾರ್ಥ ವಿಶೇಷವನ್ನೂ ಸೇರಿಸು ತ್ತಾರೆ, ಹೀಗೆ ತಯಾರುಮಾಡುವ ಬೆಣ್ಣೆಯನ್ನು ಹಸುವಿನ ಬೆಣ್ಣೆಯಿಂದ ತುಂಬಾ ಚತುರರೂ ಕೂಡ ಕಂಡುಹಿಡಿಯಲಾರರು, ರಸಾಯನ ಶಾಸ್ತ್ರಪರೀಕ್ಷೆ ಮಾಡಿ ದರೂ ಕಂಡುಹಿಡಿಯುವುದು ಕಷ್ಟ. ವಾಸನೆ, ರುಚಿ, ಪುಷ್ಟಿಕರವಾದ ಗುಣಗಳು, ಬೆಣ್ಣೆಯನ್ನು ಕಾಯಿಸಿದರೆ ಆಗುವ ವ್ಯತ್ಯಾಸಗಳು, ಇವೆಲ್ಲವೂ ಸ್ವಲ್ಪವೂ ವ್ಯತ್ಯಾಸ ವಾಗದಂತೆ ಮಾರ್ಜರೀನ್ ಬೆಣ್ಣೆಯಲ್ಲಿ ಹಸುವಿನ ಬೆಣ್ಣೆಯಲ್ಲಿರುವಂತೆಯೇ ಕಂಡು ಬರುವವು. ಈ ಮಾರ್ಜರೀನ್ ಬೆಣ್ಣೆಯು ನಿರ್ದುಷ್ಟವಾದ ಪದಾರ್ಥವಾದ್ದರಿಂದ ಯಾರು ಬೇಕಾದರೂ ಉಪಯೋಗಿಸಬಹುದು.

ಸಾಮಾನ್ಯ ಜನಗಳಿಗೆ ಸುಲಭರೀತಿಯಲ್ಲಿ ತಿಳಿಯಲೆಂದು ಕೆಲವು ಕಷ್ಟವಾದ ಭಾಗಗಳನ್ನು ಬಿಟ್ಟು ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ಪ್ರಕಟಿಸಿದೆ. ಹೆಚ್ಚು ವಿಷಯ ಗಳನ್ನು ತಿಳಿಯಬೇಕೆಂದು ಅಪೇಕ್ಷೆಯುಳ್ಳವರು ಭಾರೀ ಪುಸ್ತಕಗಳನ್ನು ಓದಬೇಕಾ ಗುತ್ತೆ. ಕೊಬ್ಬರಿ ಎಣ್ಣೆಯನ್ನು ಶೋಧಿಸುವ ವಿಚಾರದಲ್ಲಿ ಮೈಸೂರು ಸಂಪದಭ್ಯು ದಯ ಸಮಾಜದವರು ಕೆಲವು ವಿಷಯಗಳನ್ನು ೧೯೧೫ನೇ ಜನವರಿ ತಿಂಗಳಲ್ಲಿ ಪ್ರಕಟಿ ಸಿರುತ್ತಾರೆ. ಕೊಬ್ಬರೀ ಎಣ್ಣೆಯನ್ನು ಮೇಲೆ ಹೇಳಿದ ರೀತಿ ಬೆಣ್ಣೆಯನ್ನು ತಯಾರು ಮಾಡುವುದಕ್ಕೂ ಮತ್ತು ಅನೇಕ ಕಾರ್ಯಗಳಿಗೂ ವಿಶೇಷವಾಗಿ ಉಪಯೋಗಿಸುತ್ತಿ ದ್ದಾರೆ ದಿನ ಕ್ರಮೇಣ ಇನ್ನೂ ಹೆಚ್ಚಾಗಿ ಉಪಯೋಗಿಸುತ್ತಾ ಬಂದಾರು. ಆದ್ದ ರಿಂದ ನಮ್ಮ ದೇಶದವರು ಕೈಲಾದಮಟ್ಟಿಗೂ ತೆಂಗಿನ ಬೆಳೆಯನ್ನು ಅಭಿವೃದ್ಧಿಗೆ ತಂದರೆ ಅಪಾರವಾದ ಲಾಭವುಂಟು.

ರೆ. ಗೆ.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ತಮ್ಮ ಹಿಂದಿನ ಸಂಚಿಕೆಯ ಒಂದರಲ್ಲಿ ವಿಮರ್ಶಿಯು ಬರೆದ ಲೇಖನದ ಕುರಿತು ಒಂದೆರಡು ಮಾತುಗಳನ್ನು ಬರೆಯಲು ಅಪ್ಪಣೆಯಾಗಲಿ. ವಿಮರ್ಶಿಯು ಹೇಳುವಂತೆ ನಾನು ಪೋಲೀಸು ಇಲಾಖೆಯವನೂ ಅಲ್ಲ; ಬೇರೆ ಜನರ ಸ್ನೇಹಿತನು ಹ್ಯಾಗೋ ಹಾಗೆಯೇ ಪೋಲೀಸಿನವರ ಸ್ನೇಹಿತನೂ ಆಗಿರಬಹುದು. ಕೆಲವು ಸಮಯದ ಹಿಂದೆ ಪಟ್ಟ ಣದಲ್ಲಿ ಹರಡಿಕೊಂಡಿದ್ದ ಕಳವಿನ ಗುಲ್ಲಿನ ನಿಜತ್ವವನ್ನು ವಿಚಾರಿಸಿ ನನ್ನ ಕಿವಿಗೆ ಬಿದ್ದ ಕೆಲವು ಕಳವುಗಳ ವಾರ್ತೆಯ ನಿಜತ್ವವನ್ನು ಹೊರಪಡಿಸಿದ್ದೆನಷ್ಟೆ. ನಮ್ಮ ಪೋಲೀಸ ಇಲಾಖೆಯು ಇಂಡಿಯಾ ಸರಕಾರದ ಇಲಾಖೆಗಳಲ್ಲಿ ಒಂದು ಪ್ರಾಮುಖ್ಯವಾದ ಅಂಗ ವಾಗಿದೆ. ಈ ಇಲಾಖೆಗೆ ಕಷ್ಟವೂ ಅಪಾಯವೂ ಆದ ಅನೇಕ ಕೆಲಸಗಳನ್ನು ಮಾಡ ಲಿಕ್ಕಿದೆ ಎಂಬದನ್ನು ಇಲ್ಲಿ ಬೇರೆ ಹೇಳಬೇಕೆಂತಿಲ್ಲ. ಇಂಥಾ ಇಲಾಖೆಯಿಂದ ಪ್ರಜಾ ಜನರಿಗೆ ಉಂಟಾಗುವ ಪ್ರಯೋಜನಗಳು ಸರ್ವರಿಗೆ ಗೊತ್ತೇ ಅದೆ. ನಾನು ಈ ಇಲಾ ಖೆಯಿಂದ ಉಂಟಾಗುವ ಪ್ರಯೋಜನಗಳನ್ನು ಅರಿತವನಾದ್ದರಿಂದ ಇತ್ತಲಾಗಿನ ಹಗಲು ಕಳವುಗಳ ಗುಲ್ಲಿನ ಯಥಾರ್ಥ ಸ್ಥಿತಿಯನ್ನು ಜನ ಸಾಮಾನ್ಯರಿಗೆ ತಿಳಿಸುವ ಬಗ್ಗೆ ಹಿಂದಿನ ಲೇಖನವನ್ನು ಬರಕೊಂಡಿದ್ದೆನು.

ಈ ಲೇಖನವನ್ನು ವಿಮರ್ಶಿಯು ವಿಮರ್ಶಿಸಿದ ವಿಧಾನವನ್ನು ನೋಡಿದರೆ ವಿಮ ರ್ಶಿಯು ಕಳವುಗಳ ನಿಜ ಸ್ಥಿತಿಯನ್ನು ಅರಿಯದೆ ಆಗಲೀ ಇಲ್ಲವೆ ಪೋಲೀಸಿನವರ ಮೇಲೆ ವಿರೋಧ ಭಾವದಿಂದಾಗಲೀ ಆ ಲೇಖನವನ್ನು ಬರದಿದ್ದನೆಂತ ತಿಳಿಯಬೇಕಾಗಿದೆ. ಬಹುಶಾ ಈ ವಿಮರ್ಶಿಯು ಅವಿಚಾರದಿಂದ ಆ ಲೇಖನವನ್ನು ಬರದದ್ದೇ ಆಗಿರಬೇಕು. ನಾನು ಮೊದಲು ಬರೆದ ಲೇಖನವು ಪಟ್ಟಣಿಗರಲ್ಲಿ ಉಂಟಾಗಿದ್ದ ಕಳ್ಳರ ಭಯವನ್ನು ಹೋಗಲಾಡಿಸಲಿಕ್ಕೂ ಅಂಥಾ ಅನಾವಶ್ಯಕವಾದ ಭಯವು ಮುಂದಕ್ಕೆ ಉಂಟಾಗದ ಹಾಗೂ ಬರದದ್ದಾಗಿತ್ತು. ಇತರ ಯಾವ ಉದ್ದೇಶದಿಂದಲೂ ನಾನು ಆ ಲೇಖನವನ್ನು ಬರದದ್ದು ಅಲ್ಲ.

ವಿಮರ್ಶಿಯು ಕಳವುಗಳ ಒಂದು ಪಟ್ಟಿಯನ್ನು ತನ್ನ ಲೇಖನದಲ್ಲಿ ಕೊಟ್ಟಿರು ತ್ತು. ಅದು ಸತ್ಯವೋ ಇಲ್ಲವೆ ಸುಳ್ಳೋ ಎಂಬದಾಗಿ ನಾನು ಚರ್ಚಿಸುವದಿಲ್ಲ. ಅವುಗಳೆಲ್ಲಾ ಸತ್ಯವೇ ಆಗಿದ್ದರೂ ಅವುಗಳಿಂದ ಪಟ್ಟಣದಲ್ಲಿ ಅನಾವಶ್ಯಕವಾದ ಕಳ್ಳರ ಭಯವು ಹುಟ್ಟಲಿಲ್ಲ. ಯಾಕಂದರೆ ಇಂಥಾ ಕಳವುಗಳು ಎಂದಿನಂತೆ ಪ್ರತಿವರ್ಷವೂ ನಡಿಯುವಂಥಾದ್ದೇ ಆಗಿರುವವು. ಇವು ಈ ವರ್ಷ ಒಂದು ಹೊಸ ವಿಷಯವಲ್ಲ. ಆದರೆ ಕಳ್ಳರು ಹೆಂಗಸರ ಮಕ್ಕಳ ಕಿವಿಯಲ್ಲಿದ್ದ ಆಭರಣ ಇತ್ಯಾದಿಗಳನ್ನು ಹಗಲು ಹೊತ್ತು ಕಸಕೊಂಡು ಹೋಗುತ್ತಾರೆಂಬ ಗುಲ್ಲೇ ಈ ವರ್ಷದ ಹೊಸ ವಿಷಯವು. ಇಂಥಾ ಕಳವುಗಳ ವಾರ್ತೆಯಲ್ಲಿ ಹೆಚ್ಚಿನವು ಅತಿಶಯೋಕ್ತಿಗಳಾಗಿದ್ದು ಒಂದೆರಡು ಮಾತ್ರ ನಿಜವಾದದ್ದೆಂಬದಾಗಿ ನಾನು ಬರದಿದ್ದೆನಷ್ಟೆ.

ಯುದ್ಧ ಸಂಬಂಧವಾಗಿ ಅನೇಕ ಜೀನಸುಗಳ ಕ್ರಯವು ಏರಿಯದೆ ಮತ್ತು ಆಮದು ರಫ್ತುಗಳು ಕಡಿಮೆಯಾಗಿ ಅನೇಕ ಕೂಲಿಯಾಳುಗಳು ಕೆಲಸವಿಲ್ಲದೆ ಇರುವ ವಿಷಯವು ವಿಮರ್ಶಿಗೆ ಗೊತ್ತಿರಬಹುದು. ಆದರೂ ಕಳ್ಳರ ಬಾಧೆಯು ನಮ್ಮ ನೆರೆಹೊರೆಯ ಜಿಲ್ಲೆಗಳಲ್ಲಿರುವಂತೆ ವಿಶೇಷವಾಗಿ ಇಲ್ಲಿ ಇಲ್ಲವೆಂಬದು ವಿಮರ್ಶಿಗೆ ತಿಳಿದಿರಬಹುದು. ಈ ಪಟ್ಟಣದಲ್ಲಿ ಕೆಲವು ಕಳವುಗಳೇನೋ ನಡದಿವೆ. ಹೆಚ್ಚಿನ ಕಳವುಗಳು ಉಂಟಾಗದ ಹಾಗೆ ಪೋಲೀಸಿನವರು ತಕ್ಕೊಂಡ ಶ್ರಮವನ್ನು ಸರ್ವರೂ ಅರಿತೇ ಇರುವರು. ಆ ಬಗ್ಗೆ ನಾವು ಪೋಲೀಸಿನವರಿಗೆ ಕೃತಜ್ಞರಾಗಿರತಕ್ಕದ್ದು ಎಂತ ನಾನು ಬೇರೆ ಹೇಳಬೇ ಕೆಂತಿಲ್ಲ.

ಡಿಪ್ಯುಟಿ ಸುಪರಿಂಟೆಂಡೆಂಟರು, ಸರ್ಕಲ್ ಇನ್ಸ್‌ಪೆಕ್ಟರರು ವ ಸಬ್ ಇನ್ಸ್‌ಪೆಕ್ಟರರು ತಮ್ಮತಮ್ಮ ನಿಯಮಿತ ಕೆಲಸಗಳನ್ನು ಹಿಂದೆಯೂ ಮಾಡಿರುವರು, ಮುಂದೆಯೂ ಮಾಡುವರಲ್ಲದೆ ಪಟ್ಟಣದಲ್ಲಿ ಕಳವಿನ ಗುಲ್ಲು ಎದ್ದಾಗ ಅವರು ಪಟ್ಟ ಸಾಹಸಗಳನ್ನು ಪಟ್ಟಣಿಗರಲ್ಲಿ ಪ್ರತಿ ಒಬ್ಬನು ಅರಿತಿರಬಹುದು. ಈ ಗುಲ್ಲಿನ ಕಾಲದಲ್ಲಿ ಮತ್ತು ಇನ್ನೂ ಅವರು ತಮ್ಮ ನಿಯಮಿತ ಕೆಲಸಗಳಿಗಿಂತಲೂ ಹೆಚ್ಚಿನ ಕೆಲಸಗಳನ್ನು ಮಾಡಿ ದ್ದಾರೆಂದು ನಾನು ಹೇಳಿದ ಮಾತ್ರದಿಂದ ಅವರು ಹಿಂದೆ ಕೆಲಸ ಮಾಡಲಿಲ್ಲವೆಂಬ ಅರ್ಥ ವಾಗುವದು ಹ್ಯಾಗೋ ವಿಮರ್ಶಿಯೇ ಬಲ್ಲನು. ಈ ಆಫೀಸರರಿಗೆ ಬೀಟು ಚೆಕ್ಕಿನ ಕೆಲಸಗಳು ಹೊರತು ಬೇರೆ ಜವಾಬ್ದಾರಿ ಕೆಲಸಗಳು ಉಂಟು.

ಮಾನುಷ್ಯ ಸಂಸ್ಥೆಯಲ್ಲಿ ಬಡತನವು ಎಷ್ಟು ವರೇಗೆ ಇರುವದೋ ಅಷ್ಟು ವರೇಗೆ ಕಳವುಗಳು ಇದ್ದೇ ಇರುವವು. ಅನ್ಯಾಯ ಇಲ್ಲದ ಲೋಕ ಹ್ಯಾಗೆ ಇಲ್ಲವೋ ಹಾಗೆ ಕಳವುಗಳು ನಡಿಯದ ಸ್ಥಳವು ಇರದು. ಇಂಥಾ ಕಳ್ಳತನವು ಹೆಚ್ಚಾಗದ ಹಾಗೆ ಪೋಲೀ ಸಿನವರು ಜಾಗ್ರತೆತಕ್ಕೊಳ್ಳುವದು ಪೋಲೀಸಿನವರ ಪ್ರಾಮುಖ್ಯ ಕರ್ತವ್ಯವಾಗಿದೆ. ಪೋಲೀಸಿನವರ ಈ ಮಹತ್ತಾದ ಕಾರ್ಯಕ್ಕೆ ಊರ ಜನರ ಒತ್ತಾಸೆಯು ಇದ್ದರೆ ಕಳ್ಳರ ಹುಟ್ಟಡಗಿಸುವದು ಪೋಲೀಸಿನವರಿಗೆ ಕಷ್ಟಸಾಧ್ಯವಲ್ಲ. ದುಷ್ಟ ಜನರನ್ನು ಕಂಡು ಹಿಡಿದು ಶಿಕ್ಷೆಗೆ ಗುರಿಪಡಿಸಿ ಶಿಷ್ಟ ಜನರನ್ನು ಕಾಪಾಡುವ ಭಾರವು ಪೋಲೀಸಿನವರದ್ದು, ನಮಗೇನು ಎಂಬ ಭಾವನೆಯು ನಮ್ಮಲ್ಲಿರುವದು. ಆದರೆ ಇದು ತಪ್ಪು ಅಭಿಪ್ರಾಯ. ಈಗ ಯುದ್ಧ ಸಂಬಂಧದಲ್ಲಿ ಲಂಡನ್ ಮೊದಲಾದ ಸ್ಥಳಗಳ ಪೋಲೀಸಿನವರಿಗೆ ವಿಶೇಷ ವಾದ ಕೆಲಸಗಳು ಇರುವದರಿಂದ ಊರ ಜನರಲ್ಲಿ ಶ್ರೀಮಂತರಾದವರೇ ಪೋಲೀಸು ಇಲಾಖೆಗೆ ಹಲವು ಬಗೆಯಲ್ಲಿ ಸಹಾಯಮಾಡುವ ಬಗ್ಗೆ ತಮ್ಮನ್ನು ಸ್ಪೆಶಿಯಲ್ ಪೋ ಲೀಸು ಜವಾನರಾಗಿ ದಾಖಲು ಮಾಡಿಸಿಕೊಂಡದ್ದು ವಿಮರ್ಶಿಗೆ ಗೊತ್ತಿರಬಹುದು. ಅಂಥಾ ಸ್ವಾರ್ಥತ್ಯಾಗವು ಊರ ಜನರಲ್ಲಿಯೂ ಮತ್ತು ಊರ ಜನರೇ ಸೇರಿರು ಇಲ್ಲಿಯ ಪೋಲೀಸ ಇಲಾಖೆಯಲ್ಲಿಯೂ ಇದ್ದರೆ ನಮ್ಮ ದೇಶವೂ ಹೆಚ್ಚಿನ ಮೇಲ್ಮೆಯನು ಪಡಿಯುವದರಲ್ಲಿ ಅನುಮಾನವಿಲ್ಲ.

ವಿಚಾರಿ.

ಅಯ್ಯಾ ಪತ್ರಕರ್ತರೇ,

ನಮ್ಮ ಈ ಪಾಣೆಮಂಗಳೂರು, ನರಿಕೊಂಬು, ನಂದಾವರ ಗ್ರಾಮ ಗಳಿಗೆ ಜನಸಂಖ್ಯೆಯು ಸುಮಾರು ೧೦ ಯಾ ೧೨ ಸಾವಿರದ ವರೆಗೆ ಇದ್ದಾಗ್ಯೂ ಒಂದು ಹುಡುಗಿಯರ ಶಾಲೆ ಸ್ಥಾಪಿಸದೆ ಇದ್ದದರಿಂದ ಬಹು ಅನಾನುಕೂಲತೆಯಾಗಿದೆ. ಈ ಸ್ಥಿತಿಯಲ್ಲಿ ಕೆಲವು ಮಹಾನುಭಾವರು ಕೂಡಿ ಇತ್ತಲಾಗೆ ಇದೇ ತಿಂಗಳ ತಾರೀಕು ೧೭ನೇ ಬುಧವಾರ ಒಂದು ಹುಡುಗಿಯರ ಶಾಲೆಯನ್ನು ಏರ್ಪಡಿಸುವ ಏರ್ಪಾಡು ಮಾಡಿ ಒಂದು ಉಪಾಧ್ಯಾಯಿನಿಯನ್ನು ನೇಮಿಸಿದ್ದಾರೆ. ಈ ಸಂಸ್ಥೆಯಲ್ಲಿ ತತ್ಕಾಲಕ್ಕೆ ಸುಮಾರು ೩೦ ವಿದ್ಯಾರ್ಥಿಗಳು ಸೇರಿದ್ದಾರೆ. ಒಬ್ಬರೇ ಉಪಾಧ್ಯಾಯಿನಿಯರು ಇದ್ದ ಕಾರಣದಿಂದ ಶಾಲೆಯನ್ನು ನಡಿಸುವುದು ಕಷ್ಟಸಾಧ್ಯವಾಗಿಯದೆ. ಈಗ ಊರುಗಳಲ್ಲಿ ಹುಡುಗಿಯರ ಶಾಲೆಗಳನ್ನು ತಾಲೂಕು ಬೋರ್ಡಿನವರು ಸ್ಥಾಪಿಸ ಪ್ರಾರಂಭಿಸಿದ್ದಾರೆ. ಆದ್ದರಿಂದ ಈಗ ತಾನೇ ತೆರದಿರುವ ಈ ಶಾಲೆಯನ್ನು ತಾಲೂಕಿನ ಪ್ರೆಸಿಡೆಂಟರು ಸಂದರ್ಶಿಸಿ ಬೋರ್ಡಿನವರು ತಮ್ಮ ಆಡಳಿತೆಯಲ್ಲಿ ವಹಿಸಿಕೊಂಡರೆ ಉಪಕಾರವಾಗು ತ್ತಿತ್ತು. ಈ ಮೇಲೆ ಹೇಳಿದ ಸಂಗತಿಗಳಿಗೆ [illegible] ಏರ್ಪಡಿಸುವರಾಗಿ ನಂಬಿರುವ,

ತಾ. 21-3-15 ಪಾಣೆಮಂಗಳೂರು ನಿವಾಸಿ.

ಯುದ್ಧ ಸಮಾಚಾರ.

ತಾ: ೧೬ನೇ ಮಾರ್ಚಿ.

ಮಾರ್ಚ ತಾ. ೧ರ ನಂತರ ಜರ್ಮನಿಗೆ ಹೋಗುವ ಹಡಗಗಳನ್ನು ಬ್ರಿಟಿಷರು ಜರ್ಮನಿಗೆ ಹೋಗಬಿಡಲಾರರೆಂದೂ ತಟಸ್ಥ ರಾಜ್ಯಗಳ ಯಾ ಮಿತ್ರರಾಜ್ಯಗಳ ಬಂದರಗಳಿಗೆ ಮುಂದರಿಯಲು ಬ್ರಿಟಿಷರ ಪಾಸ್ ಪಡಕೊಳ್ಳದ ಹಡಗಗಳು ಬ್ರಿಟಿಷ ಬಂದರದಲ್ಲಿ ತಮ್ಮ ಸಾಮಾನುಗಳನ್ನು ಇಳಿಸಬೇಕಾಧಿತೆಂದೂ ಲಂಡನ್ ಗಜಿಟನಲ್ಲಿ ಪ್ರಕಟವಾಗಿದೆ.

ಜರ್ಮನಿ-ಯಾ ಜರ್ಮನಿಗೆ ಸೇರದ ಬಂದರದಿಂದ ಜರ್ಮನಿಯ ಸಾಮಾನುಗಳನ್ನು ವಯ್ಯುವ ಹಡಗಗಳನ್ನೂ ಮೇಲಿನ ವಿಧವಾಗಿಯೇ ನಡಿಸೋಣಾಧೀತು. ಆದರೆ ಇದರಲ್ಲಿರುವ ಸಾಮಾನುಗಳನ್ನು ಬ್ರಿಟಿಷರು ಪ್ರಯೋಗಿಸಿಕೊಳ್ಳಲಾರರು ಮತ್ತು ಯುದ್ಧದ ಸಂಧಾನವಾಗುವ ವರೆಗೆ ಮಾರಲಾರರು.

ಶತ್ರುಗಳಿಗೆ ಸೇರಿದ ಸ್ಥಳಗಳಿಂದ ಜರ್ಮನರದಲ್ಲದ ಬಂದರಗಳಿಗೆ ಹೋಗುವ ಹಡಗಗಳನ್ನೂ ಮೇಲಿನ ರೀತಿ ನಡಿಸಲಾಗುವದು ಎಂತ ಪ್ರಕಟವಾಗಿದೆ.

ವೈಸರ್ ಮತ್ತು ಡಿಕ್ಸ್ಮೂಡೆಯ ದಕ್ಷಿಣದಲ್ಲಿ ಬೆಲ್ಜಿಯನರ ಸೇನೆಯು ಮುಂದರಿಯುತ್ತಲಿದೆ. ವೈಪ್ರಿಸಿನ ಸ್ಯಂಟ್ ಎಲೋಯಿ ಎಂಬಲ್ಲಿ ಶತ್ರುಗಳು ಬ್ರಿಟಿಷರ ಮೇಲೆ ಹಠಾತ್ತಾಗಿ ಬಿದ್ದುದರಿಂದ ಬ್ರಿಟಿಷ ಸೈನಿಕರು ಒಮ್ಮೆ ಸ್ವಲ್ಪ ಹಿಂದಿರಿಯಬೇಕಾದರೂ ನಂತರ ಬ್ರಿಟಿಷರು ಪುನಃ ಶತ್ರುಗಳ ಮೇಲೆ ಹಲ್ಲಾ ಮಾಡಿ ಕಳಕೊಂಡ ಸ್ಥಳಗಳನ್ನು ಪಡಕೊಂಡರು.

ಮಾಜಿ ಸುಲ್ತಾನ ಅಬ್ದುಲ ಹಮೀದರ ಮಗನನ್ನು ಕನ್‌ಸ್ಟಂತಿನೋಪಲಿನಲ್ಲಿ ಯಾರೋ ಕೊರಳು ಹಿಸುಕಿ ಕೊಂದಿದ್ದಾರೆಂಬ ವಾರ್ತೆಯು ಕೊಲೋನ್ ಗಜಿಟಿನಲ್ಲಿ ಪ್ರಕಟವಾಗಿದೆ.

ಸರ್ವಿಯದಲ್ಲಿ ಒಂದು ತರದ ಸೊಂಕು ರೋಗ ತಲೆದೋರಿರುವುದರಿಂದ ಅನೇಕ ದಾದಿಗಳೂ ದಾಕ್ತರರೂ ಮೃತರಾದರೆಂಬ ವಾರ್ತೆ ಬಂದಿರುವುದು. ಈ ರೋಗದ ಹುಟ್ಟಡಗಿಸ ಪ್ರಯತ್ನಿಸುವರೆ ೧೦೦ ಫ್ರೆಂಚ ದಾಕ್ತಾರರು ಅಲ್ಲಿಗೆ ಹೋಗಿರುವರು.

ತಾ. ೧೭ನೇ ಮಾರ್ಚಿ.

ಜುವಾನ್ ಫೆರ್ನಾಂಡಿಸ್ ದ್ವೀಪದ ಬಳಿ ಜರ್ಮನರ "ಡ್ರೆಸ್ಡನ್" ಕ್ರೂಜರ್ ನಾವೆಗಳನ್ನು ಬ್ರಿಟಿಷರ "ಗ್ಲಾಸ್‌ಗೋ" "ಕೆಂಟ್" ಮತ್ತು "ಓರಮ್" ಎಂಬ ನಾವೆಗಳು ಮುಳುಗಿಸಿದವು. ಡ್ರೆಸ್‌ಡನ್ ನಾವೆಯ ನಾವಿಕರು ರಕ್ಷಿಸಲ್ಪಟ್ಟರು, ೧೫ ಮಂದಿಗೆ ಮಾತ್ರ ಘಾಯವಾಗಿದೆ. ಬ್ರಿಟಿಷರಲ್ಲಿ ಪ್ರಾಣಾಪಾಯವಾಗಲಿಲ್ಲ. ಹಡಗಗಳಿಗೂ ಹಾನಿಯಾಗಲಿಲ್ಲವೆಂತ ಪ್ರಕಟವಾಗಿದೆ.

ಬ್ರಿಟಿಷರು ಈಚೆಗೆ ಸ್ವಾಧೀನಮಾಡಿಕೊಂಡ ನೊವೆಚಪೆಲ್ಲಿಯಲ್ಲಿ ಇತರ ಬದಲಾವಣೆಗಳಾಗಲಿಲ್ಲ. ರಣರಂಗದಲ್ಲೆಲ್ಲಿಯೂ ಮಿತ್ರರಿಗೆ ಜಯವಾಗುತ್ತಲಿದೆ.

ನೊವೆಚಪೆಲ್ಲಿಯ ಪೂರ್ವದಲ್ಲಿ ಹಿಡಕೊಂಡ ಜರ್ಮನರ ನೆಲೆಯಲ್ಲಿ ಜರ್ಮನರಿಗೆ ವಿಶೇಷ ನಷ್ಟವಾಗಿರುವದೆಂದೂ ಅಲ್ಲಿ ಸತ್ತು ಬಿದ್ದ ಜರ್ಮನ ಸೇನಿಕರ ಶವದಿಂದ ಒಟ್ಟಿಗೆ ಜರ್ಮನರಲ್ಲಿ ಈ ಒಂದೇ ಸ್ಥಳದಲ್ಲಿ ೧೭ ಸಾವಿರ ಸೈನಿಕರು ನಷ್ಟವಾಗಿರಬಹುದೆಂದೂ ಸರ್ ಜೋನ್ ಫ್ರೆಂಚರವರು ಪ್ರಕಟಿಸಿರುತ್ತಾರೆ.

ರುಶ್ಯನರು ಪ್ರಿಜೆಮ್ಮೆಸಲ್ ಕೋಟೆಯನ್ನು ಮುತ್ತಿರುವರು. ಒಳಕೋಟೆಗಳಿಗೆ ಹೋಗುವ ದಾರಿಯಲ್ಲಿರುವ ಶಿಖರಗಳು ರುಶ್ಯನರ ಸ್ವಾಧೀನವದೆ.

ತಾ. ೧೮ನೇ ಮಾರ್ಚಿ.

ಬ್ರಿಟಿಷರ "ಅಟ್ಲಂಟ" ಎಂಬ ಹಡಗವನ್ನು ತಾ. ೧೪ರಲ್ಲು ಜರ್ಮನರ ಜಲಾಂತರ್ಗಾಮಿ ನಾವೆಯು ಮುಳುಗಿಸಿರುವದು. ತಾ. ೧೫ರಲ್ಲು ಬ್ರಿಟಿಷರ "ಫಿಂಗಾಲ್" ಎಂಬ ನಾವೆಯನ್ನು ಜಲಾಂತರ್ಗಾಮಿ ನಾವೆಯು ಮುಳುಗಿಸಿರುತ್ತದೆ. ನಾವಿಕರಲ್ಲಿ ೬ ಮಂದಿ ಮುಳುಗಿರುವರು.

ಬೆಲ್ಜಿಯನರು ಪುನಃ ಜಯಪ್ರದರಾಗಿ ಜರ್ಮನರನ್ನು ಹಿಂದಟ್ಟಿರುವರು. [illegible] ರಣರಂಗದಲ್ಲಿ [illegible] ಕಾಳಗವು ವಿಶೇಷ [illegible] ಅರ್ರಾಸ್ ಮತ್ತು ಅಲ್ಬರ್ಟ್ ಪ್ರಾಂತ್ಯ [illegible] ಜರ್ಮನರು ಓಡುತ್ತಿರುವರು.

ಪ್ರಿಜೆಮ್ಮೆಸ್ಲ್ ಕೋಟೆಯು ಬೇಗನೇ ರುಶ್ಯನರ ಕೈಗೆ [illegible] ಹಾಗೆ ಇದೆ ಎಂಬ ವಾರ್ತೆ ಬಂದದೆ.

ಇಟಲಿಯನರು ಅಮೇರಿಕದಿಂದ ಸಾಲ ಕೇಳಿರುವರೆಂಬದಾಗಿ "ಡೈಲ್ ಟೆಲಗ್ರಾಫ್" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ತಾ. ೧೯ನೇ ಮಾರ್ಚಿ.

"ಕಾರ್ಲ್ಸ್‌ರೂ" ಎಂಬ ಜರ್ಮನರ ಕ್ರೂಜರ್ ನಾವೆಯು ಕಳದ ವರ್ಷಾಂತ್ಯದಲ್ಲಿ ಅಮೇರಿಕದ ಕರಾವಳಿಯಲ್ಲಿ ಮುಳುಗಿಸಲ್ಪಟ್ಟಿರುವದೆಂಬ ವಾರ್ತೆ ಈಗ ತಾನೇ ಬಂದಿರುವದು.

ಆದಿತ್ಯವಾರ ರಾತ್ರಿ "ಅಮಿತಿಸ್ಟ್" ಎಂಬ ಮಿತ್ರರ ನಾವೆಯು ಡರ್ಡನೆಲ್ಸಿನಲ್ಲಿ ನಗಾರ ಎಂಬಲ್ಲಿಗೆ ತಲಪಿ ಗುಂಡು ಹಾರಿಸಿರುವದು. ಡರ್ಡನೆಲ್ಸ್ ಕೋಟೆಯ ಫಿರಂಗಿಗಳಿಂದ ಬಿದ್ದ ಗುಂಡಿನೇಟಿನಿಂದ ಈ ಹಡಗದಲ್ಲಿ ೨೪ ಜನರು ಹತರಾಗಿರುವರು, ೩೬ ಮಂದಿ ಘಾಯ ಒಡೆದಿರುವರು ಎಂತ ಪ್ರಕಟವಾಗಿದೆ.

ಬ್ರಿಟಿಷ್ ಕ್ರೂಜರ್ ನಾವೆಯು "ಮಕೆಡೋನಿಯ" ಎಂಬ ನಾವೆಯನ್ನು ಹಿಡಿದಿರುವದೆಂಬ ವಾರ್ತೆಯು ಬಂದದೆ.

ಜರ್ಮನರ ಜಲಾಂತರ್ಗಾಮಿ ನಾವೆಯು ಕ್ವಾಕೆಟ್ ದ್ವೀಪದ ಬಳಿ "ಫಿಂಗಾಲ್" ಎಂಬ ನಾವೆಯನ್ನು ಮುಳುಗಿಸಿರುವದು. ಕೆಪ್ಟನನು ಮತ್ತು ಇತರ ಇಬ್ಬರು ಮಾತ್ರ ರಕ್ಷಿಸಲ್ಪಟ್ಟಿರುವರು. ಇಂಗ್ಲಿಷ್ ಕಾಲುವೆಯಲ್ಲಿ ಅಕ್ಕಿ ಸಾಗಿಸಿಕೊಂಡು ಹೋಗುತ್ತಿದ್ದ ಇನ್ನೊಂದು ನಾವೆಯು ಮುಳುಗಿಸಲ್ಪಟ್ಟಿರುವದು.

ಲೈಸಿನಿಂದ ಬ್ಯಸಿನ ವರೆಗೆ ತೀವ್ರ ಕಾಳಗವು ನಡೆಯುತ್ತಿದೆ. ಫ್ರೆಂಚರ ವಿಮಾನಗಾಮಿಗಳು ಅಲ್ಲಲ್ಲಿ ಜರ್ಮನರ ನೆಲೆಗಳಿಗೆ ಬೊಂಬು ಬಿಸಾಡಿ ಹಾನಿ ಪಡಿಸುತ್ತಲಿದ್ದಾರೆ.

ಜರ್ಮನರ ಜೆಫಲಿನ್ [illegible] ನಾವೆಯು ಕೆಲ್ಲಿಯ ಮೇಲೆ ಬೊಂಬು ಬಿಸಾಡಿದ್ದರಿಂದ ಸ್ಟೇಶನಿನ ಕೆಲಸದವರಲ್ಲಿ ೭ ಮಂದಿ ಹತರಾಗಿರುವರು. ಕೆಂಪಾಗ್ನೆಯಲ್ಲಿ ಮಿತ್ರರು ಮುಂದರಿದಿರುವರು.

ಬ್ರಿಟಿಷರ ವಾಯುನಾವಿಕರು ಒಸ್ಟೆಂಡ್ ಪ್ರಾಂತ್ಯದಲ್ಲಿ ಬಹು ಚಮತ್ಕಾರ ಕೃತ್ಯಗಳನ್ನು ನಡಿಸಿ ಜರ್ಮನ್ ನೆಲೆಗಳನ್ನು ಹಾಳು ಪಡಿಸುತ್ತಲಿರುವರು. ಬ್ರಿಟಿಷ ಯುದ್ಧ ನಾವೆಗಳು ಸಮುದ್ರದಿಂದ ಕರಾವಳಿಗೆ ಗುಂಡು ಹಾರಿಸಿ, ವೈಸರಿನಲ್ಲಿರುವ ಮಿತ್ರರ ಸೇನೆಗೆ ಸಹಾಯ ಮಾಡುತ್ತಲಿರುವರು.

ವೈಸರಾಯ ಪ್ರಭುಗಳವರಿಗೆ ಸರ್ ಜೋನ್ ಫ್ರೆಂಚರಿಂದ ಭಾರತೀಯ ಸೇನೆಯು ಧೈರ್ಯ ಸಾಹಸಗಳನ್ನು ಹೊಗಳುವ ತಂತೀಯು ಬಂದಿರುವದು. ತಾ. ೧೦—೧೧—೧೨—೧೩ರಲ್ಲು ನೋವೆಚಪೆಲ್ಲಿಯಲ್ಲಿ ಭಾರತೀಯ ಸೈನಿಕರು ತೋರಿಸಿದ ಪ್ರತಾಪವು ಅತಿ ವಿಶೇಷದ್ದಾಗಿರುವದು. ಕದನವು ಅತಿ ಕಠಿಣವಾಗಿದ್ದು ನಷ್ಟವು ವಿಶೇಷವಾದರೂ ಭಾರತೀಯ ಸೇನಿಕರ ಸಾಹಸ, ಧೈರ್ಯ ಮತ್ತು ಸಹನಶಕ್ತಿಯೂ ಹಿಂದೂಸ್ಥಾನದ ಸೇನಿಕರು ಪ್ರತಾಪಕ್ಕೆ ತಕ್ಕದ್ದಾಗಿತ್ತು ಎಂಬದಾಗಿ ಸರ್ ಜೋನ್ ಫ್ರೆಂಚರವರು ಭಾರತೀಯ ಸೇನಕರನ್ನು ಹೊಗಳಿರುವರು, ವೈಸರಾಯ ಪ್ರಭುಗಳವರು ಹಿಂದೇ ತಂತೀ ಬಿಟ್ಟು ಹಿಂದೂಸ್ಥಾನದ ಸೇನಿಕರು ತೋರಿಸಿದ ಶಕ್ತಿ ಸಾಹಸಗಳಿಗೆ ಹಿಂದೂಸ್ಥಾನದ ಜನರೂ ಗವರ್ನರ ಜನರಲರೂ, ಮುಖ್ಯ ಸೇನಾಧಿಪತಿಯೂ ತುಂಬಾ ಆಶ್ಚರ್ಯಪಡುತ್ತಲಿದ್ದಾರೆಂದೂ ಮುಂದೆಯೂ ಭಾರತೀಯ ಸೇನಿಕರು ಹಿಂದೂಸ್ಥಾನ ಹಿಂದಿನ ಸೇನಿಕರ ಮರ್ಯಾದೆಯನ್ನು ಕಾಪಾಡುವರೆಂಬ ಧೈರ್ಯವು ತಮಗಿದೆಂದೂ ಭಾರತೀಯ ಸೇನಿಕರಿಗೆ ತಿಳಿಸಲು ಸರ್ ಜೋನ್ ಫ್ರೆಂಚರನ್ನು ಕೇಳಿಕೊಂಡಿರುವರು. ನೊವೆಚಪೆಲ್ಲಿಯಲ್ಲಿ ಘಾಯ ಒಡೆದ ೧೦೪೦ ಮಂದಿ ಸೇನಿಕರು ಬ್ರೈಟನ್ ಆಸ್ಪತ್ರೆಗೆ ತರಲ್ಪಟ್ಟಿರುವರು. ಈ ಪೈಕಿ ೨೩೬ ಮಂದಿ ಭಾರತೀಯ ಸೈನಿಕರು.

ಪೂರ್ವಪ್ರುಶ್ಯದಲ್ಲಿ ಜರ್ಮನ ಪ್ರದೇಶದಲ್ಲಿ ಕದನವು ನಡೆಯುತ್ತಿದೆ. ರುಶ್ಯನರು ಜರ್ಮನರ ಕೆಲವು ಆಯುಧಗಳನ್ನು ಹಿಡಿದಿರುವರು. ಪ್ರಾಸ್ನೈಜಿನ ಉತ್ತರದಲ್ಲಿ ರುಶ್ಯನರು ಕೆಲವು ಗ್ರಾಮಗಳನ್ನೂ ೫ ಫಿರಂಗಿಗಳನ್ನೂ, ೪೨ ಕೋವಿಗಳನ್ನೂ, ನೂರಾರು ಮಂದಿ ಸೈನಿಕರನ್ನೂ ಸೆರೆಹಿಡಿದಿರುವರು. ಜೂರ ಮತ್ತು ಪಿಲಿಟ್ಜ [illegible] ಹಲ್ಲಾ ಮಾಡಲು ನೋಡಿದ ಜರ್ಮನರು ಹಿಮ್ಮೆಟ್ಟಿರುವರು.

ಪೂರ್ವಪ್ರುಶ್ಯ ಸರಹದ್ದಿನಲ್ಲಿ ರುಶ್ಯನರು ಜರ್ಮನರ ಮೇಲ್ಗೈಯಾಯಿದಿರುವರೆಂಬ ವಾರ್ತೆಯನ್ನು ಜರ್ಮನ್ ಸರಕಾರದವರೇ ಪ್ರಕಟಿಸಿರುವರು. ರುಶ್ಯನರು ಮೆಮೆಲಿನ ಉತ್ತರದಲ್ಲಿ ತಾ. ೧೮ರಲ್ಲು ಒಳನುಗ್ಗಿರುವರು. ಎಂಕಲೂ ಅವರನ್ನು ಹಿಂದಟ್ಟಲು ಪ್ರಯತ್ನ ನಡಿಸುತ್ತಲಿ ಜರ್ಮನರು ಪ್ರಕಟಿಸಿರುವರು.

ತಾ. ೨೦ನೇ ಮಾರ್ಚಿ.

ಕಲ್ಕತ್ತೆಯಿಂದ ದಂಡೀ ಎಂಬಲ್ಲಿಗೆ ಪ್ರಯಾಣಿಸುತ್ತಿದ್ದ "ಗ್ಲೆನ್‌ಕ್ಲನ್" ಎಂಬ ನಾವೆಯನ್ನು ಜರ್ಮನರ ಜಲಾಂತರ್ಗಾಮಿ ನಾವೆಯು ಹಿಂದಟ್ಟಿದ್ದರಿಂದ ಅದು ಡೀಲ್ ಎಂಬಲ್ಲಿ ಕರೆ ಸೇರಿರುವದು. ಜರ್ಮನರ ಕ್ರೂಜರ್ ಸ್ಟ್ರಾಸ್‌ಬರ್ಗ್ ನಾವೆಯು ಕಾಣೆಯಾಗಿರುವದು. ಬಹುಶ್ಯಾ ಇದು ಬಿರುಗಾಳಿಗೆ ಸಿಕ್ಕಿ ಮುಳುಗಿ ಹೋಗಿರಬೇಕೆಂತ ಭಾವಿಸಲ್ಪಟ್ಟದೆ.

ಜರ್ಮನಿಗೆ ಹೋಗುತ್ತಿದ್ದ ಸ್ವೀಡನಿನ ನಾವೆಯೊಂದನ್ನು ಮಿತ್ರರು ಹಿಡಿದಿರುವರು.

ತಾ. ೨೧ನೇ ಮಾರ್ಚಿ.

ಡರ್ಡನೆಲ್ಸಿನ ಒಳಗೆ ಕಳದ ೧೦ ದಿವಸಗಳಿಂದ ಮಿತ್ರರ ಯುದ್ಧನಾವೆಗಳು ಸಿಡಿಮದ್ದಿನ ಗಣೆಗಳನ್ನು ಹೆಕ್ಕಿ ತೆಗೆಯುವ ಕೆಲಸದಲ್ಲಿ ನಿರತವಾಗಿದ್ದವು. ನಿನ್ನೆಯ ದಿನ ಬ್ರಿಟಿಷ ಫ್ರೆಂಚ ನಾವೆಗಳು ಡರ್ಡನೆಲ್ಸಿನ ಇಕ್ಕಟ್ಟಾದ ಭಾಗದಲ್ಲಿ ಕೋಟೆಗಳ ಮೇಲೆ, ಹಲ್ಲಾ ಮಾಡಿದವು. "ಕ್ವೀನ್ ಎಲಿಜಬೇತ್" "ಅಗಮೆಮ್ನೊನ್" "ಇನ್‌ಫ್ಲೆಕ್ಸಿಬಲ್" ಮತ್ತು "ಲೋರ್ಡ್‌ನೆಲ್ಸನ್" ನಾವೆಗಳು ೫ ಕೋಟೆಗಳ ಮೇಲೆಯೂ "ಟ್ರಯಂಫ್" "ಪ್ರಿನ್ಸ್ ಜೋರ್ಜ್" ನಾವೆಗಳು ಮೂರು ಬತ್ತೇರಿಗಳ ಮೇಲೆಯೂ ಗುಂಡು ಹಾರಿಸಿದವು. ಕೋಟೆಗಳಿಂದ ಹೊವೈಜರ್ ಮತ್ತು ಫೀಲ್ಡ್‌ಗನ್ಸ್ ಎಂಬ ಫಿರಂಗಿಗಳಿಂದ ಗುಂಡು ಹಾರಿಸೋಣಾದವು. ಮಧ್ಯಾಹ್ನ ೧೨ ಗಂಟೆಗೆ ಫ್ರೆಂಚರ ನಾವೆಗಳು ಮುಂದರಿದು ಹತ್ತಿರದಿಂದ ಕೋಟೆಗಳಿಗೆ ಗುಂಡು ಹಾರಿಸಿದವು. ೪ ಕೋಟೆಗಳಿಂದ ಈ ನಾವೆಗಳಿಗೆ ಗುಂಡು ಹಾರಿಸೋಣಾದವು. ಆದರೆ ಜಲಸಂಧಿನೊಳಗೆ ಇದ್ದ ೧೦ ಯುದ್ಧನಾವೆಗಳಿಂದ ಹೊಡೆದ ಗುಂಡಿನೇಟುಗಳಿಂದ ಕೋಟೆಗಳು ಮೌನವಾದವು. ಎಲ್ಲಾ ನಾವೆಗಳಿಗೂ ಗುಂಡಿನೇಟುಗಳು ಬಿದ್ದವು. ಮಧ್ಯಾಹ್ನ ೧-೨೫ ಗಂಟೆಗೆ ಎಲ್ಲಾ ಕೋಟೆಗಳು ಗುಂಡು ಹಾರಿಸುವದನ್ನು ನಿಲ್ಲಿಸಿದವು. "ವೆಂಜಿಯೆನ್ಸ್" "ಇರ್ರೆಸಿಸ್ಟಿಬಲ್" "ಓಶನ್" "ಅಲ್ಬಿಯನ್" "ಸ್ವಿಫ್ಟ್‌ಸುರ" ಮತ್ತು "ಮೆಜೆಸ್ಟಿಕ್" ನಾವೆಗಳು ಮುಂದಕ್ಕೆ ಹೋಗಿ ದರ್ಡನೆಲ್ಸಿನೊಳಗಿದ್ದ ೬ ಹಳೇ ಯುದ್ಧನಾವೆಗಳಿಗೆ ಸಹಾಯ ಮಾಡಲು ತೊಡಗಿದವು. ಕೋಟೆಗಳಿಗೆ ಗುಂಡು ಹಾರಿಸುತ್ತಿದ್ದ ಫ್ರೆಂಚ ನಾವೆಗಳು ಹೊರ ಬಂದವು. ಆದರೆ ಫ್ರೆಂಚರ "ಬುವೆಟ್" ಎಂಬ ನಾವೆಯು ಅರ್ನಕೋಯಿ ಗ್ರಾಮಕ್ಕೆ ೩೬ ಫಾತಮ್ಸ್ ದೂರದಲ್ಲಿ ಫಕ್ಕನೇ ಸಿಡಿದು ಮುಳುಗಿ ಹೋಯಿತು. ೪ ಮತ್ತು ೬ ಗಂಟೆಗೆ "ಇರ್ರೆಸಿಸ್ಟಿಬಲ್" ಮತ್ತು "ಓಶನ್" ಎಂಬ ನಾವೆಗಳೂ ಸಿಡಿಮದ್ದಿನ ಗಣೆಗೆ ತಗಲಿ ಸಿಡಿದು ಹೋದವು. ಸಾಯಂಕಾಲವಾಗುತ್ತಲೇ ಕೋಟೆಗಳಿಗೆ ಗುಂಡು ಹಾರಿಸುವ ಮತ್ತು ಗಣೆಗಳನ್ನು ಹೆಕ್ಕಿತೆಗೆಯುವ ಕೆಲಸವು ನಿಲ್ಲಿಸಲ್ಪಟ್ಟಿತು. ನಷ್ಟವಾದ ೩ ಯುದ್ಧ ಹಡಗಗಳ ಬದಲಾಗಿ ಬ್ರಿಟಿಷರೂ ಫ್ರೆಂಚರೂ ಹೊಸ ಯುದ್ಧ ಹಡಗಗಳನ್ನು ಬಲಸಂಧಿಗೆ ಕಳುಹಿಸಿಕೊಟ್ಟರು.

ಮಿತ್ರ ನಾವೆಗಳು ಡರ್ಡನೆಲ್ಸಿನ ಕೋಟೆಗಳಿಗೆ ಗುಂಡು ಹಾರಿಸಿದ್ದರಿಂದ ಕೋಟೆಗಳಿಗೆ ವಿಶೇಷ ನಷ್ಟವಾಗಿದೆಂದು ಅಥೆನ್ಸಿನಲ್ಲಿ ಪ್ರಕಟವಾಗಿದೆ.

ಜರ್ಮನರು ಬೆಲ್ಜಿಯಮ್ ಕರಾವಳಿಯಲ್ಲಿ ಎರಡು ಡಚ್ಚ ವ್ಯಾಪಾರ ಹಡಗಗಳನ್ನು ಹಿಡಿದಿರುವರು. ಫ್ರಾನ್ಸಿನ ರಣರಂಗದಲ್ಲಿ ಮಿತ್ರರು ದಿನನಿತ್ಯ ಜಯಪ್ರದರಾಗಿ ಮುಂದರಿಯುತ್ತಲಿದ್ದಾರೆ.

ಜರ್ಮನ ವಾಯು ನಾವೆಯ ಡೀಲ್ ಎಂಬಲ್ಲಿಗೆ ಬೊಂಬು ಹಾಕ ಪ್ರಯತ್ನಿಸಿರುವದು. ಆದರೆ ಬೊಂಬುಗಳು ಸಮುದ್ರಕ್ಕೆ ಬಿದ್ದವು. ಬ್ರಿಟಿಷ ನಾವೆಗಳು ಅವನ್ನು ಹಿಂದಕ್ಕೆ ಓಡಿಸಿರುವವು.

ಜರ್ಮನರ ಜೆಫಲಿನ್ ನಾವೆಯು ಪಾರಿಸಿನ ಆಜುಬಾಜಿನ ಒಂದು ಸ್ಥಳಕ್ಕೆ ೧೪ ಬೊಂಬುಗಳನ್ನು ಬಿಸಾಡಿ ಹೆಚ್ಚಿನ ಆಸ್ತಿ ನಷ್ಟ ಮಾಡಿರುವದು. ೭ ಮಂದಿಗೆ ಘಾಯವಾಗಿರುವದು. ಫ್ರೆಂಚರ ವಾಯುನಾವೆಗಳು ಅವನ್ನು ಹಿಂದಟ್ಟಿ ಓಡಿಸಿದವು.

ರುಶ್ಯನರು ಮೆಮೆಲ್ ಪಟ್ಟಣವನ್ನು ಹಿಡಿದಿರುವರೆಂತ ಜರ್ಮನರು ಪ್ರಕಟಿಸಿರುವರು. ಪ್ರಿಜೆಮ್ಮಿಸ್ಲಿನ ಕೋಟೆಯ ಸೇನೆಯು ಹೊರಬಿದ್ದು ರುಶ್ಯನರೊಡನೆ [illegible] ಸಾವಿರ ಸೇನಿಕರನ್ನು ಕಳಕೊಂಡಿತು.

ತಾ. ೨೨ನೇ ಮಾರ್ಚಿ.

ಜರ್ಮನರ [illegible] ನಾವೆಯು ಇನ್ನೊಂದು ಹಡಗವನ್ನು ಮುಳುಗಿಸಿರುವದು. ನಾವಿಕರು ರಕ್ಷಿಸಲ್ಪಟ್ಟಿರುವರು.

ರುಶ್ಯನರಿಗೆ ನೀಮೆನ್ ನದಿಯ ಮಧ್ಯ ಮತ್ತು ಪಶ್ಚಿಮ ಪ್ರಾಂತ್ಯದಲ್ಲಿ ಜಯವಾಗಿರುವದು. ರುಶ್ಯನರಿಗೆ ಕಾರ್ಪಥೀನಿಯದಲ್ಲಿ ವಿಶೇಷ ಜಯವಾಗಿರುವದು. ರುಶ್ಯನರು ಶತ್ರುಗಳ ಮುಖ್ಯ ನೆಲೆಗಳಿಗೆ ಹಲ್ಲಾ ಮಾಡಿ ೨೪೫೬ ಮಂದಿಯನ್ನು ಸೆರೆಹಿಡಿದಿರುವರು.

ಪ್ರಿಜೆಮ್ಯಸ್ಲ್ ಕೋಟೆಯು ರುಶ್ಯನರಿಗೆ ಶರಣಾಗತವಾಯಿತು. ೬ ತಿಂಗಳ ಯುದ್ಧದಲ್ಲಿ ಪ್ರಿಜೆಮ್ಯಸ್ಲ್ ಕೋಟೆಯು ಶರಣಾಗತವಾದ ವಾರ್ತೆಯು ರುಶ್ಯನರ ಒಂದು ವಿಶೇಷ ಜಯವನ್ನು ತೋರಿಸುವಂಥಾದ್ದಾಗಿದೆ. ಈ ಕೋಟೆಯಲ್ಲಿ ೨೫೦೦೦ ಜನರು ಇದ್ದರೆಂತ ಅಂದಾಜಾಗಿಯದೆ. ಕೋಟೆಯೊಳಗೆ ೧೨ ಗ್ರಾಮಗಳು ಸೇರಿದ್ದವು. ಪ್ರಿಜೆಮ್ಯಸ್ಲಿನ ಕೋಟೆಯಲ್ಲಿ ಬಂಬಿದ್ದ ಸೇನಿಕರಿಗೆ ಆಹಾರಗಳು ಇಲ್ಲದೆ ಬಹಳ ಕಷ್ಟ ಬಂದೊದಗಿತ್ತು. ಆಫೀಸರರ ಕುದುರೆಗಳಲ್ಲದೆ ರೊಟ್ಟಿಯಾಗಲೀ ಇತರ ಮಾಂಸವಾಗಲೀ ಅವರಿಗೆ ಇರಲಿಲ್ಲ. ವಿಷಮಜ್ವರವೂ ಸೇನಿಕರಿಗೆ ಸೊಂಕಿತ್ತು ಎಂಬದಾಗಿ ಸೆರೆಬಿದ್ದವರಿಂದ ತಿಳಿದು ಬರುತ್ತದೆ.

ಜರ್ಮನರು ರುಶ್ಯನರ ಪೋಲೆಂಡಿಗೆ ಒಳನುಗ್ಗಿದಂದಿನಿಂದ ೯೫ ಪಟ್ಟಣಗಳನ್ನೂ ೪೫೦೦ ಗ್ರಾಮಗಳನ್ನೂ ಹಾಳುಪಡಿಸಿದರು. ಇದರಿಂದ ಒಟ್ಟಿಗೆ ೧೦೦ ಮಿಲಿಯ ಪವನುಗಳ ನಷ್ಟವಾಗಿರುವದೆಂಬ ಅಂದಾಜಾಗಿಯದೆ.

ಇಟಲಿಯಲ್ಲಿರುವ ಜರ್ಮನ್ ಮತ್ತು ಆಸ್ಟ್ರಿಯ ಕೌನ್ಸೆಲ್ಲರು ಅಲ್ಲಿರುವ ತಮ್ಮ ಜನರಿಗೆ ಇಟಲಿಯನ್ನು ತ್ವರ್ಯದಲ್ಲಿ ಬಿಟ್ಟು ಹೋಗುವದು ಹಿತವೆಂತ ಹೇಳಿರುವರೆಂದು ರೋಮ ನಗರದಲ್ಲಿ ಪ್ರಕಟವಾಗಿದೆ.

ಇಟಲಿ ಸಂಸ್ಥಾನಗಳಿಂದ ಆಸ್ಟ್ರಿಯ ಸೇನೆಗೆ ಸೇರಿದ ಆಸ್ಟ್ರಿಯನರ ಒಂದು ಕಾಲಾಳು ಸೇನೆಯು ರುಶ್ಯನರಿಗೆ ಶರಣಾಗತವಾಗಿರುವದು.

ಪ್ರಿಜೆಮ್ಯಸ್ಲ್ ಕೋಟೆಯು ಬಿದ್ದುದರಿಂದ ರುಶ್ಯನರಿಗೆ ಹೆಚ್ಚಿನ ಸಂತೋಷವಾಗಿರುವದು. ರುಶ್ಯನರ ಅಲ್ಲಿದ್ದ ದೊಡ್ಡ ಸೇನೆಯನ್ನು ಇನ್ನು ಇತರ ಕಡೆಗೆ ಕಳುಹಿಸಿಕೊಡಲು ಮಾರ್ಗವಾಯಿತು.

ಉತ್ತರ ಹಿಂದೂಸ್ಥಾನ

ಹಿಂದೂ ಯುನಿವರ್ಸಿಟಿ ಸಂಬಂಧವಾದ ಕಾನೂನು ಮಸೂದೆಯು ಶ್ರೇಷ್ಠ ನ್ಯಾಯವಿಧಾಯಕ ಸಭೆಯ ಮುಂದೆ ಸರ್ ಹಾರ್ಕೋರ್ಟು ಬಟ್ಲರವರಿಂದ ಇಡೋಣಾಗಿರುವದು.

ಮುಂಬಾಯಿ ಗವರ್ನರರಾದ ವಿಲಿಂಗ್ಡನ ಪ್ರಭುಗಳವರು ಪರಿವಾರ ಸಹಿತ ಡಿಲ್ಲಿಗೆ ಹೋಗಿರುವರು.

ಸರ್ ಹಾರ್ಕೋರ್ಟ್ ಬಟ್ಲರವರಿಗೆ ಎಪ್ರೀಲ್ ತಿಂಗಳ ತಾ. ೧೧ ರಿಂದ ೫ ತಿಂಗಳ ರಜೆ ಕೊಡೋಣಾಗಿರುವದು. ಮುಂಬಾಯಿ ಗವರ್ನರ ಕೌನ್ಸಿಲಿನ ಬಹುಮಾನಪಟ್ಟ ಕ್ಲಾಡೆಹಿಲ್ಲರವರು ಸರ್ ಹಾರ್ಕೋರ್ಟು ಬಟ್ಲರವರಿಂದ ಚಾರ್ಜು ತಕ್ಕೊಳ್ಳುವರು.

ಕಲ್ಕತ್ತೆಯ ಕೋರ್ನ್‌ವಾಲಿಸ್ ರಸ್ತೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಸುರೇಶಚಂದ್ರ ಮುಕರ್ಜಿಯವರನ್ನು ಗೋಲಿಮಾಡಿದ ಸಂಬಂಧ ೮ ಮಂದಿ ಕೈದುಮಾಡಲ್ಪಟ್ಟಿರುವರು. ಚಿತ್ತಪ್ರಿಯ ರಾಯಿ ಎಂಬ ಮುಖ್ಯ ಅಪಾದಿತನ ಪತ್ತೆಯು ಆಗದ್ದರಿಂದ ಅವನನ್ನು ಪೋಲಿಸಿನವರು ಹುಡುಕುತ್ತಲಿರುವರು. ಈಗ ಕೈದುಮಾಡಲ್ಪಟ್ಟ ೮ ಅಪಾದಿತರ ಮೇಲೆ ತಕ್ಕ ರುಜುವಾತಿಲ್ಲವೆಂದು ಸರಕಾರಿ ಕಡೆಯ ವಕೀಲರು ಅವರ ಮೇಲಿನ ಅಪಾದನೆಯನ್ನು ಹಿಂತೆಗೆದ್ದರಿಂದ ಜಡ್ಜರು ೮ ಮಂದಿಯನ್ನು ಖುಲಾಸುಪಡಿಸಿದರು.

ಪೂನೆಯಲ್ಲಿ ರಾಜದ್ರೋಹ ಪಹಿಗಳನ್ನು ಹಂಚಿದ್ದರೆಂದು ಅಪಾದಿಸಲ್ಪಟ್ಟ ತುಕಾರಾಮ ಶೀತಾರಾಮ್ ಸರ್ವೆ ಮತ್ತು ಹರಿರಾಮ ಚಂದ್ರ ಎಂಬವರಲ್ಲಿ ಒಬ್ಬೊಬ್ಬನಿಗೆ ಎರಡೆರಡು ವರ್ಷಗಳ ಸಜಾ ವಿಧಿಸಲ್ಪಟ್ಟಿರುವದು.

ಪಬ್ಲಿಕ್ ಸೇಫ್ಟಿ ಮತ್ತು ಡಿಫೆನ್ಸ್ ಆಫ್ ಇಂಡಿಯಾ ಬಿಲ್ ಎಂಬ ಕಾನೂನು ಮಸೂದೆಯು ಶ್ರೇಷ್ಠ [illegible] ವಿಧಾಯಕ ಸಭೆಯಲ್ಲಿ ಮಂಜೂರಾಗಿರುವದು.

ಇದೇ ತಾ. ೫ರಲ್ಲು ಕೂಡಿದ ಬಂಗಾಳ ನ್ಯಾಯ ವಿಧಾಯಕ ಸಭೆಯಲ್ಲಿ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳವರು ಹಾಜರಿಲ್ಲದ್ದರಿಂದ ಆ ದಿನದ ಸಭೆಯಲ್ಲಿ ಕೌನ್ಸಿಲಿನ ಮೊದಲನೇ ಮೆಂಬರರಾದ ನವಾಬ್ ಖುದ್ವಾರವರು ಅಧ್ಯಕ್ಷರಾಗಿದ್ದರು. ಸಂಸ್ಥಾನಿಕ ನ್ಯಾಯವಿಧಾಯಕ ಸಭೆಗಳಲ್ಲಿ ದೇಶಿಯ ಮೆಂಬರರು ಅಧ್ಯಕ್ಷರಾಗಿದ್ದದ್ದು ಇದೇ ಪ್ರಥಮ ಸಾರಿ.

ವೈಸರಾಯ ಪ್ರಭುಗಳ ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರಾತಿಯನ್ನು ಹೊಂದಿದ ಪಬ್ಲಿಕ್ ಸೇಫ್ಟಿ ಬಿಲ್ ಎಂಬ ಕಾನೂನು ಲಾಹೋರು ಡಿವಿಜನಿನ ಲಾಹೋರು, ಅಮೃತಸಾರ, ಗುರುದಾಸಪುರ, ಸಿಯಾಲ್‌ಕೋಟು ಮತ್ತು ಗುಜರನಾವಾಲ ಡಿಸ್ಟ್ರಿಕ್ಟುಗಳಲ್ಲಿಯೂ ಜಲಂದೂರ ಡಿವಿಜನಿನ ಕಂಗ್ರ ಹೊಸಿಯಾರಪುರ, ಲುದಿಯಾನ, ಜಲಂದೂರು ಮತ್ತು ಫೆರಜಪುರ ಡಿಸ್ಟ್ರಿಕ್ಟುಗಳಲ್ಲಿಯೂ ಮುಲ್ತಾನ ಡಿವಿಜನಿನ ಮುಲ್ತಾನ, ಜಂಗ ಲೈಲಾಪುರ, ಮೊಂಟೋಗೊಮರಿ, ಡೇರಗಾಜಿಖಾನ್ ಮತ್ತು ಮುಜಾಫರನಗರ ಡಿಸ್ಟ್ರಿಕ್ಟುಗಳಲ್ಲಿಯೂ ಜಾರಿಗೆ ಬಂದಿರುವುದು.

ಸ್ಥಾಪಿಸಲಿಕ್ಕಿರುವ ಹಿಂದೂ ಯುನಿವರ್ಸಿಟಿಗೆ ಅಲ್ವಾರ್ ಮಹಾರಾಜರವರು ೩ ಲಕ್ಷ ರೂಪಾಯಿಗಳ ದಾನಮಾಡಿರುವರು.

ಹಿಂದೂಸ್ಥಾನದ ಜನರನ್ನು ಹೆಚ್ಚಿಚ್ಚಾಗಿ ಆಹುತಿಗೊಳ್ಳುವ ಕ್ಷಯರೋಗದ ನಿವಾರಣೋಪಾಯಗಳನ್ನು ಕಂಡುಹಿಡಿಯುವ ಬಗ್ಗೆ ಕಳೆದ ವರ್ಷ ಇಂಡಿಯಾ ಸರಕಾರದವರು ಪೇಷಾವರ ಚರ್ಚ ಮಿಶ್ಶನ್ ಆಸ್ಪತ್ರಿಯ ಡಾಕ್ಟರ್ ಆರ್ಥರ್ ಲಂಕೆಸ್ಟರ್ ಎಮ್. ಡಿ ಯರನ್ನು ಕೇಳಿಕೊಂಡಿದ್ದರು. ಡಾಕ್ಟರ್ ಆರ್ಥರ್ ಲಂಕೇಸ್ಟರ್ ದಕ್ಷಿಣಹಿಂದೂಸ್ಥಾನದ ಆಯಾ ಭಾಗಗಳನ್ನು ಸಂದರ್ಶಿಸಿ ಈಗ ಕರಾಚಿಗೆ ಹೋಗಿ ಅಲ್ಲಿಯ ಆರೋಗ್ಯ ಸ್ಥಿತಿಯನ್ನು ಸ್ಥಳಿಕ ವೈದಿಕರ ಕೂಡ ವಿಚಾರಿಸುತ್ತಲಿರುವರು.

ದಕ್ಷಿಣ ಹಿಂದೂಸ್ಥಾನ

ಕಳೆದ ವರ್ಷ ಮೈಸೂರಿನಲ್ಲಿ ಕೂಡಿದ ಅರ್ಥಸಾಧಕ ಸಭೆಯ ವಿದ್ಯಾಖಾತೆಯ ಕಮಿಟಿಯಲ್ಲಿ ಕನ್ನಡ ಭಾಷೆಯನ್ನು ಅಭಿವೃದ್ಧಿಗೆ ತರುವ ವಿಷಯವು ಆಲೋಚಿಸೋಣಾಗಿತ್ತು. ಈ ಸಂಬಂಧ ತಕ್ಕ ಆಲೋಚನೆಯನ್ನು ನಡಿಸುವರೆ ಮೈಸೂರು ವಿದ್ಯಾಖಾತೆಯ ಇನ್ಸ್‌ಪೆಕ್ಟರ್ ಜನರಲರಾದ ರಾವ್ ಬಹುದ್ದೂರ್ ಎಮ್. ಶ್ಯಾಮರಾವ್ ಎಮ್. ಎ; ಚೀಫ್ ಇಂಜನಿಯರ್ ರಾ| ಕೆ. ಶ್ರೀನಿವಾಸರಾವ್; ರಿಟಯರ್ಡ್ ಸೀನಿಯರ್ ಸರ್ಜನ್‌ರಾದ ಪಿ. ಎಸ್. ಅಚ್ಯುತರಾವ್ ಮೊದಲಾದವರು ಕೂಡಿದ ಒಂದು ಕಮಿಟಿಯು ಏರ್ಪಡಿಸೋಣಾಗಿತ್ತು. ಈ ಕಮಿಟಿಯವರು ಬೆಂಗಳೂರಲ್ಲಿ ಇದೇ ಬರುವ ಮೇ ತಾ. ೩--೪ರಲ್ಲು ಕನ್ನಡ ಭಾಷಾ ಸಂಬಂಧವಾದ ಒಂದು ಸಭೆಯನ್ನು ಕೂಡಿಸಲು ನಿರ್ಣಯಿಸಿರುವರು. ಈ ಸಭೆಗೆ ಮುಂಬಾಯಿ ಮತ್ತು ಮದ್ರಾಸು ಪ್ರಾಂತ್ಯಗಳಿಂದ ಪ್ರತಿನಿಧಿಗಳು ಬರಬೇಕಾಗಿ ವಿಜ್ಞಾಪಿಸೋಣಾಗಿರುವದು. ಕನ್ನಡ ಭಾಷೆಯು ಆಯಾ ಪ್ರಾಂತ್ಯಗಳಲ್ಲಿ ಆಯಾ ವಿಧವಾಗಿ ಪ್ರಯೋಗಿಸಲ್ಪಡುವದರಿಂದ ಅವನ್ನು ಏಕೀಕರಿಸುವದು, ಆಯಾ ಜಿಲ್ಲೆಯ ಕನ್ನಡ ಭಾಷಾ ಪಂಡಿತರೊಳಗೆ ಐಕ್ಯವನ್ನುಂಟು ಮಾಡುವದು. ಕನ್ನಡಾ ಭಾಷೆ ಮಾತನ್ನಾಡುವ ಪ್ರತಿ ಜಿಲ್ಲೆಯಲ್ಲಿ ಒಂದೇ ತರದ ಕನ್ನಡ ಪಾಠಪುಸ್ತಕಗಳಿರುವಂತೆ ಏರ್ಪಾಡು ಮಾಡುವದು, ಸುಲಭ ಕನ್ನಡ ಶೈಲಿಯ ಪುಸ್ತಕಗಳನ್ನು ಜನಸಾಮಾನ್ಯರೊಳಗೆ ಪ್ರಚಾರ ಪಡಿಸುವದು ಮೊದಲಾದ ವಿಷಯಗಳು ಈ ಸಭೆಯಲ್ಲಿ ಚರ್ಚಿಸಲ್ಪಡುವದು.

ತಿನ್ನವೆಲ್ಲಿಯ ಒಂದು ಮಾನ್ಯ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಪಿ. ಕೆ. ಸುಬ್ರಮಣ್ಯ ಅಯ್ಯರ್ ಎಂಬವರು ಸೇಲಂ ಡಿಸ್ಟ್ರಿಕ್ಟಿನಲ್ಲಿ ರೇಂಜರ್ ಕೆಲಸದಲ್ಲಿದ್ದರು. ಇವರು ೬ ವಾರಗಳ ಮೊದಲು ಡಿಸ್ಟ್ರಿಕ್ಟ್ ಫೋರೆಸ್ಟ ಆಫೀಸರರೊಂದಿಗೆ ಮುಖ್ಯ ಠಾಣ್ಯದಿಂದ ೧೦ ಮೈಲು ದೂರವಿರುವ ಒಂದು ಸ್ಥಳಕ್ಕೆ ಸರ್ಕೀಟಿಗೆ ಹೋಗಿದ್ದರು. ಒಂದು ದಿನ ಇವರು ಊಟ ತೀರಿಸಿಕೊಂಡು ಹೊರಗೆ ಹೋದವರು ಹಿಂದೆ ತಿರುಗಲೇ ಇಲ್ಲ. ಈ ವಾರ್ತೆಯು ಇವರ ಕುಟುಂಬದವರಿಗೆ ತಿಳಿದು ಬಹು ಪ್ರಯತ್ನಪಟ್ಟು ಇವರ ಪತ್ತೆ ಮಾಡಿದರೂ ಫಲ ಉಂಟಾಗಲಿಲ್ಲ. ಈ ರೇಂಜರರ ಮೇಲೆ ಇಲಾಖೆಯಿಂದ ಏನೋ ಒಂದು [illegible] ಹೊರಗೆ ಬಿತ್ತೆಂದೂ ವಾರ್ತೆ ಇದೆ. ರೇಂಜರರ ಉಡುಪು, ಕಾಲ್ಜೋಡುಗಳು ಮತ್ತು ಒಂದು ಕ್ಷಾರಕತ್ತಿ ಕಾಡಿನಲ್ಲಿ ದೊರಕಿರುವದರಿಂದ ಅವರು ಆತ್ಮಹತ್ಯ ಮಾಡಿಕೊಂಡಿರುವರೆಂಬ ಅನುಮಾನವಿದೆ.

ಇದೇ ತಾ. ೧೯ರಲ್ಲು ಹೈದರಾಬಾದಿನ ಹೊಸ ಪಟ್ಟಣ ಸಭಾಸದನದಲ್ಲಿ ಹೈದರಾಬಾದ್ ರೆಸಿಡೆಂಟರಾದ ಕರ್ನಲ್ ಪಿನ್ಹೆಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಕೂಡಿ ಮಾನ್ಯ ಗೋಖಲೆಯವರ ಮರಣದಿಂದುಂಟಾದ ಶೋಕವನ್ನು ತೋರ್ಪಡಿಸಿದರು. ಈ ಸಭೆಗೆ ಸುಮಾರು ೧೦೦೦ ಮಂದಿ ಹಾಜರಿದ್ದರು. ಮಾನ್ಯ ಗೋಖಲೆಯರ ಗುಣ ಶ್ಲಾಘನೆಯನ್ನು ಮಾಡಿ ಹಲವರಿಂದ ಭಾಷಣಗಳು ಕೊಡೋಣಾದವು. ಹೈದರಾಬಾದಿನ ಕೋಶಾಧ್ಯಕ್ಷರಾದ ಮೆ| ಆರ್. ಐ. ಆರ್. ಗ್ಲೇನ್ಸಿ ಐ. ಸಿ. ಎಸ್‌ರವರು ಇವರ ಮರಣದಿಂದುಂಟಾದ ಶೋಕವನ್ನು ತೋರ್ಪಡಿಸಿ, ಇವರು ದೇಶದ ಮತ್ತು ಸಾಮ್ರಾಜ್ಯದ ಮೇಲ್ಮೆಗಾಗಿ ಮಾಡಿದ ಕೆಲಸಗಳನ್ನು ಶ್ಲಾಘಿಸಿದರು. ನವಾಬ್ ಫರಿಡೂನ ಜಂಗ್ ಬಹದ್ದೂರರವರು ಕಾಲೋಚಿತ ಭಾಷಣದಿಂದ ಮೆ| ಗ್ಲೇನ್ಸಿಯವರ ಮತವನ್ನು ಅನುಮೋದಿಸಿದರು. ಡಾಕ್ಟರ್ ಅಲ್ಲ ಲಟಿಫ್ ಐ. ಸಿ. ಎಸ್. ಮೌಲ್ವಿ ಅಬ್ದುಲ್ಲಖಾಯಂ ಮತ್ತು ಭಾರತೀಯ ಕವಿಶ್ರೇಷ್ಠಳೆಂದು ಹೆಸರು ಪಡೆದ ಮಿಸೆಸ್ ಸರೋಜಿನಿ ನ್ಯಾಡುರವರು ಈ ಮಸೂದೆಯನ್ನು ಅನುಮೋದಿಸಿದರು.

ಮಿಸೆಸ್ ಮಲಾನ್ನರವರು ಈ ಸಭೆಯ ಮುಂದೆ ಇಟ್ಟ ಮಸೂದೆಗಳನ್ನು ಮಾನ್ಯ ಗೋಖಲೆಯವರ ಕುಟುಂಬದವರಿಗೂ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಗೂ ಕಳುಹಿಸಬೇಕೆಂಬ ಆಲೋಚನೆಯನ್ನು ಭಾಷಣದೊಂದಿಗೆ ಸಭೆಯ ಮುಂದಿಟ್ಟರು. ಮೆ| ಎನ್. ಜಿ. ವೆಲಿನ್ಕರ್‌ರವರು ಇದನ್ನು ಅನುಮೋದಿಸಿದರು. ಈ ಮಸೂದೆಯು ಮೆ| ಮಹಮ್ಮದ್ ಹಸಾನ್ ಬಲಿಗ್ರಾಮಿ ಮೆ| ಆರ್. ಎಸ್. ನ್ಯಾಕ್, ಮೆ| ಹೈದ್ರಿ ಎಮ್. ಎ, ರೆವರೆಂಡ್ ಲೀಂಬ್, ರಾಯ ಬಹದ್ದೂರ ವರದರಾಜ್ ಮುದಲಿಯಾರರೇ ಮೊದಲಾದವರ ಭಾಷಣದೊಂದಿಗೆ ಪುಷ್ಟೀಕರಿಸಲ್ಪಟ್ಟಿತು. ಹೈದರಾಬಾದ್ ಸರಕಾರದ ಮುಖ್ಯ ಆಫೀಸರರೇ ಈ ಸಭೆಯಲ್ಲಿ ಹಾಜರಿದ್ದರು.

ಬೆಂಗಳೂರಿನ ಕುಲಾಸ್‌ಪೇಟೆಯಿಂದ ಓಡ್ಯಾಡುತ್ತಿದ್ದ ರೈಲ್ವೇಯ ಗಾರ್ಡ್ಸ್ ಪೆಟ್ಟಿಗೆಯನ್ನು ಜಾರಿಸಿ ೪೦೦೦ ರೂಪಾಯಿಗಳನ್ನು ಕಳವು ಮಾಡಿದ್ದನೆಂಬದಾಗಿ ಅಪಾದಿಸಲ್ಪಟ್ಟ ರೈಲ್ವೇಯ ಮಾಜಿ ಪೋರ್ಟರ್ ಸುಬ್ಬ ಎಂಬವನಿಗೆ ೩ ವರ್ಷಗಳ ಕಠಿಣ ಸಜಾ ವಿಧಿಸೋಣಾಯಿತು. ಈ ಸುಬ್ಬನು ಕುಲಾಸ್‌ಪೇಟೆಯಲ್ಲಿ ರೈಲ್ವೆಯಲ್ಲಿ ರಾತ್ರಿ ೩ ಗಂಟೆಗೆ ಅಡಗಿಕೊಂಡು ಹಣದ ಪೆಟ್ಟಿಗೆಯನ್ನು ಹೊರಗೆ ಹಾಕಿ, ಟ್ರೇನಿನಿಂದ ಹಾರಿ ಈ ಕಳವನ್ನು ಮಾಡಿದ್ದನು. ಅನಂತರ ಸುಬ್ಬನು ದರ್ಬಾರಿನಿಂದ ಜೀವನ ಮಾಡುತ್ತಿದ್ದುದರಿಂದ ಇವನ ಮೇಲೆ ಅನುಮಾನ ಹುಟ್ಟಿ ಪೋಲಿಸರು ಅವನನ್ನು ಹಿಡಿಯಲು ಸತ್ಯಸ್ಥಿತಿಯನ್ನು ಅರಿಕೆ ಮಾಡಿದನು.

ಮಾನ್ಯ ಗಂಧಿಯವರು ಪತ್ನಿ ಸಹಿತ ಕಲ್ಕತ್ತೆಯಿಂದ ರಂಗೂನಿಗೆ ಹೋಗಿರುವರು. ಇವರು ರಂಗೂನಿಗೆ ತಲಪುತ್ತಲೇ ಬಹೂಜನರು ಅವರನ್ನು ಸ್ವಾಗತ ಮಾಡಿಕೊಂಡು, ಇವರ ಬಹುಮಾನಾರ್ಥವಾಗಿ ೧೫೦೦ ಮಂದಿ ಮಕ್ಕಳಿಗೆ ಮಿಠಾಯಿಗಳನ್ನೂ ರುಮಾಲುಗಳನ್ನೂ ಉಡಿಗೆರೆ ಮಾಡಿದರು. ನಂತರ ಅವರನ್ನು ಗಾಡಿಯಲ್ಲಿ ಕೂಂಡ್ರಿಸಿ ಗಾಡಿಯನ್ನು ಹುಡುಗರೇ ಎಳೆದುಕೊಂಡು [illegible] ತೋರಣಗಳಿಂದ ಶೃಂಗರಿಸಿದ ಚಪ್ಪರಕ್ಕೆ ಕೊಂಡು ಹೋದರು. ಅಲ್ಲಿ ಮಾನ್ಯ ಗಂಧಿಯವರಿಗೂ ಅವರ ಪತ್ನಿಯರಿಗೂ ಹೂ ಮಾಲೆಗಳನ್ನು ಹಾಕಿದರು. ಅಲ್ಲಿಂದ ಹೋದ ಕಡೆಯಲ್ಲೆಲ್ಲಾ ಜನರು ಸಂತೋಷದಿಂದ ಹುಚ್ಚರಂತಾಗಿ ಮಾನ್ಯ ಗಂಧಿಯವರಿಗೆ ಹೂ ಮಾಲೆಗಳನ್ನು ಹಾಕಿ ಬಹು ಸಂತೋಷಪಟ್ಟರು.

ತಾ. ೧೫ನೇ ರಾತ್ರಿ ಪಿಟ್ಠಾಪುರರಾಜರ ಸೇವಕರು ಎಂದಿನಂತೆ ರಾಜರಿಗೂ ಅವರ ಮಕ್ಕಳಿಗೂ [illegible] ತಂದು ಕೊಟ್ಟರು. ಹಾಲು [illegible] ಅದನ್ನು [illegible]

ದ್ದನ್ನು ಕಂಡು ರಾಜರಿಗೆ ತಿಳಿಸಲು, ರಾಜರು ಅನುಮಾನಪಟ್ಟು, ಅದನ್ನು ನಾಯಿಗೂ ಕೋಳಿಗಳಿಗೂ ಹಾಕಿದರು. ಅವುಗಳು ಕೂಡಲೇ ಸತ್ತವು. ಈ ವಿಷಯ ೫ ಸೇವಕರ ಮೇಲೆ ಅನುಮಾನ ಉಂಟಾದ್ದರಿಂದ ಪೋಲಿಸಿನವರು ಅವರನ್ನು ಕೈದುಮಾಡಿರುವರು.

ದಕ್ಷಿಣ ಕನ್ನಡ.

ಮಾರಾಟಕ್ಕೆ ಇದೆ.

೬ ಇಗರ್ಜಿ ಎದುರು ಪಯ್ಯರೆ ಗುಡ್ಡೆಯಲ್ಲಿ ಬಲ್ಲಾಳರಿಗೆ ಸೇರಿದ ಸ್ಥಳದಲ್ಲಿರುವ ಆರೋಗ್ಯಕ್ಕೆ ಉಪಯುಕ್ತವಾದ ಮನೆ, ಬಾವಿ ಸಹಿತವಾದ ಒಂದು ಸ್ಥಳವು ಮಾರಾಟಕ್ಕಿದೆ. ಬೇಕಾದವರು X-c/o swadeshabhimani ಎಂಬ ವಿಳಾಸಕ್ಕೆ ಬರೆದುಕೊಳ್ಳಬಹುದು.

ಪರಸ್ಪರ ಸಹಾಯ.

ಸರ್ಕಿಲಾರು ನಂಬ್ರ ೭.

ಕೊಯಂಬತ್ತೂರು ಸರ್ಕಲ್ ಪರಸ್ಪರ ಸಹಾಯಕ ಪರಿಷದ.

ಪರಿಷದಗಳ ಸಾಧಾರಣ ಪ್ರಯೋಜನಗಳನ್ನು ನಂಬ್ರ ೫ನೇ ಸರ್ಕಿಲಾರಿನಲ್ಲಿ ವಿವರಿಸಿತ್ತು. ಕೊಯಂಬತ್ತೂರು ಸರ್ಕಲಿನಲ್ಲಿ ನಾಲ್ಕು ಜಿಲ್ಲೆಗಳು ಸೇರಿರುವುದರಿಂದ ಆ ನಾಲ್ಕು ಜಿಲ್ಲೆಗಳವರೂ ಕೆಲಕೆಲವರು ಸಭೆಗೆ ಬರುವ ಸಂಭವವಿದೆ. ಇದು ಅದರ ಮುಖ್ಯವಾದ ಪ್ರಯೋಜನವಾಗಿರುತ್ತದೆ. ಇತರ ಜಿಲ್ಲೆಗಳಿಂದ ಬಂದವರೊಡನೆ ನಮ್ಮ ಜಿಲ್ಲೆಯವರು ಬೆರಸಿ ಅವರ ಅನುಭವದ ಬಲದಿಂದ ತಮ್ಮ ಅನುಮಾನಗಳನ್ನು ಕಳೆದುಕೊಂಡು ತಮ್ಮ ತಿಳುವಳಿಕೆಯನ್ನು ಬಹಳ ಮಟ್ಟಿಗೆ ಹೆಚ್ಚಿಸಬಹುದು.

ಅದಲ್ಲದೆ ಪರಸ್ಪರ ಸಹಾಯ ಪದ್ಧತಿಯಲ್ಲಿ ಮುಂದಾಳುಗಳೆನ್ನಿಸಿ ಹೆಸರುಗೊಂಡ ಅನೇಕರ ಉಪನ್ಯಾಸಗಳು ಈ ಪರಿಷದಕ್ಕೆ ಬರುವುದಲ್ಲದೆ ಸಂಘಗಳಿಗೆ ಸಮ್ಬಂಧಿಸಿದ ಅನೇಕ ಮುಖ್ಯ ವಿಷಯಗಳು ಚೆನ್ನಾಗಿ ಚರ್ಚಿಸಲ್ಪಟ್ಟು ಅವುಗಳ ಕುರಿತು ನಿರ್ಣಯಗಳಾಗುವ ಸಂಭವವಿರುವುದು. ಈ ಎಲ್ಲಾ ಕಾರಣಗಳಿಂದ ಈ ವರ್ಷದ ಪರಿಷದವು ಅತ್ಯುಪಯುಕ್ತವಾಗಿರುವುದು. ಆದುದರಿಂದ ನಮ್ಮ ಜಿಲ್ಲೆಯ ಸಂಘಗಳು ಇಬ್ಬಿಬ್ಬರು ಪ್ರತಿನಿಧಿಗಳನ್ನು ಕಳುಹಿಸುವುದು ಮಾತ್ರವಲ್ಲದೆ ಪ್ರತಿ ಸಂಘದ ಗ್ರಾಮದಿಂದಲೂ ಸಂಘದ ಕೆಲಸಗಳಲ್ಲಿ ಹೆಚ್ಚು ಉತ್ಸಾಹವನ್ನು ತೋರಿಸುತ್ತಿರುವ ಪ್ರತಿಯೊಬ್ಬರೂ ಸಹಾ ಬಂದು ಪರಿಷದದಲ್ಲಿ ಚರ್ಚಿಸಲ್ಪಡುವ ವಿಷಯಗಳನ್ನು ಚೆನ್ನಾಗಿ ಗ್ರಹಿಸಿಕೊಳ್ಳಬೇಕೆಂದು ಈ ಮೂಲಕ ಸೂಚಿಸೋಣಾಗುತ್ತದೆ.

ಯಾವ ಸಂಘಗಳಿಗಾದರೂ ರಿಜಿಸ್ತ್ರಿಗಳು ಯಾ ಫೋರ್ಮುಗಳು ಯಾವುದಾದರೂ ಬೇಕಾಗಿದ್ದರೆ ಅದರ ಕುರಿತು ಬೇಂಕಿಗೆ ಮುಂದಾಗಿ ಬರಕೊಂಡಲ್ಲಿ ಆ ರಿಜಿಸ್ತ್ರಿ ವ ಫೋರ್ಮುಗಳನ್ನು ಸಹಾ ಇಲ್ಲಿಂದ ಮಂಗಳೂರಲ್ಲಿ ಪರಿಷದದ ಕಾರ್ಯಾಲಯಕ್ಕೆ ಕೊಂಡುಹೋಗಿ ಅಲ್ಲಿ ಮಾರಲ್ಪಡುವುವು. ಈ ರೀತಿಯಿಂದ ಸಂಘಗಳಿಗೆ ತಮಗೆ ಬೇಕಾದುದನ್ನು ತರಿಸಿಕೊಳ್ಳಲಿಕ್ಕೆ ತಾಗುವ ಟಪ್ಪಾಲು ಖರ್ಚು ಉಳಿಯುವುದರಿಂದ ಈ ಕುರಿತು ಸಂಘಗಳು ತ್ವರ್ಯದಲ್ಲಿ ಬೇಂಕಿಗೆ ತಿಳಿಸಬೇಕಾಗಿಯೂ ಈ ಮೂಲಕ ಸೂಚಿಸೋಣಾಗುತ್ತದೆ.

ಪುತ್ತೂರು, ದ. ಕನ್ನಡ. } ಎಮ್. ಅನಂತರಾವ್.
ತಾ. 17-3-1915. } ಕಾರ್ಯದರ್ಶಿ.

ಪುತ್ತೂರು:—ಇದೇ ತಿಂಗಳ ತಾ. ೨೮ರ ಲಾಗಾಯತು ಹಂಡೂ ಟ್ರಾನ್ಸಿಟು ಕಂಪೆನಿಯ ಜಟ್ಕಾ ಬಂಡಿಯು ಪುತ್ತೂರಿಂದ ಸುಳ್ಯವರೆಗೆ ಓಡ್ಯಾಡಲಿಕ್ಕೆ ಆರಂಭಿಸಿಯದೆ. ಪುತ್ತೂರಿಂದ ಸುಳ್ಯಕ್ಕೆ ರೂ. ೧—೪—೦ ದರ ಇಟ್ಟಿರುವರು.

ಪಬ್ಲಿಕ ಕನ್ವೇಯನ್ಸ್ ಕಂಪೆನಿಯ ಮೋಟರ್ ಗಾಡಿಯು ಮಂಗಳೂರಿಂದ ಪುತ್ತೂರಿಗೆ ಇದೇ ತಾ. ೨೧ರಿಂದ ನಡಿಯಲಿಕ್ಕೆ ಆರಂಭಿಸಿರುವದು. ಪುತ್ತೂರಿಂದ ಮಂಗಳೂರಿಗೆ ೧ನೇ ಕ್ಲಾಸಿನ ದರವು ರೂ. ೨—೮—೦ ಎರಡನೇ ಕ್ಲಾಸ ದರವು ರೂ. ೧—೧೨—೦ ಇಟ್ಟಿರುವರು.

ಇಲ್ಲಿ ಮೋಟರ್ ಬಸ್ ಗಾಡಿಯು ನಡಿಯುವದಕ್ಕೆ ಆರಂಭವಾದ ಜ್ಞಾಪಕಾರ್ಥವಾಗಿ ಮ| ರಾ| ರಾ| ಅಪ್ಪಾಜಿರಾಯರ ಕಡೆಯಿಂದ ಇಲ್ಲಿಯ ಜ್ಯೂನಿಯರ್ ಎಲಿಮೆಂಟರಿ ಮತ್ತು ಗವರ್ನಮೆಂಟ ಹುಡುಗಿಯರ ಶಾಲಾ ಮಕ್ಕಳಿಗೆ ಇದೇ ತಾ. ೨೨ರಲ್ಲು ಮಿಠಾಯಿ ಹಂಚಲ್ಪಟ್ಟಿತು.

ಅರಿಯಡ್ಕ:—ಅರಿಯಡ್ಕ ಮುಡ್ನೂರು ಗ್ರಾಮಗಳು ಒಬ್ಬ ಪಟೇಲರ ಅಧಿಕಾರಕ್ಕೊಳಪಟ್ಟಿರುವದು. ಮುಡ್ನೂರು ಗ್ರಾಮದಲ್ಲಿ ಇತ್ತಲಾಗಿ ಸ್ಥಾಪಿಸಿದ ಪರಸ್ಪರ ಸಹಾಯ ಸಂಘದ ಸಹಾಯವು ಅರಿಯಡ್ಕ ಗ್ರಾಮದವರಿಗೆ ಸಿಕ್ಕದೆ ಇರಲಿಕ್ಕೆ ಕಾರಣವೇನು? ಪ್ರತ್ಯಪ್ರತ್ಯೇಕ ಗ್ರಾಮಕ್ಕೆ ಪ್ರತ್ಯೇಕ ಸಂಘಗಳು ಅಗತ್ಯವೆಂತಾದರೆ ಅರಿಯಡ್ಕ ಗ್ರಾಮದಲ್ಲಿಯೂ ಒಂದು ಸಂಘವನ್ನು ಏರ್ಪಡಿಸುವರೆ ಮೇಲಾಧಿಕಾರಿಗಳು ನಿಗಾಕೊಡುವದುತ್ತಮ.

ಅರಿಯಡ್ಕ ಗ್ರಾಮದ ಶೇಕಮಲೆ ಎಂಬದು ಹಲವು ಮನೆಗಳೂ, ಅಂಗಡಿಗಳೂ ಇದ್ದು ಹೆಚ್ಚು ಜನ ಸಮೂಹ ಕೂಡುವ ಸ್ಥಳವಾಗಿರುತ್ತದೆ. ಸಮೀಪವಿರುವ ಶೇಕಮಲೆ ಹಳ್ಳದಲ್ಲಿ ಬೇಸಿಗೆ ಕಾಲದಲ್ಲಿ ನೀರಿಲ್ಲದೆ ಜನರು ಕಷ್ಟಪಡುತ್ತಿರುವರು. ಶೇಕಮಲೆ ಎಂಬಲ್ಲಿ ಎರಡು ಬಾವಿಯು ಅಗತ್ಯವಾದ್ದರಿಂದ ಮೇಲಾಧಿಕಾರಿಗಳು ಈ ವಿಷಯ ನಿಗಾಕೊಡುವದುತ್ತಮ.

